UNIVERSAL
LIBRARY
OU_202088
UNIVERSAL
LIBRARY

OSMANIA UNIVERSITY
COLLEGE LIBRARY.

CHECKED 1953 Checked 1953

ಶ್ರೀ ತತ್ತ್ವಸಂಗ್ರಹರಾಮಾಯಣಂ

ಅರಣ್ಯಕಾಂಡಂ

ವಿಷಯ ಸೂಚಿಕೆ.

ಸರ್ಗ	ವಿಷಯ	ಪುಟ
೧	ಶ್ರೀರಾಮದಂಡಕಾರಣ್ಯಗಮನ	೧
,,	ವಿರಾಧಮೋಕ್ಷಪ್ರಾಪ್ತಿಕಥನ	೬
,,	ವಿರಾಧಕೃತರಾಮಸ್ತುತಿ	೫
,,	ಶರಭಂಗಬ್ರಹ್ಮಲೋಕಗಮನ	೯
೨	ಸುತೀಕ್ಷ್ಣಾಶ್ರಮಪ್ರಾಪ್ತಿ	೧೪
,,	ಸುತೀಕ್ಷ್ಣಾಕೃತರಾಮಸ್ತುತಿ	,,
೩	ಶ್ರೀರಾಮಪೂಜಾವಿಧಾನನಿರೂಪಣ	೧೯
೪	ದೇವರಣ್ಯಾದಿಪೂಜಾವಿಧ	೨೪
೫	ಶ್ರೀರಾಮಯಂತೋದ್ಧಾರಕ್ರಮ	೨೫
೬	ಭೂದೇವೀಕೃತ ಪಾದುಕಾಪ್ರದಾನ	೩೪
,,	ಋಷಿವರಪ್ರದಾನ	೩೬
,,	ಅಗಸ್ತ್ಯದತ್ತ ಧನುರ್ಬಾಣಾದಿಪ್ರತಿಗ್ರಹಕಥನ	೬೦
೭	ಅಗಸ್ತ್ಯಕೃತರಾಮ ತತ್ವಕಥನ	೬೨
೮	ಶ್ರೀರಾಮನು ಲಕ್ಷ್ಮಣನಿಗೆ ಭಕ್ತಿಜ್ಞಾನಾದಿಸಾಧನಗಳನ್ನು ನಿರೂಪಿಸುವಿಕೆ	೭೦
೯	ವಿಶ್ವರೂಪಪ್ರದರ್ಶನನಿರೂಪಣೆ	೭೭
೧೦	ಬ್ರಹ್ಮಕೃತವೇದಗರ್ಭಸ್ತವರಾಜ	೮೫
೧೧	ಕುಂಭಕರ್ಣನೀತಿಕಥನ	೧೦೭
೧೨	ಮಾರೀಚನೀತಿಕಥನ	೧೧೬
೧೩	ನಾರದಾಗಮನ	೧೨೬
,,	ಮಾಯಾಸೀತಾಕಲ್ಪನೆ	೧೩೦
೧೪	ಮಾರೀಚವಧಾದಿಕಥನ	೧೩೬
೧೫	ಸೀತಾಪಹಾರ ..	೧೪೫
,,	ರಾವಣ ಜಟಾಯುರ್ಯುದ್ಧಕಥನ	೧೪೯
,,	ದಾಸಿಮಿಡಸ್ತ್ರೀಯರಿಗೆ ಸೀತಾಶಾಪಪ್ರದಾನ	೧೫೧
೧೬	ಜಲಂಧರವಧ ಬೃಂದಾಶಾಪಾದಿಕಥನ	೧೫೩
೧೭	ಗೋದಾವರೀಶಾಪದಾನಾದಿಕಥನ	೧೬೧
೧೮	ಜಟಾಯುಸ್ಸ್ವರ್ಗತ ಜಟಾಯುರ್ಮೋಕ್ಷಾದಿಕಥನ	೧೬೧
೧೯	ಕಬಂಧಕೃತರಾಮಸ್ತುತಿ, ಶಬರೀಕೃತರಾಮಸ್ತುತಿ, ತನ್ಮೋಕ್ಷಪ್ರದಾನಾದಿಕಥನ	೧೭೩
೨೦	ವಿದ್ಯಾಧರಬ್ರಾಹ್ಮಣೋಪಾಖ್ಯಾನ ...	೧೮೫



ಶ್ರೀರಸ್ತು

ಶ್ರೀ ತತ್ತ್ವಸಂಗ್ರಹ ರಾಮಾಯಣಂ.

ಅರಣ್ಯ ಕಾಂಡಃ

ಶ್ರೀರಾಮಚನ್ದ್ರಾಯ ಪರಮಾತ್ಮನೇ ನಮೋನಮಃ

ಶ್ರೀ ಶಿವಉವಾಚ

ಅಥ ತತ್ರ ದಿನಂ ಸ್ಥಿತ್ವಾ ಪ್ರಭಾತೇ ರಘುನನ್ದನಃ ।
ಸ್ನಾತ್ವಾ ಮುನಿಂ ನಮಸ್ಕೃತ್ಯ ಪ್ರಯಯೌ ದಣ್ಡಕಾವನಮ್ ॥೧॥
ಪ್ರವಿಶ್ಯ ವಿಪಿನಂ ಘೋರಂ ರಾಮೋ ಲಕ್ಷ್ಮಣಮಬ್ರವೀತ್ ।
ಇತಃಪರಂ ಪ್ರಯತ್ನೇನ ಗನ್ತವ್ಯಂ ದುರ್ಗಮಂ ವನವೈ ॥೨॥
ಧನುರ್ಗುಣೇನ ಸಂಯೋಜ್ಯ ಕರೇ ಧೃತ್ವಾ ಶರಾನಪಿ ।
ಅಗ್ರೇ ಯಾಸ್ಯಾಮ್ಯಹಂ ಪಶ್ಚಾತ್ ತ್ವಮನ್ವೇಹಿ ಧನುರ್ಧರಃ ॥೩॥
ಅವಯೋರ್ಮಧ್ಯಗಾ ಸೀತಾ ಮಾಯೇವಾತ್ಮಪರಾತ್ಮನೋಃ ।
ಇತ್ಯೇವಂ ಭಾಷಮಾಣೌ ತೌ ಜಗ್ಮತುಃ ಸಾರ್ಧಯೋಜನಮ್ ॥೪॥

ಶ್ರೀಃ

ಅರಣ್ಯ ಕಾಂಡ

ಶ್ರೀಪರಮೇಶ್ವರನು ಪುನಃ ಪಾರ್ವತೀದೇವಿಯನ್ನು ಕುರಿತುಹೇಳಲುಪಕ್ರಮಿಸುವನು —

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಅತ್ರಿಮಹರ್ಷಿಯ ಆಶ್ರಮದಲ್ಲಿ ನೆಲೆಸಿದ ಶ್ರೀರಾಮಚಂದ್ರನು, ಅಲ್ಲಿಯೇ ಒಂದು ದಿವಸವಿದ್ದು, ಬಳಿಕ ಪ್ರಾತಃಕಾಲದಲ್ಲಿ ಸ್ನಾನಾದಿಗಳನ್ನು ತೀರಿಸಿಕೊಂಡು, ಆ ಮುನಿಗೆ ನಮಸ್ಕಾರಮಾಡಿ, ದಂಡಕಾರಣ್ಯವನ್ನು ಕುರಿತು ಹೊರಟವನಾದನು ॥

ಆಗ ಅತಿಘೋರವಾದ ಅರಣ್ಯವನ್ನು ಪ್ರವೇಶಿಸಿ,ಶ್ರೀರಾಮನು ಲಕ್ಷ್ಮಣನನ್ನು ಕುರಿತು 'ವತ್ಸ! ಲಕ್ಷ್ಮಣ! ಇನ್ನು ಮುಂದೆ ನಾವು ಬಹು ಪ್ರಯತ್ನದಿಂದ ಹೋಗಬೇಕಾಗಿರುವುದು ಈ ಅರಣ್ಯವು

ಸೀತಯಾ ಸಹ ಕಾಕುತ್ಸ್ಥಃ ತಸ್ಮಿನ್ ಘೋರಮೃಗಾಯುತೇ ।
ದದರ್ಶ ಗಿರಿಶೃಙ್ಗಾಭಂ ಪುರುಷಾದಂ ಮಹಾಸ್ವನಮ್ ॥೫॥
ಗಭೀರಾಕ್ಷಂ ಮಹಾವಕ್ತ್ರಂ ವಿಕಟಂ ವಿಷಮೋದರಮ್ ।
ವಸಾನಂ ಚರ್ಮ ವೈಯಾಘ್ರಂ ವಸಾರ್ದ್ರಂ ರುಧಿರೋಕ್ಷಿತಮ್ ॥೬॥
ತ್ರಾಸನಂ ಸರ್ವಭೂತಾನಾಂ ವ್ಯಾದಿತಾಸ್ಯಮಿವಾನ್ತಕಮ್ ।
ತ್ರೀಂ ಸಿಂಹಾಂ ಚತುರೋ ವ್ಯಾಘ್ರಾಂ ದ್ವೌ ವೃಕೌ ವೃಷಭಾ ದಶ ॥೭॥
ಸವಿಷಾಣಂ ವಸಾದಿಗ್ಧಂ ಗಜಸ್ಯ ಚ ಶಿರೋ ಮಹತ್ ।
ಅವಸಜ್ಯಾಯಸೇ ಶೂಲೇ ವಿನದನ್ತಂ ಮಹಾಸ್ವನಮ್ ॥೮॥
ಸ ರಾಮಂ ಲಕ್ಷ್ಮಣಂ ಚೈವ ಸೀತಾಂ ದೃಷ್ಟ್ವೈವ ಮೈಥಿಲೀಮ್ ।
ಅಭ್ಯಧಾವತ ಸಂಕ್ರುದ್ಧಂ ಪ್ರಜಾಃ ಕಾಲಇವಾನ್ತಕಂ ॥೯॥

ಅತಿದುರ್ಗಮವಾಗಿ ಕಾಣಿಸುವುದು ಧನುಸ್ಸಿಗೆ ಹದೆಯೇರಿಸಿ, ಕೈಯಲ್ಲಿ ಬಾಣಗಳನ್ನು ಹಿಡಿದು ಕೊಂಡು, ನಾನು ಮುಂದುಗಡೆ ಹೋಗುವೆನು, ಸೀತೂ ಹೀಗೆಯೇ ಧನುರ್ಧಾರಿಯಾಗಿ ಹಿಂದೆ ಅನುಸರಿಸಿ ಬರುವನಾಗು ಬೇವಾತ್ಮ ಪರಮಾತ್ಮರ ಮಧ್ಯದಲ್ಲಿ ಮಾಯೆಯಿರುವಂತೆ, ನಮ್ಮಿಬ್ಬರ ಮಧ್ಯದಲ್ಲಿ ಸೀತೆಯು ಒರುತಿರಲಿ ಎಂದು ಹೇಳಿದನು ಈಪ್ರಕಾರವಾಗಿ ಮಾತನಾಡುತ, ಅವರಿಬ್ಬರೂ ಸೀತೆಯೊಡನೆ ಬಂದೂವರ ಗಾವುದ ನಡದನರಾದರು ॥೨ ೪॥

ಹೀಗೆ ಸೀತೆಯೊಡನೆ ಹೋಗುತಿರುವ ಶ್ರೀರಾಮಚಂದ್ರನು, ಮಹಾಘೋರವಾದ ಮೃಗಸಮೂಹಗಳುಳ್ಳ ಆ ಅರಣ್ಯದಲ್ಲಿ, ಪರ್ವತಶಿಖರದಂತೆ ಉನ್ನತಾಕಾರನಾಗಿಯೂ ಮಹಾಧ್ವನಿ ಯುಕ್ತನಾಗಿಯೂ ಮನುಷ್ಯರನ್ನು ಭಕ್ಷಿಸತಕ್ಕವನಾಗಿಯೂ ಇರುವ ರಾಕ್ಷಸನೊಬ್ಬನನ್ನು ಕಂಡನು॥೫॥

ಆ ರಾಕ್ಷಸನು, ಗುಳಿಗಳಿದ ಕಣ್ಣುಗಳುಳ್ಳವನಾಗಿಯೂ, ವಿಶಾಲವಾದ ಬಾಯುಳ್ಳವನಾಗಿಯೂ, ಅತಿವಿಕಾರನಾಗಿಯೂ, ವಿಷಮವಾದ ಉದರ ಪ್ರದೇಶವುಳ್ಳವನಾಗಿಯೂ, ಹುಲಿಯ ಚರ್ಮವನ್ನು ಹೊದ್ದಿರತಕ್ಕವನಾಗಿಯೂ, ಮೈಯಿಗೆಲ್ಲ ಕೊಬ್ಬನ್ನೂ ರಕ್ತವನ್ನೂ ಬೂಳೆದುಕೂಂಡವನಾಗಿಯೂ ಇದ್ದನು ॥೬॥

ಅವನನ್ನು ನೋಡಿದರೆ, ಬಾಯಿಬಿಟ್ಟುಕೊಂಡು ಬಂದಿರುವ ಯಮನನ್ನು ಕಂಡಂತೆ ಸಮಸ್ತಪ್ರಾಣಿಗಳಿಗೂ ಭಯವುಂಟಾಗುತಿದ್ದಿತು ಅವನು, ಮೂರು ಸಿಂಹಗಳನ್ನೂ, ನಾಲ್ಕು ಹುಲಿಗಳನ್ನೂ, ಎರಡು ತೋಳಗಳನ್ನೂ, ಹತ್ತು ಗೂಳಿಗಳನ್ನೂ, ಕೂಂಬಿನೊಡಗೂಡಿಯೂ ಕೂಬ್ಬುಬೂಳಿದೂ ಇರುವ ದೊಡ್ಡ ಆನೆಯ ತಲೆಯನ್ನೂ ಕೂಡ, ಉಕ್ಕಿನಿಂದ ಮಾಡಲ್ಪಟ್ಟಿರುವ ಶೂಲದಲ್ಲಿ ಸಿಕ್ಕಿಸಿಕೊಂಡು, ಅತಿಘೋರವಾಗಿ ಧ್ವನಿಮಾಡುತಿದ್ದನು ॥೭-೮॥

ಇಂತಹ ಆ ರಾಕ್ಷಸನು, ಸೀತಾ ರಾಮ ಲಕ್ಷ್ಮಣರನ್ನು ನೋಡಿ, ಪ್ರಳಯಕಾಲದಲ್ಲಿ ಯಮನು ಪ್ರಜೆಗಳನ್ನು ಅಟ್ಟಿಕೂಂಡು ಹೋಗುವಂತೆ, ಅವರುಗಳನ್ನು ಅಟ್ಟಿಕೊಂಡು ಒಂದನು॥

ಆಯಾನ್ತಂ ರಾಕ್ಷಸಂ ದೃಷ್ಟ್ವಾ ರಾಮೋ ಲಕ್ಷ್ಮಣಮಬ್ರವೀತ್ ॥೧೦॥
ಪಶ್ಯ ಭ್ರಾತರ್ಮಹಾಕಾಯೋ ರಾಕ್ಷಸೋಯಮುಪಾಗತಃ ।
ಸಜ್ಯೀಕೃತ್ಯ ಧನುಸ್ತಿಷ್ಠ ಮಾಭೈರ್ಜಾನಕನನ್ದಿನಿ ।
ಇತ್ಯುಕ್ತ್ವಾ ಬಾಣಮಾದಾಯ ಸಿದ್ಧತೋ ರಾಮಇವಾಚಲಃ ॥೧೧॥
ಸ ತು ರಾಮಂ ರಮಾನಾಥಂ ಲಕ್ಷ್ಮಣಂ ಜಾನಕೀಂ ತಥಾ ।
ಅಟ್ಟಹಾಸಂ ತತಃ ಕೃತ್ವಾ ಭೀಷಯನ್ನಿದಮಬ್ರವೀತ್ ॥೧೨॥
ಕೌ ಯುವಾಂ ಬಾಣತೂಣೀರಜಟಾವಲ್ಕಲಧಾರಿಣೌ ।
ಕಿಮರ್ಥಮಾಗತೌ ಘೋರಂ ನರಂ ವ್ಯಾಳನಿಷೇವಿತಮ್ ॥೧೩॥
ಶ್ರುತ್ವಾ ರಕ್ಷೋವಚೋ ರಾಮಃ ಸ್ಮಯಮಾನಮುವಾಚ ತಮ್ ॥೧೪॥
ಅಹಂ ರಾಮಸ್ತ್ವಯಂ ಭ್ರಾತಾ ಲಕ್ಷ್ಮಣೋ ಮಮ ಸಮ್ಮತಃ ।
ಏಷಾ ಸೀತಾ ಮಮ ಪ್ರಾಣವಲ್ಲಭಾ ವಯಮಾಗತಾಃ ।
ಪಿತುರಾಜ್ಞಾಂ ಪುರಸ್ಕೃತ್ಯ ಶಿಕ್ಷಣಾರ್ಥಂ ಭವಾದೃಶಾನ್ ॥೧೫॥

ಹೀಗೆ ಬರುವ ಆ ರಾಕ್ಷಸನನ್ನು ಕಂಡು ಶ್ರೀರಾಮನು ಲಕ್ಷ್ಮಣನನ್ನು ನೋಡುತ್ತ ಹೀಗೆ ಹೇಳಿದನು - ವತ್ಸ! ಲಕ್ಷ್ಮಣ! ಇದೋ ಇಲ್ಲಿ ನೋಡು, ಧನುಸ್ಸನ್ನು ಹದಿಯೇರಿಸಿಕೊಂಡು ನಿಲ್ಲು, ವನಜಾಗು ಹೇ ಸೀತೇ! ನೀನು ಹದರಬೇಡ ಎಂದು ಹೇಳಿ, ತಾನೂ ಕೈಯಲ್ಲಿ ಬಾಣವನ್ನು ಪಿಡಿದುಕೊಂಡು, ಶ್ರೀರಾಮನು ಸರ್ಪದಂತೆ ಅಲುಗಾಡದೆ ನಿಂತುಕೊಂಡನು ॥೧೦-೧೧॥

ಆ ರಾಕ್ಷಸನಾದರೋ, ಪಾತಕಾಸ್ಪದನೂ ಪಾಪಿಷ್ಠನಾದ ರಾಮನನ್ನೂ ಲಕ್ಷ್ಮಣನನ್ನೂ ಸೀತೆಯನ್ನೂ ಬೆದರಿಸುವುದಕ್ಕಾಗಿ ಅಟ್ಟಹಾಸನಗೈದು, ಮುಂದಕ್ಕೆ ಈ ಮಾತನ್ನು ಹೇಳಿದನು ॥೧೨॥

ಬಾಣವನ್ನೂ ಬತ್ತಳಿಕೆಯನ್ನೂ ಜಟೆಯನ್ನೂ ವಲ್ಕಲವನ್ನೂ ಧರಿಸಿರುವ ನೀವು ಯಾರು? ನೀನೇನು ಕ್ಷತ್ರಿಯರೆ? ಅಥವಾ ಬ್ರಾಹ್ಮಣರೆ? ದುಷ್ಟಮೃಗಸಮೂಹಪೂರ್ಣವಾದ ಅತಿ ಘೋರವಾಗಿರುವ ಈ ಅರಣ್ಯಕ್ಕೆ ಏತಕ್ಕಾಗಿ ಬಂದಿರಿ? ॥೧೩॥

ಹೀಗೆ ಹೇಳಿದ ರಾಕ್ಷಸನ ಮಾತನ್ನು ಕೇಳಿ, ಶ್ರೀರಾಮನು ಮುಂದಕ್ಕೆ ಸಮಾಧಾನಮಾಡುತ್ತ, ಅವನನ್ನು ಕುರಿತು "ಎಲೈ ರಾಕ್ಷಸನೆ! ನಾನು ರಾಮನು, ಇವನು ನನ್ನ ಪ್ರಿಯಸಹೋದರನಾದ ಲಕ್ಷ್ಮಣನು, ಅವಳು ನನ್ನ ಪ್ರಾಣಪ್ರಿಯೆಯಾದ ಸೀತೆಯು ನಾವುಗಳು, ನಿನ್ನಂತಹ ದುಷ್ಟರನ್ನು ಶಿಕ್ಷಿಸುವುದಕ್ಕೋಸ್ಕರ, ತಂದೆಯ ಆಜ್ಞೆಯನ್ನು ಶಿರಸಾ ವಹಿಸಿಕೊಂಡು ಇಲ್ಲಿಗೆ ಬಂದಿರುವೆವು" ಎಂದು ಹೇಳಿದನು ॥೧೪--೧೫॥

ಶ್ರುತ್ವಾ ತದ್ರಾಮವಚನಂ ಪ್ರತ್ಯುವಾಚ ನಿಶಾಚರಃ ॥೧೬॥
ಮಾಂ ನ ಜಾನಾಸಿ ರಾಮ ತ್ವಂ ವಿರಾಧಂ ಲೋಕವಿಶ್ರುತಮ್ ।
ಯದಿ ಜೀವಿತುಮಿಚ್ಛಾಸ್ತಿ ತ್ಯಕ್ತ್ವಾ ಸೀತಾಂ ನಿರಾಯುಧೌ ।
ಪಲಾಯೇತಾಂ ನ ಚೇಜ್ಜೀಘ್ರಂ ಭಕ್ಷಯಾಮಿ ಯುವಾಮಹಮ್ ॥೧೭॥
ಇತ್ಯುಕ್ತ್ವಾ ರಾಕ್ಷಸಃ ಸೀತಾಂ ಆದಾತುಮಭಿದುದ್ರುವೇ ।
ರಾಮಶ್ಚಿಚ್ಛೇದ ತದ್ಬಾಹೂ ಶರೇಣ ಪ್ರಹಸನ್ನಿವ ॥೧೮॥
ತತಃ ಕೋಪಪರೀತಾತ್ಮಾ ರಾಮಮಭ್ಯದ್ರವದ್ರುಷಾ ।
ಅಗಚ್ಛತಃ ಪದದ್ವನ್ದ್ವಂ ಜಿಚ್ಛೇದ ರಘುನನ್ದನಃ ॥೧೯॥
ತತಃ ಸರ್ಪ ಇವಾಸ್ಯೇನ ಗ್ರಸಿತುಂ ರಾಮಮಾಪತತ್ ।
ತತೋರ್ಧಚನ್ದ್ರಾಕಾರೇಣ ಬಾಣೇನಾಸ್ಯ ಶಿರೋಹರತ್ ॥೨೦॥
ತತಃ ಸೀತಾ ಸಮಾಲಿಂಗ್ಯ ಪ್ರಶಶಂಸ ರಘೂತ್ತಮಮ್ ।
ತತೋ ದುನ್ದುಭಯೋ ನೇದುಃ ದಿವಿ ದೇವಗಣೇರಿತಾಃ ॥೨೧॥

ಶ್ರೀರಾಮನು ಹೇಳಿದ ಈ ಮಾತನ್ನು ಕೇಳಿ, ಆ ರಾಕ್ಷಸನು, ಮತ್ತೆ ಶ್ರೀರಾಮನನ್ನು ಕುರಿತು 'ಎಲೈ ರಾಮನೆ! ನಾನು ಲೋಕದಲ್ಲೆಲ್ಲ ಪ್ರಸಿದ್ಧನಾಗಿರುವ ವಿರಾಧನೆಂಬುದನ್ನು ನೀನರಿಯೆ. ನಿಮ್ಮಗಳಿಗೆ ಬದುಕಬೇಕೆಂದು ಇಚ್ಛೆಯಿರುವ ಪಕ್ಷದಲ್ಲಿ, ಈ ಸೀತೆಯನ್ನು ಇಲ್ಲಿ ಬಿಟ್ಟುಬಿಟ್ಟು, ಆಯುಧಗಳನ್ನು ಎಸೆದುಬಿಟ್ಟು, ಬೇಗನೆ ಓಡಿಹೋಗಿರಿ. ನೀವು ಈಗ ಹೀಗೆ ಮಾಡದಿದ್ದ ಪಕ್ಷದಲ್ಲಿ, ಈಗಲೇ ನಾನು ನಿಮ್ಮಿಬ್ಬರನ್ನೂ ತಿಂದುಬಿಡುವೆನು, ಎಂದು ಹೇಳಿದನು ॥

ಹೀಗೆ ಹೇಳಿಬಿಟ್ಟು, ಆ ರಾಕ್ಷಸನು ಸೀತೆಯನ್ನು ಹಿಡಿದುಕೊಳ್ಳಲು ಓಡಿಬಂದನು. ಆಗ ಶ್ರೀರಾಮನು ನಗುತಲೇ ಅವನ ತೋಳುಗಳನ್ನು ಕತ್ತರಿಸಿಹಾಕಿದನು ॥೧೮॥

ಬಳಿಕ, ಆ ರಾಕ್ಷಸನು ಮಹಾ ಕೋಪಯುಕ್ತನಾಗಿ, ಶ್ರೀರಾಮನನ್ನು ಅಟ್ಟಿಕೊಂಡು ಬಂದನು. ಹೀಗೆ ಅವನು ಬರುತಿರುವಾಗ, ರಾಮಚಂದ್ರನು ಅವನ ಪಾದಯುಗ್ಮವನ್ನು ಕತ್ತರಿಸಿದನು ॥೧೯॥

ಅನಂತರ, ಆ ರಾಕ್ಷಸನು, ಹಾವಿನಂತೆ ಬಾಯಿತೆಗೆದುಕೊಂಡು, ರಾಮನನ್ನು ನುಂಗುವುದಕ್ಕಾಗಿ ಬಂದನು; ಆಗ ಶ್ರೀರಾಮನು ಅರ್ಧಚಂದ್ರಾಕಾರವಾದ ಬಾಣದಿಂದ ಇವನ ತಲೆಯನ್ನು ಕತ್ತರಿಸಿಬಿಟ್ಟನು ॥೨೦॥

ಆಮೇಲೆ, ಸೀತೆಯು ಆ ರಘುನಾಥನನ್ನು ಆಲಿಂಗಿಸಿಕೊಂಡು ಬಹಳವಾಗಿ ಸ್ತುತಿಸಿದಳು; ಅಂತರಿಕ್ಷದಲ್ಲಿ ದೇವತೆಗಳಿಂದ ಪ್ರೇರಿತಗಳಾದ ದುಂದುಭಿಗಳು ಧ್ವನಿಮಾಡಿದುವು ॥೨೧॥

ವಿರಾಧಕಾಯಾದತಿಸುನ್ದರಾಕೃತಿಃ ವಿಭ್ರಾಜಮಾನೋವಿಮಲಾಮ್ಬರಾವೃತಃ।
ಪ್ರತಪ್ತಚಾಮೀಕರಚಾರುಭೂಷಣೋವ್ಯದೃಶ್ಯತಾಗ್ರೇಗಗನೇರವಿರ್ಯಥಾ॥

ಪ್ರಣಮ್ಯ ರಾಮಂ ಪ್ರಣತಾರ್ತಿಹಾರಿಣಂ
ಭವಪ್ರವಾಹೋಪರಮಂ ದಯಾನಿಧಿಮ್ ।
ಪ್ರಶಸ್ಯ ಭೂಯಃ ಪ್ರಣನಾಮ ದಣ್ಡವತ
ಪ್ರಪನ್ನಸರ್ವಾರ್ತಿಹರಂಪ್ರಸನ್ನಧೀಃ ॥೨೩॥

ವಿರಾಧಉವಾಚ

ಶ್ರೀರಾಮ ರಾಜೀವದಳಾಯತಾಕ್ಷ
ವಿದ್ಯಾಧರೋಹಂ ವಿಪುಲಪ್ರಕಾಶಃ ।
ದೂರ್ವಾಸಸಾವ್ಯಕಾರಣಕೋಪಮೂರ್ತಿನಾ
ಶಪ್ತಸ್ತ್ವಹಂ ಸೋದ್ಯ ವಿಮೋಚಿತಸ್ತ್ವಯಾ ॥೨೪॥
ಇತಃಪರಂ ತ್ವಚ್ಚರಣಾರವಿನ್ದಯೋಃ
ಸ್ಮೃತಿಃ ಸದಾ ಮೇಸ್ತು ಭವಪ್ರಶಾನ್ತಯೇ ।
ತ್ವನ್ನಾಮಸಙ್ಕೀರ್ತನಮೇವ ವಾಣೀ
ಕರೋತು ಮೇ ಕರ್ಣಪುಟಂ ಮದೀಯಮ್ ॥೨೫॥

ಆ ಒಳಿಕ, ಅತಿಸುಂದರಾಕಾರನಾಗಿಯೂ-ಮಹಾಪ್ರಕಾಶನಾಗಿಯೂ-ಶುಭ್ರವಾದ ವಸ್ತ್ರಗಳನ್ನು ಉಟ್ಟಿರತಕ್ಕವನಾಗಿಯೂ-ಕಟಹಾಕಿದ ಚಿನ್ನದಲ್ಲಿ ಮಾಡಿರುವ ದಿವ್ಯಭೂಷಣಗಳನ್ನು ಧರಿಸಿರತಕ್ಕವನಾಗಿಯೂ ಇರುವ ಒಬ್ಬ ಪುರುಷನು, ಆ ವಿರಾಧನೆಂಬ ರಾಕ್ಷಸನ ಶರೀರದಿಂದ ಹೊರಟು, ಮುಂದುಗಡೆ ಆಕಾಶದಲ್ಲಿ ಸೂರ್ಯನಂತೆ ಕಾಣಿಸಿಕೊಂಡನು ॥೨೨॥

ಆಗ ನಿರ್ಮಲ ಹೃದಯನಾಗಿರುವ ಆ ಪುರುಷನು ಪ್ರಣತರ ವಿಷತ್ತನ್ನು ಪರಿಹರಿಸತಕ್ಕವನಾದ ಶ್ರೀರಾಮನನ್ನು ನಮಸ್ಕರಿಸಿ, ಸಂಸಾರ ಪ್ರವಾಹವನ್ನು ಶಾಂತಿಗೊಳ್ಳಿಸತಕ್ಕವನೂ ದಯಾನಿಧಿಯೂ ಆದ ಅವನನ್ನು ಬಗೆಬಗೆಯಾಗಿ ಹೊಗಳಿ, ಶರಣಾಗತರ ಆರ್ತಿಗಳನ್ನೆಲ್ಲ ಪರಿಹರಿಸತಕ್ಕವನಾದ ಅವನಿಗೆ ದಂಡಾಕಾರವಾಗಿ ನಮಸ್ಕಾರಮಾಡಿದನು ॥೨೩॥

ಬಳಿಕ ಆ ಪುರುಷನು ಈರೀತಿಯಾಗಿ ಶ್ರೀರಾಮನನ್ನು ಸ್ತುತಿಸಿದನು —

ಹೇ ರಾಮ! ಪುಂಡರೀಕಾಕ್ಷ! ಪೂರ್ವದಲ್ಲಿ ನಾನು ಮಹಾಪ್ರಕಾಶನಾದ ವಿದ್ಯಾಧರನಾಗಿದ್ದೆನು. ನಿರ್ವ್ಯಾಜಕಾರಣಕೋಪಮೂರ್ತಿಯಾದ ದೂರ್ವಾಸಮುನಿಯಿಂದ ಶಪಿಸಿಲ್ಪಟ್ಟಿದ್ದೆನು, ಈಗ ನಿನ್ನಿಂದ ಶಾಪಮೋಚನೆಯನ್ನು ಹೊಂದಿದೆನು ॥೨೪॥

ಇನ್ನು ಮೇಲೆ, ನನಗೆ ಸಂಸಾರವು ಶಾಂತಿ ಹೊಂದುವುದಕ್ಕೋಸ್ಕರ ಸರ್ವದಾ ನಿನ್ನ ಪಾದಮಲ ಸ್ಮರಣೆಯುಂಟಾಗುವಂತೆ ಅನುಗ್ರಹಿಸುವನಾಗು ನನ್ನ ವಾಣಿಯು, ಸರ್ವದಾ ನಿನ್ನೆ

ಕಥಾಮೃತಂ ಪಾತು ಕರದ್ವಯಂ ತೇ
ಪಾದಾರವಿನ್ದಾರ್ಚನಮೇವ ಕುರ್ಯಾತ್ ।
ಶಿರಶ್ಚ ತೇ ಪಾದಯುಗಪ್ರಣಾಮಂ
ಕರೋತು ನಿತ್ಯಂ ದುರಿತಕ್ಷಯಾವಹಮ್ ॥೨೬॥

ನಮಸ್ತುಭ್ಯಂ ಭಗವತೇ ವಿನಷ್ಟಾಜ್ಞಾನಮೂರ್ತಯೇ ।
ಆತ್ಮಾರಾಮಾಯ ರಾಮಾಯ ಸೀತಾರಾಮಾಯ ವೇಧಸೇ ॥೨೭॥

ಪ್ರಪನ್ನಂ ಪಾಹಿ ಮಾಂ ದೇವ ರಾಮ ಯಾಸ್ಯಾಮ್ಯನುಜ್ಞಯಾ ।
ದೇವಲೋಕಂ ರಘುಶ್ರೇಷ್ಠ ಮಾಯಾ ಮಾಂ ನಾವೃಣೋತು ತೇ ॥೨೮॥

ಇತಿ ವಿಜ್ಞಾಪಿತಸ್ತೇನ ಪ್ರಸನ್ನೋ ರಘುನನ್ದನಃ ।
ವರಂ ದದೌ ತದಾ ಪ್ರೀತೋ ವಿರಾಧಾಯ ಮಹಾಮತಿಃ ॥೨೯॥

ಗಚ್ಛ ವಿದ್ಯಾಧರಶ್ರೇಷ್ಠ ಮಾಯಾದೋಷಗುಣಾಜಿತಾಃ ।
ತ್ವಯಾ ಮದ್ದರ್ಶನಾತ್ ಸದ್ಯೋ ಮುಕ್ತೋ ಜ್ಞಾನವತಾಂ ವರ ॥೩೦॥

ನಾಮಕೀರ್ತನೆಯನ್ನೇ ನುಡಿಯುತಿರಲಿ ನನ್ನ ಶ್ರೋತ್ರಪುಟವು, ನಿನ್ನ ಕಥೆಯೆಂಬ ಅಮೃತವನ್ನು ಪಾನಮಾಡಲಿ ನನ್ನ ಹಸ್ತಯುಗ್ಮವು, ನಿನ್ನ ಪಾದಕಮಲದ ಪೂಜನೆಯನ್ನೇ ಮಾಡುತಿರಲಿ ನನ್ನ ಶಿರಸ್ಸು, ದುರಿತಕ್ಷಯಕಾರಿಯಾದ ನಿನ್ನ ಪಾದಯುಗಳನಮಸ್ಕಾರವನ್ನು ನಿತ್ಯವೂ ಮಾಡುತಿರಲಿ ॥೨೫-೨೬॥

ಅಜ್ಞಾನಶೂನ್ಯವಿಗ್ರಹನಾಗಿಯೂ ಆತ್ಮಾರಾಮನಾಗಿಯೂ ಸೀತಾಪತಿಯಾಗಿಯೂ ಸರ್ವಲೋಕವಿಧಾಯಕನಾಗಿಯೂ ಇರುವ ಸಾಕ್ಷಾದ್ಭಗವಂತನಾದ ನಿನಗೋಸ್ಕರ ನಮಸ್ಕಾರವು ॥

ದೇವ! ಶ್ರೀರಾಮ! ಶರಣಾಗತನಾದ ನನ್ನನ್ನು ಕಾಪಾಡು ಹೇ ರಘುಶ್ರೇಷ್ಠ! ನಿನ್ನ ಅಪ್ಪಣೆಯಾದರೆ ನಾನು ದೇವಲೋಕಕ್ಕೆ ಹೋಗುವೆನು ನಿನ್ನ ಮಾಯೆಯು ಪುನಃ ನನ್ನನ್ನು ಆವರಿಸಿಕೊಳ್ಳದಂತೆ ಅನುಗ್ರಹಿಸುವನಾಗು (ಎಂದು ಆ ವಿದ್ಯಾಧರನು ಸ್ತುತಿಸಿದನು) ॥೨೮॥

ಈ ರೀತಿಯಾಗಿ ಅವನಿಂದ ವಿಜ್ಞಾಪಿಸಲ್ಪಟ್ಟ ಪ್ರಸನ್ನನಾದ ಮಹಾಮತಿಯಾದ ರಘುನಂದನನು, ಆಗ ಮಹಾಪ್ರೀತಿಸಮನ್ವಿತನಾಗಿ ವಿರಾಧನಿಗ ವರವನ್ನು ಕೊಟ್ಟನು ॥೨೯॥

ಎಲೈ ವಿದ್ಯಾಧರಶ್ರೇಷ್ಠನೆ! ನೀನು ಯಥೇಚ್ಛವಾಗಿ ಹೋಗಬಹುದು. ನೀನು ನನ್ನ ದರ್ಶನಮಾಡಿದುದಂದಲೇ ಮಾಯಾಸಂಬಂಧವಾದ ದೋಷಗಳನ್ನೂ ಗುಣಗಳನ್ನೂ ಗೆದ್ದಿರುವೆ ಜ್ಞಾನಿಗಳಲ್ಲೆಲ್ಲ ಶ್ರೇಷ್ಠನಾದವನೆ! ನೀನು ಈಗಲೇ ಜೀವನ್ಮುಕ್ತನಾಗುವೆ ॥೩೦॥

ಮದ್ಭಕ್ತಿರ್ದುರ್ಲಭಾ ಲೋಕೇ ಜಾತಾ ಚೇನ್ಮುಕ್ತಿದಾಯಿನೀ ।
ಭಕ್ತ್ಯಾ ಯಥಾ ಪ್ರಸನ್ನಃ ಸ್ಯಾಂ ತಥಾ ನಾನ್ಯೇನ ಕೇನಚಿತ್ ॥೩೧॥
ಇತಿ ದತ್ತ್ವಾ ವರಂ ತಸ್ಮೈ ಪ್ರಸನ್ನಾಯ ರಘೂತ್ತಮಃ ।
ವಿರಾಧಂ ಪ್ರೇಷಯಾಮಾಸ ಭೂಯಃ ಸ್ವರ್ಗಂ ಸುಖಾಸ್ಪದಮ್ ॥೩೨॥
ಹತ್ವಾ ತು ತಂ ಭೀಮಬಲಂ ವಿರಾಧಂ ರಾಕ್ಷಸಂ ವನೇ ।
ತತಃ ಸೀತಾಂ ಸಮಾಶ್ವಾಸ್ಯ ರಾಮೋ ಲಕ್ಷ್ಮಣಸಂಯುತಃ ॥೩೩॥
ಶರಭಙ್ಗಾಶ್ರಮಂ ಗತ್ವಾ ರಾಘವಃ ಸಪರಿಚ್ಛದಃ ।
ಅಗ್ನಿಹೋತ್ರಮುಪಾಸೀನಂ ಶರಭಙ್ಗಮುಪಾಗಮತ್ ॥೩೪॥
ತಸ್ಯ ಪಾದೌ ಚ ಸಂಗೃಹ್ಯ ರಾಮಃ ಸೀತಾ ಚ ಲಕ್ಷ್ಮಣಃ ।
ನಿಷೇದುಃ ಸಮನುಜ್ಞಾತಾಃ ಲಬ್ಧ್ವಾಸನಮನುತ್ತಮಮ್ ॥೩೫॥
ಅತಿಥ್ಯಮಕರೋತ್ ತೇಷಾಂ ಕನ್ದಮೂಲಫಲಾದಿಭಿಃ ।
ಪ್ರೀತ್ಯಾಹ ಶರಭಙ್ಗೋಽಪಿ ರಾಮಂ ಭಕ್ತಪರಾಯಣಮ್ ॥೩೬॥
ಅಹಂ ಜ್ಞಾತ್ವಾ ನರವ್ಯಾಘ್ರ ವರ್ತಮಾನಮದೂರತಃ ।
ಬ್ರಹ್ಮಲೋಕಂ ನ ಗಚ್ಛಾಮಿ ತ್ವಾಮದೃಷ್ಟ್ವಾ ಪ್ರಿಯಾತಿಥಿಮ್ ॥೩೭॥

ಲೋಕದಲ್ಲಿ ನನ್ನ ಭಕ್ತಿಯು ಸುತರಾಂ ದುರ್ಲಭವಾದುದು ಅದು ಉಂಟಾದ ಪಕ್ಷದಲ್ಲಿ, ಮುಕ್ತಿಯನ್ನೇ ಕೂಡಬಹುದು ನಾನು ಭಕ್ತಿಯಿಂದ ಹೇಗೆ ಪ್ರಸನ್ನನಾಗುವೆನೋ, ಹಾಗೆ ಮತ್ತಾವುದರಿಂದಲೂ ಪ್ರಸನ್ನನಾಗಲಾರೆನು ॥೩೧॥

ಹೀಗೆಂದು ಆ ರಘೂತ್ತಮನು ಶರಣಾಗತನಾದ ವಿರಾಧನಿಗೆ ವರವನ್ನು ಕೊಟ್ಟು, ಪುನಃ ಸುಖಾಶ್ರಯವಾದ ಸ್ವರ್ಗಲೋಕಕ್ಕೆ ಅವನನ್ನು ಕಳುಹಿಸಿಕೊಟ್ಟನು ॥೩೨॥

ಎಲೌ ಸಾರ್ವತಿ! ಆ ವನದಲ್ಲಿ ವಿರಾಧನಾಮನಾದ ಮಹಾಭೀಮ ಪರಾಕ್ರಮನಾದ ರಾಕ್ಷಸನನ್ನು ಕೊಂದು, ಬಳಿಕ ಸೀತೆಯನ್ನು ಆಶ್ವಾಸನೆಮಾಡಿ, ರಘುಕುಲ ತಿಲಕನಾದ ಶ್ರೀರಾಮನು, ಲಕ್ಷ್ಮಣನೊಡನೆಯೂ ತನ್ನ ಪರಿವಾರದೊಡನೆಯೂ ಶರಭಂಗಮುನಿಯ ಆಶ್ರಮಕ್ಕೆ ಬಂದು, ಅಗ್ನಿಹೋತ್ರ ಮಾಡುತಿರುವ ಆ ಮುನಿಯ ಸಮೀಪವನ್ನು ಸೇರಿದನು ॥೩೩—೩೪॥

ಬಳಿಕ ಸೀತಾ ರಾಮ ಲಕ್ಷ್ಮಣರು ಆ ಶರಭಂಗನ ಪಾದಗಳಿಗೆ ನಮಸ್ಕರಿಸಿ, ಅವನ ಅನುಜ್ಞೆಯನ್ನು ಪಡೆದು, ಅವನಿಂದ ಅಮಂತ್ರಿತರಾಗಿ, ಅಲ್ಲಿಯೇ ವಾಸಸ್ಥಾನವನ್ನು ಹೊಂದಿ ಕುಳಿತುಕೊಂಡರು ॥೩೫॥

ಅನಂತರ ಆ ಶರಭಂಗನು ಅವರಿಗೆ ಕಂದ ಮೂಲ ಫಲಾದಿಗಳಿಂದ ಅತಿಥ್ಯವನ್ನು ಮಾಡಿ, ಭಕ್ತಪರಾಯಣನಾದ ರಾಮನನ್ನು ಕುರಿತು ಪ್ರೀತಿಯಿಂದ ಹೀಗೆ ಹೇಳಿದನು ॥೩೬॥

ಹೇ ಪುರುಷೋತ್ತಮ! ನೀನು ಸಮೀಪದಲ್ಲಿಯೇ ಬರುತಿದ್ದುದನ್ನು ತಿಳಿದು, ಪ್ರಿಯಾತಿಥಿಯಾದ ನಿನ್ನನ್ನು ಕಾಣದೆ ಹೋಗಬಾರದೆಂದು ನಾನು ಇನ್ನೂ ಬ್ರಹ್ಮಲೋಕಕ್ಕೆ ಹೋಗದಿರುವೆನು ॥೩೭॥

ತ್ವಯಾಹಂ ಪುರುಷವ್ಯಾಘ್ರ ಧಾರ್ಮಿಕೇಣ ಮಹಾತ್ಮನಾ ।
ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವಸಮ್ಮತಮ್ ॥೩೪॥
ಅಕ್ಷಯ್ಯಾನರಶಾರ್ದೂಲ ಮಯಾ ಲೋಕಾಜಿತಾಃ ಶುಭಾಃ ।
ಬ್ರಾಹ್ಮಾಂಶ್ಚ ನಾಕಪೃಷ್ಠಾಂಶ್ಚ ಪ್ರತಿಗೃಹ್ಣೀಷ್ವ ಮಾಮಕಾನ್ ॥೩೫॥
ಸಮರ್ಪ್ಯ ರಾಮಸ್ಯ ಮಹತ್ ಸ ಪುಣ್ಯಫಲಂ ವಿರಕ್ತಃ ಶರಭಙ್ಗಯೋಗೀ ।
ಚಿತಿಂ ಸಮಾರೋಹಯದಪ್ರಮೇಯಂ ರಾಮಂಸಸೀತಂಸಹಸಾಪ್ರಣಮ್ಯ॥
ದಧ್ಯೌಚ ರಂರಾಮಮಶೇಷಹೃತ್ಸ್ಥಂದೂರ್ವಾದಳಶ್ಯಾಮಲಮಾಯತಾಕ್ಷಮ್ ।
ಜೇರಾಮ್ಬರಂ ಸ್ನಿಗ್ಧಜಟಾಕಲಾಪಂಸೀತಾಸಹಾಯಂಶ್ರಿತಲಕ್ಷ್ಮಣಂತವ ॥

ಕೋ ನಾ ದಯಾಳುಃ ಶ್ರಿತಕಾಮಧೇನುಃ
ಅಹೋ ಜಗತ್ಯಾಂ ರಘುನಾಯಕಾದೃತೇ ।
ಸ್ಮೃತೋ ಮಯಾ ನಿತ್ಯಮನನ್ಯಭಾಜಾ
ಜ್ಞಾತ್ವಾ ಮತಿಂ ಮೇ ಸ್ವಯಮೇವಮಾಗತಃ ॥೪೦॥

ಎಲೈ ನರವ್ಯಾಘ್ರನೆ! ಮಹಾ ಧರ್ಮಿಷ್ಠನಾಗಿಯೂ ಮಹಾತ್ಮನಾಗಿಯೂ ಇರುವ ನಿನ್ನೊಡನೆ ಈಗ ಸಮಾಗಮ ಸುಖವನ್ನು ಹೊಂದಿದವನಾಗಿ, ಇನ್ನು ನಾನು ದೇವಪೂಜಿತವಾದ ಸ್ವರ್ಗಲೋಕಕ್ಕೆ ಹೊರಡುವೆನು ॥೩೮॥

ಎಲೈ ಪುರುಷಶ್ರೇಷ್ಠನೆ! ಅಕ್ಷಯವಾದ ಪುಣ್ಯಲೋಕಗಳನ್ನು ನಾನು ತಪಸ್ಸಿನಿಂದ ಸಂಪಾದಿಸಿರುವೆನು ಹೀಗೆ ನಾನು ಸಂಪಾದಿಸಿರುವ ಬ್ರಹ್ಮಲೋಕಗಳನ್ನೂ ಸ್ವರ್ಗಲೋಕಗಳನ್ನೂ ಈಗ ನೀನು ಸ್ವೀಕರಿಸುವನಾಗು ॥೩೯॥

ಹೀಗೆಂದು ಹೇಳಿ, ವಿರಕ್ತನಾದ ಆ ಶರಭಂಗಮುನಿಯು, ಅತ್ಯಧಿಕವಾದ ತನ್ನ ಪುಣ್ಯಫಲವನ್ನೆಲ್ಲ ಶ್ರೀರಾಮನಿಗೆ ಸಮರ್ಪಿಸಿ, ಅಪ್ರಮೇಯನಾದ ಸೀತಾಸಮೇತನಾಗಿರುವ ಶ್ರೀರಾಮನನ್ನು ಕೂಡಲೇ ನಮಸ್ಕರಿಸಿ, ಬಳಿಕ ಚಿತಿಯನ್ನು ಹತ್ತಿದನು ॥೪೦॥

ಆಗ ಆ ಶರಭಂಗಮುನಿಯು, ಸರ್ವಭೂತಹೃದಯಸ್ಥನಾಗಿಯೂ ದೂರ್ವಾದಳಶ್ಯಾಮದೇಹನಾಗಿಯೂ ವಿಶಾಲನೇತ್ರನಾಗಿಯೂ ಚೀರಾಂಬರಧರನಾಗಿಯೂ ಸುಂದರವಾದ ಜಟಾಕಲಾಪವುಳ್ಳವನಾಗಿಯೂ ಸೀತಾ ಲಕ್ಷ್ಮಣ ಯುಕ್ತನಾಗಿಯೂ ಇರುವ ಶ್ರೀರಾಮಚಂದ್ರನನ್ನು ಬಹಳ ಹೊತ್ತು ಧ್ಯಾನಮಾಡಿದನು ॥೪೧॥

ಅಹಹ! ಈ ಲೋಕದಲ್ಲಿ, ಶ್ರೀರಾಮಚಂದ್ರನನ್ನು ಬಿಟ್ಟರೆ, ಆಶ್ರಿತರಿಗೆ ಕಾಮಧೇನುವಾಗಿರುವ ದಯಾಳುವಾವನಿರುವನು? ಅನನ್ಯ ಶರಣನಾಗಿರುವ ನನ್ನಿಂದ ಸ್ಮರಿಸಲ್ಪಟ್ಟಕೂಡಲೇ, ಈ ಸ್ವಾಮಿಯು ನನ್ನ ಅಭಿಪ್ರಾಯವನ್ನು ತಿಳಿದುಕೊಂಡು ತಾನೇ ಇಲ್ಲಿಗೆ ಬಂದುಬಿಟ್ಟಿರುವನು ॥

ಪಶ್ಯತ್ವಿದಾನೀಮೇವೈಷಃ ರಾಮೋ ದಾಶರಥಿಃ ಪ್ರಭುಃ ।
ದಗ್ಧ್ವಾ ಸ್ವದೇಹಂ ಗಚ್ಛಾಮಿ ಬ್ರಹ್ಮಲೋಕಮಕಲ್ಮಷಃ ॥೪೩॥
ಅಯೋಧ್ಯಾಧಿಪತಿರ್ಮೇಸ್ತು ಹೃದಯೇ ರಾಘವಃ ಸದಾ ।
ಯದ್ವಾಮಾಙ್ಕಸ್ಥಿತಾ ಸೀತಾ ಮೇಘಸ್ಥೇವ ತಟಿಲ್ಲತಾ ॥೪೪॥
ಇತಿ ರಾಮಂ ಚಿರಂ ಧ್ಯಾತ್ವಾ ದೃಷ್ಟ್ವಾ ಚ ಪುರತಃ ಸ್ಥಿತಮ್ ।
ರಾಘವೇಣಾಭ್ಯನುಜ್ಞಾತೋ ದದಾಹ ಸ್ವಕಳೇಬರಮ್ ॥೪೫॥
ತಸ್ಯ ರೋಮಾಣಿ ಕೇಶಾಂಶ್ಚ ದದಾಹಾಗ್ನಿರ್ಮಹಾತ್ಮನಃ ।
ಜೀರ್ಣಾಂ ತ್ವಚಂ ತಥಾಸ್ಥೀನಿ ಯಚ್ಚ ಮಾಂಸಂ ಸಶೋಣಿತಮ್ ॥೪೬॥
ರಾಮಸ್ತು ವಿಸ್ಮಿತೋ ಭ್ರಾತ್ರಾ ಭಾರ್ಯಯಾ ಚ ಮಹಾತ್ಮವಾ ।
ಸ ಚ ಪಾವಕಸಙ್ಕಾಶಃ ಕುಮಾರಃ ಸಮಪದ್ಯತ ॥೪೭॥
ಸ ಲೋಕಾನಾಹಿತಾಗ್ನೀನಾಂ ಋಷೀಣಾಂ ಚ ಮಹಾತ್ಮನಾಮ್ ।
ದೇವಾನಾಂ ಚ ವ್ಯತಿಕ್ರಮ್ಯ ಬ್ರಹ್ಮಲೋಕಂ ವ್ಯರೋಹತ ॥೪೮॥

ಸರ್ವಲೋಕಮಹೇಶ್ವರನಾದ ದಶರಥಪುತ್ರನಾದ ಈ ರಾಮನು ಈಗಲೇ ನೋಡುತಿರಲಿ, ನಾನು ಇವನೆದುರಿಗೇ ನನ್ನ ದೇಹವನ್ನು ಅಗ್ನಿಯಲ್ಲಿ ಸುಟ್ಟುಬಿಟ್ಟು ನಿಷ್ಕಲ್ಮಷನಾಗಿ ಬ್ರಹ್ಮ ಲೋಕಕ್ಕೆ ಹೋಗುವೆನು ॥೪೩॥

ಮೇಘದಲ್ಲಿ ವಿದ್ಯುಲ್ಲತೆಯಿರುವಂತೆ–ಯಾವನ ವಾಮಾಂಕದಲ್ಲಿ ಸೀತಾದೇವಿ ಯಿರುವಳೋ, ಅಂತಹ ಅಯೋಧ್ಯಾಧಿಪತಿಯಾದ ಶ್ರೀರಾಮನು ಸರ್ವದಾ ನನ್ನ ಹೃದಯದಲ್ಲಿ ವಾಸಮಾ ಡಲಿ ॥೪೪॥

ಈರೀತಿಯಾಗಿ ಶ್ರೀರಾಮನನ್ನು ಬಹಳಹೊತ್ತು ಧ್ಯಾನಮಾಡಿ, ಮುಂದುಗಡೆ ನಿಂತಿರುವ ಆ ಶ್ರೀರಾಮಚಂದ್ರಮೂರ್ತಿಯ ದರ್ಶನವನ್ನು ಮಾಡಿ, ಅವನಿಂದ ಅಪ್ಪಣೆಪಡೆದವನಾಗಿ, ಶರ ಭಂಗಮುನಿಯು ತನ್ನ ದೇಹವನ್ನು ಅಗ್ನಿಯಲ್ಲಿ ದಹಿಸಿಬಿಟ್ಟನು ॥೪೫॥

ಆಗ ಅಗ್ನಿಯು, ಮಹಾತ್ಮನಾದ ಶರಭಂಗಮುನಿಯ ರೋಮಗಳನ್ನೂ ಕೇಶಗಳನ್ನೂ ಜೀರ್ಣವಾದ ಚರ್ಮವನ್ನೂ ಅಸ್ಥಿಗಳನ್ನೂ ಮಾಂಸವನ್ನೂ ರಕ್ತವನ್ನೂ ಸುಟ್ಟುಬಿಟ್ಟನು ॥೪೬॥

ಆಗ ಇದನ್ನು ನೋಡಿ ಶ್ರೀರಾಮಚಂದ್ರನು ತನ್ನ ಪತ್ನಿಯೊಡನೆಯೂ ಅನುಜನೊಡ ನೆಯೂ ಕೂಡಿದವನಾಗಿ ಆಶ್ಚರ್ಯಪಟ್ಟನು ಆ ಶರಭಂಗಮುನಿಯಾದರೋ, ಅಗ್ನಿಯಂತೆ ಪ್ರಜ್ವಲಿಸುತಿರುವ ಬಾಲಕನಾಗಿಬಿಟ್ಟನು ॥೪೭॥

ಬಳಿಕ, ಅವನು ಆಹಿತಾಗ್ನಿಗಳ ಲೋಕವನ್ನೂ ಮಹಾತ್ಮರಾದ ಮುನಿಗಳ ಲೋಕವನ್ನೂ ದೇವಲೋಕವನ್ನೂ ದಾಟಿಹೋಗಿ, ಬ್ರಹ್ಮಲೋಕವನ್ನು ಆಶ್ರಯಿಸಿದನು ॥೪೮॥

ಸ ಪುಣ್ಯಕರ್ಮಾ ಭವನೇದ್ವಿಜರ್ಷಭಃ ಪಿತಾಮಹಂಸಾನುಚರಂ ದದರ್ಶಹ ।
ಪಿತಾಮಹಶ್ಚಾಪಿ ಸಮೀಕ್ಷ್ಯ ತಂ ದ್ವಿಜಂ ನನಂದ ಸುಸ್ವಾಗತಮಿತ್ಯುವಾಚ ॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀರಾಮಬ್ರಹ್ಮಾನಂದ
ಸರಸ್ವತೀಸಂಕಲಿತೇ ನಾನಾಪುರಾಣಾದಿ ನಿಷ್ಕ ತತ್ತ್ವಸ ಗ್ರಹ
ಭೂತೇ ಶ್ರೀ ತತ್ತ್ವಸಂಗ್ರಹ ರಾಮಾಯಣೇ ಶ್ರೀಮ
ದರಣ್ಯಕಾಣ್ಡೇ ಶರಭಙ್ಗಸ್ಯ ಬ್ರಹ್ಮಲೋಕ
ಗಮನಂ ನಾಮ ಪ್ರಥಮಃ ಸರ್ಗಃ

ಅನಂತರ, ಪುಣ್ಯಕರ್ಮನಾದ ಆ ಶರಭಂಗಮುನಿಯು, ಬ್ರಹ್ಮಲೋಕದಲ್ಲಿ ಅನುಚರರೊಡ ಗೂಡಿರುವ ಬ್ರಹ್ಮದೇವನನ್ನು ಕಂಡವನಾದನು ಬ್ರಹ್ಮದೇವನೂ ಕೂಡ, ಆ ಮಹಾನುಭಾವ ನಾದ ಶರಭಂಗಮುನಿಯನ್ನು ಕಂಡು, ಬಹಳ ಸಂತೋಷಪಟ್ಟನು, ಸ್ವಾಗತವನ್ನೂ ಕೇಳಿದನು||

ಇದು ಶ್ರೀಪರಮಹಂಸ ಪರಿವ್ರಾಜಕಾಚಾರ್ಯ ಶ್ರೀರಾಮಬ್ರಹ್ಮಾನಂದ
ಸರಸ್ವತೀ ಸಂಕಲಿತವಾದ ನಾನಾಪುರಾಣಾದಿ ನಿಷ್ಕೃತತ್ವಸಂಗ್ರಹ
ಭೂತವಾದ ಶ್ರೀ ತತ್ವಸಂಗ್ರಹರಾಮಾಯಣದ ಅರಣ್ಯ
ಕಾಂಡದಲ್ಲಿ ಮೊದಲನೆಯ ಸರ್ಗವು.

ಅಥ ಶ್ರೀಮದರಣ್ಯಕಾಣ್ಡೇ ದ್ವಿತೀಯಃ ಸರ್ಗಃ.

ಶ್ರೀಶಿವಉವಾಚ —

ಶರಭಙ್ಗೇ ದಿವಂ ಯಾತೇ ಮುನಿಸಙ್ಘಾಃ ಸಮಾಗತಾಃ ।
ಅಭ್ಯಗಚ್ಛನ್ತ ಕಾಕುತ್ಸ್ಥಂ ರಾಮಂ ಜ್ವಲಿತತೇಜಸಮ್ ॥೧॥
ವೈಖಾನಸಾವಾಲಖಿಲ್ಯಾಃ ಸಮ್ಪ್ರಕ್ಷಾಳಾಮರೀಚಿಪಾಃ ।
ಅಶ್ಮಕುಟ್ಟಾಶ್ಚ ಬಹವಃ ಪತ್ರಾಹಾರಾಶ್ಚ ತಾಪಸಾಃ ॥೨॥
ದನ್ತೋಲೂಖಲಿನಶ್ಚೈವ ತಥೈವೋನ್ಮಜ್ಜಕಾಃ ಪರೇ ।
ಗಾತ್ರಶಯ್ಯಾಶಯಾಶ್ಚ ತಥೈವಾಭ್ರಾವಕಾಶಕಾಃ ॥೩॥

ಅರಣ್ಯಕಾಂಡದಲ್ಲಿ ಎರಡನೆಯ ಸರ್ಗವು

ಶ್ರೀ ಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಶರಭಂಗಮುನಿಯು ಸ್ವರ್ಗಲೋಕವನ್ನು ಕುರಿತು ಪ್ರಯಾಣಮಾಡಿದ ಒಳಿಕ, ಆ ಅರಣ್ಯದಲ್ಲಿದ್ದ ಸಮಸ್ತ ಮುನಿಗಳೂ ಗುಂಪುಗೂಡಿದವರಾಗಿ, ಮಹಾ ಪ್ರಕಾಶಯುಕ್ತನಾಗಿರುವ ಕಕುತ್ಸ್ಥಕುಲದೀಪನಾದ ಶ್ರೀರಾಮಚಂದ್ರನ ಸಮೀಪಕ್ಕೆ ಬಂದರು ॥೧॥

ಆ ಮುನಿಗಳಲ್ಲಿ, ಕೆಲವರು ಭಗವಂತನ ನಾಮದಿಂದ ಸಂಭವಿಸಿ ವೈಖಾನಸರೆಂಬ ಹೆಸರುಳ್ಳವರಾಗಿಯೂ, ಕೆಲವರು ಅವನ ರೋಮದಿಂದ ಸಂಭವಿಸಿ ವಾಲಖಿಲ್ಯರೆಂಬ ಹೆಸರುಳ್ಳವರಾಗಿಯೂ, ಕೆಲವರು ಸರ್ವದಾ ಅವಿಚ್ಛಿನ್ನವಾಗಿ ತಮ್ಮ ಶರೀರವನ್ನು ತೊಳದುಕೂಳ್ಳುವರಾಗಿಯೂ, ಕೆಲವರು ಸೂರ್ಯಚಂದ್ರರ ಕಿರಣಗಳನ್ನು ಪಾನಮಾಡುವರಾಗಿಯೂ, ಕೆಲವರು ನಿರಂತರವಾಗಿ ತಮ್ಮ ದೀಪವನ್ನು ಕಲ್ಲುಗಳಿಂದ ಕುಟ್ಟಿಕೊಳ್ಳತಕ್ಕವರಾಗಿಯೂ, ಇನ್ನೂ ಅನೇಕಮಂದಿ ತಾಪಸರು ಪತ್ರಾಹಾರರಾಗಿಯೂ ಇದ್ದರು ॥೨॥

ಮತ್ತು, ಕೆಲವರು ತಮ್ಮ ಹಲ್ಲುಗಳನ್ನೇ ಒರಳುಕಲ್ಲಿನಂತೆ ಉಪಯೋಗಿಸಿಕೊಂಡು ಬತ್ತ ಮುಂತಾದುವುಗಳನ್ನು ಒರಳಿನಲ್ಲಿ ಕುಟ್ಟದೆ ಹಲ್ಲಿನಲ್ಲಿಯೇ ಬಿಡಿಸಿ ತಿನ್ನತಕ್ಕವರಾಗಿಯೂ, ಕೆಲವರು ತಲೆಯನ್ನು ಮಾತ್ರ ಎತ್ತಿಕೊಂಡು ಶರೀರವನ್ನೆಲ್ಲ ನೀರಿನಲ್ಲಿಯೇ ಮುಣುಗಿಸಿ ತಪಸ್ಸುಮಾಡತಕ್ಕವರಾಗಿಯೂ, ಕೆಲವರು ತಮ್ಮ ಶರೀರವನ್ನೇ ಹಾಸಿಗೆಯಾಗಿ ಉಪಯೋಗಿಸತಕ್ಕವರಾಗಿಯೂ, ಕೆಲವರು ಯಾವಾಗಲೂ ಮಲಗದೆಯೇ ಇರತಕ್ಕವರಾಗಿಯೂ, ಕೆಲವರು ಸರ್ವದಾ ಆಕಾಶದಲ್ಲಿಯೇ ಇರತಕ್ಕವರಾಗಿಯೂ ಇದ್ದರು ॥೩॥

ಮುನಯಃ ಸಲಿಲಾಹಾರಾಃ ವಾಯುಭಕ್ಷಾಸ್ತಥಾ ಪರೇ ।
ಆಕಾಶನಿಲಯಾಶ್ಚೈವ ತಥಾ ಸ್ಥಂಡಿಲಶಾಯಿನಃ ॥೪॥
ಸದೋಪವಾಸಿನೋ ದಾನ್ತಾಃ ತಥಾರ್ದ್ರಪಟವಾಸಸಃ ।
ಸಜಪಾಶ್ಚ ತಪೋನಿತ್ಯಾಃ ತಥಾ ಪಞ್ಚತಪೋನ್ವಿತಾಃ ॥೫॥
ಸರ್ವೇ ಬ್ರಾಹ್ಮ್ಯಾ ಶ್ರಿಯಾ ಜುಷ್ಟಾಃ ದೃಢಯೋಗಾಃ ಸಮಾಹಿತಾಃ ।
ಶರಭಙ್ಗಾಶ್ರಮೇ ರಾಮಂ ಅಭಿಜಗ್ಮುಶ್ಚ ತಾಪಸಾಃ ॥೬॥
ದೃಷ್ಟ್ವಾ ಮುನಿಸಮೂಹಂ ತೇ ಜಾನಕೀರಾಮಲಕ್ಷ್ಮಣಾಃ ।
ಪ್ರಣೇಮುಃ ಸಹಸಾ ಭೂಮೌ ಮಾಯಾಮಾನುಷರೂಪಿಣಃ ॥೭॥
ಆಶೀರ್ಭಿರಭಿನನ್ದ್ಯಾಥ ಮುನಯಸ್ತತ್ತ್ವದರ್ಶಿನಃ ।
ಊಚುಃ ಪ್ರಾಞ್ಜಲಯಃ ಸರ್ವೇ ರಾಮಂ ಸರ್ವಹೃದಿ ಸ್ಥಿತಮ್ ॥೮॥
ಭೂಮೇರ್ಭಾರಾವತಾರಾಯ ಜಾತೋಸಿ ಬ್ರಹ್ಮಣಾರ್ಥಿತಃ ।
ಜಾನೀಮಸ್ತ್ವಾಂ ಹರಿಂ ಲಕ್ಷ್ಮೀಂ ಜಾನಕೀಂ ಲಕ್ಷ್ಮಣಂ ತಥಾ ॥೯॥

ಇನ್ನೂ, ಕೆಲವುಮಂದಿ ಮುನಿಗಳು ಜಲಾಹಾರರಾಗಿಯೂ, ಕೆಲವರು ವಾಯುಭಕ್ಷಕರಾಗಿಯೂ, ಕೆಲವರು ಆಕಾಶದಲ್ಲಿ ವೃಕ್ಷಾದಿಗಳೊಳಗೆ ವಾಸಮಾಡತಕ್ಕವರಾಗಿಯೂ, ಕೆಲವರು ಸ್ಥಂಡಿಲದಲ್ಲಿ ಶಯನಮಾಡತಕ್ಕವರಾಗಿಯೂ ಇದ್ದರು ॥೪॥

ಮತ್ತು, ಕೆಲವರು ಸರ್ವದಾ ಉಪವಾಸಶೀಲರಾಗಿ ಇಂದ್ರಿಯಗಳನ್ನು ಜಯಿಸಿ ಆರ್ದ್ರವಸ್ತ್ರವನ್ನುಟ್ಟಿರುವರಾಗಿಯೂ, ಕೆಲವರು ಕೇವಲ ಜಪನಿರತರಾಗಿಯೂ, ಕೆಲವರು ಕೇವಲ ತಪೋನಿಷ್ಠರಾಗಿಯೂ, ಕೆಲವರು ಪಂಚಾಗ್ನಿಮಧ್ಯದಲ್ಲಿ ತಪಸ್ಸುಮಾಡತಕ್ಕವರಾಗಿಯೂ ಇದ್ದರು ॥೫॥

ಹೀಗೆ ಮಹಾ ಬ್ರಹ್ಮತೇಜಸ್ಸಮನ್ವಿತರಾಗಿಯೂ, ಯೋಗನಿಷ್ಠೆಯಿಂದ ಸಮಾಧಿ ಸಂಪನ್ನರಾಗಿಯೂ ಇರುವ ಆ ಸಮಸ್ತಮಹರ್ಷಿಗಳೂ ಕೂಡ, ಶರಭಂಗಮುನಿಯ ಆಶ್ರಮದಲ್ಲಿದ್ದ ಶ್ರೀರಾಮನ ಸಮೀಪಕ್ಕೆ ಬಂದವರಾದರು ॥೬॥

ಹೀಗೆ ತಮ್ಮ ಹತ್ತಿರಕ್ಕೆ ಬಂದ ಋಷಿಸಮೂಹವನ್ನು ಕಂಡು, ಮಾಯೆಯಿಂದ ಮನುಷ್ಯರೂಪವನ್ನು ಧರಿಸಿರುವ ಆ ಸೀತಾ ರಾಮ ಲಕ್ಷ್ಮಣರು, ಆ ಕ್ಷಣವೇ ನೆಲಕ್ಕೆ ಬೊಗ್ಗಿ ನಮಸ್ಕಾರ ಮಾಡಿದರು ॥೭॥

ಅನಂತರ, ತತ್ವಜ್ಞಾನಸಂಪನ್ನರಾದ ಆ ಸಮಸ್ತ ಮುನಿಗಳೂ, ಸರ್ವಲೋಕಹೃದಯನಿವಾಸನಾದ ಶ್ರೀರಾಮನನ್ನು ಆಶೀರ್ವಾದದಿಂದ ಅನುಗ್ರಹಿಸಿ, ಒಳಿಕ ತಾವು ಅಂಜಲಿಬಂಧ ಮಾಡಿಕೊಂಡು ಹೀಗೆ ಪ್ರಾರ್ಥಿಸಿದರು ॥೮॥

ಭೋಃ ಸ್ವಾಮಿನ್! ನೀನು ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟವನಾಗಿ ಭೂಮಿಯ ಭಾರವನ್ನು ಇಳುಹುವುದಕ್ಕೋಸ್ಕರ ಅವತರಿಸಿರುವೆ ನೀನು ನಿಷ್ಣುವೆಂಬುದಾಗಿಯೂ, ಸೀತೆಯು ಮಹಾ

ಶೇಷಂ ಚ ಶಙ್ಖಚಕ್ರೇ ದ್ವೇ ಭರತಂ ಸಾನುಜಂ ತಥಾ ।
ತತಸ್ತ್ವಾಂ ಶರಣಾರ್ಥಂ ಚ ಶರಣ್ಯಂ ಸಮುಪಾಗತಾಃ ॥೧೦॥
ಸೋಯಂ ಬ್ರಾಹ್ಮಣಭೂಯಿಷ್ಠೋ ವಾನಪ್ರಸ್ಥಗಣೋ ಮಹಾನ್ ।
ತ್ವನ್ನಾಥೋನಾಥವದ್ರಾಮ ರಾಕ್ಷಸೈರ್ವಧ್ಯತೇ ಭೃಶಮ್ ॥೧೧॥
ವಿಹಿ ಪಶ್ಯ ಶರೀರಾಣಿ ಮುನೀನಾಂ ಭಾವಿತಾತ್ಮನಾಮ್ ।
ಹತಾನಾಂ ರಾಕ್ಷಸೈಘೋರೈಃ ಬಹೂನಾಂ ಬಹುಧಾ ವನೇ ॥೧೨॥
ವಿವಂ ವಯಂ ನ ಮೃಷ್ಯಾಮೋ ವಿಪ್ರಕಾರಂ ತಪಸ್ವಿನಾಮ್ ।
ಕ್ರಿಯಮಾಣಂ ವನೇ ಘೋರಂ ರಕ್ಷೋಭಿರ್ಭೀಮಕರ್ಮಭಿಃ ॥೧೩॥
ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ ।
ಪರಿಪಾಲಯ ನಃ ಸರ್ವಾನ್ ರಾಕ್ಷಸೇಭ್ಯೋ ನೃಪಾತ್ಮಜ ॥೧೪॥
ಶ್ರುತ್ವಾ ವಾಕ್ಯಂ ಮುನೀನಾಂ ಚ ಭಯಂ ದೈತ್ಯಸಮುದ್ಭವಮ್ ।
ಪ್ರತಿಜ್ಞಾಮಕರೋದ್ರಾಮೋ ವಧಾಯಾಶೇಷರಕ್ಷಸಾಮ್ ॥೧೫॥

ಲಕ್ಷ್ಮಿಯೆಂಬುದಾಗಿಯೂ, ಲಕ್ಷ್ಮಣನು ಆದಿಶೇಷನೆಂಬುದಾಗಿಯೂ, ಭರತ ಶತ್ರುಘ್ನರು ಶಂಖ ಚಕ್ರಗಳೆಂಬುದಾಗಿಯೂ ನಾವು ತಿಳಿದಿರುವೆವು ಆದುಕಾರಣವೇ, ಪ್ರಪನ್ನರಕ್ಷಕನಾದ ನಿನ್ನನ್ನು ಶರಣುಹೊಂದಿರುವೆವು ॥೯—೧೦॥

ಆರ್ಯಾ! ರಾಮ! ಈ ಅರಣ್ಯದಲ್ಲಿ ಬ್ರಾಹ್ಮಣಬಹುಳವಾಗಿರುವ ಈ ವಾನಪ್ರಸ್ಥ ಸಮೂಹವು, ನೀನು ರಕ್ಷಕನಾಗಿದ್ದರೂ, ರಕ್ಷಕರೇ ಇಲ್ಲದಂತೆ, ರಾಕ್ಷಸರಿಂದ ಅತಿಯಾಗಿ ಕೊಲ್ಲಲ್ಪಡುತಿರುವುದು ॥೧೧॥

ನೀನು ಇಲ್ಲಿ ಬಾ, ಕ್ರೂರರಾದ ರಾಕ್ಷಸರಿಂದ ಈ ವನದಲ್ಲಿ ಕೊಲ್ಲಲ್ಪಟ್ಟು ನಾನಾವಿಧವಾಗಿ ಬಿದ್ದಿರುವ ಮಹಾತ್ಮರಾದ ಮುನಿಗಳ ಶರೀರಗಳನ್ನು ನೋಡುವನಾಗು ॥೧೨॥

ಹೀಗೆ ಮಹಾ ಕ್ರೂರಕರ್ಮರಾದ ರಾಕ್ಷಸರಿಂದ ಈ ತಪೋವನದಲ್ಲಿ ತಪಸ್ವಿಗಳಿಗೆ ಹಿಂಸೆ ಮಾಡಲ್ಪಡುತಿರುವುದನ್ನು ನಾವು ಸಹಿಸಲಾರೆವು ॥೧೩॥

ಎಲೈ ಮಹಾವೀರನೆ! ಈ ಭೂಮಿಯಲ್ಲೆಲ್ಲ ನಿನ್ನನ್ನು ಬಿಟ್ಟು ಬೇರೆ ಗತಿಯಿಲ್ಲ ಆದು ಕಾರಣ, ಎಲೈ ರಾಜಪುತ್ರನೆ! ಈಗ ನಮಗುಂಟಾಗಿರುವ ರಾಕ್ಷಸರ ಭಯವನ್ನು ತಪ್ಪಿಸಿ ನಮ್ಮನ್ನು ನೀನು ಕಾಪಾಡಬೇಕು ॥೧೪॥

ಹೀಗೆ ಪ್ರಾರ್ಥಿಸುತಿರುವ ಮಹರ್ಷಿಗಳ ವಾಕ್ಯವನ್ನು ಕೇಳಿ, ರಾಕ್ಷಸರಿಂದ ಅವರಿಗುಂಟಾಗಿರುವ ಭಯವನ್ನು ತಿಳಿದುಕೊಂಡು, ಶ್ರೀರಾಮಚಂದ್ರನು ಸಮಸ್ತ ರಾಕ್ಷಸರನ್ನೂ ಕೊಲ್ಲುವುದಕ್ಕಾಗಿ ಪ್ರತಿಜ್ಞೆಮಾಡಿದನು ॥೧೫॥

ದತ್ವಾ ವರಂ ಚಾಪಿ ತಪೋಧನಾನಾಂ
ಧರ್ಮೈಕ ಧೃತಾತ್ಮಾ ಸಹ ಲಕ್ಷ್ಮಣೇನ।
ತಪೋಧನೈಶ್ಚಾಪಿ ಸಭಾಜ್ಯ ಸಂವೃತಃ
ಸುತೀಕ್ಷ್ಣಮೇವಾಭಿಜಗಾಮ ವೀರಃ ॥೧೬॥

ತತ್ರ ತಾಪಸಮಾಸೀನಂ ಮಲಪಙ್ಕಜಟಾಧರಮ್ ।
ಕೋಟಿಸೂರ್ಯಪ್ರತೀಕಾಶಂ ಸುನ್ದರಾಙ್ಗಂ ಶುಚಿಸ್ಮಿತಮ್ ॥೧೭॥
ಶ್ರೀರಾಮಮೇವ ಧ್ಯಾಯನ್ತಂ ಸಸೀತಂ ಲಕ್ಷ್ಮಣಾನ್ವಿತಮ್ ।
ರಾಮಃ ಸುತೀಕ್ಷ್ಣಂ ವಿಧಿವತ್ ತಪೋವೃದ್ಧಮಭಾಷತ ॥೧೮॥
ರಾಮೋಹಮಸ್ಮಿ ಭಗವಂ ಭವನ್ತಂ ದ್ರಷ್ಟುಮಾಗತಃ ।
ರಾಮಮಾಗತಮಾಜ್ಞಾಯ ಸುತೀಕ್ಷ್ಣಃ ಸಹಸೋತ್ಥಿತಃ ॥೧೯॥
ಅಗಸ್ತ್ಯಶಿಷ್ಯೋ ರಾಮಸ್ಯ ಮನ್ತ್ರೋಪಾಸನತತ್ಪರಃ ।
ಯಥಾ ಹೃದಬ್ಜೇ ಶ್ರೀರಾಮನಿತ್ಯಪೂಜಾಂ ಕರೋತ್ಯಲಮ್ ॥೨೦॥
ತಥಾವಸರೋಕ್ಷಂ ತಂ ದೃಷ್ಟ್ವಾ ಪ್ರಸಾದಪ್ರವಣಂ ಮುನಿಃ ।
ಅಗಸ್ತ್ಯೋಕ್ತೇನ ವಿಧಿನಾ ಕೃತ್ವಾರ್ಚಾಂ ಸ್ತೋತುಮಾರಭತ್ ॥೨೧॥

ಹೀಗೆ ಆ ತಪೋಧನರಿಗೆ ವರವನ್ನು ಕೊಟ್ಟು, ಕೇವಲ ಧರ್ಮೈಕನಿಷ್ಠನಾಗಿರುವ ಮಹಾ ವೀರನಾದ ರಾಮಭದ್ರನು, ತನಗೆ ಪೂಜೆಯನ್ನು ಮಾಡಿದ ಆ ತಪೋಧನರಿಂದ ಪರಿವೃತನಾಗಿ, ಲಕ್ಷ್ಮಣನೊಡನೆ ಸುತೀಕ್ಷ್ಣಮುನಿಯ ಆಶ್ರಮಕ್ಕೆ ಹೋದನು ॥೧೬॥

ಅಲ್ಲಿ ಕೊಳೆಯಿಂದ ಮಲಿನವಾದ ಜಡೆಯನ್ನು ಧರಿಸಿರತಕ್ಕವನಾಗಿಯೂ ಸುಂದರ ಶರೀರ ನಾಗಿಯೂ-ನಿರ್ಮಲವಾದ ಮಂದಹಾಸವುಳ್ಳವನಾಗಿಯೂ ಸರ್ವದಾ ಸೀತಾಲಕ್ಷ್ಮಣಯುಕ್ತ ನಾದ ಶ್ರೀರಾಮಚಂದ್ರಮೂರ್ತಿಯನ್ನೇ ಧ್ಯಾನಿಸುತಿರುವನಾಗಿಯೂ ಇರುವ-ತಪೋವೃದ್ಧನಾದ ಸುತೀಕ್ಷ್ಣಮುನಿಯನ್ನು ಯಥಾವಿಧಿಯಾಗಿ ದರ್ಶನಮಾಡಿ, ಶ್ರೀರಾಮನು ' ಪೂಜ್ಯರೆ ! ನಾನು ರಾಮನು , ತನ್ಮನ್ನು ನೋಡುವುದಕ್ಕಾಗಿ ಬಂದಿರುವೆನು ' ಎಂದು ವಿಜ್ಞಾಪಿಸಿದನು ॥೧೭-೧೮॥

ಹೀಗೆ ಶ್ರೀರಾಮನು ಬಂದಿರುವುದನ್ನು ತಿಳಿದು, ಅಗಸ್ತ್ಯಮುನಿಗೆ ಶಿಷ್ಯನಾದ ರಾಮೋ ಪಾಸನೆಯಲ್ಲಿ ನಿರತನಾಗಿರುವ ಆ ಸುತೀಕ್ಷ್ಣಮುನಿಯು, ತಟ್ಟನೆ ಎದ್ದವನಾಗಿ, ತಾನು ಪ್ರತಿ ದಿನವೂ ತನ್ನ ಹೃದಯ ಕಮಲದಲ್ಲಿ ಯಾವ ವಿಧವಾಗಿ ಶ್ರೀರಾಮಚಂದ್ರನನ್ನು ಧ್ಯಾನಿಸಿ ಪೂಜೆಗು ತಿರುವನೋ-ಹಾಗೆಯೇ ಈಗ ಅನುಗ್ರಹವಿಟ್ಟು ಎದುರಿಗೆ ಬಂದು ನಿಂತಿರುವ ಶ್ರೀರಾಮಚಂದ್ರ ನನ್ನು ಪ್ರತ್ಯಕ್ಷನಾಗಿ ನೋಡಿ, ತನಗೆ ಹಿಂದೆ ಅಗಸ್ತ್ಯಮುನಿಗಳು ಉಪದೇಶಿಸಿದ್ದ ವಿಧಿಯಿಂದ ಅವನಿಗೆ ಪೂಜೆಯನ್ನು ಮಾಡಿ, ಒಳಿಕ ಈ ರೀತಿಯಾಗಿ ಸ್ತೋತ್ರಮಾಡಲುಪಕ್ರಮಿ ಸಿದನು ॥೧೯-೨೧॥

ತ್ವನ್ಮನ್ತ್ರಜಾಪ್ಯಹಮನನ್ತಗುಣಾತ್ಪ್ರಮೇಯ
ಸೀತಾಪತೇ ಶಿವವಿರಿಞ್ಚಿಸಮಾಶ್ರಿತಾಙ್ಘ್ರೇ ।
ಸಂಸಾರಸಿನ್ಧುತರಣಾಮಲಪಾದಪೋತ
ರಾಮಾಭಿರಾಮ ಸತತಂ ತವ ದಾಸದಾಸಃ ॥೨೦॥

ಮಾಮದ್ಯ ಸರ್ವಜಗತಾಮಪಿ ರಕ್ಷಕಸ್ತ್ವಂ
ತ್ವನ್ಮಾಯಯಾ ಸುತಕಳತ್ರಗೃಹಾನ್ಧಕೂಪೇ ।
ಮಗ್ನಂ ಸಮುದ್ಧರ ಕುಲಾಶ್ರಮದೇಹಮೋಹ
ಪಾಶಾನುಬದ್ಧಹೃದಯಂ ತವ ಪಾದಭಕ್ತಮ್ ॥೨೧॥
ತ್ವಂ ಸರ್ವಭೂತಹೃದಯೇಷು ಕೃತಾಲಯೋಪಿ
ತ್ವನ್ಮನ್ತ್ರಜಾಪ್ಯವಿಮುಖೇಷು ತನೋಷಿ ಮಾಯಾಮ್ ।
ತ್ವನ್ಮನ್ತ್ರಜಾಪಕವರೇಷ್ವಪಯಾತಿ ಮಾಯಾ
ಸೇವಾನುರೂಪಫಲದೋಸಿ ಯಥಾತ್ಯಮರದ್ರುಃ ॥೨೨॥
ವಿಶ್ವಸ್ಯ ಸೃಷ್ಟಿಲಯಸಂಸ್ಥಿತಿಹೇತುರೇಕಃ
ತ್ವನ್ಮಾಯಯಾ ತ್ರಿಗುಣಯಾ ವಿಧಿವಿಷ್ಣುರುದ್ರಾಃ ।

ಎಲೈ ಅನಂತವಾದ ಗುಣಗಳುಳ್ಳವನೇ ! ಸಕಲಪ್ರಮಾಣಗಳಿಗೂ ದೂರಭೂತನಾದ ವನೇ ! ಶಿವ ಬ್ರಹ್ಮ ಮೊದಲಾದವರಿಂದ ಆಶ್ರಯಿಸಲ್ಪಟ್ಟ ಪಾದಪದ್ಮವುಳ್ಳವನೇ ! ಸಂಸಾರವೆಂಬ ಸಮುದ್ರವನ್ನು ದಾಟಿಸತಕ್ಕ ದಿವ್ಯವಾದ ಪಾದವೆಂಬ ನಾವೆಯನ್ನು ಧರಿಸಿರತಕ್ಕವನೇ ! ಸರ್ವ ಲೋಕಮನೋಹರನೇ ! ಸೀತಾಪತಿಯೇ ! ರಾಮಚಂದ್ರನೇ ! ನಾನು ಸರ್ವದಾ ನಿನ್ನ ಮಂತ್ರ ವನ್ನು ಜಪಿಸುತ್ತ, ನಿನ್ನ ದಾಸರಿಗೆ ದಾಸನಾಗಿರುವನು ॥೨೨॥

ಎಲೈ ಸ್ವಾಮಿಯೇ ! ನಾನು ಈಗ ನಿನ್ನ ಮಾಯೆಯಿಂದ ಪತ್ನೀ ಪುತ್ರ ಗೃಹಾರಾಮಾದಿಗ ಳೆಂಬ ಹಾಳುಬಾವಿಯಲ್ಲಿ ಮುಣುಗಿರುವೆನು , ಕುಲ ಆಶ್ರಮ ದೇಹಗಳ ಮೋಹದಿಂದ ನನ್ನಹೃದ ಯವು ಬದ್ಧವಾಗಿರುವುದು ಇಂತಹ ನಿನ್ನ ಪಾದಭಕ್ತನಾದ ನನ್ನನ್ನು, ಸರ್ವಲೋಕರಕ್ಷಕ ನಾದ ನೀನು ಉದ್ಧರಿಸಬೇಕು ॥೨೩॥

ನೀನು ಸ್ವಭಾವತಃ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಆವಾಸಮಾಡಿಕೊಂಡಿದ್ದರೂ, ನಿನ್ನ ಮಂತ್ರಜಪದಲ್ಲಿ ವಿಮುಖರಾದವರ ವಿಷಯದಲ್ಲಿ ಮಾಯೆಯನ್ನು ತೋರಿಸುವೆ ನಿನ್ನಮಂತ್ರ ವನ್ನು ಜಪಿಸತಕ್ಕ ಮಹಾತ್ಮರ ವಿಷಯದಲ್ಲಿ ನಿನ್ನ ಮಾಯೆಯು ತೊಲಗಿಬಿಡುವುದು ಸ್ವಾಮೀ! ನೀನು ಕಲ್ಪವೃಕ್ಷದಂತೆ ಅವರವರ ಸೇವೆಗೆ ತಕ್ಕಂತ ಫಲವನ್ನು ಕೊಡತಕ್ಕವನಾಗಿರುವೆ ॥೨೪॥

ನೀನೊಬ್ಬನೇ, ಈ ಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತನಾಗಿರುವೆ. ನಿನ್ನ ಮಾಯೆಯಿಂದ ಬ್ರಹ್ಮ ವಿಷ್ಣು ಮಹೇಶ್ವರರೆಂಬ ಕಾರಣಮೂರ್ತಿಗಳು ಉದಯಿಸುವರ ಎಲೈ

ಭಾಸೀಕ ಮೋಹಿತಧಿಯಾಂ ವಿವಿಧಾಕೃತಿಸ್ತ್ವಂ
ಯದ್ವದ್ರವಿಃ ಸಲಿಲಪಾತ್ರಗತೋ ಹ್ಯನೇಕಃ ॥೨೫॥
ಪ್ರತ್ಯಕ್ಷತೋದ್ಯ ಭವತಶ್ಚರಣಾರವಿನ್ದಂ
ಪಶ್ಯಾಮಿ ರಾಮ ತಮಸಃ ಪರತಃ ಸ್ಥಿತಸ್ಯ ।
ಸದ್ಭಾವತಸ್ತ್ವಮಸತಾಮವಿಗೋಚರೋಪಿ
ತ್ವನ್ಮನ್ತ್ರಪೂತಹೃದಯೇಷು ಸದಾ ಪ್ರಸನ್ನಃ ॥ ೨೬॥
ಪಶ್ಯಾಮಿ ರಾಮ ತವ ರೂಪಮರೂಪಿಣೋಪಿ
ಮಾಯಾವಿಡಮ್ಬನಕೃತಂ ಸುಮನುಷ್ಯವೇಷಮ್ ।
ಕನ್ದರ್ಪಕೋಟಿಸುಭಗಂ ಕಮನೀಯಚಾಪ
ಬಾಣಂ ದಯಾರ್ದ್ರಹೃದಯಂ ಸ್ಮಿತಚಾರುವಕ್ತ್ರಮ್ ॥೨೭॥
ಸೀತಾಸಮೇತಮಸತಾಂ ಪರಮಪ್ರಧೃಷ್ಯಂ
ಸೌಮಿತ್ರಿಣಾ ನಿಯತಸೇವಿತಪಾದಪದ್ಮಮ್ ।
ನೀಲೋತ್ಪಲದ್ಯುತಿಮನನ್ತಗುಣಪ್ರಕಾಶಂ
ಮದ್ಭಾಗಧೇಯಮನಿಶಂ ಪ್ರಣಮಾಮಿ ರಾಮಮ್ ॥೨೮॥

ಪರಮೇಶ್ವರನೆ! ಒಬ್ಬನೇ ಸೂರ್ಯನು ನೀರಿನ ಪಾತ್ರೆಯೊಳಗ ನಾನಾವಿಧವಾದ ಆಕಾರಗಳಿಂದ ಕಾಣಿಸುವಂತೆ, ನೀನು ಮಾಯಾಮೋಹಿತವಾದ ಬುದ್ದಿಯುಳ್ಳವರಿಗೆ ನಾನಾವಿಧ ರೂಪವುಳ್ಳವನಾಗಿ ಭಾಸಿಸುವೆ ॥೨೫॥

ಹೇ ರಾಮ! ಅಜ್ಞಾನಾವರಣಕ್ಕೆ ದೂರವಾಗಿರುವ ನಿನ್ನ ಚರಣಾರವಿಂದವನ್ನು ಈಗ ನಾನು ಪ್ರತ್ಯಕ್ಷವಾಗಿ ನೋಡುತಿರುವೆನು ನೀನು ನಿನ್ನ ಪರಮಾರ್ಥರೂಪದಲ್ಲಿ ದುಷ್ಟರಿಗೆ ಗೋಚರನಾಗದಿದ್ದರೂ, ನಿನ್ನ ಮಂತ್ರಜಪದಿಂದ ಪರಿಶುದ್ದಹೃದಯರಾದವರ ವಿಷಯದಲ್ಲಿ ಸರ್ವದಾ ಪ್ರಸನ್ನನಾಗಿರುವೆ ॥೨೬॥

ಹೇ ರಾಮ! ನೀನು ವಸ್ತುತಃ ರೂಪರಹಿತನಾಗಿದ್ದರೂ, ನಿನ್ನ ಮಾಯಾವಿಡಂಬನದಿಂದ ರಚಿತವಾಗಿರುವ–ಕೋಟಿಮನ್ಮಥಸುಂದರವಾದ–ರಮ್ಯವಾದ ಧನುರ್ಬಾಣಗಳನ್ನು ಧರಿಸಿರುವ–ದಯಾರ್ದ್ರಹೃದಯವಾದ– ಮಂದಸ್ಮಿತಸುಂದರಮುಖವಾದ– ನಿನ್ನ ಈ ಮನುಷ್ಯರೂಪವನ್ನು, ನಾನು ಅತ್ಯಾದರದಿಂದ ನೋಡುತಿರುವೆನು ॥೨೭॥

ದುರಾತ್ಮರಿಗೆ ಸುತರಾಂ ಅಪ್ರಧೃಷ್ಯನಾಗಿಯೂ, ಲಕ್ಷ್ಮಣನಿಂದ ನಿಯಮಪೂರ್ವಕವಾಗಿ ಸೇವಿಸಲ್ಪಡುವ ಪಾದಪದ್ಮವುಳ್ಳವನಾಗಿಯೂ, ನೀಲೋತ್ಪಲಕ್ಕೆ ಸಮಾನವಾದ ಶರೀರಕಾಂತಿಯುಳ್ಳವನಾಗಿಯೂ, ಅನಂತಕಲ್ಯಾಣಗುಣಭರಿತನಾಗಿಯೂ ಇರುವ, ನನ್ನ ಭಾಗಧೇಯ ಪರಿಪಾಕರೂಪನಾದ, ಶ್ರೀ ಸೀತಾದೇವೀ ಸಮೇತನಾಗಿರುವ ಶ್ರೀರಾಮನನ್ನು, ನಾನು ನಿರಂತರವಾಗಿ ನಮಸ್ಕರಿಸುವೆನು ॥೨೮॥

ಜಾನನ್ತು ರಾಮ ತವ ರೂಪಮಶೇಷದೇಶ
ಕಾಲಾದ್ಯುಪಾಧಿರಹಿತಂ ಘನಚಿತ್ಪ್ರಕಾಶಮ್ ।
ಪ್ರತ್ಯಕ್ಷತೋದ್ಯ ಮವು ಗೋಚರಮೇತದೇವ
ರೂಪಂ ವಿಭಾತು ಹೃದಯೇ ನ ಪರಂ ವಿಕಾಂಕ್ಷೇ ॥೨೯॥

ಇತ್ಯೇವಂ ಸ್ತುವತಸ್ತಸ್ಯ ರಾಮಃ ಸಸ್ಮಿತಮಬ್ರವೀತ್ ।
ಮುನೇ ಜಾನಾಮಿ ತೇ ಚಿತ್ತಂ ನಿರ್ಮಲಂ ಮದುಪಾಸನಾತ್ ॥೩೦॥
ಮನ್ಮನ್ತ್ರೋಪಾಸಕಾಲೋಕೇ ಮಾಮೇವ ಶರಣಂ ಗತಾಃ ।
ನಿರಪೇಕ್ಷಾನನ್ಯಗತಾಃ ತೇಷಾಂ ದೃಶ್ಯೋಹಮನ್ವಹಮ್ ॥೩೧॥
ತ್ವಂ ಮಯೋಪಾಸನಾದೇವ ವಿಮುಕ್ತೋಸೀಹ ಸರ್ವತಃ ।
ದೇಹಾನ್ತೇ ಮಮ ಸಾಯುಜ್ಯಂ ಲಪ್ಸ್ಯಸೇ ನಾತ್ರ ಸಂಶಯಃ ॥೩೨॥
ಇತಿ ದತ್ವಾ ವರಂ ರಾಮಃ ಸುತೀಕ್ಷ್ಣಾಯ ಮಹಾತ್ಮನೇ ।
ತದ್ಭಕ್ತಿಯನ್ತ್ರಿತೋವಾತ್ಸೀತ್ ಕಂಚಿತ್ ಕಾಲಂ ತದಾಶ್ರಮೇ ॥೩೩॥

ಹೇ ರಾಘವ! ತತ್ವಜ್ಞಾನಶಾಲಿಗಳಾದವರು, ನಿನ್ನ ರೂಪವನ್ನು, ಸಕಲವಾದ ದೇಶ ಕಾಲಾದ್ಯುಪಾಧಿಗಳಿಂದ ಶೂನ್ಯವನ್ನಾಗಿಯೂ, ಕೇವಲ ಚಿದ್ಘನವನ್ನಾಗಿಯೂ ತಿಳಿದುಕೊಳ್ಳಲಿ ನನಗಾದರೋ, ಈಗ ಪ್ರತ್ಯಕ್ಷವಾಗಿರುವ ಈ ನಿನ್ನ ರೂಪವೇ ಸರ್ವದಾ ಹೃದಯದಲ್ಲಿ ಸ್ಫುರಿಸುತ್ತಿರಲಿ, ಇದುಹೊರತು ನಾನು ಮತ್ತಾವುದನ್ನೂ ಅಪೇಕ್ಷಿಸುವುದಿಲ್ಲ ॥೨೯॥

ಹೀಗೆಂದು ಸ್ತೋತ್ರಮಾಡುತಿರುವ ಆ ಸುತೀಕ್ಷ್ಣನನ್ನು ಕುರಿತು, ಶ್ರೀರಾಮನು ಮಂದ ಹಾಸಯುಕ್ತನಾಗಿ 'ಎಲೈ ಮುನಿಯ! ನಿನ್ನ ಚಿತ್ತವು ನನ್ನ ಉಪಾಸನೆಯಿಂದ ನಿರ್ಮಲವಾಗಿರುವುದನ್ನು ನಾನು ಬಲ್ಲೆನು ಯಾರು ಈ ಲೋಕದಲ್ಲಿ ನನ್ನ ಮಂತ್ರವನ್ನು ಉಪಾಸಿಸುತ ನನ್ನನ್ನೇ ಮರೆಹೊಕ್ಕು ನಿರಪೇಕ್ಷರಾಗಿ ಅನನ್ಯಶರಣರಾಗಿರುವರೋ, ಅವರಿಗೆ ನಾನು ಸರ್ವದಾ ಪ್ರತ್ಯಕ್ಷನಾಗಿರುವೆನು ನೀನು ನನ್ನ ಉಪಾಸನೆಯಿಂದಲೇ ಈ ಲೋಕದಲ್ಲಿ ಸಕಲ ಪಾಶದಿಂದಲೂ ಮುಕ್ತನಾಗಿರುವೆ, ಈ ದೇಹದ ಕೊನೆಯಲ್ಲಿ ನನ್ನ ಸಾಯುಜ್ಯವನ್ನೂ ಪಡೆಯುವೆ ಇದರಲ್ಲಿ ಸಂಶಯವಿಲ್ಲ' ಎಂದು ಅನುಗ್ರಹಿಸಿದನು ॥೩೦ ೩೨॥

ಎಲೌ ಪಾರ್ವತಿ! ಈರೀತಿಯಾಗಿ ಶ್ರೀರಾಮನು ಮಹಾತ್ಮನಾದ ಸುತೀಕ್ಷ್ಣನಿಗೆ ವರಪ್ರದಾನಮಾಡಿ, ಅವನ ಭಕ್ತಿಗ ಪರವಶನಾಗಿ, ಸ್ವಲ್ಪಕಾಲ ಅವನ ಆಶ್ರಮದಲ್ಲಿಯೇ ವಾಸಮಾಡಿಕೊಂಡಿದ್ದನು ॥೩೩॥

ಶ್ರೀಪಾರ್ವತ್ಯುವಾಚ

ಭಗವನ್ ಭವತಾ ಪೂರ್ವಂ ಅಗಸ್ತ್ಯೋಕ್ತವಿಧಾನತಃ ।
ಸುತೀಕ್ಷ್ಣಾಯ ರಾಘವಸ್ಯಾರ್ಚಾಂ ಕೃತವಾನಿತ್ಯುದೀರಿತಮ್ ॥೩೫॥
ಮಹರ್ಷೀರಾಮತತ್ತ್ವಜ್ಞಃ ಸುತೀಕ್ಷ್ಣಾಯ ಫುಟೋದ್ಭವಃ ।
ಯಥಾ ಪ್ರೋವಾಚ ರಾಮಾರ್ಚಾಂ ತಾಂ ಮಮಾಚಕ್ಷ್ವ ಪಾವನೀಮ್ ॥
ಇದಮೇವ ಸದಾ ಪ್ರಾಹುಃ ಯೋಗಿನೋ ಮುಕ್ತಿಸಾಧನಮ್ ।
ನಾರದೋಪಿ ತಥಾ ವ್ಯಾಸೋ ಬ್ರಹ್ಮಾ ಕಮಲಸಮ್ಭವಃ ॥೩೬॥
ಬ್ರಹ್ಮಚಾರ್ಯಾದಿವರ್ಣಾನಾಂ ಆಶ್ರಮಾಣಾಂ ಚ ಮೋಕ್ಷದಮ್ ।
ಸ್ತ್ರೀಶೂದ್ರಾಣಾಂ ಚ ಲೋಕೇಶ ಸುಲಭಂ ಮುಕ್ತಿಸಾಧನಮ್ ॥೩೭॥

ಇತಿ ಶ್ರೀಮದರಣ್ಯಕಾಣ್ಡೇ ಸುತೀಕ್ಷ್ಣಾಶ್ರಮಗಮನ ರಾಮ
ಸ್ತುತ್ಯಾದಿವರ್ಣನಂ ನಾಮ ದ್ವಿತೀಯಃ ಸರ್ಗಃ



ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಶ್ನೆಮಾಡುವಳು —

ಪೂಜ್ಯರೆ! ತಾವು ಪೂರ್ವದಲ್ಲಿ ಸುತೀಕ್ಷ್ಣನು ಅಗಸ್ತ್ಯೋಕ್ತವಿಧಿಯಿಂದ ಶ್ರೀರಾಮನಿಗೆ ಪೂಜೆಯನ್ನು ಮಾಡಿದನೆಂದು ಅಪ್ಪಣೆಕೊಟ್ಟಿರಲ್ಲವ ! ॥೩೪॥

ಶ್ರೀರಾಮನ ತತ್ವಗಳನ್ನೆಲ್ಲ ಚನ್ನಾಗಿ ಬಲ್ಲವನಾದ ಅಗಸ್ತ್ಯಮಹರ್ಷಿಯು, ಸುತೀಕ್ಷ್ಣನಿಗೆ ಪಾವನವಾದ ಶ್ರೀರಾಮಪೂಜಾವಿಧಿಯನ್ನು ಹೇಗೆ ಹೇಳಿರುವನೋ, ಅದನ್ನು ಈಗ ತಾವು ನನಗೆ ಅಪ್ಪಣೆಕೊಡಿಸಬೇಕು ॥೩೫॥

ಸಮಸ್ತರಾದ ಯೋಗಿಗಳೂ, ನಾರದನೂ, ವ್ಯಾಸನೂ, ಚತುರ್ಮುಖಬ್ರಹ್ಮನೂ ಕೂಡ ಶ್ರೀರಾಮಾರ್ಚನೆಯೇ ಎಂದಿಗೂ ಮುಕ್ತಿಸಾಧನವೆಂದು ಹೇಳುತ್ತಿರುವರು ॥ ೩೬॥

ಎಲೈ ಸರ್ವಲೋಕೇಶ್ವರನೆ! ಬ್ರಾಹ್ಮಣ ಕ್ಷತ್ರಿಯಾದಿ ವರ್ಣಗಳಿಗೂ, ಬ್ರಹ್ಮಚಾರಾದ್ಯಾಶ್ರಮಿಗಳಿಗೂ ಸ್ತ್ರೀ ಶೂದ್ರರಿಗೂ ಕೂಡ, ಈ ರಾಮಪೂಜೆಯೊಂದೇ ಸುಲಭವಾದ ಮೋಕ್ಷ ಸಾಧನವಾಗಿರುವುದಲ್ಲವೆ! ಅದುಕಾರಣ, ಇದರ ವಿಧಿಯನ್ನು ಯಥಾವತ್ತಾಗಿ ನನಗೆ ಅಪ್ಪಣೆಕೊಡಿಸಬೇಕು ॥೩೭॥

ಇದು ಅರಣ್ಯಕಾಂಡದಲ್ಲಿ ಸುತೀಕ್ಷ್ಣಾಶ್ರಮಗಮನ ರಾಮಸ್ತುತ್ಯಾದಿವರ್ಣನೆಯೆಂಬ
ಎರಡನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ತೃತೀಯಃ ಸರ್ಗಃ.

ಶ್ರೀಸೂತಉವಾಚ

ಏವಮುಕ್ತೋ ಗಿರಿಜಯಾ ಲೋಕಾನುಗ್ರಹಕಾಮ್ಯಯಾ ।
ತದಾ ಸದಾಶಿವಃ ಪ್ರೀತ್ಯಾ ಜಗಾದೇದಂ ವಚಃ ಶುಭಮ್ ॥೧॥

ಶ್ರೀಶಿವಉವಾಚ

ರಾಮಪೂಜಾವಿಧಾನಸ್ಯ ನಾನ್ತೋಽಸ್ತಿ ಶುಭದರ್ಶನೇ ।
ಋಷಿಭಿರ್ಬಹುಧೋಕ್ತತ್ವಾತ್ ವೇದೈಶ್ಚ ವಿವಿಧೈಸ್ತಥಾ ॥೨॥
ತಥಾಪಿ ವಕ್ಷ್ಯೇ ರಾಮಸ್ಯ ಪೂಜಾವಿಧಿಮನುತ್ತಮಮ್ ।
ಯಸ್ಯ ಸ್ಮರಣಮಾತ್ರೇಣ ತತ್ಪೂಜಾಫಲಭಾಗ್ಭವೇತ್ ॥೩॥
ಸ್ವಗೃಹ್ಯೋಕ್ತವಿಧಾನೇನ ದ್ವಿಜತ್ವಂ ಪ್ರಾಪ್ಯ ಮಾನವಃ ।
ಸಕಾಶಾತ್ ಸದ್ಗುರೋರ್ಮನ್ತ್ರಂ ಲಬ್ಧ್ವಾ ತಚ್ಛಕ್ತಿಸಂಯುತಃ ।
ತೇನ ಸಂದರ್ಶಿತವಿಧಿಃ ತತೋ ರಾಮಂ ಸಮರ್ಚಯೇತ್ ॥೪॥

ಅರಣ್ಯಕಾಂಡದಲ್ಲಿ ಮೂರನೆಯ ಸರ್ಗವು.

ಶ್ರೀಸೂತಪೌರಾಣಿಕರು ಶೌನಕಾದಿಋಷಿಗಳನ್ನು ಕುರಿತು ಹೇಳುವರು —

ಎಲೈ ಶೌನಕಾದಿಋಷಿಗಳಿರಾ ! ಈ ರೀತಿಯಾಗಿ ಲೋಕಾನುಗ್ರಹದಲ್ಲಿ ಅಪೇಕ್ಷೆಯಿಟ್ಟು ಶ್ರೀಪಾರ್ವತಿಯಿಂದ ಪ್ರಾರ್ಥಿಸಲ್ಪಟ್ಟ ಪರಮೇಶ್ವರನು, ಆಗ ಪ್ರೀತಿಯಿಂದ ಸರ್ವಲೋಕಹಿತವಾದ ಈ ಮಾತನ್ನು ಹೇಳಿದನು ॥೧॥

ಶ್ರೀಪರಮೇಶ್ವರನು ಹೇಳಿದುದೇನೆಂದರೆ —

ಎಲೌ ಶುಭದರ್ಶನೆಯೆ ! ಶ್ರೀರಾಮಪೂಜಾವಿಧಿಯನ್ನು ಋಷಿಗಳೂ ನಾನಾವಿಧ ವೇದಗಳೂ ಅನೇಕ ವಿಧವಾಗಿ ಹೇಳಿರುವುದರಿಂದ, ಇದಕ್ಕೆ ಕೊನೆಯೇ ಇಲ್ಲ ॥೨॥

ಆದರೂ, ಸರ್ವೋತ್ತಮವಾಗಿರುವ ಶ್ರೀರಾಮಪೂಜಾವಿಧಿಯನ್ನು ನಿನಗೆ ಹೇಳುವೆನು. ಇದನ್ನು ಸ್ಮರಿಸಿದಮಾತ್ರದಿಂದಲೇ, ಪುರುಷನು ಶ್ರೀರಾಮನ ಪೂಜೆಯನ್ನು ಮಾಡಿದ ಫಲಕ್ಕೆ ಪಾತ್ರನಾಗುವನು ॥೩॥

ಆ ಪೂಜಾವಿಧಿಯಾವುದೆಂದರೆ,– ಮನುಷ್ಯನು, ತನ್ನ ಗೃಹ್ಯಸೂತ್ರದಲ್ಲಿ ಉಕ್ತವಾದ ವಿಧಿಯಿಂದ ಉಪನಯನ ಪೂರ್ವಕವಾಗಿ ದ್ವಿಜತ್ವವನ್ನು ಪಡೆದು, ಸದ್ಗುರುವಿನ ಮುಖದಿಂದ ಶ್ರೀರಾಮಮಂತ್ರವನ್ನು ಉಪದೇಶರೂಪವಾಗಿ ಪಡೆದುಕೊಂಡು, ಆ ಗುರುವಿನಲ್ಲಿ ಭಕ್ತಿಯಿಟ್ಟು, ಅವನಿಂದ ರಾಮಪೂಜಾವಿಧಿಯನ್ನೆಲ್ಲ ತಿಳಿದುಕೊಂಡು, ಬಳಿಕ ಶ್ರೀರಾಮಚಂದ್ರನನ್ನು ಪೂಜಿಸಬೇಕು ॥೪॥

ಹೃದಯೇ ಸ್ಥಂಡಿಲೇ ವಾರ್ಕೇ ಪ್ರತಿಮಾದೌ ವಿಭಾವಸೌ ।
ಸಾಲಗ್ರಾಮಶಿಲಾಯಾಂ ವಾ ಪೂಜಯೇತ್ ತಮತನ್ದ್ರಿತಃ ॥೫॥
ಪ್ರಾತಃ ಸ್ನಾನಂ ಪ್ರಕುರ್ವೀತ ಪ್ರಥಮಂ ದೇಹಶುದ್ಧಯೇ ।
ವೇದತನ್ತ್ರೋದಿತೈರ್ಮನ್ತ್ರೈಃ ಮೃಲ್ಲೇಪನವಿಧಾನತಃ ॥೬॥
ಸನ್ಧ್ಯಾದಿಕರ್ಮ ಯನ್ನಿತ್ಯಂ ತತ್ ಕುರ್ಯಾದ್ವಿಧಿನಾ ಬುಧಃ ।
ಆದೌ ಧ್ಯಾನಂ ಪ್ರಕುರ್ವೀತ ಮನಶ್ಶುದ್ಧಿಕರಂ ಪರಮ್ ॥೭॥
ಅಯೋಧ್ಯಾನಗರೇ ರಮ್ಯೇ ರತ್ನಮಣ್ಟಪಮಧ್ಯಗಮ್ ।
ಧ್ಯಾಯೇತ್ ಕಲ್ಪತರೋರ್ಮೂಲೇ ರತ್ನಸಿಂಹಾಸನಂ ಶುಭಮ್ ॥೮॥
ತನ್ಮಧ್ಯೇಷ್ಟದಳಂ ಪದ್ಮಂ ನಾನಾರತ್ನಪರಿವೇಷ್ಟಿತಮ್ ।
ತತ್ರ ಶ್ರೀರಾಮಚನ್ದ್ರಾಖ್ಯಂ ಧ್ಯಾಯೇತ್ ತೇಜಃ ಪರಾತ್ಪರಮ್ ॥೯॥
ಪ್ರಕೃತ್ಯಾ ಸೀತಯಾ ಶ್ಯಾಮಂ ಸ್ಥಿತ್ಯುತ್ಪತ್ತಿವ್ಯಯಾವಹಮ್ ।
ದೇವಾಸುರಮುನೀನ್ದ್ರೈಶ್ಚ ಯೋಗಿಬೃನ್ದೈಶ್ಚ ಸೇವಿತಮ್ ॥೧೦॥

ಹೃದಯದಲ್ಲಾಗಲಿ, ಅಥವಾ ಸ್ಥಂಡಿಲದಲ್ಲಾಗಲಿ, ಅಥವಾ ಸೂರ್ಯನಲ್ಲಿಯಾಗಲಿ, ಅಥವಾ ವಿಗ್ರಹದಲ್ಲಿಯಾಗಲಿ, ಅಥವಾ ಅಗ್ನಿಯಲ್ಲಾಗಲಿ, ಇಲ್ಲದಿದ್ದರೆ ಸಾಲಗ್ರಾಮಶಿಲೆಯಲ್ಲಾಗಲಿ, ಆ ಶ್ರೀರಾಮಚಂದ್ರನನ್ನು ಭಕ್ತಿಪುರಸ್ಸರವಾಗಿ ಅಲಸ್ಯವಿಲ್ಲದೆ ಪೂಜಿಸಬೇಕು ॥೫॥

ಪೂಜೆಯನ್ನು ಮಾಡತಕ್ಕವನು, ಮೊದಲು ದೇಹಶುದ್ಧಿಗೋಸ್ಕರವಾಗಿ, ವೇದೋಕ್ತ ಮಂತ್ರಗಳಿಂದಲೂ ಪುರಾಣೋಕ್ತಮಂತ್ರಗಳಿಂದಲೂ ಮೃತ್ತಿಕಾಲೇಪನ ವಿಧಿಯಿಂದ ಪ್ರಾತಃ ಕಾಲದಲ್ಲಿ ಸ್ನಾನವನ್ನು ಆಚರಿಸಬೇಕು ॥೬॥

ಬಳಿಕ, ಸಂಧ್ಯಾವಂದನೆ ಮೊದಲಾದ ನಿತ್ಯಕರ್ಮವಾವುದುಂಟೋ-ಅದೆಲ್ಲವನ್ನೂ ಯಥಾ ವಿಧಿಯಾಗಿ ಮಾಡಬೇಕು , ಆ ಮೇಲೆ ಪ್ರಥಮತಃ ಮನಶ್ಶುದ್ಧಿಯುಂಟಾಗುವಂತೆ ಉತ್ತಮ ವಾದ ಧ್ಯಾನವನ್ನು ಮಾಡಬೇಕು ॥೭॥

ಆ ಧ್ಯಾನಕ್ರಮ ಹೇಗೆಂದರೆ, ದಿವ್ಯವಾದ ಅಯೋಧ್ಯಾಪಟ್ಟಣದಲ್ಲಿ ಕಲ್ಪವೃಕ್ಷದ ಕೆಳಗೆ ರತ್ನಮಂಟಪ ಮಧ್ಯದಲ್ಲಿ ದಿವ್ಯವಾದ ರತ್ನ ಸಿಂಹಾಸನವನ್ನು ಧ್ಯಾನಿಸಬೇಕು ॥೮॥

ಅದರ ಮಧ್ಯದಲ್ಲಿ ನಾನಾರತ್ನಪರಿವೇಷ್ಟಿತವಾಗಿರುವ ಅಷ್ಟದಳಪದ್ಮವನ್ನೂ, ಅದರ ಮಧ್ಯದಲ್ಲಿ ಶ್ರೀರಾಮಚಂದ್ರನೆಂಬ ಪರಾತ್ಪರವಾದ ತೇಜಸ್ಸನ್ನೂ ಧ್ಯಾನಿಸಬೇಕು ॥೯॥

ಆ ತೇಜಸ್ಸು ಪಾರ್ಶ್ವದಲ್ಲಿರುವ ಮೂಲಪ್ರಕೃತಿಯಾದ ಸೀತಾದೇವಿಯಿಂದ ಶ್ಯಾಮಲವರ್ಣ ವಾಗಿರುವಂತೆಯೂ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾಗಿರುವಂತೆಯೂ, ದೇವಾಸುರಮುನಿ ಗಳಿಗಳಿಂದಲೂ ಯೋಗಿವರ್ಯರಿಂದಲೂ ಸೇವಿಸಲ್ಪಡುತಿರುವಂತೆಯೂ ಧ್ಯಾನಿಸಬೇಕು ॥೧೦॥

ಚತುರ್ಭುಜಂ ಶಙ್ಖಚಕ್ರಗದಾಪದ್ಮಜಧಾರಿಣಮ್ ।
ಕಿರೀಟಹಾರಕೇಯೂರರತ್ನಕುಣ್ಡಲಮಣ್ಡಿತಮ್ ॥೧೧॥
ದೇವತಾಗುರುಮನ್ತ್ರಾಣಾಂ ಭಾವಯೇದೈಕ್ಯಮಾತ್ಮನಾ ॥೧೨॥
ಏವಂ ಧ್ಯಾತ್ವಾರ್ಚಯಿತ್ವಾಥ ಮನಸ್ಯೇವ ರಘೂತ್ತಮಮ್ ।
ತದನುಜ್ಞಾಂ ತತೋ ಲಬ್ಧ್ವಾ ಬಾಹ್ಯಪೂಜಾಂ ಸಮಾಚರೇತ್ ॥೧೩॥
ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ।
ಕುರ್ಯಾದ್ಘಣ್ಟಾರವಂ ತತ್ರ ದೇವತಾಹ್ವಾನಕಾರಣಮ್ ॥೧೪॥
ಯೋ ದೇವಃ ಪೂಜಕಶ್ಚಾಥ ಪೂಜಾದ್ರವ್ಯಾಣಿ ತತ್ಫಲಮ್ ।
ಪ್ರಾಣಬುದ್ಧ್ಯಾದಿಕಂ ಸರ್ವಂ ತಸ್ಮೈ ರಾಮಾತ್ಮನೇ ನಮಃ ॥೧೫॥
ಅನೇನ ಮನುನಾ ನತ್ವಾ ದ್ವಾರದೇವಾಃ ಪ್ರಪೂಜಯೇತ್ ।
ಓಂ ನಮೋ ರಾಮಭದ್ರಾಯ ಗಂ ಗಣೇಶಾಯ ತೇ ನಮಃ ॥೧೬॥
ಸಂ ಸವಿತ್ರೇ ಹ್ರೀಂ ಶಿವಾಯ ಐಂ ಶ್ರೀಂ ಹ್ರೀಂ ಪರಶಕ್ತ್ಯೇ ।
ದಿಂ ದೀಪನಾಥಾಯ ನಮಃ ಕ್ಷಂ ಕ್ಷೇತ್ರಪಾಲಾಯ ನಮಃ ॥೧೭॥

ಮತ್ತು, ಆ ಶ್ರೀರಾಮನನ್ನು, ಶಂಖ ಚಕ್ರ ಗದಾ ಕಮಲಗಳನ್ನು ಧರಿಸಿರ ತಕ್ಕವನನ್ನಾಗಿಯೂ, ಕಿರೀಟ ಹಾರ ಕೇಯೂರ ರತ್ನಕುಂಡಲಗಳಿಂದ ಅಲಂಕೃತನನ್ನಾಗಿಯೂ ಧ್ಯಾನಿಸಬೇಕು ॥೧೧॥

ಹೀಗೆ ಧ್ಯಾನಿಸುತ, ದೇವತೆ ಗುರು ಮಂತ್ರಗಳಿಗೂ ತನಗೂ ಏಕ್ಯವನ್ನು ಭಾವನೆ ಮಾಡ ಬೇಕು ಹೀಗೆ ಧ್ಯಾನಮಾಡಿ, ಅನಂತರ ಮನಸ್ಸಿನಲ್ಲಿಯೇ ಶ್ರೀರಾಮನನ್ನು ಅರ್ಚಿಸಿ, ಆ ಮೇಲೆ ಪೂಜಾರ್ಥವಾಗಿ ಅವನಿಂದ ಅನುಜ್ಞೆಯನ್ನು ಬೇಡಿ, ಬಾಹ್ಯಪೂಜಯನ್ನು ಪ್ರಾರಂಭಿಸಬೇಕು ॥

ಈ ಬಾಹ್ಯಪೂಜಾಕ್ರಮ ಹೇಗೆಂದರೆ,–ದೇವತೆಗಳ ಆಗಮನಾರ್ಥವಾಗಿಯೂ, ರಾಕ್ಷಸರ ನಿರ್ಗಮನಾರ್ಥವಾಗಿಯೂ, ದೇವತಾಸಾನ್ನಿಧ್ಯಹೇತುವಾದ ಘಂಟಾಧ್ವನಿಯನ್ನು ಪೂಜಾಪ್ರಾರಂಭದಲ್ಲಿ ಮಾಡಬೇಕು ॥೧೪॥

ಬಳಿಕ ಈ ಮಂತ್ರದಿಂದ ಶ್ರೀರಾಮನನ್ನು ನಮಸ್ಕರಿಬೇಕು, ಯಾವ ಶ್ರೀರಾಮನು ದೇವರಾಗಿಯೂ ಪೂಜಕನಾಗಿಯೂ ಪೂಜಾದ್ರವ್ಯಗಳಾಗಿಯೂ ಪೂಜಾಫಲವಾಗಿಯೂ ಪ್ರಾಣ ಬುದ್ಧಿ ಮೊದಲಾದ ಸಮಸ್ತ ವಸ್ತುವಾಗಿಯೂ ಇರುವನೋ, ಅಂತಹ ಶ್ರೀರಾಮಚಂದ್ರಸ್ವಾಮಿಗೆ ನಮಸ್ಕಾರವು ॥೧೫॥

ಈ ಮಂತ್ರದಿಂದ ಶ್ರೀರಾಮನನ್ನು ನಮಸ್ಕರಿಸಿ ' ಓಂ ರಾಮಭದ್ರಾಯನಮಃ, ಗಂ ಗಣೇಶಾಯನಮಃ, ಸಂ ಸವಿತ್ರೇನಮಃ, ಹ್ರೀಂ ಶಿವಾಯನಮಃ, ಐಂ ಶ್ರೀಂ ಪರಶಕ್ತ್ಯೇನಮಃ, ದಿಂ ದೀಪನಾಥಾಯನಮಃ ಕ್ಷಂ ಕ್ಷೇತ್ರಪಾಲಕಾಯನಮಃ ' ಎಂಬ ಮಂತ್ರಗಳಿಂದ ದ್ವಾರಪಾಲಕರನ್ನು ಪೂಜಿಸಬೇಕು ॥೧೬–೧೭॥

ಪುಷ್ಪಾಕ್ಷತಾದಿಭಿಃ ಪೂಜ್ಯಾಃ ಶ್ರೀರಾಮದ್ವಾರದೇವತಾಃ ।
ಷಡ್ದ್ವಾರಪುರತಃ ಸರ್ವಾನ್ ಪ್ರಮಥಾನರ್ಚಯೇತ್ ಸುಧೀಃ ॥೧೯॥
ದ್ವಾರಶ್ರಿಯೈ ನಮಶ್ಚೋರ್ಧ್ವಂ ದೇಹಳ್ಯೈ ತದಧಸ್ತತಃ ।
ದ್ವಾರಸ್ಯ ಕೋಭನಸ್ಯಾಥ ಶಾಖಯೋರ್ದಕ್ಷವಾಮಯೋಃ ॥೧೯॥
ಧಾತ್ರೀ ವಿಧಾತ್ರೀ ಗಙ್ಗಾಯೈ ಯಮುನಾಯೈ ಚ ಪೂರ್ವತಃ ।
ಓಂ ಭದ್ರಾಯ ಸುಭದ್ರಾಯ ಗೋದಾಂ ಕೃಷ್ಣಾಂ ಚ ದಕ್ಷಿಣೇ ॥೨೦॥
ಓಂ ಚಣ್ಡಾಯ ಪ್ರಚಣ್ಡಾಯ ರೇವಾಂ ತಾಪೀಂ ಚ ಪಶ್ಚಿಮೇ ।
ಬಲಾಯ ಪ್ರಬಲಾಯೇತಿ ವಾಣೀಂ ವೇಣೀಂ ತಥೋತ್ತರೇ ।
ಶಙ್ಖಪದ್ಮನಿಧಿದ್ವನ್ದ್ವಂ ಚತುರ್ದ್ವಾರೇಷು ಪೂಜಯೇತ್ ॥೨೧॥
ದ್ವಾರೇಷ್ವೇವಂ ಸುಸಮ್ಪೂಜ್ಯ ಗೃಹೋಪರಿ ತತೋ ಯಜೇತ್ ।
ಗೃಹೇಶಾಯ ಗೃಹಾಯಾಥ ಕುಲದೇವ್ಯೈ ನಮೋನಮಃ ॥೨೨॥
ನಿಸ್ಸಾರ್ಯ ವಿಘ್ನಸಙ್ಘಾಂಸ್ತ್ರಿಃ ಪಾಣಿಘಾತಂ ಸಮಾಚರೇತ್ ॥೨೩॥
ದೇಹಳೀಮಸ್ಪೃಶ್ಯ ದಕ್ಷಪಾದಪೂರ್ವಂ ಪ್ರವಿಶ್ಯ ಚ ।
ಶೇಷಾಯ ವಿದ್ಮಹೀರಾಯ ವಾಸ್ತುಪುಂಸೇ ನಮೋರ್ಚಯೇತ್ ॥೨೪॥

ಶ್ರೀರಾಮಚಂದ್ರನ ದ್ವಾರಪಾಲಕದೇವತೆಗಳನ್ನು ಗಂಧ ಪುಷ್ಪಾಕ್ಷತಾದಿಗಳಿಂದ ಪೂಜಿಸಿ, ಆರು ದ್ವಾರಗಳ ಪುರೋಭಾಗದಲ್ಲಿಯೂ ಅವರವರ ಗಣದೇವತೆಗಳನ್ನೂ ಅರ್ಚಿಸಬೇಕು ॥೧೮॥

ಆ ಬಳಿಕ, ದಿವ್ಯವಾದ ಆಲಯದ್ವಾರದ ಎಡ ಬಲ ಭಾಗಗಳಲ್ಲಿ ' ದ್ವಾರಶ್ರಿಯೈ ನಮಃ ' ಎಂದು ಊರ್ಧ್ವಭಾಗದಲ್ಲಿಯೂ ' ದೇಹಳ್ಯೈನಮಃ ' ಎಂದು ಅಧೋಭಾಗದಲ್ಲಿಯೂ ಪೂಜಿಸಬೇಕು ॥೧೯॥

' ಓಂ ಧಾತ್ರೀನಮಃ, ವಿಧಾತ್ರೀನಮಃ, ಗಂಗಾಯೈನಮಃ, ಯಮುನಾಯೈನಮಃ ' ಎಂದು ಪೂರ್ವದ್ವಾರದಲ್ಲಿಯೂ, ' ಓಂ ಭದ್ರಾಯನಮಃ, ಸುಭದ್ರಾಯನಮಃ, ಗೋದಾವರೈನಮಃ, ಕೃಷ್ಣಾಯೈನಮಃ ' ಎಂದು ದಕ್ಷಿಣ ದ್ವಾರದಲ್ಲಿಯೂ, ' ಓಂ ಚಂಡಾಯನಮಃ, ಪ್ರಚಂಡಾಯನಮಃ, ರೇವಾಯೈನಮಃ, ತಾಪ್ಯೈನಮಃ ' ಎಂದು ಪಶ್ಚಿಮ ದ್ವಾರದಲ್ಲಿಯೂ, ' ಓಂ ಬಲಾಯನಮಃ, ಪ್ರಬಲಾಯನಮಃ, ವಾಣ್ಯೈನಮಃ, ವೇಣ್ಯೈನಮಃ ' ಎಂದು ಉತ್ತರ ದ್ವಾರದಲ್ಲಿಯೂ ಪೂಜಿಸಬೇಕು, ಮತ್ತು, ನಾಲ್ಕು ದ್ವಾರಗಳಲ್ಲಿಯೂ ಶಂಖ ಪದ್ಮಗಳೆಂಬ ಎರಡು ನಿಧಿಗಳನ್ನೂ ಪೂಜಿಸಬೇಕು॥೨೦-೨೧॥

ಹೀಗೆ ದ್ವಾರಗಳಲ್ಲಿ ಪೂಜಮಾಡಿ, ಬಳಿಕ ಆಲಯದ ಮೇಲುಭಾಗದಲ್ಲಿ ' ಗೃಹೇಶಾಯನಮಃ, ಗೃಹಾಯನಮಃ, ಕುಲದೇವ್ಯೈನಮಃ, ಎಂಬ ಮಂತ್ರಗಳಿಂದ ಅರ್ಚನೆಮಾಡಬೇಕು॥

ಬಳಿಕ ' ಅಸ್ತ್ರಾಯಫಟ್' ಎಂದು ಉಚ್ಚರಿಸುತ ವಿಘ್ನನಿಸ್ಸಾರಣೆಮಾಡಿ, ಮೂರು ಆವೃತ್ತಿ ಪಾಣಿಘಾತ (ಚಪ್ಪಾಳೆ) ವನ್ನು ಆಚರಿಸಬೇಕು ಆಮೇಲೆ, ದೇಹಳಿಯ ಸ್ಪರ್ಶವಾಗದಂತೆ

ಕೃಷ್ಣಾಜಿನಂ ವ್ಯಾಘ್ರಚರ್ಮ ಕೌಶೇಯಂ ವೇತ್ರನಿರ್ಮಿತಮ್ ।
ವಸ್ತ್ರಾಜಿನಂ ಕಮ್ಬಳಂ ವಾ ಕಲ್ಪಯೇದಾಸನಂ ತತಃ ॥೨೫॥
ನಿವಿಶ್ಯ ತಸ್ಮಿನ್ನಾದೌ ತು ಪಾತ್ರಾಸಾದನಮಾಚರೇತ್ ।
ಸಮ್ಪಾದ್ಯ ವಿವಿಧೈಃ ಪುಷ್ಪೈಃ ಪೂಜಯೇತ್ ಪುಷ್ಪವೇದಿಕಾಮ್ ।
ತುಳಸೀಪದ್ಮಜಾತ್ಯಾದ್ಯೈಃ ಮಾಲ್ಯೈರ್ಬಹುವಿಧೈರಪಿ ॥೨೬॥
ಸ್ವಪುರೋ ದಕ್ಷಿಣೇ ಶುದ್ಧತೀರ್ಥವಾರಿಸುಪೂರಿತಮ್ ,
ಕಲಶಂ ಸ್ವಪುರೋವಾಮಭಾಗೇ ತು ವಿನಿಯೋಜಯೇತ್ ॥೨೭॥
ಅನ್ಯಾನಿ ಪೂಜಾದ್ರವ್ಯಾಣಿ ಪುರಸ್ತಾದೇವ ನಿಕ್ಷಿಪೇತ್ ॥೨೮॥
ಸ್ವಸಮ್ಪ್ರದಾಯಾನುರೋಧಾತ್ ನತ್ವಾ ಗುರುಪರಮ್ಪರಾಮ್ ।
ದೇಶಕಾಲೌ ತು ಸಙ್ಕೀರ್ತ್ಯ ರಾಮಪೂಜಾಂ ಸಮಾಚರೇತ್ ॥೨೯॥
ಚತುರಶ್ರಂ ತ್ರಿಕೋಣಂ ಚ ಷಟ್ಕೋಣಂ ಮಣ್ಡಲಂ ಲಿಖೇತ್ ।
ತನ್ಮಧ್ಯೇ ಕಲಶಂ ನ್ಯಸ್ಯ ವಾರುಣಂ ಪ್ರಜಪೇನ್ಮನುಮ್ ॥೩೦॥

ಬಲಗಾಲು ಮುಂದಾಗಿ ಆಲಯದೊಳಕ್ಕೆ ಪ್ರವೇಶಮಾಡಿ 'ಆದಿಶೇಷಾಯನಮಃ, ವಿದ್ಯಾಪೀಠಾಯನಮಃ, ವಾಸ್ತುಪುರುಷಾಯನಮಃ' ಎಂಬ ಮಂತ್ರಗಳಿಂದ ಪೂಜಮಾಡಬೇಕು ॥೨೪॥

ಒಳಿಕ, ಕೃಷ್ಣಾಜಿನವನ್ನಾಗಲಿ, ವ್ಯಾಘ್ರಚರ್ಮವನ್ನಾಗಲಿ, ಪಟ್ಟೆಯ ಬಟ್ಟೆಯನ್ನಾಗಲಿ, ಬೆತ್ತದ ಆಸನವನ್ನಾಗಲಿ, ವಸ್ತ್ರವನ್ನಾಗಲಿ, ಕಂಬಳವನ್ನಾಗಲಿ, ಆಸನವನ್ನಾಗಿ ಮಾಡಿಕೊಳ್ಳಬೇಕು ॥೨೫॥

ಈ ಆಸನದ ಮೇಲ ಕುಳಿತುಕೊಂಡು, ಪೂಜಾರ್ಥವಾದ ಪಾತ್ರಗಳನ್ನೆಲ್ಲ ಕ್ರಮವಾಗಿ ಆಯಾ ಸ್ಥಾನಗಳಲ್ಲಿರಿಸಬೇಕು ತುಳಸಿ ಕಮಲ ಜಾಜಿ ಮೊದಲಾದ ಅನೇಕವಿಧವಾದ ಪುಷ್ಪಗಳಿಂದಲೂ ನಾನಾವಿಧವಾದ ಮಾಲಿಕೆಗಳಿಂದಲೂ ಒಂದು ವೇದಿಕೆಯನ್ನು ನಿರ್ಮಿಸಿ, ಆ ಪುಷ್ಪವೇದಿಕೆಯನ್ನು ಪೂಜಿಸಬೇಕು ಈ ವೇದಿಕೆಯನ್ನು ತನ್ನ ಮುಂದುಗಡೆ ಒಲಭಾಗದಲ್ಲಿಯೂ, ಶುದ್ಧವಾದ ತೀರ್ಥೋದಕದಿಂದ ಪೂರಿತವಾಗಿರುವ ಕಲಶವನ್ನು ತನ್ನ ಮುಂದುಗಡೆ ಎಡಭಾಗದಲ್ಲಿಯೂ ಇಟ್ಟುಕೊಳ್ಳಬೇಕು ಇತರವಾದ ಪೂಜಾದ್ರವ್ಯಗಳನ್ನೆಲ್ಲ ತನ್ನ ಮುಂದುಗಡೆಯೇ ಇಟ್ಟುಕೊಳ್ಳತಕ್ಕುದು ॥೨೬—೨೭॥

ತನ್ನ ಸಂಪ್ರದಾಯಕ್ಕನುಸಾರವಾಗಿ ಗುರುಪರಂಪರೆಯನ್ನು ನಮಸ್ಕರಿಸಿ, ಬಳಿಕ 'ಶುಭತಿಥೌ' ಇತ್ಯಾದಿಯಾಗಿ ದೇಶಕಾಲಗಳನ್ನುಚ್ಚರಿಸಿ ಸಂಕಲ್ಪಮಾಡಿ, ಆಮೇಲೆ ಶ್ರೀರಾಮ ಪೂಜೆಯನ್ನು ಆಚರಿಸಬೇಕು ॥೨೮॥

ಮೊದಲು ಚತುರಶ್ರವಾದ ಮಂಡಲವನ್ನೂ, ಅದರಮೇಲೆ ತ್ರಿಕೋಣ ಮಂಡಲವನ್ನೂ, ಅದರಮೇಲೆ ಷಟ್ಕೋಣಮಂಡಲವನ್ನೂ ಒರೆದು, ಅದರ ಮಧ್ಯದಲ್ಲಿ ಕಲಶವನ್ನಿಟ್ಟು, ವರುಣ ದೇವತಾಕವಾದ 'ಇಮಂಮೇವರುಣ' ಇತ್ಯಾದಿ ಮಂತ್ರವನ್ನು ಜಪಿಸಬೇಕು ॥೩೦॥

ಅಲಙ್ಕೃತ್ಯ ತತಃ ಕುಮ್ಭಂ ಗನ್ಧಪುಷ್ಪಾಕ್ಷತಾದಿಭಿಃ ।
ದಶವಾರಂ ತು ಗಾಯತ್ರ್ಯಾಭಿಮನ್ತ್ರ್ಯ ಕಲಶೋದಕಮ್ ।
ಪ್ರಣವಂ ದ್ವಾದಶಾವೃತ್ತ್ಯಾ ಪ್ರೋಚ್ಚಾರ್ಯಾಭಿಮನ್ತ್ರಯೇತ್ ॥೧೧॥
ತತಶ್ಚ ಧೇನುಶಙ್ಖಾರಿಗಾರುಡಾಖ್ಯಾಃ ಪ್ರದರ್ಶಯೇತ್ ॥೧೨॥
ಕ್ರೋಮಿತ್ಯಙ್ಕುಶಬೀಜೇನ ತೀರ್ಥಾನ್ಯಾಕೃಷ್ಯ ಮಣ್ಡಲಾತ್ ।೧೩॥
ಬ್ರಹ್ಮಾಣ್ಡೋದರತೀರ್ಥಾನಿ ಕರೈಃ ಸ್ಪೃಷ್ಟಾನಿ ತೇ ರವೇ ।
ತೇನ ಸತ್ಯೇನ ಮೇ ದೇವ ತೀರ್ಥಂ ದೇಹಿ ದಿವಾಕರ ।೧೪॥
ಯಸ್ಯ ಕೇಶೇಷು ಜೀಮೂತಾಃ ನದ್ಯಃ ಸರ್ವಾಙ್ಗಸನ್ಧಿಷು ।
ಕುಕ್ಷೌ ಸಮುದ್ರಾಶ್ಚತ್ವಾರಃ ತಸ್ಮೈ ತೋಯಾತ್ಮನೇ ನಮಃ ॥೧೫॥
ಕಲಶಸ್ಯೇತಿ ಮನ್ತ್ರೇಣ ಋಗ್ವೇದಇತಿ ಮನ್ತ್ರತಃ ।
ಇಮಂಮಇತಿ ಮನ್ತ್ರೇಣ ಯಾಃ ಪವತಇತಿ ಮನ್ತ್ರತಃ ॥೧೬॥
ಸರ್ವೇ ಸಮುದ್ರಮನ್ತ್ರೇಣ ಗಙ್ಗೇ ಚ ಯಮುನೇತಿ ಚ ।
ಇತ್ಯಾದಿಮನ್ತ್ರೈಃ ಸಮ್ಮನ್ತ್ರ್ಯ ಕಲಶಂ ಸ್ಥಾಪಯೇದ್ಬುಧಃ ।
ಸಮಾಹಿತಮನಾಭೂತ್ವಾ ಧ್ಯಾಯೇತ್ ತೀರ್ಥಾಧಿದೇವತಾಮ್ ॥೧೭॥

ಒಳಕ ಕಲಶವನ್ನು ಗಂಧ ಪುಷ್ಪ ಅಕ್ಷತೆ ಮೊದಲಾದುವುಗಳಿಂದ ಅಲಂಕರಿಸಿ, ಹತ್ತು ಸಲ ಗಾಯತ್ರಿಯಿಂದ ಅಭಿಮಂತ್ರಣಮಾಡಿ, ಹನ್ನೆರಡುಸಲ ಪ್ರಣವವನ್ನು ಉಚ್ಚರಿಸಿ, ಕಲಶೋದಕವನ್ನು ಅಭಿಮಂತ್ರಿಸಬೇಕು ಅನಂತರ, ಧೇನುಮುದ್ರ ಶಂಖಮುದ್ರೆ ಚಕ್ರಮುದ್ರೆ ಗರುಡ ಮುದ್ರೆಗಳನ್ನು ತೋರಿಸಬೇಕು ॥೧೧—೧೨॥

ಪ್ರಾಜ್ಞನಾದ ಆರಾಧಕನು, ' ಕ್ರೋಂ ' ಎಂಬ ಅಂಕುಶ ಬೀಜದಿಂದ ಸಮಸ್ತ ತೀರ್ಥಗಳನ್ನೂ ಆಯಾ ಸ್ಥಳಗಳಿಂದ ಆಕರ್ಷಿಸಿ, ಅನಂತರ ' ಬ್ರಹ್ಮಾಣ್ಡೋದರ—ಎಲೈ ಸೂರ್ಯನ ! ಈ ಬ್ರಹ್ಮಾಂಡ ಮಧ್ಯದಲ್ಲಿರುವ ಸಮಸ್ತ ತೀರ್ಥಗಳೂ ನಿನ್ನ ಕಿರಣಸ್ಪರ್ಶದಿಂದ ಪರಿಶುದ್ಧವಾಗುವುವು ಹೇದಿವಾಕರ ! ದೇವ ! ಆ ಸತ್ಯದಿಂದ ನನಗೆ ತೀರ್ಥವನ್ನು ಕೊಡುವನಾಗು ' ಎಂಬ ಮಂತ್ರದಿಂದಲೂ— ' ಯಸ್ಯ ಕೇಶೇಷು—ಯಾವನ ಕೇಶಗಳಲ್ಲಿ ಮೇಘಗಳೂ, ಸಕಲವಾದ ಅವಯವ ಸಂಧಿಗಳಲ್ಲಿ ನದಿಗಳೂ, ಉದರ ಭಾಗದಲ್ಲಿ ಚತುಸ್ಸಮುದ್ರಗಳೂ ಇರುವುವೋ, ಅಂತಹ ಜಲಸ್ವರೂಪನಾದ ಪರಮಾತ್ಮನಿಗೆ ನಮಸ್ಕಾರವು ' ಎಂಬ ಮಂತ್ರದಿಂದಲೂ,—' ಕಲಶಸ್ಯ ಮುಖೇವಿಷ್ಣುಃ ' ಎಂಬ ಮಂತ್ರದಿಂದಲೂ—' ಋಗ್ವೇದೋಥ ಯಜುರ್ವೇದಃ ' ಎಂಬ ಮಂತ್ರದಿಂದಲೂ—' ಯಾಃ ಪವತೇ ' ಎಂಬ ಮಂತ್ರದಿಂದಲೂ—' ಸರ್ವೇಸಮುದ್ರಂ ' ಎಂಬ ಮಂತ್ರದಿಂದಲೂ—' ಗಂಗೇಚ ಯಮುನೇಚೈವ ' ಎಂಬ ಮಂತ್ರದಿಂದಲೂ—ಇನ್ನೂ ಇತರವಾದ ಮಂತ್ರಗಳಿಂದಲೂ ಅಭಿಮಂತ್ರಿಸಿ, ಕಲಶಸ್ಥಾಪನೆಮಾಡಬೇಕು ಒಳಕ ಸಮಾಹಿತಚಿತ್ತನಾಗಿ, ತೀರ್ಥಾಧಿದೇವತೆಯನ್ನು ಹೀಗೆ ಧ್ಯಾನಿಸಬೇಕು ॥೧೩—೧೭॥

ಸರ್ವಾನನ್ದಕರೀಮಶೇಷದುರಿತಧ್ವಂಸಾಂ ಶಶಾಙ್ಕಪ್ರಭಾಂ
ತ್ರ್ಯಕ್ಷೀಂ ಚೋರ್ಧ್ವಕರದ್ವಯೇನ ದಧತೀಂ ಪಾಶಂ ಸೃಣಿಂ ಚ ಕ್ರಮಾತ್।
ದೋರ್ಭ್ಯಾಂ ಚಾಮೃತಪೂರ್ಣಕುಮ್ಭಮತುಲಂ ಮುಕ್ತಾಕ್ಷಮಾಲಾಧರಾಂ
ಗಙ್ಗಾಸಿನ್ಧುಸರಿದ್ವರಾದಿರಚಿತಶ್ರೀತೀರ್ಥಶಕ್ತಿಂ ಭಜೇ ॥೩೪॥

ಶಙ್ಖಪೀಠಂ ತು ಸಂಕ್ಷಾಳ್ಯ ಮೂಲಮನ್ತ್ರೇಣ ಮನ್ತ್ರವಿತ್ ।
ಸಂಸ್ಥಾಪ್ಯ ಪೂಜಯೇತ್ ತತ್ರ ವಹ್ನೇರ್ದಶ ಕಲಾಃ ಶುಭಾಃ ॥೩೯॥
ಅವಪ್ಲುತ್ಯ ತತಃ ಶುಭ್ರಂ ಶಙ್ಖಂ ಶಙ್ಖಾಖ್ಯಮುದ್ರಯಾ ।
ಪ್ರಕ್ಷಾಳ್ಯ ಸ್ಥಾಪ್ಯಾರ್ಕಕಳಾಃ ತತ್ಸಂಖ್ಯಾಸ್ತತ್ರ ಪೂಜಯೇತ್ ॥೪೦॥
ಮೂಲೇನಾಪೂರ್ಯ ಶಙ್ಖಾಮ್ಭಃ ತತ್ರ ಚನ್ದ್ರಮಸಃ ಕಲಾಃ ।
ಷೋಡಶಾಭ್ಯರ್ಚಯಿತ್ವಾಥ ತೀರ್ಥಮಾವಾಹಯೇತ್ ತತಃ ॥೪೧॥
ಗನ್ಧಾದಿಭಿರಲಙ್ಕೃತ್ಯ ಮನ್ತ್ರಯೇನ್ಮೂಲಮನ್ತ್ರತಃ ।
ಶಙ್ಖಂ ಪಾಣಿತಳೇ ಧೃತ್ವಾ ಜಪೇನ್ಮನ್ತ್ರಂ ಷಡಕ್ಷರಮ್ ॥೪೨॥

ಸರ್ವಲೋಕಕ್ಕೂ ಸುಖಕರಳಾಗಿಯೂ, ಸಮಸ್ತ ಪಾಪನಿವಾರಕಳಾಗಿಯೂ, ಚಂದ್ರನಿಗ ಸಮಾನವಾದ ಕಾಂತಿಯುಳ್ಳವಳಾಗಿಯೂ, ಮೂರು ಕಣ್ಣುಗಳುಳ್ಳವಳಾಗಿಯೂ, ಊರ್ಧ್ವ ಮುಖವಾದ ಹಸ್ತದ್ವಯದಿಂದ ಕ್ರಮವಾಗಿ ಪಾಶಾಂಕುಶಗಳನ್ನು ಧರಿಸಿರುವಳಾಗಿಯೂ, ಮತ್ತೆ ರಡು ತೋಳುಗಳಿಂದ ದಿವ್ಯವಾದ ಅಮೃತಕಲಶವನ್ನೂ ಮುಕ್ತಾಮಯವಾದ ಅಕ್ಷಮಾಲಿಕೆ ಯನ್ನೂ ಧರಿಸಿದವಳಾಗಿಯೂ ಇರುವ, ಗಂಗಾ ಸಿಂಧು ಕಾವೇರಿ ಮೊದಲಾದ ಮಹಾ ನದಿಗ ಳಿಂದ ರಚಿತವಾಗಿರುವ ಶ್ರೀತೀರ್ಥಶಕ್ತಿಯನ್ನು ನಾನು ಭಜಿಸುವನು ॥೩೮॥

ಈ ರೀತಿಯಾಗಿ ತೀರ್ಥಾಧಿದೇವತೆಯನ್ನು ಪ್ರಾರ್ಥಿಸಿ, ಮಂತ್ರಜ್ಞನಾದ ಪೂಜಕನು, ಮೂಲ ಮಂತ್ರದಿಂದ ಶಂಖ ಪೀಠವನ್ನು ಪರಿಶುದ್ಧಿಮಾಡಿ, ಅದರಲ್ಲಿ ಅಗ್ನಿಯ ಹತ್ತು ಕಲಗಳನ್ನು ಸ್ಥಾಪನೆಮಾಡಿ ಪೂಜಿಸಬೇಕು ॥೩೯॥

ಅನಂತರ, ಶುಭ್ರವಾದ ಶಂಖವನ್ನು ಸ್ವೀಕರಿಸಿ, ಶಂಖಮುದ್ರೆಯಿಂದ ಅದನ್ನು ಪರಿಶೋಧಿಸಿ, ಅದರಲ್ಲಿ ಹುತ್ತು ಸೂರ್ಯಕಲೆಗಳನ್ನು ಸ್ಥಾಪನೆಮಾಡಿ ಪೂಜಿಸಬೇಕು ॥೪೦॥

ಆ ಶಂಖದಲ್ಲಿ ಮೂಲಮಂತ್ರದಿಂದ ಜಲವನ್ನು ಪೂರಣೆಮಾಡಿ, ಅಲ್ಲಿ ಹದಿನಾರು ಚಂದ್ರ ಕಳೆಗಳನ್ನು ಪೂಜಿಸಿ, ಬಳಿಕ ಅಲ್ಲಿ ತೀರ್ಥವನ್ನು ಆವಾಹಿಸಬೇಕು ॥೪೧॥

ಅನಂತರ, ಗಂಧ ಪುಷ್ಪಾದಿಗಳಿಂದ ಶಂಖವನ್ನು ಅಲಂಕರಿಸಿ, ಮೂಲಮಂತ್ರದಿಂದ ಅಭ ಮಂತ್ರಿಸಬೇಕು ಬಳಿಕ ಶಂಖವನ್ನು ಕೈಯಲ್ಲಿ ಹಿಡಿದುಕೊಂಡು, ಷಡಕ್ಷರ ಮಂತ್ರವನ್ನು ಜಪಿಸಬೇಕು ॥೪೨॥

ಚಿನ್ಮಯಂ ಚಿನ್ತಯೇತ್ ತೀರ್ಥಂ ಅನೀಯಾಬ್ಜಕಮುದ್ರಯಾ ।
ಬ್ರಹ್ಮಾಣ್ಡೋದರತೀರ್ಥೇತಿ ಧೇನುಮುದ್ರಾಂ ಪ್ರದರ್ಶ್ಯ ಚ ॥೪೩॥
ಶಙ್ಖಮುದ್ರಾಂ ಚಕ್ರಮುದ್ರಾಂ ಗಾರುಡಾಖ್ಯಾಂ ಪ್ರದರ್ಶಯೇತ್ ।
ಪಾವನೀಕೃತ್ಯ ಯತ್ನೇನ ಪಾವನಂ ತದ್ವಿಚಿನ್ತಯೇತ್ ॥೪೪॥
ದೇವಸ್ಯ ಮೂರ್ಧ್ನಿ ತತ್ ಸಿಞ್ಚೇತ್ ಪೂಜಾದ್ರವ್ಯೇಷು ಚಾತ್ಮನಿ ।
ಸಮ್ಪ್ರೋಕ್ಷ್ಯ ಪೂಜಾದ್ರವ್ಯಾಣಿ ಪಾವನಾನಿ ವಿಚಿನ್ತಯೇತ್ ॥೪೫॥
ಪಾತ್ರಾಣಿ ನಾಮ ಹೇಮಾದಿನಿರ್ಮಿತಾನಿ ಜಲಾನ್ತರೇ ।
ಜಲಜಾನಿ ವಿಚಿತ್ರಾಣಿ ಭವನ್ತಿ ಹ್ಯರ್ಘಣಾದಿಷು ॥೪೬॥
ಪಾದ್ಯಾರ್ಥಮರ್ಘ್ಯದಾನಾರ್ಥಂ ಮಧುಪರ್ಕಾರ್ಥಮಪ್ಯಥ ।
ತಥೈವಾಚಮನೀಯಾರ್ಥಂ ನ್ಯಸೇತ್ ಪಾತ್ರಚತುಷ್ಟಯಮ್ ॥೪೭॥
ಆತ್ಮನಃ ಪುರತಃ ಶಙ್ಖಂ ಪೂರ್ವವತ್ ಸ್ಥಾಪಯೇತ್ ತತಃ ॥೪೮॥
ಅರ್ಘ್ಯಪಾತ್ರಾದಿಪಾತ್ರೇಷು ಸಮ್ಪೂರ್ಯ ಸಲಿಲಂ ಶುಭಮ್ ।
ತತಾರ್ಘ್ಯಪಾತ್ರೇ ದಾತವ್ಯಾಃ ಗನ್ಧಪುಷ್ಪಾಕ್ಷತಾಯವಾಃ ।
ಕುಶಾಶ್ಚ ತಿಲದೂರ್ವಾಶ್ಚ ಸರ್ವಪಾಶ್ಚಾರ್ಘ್ಯಸಿದ್ಧಯೇ ॥೪೯॥

ಆಮೇಲೆ ಅಂಕುಶಮುದ್ರೆಯನ್ನು ತೋರಿಸಿ, ತೀರ್ಥವನ್ನು ಚಿನ್ಮಯವನ್ನಾಗಿ ಭಾವಿಸಬೇಕು ಬಳಿಕ 'ಬ್ರಹ್ಮಾಂಡೋದರ ತೀರ್ಥಾನಿ' ಎಂಬ ಮಂತ್ರವನ್ನು ಹೇಳಿ ಧೇನುಮುದ್ರೆಯನ್ನು ತೋರಿಸಿ, ಶಂಖಮುದ್ರೆ ಚಕ್ರಮುದ್ರೆ ಗರುಡಮುದ್ರೆಗಳನ್ನು ತೋರಿಸಬೇಕು ಹೀಗೆ ಪ್ರಯತ್ನಪೂರ್ವಕವಾಗಿ ಶಂಖೋದಕವನ್ನು ಪರಿಶುದ್ಧಗೊಳಿಸಿ, ಅದು ಪರಿಶುದ್ಧವಾಯ್ತೆಂದು ಭಾವಿಸಬೇಕು ॥೪೩—೪೪॥

ಈ ಶಂಖೋದಕವನ್ನು ದೇವರ ತಲೆಯಮೇಲೂ ಪೂಜಾದ್ರವ್ಯಗಳಮೇಲೂ ತನ್ನ ತಲೆಯಮೇಲೂ ಪ್ರೋಕ್ಷಿಸಿ, ಪೂಜಾದ್ರವ್ಯಗಳನ್ನೆಲ್ಲ ಪರಿಶುದ್ಧವಾದುವೆಂದು ಭಾವಿಸಬೇಕು ॥೪೫॥

ಪೂಜಾರ್ಥವಾದ ಪಾತ್ರೆಗಳಾದರೋ, ಸುವರ್ಣ ರಜತ ಮುಂತಾದುವುಗಳಿಂದ ನಿರ್ಮಿತವಾದುವುಗಳೂ, ಒಲಮಧ್ಯದಲ್ಲಿ ಪೂಜಮಾಡುವಾಗ ಅಲ್ಲಿಯೇ ಉತ್ಪನ್ನವಾದುವುಗಳೂ ಯೋಗ್ಯಗಳಾಗುವುವು ॥೪೬॥

ಪಾದ್ಯಾರ್ಥವಾಗಿಯೂ, ಅರ್ಘ್ಯಾರ್ಥವಾಗಿಯೂ, ಮಧುಪರ್ಕಾರ್ಥವಾಗಿಯೂ, ಆಚಮನೀಯಾರ್ಥವಾಗಿಯೂ, ಹೀಗೆ ನಾಲ್ಕು ಪಾತ್ರೆಗಳನ್ನು ಇಟ್ಟುಕೊಳ್ಳಬೇಕು ಬಳಿಕ, ಶಂಖವನ್ನು ಮೊದಲಿದ್ದಂತೆಯೇ ತನ್ನ ಮುಂದುಗಡೆ ಇರಿಸಬೇಕು ॥೪೭—೪೮॥

ಅರ್ಘ್ಯಾದಿಪಾತ್ರೆಗಳಲ್ಲಿ ಒಲವನ್ನು ತುಂಬಿ, ಅರ್ಘ್ಯಪಾತ್ರೆಯೊಳಗೆ ಗಂಧ ಪುಷ್ಪ ಅಕ್ಷತೆಯವೆಗಳನ್ನೂ ಕುಶ ತಿಲ ದೂರ್ವೆ ಸರ್ಷಪ(ಬಳಯ ಸಾಸುವೆ)ಗಳನ್ನೂ, ಅರ್ಘ್ಯವು ಶುದ್ಧವಾಗುವುದಕ್ಕಾಗಿ ಹಾಕಬೇಕು ॥೪೯॥

ಪಾದ್ಯಪಾತ್ರೇಽಪಿ ದಾತವ್ಯಃ ದೂರ್ವಾಃ ಶ್ಯಾಮಾಕಮೇವ ಚ ।
ಅಬ್ಜಂ ಚ ವಿಷ್ಣುಕ್ರಾನ್ತಂ ಚ ಪಾತ್ರಸಿದ್ಧ್ಯೈ ಪ್ರಯೋಜಯೇತ್ ॥೫೦॥
ತಥಾಚಮನಪಾತ್ರೇಽಪಿ ದದ್ಯಾಜ್ಜಾತೀಫಲಂ ಶಿವೇ ।
ಲವಙ್ಗಮಪಿ ತಕ್ಕೋಲಂ ಶಸ್ತಮಾಚಮನೀಯಕೇ ॥೫೧॥
ಧಧ್ನಾ ಚ ಮಧುಸರ್ಪಿರ್ಭ್ಯಾಂ ಮಧುಪರ್ಕೋ ಭವಿಷ್ಯತಿ ।
ಏಕಸ್ಮಿನ್ನಥವಾ ಪಾತ್ರೇ ಪಾದ್ಯಾರ್ಘ್ಯಾದೀನಿ ಕಲ್ಪಯೇತ್ ॥೫೨॥
ಸರ್ವೋಪಚಾರವಸ್ತೂನಾಂ ಅಭಾವೇ ಭಾವಯೇದ್ಧಿಯಾ ।
ನಿರ್ಮಲೇನೋದಕೇನೈವ ಪೂರ್ಣತಾಮಾಹ ನಾರದಃ ॥೫೩॥
ಯನ್ತ್ರೇ ಪೂಜಾಂ ತತಃ ಕುರ್ಯಾತ್ ಮನೋಮಲನಿಯನ್ತ್ರಣಾತ್ ।
ಯನ್ತ್ರನಿತ್ಯಾಹುರೇತಸ್ಮಿನ್ ರಾಮಪೂಜಾ ವಿಶಿಷ್ಯತೇ ॥೫೪॥

ಇತಿ ಶ್ರೀಮದರಣ್ಯಕಾಣ್ಡೇ ಶ್ರೀರಾಮಪೂಜಾಯಾಂ ಪಾತ್ರಾಸಾದನಾದಿ
ಕಥನಂ ನಾಮ ತೃತೀಯಃ ಸರ್ಗಃ



ಪಾದ್ಯವು ಶುದ್ಧವಾಗುವುದಕ್ಕಾಗಿ, ಪಾದ್ಯಪಾತ್ರೆಯಲ್ಲಿ ದೂರ್ವೆ ಸಾಸುವೆ ಕಮಲ ವಿಷ್ಣುಕ್ರಾಂತಗಳನ್ನು ಹಾಕಬೇಕು ॥೫೦॥

ಆಮೇಲೆ, ಎಲೌ ಪಾರ್ವತಿಯೇ ! ಆಚಮನ ಪಾತ್ರೆಯಲ್ಲಿ ಜಾಜೀಕಾಯಿಯನ್ನು ಹಾಕಬೇಕು, ಮತ್ತು, ಲವಂಗವೂ ತಕ್ಕೋಲವೂ ಆಚಮನ ಪಾತ್ರೆಯಲ್ಲಿ ಉಪಯೋಗಿಸುವುದಕ್ಕೆ ಪ್ರಶಸ್ತವಾದುವುಗಳು ॥೫೧॥

ಮೊಸರು ತುಪ್ಪ ಜೇನುತುಪ್ಪಗಳಿಂದ ಮಧುಪರ್ಕವು ನಿಷ್ಪನ್ನವಾಗುವುದು ಅಥವಾ, ಅನುಕೂಲವಿಲ್ಲದ ಪಕ್ಷದಲ್ಲಿ ಒಂದೇ ಪಾತ್ರೆಯಲ್ಲಿಯೇ ಪಾದ್ಯ ಅರ್ಘ್ಯ ಮೊದಲಾದುವುಗಳನ್ನೆಲ್ಲ ಸಿದ್ಧಪಡಿಸಿಕೊಳ್ಳಬಹುದು ॥೫೨॥

ಇದರಂತೆಯೇ ಸಕಲವಾದ ಉಪಚಾರವಸ್ತುಗಳೂ ಇಲ್ಲದಿದ್ದ ಪಕ್ಷದಲ್ಲಿ ಮನಸ್ಸಿನಲ್ಲಿಯೇ ಎಲ್ಲವನ್ನೂ ಭಾವಿಸಬೇಕು ನಿರ್ಮಲವಾದ ಉದಕದಿಂದಲೇ ಪೂಜೆಯೆಲ್ಲವೂ ಪರಿಪೂರ್ಣವಾಗುವುದೆಂದು ನಾರದ ಮುನಿಯು ಹೇಳಿರುವನು ॥೫೩॥

ಒಳಿಕ ಯಂತ್ರದಲ್ಲಿ ಶ್ರೀರಾಮನ ಪೂಜೆಯನ್ನು ಮಾಡಬೇಕು ಮನಸ್ಸಿನ ಮಲವನ್ನು ನಿಯಂತ್ರಣ(ನಿಗ್ರಹ)ಮಾಡುವಕಾರಣ ಯಂತ್ರವೆಂದು ಹೇಳುವರು ಇದರಲ್ಲಿ ಶ್ರೀರಾಮನ ಪೂಜೆಯು ವಿಶೇಷ ಫಲಪ್ರದವಾಗುವುದು ॥೫೪॥

ಇದು ಅರಣ್ಯಕಾಂಡದಲ್ಲಿ ಶ್ರೀರಾಮ ಪೂಜಾ ಪ್ರಕರಣದೊಳಗೆ
ಪಾತ್ರಾಸಾದನಾದಿನಿರೂಪಣವೆಂಬ ಮೂರನೆಯ ಸರ್ಗವು




ಅಥ ಶ್ರೀಮದರಣ್ಯಕಾಣ್ಡೇ ಚತುರ್ಥಃ ಸರ್ಗಃ.



ಶ್ರೀಶಿವಉವಾಚ.

ತ್ರಿರೇಖಾಪ್ರಟಮಾಲಿಖ್ಯ ಮಧ್ಯೇ ತಾರದ್ವಯಂ ಲಿಖೇತ್ ।
ತನ್ಮಧ್ಯೇ ಬೀಜಮಾಲಿಖ್ಯ ತದಧಃ ಸಾಧ್ಯಮಾಲಿಖೇತ್ ॥೧।
ದ್ವಿತೀಯಾನ್ತಂ ಚ ತಸ್ಯೋರ್ಧ್ವೇ ಷಷ್ಠ್ಯನ್ತಂ ಸಾಧಕಂ ತಥಾ ।
ಕುರುದ್ವಯಂ ಚ ತತ್ಪಾರ್ಶ್ವೇ ಲಿಖೇದ್ಬೀಜಾನ್ತರೇ ರಮಾಮ್ ।
ತತ್ಸರ್ವಂ ಪ್ರಣವಾಭ್ಯಾಂ ಚ ವೇಷ್ಟಯೇಚ್ಛುದ್ಧಬುದ್ಧಿಮಾನ್ ॥-೯॥

ಅರಣ್ಯಕಾಂಡದಲ್ಲಿ ನಾಲ್ಕನೆಯ ಸರ್ಗವು



ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಈಗ ನಿನಗೆ ಶ್ರೀರಾಮಷಡಕ್ಷರವನ್ನು ಉದ್ಧಾರಮಾಡುವ ರೀತಿಯನ್ನೂ ಪೂಜಾಕ್ರಮವನ್ನೂ ಹೇಳುವೆನು, ಕೇಳು ಶ್ರೀರಾಮಮಂತ್ರವನ್ನು ಉದ್ಧಾರಮಾಡತಕ್ಕವನು, ಮೊದಲು (೧) ತ್ರಿಕೋಣವನ್ನು ಸಂಪುಟೀಕರಿಸಿ(ಎರಡುತ್ರಿಕೋಣ--ಅರ್ಧಾತ್ ಷಟ್ಕೋಣ) ಸಮರೇಖೆಯಾಗಿ ಬರೆಯಬೇಕು, ಅದರ ಮಧ್ಯದಲ್ಲಿ, ಎರಡು ಪ್ರಣವಗಳನ್ನು ಒರೆಯಜೇಕು, ಇವೆರಡರ ಮಧ್ಯದಲ್ಲಿ, ಸ್ವಲ್ಪ ಅವಕಾಶವಿರಬೇಕು ಈ ಅವಕಾಶದಲ್ಲಿ 'ರಾಂ' ಎಂಬ ಬೀಜಾಕ್ಷರವನ್ನು ಬರೆಯಬೇಕು. ಈ ಬೀಜಾಕ್ಷರದ ಕೆಳಗಡೆ, ದ್ವಿತೀಯಾವಿಭಕ್ತ್ಯಂತವಾಗಿ (೨) ಸಾಧ್ಯ (ಅಭೀಷ್ಟ)ವನ್ನು ಬರೆಯಬೇಕು ಆ ಬೀಜಾಕ್ಷರದ ಮೇಲುಗಡೆ, ಷಷ್ಠ್ಯೀವಿಭಕ್ತ್ಯಂತವಾಗಿ

---

(೧) ಈ ಯಂತ್ರೋದ್ಧಾರ ಕ್ರಮವು ಬಾಯಲ್ಲಿ ಎಷ್ಟು ಓದಿದರೂ ತಿಳಿಯುವುದು ಕಷ್ಟವಾದಕಾರಣ, ಬಹುಕಾಲಶ್ರಮಪಟ್ಟು ರಾಮತಾಪನೀ ಭಾಷ್ಯಾದಿಗಳತ್ನು ಪರಿಶೀಲಿಸಿ, ಪ್ರತ್ಯೇಕವಾಗಿ ಬರೆದು ಸಿದ್ಧಪಡಿಸಲ್ಪಟ್ಟಿರುವುದು ಅದನ್ನು ಮುಂದಿಟ್ಟುಕೊಂಡು ಈ ಬಾಗವನ್ನು ಓದಿದರೆ, ಇದರ ಅರ್ಥವು ಚೆನ್ನಾಗಿ ಸ್ಫುರಿಸುವುದು ಈ ಚಕ್ರವು ತಾಸ್ತೋಕ್ತ ರೀತಿಯಾಗಿ ಉದ್ಧಾರಮಾಡಲ್ಪಟ್ಟಿದ್ದರೂ, ಯಥಾವಿಧಿಯಾಗಿ ಕಳಾಸ್ಥಾಪನಾದಿಗಳನ್ನು ಮಾಡದಿದ್ದರೆ ಇದು ಸಿದ್ಧಿಸಲಾರದು

(೨) ಸಾಧ್ಯವೆಂದರೆ, ಉಪಾಸಕರ ಮನಸ್ಸಿನಲ್ಲಿ ಉದ್ದಿಷ್ಟವಾದುದು ಇದು ಒಬ್ಬೊಬ್ಬರಿಗೊಂದೊಂದು ವಿಧವಾಗಿರಬಹುದಾದ ಕಾರಣ, ಸರ್ವರಿಗೂ ಸಾಮಾನ್ಯವಾಗಿ ಅನುಕೂಲಿಸುವಂತೆ 'ಅಭೀಷ್ಟಸಿದ್ಧಿಂ' ಎಂದು ಬರೆಯುವುದು ಸಂಪ್ರದಾಯಸಿದ್ಧವು.

ದೀರ್ಘಭಾಜಿ ಷಡಸ್ರೇಷು ಲಿಖೇದ್ಬೀಜಂ ಹೃದಾದಿಭಿಃ ।
ಕೋಣಪಾರ್ಶ್ವೇ ರಮಾಮಾಯೇ ತದಗ್ರೇನಙ್ಗಮಾಲಿಖೇತ್ ॥೩॥
ಕ್ರೋಧಂ ಕೋಣಾಗ್ರಾನ್ತರೇಷು ಲಿಖ್ಯ ಮನ್ತ್ರಾಧಿತೋ ಗಿರಮ್ ।
ವೃತ್ತತ್ರಯಂ ಸಾಷ್ಟಪತ್ರಂ ಸರೋಜಂ ವಿಲಿಖೇತ್ ಸ್ವರಾ ॥೪॥
ಕೇಸರೇ ಚಾಷ್ಟಪತ್ರೇ ಚ ವರ್ಗಾಷ್ಟಕಮಥೋ ಲಿಖೇತ್ ॥೫॥

---

(೧)ಸಾಧಕನ ಹೆಸರನ್ನು ಬರೆಯಬೇಕು ಪ್ರಣವಯುಕ್ತವಾದ ಬೀಜಾಕ್ಷರದ ಉಭಯಪಾರ್ಶ್ವಗಳಲ್ಲಿಯೂ ' ಕುರು-ಕುರು ' ಎಂದು ಬರೆಯಬೇಕು ಬೀಜಕ್ಕೂ ಸಾಧ್ಯನಿಗೂ ಮಧ್ಯದಲ್ಲಿ ' ಶ್ರೀಂ ' ಎಂದು ಲಕ್ಷ್ಮೀಬೀಜವನ್ನು ಬರೆಯಬೇಕು ಯಂತ್ರಲೇಖನದಲ್ಲಿ ವಿಚಕ್ಷಣನಾದ ಉಪಾಸಕನು, ಇನೆಲ್ಲವನ್ನೂ, ಪೂರ್ವೋಕ್ತರೀತಿಯಾಗಿರುವ ಬೀಜಾಕ್ಷರಯುಕ್ತವಾದ ಎರಡು ಪ್ರಣವಗಳಿಂದ (೨) ವೇಷ್ಟನಮಾಡಬೇಕು ॥೧-೨॥

ಒಳಿಕ, ಷಟ್ಕೋಣದಳಗಳ ಮಧ್ಯದಲ್ಲಿ ' ರಾಂ ರೀಂ ' ಇತ್ಯಾದಿರೀತಿಯಾಗಿ ದೀರ್ಘಯುಕ್ತವಾಗಿರುವ ಬೀಜಾಕ್ಷರವನ್ನು (೩) ಹೃದಯಾದಿಗಳೊಡನೆ ಬರೆಯಬೇಕು ಷಟ್ಕೋಣಗಳ ಪಾರ್ಶ್ವದಲ್ಲಿ ಲಕ್ಷ್ಮೀಬೀಜವಾದ 'ಶ್ರೀಂ' ಎಂಬ ವರ್ಣವನ್ನೂ, ಮಾಯಾಬೀಜವಾದ ' ಹ್ರೀಂ ' ಎಂಬ ವರ್ಣವನ್ನೂ ಬರೆಯಬೇಕು ಕೋಣಗಳ ಅಗ್ರಭಾಗದಲ್ಲಿ ಮನ್ಮಥಬೀಜವಾದ ' ಕ್ಲೀಂ ' ಎಂಬ ವರ್ಣವನ್ನು ಬರೆಯಬೇಕು ॥೪॥

ಮಂತ್ರಜ್ಞನಾದ ಉಪಾಸಕನು, ಕೋಣಾಗ್ರಗಳ ಮಧ್ಯಗಳಲ್ಲಿ ಕ್ರೋಧಬೀಜವಾದ ಹುಂಕಾರವನ್ನು ಬರೆದು, ಅದರ ಉಭಯಪಾರ್ಶ್ವಗಳಲ್ಲಿಯೂ ಸರಸ್ವತೀಬೀಜವಾದ 'ಐಂ' ಎಂಬವರ್ಣವನ್ನು ಬರೆಯಬೇಕು ಆಮೇಲೆ, ಷಟ್ಕೋಣದ ತುದಿಯಲ್ಲಿ ಒಂದು, ಷಟ್ಕೋಣಕ್ಕೂ ಅಷ್ಟದಳ

---

(೧) ಸಾಧಕನೆಂದರೆ, ಉಪಾಸನೆ ಮಾಡತಕ್ಕವನು ಇವನ ನಾಮಧೇಯವೂ ಒಬ್ಬೊಬ್ಬನಲ್ಲೊಂದೊಂದು ಇರುವ ಕಾರಣ, ಇದನ್ನೂ ಸರ್ವಸಾಮಾನ್ಯವಾಗಿ ಅನುಕೂಲಿಸುವಂತೆ ' ಮಮ ' ಎಂದು ಬರೆಯುವುದು ಸಾಂಪ್ರದಾಯಿಕವು

(೨) ವೇಷ್ಟನಮಾಡುವುದೆಂದರೆ, ಸುತ್ತಲೂ ಬರೆಯುವುದೆಂದರ್ಥವು ಇಲ್ಲಿ ' ಓಮ್ ರಾಂ ಓಮ್ ' ಎಂಬುದಾಗಿ ಎಂಟು ದಿಕ್ಕುಗಳಲ್ಲಿಯೂ ಬರೆಯಬೇಕೆಂದು ತಾತ್ಪರ್ಯವು

(೩) ' ರಾಂ ಹೃದಯಾಯ ನಮಃ ' ಇತ್ಯಾದಿ ರೀತಿಯಾಗಿಬರೆಯಬೇಕು ಅವರಲ್ಲಿಯೂ, ಜ್ಞಾನೈಶ್ವರ್ಯಾದಿಗಳನ್ನು ಸೇರಿಸಿಯೇ ಉಚ್ಚರಿಸಬೇಕೆಂದು ಮಂತ್ರಶಾಸ್ತ್ರವು ಹೇಳುತಿರುವ ಕಾರಣ, ಕ್ರಮವಾಗಿ ' ರಾಂ ಜ್ಞಾನಾಯ ಹೃದಯಾಯ ನಮಃ, ರೀಂ ಐಶ್ವರ್ಯಾಯ ಶಿರಸೇ ಸ್ವಾಹಾ, ರೂಂಶಕ್ತ್ಯೈಶಿಖಾಯೈ ವಷಟ್, ರೈಂ ಬಲಾಯ ಕವಚಾಯಹುಮ್, ರೌಂತೇಜಸೇ ನೇತ್ರತ್ರಯಾಯ ವೌಷಟ್, ರಃವೀರ್ಯಾಯ ಅಸ್ತ್ರಾಯ ಫಟ್ ' ಎಂದು, ಪೂರ್ವಾದಿ ಷಟ್ಕೋಣಗಳಲ್ಲಿ ಬರೆಯಬೇಕೆಂದು ಶಾಸ್ತ್ರ ಸಿದ್ಧವಾದ ತಾತ್ಪರ್ಯವು

ತೇಷು ಮೂಲಾಮನೋವರ್ಣಾರ್ಣ ವಿಲಿಖೇದೂರ್ಮಿಸಜ್ಞಯಾ ।
ಅನ್ತೇ ಪಞ್ಚಾಕ್ಷರಾಣ್ಯೇವಂ ಪುನರಪ್ಯದಳಂ ಲಿಖೇತ್ ॥೬॥
ತೇಷು ನಾರಾಯಣಾವ್ಯಾರ್ಣಂ ಲಿಖೇತ್ ತತ್ಕೇಸರೇ ರವಮೂಮ್ ।
ತದ್ಬಹಿರ್ದ್ವಾದಶದಳಂ ವಿಲಿಖೇದ್ದ್ವಾದಶಾಕ್ಷರಮ್ ॥೭॥
ತಥೈವಂ ನಮೋ ಭಗವತೇ ವಾಸುದೇವಾಯ ಇತ್ಯಯಮ್ ॥೮॥

ಪದ್ಮಕ್ಕೂ ಮಧ್ಯದಲ್ಲಿ ಕೇಸರಗಳ ತುದಿಯಲ್ಲಿ ಒಂದು, ಅಷ್ಟದಳಪದ್ಮದ ತುದಿಯಲ್ಲಿ ಒಂದು, ಈ ರೀತಿಯಾಗಿ ಮೂರು ವರ್ತುಳರೇಖೆಯನ್ನು ಬರೆಯಬೇಕು ಈ ವರ್ತುಳತ್ರಯವನ್ನು ಬರೆಯುವುದರಲ್ಲಿರುವ ವಿಶೇಷನೇನೆಂದರೆ,—ಮುಂದೆಯೂ ಹೀಗೆಯೇ ಅಷ್ಟದಳದ್ವಾದಶದಳಾದಿ ಪದ್ಮಗಳು ಬರುವುದರಿಂದ, ಕೆಳಗಡೆಯ ಪದ್ಮದ ಕೊನೆಯರೇಖೆಯೂ, ಮೇಲುಗಡೆಯ ಪದ್ಮದ ಮೊದಲು ರೇಖೆಯೂ ಒಂದೇ ಆಗಿರುವುದು ಈ ರೇಖೆಯೊಳಗಡೆ ಅಷ್ಟದಳ ಕಮಲವನ್ನೂ ಅಷ್ಟದಳಗಳ ಕಳಗೆ ಕೇಸರಗಳನ್ನೂ ಬರೆಯಬೇಕು ಈ ಕೇಸರಗಳಲ್ಲಿ, ಪ್ರತಿಯೊಂದರಲ್ಲಿಯೂ ಎರಡೆರಡರಂತೆ ಸೋಡಶಸ್ವರಗಳನ್ನು ಒರೆಯಬೇಕು ಅಷ್ಟಪತ್ರಗಳಲ್ಲಿ (೧) ಅಷ್ಟವರ್ಗಗಳನ್ನು ಬರೆಯಬೇಕು॥

ಮತ್ತು, ಆ ಅಷ್ಟದಳಗಳಲ್ಲಿ ಪ್ರತಿಯೊಂದಕ್ಕು ಆರಾರರಂತೆ (೨) ಶ್ರೀರಾಮಮೂಲಾ ಮಂತ್ರವರ್ಣಗಳನ್ನು ಬರೆಯಬೇಕು, ಈ ಮೂಲಾಮಂತ್ರದ ವರ್ಣಗಳು ನಾಲ್ವತ್ತೇಳಿರುವುದರಿಂದ, ಕೂನೆಯದಾದ ಈಶಾನ್ಯದಳದಲ್ಲಿ ಅಯ್ದಕ್ಷರಗಳನ್ನು ಮಾತ್ರವೇ ಒರೆಯತಕ್ಕುದು ಆಮೇಲೆ ಪೂರ್ವೋಕ್ತರೀತಿಯಾಗಿ ಮೂರು ವರ್ತುಳರೇಖೆಯೂ ಕೇಸರಗಳೂ ಇರುವಂತೆ, ಮತ್ತೊಂದು ಅಷ್ಟದಳಕಮಲವನ್ನು ಒರೆಯಬೇಕು ॥೬॥

ಈ ಅಷ್ಟದಳದಲ್ಲಿ 'ಓಂನಮೋನಾರಾಯಣಾಯ' ಎಂದು ನಾರಾಯಣಾಷ್ಟಾಕ್ಷರದ ವರ್ಣಗಳನ್ನು ಬರೆಯಬೇಕು ಇವುಗಳ ಕೇಸರಗಳಲ್ಲಿ 'ಶ್ರೀಂ' ಎಂದು ಲಕ್ಷ್ಮೀಬೀಜವನ್ನು ಒರೆಯಬೇಕು. ಈ ಯರಡನೆಯ ಅಷ್ಟದಳಪದ್ಮದ ಹೊರಗ ದ್ವಾದಶದಳ ಪದ್ಮವನ್ನು ಬರೆಯಬೇಕು ಇದಕ್ಕೂ ಯಥಾಪ್ರಕಾರವಾಗಿ ವರ್ತುಳತ್ರಯವೂ ಕೇಸರಗಳೂ ಇರಬೇಕು ಈ ದ್ವಾದಶದಳ ಪದ್ಮದ ದಳಗಳಲ್ಲಿ ವಾಸುದೇವದ್ವಾದಶಾಕ್ಷರ ಮಂತ್ರವರ್ಣಗಳನ್ನು ಬರೆಯಬೇಕು ಓಂನಮೋ ಭಗವತೇ ವಾಸುದೇವಾಯ ಎಂಬುದೇ ದ್ವಾದಶಾಕ್ಷರಮಂತ್ರವೆಂದು ಹೇಳಿಲ್ಪಟ್ಟಿರುವುದು॥೭-೮॥

---

(೧) ಕವರ್ಗ ಚವರ್ಗ ಟವರ್ಗ ತವರ್ಗ ಪವರ್ಗಗಳು ಪ್ರಸಿದ್ಧವಾಗಿಯೇ ಇರುವುವು 'ಯರಲವ ಎಂಬ ವರ್ಣಗಳಿಗೆ ಯವರ್ಗವೆಂದೂ 'ಶಷಸಹ' ಎಂಬ ವರ್ಣಗಳಿಗೆ ಶವರ್ಗವೆಂದೂ 'ಳಕ್ಷ' ಎಂಬ ವರ್ಣಗಳಿಗೆ ಳವರ್ಗವೆಂದೂ, ಮಂತ್ರ ಶಾಸ್ತ್ರದಲ್ಲಿ ಸಂಕೇತವುಂಟು

(೨) ಓಂ ನಮೋ ಭಗವತೇ ರಘುನನ್ದನಾಯ ರಕ್ಷೋಘ್ನಾಯ ವಿಶದ ಮುಖ ಪ್ರಸನ್ನವದನಾಯ ಅಮಿತ ತೇಜಸೇ ಬಲಾಯ ರಾಮಾಯ ವಿಷ್ಣವೇ ನಮಃ. ಇದೇ ರಾಮಮೂಲಾಮಂತ್ರವು

ಅದಿಕ್ಷ್ವಾನ್ತಂ ಕೇಸರೇಷು ವೃತ್ತಾಕಾರೇಣ ಸಂಲಿಖೇತ್ ।
ತದ್ಬಹಿಃ ಷೋಡಶದಳಂ ಲಿಖೇತ್ ತತ್ಕೇಸರೇ ಹ್ರಿಯಮ್ ॥೯॥
ವರ್ಮಾಸ್ತ್ರನತಿಸಂಯುಕ್ತಂ ದಳೇಷು ದ್ವಾದಶಾಕ್ಷರಮ್ ।
ತತ್ಸನ್ಧಿಷ್ವೀರಜಾದೀನಾಂ ಮನ್ತ್ರಂ ಮನ್ತ್ರೀ ಸಮಾಲಿಖೇತ್ ॥೧೦॥
ಹ್ಯಂ ಸ್ಯಂ ಭ್ಯಂ ವ್ಯಂ ಲ್ಯಂ ಶ್ಯಂ ಜ್ಯಂ ಚ ಲಿಖೇತ್ ಸಮ್ಯಕ್ ತತೋ ಬಹಿಃ ।
ದ್ವಾತ್ರಿಂಶಾರಂ ಮಹಾಪದ್ಮಂ ನಾದಬಿನ್ದುಸಮಾಯುತಮ್ ।
ವಿಲಿಖೇನ್ಮನ್ತ್ರರಾಜಾರ್ಣಾಂ ನೃಸಿಂಹಸ್ಯ ದಳೇಷ್ವಥ ॥೧೧॥

ಈ ದ್ವಾದಶದಳಪದ್ಮದ ಕೇಸರಗಳಲ್ಲಿ, ಅಕಾರಾದಿ ಕ್ಷ ಕಾರಾಂತವಾಗಿರುವ ಅಕ್ಷರಗಳನ್ನು ಪ್ರತಿಯೊಂದಕ್ಕೂ ನಾಲ್ಕರಂತೆ ಸಮಸಂಖ್ಯೆಯಾಗಿ ಬರೆಯಬೇಕು, ಕೊನೆಯ ದಳದಲ್ಲಿ ಮಾತ್ರ ಏಳಕ್ಷರಗಳನ್ನು ಬರೆಯಬೇಕಾಗುವುದು ಈ ದ್ವಾದಶದಳ ಪದ್ಮದ ಹೊರಗ ವರ್ತುಳತ್ರಯಕೇಸ ರಗಳೊಡನೆ ಷೋಡಶದಳಪದ್ಮವನ್ನು ಬರೆಯಬೇಕು ಈ ಷೋಡಶದಳಪದ್ಮದ ಕೇಸಗಳಲ್ಲಿ ಹ್ರೀಂ ಕಾರವನ್ನು ಬರೆಯತಕ್ಕುದು ॥೯॥

ಈ ಷೋಡಶದಳಗಳಲ್ಲಿ, (೧) ವರ್ಮ ಅಸ್ತ್ರ ನತಿಗಳೊಡನೆ ಯುಕ್ತವಾಗಿರುವ (೨) ಶ್ರೀರಾ ಮದ್ವಾದಶಾಕ್ಷರ ಮಂತ್ರದ ವರ್ಣಗಳನ್ನು ಬರೆಯಬೇಕು ಈ ಷೋಡಶದಳಗಳ (೩) ಸಂಧಿ ಗಳಲ್ಲಿ, ಹನುಮಂತ ಮುಂತಾದವರ ನಾಮಗಳ ಆದ್ಯಕ್ಷರಗಳನ್ನು ಋಕಾರ ಬಿಂದುಗಳೊಡನೆ ಬರೆಯಬೇಕು ಹೀಗೆ ಈ ಆದ್ಯಕ್ಷರಗಳು ಹ್ಯಂ ಸ್ಯಂ ಭ್ಯಂ ವ್ಯಂ ಲ್ಯಂ ಶ್ಯಂ ಜ್ಯಂ ಎಂದು ಏಳಕ್ಷ ರಗಳಾಗುವುವು ಉದರೆ, ಇಲ್ಲ ಸಂಕೇತಾನುಗುಣವಾಗಿ ಅಂ ಶ್ಯಂ ಜ್ಯಂ ಧ್ಯಂ ಜ್ಯಂ ವ್ಯಂ ಸ್ಯಂ ರ್ಯಂ ಅಂ ಧ್ಯಂ ಸ್ಯಂ ಹ್ಯಂ ಸ್ಯಂ ಭ್ಯಂ ವ್ಯಂ ಲ್ಯಂ ಎಂದು ಬರಯತಕ್ಕುದು ಈ ಷೋಡಶದಳ ಪದ್ಮದ ಹೊರಗಡ ಯಥಾಪ್ರಕಾರವಾಗಿ ದ್ವಾತ್ರಿಂಶದ್ದಳಪದ್ಮವನ್ನು ಬರಯಬೇಕು ಈ ದಳಗಳಲ್ಲಿ, ಶ್ರೀ ನೃಸಿಂಹನ (೪) ಮಂತ್ರರಾಜದ ಅಕ್ಷರಗಳನ್ನು ಬಿಂದುಸಹಿತವಾಗಿ ಬರಯಬೇಕು ॥೧೦ ೧೧॥

---

(೧) 'ಹುಂ' ಎಂಬುದಕ್ಕೆ ವರ್ಮವೆಂದೂ-'ಫಟ್' ಎಂಬುದಕ್ಕೆ ಅಸ್ತ್ರವೆಂದೂ 'ನಮಃ' ಎಂಬ ಎರಡಕ್ಷ ರಗಳಿಗೆ ನತಿಯೆಂದೂ ಮಂತ್ರಶಾಸ್ತ್ರ ಸಂಕೇತವು

(೨) ಓಂ ಶ್ರೀಂ ಭರತಾಗ್ರಜ ರಾಮ ಕ್ಲೀಂ ಸ್ವಾಹಾ-ಎಂದು ಶ್ರೀರಾಮದ್ವಾದಶಾಕ್ಷರ ಮಂತ್ರವು ಈ ದ್ವಾದಶಾಕ್ಷರಗಳ ಜೊತಗೆ 'ಹುಂ-ಫಟ್-ನ-ಮಃ' ಎಂದು ನಾಲ್ಕಕ್ಷರಗಳು ಸೇರಿದರೆ ಹದಿನಾರಕ್ಷರಗಳಾಗುವುವು

(೩) ಸಂಧಿಯೆಂದರೆ ಒಂದುದಳಕ್ಕೂ ಮತ್ತೊಂದುದಳಕ್ಕೂ ಮಧ್ಯವೆಂದರ್ಥವು

(೪) ನೃಸಿಂಹಾನುಷ್ಟುಪ್ ಮಂತ್ರಕ್ಕೆ ಮಂತ್ರರಾಜವೆಂದು ಹೆಸರು

ಉಗ್ರಂ ವೀರಂ ಮಹಾವಿಷ್ಣುಂ ಜ್ವಲನ್ತಂ ಸರ್ವತೋಮುಖಂ ।
ನೃಸಿಂಹಂ ಭೀಷಣಂ ಭದ್ರಂ ಮೃತ್ಯುಮೃತ್ಯುಂ ನಮಾಮ್ಯಹಂ ।

ಎಂಬುದು ನೃಸ್ಸಿಂಹಾನುಷ್ಟುಪ್ ಮಂತ್ರವು. ಇದನ್ನು ಬಿಂದುಸಹಿತವಾಗಿಯಾಗಲಿ, ಅಥವಾ ಬಿಂದುರ ಹಿತವಾಗಿಯಾಗಲಿ ಬರೆಯುವ ಸಂಪ್ರದಾಯವುಂಟು.

ಶ್ರುತ್ಯನುಕ್ತಮಪಿ ಗ್ರಾಹ್ಯಂ ಯದೇತತ್ ಸಾಮ್ಪ್ರದಾಯಿಕಮ್ ॥೧೦॥
ತತ್ರೈಕಾದಶರುದ್ರಾಣಾಂ ವಸೂನಾಂ ಚ ಲಿಖೇತ್ ಕ್ರಮಾತ್ ।
ಬೀಜಾನಿ ದ್ವಾದಶಾರ್ಕಾಣಾಂ ಬಹಿರ್ಧಾತುರ್ವಪಟ್ಕೃತೀ ॥೧೫॥
ಭೂಗೃಹಂ ವಜ್ರಶೂಲಾಢ್ಯಂ ರೇಖಾತ್ರಯಸಮನ್ವಿತಮ್ ।
ದ್ವಾರೋಪೇತಂ ಚ ರಾಶ್ಯಾದಿಭೂಷಿತಂ ಫಣಿಸಂಯುತಮ್ ॥೧೪॥
ಅನನ್ತೋ ವಾಸುಕಿಶ್ಚೈವ ತಕ್ಷಃ ಕರ್ಕೋಟಪದ್ಮಕೌ ।
ಮಹಾಪದ್ಮಸ್ತಥಾ ಶಙ್ಖಃ ಗುಳಿಕೋಷ್ಟೌ ಪ್ರಕೀರ್ತಿತಾಃ ॥೧೫॥

ಮುಂದೆ ಹೇಳುವ ಶ್ರೀರಾಮಾನುಷ್ಟುಪ್ ಮಂತ್ರನನ್ನು ಬರೆಯಲೇಬೇಕೆಂದು ರಾಮತಾಪಿನೀಶ್ರುತಿಯಲ್ಲಿ ಹೇಳಲ್ಪಡದಿದ್ದರೂ, ಇದು ಸಂಪ್ರದಾಯಸಿದ್ಧವಾಗಿರುವಕಾರಣ ಪರಿಗ್ರಾಹ್ಯವಾಗಿರುವುದು ಈ (೧) ರಾಮಾನುಷ್ಟುಭಮಂತ್ರವನ್ನು, ದ್ವಾತ್ರಿಂಶದ್ದಳಪದ್ಮದ ಸಂಧಿಗಳಲ್ಲಿ ಒರೆಯತಕ್ಕುದು ಈ ಪದ್ಮದ ಹೊರಗಡೆ ಕೇಸರಗಳನ್ನು ಬರೆದು, ಅವುಗಳಲ್ಲಿ ಏಕಾದಶರುದ್ರರು ಅಷ್ಟವಸುಗಳು ದ್ವಾದಶಾದಿತ್ಯರು ಧಾತೃ-ಇವರುಗಳ ಬೀಜಾಕ್ಷರಗಳನ್ನು ಬರೆಯತಕ್ಕುದು ಇದಕ್ಕೆ ಬದುಲಾಗಿ ಕಕಾರಾದಿ ಸಕಾರಾಂತವರ್ಣಗಳನ್ನು ಬಿಂದು ಸಹಿತವಾಗಿ ಬರೆಯುವುದೂ ಉಂಟು ಈ ದ್ವಾತ್ರಿಂಶದ್ದಳಪದ್ಮದ ಒಳಭಾಗದಲ್ಲಿರುವ ಕೇಸರಗಳಲ್ಲಿ ಓಂಕಾರವನ್ನು ಬರೆಯತಕ್ಕುದು ॥೧೨-೧೩॥

ಬಳಿಕ, ರೇಖಾತ್ರಯಯುಕ್ತವಾದ ಭೂಪುರವನ್ನು ಬರೆದು, ಅದರೊಳಗೆ ದಿಕ್ಕುಗಳಲ್ಲಿ ವಜ್ರವನ್ನೂ ವಿದಿಕ್ಕುಗಳಲ್ಲಿ ಶೂಲವನ್ನೂ ಬರೆಯಬೇಕು ಈ ಭೂಪುರಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ದ್ವಾರವನ್ನೂ ಬರೆಯುವುದಲ್ಲದೆ, ಮೇಷಾದಿದ್ವಾದಶರಾಶಿರೇಖೆಯನ್ನು ವೀಥಿಗಳಲ್ಲಿ ಹಾಕಬೇಕು. ಪೂರ್ವಾದಿ ದ್ವಾರಗಳಲ್ಲಿ ಪರಿಸ್ತರಣಾಕಾರವಾಗಿ ಅಷ್ಟಮಹಾ ಸರ್ಪಗಳನ್ನೂ ಬರೆಯಬೇಕು ॥೧೪॥

ಅನಂತ ವಾಸುಕಿ ತಕ್ಷ ಕರ್ಕೋಟ ಪದ್ಮಕ ಮಹಾಪದ್ಮ ಶಂಖ ಗುಳಿಕ-ಇವರುಗಳೇ ಅಷ್ಟಮಹಾಸರ್ಪರುಗಳು ॥೧೫॥

---

(೧) ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ ।
ದಶಾಸ್ಯಾನ್ತಕ ಮಾಂ ರಕ್ಷ ದೇಹಿ ದಾಪಯ ಮೇ ಶ್ರಿಯಮ್ ॥

ಎಂಬುದು ರಾಮಾನುಷ್ಟುಭಮಂತ್ರವು

ಏವಂ ಮಣ್ಡಲಮಾಲಿಖ್ಯ ತಸ್ಯ ದಿಕ್ಷು ವಿದಿಕ್ಷು ಚ ।
ನಾರಸಿಂಹಂ ಚ ವಾರಾಹಂ ಲಿಖೇನ್ಮನ್ತ್ರದ್ವಯಂ ತಥಾ ॥೧೬॥
ಇದಂ ಸರ್ವಾತ್ಮಕಂ ಯನ್ತ್ರಂ ಪ್ರಾಗುಕ್ತಮೃಷಿಸೇವಿತಮ್ ।
ಸಾಧಕಾನಾಂ ಮೋಕ್ಷಕರಂ ಆಯುರಾರೋಗ್ಯವರ್ಧನಮ್ ॥೧೭॥
ಅಪುತ್ರಾಣಾಂ ಪುತ್ರದಂ ಚ ಬಹುಧಾ ಕಿಮನೇನ ವೈ ।
ಪ್ರಾಪ್ನುವನ್ತಿ ಕ್ಷಣಾತ್ ಸಮ್ಯಕ್ ಅತ್ರ ಧರ್ಮಾದಿಕಾನಪಿ ॥೧೮॥
ಇದಂ ರಹಸ್ಯಂ ಪರಮಂ ಈಶ್ವರೇಣಾಪಿ ದುರ್ಗಮಮ್ ।
ಇದಂ ಯನ್ತ್ರಂ ಸಮಾಖ್ಯಾತಂ ನ ದೇಯಂ ಪ್ರಾಕೃತೇ ಜನೇ ॥೧೯॥
ಗುರುದರ್ಶಿತಮಾರ್ಗೇಣ ಸ್ವಬುದ್ಧ್ಯಾ ನೈವ ತಲ್ಲಿಖೇತ್ ।
ಗುರ್ವನುಕ್ತಾಃ ಕ್ರಿಯಾಃ ಸರ್ವಾಃ ನಿಷ್ಫಲಾಮಃಖದಾನೃಣಾಮ್ ॥೨೦॥

ಹೀಗ ಮಂಡಲವನ್ನು ಬರೆದು, ಅದರ ದಿಕ್ಕುಗಳಲ್ಲಿ ' ಕ್ಷ್ರೌಂ ' ಎಂದು ನರಸಿಂಹಬೀಜಾಕ್ಷರವನ್ನೂ, ವಿದಿಕ್ಕುಗಳಲ್ಲಿ ' ಹ್ರುಂ ' ಎಂದು ವರಾಹಬೀಜಾಕ್ಷರವನ್ನೂ ಒರೆಯಬೇಕು ಇಷ್ಟ ಲ್ಲದೆ, ಮಂತ್ರಶಾಸ್ತ್ರೋಕ್ತರೀತಿಯಾಗಿ ಮಂತ್ರದ (೧) ದಶಾಂಗ ಮುಂತಾದುವುಗಳನ್ನೂ ಬರೆ ಯಬೇಕು ॥೧೬॥

ಈರೀತಿಯಾಗಿ ಸರ್ವಾತ್ಮಕವಾದ ಯಂತ್ರವು ಪೂರ್ವದಲ್ಲಿಯೇ ಮಹಾತ್ಮರಿಂದ ಉಪದೇಶಿಸ ಲ್ಪಟ್ಟಿರುವುದು ಇದು, ಸರ್ವಋಷಿಗಳಿಂದಲೂ ಸೇವಿತವಾದುದು, ಸಾಧಕರಿಗೆ ಮೋಕ್ಷ ವನ್ನು ಕೊಡತಕ್ಕುದಾಗಿಯೂ, ಆಯುರಾರೋಗ್ಯಗಳನ್ನು ವೃದ್ಧಿಪಡಿಸತಕ್ಕುದಾಗಿಯೂ ಇರು ವುದು ॥೧೭॥

ಇದು, ಮಕ್ಕಳಿಲ್ಲದವರಿಗ ಮಕ್ಕಳನ್ನು ಕೂಡುವುದು ಬಹಳ ಹೇಳುವುದೇಕೆ? ಈ ರಿಪು ಯಂತ್ರವೊಂದರಲ್ಲಿಯೇ ಧರ್ಮಾದಿ ಸಮಸ್ತ ಪುರುಷಾರ್ಥಗಳನ್ನೂ ಉಪಾಸಕರು ಕ್ಷಣಕಾಲದೊಳ ಗಾಗಿ ಪಡೆಯುವರು ॥೧೮॥

ಈರೀತಿಯಾಗಿ ಈ ಮಂತ್ರವನ್ನು ತೋರಿಸಿರುವೆನು ಇದು ಬಹುರಹಸ್ಯವಾದುದು; ಎಂತಹ ಪ್ರಬಲಜ್ಞಾನಿಗೂ ತಿಳಿಯಲು ಸಾಧ್ಯವಲ್ಲ ಇದನ್ನು ಭಕ್ತಿರಹಿತನಾದ ಸಾಮಾನ್ಯ ಮನುಷ್ಯನಿಗೆ ತಿಳಿಯಿಸಕೂಡದು ॥೧೯॥

ಈ ಯಂತ್ರವನ್ನು ಗುರುವಿನಿಂದ ಉಪದಿಷ್ಟವಾದ ಮಾರ್ಗದಲ್ಲಿ ಒರೆಯಬೇಕಲ್ಲದೆ, ತನ್ನ ಬುದ್ಧಿಯಿಂದ ಊಹಿಸಿಕೊಂಡು ಎಂದಿಗೂ ಬರೆಯಬಾರದು ಗುರುವಿನಿಂದ ಉಪದೇಶಿಸಲ್ಪಡದ

---

(೧) ಬೀಜಂ ಪ್ರಾಣಶ್ಚ ಶಕ್ತಿಶ್ಚ ದೃಷ್ಟಿರ್ಹೃದಾದಿಕಂ ತಥಾ
ಗಾಯತ್ರ್ಯನ್ತ್ರಮನ್ತ್ರೌ ಚ ಪ್ರಾಣಸ್ಥಾಪನಮೇವ ಚ ।
ಘೃತದಿಕ್ಪಾಲಬೀಜಾನಿ ಯನ್ತ್ರಸ್ಯಾಙ್ಗಾನಿ ವೈ ದಶ ॥
ಎಂದು, ಯಂತ್ರಕ್ಕೆ ಹತ್ತಂಗಗಳು ಹೇಳಲ್ಪಟ್ಟಿರುವುವು ಇವುಗಳೆಲ್ಲ ಕ್ರಮವಾಗಿ ನಾವು ಬರೆಯಿಸಿರುವ ಯಂತ್ರದಲ್ಲಿ ತೋರಿಸಲ್ಪಟ್ಟಿರುವುವು

ಏವಂ ಪ್ರಿಯೇ ರಾಮಭಕ್ತಃ ಕೃತ್ಯುಕ್ತಂ ಯನ್ತ್ರನಾಯಕಮ್ ।
ವಿಲಿಖ್ಯ ಪೂಜಯೇದ್ಯತ್ನಾತ್ ತನ್ಮಧ್ಯೇ ಪೀಠಮರ್ಚಯೇತ್ ॥೨೧॥
ಸ್ವಸ್ಯಾಗ್ರತೋ ವಾಮಭಾಗೇ ಗುರೂನಭ್ಯರ್ಚ್ಯ ದಕ್ಷಿಣೇ ।
ಗಣೇಶಂ ಶಾರದಾಂ ದುರ್ಗಾಂ ಕ್ಷೇತ್ರಪಾಲಂ ಸಮರ್ಚಯೇತ್ ।
ಆಧಾರಶಕ್ತಿಮಾರಭ್ಯ ಪೀಠಯನ್ತ್ರಾನ್ತಮರ್ಚಯೇತ್ ॥೨೨॥
ಅಥ ಕೂರ್ಮಶಿಲಾರೂಢಾಂ ಶರಚ್ಚನ್ದ್ರನಿಭಾನನಾಮ್ ।
ಆಧಾರಶಕ್ತಿಂ ಪ್ರಯಜೇತ್ ಪದ್ಮಜದ್ವಯಧಾರಿಣೀಮ್ ॥೨೩॥
ಮೂರ್ಧ್ನಿ ತಸ್ಯಾಂ ಸಮಾಸೀನಂ ಕೂರ್ಮಂ ನೀಲಾಭಮರ್ಚಯೇತ್ ॥
ಊರ್ಧ್ವೇ ಬ್ರಹ್ಮಶಿಲಾಸೀನಂ ಅನನ್ತಂ ಕುನ್ದಸನ್ನಿಭಮ್ ।
ಯಜೇಚ್ಚಕ್ರಧರಂ ಮೂರ್ಧ್ನಿ ಧಾರಯನ್ತಂ ವಸುನ್ಧರಾಮ್ ॥೨೪॥
ತಮಾಲಶ್ಯಾಮಲಾಂ ತಸ್ಮಿನ್ ನೀಲೇನ್ದೀವರಸನ್ನಿಭಾಮ್ ।
ಅಭ್ಯರ್ಚಯೇದ್ವಸುಮತೀಂ ಸ್ಫುರತ್ಸಾಗರಮೇಖಲಾಮ್ ॥೨೬॥

ರುವ ಸಮಸ್ತ ಕರ್ಮಗಳೂ ಮನುಷ್ಯರಿಗೆ ನಿಷ್ಫಲಗಳಾಗುವುವು, ಅಲ್ಲದೆ, ದುಃಖಹೇತುಗಳಾಗಿಯೂ ಪರಿಣಮಿಸುವುವು ॥೨೦॥

ಎಲೌ ಪ್ರಿಯೇ! ಪಾರ್ವತಿ! ರಾಮಭಕ್ತನಾದವನು, ಹೀಗ ವೇದೋಕ್ತವಾಗಿರುವ ರಾಮಯಂತ್ರವನ್ನು ಬರೆದು, ಪ್ರಥಮತಃ ಇದನ್ನು ಪೂಜಿಸಬೇಕು, ಒಳಿಕ, ಈ ಯಂತ್ರದ ಮಧ್ಯದಲ್ಲಿ ಪೀಠವನ್ನಿಟ್ಟು ಅದನ್ನೂ ಪೂಜಿಸಬೇಕು ॥೨೧॥

ತನ್ನ ಮುಂದುಗಡೆ ಎಡಭಾಗದಲ್ಲಿ ಗುರುಗಳನ್ನು ಪೂಜಿಸಿ, ಬಲಭಾಗದಲ್ಲಿ ದುರ್ಗಾ ಗಣಪತಿ ಕ್ಷೇತ್ರಪಾಲ ಸರಸ್ವತಿಗಳನ್ನು ಪೂಜಿಸಬೇಕು ಆಮೇಲೆ ಕ್ರಮವಾಗಿ ಆಧಾರಶಕ್ತಿ ಮೊದಲುಗೊಂಡು ಪೀಠಯಂತ್ರಗಳವರೆಗೂ ಪೂಜಿಸಬೇಕು ॥೨೨॥

ಅನಂತರ, ಕೂರ್ಮಾಸನದಮೇಲೆ ಶರಚ್ಚಂದ್ರಮುಖಿಯಾಗಿಯೂ ಕೈಯಲ್ಲಿ ಎರಡು ಕಮಲಗಳನ್ನು ಧರಿಸಿದವಳಾಗಿಯೂ ಇರುವ ಆಧಾರಶಕ್ತಿಯನ್ನು ಅರ್ಚಿಸಬೇಕು ಆಮೇಲೆ, ಇದರ ಮೇಲುಗಡೆ ಕುಳಿತಿರುವ ನೀಲವರ್ಣನಾದ ಕೂರ್ಮನನ್ನೂ ಆರಾಧಿಸಬೇಕು ॥೨೩-೨೪॥

ಆ ಕೂರ್ಮದ ಮೇಲುಗಡೆ, ಬ್ರಹ್ಮಪೀಠದಲ್ಲಿ ಉಪವಿಷ್ಟನಾಗಿಯೂ ಕುಂದಪುಷ್ಪದಂತೆ ಶುಭ್ರವರ್ಣನಾಗಿಯೂ ಚಕ್ರಧರನಾಗಿಯೂ ಭೂಮಿಯನ್ನು ಧರಿಸಿರುವನಾಗಿಯೂ ಇರುವ ಆದಿಶೇಷನನ್ನು ಆರಾಧಿಸಬೇಕು ॥೨೫॥

ಈ ಆದಿಶೇಷನ ಮೇಲುಗಡೆ, ತಮಾಲವೃಕ್ಷದಂತೆ ಶ್ಯಾಮಲವರ್ಣಳಾಗಿಯೂ ನೀಲೋತ್ಪಲದಂತೆ ಪ್ರಕಾಶಮಾನಳಾಗಿಯೂ ಸಮುದ್ರಕಾಂಚಿಯಾಗಿಯೂ ಇರುವ ಶ್ರೀ ಭೂಮಿದೇವಿಯನ್ನಾರಾಧಿಸಬೇಕು ॥ ೨೬॥

ತಸ್ಯಾಂ ಕ್ಷೀರಾರ್ಣವಂ ಶ್ವೇತದ್ವೀಪಂ ಚ ಮಣಿಮಣ್ಟಪಮ್ ।
ಯಜೇತ್ ಕಲ್ಪತರೋರ್ಮೂಲೇ ವೇದಿಕಾಂ ಮಣ್ಡಲೋಜ್ಜ್ವಲಾಮ್ ॥
ಪಶ್ಚಾದಭ್ಯರ್ಚಯೇತ್ ತಸ್ಯಾಂ ಪೀಠಂ ಧರ್ಮಾದಿಭಿಃ ಕ್ರಮಾತ್ ।
ಧರ್ಮಂ ಜ್ಞಾನಂ ಚ ವೈರಾಗ್ಯಂ ಐಶ್ವರ್ಯಂ ಚಾಪ್ಯಧರ್ಮಕಮ್ ।
ಅಜ್ಞಾನಂ ಚಾಪ್ಯವೈರಾಗ್ಯಂ ಅನೈಶ್ವರ್ಯಂ ಯಥಾಕ್ರಮಮ್ ॥೨೯॥
ಆನನ್ದಕನ್ದಂ ಪ್ರಥಮಂ ಸಂವಿನ್ನಾಳಂ ಸರೋರುಹಮ್ ।
ತತ್ತ್ವಂ ಪ್ರಕೃತಿಪತ್ರಾಣಿ ವಿಕಾರಮಯಕೇಸರಾ ॥೩೦॥
ಪಞ್ಚಾಶದ್ವರ್ಣಬೀಜಾಢ್ಯಾಂ ಕರ್ಣಿಕಾಂ ಪೂಜಯೇತ್ ತತಃ ।
ಕಲಾಭಿಃ ಪೂಜಯೇತ್ ಸಾರ್ಧಂ ತಸ್ಯಾಂ ಸೂರ್ಯೇನ್ದುಪಾವಕಾ ॥೩೧॥
ಪ್ರಣವಸ್ಯ ತ್ರಿಭಿರ್ವರ್ಣೈಃ ಅಥ ಸತ್ವಾದಿಕಾ ಗುಣಾ ।
ಸತ್ವಂ ರಜಸ್ತಮೋಭ್ಯರ್ಚ್ಯ ಶುಕ್ಲಂ ರಕ್ತಂ ಚ ಕೃಷ್ಣಕಮ್ ।
ಆತ್ಮಾನ್ತರಾತ್ಮ ಪರಮ ಜ್ಞಾನಾತ್ಮಾನಂ ಸಮರ್ಚಯೇತ್ ॥೩೨॥

ಈ ಭೂಮಿಯೊಳಗೆ ಕ್ಷೀರಸಮುದ್ರವನ್ನೂ, ಅದರಲ್ಲಿ ಶ್ವೇತದ್ವೀಪವನ್ನೂ, ಅದರೊಳಗೆ ರತ್ನಮಂಟಪವನ್ನೂ, ಅದರೊಳಗೆ ಕಲ್ಪವೃಕ್ಷದ ಮೂಲದಲ್ಲಿ ಮಂಡಲಗಳಿಂದ ಉಜ್ವಲವಾಗಿರುವ ರತ್ನವೇದಿಕೆಯನ್ನೂ ಆರಾಧಿಸಬೇಕು ॥೨೭॥

ಆಬಳಿಕ, ಆ ರತ್ನವೇದಿಕೆಯಲ್ಲಿ ಧರ್ಮಾದಿ ನಾಮಗಳಿಂದ ಪೀಠಪೂಜೆಯನ್ನು ಮಾಡಬೇಕು ಎಂದರೆ,—ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯಗಳನ್ನೂ, ಅಧರ್ಮ ಅಜ್ಞಾನ ಅವೈರಾಗ್ಯ ಅನೈಶ್ವರ್ಯಗಳನ್ನೂ ಯಥಾಕ್ರಮವಾಗಿ ಪೂಜಿಸಬೇಕು ॥೨೮॥

ಆಮೇಲೆ ಪೀಠಪೂಜೆ ಮಾಡುವಾಗ, ಪ್ರಥಮತಃ ಆನಂದ ಕಂದವನ್ನೂ, ಬಳಿಕ ಸಂವಿನ್ನಾಳ ತತ್ವಪದ್ಮ ಪ್ರಕೃತಿಪತ್ರ ವಿಕೃತಿಕೇಸರಗಳನ್ನೂ ಪೂಜಿಸಬೇಕು ॥೨೯॥

ಅನಂತರ, ಪಂಚಾಶದ್ವರ್ಣರೂಪವಾದ ಕರ್ಣಿಕೆಯನ್ನು ಆರಾಧಿಸುವುದು. ಆ ಕರ್ಣಿಕೆಯಲ್ಲಿ, ಚಂದ್ರ ಸೂರ್ಯ ವಹ್ನಿಗಳನ್ನು ಅವರ ಕಲೆಗಳೊಡನೆ ಪೂಜಿಸಬೇಕು ॥೩೦॥

ಬಳಿಕ, ಪ್ರಣವದ ಮೂರು ವರ್ಣಗಳಿಂದ (ಅಕಾರ ಉಕಾರ ಮಕಾರ) ಸತ್ವಾದಿ ಗುಣಗಳನ್ನು ಅರ್ಚಿಸುವುದು ಅದರಲ್ಲಿ, ಸತ್ವಗುಣವನ್ನು ಶುಕ್ಲವರ್ಣವನ್ನಾಗಿಯೂ, ರಜೋಗುಣವನ್ನು ರಕ್ತವರ್ಣವನ್ನಾಗಿಯೂ, ತಮೋಗುಣವನ್ನು ಕೃಷ್ಣವರ್ಣವನ್ನಾಗಿಯೂ ಆರಾಧಿಸಬೇಕು. ಅಲ್ಲಿಯೇ,- ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮರನ್ನು ಪೂಜಿಸಬೇಕು ॥೩೧॥

ಪರತತ್ತ್ವಂ ತಥಾ ಚಿತ್ರಂ ವಿದ್ಯಾತತ್ತ್ವಂ ಸುನಿರ್ಮಲಮ್ ।
ನಿರಞ್ಜನಾಖ್ಯಂ ತತ್ತ್ವಂ ಚ ನಿಷ್ಕಳಂ ಚ ತಥಾರ್ಚಯೇತ್ ॥೩೦॥
ತತ್ತ್ವಾನ್ಯೇವಮ್ಯರ್ಚ್ಯ ವಿಧಿವತ್ ಪರಶಕ್ತೀಸ್ತಥಾರ್ಚಯೇತ್ ॥೩೧॥
ವಿಮಲೋತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ಚ ಪಞ್ಚಮೀ ।
ಪ್ರಹ್ವೀ ಸತ್ಯಾ ತಥೇಶಾನಾನ್ತ್ಯನುಗ್ರಹಾ ನವ ಶಕ್ತಯಃ ॥೩೨॥
ತತೋಂ ನಮೋ ಭಗವತೇ ವಿಷ್ಣವೇ ತದನನ್ತರಮ್ ।
ಸರ್ವಭೂತಾತ್ಮನೇ ಚೇತಿ ವಾಸುದೇವಾಯ ಚೇತ್ಯಪಿ ॥೩೩॥
ತತಃ ಸರ್ವಾತ್ಮಕಾಯೇತಿ ಯೋಗಪೀಠಾತ್ಮನೇ ನಮಃ ।
ಮೂಲಯುಕ್ತೋಸ ಚಾನೇನ ದದ್ಯಾತ್ ಪುಷ್ಪಾಞ್ಜಲಿಂ ಪುನಃ ॥೩೪॥
ಪೌರುಷಸ್ಯ ತು ಸೂಕ್ತಸ್ಯ ಷೋಡಶರ್ಚಿಃ ಕ್ರಮಾತ್ ಸುಧೀಃ ।
ಆವಾಹನಾದಿಕಾಂ ಸರ್ವಾಂ ಉಪಚಾರಾಂ ಪ್ರಕಲ್ಪಯೇತ್ ॥೩೫॥
ಚೈತನ್ಯವಿಗ್ರಹಂ ರಾಮಂ ಸ್ಥಿತಂ ಹೃದಯಪಙ್ಕಜೇ ।
ಶ್ವಾಸಮಾರ್ಗೇಣಾಗತಂ ತಂ ಚಿನ್ತಯೇತ್ ಕುಸುಮಾಞ್ಜಲೌ ॥೩೬॥

ಆಮೇಲೆ, ವಿಚಿತ್ರವಾದ ಪರತತ್ವ ನಿರ್ಮಲವಾದ ವಿದ್ಯಾತತ್ವ ನಿರಂಜನತತ್ವ ನಿಷ್ಕಳತತ್ವಗಳನ್ನು ಅರ್ಚಿಸಬೇಕು ॥೩೦॥

ಹೀಗೆ ತತ್ವಗಳನ್ನು ಪೂಜಿಸಿ, ಒಳಿಕ ಯಥಾವಿಧಿಯಾಗಿ ಪರಶಕ್ತಿಗಳನ್ನು ಪೂಜಿಸಬೇಕು ವಿಮಲಾಶಕ್ತಿ ಉತ್ಕರ್ಷಿಣೀಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಯೋಗಶಕ್ತಿ ಪ್ರಹ್ವೀಶಕ್ತಿ ಸತ್ಯಶಕ್ತಿ ಈಶಾನಶಕ್ತಿ ಅನುಗ್ರಹಶಕ್ತಿ, ಇವುಗಳೇ ನವಶಕ್ತಿಗಳು ॥೩೨-೩೫॥

ಒಳಿಕ 'ಓಂನಮೋ ಭಗವತೇ ವಿಷ್ಣವೇ ಸರ್ವ ಭೂತಾತ್ಮನೇ ವಾಸುದೇವಾಯ ಸರ್ವಾತ್ಮಕಾಯ ಯೋಗಪೀಠಾತ್ಮನೇ ನಮಃ' ಎಂಬ ಮಂತ್ರದೊಡನೆ ಮೂಲ ಮಂತ್ರವನ್ನೂ ಸೇರಿಸಿ ಈ ಮಂತ್ರದಿಂದ ಒಂದಾವೃತ್ತಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು ॥೩೩—೩೬॥

ಅನಂತರ, ಪ್ರಾಜ್ಞನಾದ ಆರಾಧಕನು, ಪುರುಷಸೂಕ್ತದ ಹದಿನಾರು ಮಂತ್ರಗಳಿಂದ ಕ್ರಮವಾಗಿ ಆವಾಹನ ಮುಂತಾದ ಉಪಚಾರಗಳನ್ನು ಸಮರ್ಪಿಸಬೇಕು ॥೩೭॥

ಬಳಿಕ ಪುಷ್ಪಾಂಜಲಿಯನ್ನು ಸಮರ್ಪಿಸುವಾಗ, ಕೇವಲ ಚೈತನ್ಯಶರೀರನಾದ ಶ್ರೀರಾಮನು **ಶ್ವಾಸಮಾರ್ಗದಿಂದ** ಪ್ರವೇಶಿಸಿ ಹೃದಯಕಮಲದಲ್ಲಿರುವಂತೆ ಧ್ಯಾನಿಸಬೇಕು ॥೩೮॥

ಪಾದುಕಾಮುದ್ರಯಾನೀಯ ಮೂರ್ತಾ ಸಂಯೋಜ್ಯ ಸಿದ್ಧಯಾ ।
ಮುದ್ರಾಃ ಪ್ರದರ್ಶಯೇತ್ ಸಪ್ತ ದಶ ಚಾವಾಹನಾದಿಕಾಃ ॥೩೯॥
ಆವಾಹನೀ ಸ್ಥಾಪನೀ ಚ ಸನ್ನಿಧಾನಕರಣೀ ತಥಾ ।
ಸುಸನ್ನಿರೋಧಿನೀ ಮುದ್ರಾ ಸಮ್ಮುಖೀಕರಣೀ ತಥಾ ॥೪೦॥
ಸಙ್ಕಲೀಕರಣೀ ಚೈವ ಮಹಾಮುದ್ರಾ ತಥೈವ ಚ
ಶಙ್ಖ ಚಕ್ರ ಗದಾ ಪದ್ಮ ಧೇನು ಕೌಸ್ತುಭ ಗಾರುಡಾಃ ।
ಶ್ರೀವತ್ಸಂ ವನಮಾಲಾಂ ಚ ಯೋನಿಮುದ್ರಾಂ ಚ ದರ್ಶಯೇತ್ ॥೪೧॥
ಏತಾಭಿಃ ಸಪ್ತದಶಭಿಃ ಮುದ್ರಾಭಿಸ್ತು ವಿಚಕ್ಷಣಃ ।
ಯೋ ರಾಮಮರ್ಚಯೇನ್ನಿತ್ಯಂ ಮೋದತೇ ಸ ಸುರೇಶ್ವರಿ ॥೪೨॥
ಸಾಲಗ್ರಾಮೇ ಸ್ಥಾವರೇ ವಾ ನಾವಾಹನವಿಸರ್ಜನೇ ।
ಸಾಲಗ್ರಾಮಶಿಲಾದೌ ತು ನಿತ್ಯಂ ಸನ್ನಿಹಿತೋ ಹರಿಃ ॥೪೩॥
ಆದೌ ಪುಷ್ಪಾಞ್ಜಲಿಂ ದತ್ತ್ವಾ ಪಾದ್ಯಾದೀನಿ ತತಃ ಪರಮ್ ।
ಪಾದ್ಯಮರ್ಘ್ಯಂ ಚಾಚಮನಂ ಮಧುಪರ್ಕಂ ಯಥೋಚಿತಮ್ ॥೪೪॥
ಅಭ್ಯಞ್ಜನೋದ್ವರ್ತನೇ ಕೃತ್ವಾ ಮಹಾಸ್ನಾನಂ ಸಮಾಚರೇತ್ ।
ಅಭಿಷೇಕಾಙ್ಗವಸ್ತ್ರಂ ಚ ದತ್ತ್ವಾ ನೀರಾಜಯೇತ್ ಪ್ರಭುಮ್ ॥೪೫॥

ಪಾದುಕಾಮುದ್ರೆಯನ್ನು ತೋರಿಸಿ, ಅದನ್ನು ಆ ವಿಗ್ರಹದಲ್ಲಿ ಸಮರ್ಪಿಸಿ, ಅಮೇಲೆ ಆವಾಹನೆ ಮುಂತಾದ ಹದಿನೇಳು ಮುದ್ರೆಗಳನ್ನು ತೋರಿಸಬೇಕು ॥೩೯॥

ಆವಾಹನೆ ಸ್ಥಾಪನೆ ಸಂಧಾನಕರಣೆ ಸುಸನ್ನಿರೋಧಿನಿ ಸಮ್ಮುಖೀಕರಣೆ ಸಂಕಲೀಕರಣೆ ಮಹಾಮುದ್ರೆ ಶಂಖಮುದ್ರ ಚಕ್ರಮುದ್ರ ಗದಾಮುದ್ರೆ ಪದ್ಮಮುದ್ರ ಧೇನುಮುದ್ರೆ ಕೌಸ್ತುಭ ಮುದ್ರೆ ಗಾರುಡಮುದ್ರೆ ಶ್ರೀವತ್ಸಮುದ್ರೆ ವನಮಾಲಾಮುದ್ರೆ ಯೋನಿಮುದ್ರೆ, ಇವೇ ಹದಿನೇಳು ಮುದ್ರೆಗಳು ಇವುಗಳನ್ನು ಯಥಾವಿಧಿಯಾಗಿ ತೋರಿಸಬೇಕು ॥೪೦—೪೧॥

ಎಲೌ ಪಾರ್ವತಿ! ವಿಚಕ್ಷಣನಾದ ಯಾವ ಪುರುಷನು, ಈ ಸಪ್ತದಶ ಮುದ್ರೆಗಳಿಂದ ಶ್ರೀರಾಮನನ್ನು ನಿತ್ಯವೂ ಅರ್ಚಿಸುವನೋ, ಅವನು ಸರ್ವದಾ ಸುಖಭಾಜನನಾಗುವನು ॥೪೨॥

ಸಾಲಗ್ರಾಮದಲ್ಲಿಯಾಗಲಿ—ಸ್ಥಿರವಾಗಿ ಪ್ರತಿಷ್ಠೆಮಾಡಿರುವ ವಿಗ್ರಹದಲ್ಲಿಯಾಗಲಿ ಪೂಜೆ ಮಾಡುವುದಾದರೆ, ಆಗ ಆವಾಹನ ವಿಸರ್ಜನಗಳಿರಡೂ ಇಲ್ಲವೆಂದು ತಿಳಿಯಬೇಕು ಏಕೆಂದರೆ,—ಸಾಲಗ್ರಾಮ ಶಿಲೆ ಮುಂತಾದುವುಗಳಲ್ಲಿ ಶ್ರೀಹರಿಯು ಸರ್ವದಾ ಸಾನ್ನಿಧ್ಯ ಮಾಡಿಕೊಂಡಿರುವನು ॥೪೩॥

ಶ್ರೀರಾಮನ ಪೂಜೆಯನ್ನು ಮಾಡತಕ್ಕವನು ಪೂಜಾಪ್ರಾರಂಭದಲ್ಲಿ ಒಂದುಸಲ ಪುಷ್ಪಾಂಜಲಿಯನ್ನು ಸಮರ್ಪಿಸಿ, ಅಮೇಲೆ ಪಾದ್ಯಾದಿಗಳನ್ನು ಸಮರ್ಪಿಸತಕ್ಕುದು. ಪಾದ್ಯ ಅರ್ಘ್ಯ

ಸ್ನಾನಂ ಪುರುಷಸೂಕ್ತೇನ ಶುದ್ಧಂ ಶಙ್ಖೋದಕೇನ ಚ ।
ಕ್ಷೀರದಧ್ಯಾಜ್ಯಮಧುಭಿಃ ತಥಾ ಗನ್ಧೋದಕೇನ ಚ ॥೪೫॥
ಇಕ್ಷುವೇಣೋದಕೇನಾಪಿ ಕರ್ಪೂರೇಣ ಸುಗನ್ಧಿನಾ ।
ಕದಳೀಪನಸಾಮ್ರಾಣಾಂ ಜಲೇನಾಪಿ ಸುಗನ್ಧಿನಾ ॥೪೬॥
ಶತಂ ಸಹಸ್ರಮಯುತಂ ಯಥಾಶಕ್ತ್ಯಭಿಷೇಚಯೇತ್ ।
ತತಃ ಶುದ್ಧಜಲೇನೈವ ಸ್ನಾಪಯೇತ್ ತಮನನ್ಯಧೀಃ ॥೪೭॥
ದತ್ವಾ ಚಾಚಮನೀಯಂ ಚ ವಾಸಸೀ ಪರಿಧಾಪಯೇತ್ ।
ಪೀಠಮಾನೀಯ ಸಂಸ್ಥಾಪ್ಯ ಪಾದುಕಾಮುದ್ರಯಾ ಹರಿಮ್ ।
ಭೂಷಣೈರ್ಭೂಷಯೇದ್ಯೋಗ್ಯೈಃ ತುಲಸೀದಳಮಿಶ್ರಿತೈಃ ॥೪೯॥
ಮೂಲೇನ ಚಾರ್ಚಯೇದ್ಗನ್ಧಪುಷ್ಪಾಜ್ಜ್ಯಪ್ತಕಂ ತತಃ ॥೫೦॥
ವಾಮಭಾಗೇ ಸಮಾಸೀನಾಂ ಸೀತಾಂ ಕಾಞ್ಚನಸನ್ನಿಭಾಮ್ ।
ಪೂಜಯಿತ್ವಾಥ ರಾಮಸ್ಯ ದಕ್ಷಿಣೇ ಲಕ್ಷ್ಮಣಂ ಯಜೇತ್ ॥೫೧॥

ಆಚಮನೀಯ ಮಧುಪರ್ಕಗಳನ್ನು ಯಥಾಯೋಗ್ಯವಾಗಿ ಸಮರ್ಪಿಸಿ, ಅಭ್ಯಂಗವನ್ನೂ ಉದ್ವರ್ತನ(ಸ್ನಾನಚೂರ್ಣ)ವನ್ನೂ ಮಾಡಿಸಿ, ಬಳಿಕ ಮಹಾಭಿಷೇಕವನ್ನು ಮಾಡಬೇಕು ಅಭಿಷೇಕಾಂಗವಾದ ವಸ್ತ್ರವನ್ನು ಸಮರ್ಪಿಸಿ, ಸ್ವಾಮಿಗೆ ನೀರಾಜನವನ್ನೆತ್ತಬೇಕು ॥೪೪—೪೫॥

ಪುರುಷಸೂಕ್ತವನ್ನು ಪಾರಾಯಣಮಾಡುತ್ತ, ಶುದ್ಧವಾದ ಶಂಖೋದಕದಿಂದ ಸ್ನಾನ ಮಾಡಿಸಬೇಕು ಕ್ಷೀರ ದಧಿ ಆಜ್ಯ ಮಧು ಗಂಧೋದಕ ಇಕ್ಷೂದಕ (ಕಬ್ಬಿನರಸ) ಸುಗಂಧವಾದ ಕರ್ಪೂರ ಕದಳೀರಸ (ಬಾಳಯ ಹಣ್ಣಿನ ಪಂಚಾಮೃತ) ಪನಸರಸ (ಹಲಸಿನಹಣ್ಣಿನ ಪಂಚಾಮೃತ) ಆಮ್ರರಸ (ಮಾವಿನಹಣ್ಣಿನರಸಾಯನ)–ಇವುಗಳಿಂದ ಯಥಾಶಕ್ತಿಯಾಗಿ ನೂರಾವೃತ್ತಿಯಾಗಲಿ ಸಾವಿರಾವೃತ್ತಿಯಾಗಲಿ ಹತ್ತುಸಾವಿರಾವೃತ್ತಿಯಾಗಲಿ ತನ್ನ ಕೈಲಾದಷ್ಟು ಸಲವಾಗಲಿ ಅಭಿಷೇಕ ಮಾಡಬೇಕು ಇವುಗಳೆಲ್ಲವೂ ಆದ ಮೇಲೆ, ಅನನ್ಯಚಿತ್ತನಾಗಿ ಶುದ್ಧೋದಕದಿಂದ ಸ್ನಾನಮಾಡಿಸಬೇಕು ॥೪೬—೪೭॥

ಅನಂತರ ಆಚಮನೀಯವನ್ನು ಕೊಟ್ಟು, ವಸ್ತ್ರಗಳನ್ನು ಸಮರ್ಪಿಸಬೇಕು ಆಮೇಲೆ ಪೀಠವನ್ನು ಹಾಕಿ, ಅಲ್ಲಿ ಪಾದುಕಾಮುದ್ರೆಯಿಂದ ಶ್ರೀಪರಿಯನ್ನು ಕುಳ್ಳಿರಿಸಿ, ತುಲಸೀದಳಯುಕ್ತವಾಗಿರುವ ಆಭರಣಗಳಿಂದ ಯಥಾಯೋಗ್ಯವಾಗಿ ಅಲಂಕಾರಮಾಡಬೇಕು ಆಮೇಲೆ ಮೂಲಮಂತ್ರದಿಂದ ಅರ್ಚನೆಮಾಡಿ, ಗಂಧ ಮಿಶ್ರವಾದ ಕುಸುಮಾಂಜಲಿಯನ್ನು ಎಂಟಾವೃತ್ತಿ ಸಮರ್ಪಿಸಬೇಕು ॥೪೯—೫೦॥

ಹೀಗೆ ಪೂಜೆಮಾಡಿದ ಬಳಿಕ, ಶ್ರೀರಾಮನ ಎಡಭಾಗದಲ್ಲಿ ಕುಳಿತಿರುವ ಸುವರ್ಣವರ್ಣವಾದ ಸೀತಾದೇವಿಯನ್ನು ಅರ್ಚಿಸಬೇಕು, ಆಮೇಲೆ, ರಾಮನಿಗೆ ಬಲಭಾಗದಲ್ಲಿ ಲಕ್ಷ್ಮಣನನ್ನು ಅರ್ಚಿಸಬೇಕು ॥೫೧॥

ವಾಮಭಾಗೇ ತ್ರಿಕೋಣಸ್ಯ ಶಾರ್ಙ್ಗಂ ದಕ್ಷಿಣಕೇಸರಾತ್ ।
ಪೂಜಾನುಜ್ಞಾಂ ತತೋ ಲಬ್ಧ್ವಾ ಬಹಿರಙ್ಗಾಂಸ್ತಥಾರ್ಚಯೇತ್ ॥೫೨॥
ಪ್ರಾಗಾದಿ ಷಟ್ಸು ಕೋಣೇಷು ಹೃದಾದ್ಯಙ್ಗಾನಿ ಷಡ್ಯಜೇತ್ ॥೫೩॥
ತತಃ ಶಙ್ಖೋದಕಂ ಪುಷ್ಪಸಹಿತಂ ಗೃಹ್ಯ ತತ್ತ್ವತಃ ।
ದಯಾಬ್ಧೇ ಪಾಹಿ ಸಂಸಾರಸರ್ಪಾನ್ನಾಂ ತ್ರಾಹಿ ರಾಘವ।
ಭಕ್ತ್ಯಾ ತ್ವಯಿ ಸಮರ್ಪಯೇ ಚಾಹಂ ಪ್ರಥಮಾವರಣಾರ್ಚನಮ್ ॥೫೪॥
ಏವಂ ದಯಾಬ್ಧೇ ಪಾಹೀತಿ ಶ್ಲೋಕಮುಚ್ಚಾರ್ಯ ಭಕ್ತ್ಯಾ ।
ಪ್ರತ್ಯಾವರಣಪೂಜಾಂ ತು ರಾಘವಾಯಾರ್ಪಯೇತ್ ಸುಧೀಃ ॥೫೫॥
ದ್ವಿತೀಯಾತ್ಮಾದಿಕೈರ್ದೇವೈಃ ಅಷ್ಟಪತ್ರದಳಮೂಲಕೇ ।
ಆತ್ಮಾನ್ತರಾತ್ಮಪರಮಜ್ಞಾನಾತ್ಮಾನಂ ಕ್ರಮಾದ್ಯಜೇತ್ ॥೫೬॥
ನಿವೃತ್ತಿಂ ಚ ಪ್ರವೃತ್ತಿಂ ಚ ವಿದ್ಯಾಂ ಶಾನ್ತಿಂ ವಿದಿಕ್ಷು ತು ।
ವಾಸುದೇವಂ ಶ್ರಿಯಂ ಸಙ್ಕರ್ಷಣಂ ಶಾನ್ತಿಂ ದಳಾನ್ತರೇ ॥೫೭॥
ಪ್ರದ್ಯುಮ್ನಂ ಪ್ರೀತಿಮಮಲಾಂ ಅನಿರುದ್ಧಂ ರತಿಂ ಯಜೇತ್ ॥೫೮॥

ತ್ರಿಕೋಣಚಕ್ರದ ಬಲಗಡೆಯ ಕೇಸರಕ್ಕೆ ಎಡಭಾಗದಲ್ಲಿ, ಮಹಾವಿಷ್ಣುವಿನ ಧನುಸ್ಸಾದ ಶಾರ್ಙ್ಗವನ್ನು ಪೂಜಿಸಬೇಕು ಅನಂತರ ಪೂಜೆಗೆ ಅನುಜ್ಞೆಯನ್ನು ಪ್ರಾರ್ಥಿಸಿ, ಬಹಿರಂಗದೇವತೆಗಳನ್ನು ಪೂಜಿಸಬೇಕು ॥೫೨॥

ಷಟ್ಕೋಣಚಕ್ರದ ಆರು ಕೋಣಗಳಲ್ಲಿಯೂ, ಪೂರ್ವಾದಿಯಾಗಿ ಹೃದಯ ಮೊದಲಾದ ಆರು ಜ್ಞಾನೇಂದ್ರಿಯಗಳನ್ನು ಅರ್ಚಿಸಬೇಕು ಆ ಬಳಿಕ, ಪುಷ್ಪಸಹಿತವಾದ ಶಂಖೋದಕವನ್ನು ಕೈಲಿ ಹಿಡಿದುಕೊಂಡು, ಭಕ್ತಿಯಿಂದ 'ಎಲೈ ಕರುಣಾಸಾಗರನೆ! ನನ್ನನ್ನು ಪರಿಪಾಲಿಸು ಎಲೈ ರಾಘವನೆ! ಈ ಸಂಸಾರಸರ್ಪದ ದೆಸೆಯಿಂದ ನನ್ನನ್ನು ರಕ್ಷಿಸು ನಾನು ಮಾಡಿದ ಈ ಪ್ರಥಮಾವರಣಪೂಜೆಯನ್ನು ನಿನಗೆ ಭಕ್ತಿಯಿಂದ ಸಮರ್ಪಿಸುವೆನು' ಎಂದು ಹೇಳಿ, ಪ್ರಥಮಾವರಣ ಪೂಜೆಯನ್ನು ಸಮರ್ಪಿಸಬೇಕು ॥೫೩-೫೪॥

ಹೀಗೆಯೇ ಪ್ರಾಜ್ಞನಾದ ಅರ್ಚಕನು, ಪ್ರತಿಯೊಂದು ಪೂಜೆಯಲ್ಲಿಯೂ 'ದಯಾಬ್ಧೇ ಪಾಹಿ' ಎಂಬ ಶ್ಲೋಕವನ್ನು ಭಕ್ತಿಯಿಂದ ಹೇಳುತ್ತ, ಆಯಾ ಆವರಣಪೂಜೆಯನ್ನು ಸಮರ್ಪಿಸಬೇಕು ॥೫೫॥

ಅನಂತರ ಅಷ್ಟದಳಪದ್ಮದ ಮೂಲದಲ್ಲಿ ಆತ್ಮಾದಿದೇವತೆಗಳಿಂದ ದ್ವಿತೀಯಾವರಣಪೂಜೆ ಮಾಡಲ್ಪಡಬೇಕು ಅಲ್ಲಿ ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮರನ್ನು ಕ್ರಮವಾಗಿ ಪೂಜಿಸಬೇಕು ॥೫೬॥

ಅಷ್ಟದಳಪದ್ಮದ ವಿದಿಕ್ಕುಗಳಲ್ಲಿ ನಿವೃತ್ತಿ ಪ್ರವೃತ್ತಿ ವಿದ್ಯಾ ಶಾಂತಿಗಳನ್ನೂ, ಅಷ್ಟದಳ ಪದ್ಮದ ದಳಮಧ್ಯಗಳಲ್ಲಿ ವಾಸುದೇವ ಶ್ರೀದೇವಿ ಸಂಕರ್ಷಣ ಶಾಂತಿ ಪ್ರದ್ಯುಮ್ನ ಪ್ರೀತಿ ಅನಿರುದ್ಧ ರತಿಗಳನ್ನೂ ಆರಾಧಿಸಬೇಕು ಇದು ತೃತೀಯಾವರಣ ಪೂಜೆಯು ॥೫೭—೫೮॥

ಪ್ರಥಮಾದಿದಳಾನ್ತೇಷು ಹನೂಮನ್ತಂ ಚ ಸೂರ್ಯಜಮ್ ।
ಭರತಂ ಚಾಪಿ ವೌಲಸ್ತ್ಯಂ ಲಕ್ಷ್ಮಣಂ ಚಾಬ್ಜದಂ ಕ್ರಮಾತ್ ।
ಶತ್ರುಘ್ನಂ ಜಾಮ್ಬವನ್ತಂ ಚ ಚತುರ್ಥಾವರಣೇ ಯಜೇತ್ ॥೫೯॥
ಧೃಷ್ಟಿಂ ಜಯನ್ತಂ ವಿಜಯಂ ಸುರಾಷ್ಟ್ರಂ ರಾಷ್ಟ್ರವರ್ಧನಮ್ ।
ಅಶೋಕಂ ಧರ್ಮಪಾಲಂ ಚ ಸುಮನ್ತ್ರಂ ಪಞ್ಚಮಾವೃತೌ ॥೬೦॥
ದ್ವಿತೀಯಾಷ್ಟದಳೇಪ್ಯರ್ಯೇ ಮನ್ತ್ರಿಣಃ ಪೂಜ್ಯ ಮನ್ತ್ರವಿತ್ ।
ಋಷೀನ್ ಷಷ್ಠಾವೃತೌ ಪಶ್ಚಾತ್ ಯಜೇದ್ದ್ವಾದಶಪತ್ರಕೇ ॥೬೧॥
ವಸಿಷ್ಠಂ ವಾಮದೇವಂ ಚ ಜಾಬಾಲಿಂ ಗೌತಮಂ ಕ್ರಮಾತ್ ।
ಭರದ್ವಾಜಂ ಕೌಶಿಕಂ ಚ ವಾಲ್ಮೀಕಿಂ ನಾರದಂ ತಥಾ ॥೬೨॥
ಸನಕಂ ಚ ಸನನ್ದಂ ಚ ಸನಾತನಮುನಿಂ ಯಜೇತ್ ।
ಸನತ್ಕುಮಾರಂ ಪ್ರಾಗಾದಿ ರಾಮಮನ್ತ್ರಪರಾ ಮುನೀನ್ ॥೬೩॥
ಸಪ್ತಮಾವರಣೇ ಪಶ್ಚಾತ್ ಷೋಡಶಾಬ್ಜೇರ್ಚಯೇತ್ ಸುಧೀಃ ।
ನಳಂ ನೀಲಂ ಚ ಗವಯಂ ಗವಾಕ್ಷಂ ಗನ್ಧಮಾದನಮ್ ।
ಶರಭಂ ಚ ಕಪಿಂ ಮೈನ್ದಂ ದ್ವಿವಿದಂ ಚ ಕ್ರಮಾದ್ಯಜೇತ್ ॥೬೪॥
ಕಿರೀಟಂ ಕುಣ್ಡಲೇ ಶ್ರೀವತ್ಸ ಕೌಸ್ತುಭಂ ತಥಾ ।
ಶಙ್ಖಂ ಚಕ್ರಂ ಗದಾಂ ಪದ್ಮಂ ಷೋಡಶಾಬ್ಜೇರ್ಚಯೇತ್ ತತಃ ॥೬೫॥

ಈ ಅಷ್ಟದಳಪದ್ಮದ ಪೂರ್ವಾದಿದಳಗಳ ಅಗ್ರಭಾಗದಲ್ಲಿ, ಹನೂಮಂತ ಸುಗ್ರೀವ ಭರತ ವಿಭೀಷಣ ಲಕ್ಷ್ಮಣ ಅಂಗದ ಶತ್ರುಘ್ನ ಜಾಂಬವಂತರನ್ನು ಕ್ರಮವಾಗಿ ಪೂಜಿಸಬೇಕು ಇದು ಚತುರ್ಥಾವರಣ ಪೂಜೆಯು ॥೫೯॥

ಧೃಷ್ಟಿ ಜಯಂತ ವಿಜಯ ಸುರಾಷ್ಟ್ರ ರಾಷ್ಟ್ರವರ್ಧನ ಅಶೋಕ ಧರ್ಮಪಾಲ ಸುಮಂತ್ರ—ಇವರುಗಳನ್ನು ಪಂಚಮಾವರಣದಲ್ಲಿ ಪೂಜಿಸಬೇಕು ಏಳೆ ಪಾರ್ವತಿ! ಚಕ್ರದಲ್ಲಿ ಎರಡನೆಯ ಅಷ್ಟದಳ ಪದ್ಮದ ಪತ್ರಗಳಲ್ಲಿ ಈ ಮಂತ್ರಿಗಳನ್ನು ಪೂಜಿಸಿ, ಒಳಿಕ ಮಂತ್ರಜ್ಞನಾದ ಪೂಜಕನು ದ್ವಾದಶದಳಪದ್ಮದಲ್ಲಿ ಷಷ್ಠಾವರಣ ಪೂಜೆಯನ್ನು ಋಷಿಗಳನ್ನು ಉದ್ದೇಶಿಸಿ ಮಾಡಬೇಕು ॥೬೦—೬೧॥

ವಸಿಷ್ಠ ವಾಮದೇವ ಜಾಬಾಲಿ ಗೌತಮ ಭರದ್ವಾಜ ವಿಶ್ವಾಮಿತ್ರ ವಾಲ್ಮೀಕಿ ನಾರದ ಸನಕ ಸನಂದನ ಸನಾತನ ಸನತ್ಕುಮಾರರೆಂಬ ರಾಮಮಂತ್ರಜಪತತ್ಪರರಾದ ಮಹರ್ಷಿಗಳನ್ನು ಷಷ್ಠಾವರಣದಲ್ಲಿ ಪೂಜಿಸಬೇಕು ॥೬೨-೬೩॥

ಅನಂತರ, ಷೋಡಶದಳಪದ್ಮದ ದಳಗಳಲ್ಲಿ, ನಳ ನೀಲ ಗವಯ ಗವಾಕ್ಷ ಗಂಧಮಾದನ ಶರಭ ಮೈಂದ ದ್ವಿವಿದರೆಂಬ ಕಪಿಗಳನ್ನೂ, ಕಿರೀಟ ಕುಂಡಲ ಶ್ರೀವತ್ಸ ಕೌಸ್ತುಭ ಶಂಖ ಚಕ್ರ ಗದಾ ಪದ್ಮಗಳನ್ನೂ ಆರಾಧಿಸಬೇಕು ಇದು ಸಪ್ತಮಾವರಣ ಪೂಜೆಯು ॥೬೪-೬೫॥

ಧ್ರುವೋ ಧರ್ಮಶ್ಚ ಸೋಮಶ್ಚ ಅಪಶ್ಚೈವಾನಿಲೋಽನಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟೌ ಪ್ರಕೀರ್ತಿತಾಃ ॥೬೬॥
ವೀರಭದ್ರಶ್ಚ ಶಮ್ಭುಶ್ಚ ಗಿರೀಶಶ್ಚ ಮಹಾಯಶಾಃ ।
ಅಜೈಕಪಾದಹಿರ್ಬುಧ್ನ್ಯಃ ಪಿನಾಕೀ ಚಾಪರಾಜಿತಃ ॥೬೭॥
ಭುವನಾಧೀಶ್ವರಶ್ಚೈವ ಕಪಾಲೀ ಚ ದಿಶಾಂ ಪತಿಃ ।
ಸ್ಥಾಣುರ್ಭಗಶ್ಚ ಭಗವಾನ್ ರುದ್ರಾಶ್ಚೈಕಾದಶ ಸ್ಮೃತಾಃ ॥೬೮॥
ಅರುಣಃ ಸೂರ್ಯವೇದಾಙ್ಗೌ ಭಾನುರಿನ್ದ್ರೋ ರವಿಸ್ತಥಾ ।
ಗಭಸ್ತೀ ತ್ವರ್ಯಮಾ ಸ್ವರ್ಣರೇತಾಶ್ಚಾಥ ದಿವಾಕರಃ ।
ಮಿತ್ರೋ ವಿಷ್ಣುರಿತಿ ಪ್ರೋಕ್ತಾಃ ಅದಿತ್ಯಾ ಅದಿತೇಃ ಕ್ರಮಾತ್ ॥೬೯॥
ದ್ವಾತ್ರಿಂಶತ್ಪದ್ಮಕೇಷ್ವೇತಾನ್ ಅಷ್ಟಮಾವರಣೇಽರ್ಚಯೇತ್ ॥೭೦॥
ಭೂಗೃಹೇ ಪ್ರಥಮೇ ಪೂಜ್ಯಾಃ ಇನ್ದ್ರಾದ್ಯಾನವಮಾವೃತೇಃ ।
ತದಸ್ತ್ರೈಭೂಗೃಹೇಽನ್ಯಸ್ಮಿನ್ ದಶಮಾವರಣಂ ಭವೇತ್ ॥೭೧॥
ಪೂರ್ವಪಶ್ಚಿಮಯೋರ್ವಿಷ್ಣುಂ ವಿಧಿಂ ಯನ್ತ್ರಬಹಿಃ ಕ್ರಮಾತ್ ।
ನಕ್ಷತ್ರಾಣಿ ಗ್ರಹಾನಷ್ಟೌ ಶೇಷಾನ್ ಪೂರ್ವಾದಿತೋ ಯಜೇತ್ ॥೭೨॥

ಧ್ರುವ ಧರ್ಮ ಸೋಮ ಆಪ ಅನಿಲ ಅನಲ ಪ್ರತ್ಯೂಷ ಪ್ರಭಾಸ–ಎಂಬ ಈ ಎಂಟುಮಂದಿಯೂ ಅಷ್ಟವಸುಗಳೆಂದು ಹೇಳಲ್ಪಟ್ಟಿರುವರು ವೀರಭದ್ರ ಶಂಭು ಗಿರೀಶ ಅಜೈಕಪಾತ್ ಅಹಿರ್ಬುಧ್ನ್ಯ ಪಿನಾಕಿ ಭುವನಾಧೀಶ್ವರ ಕಪಾಲಿ ದಿಶಾಂಪತಿ ಸ್ಥಾಣು ಭಗ-ಎಂಬ ಹನ್ನೊಂದುಮಂದಿಯೂ ಏಕಾದಶರುದ್ರರೆನ್ನಿಸುವರು ಅರುಣ ಸೂರ್ಯ ವೇದಾಂಗ ಭಾನು ಇಂದ್ರ ರವಿ ಗಭಸ್ತಿ ಅರ್ಯಮ ಸ್ವರ್ಣರೇತ ದಿವಾಕರ ಮಿತ್ರ ವಿಷ್ಣು–ಈ ಹನ್ನೆರಡು ಮಂದಿಯೂ ದ್ವಾದಶಾದಿತ್ಯರೆನ್ನಿಸುವರು ಒಟ್ಟುಗೂಡಿ ಈ ಮುವ್ವತ್ತೊಂದು ದೇವತೆಗಳಜಂಗೆ ಅದಿತಿಯನ್ನು ಸೇರಿಸಬೇಕು. ಹೀಗೆ ಈ ಮುವ್ವತ್ತೆರಡು ದೇವತೆಗಳನ್ನೂ, ದ್ವಾತ್ರಿಂಶದ್ದಳಪದ್ಮದ ದಳಗಳಲ್ಲಿ ಪೂರ್ವಾದಿಕ್ರಮದಿಂದ ಆವಾಹಿಸಿ ಪೂಜಿಸಬೇಕು. ಇದು ಅಷ್ಟಮಾವರಣ ಪೂಜೆಯು ॥೬೬—೭೦॥

ಆಮೇಲೆ ಭೂಪುರದ ಪ್ರಥಮವೀಥಿಯಲ್ಲಿ ಇಂದ್ರಾದಿ ದಿಕ್ಪಾಲಕರನ್ನು ಪೂಜಿಸುವುದು. ಇದು ನವಮಾವರಣ ಪೂಜೆಯು ಈ ಇಂದ್ರಾದಿಗಳ ಅಸ್ತ್ರಗಳನ್ನು ಭೂಪುರದ ದ್ವಿತೀಯವೀಥಿಯಲ್ಲಿ ಆರಾಧಿಸಬೇಕು. ಇದು ದಶಮಾವರಣಪೂಜೆಯು ॥೭೧॥

ಯಂತ್ರದ ಬಹಿರ್ಭಾಗದಲ್ಲಿ, ಪೂರ್ವದಿಕ್ಕಿನಲ್ಲಿ ವಿಷ್ಣುವನ್ನೂ, ಪಶ್ಚಿಮದಿಕ್ಕಿನಲ್ಲಿ ಬ್ರಹ್ಮನನ್ನೂ, ಪೂರ್ವಾದಿ ದಿಕ್ಕುಗಳಲ್ಲಿ– ಕ್ರಮವಾಗಿ ಸೂರ್ಯಾದಿಯಾದ (೧) ಅಷ್ಟಗ್ರಹಗಳನ್ನೂ ನಕ್ಷತ್ರಗಳನ್ನೂ ಇನ್ನೂ ಅವಶಿಷ್ಟರಾದ ದೇವತೆಗಳನ್ನೂ ಆರಾಧಿಸಬೇಕು ॥೭೨॥

(೧) ರಾಹು ಕೇತುಗಳಿಬ್ಬರನ್ನೂ ಒಟ್ಟುಸೇರಿಸಿ ಒಂದೇ ಗ್ರಹವಾಗಿ ಪೂಜಿಸುವುದು

ನಾಮಮನ್ತ್ರೈರ್ನಮಸ್ಕಾರಚತುರ್ಥ್ಯನ್ತೈಶ್ಚ ಪೂಜಯೇತ್ ।
ದಶಾವರಣಪೂಜೇಯಂ ಕರ್ತವ್ಯಾ ರಾಘವಾರ್ಚಕೈಃ ।
ಸಕಾಮೋ ಭುಕ್ತಿಮಾಪ್ನೋತಿ ನಿಷ್ಕಾಮೋ ಮುಕ್ತಿಭಾಗ್ಭವೇತ್ ॥೭೩॥
ಏವಂ ಮಹಾರ್ಚನಂ ಕರ್ತುಂ ಅಶಕ್ತೋ ಯೋಽಲಸಃ ಶಿವೇ ।
ತಸ್ಯ ಯನ್ತ್ರಾನ್ತರಂ ಸೂಕ್ಷ್ಮಂ ಪೂಜಾರ್ಥಂ ವಕ್ಷ್ಯೆ ತಚ್ಛೃಣು ॥೭೪॥

ಇತಿ ಶ್ರೀಮದರಣ್ಯಕಾಣ್ಡೇ ಶ್ರೀರಾಮಯನ್ತ್ರದಶಾವರಣಪೂಜಾವಿಧಿ
ಕಥನಂ ನಾಮ ಚತುರ್ಥಃ ಸರ್ಗಃ



ಈ ಆವರಣದೇವತೆಗಳನ್ನೆಲ್ಲ, ಚತುರ್ಥ್ಯನ್ತವಾದ ನಾಮಮಂತ್ರಗಳಿಗೆ (೧) ನಮಶ್ಶಬ್ದವನ್ನು ಸೇರಿಸಿ ೮ ಮಂತ್ರದಿಂದ ಪೂಜಿಸಬೇಕು ಶ್ರೀರಾಮನನ್ನು ಪೂಜಿಸತಕ್ಕವರು ಈ ದಶಾವರಣ ಪೂಜೆಯನ್ನು ಅವಶ್ಯಕವಾಗಿ ಮಾಡಬೇಕು ಸಕಾಮನಾಗಿ ಪೂಜಿಸಿದವನು ಐಹಿಕ ಭೋಗವನ್ನು ಪಡೆಯುವನು, ನಿಷ್ಕಾಮನಾಗಿ ಪೂಜಿಸಿದವನು ಮೋಕ್ಷಭಾಗಿಯಾಗುವನು ಇದರಲ್ಲಿ ಸಂಶಯವಿಲ್ಲ ॥೭೩॥

ಎಲೌ ಪಾರ್ವತಿ! ಈಗ ನಾನು ಹೇಳಿದುದು ಮಹಾಪೂಜೆಯೆನ್ನಿಸುವುದು ಯಾವನು ಅಶಕ್ತಿಯಿಂದ ಈ ಮಹಾಪೂಜೆಯನ್ನು ಮಾಡಲು ಸಾಮರ್ಥ್ಯವಿಲ್ಲದವನಾಗುವನೋ, ಅಂಥವನು ಪೂಜಿಸುವುದಕ್ಕೋಸ್ಕರವಾಗಿ ಸೂಕ್ಷ್ಮವಾದ ಮತ್ತೊಂದು ಯಂತ್ರವನ್ನು ಹೇಳುವೆನು, ಅದನ್ನು ಕೇಳುವಳಾಗು ॥೭೪॥

ಇದು ಅರಣ್ಯಕಾಂಡದಲ್ಲಿ ಶ್ರೀರಾಮಯಂತ್ರ ದಶಾವರಣಪೂಜಾವಿಧಿ ಕಥನವೆಂಬ
ನಾಲ್ಕನೆಯ ಸರ್ಗವು



(೧) ಭರತಾಯನಮಃ, ಲಕ್ಷ್ಮಣಾಯನಮಃ, ಇತ್ಯಾದಿ ರೀತಿಯಾಗಿ ಹೇಳಬೇಕೆಂದು ತಾತ್ಪರ್ಯವು

ಅಥ ಶ್ರೀಮದರಣ್ಯಕಾಂಡೇ ಪಞ್ಚಮಃ ಸರ್ಗಃ.

ಶ್ರೀಶಿವಉವಾಚ

ಆದೌ ಷಟ್ಕೋಣಮಾಲಿಖ್ಯ ತದ್ಬಹಿಶ್ಚಾಷ್ಟಪತ್ರಕಮ್ ;
ಲಿಖ್ಯ ಪೂರ್ವೋಕ್ತಮಾರ್ಗೇಣ ತನ್ಮಧ್ಯೇ ಪೀಠಮರ್ಚಯೇತ್ ।
ತತಃ ಕ್ರಮಾದಾಶುವಸ್ಯ ಕುರ್ಯಾದ್ಭೂಷಾನ್ತಪೂಜನಮ್ ॥೧॥
ತದ್ವಾಮಭಾಗೇ ವೈದೇಹೀಂ ಸೀತಾಂ ತನ್ಮನ್ತ್ರತೋ ಯಜೇತ್ ॥೨॥
ದಕ್ಷಿಣೇ ಲಕ್ಷ್ಮಣಃ ಪೂಜ್ಯೋ ರಾಘವಸ್ಯಾತ್ಮಮನ್ತ್ರತಃ ।
ತ್ರಿಕೋಣವಾಮೇ ಶಾರ್ಙ್ಗಂ ಚ ಯಜೇದ್ದಕ್ಷಿಣಕೇಸರಾತ್ ॥೩॥
ಪ್ರಧಾನಪೂಜಾಂ ಕೃತ್ವೈವಂ ಬಹಿರಙ್ಗಾನ್ತತೋ ಯಜೇತ್ ।
ಪ್ರಾಗಾದಿ ಷಟ್ಸು ಕೋಣೇಷು ಹೃದಾದ್ಯಙ್ಗಾನಿ ಪೂಜಯೇತ್ ॥೪॥
ಹನೂಮನ್ತಂ ಚ ಸುಗ್ರೀವಂ ಭರತಂ ಚ ವಿಭೀಷಣಮ್ ।
ಲಕ್ಷ್ಮಣಾಙ್ಗದಶತ್ರುಘ್ನಾನ್ ಜಾಮ್ಬವನ್ತಂ ದಳಾದಿಷು ॥೫॥

ಅರಣ್ಯಕಾಂಡದಲ್ಲಿ ಅಯ್ದನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಸೂಕ್ಷ್ಮವಾಗಿರುವ ಒಂದುಯಂತ್ರವನ್ನು ಈಗ ಕೇಳುವಳಾಗು,–ಮೊದಲು ಷಟ್ಕೋಣ ಚಕ್ರವನ್ನು ಬರೆದು, ಅದರ ಹೊರಗೆ ಅಷ್ಟದಳ ಕಮಲವನ್ನು ಒರೆಯುವುದು. ಅದರ ಮಧ್ಯದಲ್ಲಿ ಪೂರ್ವೋಕ್ತ ಕ್ರಮವಾಗಿ ಪೀಠಪೂಜೆಯನ್ನು ಮಾಡುವುದು ಅನಂತರ, ಶ್ರೀರಾಮನಿಗೆ ಅಲಂಕಾರಾಂತವಾಗಿ ಪೂಜೆಯನ್ನು ಮಾಡಬೇಕು ॥೧॥

ಅವನ ಎಡಭಾಗದಲ್ಲಿ, ಶ್ರೀಸೀತಾದೇವಿಯನ್ನು ಅವಳ ನಾಮ ಮಂತ್ರದಿಂದ ಪೂಜಿಸುವುದು, ಶ್ರೀರಾಮನ ಬಲಭಾಗದಲ್ಲಿ, ಲಕ್ಷ್ಮಣನನ್ನು ಅವನ ನಾಮಮಂತ್ರದಿಂದ ಅರ್ಚಿಸಬೇಕು ತ್ರಿಕೋಣದ ಎಡಗಡೆಯಲ್ಲಿ, ಒಲಭಾಗದ ಕೇಸರದಮೇಲೆ ಶಾರ್ಙ್ಗಧನುಸ್ಸನ್ನು ಆರಾಧಿಸುವುದು ॥೨-೩॥

ಹೀಗೆ ಪ್ರಧಾನಪೂಜೆಯನ್ನು ಮಾಡಿ, ಒಳಿಕ ಬಹಿರಂಗದೇವತೆಗಳನ್ನು ಆರಾಧಿಸಬೇಕು ಷಟ್ಕೋಣಗಳಲ್ಲಿ ಪೂರ್ವಾದಿಕ್ರಮವಾಗಿ ಹೃದಯಮೊದಲಾದ ಆರು ಜ್ಞಾನೇಂದ್ರಿಯಗಳನ್ನು ಅರ್ಚಿಸಬೇಕು ॥೪॥

ಆಮೇಲೆ, ಅಷ್ಟದಳಪದ್ಮದ ದಳಗಳಲ್ಲಿ, ಪೂರ್ವಾದಿಕ್ರಮವಾಗಿ, ಹನುಮಂತ ಸುಗ್ರೀವ ಭರತ ವಿಭೀಷಣ ಲಕ್ಷ್ಮಣ ಅಂಗದ ಶತ್ರುಘ್ನ ಜಾಂಬವಂತರನ್ನು ಆರಾಧಿಸಬೇಕು ॥೫॥

ಧೃಷ್ಟಿಂ ಜಯಂತಂ ವಿಜಯಂ ಸುರಾಷ್ಟ್ರಂ ರಾಷ್ಟ್ರವರ್ಧನಮ್ ।
ಅಶೋಕಂ ಧರ್ಮಪಾಲಂ ಚ ಸುಮಂತ್ರಂ ದಳಮಧ್ಯತಃ ।
ದಳಾಗ್ರೇ ಲೋಕಪಾಲಾಂಶ್ಚ ತದಸ್ತ್ರಾಣಿ ತತೋ ಬಹಿಃ ॥೬॥
ತತಃ ಸಹಸ್ರನಾಮಾದ್ಯೈಃ ಅಷ್ಟೋತ್ತರಶತೇನ ವಾ ॥೭।
ತುಲಸೀಕುಂದಪದ್ಮಾದ್ಯೈಃ ಮಾಲತೀಮಲ್ಲಿಕಾದಿಭಿಃ ।
ಕರವೀರೈಶ್ಚಂಪಕಾದ್ಯೈಃ ರಾಮಂ ಸಮ್ಪೂಜಯೇತ್ ತತಃ ।೮॥
ವನಸ್ಪತಿರಸೋತ್ಪನ್ನಃ ಇತಿ ಧೂಪಂ ನಿವೇದ್ಯ ಚ ।
ಸಾಜ್ಯಂ ತ್ರಿವರ್ತಿಸಂಯುಕ್ತಂ ಇತಿ ದೀಪಂ ಪ್ರದರ್ಶಯೇತ್ ।೯॥
ತತೋ ಮೃಷ್ಟಂ ಷಡ್ರಸಾನ್ನಂ ಭಕ್ಷ್ಯಭೋಜ್ಯಫಲಾನ್ವಿತಮ್ ।
ನೈವೇದ್ಯಂ ತುಲಸೀಯುಕ್ತಂ ಸಮ್ಪ್ರೋಕ್ಷ್ಯಸ್ಮೈ ನಿವೇದಯೇತ್ ॥೧೦॥
ಶಾಲೀಭಕ್ತಂ ಸುಪಕ್ವಂ ಶಿಶಿರಕರಸಿತಂ ಪಾಯಸಾಪೂಪಸೂಪಂ ।
ಲೇಹ್ಯಂ ಪೇಯಂ ಸುಚೋಷ್ಯಂ ಸಿತಮೃತಸಮಂ ಖಾರಿಕಾದ್ಯಂ ಸುಖಾದ್ಯಮ್-
ಆಜ್ಯಂ ಪಾಜ್ಯಂ ಸಮಿಜ್ಯಂ ನಯನರುಚಿಕರಂ ಜೀರಕೈಲಾಮರೀಚಿ ।
ಸ್ವಾದೀಯಃ ಶಾಕರಾಜೀಪರಿಕರಮಮೃತಾಹಾರಜೋಪಂ ಜುಷಸ್ವ ॥೧೧॥

ಅಷ್ಟದಳಗಳ ಮಧ್ಯಗಳಲ್ಲಿ, ಧೃಷ್ಟಿ ಜಯಂತ ವಿಜಯ ಸುರಾಷ್ಟ್ರ ರಾಷ್ಟ್ರವರ್ಧನ ಅಶೋಕ ಧರ್ಮಪಾಲ ಸುಮಂತ್ರರನ್ನು ಪೂಜಿಸುವುದು ದಳಗಳ ಅಗ್ರಭಾಗಗಳಲ್ಲಿ ಲೋಕಪಾಲಕರನ್ನೂ, ಹೊರಗಡೆ ಅವರ ಅಸ್ತ್ರಗಳನ್ನೂ ಪೂಜಿಸಬೇಕು ॥೬॥

ಅನಂತರ, ಸಹಸ್ರನಾಮದಿಂದಲಾಗಲಿ, ಅಷ್ಟೋತ್ತರ ಶತನಾಮದಿಂದಲಾಗಲಿ, ಶ್ರೀರಾಮನನ್ನು, ತುಲಸಿ ಕುಂದ ಪದ್ಮ ಮೊದಲಾದುವುಗಳಿಂದಲೂ, ಮಾಲತಿ ಮಲ್ಲಿಗೆ ಮೊದಲಾದುವುಗಳಿಂದಲೂ, ಕರವೀರ (ಕಣಿಗಲೆ) ಚಂಪಕ (ಸಂಪಿಗೆ) ಮೊದಲಾದುವುಗಳಿಂದಲೂ ಪೂಜಿಸಬೇಕು ॥೭-೮॥

'ವನಸ್ಪತಿರಸೋತ್ಪನ್ನೋ ಗನ್ಧಾಢ್ಯಃ ಸುಮನೋಹರಃ । ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಮ್ ॥' ಎಂಬ ಮಂತ್ರದಿಂದ ಧೂಪವನ್ನು ಸಮರ್ಪಿಸಿ 'ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ । ಗೃಹಾಣ ಮಙ್ಗಳಂ ದೀಪಂ ತ್ರೈಲೋಕ್ಯ ತಿಮಿರಾಪಹ ॥' ಎಂಬ ಮಂತ್ರದಿಂದ ದೀಪವನ್ನು ಸಮರ್ಪಿಸಬೇಕು ॥೯॥

ಅನಂತರ, ಷಡ್ರಸೋಪೇತವಾಗಿಯೂ ಭಕ್ಷ್ಯ ಭೋಜ್ಯ ಫಲಗಳಿಂದ ಯುಕ್ತವಾಗಿಯೂ ಇರುವ ಮೃಷ್ಟಾನ್ನವನ್ನು ತುಳಸೀದಳದೊಡನೆ ಪ್ರೋಕ್ಷಿಸಿ, ಅದನ್ನು ನೈವೇದ್ಯಾರ್ಥವಾಗಿ ಶ್ರೀರಾಮನಿಗೆ ಸಮರ್ಪಿಸಬೇಕು ॥೧೦॥

ನೈವೇದ್ಯಸಮರ್ಪಣಕಾಲದಲ್ಲಿ ಈ ಯೆರಡು ಶ್ಲೋಕಗಳನ್ನು ಹೇಳಬೇಕು,—ಹೇಪ್ರಭೋ! ಚಂದ್ರಕಿರಣದಂತೆ ಶುಭ್ರವಾಗಿರುವ ಜೆನ್ನಾಗಿ ಪಕ್ವವಾದ ಶಾಲ್ಯನ್ನವನ್ನೂ, ಪಾಯಸ ಅಪೂಪ

ಬ್ರಹ್ಮೇಶಾದ್ಯೈರ್ವಿಮಲಋಷಿಭಿಃ ಸೂಪವಿಷ್ಟೈಃ ಸಮೇತಃ
ಲಕ್ಷ್ಮೀಕ್ಷಿಪ್ತಶಿಷ್ಟದ್ವಲಯಕರಯಾ ಸಾದರಂ ವೀಜ್ಯಮಾನಃ ।
ನರ್ಮಾಕ್ಷೇಪಾವಹಸಿತಮುಖೋ ಹಾಸಯನ್ ಪಙ್ಕ್ತಿಭೋಕ್ತೄ-
ಭುಞ್ಜಿಕ್ತೇ ಪಾತ್ರೇ ಕನಕರಜಿತೇ ಷಡ್ರಸಾನ್ನಂ ಶ್ರೀರಮೇಶಃ ॥೧೦॥

ಗಾಣ್ಡೂಷಿಕಂ ಜಲಂ ದದ್ಯಾತ್ ದದ್ಯಾದಾಚಮನಂ ತತಃ ।
ಹಸ್ತವಾಸಂ ಸಕರ್ಪೂರಂ ಮಕುಟಂ ಭೂಷಣಾನಿ ಚ ।
ಕುಣ್ಡಲಾದೀನಿ ಶಙ್ಖಾದಿ ದಶ ಮುದ್ರಾಃ ಪ್ರದರ್ಶಯೇತ್ ॥೧೩॥
ಧನುರ್ಬಾಣಾಖ್ಯಮುದ್ರೇ ಚ ದರ್ಶಯೇದ್ವಾಮದಕ್ಷಿಣೇ ॥೧೪॥

ಸೂಪಗಳನ್ನೂ ಲೇಹ್ಯ ಪೇಯ ಚೋಷ್ಯಗಳನ್ನೂ, ಶುಭ್ರವಾಗಿಯೂ ಅಮೃತಕ್ಕೆ ಸಮಾನವಾಗಿಯೂ ಇರುವ-ತಿನ್ನುವುದಕ್ಕನುಕೂಲವಾದ-ಖಾರಿಕೆ (ಗಾರಿಗೆ-ಪೂರಿ ಚಿರೋಟಿ ಮುಂತಾದುವು, ಮೊದಲಾದ ಭಕ್ಷ್ಯಗಳನ್ನೂ, ಪ್ರಶಸ್ತವಾಗಿಯೂ ಪೂಜಾಯೋಗ್ಯವಾಗಿಯೂ ನೇತ್ರಮನೋಹರವಾಗಿಯೂ ಇರುವ ಆಜ್ಯವನ್ನೂ, ಅತಿಸ್ವಾದುವಾಗಿರುವ ಜೀರಿಗೆ ಏಲಕ್ಕಿ ಮೆಣಸುಗಳನ್ನೊಳ್ಳ ನಾನಾವಿಧ ಶಾಕಸಮುದಾಯಗಳನ್ನೂ, ನೀನು ಅಮೃತವನ್ನು ಆಸ್ವಾದಿಸುವಂತೆ ಪ್ರೀತಿಯಿಂದ ಸ್ವೀಕರಿಸುವನಾಗು ॥೧೧॥

ಶ್ರೀ ಲಕ್ಷ್ಮೀಪತಿಯು, ತನ್ನ ಪಂಕ್ತಿಯಲ್ಲಿ ಭೋಜನಾರ್ಥವಾಗಿ ಕುಳಿತಿರುವ ಬ್ರಹ್ಮ ಶಿವ ಮೊದಲಾದವರೊಡನೆಯೂ ಮಹರ್ಷಿಗಳೊಡನೆಯೂ ಕೂಡಿದವನಾಗಿ, ಕೈಯಲ್ಲಿ ಬಳೆಯು ನದ್ದುಮಾಡುತಿರುವ ಶ್ರೀ ಮಹಾಲಕ್ಷ್ಮಿಯಿಂದ ಆದರಪೂರ್ವಕವಾಗಿ ಬೀಸಲ್ಪಡುತ, ನರ್ಮಾಲಾಪಗಳಿಂದ ಮುಖದಲ್ಲಿ ಮಂದಹಾಸವನ್ನು ತೋರಿಸುತ, ತನ್ನ ಪಂಕ್ತಿಯಲ್ಲಿ ಭೋಜನಮಾಡುತಿರುವವರನ್ನೂ ನಗಿಸುತ, ಸುವರ್ಣಮಯವಾದ ಪಾತ್ರೆಯಲ್ಲಿ ಷಡ್ರಸೋಪೇತವಾದ ಮೃಷ್ಟಾನ್ನವನ್ನು ಭುಂಜಿಸುತಿರುವನು ॥೧೨॥

ಹೀಗೆ ಈ ಯೆರಡುಶ್ಲೋಕಗಳನ್ನೂ ಪರಿಸಿ, ಬಳಿಕ ಗಂಡೂಷಾರ್ಥವಾದ (ಬಾಯಿಮುಕ್ಕುಳಿಸುವುದಕ್ಕೆ) ಜಲವನ್ನೂ, ಆಚಮನೀಯವನ್ನೂ, ಕರ್ಪೂರಮಿಶ್ರಿತವಾದ ಕರೋದ್ವರ್ತನ (ಕೈಯೊರಸಿಕೊಳ್ಳುವುದಕ್ಕೆ ವಸ್ತ್ರ)ವನ್ನೂ, ಮಕುಟವನ್ನೂ, ಕುಂಡಲ ಮೊದಲಾದ ಆಭರಣಗಳನ್ನೂ ಸಮರ್ಪಿಸಬೇಕು ಬಳಿಕ, ಶಂಖಮುದ್ರ ಮೊದಲಾಗಿ ಹತ್ತು ಮುದ್ರೆಗಳನ್ನು ತೋರಿಸಬೇಕು. ಎಡಗಡೆಯಲ್ಲಿ ಧನುರ್ಮುದ್ರೆಯನ್ನೂ, ಬಲಗಡೆಯಲ್ಲಿ ಬಾಣಮುದ್ರೆಯನ್ನೂ ತೋರಿಸಬೇಕು ॥೧೩—೧೪॥

ಲವಙ್ಗಂ ಜಾತಿತಕ್ಕೋಲಚೂರ್ಣಂ ಕ್ರಮುಕಖಾದಿರಮ್ ।
ಕರ್ಪೂರಂ ತುಲಸೀಪತ್ರಂ ತಾಮ್ಬೂಲಂ ಚ ಸಮರ್ಪಯೇತ್ ॥೧೫॥
ಆದರ್ಶಯೇತ್ ತಥಾದರ್ಶಂ ಕಲ್ಪಯೇಚ್ಛತ್ರಚಾಮರೇ ।
ತಥಾ ನೀರಾಜನಂ ಶ್ರೀಮತ್ ಮಜ್ಗಳೇಶಾಯ ಕಲ್ಪಯೇತ್ ॥೧೬॥
ವೈದಿಕಂ ಮನ್ತ್ರಮುಚ್ಚಾರ್ಯ ದದ್ಯಾತ್ ಪುಷ್ಪಾಞ್ಜಲಿಂ ತತಃ ।
ಜಪೇದ್ ದೇವಂ ನಮಸ್ಕುರ್ಯಾತ್ ಪ್ರಸೀದ ಭಗವನ್ನಿತಿ ॥೧೭॥

ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ
ತೀರ್ಥಾಸ್ಪದಂ ಶಿವವಿರಿಞ್ಚಿನುತಂ ಶರಣ್ಯಮ್ ।
ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ
ವನ್ದೇ ಮಹಾಪುರುಷ ತೇ ಚರಣಾರವಿನ್ದಮ್ ॥೧೮॥
ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ
ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವತ್
ವನ್ದೇ ಮಹಾಪುರುಷ ತೇ ಚರಣಾರವಿನ್ದಮ್ ॥೧೯॥

ಅನಂತರ ಲವಂಗವನ್ನೂ ಜಾಯಿಕಾಯನ್ನೂ ತಕ್ಕೋಲ ಚೂರ್ಣವನ್ನೂ ಅಡಿಕೆಯನ್ನೂ ಕಲ್ಲುಸಕ್ಕರೆಯನ್ನೂ ಕರ್ಪೂರವನ್ನೂ ತುಲಸೀಪತ್ರವನ್ನೂ ತಾಂಬೂಲವನ್ನೂ ಸಮರ್ಪಿಸಬೇಕು ॥೧೫॥

ಬಳಿಕ, ಕನ್ನಡಿಯನ್ನು ತೋರಿಸಬೇಕು, ಛತ್ರಚಾಮರಾದ್ಯುಪಚಾರಗಳನ್ನೂ ಕಲ್ಪಿಸಬೇಕು, ಸಕಲ ಮಂಗಳಾಧಿಪತಿಯಾದ ಶ್ರೀರಾಮನಿಗ ದಿವ್ಯವಾದ ನೀರಾಜನವನ್ನೂ ಸಮರ್ಪಿಸಬೇಕು ॥೧೬॥

ಬಳಿಕ, ವೇದಮಂತ್ರಗಳನ್ನು ಹೇಳಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು, ಭಗವಂತನೇ ನೀನು ಪ್ರಸನ್ನನಾಗೆಂದು ಜಪಿಸುತ ನಮಸ್ಕಾರಮಾಡಬೇಕು ॥೧೭॥

ಪ್ರದಕ್ಷಿಣನಮಸ್ಕಾರಮಾಡುವಾಗ ಹೀಗೆ ಸ್ತುತಿಸಬೇಕು ಎಲೈ ಶರಣಾಗತ ರಕ್ಷಕನೆ! ಮಹಾಪುರುಷನೆ! ಸರ್ವದಾ ಸರ್ವರಿಗೂ ಧ್ಯೇಯವಾಗಿಯೂ, ಭಕ್ತರ ದುಃಖವನ್ನು ಪರಿಹರಿಸುತಕ್ಕುದಾಗಿಯೂ, ಸರ್ವರಿಗೂ ಸಕಲೇಷ್ಟಾರ್ಥಗಳನ್ನೂ ಕೊಡತಕ್ಕುದಾಗಿಯೂ, ಸಮಸ್ತ ತೀರ್ಥಗಳಿಗೂ ಆಶ್ರಯವಾಗಿಯೂ, ಶಿವ ಬ್ರಹ್ಮಾದಿಗಳಿಂದ ಸ್ತುತಿಸಲ್ಪಟ್ಟುದಾಗಿಯೂ, ಶರಣಾಗತವತ್ಸಲವಾಗಿಯೂ, ಭೃತ್ಯರ ಆರ್ತಿಯನ್ನು ಧ್ವಂಸಮಾಡತಕ್ಕುದಾಗಿಯೂ, ಸಂಸಾರವೆಂಬ ಸಮುದ್ರಕ್ಕೆ ನಾವೆಯಾಗಿಯೂ ಇರುವ ನಿನ್ನ ಚರಣಕಮಲವನ್ನು ನಾನು ವಂದಿಸುವೆನು ॥೧೮॥

ಎಲೈ ಧರ್ಮಿಷ್ಠನೆ! ಮಹಾಪುರುಷನಾದ ಶ್ರೀರಾಮನೆ! ನಿನ್ನ ಯಾವ ಪಾದಾರವಿಂದವು ಸುತರಾಂ ಬಿಡಲ್ಪಡಲಾರದುದಾಗಿಯೂ ಇಂದ್ರಾದಿಗಳಿಂದ ಪ್ರಾರ್ಥಿತವಾಗಿಯೂ ಇರುವ ರಾಜ್ಯ

ಯಚ್ಛೌಚನಿಸ್ಸೃತ್ಯರಿತ್ರವರೋದಕೇನ
ತೀರ್ಥೇನ ಮೂರ್ಧ್ನಿ ವಿಧೃತೇನ ಶಿವಃ ಶಿವೋಽಭೂತ್ ।
ಧ್ಯಾತುರ್ಮನಶ್ಯಮಲಶೈಲನಿಸೃಷ್ಟವಜ್ರಂ
ಧ್ಯಾಯೇ ಚಿರಂ ಭಗವತಶ್ಚರಣಾರವಿನ್ದಮ್ ॥೦೦॥

ಶ್ರೀರಾಮಚನ್ದ್ರ ರಘುಪುಙ್ಗವ ರಾಜವರ್ಯ
ರಾಜೇನ್ದ್ರ ರಾಮ ರಘುನಾಯಕ ರಾಘವೇಶ ।
ರಾಜಾಧಿರಾಜ ರಘುನನ್ದನ ರಾಮಭದ್ರ
ದಾಸೋಽಹಮದ್ಯ ಭವತಃ ಶರಣಾಗತೋಽಸ್ಮಿ ॥೦೧॥

ಯಸ್ಯಾಮಲಂ ನೃಪಸದಸ್ಸು ಯಶೋಽಧುನಾಪಿ
ಗಾಯನ್ತ್ಯಘಘ್ನಮೃಷಯೋ ದಿಗಿಭೇನ್ದ್ರಪಟ್ಟಮ್ ।
ತನ್ನಾಕಪಾಲವಸುಪಾಲಕಿರೀಟಜುಷ್ಟಂ
ಪಾದಾಮ್ಬುಜಂ ರಘುಪತೇಃ ಶರಣಂ ಪ್ರಪದ್ಯೇ ॥೦೨॥

ಲಕ್ಷ್ಮಿಯನ್ನು ಕೂಡ ಬಟ್ಟುಬಟ್ಟು ಪಿತೃವಾಕ್ಯಪರಿವಾಲನೆಗಾಗಿ ಅರಣ್ಯಕ್ಕ ಹೂರಟುಹೋಯ್ತೋ, ಅರಣ್ಯದಲ್ಲಿ ಕಾಂತೆಯಿಂದ ಪ್ರಾರ್ಥಿತವಾದ ಮಾಯಾಮೃಗವನ್ನು ಬನ್ನಟ್ಟಿಕೊಂಡು ಹೋಯ್ತೋ, ಅಂತಹ ಪಾದಕಮಲವನ್ನು ವಂದಿಸುವೆನು ॥೯೯॥

ಯಾವ ಪರಮಾತ್ಮನ ಪಾದಗಳ ಶೌಚದಿಂದ ಸಿಸ್ಸೃತವಾದ ಗಂಗಾನದಿಯ ಜಲವನ್ನು ತಲೆಯಲ್ಲಿ ಧರಿಸಿಕೊಂಡು ಶಿವನು ಶಿವ(ಮಂಗಳಕರ)ನಾದನೋ, ಯಾವ ಪಾದಕಮಲವು ಧ್ಯಾನ ಮಾಡತಕ್ಕವರ ಮನಸ್ಸಿನಲ್ಲಿರುವ ಪಾಪವೆಂಬ ಪರ್ವತಕ್ಕೆ ವಜ್ರಪ್ರಾಯವಾಗಿರುವುದೋ, ಅಂತಹ ಭಗವಂತನ ಚರಣಕಮಲವನ್ನು ನಾನು ಚಿರಕಾಲ ಧ್ಯಾನಿಸುವೆನು ॥೧೦॥

ಶ್ರೀರಾಮಚಂದ್ರ! ರಘುಪುಂಗವ! ರಾಜವಂದ್ಯ! ರಾಜೇಂದ್ರ! ರಾಮ! ರಘುನಾಯಕ! ರಾಘವೇಶ! ರಾಜಾಧಿರಾಜ! ರಘುನಂದನ! ರಾಮಭದ್ರ! ನಿನ್ನ ದಾಸನಾದ ನಾನು ಈಗ ನಿನಗೆ ಶರಣಾಗತನಾಗಿರುವನು ॥೧೦೧॥

ದಿಗ್ಗಜಗಳಿಗೆಲ್ಲ ಫಾಲಪ್ರದೇಶದಲ್ಲಿ ರಜತಪಟ್ಟವಾಗಿರುವ ನಿರ್ಮಲವಾದ ಪಾಪನಾಶಕವಾದ ಯಾವ ಮಹಾನುಭಾವನ ಚರಣಕಮಲದ ಯಶಸ್ಸನ್ನು, ಈಗಲೂ ರಾಜಸಭೆಗಳಾ ಋಷಿಗಳೂ ಗಾನಮಾಡುತಿರುವರೋ, ಅಂತಹ-ದಿಕ್ಪಾಲಕರ ಕಿರೀಟಗಳಿಂದ-ಸ್ಪೃಷ್ಟವಾದ ಶ್ರೀರಘುಪತಿಯ ಪಾದಕಮಲವನ್ನು ನಾನು ಮರೆಹೊಗುವೆನು ॥೧೦೨॥

ನಮೋ ಬ್ರಹ್ಮಣ್ಯದೇವಾಯ ರಾಮಾಯಾಕುಂಠಮೇಧಸೇ ।
ಉತ್ತಮಶ್ಲೋಕಧುರ್ಯಾಯ ನ್ಯಸ್ತದಂಡಾರ್ಪಿತಾಜ್ಞಯೇ ॥೨೩॥
ಇಂದೀವರದಳಶ್ಯಾಮೋ ರಾಮೋ ರಾಜೀವಲೋಚನಃ ।
ವರ್ತತೇ ಮಾನಸೇ ಯಸ್ಯಾಃ ತಾಂ ಸೀತಾಂ ಪ್ರಣಮಾಮ್ಯಹಮ್ ॥೨೪॥
ರಾಮಮೇವಂ ನಮಸ್ಕೃತ್ಯ ತ್ರಿಃ ಪ್ರದಕ್ಷಿಣಮಾಚರೇತ್ ॥೨೫॥
ತತಃ ಸ್ತುತ್ವಾ ಯಥಾಶಕ್ತಿ ಶ್ರುತಿಸ್ಮೃತ್ಯಾದಿಮಂತ್ರಕೈಃ ।
ಉಪಚಾರೈಃ ಪ್ರಪೂಜ್ಯೈವಂ ತೀರ್ಥಂ ಸ್ವೀಕೃತ್ಯ ಯತ್ನತಃ ।
ತತಃ ಸಮ್ಪ್ರೋಕ್ಷ್ಯ ಚಾತ್ಮಾನಂ ಶ್ರೀರಾಮಂ ಪ್ರಾರ್ಥಯೇತ್ ಸುಧೀಃ ॥
ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್ ।
ಸಾಮುದ್ರೋ ಹಿ ತರಙ್ಗಃ ಕ್ವಚನ ಸಮುದ್ರೋ ನ ತಾರಙ್ಗಃ ॥೨೬॥
ತ್ವದ್ಯಾತ್ರಯಾ ಸರ್ವಗತಾ ಹತಾ ತೇ ಧ್ಯಾನೇನ ಚೇತಃಪರತಾ ಹತಾ ತೇ ।
ಸ್ತುತ್ಯಾನಯಾ ವಾಕ್ಪರತಾ ಹತಾ ತೇ ಕ್ಷಮಸ್ವ ಸರ್ವಂ ಮಮ ದೇವದೇವ॥

ಬ್ರಾಹ್ಮಣಹಿತನಾಗಿಯೂ, ಅಕುಂಠಿತಮತಿಯಾಗಿಯೂ, ಉತ್ತಮಶ್ಲೋಕರಲ್ಲೆಲ್ಲ ಅಗ್ರಗಣ್ಯನಾಗಿಯೂ, ಸಕಲವನ್ನೂ ತ್ಯಜಿಸಿ ತನ್ನನ್ನು ನಮಸ್ಕರಿಸತಕ್ಕವರಿಗೋಸ್ಕರವಾಗಿ ತನ್ನ ಪಾದವನ್ನು ಕೊಟ್ಟಿರತಕ್ಕವನಾಗಿಯೂ ಇರುವ ಶ್ರೀರಾಮಚಂದ್ರನಿಗ ನಮಸ್ಕಾರವು ॥೨೩॥

ಇಂದೀವರದಳಶ್ಯಾಮಲಾಂಗನೂ ರಾಜೀವನೇತ್ರನೂ ಆದ ಶ್ರೀರಾಮನು ಯಾವಳ ಹೃದಯದಲ್ಲಿ ಸರ್ವದಾ ವಾಸಮಾಡಿಕೊಂಡಿರುವನೋ, ಅಂತಹ ಸೀತಾದೇವಿಗೆ ನಾನು ನಮಸ್ಕಾರ ಮಾಡುವೆನು ॥೨೪॥

ಈರೀತಿಯಾಗಿ ಸ್ತೋತ್ರಮಾಡುತ ರಾಮನನ್ನು ನಮಸ್ಕರಿಸಿ, ಮೂರಾವೃತ್ತಿ ಪ್ರದಕ್ಷಿಣವನ್ನು ಮಾಡಬೇಕು ಅನಂತರ, ಶ್ರುತಿಸ್ಮೃತ್ಯಾದಿ ಮಂತ್ರಗಳಿಂದ ಯಥಾಶಕ್ತಿಯಾಗಿ ಸ್ತೋತ್ರ ಮಾಡಿ, ಈರೀತಿಯಾಗಿ ಪ್ರಯತ್ನ ಪೂರ್ವಕವಾಗಿ ಉಪಚಾರಗಳಿಂದ ಪೂಜಿಸಿ, ಅನಂತರ ತೀರ್ಥವನ್ನೂ ಸ್ವೀಕರಿಸಿ ತನ್ನ ಮೇಲೆ ಪ್ರೋಕ್ಷಿಸಿಕೊಂಡು, ವಿವೇಕಿಯಾದವನು ಶ್ರೀರಾಮನನ್ನು ಹೀಗೆ ಪ್ರಾರ್ಥಿಸಬೇಕು ॥೨೫--೨೬॥

ಹೇ ನಾಥ! ಯದ್ಯಪಿ ಜೀವನಿಗೂ ಈಶ್ವರನಿಗೂ ಭೇದವಿಲ್ಲವೆಂದು ಶಾಸ್ತ್ರಸಿದ್ಧಾಂತವಿರುವುದು, ಹೀಗಿದ್ದರೂ, ನಾನು ನಿನ್ನ ಶೇಷಭೂತನೇ ಹೊರತು-ನೀನು ನನಗೆ ಶೇಷಭೂತನಲ್ಲ. ತರಂಗವು ಸಮುದ್ರದ್ದಾದೀತೇ ಹೊರತು, ಸಮುದ್ರವೆಂದಿಗೂ ತರಂಗದ್ದಾಗಲಾರದಲ್ಲವೆ! ॥೨೭॥

ಸ್ವಾಮಿಯೇ ನೀನು ಸರ್ವಗತನಾಗಿರುವೆ, ಆದರೆ, ನಿನ್ನ ಕ್ಷೇತ್ರಕ್ಕೆ ಯಾತ್ರೆಹೋಗುವುದರಿಂದ ನಿನ್ನ ಸರ್ವಗತತ್ವಕ್ಕೆ ನ್ಯೂನತೆಯುಂಟುಮಾಡಿದಂತಾಗುವುದು.. ನೀನು ಚಿತ್ತಕ್ಕೆ ಅಗೋಚರನಾದವನು, ಆದರೆ ನಿನ್ನನ್ನು ಹೃದಯದಲ್ಲಿ ಧ್ಯಾನಮಾಡುವುದರಿಂದ ನಿನ್ನ ಚಿತ್ತಾಗೋಚರ

ತ್ವಯ್ಯೇವ ಭಕ್ತಿಂ ಜನಯ ತ್ವಮೇವ
ಮಾಮುದ್ಧರಾಸ್ಮತ್ ಕೃಪಯಾಭವಾಬ್ಧೇಃ ।
ಕ್ಲಿಷ್ಟಂ ದಯಾಳೋ ನ ದಯಾಸ್ತಿ ತೇ ಚೇತ್
ತರ್ಹ್ಯೇಷ ಹಾ ಕರ್ಮವಶಾದ್ಧತೋಸ್ಮಿ ॥೪೯॥

ದಿವಾ ರಾತ್ರೌ ಚ ಯತ್ ಕರ್ಮ ಜ್ಞಾನಾಜ್ಞಾನಕೃತಂ ಚ ಯತ್ ।
ತತ್ ಸರ್ವಮರ್ಪಯೇ ತುಭ್ಯಂ ತೇನ ಪ್ರೀತೋ ಭವ ಪ್ರಭೋ ॥೫೦॥

ಇತಿ ಪುಷ್ಪಾಞ್ಜಲಿಂ ದತ್ವಾ ಸಂಹೃತ್ಯಾಚಞ್ಚಲಂ ಹರೌ ।
ಭಕ್ತ್ಯಾ ಸಂಶೋಭಿತಃ ಸ್ವಾನ್ತಂ ಶಿವೇ ವಿಶ್ರಾಮಹೇತವೇ ।
ಪ್ರಾರ್ಥ್ಯೈವಂ ಪಾದುಕೇ ದತ್ವಾ ಸಾಙ್ಗಮುದ್ವಾಸಯೇದ್ಧರಿಮ್ ॥೫೧॥

ಅಹಂ ರಾಮೋ ನ ಚಾನ್ಯೋಸ್ಮೀತ್ಯೇವಂ ಸಞ್ಜಾನ್ತ ಯೇತ್ ಸುಧೀಃ॥೫೨॥

ಆತ್ಮಾನಂ ಸತತಂ ರಾಮಂ ಸಮ್ಭಾವ್ಯ ವಿಹರನ್ತಿ ಯೇ ।
ನ ತೇಷಾಂ ದುಷ್ಕೃತಂ ಕಿಞ್ಚಿತ್ ದುಷ್ಕೃತೋತ್ಥಾ ನ ಚಾಪದಃ ॥೫೩॥

ತ್ವಕ್ಕೆ ನ್ಯೂನತೆಯುಂಟುಮಾಡಿದಂತಾಗುವುದು ನೀನು ವಾಕ್ಕಿಗೆ ಅಗೋಚರನಾಗದವನು, ಆದರೆ ಈಗ ನಾನು ನಿನ್ನನ್ನು ಸ್ತೋತ್ರಮಾಡುತಿರುವುದರಿಂದ ನಿನ್ನ ವಾಗಗೋಚರತ್ವಕ್ಕೆ ನ್ಯೂನತೆಯುಂಟುಮಾಡಿದಂತಾಗುವುದು ಎಲೈ ದೇವದೇವನ ! ನನ್ನ ಈ ಸಮಸ್ತವಾದ ಅಪರಾಧವನ್ನೂ ನೀನು ಕ್ಷಮಿಸಬೇಕು ॥೪೮॥

ಎಲೈ ಭಗವಂತನ ! ನಿನ್ನಲ್ಲಿಯೇ ಸರ್ವದಾ ಭಕ್ತಿಯಿರುವಂತೆ ನೀನೇ ನನಗೆ ಅನುಗ್ರಹಮಾಡಬೇಕು ಕೇವಲ ಕಷ್ಟಕ್ಕೊಳಗಾಗಿರುವ ನನ್ನನ್ನು ದಯೆಯಿಟ್ಟು ಈ ಸಂಸಾರಸಮುದ್ರದ ದೆಸೆಯಿಂದ ಉದ್ಧರಿಸು ಎಲೈ ದಯಾಳುವೆ ! ಪರಮೇಶ್ವರನೆ ! ನಿನಗ ನನ್ನಲ್ಲಿ ದಯೆಯುಂಟಾಗದಿದ್ದ ಪಕ್ಷದಲ್ಲಿ, ಹಾ ! ಹಾ ! ನಾನು ನನ್ನ ಕರ್ಮವಶದಿಂದ ಹಾಳಾದೆನಲ್ಲ ! ॥ ೪೯॥

ಎಲೈ ಪ್ರಭುವೆ ! ನಾನು ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಯಾವ ಕರ್ಮವನ್ನು ಮಾಡಿರುವೆನೋ, ಜ್ಞಾನದಿಂದಲಾಗಲಿ ಅಜ್ಞಾನದಿಂದಲಾಗಲಿ ಯಾವ ಕರ್ಮವನ್ನು ಮಾಡಿರುವೆನೋ, ಅವೆಲ್ಲವನ್ನೂ ಈಗ ನಿನಗೆ ಸಮರ್ಪಿಸುವೆನು, ಇದರಿಂದ ನೀನು ಸುಪ್ರೀತನಾಗು ॥೫೦॥

ಎಲೌ ಪಾರ್ವತಿ ! ಈರೀತಿಯಾಗಿ ಸ್ತುತಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಿ, ಬಳಿಕ ಸ್ಥಿರವಾಗಿಯೂ ಪರಿಶುದ್ಧವಾಗಿಯೂ ಇರುವ ತನ್ನ ಚಿತ್ತವನ್ನು ವಿಶ್ರಾಂತಿಗಾಗಿ ಶ್ರೀಹರಿಯಲ್ಲಿ ಲೀನಮಾಡಿ, ಮತ್ತೆ ಈರೀತಿಯಾಗಿ ಪ್ರಾರ್ಥನೆಮಾಡಿ, ಪಾದುಕೆಗಳನ್ನು ಸಮರ್ಪಿಸಿ, ಅನಂತರ ಅಂಗದೇವತಾಸಹಿತವಾಗಿ ಶ್ರೀಹರಿಯನ್ನು ವಿಸರ್ಜನೆಮಾಡಬೇಕು ಪ್ರಾಜ್ಞನಾದ ಉಪಾಸಕನು ' ನಾನು ರಾಮನು; ಇತರವಾದ ಪದಾರ್ಥವಲ್ಲ ' ಎಂದು ಭಾವನೆಮಾಡಬೇಕು ॥೫೧-೫೩॥

ಯಾವ ಪುರುಷರು ನಾನೇ ರಾಮನೆಂದು ಸರ್ವದಾ ಭಾವಿಸುತ ಈ ಪ್ರಪಂಚದಲ್ಲಿ ವಿಹರಿಸಿ

ತ್ರಿಕಾಲಮೇಕಕಾಲಂ ವಾ ಯಃ ಕುರ್ಯಾದೇವಮನ್ವಹಮ್ ।
ವರ್ಷಮಾತ್ರೇಣ ರಾಜಾ ಸ್ಯಾತ್ ಅನ್ತೇ ಮುಕ್ತಿಮವಾಪ್ನುಯಾತ್ ॥೩೪॥
ಆರಾಧನಾಸಮರ್ಥಶ್ಚೇತ್ ದದ್ಯಾದರ್ಚನಸಾಧನಮ್ ।
ಯೋ ದಾತುಂ ನೈವ ಶಕ್ನೋತಿ ಕುರ್ಯಾದರ್ಚನದರ್ಶನಮ್ ॥೩೫॥
ನೈಕಂ ಚ ಯಸ್ಯ ವಿದ್ಯೇತ ಸೋಧೋ ಯಾತಿ ನ ಸಂಶಯಃ ।
ತಸ್ಮಾತ್ ಸರ್ವಪ್ರಯತ್ನೇಗ ಕುರ್ಯಾದಾವಾರ್ಚನಂ ಬುಧಃ ॥೩೬॥
ಏವಮುಕ್ತಂ ಮಹಾದೇವಿ ರಾಮಚನ್ದ್ರಾರ್ಚನಂ ಶುಭಮ್ ।
ಮಯಾ ಸಮಾಸತಃ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೭॥

ಇತಿ ಶ್ರೀಮದರಣ್ಯಕಾಣ್ಡೇ ಶ್ರೀರಾಮಪೂಜಾವಿಧಾನಕಥನಂ
ನಾಮ ಪಞ್ಚಮಃ ಸರ್ಗಃ



ಕೊಂಡಿರುವರೋ, ಅವರಿಗೆ ಯಾವ ದುಷ್ಕೃತವೂ ಇರುವುದಿಲ್ಲ, ದುಷ್ಕೃತಗಳಿಂದ ಉಂಟಾಗುವ ವಿಪತ್ತುಗಳೂ ಬರುವುದಿಲ್ಲ ॥೩೩॥

ಯಾವ ಪುರುಷನು, ಈ ಪೂರ್ವೋಕ್ತರೀತಿಯಾಗಿ ಶ್ರೀರಾಮನ ಪೂಜೆಯನ್ನು ಪ್ರತಿದಿನವೂ ತ್ರಿಕಾಲದಲ್ಲಿಯಾಗಲಿ ಅಥವಾ ಒಂದೇ ಕಾಲದಲ್ಲಿಯಾಗಲಿ ಭಕ್ತಿಯಿಂದ ಮಾಡುವನೋ, ಅವನು ಒಂದು ವರ್ಷಕಾಲದೊಳಗಾಗಿ ರಾಜಪದವಿಯನ್ನು ಹೊಂದುವನು, ಈ ದೇಹವನ್ನು ಬಿಟ್ಟನಂತರ ಮೋಕ್ಷವನ್ನು ಪಡೆಯುವನು ॥೩೪॥

ಹೀಗೆ ಆರಾಧನೆಯನ್ನು ಮಾಡುವುದರಲ್ಲಿ ಸಾಮರ್ಥ್ಯಸಾಲದಿದ್ದರೆ, ಅರ್ಚನೆಗೆ ಬೇಕಾಗುವ ಉಪಕರಣಗಳನ್ನು ರಾಮರ್ಚನೆಮಾಡತಕ್ಕವರಿಗೆ ದಾನಮಾಡಬೇಕು ಯಾವನು ಹೀಗೆ ದಾನ ಮಾಡುವುದಕ್ಕೂ ಸುತರಾಂ ಶಕ್ತಿಯಿಲ್ಲದವನಾಗಿರುವನೋ, ಅವನು ಇತರರಿಂದ ಮಾಡಲ್ಪಡುವ ಪೂಜೆಯನ್ನು ಭಕ್ತಿಯಿಂದ ದರ್ಶನಮಾಡಬೇಕು ॥೩೫॥

ಈ ಮೂರರಲ್ಲಿ ಒಂದಾದರೂ ಯಾವನಿಗಿರುವುದಿಲ್ಲವೋ, ಅವನು ಅಧೋಲೋಕವನ್ನು ಹೊಂದುವನು, ಇದರಲ್ಲಿ ಸಂಶಯವಿಲ್ಲ ಅದುಕಾರಣ, ಪ್ರಾಜ್ಞನಾದವನು ಸರ್ವಪ್ರಯತ್ನದಿಂದಲೂ ಶ್ರೀರಾಮನ ಪೂಜೆಯನ್ನು ಮಾಡಬೇಕು ॥೩೬॥

ಎಲೌ ಪಾರ್ವತಿ! ಇದೋ ಈರೀತಿಯಾಗಿ ಶುಭಕರವಾದ ಶ್ರೀರಾಮಪೂಜಾವಿಧಿಯನ್ನೆಲ್ಲ ನಾನು ನಿನಗ ಸಂಕ್ಷೇಪವಾಗಿ ಹೇಳಿರುವೆನು ಈಗ ನೀನು ಮತ್ತೇನನ್ನು ಕೇಳಬೇಕೆಂದು ಇಚ್ಛಿಸುವೆ ? ॥೩೭॥

ಇದು ಅರಣ್ಯಕಾಂಡದಲ್ಲಿ ಶ್ರೀರಾಮಪೂಜಾವಿಧಿಕಥನವೆಂಬ
ಐದನೆಯ ಸರ್ಗವು



ಅಥ ಶ್ರೀಮದರಣ್ಯ ಕಾಣ್ಡೇ ಷಷ್ಠಃ ಸರ್ಗಃ.

ಶ್ರೀಪಾರ್ವತ್ಯುವಾಚ

ಭಗವನ್ ಕರುಣಾಸಿನ್ಧೋ ಸುತೀಕ್ಷ್ಣೇನೈವಮರ್ಚಿತಃ ।
ರಾಮಚನ್ದ್ರಃ ಕಿಮಕರೋತ್ ವದ ಮೇ ದಯಯಾ ಪ್ರಭೋ ॥೧॥

ಶ್ರೀಶಿವಉವಾಚ

ತತೋ ರಾಮಃ ಸುತೀಕ್ಷ್ಣೇನ ಪೂಜಿತಃ ಪ್ರೇಷಿತಸ್ತಥಾ ।
ಅಗಸ್ತ್ಯಸ್ಯಾಶ್ರಮಪದಂ ಜಗಾಮ ಸಹ ಸೀತಯಾ ॥೨॥
ಗಚ್ಛನ್ನೇವ ಶನೈರಾಮೋ ಲಕ್ಷ್ಮಣಂ ವಾಕ್ಯಮಬ್ರವೀತ್ ॥೩॥
ನಿರ್ಜಿತೋಯಂ ಹಿ ದುರ್ಮಾರ್ಗಃ ಕಣ್ಟಕಾವರಣಾನ್ವಿತಃ ।
ಸರ್ವೇ ವೃಕ್ಷಾನಿಷ್ಫಲಾಶ್ಚ ಲತಾಃ ಪುಷ್ಪವಿವರ್ಜಿತಾಃ ।
ಶನೈರ್ವಿಶ್ರಮ್ಯ ಗಚ್ಛಾವಃ ತರುಚ್ಛಾಯಾಸು ಲಕ್ಷ್ಮಣ ॥೪॥

ಅರಣ್ಯಕಾಂಡದಲ್ಲಿ ಆರನೆಯ ಸರ್ಗವು.

ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಾರ್ಥಿಸುವಳು —

ಭಗವಂತನೆ! ಕೃಪಾಸಾಗರನೆ! ಸರ್ವಲೋಕಮಹೇಶ್ವರನೆ! ನೀನು ಪೂರ್ವದಲ್ಲಿ ಹೇಳಿದಂತೆ ಸುತೀಕ್ಷ್ಣನಿಂದ ಪೂಜಿಸಲ್ಪಟ್ಟಬಳಿಕ ಶ್ರೀರಾಮಚಂದ್ರನು ಏನುಮಾಡಿದನು? ಇದನ್ನು ನನಗೆ ಅನುಗ್ರಹಿಸಿ ಹೇಳುವನಾಗು ॥೧॥

ಶ್ರೀ ಪರಮೇಶ್ವರನು ಉತ್ತರ ಹೇಳುವನು —

ಎಲೌ ಪಾರ್ವತಿ! ಬಳಿಕ ರಾಮಚಂದ್ರನು ಸುತೀಕ್ಷ್ಣನಿಂದ ಪೂಜಿತನಾಗಿ, ಅವನಿಂದ ಕಳುಹಲ್ಪಟ್ಟು, ಶ್ರೀ ಸೀತಾದೇವಿಯೊಡನೆ ಅಗಸ್ತ್ಯಮುನಿಯ ಆಶ್ರಮ ಪ್ರದೇಶವನ್ನು ಕುರಿತು ಹೊರಟವನಾದನು ॥೨॥

ಮಾರ್ಗದಲ್ಲಿ ಹೋಗುತಿರುವನಾಗಿಯೇ, ಲಕ್ಷ್ಮಣನನ್ನು ಕುರಿತು ಮೆಲ್ಲಗೆ 'ವತ್ಸ! ಲಕ್ಷ್ಮಣ! ಬಹು ಕಂಟಕಾವೃತವಾಗಿದ್ದ ಈ ಕೆಟ್ಟ ದಾರಿಯು ಕಳೆದುಹೋಯ್ತು ಈ ದಾರಿಯಲ್ಲಿದ್ದ ಸಮಸ್ತವೃಕ್ಷಲತೆಗಳೂ, ನಿಷ್ಫಲಗಳಾಗಿಯೂ ಪುಷ್ಪವರ್ಜಿತವಾಗಿಯೂ ಇರುವುವು ಇನ್ನು ಈ ಮರಗಳ ನೆಳಲಲ್ಲಿ ವಿಶ್ರಮಿಸಿಕೊಂಡು ಮೆಲ್ಲನೆ ಹೋಗುವ' ಎಂದು ಹೇಳಿದನು ॥

ರಾಘವಸ್ಯ ವಚಃ ಶ್ರುತ್ವಾ ಲಕ್ಷ್ಮಣೋ ವಿಗತಶ್ರಮಃ ।
ಆಸ್ತೀರ್ಯ ಮೃದುಚರ್ಮಾಣಿ ತರುಚ್ಛಾಯಾಸು ಸತ್ವರಮ್ ॥೫॥
ಶೀತೋದಕೈಶ್ಚ ಮಾಲ್ಯೈಶ್ಚ ಫಲೈರಮೃತಗನ್ಧಿಭಿಃ ।
ರಾಮಂ ವಿಶ್ರಾಮಯಾಮಾಸ ವ್ಯಜನೈರ್ವೀಜಯನ್ ಸುಖಮ್ ॥೬॥
ಸೀತಾ ರಾಮಸಮೀಪೇ ತು ನಿಷಣ್ಣಾ ಪತಿದೇವತಾ ।
ಪಾದಸಂವಾಹನಂ ಚಕ್ರೇ ಪಾಣೀ ಸ್ವಾಭ್ಯೀ ನಿಧಾಯ ಚ ॥೭॥
ರಾಮಸ್ಯ ಶಾನ್ತಿಮಾಲೋಕ್ಯ ಸುಖಾಮುಚಿತಸ್ಯ ಸಾ ।
ವ್ಯಾಜಹಾರ ಮನಸ್ವಿನೀ ಸಕಾಮಾ ಕೈಕಯೀ ಹ್ಯಲಮ್ ॥೮॥
ಭರತಃ ಕೈಕಯೀಪುತ್ರಃ ಪಾದುಕೇ ದ್ವೇ ಸಮಾಹರತ್ ।
ಅರಣ್ಯೇ ಬಹುದುಃಖಾನಿ ನ ಜಾನಾತೀದೃಶಾನಿ ಸಃ ॥೯॥
ರಾಮಾಯ ಕ್ಷೇಮಕೃನ್ನತ್ಯೋರ್ನ ಕೋಪ್ಯತ್ರ ಪ್ರದೃಶ್ಯತೇ ।
ರಾಮಾಭಿಷೇಕಃ ಕೈಕೇಯ್ಯಾಃ ಮಹಾಮೇರುಸಮೋಽಭವತ್ ॥೧೦॥
ಪಯಃಫೇನನಿಭಾಯಾಂ ಯಃ ಶಯ್ಯಾಯಾಂ ಶಯನಕ್ಷಮಃ ।
ಸ ನಿದ್ರಾತಿ ಮಹೀಪೃಷ್ಠೇ ಕರಿನೇ ವ್ಯಾಘ್ರಚರ್ಮಣಿ ॥೧೧॥

ಹೀಗೆ ಹೇಳಿದ ಶ್ರೀರಾಮನ ಮಾತನ್ನು ಕೇಳಿ, ಸ್ವಲ್ಪವೂ ಆಲಸ್ಯವಿಲ್ಲದಿರುವ ಲಕ್ಷ್ಮಣನು, ತಟ್ಟನೆ ಮರದ ನೆರಳಿನಲ್ಲಿ ಮೃದುವಾಗಿರುವ ಚರ್ಮಗಳನ್ನು ಹಾಸಿ, ಹಿತವಾಗುವಂತೆ ಬೀಸಣಿಕೆಯಿಂದ ಬೀಸುತ, ತಣ್ಣಗಿರುವ ನೀರಿನಿಂದಲೂ ಪುಷ್ಪಮಾಲಿಕೆಗಳಿಂದಲೂ ಅಮೃತಕಲ್ಪವಾದ ಫಲಗಳಿಂದಲೂ ಶ್ರೀರಾಮನಿಗೆ ವಿಶ್ರಾಂತಿಯುಂಟುಮಾಡಿದನು ॥೫-೬॥

ಆಗ, ಮಹಾಪತಿಭಕ್ತಿಯುಕ್ತಳಾದ ಸೀತಾದೇವಿಯು, ಶ್ರೀರಾಮನ ಸಮೀಪದಲ್ಲಿ ಕುಳಿತುಕೊಂಡು, ಶ್ರೀರಾಮನ ಪಾದಕಮಲಗಳನ್ನು ತೊಡೆಯಮೇಲೆ ಇಟ್ಟುಕೊಂಡು ಮೆಲ್ಲಗೆ ಒತ್ತಿದಳು ॥೭॥

ಕೇವಲ ಸುಖೋಚಿತನಾದ ಶ್ರೀರಾಮನು ವಿಶೇಷವಾಗಿ ಬಳಲಿಕೆಪಡುತಿರುವುದನ್ನು ನೋಡಿ, ಆ ಸೀತಾದೇವಿಯು ಹೀಗೆ ಹೇಳಿಕೊಂಡಳು –ಈಗ ಆ ಕೈಕೇಯಿಯ ಆಶೆಯು ಕೈಗೂಡಿತು! ಅವಳ ಮಗನಾದ ಭರತನು, ಅಣ್ಣನಲ್ಲಿ ಭಕ್ತಿತೋರಿಸುವನಂತೆ ನಟಿಸಿ, ನನ್ನ ನಾಥನಿಗೆ ಅರಣ್ಯಸಂಚಾರದಲ್ಲಿ ಸ್ವಲ್ಪ ಕ್ಲೇಶಪರಿಹಾರಕವಾಗಿದ್ದ| ಎರಡು ಪಾದುಕೆಗಳನ್ನು ಅಪಹರಿಸಿಕೊಂಡು ಹೊರಟುಹೋದನು ಅರಣ್ಯದಲ್ಲಿ ಅನುಭವಿಸಬೇಕಾಗಿರುವ ಇಂತಹ ದುಃಖಗಳನ್ನು ಬೇರೆ ಅವನು ಕಾಣನು ನಮ್ಮ ಶ್ರೀರಾಮಚಂದ್ರನಿಗೆ ಕ್ಷೇಮವನ್ನುಂಟುಮಾಡುವಂತಹ ವುರುಷನೊಬ್ಬನೂ ಇಲ್ಲಿ ದೃಷ್ಟಿಗೆಬೀಳುವುದಿಲ್ಲ ಶ್ರೀರಾಮಚಂದ್ರನ ಪಟ್ಟಾಭಿಷೇಕವು, ಕೈಕೇಯಿಗೆ ಮೇರುಪರ್ವತದಷ್ಟು ಭಾರವಾಗಿ ಕಾಣಿಸಿತು. ಹಾಲಿನ ನೊರೆಗೆ ಸಮಾನವಾಗಿರುವ ದಿವ್ಯವಾದ ಹಾಸಿಗೆಯಲ್ಲಿ ಮಲಗಲು

ಇತಿ ಸೀತಾವಚಃ ಶ್ರುತ್ವಾ ಭೂದೇವೀ ದ್ರುತಮಾನಸಾ ।
ಸೀತಾಯಾದರ್ಶನಂ ಕರ್ತುಂ ಪ್ರತ್ಯಕ್ಷಂ ಸಮಪದ್ಯತ ॥೧೦॥
ದೃಷ್ಟ್ವಾ ತಾಂ ಜನನೀಂ ಸೀತಾ ಪತಿನಿದ್ರಾಭಯಾರ್ದಿತಾ ।
ಉಪವಿಷ್ಟೈವ ಭೂದೇವ್ಯೈ ನಮಶ್ಚಕ್ರೇ ಕೃತಾಞ್ಜಲಿಃ ॥೧೧॥
ಭೂದೇವೀ ಸ್ವಸುತಾಂ ದೃಷ್ಟ್ವಾ ವನಮಧ್ಯೇ ಪತಿವ್ರತಾಮ್ ।
ಗುಣರತ್ನಾಂ ಶಾನ್ತಿಮತೀಂ ಸ್ವಮನಸ್ಯೇವ ವಿವ್ಯಥೇ ॥೧೪॥
ಭೂದೇವೀ ವಚನಂ ಪ್ರಾಹ ಸೀತಾದುಃಖವಿನಾಶನಮ್ ॥೧೫॥
ಪತಿವ್ರತಾನಾಂ ನಾರೀಣಾಂ ಆಪದಃ ಸನ್ತಿ ಪುತ್ರಿಕೇ ।
ತ್ವಯಾ ತುಲ್ಯಗುಣಾಂ ನಾರೀಂ ನ ಹಿ ಪಶ್ಯಾಮಿ ಭೂತಲೇ ।
ಸೀತೇ ಕಮಲಪತ್ರಾಕ್ಷಿ ನ ತ್ವಂ ವ್ಯಥಿತುಮರ್ಹಸಿ ॥೧೬॥
ಪಾದಚಾರೇಣ ತೇ ಭರ್ತುಃ ಆಸೀತ್ ಪಾದೇ ತು ವೇದನಾ ।
ಯಸ್ಯ ದರ್ಶನಮಾತ್ರೇಣ ಮನಸ್ತೇ ವ್ಯಥಿತಂ ಭೃಶಮ್ ॥೧೭॥

ಯಾವನು ಯೋಗ್ಯನಾದವನೋ, ಅಂತಹ ಸುಕುಮಾರಮೂರ್ತಿಯು–ಈಗ ನೆಲದಮೇಲೆ ಕರಿನವಾದ ಹುಲಿಯ ಚರ್ಮದಲ್ಲಿ ಮಲಗಿಕೊಂಡಿರುವನಲ್ಲ! ॥೮–೧೧॥

ಹೀಗೆ ವಿಲಪಿಸುತಿರುವ ಶ್ರೀಸೀತಾದೇವಿಯ ಮಾತನ್ನುಕೇಳಿ ಮನಸ್ಸು ಕರಗಿದವಳಾದ ಭೂದೇವಿಯು, ಅವಳ ದರ್ಶನವನ್ನು ಮಾಡುವದಕ್ಕೋಸ್ಕರ ಪ್ರತ್ಯಕ್ಷವಾಗಿ ಒಂದಳು ॥೧೨॥

ಆಗ ತನ್ನ ತಾಯಿ ಬಂದುದನ್ನು ನೋಡಿ, ಸೀತಾದೇವಿಯು, ತನ್ನ ಪತಿಗೆ ನಿದ್ರಾಭಂಗವಾದೀತೆಂಬ ಭಯದಿಂದ, ತಾನು ಕುಳಿತಿದ್ದ ಸ್ಥಳದಲ್ಲಿಯೇ ಕೈಮುಗಿದು ಭೂದೇವಿಗೆ ನಮಸ್ಕಾರಮಾಡಿದಳು ॥೧೩॥

ಅನಂತರ ಭೂದೇವಿಯು, ಪತಿವ್ರತಾಶಿರೋಮಣಿಯಾಗಿಯೂ ಸುಗುಣರತ್ನಾಲಂಕೃತಳಾಗಿಯೂ ಇರುವ ಸೀತೆಯು ಅರಣ್ಯಮಧ್ಯದಲ್ಲಿ ಕ್ಲೇಶಪಡುತಿದ್ದರೂ ಇಷ್ಟು ಸಹನೆಯುಳ್ಳವಳಾಗಿರುವುದನ್ನು ಕಂಡು, ತನ್ನ ಮನಸ್ಸಿನಲ್ಲಿಯೇ ವ್ಯಥೆಪಟ್ಟಳು ಬಳಿಕ ಸೀತೆಯ ದುಃಖವು ಶಾಂತವಾಗುವುದಕ್ಕಾಗಿ ಹೀಗೆ ಮಾತನಾಡಿದಳು ॥೧೪–೧೫॥

ಎಲೌ ಪುತ್ರಿ! ಲೋಕದಲ್ಲಿ ಪತಿವ್ರತೆಯರಾದ ಸ್ತ್ರೀಯರಿಗೆಲ್ಲ ಸಾಮಾನ್ಯವಾಗಿ ವಿಪತ್ತುಗಳು ಇದ್ದೇ ಇರುವವು ಆದರೂ, ನಿನಗೆ ಸಮಾನವಾದ ಗುಣವುಳ್ಳ ಸ್ತ್ರೀಯನ್ನು ಈ ಭೂಮಿಯೊಳಗಾಗಿ ನಾನು ಎಲ್ಲಿಯೂ ನೋಡಿಲ್ಲ ಎಲೌ ಕಮಲಲೋಚನೆಯಾದ ಸೀತೆಯೇ! ಈಗ ನೀನು ಹೀಗೆ ವ್ಯಥೆಪಡುವುದು ಉಚಿತವಲ್ಲ ॥೧೬॥

ನಿನ್ನ ಪತಿಯ ಪಾದಗಳಿಗೆ ಅರಣ್ಯ ಸಂಚಾರದಿಂದ ವಿಶೇಷವಾಗಿ ವೇದನೆಯುಂಟಾಗಿರುವುದು; ಇದನ್ನು ನೋಡಿದಮಾತ್ರದಿಂದಲೇ ನಿನ್ನ ಮನಸ್ಸು ಹೀಗೆ ಅತ್ಯಂತವಾಗಿ ವ್ಯಥೆಪಡುತಿರುವುದು ॥೧೭॥

ಏತೇ ತೇ ಪತಯೇ ದೇಹಿ ಪಾದುಕೇ ಮತ್ಸಮರ್ಪಿತೇ ।
ರತ್ನಸಾರಸಮಾಕೀರ್ಣೇ ದೇವಾನಾಮಪಿ ದುರ್ಲಭೇ ॥೧೯॥
ಯೇ ಧೃತ್ವಾ ಗಚ್ಛತಃ ಪುಂಸೋ ವಿನಶ್ಯತಿ ಪಥಿ ಶ್ರಮಃ ।
ಕ್ಷುತ್ಪಿಪಾಸೇ ನ ಭವತಃ ಸುಖಶಯ್ಯೋಪವೇಶನಮ್ ॥೧೯॥
ಇತ್ಯುಕ್ತ್ವಾ ಪ್ರದದೌ ತಸ್ಯೈ ರತ್ನಪಾದುಕಯೋರ್ದ್ವಯಮ್ ॥೨೦॥
ಪ್ರಗೃಹ್ಯ ಪಾದುಕೇ ಸೀತಾ ಪಾದಸೌಖ್ಯಪ್ರದಾಯಕೇ ।
ಪರಮಾನನ್ದಸಮ್ಪನ್ನಾ ಮಾತರಂ ಪ್ರಣನಾಮ ಸಾ ॥೨೧॥
ದೃಷ್ಟ್ವಾ ಸ್ವಪ್ನೇ ತು ಸಂವಾದಂ ಭೂದೇವೀಸೀತಯೋರ್ಭೃಶಮ್ ।
ಸಮುತ್ಥಾಯ ಸ್ಥಿತೋ ರಾಮಃ ಪ್ರಹಸನ್ಮುಖಪಙ್ಕಜಃ ॥೨೨॥
ಅನ್ತರ್ದಧೇ ತತೋ ದೇವೀ ಭೂಕಾನ್ತಾ ಲಜ್ಜಯಾನ್ವಿತಾ ।
ರಾಮಃ ಸೀತಾಂ ಸಮುದ್ವೀಕ್ಷ್ಯ ಪ್ರಹಸನ್ನಿದಮಬ್ರವೀತ್ ॥೨೩॥
ಜನನೀದರ್ಶನಾತ್ ಸೀತೇ ಸುಖಮಾಪ್ನುಹಿ ಸಾಮ್ಪ್ರತಮ್ ।
ನಿತ್ಯಂ ಮದ್ಭಕ್ತಿಸಹಿತಂ ಮದ್ಧ್ಯಾನೈಕಪರಾಯಣಮ್ ।
ಭರತಂ ಕೈಕಯೀಂ ದೇವೀಂ ನ ನಿನ್ದಸ್ವ ಪುನಃಪುನಃ ॥೨೪॥

ಈಗ ನಾನು ಕೊಡುವ ರತ್ನಖಚಿತವಾಗಿರುವ–ದೇವತೆಗಳಿಗೂ ದುರ್ಲಭವಾದ ಈ ಯರಡು ಪಾದುಕೆಗಳನ್ನು ನಿನ್ನ ಪತಿಗೆ ಕೊಡುವಳಾಗು ॥೧೮॥

ಇವುಗಳನ್ನು ಧರಿಸಿಕೊಂಡು ಹೋಗುತಿರುವ ಪುರುಷನಿಗೆ, ಮಾರ್ಗದಲ್ಲಿ ಆಯಾಸವುಂಟಾಗುವುದಿಲ್ಲ, ಹಸಿವೂ ಬಾಯಾರಿಕೆಯೂ ಕಾಣಿಸಿಕೊಳ್ಳುವುದಿಲ್ಲ, ಹೋದ ಕಡೆಯಲ್ಲೆಲ್ಲ ಸುಖವಾಗಿ ದಿವ್ಯವಾದ ಹಾಸಿಗೆಯು ಸಿಕ್ಕಿ ಸುಖನಿದ್ರೆ ಬರುವುದು ॥೧೯॥

ಹೀಗೆಂದು ಹೇಳಿ, ಭೂದೇವಿಯು ಸೀತೆಯವಶಕ್ಕೆ ಎರಡು ರತ್ನಪಾದುಕೆಗಳನ್ನು ಕೊಟ್ಟಳು. ಆಗ ಸೀತೆಯು, ತನ್ನ ಪತಿಯ ಪಾದಗಳಿಗೆ ಸುಖದಾಯಕಗಳಾದ ಪಾದುಕೆಗಳನ್ನು ಸ್ವೀಕರಿಸಿ, ಪರಮಾನಂದ ಭರಿತಳಾಗಿ ತಾಯಿಗೆ ನಮಸ್ಕಾರಮಾಡಿದಳು ॥೨೦-೨೧॥

ಆ ಸಮಯದಲ್ಲಿ, ಭೂದೇವಿಗೂ ಸೀತೆಗೂ ಬಪಳಹೊತ್ತು ನಡೆದ ಈ ಸಲ್ಲಾಪವನ್ನು ಸ್ವಪ್ನದಲ್ಲಿ ಕಂಡು, ಶ್ರೀರಾಮನು ಮುಖಕಮಲದಲ್ಲಿ ಮಂದಹಾಸತೋರಿಸುತ ಎದ್ದು ಕುಳಿತುಕೊಂಡನು ॥೨೨॥

ಆಗ ಭೂದೇವಿಯು ಲಜ್ಜೆಪಟ್ಟವಳಾಗಿ ಅಂತರ್ಧಾನಹೊಂದಿಬಿಟ್ಟಳು ರಾಮಚಂದ್ರನು ಸೀತೆಯನ್ನು ನೋಡುತ ಮಂದಹಾಸಯುಕ್ತನಾಗಿ ಹೀಗೆ ಹೇಳಿದನು ॥೨೩॥

ಎಲೌ ಸೀತೆ! ನೀನು ನಿನ್ನ ಜನನಿಯ ದರ್ಶನದಿಂದ ವಿಶೇಷವಾಗಿ ಆನಂದವನ್ನನುಭವಿಸು, ಇದು ಉಚಿತವಾದ ಕಾರ್ಯವೆಂದು ನಾನೂ ತಿಳಿದಿರುವೆನು ಆದರೆ, ಸರ್ವದಾ ನನ್ನಲ್ಲಿ ಭಕ್ತಿಯಿ

ಇತ್ಯುಕ್ತಾ ಪ್ರಹಸನ್ತೀ ಸಾ ಪಾಮುಕೇ ರತ್ನನಿರ್ಮಿತೇ ।
ಭೂದತ್ತೇ ರಾಮಚನ್ದ್ರಸ್ಯ ಯೋಜಯಾಮಾಸ ಪಾದಯೋಃ ॥೬೫॥
ಏತಸ್ಮಿನ್ನೇವ ಸಮಯೇ ದಣ್ಡಕಾರಣ್ಯವಾಸಿನಃ ।
ರಾಮಂ ದೃಷ್ಟ್ವಮುಪಾಜಗ್ಮುಃ ಸದಾರಾಮುನಿಪುಙ್ಗವಾಃ ॥೬೬॥
ಕೋಟಿಕನ್ದರ್ಪಸದೃಶಂ ಸ್ನಿಗ್ಧದೇಹಂ ಶುಚಿಸ್ಮಿತಮ್ ।
ಪ್ರಭುಂ ದೂರ್ವಾದಳಶ್ಯಾಮಂ ನೀಲೋತ್ಪಲವರಸನ್ನಿಭಮ್ ॥೬೭॥
ದೀರ್ಘಬಾಹುಮುದಾರಾಙ್ಗಂ ಪದ್ಮಪತ್ರಾಯತೇಕ್ಷಣಮ್ ।
ಮುನಯೋ ಮುನಿಕಾನ್ತಾಶ್ಚ ದೃಷ್ಟ್ವಾ ಮೋಹಂ ಪ್ರಪೇದಿರೇ ॥೬೮॥
ಗತ್ವಾ ತೇ ಮುನಯಸ್ತತ್ರ ಸಹ ದಾರೈರ್ಮಹೌಜಸಃ ।
ಅಬ್ರುವನ್ ವಚನಂ ರಾಮಂ ತತ್ಸೌನ್ದರ್ಯವಿಮೋಹಿತಾಃ ॥೬೯॥
ರಾಮಚನ್ದ್ರಾಖಿಲಾಧಾರ ಸೌನ್ದರ್ಯೈಕತವಿಗ್ರಹ ।
ಪಾಹಿ ನಃ ಸಕಲಾನ್ ದೇವ ಮದನೇನಾತಿಪೀಡಿತಾನ್ ॥೭೦॥

ಟ್ಟುಕೊಂಡು ನನ್ನನ್ನೇ ಧ್ಯಾನಿಸುತಿರುವ ಭರತನನ್ನೂ, ನನ್ನ ತಾಯಿಯಾದ ಕೈಕೇಯೀದೇವಿಯನ್ನೂ, ಹೀಗೆ ಪದೇಪದೇ ನಿಂದಿಸಬೇಡ ॥೨೪॥

ಈರೀತಿಯಾಗಿ ಶ್ರೀರಾಮನಿಂದ ಹೇಳಲ್ಪಟ್ಟ ಸೀತೆಯು, ಲಜ್ಜೆಯಿಂದ ಮಂದಹಾಸವನ್ನು ತೋರಿಸುತ, ಭೂದೇವಿಯಿಂದ ಕೊಡಲ್ಪಟ್ಟಿದ್ದ ರತ್ನಖಚಿತವಾದ ಪಾದುಕೆಗಳನ್ನು ಶ್ರೀರಾಮಚಂದ್ರನ ಪಾದಗಳಿಗೆ ತೊಡಿಸಿದಳು ॥೨೫॥

ಈ ಸಮಯದಲ್ಲಿಯೇ, ದಂಡಕಾರಣ್ಯವಾಸಿಗಳಾದ ಮುನಿಶ್ರೇಷ್ಠರುಗಳು, ಶ್ರೀರಾಮನನ್ನು ನೋಡುವುದಕ್ಕೋಸ್ಕರ ತಮ್ಮ ಪತ್ನಿಯರೊಡಗೂಡಿ ಅಲ್ಲಿಗೆ ಬಂದವರಾದರು ॥೨೬॥

ಆಗ, ಕೋಟಿಮನ್ಮಥಸುಂದರನಾಗಿಯೂ ಸರ್ವಲೋಕೈಕ ನಾಯಕನಾಗಿಯೂ ದೂರ್ವಾದಳ ಶ್ಯಾಮಲಾಂಗನಾಗಿಯೂ ನೀಲೋಂದೀವರ ಸದೃಶಗಾತ್ರನಾಗಿಯೂ ದೀರ್ಘಬಾಹುವಾಗಿಯೂ ಪ್ರಶಸ್ತವಾದ ಅವಯವಸನ್ನಿವೇಶವುಳ್ಳವನಾಗಿಯೂ ಪದ್ಮಪತ್ರದಂತೆ ವಿಶಾಲವಾದ ನೇತ್ರವುಳ್ಳವನಾಗಿಯೂ ಇರುವ ಶ್ರೀರಾಮನನ್ನು ಕಂಡು, ಮುನಿಗಳೂ ಮುನಿಪತ್ನಿಯರೂ ಮೋಹಿಸಿಬಿಟ್ಟರು ॥೨೭-೨೮॥

ಬಳಿಕ ಶ್ರೀರಾಮನ ಸೌಂದರ್ಯದಿಂದ ಮೋಹಿತರಾದ ಮುನಿಗಳು, ತಮ್ಮ ಪತ್ನಿಯರೊಡನೆ ಶ್ರೀರಾಮನ ಸಮೀಪವನ್ನು ಸೇರಿ, ಅವನನ್ನು ಕುರಿತು ' ಸಮಸ್ತರಿಗೂ ಆಧಾರಭೂತನಾದವನೆ ! ಕೇವಲಸೌಂದರ್ಯಗುಣದಿಂದಲೇ ಮಾಡಲ್ಪಟ್ಟಿರುವ ಶರೀರವುಳ್ಳವನೆ! ಶ್ರೀ ರಾಮಚಂದ್ರನೆ ! ಕೇವಲ ಕಾಮಪೀಡಿತರಾಗಿರುವ ನಮ್ಮಗಳನ್ನು ರಕ್ಷಿಸು, ಎಂದು ಪ್ರಾರ್ಥಿಸಿದರು ॥೨೯-೩೦॥

ಶ್ರುತ್ವಾ ಮುನೀನಾಂ ತದ್ವಾಕ್ಯಂ ಸದಾರಾಣಾಂ ವಹೌಜಸಾಮ್ ।
ಕರ್ಣೌ ವಿಧಾಯ ಧರ್ಮಾತ್ಮಾ ರಾಮೋ ವಚನಮಬ್ರವೀತ್ ॥೩೧॥
ಶೃಣುಧ್ವಂ ವಚನಂ ಮೇದ್ಯ ಮುನಯಃ ಸಂಶಿತವ್ರತಾಃ ।
ಜಾತಿಭ್ರಂಶಕರಂ ವಾಕ್ಯಂ ಭವದ್ಭಿಃ ಸಮುದೀರಿತಮ್ ॥೩೨॥
ಜೈಂಹ್ಯಂ ಚ ಪುಂಸಿ ಮೇಥುನ್ಯಂ ಜಾತಿಭ್ರಂಶಕರಂ ವಿದುಃ ।
ನಿಶ್ಚಿತಂ ಧರ್ಮಶಾಸ್ತ್ರೇಷು ಬುದ್ಧಿಪೂರ್ವಂ ಕೃತಂ ಯದಿ ॥೩೩॥

ಮುನಯಊಚುಃ.

ಯದುಕ್ತಂ ಭವತಾ ನಾಥ ಜಾತಿಭ್ರಂಶೋ ಭವೇದಿತಿ ।
ತದ್ವಚಃ ಸತ್ಯಮೇವಾಸ್ತು ರಾಮೋ ದ್ವಿರ್ನಾಭಿಭಾಷತೇ ॥೩೪॥
ಜಾತೇಃ ಪರಿಗ್ರಹೋ ದೇವ ಭವತಃ ಪರಮಾತ್ಮನಃ ।
ಬನ್ಧೋ ನಿವೃತ್ತೇ ತೇನೈವ ಜಾತಿಬನ್ಧಃ ಕಥಂ ಭವೇತ್ ॥೩೫॥
ನಾಮರೂಪಾದಿಬನ್ಧಾನಾಂ ಹನನೇ ಯತ್ನಮಾಸ್ಥಿತಾಃ ।
ವಯಂ ರಾಮ ಮಹಾಬಾಹೋ ಕಾ ಭೀತಿಃ ಕೇಂ ವಿಜೇನ್ತನಮ್ ॥೩೬॥

ಹೀಗೆ ಪತ್ನಿಯರೊಡಗೂಡಿ ಪ್ರಾರ್ಥಿಸುತಿರುವ ಮಹಾ ತೇಜಸ್ಸಂಪನ್ನರಾದ ಋಷಿಗಳ ಆ ಮಾತನ್ನು ಕೇಳಿ, ಧರ್ಮಾತ್ಮನಾದ ರಾಮನು, ಕಿವಿಗಳನ್ನು ಮುಚ್ಚಿಕೊಂಡು ಹೀಗೆ ಹೇಳಿದನು ॥೩೧॥

ಮಹಾನಿಯಮಸಂಪನ್ನರಾಗಿರುವ ಮುನಿಗಳಿರಾ ! ನೀವು ನನ್ನ ವಿಜ್ಞಾಪನೆಯನ್ನು ಆಲಿಸಬೇಕು ನಿಮ್ಮಿಂದ ಹೇಳಲ್ಪಟ್ಟಿರುವ ಈ ಮಾತು, ಜಾತಿಭ್ರಂಶವನ್ನುಂಟುಮಾಡ ತಕ್ಕುದು ॥೩೨॥

ವಕ್ರತನವೂ ಪುರುಷರಲ್ಲಿ ಸಮಾಗಮವೂ ಜಾತಿಭ್ರಂಶಕರವೆಂದು ಧರ್ಮಶಾಸ್ತ್ರಗಳಲ್ಲಿ ನಿಶ್ಚಯಿಸಲ್ಪಟ್ಟಿರುವುದೆಂಬುದಾಗಿ ಧರ್ಮಜ್ಞರೆಲ್ಲರೂ ತಿಳಿದಿರುವರು ॥೩೩॥

ಇದನ್ನು ಕೇಳಿ ಋಷಿಗಳು ವಿಜ್ಞಾಪಿಸುವರು —

ಸ್ವಾಮಿ ! ಜಾತಿಭ್ರಂಶವಾಗುವುದೆಂದು ಈಗ ನಿನ್ನಿಂದ ಯಾವ ಮಾತು ಹೇಳಲ್ಪಟ್ಟಿತೋ ಅದು ಸತ್ಯವಾಗಿಯೇ ಇರಲಿ ರಾಮನೆಂದಿಗೂ ಎರಡು ಮಾತಾಡುವುದಿಲ್ಲವಲ್ಲವೆ ! ॥೩೪॥

ಎಲೈ ಸ್ವಾಮಿಯೆ ! ಪರಮಾತ್ಮನಾದ ನಿನಗೆ ಸಕಲಬಂಧಗಳೂ ನಿವೃತ್ತವಾಗಿರುವಾಗ, ಈ ಜಾತಿಯ ಪರಿಗ್ರಹವೆಂಬುದೂ–ಇದರ ಬಂಧವೆಂಬುದೂ ಹೇಗೆ ಸಂಭವಿಸುವುವು? ॥೩೫॥

ಎಲೈ ಮಹಾಭುಜನಾದ ರಾಮನೆ ! ನಾವುಗಳು ನಾಮರೂಪಾದಿ ಬಂಧಗಳನ್ನು ನಿಶ್ಶೇಷ ಮಾಡುವುದರಲ್ಲಿ ಸರ್ವದಾ ಪ್ರಯತ್ನಶೀಲರಾಗಿರುವೆವು ಹೀಗಿರುವಾಗ, ಈ ಜಾತಿಭ್ರಂಶವೆಂಬ ಭಯವಾವುದು ? ಇದನ್ನು ಕುರಿತು ಆಲೋಚಿಸುವುದೇನು ? ॥೩೬॥

ವಯಂ ಗಚ್ಛಾಮ ಹೇ ದೇವ ಜ್ಞಾನಾತ್ ತ್ವಾಮೇವ ರಾಘುವ ।
ನಾಮರೂಪೇ ವಿಹಾಯಾಶು ಸರಿತಃ ಸಾಗರಂ ಯಥಾ ॥೫೬॥
ತ್ವಮೇವ ಸರ್ವಲೋಕಾನಾಂ ಈಶ್ವರಃ ಪರಮೇಶ್ವರ ।
ತ್ವಂ ಹರ್ತಾ ಚೈವ ಕರ್ತಾ ಚ ಭರ್ತಾ ಸರ್ವಶರೀರಿಣಾಮ್ ॥೫೪॥
ಅನ್ತರ್ಯಾಮೀ ಸರ್ವಸಾಕ್ಷೀ ಭಗವಾನ್ ಭೂತಭಾವನಃ।
ಪರಮಾತ್ಮಾ ಪರಂ ಜ್ಯೋತಿಃ ನಿತ್ಯಸ್ತ್ವಂ ಕೇವಲೋಽವ್ಯಯಂ ॥೫೫॥
ಇತ್ಯುದೀರಿತಮಾಕರ್ಣ್ಯ ರಾಮಃ ಕಮಲಲೋಚನಃ ।
ವ್ಯವಸ್ಥಾಮಕರೋದ್ದೇವಃ ತಾಸಾಂ ತೇಷಾಮಪಿ ಪ್ರಭುಃ ॥೫೦॥
ಕೃಷ್ಣಾವತಾರೇ ಭವತಾಂ ಕಾಮಃ ಪೂರ್ಣೋ ಭವಿಷ್ಯತಿ ।
ಯೂಯಂ ತು ಗೋಪಕಾಭೂತ್ವಾ ಸರ್ವಾನ್ ಕಾಮಾನವಾಪ್ಸ್ಯಥ ॥೫೧॥
ಗಾವೋ ಭವನ್ತು ಸರ್ವಾಸ್ತಾಃ ಮುನಿಪತ್ನ್ಯಃ ಶುಚೇವ್ರತಾಃ ।
ನಿತ್ಯಂ ಪಯಃಪ್ರದಾನೇನ ಯೂಯಮುಂಹಸ್ತರಿಷ್ಯಥ ॥೫೨॥

ಎಲೈ ರಘುನಾಯಕನ! ನದಿಗಳು ತಮ್ಮ ಹೆಸರೂ ರೂಪವೂ ಅಳಿದುಹೋಗುವಂತೆ ಸಮುದ್ರದಲ್ಲಿ ಸೇರಿ ಹೇಗ ಏಕ್ಯಹೊಂದುವುನ್ತೋ, ಹಾಗೆ ನಾವು ತತ್ವಜ್ಞಾನದಿಂದ ನಮ್ಮ ನಾಮ ರೂಪಗಳನ್ನು ಬಟ್ಟಬಟ್ಟು ನಿನ್ನಲ್ಲಿಯೇ ಲಯಹೊಂದವವ ॥೫೩॥

ಎಲೈ ಪರಮವಿಭುವ! ಸಕಲಲೋಕಗಳಿಗೂ ನೀನೇ ಈಶ್ವರನು, ನೀನೇ ಸಂಹಾರಕನು, ಸೃಷ್ಟಿಕರ್ತನೂ ನೀನೆಯೇ ಸಕಲಪ್ರಾಣಿಗಳನ್ನೂ ಸಂರಕ್ಷಿಸುಕಕ್ಕವನೂ ನೀನೆಯೇ ॥೫೪॥

ನೀನು, ಸರ್ವಭೂತಗಳಲ್ಲಿಯೂ ಅಂತರ್ಯಾಮಿಯಾಗಿರುವೆ, ನೀನೇ ಸರ್ವಸಾಕ್ಷಿಯಾದವನು ಸಕಲಪ್ರಾಣಿಗಳಿಗೂ ಸೃಷ್ಟಿ ಸ್ಥಿತಿ ಲಯಕರ್ತೃವಾದ ಭಗವಂತನೂ ನೀನೇ ನೀನು, ಪರಮಾತ್ಮನೂ ಪರಜ್ಯೋತಿಯೂ ನಿತ್ಯನೂ ಕೇವಲನೂ ಅವ್ಯಯನೂ ಆಗಿರುವೆ ॥೫೯॥

ಈರೀತಿಯಾಗಿ ಆ ಮುನಿಗಳಿಂದ ಹೇಳಲ್ಪಟ್ಟುದನ್ನು ಕೇಳಿ, ಸರ್ವಸಮರ್ಥನಾದ ಕಮಲ ನಯನನಾದ ಶ್ರೀರಾಮನು, ಆ ಮುನಿಗಳಿಗೂ ಅವರ ಪತ್ನಿಯರಿಗೂ ಹೀಗ ಂದು ವ್ಯವಸ್ಥೆಯನ್ನು ಮಾಡಿದನು ॥೪೦॥

ಮುಂದೆ ಕೃಷ್ಣಾವತಾರದಲ್ಲಿ ನಿಮ್ಮಗಳ ಇಷ್ಟಾರ್ಥವು ಪರಿಪೂರ್ಣವಾಗುವುದು, ಆಗ ನೀವುಗಳು ಗೋಪಿಕಾಸ್ತ್ರೀಯರಾಗಿ ಹುಟ್ಟಿ ಸಮಸ್ತಕಾಮಗಳನ್ನೂ ಪಡೆಯುವಿರಿ ॥೪೧॥

ಪರಿಶುದ್ಧವಾದ ವ್ರತವುಳ್ಳ ಈ ಮುನಿಪತ್ನಿಯರೆಲ್ಲರೂ ಗೋವುಗಳಾಗಿ ಹುಟ್ಟಲಿ ಎಲೈ ಮುನಿಪತ್ನಿಯಿರಾ! ಪ್ರತಿದಿನವೂ ಹಾಲುಕೊಡುವುದರಿಂದ, ನೀವು ಈ ಪಾಪವನ್ನು ಕಳೆದುಕೊಳ್ಳುವಿರಿ ॥೪೨॥

ಇತ್ಯುಕ್ತ್ವಾ ತಾಂ ವಿಸೃಜ್ಯಾಥ ರಾಮಃ ಕಮಲಲೋಚನಃ ।
ಗತಶ್ರಮೋ ಯಯೌ ಮಾರ್ಗಂ ರತ್ನಪಾದುಕಯೋರ್ಬಲಾತ್ ॥೪೩॥
ಪ್ರತಸ್ಥೇಗಸ್ತ್ಯಮುದ್ದಿಶ್ಯ ಸಾನುಜಃ ಸಹ ಸೀತಯಾ ।
ಪಶ್ಯಂ ವನಾನಿ ಸರ್ವಾಣಿ ಪರ್ವತಾಂಶ್ಚಾಭ್ರಸನ್ನಿಭಾನ್ ॥೪೪॥
ಏವಂ ಸುದೂರಮಧ್ವಾನಂ ಗತ್ವಾ ಲಕ್ಷ್ಮಣಪೂರ್ವಜಃ ।
ಉವಾಚಾಥ ಸ ಸೌಮಿತ್ರಿಂ ಕುಂಭಜಾಶ್ರಮಸನ್ನಿಧೌ ॥೪೫॥
ಅಗಸ್ತ್ಯಸ್ಯಾಶ್ರಮಪದಂ ಸೌಮಿತ್ರೇ ಪ್ರವಿಶಾಗ್ರತಃ ।
ನಿವೇದಯೇಹ ಮಾಂ ಪ್ರಾಪ್ತಂ ಋಷಯೇ ಸೀತಯಾ ಸಹ ॥೪೬॥
ಸ ಪ್ರವಿಶ್ಯಾಶ್ರಮಂ ಪಶ್ಚಾತ್ ಲಕ್ಷ್ಮಣೋ ರಾಘವಾನುಜಃ ।
ಅಗಸ್ತ್ಯಶಿಷ್ಯಮಾಸಾದ್ಯ ವಾಕ್ಯಮೇತದುವಾಚ ಹ ॥೪೭॥
ರಾಮೋ ದಾಶರಥಿಃ ಶ್ರೀಮಾನ್ ಭಾರ್ಯಯಾ ಚ ಮಯಾ ಸಹ ।
ಪಿತೃವಾಕ್ಯಾದ್ವನಂ ಗತ್ವಾ ಮುನಿಂ ದ್ರಷ್ಟುಮಿಹಾಗತಃ ॥೪೮॥
ತಸ್ಯ ತದ್ವಚನಂ ಶ್ರುತ್ವಾ ಲಕ್ಷ್ಮಣಸ್ಯ ತಪೋಧನಃ ।
ತಥೇತ್ಯುಕ್ತ್ವಾಗ್ನಿಶರಣಂ ಪ್ರವಿವೇಶ ನಿವೇದಿತುಮ್ ॥೪೯॥

ಹೀಗೆಂದು ಹೇಳಿ, ಒಳಿಕ ಅವರನ್ನು ಕಳುಹಿಸಿಕೊಟ್ಟು, ಕಮಲನಯನನಾದ ಶ್ರೀರಾಮನು, ರತ್ನಪಾದುಕೆಗಳ ಬಲದಿಂದ ನಿರಾಯಾಸವಾಗಿ ಮಾರ್ಗದಲ್ಲಿ ಹೊರಟನು ॥೪೩॥

ಅನಂತರ, ಸಮಸ್ತವಾದ ವನಗಳನ್ನೂ ಮೇಘಸದೃಶಗಳಾದ ಪರ್ವತಗಳನ್ನೂ ನೋಡುತ, ಸೀತಾಲಕ್ಷ್ಮಣರೊಡನೆ ಅಗಸ್ತ್ಯಮುನಿಯ ಆಶ್ರಮವನ್ನು ಕುರಿತು ಹೊರಟನು ॥೪೪॥

ಹೀಗೆ ಬಹುದೂರಮಾರ್ಗವನ್ನು ಕಳದು, ಲಕ್ಷ್ಮಣಾಗ್ರಜನಾದ ಆ ರಾಮಚಂದ್ರನು, ಅಗಸ್ತ್ಯರ ಆಶ್ರಮದ ಸಮೀಪದಲ್ಲಿ ಲಕ್ಷ್ಮಣನನ್ನು ಕುರಿತು 'ವತ್ಸ! ಸೌಮಿತ್ರೇ! ಈ ಅಗಸ್ತ್ಯಮುನಿಯ ಆಶ್ರಮವನ್ನು ನೀನು ಮುಂಚೆ ಪ್ರವೇಶಿಸುವನಾಗು, ನಾನು ಸೀತೆಯೊಡನೆ ಬಂದಿರುವೆನೆಂಬುದಾಗಿ ಆ ಮಹರ್ಷಿಗೆ ವಿಜ್ಞಾಪಿಸು ' ಎಂದು ಹೇಳಿದನು ॥೪೫-೪೬॥

ಒಳಿಕ, ರಾಘವನ ಅನುಜನಾದ ಆ ಲಕ್ಷ್ಮಣನು, ಆಶ್ರಮದೊಳಕ್ಕೆ ಹೋಗಿ, ಅಗಸ್ತ್ಯಮುನಿಯ ಶಿಷ್ಯನನ್ನು ಕಂಡು, ಅವನನ್ನು ಕುರಿತು 'ದಶರಥಪುತ್ರನಾದ ಶ್ರೀರಾಮಚಂದ್ರನು, ಪತ್ನಿಯಾದ ಸೀತೆಯೊಡನೆಯೂ ಅನುಜನಾದ ನನ್ನೊಡನೆಯೂ ಕೂಡ, ತಂದೆಯ ಆಜ್ಞೆಯಂತೆ ಅರಣ್ಯವಾಸವನ್ನು ಸ್ವೀಕರಿಸಿ, ಈಗ ಅಗಸ್ತ್ಯಮಹರ್ಷಿಯನ್ನು ನೋಡುವುದಕ್ಕಾಗಿ ಇಲ್ಲಿಗೆ ಬಂದಿರುವನು ' ಎಂದು ತಿಳುಹಿದನು ॥೪೭-೪೮॥

ಲಕ್ಷ್ಮಣನು ಹೇಳಿದ ಆ ಮಾತನ್ನು ಕೇಳಿ, ಆ ತಪೋಧನನು, ಹಾಗೆಯೇ ಆಗಲೆಂದು ಅವನಿಗೆ ಹೇಳಿ, ಈ ವಿಷಯವನ್ನು ಅಗಸ್ತ್ಯನಿಗೆ ವಿಜ್ಞಾಪಿಸುವುದಕ್ಕಾಗಿ ಅಗ್ನಿಹೋತ್ರದ ಮನೆಗೆ ಹೋದನು ॥೪೯॥

ಸ ಪ್ರವಿಶ್ಯ ಮುನಿಶ್ರೇಷ್ಠಂ ತಪಸಾ ದುಷ್ಪ್ರಧರ್ಷಣಮ್ ।
ಕೃತಾಞ್ಜಲಿರುವಾಚೇದಂ ರಾಮಾಗಮನಮಞ್ಜಸಾ ॥೫೦॥
ರಾಮೋ ದಾಶರಥಿರ್ಬ್ರಹ್ಮನ್ ಸೀತಯಾ ಲಕ್ಷ್ಮಣೇನ ಚ ।
ಅಗತೋ ದರ್ಶನಾರ್ಥಂ ತೇ ಬಹಿಸ್ತಿಷ್ಠತಿ ಸಾಞ್ಜಲಿಃ ॥೫೧॥

ಅಗಸ್ತ್ಯ ಉವಾಚ

ಶೀಘ್ರಮಾನಯ ಭದ್ರಂ ತೇ ರಾಮಂ ಮಮ ಹೃದಿ ಸ್ಥಿತಮ್ ।
ತಮೇವ ಧ್ಯಾಯಮಾನೋಹಂ ಕಾಂಕ್ಷಮಾಣಸ್ತದಾಗಮಮ್ ॥೫೨॥
ಇತ್ಯುಕ್ತ್ವಾ ಸ್ವಯಮುತ್ಥಾಯ ಮುನಿಭಿಃ ಸಹಿತೋ ಮುನಿಃ ।
ಅಭ್ಯಯಾತ್ ಪರಯಾ ಭಕ್ತ್ಯಾ ಗತೋ ರಾಮಮಥಾಬ್ರವೀತ್ ॥೫೩॥
ಆಗಚ್ಛ ರಾಮ ಭದ್ರಂ ತೇ ದಿಷ್ಟ್ಯಾ ತೇದ್ಯ ಸಮಾಗಮಃ ।
ಪ್ರಿಯಾತಿಥಿರ್ಮಮ ಪ್ರಾಪ್ತೋಸ್ಯದ್ಯ ಮೇ ಸಫಲಂ ದಿನಮ್ ॥೫೪॥
ರಾಮೋಪಿ ಮುನಿಮಾಯಾನ್ತಂ ದೃಷ್ಟ್ವಾ ಹರ್ಷಸಮಾಕುಲಃ ।
ಜಗಾಮ ಪರಮಪ್ರೀತಃ ತಸ್ಯ ಪಾದೌ ಪರನ್ತಪಃ ॥೫೫॥

ಅಲ್ಲಿಗೆ ಪ್ರವೇಶಿಸಿ, ಆ ಅಗಸ್ತ್ಯಶಿಷ್ಯನು, ತನ್ನ ತಪೋಮಹಿಮೆಯಿಂದ ಸರ್ವಭೂತಗಳಿಗೂ ಅಪ್ರಧೃಷ್ಯನಾಗಿರುವ ಅಗಸ್ತ್ಯಮಹರ್ಷಿಯನ್ನು ಕುರಿತು, ಅಂಜಲಿಬಂಧನಮಾಡಿಕೊಂಡು, ಶ್ರೀರಾಮನ ಆಗಮನವನ್ನು ಹೀಗೆ ಶೀಘ್ರವಾಗಿ ವಿಜ್ಞಾಪಿಸಿದನು ॥೫೦॥

ಎಲೈ ಬ್ರಹ್ಮರ್ಷಿವರ್ಯರೆ! ದಶರಥಪುತ್ರನಾದ ರಾಮನು, ಸೀತಾಲಕ್ಷ್ಮಣರೊಡನೆ ತಮ್ಮ ದರ್ಶನಕ್ಕೋಸ್ಕರ ಒಂದು, ಆಶ್ರಮದ ಹೊರಗೆ ಒದ್ದಾಂಬಲಿಯಾಗಿ ಕಾಯ್ದುಕೊಂಡಿರುವನು ॥

ಇದನ್ನು ಕೇಳಿ, ಅಗಸ್ತ್ಯಮುನಿಯು ಶಿಷ್ಯನಿಗೆ ಹೇಳುವನು —

ವತ್ಸ! ನಿನಗೆ ಮಂಗಳವಾಗಲಿ ನನ್ನ ಹೃದಯದಲ್ಲಿ ನಲೆಸಿಗುವ ಶ್ರೀರಾಮನನ್ನು ಬೇಗನೆ ಕರೆದುಕೊಂಡು ಬಾ ನಾನು ಅವನ ಆಗಮನವನ್ನು ಒಯಸಿ ಅವನನ್ನೇ ಧ್ಯಾನಿಸುತಿರುವೆನು ॥೫೨॥

ಹೀಗೆಂದು ಶಿಷ್ಯನಿಗೆ ಹೇಳಿ, ಅಗಸ್ತ್ಯಮುನಿಯು, ತಾನೇ ಅಲ್ಲಿಂದ ಎದ್ದು ಋಷಿಗಳೊಡನೆ ಪರಮಭಕ್ತಿಯಿಂದ ಶ್ರೀರಾಮನನ್ನು ಎದುರುಗೊಂಡನು, ಬಳಿಕ ಅಲ್ಲಿ ಹೋಗಿ ಶ್ರೀರಾಮನನ್ನು ಕುರಿತು ಹೀಗೆ ಹೇಳಿದನು ॥೫೩॥

ಎಲೈ ರಾಮನೆ! ಒಳಕ್ಕೆ ಬರುವನಾಗು, ನಿನಗೆ ಮಂಗಳವಾಗಲಿ ನನ್ನ ಸುಕೃತಪಶೇಷದಿಂದ ಈ ದಿವಸ ನನಗ ನಿನ್ನ ಸಮಾಗಮಸುಖವು ಲಭಿಸಿತು ನನಗೆ ಪ್ರಿಯನಾದ ಅತಿಥಿಯಾಗಿ ನೀನು ಒಂದಿರುವೆ, ಈಗ ಈ ದಿವಸವು ಸಫಲವಾಯ್ತು ॥೫೪॥

ಹೀಗೆ ವಿಜ್ಞಾಪಿಸಿಕೊಂಡು ತನ್ನ ಹತ್ತಿರಕ್ಕೆ ಬರುತಿರುವ ಅಗಸ್ತ್ಯಮುನಿಯನ್ನು ಕಂಡು, ಪರಂತಪನಾದ ರಾಮನೂ ಕೂಡ, ಪರಮ ಹರ್ಷಯುಕ್ತನಾಗಿ, ಮಹಾ ಪ್ರೀತಿಮನ್ವಿತನಾಗಿ ಅವನ ಕಾಲುಗಳಿಗೆ ನಮಸ್ಕರಿಸಿದನು ॥೫೫॥

ಸ ತಮುತ್ಥಾಪ್ಯ ಮುನಿರಾಟ್ ರಾಮಮಾಲಿಙ್ಗ್ಯ ಭಕ್ತಿತಃ ।
ತದ್ಗಾತ್ರಸ್ಪರ್ಶನಾಹ್ಲಾದಸ್ರವನ್ನೇತ್ರಜಲಾಕುಲಃ ॥೫೬॥
ಗೃಹೀತ್ವಾ ಕರಪಕೇಸ ಕರೇಣ ರಘುನನ್ದನಮ್ ।
ಜಗಾಮ ಸ್ವಾಶ್ರಮಂ ಹೃಷ್ಟಮನಸಾ ಮುನಿಪುಙ್ಗವಃ ॥೫೭॥
ಸುಖೋಪವಿಷ್ಟಂ ಸಮ್ಪೂಜ್ಯ ಪೂಜಯಾ ಬಹುವಿಸ್ತರಮ್ ।
ಭೋಜಯಿತ್ವಾ ಯಥಾನ್ಯಾಯ್ಯಂ ಭೋಜ್ಯೈರ್ವನ್ಯೈರಥಾಬ್ರವೀತ್॥೫೮॥
ಇದಂ ಧನುರ್ಮಹದ್ದಿವ್ಯಂ ಮಹಾಸಾರಂ ಮಹಾದ್ಯುತಿ ।
ವೈಷ್ಣವಂ ಪುರುಪವ್ಯಾಘ್ರ ನಿರ್ಮಿತಂ ವಿಶ್ವಕರ್ಮಣಾ ॥೫೯॥
ಅಮೋಘಃ ಸೂರ್ಯಸಙ್ಕಾಶೋ ಬ್ರಹ್ಮದತ್ತಃ ಶರೋತ್ತಮಃ ।
ದತ್ತೋ ಮಮ ಮಹೇನ್ದ್ರೇಣ ತೂಣೀ ಚಾಕ್ಷಯ್ಯಸಾಯಕೌ ।
ಸಮ್ಪೂರ್ಣೌ ನಿಶಿತೈರ್ಬಾಣೈಃ ಜ್ವಲದ್ಭಿರಿವ ಪಾವಕೈಃ ॥೬೦॥
ಮಹಾರಜತಕೋಶೋಯಂ ಅಸಿರ್ಹೇಮವಿಭೂಷಿತಃ ॥೬೧॥
ಅನೇನ ಧನುಷಾ ರಾಮ ಹತ್ವಾ ಸಂಖ್ಯೇ ಮಹಾಸುರಾನ್ ।
ಆಜಹಾರ ಪುರಾ ವಿಷ್ಣೋಃ ಶ್ರಿಯಂ ದೀಪ್ತಾಂ ದಿವೌಕಸಾಮ್ ॥೬೨॥

ಬಳಿಕ ಆ ಮುನಿಶ್ರೇಷ್ಠನು ರಾಮನನ್ನು ಎಬ್ಬಿಸಿ, ಭಕ್ತಿಯಿಂದ ಅವನನ್ನು ಆಲಿಂಗಿಸಿಕೊಂಡು, ಅವನ ಶರೀರಸ್ಪರ್ಶದಿಂದುಂಟಾದ ಆನಂದದಿಂದ ಕಣ್ಣೀರುಸುರಿಸುತ್ತ, ಒಂದುಕೈಯಿಂದ ಶ್ರೀರಾಮನನ್ನು ಕೈಯಲ್ಲಿ ಹಿಡಿದುಕೊಂಡು, ಹರ್ಷಯುಕ್ತವಾದ ಮನಸ್ಸಿನಿಂದ ತನ್ನ ಆಶ್ರಮದೊಳಗೆ ಪ್ರವೇಶಮಾಡಿದನು ॥೫೬—೫೭॥

ಅಲ್ಲಿ ಸುಖಾಸೀನನಾದ ಶ್ರೀರಾಮನನ್ನು ವಿಶೇಷವಾಗಿ ಪೂಜಿಸಿ, ಆರಣ್ಯಕವಾದ ಆಹಾರಗಳಿಂದ ಯಥಾಯೋಗ್ಯವಾಗಿ ಅವನಿಗೆ ಆತಿಥ್ಯವನ್ನು ಮಾಡಿ, ಅನಂತರ ಈರೀತಿಯಾಗಿ ವಿಜ್ಞಾಪಿಸಿದನು ॥೫೮॥

ಎಲೈ ನರವ್ಯಾಘ್ರನೆ! ಮಹಾಸಾರವಾಗಿಯೂ ಮಹಾಪ್ರಕಾಶವಾಗಿಯೂ ವಿಶ್ವಕರ್ಮನಿಂದ ನಿರ್ಮಿತವಾಗಿಯೂ ಇರುವ ದಿವ್ಯವಾದ ಈ ವೈಷ್ಣವಧನುಸ್ಸೂ, ಬ್ರಹ್ಮದತ್ತವಾಗಿಯೂ ಸೂರ್ಯದೃಶವಾಗಿಯೂ ಇರುವ ಈ ಅಮೋಘಾಸ್ತ್ರವೂ, ಅಗ್ನಿಯಂತೆ ಪ್ರಜ್ವಲಿಸುತಿರುವ ಬಾಣಗಳಿಂದ ಪರಿಪೂರ್ಣವಾದ ಈ ಅಕ್ಷಯತೂಣೀರಗಳೂ, ದಿವ್ಯವಾದ ಬೆಳ್ಳಿಯ ಒರೆಯುಳ್ಳದಾಗಿಯೂ ಸುವರ್ಣಾಲಂಕೃತವಾಗಿಯೂ ಇರುವ ಈ ಖಡ್ಗವೂ ಕೂಡ, ನಿನಗೆ ಕೊಡುವುದಕ್ಕಾಗಿ ಮಹೇಂದ್ರನಿಂದ ನನಗ ಕೊಡಲ್ಪಟ್ಟಿರುವುವು ॥೫೯-೬೧॥

ಎಲೈರಾಮನೆ! ಪೂರ್ವದಲ್ಲಿ ಈ ಧನುಸ್ಸಿನಿಂದಲೇ ಶ್ರೀಮನ್ಮಹಾವಿಷ್ಣುವು ಕ್ರೂರರಾದ ರಾಕ್ಷಸರನ್ನು ಯುದ್ಧದಲ್ಲಿ ಕೊಂದು, ಉಜ್ಜ್ವಲವಾದ ದೇವತೆಗಳ ಲಕ್ಷ್ಮಿಯನ್ನು ಹಿಂದಿರುಗಿ ತಂದನು ॥

ತದ್ಧನುಸ್ತ್ಸ್ಯಾ ಚ ತೂಣೀರೌ ಶರಂ ಖಡ್ಗಂ ಚ ಮಾನದ ।
ಜಯಾಯ ಪ್ರತಿಗೃಹ್ಣೀಷ್ವ ತವೈತತ್ ಪೂರ್ವಮಾಯುಧಮ್ ।೬೩॥
ಏವಂ ದತ್ತ್ವಾ ಮಹಾತೇಜಾಃ ಸಮಸ್ತಂ ತದ್ವರಾಯುಧಮ್ ।
ಕೃತಾಞ್ಜಲಿರುವಾಚೇದಂ ಅಗಸ್ತ್ಯೋ ಭಗವಾ೯ ಪುನಃ ॥೬೪॥

ಇತಿ ಶ್ರೀಮದರಣ್ಯಕಾಣ್ಡೇ ಅಗಸ್ತ್ಯದತ್ತಧನುರ್ಬಾಣಾದಿ
ಪ್ರತಿಗ್ರಹಣಕಥನಂ ನಾಮ ಷಷ್ಠಃ ಸರ್ಗಃ



ಸರ್ವರಿಗೂ ರಕ್ಷಕನಾದ ಶ್ರೀರಾಮನೆ! ಈಗ ನೀನು ಮುಂದೆ ಅನೇಕರಾದ ರಾಕ್ಷಸರನ್ನು ಗೆಲ್ಲುವುದಕ್ಕಾಗಿ ಆ ಧನುಸ್ಸನ್ನೂ ಆ ಅಕ್ಷಯತೂಣೀರಗಳನ್ನೂ ಆ ಬಾಣವನ್ನೂ ಆ ಖಡ್ಗವನ್ನೂ ಸ್ವೀಕರಿಸುವನಾಗು ಇದು ನಿನಗೆ ಪೂರ್ವದಲ್ಲಿ ಆಯುಧವಾಗಿದ್ದಿತು ॥೬೩॥

ಹೀಗೆಂದು ಹೇಳಿ, ಪೂಜ್ಯನಾದ ಅಗಸ್ತ್ಯಮುನಿಯು, ದಿವ್ಯವಾದ ಆ ಆಯುಧಗಳನ್ನೆಲ್ಲ ಶ್ರೀರಾಮನಿಗೆ ಸಮರ್ಪಿಸಿ, ಮತ್ತ ಕೈಮುಗಿದುಕೊಂಡು ಶ್ರೀರಾಮನನ್ನು ಕುರಿತು ಮಾತನಾಡಿದನು ॥೬೪॥

ಇದು ಅರಣ್ಯಕಾಂಡದಲ್ಲಿ ಅಗಸ್ತ್ಯದತ್ತ ಧನುರ್ಬಾಣಾದಿ ಪ್ರತಿಗ್ರಹಕಥನವೆಂಬ
ಆರನೆಯ ಸರ್ಗವು



ಅಥ ಶ್ರೀಮದರಣ್ಯಕಾಂಡೇ ಸಪ್ತಮಃ ಸರ್ಗಃ.

ಅಗಸ್ತ್ಯಉವಾಚ.

ತ್ವದಾಗಮನಮೇವಾಹಂ ಪ್ರತೀಕ್ಷ್ಯ ಸಮವಸ್ಥಿತಃ ।
ಯದಾ ಕ್ಷೀರಸಮುದ್ರಾಸ್ತೇ ಬ್ರಹ್ಮಣಾ ಪ್ರಾರ್ಥಿತಃ ಪುರಾ ॥೧॥
ಭೂಮೇರ್ಭಾರಾಪನುಪತ್ತ್ಯರ್ಥಂ ರಾವಣಸ್ಯ ವಧಾಯ ಚ ।
ತದಾದಿ ದರ್ಶನಾಕಾಂಕ್ಷೀ ತವ ರಾಮ ತಪಶ್ಚರ ॥೨॥
ವಸಾಮಿ ಮುನಿಭಿಃ ಸಾರ್ಧಂ ತ್ವಾಮೇವ ಪರಿಚಿನ್ತಯ ।
ಕದಾ ಮೇ ದರ್ಶನಂ ಭೂಯಾತ್ ತವೇತಿ ರಘುನನ್ದನ ॥೩॥
ಸೃಷ್ಟೇಃ ಪ್ರಾಗೇಕವಾಸೀಃ ನಿರ್ವಿಕಲ್ಪೋನುಪಾಧಿಕಃ ।
ತ್ವದಾಶ್ರಯಾ ತ್ವದ್ವಿಷಯಾ ಮಾಯಾ ತೇ ಶಕ್ತಿರುಚ್ಯತೇ ॥೪॥
ತ್ವಾಮೇವ ನಿರ್ಗುಣಂ ಶಕ್ತಿಃ ಆವೃಣೋತಿ ಯದಾ ತದಾ ।
ಅವ್ಯಾಕೃತಮಿತಿ ಪ್ರಾಹುಃ ವೇದಾನ್ತಪರಿನಿಷ್ಠಿತಾಃ ॥೫॥

ಅರಣ್ಯಕಾಂಡದಲ್ಲಿ ಏಳನೆಯ ಸರ್ಗವು

ಅಗಸ್ತ್ಯಮುನಿಯು ಹೇಳಿದುದೇನೆಂದರೆ —

ಎಲೈ ರಾಮಚಂದ್ರನೆ! ನಾನು ನಿನ್ನ ಆಗಮನವನ್ನೇ ನಿರೀಕ್ಷಿಸುತಿದ್ದೆನು, ಯಾವಾಗ ನೀನು ಭೂಮಿಯ ಭಾರವನ್ನು ಹೋಗಲಾಡಿಸುವುದಕ್ಕೂ ರಾವಣನನ್ನು ಕೊಲ್ಲುವುದಕ್ಕೂ ಪೂರ್ವದಲ್ಲಿ ಬ್ರಹ್ಮನಿಂದ ಕ್ಷೀರಸಮುದ್ರಸಮೀಪದಲ್ಲಿ ಪ್ರಾರ್ಥಿಸಲ್ಪಟ್ಟೆಯೋ, ಆಕಾಲಮೊದಲುಗೊಂಡು, ನಾನು ನಿನ್ನ ದರ್ಶನವನ್ನು ಅಪೇಕ್ಷಿಸಿ ತಪಸ್ಸುಮಾಡುತ್ತ ಯಾವಾಗ ನಿನ್ನ ದರ್ಶನವಾದೀತೋ ಎಂದು ನಿನ್ನನ್ನೇ ಧ್ಯಾನಿಸುತ, ಮುನಿಗಳೊಡನೆ ಇಲ್ಲಿ ವಾಸಮಾಡಿಕೊಂಡಿರುವೆನು ॥೧-೩॥

ಎಲೈ ಸ್ವಾಮಿಯೇ! ಈ ಜಗತ್ತು ಸೃಷ್ಟಿಯಾಗುವುದಕ್ಕೆ ಮೊದಲು, ನಿರ್ವಿಕಲ್ಪನಾಗಿಯೂ ಉಪಾಧಿರಹಿತನಾಗಿಯೂ ಇರುವ ನೀನೊಬ್ಬನೇ ಇದ್ದೆ ನಿನ್ನನ್ನು ಆಶ್ರಯಿಸಿಕೊಂಡು ನಿನ್ನನ್ನೇ ವಿಷಯಮಾಡಿಕೊಂಡು ಪ್ರವರ್ತಿಸುವ ನಿನ್ನ ಶಕ್ತಿಯು ಮಾಯೆಯೆಂದು ಹೇಳಲ್ಪಡುವುದು ॥೪॥

ನಿರ್ಗುಣನಾದ ನಿನ್ನನ್ನು ಯಾವಾಗ ಈ ಶಕ್ತಿಯು ಆವರಿಸುವುದೋ, ಆಗ ಇದನ್ನು ಅವ್ಯಾಕೃತವೆಂದು ವೇದಾಂತಜ್ಞಾನಸಂಪನ್ನರು ಹೇಳುವರು ॥೫॥

ಮೂಲಪ್ರಕೃತಿರಿತ್ಯೇಕೇ ಪ್ರಾಹುರ್ಮಾಯೇತಿ ಕೇಚನ ।
ಅವಿದ್ಯಾ ಸಂಸೃತಿರ್ಬನ್ಧಃ ಇತ್ಯಾದಿ ಬಹುಧೋಚ್ಯತೇ ॥೬॥

ತ್ವಯಾ ಸಬಿಕ್ಷ್ಯಮಾಣಾ ಸಾ ಮಹತ್ತತ್ತ್ವಂ ಪ್ರಸೂಯತೇ ।
ಮಹತ್ತತ್ತ್ವಾದಹಙ್ಕಾರಃ ತ್ವಯಾ ಸಞ್ಚೋದಿತಾದಭೂತ್ ॥೭॥

ಅಹಙ್ಕಾರೋ ಮಹತ್ತತ್ತ್ವಾತ್ ಸಮ್ಭೂತಸ್ತ್ರಿವಿಧೋಭವತ್ ।
ಸಾತ್ವಿಕೋ ರಾಜಸಶ್ಚೈವ ತಾಮಸಶ್ಚೇತಿ ಗಣ್ಯತೇ ॥೮॥

ಸಾತ್ವಿಕಾತ್ ಸ್ಯುರಹಙ್ಕಾರಾತ್ ಮನಶ್ಚೇನ್ದ್ರಿಯದೇವತಾಃ ।
ವಿಷ್ಣುರ್ಜಾಗ್ರದವಸ್ಥಾ ಚ ಸ್ಥಿತಿಕರ್ತಾ ಜಗತ್ಪ್ರಭುಃ ॥೯॥

ತದ್ರಜೋಗುಣತಶ್ಚಾಸ್ಯ ಇನ್ದ್ರಿಯಾಣ್ಯಸವಃ ಕ್ರಮಾತ್ ।
ಚತುರ್ಮುಖಸ್ತಥಾ ಸ್ವಪ್ನಃ ಲಿಙ್ಗದೇಹಸ್ತಥಾಽಭವತ್ ॥೧೦॥

ತಾಮಸಾಹಂಕೃತೇರುದ್ರಃ ಸುಷುಪ್ತಿರ್ಮಾತ್ರಪಞ್ಚಕಮ್ ।
ತೇಭ್ಯಃ ಸ್ಥೂಲಾನಿ ಭೂತಾನಿ ತೇಭ್ಯೋ ಬ್ರಹ್ಮಾಣ್ಡಮುದ್ಬಭೌ ॥೧೧॥

ಮತ್ತೆ ಕೆಲವರು ಇದನ್ನು ಪ್ರಕೃತಿಯಂದೂ, ಕೆಲವರು ಮಾಯೆಯೆಂದೂ ಹೇಳುವರು, ಅವಿದ್ಯೆ ಸಂಸಾರ ಒಂಧ ಇತ್ಯಾದಿ ಶಬ್ದಗಳಿಂದ ಇದು ಬಹುಪ್ರಕಾರವಾಗಿ ಹೇಳಲ್ಪಡುವುದು ॥

ಆ ಮಾಯೆಯು, ನಿನ್ನಿಂದ ಪ್ರೇರಿಸಲ್ಪಟ್ಟುದಾಗಿ, ಮಹತ್ತತ್ತ್ವವನ್ನು ಪ್ರಸವಿಸುವುದು, ಬಳಿಕ ನಿನ್ನಿಂದ ಪ್ರೇರಿತವಾದ ಆ ಮಹತ್ತತ್ತ್ವದ ದೆಸೆಯಿಂದ ಅಹಂಕಾರವು ಉದಯಿಸುವುದು ॥೭॥

ಈ ಮಹತ್ತತ್ತ್ವದದೆಸೆಯಿಂದ ಉದಯಿಸಿದ ಅಹಂಕಾರವು ಮೂರುವಿಧವಾಗಿರುವುದು ಇದು, ಸಾತ್ವಿಕವೆಂದೂ ರಾಜಸವೆಂದೂ ತಾಮಸವೆಂದೂ ಪರಿಗಣಿತವಾಗಿರುವುದು ॥೮॥

ಇವುಗಳಲ್ಲಿ ಸಾತ್ವಿಕವಾದ ಅಹಂಕಾರದ ದೆಸೆಯಿಂದ ಮನಸ್ಸೂ ಜ್ಞಾನೇಂದ್ರಿಯಗಳೂ ಜಾಗ್ರದವಸ್ಥೆಯೂ ಸ್ಥಿತಿಕರ್ತನೂ ಜಗತ್ಪ್ರಭುವೂ ಆದ ವಿಷ್ಣುವೂ ಉದಯಿಸುವರು ॥೯॥

ರಾಜಸಾಹಂಕಾರದ ದೆಸೆಯಿಂದ, ಕ್ರಮವಾಗಿ ಕರ್ಮೇಂದ್ರಿಯಗಳೂ ಪ್ರಾಣವಾಯುಗಳೂ ಚತುರ್ಮುಖನೂ ಸ್ವಪ್ನವೂ ಲಿಂಗದೇಹವೂ ಉಂಟಾಗುವುವು ॥೧೦॥

ತಾಮಸಾಹಂಕಾರದ ದೆಸೆಯಿಂದ, ರುದ್ರನೂ ಸುಷುಪ್ತಿಯೂ ತನ್ಮಾತ್ರಪಂಚಕವೂ ಆವಿರ್ಭವಿಸುವುವು, ಬಳಿಕ ಅವುಗಳದೆಸೆಯಿಂದ ಸ್ಥೂಲಭೂತಗಳೂ, ಈ ಸ್ಥೂಲಭೂತಗಳ ದೆಸೆಯಿಂದ ಬ್ರಹ್ಮಾಂಡವೂ ಉದ್ಭವಿಸುವುವು ॥೧೧॥

ತೇಷಾಂ ವಿಲಕ್ಷಣೋ ರಾಮ ತ್ವಂ ಸಾಕ್ಷೀ ಚಿನ್ಮಯೋಽವ್ಯಯಃ ॥೧೦॥
ಸೃಷ್ಟಿಲೀಲಾಂ ಯದಾ ಕರ್ತುಂ ಈಹಸೇ ರಘುನಂದನ ।
ಅಙ್ಗೀಕರೋಷಿ ಮಾಯಾಂ ವೈ ತದಾ ತ್ವಂ ಗುಣವಾನಿವ ॥೧೩॥
ರಾಮ ಮಾಯಾ ದ್ವಿಧಾ ಭಾತಿ ವಿದ್ಯಾವಿದ್ಯೇತಿ ತೇ ಸದಾ ।
ಪ್ರವೃತ್ತಿಮಾರ್ಗನಿರತಾಃ ಅವಿದ್ಯಾವಶವರ್ತಿನಃ ॥೧೪॥
ನಿವೃತ್ತಿಮಾರ್ಗನಿರತಾಃ ವೇದಾನ್ತಾರ್ಥವಿಚಾರಕಾಃ ।
ತ್ವದ್ಭಕ್ತಿನಿರತಾಯೇ ಚ ತೇ ವೈ ವಿದ್ಯಾಮಯಾಃ ಸ್ಮೃತಾಃ ॥೧೫॥
ಅವಿದ್ಯಾವಶಗಾಯೇ ತು ನಿತ್ಯಂ ಸಂಸಾರಿಣಶ್ಚ ತೇ ।
ವಿದ್ಯಾಭ್ಯಾಸರತಾಯೇ ತು ನಿತ್ಯಮುಕ್ತಾಸ್ತ ಏವ ಹಿ ॥೧೬॥
ಲೋಕೇ ತ್ವದ್ಭಕ್ತಿನಿರತಾಃ ತ್ವನ್ಮನ್ತ್ರೋಪಾಸಕಾಶ್ಚ ಯೇ ।
ವಿದ್ಯಾ ಪ್ರಾದುರ್ಭವೇತ್ ತೇಷಾಂ ನೇತರೇಷಾಂ ಕದಾಚನ ॥೧೭॥
ಅತಸ್ತ್ವದ್ಭಕ್ತಿಸಮ್ಪನ್ನಾಃ ಮುಕ್ತಾ ಏವ ನ ಸಂಶಯಃ ।
ಅತಸ್ತ್ವದ್ಭಕ್ತಿಹೀನಾನಾಂ ಮೋಕ್ಷಃ ಸ್ವಪ್ನೇಽಪಿ ನೋ ಭವೇತ್ ॥೧೮॥

ಎಲೈ ರಾಮನೇ! ಚಿನ್ಮಯನಾಗಿಯೂ ಅವ್ಯಯನಾಗಿಯೂ ಇರುವ ನೀನು, ಇವುಗಳಿಗೆಲ್ಲ ವಿಲಕ್ಷಣನಾಗಿಯೂ ಸಾಕ್ಷಿಯಾಗಿಯೂ ಇರುವ ಎಲೈ ರಘುನಂದನನೇ! ನೀನು ಯಾವಾಗ ಸೃಷ್ಟಿಯೆಂಬ ಲೀಲೆಯನ್ನು ಮಾಡಬೇಕೆಂದು ಅಪೇಕ್ಷಿಸುವೆಯೋ, ಆಗ ಗುಣತ್ರಯ ವಿಶಿಷ್ಟನಾಗಿರುವಂತೆ ಮಾಯೆಯನ್ನು ಅಂಗೀಕರಿಸುವೆ ॥೧೨—೧೩॥

ಎಲೈ ರಾಮಚಂದ್ರನೇ! ನಿನ್ನ ಮಾಯೆಯು ವಿದ್ಯೆಯೆಂದೂ ಅವಿದ್ಯೆಯೆಂದೂ ಎರಡು ತೆರನಾಗಿ ವಿರಾಜಿಸುವುದು ಇದರಲ್ಲಿ ಅವಿದ್ಯಾವಶರಾದವರು ಪ್ರವೃತ್ತಿಮಾರ್ಗದಲ್ಲಿ ನಿರತರಾಗುವರು ॥೧೪॥

ಯಾರು ನಿವೃತ್ತಿಮಾರ್ಗದಲ್ಲಿ ನಿರತರಾಗಿಯೂ ವೇದಾಂತಾರ್ಥವನ್ನು ವಿಚಾರಮಾಡತಕ್ಕವರಾಗಿಯೂ ನಿನ್ನಲ್ಲಿ ಭಕ್ತರಾಗಿಯೂ ಇರುವರೋ, ಅವರು ವಿದ್ಯಾವಶರೆಂದು ಹೇಳಲ್ಪಡುವರು ॥೧೫॥

ಯಾರು ಅವಿದ್ಯಾವಶರಾದವರೋ, ಅವರು ನಿತ್ಯವೂ ಸಂಸಾರಿಗಳಾಗಿಯೇ ಇರುವರು ಯಾರು ವಿದ್ಯೆಯ ಅಭ್ಯಾಸದಲ್ಲಿ ನಿರತರಾಗಿರುವರೋ, ಅವರು ನಿತ್ಯಮುಕ್ತರಾಗಿರುವರು ॥೧೬॥

ಲೋಕದಲ್ಲಿ ಯಾರು ನಿನ್ನ ಭಕ್ತಿಯಲ್ಲಿ ನಿರತರಾಗಿಯೂ ನಿನ್ನ ಮನ್ತ್ರವನ್ನು ಉಪಾಸಿಸತಕ್ಕವರಾಗಿಯೂ ಇರುವರೋ, ಅವರಿಗಮಾತ್ರವೇ ವಿದ್ಯೆಯು ಪ್ರಾದುರ್ಭವಿಸುವುದು, ಇತರರಿಗೆ ಎಂದಿಗೂ ಪ್ರಾದುರ್ಭವಿಸುವುದಿಲ್ಲ ॥೧೭॥

ಹೀಗಿರುವಕಾರಣ, ನಿನ್ನಲ್ಲಿ ಭಕ್ತಿಯುಕ್ತರಾದವರು ಮುಕ್ತರಾದವರೇ ಸರಿ, ಇದರಲ್ಲಿ ಸಂಶಯವಿಲ್ಲ ನಿನ್ನಲ್ಲಿ ಭಕ್ತಿಯಿಲ್ಲದವರಿಗಾದರೋ, ಸ್ವಪ್ನದಲ್ಲಿಯೂ ಮೋಕ್ಷವು ಸಂಭವಿಸುವುದಿಲ್ಲ ॥೧೮॥

ಕಿಂ ರಾಮ ಬಹುನೋಕ್ತೇನ ಸಾರಂ ಕಿಞ್ಚಿದ್ವದಾಮಿ ತೇ ।
ಸಾಧುಸಙ್ಗತಿರೇವಾತ್ರ ಮೋಕ್ಷಹೇತುರುದಾಹೃತಾ ॥೧೯॥
ಸಾಧವಃ ಸಮಚಿತ್ತಾಯೇ ನಿಸ್ಪೃಹಾವಿಗತೇಷಣಾಃ ।
ದಾನ್ತಾಃ ಪ್ರಶಾನ್ತಾಸ್ತ್ವದ್ಭಕ್ತಾಃ ನಿವೃತ್ತಾಖಿಲಕಾಮನಾಃ ।
ಇಷ್ಟಪ್ರಾಪ್ತಿವಿಪರ್ಯಾಸಸಮಾಃ ಸಙ್ಗವಿವರ್ಜಿತಾಃ ॥೨೦॥
ಸನ್ನ್ಯಸ್ತಾಖಿಲಕರ್ಮಾಣಃ ಸರ್ವದಾ ಬ್ರಹ್ಮತತ್ಪರಾಃ ।
ಯಮಾದಿಗುಣಸಮ್ಪನ್ನಾಃ ಸನ್ತುಷ್ಟಾಯೇನಕೇನಚಿತ್ ॥೨೧॥
ಸತ್ಸಙ್ಗಮೋ ಭವೇದ್ಯರ್ಹಿ ಸತ್ಕಥಾಶ್ರವಣೇ ರತಿಃ ।
ಸಾಧುರೇತಿ ತತೋ ಭಕ್ತಿಃ ತ್ವಯಿ ರಾಮ ಸನಾತನೇ ॥೨೨॥
ತ್ವದ್ಭಕ್ತ್ಯಾಮುಪಪನ್ನಾಯಾಂ ವಿಜ್ಞಾನಂ ವಿಪುಲಂ ಸ್ಫುಟಮ್ ।
ಉದೇತಿ ಮುಕ್ತಿಮಾರ್ಗೋಯಂ ಅದ್ಯಶ್ಚತುರಸೇವಿತಃ ॥೨೩॥
ತಸ್ಮಾದ್ರಾಘವ ಸದ್ಭಕ್ತಿಃ ತ್ವಯಿ ಮೇ ಪ್ರೇಮಲಕ್ಷಣಾ ।
ಸದಾ ಭೂಯಾದ್ಧರೇ ಸಙ್ಗಃ ತ್ವದ್ಭಕ್ತೇಷ್ವೇವ ಸರ್ವದಾ ॥೨೪॥

ಹೇ ರಾಮ! ಈಗ ಬಹಳವಾಗಿ ಹೇಳಿ ಫಲವೇನು? ಸಾರವಾಗಿರತಕ್ಕ ಒಂದು ವಿಷಯವನ್ನು ನಿನ್ನಲ್ಲಿ ವಿಜ್ಞಾಪಿಸುವೆನು ಏನೆಂದರೆ,-ಈ ಲೋಕದಲ್ಲಿ ಸಾಧುಗಳ ಸಮಾಗಮವೇ ಮುಕ್ತಿಗೆ ಮುಖ್ಯಕಾರಣವೆಂದು ಹೇಳಲ್ಪಟ್ಟಿರುವುದು ॥೧೯॥

ಯಾರು ಸರ್ವತ್ರ ಸಮಚಿತ್ತರಾಗಿಯೂ ನಿಸ್ಪೃಹರಾಗಿಯೂ ಈಷಣತ್ರಯವನ್ನು ಬಿಟ್ಟವರಾಗಿಯೂ ಇಂದ್ರಿಯನಿಗ್ರಹಸಂಪನ್ನರಾಗಿಯೂ ಶಾಂತಾತ್ಮರಾಗಿಯೂ ನಿನ್ನಲ್ಲಿ ಭಕ್ತರಾಗಿಯೂ ಸಕಲವಿಧವಾದ ಕಾಮನಗಳನ್ನೂ ಬಿಟ್ಟವರಾಗಿಯೂ ಇರುವರೋ, ತಮಗೆ ಇಷ್ಟವಾದ ಅರ್ಥವು ಲಭಿಸಿದರೂ-ಅಥವಾ ತಪ್ಪಿಹೋದರೂ ಯಾರ ಮನಸ್ಸಿನಲ್ಲಿ ಸ್ವಲ್ಪವೂ ವಿಕಾರ ಹುಟ್ಟುವುದಿಲ್ಲವೋ, ಯಾರು ಸರ್ವಸಂಗವರ್ಜಿತರಾಗಿಯೂ ಸಕಲ ಕರ್ಮಗಳನ್ನೂ ಬಿಟ್ಟವರಾಗಿಯೂ ಸರ್ವದಾ ಬ್ರಹ್ಮಜ್ಞಾನನಿರತರಾಗಿಯೂ ಯಮನಿಯಮಾದಿಗುಣಸಂಪನ್ನರಾಗಿಯೂ ಯದೃಚ್ಛಾಲಾಭ ಸಂತುಷ್ಟರಾಗಿಯೂ ಇರುವರೋ, ಅವರೇ ಸಾಧುಗಳೆಂದು ಹೇಳಲ್ಪಡುವರು ॥ ೨೦-೨೧॥

ಎಲೈ ರಾಮನೇ! ಸತ್ಸಂಗವೂ ಸತ್ಕಥಾಶ್ರವಣದಲ್ಲಿ ಆಸಕ್ತಿಯೂ ಉಂಟಾದರೆ, ಆಗ ಸನಾತನನಾದ ನಿನ್ನಲ್ಲಿ ಉತ್ತಮವಾದ ಭಕ್ತಿಯು ಉದಯಿಸುವುದು ॥೨೨॥

ನಿನ್ನಲ್ಲಿ ಭಕ್ತಿಯುದಯಿಸಿದರೆ, ವಿಪುಲವಾದ ವಿಜ್ಞಾನವುದಯಿಸುವುದು, ಇದರಲ್ಲಿ ಸಂಶಯವಿಲ್ಲ ಇದೇ, ಸಕಲರಾದ ಪ್ರಾಜ್ಞರಿಂದಲೂ ಸೇವಿಸಲ್ಪಟ್ಟಿರುವ ಅನಾದಿಯಾದ ಮುಕ್ತಿಮಾರ್ಗವು ॥೨೩॥

ಅದುಕಾರಣ,-ಶ್ರೀಹರಿಸ್ವರೂಪನಾದ ಶ್ರೀರಾಮನೇ! ನನಗೆ ಸರ್ವದಾ ನಿನ್ನಲ್ಲಿ ಪ್ರೇಮರೂಪವಾದ ಭಕ್ತಿಯೂ, ಸದಾ ನಿನ್ನ ಭಕ್ತರಲ್ಲಿಯೇ ಸಹವಾಸವೂ ಉಂಟಾಗುವಂತೆ ಅನುಗ್ರಹಿಸು ॥

ಅದ್ಯ ಮೇ ಸಫಲಂ ಜನ್ಮ ತವ ಸನ್ದರ್ಶನಾದಭೂತ್ ।
ಅದ್ಯ ಮೇ ಕ್ರತವಃ ಸರ್ವೇ ಬಭೂವುಃ ಸಫಲಾಃ ಪ್ರಭೋ ॥೨೫॥
ದೀರ್ಘಕಾಲಂ ಮಯಾ ತಪ್ತಂ ಅನನ್ಯಮತಿನಾ ತಪಃ ।
ತಸ್ಯೇಹ ತಪಸೋ ರಾಮ ಫಲಂ ತವ ಪದಾರ್ಚನಮ್ ॥೨೬॥
ಸದಾ ತ್ವಂ ಸೀತಯಾ ಸಾರ್ಧಂ ಹೃದಯೇ ವಸ ರಾಘವ ।
ಗಚ್ಛ ತಿಷ್ಠತೋ ವಾಪಿ ಸ್ಮೃತಿಃ ಸ್ಯಾನ್ಮೇ ಸದಾ ತ್ವಯಿ ॥೨೭॥
ಇತಿ ಬ್ರುವನ್ತಂ ತಂ ರಾಮಃ ಪ್ರೋವಾಚ ಮುನಿಮಾದರಾತ್ ।
ಕಂ ತೇ ಕಾಮಂ ಕರೋಮ್ಯದ್ಯ ವದಾಹಂ ವರದೋಸ್ಮಿ ತೇ ॥೨೮॥

ಅಗಸ್ತ್ಯ ಉವಾಚ

ತವ ಸನ್ದರ್ಶನಾದ್ರಾಮ ಕೀರ್ತನಾತ್ ಪೂಜನಾದಪಿ ।
ಕಿಮಸ್ತ್ಯಪೇಕ್ಷಿತಂ ಮೇದ್ಯ ತುಚ್ಛಂ ಸರ್ವಂ ಜಗತ್ ಖಲು ॥೨೯॥
ಏತದ್ಧಿ ದರ್ಶಿತಂ ಯತ್ ತೇ ಸಸೀತಂ ಸಹಲಕ್ಷ್ಮಣಮ್ ।
ತದೇವ ರೂಪಂ ಮೇ ರಾಮ ಹೃದಿ ಭೂತು ನಿರನ್ತರಮ್ ॥೩೦॥

ಹೇ ಪ್ರಭೋ! ಈಗ ನಿನ್ನ ದರ್ಶನದಿಂದ ನನ್ನ ಜನ್ಮವು ಸಫಲವಾಯ್ತು, ನಾನು ಮಾಡಿದ ಕ್ರತುಗಳೆಲ್ಲವೂ ಈಗ ಫಲಿಸಿದುವು ॥೨೫॥

ಹೇ! ರಾಮ! ನಾನು ಅನನ್ಯಮನಸ್ಕನಾಗಿ ಬಹುಕಾಲ ತಪಸ್ಸು ಮಾಡಿರುವೆನು, ಈಗ ನಿನ್ನ ಪಾದಸೇವನೆಯು, ಆ ತಪಸ್ಸಿನ ಫಲವು ॥೨೬॥

ರಾಘವ! ನೀನು ಸರ್ವದಾ ಸೀತೆಯೊಡನೆ ನನ್ನ ಹೃದಯದಲ್ಲಿ ವಾಸವಾಗಿರು, ನಾನು ನಡೆಯುತಿದ್ದರೂ-ನಿಂತಿದ್ದರೂ-ಹೇಗಿದ್ದರೂ, ನನಗೆ ಸರ್ವದಾ ನಿನ್ನ ಸ್ಮರಣೆಯುಂಟಾಗುತಿರಲಿ ॥೨೭॥

ಹೀಗೆ ಪ್ರಾರ್ಥಿಸುತಿರುವ ಆ ಅಗಸ್ತ್ಯಮುನಿಯನ್ನು ಕುರಿತು, ಶ್ರೀರಾಮನು ಆದರದಿಂದ 'ಎಲೈ ಅಗಸ್ತ್ಯಮುನಿಯೆ! ಈಗ ನಾನು ನಿನಗೆ ಯಾವ ಇಷ್ಟಾರ್ಥವನ್ನು ನೆರವೇರಿಸಿಕೊಡಲಿ? ಯಾವ ವರವನ್ನಾದರೂ ಈಗ ನಾನು ನಿನಗೆ ಕೊಡತಕ್ಕವನಾಗಿರುವೆನು ' ಎಂದು ಹೇಳಿದನು ॥


ಇದನ್ನು ಕೇಳಿ ಅಗಸ್ತ್ಯಮುನಿಯು ಪ್ರಾರ್ಥಿಸಿಕೊಳ್ಳುವನು —

ರಾಮಚಂದ್ರ! ನಿನ್ನ ದರ್ಶನ ಕೀರ್ತನ ಪೂಜನಗಳಿಗಿಂತಲೂ ಬೇರೆಯಾಗಿ ನನಗೆ ಅಪೇಕ್ಷಿತವಾದುದು ಯಾವುದಿರುವುದು? ಈ ಸಮಸ್ತಜಗತ್ತೂ ನಶ್ವರವಾದುದಲ್ಲವೆ! ॥೨೯॥

ಈಗ ನೀನು ಸೀತಾಲಕ್ಷ್ಮಣ ಸಹಿತವಾಗಿ ಯಾವ ನಿನ್ನ ರೂಪವನ್ನು ನನಗೆ ತೋರಿಸಿದೆಯೋ, ಇದೊಂದು ಮಾತ್ರವೇ ಸರ್ವದಾ ನನ್ನ ಹೃದಯದಲ್ಲಿ ಸ್ಫುರಿಸುತಿರಲಿ ॥೩೦॥

ಹೃದಯಸ್ಥಶ್ಚ ತೇ ಛನ್ದೋ ವಿಜ್ಞಾತಸ್ತಪಸಾ ಮಯಾ ।
ಅತಶ್ಚ ತ್ವಾಮಹಂ ಬ್ರೂಮಿ ಗಚ್ಛ ಪಞ್ಚವಟೀಮಿತಿ ॥೩೧॥
ಸ ಹಿ ರಮ್ಯೋ ವನೋದ್ದೇಶೋ ಮೈಥಿಲ್ಯಾ ತತ್ರ ರಂಸ್ಯಸೇ ।
ಸ ದೇಶಃ ಶ್ಲಾಘನೀಯಶ್ಚ ನಾತಿದೂರೇ ಚ ರಾಘವ ॥೩೨॥
ಭವಾನಪಿ ಸದಾರಶ್ಚ ಶಕ್ತಶ್ಚ ಪರಿರಕ್ಷಣೇ ।
ಅಪಿ ಚಾತ್ರ ವಸೇ ರಾಮ ತಾಪಸಾನ್ ಪಾಲಯಿಷ್ಯಸಿ ॥೩೩॥
ಅಗಸ್ತ್ಯೇನೈವಮುಕ್ತಸ್ತು ರಾಮಃ ಸೌಮಿತ್ರಿಣಾ ಸಹ ।
ಸತ್ಕೃತ್ಯಾನುನ್ತ್ಯಯಾಮಾಸ ತನ್ಮುನಿಂ ಸತ್ಯವಾದಿನಮ್ ॥೩೪॥
ತೌ ತು ತೇನಾಭ್ಯನುಜ್ಞಾತೌ ಕೃತಪಾದಾಭಿವನ್ದನೌ ।
ತದಾಶ್ರಮಾತ್ ಪಞ್ಚವಟೀಂ ಜಗ್ಮತುಃ ಸಹ ಸೀತಯಾ ॥೩೫॥

ಇತಿ ಶ್ರೀಮದರಣ್ಯಕಾಣ್ಡೇ ಅಗಸ್ತ್ಯಕೃತರಾಮತತ್ತ್ವಕಥನಂ
ನಾಮ ಸಪ್ತಮಃ ಸರ್ಗಃ



ನಿನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನೂ ಕೂಡ ನಾನು ನನ್ನ ತಪಶ್ಶಕ್ತಿಯಿಂದ ತಿಳಿದು ಕೊಂಡೆನು ಈಗ ಎಲ್ಲಿ ವಾಸಮಾಡಲೆಂದು ನೀನು ನನ್ನನ್ನು ಕೇಳಲು ಒಂದಿರುವಯಲ್ಲವೆ' ನೀನು ಪಂಚವಟಿಗೆ ಹೋಗೆಂದು ನಾನು ನಿನಗ ಹೇಳುವನು ॥೩೧॥


ಎಲೈರಾಘವನೆ' ಆ ಪಂಚವಟೀ ವನಪ್ರದೇಶವು ಅತಿರಮ್ಯವಾಗಿರುವುದು, ಅಲ್ಲಿ ನೀನು ಸೀತೆಯೊಡನೆ ಸುಖವಾಗಿ ವಿಹರಿಸಿಕೊಂಡಿರುವೆ ಆ ಪ್ರದೇಶವು, ಕೇವಲಶ್ಲಾಘ್ಯವಾಗಿರುವುದಲ್ಲದೆ ಇಲ್ಲಿಗೆ ಸಮೀಪವಾಗಿಯೂ ಇರುವುದು ॥೩೨॥

ನೀನು ಈಗ ಪತ್ನೀಯುಕ್ತನಾಗಿರುವುದರಿಂದ, ಅಸಹಾಯನಾಗಿ ದೂರದಲ್ಲಿರುವುದಕ್ಕಿಂತಲೂ ನಮ್ಮ ಆಶ್ರಮಕ್ಕೆ ಸಮೀಪದಲ್ಲಿರುವುದು ಉತ್ತಮವಲ್ಲವೆ' ಇದೂ ಅಲ್ಲದೆ, ನೀನು ಸರ್ವರನ್ನೂ ಸಂರಕ್ಷಿಸುವುದರಲ್ಲಿ ಸಮರ್ಥನಾಗಿರುವಕಾರಣ, ನಮ್ಮ ಆಶ್ರಮದ ಹತ್ತಿರದಲ್ಲಿಯೇ ಇದ್ದು ಗೊಂಡು ತಪಸ್ವಿಗಳನ್ನು ಸಂರಕ್ಷಿಸಬಹುದಾಗಿರುವುದು ॥೩೪॥

ಹೀಗೆಂದು ಅಗಸ್ತ್ಯಮುನಿಯಿಂದ ಹೇಳಲ್ಪಟ್ಟ ಶ್ರೀರಾಮನು, ಯಥಾರ್ಥವಾದಿಯಾದ ಆ ಮುನಿಯನ್ನು ಲಕ್ಷ್ಮಣಸಹಿತನೆ ಪೂಜಿಸಿ, ಬಳಿಕ ಅವರ ಅನುಜ್ಞೆಯನ್ನು ಕೇಳಿಕೊಂಡನು ॥೩೪॥

ಅನಂತರ, ಅಗಸ್ತ್ಯಮುನಿಯಿಂದ ಅನುಜ್ಞೆಕೊಡಲ್ಪಟ್ಟ ರಾಮಲಕ್ಷ್ಮಣರು ಅವನಿಗ ನಮಸ್ಕಾರಮಾಡಿ, ಸೀತೆಯೊಡನೆ ಅವನ ಆಶ್ರಮದಿಂದ ಪಂಚವಟಿಯನ್ನು ಕುರಿತು ಹೊರಟರು ॥೩೫॥

ಇದು ಅರಣ್ಯಕಾಂಡದಲ್ಲಿ ಅಗಸ್ತ್ಯಕೃತರಾಮತತ್ವಕಥನವೆಂಬ
ಏಳನೆಯ ಸರ್ಗವು.



ತದ್ದರ್ಶನಂ ಚ ಸ್ನಾನಂ ಚ ದೇವಾನಾಮಪಿ ದುರ್ಲಭಮ್ ।
ಅಲ್ಪಪುಣ್ಯವತಾಂ ದೇವಿ ನ ಕಥಂ ದುರ್ಲಭಂ ಕಲೌ ॥೧೦॥
ಏಕದಾ ಲಕ್ಷ್ಮಣೋ ರಾಮಂ ಏಕಾಂತೇ ಸುಖಮಾಸ್ಥಿತಮ್ ।
ವಿನಯಾವನತೋ ಭೂತ್ವಾ ಪಪ್ರಚ್ಛ ಪರಮೇಶ್ವರಮ್ ॥೧೧॥
ಭಗವನ್ ಶ್ರೋತುಮಿಚ್ಛಾಮಿ ಮೋಕ್ಷಸ್ಯೈಕಾನ್ತಿಕೀಂ ಗತಿಮ್ ।
ತ್ವತ್ತಃ ಕಮಲಪತ್ರಾಕ್ಷ ಸಂಕ್ಷೇಪಾದ್ವಕ್ತುಮರ್ಹಸಿ ॥೧೨॥
ಜ್ಞಾನಂ ವಿಜ್ಞಾನಸಹಿತಂ ಭಕ್ತಿವೈರಾಗ್ಯಬೃಂಹಿತಮ್ ।
ಆಚಕ್ಷ್ವ ಮೇ ರಘುಶ್ರೇಷ್ಠ ವಕ್ತಾ ನಾನ್ಯೋಸ್ತಿ ಭೂತಲೇ ॥೧೩॥

ಶ್ರೀರಾಮಉವಾಚ

ಶೃಣು ವಕ್ಷ್ಯಾಮಿ ತೇ ವತ್ಸ ಗುಹ್ಯಾದ್ಗುಹ್ಯತಮಂ ಪರಮ್ ।
ಯದ್ವಿಜ್ಞಾಯ ನರೋ ಜಹ್ಯಾತ್ ಸದ್ಯೋ ವೈಕಲ್ಪಿಕಂ ಭ್ರಮಮ್ ॥

ಆ ಭದ್ರಾದ್ರಿಯಲ್ಲಿರುವ ಶ್ರೀಪರಮಾತ್ಮನ ದರ್ಶನವೂ, ಗೌತಮಿನದಿಯಲ್ಲಿ ಸ್ನಾನವೂ ಕೂಡ, ದೇವತೆಗಳಿಗೂ ದುರ್ಲಭವಾಗಿರುವುವು, ಹೀಗಿರುವಾಗ, ಎಲೌ ಪಾರ್ವತಿ! ಕಲಿಯುಗದಲ್ಲಿ ಅಲ್ಪಪುಣ್ಯರಾಗಿರುವ ಜನರಿಗೆ ಅದು ಹೇಗೆತಾನ ದುರ್ಲಭವಾಗದಿರುವುದು ? ॥೧೦॥

ಹೀಗೆ ಅವರು ಗೌತಮಿತೀರದಲ್ಲಿ ವಾಸಮಾಡಿಕೊಂಡಿರುವಾಗ, ಒಂದು ಸಮಯದಲ್ಲಿ ಏಕಾಂತವಾಗಿ ಸುಖಾಸೀನನಾಗಿರುವ ಪರಮೇಶ್ವರನಾದ ಶ್ರೀರಾಮಚಂದ್ರನನ್ನು ಕುರಿತು, ಲಕ್ಷ್ಮಣನು ವಿನಯದಿಂದ ನಮ್ರನಾಗಿ ಹೀಗೆ ಪ್ರಾರ್ಥಿಸಿದನು ॥೧೧॥

ಪೂಜ್ಯನೆ! ಮೋಕ್ಷಕ್ಕೆ ಮುಖ್ಯವಾದ ಉಪಾಯವನ್ನು ನಿನ್ನ ಮುಖದಿಂದ ಕೇಳಬೇಕೆಂದು ಇಚ್ಛಿಸುವೆನು ಎಲೈ ಪುಂಡರೀಕಾಕ್ಷನೆ ! ನೀನು ಅನುಗ್ರಹವಿಟ್ಟು ಇದನ್ನು ನನಗೆ ಹೇಳಬೇಕೆಂದು ಕೇಳಿಕೊಳ್ಳುವೆನು ॥೧೨॥

ಎಲೈ ರಘುಶ್ರೇಷ್ಠನೆ! ವಿಜ್ಞಾನಸಹಿತವಾಗಿಯೂ ಭಕ್ತಿ ವೈರಾಗ್ಯಗಳೊಡನೆ ಯುಕ್ತವಾಗಿಯೂ ಇರುವ ಜ್ಞಾನದ ಸ್ವರೂಪವನ್ನು ನೀನು ನನಗೆ ಉಪದೇಶಿಸುವನಾಗು ಈ ಭೂಮಂಡಲದೊಳಗಾಗಿ ನಿನ್ನನ್ನು ಬಿಟ್ಟರೆ ಮತ್ತಾರೂ ಇದನ್ನು ಉಪದೇಶಿಸತಕ್ಕವರಿಲ್ಲ ॥೧೩॥

ಇದನ್ನು ಕೇಳಿ ಶ್ರೀರಾಮನು ಉಪದೇಶಿಸುವನು —

ವತ್ಸ! ರಹಸ್ಯಗಳಲ್ಲೆಲ್ಲ ಅತಿರಹಸ್ಯವಾಗಿರುವ ಈ ವಿಷಯವನ್ನು ನಾನು ನಿನಗೆ ಉಪದೇಶಿಸುವೆನು, ಕೇಳು ಇದನ್ನು ತಿಳಿದುಕೊಂಡರೆ, ಪುರುಷನು ಆ ಕ್ಷಣವೇ ತನ್ನ ಮನೋವಿಕಲ್ಪದಿಂದ ಉಂಟಾಗಿರುವ ಭ್ರಮೆಯನ್ನೆಲ್ಲ ಬಿಟ್ಟುಬಿಡುವನು ॥೧೪॥

ಆದೌ ಮಾಯಾಸ್ವರೂಪಂ ತೇ ವಕ್ಷ್ಯಾಮಿ ತದನಂತರಮ್ ।
ಜ್ಞಾನಸ್ಯ ಸಾಧನಂ ಪಶ್ಚಾತ್ ಜ್ಞಾನಂ ವಿಜ್ಞಾನಸಂಯುತಮ್ ।
ವಿಜ್ಞೇಯಂ ಪರಮಾತ್ಮಾನಂ ಯಜ್ಜ್ಞಾತ್ವಾ ಮುಚ್ಯತೇ ಭಯಾತ್ ॥
ಅನಾತ್ಮನಿ ಶರೀರಾದೌ ಆತ್ಮಬುದ್ಧಿಸ್ತು ಯಾ ಭವೇತ್ ।
ಸೈವ ಮಾಯಾ ತಯೈವಾಸೌ ಸಂಸಾರಃ ಪರಿವರ್ತತೇ ॥೧೬॥
ರೂಪೇ ದ್ವೇ ನಿಶ್ಚಿತೇ ಪೂರ್ವಂ ಮಾಯಾಯಾ ರಘುನಂದನ ।
ವಿಕ್ಷೇಪಾವರಣೇ ತತ್ರ ಪ್ರಥಮಂ ಕಲ್ಪತೇ ಜಗತ್ ॥೧೭॥
ಸ್ತಮ್ಬಾದಿ ಬ್ರಹ್ಮಪರ್ಯಂತಂ ಸ್ಥೂಲಸೂಕ್ಷ್ಮಾದಿಭೇದತಃ ।
ಅಪರಂ ತ್ವಖಿಲಂ ಜ್ಞಾನರೂಪಮಾವೃತ್ಯ ತಿಷ್ಠತಿ ॥೧೮॥
ಮಾಯಯಾ ಕಲ್ಪಿತಂ ವಿಶ್ವಂ ಪರಮಾತ್ಮನಿ ಕೇವಲೇ ।
ರಜ್ಜೌ ಭುಜಙ್ಗವದ್ಭ್ರಾನ್ತ್ಯಾ ವಿಚಾರೇ ನಾಸ್ತಿ ಕಿಞ್ಚನ ॥೧೯॥
ಶ್ರೂಯತೇ ದೃಶ್ಯತೇ ಯದ್ಯತ್ ಸ್ಮರ್ಯತೇ ವಾ ನರೈಃ ಸದಾ ।
ಅಸದೇವ ಹಿ ತತ್ ಸರ್ವಂ ಯಥಾ ಸ್ವಪ್ನಮನೋರಥಾಃ ॥೨೦॥

ಮೊದಲು ನಿನಗೆ ಮಾಯೆಯ ಸ್ವರೂಪವನ್ನು ಹೇಳುವೆನು, ಆಮೇಲೆ ಜ್ಞಾನಕ್ಕೆ ಸಾಧನವನ್ನೂ, ಬಳಿಕ ವಿಜ್ಞಾನಸಹಿತವಾದ ಜ್ಞಾನದ ಸ್ವರೂಪವನ್ನೂ, ಅನಂತರ ವಿಜ್ಞೇಯ (ತಿಳಿಯಲ್ಪಡಬೇಕಾದ)ನಾದ ಪರಮಾತ್ಮನ ಸ್ವರೂಪವನ್ನೂ ಹೇಳುವೆನು ಇದನ್ನು ತಿಳಿದುಕೊಂಡರೆ, ಪುರುಷನು ಸಂಸಾರಭಯದಿಂದ ಮುಕ್ತನಾಗುವನು ॥೧೫॥

ಆತ್ಮವಲ್ಲದ ಶರೀರಾದಿ ಪದಾರ್ಥದಲ್ಲಿ ಆತ್ಮನೆಂಬ ಬುದ್ಧಿಯಿಡುವುದಾವುದುಂಟೋ, ಅದೇ ಮಾಯೆಯು, ಅದರಿಂದಲೇ ಮೊದಲು ಈ ಸಂಸಾರವು ಪ್ರವರ್ತಿಸುವುದು ॥೧೬॥

ಎಲೈ ರಘುನಂದನನೆ! ವಿಕ್ಷೇಪವೆಂದೂ, ಆವರಣವೆಂದೂ, ಈ ಮಾಯೆಗೆ ಪ್ರಥಮತಃ ಎರಡು ರೂಪಗಳಿರುವುವೆಂದು ಶಾಸ್ತ್ರದಲ್ಲಿ ನಿಶ್ಚಯಿಸಲ್ಪಟ್ಟಿರುವುದು ಅವುಗಳಲ್ಲಿ ಮೊದಲನೆಯದಾದ ವಿಕ್ಷೇಪಶಕ್ತಿಯು, ಆಬ್ರಹ್ಮಸ್ತಂಬಪರ್ಯಂತವಾಗಿರುವ ಸ್ಥೂಲಸೂಕ್ಷ್ಮಾದಿಭೇದಯುಕ್ತವಾದ ಜಗತ್ತನ್ನು ಕಲ್ಪಿಸುವುದು, ಮತ್ತೊಂದಾದ ಆವರಣ ಶಕ್ತಿಯಾದರೋ, ಸಕಲವಾದ ಜ್ಞಾನಸ್ವರೂಪವನ್ನೂ ಆವರಿಸಿಕೊಂಡು ಇರುವುದು ॥೧೭-೧೮॥

ಒಂದು ರಜ್ಜುವಲ್ಲಿ ಸರ್ಪರೂಪವು ಭ್ರಾಂತಿಯಿಂದ ಕಲ್ಪಿತವಾಗುವಂತೆ, ಕೇವಲನಾದ ಪರಮಾತ್ಮನಲ್ಲಿ ಮಾಯೆಯಿಂದ ವಿಶ್ವವು ಕಲ್ಪಿತವಾಗಿರುವುದು, ವಿಚಾರಮಾಡಿನೋಡುವಾಗ ಯಾವುದೂ ಇಲ್ಲವಾಗುವುದು ॥೧೯॥

ನಮ್ಮ ಸ್ವಪ್ನದಲ್ಲಿ ಕಂಡ ಪದಾರ್ಥಗಳೂ ಹೃದಯದಲ್ಲಿ ಕಲ್ಪಿಸಿಕೊಂಡ ಮನೋರಥಗಳೂ ಹೇಗೆ ಸುತರಾಂ ಅಸತ್ಯವಾದುವುಗಳೋ, ಹಾಗೆ ಪುರುಷರಿಂದ ಯಾವುದು ಕೇಳಲ್ಪಡುತ್ತದೆಯೋ-

ದೇಹವಿವ ಹಿ ಸಂಸಾರವೃಕ್ಷಮೂಲಂ ದೃಢಂ ಸ್ಮೃತಮ್ ।
ತನ್ಮೂಲಃ ಪುತ್ರದಾರಾದಿಬಂಧಃ ಸ್ಯಾನ್ನಾನ್ಯಥಾತ್ಮನಃ ॥೧೧॥
ದೇಹಸ್ತು ಸೂಕ್ಷ್ಮಭೂತಾನಾಂ ಪಞ್ಚಕಂ ಮಾತ್ರಪಞ್ಚಕಮ್ ।
ಚತುರ್ವಿಧೋಽಪ್ಯಹಙ್ಕಾರಃ ಇನ್ದ್ರಿಯಾಣಿ ತಥಾ ದಶ ॥೧೨॥
ಚಿದಾಭಾಸೋ ಮನಶ್ಚೈವ ಮೂಲಪ್ರಕೃತಿರೇವ ಚ ।
ಏತತ್ ಕ್ಷೇತ್ರಮಿತಿ ಜ್ಞೇಯಂ ದೇಹಇತ್ಯಭಿಧೀಯತೇ ॥೧೩॥
ಏತೈರ್ವಿಲಕ್ಷಣೋ ಜೀವಃ ಪರಮಾತ್ಮಾ ನಿರಾಮಯಃ ।
ತಸ್ಯ ಜೀವಸ್ಯ ವಿಜ್ಞಾನೇ ಸಾಧನಾನ್ಯಪಿ ಮೇ ಶೃಣು ॥೧೪॥
ಜೀವಶ್ಚ ಪರಮಾತ್ಮಾ ಚ ಪರ್ಯಾಯೋ ನಾತ್ರ ಭೇದಧೀಃ ॥೧೫॥
ಮಾನಾಭಾವಸ್ತಥಾದಮ್ಭೋ ಹಿಂಸಾದಿಪರಿವರ್ಜನಮ್ ।
ಶರಾಕ್ಷೇಪಾದಿಸಹನಂ ಸರ್ವತ್ರಾವಕ್ರತಾ ತಥಾ ॥೧೬॥
ಮನೋವಾಕ್ಕಾಯಸದ್ಭಕ್ತ್ಯಾ ಸದ್ಗುರೋಃ ಪರಿಸೇವನಮ್ ।
ಬಾಹ್ಯಾಭ್ಯನ್ತರಸಂಶುದ್ಧಿಃ ಸ್ಥಿರತ್ವಂ ಸತ್ಕ್ರಿಯಾದಿಷು ॥೧೭॥

ಯಾವುದು ನೋಡಲ್ಪಡುತ್ತದೆಯೋ–ಯಾವುದು ಸ್ಮರಿಸಲ್ಪಡುತ್ತದೆಯೋ–ಅದೆಲ್ಲವೂ ಎಂದಿಗೂ ಅಸತ್ಯವಾದುದೇಯೆ ॥೧೦॥

ಈ ದೇಹವೇ ಸಂಸಾರವೆಂಬ ವೃಕ್ಷಕ್ಕೆ ದೃಢವಾದ ಮೂಲ(ಬೇರು)ವೆಂದು ಹೇಳಲ್ಪಡುವುದು ಆತ್ಮನಿಗೆ ಪುತ್ರಕಳತ್ರಾದಿಬಂಧವು ಈ ದೇಹಮೂಲಕವಾಗಿರುದು, ಇದಿಲ್ಲದಿದ್ದರೆ, ಆತ್ಮನಿಗೆ ಪುತ್ರಕಳತ್ರಾದಿಬಂಧವೇ ಇರುತಿರಲಿಲ್ಲ ॥೧೧॥

ದೇಹವೆಂಬುದು ಯಾವುದೆಂದರೆ,–ಪಂಚಮಹಾಭೂತಗಳು, ಪಂಚತನ್ಮಾತ್ರೆಗಳು, ನಾಲ್ಕು ವಿಧವಾದ ಅಹಂಕಾರ, ಹತ್ತು ಇಂದ್ರಿಯಗಳು, ಚಿತ್ತಿನ ಆಭಾಸರೂಪವಾದ ಮನಸ್ಸು, ಮೂಲ ಪ್ರಕೃತಿ,–ಇದಿಷ್ಟೂ ಸೇರಿ ಕ್ಷೇತ್ರವೆಂದು ತಿಳಿಯಲ್ಪಡತಕ್ಕುದು, ಇದನ್ನೇ ದೇಹವೆಂದು ಹೇಳುವರು ॥೧೨–೧೩॥

ಜೀವನೆಂಬವನು ಇನ್ನೆಲ್ಲಕ್ಕಿಂತ ವಿಲಕ್ಷಣನಾದವನು, ಕಾಲತ್ರಯದಲ್ಲಿ ನಾಶವಿಲ್ಲದ ಪರಮಾತ್ಮನೆಂಬವನೂ ಇವನೇಯೆ ಈ ಜೀವನ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ ತಕ್ಕ ಸಾಧನಗಳನ್ನೂ ನನ್ನ ಮುಖದಿಂದ ಕೇಳುವನಾಗು ಜೀವ ಪರಮಾತ್ಮ ಎಂಬ ಈ ಯಿರಡೂ ಪರ್ಯಾಯಶಬ್ದಗಳೇ ಹೊರತು, ಅದ್ದರಲ್ಲಿ ಇವೆರಡಕ್ಕೂ ಯಾವ ಭೇದವೂ ಇಲ್ಲ ॥೧೪–೧೫॥

ಈಗ ಜ್ಞಾನಕ್ಕೆ ಸಾಧನಗಳನ್ನು ಕೇಳುವನಾಗು,–ಗರ್ವವಿಲ್ಲದಿರುವಿಕೆ, ದಂಭವಿಲ್ಲದಿರುವಿಕೆ, ಹಿಂಸೆ ಕ್ರೋಧ ಮುಂತಾದುವುಗಳ ಪರಿತ್ಯಾಗ, ಇತರರು ಮಾಡುವ ನಿಂದೆ ಮುಂತಾದುವುಗಳನ್ನು ಸಹಿಸುವಿಕೆ, ಸರ್ವರಲ್ಲಿಯೂ ವಕ್ರತೆಯನ್ನು ಬಿಟ್ಟು ನಡೆಯುವಿಕೆ, ಮನೋ ವಾಕ್ ಕಾಯ

ಮನೋವಾಕ್ಕಾಯದಣ್ಡಿಶ್ಟ ವಿಷಯೇಷು ನಿರೀಹತಾ ।
ನಿರಹಙ್ಕಾರತಾ ಜನ್ಮಜರಾದ್ಯಾಲೋಚನಂ ತಥಾ ॥೦೪॥
ಅಸಕ್ತಿಃ ಸ್ನೇಹಶೂನ್ಯತ್ವಂ ಪುತ್ರದಾರಧನಾದಿಷು ।
ಇಷ್ಟಾನಿಷ್ಟಾಗಮೇ ನಿತ್ಯಂ ಚಿತ್ತಸ್ಯ ಸಮಭಾವತಾ ॥೦೫॥
ಮಯಿ ಸರ್ವಾತ್ಮಕೇ ರಾಮೇ ಹ್ಯನನ್ಯವಿಷಯಾ ಮತಿಃ ।
ಜನಸಮ್ಬನ್ಧರಹಿತಶುದ್ಧದೇಶನಿಷೇವಣಮ್ ॥೩೦॥
ಆತ್ಮಜ್ಞಾನೇ ಸದೋದ್ಯೋಗೋ ವೇದಾನ್ತಾರ್ಥವಿಲೋಕನಮ್ ।
ಉಕ್ತೈರೇತೈರ್ಭವೇಜ್ಜ್ಞಾನಂ ವಿಪರೀತೇ ವಿಪರ್ಯಯಃ ॥೩೧॥
ಬುದ್ಧಿಪ್ರಾಣಮನೋದೇಹಾಹಙ್ಕೃತಿಭ್ಯೋ ವಿಲಕ್ಷಣಃ ।
ಪರಾತ್ಮಾಹಂ ನಿತ್ಯಶುದ್ಧಬುದ್ಧವಿವೇತಿ ನಿಶ್ಚಯಮ್ ।
ಯೇನ ಜ್ಞಾನೇನ ಸಂವೇತ್ತಿ ತಜ್ಜ್ಞಾನಂ ನಿಶ್ಚಿತಂ ಮಮ ॥೩೨॥
ವಿಜ್ಞಾನಂ ಚ ತಥೈವೈತತ್ ಸಾಕ್ಷಾದನುಭವೇದ್ಯದಾ ।೩೩॥
ಆತ್ಮಾ ಸರ್ವತ್ರ ಪೂರ್ಣಃ ಸ್ಯಾತ ಚಿದಾನನ್ತಾತ್ಮಕೋವ್ಯಯಃ ।
ಬುದ್ಧ್ಯಾದ್ಯುಪಾಧಿರಹಿತಃ ಪರಿಮಾಣಾದಿವರ್ಜಿತಃ ॥೩೪॥

ಗಳಲ್ಲಿ ಭಕ್ತಿಯಿಂದ ಸದ್ಗುರುವಿನ ಸೇವೆಯನ್ನು ಮಾಡುವಿಕೆ, ಅಂತಃಕರಣದಲ್ಲಿಯೂ ಬಹಿಃಕರಣದಲ್ಲಿಯೂ ಪರಿಶುದ್ಧಿ, ಸತ್ಕಾರ್ಯಾದಿಗಳಲ್ಲಿ ಸ್ಥೈರ್ಯ, ಮನೋ ವಾಕ್ ಕಾಯಗಳನ್ನು ಸರಿಯಾಗಿ ಶಿಕ್ಷಿಸುವಿಕೆ, ವಿಷಯಗಳಲ್ಲಿ ನಿರಾಶತೆ, ಅಹಂಕಾರಪರಿತ್ಯಾಗ, ತಾನು ಮುಂದೆ ನಾನಾಯೋನಿಗಳಲ್ಲಿ ಜನ್ಮವೆತ್ತಬೇಕಾಗಿರುವುದನ್ನೂ ತನಗ ಮುಂದೆ ಬರುವ ವಾರ್ಧಕದಶೆಯನ್ನೂ ಪರ್ಯಾಲೋಚಿಸುವಿಕೆ, ಸರ್ವತ್ರ ಆಸಕ್ತಿಶೂನ್ಯತೆ, ಪುತ್ರ ದಾರ ಧನಾದಿಗಳಲ್ಲಿ ಸ್ನೇಹಪರಿತ್ಯಾಗ, ಇಷ್ಟಾನಿಷ್ಟಗಳಲ್ಲಿ ಯಾವುದು ಬಂದಾಗಲೂ ಚಿತ್ತವನ್ನು ಸರ್ವದಾ ಏಕರೀತಿಯಾಗಿ ಇಟ್ಟುಕೊಂಡಿರುವುದು, ಸರ್ವಾತ್ಮಕನಾದ ನನ್ನಲ್ಲಿ ಅನನ್ಯವಿಷಯಕವಾದ ಬುದ್ಧಿ, ಜನಸಂಬಂಧಶೂನ್ಯವಾಗಿರುವ ಪರಿಶುದ್ಧವಾದ ಪ್ರದೇಶದಲ್ಲಿ ನಿವಾಸ, ಸರ್ವದಾ ಆತ್ಮಜ್ಞಾನಾರ್ಥವಾಗಿ ಉದ್ಯೋಗ, ವೇದಾನ್ತಶಾಸ್ತ್ರದ ಅರ್ಥಪರ್ಯಾಲೋಚನೆ,—ಇವುಗಳಿಂದ ಪುರುಷನಿಗೆ ಜ್ಞಾನವುದಯಿಸುವುದು, ಇದಕ್ಕೆ ವಿರುದ್ಧವಾದ ಗುಣಗಳನ್ನು ಸಂಪಾದಿಸಿದರೆ ಅಜ್ಞಾನವುಂಟಾಗುವುದು ॥೨೬-೩೧॥

'ಬುದ್ಧಿ ಪ್ರಾಣ ಮನಸ್ಸು ದೇಹ ಅಹಂಕಾರ-ಇವುಗಳೆಲ್ಲಕ್ಕಿಂತಲೂ ನಾನು ವಿಲಕ್ಷಣನಾದವನು, ನಾನೇ ನಿತ್ಯ ಶುದ್ಧ ಬುದ್ಧ (ಜ್ಞಾನ) ಸ್ವರೂಪನಾದ ಪರಮಾತ್ಮನು' ಎಂಬ ನಿಶ್ಚಯವನ್ನು ಪುರುಷನು ಯಾವುದರಿಂದ ಪಡೆಯುವನೋ, ಅದೇ ಜ್ಞಾನವೆಂದು ನಾನು ನಿಶ್ಚಯಿಸಿಕೊಂಡಿರುವೆನು ಹೀಗೆ ನಿರ್ದೇಶವಾದ ಅರ್ಥವನ್ನು ಸಾಕ್ಷಾತ್ತಾಗಿ ಅನುಭವಿಸುವುದಕ್ಕೆ ವಿಜ್ಞಾನವೆಂದು ಹೆಸರು ॥೩೨-೩೩॥

ಆತ್ಮನು, ಸರ್ವತ್ರ ಪರಿಪೂರ್ಣನೂ ಜ್ಞಾನಾನಂದಾತ್ಮಕನೂ ಅವ್ಯಯನೂ ಬುದ್ಧಿಮೊದ

ಸ್ವಪ್ರಕಾಶೇನ ದೇಹಾದೀ೯ ಭಾಸಯನ್ನಪಿವೃತಃ ।
ಏಕಏವಾದ್ವಿತೀಯಶ್ಚ ಸತ್ಯಜ್ಞಾನಾದಿಲಕ್ಷಣಃ ।
ಅಸಙ್ಗಃ ಸ್ವಪ್ರಭೋ ನಿತ್ಯೋ ವಿಜ್ಞಾನೇನಾವಗಮ್ಯತೇ ॥೩೫॥
ಆಚಾರ್ಯಶಾಸ್ತ್ರೋಪದೇಶಾತ್ ಐಕ್ಯಜ್ಞಾನಂ ಯದಾ ಭವೇತ್ ॥೩೬॥
ಆತ್ಮನೋರ್ಜೀವಪರಯೋಃ ಮೂಲಾವಿದ್ಯಾ ತದೈವ ಹಿ ।
ಲೀಯತೇ ಕಾರ್ಯಕರಣೈಃ ಸಹೈವ ಪರಮಾತ್ಮನಿ ।
ಸಾವಸ್ಥಾ ಮುಕ್ತಿರಿತ್ಯುಕ್ತಾ ಹ್ಯುಪಚಾರೋಽಯಮಾತ್ಮನಿ ॥೩೭॥
ಇದಂ ಮೋಕ್ಷಸ್ವರೂಪಂ ತೇ ಕಥಿತಂ ರಘುನನ್ದನ ।
ಜ್ಞಾನವಿಜ್ಞಾನವೈರಾಗ್ಯಸಹಿತಂ ಮೇ ಪರಾತ್ಮನಃ ॥೩೮॥

ಆದ ಉಪಾಧಿಗಳಿಂದ ಶೂನ್ಯನೂ ದಿಕ್ಕಾಲಾದಿಪರಿಚ್ಛೇದರಹಿತನೂ ತನ್ನ ಪ್ರಕಾಶದಿಂದ ದೇಹಾದಿಗಳನ್ನು ಪ್ರಕಾಶಪಡಿಸತಕ್ಕವನೂ ಸ್ವಯಂ ಮಾಯಾವರಣಶೂನ್ಯನೂ (೧) ಸಜಾತೀಯ ವಿಜಾತೀಯ ಸ್ವಗತ ಭೇದರಹಿತನೂ ಸತ್ಯಜ್ಞಾನಾನಂತಸ್ವರೂಪನೂ ಅಸಂಗನೂ ಸ್ವಯಂಪ್ರಕಾಶನೂ ನಿತ್ಯನೂ ಆಗಿರುವನು ಇಂತಪ ಆತ್ಮನು, ಪೂರ್ವೋಕ್ತವಾದ ವಿಜ್ಞಾನದಿಂದ ತಿಳಿಯಲ್ಪಡುವನು ॥೩೪–೩೫॥

ಆಚಾರ್ಯನು ಮಾಡುವ ಶಾಸ್ತ್ರೋಪದೇಶದಿಂದ ಯಾವಾಗ ಜೀವಾತ್ಮಪರಮಾತ್ಮಗಳಂಬ ಪದಾರ್ಥಗಳೆರಡಕ್ಕೂ ಭೇದವಿಲ್ಲವೆಂದು ಜ್ಞಾನವುಂಟಾಗುತ್ತದೆಯೋ, ಆಗಲೇ–ಮೂಲಾಜ್ಞಾನವು ತನ್ನ ಕಾರ್ಯಕಾರಣ (ಪ್ರಪಂಚ) ಗಳೊಡನೆ ಪರಮಾತ್ಮನೊಳಗೆ ಲಯಹೊಂದಿಬಿಡುವುದು ಈ ಅವಸ್ಥೆಯೇ ಮೋಕ್ಷವೆಂದು ಹೇಳಲ್ಪಡುವುದು ಈ ಮೋಕ್ಷವೆಂಬುದು, ಆತ್ಮನಿಗೆ ಔಪಚಾರಿಕವಾಗಿ ಹೇಳಲ್ಪಡುವುದೇ ಹೊರತು, ವಾಸ್ತವ್ಯವಲ್ಲ ನಿತ್ಯಮುಕ್ತನಾದ ಅವನಿಗ ಬಂಧವೇ ಇಲ್ಲದಿರುವಾಗ, ಮೋಕ್ಷವೆಂದು ಹೇಳುವುದೇಕೆ? ॥೩೬–೩೭॥

ವತ್ಸ! ಲಕ್ಷ್ಮಣ! ಜ್ಞಾನ ವಿಜ್ಞಾನ ವೈರಾಗ್ಯಸಹಿತವಾಗಿ, ಪರಮಾತ್ಮನಾದ ನನಗೆ

---

(೧) ಲೋಕದಲ್ಲಿ ಒಂದು ವಸ್ತುವಿಗೂ ಮತ್ತೊಂದು ವಸ್ತುವಿಗೂ ಮೂರು ವಿಧವಾದ ಭೇದವಿರುವುದು ಮಾವಿನ ಮರವನ್ನು ಇದಕ್ಕೆ ಉದಾಹರಣೆಯಾಗಿಟ್ಟುಕೊಂಡು ತೋರಿಸಲ್ಪಡುವುದು ಮಾವಿನ ಮರವು ಬೇವಿನಮರವಾಗುವುದಿಲ್ಲವಾದಕಾರಣ, ಈ ಮಾವಿನ ಮರದಲ್ಲಿ ಸಜಾತೀಯವಾದ ಬೇವಿನ ಮರಕ್ಕಿಂತ ಭೇದವಿರುವುದೆಂದು ಗೊತ್ತಾಗುವುದು ಮಾವಿನಮಂವು ಪರ್ವತವಾಗುವುದಿಲ್ಲವಾದಕಾರಣ, ಮಾವಿನಮರದಲ್ಲಿ ತನಗೆ ವಿಜಾತೀಯವಾದ ಪರ್ವತಕ್ಕಿಂತ ಭೇದವಿರುವುದು ಮಾವಿನಮರದಲ್ಲಿಯೇ ಹೂವು ಹಣ್ಣು ಎಲೆ ಮುಂತಾದವುಗಳು ಬೇರೆಬೇರೆಯಾಗಿರುವಕಾರಣ, ಮಾವಿನ ಮರಕ್ಕೆ ಸ್ವಗತ(ತನ್ನಲ್ಲಿಯೇ ಇರತಕ್ಕ)ವಾದ ಭೇದವೂ ಇರುವುದು ಹೀಗೆ ಪ್ರಾಪಂಚಿಕವಾದ ಯಾವ ವಸ್ತುವಿನಲ್ಲಿ ನೋಡಿದರೂ, ಈ ಮೂರು ಭೇದಗಳಿದ್ದೇ ಇರುವುವು ಆತ್ಮನಲ್ಲಿಯಾದರೋ, ಇವು ಮೂರೂ ಸಂಭವಿಸುವುದಿಲ್ಲ ಆತ್ಮನಿಗಿಂತ ಬೇರೆಯಾದ ವಸ್ತುವೇ ಇಲ್ಲದಿರುವುದರಿಂದ, ಅವನಲ್ಲಿ ಸಜಾತೀಯ ವಿಜಾತೀಯ ಬೇಧಗಳೆರಡೂ ಇರುವುದಿಲ್ಲ, ಆತ್ಮನು ಅವಯವಶೂನ್ಯನಾಗಿರುವುದರಿಂದ, ಅವನಲ್ಲಿ ಸ್ವಗತಭೇದವೂ ಇಲ್ಲ

ತೆದೇತದ್ದುರ್ಲಭಂ ಮನ್ಯೇ ಮದ್ಭಕ್ತಿವಿಮುಖಾತ್ಮನಾಮ್ ॥೫೯॥
ಚಕ್ಷುಷ್ಮತಾಮಪಿ ಯಥಾ ರಾತ್ರೌ ಸಮ್ಯಙ್ನ ದೃಶ್ಯತೇ ।
ಪದಂ ದೀಪಸಮೇತಾನಾಂ ದೃಶ್ಯತೇ ಸಮ್ಯಗೇವ ಹಿ ।
ಏವಂ ಮದ್ಭಕ್ತಿಯುಕ್ತಾನಾಂ ಆತ್ಮಾ ಸಮ್ಯಕ್ ಪ್ರದೃಶ್ಯತೇ ॥೬೦॥
ಮದ್ಭಕ್ತೇಃ ಕಾರಣಂ ಕಿಞ್ಚಿತ್ ವಕ್ಷ್ಯಾಮಿ ಶೃಣು ತತ್ತ್ವತಃ ॥೬೧॥
ಮದ್ಭಕ್ತಸಙ್ಗಮಃ ಸೇವಾ ಮದ್ಭಕ್ತಾನಾಂ ನಿರನ್ತರಮ್ ।
ಏಕಾದಶ್ಯುಪವಾಸಾದಿ ಮಮ ಪರ್ವಾನುಮೋದನಮ್ ॥೬೨॥
ಮತ್ಕಥಾಶ್ರವಣೇ ಪಾಠೇ ವ್ಯಾಖ್ಯಾನೇ ಸರ್ವದಾ ರತಿಃ ।
ಮತ್ಪೂಜಾಪರಿನಿಷ್ಠಾ ಚ ಮಮ ನಾಮಾದಿಕೀರ್ತನಮ್ ॥೬೩॥
ಏವಂ ಸತತಯುಕ್ತಾನಾಂ ಭಕ್ತಿರವ್ಯಭಿಚಾರಿಣೀ ।
ಮಯಿ ಸಞ್ಜಾಯತೇ ನಿತ್ಯಂ ತತಃ ಕಿಮವಶಿಷ್ಯತೇ ॥೬೪॥
ಅತೋ ಮದ್ಭಕ್ತಿಯುಕ್ತಸ್ಯ ಜ್ಞಾನಂ ವಿಜ್ಞಾನಮೇವ ಚ ।
ವೈರಾಗ್ಯಂ ಚ ಭವೇಚ್ಛೀಘ್ರಂ ತತೋ ಮುಕ್ತಿಮವಾಪ್ನುಯಾತ್ ॥೬೫॥

ಮೋಕ್ಷವಾಗುವುದರ ಸ್ವರೂಪವನ್ನು ನಿನಗೆ ಹೇಳಿರುವನು ನನ್ನಲ್ಲಿ ಭಕ್ತಿಯಿಲ್ಲದವರಿಗೆ ಇದು ದುರ್ಲಭವೆಂದು ನಾನು ತಿಳಿದಿರುವೆನು ॥೫೮-೫೯॥

ಲೋಕದಲ್ಲಿ, ಕಣ್ಣುಳ್ಳವರಿಗೂ ಕೂಡ ರಾತ್ರಿಯಲ್ಲಿ ದಾರಿಯು ಚನ್ನಾಗಿ ಕಾಣಿಸುವುದಿಲ್ಲ, ಕೈಯಲ್ಲಿ ದೀಪವನ್ನು ಹಿಡಿದುಕೊಂಡು ಹೋದರೋ, ದಾರಿಯು ಸ್ಪಷ್ಟವಾಗಿಯೇ ಕಾಣಿಸುವುದು ಹೀಗೆ ನನ್ನಲ್ಲಿ ಭಕ್ತಿಯಿಡತಕ್ಕವರಿಗೆ ಆತ್ಮಸ್ವರೂಪವು ಸ್ಪಷ್ಟವಾಗಿ ಗೋಚರವಾಗುವುದು ನನ್ನಲ್ಲಿ ಭಕ್ತಿಹುಟ್ಟುವುದಕ್ಕೆ ವಾಸ್ತವಿಕವಾದ ಕಾರಣವನ್ನು ಹೇಳುವನು, ಕೇಳು ॥

ನನ್ನ ಭಕ್ತರೊಡನೆ ಸಹವಾಸ, ಸರ್ವದಾ ನನ್ನ ಭಕ್ತರ ಸೇವೆ, ಏಕಾದಶ್ಯುಪವಾಸ ಮುಂತಾದ ವ್ರತಾಚರಣೆ, ನನ್ನ ಜಯಂತಿ ಮುಂತಾದ ಪುಣ್ಯದಿನಗಳಲ್ಲಿ ಉತ್ಸವಮಾಡುವುದು, ನನ್ನ ಕಥೆಯನ್ನು ಕೇಳುವುದರಲ್ಲಿಯೂ ಪಾರಾಯಣಮಾಡುವುದರಲ್ಲಿಯೂ ವ್ಯಾಖ್ಯಾನಮಾಡುವುದರಲ್ಲಿಯೂ ಸರ್ವದಾ ಆಸಕ್ತಿ ನನ್ನ ಪೂಜೆಯಲ್ಲಿ ಸ್ಥಿರವಾದ ಪ್ರವೃತ್ತಿ ನನ್ನ ನಾಮ ಮುಂತಾದುವುಗಳ ಕೀರ್ತನೆ,—ಹೀಗೆ ಈ ಕೆಲಸಗಳಲ್ಲಿ ಸರ್ವದಾ ನಿರತರಾದವರಿಗೆ, ಸರ್ವಾತ್ಮಕನಾದ ನನ್ನಲ್ಲಿ ಸರ್ವದಾ ಸ್ಥಿರವಾದ ಭಕ್ತಿಯುದಯಿಸುವುದು ಈ ಭಕ್ತಿಯೊಂದು ಉದಯಿಸಿಬಿಟ್ಟರೆ, ಅಮೇಲೆ ಇನ್ನೇನು ತಾನೆ ಅವಶಿಷ್ಟವಾಗುವುದು? ॥೪೨-೪೪॥

ಆದುಕಾರಣ, ನನ್ನಲ್ಲಿ ಭಕ್ತಿಯುಕ್ತನಾಗಿರತಕ್ಕವನಿಗೆ ಜ್ಞಾನ ವಿಜ್ಞಾನ ವೈರಾಗ್ಯಗಳು ಶೀಘ್ರವಾಗಿ ಉಂಟಾಗುವುವು, ಅನಂತರ ಅವನು ಮೋಕ್ಷಭಾಗಿಯಾಗುವನು ॥೪೫॥

ಕಥಿತಂ ಸರ್ವಮೇತತ್ ತೇ ತವ ಪ್ರಶ್ನಾನುಸಾರತಃ ।
ಅಸ್ಮಿನ್ ಮನಃ ಸಮಾಧಾಯ ಯಸ್ತಿಷ್ಠೇತ್ ಸ ತು ಮುಕ್ತಿಭಾಕ್ ॥೪೬॥
ನ ವಕ್ತವ್ಯಮಿದಂ ಯತ್ನಾತ್ ಮದ್ಭಕ್ತಿವಿಮುಖಾಯ ವೈ ।
ಯಇದಂ ಪರತೇ ನಿತ್ಯಂ ಶ್ರದ್ಧಾಭಕ್ತಿಸಮನ್ವಿತಃ ।
ಅಜ್ಞಾನಧ್ವಾನ್ತಪಟಲಂ ವಿಧೂಯ ಪರಿಮುಚ್ಯತೇ ॥೪೭॥

ಇತಿ ಶ್ರೀಮದರಣ್ಯಕಾಣ್ಡೇ ರಾಮೇಣ ಲಕ್ಷ್ಮಣಸ್ಯ ಭಕ್ತಿ ಜ್ಞಾನ
ತತ್ಸಾಧನ ಸ್ವರೂಪಕಥನಂ ನಾಮ ಅಷ್ಟಮಃ ಸರ್ಗಃ.



ವತ್ಸ ! ಲಕ್ಷ್ಮಣ! ನಿನ್ನ ಪ್ರಶ್ನೆಗನುಗುಣವಾಗಿ ಇವೆಲ್ಲವನ್ನೂ ನಾನು ನಿನಗೆ ಹೇಳಿರುವೆನು ಯಾವನು ಇದರಲ್ಲಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಿಕೊಂಡಿರುವನೋ, ಅವನು ಮೋಕ್ಷ ಭಾಜನನಾಗುವನು ॥೪೬॥

ನನ್ನಲ್ಲಿ ಭಕ್ತಿಯಿಲ್ಲದಿರುವನಿಗೆ ಇದನ್ನು ಖಂಡಿತವಾಗಿಯೂ ಹೇಳಕೂಡದು ಯಾವನು ಶ್ರದ್ಧಾಭಕ್ತಿಯುಕ್ತನಾಗಿ ನಿತ್ಯವೂ ಇದನ್ನು ಪರಿಸುವನೋ, ಅವನು ಅಜ್ಞಾನವೆಂಬ ಅಂಧಕಾರವನ್ನು ಪರಿಹರಿಸಿಕೊಂಡು ಮುಕ್ತನಾಗುವನು ॥೪೭॥

ಇದು ಅರಣ್ಯಕಾಂಡದಲ್ಲಿ ರಾಮನು ಲಕ್ಷ್ಮಣನಿಗೆ ಭಕ್ತಿಜ್ಞಾನತತ್ಸಾಧನಾದಿ
ಸ್ವರೂಪವನ್ನುಪದೇಶಿಸಿದನೆಂಬಲ್ಲಿಗೆ ಎಂಟನೆಯ ಸರ್ಗವು.



ಅಥ ಶ್ರೀಮದರಣ್ಯಕಾಣ್ಡೇ ನವಮಃ ಸರ್ಗಃ

ಶ್ರೀಶಿವಉವಾಚ

ಏತಸ್ಮಿನ್ನೇವ ಸಮಯೇ ರಾಕ್ಷಸೀ ರಾವಣಸ್ವಸಾ ।
ಖ್ಯಾತಾ ಶೂರ್ಪಣಖಾ ಚೇತಿ ಸಾ ಯಯೌ ರಾಘುವಾಶ್ರಮಮ್ ।
ವಿಹಾಯ ರಾಕ್ಷಸೀರೂಪಂ ದಿವ್ಯಸ್ತ್ರೀರೂಪಮಾಸ್ಥಿತಾ ॥೧॥
ಇನ್ದೀವರದಳಶ್ಯಾಮಂ ಸಸ್ಮಿತಾನನಪಙ್ಕಜಮ್ ।
ಯುವಾನಂ ಕಾಮಸದೃಶಂ ಜಗನ್ಮೋಹನವಿಗ್ರಹಮ್ ॥೨॥
ರಾಮಂ ತದನುಜಂ ಚಾಪಿ ದೃಷ್ಟ್ವಾ ಸಾ ಕಾಮಮೂರ್ಛಿತಾ ।
ರಾಘುವಸ್ಯ ಪುರಃ ಸ್ಥಿತ್ವಾ ವಚನಂ ಚೇದಮಬ್ರವೀತ್ ॥೩॥
ಅಸ್ಮ್ಯಹಂ ಬ್ರಾಹ್ಮಣೀ ರಾಮ ಪವಿತ್ರಕುಲಸಮ್ಭವಾ ।
ಮಾಂ ವಿಜಾನೀಹಿ ತತ್ತ್ವೇನ ತವ ಕಾಮಾಗ್ನಿಪೀಡಿತಾಮ್ ॥೪॥
ನೇದಂ ರೂಪಂ ಮಯಾ ಕ್ವಾಪಿ ದೃಷ್ಟಂ ನಾಪಿ ಚ ಸಂಶ್ರುತಮ್ ।
ತವ ರೂಪಾನುರೂಪಾಹಂ ನಾಸ್ತ್ಯನ್ಯಾ ಕಾಚಿದಙ್ಗನಾ ॥೫॥

ಅರಣ್ಯಕಾಂಡದಲ್ಲಿ ಒಂಭತ್ತನೆಯ ಸರ್ಗವು

ಶ್ರೀಪರಮೇಶ್ವರನು ಪುನಃ ಪಾರ್ವತಿಯನ್ನು ಕರಿತು ಹೇಳುವನು —

ಎಲೌ ಪಾರ್ವತಿ! ಈ ಸಮಯದಲ್ಲಿಯೇ, ರಾವಣನ ತಂಗಿಯಾದ ಶೂರ್ಪಣಖಿಯಂದು ಪ್ರಸಿದ್ಧಳಾದ ರಾಕ್ಷಸಿಯು, ರಾಕ್ಷಸರೂಪವನ್ನು ಬಟ್ಟುಬಟ್ಟು ದಿವ್ಯವಾದ ಸ್ತ್ರೀವೇಷವನ್ನು ಧರಿಸಿಕೊಂಡು, ಶ್ರೀರಾಮನ ಆಶ್ರಮಕ್ಕೆ ಬಂದಳು ॥೧॥

ಇಂದೀವರದಳಶ್ಯಾಮನಾಗಿಯೂ ಮುಖದಲ್ಲಿ ಮಂದಹಾಸಯುಕ್ತನಾಗಿಯೂ ಯೌವನ ಶಾಲಿಯಾಗಿಯೂ ಮನ್ಮಥಸಮಾನನಾಗಿಯೂ ತ್ರೈಲೋಕ್ಯಮೋಹಕವಾದ ಶರೀರವುಳ್ಳವನಾಗಿಯೂ ಇರುವ ಶ್ರೀರಾಮನನ್ನೂ ಅವನ ತಮ್ಮನಾದ ಲಕ್ಷ್ಮಣನನ್ನೂ ನೋಡಿ, ಕಾಮಮೋಹಿತಳಾದ ಆ ಶೂರ್ಪಣಖಿಯು, ರಾಮನ ಮುಂದೆ ಬಂದು ನಿಂತುಕೊಂಡು, ಈ ಮಾತನ್ನು ಹೇಳಿದಳು ॥೨-೩॥

ಹೇ ರಾಮ! ನಾನು ಬ್ರಾಹ್ಮಣಸ್ತ್ರೀಯು; ಶುದ್ಧವಾದ ವಂಶದಲ್ಲಿ ಹುಟ್ಟಿದವಳು. ನಾನು ಸತ್ಯವಾಗಿ ನಿನ್ನಲ್ಲಿ ಅನುರಾಗವಿಟ್ಟು ಕಾಮಾಗ್ನಿಪೀಡಿತಳಾಗಿರುವೆನೆಂದು ತಿಳಿಯುವನಾಗು ॥೪॥

ನಿನ್ನ ಇಂತಹರೂಪವನ್ನು ನಾನು ಇದುವರೆಗೆ ಎಲ್ಲಿಯೂ ನೋಡಿಯೂ ಇಲ್ಲ, ಕೇಳಿಯೂ ಇಲ್ಲ, ನಿನ್ನರೂಪಕ್ಕೆ ತಕ್ಕಂತಹ ಸುಂದರಿಯು ನಾನೇ ಸರಿ, ಮತ್ತಾವ ಸ್ತ್ರೀಯೂ ನಿನಗೆ ಸರಿಯಲ್ಲ ॥೫॥

ತಪಸಸ್ತೇ ಫಲಂ ಪ್ರಾಪ್ತಂ ವನವಾಸವ್ರತಸ್ಯ ಚ ।
ಭುಂಕ್ಷ್ವ ಭೋಗಾನ್ ಮಯಾ ಸಾಕಂ ದೇವಲೋಕೇಪಿ ದುರ್ಲಭಾನ್ ॥
ಮಮ ತ್ವಂ ನರಶಾರ್ದೂಲ ಭರ್ತಾ ಭವಿತುಮರ್ಹಸಿ ॥೬॥
ಇಮಾಂ ವಿರೂಪಾಮಾಲಮ್ಬ್ಯ ಯದಿ ತ್ವಂ ಮಾಮುಪೇಕ್ಷಸೇ ।
ಅದ್ಯೈವಾಮಾಂ ಭಕ್ಷಯಿಷ್ಯಾಮಿ ಪಶ್ಯತಸ್ತವ ಜಾನಕೀಮ್ ॥೭॥
ಇತ್ಯುಕ್ತ್ವಾ ಮೃಗಶಾಬಾಕ್ಷೀಂ ಅಲಾತಸದೃಶೇಕ್ಷಣಾ ।
ಅಭ್ಯಧಾವತ್ ಸುಸಂಕ್ರದ್ಧಾ ಮಹೋಲ್ಕಾ ರೋಹಿಣೀಮಿವ॥೮॥
ತಾಂ ಮೃತ್ಯುಪಾಶಪ್ರತಿಮಾಂ ಆಪತನ್ತೀಂ ಮಹಾಬಲಃ
ಉದ್ಧೃತ್ಯ ಖಡ್ಗಂ ಚಿಚ್ಛೇದ ಕರ್ಣನಾಸೇ ಸ ಲಕ್ಷ್ಮಣಃ ॥೯॥
ಸಾ ವಿಕ್ಷರನ್ತೀ ರುಧಿರಂ ಬಹುಧಾ ಘೋರದರ್ಶನಾ ।
ಪ್ರಗೃಹ್ಯ ಬಾಹೂ ಗರ್ಜನ್ತೀ ಪ್ರವಿವೇಶ ಖರಾನ್ತಿಕಮ್ ॥೧೦।
ತಾಂ ತದಾ ಪತಿತಾಂ ದೃಷ್ಟ್ವಾ ವಿರೂಪಾಂ ಶೋಣಿತೋಕ್ಷಿತಾಮ್ ।
ಭಗಿನೀಂ ಕ್ರೋಧಸನ್ತಪ್ತಃ ಖರಃ ಪಪ್ರಚ್ಛ ರಾಕ್ಷಸಃ ॥೧೨॥

ನೀನು ಇದುವರೆಗೆ ಮಾಡಿದ ತಪಸ್ಸಿಗೂ ವನವಾಸದ ನಿಯಮಕ್ಕೂ ಕೂಡ ಈಗ ಫಲವು ಲಭಿಸಿತು ಈಗ ನನ್ನೊಡನೆ ದೇವಲೋಕದಲ್ಲಿಯೂ ಸಿಕ್ಕಲಾರದ ಭೋಗಗಳನ್ನು ಯಥೇಚ್ಛವಾಗಿ ಅನುಭವಿಸು ಹಜ್ಜುಹೇಳುವುದೇನು ? ಈಗ ನೀನು ನನ್ನನ್ನು ಪತ್ನಿಯನ್ನಾಗಿ ಪರಿಗ್ರಹಿಸ ಬೇಕು ॥೬-೦॥

ಈ ಕುರೂಪಳಾದ ಹೆಂಡತಿಯಲ್ಲಿ ಪ್ರೀತಿಯಿಟ್ಟುಕೊಂಡು ನೀನು ನನ್ನನ್ನು ಉಪೇಕ್ಷಿಸುತ್ತೀಯಾದರೆ, ನೀನು ನೋಡುತಿರುವಹಾಗೆಯೇ ಈ ಜಾನಕಿಯನ್ನು ತಿಂದುಬಿಡುವನು ॥೮॥

ಹೀಗೆಂದು ಹೇಳಿ, ಕೊಳ್ಳಿಗೆ ಸಮಾನವಾದ ಕಣ್ಣುಳ್ಳ ಶೂರ್ಪಣಖಿಯು, ಅತಿ ಕೋಪಸಮನ್ವಿತಳಾಗಿ ಮಹೋಲ್ಕೆಯು (ಉತ್ಪಾತಸೂಚಕವಾದ ಕೊಳ್ಳಿ) ರೋಹಿಣೀನಕ್ಷತ್ರವನ್ನು ಬೆನ್ನಟ್ಟಿ ಕೊಂಡು ಹೋಗುವಂತೆ, ಮೃಗನೇತ್ರಿಯಾದ ಸೀತೆಯನ್ನು ಅಟ್ಟಿಕೊಂಡು ಹೋದಳು ॥೯॥

ಹೀಗೆ ಮೃತ್ಯುವಿನ ಪಾಶದಂತೆ ಬರುತಿರುವ ಶೂರ್ಪಣಖಿಯನ್ನು ನೋಡಿ, ಮಹಾಬಲನಾದ ಲಕ್ಷ್ಮಣನು, ತನ್ನ ಖಡ್ಗವನ್ನು ಎತ್ತಿ ಅವಳ ಕಿವಿಮೂಗುಗಳನ್ನು ಕತ್ತರಿಸಿಬಿಟ್ಟನು ॥೦೧॥

ಅನಂತರ, ಕಿವಿಮೂಗುಗಳ ರಂಧ್ರಗಳಲ್ಲಿ ಬಹಳವಾಗಿ ರಕ್ತವನ್ನು ಸುರಿಯಿಸುತ ನೋಡುವುದಕ್ಕೆ ಭಯಂಕರಳಾಗಿರುವ ಆ ಶೂರ್ಪಣಖಿಯು, ತೋಳುಗಳನ್ನು ಮೇಲಕ್ಕೆತ್ತಿಕೊಂಡು ಕಿರಿಚುತ, ಖರಾಸುರನ ಸಮೀಪಕ್ಕೆ ಹೋದಳು ॥೧೧॥

ಆಗ ತನ್ನಮುಂದುಗಡೆ ವಿಕೃತರೂಪಳಾಗಿ ರಕ್ತದಿಂದ ನೆನೆದುಹೋಗಿ ಬಿದ್ದು ಹೊರಳುತಿರುವ ತನ್ನ ತಂಗಿಯನ್ನು ನೋಡಿ, ಮಹಾ ಕ್ರೋಧಸಮನ್ವಿತನಾದ ಖರಾಸುರನು ಈರೀತಿಯಾಗಿ ಕೇಳಿದನು ॥೧೨॥

ಕಿಮೇತಚ್ಛ್ರೋತುಮಿಚ್ಛಾಮಿ ಕಾರಣಂ ಯತ್ಕೃತೇಧುನಾ ।
ಹಾ ನಾಥೇತಿ ವಿನರ್ದನ್ತೀ ಸರ್ಪವದ್ವೇಪ್ಸಸೇ ಕ್ಷಿತೌ ॥೧೩॥
ಅನಾಥವದ್ವಿಲಪಸಿ ಕಿಂ ನು ನಾಥೇ ಮಯಿ ಸ್ಥಿತೇ ।
ಉತ್ತಿಷ್ಠೋತ್ತಿಷ್ಠ ಮೂಢೈಷೀ ವೈಕ್ಲಬ್ಯಂ ತ್ಯಜ್ಯತಾಮಿಹ ॥೧೪॥
ಕಃ ಕಾಲಪಾಶಮಾಸಜ್ಯ ಕಣ್ಠೇ ವೋಢುನ್ನ ಬುಧ್ಯತೇ ।
ಯಸ್ತ್ವಮದ್ಯ ಸಮಾಸಾದ್ಯ ಪೀತವಾ ವಿಷಮುಲ್ಬಣಮ್ ॥೧೫॥
ಇತ್ಯೇವಮುಕ್ತಾ ದುರ್ಧರ್ಷಾ ಖರೇಣ ಪರಿಸಾನ್ತ್ವಿತಾ ।
ವಿಮೃಜ್ಯ ನಯನೇ ಸಾದ್ರೇ ಖರಂ ಭ್ರಾತರಮಬ್ರವೀತ್ ॥೧೬॥
ತರುಣೌ ರೂಪಸಮ್ಪನ್ನೌ ಸುಕುಮಾರೌ ಮಹಾಬಲೌ ।
ಪುಣ್ಡರೀಕವಿಶಾಲಾಕ್ಷೌ ಜೀರಕೃಷ್ಣಾಜಿನಾಮ್ಬರೌ ॥೧೭॥
ಫಲಮೂಲಾಶನೌ ದಾನ್ತೌ ತಾಪಸೌ ಧರ್ಮಚಾರಿಣೌ
ಪ್ರತೌ ದಶರಥಸ್ಯೈತೌ ಭ್ರಾತರೌ ರಾಮಲಕ್ಷ್ಮಣೌ ॥೧೮॥

ಎಲೌ ತಂಗಿ! ನೀನು ಈಗ 'ಹಾ! ನಾಥ!!' ಎಂದು ಕೂಗಿಕೊಳ್ಳುತ ಏತಕ್ಕಾಗಿ ಹಾವಿನಂತೆ ಭೂಮಿಯಮೇಲೆ ಬಿದ್ದು ಹೊರಳಾಡುತ್ತೀಯೆ? ಇದಕ್ಕೆ ಕಾರಣವೇನೆಂದು ತಿಳಿದುಕೊಳ್ಳಲು ನಾನು ಇಚ್ಛಿಸುತ್ತಿರುವೆನು ॥೧೪॥

ನಿಮಗೆಲ್ಲರಿಗೂ ನಾಥನಾದ ನಾನು ಇರುವಾಗ, ನೀನು ಹೀಗೆ ಅನಾಥಳಂತೆ ಅಳುವುದಕ್ಕೆ ಕಾರಣವೇನು? ಏಳುಏಳು, ನೀನು ಹೆದರಬೇಡ ಈ ದೈನ್ಯವನ್ನು ಬಿಟ್ಟುಬಿಡು ॥೧೫॥

ಈಗ ನಿನ್ನಮೇಲ ಕೈಮಾಡಿ ತೀವ್ರವಾದ ವಿಷವನ್ನು ಯಾವನು ಕುಡಿದಿರುವನೋ, ಅಂತಹ ದುರಾತ್ಮನಾದ ಯಾವನು ಮೈಮರೆತು ತನ್ನ ಕುತ್ತಿಗೆಯಲ್ಲಿ ಕಾಲಪಾಶವನ್ನು ಬೀರಿಕೊಂಡು ಜ್ಞಾನವಿಲ್ಲದಿರುವನು? ॥೧೬॥

ಹೀಗಂದು ಹೇಳಲ್ಪಟ್ಟು ಖರನಿಂದ ಸಮಾಧಾನಪಡಿಸಲ್ಪಟ್ಟ ಅಪ್ರಧೃಷ್ಯಳಾದ ಆ ಶೂರ್ಪಣಖಿಯು, ನೀರುಸುರಿಯುತಿರುವ ತನ್ನ ಕಣ್ಣುಗಳನ್ನು ಒರೆಸಿಕೊಂಡು ತನ್ನ ಅಣ್ಣನಾದ ಖರನನ್ನು ಕುರಿತು ಹೀಗೆ ಹೇಳಿದಳು ॥೧೭॥

ಅಣ್ಣಾ! ನಾನೇನು ಹೇಳಲಿ! ದಂಡಕಾರಣ್ಯದಲ್ಲಿ ಇಬ್ಬರು ತಾಪಸರನ್ನು ಕಂಡೆನು ಅವರು ಇನ್ನೂ ನವಯೌವನ ಶಾಲಿಗಳಾಗಿರುವರು, ಮಹಾಸೌಂದರ್ಯಯುಕ್ತರು, ಸುಕುಮಾರ ದೇಹರು, ಮಹಾಬಲಸಂಪನ್ನರು, ಅವರ ಕಣ್ಣುಗಳು ತಾವರೆಯಿಲೆಯಂತೆ ವಿಶಾಲವಾಗಿರುವುವು, ಅವರು ನಾರುಮಡಿಯನ್ನೂ ಕೃಷ್ಣಾಜಿನವನ್ನೂ ವಸ್ತ್ರವಾಗಿ ಧರಿಸಿರುವರು, ಫಲಮೂಲಗಳನ್ನು ಆಹಾರಮಾಡಿಕೊಂಡಿರುವರು, ಇಂದ್ರಿಯನಿಗ್ರಹನಿರತರಾಗಿರುವರು, ಧರ್ಮಾಚರಣೆಯಲ್ಲಿ ಆಸಕ್ತರಾಗಿರುವರು. ಇವರು ದಶರಥನ ಮಕ್ಕಳಾದ ರಾಮ ಲಕ್ಷ್ಮಣರೆಂಬ ಸಹೋದರರು ॥

ಗನ್ಧರ್ವರಾಜಪ್ರತಿಮೌ ಪಾರ್ಥಿವವ್ಯಞ್ಜನಾನ್ವಿತೌ ।
ದೇವೌ ವಾ ಮಾನುಷೌ ವಾ ತೌ ನ ತರ್ಕಯಿತುಮುತ್ಸಹೇ ॥೧೯॥
ತರುಣೀ ರೂಪಸಮ್ಪನ್ನಾ ಸರ್ವಾಭರಣಭೂಷಿತಾ ।
ದೃಷ್ಟಾ ತತ್ರ ಮಯಾ ನಾರೀ ತಯೋರ್ಮಧ್ಯೇ ಸುಮಧ್ಯಮಾ ॥೨೦॥
ತಾಭ್ಯಾಮುಭಾಭ್ಯಾಂ ಸಮ್ಭೋಯ ಪ್ರಮದಾಮಧಿಕೃತ್ಯ ತಾಮ್ ।
ಇಮಾಮವಸ್ಥಾಂ ನೀತಾಹಂ ಯಥಾನಾಥಾ ಸತೀ ತಥಾ ॥೨೧॥
ಶ್ರುತ್ವೈವಂ ಭಗಿನೀವಾಕ್ಯಂ ಖರಃ ಕ್ರುದ್ಧೋಬ್ರವೀದ್ವಚಃ ।
ಅಪೀನ್ದ್ರಮಪಿ ಪರ್ಜನ್ಯಂ ಅಪಿ ಮೃತ್ಯುಂ ಯಮಂ ತಥಾ ।
ಬ್ರಹ್ಮಾಣಮಪಿ ರುದ್ರಂ ವಾ ವಿಷ್ಣುಂ ವಾ ಹನ್ಮಿ ತೇ ಕೃತೇ ॥೨೨॥
ನ ರಾಮಂ ಗಣಯೇ ವೀರ್ಯಾತ್ ಮಾನುಷಂ ಕ್ಷಣಜೀವಿತಮ್ ॥೨೩॥
ಇತ್ಯುಕ್ತ್ವಾ ಸ ದುರಾಧರ್ಷಃ ಖರೋ ರಾಕ್ಷಸಪುಙ್ಗವಃ ।
ತತ್ಪ್ರದರ್ಶಿತಮಾರ್ಗೇಣ ಯಯೌ ರಾಮಜಿಘಾಂಸಯಾ ॥೨೪॥
ರಾಕ್ಷಸಾನಾಂ ಸುಘೋರಾಣಾಂ ಸಹಸ್ರಾಣಿ ಚತುರ್ದಶ ।
ನಿರ್ಯಾತಾನಿ ಜನಸ್ಥಾನಾತ್ ಖರಜೇತ್ರಾನುವರ್ತಿನಾಮ್ ॥೨೫॥

ಗಂಧರ್ವರಾಜನಿಗೆ ಸಮಾನರಾಗಿಯೂ ರಾಜಚಿಹ್ನೆಗಳಿಂದ ಯುಕ್ತರಾಗಿಯೂ ಇರುವ ಇವರು, ದೇವತೆಗಳೋ–ಅಥವಾ ಮನುಷ್ಯರೋ–ನಿರ್ಣಯಿಸಿ ಹೇಳಲು ನನಗ ಶಕ್ತಿ ಸಾಲದು ॥೧೯॥

ಅವರಿಬ್ಬರಿಗೂ ಮಧ್ಯದಲ್ಲಿ, ಯುವತಿಯಾಗಿಯೂ ಲೋಕೋತ್ತರ ಸುಂದರಿಯಾಗಿಯೂ ಸರ್ವಾಭರಣಭೂಷಿತಳಾಗಿಯೂ ಕೃಶಮಧ್ಯಳಾಗಿಯೂ ಇರುವ ಒಬ್ಬ ಸ್ತ್ರೀಯನ್ನು ಕಂಡೆನು ॥

ಆ ಸ್ತ್ರೀಯನ್ನು ನಿಮಿತ್ತಮಾಡಿಕೊಂಡು, ಇವರಿಬ್ಬರೂ ಒಟ್ಟಾಗಿ ಸೇರಿ, ನನ್ನನ್ನು ಅನಾಥಳಾದ ಸ್ತ್ರೀಯನ್ನು ಕಂಡಂತೆ ಈ ಅವಸ್ಥೆಯನ್ನು ಹೊಂದಿಸಿಬಿಟ್ಟರು ॥೨೧॥

ಹೀಗೆ ಹೇಳಿದ ತಂಗಿಯ ಮಾತನ್ನು ಕೇಳಿ, ಮಹಾಕೋಪಸಮನ್ವಿತನಾದ ಖರನು ' ಎಲೌ ಶೂರ್ಪಣಖಿ! ನಾನು ಈಗ ನಿನಗೋಸ್ಕರವಾಗಿ ಇಂದ್ರನನ್ನಾಗಲಿ ಪರ್ಜನ್ಯನನ್ನಾಗಲಿ ಮೃತ್ಯುವನ್ನಾಗಲಿ ಯಮಧರ್ಮರಾಜನನ್ನಾಗಲಿ ಬ್ರಹ್ಮನನ್ನಾಗಲಿ ರುದ್ರನನ್ನಾಗಲಿ ವಿಷ್ಣುವನ್ನಾಗಲಿ ಕೊಂದುಬಿಡುವೆನು ಕ್ಷಣಕಾಲಿಕವಾದ ಜೀವಿತವುಳ್ಳ ಮನುಷ್ಯಮಾತ್ರನಾದ ರಾಮನನ್ನು ನಾನು ಸ್ವಲ್ಪವೂ ಲಕ್ಷ್ಯಮಾಡುವುದಿಲ್ಲ ' ಎಂದು ಹೇಳಿದನು ॥೨೨–೨೩॥

ಈ ರೀತಿಯಾಗಿ ಹೇಳಿ, ಅಪ್ರಧೃಷ್ಯನಾದ ಆ ಖರಾಸುರನು, ಶೂರ್ಪಣಖಿಯು ತೋರಿಸಿದ ಮಾರ್ಗವನ್ನನುಸರಿಸಿಕೊಂಡು, ರಾಮನನ್ನು ಕೊಲ್ಲುಬೇಕೆಂಬ ಇಚ್ಛೆಯಿಂದ ಹೊರಟನು ॥

ಆಗ, ಮಹಾಕ್ರೂರರಾಗಿರುವ ಖರನ ಚಿತ್ತಾನುವರ್ತಿಗಳಾದ ಹದಿನಾಲ್ಕುಸಾವಿರ ಮಂದಿ ರಾಕ್ಷಸರು ಜನಸ್ಥಾನದಿಂದ ಹೊರಟರು ॥೨೫॥

ಚತುರ್ದಶಸಹಸ್ರಾಣಾಂ ಪ್ರಧಾನಾನಾಂ ತು ರಕ್ಷಸಾಮ್ ।
ಏಕೈಕಸ್ಯ ಸಹಸ್ರಾಣಿ ತಾವನ್ತಿ ಪಿಶಿತಾಶಿನಾಮ್ ॥೨೬॥
ಖರಶ್ಚ ತ್ರಿಶಿರಾಶ್ಚೈವ ದೂಷಣಶ್ಚೈವ ರಾಕ್ಷಸಃ ।
ಸರ್ವೇ ರಾಮಂ ಯಯುಃ ಶೀಘ್ರಂ ನಾನಾಪ್ರಹರಣೋದ್ಯತಾಃ ॥೨೭॥
ಶ್ರುತ್ವಾ ಕೋಲಾಹಲಂ ತೇಷಾಂ ರಾಮಃ ಸೌಮಿತ್ರಿಮಬ್ರವೀತ್ ॥೨೮॥
ಶ್ರೂಯತೇ ವಿಪುಲಃ ಶಬ್ದಃ ನೂನಮಾಯಾನ್ತಿ ರಾಕ್ಷಸಾಃ ।
ಭವಿಷ್ಯತಿ ಮಹದ್ಯುದ್ಧಂ ನೂನಮದ್ಯ ಮಯಾ ಸಹ ।
ಹನ್ತುಮಿಚ್ಛಾಮ್ಯಹಂ ಸರ್ವಾಂ ರಾಕ್ಷಸಾಂ ಘೋರರೂಪಿಣಃ ॥೨೯॥

ಶ್ರೀಲಕ್ಷ್ಮಣ ಉವಾಚ

ಮಮಾಜ್ಞಾಂ ದೀಯತಾಂ ದೇವ ಪ್ರಾಪ್ತಶತ್ರುವಿಮರ್ದನೇ ;
ಭವದಾಜ್ಞಾಮನುಪ್ರಾಪ್ಯ ಸಂಹರಿಷ್ಯಾಮಿ ಶಾತ್ರವಾಂ ॥೩೦॥

ಶ್ರೀರಾಮ ಉವಾಚ

ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್ ।
ಅಜಯ್ಯಾಂ ವಿದ್ಧಿ ತಾಂ ವೀರ ಸೇನ್ದ್ರೈರಪಿ ಸುರಾಸುರೈಃ ॥೩೧॥

ಈ ಹದಿನಾಲ್ಕುಸಾವಿರ ಮಂದಿಯೂ ಪ್ರಧಾನಭೂತರಾದ ರಾಕ್ಷಸರು. ಇವರೆಲ್ಲರಿಗೂ ಒಬ್ಬೊಬ್ಬನ ಕೈಕೆಳಗೆ ಹದಿನಾಲ್ಕುಸಾವಿರ ಮಂದಿ ರಾಕ್ಷಸರು ಇದ್ದರು ॥೨೬॥

ಇದಲ್ಲದ, ಖರ ತ್ರಿಶಿರಸ್ಸು ದೂಷಣ ಮುಂತಾದ ಮಹಾವೀರರಾದ ರಾಕ್ಷಸರೆಲ್ಲರೂ ಕೂಡ, ನಾನಾವಿಧವಾದ ಆಯುಧಗಳನ್ನು ಎತ್ತಿ ಹಿಡಿದುಕೊಂಡು ರಾಮನನ್ನು ಎದುರಿಸಿ ಹೊರಟರು ॥೨೭॥

ಆ ಸಮಯದಲ್ಲಿ, ಯುದ್ಧಾರ್ಥವಾಗಿ ಬರುತಿರುವ ರಾಕ್ಷಸರ ಕೋಲಾಹಲವನ್ನು ಕೇಳಿ, ಶ್ರೀರಾಮನು ಲಕ್ಷ್ಮಣನನ್ನು ಕುರಿತು ' ವತ್ಸ ! ಲಕ್ಷ್ಮಣ ! ಅದೋ ಅಲ್ಲಿ ಅತಿವಿಸ್ತಾರವಾದ ಶಬ್ದವು ಕೇಳಿಬರುವುದು, ಈಗ ನಿಶ್ಚಿತವಾಗಿ ರಾಕ್ಷಸರು ಬರುತಿರುವರು ಘೋರಾಕಾರರಾದ ಆ ರಾಕ್ಷಸರನ್ನೆಲ್ಲ ನಾನೇ ಕೊಲ್ಲಬೇಕೆಂದು ಇಚ್ಛಿಸುವೆನು ' ಎಂದು ಹೇಳಿದನು ॥೨೮-೨೯॥

ಇದನ್ನು ಕೇಳಿ ಲಕ್ಷ್ಮಣನು ವಿಜ್ಞಾಪಿಸುವನು —

ಸ್ವಾಮಿ ! ಈಗ ಬಂದಿರುವ ಶತ್ರುಗಳನ್ನು ಸಂಹರಿಸುವವಿಷಯದಲ್ಲಿ ನನಗೆ ಅಪ್ಪಣೆಕೊಡುವನಾಗು. ನಿನ್ನ ಅಪ್ಪಣೆಯನ್ನು ಹೊಂದಿ, ನಾನೇ ಈ ಸಮಸ್ತ ಶತ್ರುಗಳನ್ನೂ ಸಂಹರಿಸುವೆನು ॥

ಆಗ ಶ್ರೀರಾಮನು ಉತ್ತರಹೇಳುವನು —

ಅಯ್ಯಾ ವೀರನೆ ! ಖರ ತ್ರಿಶಿರಸ್ಸು ದೂಷಣರೆಂಬ ಈ ಮೂರುಮಂದಿಯೂ ಸಾಮಾನ್ಯರೆಂದು ತಿಳಿಯಬೇಡ, ಇಂದ್ರನೊಡಗೂಡಿದ ದೇವತೆಗಳೂ ಸಮಸ್ತರಾದ ರಾಕ್ಷಸರೂ ಅವರನ್ನು ಜಯಿಸಲು ಸಮರ್ಥರಾಗುವುದಿಲ್ಲವೆಂದು ತಿಳಿಯುವನಾಗು ॥೩೧॥

ಮಯಾ ತೇಷಾಂ ವರೋ ದತ್ತಃ ಪೂರ್ವಜನ್ಮನಿ ಮಾನುಕಾಃ ।
ತದಾ ತೇ ಮೇ ಪ್ರತೋಷಾಯ ತಪಸ್ತೇಪುರ್ಮಹಾಧಿಯಃ ॥೩೦॥
ತಪಸಾಹಂ ಪ್ರಸನ್ನೋಸ್ಮಿ ತೇಷಾಂ ತೇಪಿ ತತೋ ಮಯಾ ,
ನಿಯಮಕ್ಷೀಣಸರ್ವಾಙ್ಗಾಃ ವರಂ ವವ್ರುಃ ಪ್ರಜೋದಿತಾಃ ।
ಸಂಸಾರವಿಷವೃಕ್ಷಸ್ಯ ಛೇದನಂ ಮುಕ್ತಿವಾಞ್ಛಯಾ ॥೩೩॥
ಕರೋರವಚನಂ ಶ್ರುತ್ವಾ ತಾಮಸತ್ವಂ ವಿಚಿನ್ತ್ಯ ಚ ॥೩೪॥
ಮುಕ್ತಿಧರ್ಮವಿಹೀನತ್ವಾತ್ ನ ಮುಕ್ತಿರ್ವಿದ್ಯತೇತ್ರ ವಃ ।
ಭವಧ್ವಂ ರಾಕ್ಷಸಾಯೂಯಂ ತತ್ರ ಮುಕ್ತಿರ್ಭವಿಷ್ಯತಿ ॥೩೫॥
ರಾಮೋಹಂ ಭವಿತಾ ನೂನಂ ರಾವಣಂ ಹನ್ತುಮುದ್ಯತಃ ।
ತತ್ರ ಯುದ್ಧೇ ಹನಿಷ್ಯಾಮಿ ಯುಷ್ಮಾನ್ ಶಿಷ್ಯಗಣೈಃ ಸಹ ॥೩೬॥
ಏವಂ ದತ್ತವರಾಃ ಸರ್ವೇ ರಾಕ್ಷಸತ್ವಂ ಪ್ರಪೇದಿರೇ ।
ನಿಹನ್ತವ್ಯಾಮಯೈವಾತೋ ಮುಕ್ತಿದಾನಾಯ ರಾಕ್ಷಸಾಃ ॥೩೭॥

ನಾನು ಹಿಂದೆ ಅವರಿಗ ವರವನ್ನು ಕೊಟ್ಟಿರುವೆನು. ಮಹಾಮತಿಗಳಾದ ಅವರು, ಪೂರ್ವ ಜನ್ಮದಲ್ಲಿ ನನ್ನ ಭಕ್ತರಾಗಿದ್ದರು, ಆಗ ನನ್ನನ್ನು ಸಂತೋಷಪಡಿಸುವುದಕ್ಕಾಗಿ ತಪಸ್ಸುಮಾಡಿದರು ॥೩೨॥

ಆಗ ಅವರ ತಪಸ್ಸಿನಿಂದ ನಾನು ಪ್ರಸನ್ನನಾದನು, ಬಳಿಕ, ತಪಶ್ಚರಣೆಯಿಂದ ಸಕಲ ಶರೀರವೂ ಕ್ಷಯಿಸಿಹೋಗಿರುವ ಆ ಖರಾದಿಗಳು, ನನ್ನಿಂದ ಪ್ರೇರಿತರಾಗಿ, ಮುಕ್ತಿಯನ್ನು ಪಡೆಯಬೇಕೆಂಬ ಇಚ್ಛೆಯಿಂದ ' ಸಂಸಾರವೆಂಬ ವಿಷವೃಕ್ಷವನ್ನು ಛೇದಿಸುವನಾಗು ' ಎಂದು ವರವನ್ನು ಬೇಡಿದರು ॥೩೩॥

ಹೀಗೆ ಅವರ ಬಾಯಲ್ಲಿ ಹೊರಟ ಕಠಿನವಾದ ಮಾತನ್ನು ಕೇಳಿ, ಅವರಲ್ಲಿರುವ ತಾಮಸತ್ವವನ್ನೂ ಪರ್ಯಾಲೋಚಿಸಿ, ನಾನು ಅವರನ್ನು ಕುರಿತು ' ಎಲೈರಾಕ್ಷಸರಾ ! ಮುಕ್ತಿಗೆ ಅವಶ್ಯಕ ಧರ್ಮವಾದ ಸಾತ್ವಿಕಸ್ವಭಾವವು ನಿಮಗಿಲ್ಲದಿರುವಕಾರಣ, ಈ ಜನ್ಮದಲ್ಲಿ ನಿಮಗೆ ಮುಕ್ತಿಯಾಗುವುದಿಲ್ಲ ನೀವು ಮುಂದೆ ರಾಕ್ಷಸರಾಗಿ ಹುಟ್ಟಿರಿ, ಆಗ ನಿಮಗೆ ಮುಕ್ತಿಯಾಗುವುದು ನಾನು ನಿಶ್ಚಯವಾಗಿ ರಾವಣನನ್ನು ಕೊಲ್ಲುವುದಕ್ಕೋಸ್ಕರ ರಾಮನಾಗಿ ಅವತರಿಸುವೆನು ೨ ಜನ್ಮದಲ್ಲಿ ನಿಮ್ಮನ್ನು ಶಿಷ್ಯಸಮೂಹದೊಡನೆ ಯುದ್ಧದಲ್ಲಿ ಕೊಲ್ಲುವೆನು ' ಎಂದು ವರವನ್ನು ಕೊಟ್ಟೆನು ॥

ಹೀಗೆ ನನ್ನಿಂದ ವರ ಕೊಡಲ್ಪಟ್ಟಿರುವ ಅವರೆಲ್ಲರೂ ರಾಕ್ಷಸಜನ್ಮವನ್ನು ಪಡೆದಿರುವರು. ಅದುಕಾರಣ, ಅವರಿಗೆ ಮುಕ್ತಿಯನ್ನು ಕೊಡುವುದಕ್ಕೋಸ್ಕರ ನಾನೇ ಈ ರಾಕ್ಷಸರನ್ನು ಕೊಲ್ಲಬೇಕಾಗಿರುವುದು ॥೩೭॥

ಇತ್ಯುಕ್ತ್ವಾ ಲಕ್ಷ್ಮಣಂ ವೀರಃ ಸನ್ನದ್ಧಕವಚೋಭವತ್ ।
ಧನುಷ್ಪಟ್ಟಙ್ಕಾರಮಕರೋತ್ ಮೇಘಾಶನಿಸಮಸ್ವನಮ್ ॥೩೪॥
ಸೀತಾಮಾಲೋಕ್ಯ ಸಂತ್ರಸ್ತಾಂ ಲಕ್ಷ್ಮಣಂ ಪ್ರಾಹ ರಾಘವಃ।
ಯುದ್ಧಂ ಪಶ್ಯತು ಮೇ ಸೀತಾ ಭವಾನಪಿ ಚ ನಿರ್ಭಯಃ ॥೩೫॥
ಇತಿ ಸನ್ದಿಶ್ಯ ಸೌಮಿತ್ರಿಂ ಸೀತಾಂ ಚಾಪಿ ಯಶಸ್ವಿನೀಮ್ ।
ಸನ್ನದ್ಧಃ ಕವಚೀ ಧನ್ವೀ ರಾಮೋ ಯುದ್ಧಾಯ ತಸ್ಥಿವಾನ್ ॥೩೦॥
ತತಆಗಮ್ಯ ರಕ್ಷಾಂಸಿ ರಾಮಸ್ಯೋಪರಿ ಚಿಕ್ಷಿಪುಃ ।
ಆಯುಧಾನಿ ವಿಚಿತ್ರಾಣಿ ಪಾಷಾಣಾನ್ ಪಾದಪಾನಪಿ ॥೩೧॥
ಬಲಮಾಲೋಕ್ಯ ತೇಜಸ್ವೀ ರಾಘವೋ ರಣದುರ್ಧರಃ ।
ಶಙ್ಖಮಾಪೂರಯಾಮಾಸ ಪ್ರಳಯಾಮ್ಬುದಸನ್ನಿಭಮ್ ॥೩೨॥
ಶ್ರುತ್ವಾ ಶಙ್ಖಧ್ವನಿಂ ಶಾರ್ಙ್ಗರಾವಂ ಚಾಪ್ಯತಿದಾರುಣಮ್ ।
ಬಧಿರೀಭೂತಕರ್ಣಾಸ್ತೇ ನ ಚ ಪಸ್ಪನ್ದಿರೇ ತದಾ ॥೩೩॥
ಏಕಾಕಿನಂ ವಿಜೇಷ್ಯಾಮಃ ಸರ್ವೇ ಮೈಳನಮಾಗತಾಃ ।
ಇತಿ ಸಞ್ಜ್ಞಾಪ್ಯ ಮನಸಾ ಸರ್ವೇ ಪೇತೂರಘೂತ್ತಮೇ ॥೩೪॥

ಹೀಗಂದು ಲಕ್ಷ್ಮಣನಿಗೆ ಹೇಳಿ, ಮಹಾವೀರನಾದ ರಾಮನು, ಕವಚವನ್ನು ತೊಟ್ಟು ಕೊಂಡು ಸಿದ್ಧನಾದನು ಮತ್ತು, ಸಿಡಿಲಿಗೆ ಸಮಾನವಾಗಿರುವ ಧನುಷ್ಟಂಕಾರವನ್ನೂ ಮಾಡಿದನು ॥೩೪॥

ಆಗ ಲಕ್ಷ್ಮಣನನ್ನೂ ಭಯದಿಂದ ನಡುಗುತಿರುವ ಸೀತೆಯನ್ನೂ ನೋಡಿ ಶ್ರೀರಾಮನು 'ಲಕ್ಷ್ಮಣ! ಈಗ ನಾನು ರಾಕ್ಷಸರೊಡನೆ ಯುದ್ಧಮಾಡುವುದನ್ನು ಸೀತೆಯೂ ನೀನೂ ನಿರ್ಭಯವಾಗಿ ನೋಡುತಿರಿ' ಎಂದು ಹೇಳಿದನು ॥೩೫॥

ಹೀಗೆಂದು ಲಕ್ಷ್ಮಣನಿಗೂ ಮಹಾಕೀರ್ತಿವಂತಳಾದ ಸೀತೆಗೂ ಆಜ್ಞಾಪಿಸಿ, ಯುದ್ಧಸನ್ನದ್ಧನಾಗಿ, ಕವಚವನ್ನೂ ಧನುಸ್ಸನ್ನೂ ಧರಿಸಿಕೊಂಡು ಯುದ್ಧಕ್ಕೋಸ್ಕರ ನಿಂತುಕೊಂಡನು ॥೩೦॥

ಬಳಿಕ, ಆ ಸನುಸ್ತರರಾಕ್ಷಸರೂ ರಾಮನ ಸಮೀಪಕ್ಕೆ ಬಂದು, ಅವನಮೇಲೆ ನಾನಾವಿಧವಾದ ಆಯುಧಗಳನ್ನೂ ಶಿಲೆಗಳನ್ನೂ ವೃಕ್ಷಗಳನ್ನೂ ಮಳೆಗರೆದರು ॥೩೧॥

ಆ ರಾಕ್ಷಸಸೈನ್ಯವನ್ನು ನೋಡಿ, ಮಹಾತೇಜಸ್ವಿಯಾದ ರಣಧೀರನಾದ ರಾಮನು, ಪ್ರಳಯಕಾಲಿಕವಾದ ಮೇಘಗರ್ಜನೆಗೆ ಸಮಾನವಾಗಿರುವಂತೆ ಶಂಖಧ್ವನಿಯನ್ನು ಮಾಡಿದನು ॥೩೨॥

ಆಗ ಅತಿ ಘೋರವಾಗಿರುವ ಈ ಶಂಖಧ್ವನಿಯನ್ನೂ ಧನುಷ್ಟಂಕಾರವನ್ನೂ ಕೇಳಿ, ಕಿವಿ ಕಿವುಡಾಗಿಬಿಟ್ಟ ಆ ರಾಕ್ಷಸರು, ಸ್ವಲ್ಪವೂ ಅಲುಗದಂತೆ ಸ್ತಬ್ಧರಾಗಿ ನಿಂತುಬಿಟ್ಟರು ॥೩೩॥

ಅನಂತರ 'ಒಬ್ಬೊಂಟಿಗನಾಗಿರುವ ಈ ರಾಮನನ್ನು ನಾವೆಲ್ಲರೂ ಒಟ್ಟುಗೂಡಿಕೊಂಡು ಗೆದ್ದುಬಿಡೋಣ' ಎಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು, ಅವರೆಲ್ಲರೂ ಒಟ್ಟಾಗಿ ರಾಮನ ಮೇಲೆ ಬಂದು ಬಿದ್ದರು ॥೩೪॥

ಚತುರ್ದಶಸಹಸ್ರಾಣಾಂ ರಕ್ಷಸಾಂ ಬಲಶಾಲಿನಾಮ್ ।
ಸಂಹಾರಂ ಕರ್ತುಕಾಮಸ್ಯ ರಾಮಸ್ಯ ಪರಮಾತ್ಮನಃ ।
ಚತುರ್ದಶಸಹಸ್ರಾಣಿ ರೂಪಾಣ್ಯಾಸನ್ ಮಹಾತ್ಮನಃ ॥೪೫॥
ದೃಷ್ಟ್ವಾನಾಂ ಸರ್ವದೇವಾನಾಂ ತದದ್ಭುತಮಿವಾಭವತ್ ॥೪೬॥

ಇತಿ ಶ್ರೀಮದರಣ್ಯಕಾಂಡೇ ರಾಘವಸ್ಯ ವಿಶ್ವರೂಪಕಥನಂ ನಾಮ
ನವಮಃ ಸರ್ಗಃ



ಆಗ ಮಹಾಬಲಶಾಲಿಗಳಾದ ಆ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನೂ ಕೊಲ್ಲಬೇಕೆಂದು ಇಚ್ಛಿಸುತಿರುವ ಮಹಾತ್ಮನಾದ ಶ್ರೀರಾಮನಿಗೆ, ಹದಿನಾಲ್ಕುಸಾವಿರ ಶರೀರಗಳುಂಟಾದುವು ಅದನ್ನು ನೋಡುತಿರುವ ಸಮಸ್ತ ದೇವತೆಗಳಿಗೂ ಬಹಳ ಆಶ್ಚರ್ಯವಾಗಿ ಕಂಡಿತು ॥೪೫-೪೬॥

ಇದು ಅರಣ್ಯಕಾಂಡದಲ್ಲಿ ಶ್ರೀರಾಮವಿಶ್ವರೂಪಪ್ರದರ್ಶನಕಥನವೆಂಬ
ಒಂಬತ್ತನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ದಶಮಃ ಸರ್ಗಃ.

ಶ್ರೀಶಿವಉವಾಚ

ತತೋ ದೇವಾಃ ಸಗನ್ಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಬ್ರಹ್ಮಾಣಂ ಪುರತಃ ಕೃತ್ವಾ ರಾಘವಂ ದ್ರಷ್ಟುಮಾಗತಾಃ ॥೧॥
ರಾಮಾತ್ಮಕಂ ತತಸ್ತತ್ರ ಜಗತ್ ಸ್ಥಾವರಜಙ್ಗಮಮ್ ।
ದದೃಶುರ್ದೇವಸಂಘಾಸ್ತೇ ಮುನಿಭಿಃ ಸಹ ಚಾರಣೈಃ ॥೨॥
ಉಪಾಸಕಾಶ್ಚಾನುರಕ್ತಾಃ ಸೀತಾಲಕ್ಷ್ಮಣಸಂಯುತಮ್ ।
ರತ್ನಸಿಂಹಾಸನಾಸೀನಂ ಶ್ವೇತಚ್ಛತ್ರಾವೃತಾನನಮ್ ॥೩॥
ವಸಿಷ್ಠವಾಮದೇವಾಭ್ಯಾಂ ಭರತೇನ ಯವೀಯಸಾ ।
ಸ್ಮಿತವಕ್ತ್ರಂ ವಿಶಾಲಾಕ್ಷಂ ನೀಲಜೀಮೂತಸನ್ನಿಭಮ್ ॥೪॥
ರಾಜಾನೋ ವೀರಧರ್ಮಸ್ಥಾಃ ಮಹಾವೀರಂ ಧನುರ್ಧರಮ್ ।
ವೀರಶ್ರೀಬನ್ಧುರಾಙ್ಗಂ ಚ ಶತ್ರುಸಙ್ಘದುರಾಸದಮ್ ॥೫॥

ಅರಣ್ಯಕಾಂಡದಲ್ಲಿ ಹತ್ತನೆಯ ಸರ್ಗವು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಬ್ರಹ್ಮಾದಿಗಳು ಪಂಡವಟಿಗೆ ಒಂದ ಒಳಿಕ, ಗಂಧರ್ವರೂ ಸಿದ್ದರೂ ಮಹರ್ಷಿಗಳೂಕೂಡ ಬ್ರಹ್ಮನನ್ನು ಮುಂದಿಟ್ಟುಕೊಂಡು ಶ್ರೀರಾಮನನ್ನು ನೋಡುವುದಕ್ಕಾಗಿ ಅಲ್ಲಿಗೆ ಬಂದರು ॥೧॥

ಅನಂತರ, ಸಿದ್ಧಚಾರಣಾದಿಗಳೊಡಗೂಡಿರುವ ದೇವತೆಗಳು, ಅಲ್ಲಿ ಸ್ಥಾವರಜಂಗಮಾತ್ಮಕವಾದ ಜಗತ್ತೆಲ್ಲವೂ ರಾಮರೂಪವಾಗಿರುವಂತೆ ಕಂಡರು ॥೨॥

ಅವನಲ್ಲಿ ಅನುರಾಗಯುಕ್ತರಾಗಿರುವ ಉಪಾಸಕರು, ಶ್ರೀರಾಮನನ್ನು, ಸೀತಾಲಕ್ಷ್ಮಣಯುಕ್ತನಾಗಿ ರತ್ನಸಿಂಹಾಸನದಮೇಲೆ ಶ್ವೇತಚ್ಛತ್ರದ ಕೆಳಗಡೆ ಕುಳಿತುಕೊಂಡು ವಸಿಷ್ಠ ವಾಮದೇವರಿಂದಲೂ ಅನುಜನಾದ ಭರತನಿಂದಲೂ ಉಪಾಸಿತನಾಗಿ ಮಂದಹಾಸಮಾಡುತ ವಿಶಾಲವಾದ ಕಣ್ಣುಗಳನ್ನೂ ನೀಲಮೇಘಶ್ಯಾಮಲವಾದ ದೇಹವನ್ನೂ ಧರಿಸಿರುವಂತೆ ನೋಡಿದವರಾದರು ॥೩-೪॥

ವೀರಧರ್ಮವನ್ನು ಅವಲಂಬಿಸಿರುವ ರಾಜರುಗಳು, ಮಹಾವೀರನಾಗಿಯೂ ಧನುರ್ಧಾರಿಯಾಗಿಯೂ ವೀರಲಕ್ಷ್ಮೀಸಮಾಲಿಂಗಿತನಾಗಿಯೂ ಶತ್ರುಸಮೂಹಕ್ಕೆ ಅಪ್ರಧೃಷ್ಯನಾಗಿಯೂ ಇರುವಂತೆ ಶ್ರೀರಾಮನ ದರ್ಶನವನ್ನು ಮಾಡಿದರು ॥೫॥

ದೇವಾನಾರಾಯಣಂ ದೇವಂ ಅನನ್ತಂ ವಿಶ್ವತೋಮುಖವ್ ।
ಶಙ್ಖಚಕ್ರಗದಾಪಾಣಿಂ ಸ್ಮಿತವಕ್ತ್ರಂ ಮನೋರಮವ್ ॥೬॥
ಕೈಲಾಸವಾಸಿನಃ ಸರ್ವೇ ತ್ರಿಪುರಘ್ನಂ ಶಿವಂ ಯಥಾ ।
ಶುದ್ಧಸ್ಫಟಿಕಸಙ್ಕಾಶಂ ತ್ರಿನೇತ್ರಂ ಚನ್ದ್ರಶೇಖರವ್ ॥೭॥
ಋಷಯೋ ಮುನಯಃ ಸರ್ವೇ ಮಾನಸೇ ದೃಷ್ಟವಿಗ್ರಹವ್ ।
ಆನನ್ದಾಶ್ರುಪರಿಕ್ಲಿನ್ನಾಃ ದದೃಶುಸ್ತತ್ರ ರಾಘವವ್ ॥೮॥
ಸೀತಾದೇವೀ ದದರ್ಶಾಗ್ರೇ ಕೋಟಿಮನ್ಮಥಸನ್ನಿಭವ್ ।
ಅನಿಮೇಷದೃಶಾ ರಾಮಂ ಭಾಷಮಾಣಮಿವಾನ್ತಿಕೇ ॥೯॥
ಲಕ್ಷ್ಮಣೋ ಯುಧ್ಯಮಾನಂ ಚ ಪ್ರಳಯಾನಿಲಸನ್ನಿಭವ್ ।
ಧನುಶ್ಚಕ್ರಾತ್ ಸಮಂ ಬಾಣಾನ್ ಸ್ವಯಮೇವ ವಿನಿರ್ಗತಾನ್ ॥೧೦॥
ಮುನಿಪತ್ನ್ಯಸ್ತು ತಾಃ ಸರ್ವಾಃ ಭ್ರಾತರಂ ಪಿತರಂ ಯಥಾ ।
ಕುರ್ವನ್ತಮಾದರಂ ರಾಮಂ ದದೃಶುಶ್ಚನ್ದ್ರಸನ್ನಿಭವ್ ॥೧೧॥

ಸಮಸ್ತರಾದ ದೇವತೆಗಳೂ, ಅನಂತನಾಗಿಯೂ ವಿಶ್ವತೋಮುಖನಾಗಿಯೂ ಶಂಖಚಕ್ರ ಗದಾಪಾಣಿಯಾಗಿಯೂ, ಮಂದಸ್ಮಿತಮುಖನಾಗಿಯೂ ಮನೋಹರನಾಗಿಯೂ ಇರುವ ಶ್ರೀ ಮನ್ನಾರಾಯಣಮೂರ್ತಿಯಂತೆ ಶ್ರೀರಾಮನನ್ನು ಕಂಡರು ॥೬॥

ಕೈಲಾಸಪರ್ವತದಲ್ಲಿ ವಾಸಮಾಡತಕ್ಕವರಾದ ಸಕಲರಿಗೂ, ಆಗ ಶ್ರೀರಾಮಚಂದ್ರನು, ಶುದ್ಧ ಸ್ಫಟಿಕ ಸದೃಶನಾಗಿಯೂ ತ್ರಿನೇತ್ರನಾಗಿಯೂ ಚಂದ್ರಶೇಖರನಾಗಿಯೂ ಇರುವ ತ್ರಿಪುರಾಸುರ ಸಂಹಾರಕನಾದ ಶ್ರೀಶಿವನಂತೆ ಕಾಣಿಸಿಕೊಂಡನು ॥೭॥

ಸಮಸ್ತರಾದ ಋಷಿಗಳೂ ಮಹಾಮುನಿಗಳೂ ಕೂಡ, ಆನಂದಬಾಷ್ಪಪರಿಪೂರ್ಣನೇತ್ರ ರಾಗಿ, ತಮ್ಮ ಹೃದಯದಲ್ಲಿ ಧ್ಯಾನದಿಂದ ದರ್ಶನಮಾಡಿದ ಶ್ರೀರಾಮಮೂರ್ತಿಯನ್ನೇ ಹೊರಗಡೆ ಪ್ರತ್ಯಕ್ಷವಾಗಿ ಕಂಡರು ॥೮॥

ಶ್ರೀ ಸೀತಾದೇವಿಯು, ತನ್ನ ಮುಂದುಗಡೆಯೇ ಸರಸಸಲ್ಲಾಪಮಾಡುತ ಕೋಟಿಮನ್ಮಥ ಸದೃಶಾಕಾರನಾಗಿ ನಿಂತಿರುವಂತೆ ಶ್ರೀರಾಮನನ್ನು ಕಣ್ಣುಮುಚ್ಚದೆ ನೋಡಿದಳು ॥೯॥

ಲಕ್ಷ್ಮಣನು, ಶ್ರೀರಾಮನು ಪ್ರಳಯಾಗ್ನಿಸದೃಶನಾಗಿ ಯುದ್ಧಮಾಡುತಿರುವಂತೆಯೂ, ಮಂಡಲಾಕಾರವಾಗಿರುವ ಅವನ ಧನುಸ್ಸಿನಿಂದ ಬಾಣಗಳು ಒಟ್ಟಾಗಿ ತಮಗೆತಾವೇ ಹೊರಡುತಿರುವಂತೆಯೂ ಕಂಡನು ॥೧೦॥

ಆ ಸಮಸ್ತರಾದ ಮುನಿಪತ್ನಿಯರೂ ಕೂಡ, ಶ್ರೀರಾಮನು ತಮಗೆ ಸಹೋದರನಂತೆಯೂ ತಂದೆಯಂತೆಯೂ ಆದರಮಾಡುತಿರುವಹಾಗೆ ದರ್ಶನಮಾಡಿದರು ॥೧೧॥

ಯಕ್ಷಗನ್ಧರ್ವದೇವಾದ್ಯೈಃ ದದೃಶೇ ರಘುನನ್ದನಃ ।
ಮನ್ದರಾದ್ರಿರಿವಾತ್ಯನ್ತಂ ಮಥ್ಯಮಾನೇರ್ಣವೇ ತದಾ ॥೧೨॥
ರಮ್ಭಾದ್ಯಪ್ಸರಸಾಂ ಸಙ್ಘಃ ದೃಷ್ಟ್ವಾ ಮೋಹಂ ಪ್ರಪೇದಿರೇ ।
ಧಿಗ್ಜೀವಿತಂ ವೃಥಾಸ್ಮಾಕಂ ನಾಸ್ತಿ ನಸ್ತಾದೃಶಃ ಪತಿಃ ॥೧೩॥
ಮರ್ಕಟಾಇವ ದೃಶ್ಯನ್ತೇ ದೇವಾಸ್ತಸ್ಯಾನ್ತಿಕೇ ದೃಶಾಮ್ ।
ಅಹೋಸ್ಯ ದೇಹಸೌನ್ದರ್ಯಂ ಇತ್ಯುಕ್ತ್ವಾ ವಚನಂ ಮಿಥಃ ॥೧೪॥
ಸೀತಾ ಜನ್ಮಸಹಸ್ರೇಷು ತಪಃ ಕಿಮಚರನ್ಮಹತ್ ।
ಪತಿಮೇತಾದೃಶಂ ಪ್ರಾಪ ಸ್ವರೂಪಾನನ್ದಕಾರಣಮ್ ॥೧೫॥
ರಕ್ಷೋಬಲಂ ದದರ್ಶಾಗ್ರೇ ಪ್ರಳಯಾನಲಸನ್ನಿಭಮ್ ।
ಬ್ರಹ್ಮಾಣ್ಡದಹನೋದ್ಯುಕ್ತಂ ಸರಸಂ ವಿರಸಂ ಚ ಯತ್ ॥೧೬॥
ಖರಾದೀನಾಂ ತತಸ್ತೇಷಾಂ ರಕ್ಷಸಾಂ ಭೀಮಕರ್ಮಣಾಮ್ ।
ದ್ವನ್ದ್ವಯುದ್ಧಮಭೂತ್ ತತ್ರ ಸಹ ರಾಮೈಃ ಪೃಥಕ್‌ಪೃಥಕ್ ॥೧೭॥
ಕ್ರೀಡನ್ನಿವ ಮಹಾಬಾಹುಃ ಸಿಂಹೋ ಮತ್ತಗಜೈರ್ಯಥಾ ।
ಚಕಾರ ಕದನಂ ತತ್ರ ರಾಕ್ಷಸೈಃ ಸಹ ರಾಘವಃ ॥೧೮॥

ದೇವ ಯಕ್ಷ ಗಂಧರ್ವ ಮುಂತಾದವರಿಂದ, ಪೂರ್ವದಲ್ಲಿ ಸಮುದ್ರಮಥನಮಾಡಿದಾಗ ಸಮುದ್ರವನ್ನೆಲ್ಲ ಕಲಕುತಿದ್ದ ಮಂದರಪರ್ವತದಂತೆ ಶ್ರೀರಾಮನು ನೋಡಲ್ಪಟ್ಟನು ॥೧೨॥

ರಂಭೆ ಮೊದಲಾದ ಅಪ್ಸರಸ್ತ್ರೀಯರ ಸಮೂಹವು, ಆ ರಾಮನನ್ನು ಕಂಡೊಡನೆಯೇ, ಪರ ಸ್ಪರವಾಗಿ ' ವ್ಯರ್ಥವಾದ ನಮ್ಮ ಜೀವಿತವನ್ನು ಸುಡಬೇಕು ನಮಗೆ ಈ ರಾಮನಂತಹ ಪತಿಯಿ ಲ್ಲವಲ್ಲ! ಅವನ ಸಮೀಪವಲ್ಲಿ ಸಮಸ್ತದೇವತೆಗಳೂ ಕಪಿಗಳಂತೆ ನಮ್ಮ ಕಣ್ಣಿಗೆ ಕಾಣಿಸುತ್ತಿರು ವರು ಅಹಹ! ಇವನ ದೇಹಸೌಂದರ್ಯವೆಷ್ಟು ಹಚ್ಚಾಗಿರುವುದು! ಇಂತಹ ಅತ್ಯಾನಂದ ಪ್ರದ ನಾದ ಪತಿಯನ್ನು ಪಡೆದಿರುವ ಸೀತೆಯು, ಹಿಂದೆ ಸಾವಿರಾರು ಜನ್ಮಗಳಲ್ಲಿ ಯಾವ ದೊಡ್ಡ ತಪ ಸ್ಸನ್ನು ಮಾಡಿರುವಳೋ ತಿಳಿಯದು! ' ಎಂದು ಹೇಳಿಕೊಳ್ಳುತ, ಅತಿಯಾಗಿ ಮೋಹಹೊಂದಿ ಬಿಟ್ಟರು ॥೧೩-೧೫॥

ರಾಕ್ಷಸಸೈನ್ಯವು, ತಮ್ಮಮುಂದುಗಡೆ ಜರಾಚರಾತ್ಮಕವಾದ ಬ್ರಹ್ಮಾಂಡವನ್ನೆಲ್ಲ ಪ್ರಳ ಯಾಗ್ನಿಯಂತೆ ದಹಿಸುತ್ತಿರುವ ಶ್ರೀರಾಮನನ್ನು ನೋಡಿದವರಾದರು ॥೧೬॥

ಹೀಗೆ ಶ್ರೀರಾಮನು ಪ್ರತಿಯೊಬ್ಬರಿಗೂ ಅವರವರ ಹೃದಯ ಪರಿಪಾಕಾನುಗುಣವಾಗಿ ದರ್ಶನಕೊಟ್ಟ ಒಳಿಕ, ಮಹಾಭಯಂಕರವಾಗಿ ಯುದ್ಧಮಾಡತಕ್ಕವರಾದ ಆ ಖರಾದಿರಾಕ್ಷಸರಿಗೆ, ಪ್ರತಿಯೊಬ್ಬರಿಗೂ ಒಬ್ಬೊಬ್ಬನಂತೆ ಬೇರೆಬೇರೆಯಾಗಿ ರಾಮನೊಡನೆ ದ್ವಂದ್ವಯುದ್ಧವು ನಡೆಯಿತು॥

ಆಗ ಮಹಾಬಾಹುವಾದ ಶ್ರೀರಾಮನು, ಸಿಂಹವು ಮದ್ದಾನೆಗಳೊಡನೆ ಆಟವಾಡುವಂತೆ ಆ ರಾಕ್ಷಸರೊಡನೆ ಆಟವಾಡುತ, ವಿಶೇಷವಾಗಿ ರಾಕ್ಷಸಸಂಹಾರಮಾಡಿದನು ॥೧೮॥

ಖರಂ ಚೈವ ತ್ರಿಶಿರಸಂ ದೂಷಣಂ ಸಬಲಾನುಗಮ್ ।
ನಿಮೇಷಾನ್ತರಮಾತ್ರೇಣ ಜಘಾನೈಕ ರಘುನನ್ದನಃ ॥೧೯॥
ಸಂಹೃತ್ಯ ರಾಕ್ಷಸಾ೯ ಸರ್ವಾ೯ ತಾವದ್ಭೂಮೈಃ ಸ ರಾಘವಃ ।
ತಸ್ಥೌ ಶಿವಸ್ವರೂಪೇಣ ತೇಷಾಂ ಮುಕ್ತಿಪ್ರದಿತ್ಸಯಾ ॥೨೦॥
ಸರ್ವೇಽಪಿ ತಂ ನಮಸ್ಕೃತ್ಯ ತಚ್ಛರೀರಂ ಪ್ರವಿವೇದಿರೇ ।
ತತ್ರೈವ ವಿಲಯಂ ಯಾತಾಃ ಯಥಾ ನದ್ಯಃ ಸಮುದ್ರಗಾಃ ॥೨೧॥
ಖರಾದೀ೯ ಸಂಯುಗೇ ಹತ್ವಾ ಹ್ಯೇಕಾಕೀ ರಾಕ್ಷಸಾ೯ ಬಹೂ೯ ।
ಪಿಪಾಸಯಾ ಪರಿಶ್ರಾನ್ತಃ ಖಾತ್ವಾ ಸ ಧನುಷಾ ಭುವಮ್ ॥೨೨॥
ಪಾನೀಯಯೋಗನಗರೇ ಪೀತ್ವಾ ಪಾನೀಯಮುತ್ತಮ್ ।
ತಸ್ಪಶ್ಚಿಮುಪ್ರದೇಶಸ್ಥೇ ಕಿಂಗೃಹಾಖ್ಯೇ ಪುರೇ ಪುರಾ ।
ಹೃತ್ತಾಪನಾಶನತಟೇ ರಾಘವೋವಸದಾದರಾತ್ ॥೨೩॥
ತಸ್ಯ ನಾಮ ಬಭೂವೈಕವೀರತ್ವಾದ್ವೀರರಾಘವಃ ॥೨೪॥

ಖರನನ್ನೂ ತ್ರಿಶಿರಸ್ಸನ್ನೂ ದೂಷಣನನ್ನೂ ಕೂಡ, ಅವರ ಸೈನ್ಯಗಳೂಡನೆಯೂ, ಅವರ ಅನುಚರರೊಡನೆಯೂ, ಆ ರಘುನಾಥನು ಒಂದು ನಿಮಿಷದೊಳಗಾಗಿ ಕತ್ತರಿಸಿಬಿಟ್ಟನು ॥೧೯॥

ಆ ರಾಮಚಂದ್ರನು, ಆಗ ರಾಕ್ಷಸರೆಷ್ಟುಮಂದಿಯಿದ್ದರೋ ಅಷ್ಟುಶರೀರಗಳನ್ನು ಧರಿಸಿಕೊಂಡು ಸಮಸ್ತರಾಕ್ಷಸರನ್ನೂ ಸಂಹರಿಸಿ, ಅವರುಗಳಿಗೆ ಮುಕ್ತಿಯನ್ನು ಕೊಡಲಪೇಕ್ಷೆಯಿಂದ ಶಿವಸ್ವರೂಪವನ್ನು ಧರಿಸಿಕೊಂಡವನಾದನು ॥೨೦॥

ಆಗ ಸಮಸ್ತ ರಾಕ್ಷಸರೂ ಅವನನ್ನು ನಮಸ್ಕರಿಸಿ ಅವನ ಶರೀರದಲ್ಲಿ ಸೇರಿಬಿಟ್ಟರು, ಸಮುದ್ರಕ್ಕೆ ಹೋಗಿ ಬಿದ್ದ ನದಿಗಳು ಅಲ್ಲಿಯೇ ಲಯಹೊಂದುವಂತೆ, ಅವರು ಆ ರಾಮಶರೀರದಲ್ಲಿಯೇ ಲೀನರಾಗಿಬಿಟ್ಟರು ॥೨೧॥

ಆ ಸಮಯದಲ್ಲಿ ತಾನೊಬ್ಬನೇ ಖರಪ್ರಮುಖರಾದ ಸಮಸ್ತರಾಕ್ಷಸರನ್ನೂ ಸಂಹರಿಸಿದ ಶ್ರೀರಾಮಚಂದ್ರನು, ಬಾಯಾರಿಕೆಯಿಂದ ಬಳಲಿದವನಾಗಿ, ತನ್ನ ಧನುಸ್ಸಿನ ತುದಿಯಿಂದ ಭೂಮಿಯನ್ನು ಅಗೆದು, ಪಾನೀಯಯೋಗವೆಂಬ ನಗರವನ್ನು ಕಲ್ಪಿಸಿ, ಅಲ್ಲಿ ಮಧುರವಾದ ಪಾನೀಯ (ಸಿಹಿನೀರು)ವನ್ನು ಪಾನಮಾಡಿ, ಅದರ ಪಶ್ಚಿಮದಿಕ್ಕಿನಲ್ಲಿರುವ ಕಿಂಗೃಹವೆಂಬ ಹೆಸರುಳ್ಳ ಪಟ್ಟಣದೊಳಗೆ, ಹೃತ್ತಾಪನಾಶನವೆಂಬ ಸರೋವರದ ತೀರದಲ್ಲಿ ಅತ್ಯಾದರದಿಂದ ವಾಸವಮಾಡಿದನು ಅಲ್ಲಿ ವಾಸಮಾಡಿದ ಆ ಸ್ವಾಮಿಗೆ, ಜಗದೇಕವೀರನಾದುದರಿಂದ ವೀರರಾಘವನೆಂಬ ಪ್ರಸಿದ್ಧಿಯುಂಟಾಯ್ತು ॥೨೨-೨೪॥

ತತೋ ವೀರ್ಯವತಾರೇಣ ನಿಜರೂಪೇಣ ರಾಘವಃ ।
ಪುನರ್ಯಯೌ ಸ್ವಾಶ್ರಮಂ ತಂ ಧನುಷ್ಪಾಣಿಃ ಶರಾನ್ವಿತಃ ॥೨೫॥
ತಂ ದೃಷ್ಟ್ವಾ ಶತ್ರುಹನ್ತಾರಂ ಮಹರ್ಷೀಣಾಂ ಸುಖಾವಹಮ್ ।
ಬಭೂವ ಹೃಷ್ಟಾ ವೈದೇಹೀ ಭರ್ತಾರಂ ಪರಿಷಸ್ವಜೇ ॥೨೬॥
ಸೀತಯಾಥ ಯುತೋ ರಾಮೋ ಲಕ್ಷ್ಮಣೇನ ಯವೀಯಸಾ ।
ಮುನಿಭಿಃ ಸ್ತೂಯಮಾನಶ್ಚ ಸುಖಮಾಸ ರಘೂತ್ತಮಃ ॥೨೭॥
ದೇವಾಅಪಿ ತತೋ ರಾಮಾಶ್ರಮಂ ಗತ್ವಾ ಪ್ರಣಮ್ಯ ತಮ್ ।
ನನರ್ತೂ ರಾಮಶಿರಸಿ ಸ್ವರ್ಗೋದ್ಯಾನಭವೈಃ ಸುಮೈಃ ॥೨೮॥
ದುನ್ದುಭೀಶ್ಚ ವಾದಯಾಮಾಸುಃ ನೃತ್ಯನ್ತಿ ಸ್ಮ ವರಾಙ್ಗನಾಃ ।
ರಾಮಂ ಜಯಜಯೇತ್ಯುಕ್ತ್ವಾ ಸನ್ತೋಷಂ ಪರಮಂ ಯಯುಃ ॥೨೯॥
ತತೋ ಬ್ರಹ್ಮಾ ರಘುಶ್ರೇಷ್ಠಂ ಭಕ್ತಿನಮ್ರಃ ಪ್ರಸನ್ನಧೀಃ ।
ಪ್ರಣಮ್ಯ ಪ್ರಶ್ರಿತಂ ವಾಕ್ಯಂ ಇದಮಾಹ ಸುಲೋಚನೇ ॥೩೦॥

ಆ ಬಳಿಕ, ಶ್ರೀರಾಮನು, ಮೂರ್ತಿಮತ್ತಾಗಿ ಅವತರಿಸಿರುವ ವೀರ್ಯವೋ ಎಂಬಂತಿರುವ ತನ್ನ ನಿಜರೂಪವನ್ನು ಧರಿಸಿಕೊಂಡು, ಧನುರ್ಬಾಣಸಹಿತನಾಗಿ, ಪುನಃ ತನ್ನ ಆಶ್ರಮಕ್ಕೆ ಬಂದವನಾದನು ॥೨೫॥

ಹೀಗೆ ಶತ್ರುಗಳನ್ನುಕೊಂದು ಮಹರ್ಷಿಗಳಿಗೆಲ್ಲ ಸೌಖ್ಯವನ್ನುಂಟುಮಾಡಿ ಆಶ್ರಮಕ್ಕೆ ಬರುತಿರುವ ತನ್ನ ಪತಿಯನ್ನು ಕಂಡು, ಸೀತೆಯು ಮಹಾ ಹರ್ಷಯುಕ್ತಳಾಗಿ ಅವನನ್ನು ಆಲಿಂಗಿಸಿಕೊಂಡಳು ॥೨೬॥

ಅನಂತರ, ರಘುಶ್ರೇಷ್ಠನಾದ ಶ್ರೀರಾಮಚಂದ್ರನು, ಪತ್ನಿಯಾದ ಸೀತೆಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಕೂಡಿಕೊಂಡವನಾಗಿ, ಮುನಿಗಳಿಂದ ಸ್ತುತಿಸಲ್ಪಡುತ, ಅಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದನು ॥೨೭॥

ಆ ಬಳಿಕ, ಸಮಸ್ತ ದೇವತೆಗಳೂ ಶ್ರೀರಾಮನ ಆಶ್ರಮಕ್ಕೆ ಬಂದು, ಅಲ್ಲಿ ಅವನಿಗ ನಮಸ್ಕಾರಮಾಡಿ, ನಂದನವನದಲ್ಲಿ ಹುಟ್ಟಿದ ಕಲ್ಪವೃಕ್ಷ ಪುಷ್ಪಗಳಿಂದ ಶ್ರೀರಾಮನ ತಲೆಯಮೇಲೆ ಮಳೆಗರೆದರು ॥೨೮॥

ಮತ್ತು, ದುಂದುಭಿಗಳನ್ನು ವಾದ್ಯಮಾಡಿಸಿದರು, ಉತ್ತಮರಾದ ಅಪ್ಸರಸ್ತ್ರೀಯರು ನರ್ತನಮಾಡಿದರು, ರಾಮನನ್ನು ಕುರಿತು ' ಜಯಜಯ ' ಎಂದು ಹೇಳುತ, ಸರ್ವರೂ ವಿಶೇಷವಾಗಿ ಸಂತೋಷವನ್ನನುಭವಿಸಿದರು ॥೨೯॥

ಎಲೌ ಪಾರ್ವತಿ ! ಅನಂತರದಲ್ಲಿ ಪ್ರಸನ್ನಮನಸ್ಕನಾದ ಚತುರ್ಮುಖನು, ಭಕ್ತಿಯಿಂದ ನಮ್ರನಾಗಿ ಆ ರಘುನಾಥನ ಪಾದಗಳಿಗೆ ನಮಸ್ಕರಿಸಿ, ಹೀಗೆ ವಿಜ್ಞಾಪಿಸಿಕೊಂಡನು ॥೩೦॥

ರಾವಣಾದ್ಬಲವನ್ತೋಮೀ ಖರಾದ್ಯಾರಾಕ್ಷಸಾಧಮಾಃ ।
ನಾಶಿತಾಮುನಯಸ್ತ್ವನ್ತ್ಯಾತ್ ಸಾಮ್ಪ್ರತಂ ಸುಖಮಾಸತೇ ॥೩೧॥
ಏತದ್ರಾಕ್ಷಸನಾಶಾರ್ಥಮೇವ ತ್ವಂ ಯುಕ್ತಿತೋ ದ್ವಿಜೈಃ ।
ರಾಮ ಗೋದಾತಟಂ ನೀತಃ ತನ್ನಾಶಃ ಕಾರಿತೋಧುನಾ ॥೩೨॥
ಕ್ಷಣಮಾತ್ರಾದ್ಯಾ ನು ವಿಶ್ವಸೃಷ್ಟಿಸ್ಥಿತ್ಯನ್ತಕಾರಿಣಃ ।
ರಕ್ಷೋವಧೋಯಮೀಶಸ್ಯ ಲೀಲಯೈವಾಶ್ರಮೇ ಕೃತಃ ॥೩೩॥
ಏಕೋ ದಧಾರ ಯೋ ವಿಶ್ವಂ ಅನ್ತರ್ವಿಶ್ವಂ ಚ ತತ್ ತವ ।
ತತಸ್ತ್ವಯಾ ಸ್ಪರ್ಧಿತುಂ ಕಃ ಶಕ್ತೋ ಭವತಿ ರಾಘವ ॥೩೪॥
ದ್ವೇಷಿಣೋಪಿ ಖರಾದ್ಯಾಸ್ತ್ವಾಮೇವಾಪುಸ್ತೇ ಕಿಲ ಕ್ಷಣಾತ್ ।
ತ್ವಾಮೇವಾನನ್ಯಯಾ ಭಕ್ತ್ಯಾ ಭಜನ್ತಃ ಕಿಂ ಪುನಃ ಪ್ರಭೋ ॥೩೫॥
ಏವಂ ಚೇದರಿವರ್ಗೇಪಿ ರಾಮ ನಿರ್ಹೇತುಕೀ ದಯಾ
ತರ್ಹಿ ತೇ ನಿಜಭಕ್ತೇಷು ಕೀದೃಶೀ ವಾ ನ ವೇದ್ಮ್ಯಹಮ್ ॥೩೬॥

ಸ್ವಾಮೀ ! ರಾಮಚಂದ್ರ ! ರಾವಣನಿಗಿಂತಲೂ ಅತಿ ಬಲಶಾಲಿಗಳಾದ ಈ ಖರಪ್ರಮುಖರಾದ ರಾಕ್ಷಸರು ನಿನ್ನಿಂದ ನಾಶಪಡಿಸಲ್ಪಟ್ಟಕಾರಣ, ಸಮಸ್ತ ಮುನಿಗಳೂ ಈಗ ಸುಖವಾಗಿರುವರು ॥೩೧॥

ರಾಮಭದ್ರ ! ಈ ಖರಾದಿರಾಕ್ಷಸರ ಸಂಹಾರಕ್ಕಾಗಿಯೇ ನಿನ್ನನ್ನು ಮಹರ್ಷಿಗಳು ಯುಕ್ತಿಯಿಂದ ಈ ಗೋದಾವರೀ ನದೀತೀರಕ್ಕೆ ಕರೆತಂದರು ಈಗ ನಿನ್ನಿಂದ ಆ ರಾಕ್ಷಸರ ನಾಶವು ಮಾಡಲ್ಪಟ್ಟಿತು ॥೩೨॥

ರಾಮಚಂದ್ರ ! ಒಂದು ಕ್ಷಣಮಾತ್ರದಲ್ಲಿ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡತಕ್ಕ ಸರ್ವಲೋಕಪ್ರಭುವಾದ ನಿನಗೆ, ಈ ಆಶ್ರಮದಲ್ಲಿ ಮಾಡಿದ ರಾಕ್ಷಸನಾಶವು ಕೇವಲ ಲೀಲಾಮಾತ್ರವಾಗಿರುವುದು ॥೩೩॥

ರಾಘವ ! ಯಾವ ನೀನು ಈ ಸಮಸ್ತ ವಿಶ್ವವನ್ನೂ ಧರಿಸಿರುವೆಯೋ, ಯಾವ ನಿನ್ನ ಅಂತರ್ಗತವಾಗಿ ಈ ಸಮಸ್ತ ವಿಶ್ವವೂ ಇರುವುದೋ, ಅಂತಹ ನಿನ್ನೊಡನೆ ಸ್ಪರ್ಧಿಮಾಡಲು ಯಾವನಿಗೆ ಶಕ್ತಿಯುಂಟು ? ॥೩೪॥

ಮಹಾಪ್ರಭೋ ! ನಿನ್ನಲ್ಲಿ ದ್ವೇಷಮಾಡತಕ್ಕವರಾಗಿದ್ದರೂ ಕೂಡ, ಈ ಖರಾದಿರಾಕ್ಷಸರು ಕ್ಷಣಮಾತ್ರದಲ್ಲಿ ನಿನ್ನನ್ನೇ ಹೊಂದಿಬಿಟ್ಟರಲ್ಲವೆ ! ಹೀಗಿರುವಾಗ, ನಿನ್ನನ್ನೇ ಅನನ್ಯಾಶ್ರಯವಾದ ಭಕ್ತಿಯಿಂದ ಭಜಿಸತಕ್ಕವರ ವಿಷಯದಲ್ಲಿ ಹೇಳತಕ್ಕುದೇನಿರುವುದು ? ॥೩೫॥

ಹೇರಾಮ ! ಶತ್ರುಗಳಲ್ಲಿಯೂ ಇಷ್ಟುಮಟ್ಟಿಗೆ ನಿರವಾಧಿಕವಾದ ಕೃಪೆಯನ್ನು ಮಾಡುತಿರುವಾಗ, ನೀನು ನಿನ್ನ ಭಕ್ತರಲ್ಲಿ ಇನ್ನೆಷ್ಟುಮಟ್ಟಿಗೆ ಕೃಪೆಯನ್ನು ತೋರಿಸುವೆಯೋ ನಾನರಿಯೆನು ॥೩೬॥

ಯಂಯಮೂರ್ಧ್ವಮಧಸ್ತಾದ್ವಾ ನೇತುಮಿಚ್ಛಸಿ ರಾಘವ ।
ತಂತಂ ಸತ್ಕರ್ಮ ದುಷ್ಕರ್ಮ ಸ್ವತನ್ತ್ರಃ ಕಾರಯಿಷ್ಯಸಿ ॥೫೬॥
ಶಕ್ತ್ಯೈವ ತೇ ಜಗತ್ ಸೃಷ್ಟಂ ರಕ್ತಕೃಷ್ಣಾಚ್ಛದೇಹವತ್।
ಜುಷ್ಟ ಜೀವೋತ್ರ ಬದ್ಧಸ್ತ್ವಂ ಅಜುಷ್ಟ ತಂ ಮಹೇಶ್ವರಃ ॥೫೮॥
ಸೃಷ್ಟೇಃ ಪಾಕ್ ತ್ವಂ ದೇವಏಕೋ ರಾಮ ನಾರಾಯಣೋ ಧ್ರುವಃ ।
ನ ಬ್ರಹ್ಮಾ ಶಙ್ಕರೋ ನೇಮೇ ದ್ಯಾವಾಭೂಮೀ ಚ ರಾಘವ ॥೫೯॥
ತ್ವತ್ತೋ ಬ್ರಹ್ಮಾ ತತೋ ರುದ್ರೋ ರಾಮ ಸರ್ವಮಿದಂ ತತಃ ।
ತತ್ ಪ್ರವಿಶ್ಯಾಖಿಲಾತ್ಮಾ ತ್ವಂ ಜೀವರೂಪೇಣ ಸಂಸ್ಥಿತಃ ॥೬೦॥
ನಾಮರೂಪೇ ಕುತೋತಸ್ತ್ವಾಂ ನ ಮೃತೋಸಿ ಮೃತೇ ಜಡೇ ।
ಹೃದ್ಯನ್ತರ್ಜ್ಯೋತಿರೂಪಃ ಸನ್ ಉಭೌ ಲೋಕೌ ಚರಸ್ಯಲಮ್ ॥೬೧॥
ತತೋ ರಾಮ ತ್ವಮೇವೇನ್ದ್ರ ಬ್ರಹ್ಮವಿಷ್ಣ್ವಾದಿನಾತ್ಮನಾ ।
ಮಾಯಾಗುಣಾಶ್ರಯೋ ಭೂತ್ವಾ ಸೃಜಸ್ಯವಸಿ ಹಂಸಿ ಚ ॥೬೨॥

ರಾಘವ ! ನೀನು ಯಾವನನ್ನು ಸ್ವರ್ಗಾದ್ಯುತ್ತಮ ಲೋಕಗಳಿಗ ಕಳುಹಬೇಕೆಂದು ಇಚ್ಛಿಸುವೆಯೋ, ಅವನ ಕೈಯಲ್ಲಿ ಸತ್ಕರ್ಮವನ್ನು ಮಾಡಿಸುವೆ, ಯಾರನ್ನು ಅಧೋಲೋಕದಲ್ಲಿರಿಸ ಬೇಕೆಂದು ಇಚ್ಛಿಸುವಯೋ, ಅವನ ಕೈಯಲ್ಲಿ ದುಷ್ಕರ್ಮವನ್ನು ಮಾಡಿಸುವೆ ॥೫೬॥

ನಿನ್ನ ಶಕ್ತಿಮಾತ್ರದಿಂದಲೇ, ಸಾತ್ವಿಕ ರಾಜಸ ತಾಮಸದೇಹಗಳುಳ್ಳ ಈ ಜಗತ್ತು ಸೃಜಿಸಲ್ಪಡುವುದು ಈ ದೇಹವನ್ನು ಪಡೆದಾಗ ನೀನು ಒದ್ಧನಾಗಿ ಜೀವನೆನ್ನಿಸುವ, ಇದನ್ನು ಹೊಂದದಿರುವಾಗ ನೀನು ಈಶ್ವರನೆನ್ನಿಸಿಕೊಳ್ಳುವೆ ॥೫೭॥

ಹೇರಾಮ ! ಈ ಜಗತ್ಸೃಷ್ಟಿಗಿಂತ ಪೂರ್ವದಲ್ಲಿ, ನಾರಾಯಣಶಬ್ದವಾಚ್ಯನಾಗಿಯೂ ಶಾಶ್ವತನಾಗಿಯೂ ಇರುವ ನೀನೊಬ್ಬನೇ ಇರತಕ್ಕವನು ರಾಘವ! ಆಗ ಬ್ರಹ್ಮನೂ ಇರುವುದಿಲ್ಲ, ಶಂಕರನೂ ಇರುವುದಿಲ್ಲ, ಈ ಭೂಮ್ಯಾಕಾಶಗಳೂ ಇರುವುದಿಲ್ಲ ॥೫೯॥

ರಾಮ ! ಆದಿಯಲ್ಲಿ ನಿನ್ನ ದೆಸೆಯಿಂದ ಬ್ರಹ್ಮನು ಆವಿರ್ಭವಿಸುವನು, ಅವನಿಂದ ರುದ್ರನೂ, ಅಲ್ಲಿಂದ ಮುಂದಕ್ಕೆ ಈ ಸಮಸ್ತವೂ ಆವಿರ್ಭವಿಸುವರು ಸಕಲ ಸ್ವರೂಪನಾದ ನೀನು ಇವಲ್ಲ ವನ್ನೂ ಅಂತಃ ಪ್ರವೇಶಮಾಡಿ ಜೀವರೂಪದಿಂದ ನೆಲೆಸಿರುವ ॥೬೦॥

ಇಂತಹ ನಿನಗೆ ನಾಮರೂಪಗಳಿಲ್ಲಿರುವುವು ? ಅದುಕಾರಣ, ಜಡವಾದ ಜಗತ್ತು ಮೃತವಾದರೂ ನಿನಗೆ ಮರಣವೆಂಬುದು ಸುತರಾಂ ಅಸಂಭವವು ನೀನು ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಒಳಗೆ ಜ್ಯೋತಿಸ್ಸ್ವರೂಪನಾಗಿದ್ದುಗೊಂಡು ಈ ಯೆರಡು ಲೋಕಗಳಲ್ಲಿಯೂ ಸರ್ವದಾ ಸಂಚರಿಸುತಿರುವೆ ॥೬೧॥

ಹೀಗಿರುವುದರಿಂದ, ಅಯ್ಯಾ ! ರಾಮ ! ನೀನೇ ಮಾಯಾಗುಣ(ಸತ್ವಾದಿ)ಗಳನ್ನು ಆಶ್ರಯಿಸಿದವನಾಗಿ, ಇಂದ್ರ ಬ್ರಹ್ಮ ವಿಷ್ಣು ಶಿವ ಮುಂತಾದವರ ರೂಪಗಳಿಂದ ಈ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುತಿರುವೆ ॥೬೨॥

ತ್ವದಾತ್ಮಕಮಿದಂ ರಾಮ ಯಚ್ಚ ಕಿಞ್ಚಿಜ್ಜಗತ್ ಸ್ಥಿತಮ್ ।
ತತ್ ಸರ್ವಂ ತವ ಪಾದೋತ್ಥಂ ತ್ರಿಪಾದೂರ್ಧ್ವೋ ಭವಾನತಃ ॥೪೩॥
ತಸ್ಮಾತ್ ತ್ವಂ ಸರ್ವಧರ್ಮಜ್ಞ ತ್ಯಕ್ತಕಾಮೋಽಪಿ ಪಾಸಿತಃ ।
ಸತ್ಯಸಙ್ಕಲ್ಪೋಽಪಹತಪಾಪ್ಮಾಸಿ ತ್ವಂ ನ ಚಾನ್ಯಥಾ ॥೪೪॥
ಈಶಾನಃ ಸರ್ವವಿದ್ಯಾನಾಂ ಸರ್ವಭೂತೇಶ್ವರೋ ಹರೇ ।
ಬ್ರಹ್ಮಾಧೀಶೋ ಬ್ರಹ್ಮಣಶ್ಚಾಧಿಪತಿಸ್ತ್ವಂ ರಘೂತ್ತಮ ॥೪೫॥
ಈಶಾವಾಸ್ಯಮಿದಂ ಸರ್ವಂ ತ್ವಯಿ ದ್ಯೌಃ ಪೃಥಿವೀ ಚ ಖಮ್ ।
ಓತಂ ಮನಃ ಸಹ ಪ್ರಾಣೈಃ ಸರ್ವೈಃ ಪ್ರೋತಂ ಚ ರಾಘವ ॥೪೬॥
ಆದಿಮಧ್ಯಾನ್ತಹೀನಸ್ತ್ವಂ ಆದಿಮಧ್ಯಾನ್ತಗೋಽಸಿ ಚ ।
ತ್ರಿನಾಭಿ ಚಕ್ರಮಜರಂ ಅನರ್ವಂ ಚಾರಯಸ್ಯಲಮ್ ॥೪೭॥
ಅಮಾನುಷಬಲಾದೀನಿ ತವ ದೃಷ್ಟ್ವಾಪಿ ರಾಘವ ।
ನೀಹಾರೇಣ ಪ್ರಾವೃತಾಸ್ತ್ವಾಂ ನ ವಿದನ್ತ್ಯಸುತರ್ಪಕಾಃ ॥೪೮॥

ರಾಮಭದ್ರ ! ಈ ದೃಶ್ಯವಾದ ಜಗತ್ತು ಯಾವುದಿರುವುದೋ, ಇದಲ್ಲವೂ ನಿನ್ನ ಸ್ವರೂಪವಾದುದು ಇದೆಲ್ಲವೂ ನಿನ್ನ ಒಂದಂಶದಿಂದ ಉದಯಿಸುವುದು ನೀನು ಇದಲ್ಲಕ್ಕಿಂತಲೂ ಮೂರುಭಾಗ ಅಧಿಕನಾಗಿರುವೆ ॥೪೩॥

ಆದುದರಿಂದ, ಸರ್ವಧರ್ಮಗಳನ್ನೂ ತಿಳಿದಿರುವ ರಾಮಭದ್ರನ ! ನೀನು ಕಾಮವನ್ನು ಬಿಟ್ಟವನಾಗಿಯೂ ತೃಷ್ಣಾಶೂನ್ಯನಾಗಿಯೂ ಸತ್ಯಸಂಕಲ್ಪನಾಗಿಯೂ ಅಪಹತಪಾಪ(ಸಂಸಾರ)ನಾಗಿಯೂ ಇರುವೆ, ಇದರಲ್ಲಿ ಸಂಶಯವಿಲ್ಲ ॥೪೪॥

ಎಲೈಹರಿಯೆ! ನೀನು ಸರ್ವವಿದ್ಯೆಗಳಿಗೂ ಅಧಿಪತಿಯಾದವನು, ಸರ್ವಭೂತಗಳಿಗೂ ಈಶ್ವರನು, ಬ್ರಹ್ಮ(ವೇದ)ಕ್ಕೆ ಅಧೀಶ್ವರನು, ಹೇರಘೂತ್ತಮ! ನೀನೇ ಬ್ರಹ್ಮನಿಗ ಅಧಿಪತಿಯು ॥೪೫॥

ಆರ್ಯಾ! ರಾಘವ! ಪರಮಾತ್ಮನಿಂದ ಅನುಪ್ರವಿಷ್ಟವಾದ ಸ್ವರ್ಗ ಮರ್ತ್ಯ ಪಾತಾಳ ಅಂತರಿಕ್ಷಮೊದಲಾದ ಈ ಸಮಸ್ತವಿಶ್ವವೂ, ಪ್ರಾಣಾದಿಸಮಸ್ತವಾಯುಗಳೊಡನೆ ನಿನ್ನಲ್ಲಿ (೧) ಓತಪ್ರೋತವಾಗಿರುವುದು ॥೪೬॥

ನೀನು ಆದಿಮಧ್ಯಾಂತರಹಿತನಾಗಿಯೂ ಅಜ್ಞದೃಷ್ಟಿಯಲ್ಲ ಆದಿಮಧ್ಯಾಂತ ಗೋಚರನಾಗಿಯೂ ಇರುವೆ ಗ್ರೀಷ್ಮ ವಸಂತ ಹೇಮಂತಋತುಗಳೆಂದ ಯುಕ್ತವಾಗಿ ಶಾಶ್ವತವಾಗಿರುವ ನಿರ್ದೋಷವಾದ ಕಾಲಚಕ್ರವನ್ನು ನೀನು ಸರ್ವದಾ ತಿರುಗಿಸುತ್ತಿರುವೆ ॥೪೭॥

ಸ್ವಾಮಿ! ರಾಘವ! ನಿನ್ನ ಅಮಾನುಷವಾದ ಬಲ ವೀರ್ಯಾದಿಗಳನ್ನು ನೋಡಿಯೂಕೂಡ, ಅಜ್ಞಾನಾವೃತರಾದವರು ತಮ್ಮ ಪ್ರಾಣೇಂದ್ರಿಯಾದಿತೃಪ್ತಿಮಾತ್ರನಿರತರಾಗಿ ನಿನ್ನ ಸ್ವರೂಪವನ್ನು ಅರಿಯದಿರುವರು ॥೪೮॥

---

(೧) ನೆಯ್ಯುವ ಕಾಲದಲ್ಲಿ ಹಾಸು ಹೊಕ್ಕು ನೂಲುಗಳನ್ನು ಸೇರಿಸುವುದಕ್ಕೆ ಓತಪ್ರೋತವೆಂದು ಹೆಸರು ಅದರಂತೆ ಇಲ್ಲಿಯೂ ಜಗತ್ತು ಪರಮಾತ್ಮನೊಳಗೆ ನಾನಾ ಮುಖವಾಗಿಯೂ ತುಂಬಿಕೊಂಡಿರುವುದೆಂದು ಭಾವವು

ಅಕ್ಷೀತ್ರಜ್ಞಾ ಇವ ಸ್ವರ್ಣನಿಧಿಂ ರಾಮಾಸ್ವಹಂ ಜನಾಃ ।
ಗಚ್ಛನ್ತೋಪಿ ನ ವಿನ್ದನ್ತಿ ಪ್ರತ್ಯ್ಯಾಖ್ಯಾಸ್ತ್ವಮೃತೇನ ಹಿ ॥೪೯॥
ಕಾರಣಂ ಪ್ರಕೃತಿಂ ಕೇಚಿತ ಆಹುರಸ್ಯ ಜಡಾತ್ಮಕಾಮ್ ।
ಸಾ ತ್ವದೀಕ್ಷಾಂ ವಿನಾ ರಾಮ ಸೃಷ್ಟುಂ ಶಕ್ತಾ ಕಥಂ ಜಗತ್ ॥೫೦॥
ಪರಮಾಣವಏವಾಸ್ಯ ಕಾರಣಂ ಕೇಚಿದೂಚಿರೇ ।
ವಿಕಲ್ಪಾಸಹತಸ್ತೇಷಾಂ ರಾಮ ಯೋಗೋಪಿ ದುರ್ಘಟಃ ॥೫೧॥
ಕಾಲಂ ಕೇಚಿತ್ ಕರ್ಮ ಕೇಚಿತ್ ಜಗದ್ಧೇತುಂ ಪ್ರಚಕ್ಷತೇ ।
ಸ ಕಾಲಸ್ತವ ನೇತ್ರೋನ್ಮೇಷತೋ ಜಡಂ ಕರ್ಮ ಸ್ವತೋಕ್ಷಮಮ್ ॥೫೨॥
ಸರ್ವತಃ ಕಾರಣೋದಾರಕಾಯೋ ತ್ಪತ್ತಿಮಿಚ್ಛನ್ತಿತಾಮ್ ।
ತ್ವತ್ತೋ ವೀಕ್ಷ್ಯಾಪಿ ರಾಮೈಕೇ ಜಗದಾಹುರನೀಶ್ವರಮ್ ॥೫೩॥

ರಾಮಚಂದ್ರ! ಭೂಮಿಯ ಸ್ವರೂಪವನ್ನು ಅರಿಯದವರು ಪ್ರತಿದಿನವೂ ಅಲ್ಲಿಯೇ ತಿರುಗುತಿದ್ದರೂ ತಮ್ಮ ದಾರಿಯಲ್ಲಿಯೇ ಇರುವ ಸುವರ್ಣನಿಧಿಯನ್ನು ತಿಳಿಯದಿರುವಂತೆ, ನಿನ್ನಲ್ಲಿ ಅಭಿಮುಖರಾಗದಿರುವವರು ಸರ್ವದಾ ನಿನ್ನ ಹತ್ತಿರವೇ ಇದ್ದರೂ ನಿನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿಯಲಾರರು ॥೪೯॥

ರಾಮಭದ್ರ! ಕೆಲವರು, ಜಡಸ್ವರೂಪವಾದ ಪ್ರಕೃತಿಯನ್ನು ಈ ಪ್ರಪಂಚಕ್ಕೆ ಕಾರಣವನ್ನಾಗಿ ಹೇಳುವರು ಆದರೆ, ಆ ಪ್ರಕೃತಿಯು ನಿನ್ನ ದೃಷ್ಟಿಯಿಲ್ಲದಿದ್ದರೆ ಈ ಜಗತ್ತನ್ನು ಸೃಜಿಸುವುದಕ್ಕೆ ಹೇಗ ಶಕ್ತವಾಗುವುದು? ॥೫೦॥

ಮತ್ತೆ ಕೆಲವರು, ಪರಮಾಣುಗಳೇ ಜಗತ್ಕಾರಣಗಳೆಂದು ಹೇಳುವರು ಹೇರಾಮ! ಅವುಗಳು ವಿಕಲ್ಪವನ್ನು ಸಹಿಸಲಾರವಾಗಿರುವಕಾರಣ, ಅವುಗಳು ಒಟ್ಟಾಗಿ ಸೇರುವುದೂ ದುರ್ಘಟವಾದುದು ॥೫೧॥

ಕಾಲವು ಜಗತ್ಕಾರಣವೆಂದು ಕೆಲವರೂ, ಕರ್ಮವು ಜಗತ್ಕಾರಣವೆಂದು ಕೆಲವರೂ ಹೇಳುವರು ಆ ಕಾಲವೆಂಬುದು ನಿನ್ನ ನೇತ್ರದ ಉನ್ಮೇಷನಿಮೇಷಗಳಿಂದ ಉಂಟಾಗತಕ್ಕುದು, ಕರ್ಮವು ಸ್ವತಃ ಜಡವಾಗಿರುವುದರಿಂದ, ಜಗತ್ಸೃಷ್ಟಿಯಲ್ಲಿ ಅದಕ್ಕೆ ಶಕ್ತಿಯೇಇಲ್ಲ ॥೫೨॥

ರಾಮಚಂದ್ರ! ಸರ್ವಮುಖವಾಗಿಯೂ ನಿನ್ನಿಂದಲೇ ಕಾರ್ಯಕಾರಣಗಳು ಅಚಿಂತಿತವಾಗಿ ಉಂಟಾಗುತಿರುವುದನ್ನು ನೋಡುತಿದ್ದರೂ, ಬುದ್ದಿಹೀನರಾದ ಕೆಲವರು ಈ ಜಗತ್ತನ್ನು ನಿರೀಶ್ವರವನ್ನಾಗಿ (ಪರಮಾತ್ಮನೆಂಬ ಪದಾರ್ಥವೇ ಇಲ್ಲವೆಂದು) ಹೇಳುವರು ॥೫೩॥

ಅಸದೇವೇದಮಗ್ರೇಭೂದಿತ್ಯೇಕೇ ಜ್ಞಾತೃರೂಪಿಣಮ್ ।
ಜ್ಞಾತ್ವಾಪಿ ಸಾಕ್ಷಿಣಂ ತ್ವಾಂ ತು ಪ್ರೋಚುಸ್ತೇ ಮಾಯಯಾ ಹರೇ ॥೫೪॥
ಹೃಷೀಕೇಶೇಂದ್ರಿಯಾಣಿ ತ್ವಂ ವೇತ್ಸಿ ರಾಘವ ತಾನಿ ತು ।
ನ ತ್ವಾಂ ವಿದುಃ ಸರ್ವದೃಶಂ ಕಥಂಚಿತ್ ಪರತಃ ಪರಮ್ ॥೫೫॥
ವಿದಿತಾವಿದಿತಾಭ್ಯಾಂ ತ್ವಾಂ ಆತ್ಮಾನಮಪರಂ ಜಡಾಃ ।
ಕಾಯೇಮಾನಾಃ ಕಥಂ ರಾಮ ಪುತ್ರಾದ್ಯೇಷಿಣೋ ವಿದುಃ ॥೫೬॥
ಅಣೋರಪ್ಯಂತರೋ ರಾಮ ಮಹತಾಂ ಚ ಮಹತ್ತರಃ ।
ಮಧ್ಯಾನಾಮಪಿ ಮಧ್ಯಸ್ತ್ವಂ ದುರ್ಲಭೋ ಯೋ ಜಡಾತ್ಮಭಿಃ ॥೫೭॥
ನ ಸ್ತ್ರೀ ನ ಷಂಡೋ ನ ಪುಮಾ ನ ದೇವೋ ನ ನರೋ ಮೃಗಃ ।
ತಥಾಪಿ ಸರ್ವತಃ ಸ್ಥಿತ್ವಾ ಸರ್ವಂ ಪ್ರೇರಯಸಿ ಪ್ರಭೋ ॥೫೮॥
ಬ್ರಹ್ಮಕ್ಷತ್ರಾದಿಕಂ ವಿಶ್ವಂ ಭೋಜನಂ ತೇಽಂತಕೋಽಂತಕಃ ।
ಉಪಸೇಚನಭೂತೋಽತಂ ತ್ವಾಂ ಕೋ ವಾ ವೇದ ರಾಘವ ॥೫೯॥

ಹೇಹರೇ! ಮತ್ತೆ ಕೆಲವರಾದರೋ, ನೀನು ಸರ್ವಸಾಕ್ಷಿಯಾಗಿಯೂ ಸರ್ವಜ್ಞನಾಗಿಯೂ ಇರುವೆಯೆಂದು ತಿಳಿದಿದ್ದರೂಕೂಡ, ನಿನ್ನ ಮಾಯಾಮಹಿಮೆಯಿಂದ 'ಈ ಪ್ರಪಂಚವು ಮೊದಲಿರಲೇ ಇಲ್ಲ' ಎಂದು ಹೇಳುವರು ॥೫೪॥

ಎಲೈಹೃಷೀಕೇಶನ! ಎಲೈರಾಘವನೆ! ನಿನಗ ಸಕಲವಾದ ಇಂದ್ರಿಯಗಳೂ ಗೋಚರವಾಗುವುವು, ಪರಾತ್ಪರನಾಗಿಯೂ ಸರ್ವಜ್ಞನಾಗಿಯೂ ಇರುವ ನಿನ್ನನ್ನು ಅವುಗಳು ಗೋಚರಪಡಿಸಿಕೊಳ್ಳಲಾರವು ॥೫೫॥

ಹೇರಾಮ! ಲೌಕಿಕ ವಿದ್ಯೆಯಿಂದಲೂ ಅವಿದ್ಯೆಯಿಂದಲೂ ತಮಗೆ ತೋರದಂತೆ ಹೇಳುತಿರುವ ಈಷಣತ್ರಯಯುಕ್ತರಾದ ಜಡಾತ್ಮರು, ನಿನ್ನನ್ನು ಹೇಗೆ ಪ್ರತ್ಯಕ್ಷವಾಗಿ ತಿಳಿಯಬಲ್ಲರು?॥

ರಾಮ! ಜಡಾತ್ಮರಿಗೆ ದುರ್ಲಭನಾಗಿರುವ ನೀನು, ಅಣುವಿಗಿಂತ ಅಣುವಾದವನು, ಮಹತ್ತಿಗಿಂತ ಮಹತ್ತಾದವನು, ಮಧ್ಯಗಳಲ್ಲೆಲ್ಲ ಮಧ್ಯನಾದವನು ॥೫೭॥

ಹೇಪ್ರಭೋ! ನೀನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ, ನಪುಂಸಕನೂ ಅಲ್ಲ. ಆದರೂ, ಸರ್ವಸ್ಥಳದಲ್ಲಿಯೂ ಇದ್ದುಗೊಂಡು, ಎಲ್ಲಕ್ಕೂ ಪ್ರೇರಕನಾಗಿರುವೆ ॥೫೮॥

ಹೇರಾಘವ! ಬ್ರಹ್ಮ ಕ್ಷತ್ರಿಯ ಮೊದಲಾದ ಚಾತುರ್ವರ್ಣ್ಯ ವಿಶಿಷ್ಟವಾಗಿರುವ ಈ ವಿಶ್ವವು, ನಿನಗೆ ಭೋಜನಪ್ರಾಯವಾದುದು, ಯಮನು ಕೊನೆಯಲ್ಲಿ ಆಚಮನೀಯಪ್ರಾಯನಾಗುವನು ಹೀಗಿರುವುದರಿಂದ, ನಿನ್ನನ್ನು ಯಾರುತಾನೆ ಅರಿಯುವರು? ॥೫೯॥

ಸನ್ತಿ ಯಾವನ್ತಿ ತತ್ತ್ವಾನಿ ತಸ್ಯತಸ್ಯಾನ್ತರಾನ್ತರಾ ।
ರಾಘವ ತ್ವಾಂ ನಿಯನ್ತಾರಂ ವೇದ ಸರ್ವಾತ್ಮಕಂ ತು ಕಃ ॥೬೦॥
ನ ತ್ವಾಂ ವಿಭಾಸಯತ್ಯರ್ಕೋ ವಹ್ನಿರ್ವಿದ್ಯುಚ್ಚ ಚನ್ದ್ರಮಾಃ ।
ಸರ್ವೇ ತ್ವದ್ಭಾಸಯಾ ದೀಪ್ತಾಃ ಸೂರ್ಯಾದ್ಯಾರಾಮ ನಾನ್ಯಥಾ ॥೬೧॥
ರಾಮ ತ್ವಚ್ಛಾಸನಾದೇವ ದ್ಯಾವಾಭೂಮಿ ವಿತಿಷ್ಠತಃ ।
ವಾಯ್ವಗ್ನ್ಯರ್ಕೇನ್ದವನ್ತಕಾಶ್ಚ ನಕ್ಷತ್ರಗ್ರಹತಾರಕಾಃ ॥೬೨॥
ಸರ್ವಂ ಜಾನಾಸಿ ರಹಸಿ ನ ತ್ವಾಂ ರಾಮ ಜನಾವಿದುಃ ।
ವರಿಷ್ಠೋ ವಿಶ್ವರೂಪೋಸಿ ದಿಗ್ವಿಭಾಗವಿವರ್ಜಿತಃ ॥೬೩॥
ತಥಾಪಿ ತ್ವಯ್ಯಭಕ್ತಾಸ್ತ್ವಾಂ ಪರಿಚ್ಛಿನ್ನಂ ವಿದುರ್ಜನೇ ।
ತ್ವದ್ಭಕ್ತಾಸ್ತು ವಿದಿತ್ವಾರ್ಯ ರಾಮಮೂರ್ತಿಂ ತವೇಕ್ಷಣಾತ್ ;
ತ್ವಾವ್ಯೌಪನಿಷದಂ ಪಾಹುಃ ಸತ್ತಾಮಾತ್ರಮಗೋಚರಮ್ ॥೬೪॥

ರಘುಕುಲನಾಯಕ ! ಈ ಪ್ರಪಂಚದಲ್ಲಿ ಎಷ್ಟು ಭೂತಗಳಿರುವವೋ-ಅವೆಲ್ಲಕ್ಕೂ ಅಂತರ್ನಿಯಾಮಕನಾಗಿರುವ ಸರ್ವಾತ್ಮಕನಾದ ನಿನ್ನನ್ನು ಯಾರು ತಿಳಿಯುವರು? ॥೬೦॥

ರಾಮಭದ್ರ ! ನಿನ್ನನ್ನು ಸೂರ್ಯನೂ ಪ್ರಕಾಶಪಡಿಸುವುದಿಲ್ಲ, ಅಗ್ನಿಯೂ ಪ್ರಕಾಶಪಡಿಸುವುದಿಲ್ಲ, ವಿದ್ಯುತ್ತೂ ಪ್ರಕಾಶಪಡಿಸುವುದಿಲ್ಲ, ಚಂದ್ರನೂ ಪ್ರಕಾಶಪಡಿಸುವುದಿಲ್ಲ ಈ ಸೂರ್ಯಾದಿ ತೇಜಸ್ಸುಗಳೆಲ್ಲವೂ ನಿನ್ನ ತೇಜಸ್ಸಿನಿಂದಲೇ ಪ್ರಕಾಶಿಸುತಿರುವುವು, ಇದರಲ್ಲಿ ಸಂಶಯವಿಲ್ಲ ॥೬೧॥

ರಾಮಚಂದ್ರ ! ಭೂಮ್ಯಂತರಿಕ್ಷಗಳೂ, ವಾಯು ಅಗ್ನಿ ಸೂರ್ಯ ಇಂದ್ರ ಯಮರೂ, ನಕ್ಷತ್ರ ಗ್ರಹ ತಾರಕೆ(ಪ್ರಸಿದ್ಧವಾದ ನಕ್ಷತ್ರ)ಗಳೂ ಕೂಡ ನಿನ್ನ ಆಪ್ಪಣೆಯಿಂದಲೇ ನಿಂತಿರುವುವು ॥೬೨॥

ಹೇರಾಮ ! ನೀನು ಸಕಲಪದಾರ್ಥತತ್ವವನ್ನೂ ಆಂತರವಾಗಿ ತಿಳಿದುಕೊಳ್ಳುವ, ನಿನ್ನನ್ನು ಮಾತ್ರ ಈ ಜನರು ತಿಳಿಯರು ನೀನು ಸರ್ವೋತ್ತಮನಾಗಿಯೂ ವಿಶ್ವರೂಪನಾಗಿಯೂ ದಿಕ್ಕಾಲಾದಿ ಪರಿಚ್ಛೇದ ಶೂನ್ಯನಾಗಿಯೂ ಇರುವೆ ॥೬೩॥

ಹೀಗಿದ್ದರೂ, ಎಲೈ ಶ್ರೀಹರಿಯ! ನಿನ್ನಲ್ಲಿ ಭಕ್ತಿಯಿಲ್ಲದವರು ನಿನ್ನನ್ನು ದಿಕ್ಕಾಲಾದಿಪರಿಚ್ಛಿನ್ನನೆಂದು ತಿಳಿಯುವರು ಆರ್ಯ! ನಿನ್ನ ಭಕ್ತರಾದರೋ, ನಿನ್ನ ಕೃಪಾಕಟಾಕ್ಷದಿಂದ ಈ ರಾಮಾವತಾರದಲ್ಲಿರುವ ನಿನ್ನ ಸ್ವರೂಪವನ್ನು ತಿಳಿದುಕೊಂಡು, ನೀನು ಉಪನಿಷದ್ಬೋಧ್ಯವಾದ ಸಕಲಪ್ರಮಾಣಾಗೋಚರವಾದ ಕೇವಲ ಸತ್ತಾಮಾತ್ರವಸ್ತುವೆಂದು ಹೇಳುವರು ॥ ೪॥

ರಾಮ ಭಕ್ತಿಸ್ತ್ವಯಿ ಸ್ಯಾಚ್ಚೇತ್ ನಿಸ್ಪೃಹಾಃ ಕರ್ಮಜೇ ಫಲೇ ।
ವಿವಿತ್ಸಂತಿ ಭವತ್ತತ್ತ್ವಂ ಯಜ್ಞದಾನತಪೋವ್ರತೈಃ ॥೬೫॥
ಯದಿ ಭಕ್ತಿಸ್ತ್ವಯಿ ದೃಢಾ ರಾಮ ಭಾರ್ಯಾದಿಕೇ ಯಥಾ ।
ತದಾ ತ್ವದ್ವಿಷಯಂ ಜ್ಞಾನಂ ಜಾಯತೇ ನಾನ್ಯಸಾಧನೈಃ ॥೬೬॥
ತ್ವದ್ಭಾವಸಮನಂತರಾ ರಾಮ ಪನ್ಥಾನಾನ್ಯೋಸ್ತಿ ಮುಕ್ತಯೇ ।
ಅಸ್ತಿ ಚೇದ್ವಿಯತೋಪ್ಯಸ್ತು ಮುಕ್ತಿರ್ವೀಪ್ಸನಕರ್ಮಣಾ ॥೬೭॥
ತ್ವಯಿ ಸನ್ನ್ಯಸ್ತಭಾರೋ ಯಃ ಸಖಿವ ತವ ತತ್ತ್ವವಿತ್ ।
ನ್ಯಾಸಸ್ತಸ್ಮಾನ್ನ್ಯಾಸಮೇಷಾಂ ಇತಿ ಶ್ರುತೋಽರರೀಕೃತಃ ॥೬೮॥
ನ ತ್ವಂ ವ್ಯಾಭಾಷಣೈರ್ಲಭ್ಯೋ ನ ಬುದ್ಧ್ಯಾ ನ ಬಹುಶ್ರುತೈಃ ।
ಯಂ ತ್ವಂ ವೃಣೀಷೇ ದಯಯಾ ತೇನ ಲಭ್ಯೋಸಿ ರಾಘವ ॥೬೯॥
ನ ನರೇಣಾಪರೇಣಾ ತ್ವಂ ಬೋಧ್ಯೋಸಿ ತ್ವಯ್ಯಬುದ್ಧಿನಾ
ಕಿಂ ತು ಭಕ್ತ್ಯೈರೇವ ಬೋಧ್ಯಃ ತತಸ್ತ್ವಂ ಭಕ್ತವತ್ಸಲಃ ॥೭೦॥

ಹೇರಾಮ! ನಿನ್ನಲ್ಲಿ ಸರಿಯಾದ ಭಕ್ತಿಯುಂಟಾದರೆ, ಕರ್ಮಫಲದಲ್ಲಿ ನಿಸ್ಪೃಹರಾದ ಮಹಾತ್ಮರು ಯಜ್ಞ ದಾನ ವ್ರತ ತಪಸ್ಸುಗಳಿಂದ ನಿನ್ನ ಸ್ವರೂಪಜ್ಞಾನಕ್ಕಾಗಿ ಪ್ರಯತ್ನಪಡುವರು ॥

ರಾಮ! ಪತ್ನೀಪುತ್ರಾದಿಗಳಲ್ಲಿ ಪ್ರೀತಿಯಿರುವಂತೆ ನಿನ್ನಲ್ಲಿ ದೃಢವಾದ ಭಕ್ತಿಯುಂಟಾದ ಪಕ್ಷದಲ್ಲಿ, ಆಗ ನಿನ್ನ ವಿಷಯಕವಾದ ಜ್ಞಾನವುಂಟಾಗುವುದಲ್ಲದೆ, ಇತರವಾದ ಯಾವ ಸಾಧನದಿಂದಲೂ ನಿನ್ನ ಸ್ವರೂಪವನ್ನು ತಿಳಿಯಲಾಗುವುದಿಲ್ಲ ॥೬೬॥

ರಾಮಭದ್ರ! ನಿನ್ನ ಸ್ವರೂಪವನ್ನು ತಿಳಿದುಕೊಳ್ಳುವುದು ಹೊರತು, ಮೋಕ್ಷಕ್ಕೆ ಮತ್ತಾವ ಮಾರ್ಗವೂ ಇರುವುದಿಲ್ಲ ಯಾವುದಾದರೊಂದು ಮಾರ್ಗವು ಇರುವಪಕ್ಷದಲ್ಲಿ, ಆಕಾಶಕ್ಕೂ ಬಂಧನವೂ ಮೋಕ್ಷವೂ ಉಂಟಾಗಬೇಕಾಗುವುದು ॥೬೭॥

ಹೇಸ್ವಾಮಿ! ಯಾವನು ನಿನ್ನಲ್ಲಿ ಸಕಲಭಾರವನ್ನೂ ಸಮರ್ಪಿಸುವನೋ, ಅವನೇ ನಿನ್ನ ತತ್ವವನ್ನು ಅರಿಯುವನು ಹೀಗಿರುವುದರಿಂದಲೇ, ಶ್ರುತಿಯೂಕೂಡ ,'ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ' ಎಂದು, ನ್ಯಾಸವೇ ಸರ್ವೋತ್ತಮವೆಂಬುದಾಗಿ ಒಪ್ಪುತಿರುವುದು ॥

ಹೇರಾಘವ! ನೀನು ವ್ಯಾಖ್ಯಾನಾದಿಗಳಿಂದ ಲಭ್ಯನಲ್ಲ, ಬುದ್ಧಿಯಿಂದಲೂ ಲಭ್ಯನಲ್ಲ, ಬಹುವಿಧವಾದ ಶಾಸ್ತ್ರಾಭ್ಯಾಸಗಳಿಂದಲೂ ಲಭ್ಯನಲ್ಲ ನೀನು ದಯೆಯಿಂದ ಯಾವನನ್ನು ಅನುಗ್ರಹಿಸುವೆಯೋ, ಅವನೊಬ್ಬನಿಂದಲೇ ಲಭ್ಯನಾಗಿರುವೆ ॥೬೯॥

ನಿನ್ನಲ್ಲಿ ಮನಸ್ಸನ್ನಿಡದಿರುವ ಇನ್ನಾವ ಮನುಷ್ಯನಿಗೂ ನಿನ್ನ ಜ್ಞಾನವು ಸುಲಭವಲ್ಲ, ಮತ್ತೇನೆಂದರೆ,-ಕೇವಲ ಭಕ್ತರಿಂದಮಾತ್ರವೇ ನೀನು ಸುಖವಾಗಿ ತಿಳಿಯಲ್ಪಡುವೆ. ಅದುಕಾರಣವೇ, ನೀನು ಭಕ್ತವತ್ಸಲನೆಂದು ಹೊಗಳಿಸಿಕೊಳ್ಳುವೆ ॥೭೦॥

ತತ್ತ್ವಮಸ್ಯಾದಿವಾಕ್ಯೈಸ್ತ್ವಂ ಜ್ಞಾನಾನನ್ದಾದಿಲಕ್ಷಣಃ ।
ಗಮ್ಯೋಽಸಿ ನಾನ್ಯಥಾ ರಾಮ ಸ್ವಭಕ್ತೈರ್ನಾನ್ಯಸಾಧನೈಃ ॥೬೧॥

ಅಗೋಚರಮನಾದಿಂ ಚ ಹೇತುದೃಷ್ಟ್ಯನ್ತವರ್ಜಿತಮ್ ।
ಆದಿತ್ಯವರ್ಣಂ ತಮಸಃ ಪರಸ್ತಾತ್ ತ್ವಾಂ ವಿದುರ್ಬುಧಾಃ ॥೬೨॥

ತ್ವಯಿ ಸರ್ವಂ ತ್ವಾಂ ಚ ಸರ್ವಂ ಪಶ್ಯತಾಂ ದೇವತಾಅಪಿ ।
ವಿಘ್ನೈರ್ದ್ವೈರ್ನೋಪರೇಷ್ಯಭೂತ್ಯೈ ಶೋಕಮೋಹೌ ನ ವಿದ್ಯತಃ ॥೬೩॥

ಭಾಸನ್ತೇ ಭಾಸತೋ ಯಸ್ಯ ಜಾಗ್ರತ್ಸ್ವಪ್ನಸುಷುಪ್ತಯಃ ।
ಸ್ಥಾನತ್ರಯಾತೀಗಂ ರಾಮ ಜ್ಞಾತ್ವಾ ತ್ವಾಂ ಮುಚ್ಯತೇ ಭಯಾತ್ ॥೬೪॥

ತ್ವಾಂ ತು ಸೇತುಂ ವಿಧರಣಂ ಲೋಕಾನಾಮೈದಕಾರಣಮ್ ।
ಜ್ಞಾತ್ವಾ ತೀರ್ತ್ವಾ ಚ ದೇವಾತ್ರ ರಾಮ ದುಃಖಾತಿಗೋ ಭವೇತ್ ॥೬೫॥

ರಾಮಚಂದ್ರ! ಸತ್ಯಜ್ಞಾನಾನಂದ ಸ್ವರೂಪನಾಗಿರುವ ನಿನ್ನನ್ನು, ಅನನ್ಯಸಾಧನರಾದ ನಿನ್ನ ಭಕ್ತರು ತತ್ತ್ವಮಸ್ಯಾದಿ ಮಹಾವಾಕ್ಯಗಳ ಅರ್ಥಪರಿಜ್ಞಾನದಿಂದ ತಿಳಿದುಕೊಳ್ಳುವರು, ಇತರವಾದ ಉಪಾಯವಾವುದೂ ಇಲ್ಲ ॥೬೧॥

ಪ್ರಾಜ್ಞರಾದವರು, ನಿನ್ನನ್ನು ಸಕಲಪ್ರಮಾಣಗಳಿಗೂ ಅಗೋಚರನನ್ನಾಗಿಯೂ, ಅನಾದಿಯನ್ನಾಗಿಯೂ, ಯಾವ ಕಾರಣವೂ ಇಲ್ಲದವನನ್ನಾಗಿಯೂ, ಅಸದೃಶನನ್ನಾಗಿಯೂ, ಆದಿತ್ಯವರ್ಣ(ಸ್ವಪ್ರಕಾಶ)ನನ್ನಾಗಿಯೂ, ತಮಶ್ಶಬ್ದವಾಚ್ಯವಾದ ಪ್ರಕೃತಿಗಿಂತ ಪರನನ್ನಾಗಿಯೂ ತಿಳಿಯುವರು ॥೬೨॥

ಸರ್ವವೂ ನಿನ್ನಲ್ಲಿರುವುದೆಂನೂ ನೀನೇ ಸರ್ವವೂ ಆಗಿರುವೆಯೆಂದೂ ತಿಳಿಯತಕ್ಕವರಿಗೆ, ದೇವತೆಗಳೂ ಕೂಡ ತಪೋವಿಘ್ನಾದಿಗಳಿಂದ ವಿಪತ್ತನ್ನುಂಟುಮಾಡಲಾರರು, ಅಂಧವರಿಗೆ ಶೋಕ ವೋಹಗಳೊಂದೂ ಇರುವುದಿಲ್ಲ ॥೬೩॥

ರಾಮಚಂದ್ರ! ಯಾವ ನಿನ್ನ ಪ್ರಕಾಶದಿಂದ ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳು ಭಾಸಮಾನವಾಗುವುವೋ, ಇಂತಹ ಅವಸ್ಥಾತ್ರಯಾತೀತನಾದ ನಿನ್ನನ್ನು ತಿಳಿದುಕೊಂಡರೆ ಈ ಸಂಸಾರಭಯದಿಂದ ಮುಕ್ತನಾಗುವನು ॥೬೪॥

ಹೇ ದೇವಾಧಿದೇವ! ರಾಮ! ಸಕಲಲೋಕಮರ್ಯಾದೆಯೂ ಸಂಕರಹೊಂದದೆ ಯಥಾಕ್ರಮವಾಗಿರುವುದಕ್ಕೆ ನೀನೇ ಮುಖ್ಯಕಾರಣಭೂತನು ಹೀಗೆ ಧರ್ಮಸೇತುಭೂತನಾಗಿಯೂ ಲೋಕೋದ್ಧಾರಕನಾಗಿಯೂ ಇರುವ ನಿನ್ನನ್ನು ತಿಳಿದುಕೊಂಡರೆ, ಪುರುಷನು ಈ ಸಂಸಾರ ಸಮುದ್ರವನ್ನು ದಾಟಿ ಸಕಲದುಃಖಗಳನ್ನೂ ಅತಿಕ್ರಮಿಸುವನು ॥೬೫॥

ಶ್ರದ್ಧಾಭಕ್ತಿಧ್ಯಾನಯೋಗೈಃ ಸಕೃದ್ಯಸ್ತ್ವಾಂ ಪ್ರಪದ್ಯತೇ ।
ಅಭಯಂ ಸರ್ವಭೂತೇಭ್ಯಃ ತಸ್ಯ ದಾತುಂ ವ್ರತಂ ತವ ॥೪೪॥
ನರಂ ವಿರಾಜಂ ಪ್ರಾದೇಶಮಾತ್ರಂ ವಾಙ್ಗುಷ್ಠಮಾತ್ರಕಮ್ ।
ಭಕ್ತ್ಯಾ ಯೇ ತ್ವಾಮುಪಾಸನ್ತೇ ಪದಂ ವಿನ್ದನ್ತಿ ತೇ ಧ್ರುವಮ್ ॥೪೫॥
ಅಜಾಯಮಾನಂ ತ್ವಾಂ ರಾಮ ಜಾತಂ ರಾಮಾದಿರೂಪತಃ ।
ಯೇ ತ್ವಾಂ ಹ್ರೀಶ್ರೀಯುತಂ ದೇವಂ ತೇ ಮುಕ್ತಾಃ ಸಮುಪಾಸತೇ॥೪೬॥
ಸರ್ವಕರ್ಮಾಣಿ ಸಂತ್ಯಜ್ಯ ಜ್ಞಾತ್ವಾ ತ್ವಾಂ ಪುರುಷೋತ್ತಮಮ್ ।
ಭಕ್ತಾಮುಂಚನ್ತ್ಯನ್ಯವಾಚೋ ರಾಮ ವಾಕ್ ಶ್ರಮಕಾರಿಣೀ ॥೪೭॥
ಅವಿದ್ಯಾನ್ತರಗಾಯೇತ್ರ ಸ್ವಯಂ ಪಣ್ಡಿತಮಾನಿನಃ ।
ಅನ್ಧೇನೈಯಾನ್ಧವದ್ರಾಮ ಪತನ್ತ್ಯೇವ ನ ಮುಕ್ತಿಗಾಃ ॥೪೮॥
ಕರ್ಮೈಕನಿಷ್ಠಾನೋ ಮೂಢಾಃ ಮೃತ್ಯೋರ್ಮೃತ್ಯುಂ ಗತಾಶ್ಚಶಮ್ ।
ಅಗ್ನಿಮುಗ್ಧಾಧೂಮತಾನ್ತಾಃ ಸ್ವಸ್ಥಂ ತ್ವಾಂ ನ ವಿದುರ್ಹರಿಮ್ ॥೪೯॥

ಯಾವನು ಶ್ರದ್ಧಾ ಭಕ್ತಿ ಧ್ಯಾನ ಯೋಗಗಳಿಂದ ಒಂದುಸಲ ನಿನ್ನನ್ನು ಶರಣಹೊಂದುವನೋ, ಅವನಿಗೆ ಸಕಲ ಪ್ರಾಣಿಗಳ ದೆಸೆಯಿಂದಲೂ ಅಭಯವನ್ನು ಕೊಡತಕ್ಕುದೇ ನಿನ್ನ ವ್ರತವು॥

ಯಾವ ಪುರುಷರು ಭಕ್ತಿಯಿಂದ ನಿನ್ನನ್ನು ವಿರಾಟ್ಪುರುಷರೂಪನನ್ನಾಗಿಯಾಗಲಿ ಪ್ರಾದೇಶಮಾತ್ರರೂಪನನ್ನಾಗಿಯಾಗಲಿ ಅಂಗುಷ್ಠಮಾತ್ರರೂಪನನ್ನಾಗಿಯಾಗಲಿ ಉಪಾಸಿಸುವರೋ, ಅವರು ಶಾಶ್ವತವಾದ ಪದವನ್ನು ಪಡೆಯುವರು ॥೪೪॥

ರಾಮಚಂದ್ರ ! ಸುತರಾಂ ಜನ್ಮಶೂನ್ಯನಾಗಿರುವ ನಿನ್ನನ್ನು ಯಾರು ಹ್ರೀಶ್ರೀಯುತನಾಗಿ ರಾಮಕೃಷ್ಣಾದಿರೂಪದಲ್ಲಿ ಅವತರಿಸಿರುವನನ್ನಾಗಿ ಉಪಾಸಿಸುವರೋ, ಅವರು ಮುಕ್ತರಾಗುವರು ॥೪೫॥

ನಿನ್ನ ಭಕ್ತರಾದವರು, ನೀನೇ ಸಾಕ್ಷಾತ ಪುರುಷೋತ್ತಮನೆಂದು ತಿಳಿದು, ಸಕಲಕರ್ಮಗಳನ್ನೂ ಪರಿತ್ಯಜಿಸಿ, ಇತರವಾದ ವಾಕ್ಯುಗಳನ್ನೆಲ್ಲ ಬಿಟ್ಟುಬಿಡುವರು. ಹೇ ರಾಮ ! ವ್ಯರ್ಥವಾದ ಇತರ ವಾಕ್ಯುಗಳೆಲ್ಲವೂ ಕೇವಲ ಶ್ರಮಹೇತುವೇ ಹೊರತು, ಅದರಿಂದ ಯಾವ ಪ್ರಯೋಜನವೂ ಇಲ್ಲ ॥೪೭॥

ಯಾರು ಈ ಲೋಕದಲ್ಲಿ ತಮಗೆತಾವೇ ಪಂಡಿತರೆಂದು ತಿಳಿದುಕೊಳ್ಳುವರೋ, ಅಜ್ಞಾನ ಮಧ್ಯಗತರಾದ ಅವರು–ಕುರುಡನನ್ನು ಅನುಸರಿಸಿಕೊಂಡು ಹೋಗುವ ಕುರುಡನಂತೆ–ಪತನವನ್ನೇ ಅನುಭವಿಸುವರು , ಅವರಿಗೆಂದಿಗೂ ಮೋಕ್ಷ ಸಿಕ್ಕುವುದಿಲ್ಲ ॥೪೮॥

ಯಾವ ಮೂಢರು ಕೇವಲ ಕರ್ಮಮಾತ್ರದಿಂದ ಆನಂದಪಡತಕ್ಕವರಾಗುವರೋ, ಅವರು ಒಂದು ಮೃತ್ಯುವನ್ನು ಬಿಟ್ಟು ಅದಕ್ಕಿಂತ ಪ್ರಬಲವಾದ ಮತ್ತೊಂದು ಮೃತ್ಯುವನ್ನು ಸೇರಿದಂತಾ

ಕಿಂ ಪ್ರಜಾದ್ಯೈಃ ಕರಿಷ್ಯಾವೋ೭ನಾತ್ಮಕೈರಿತಿ ಯೇ ಜನಾಃ ।
ತ್ಯಕ್ತಪುತ್ರಾದ್ಯೇಷಣಾಸ್ತ್ವಾಂ ಭಜಂತೇ ರಾಮ ಭಿಕ್ಷವಃ ॥೯೪॥
ತ್ವತ್ತಃ ಪರಂ ನಾಪರಂ ವಾ ನಾಣೀಯೋ ನಾಧಿಕೋಪಿ ವಾ ।
ನ ತೇ ಸಮೋ ವಾ ಶ್ರೇಷ್ಠೋ ವಾ ನಾಸ್ತ್ಯನ್ಯದ್ವಸ್ತು ರಾಘವ ॥೯೫॥
ಪುಣ್ಯಾಪುಣ್ಯಾನನುಗತಂ ಧರ್ಮಾಧರ್ಮಾದಿದೂರಗಮ್ ।
ಭೂತಾದ್ಭವಿಷ್ಯತೋನ್ಯಂ ತ್ವಾಂ ಭಕ್ತಾ ಜಾನಂತಿ ರಾಘವ ॥೯೬॥
ದೃಶ್ಯಸೇ ಸೂಕ್ಷ್ಮಯಾ ಬುದ್ಧ್ಯಾ ರಾಮ ಕಾಮಾದಿಹೀನಯಾ ।
ಸರ್ವತ್ರ ಜಾಯತೇ ಕಾಮೈಃ ಯತ್ಕ್ರಮಸ್ತತ್ಕ್ರಮಃ ಶನೈಃ ॥೯೭॥
ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತ್ವಯಿ ಜ್ಞಾತೇ ರಘೂತ್ತಮ ॥೯೮॥

ಗುವರು , ಅವರು ಅಗ್ನಿಯಿಂದ ಮುಗ್ಧರಾಗಿಯೂ ಧೂಮದಿಂದ ಬಳಲಿದವರಾಗಿಯೂ ಸಂಕಟ ಪಡುತ, ತಮ್ಮ ಹೃದಯದಲ್ಲಿಯೇ ವಾಸಮಾಡಿಕೊಂಡಿರುವ ನಿನ್ನನ್ನು ಅರಯದವರಾಗುವರು ॥

ರಾಮಭದ್ರ ! ಯಾವ ಪುರುಷರು ' ಆತ್ಮಪದಾರ್ಥವಲ್ಲದ ಪ್ರಜಾದಿವಸ್ತುಗಳಿಂದ ನಾವೇ ನುಮಾಡಿಕೊಳ್ಳಬೇಕು ? ' ಎಂದು ಪುತ್ರಾದಿಗಳಲ್ಲಿ ಆಪೇಕ್ಷೆಯನ್ನು ಬಿಡುವರೋ, ಅಂತಹ ಭಿಕ್ಷುಗಳು ನಿನ್ನನ್ನು ಭಜಿಸುವರು ॥೯೪॥

ನಿನಗಿಂತ ಉತ್ಕೃಷ್ಟವಾದುದಾಗಲಿ ನಿಕೃಷ್ಟವಾದುದಾಗಲಿ ಯಾವ ವಸ್ತುವೂ ಇಲ್ಲ. ನಿನಗಿಂತ ಸೂಕ್ಷ್ಮವಾದುದೂ ಇಲ್ಲ , ಸ್ಥೂಲವಾದುದೂ ಇಲ್ಲ ನಿನಗ ಸಮಾನವಾದುದೂ ಇಲ್ಲ , ನಿನಗಿಂತ ಶ್ರೇಷ್ಠವಾದುದೂ ಇಲ್ಲ ಹೇ ರಾಘವ ! ನಿನ್ನನ್ನು ಬಿಟ್ಟು ಬೇರೆಯಾದ ವಸ್ತುವೇ ಇಲ್ಲ ॥೯೫॥

ರಘುನಾಯಕ ! ನಿನ್ನ ಭಕ್ತರು, ನಿನ್ನನ್ನು ಪುಣ್ಯಪಾಪ ಕರ್ಮಲೇಪರಹಿತನನ್ನಾಗಿಯೂ, ಧರ್ಮಾದಿಗಳಿಗೆ ದೂರಗತನನ್ನಾಗಿಯೂ, ಭೂತಭವಿಷ್ಯತ್ತುಗಳಿಗೆ ಭಿನ್ನನನ್ನಾಗಿಯೂ ತಿಳಿಯುವರು॥

ಹೇ ರಾಮ ! ಕಾಮಕ್ರೋಧಾದಿಗಳಿಂದ ವಿಹೀನವಾಗಿರುವ ಸೂಕ್ಷ್ಮವಾದ ಬುದ್ಧಿಗೆ ಮಾತ್ರವೇ ನೀನು ಗೋಚರನಾಗುವೆ ಆದರೆ, ಸರ್ವತ್ರ ಕಾಮಕ್ರೋಧಾದಿಗಳಿಂದ ಯಾವ ಪ್ರಕ್ರಮವುಂಟಾಗಬಹುದೋ, ಅಂತಹ ಮಾನುಷಾದ್ಯವತಾರಪ್ರಕ್ರಮವನ್ನೇ ನೀನು ವಹಿಸಿರುವೆ ॥೯೭॥

ಅಯ್ಯಾ ! ರಘೂತ್ತಮನೆ ! ನೀನು ಪ್ರತ್ಯಕ್ಷನಾದರೆ, ಈ ಜೀವಾತ್ಮನ ಹೃದಯದಲ್ಲಿರುವ ಮೋಹಬಂಧನವು ಭಿನ್ನವಾಗುವುದು , ಸಕಲಸಂಶಯಗಳೂ ಛಿನ್ನವಾಗುವುವು , ಸಮಸ್ತಕರ್ಮಗಳೂ ಕ್ಷೀಣವಾಗುವುವು ॥೯೮॥

ತ್ವದ್ಭಕ್ತಪಾಪಪುಣ್ಯಾನಿ ತನ್ನಿನ್ದಾಸ್ತುತಿಕಾರಿಭಿಃ ।
ನೀತಾನಿ ಸ ತು ಶುದ್ಧಾತ್ಮಾ ತ್ವಾಮೇವ ಪ್ರಾಪ್ನುಯಾತ್ ಸುಖಮ್ ॥೯೯॥

ತ್ವಾಂ ಯೇ ಸರ್ವತ್ರ ಪಶ್ಯನ್ತಿ ಸರ್ವಂ ಚ ತ್ವಯಿ ರಾಘವ ।
ತ್ವದರ್ಥೇ ತ್ಯಕ್ತಸರ್ವಸ್ವಾಃ ಭಕ್ತಾಸ್ತೇ ಕೀರ್ತಿತಾಃ ಶುಭಾಃ ॥೧೦೦॥

ವಲ್ಮೀಕೇ ಕಂಚುಕಂ ತ್ಯಕ್ತ್ವಾ ಫಣಿವತ್ ತ್ವಯಿ ಭಕ್ತಿತಃ ।
ಸ್ವಸ್ಯಾಪ್ಯುಪೇಕ್ಷಕಾದೇಹೇ ಭಕ್ತಾಸ್ತೇ ರಾಮ ಕೀರ್ತಿತಾಃ ॥೧೦೧॥

ಶ್ರಿಯಾ ಭ್ರಷ್ಟಾಗುಣೈಃ ಶ್ರೇಷ್ಠಾಂ ವೇಷಭೂಷಾದಿಕುತ್ಸಿತಾಃ ।
ತ್ವದೇಕಶರಣಾಃ ಶಶ್ವತ್ ಭಕ್ತಾಸ್ತೇ ರಾಮ ಕೀರ್ತಿತಾಂ ॥೧೦೨॥

ಏವಂ ಭಕ್ತಾಸ್ತ್ವಯಿ ವಿಭೋ ಸುಷುಮ್ನಾನಾಡಿತೋ ಬಹಿಃ ।
ತತೋರ್ಧ್ವಮಾರ್ಗತೋ ಯಾನ್ತಿ ಯದ್ಭಕ್ತ್ವಾ ನ ನಿವರ್ತತೇ ॥೧೦೩॥

ತತೋರ್ಚಿರಾದಿಪರ್ವಾಣಿ ತೀರ್ತ್ವಾರ್ಕದ್ವಾರತೋ ವಿಭೋ ।
ಲೋಕಂ ಪ್ರಾಪ್ತಾಸ್ತತಃ ಸ್ವರ್ಣಾಂಬ್ವಗ್ನಿವಾಯ್ವಾದಿಕಾವೃತೀಃ ॥೧೦೪॥

ನಿನ್ನ ಭಕ್ತನಲ್ಲಿರುವ ಪಾಪಕರ್ಮಗಳ ಫಲವು ಅವನನ್ನು ನಿಂದಿಸತಕ್ಕವನಿಂದಲೂ, ನಿನ್ನ ಭಕ್ತನಲ್ಲಿರುವ ಪುಣ್ಯಕರ್ಮಗಳ ಫಲವು ಅವನನ್ನು ಸ್ತುತಿಸತಕ್ಕವನಿಂದಲೂ ಹೊಂದಲ್ಪಡುವುವು, ಆ ಭಕ್ತನಾದರೋ, ಪುಣ್ಯಪಾಪ ಲೇಪಶೂನ್ಯನಾಗಿ, ಅಯಾಸವಿಲ್ಲದೆ ನಿನ್ನನ್ನೇ ಹೊಂದುವನು ॥೯೯॥

ಹೇ ರಾಘವ! ನೀನು ಸರ್ವಪದಾರ್ಥಗಳಲ್ಲಿಯೂ ಇರುವನೆಂದೂ, ಸರ್ವಪದಾರ್ಥಗಳೂ ನಿನ್ನಲ್ಲಿರುವುವೆಂದೂ ಯಾರಿಗೆ ಗೋಚರವಾಗುವುದೋ. ಯಾರು ನಿನಗೋಸ್ಕರವಾಗಿ ಸಮಸ್ತವನ್ನೂ ಸಮರ್ಪಿಸುವರೋ, ಅವರೇ ಉತ್ತಮರಾದ ಭಕ್ತರೆಂದು ಹೇಳಲ್ಪಡುವರು ॥೧೦೦॥

ಹಾವು ಹುತ್ತಿನಲ್ಲಿ ಪರೆಯನ್ನು ಬಿಡುವಂತೆ, ಯಾರು ನಿನ್ನಲ್ಲಿ ಭಕ್ತಿಯಿಟ್ಟು ತಮ್ಮ ದೇಹದಲ್ಲಿಯೂ ಉಪೇಕ್ಷೆಯುಳ್ಳವರಾಗುವರೋ, ಅವರೇ ಸದ್ಭಕ್ತರೆಂದು ಹೇಳಲ್ಪಡುವರು ॥೧೦೧॥

ಹೇ ರಾಮ! ಯಾರು ಧನಸಂಪತ್ತಿಯನ್ನು ಬಿಟ್ಟು ಹೀನವಾದ ವೇಷಭಾಷಾದಿಗಳನ್ನಿಟ್ಟುಗೊಂಡು, ಪದೇಪದೇ ನಿನ್ನನ್ನೊಬ್ಬನನ್ನೇ ಮರೆಹೊಗುವರೋ, ಅವರೇ ಉತ್ತಮರಾದ ಭಕ್ತರೆನ್ನಿಸಿಕೊಳ್ಳುವರು ॥೧೦೨॥

ಎಲೈ ವಿಭುವೆ! ಹೀಗೆ ನಿನ್ನಲ್ಲಿ ಭಕ್ತರಾದವರು, ಸುಷುಮ್ನಾನಾಡಿಯಿಂದ ಶ್ವಾಸವನ್ನು ಮೇಲಕ್ಕೆ ಬಿಟ್ಟವರಾಗಿ, ಪುನರಾವೃತ್ತಿರಹಿತವಾದ ಪರಮಪದವನ್ನು ಹೊಂದುವರು ॥೧೦೩॥

ಬಳಿಕ, ಅರ್ಚಿರಾದಿ ಮಾರ್ಗಗಳೆಂಬ ಆವರಣಗಳನ್ನು ಕಳೆದು, ಸೂರ್ಯಮಂಡಲಮಾರ್ಗದಿಂದ ಬ್ರಹ್ಮಲೋಕವನ್ನು ಹೊಂದಿದವರಾಗಿ, ಆಮೇಲೆ ಸುವರ್ಣ ಜಲ ಅಗ್ನಿ ವಾಯು ಮುಂತಾದ

ತತ್ತದಾಕೃತಿರೂಪೇಣ ತಾನ್ಯತೀತ್ಯ ಚ ಕಾರಣಮ್ ।
ತೀತ್ವಾ ಚ ವಿರಜಾಂ ಶುದ್ಧಾಂ ಯಾನ್ತಿ ತೇ ಪರಮಂ ಪದಮ್ ॥೧೦೫॥
ನಿರಜ್ಞಾನಾಃ ಪರಂ ಸಾಮ್ಯಂ ಗತ್ವಾ ರಾಮ ತತಸ್ತವ ।
ತ್ವಯಾ ಸಾಕಂ ಸಾಷ್ಟ್ರ್ಯಭಾಜೋ ಮೋದನ್ತೇ ತ್ವತ್ಪದೇ ಧ್ರುವಾಃ॥೧೦೬॥
ಇನ್ದ್ರಿಯೇಭ್ಯಃ ಪರಾಹ್ಯರ್ಥಾಃ ತೇಭ್ಯಃ ಸತ್ವಂ ತತೋಪಿ ಧೀಃ ।
ತಸ್ಯಾಮಹಾಂಸ್ತತೋವ್ಯಕ್ತಂ ತ್ವಂ ಕಾಷ್ಠಾ ತ್ವಂ ಪರಾ ಗತಿಃ ॥೧೦೭॥
ಯಸ್ತ್ವಭಕ್ತಸ್ತ್ವಯಿ ವಿಭೋ ವಿಮನಸ್ಕಃ ಸದಾ ಶುಚಿಃ ।
ನ ಸ ತೇ ಪದಮಾಪ್ನೋತಿ ದುಃಖಾದ್ದುಃಖಂ ವ್ರಜತ್ಯಲಮ್ ॥೧೦೮॥
ಸದ್ಯೋ ಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮಃ ।
ತ್ರ್ಯಂಬಕಂ ಯಜಾಮಿತ್ವಾಂ ಮೃತ್ಯೋರ್ಮೋಚಯಮಾಂ ಹರೇ ॥೧೦೯॥

ಆವರಣಗಳನ್ನು ದಾಟಿ, ಆಯಾ ಲೋಕಗಳಲ್ಲಿ ಆಯಾ ಶರೀರಗಳನ್ನು ಪಡೆದು–ಅವುಗಳನ್ನೆಲ್ಲ ಅತಿಕ್ರಮಿಸಿ, ಪರಿಶುದ್ಧವಾದ ವಿರಜಾನದಿಯನ್ನು ದಾಟಿ, ಅನಂತರ ಅವರು ಪರಮಪದವನ್ನು ಹೊಂದುವರು ॥೧೦೪–೧೦೫॥

ರಾಮಚಂದ್ರ ! ಅನಂತರ ಅವರು ಅಜ್ಞಾನಶೂನ್ಯರಾಗಿ, ಉತ್ತಮವಾದ ಸಾಮ್ಯವನ್ನು ಹೊಂದಿ, ನಿನ್ನೊಡನೆ ಸಾರೂಪ್ಯವನ್ನು ಪಡದವರಾಗಿ, ನಿನ್ನ ಪದದಲ್ಲಿ ಸರ್ವದಾ ಆನಂದಪಡುತಿರುವರು ॥೧೦೬॥

ಈ ಪ್ರಪಂಚದಲ್ಲಿ, ಇಂದ್ರಿಯಗಳಿಗಿಂತ ವಿಷಯಗಳು ಮೇಲಾಗಿರುವುವು, ವಿಷಯಗಳಿಗಿಂತ ಚಿತ್ತವು ಮೇಲಾದುದು, ಅದಕ್ಕಿಂತ ಬುದ್ಧಿಯು ಮೇಲಾದುದು, ಬುದ್ಧಿಗಿಂತ ಮಹತ್ತತ್ತ್ವವು ಮೇಲೆನ್ನಿಸುವುದು ; ಅವ್ಯಕ್ತ(ಮಾಯೆ)ವು ಮಹತ್ತತ್ತ್ವಕ್ಕಿಂತ ಮೇಲಾಗುವುದು ನೀನು ಇವೆಲ್ಲಕ್ಕಿಂತ ಮೇಲಾಗಿರುವೆ ಎಲ್ಲಕ್ಕೂ ನೀನೇ ಪರಮಗತಿಯಾಗಿರುವ ॥೧೦೭॥

ಎಲೈ ವಿಭುವೆ! ಯಾವ ಪುರುಷನು ನಿನ್ನಲ್ಲಿ ಭಕ್ತಿಯಿಡದೆ ದುಷ್ಟಹೃದಯನಾಗಿ ಸರ್ವದಾ ಅಶುಚಿಯಾಗಿರುವನೋ, ಅವನು ನಿನ್ನ ಪದವಿಯನ್ನು ಹೊಂದುವುದಿಲ್ಲ, ಸರ್ವದಾ ಅತಿದುಃಖಭಾಗಿಯಾಗುವನು ॥೧೦೮॥

ಹೇ ಹರೇ! ಸದ್ಯೋಜಾತಸ್ವರೂಪನಾದ ನಿನ್ನನ್ನು ಶರಣಾಗತನಾಗುವೆನು, ಸದ್ಯೋಜಾತಮೂರ್ತಿಯಾದ ನಿನಗೆ ನಮಸ್ಕಾರವು ತ್ರಿಯಂಬಕ ಮೂರ್ತಿಯಾದ ನಿನ್ನನ್ನು ಆರಾಧಿಸುವೆನು. ನನ್ನನ್ನು ಮೃತ್ಯುಭಯದಿಂದ ಬಿಡಿಸುವನಾಗು ॥೧೦೯॥

ಲೋಕಸ್ಯ ದ್ವಾರಮರ್ಚಿಷ್ಮತ್ ಮಹಸ್ವಚ್ಚ ರಣಂ ತವ ।
ಮುಕ್ತಿಧಾರಾದುಹದ್ಭೂರಿ ದಧಾತು ಸುಧಿತಾಂ ಮಮ ॥೧೧೦॥
ಯೋ ವಿಧಿಂ ಮಾಂ ವಿಧಾಯಾದೌ ಸ್ವಸ್ಯ ನಿಶ್ವಾಸಸಂಭವಾ ।
ಮಹ್ಯಂ ವೇದಾ ದಿದೇಶಾಥ ತಂ ತ್ವಾಹಂ ಶರಣಂ ವ್ರಜೇ ॥೧೧೧॥
ತವ ರಾಮ ಗುಣಾ ಲೋಕೇ ವೇತ್ತಿ ಕೋ ಭೂರಜಾಂಸ್ಯಲಮ್ ।
ಗಣಯೇದಪಿ ಭೂಯಿಷ್ಠಾಂ ನಮಉಕ್ತಿಂ ವದಾಮ್ಯಹಮ್ ॥೧೧೨॥
ದ್ವಿಸ್ತೇ ರಾಮ ನಮಸ್ತ್ರಿಸ್ತೇ ದಶಕೃತ್ವಃ ಸಹಸ್ರಧಾ ।
ಶತಕೃತ್ವೋನನ್ತಕೃತ್ವೋ ಭೂಯೋಭೂಯೋ ನಮೋಸ್ತುತೇ ॥೧೧೩॥

ಶ್ರೀಶಿವಉವಾಚ

ಧಾತೈವಂ ಸಂಸ್ತುತೋ ರಾಮೋ ವೇದಗರ್ಭಸ್ತವೇನ ವೈ ।
ಪ್ರಹಸನ್ನತಿಹೃಷ್ಟಾತ್ಮಾ ಬ್ರಹ್ಮಾಣಮಿದಮಬ್ರವೀತ್ ॥೧೧೪॥
ಸ್ತೋತ್ರೇಣಾನೇನ ತುಷ್ಟೋಸ್ಮಿ ವೇದಗರ್ಭಸ್ತವೇನ ತೇ ।
ಅದೇಯಮಪಿ ತೇ ದಾಸ್ಯೇ ವರಂ ವರಯ ಪದ್ಮಜ ॥೧೧೫॥

ಸರ್ವಲೋಕಗಳಿಗೂ ದ್ವಾರಭೂತವಾಗಿಯೂ, ತೇಜೋಯುಕ್ತವಾಗಿಯೂ, ಮಹಾಕಾಂತಿ ಸಂಪನ್ನವಾಗಿಯೂ, ಮೋಕ್ಷಾಮೃತಧಾರೆಯನ್ನು ವಿಶೇಷವಾಗಿ ಧರಿಸಿಯೂ ಇರುವ ನಿನ್ನ ಪಾದವು, ನನಗೆ ಜ್ಞಾನವನ್ನುಂಟುಮಾಡಲಿ ॥೧೧೦॥

ಯಾವ ಪರಮಾತ್ಮನಾದ ನೀನು–ಸೃಷ್ಟ್ಯಾದಿಯಲ್ಲಿ ಚತುರ್ಮುಖಬ್ರಹ್ಮನಾದ ನನ್ನನ್ನು ಸೃಷ್ಟಿಮಾಡಿ–ಬಳಿಕ ನಿನ್ನ ನಿಶ್ವಾಸರೂಪಗಳಾದ ವೇದಗಳನ್ನು ನನಗೆ ಉಪದೇಶಿಸಿದೆಯೋ, ಅಂತಹ ನಿನ್ನನ್ನು ಈಗ ನಾನು ಶರಣಾಗತನಾಗುವೆನು ॥೧೧೧॥

ಎಲೈರಾಮನೆ! ಭೂಮಿಯಲ್ಲಿರುವ ಧೂಳುಗಳನ್ನಾದರೂ ಲೆಕ್ಕಮಾಡಬಹುದು, ನಿನ್ನ ಗುಣಗಳನ್ನು ಈ ಲೋಕದಲ್ಲಿ ಯಾವನು ಅರಿಯಬಲ್ಲನು! ಇಂತಹ ಅಗಣಿತಗುಣನಾದ ನಿನಗೆ ನಾನು ಅನೇಕವಾದ ನಮಸ್ಕಾರಗಳನ್ನು ಸಮರ್ಪಿಸುವೆನು ॥೧೧೨॥

ರಾಮಭದ್ರ! ನಿನಗೆ ಒಂದುಸಲ ನಮಸ್ಕಾರವು, ಎರಡುಸಲ ನಮಸ್ಕಾರವು, ಮೂರುಸಲ ನಮಸ್ಕಾರವು, ಹತ್ತುಸಲ ನಮಸ್ಕಾರವು, ನೂರುಸಲ ನಮಸ್ಕಾರವು, ಸಾವಿರಸಲ ನಮಸ್ಕಾರವು, ಲೆಕ್ಕವಿಲ್ಲದಷ್ಟುಸಲ ಮತ್ತೆಮತ್ತೆ ನಿನಗೆ ನಮಸ್ಕಾರವು (ಎಂದುಬ್ರಹ್ಮನುಸ್ತೋತ್ರಮಾಡಿದನು) ॥

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಈರೀತಿಯಾಗಿ ಬ್ರಹ್ಮನಿಂದ ವೇದಾರ್ಥಗರ್ಭಿತವಾದ ಸ್ತೋತ್ರದಿಂದ ಸ್ತುತಿಸಲ್ಪಟ್ಟ ಶ್ರೀರಾಮನು, ಬಹಳಹರ್ಷಯುಕ್ತನಾಗಿ ಮಂದಹಾಸಮಾಡುತ, ಅವನನ್ನು ಕುರಿತು

ಬ್ರಹ್ಮೋವಾಚ

ಪ್ರಾಗ್ದರ್ಶಿತಂ ತೇ ಸಾರ್ವಾತ್ಮ್ಯಂ ತ್ವಯಾ ಯದ್ರಾಮ ತನ್ಮಮ ।
ಸ್ವಯಮೇವ ಸದಾ ಭಾತು ನಾತೋ ಯಾಚೇ ವರಾನ್ತರಮ್ ॥೧೧೬॥
ವದನ್ತಮೇವಂ ಬ್ರಹ್ಮಾಣಂ ಅಭಿನಂದ್ಯ ತಥಾಸ್ತ್ವಿತಿ ।
ಉವಾಚ ವಚನಂ ಭೂಯಃ ಪ್ರಪನ್ನಂ ರಾಘವಃ ಸ್ವಯಮ್ ॥೧೧೭॥
ಬ್ರಹ್ಮನ್ ಕೋಪಿ ನ ಮಾಂ ವೇತ್ತಿ ತ್ವಯಾ ತು ಕೃಪಯಾ ಮಮ ।
ಭಕ್ತ್ಯಾ ಚ ದೃಷ್ಟಂ ಮದ್ರೂಪಂ ನಾನ್ಯಥಾ ದ್ರಷ್ಟುಮಿಶ್ವರಃ ॥೧೧೮॥
ಮದ್ಭಕ್ತಿಮನ್ತರಾ ಬ್ರಹ್ಮನ್ ನ ತಪೋಭಿಶ್ಚ ಕರ್ಮಭಿಃ ।
ದ್ರಷ್ಟುಮೇವಂವಿಧಃ ಶಕ್ಯೋ ಮಯ್ಯತೋ ಭಕ್ತಿಮಾನ್ ಭವೇತ್ ॥೧೧೯॥
ದ್ವೇಷೇಣ ಮಯಿ ಭಕ್ತ್ಯಾ ವಾ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಮುಕ್ತಿದಾನಾಯ ದೀಕ್ಷಿತೋಸ್ಮ್ಯಧಮರ್ಣವತ್ ॥೧೨೦॥

'ಎಲೈ ಬ್ರಹ್ಮನೆ! ನೀನುಮಾಡಿದ ಈ ವೇದಗರ್ಭಸ್ತವದಿಂದ ನಾನು ಸಂತೋಷಪಟ್ಟೆನು! ಕೊಡಲಸಾಧ್ಯವಾದ ವರವನ್ನಲ್ಲ ನಿನಗೆ ಕೊಡುವನು ಬೇಕಾದ ವರವನ್ನು ಬೇಡು' ಎಂದು ಹೇಳಿದನು ||

ಇದನ್ನು ಕೇಳಿ ಬ್ರಹ್ಮನು ವಿಜ್ಞಾಪಿಸುವನು —

ಸ್ವಾಮಿನ್! ರಾಮಚಂದ್ರ! ಪೂರ್ವದಲ್ಲಿ ನೀನು ಯಾವ ವಿಶ್ವರೂಪವನ್ನು ನನಗೆ ತೋರಿಸಿದೆಯೋ, ಅದು ಸರ್ವದಾ ಸ್ವತಃವ ನನ್ನ ಮುಂದೆ ಸ್ಫುರಿಸುತಿರಲಿ, ಇದಕ್ಕಿಂತ ಬೇರೆಯಾದ ಯಾವ ವರವನ್ನೂ ನಾನು ಬೇಡುವುದಿಲ್ಲ ॥೧೧೬॥

ಹೀಗೆ ವ್ಯಾಪ್ತಿಸುತಿರುವ ಬ್ರಹ್ಮನನ್ನು ಅಭಿನಂದಿಸಿ, ನಿನ್ನ ಅಭಿಪ್ರಾಯದಂತೆಯೇ ಆಗಲೆಂದು ಹೇಳಿ, ಶರಣಾಗತನಾದ ಅವನನ್ನು ಕುರಿತು ಮತ್ತೆ ಶ್ರೀರಾಮನು ಹೀಗೆ ಹೇಳಿದನು ॥೧೧೭॥

ಎಲೈ ಬ್ರಹ್ಮನೆ! ನನ್ನ ಸ್ವರೂಪವನ್ನು ತಿಳಿಯಲು ಲೋಕದಲ್ಲಿ ಯಾರಿಗೆ ಶಕ್ತಿಯುಂಟು? ನೀನಾದರೆ, ನನ್ನ ಕೃಪೆಯಿಂದಲೂ ನಿನ್ನ ಭಕ್ತಿಯಿಂದಲೂ ನನ್ನ ರೂಪವನ್ನು ನೋಡಿದವನಾದೆ, ಹಾಗಿಲ್ಲದಿದ್ದರೆ ನೀನೆಂದಿಗೂ ನನ್ನನ್ನು ನೋಡಲಾರೆ ॥೧೧೮॥

ಎಲೈ ಬ್ರಹ್ಮನೆ! ನನ್ನಲ್ಲಿ ಭಕ್ತಿಯಿಲ್ಲದಿದ್ದರೆ, ತಪಸ್ಸಿನಿಂದಲೂ ಕರ್ಮಗಳಿಂದಲೂ ನನ್ನ ಈ ರೂಪವನ್ನು ನೋಡಲು ಸಾಧ್ಯವಾಗುವುದಿಲ್ಲ ಅದುಕಾರಣ, ಪುರುಷನು ನನ್ನಲ್ಲಿ ಭಕ್ತಿಯುಳ್ಳವನಾಗಿರಬೇಕು ॥೧೧೯॥

ನನ್ನಲ್ಲಿ ದ್ವೇಷದಿಂದಲಾಗಲಿ, ಅಥವಾ ಭಕ್ತಿಯಿಂದಲಾಗಲಿ, ಯಾವನು ನನ್ನನ್ನು ನಿತ್ಯವೂ ಸ್ಮರಿಸುತಿರುವನೋ, ಅವನಿಗೆ ಮುಕ್ತಿಯನ್ನು ಕೊಡುವುದಕ್ಕೋಸ್ಕರ ನಾನು ಸಾಲ ತೆಗೆದು ಕೊಂಡಿರುವನಂತೆ ಒದ್ದ ದೀಕ್ಷನಾಗಿರುವೆನು ॥೧೨೦॥

ತಮುಕ್ತ್ವೈವಂ ತತೋ ರಾಮಃ ಸುರಾನಪ್ಯಬ್ರವೀದ್ವಚಃ ॥೧೦೧॥
ಸ್ತೋತ್ರಮೇತತ್ ಪಠ್ಯತಾಂ ಮೇ ಭವದ್ಭಿಃ ಸರ್ವಸಿದ್ಧಿದಮ್ ।
ವೇದಗರ್ಭಸ್ತವೇನಾತ್ರ ಸಕೃದ್ಯಾಮಂ ಸ್ತುವೀತ ಯಃ ।
ಸ ಮೇ ಪ್ರಸಾದಾದ್ಭುಕ್ತ್ವೇಹ ಭೋಗಾನನ್ತೇ ಪ್ರಮುಚ್ಯತೇ ॥೧೦೨॥
ರಾಮಃ ಸುರಾನೇವಮುಕ್ತ್ವಾ ಪ್ರೇಷಯಿತ್ವಾ ಚ ತಾನ್ ಸುರಾನ್ ।
ಸಭ್ರಾತೃಭಾರ್ಯೋ ನ್ಯವಸತ್ ಪಞ್ಚವಟ್ಯಾಶ್ರಮೇ ಸುಖಮ್ ॥೧೦೩॥

ಇತಿ ಶ್ರೀಮದರಣ್ಯಕಾಣ್ಡೇ ಹಿರಣ್ಯಗರ್ಭಸಂಹಿತಾನಿಷ್ಕ
ಚತುರ್ಮುಖೋಕ್ತ ವೇದಗರ್ಭಸ್ತವಕಥನಂ ನಾಮ
ದಶಮಃ ಸರ್ಗಃ



ಹೀಗೆಂದು ಆ ಚತುರ್ಮುಖನಿಗೆ ಹೇಳಿ, ಒಳಿಕ ರಾಮನು ದೇವತೆಗಳಿಗೂ ಈ ಮಾತನ್ನು ಹೇಳಿದನು ಎಲೈ ದೇವತೆಗಳಿರಾ! ಸಕಲ ಸಿದ್ಧಿಯನ್ನೂ ಕೊಡುವ ಈ ನನ್ನ ಸ್ತೋತ್ರವನ್ನು ನೀವು ಪಾರಾಯಣಮಾಡಿರಿ ಈ ಲೋಕದಲ್ಲಿ ಯಾವನು ಈ ವೇದಗರ್ಭಸ್ತೋತ್ರದಿಂದ ನನ್ನನ್ನು ಒಂದು ಸಲ ಸ್ತುತಿಸುವನೋ, ಅವನು ನನ್ನ ಅನುಗ್ರಹದಿಂದಈ ಲೋಕದಲ್ಲಿ ಸಕಲ ಭೋಗಗಳನ್ನೂ ಅನುಭವಿಸಿ ಕೊನೆಯಲ್ಲಿ ಮುಕ್ತನಾಗುವನು ॥೧೦೧-೧೦೨॥

ಹೀಗೆಂದು ದೇವತೆಗಳಿಗೆ ಹೇಳಿ, ಅವರುಗಳನ್ನು ಅವರವರ ಲೋಕಗಳಿಗೆ ಕಳುಹಿಸಿ, ಶ್ರೀರಾಮನು ಸೀತಾಲಕ್ಷ್ಮಣರೊಡನೆ ಪಂಚವಟ್ಯಾಶ್ರಮದಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದನು ॥೧೦೩॥

ಇದು ಅರಣ್ಯಕಾಂಡದಲ್ಲಿ ಹಿರಣ್ಯಗರ್ಭಸಂಹಿತಾನಿಷ್ಕವಾದ ಚತುರ್ಮುಖ
ಬ್ರಹ್ಮಕೃತವಾದ ವೇದಗರ್ಭಸ್ತವ ಕಥನವೆಂಬ
ಹತ್ತನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ಏಕಾದಶಃ ಸರ್ಗಃ.

ಶ್ರೀಶಿವಉವಾಚ.

ತತಃ ಶೂರ್ಪಣಖೀ ದೃಷ್ಟ್ವಾ ಖರಾದಿನಿಧನಂ ಯುಧಿ ।
ಪ್ರವಿವೇಶ ಪುರೀಂ ಲಂಕಾಂ ರಾವಣಾಸುರಸೋದರೀ ॥೧॥
ಲಂಕಾಂ ಗತ್ವಾ ಸಭಾಮಧ್ಯೇ ಕ್ರೋಶನ್ತೀ ಪಾದಸನ್ನಿಧೌ ।
ರಾವಣಸ್ಯ ಪಪಾತೋರ್ವ್ಯಾಂ ಭಗಿನೀ ತಸ್ಯ ರಕ್ಷಸಃ ॥೨॥
ದೃಷ್ಟ್ವಾ ತಾಂ ರಾವಣಃ ಪ್ರಾಹ ಭಗಿನೀಂ ಭಯವಿಹ್ವಲಾಮ್ ॥೩॥
ಉತ್ತಿಷ್ಠೋತ್ತಿಷ್ಠ ವತ್ಸೇ ತ್ವಂ ವಿರೂಪಕರಣಂ ತವ ।
ಕೃತಂ ಶಕ್ರೇಣ ವಾ ಭದ್ರೇ ಯಮೇನ ವರುಣೇನ ವಾ ।
ಕುಬೇರೇಣಾಥ ವಾ ಬ್ರೂಹಿ ಭಸ್ಮೀಕುರ್ಯಾಂ ಕ್ಷಣೇನ ತಮ್ ॥೪॥
ರಾಕ್ಷಸೀ ತಮುವಾಚೇದಂ ತ್ವಂ ಪ್ರಮತ್ತಶ್ಚ ಮೂಢಧೀಃ ।
ಪಾನಾಸಕ್ತಃ ಸ್ತ್ರೀವಿಜಿತೋ ನ ಚ ಸರ್ವತ್ರ ಲಕ್ಷಸೇ ॥೫॥

ಅರಣ್ಯಕಾಂಡದಲ್ಲಿ ಹನ್ನೊಂದನೆಯ ಸರ್ಗವು

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳಲುಪಕ್ರಮಿಸಿದನು —

ಎಲೌ ಪಾರ್ವತಿ! ಹೀಗೆ ಸಮಸ್ತ ದೇವತೆಗಳೂ ಶ್ರೀರಾಮನನ್ನು ಸ್ತುತಿಸಿ ಹೊರಟು ಹೋದ ಬಳಿಕ, ಆ ಯುದ್ಧದಲ್ಲಿ ಶ್ರೀರಾಮನಿಂದ ಖರಾದಿರಾಕ್ಷಸರೆಲ್ಲ ಕೊಲ್ಲಲ್ಪಟ್ಟುದನ್ನು ಕಂಡು, ರಾವಣಾಸುರನ ತಂಗಿಯಾದ ಶೂರ್ಪಣಖಿಯು ಲಂಕಾಪಟ್ಟಣಕ್ಕೆ ಹೋದಳು ॥೧॥

ಅಲ್ಲಿ ಹೋಗಿ, ಆ ರಾವಣನ ತಂಗಿಯು, ಸಭೆಯ ಮಧ್ಯದಲ್ಲಿ ರಾವಣನ ಪಾದಮೂಲದಲ್ಲಿ ಕಿರುಚಿಕೊಳ್ಳುತ ಭೂಮಿಯಮೇಲೆ ಬಿದ್ದಳು ॥೨॥

ಹೀಗೆ ಭಯಭ್ರಾಂತಳಾಗಿರುವ ತನ್ನ ತಂಗಿಯನ್ನು ನೋಡಿ, ರಾವಣನು ಅವಳನ್ನು ಕುರಿತು ' ವತ್ಸೇ! ನೀನು ಏಳುಏಳು ಭದ್ರೇ! ನಿನಗೆ ಹೀಗೆ ಅಂಗವಿಕಾರವು ಇಂದ್ರನಿಂದ ಮಾಡಲ್ಪಟ್ಟಿತೆ? ಅಥವಾ ಯಮನಿಂದ ಮಾಡಲ್ಪಟ್ಟಿತೆ? ವರುಣನಿಂದ ಮಾಡಲ್ಪಟ್ಟಿತೆ? ಕುಬೇರನಿಂದ ಮಾಡಲ್ಪಟ್ಟಿತೆ? ಸತ್ಯವಾಗಿ ಹೇಳು ಅವನನ್ನು ಒಂದು ಕ್ಷಣದೊಳಗಾಗಿ ಭಸ್ಮಮಾಡಿಬಿಡುವೆನು' ಎಂದು ಹೇಳಿದನು ॥೩-೪॥

ಆಗ ಶೂರ್ಪಣಖಿಯು ರಾವಣನನ್ನು ಕುರಿತು ಈ ಮಾತು ಹೇಳಿದಳು ಅಣ್ಣಾ! ನೀನು ಕೇವಲ ಅಜಾಗರೂಕನಾಗಿರುವೆ; ಮಹಾಮೂಢಬುದ್ಧಿಯಾದವನು, ಸರ್ವದಾ ಪಾನದಲ್ಲಿ ಆಸಕ್ತ

ಚಾರಚಕ್ಷುರ್ವಿಹೀನಸ್ತ್ವಂ ಕಥಂ ರಾಜಾ ಭವಿಷ್ಯಸಿ ।
ಖರಶ್ಚ ನಿಹತಃ ಸಂಖ್ಯೇ ದೂಷಣಸ್ತ್ರಿಶಿರಾಸ್ತಥಾ ॥೬॥
ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಮಹಾತ್ಮನಾಮ್ ।
ನಿಹತಾನಿ ಕ್ಷಣೇನೈವ ರಾಮೇಣಾಸುರಶತ್ರುಣಾ ॥೭॥
ಜನಸ್ಥಾನಮಶೇಷಾಣಾಂ ಮುನೀನಾಂ ನಿರ್ಭಯಂ ಕೃತಮ್ ।
ನ ಜಾನಾಸಿ ವಿಮೂಢಸ್ತ್ವಂ ಅತಏವ ಮಯೋಚ್ಯಸೇ ॥೮॥

ರಾವಣಉವಾಚ.

ಕೋ ವಾ ರಾಮಃ ಕಿಮರ್ಥಂ ವಾ ಕಥಂ ತೇನಾಸುರಾಹತಾಃ ।
ಸಮ್ಯಕ್ ಕಥಯ ಚೈತೇಷಾಂ ಮೂಲಘಾತಂ ಕರೋಮ್ಯಹಮ್ ॥೯॥

ಶೂರ್ಪಣಖ್ಯುವಾಚ

ರಾಮೋ ನಾಮ ಮಹಾತೇಜಾಃ ಶ್ರೀಪ್ಠಃ ಸರ್ವಧನುಷ್ಮತಾಮ್ ।
ದಿವ್ಯಾಸ್ತ್ರಗಣಸಂಪನ್ನಃ ಪುರಂದರಸಮೋ ಯುಧಿ ॥೧೦॥

ನಾವವನು; ಸ್ತ್ರೀವಶನಾಗಿರುವೆ ಹೀಗಿರುವುದರಿಂದ, ನಿನಗೆ ಎಲ್ಲಾ ಕಡೆಯಲ್ಲಿಯೂ ದೃಷ್ಟಿಯಿಲ್ಲವಾಗಿರುವುದು ॥೫॥

ರಾಜರಿಗೆ ಗೂಢಚಾರರೆಂಬ ಕಣ್ಣು ಅತ್ಯಾವಶ್ಯಕವಾಗಿರುವುದು, ಅಂತಹ ಚಾರಚಕ್ಷುಸ್ಸಿಲ್ಲದಿರುವ ನೀನು ಹೇಗೆ ರಾಜನಾಗುವೆ? ನಿನ್ನ ತಮ್ಮನಾದ ಖರನು ರಾಮನಿಂದ ಯುದ್ದದಲ್ಲಿ ನಿಹತನಾದನು, ದೂಷಣನೂ ತ್ರಿಶಿರಸ್ಸೂ ಅವನ ಗತಿಯನ್ನೇ ಹೊಂದಿದರು ॥೬॥

ಇದಲ್ಲದೆ, ಖರಾನುಯಾಯಿಗಳಾದ ಹದಿನಾಲ್ಕುಸಾವಿರಮಂದಿ ಮಹಾತ್ಮರಾದ ರಾಕ್ಷಸರೂ ಕೂಡ, ಅಸುರಶತ್ರುವಾದ ರಾಮನಿಂದ ಒಂದು ಕ್ಷಣದೊಳಗಾಗಿ ಕೊಲ್ಲಲ್ಪಟ್ಟರು ॥೭॥

ನಿನಗೆ ಅತಿ ಪ್ರಿಯವಾದ ಜನಸ್ಥಾನವು, ಸಮಸ್ತ ಮುನಿಗಳಿಗೂ ನಿರ್ಭಯಪ್ರದೇಶವಾಗಿ ಮಾಡಲ್ಪಟ್ಟಿತು ಈ ವಿಷಯವೊಂದೂ ನಿನಗೆ ಗೊತ್ತೇಇಲ್ಲ, ಆದುದರಿಂದಲೇ, ನಾನು ನಿನ್ನನ್ನು ಕೇವಲ ಮೂಢನೆಂದು ಹೇಳುತಿರುವೆನು ॥೮॥

ಇದನ್ನು ಕೇಳಿ ರಾವಣನು ಪ್ರಶ್ನೆಮಾಡುವನು —

ಎಲೌ ಸಹೋದರಿ! ನೀನು ಹೇಳುವ ರಾಮನೆಂಬವನು ಯಾರು? ಅವನು ರಾಕ್ಷಸರನ್ನು ಏತಕ್ಕಾಗಿ ಕೊಂದನು? ಹದಿನಾಲ್ಕುಸಾವಿರನುಂದಿ ರಾಕ್ಷಸರನ್ನೂ ಅವನೊಬ್ಬನೇ ಕೊಂದನೆಂಬುದು ಹೇಗೆ? ಇದನ್ನೆಲ್ಲ ನೀನು ಜನ್ನಾಗಿ ವಿಸ್ತರಿಸಿ ಹೇಳು ಅವರೆಷ್ಟುಮಂದಿ ಬೇಕಾದರೂ ಇರಲಿ, ಅವರನ್ನೆಲ್ಲ ನಾನು ಸಮೂಲವಾಗಿ ನಾಶಮಾಡುವೆನು ॥೯॥

ಇದಕ್ಕೆ ಶೂರ್ಪಣಖಿಯು ಉತ್ತರ ಹೇಳುವಳು —

ಅಣ್ಣಾ! ಕೇಳುವನಾಗು. ರಾಮನೆಂಬವನು, ಮಹಾತೇಜಸ್ವಿಯಾಗಿರುವನು, ಸಮಸ್ತ

ತಸ್ಯಾನುರೂಪೋ ಬಲವಾ೯ ರಕ್ತಾಕ್ಷೋ ದುನ್ದುಭಿಸ್ವನಃ ।
ಕನೀಯಾ೯ ಲಕ್ಷ್ಮಣೋ ನಾಮ ಭ್ರಾತಾ ಶಶಿನಿಭಾನನಃ ॥೧೧॥
ಸ ತೇನ ಸಹ ಸಂಯುಕ್ತಃ ಪಾವಕೇನಾನಿಲೋ ಯಥಾ ।
ಶ್ರೀಮಾ೯ ರಾಜವರಸ್ತೇನ ಜನಸ್ಥಾನಂ ನಿಪಾತಿತಮ್ ॥೧೨॥
ತಸ್ಯ ಭಾರ್ಯಾ ವಿಶಾಲಾಕ್ಷೀ ರೂಪಿಣೀ ಶ್ರೀರಿವಾಪರಾ ॥೧೩॥
ದೇವಗನ್ಧರ್ವನಾಗಾನಾಂ ಮನುಷ್ಯಾಣಾಂ ತಥಾವಿಧಾ ।
ನ ದೃಷ್ಟಾ ನ ಶ್ರುತಾ ರಾಜ೯ ದ್ಯೋತಯನ್ತೀ ವನಂ ಶುಭಾ ।
ಆನೇತುಮಹಮುದ್ಯುಕ್ತಾ ತಾಂ ಭಾರ್ಯಾರ್ಥಂ ತವಾನಘ ॥೧೪॥
ಲಕ್ಷ್ಮಣೋ ನಾಮ ತಥ್ಭ್ರಾತಾ ಜೀವ್ಕ್ಷೀದ ಮಮ ನಾಸಿಕಾಮ್ ।
ನೇತ್ರೇಣ ಚೋದಿತಸ್ತೇನ ರಾಮೇಣ ಸ ಮಹಾಬಲಃ ॥೧೫॥
ತತೋಽಹಮತಿದುಃಖೇನ ರುದನ್ತೀ ಶರಮಸ್ವಗಾಮ್ ।
ಸೋಽಪಿ ರಾಮಂ ಸಮಾಗಮ್ಯ ಯೋದ್ಧುಂ ರಾಕ್ಷಸಪುಙ್ಗವೈಃ ।
ಹತಃ ಕ್ಷಣೇನ ರಾಮೇಣ ತೇನೈವ ಬಲಶಾಲಿನಾ ॥೧೬॥

ಧನುರ್ಧಾರಿಗಳಲ್ಲಿಯೂ ಶ್ರೇಷ್ಠನಾಗಿರುವನು, ದಿವ್ಯಾಸ್ತ್ರ ಸಮುದಾಯಗಳೆಲ್ಲವೂ ಅವನಿಗೆ ವಶವಾಗಿರುವುವು, ಅವನು ಯುದ್ದದಲ್ಲಿ ಇಂದ್ರನಿಗೆ ಸಮಾನನಾಗಿರುವನು ॥೧೦॥

ಸಮಸ್ತ ವಿಷಯದಲ್ಲಿಯೂ ಇವನಿಗ ಅನುರೂಪನಾಗಿರುವ ಮಹಾಬಲಶಾಲಿಯಾದ ಲಕ್ಷ್ಮಣನೆಂಬ ಅನುಜನೊಬ್ಬನಿರುವನು ಅವನು ರಕ್ತನೇತ್ರನಾಗಿಯೂ ದುಂದುಭಿಯಂತೆ ಧ್ವನಿಯುಳ್ಳವನಾಗಿಯೂ ಚಂದ್ರನಂತ ಮುಖವುಳ್ಳವನಾಗಿಯೂ ಇರುವನು ॥೧೧॥

ಆ ಮಹಾಕಾಂತಿಸಂಪನ್ನನಾದ ರಾಮನೆಂಬ ರಾಜಶ್ರೇಷ್ಠನು, ಅಗ್ನಿಯೊಡನೆ ವಾಯುವು ಯುಕ್ತನಾಗಿರುವಂತೆ, ತನ್ನ ತಮ್ಮನಾದ ಲಕ್ಷ್ಮಣನೊಡನೆ ಯುಕ್ತನಾಗಿರುವನು ಈ ರಾಮನಿಂದಲೇ ನಿನ್ನ ಜನಸ್ಥಾನವು ನಾಶಮಾಡಲ್ಪಟ್ಟುದು ॥೧೨॥

ಆ ರಾಮನಿಗೆ ವಿಶಾಲನೇತ್ರಿಯಾದ ಪತ್ನಿಯೊಬ್ಬಳಿರುವಳು, ಅವಳು ಅಪರ ಲಕ್ಷ್ಮೀಯಂತೆ ಮಹಾಸೌಂದರ್ಯವತಿಯಾಗಿರುವಳು ಎಲೈ ರಾಕ್ಷಸರಾಜನೆ ! ದೇವತೆಗಳಲ್ಲಿಯೂ ಗಂಧರ್ವರಲ್ಲಿಯೂ ನಾಗರಲ್ಲಿಯೂ ಮನುಷ್ಯರಲ್ಲಿಯೂ ಅಂತಹ ರೂಪವತಿಯಾದ ಸ್ತ್ರೀಯನ್ನು ನಾನು ನೋಡಿಲ್ಲ, ಕೊನೆಗೆ ಕೇಳಿಯೂ ಇಲ್ಲ ಆ ಸುಂದರಿಯು, ತಾನಿರುವ ಅರಣ್ಯವನ್ನೆಲ್ಲ ಅಲಂಕಾರ ಪಡಿಸುತಿರುವಳು ಎಲೈ ಮಹಾತ್ಮನೆ ! ಅವಳನ್ನು ನಿನಗೆ ಪತ್ನಿಯನ್ನಾಗಿ ಮಾಡುವುದಕ್ಕೋಸ್ಕರ ಕರೆದುಕೊಂಡು ಒರಬೇಕೆಂದು ನಾನು ಪ್ರಯತ್ನಪಟ್ಟೆನು ॥೧೩-೧೪॥

ಆಗ, ಆ ರಾಮನಿಂದ ಕಣ್ಣುಸನ್ನೆಮಾಡಲ್ಪಟ್ಟು, ಅವನ ತಮ್ಮನಾದ ಮಹಾಬಲಿಷ್ಠನಾದ ಲಕ್ಷ್ಮಣನೆಂಬವನು, ನನ್ನ ಮೂಗನ್ನು ಕೊಯ್ದುಬಿಟ್ಟನು ॥೧೫॥

ಅನಂತರ, ನಾನು ಅತಿ ದುಃಖದಿಂದ ಅಳುತ ಖರನ ಹತ್ತಿರಕ್ಕೆ ಹೋದೆನು ಅವನೂ

ಪ್ರಥಮಂ ನಿರ್ಯಯೌ ರಾಮಃ ಏಕಏವ ಧನುರ್ಧರಃ ।
ಚತುರ್ದಶಸಹಸ್ರಾಣಿ ತತೋಽಭೂದ್ರಘುನನ್ದನಃ ॥೧೬॥
ಪುನಃ ಸರ್ವಸ್ವರೂಪೋಽಭೂತ್ ಪುನರೇಕೋಽಪ್ಯದೃಶ್ಯತ ॥೧೪॥
ನಾದದಾನಂ ಶರಾ ಘೋರಾ ನ ಮುಞ್ಚನ್ತಂ ಶಿಲೀಮುಖಾ ।
ದದೃಶೂರಾಘವಂ ಸರ್ವೇ ರಾಕ್ಷಸಾಸ್ತು ನಿಪಾತಿತಾಃ ॥೧೯॥
ನಿಶಮ್ಯ ವಚನಂ ತಸ್ಯಾಃ ಸ್ವಸೂರಾಕ್ಷಸಪುಙ್ಗವಃ ।
ಕ್ಷಣಾ ನಿಶ್ಚೇಷ್ಟತಾಮಾಪ ಸಂಮೂರ್ಛಿತಇವಾತುರಃ ॥೨೦॥
ಪ್ರಹಸ್ತಪ್ರಮುಖಾವೀರಾಃ ಸರ್ವೇ ತಸ್ಯ ಸಭಾಸದಃ ।
ನಾಸಾಗ್ರೇ ನ್ಯಸ್ತಹಸ್ತಾಸ್ತೇ ಶಿರಃಕಮ್ಪಂ ಪ್ರಚಕ್ರಿರೇ ॥೨೧॥
ಕೇಚಿತ್ ಸಭಾಸದಸ್ತಸ್ಯ ಸಮುತ್ಥಾಯ ಧೃತಾಯುಧಾಃ ॥೨೨॥
ಆಜ್ಞಾಂ ದೇಹಿ ಮಹಾರಾಜ ಹನಿಷ್ಯಾಮೋದ್ಯ ತೇ ರಿಪುಮ್ ।
ಕಿಂ ಜಿನ್ತಯಾ ಮಹಾರಾಜ ನರಮಾತ್ರಾತ್ ಕಥಂ ಭಯಮ್ ।
ಪಾತ್ರಾನ್ನಮಿವ ಭೋಕ್ತ್ರ್ಯಾಮೋ ನರಭೋಜನಕಾವಯಮ್ ॥೨೩॥

ಕೂಡ, ಯುದ್ದಮಾಡುವುದಕ್ಕಾಗಿ ರಾಕ್ಷಸರೊಡನೆ ರಾಮನ ಹತ್ತಿರಕ್ಕೆ ಬಂದು, ಒಂದು ಕ್ಷಣ ದೊಳಗಾಗಿಯೇ ಮಹಾಬಲಶಾಲಿಯಾದ ಆ ರಾಮನಿಂದ ಕೊಲ್ಲಲ್ಪಟ್ಟನು ॥೧೬॥

ಮೊದಲು ಒಬ್ಬನೇ ರಾಮನು ಧನುರ್ಧಾರಿಯಾಗಿ ಹೊರಟನು, ಆಮೇಲ ಅವನು ಹದಿ ನಾಲ್ಕುಸಾವಿರ ರಾಮರಾಗಿ ಕಾಣಿಸಿಕೊಂಡನು ಪುನಃಪುನಃ ವಿಶ್ವರೂಪವನ್ನು ಧರಿಸುತಿದ್ದನು. ಆಮೇಲೆ ಪುನಃ ಒಬ್ಬನಾಗಿಯೂ ಕಾಣಿಸಿಕೊಂಡನು ॥೧೭–೧೮॥

ಆಗ, ರಾಮನು ಬಾಣಗಳನ್ನು ತಗೆದುಕೊಳ್ಳುತಿದ್ದುದೂ ಯಾರಿಗೂ ಕಾಣಿಸಲಿಲ್ಲ, ಅವನು ಬಾಣಬಿಡುತಿದ್ದುದೂ ಯಾರಿಗೂ ಕಾಣಿಸಲಿಲ್ಲ ರಾಕ್ಷಸರು ಮಾತ್ರ ಸಮಸ್ತರೂ ಹತ ರಾಗಿಬಿದ್ದರು (ಎಂದು ಶೂರ್ಪಣಖಿಯು ಹೇಳಿದಳು) ॥೧೯॥

ಹೀಗೆ ಹೇಳಿದ ತನ್ನ ತಂಗಿಯ ಮಾತನ್ನು ಕೇಳಿ, ಆ ರಾಕ್ಷಸರಾಜನು, ಮೂರ್ಛಿತನಾಗಿ ಬಿದ್ದ ರೋಗಿಯಂತೆ, ಒಂದು ಕ್ಷಣಕಾಲ ಸ್ತಬ್ಧನಾಗಿ ಕುಳಿತುಬಿಟ್ಟನು ॥೨೦॥

ಆಗ, ಅವನ ಸಭೆಯಲ್ಲಿದ್ದ ಪ್ರಹಸ್ತ ಮೊದಲಾದ ಮಹಾವೀರರೆಲ್ಲರೂ, ಮೂಗಿನ ತುದಿ ಯಲ್ಲಿ ಬೆರಳಿಟ್ಟುಕೊಂಡು, ತಲೆಯನ್ನು ತೂಗಿದರು ॥೨೧॥

ಆ ಸಮಯದಲ್ಲಿ, ಕೆಲವುಮಂದಿ ಅವನ ಸಭಾಸದರು ಎದ್ದು ನಿಂತುಕೊಂಡು, ಕೈಯಲ್ಲಿ ಆಯುಧಗಳನ್ನು ಧರಿಸಿ, ರಾವಣನನ್ನು ಕುರಿತು ' ಮಹಾರಾಜ! ನಮಗೆ ಆಜ್ಞೆಯಾಗಲಿ, ನಾವು ಈಗಲೇ ನಿಮ್ಮ ಶತ್ರುವನ್ನು ಕೊಂದುಬಿಡುವೆವು ಹೀಗೆ ಚಿಂತಿಸುವುದರಿಂದ ಫಲವೇನು? ಅತ್ಯಲ್ಪನಾದ ಮನುಷ್ಯಮಾತ್ರನಿಂದ ಇಷ್ಟು ಭಯವೇಕೆ? ನಾವು ನರಮಾಂಸಭಕ್ಷಕರಲ್ಲವೆ!

ಇಂದ್ರಜಿತ್ ಸಹಸೋತ್ಥಾಯ ಮೇಘಗಮ್ಭೀರನಿಸ್ವನಃ ।
ಉವಾಚ ರಾವಣಂ ವಾಕ್ಯಂ ಪಿತರಂ ಮಾತೃಸನ್ನಿಧೌ ॥೨೪॥
ಪಿತಃ ಶೃಣು ಪ್ರವಕ್ಷ್ಯಾಮಿ ನೇದಂ ಸೂಕ್ಷ್ಮಮವಮಾನನಮ್ ।
ಸ್ವಸಾ ತವ ಮಹಾರಾಜ ಸರ್ವೈಃ ಸಮ್ಮಾನಮರ್ಹತಿ ॥೨೫॥
ತ್ವಂ ಪ್ರಸಿದ್ಧೋಽಸಿ ಸರ್ವತ್ರ ಮಹಾದಾರುಣಕರ್ಮಣಾ ।
ಅಜಯ್ಯತ್ವಂ ಚ ವಿಖ್ಯಾತಂ ಸುರಾಸುರಗಣೈರಪಿ ॥೨೬॥
ತವ ಜೀವನಕಾಲೇ ಹಿ ರಿಪುರ್ನ ಶ್ರವಣಾತಿಥಿಃ ।
ಉಪೇಕ್ಷಾ ನಾತ್ರ ಕರ್ತವ್ಯಾ ಶತ್ರೌ ಕ್ಷುದ್ರೇಽಪಿ ತಾದೃಶೇ ॥೨೭॥
ಸ್ವಸುಸ್ತೇ ನಾಸಿಕಾಚ್ಛೇದಂ ಸರ್ವೇಽಪಾಮಪಿ ರಕ್ಷಸಾಮ್ ।
ದುಷ್ಕೀರ್ತಿಂ ಸರ್ವಲೋಕೇಷು ವದಿಷ್ಯನ್ತಿ ಹಿ ದೇಹಿನಃ ॥೨೮॥
ಬಲವಾನ್ನೋ ರಿಪುರ್ಜಾತೋ ರೂಢಶ್ಚೇನ್ನ ಹಿ ಜೀವಿತಂ ।
ಅದ್ಯೈವ ನಿಹನಿಷ್ಯಾವೋ ಗತ್ವೈಕಾಕಿನಮೂಹವೇ ॥೨೯॥

ಒಂದು ಪಾತ್ರೆಯಲ್ಲಿಟ್ಟಿರುವ ಅನ್ನದಂತೆ ನಿಮ್ಮ ಶತ್ರುವನ್ನು ತಿಂದುಬಿಡುವೆವು' ಎಂದು ವಿಜ್ಞಾಪಿಸಿದರು ॥೨೨-೨೩॥

ಹೀಗೆ ಅವರು ವಿಜ್ಞಾಪಿಸುತಿರುವ ಸಮಯದಲ್ಲಿ, ಇಂದ್ರಜಿತುವು ತಟ್ಟನೆ ಎದ್ದು, ತನ್ನ ತಾಯಿಯ ಎದುರಾಗಿ ತಂದೆಯನ್ನು ಕುರಿತು ಹೀಗೆ ವಿಜ್ಞಾಪಿಸಿದನು ॥೨೪॥

ತಂದೆಯೇ! ನಾನು ಹೇಳುವುದನ್ನು ಲಾಲಿಸಬೇಕು ಈಗ ರಾವಣನು ನಮಗೆ ಮಾಡಿರುವ ಅವಮಾನವು ಸ್ವಲ್ಪವಾದುದಲ್ಲ ಮಹಾರಾಜ! ನಿನ್ನ ತಂಗಿಯು ನಿನ್ನಂತೆಯೇ ಸರ್ವರಿಗೂ ಬಹುಮಾನಿಸಲ್ಪಡುವುದಕ್ಕೆ ತಕ್ಕವಳಲ್ಲವ? ॥೨೫॥

ನೀನು ನಿನ್ನ ಅತಿಕ್ರೂರವಾದ ಕರ್ಮಗಳಿಂದ ಲೋಕದಲ್ಲೆಲ್ಲ ಪ್ರಸಿದ್ಧನಾಗಿರುವೆ ಸುರಾಸುರರೆಲ್ಲರೂ ಒಟ್ಟಾಗಿ ಬಂದರೂ ನಿನ್ನನ್ನು ಗೆಲ್ಲಲಾಗುವುದಿಲ್ಲವೆಂಬುದೂ ಪ್ರಸಿದ್ಧವಾಗಿಯೇ ಇರುವುದು ॥೨೬॥

ನೀನು ಹುಟ್ಟಿದಾಗಿನಿಂದ ನಿನ್ನ ಜೀವಿತಕಾಲದಲ್ಲೆಲ್ಲ ನಿನಗೆ ಶತ್ರುವೊಬ್ಬನಿರುವನೆಂಬುದು ಯಾರ ಕಿವಿಗೂ ಬಿದ್ದಿಲ್ಲ ಇವನು ಎಷ್ಟು ಅಲ್ಪನಾದ ಶತ್ರುವಾಗಿದ್ದರೂ, ಇವನಲ್ಲಿ ಉಪೇಕ್ಷೆ ಮಾಡಲ್ಪಡತಕ್ಕುದಲ್ಲ ॥೨೭॥

ನಿನ್ನ ತಂಗಿಗೆ ಸಂಭವಿಸಿದ ನಾಸಿಕಾಚ್ಛೇದವು ಸರ್ವರಾಕ್ಷಸರಿಗೂ ಅಪಕೀರ್ತಿಕರವೆಂದು ಲೋಕದಲ್ಲಿ ಸಮಸ್ತ ಪ್ರಾಣಿಗಳೂ ಹೇಳಿಕೊಳ್ಳುವರು ॥೨೮॥

ಈಗ ನಮಗೆ ಪ್ರಬಲನಾದ ಶತ್ರುವೊಬ್ಬನು ಹುಟ್ಟಿರುವನು, ಇವನು ಚೆನ್ನಾಗಿ ಬೇರೂರಿಕೊಂಡುಬಿಟ್ಟ ಪಕ್ಷದಲ್ಲಿ, ಆಮೇಲೆ ನಮ್ಮ ಪ್ರಾಣವೇ ಉಳಿಯುವುದಿಲ್ಲ ಆದುಕಾರಣ, ಈಗಲೇ ನಾವೆಲ್ಲರೂ ಒಟ್ಟಾಗಿ ಹೋಗಿ, ಏಕಾಕಿಯಾಗಿರುವ ಅವನನ್ನು ಯುದ್ಧದಲ್ಲಿ ಕೊಂದುಬಿಡೋಣ ॥

ತೇನೈವ ಯದಿ ನೋ ಮೃತ್ಯುಃ ವೀರಧರ್ಮೋ ಹಿ ತಾದೃಶಃ ।
ಆಜ್ಞಾ ಮೇ ದೀಯತಾಂ ತಾತ ನರಮಾತ್ರಾನ್ನ ತೇ ಭಯಂ ॥೩೦॥
ಕುಮ್ಭಕರ್ಣೋಽಥ ಮೇಧಾವೀ ಬಲವಾ ನೀತಿಮಾನಪಿ ।
ಇಂದ್ರಜಿದ್ವಚನಂ ಶ್ರುತ್ವಾ ಪ್ರಹಸನ್ನಿದಮಬ್ರವೀತ್ ॥೩೧॥
ಯದುಕ್ತಂ ಮೇಘನಾದೇನ ತತ್ ಸತ್ಯಂ ವೀರಧರ್ಮಣಾ ।
ಹನಿಷ್ಯಾಮೀತಿ ಯದ್ವಾಕ್ಯಂ ತತ್ರ ತ್ವೇವಂ ವಿಚಾರಣಾ ॥೩೨॥
ಅಸಾಧ್ಯೋಯಂ ರಿಪುಸ್ತಾತ ತತ್ಕರ್ಮೈವ ಪ್ರವಕ್ತಿ ನಃ ।
ರಾಕ್ಷಸಾನ್ತಕರೋ ವೀರೋ ರಾಕ್ಷಸಾನಾಂ ನ ಜೀವನಮ್ ॥೩೩॥
ಯದಿ ಗಚ್ಛಾಮಹೇ ಸರ್ವೇ ಧೂರ್ತಯಾ ಚಲಿತಾವಯಮ್ ।
ಖರಾದೀನಾಂ ಗತಿರ್ನೂನಂ ಅಸ್ಮಾಕಂ ಸಂಭವಿಷ್ಯತಿ ॥೩೪॥

ಒಂದುವೇಳೆ ಅವನಿಂದಲೇ ನಮಗೆ ಮರಣ ಸಂಭವಿಸುವ ಪಕ್ಷದಲ್ಲಿ, ಅದು ವೀರರಿಗೆ ತಕ್ಕ ಧರ್ಮವೇ ಆಯ್ತು ತಾತ! ನನಗೆ ಅಪ್ಪಣೆಯಾಗಲಿ ಈ ಒಬ್ಬ ಮನುಷ್ಯಮಾತ್ರನಿಂದ ನೀನು ಹೀಗೆ ಭಯಪಡಬಾರದು (ಎಂದು ಇಂದ್ರಜಿತುವು ಹೇಳಿದನು) ॥೩೦॥

ಬೀಗೆ ಇಂದ್ರಜಿತುವು ಹೇಳಿದ ಬಳಿಕ, ಅವನ ಮಾತನ್ನು ಕೇಳಿ, ಮಹಾಮೇಧಾವಿಯೂ ಬಲವಂತನೂ ನೀತಿವಂತನೂ ಆದ ಕುಂಭಕರ್ಣನು, ಮಂದಹಾಸಪಾಡುತ ಈ ಮಾತನ್ನು ಹೇಳಿದನು ॥೩೧॥

ನಮ್ಮ ಬಾಲಕನಾದ ಮೇಘನಾದನು ಹೇಳಿದ ಮಾತು ಯಾವುದುಂಟೋ, ಅದು ಸತ್ಯವೇ ಆಹುದು, ವೀರಧರ್ಮಕ್ಕೆ ತಕ್ಕ ಮಾತನ್ನೇ ಅವನು ಹೇಳಿದನು ಆದರೆ, ರಾಮನನ್ನು ಕೊಂದುಬಿಡುವೆನೆಂದು ಅವನು ಹೇಳಿದ ಮಾತು ಯಾವುದುಂಟೋ, ಅದರಲ್ಲಿ ಹೀಗೆ ವಿಚಾರವುಂಟಾಗಿರುವುದು ॥೩೨॥

ಅಣ್ಣಾ! ಈಗ ನಿನಗೊದಗಿರುವ ಶತ್ರುವು ಸಾಮಾನ್ಯನಲ್ಲ, ಇವನು ಅತಿ ದುರ್ಜಯನೆಂಬುದನ್ನು ಇವನ ಕೆಲಸವೇ ನಮಗೆ ತಿಳಿಸುತಿರುವುದು ಈ ವೀರನು ರಾಕ್ಷಸರಿಗೆಲ್ಲ ನಾಶವನ್ನುಂಟುಮಾಡತಕ್ಕವನಾಗಿ, ಕಾಣಿಸುವನು ಇನ್ನು ಮುಂದೆ ರಾಕ್ಷಸರು ಜೀವಿಸುವುದು ದುರ್ಲಭವೆಂದು ತೋರುವುದು ॥೩೩॥

ಈ ಧೂರ್ತಳಾದ ಶೂರ್ಪಣಖಿಯ ಮಾತಿನಿಂದ ನಾವೆಲ್ಲರೂ ಭ್ರಾಂತರಾಗಿ ಅಲ್ಲಿಗೆ ಹೋದಪಕ್ಷದಲ್ಲಿ, ಖರ ಮುಂತಾದಪರಿಗೆ ಆಂಟಾದ ಗತಿಯೇ ನಮಗೂ ನಿಶ್ಚಯವಾಗಿ ಸಂಭವಿಸುವುದು ॥೩೪॥

ಸ್ವಸುಗುಣಾನ್ ವೆಯಂ ಸರ್ವೇ ಜಾನೀಮೋ ರಾಕ್ಷಸಾಧಿಪ ।
ತಸ್ಯಾವಮಾನಕರಣೇ ತೇನ ಸಾ ಶಿಕ್ಷಿತಾ ಭವೇತ್ ॥೩೫॥
ಕುಲಕ್ಷಯಕರಂ ಕಾರ್ಯಂ ಸಮುಪಸ್ಥಿತಮದ್ಯ ನಃ ।
ಏತನ್ನಿಮಿತ್ತಂ ನಾಸ್ಮಾಕಂ ದಂಡ್ಯಯಾತ್ರಾಪ್ರಕಲ್ಪನಮ್ ॥೩೬॥
ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೩೭॥
ವಯಂ ಸುಖೇನ ತಿಷ್ಠಾಮಃ ಕಾಲೋ ಹಿ ದುರತಿಕ್ರಮಃ ।
ವಿಪರೀತಇವಾಭಾತಿ ರಕ್ಷಸಾಂ ನಿಧನಾಯ ನಃ ॥೩೮॥
ಕಾಲಃ ಸಮ್ಮಾನದೋ ರಾಜನ್ ಕಾಲೋಽಸಮ್ಮಾನದಾಯಕಃ ।
ಕಾಲಃ ಕಲ್ಪತಿ ದಾತಾರಂ ತಮೇವಾನ್ಯತ್ರ ಯಾಚಕಮ್ ॥೩೯॥
ಕಾಲಃ ಕ್ರೀಡತಿ ಸರ್ವತ್ರ ವಿಷ್ಣುರೂಪೀ ಶಿವಃ ಸ್ವಯಮ್ ।
ಸರ್ವೋ ಹಿ ಕಾಲವಶಗೋ ವ್ಯರ್ಥಂ ತತ್ರ ವಿಕತ್ಥನಮ್ ॥೪೦॥

ಎಲೈ ರಾಕ್ಷಸರಾಜನೆ! ನಿನ್ನ ತಂಗಿಯ ಗುಣಗಳನ್ನು ನಾವೆಲ್ಲರೂ ಚೆನ್ನಾಗಿ ಅರಿತಿರುವೆವು ಇವಳು ಹೋಗಿ ಅವನಿಗ ಅವಮಾನಮಾಡಿ ಅದಕ್ಕಾಗಿ ಅವನಿಂದ ಹೀಗೆ ಶಿಕ್ಷಿಸಲ್ಪಟ್ಟಿರಬಹುದೆಂದು ತೋರುವುದು ॥೩೫॥

ಈಗ ನಮಗಲ್ಲರಿಗೂ ವಂಶಕ್ಷಯಕರವಾದ ಕಾರ್ಯವು ಪ್ರಾಪ್ತವಾಗಿರುವುದು ಇವಳೊಬ್ಬಳಿಗೋಸ್ಕರವಾಗಿ ನಾವು ಹೀಗೆ ಯುದ್ಧಕ್ಕೆ ಹೊರಡುವುದು ಸರಿಯಾಗಿ ತೋರುವುದಿಲ್ಲ ॥

ಲೋಕದಲ್ಲಿ ನೀತಿಯೂ ಹೀಗೆಯೇ ಇರುವುದಲ್ಲವೆ! ಒಂದು ಕುಲವು ಉದ್ಧಾರವಾಗುವುದಕ್ಕಾಗಿ ಒಬ್ಬನನ್ನು ಬಿಟ್ಟುಬಿಡಬೇಕು, ಒಂದು ಗ್ರಾಮಕ್ಕೋಸ್ಕರವಾಗಿ ಒಂದು ಕುಲವನ್ನೇ ಬಿಡಬೇಕು, ಒಂದು ದೇಶದ ಹಿತಕ್ಕಾಗಿ ಒಂದು ಗ್ರಾಮವನ್ನಾದರೂ ಬಿಡಬೇಕು ಆತ್ಮಲಾಭಾರ್ಥವಾಗಿ ಪ್ರಪಂಚವನ್ನೆಲ್ಲ ಬಿಟ್ಟುಬಿಡಬೇಕು ॥೩೭॥

ನಾವು ಈಗ ಸುಖವಾಗಿರುವೆವು ಆದರೆ, ಕಾಲವನ್ನು ಮೀರಲು ಯಾರಿಗೂ ಸಾಧ್ಯವಲ್ಲ ಈಗ ಆ ಕಾಲವು ನಮ್ಮ ರಾಕ್ಷಸರಿಗೆಲ್ಲ ಹಾನಿಯುಂಟುಮಾಡುವುದಕ್ಕೋಸ್ಕರ ವಿಪರೀತವಾಗಿರುವುದೆಂದು ತೋರುವುದು ॥೩೮॥

ಎಲೈರಾಜನೆ! ಲೋಕದಲ್ಲಿ ಪುರುಷರಿಗೆ ಕಾಲವೇ ಬಹುಮಾನವನ್ನು ಕೊಡತಕ್ಕುದು, ಅವಮಾನವನ್ನು ಕೊಡತಕ್ಕುದೂ ಕಾಲವೇಯೆ ಕಾಲವೇ ಒಬ್ಬ ಮನುಷ್ಯನನ್ನು ದಾತೃವನ್ನಾಗಿ ಮಾಡುವುದು, ಅವನನ್ನೇ ಮತ್ತೊಂದುಕಡೆಯಲ್ಲಿ ಯಾಚಕನನ್ನಾಗಿಯೂ ಮಾಡುವುದು ॥೩೯॥

ಈ ಕಾಲವೇ ಸರ್ವತ್ರ ವಿಷ್ಣುರೂಪವಾಗಿಯೂ ಶಿವರೂಪವಾಗಿಯೂ ತಾನು ಕ್ರೀಡಿಸುತ್ತಿ

ಆಯುಸ್ತೇ ನಿರ್ಮಿತಂ ರಾಜ್ಞ ಪಞ್ಚಾಶಲ್ಲಕ್ಷಸಮ್ಮಿತಮ್ ।
ತ್ರೇತಾಸ್ತೇ ಧರ್ಮಸಮಯೇ ಕಾಲೋಸ್ಮಾಕಂ ಮಹೋನ್ನತಃ ॥೪೧॥
ತ್ರಿಲೋಕವಿಜಯೀ ಚಾಸಿ ಧರ್ಷಿತಾದೇವತಾಸ್ತ್ರಿಯಃ ।
ಅನುಭೂತಂ ತಥೈಶ್ವರ್ಯಂ ಅಸ್ಮಾಭಿರತುಲಂ ಭುವಿ ।
ಸರ್ವತ್ರ ಸಾರಮಾನೀತಂ ಭಗ್ನಾಲೋಕಾಶ್ಚತುರ್ದಶ ॥೪೨॥
ಸಏವ ವಿಪರೀತೋಭೂತ್ ಕಾಲೋಸ್ಮಾಕಂ ನ ಸಂಶಯಃ ॥೪೩॥
ದಿನತ್ರಯಂ ಸಮಾರಭ್ಯ ನಿಮಿತ್ತಾನ್ಯಶುಭಾನಿ ನಃ ।
ಲಂಕಾಪುರೀಮಧ್ಯದೇಶೇ ದೃಶ್ಯನ್ತೇ ತತ್ರತತ್ರ ಚ ॥೪೪॥
ಯದಿ ರಾಮಃ ಸ್ವಯಂ ಪ್ರಾಪ್ತೋ ಜಯಾರ್ಥಂ ಸರ್ವರಕ್ಷಸಾಮ್ ।
ತದಾ ನಃ ಸಮಯಃ ಪ್ರಾಪ್ತೋ ದರ್ಶಯೇತ್ ಸ್ವಬಲಂ ರಿಪೌ ॥೪೫॥
ತದಾ ಜಯೋ ವಾ ಮೃತ್ಯುರ್ವಾ ಭೂಪಞಾಯ ಭವತ್ಯಲಮ್ ।
ಐಹಿಕಾಮುಷ್ಮಿಕಪ್ರಾಪ್ತಿಃ ಉಭಾಭ್ಯಾಂ ಭವತಿ ಧ್ರುವಮ್ ॥೪೬॥

ರುವುದು ಮುಖ್ಯವಾಗಿ ಸರ್ವರೂ ಕಾಲಕ್ಕೆ ಅಧೀನರಾಗಿರುವರು, ಇದರ ವಿಷಯದಲ್ಲಿ ಹಚ್ಚಾಗಿ ಪೇಚಾಡುವುದು ಸುತರಾಂ ವ್ಯರ್ಥವು ॥೪೦॥

ಎಲೈ ರಾಕ್ಷಸರಾಜನ! ನಿನಗೆ ಅಯ್ವತ್ತುಲಕ್ಷವರ್ಷ ಆಯುಸ್ಸು ದೇವಕಲ್ಪಿತವಾಗಿರುವುದು ನಮಗೆ ಈಗ ಕೇವಲಧರ್ಮಕ್ಕೆ ಸಮಯವಾಗಿರುವ ಈ ತ್ರೇತಾಯುಗದ ಕೊನೆಯಲ್ಲಿ ಕಾಲವು ಅತ್ಯುನ್ನತಸ್ಥಿತಿಗೆ ಬಂದಿರುವುದು ॥೪೧॥

ನೀನು ಮೂರುಲೋಕಗಳನ್ನೂ ಗೆದ್ದವನಾದೆ, ದೇವತೆಗಳ ಸ್ತ್ರೀಯರನ್ನೆಲ್ಲ ಹಿಂಸೆಪಡಿಸಿದೆ, ನಿನ್ನ ಮಹಿಮೆಯಿಂದ ನಾವು ಇದುವರೆಗೂ ಈ ಲೋಕದಲ್ಲಿ ಅಸದೃಶವಾದ ಐಶ್ವರ್ಯವನ್ನು ಅನುಭವಿಸಿಕೊಂಡಿದ್ದೆವು ಯಾವಯಾವ ಲೋಕದಲ್ಲಿ ಯಾವಯಾವುದು ಸಾರಭೂತವಾದುದೋ, ಅದದನ್ನೆಲ್ಲ ನೀನು ಇಲ್ಲಿಗೆ ತಂದವನಾದೆ, ಚತುರ್ದಶಭುವನಗಳನ್ನೂ ಭಂಗಪಡಿಸಿದೆ ಯಾವ ಕಾಲದ ಮಹಿಮೆಯಿಂದ ಇಷ್ಟೆಲ್ಲವೋ ಆಯ್ತೋ, ಆ ಕಾಲವೇ ಈಗ ನಮಗೆ ವಿಪರೀತವಾಗಿ ಪರಿಣಮಿಸಿರುವುದು, ಇದರಲ್ಲಿ ಸಂಶಯವಿಲ್ಲ ॥೪೨-೪೩॥

ಈಗ ಮೂರುದಿನದಿಂದಲೂ ಈ ಲಂಕಾಪಟ್ಟಣದ ಮಧ್ಯದೊಳಗೆ ಅಲ್ಲಲ್ಲಿ ನಮಗೆ ಅನೇಕವಾಗಿ ಅಪಶಕುನಗಳು ಕಾಣಿಸುತಿರುವುವು ॥೪೪॥

ರಾಮನೇ ಸಾಕ್ಷಾತ್ತಾಗಿ ಸಮಸ್ತರಾಕ್ಷಸರನ್ನೂ ಗೆಲ್ಲುವುದಕ್ಕೋಸ್ಕರ ಬಂದಿರುವ ಪಕ್ಷದಲ್ಲಿ, ನಮಗೆ ಸರಿಯಾದ ಕಾಲವು ಪ್ರಾಪ್ತವಾಯ್ತೆಂದೇ ತಿಳಿಯಬೇಕು ಶತ್ರುವಿನಲ್ಲಿ ತನ್ನ ಬಲವನ್ನು ತೋರಿಸಬೇಕೆಂಬುದು ಸರ್ವರಿಗೂ ಸಮಾನವಾಗಿಯೇ ಇರುವುದು ॥೪೫॥

ಹಾಗೆ ರಾಮನೇ ಬಂದಿರುವನಾದರೆ, ಆಗ ನಾವು ಗೆದ್ದರೂ, ಅಥವಾ ಸತ್ತರೂ, ನಮಗೆ ಏತೇಷ ಭೂಷಣವೇಸರಿ ಇವೆರಡರಲ್ಲಿ ಯಾವುದಾದರೂ ನಮಗೆ ಹಾನಿಯಿಲ್ಲ, ಅವನನ್ನು

ನಾವಮಾನಃ ಪ್ರಯೋಕ್ತವ್ಯೋ ಮಾನುಷಾವಿತಿ ರಾಕ್ಷಸ ।
ನ ಮಾನುಷಗತೀ ವೀರೌ ಸ್ವಸುರ್ವಾಕ್ಯಂ ನಿಬೋಧಯ ॥೪೩॥
ಏಕವಿವ ಧನುಷ್ಪಾಣಿಃ ಅಲಂ ರಾಕ್ಷಸಮರ್ದನೇ ।
ಸಹಾಯಶ್ಚೈದನಾಯಾಸಂ ನಿಸ್ಸಹಾಯಃ ಸ್ವಯಂ ಪ್ರಭುಃ ॥೪೪॥
ಶೃಣು ರಾವಣ ತತ್ತ್ವೇನ ನಾರದಾದ್ಯಚ್ಛ್ರುತಂ ಮಯಾ ।
ತತ್ ತೇಽಹಂ ಶ್ರಾವಯಿಷ್ಯಾಮಿ ಸಭಾಯಾಂ ಸಹ [illegible]ನ್ಧುಭಿಃ ॥೪೫॥
ತ್ವಯಾ ಸಂಪೀಡಿತಾದೇವಾಃ ವಿಷ್ಣುರುದ್ರಸಮನ್ವಿತಾಃ ।
ಏಕದಾ ರಹಸಿ ಸ್ಥಿತ್ವಾ ವಿಚಾರಂ ಚಕ್ರಿರೇ ಕಿಲ ॥೪೬॥
ಕೃತ್ವಾ ವಿಚಾರಂ ತೇನ್ಯೋನ್ಯಂ ನಿಶ್ಚಯಂ ನಾಧಿಜಗ್ಮಿರೇ ।
ತಸ್ಮಿನ್ನವಸರೇ ದಿವ್ಯಾ ವಾಗಭೂದಶರೀರಿಣೀ ।
ರಾವಣಃ ಶಿವವಿಷ್ಣುಭ್ಯಾಂ ಹನ್ತವ್ಯಇತಿ ನಾನ್ಯಥಾ ॥೪೮॥

ಗೆದ್ದರೆ ಐಹಿಕಫಲಲಾಭವಾಗುವುದು, ಅವನಿಂದ ನಾವು ಸತ್ತರೆ ಪರಲೋಕ ಫಲಪ್ರಾಪ್ತಿಯೂ ಆಗುವುದು ಇದರಲ್ಲಿ ಸಂಶಯವಿಲ್ಲ ॥೪೭॥

ಎಲೈ ರಾಕ್ಷಸಶ್ರೇಷ್ಠನೆ! ಈ ರಾಮಲಕ್ಷ್ಮಣರು ಮನುಷ್ಯಮಾತ್ರರೆಂದು ತಿರಸ್ಕರಿಸುವುದು ಯುಕ್ತವಲ್ಲ ಇವರು ಸಾಮಾನ್ಯಮನುಷ್ಯರ ನಡತೆಯುಳ್ಳವರಲ್ಲ ನಿನ್ನ ತಂಗಿಯು ಹೇಳಿದ ಮಾತನ್ನು ಇನ್ನೊಂದುಸಲ ಚನ್ನಾಗಿ ಪರ್ಯಾಲೋಚಿಸು ॥೪೭॥

ಆ ರಾಮನೊಬ್ಬನೇ ಧನುರ್ಧಾರಿಯಾಗಿ ಸಮಸ್ತ ರಾಕ್ಷಸರನ್ನೂ ಕೊಲ್ಲಬಲ್ಲವನಾಗಿರುವನು ಅವನಿಗೆ ಲಕ್ಷ್ಮಣನ ಸಹಾಯವೂ ಇದ್ದುಬಿಟ್ಟರೆ, ಸ್ವಲ್ಪವೂ ಆಯಾಸವಿಲ್ಲದೆಯೇ ಈ ಕೆಲಸವನ್ನು ಮಾಡಿಬಿಡುವನು ವಸ್ತುತಃ ಅವನು ಸಹಾಯಶೂನ್ಯನಾಗಿಯೇ ಸ್ವಯಂ ಸಮರ್ಥನಾದವನು ॥೪೮॥

ರಾವಣ! ಈಗ ತತ್ವಾರ್ಥವನ್ನು ಕೇಳುವನಾಗು ನಾನು ನಾರದರ ಮುಖದಿಂದ ಯಾವ ವಿಷಯವನ್ನು ಕೇಳಿರುವೆನೋ, ಅದನ್ನು ಈಗ ಸಭೆಯಲ್ಲಿ ಬಂಧುಗಳೊಡಗೂಡಿರುವ ನಿನಗೆ ಹೇಳುವೆನು ॥೪೯॥

ನಿನ್ನಿಂದ ಪೀಡಿತರಾದ ಸಮಸ್ತದೇವತೆಗಳೂ, ಒಂದು ಸಮಯದಲ್ಲಿ ವಿಷ್ಣುರುದ್ರರೊಡನೆ ರಹಸ್ಯದಲ್ಲಿ ಸೇರಿದವರಾಗಿ, ವಿಚಾರವನ್ನು ಮಾಡಿದರಂತೆ! ॥೫೦॥

ಆಗ ಅವರು ಪರಸ್ಪರ ವಿಚಾರಮಾಡಿ ಯಾವುದೊಂದು ನಿರ್ಣಯವನ್ನೂ ಕಾಣಲಿಲ್ಲ ' ಆ ಸಮಯದಲ್ಲಿ ' ರಾವಣನನ್ನು ಶಿವ ವಿಷ್ಣುಗಳಿಬ್ಬರೂ ಸೇರಿ ಕೊಲ್ಲಬೇಕಾಗಿರುವುದು, ಅನ್ಯಥಾ ಆಗಲಾರದು ' ಎಂದು ಅಶರೀರವಾಕ್ಕು ಉದಯಿಸಿತು ॥೫೧॥

ಅಶರೀರವಚಃ ಶ್ರುತ್ವಾ ಪ್ರಹಸ್ಯ ಹರಿಶಙ್ಕರೌ ।
ತಥೈವ ಚಕ್ರತುರಾಜ್ಞಾ ರಾವೋ ಹರಿಹರಾತ್ಮಕಃ ॥೫೮॥
ಪರಬ್ರಹ್ಮಸ್ವರೂಪೋಯಂ ಪ್ರಾಕೃತೋ ನ ಹಿ ಮಾನುಷಃ ॥೫೯॥
ಶಿವರೂಪೇಣ ಸಂಹಾರಂ ವಿಷ್ಣುರೂಪೇಣ ಪಾಲನಮ್ ।
ಶಿವವಿಷ್ಣುಸ್ವರೂಪತ್ವಾತ್ ಪರಬ್ರಹ್ಮೈವ ಕೇವಲಮ್ ॥೫೯॥
ದೇವಕಲ್ಪಿತಮಾರ್ಗೇಣ ಪಿತುರಾಜ್ಞಾಮಿಷೇಣ ಸಃ ।
ದುಷ್ಟದಾನವಶಿಕ್ಷಾರ್ಥಂ ವನಂ ಯಾತೋ ಮಹೇಶ್ವರಃ ॥೫೫॥
ಇತೀದಂ ನಾರದಾನ್ಮಾರ್ಜ ವಾಸಚಿನ್ಮಯಾ ಶ್ರುತಮ್ ।
ಮಯೋಕ್ತಂ ಕುಲರಕ್ಷಾರ್ಥಂ ನ ಭೀತ್ಯಾ ನ ಚ ಮತ್ಸರಾತ್ ॥೫೬॥

ಇತಿ ಶ್ರೀಮದರಣ್ಯ ಕಾಣ್ಡೇ ಕುಮ್ಭಕರ್ಣನೀತಿಕಥನಂ ನಾಮ
ಏಕಾದಶಃ ಸರ್ಗಃ




ಈ ಆಶರೀರವಾಕ್ಯನ್ನು ಕೇಳಿ, ಹರಿಹರರಿಬ್ಬರೂ ಮಂದಹಾಸಮಾಡಿ, ಅದರಂತೆಯೇ ಅವತಾರಮಾಡಿರುವರು ಅಯ್ಯಾ ರಾಜನೆ ! ಹೀಗೆ ರಾಮನು ಹರಿಹರಾತ್ಮಕನಾಗಿರುವನು , ಇವನು ಸಾಕ್ಷಾತ್ ಪರಬ್ರಹ್ಮಸ್ವರೂಪನು ಇವನನ್ನು ಪ್ರಾಕೃತನಾದ ಮನುಷ್ಯನೆಂದು ತಿಳಿಯಬೇಡ ||

ಇವನು, ಶಿವರೂಪದಿಂದ ಸಂಹಾರವನ್ನೂ ವಿಷ್ಣುರೂಪದಿಂದ ರಕ್ಷಣೆಯನ್ನೂ ಮಾಡುವನು ಹೀಗೆ ಶಿವ ವಿಷ್ಣುಸ್ವರೂಪನಾಗಿರುವುದರಿಂದ, ಇವನು ಕೇವಲವಾದ ಪರಬ್ರಹ್ಮಪದಾರ್ಥವೇಯೆ ||೫೪||

ಈಗ ಆ ಪರಮೇಶ್ವರನು, ದೇವತೆಗಳಿಂದ ಕಲ್ಪಿತವಾದ ಮಾರ್ಗವನ್ನನುಸರಿಸಿ, ತಂದೆಯ ಆಜ್ಞೆಯೆಂಬ ವ್ಯಾಜವನ್ನು ಮಾಡಿಕೊಂಡು, ದುಷ್ಟರಾದ ರಾಕ್ಷಸರನ್ನು ಶಿಕ್ಷಿಸುವುದಕ್ಕೋಸ್ಕರ ಅರಣ್ಯಕ್ಕೆ ಬಂದಿರುವನು ||೫೫||

ಎಲೈ ರಾಕ್ಷಸೇಶ್ವರನೆ! ಇದೋ ಈರೀತಿಯಾಗಿ ನಾರದರು ಒಂದುತಿಂಗಳ ಹಿಂದೆಯೇ ನನಗೆ ಹೇಳಿದ್ದರು ಅವರ ಮುಖದಿಂದ ಕೇಳಿದ್ದ ಮಾತನ್ನು, ಈಗ ನಾನು ನಮ್ಮ ವಂಶವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ನಿನ್ನ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡಿರುವೆನು ಭಯದಿಂದಲಾಗಲಿ ಜ್ಞಾತಿ ಮತ್ಸರದಿಂದಲಾಗಲಿ ಈ ಮಾತನ್ನು ಹೇಳಿದೆನೆಂದು ತಿಳಿಯಬಾರದು ||೫೬||

ಇದು ಅರಣ್ಯಕಾಂಡದಲ್ಲಿ ಕುಂಭಕರ್ಣನೀತಿಕಥನವೆಂಬ
ಹನ್ನೊಂದನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ದ್ವಾದಶಃ ಸರ್ಗಃ.

ಶ್ರೀಶಿವಉವಾಚ.

ಕುಮ್ಭಕರ್ಣವಚಃ ಶ್ರುತ್ವಾ ರಾವಣಸ್ಯ ಸಭಾಸದಃ ।
ಅನುಮೋದಂ ಪ್ರಕುರ್ವನ್ತೋ ಮೇನಿರೇ ಬುದ್ಧಿಮತ್ತರಮ್ ॥೧॥
ನಿಶಮ್ಯ ವಚನಂ ತಸ್ಯ ಕುಮ್ಭಕರ್ಣಸ್ಯ ಧೀಮತಃ ।
ರಾವಣಃ ಸುಖಮೇಕಾನ್ತೇ ಮನಸ್ಯೇವಮಚಿನ್ತಯತ್ ॥೨॥
ಅಯುರ್ಗತಂ ಮಮಾತ್ಯನ್ತಂ ಪಞ್ಚಾಶಲ್ಲಕ್ಷಸಮ್ಮಿತಮ್ ।
ವೃದ್ಧಭಾವಮನುಪ್ರಾಪ್ತಃ ಪರಲೋಕೋ ನ ಚಿನ್ತಿತಃ ॥೩॥
ನ ಹ್ಯಸ್ಮಾಕಂ ಪರೋ ಧರ್ಮೋ ಧರ್ಮಮಾತ್ರವಿಲೋಪಿನಾಮ್ ।
ಶಿವಾರ್ಚನಫಲಂ ನಷ್ಟಂ ಮಮ ದುಷ್ಕರ್ಮಸಙ್ಗ್ರಹಾತ್ ॥೪॥
ಪರಸ್ತ್ರೀಧರ್ಷಣೋದ್ಭೂತಂ ಪಾತಿವ್ರತ್ಯವಿನಾಶನಮ್ ।
ಮುನೀನಾಮಗ್ನಿಹೋತ್ರಾಣಾಂ ಅಶ್ರಮಾಣಾಂ ಚ ಹಿಂಸನಮ್ ॥೫॥

ಅರಣ್ಯಕಾಂಡದಲ್ಲಿ ಹನ್ನೆರಡನೆಯ ಸರ್ಗವು

ಶ್ರೀಪರಮೇಶ್ವರನು ಪಾರ್ವತಿಯನ್ನುಕುರಿತು ಹೇಳುವನು—

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಹೇಳಿದ ಕುಂಭಕರ್ಣನ ಮಾತನ್ನು ಕೇಳಿ, ರಾವಣನ ಸಭಾಸ್ತಾರರೆಲ್ಲರೂ ಅವನ ಮಾತನ್ನು ಅನುಮೋದಿಸುತ, ಅವನನ್ನು ಮಹಾಬುದ್ಧಿಶಾಲಿಯೆಂದು ತಿಳಿದುಕೊಂಡರು ॥೧॥

ಆಗ ಮಹಾಬುದ್ಧಿವಂತನಾದ ಕುಂಭಕರ್ಣನ ಮಾತನ್ನು ಕೇಳಿ, ರಾವಣನು ಸುಖವಾಗಿ ರಹಸ್ಯದಲ್ಲಿ ತನ್ನ ಮನಸ್ಸಿನೊಳಗೆ ಹೀಗೆ ಆಲೋಚನೆಮಾಡಿದನು ॥೨॥

ನನಗೆ ಈಗ ಆಯ್ವತ್ತುಲಕ್ಷವರ್ಷ ಆಯುಸ್ಸು ಸಂಪೂರ್ಣವಾಗಿ ಕಳದುಹೋಯ್ತು ಕೇವಲ ವಾರ್ಧಕ್ಯವನ್ನು ಹೊಂದಿಬಿಟ್ಟಿನು ಇಷ್ಟಾದರೂ, ನಾನು ಇದುವರೆಗೂ ಪರಲೋಕವಿಷಯವನ್ನು ಸ್ವಲ್ಪವೂ ಆಲೋಚಿಸಲಿಲ್ಲ ॥೩॥

ಸಾಮಾನ್ಯವಾಗಿ ಲೋಕದಲ್ಲಿ ನಡೆಯುವ ಧರ್ಮಗಳನ್ನೆಲ್ಲ ಲೋಪಪಡಿಸತಕ್ಕ ನಮ್ಮಗಳಿಗೆ ಮತ್ತಾವುದೊಂದು ಧರ್ಮವೂ ಇಲ್ಲವೇಇಲ್ಲ ಶಿವಪೂಜೆಯೊಂದು ಮಾತ್ರ ನಮ್ಮಲ್ಲಿರುವುದು ಅದರ ಫಲವೂಕೂಡ, ಈಗ ವಿಶೇಷವಾಗಿ ದುಷ್ಕರ್ಮಗಳನ್ನು ಸಂಗ್ರಹಿಸಿರುವಕಾರಣ ನನಗೆ ನಷ್ಟವಾಗಿಬಿಟ್ಟಿತು ॥೪॥

ಪರಸ್ತ್ರೀಯರನ್ನು ಬಲಾತ್ಕರಿಸಿದುದರಿಂದ ಪಾತಿವ್ರತ್ಯಭಂಗದೋಷವು ಸಂಭವಿಸಿತು ಮುನಿ

ಏವಮಾದೀನ್ಯನೇಕಾನಿ ಪ್ರತ್ಯೇಕಂ ಮೇ ಕೃತಾನಿ ಚ ।
ಕಥಂ ಮೇ ಭವಿತಾ ಮುಕ್ತಿಃ ತತ್ರ ಮೇ ಪ್ರವಿಚಾರಣಾ ॥೬॥
ವೃಥಾ ಚಾಯುರ್ವೃಥಾ ಪ್ರಾಣಾಃ ಕಿಂ ಬಲೇನ ಕಿಮೌಜಸಾ ।
ಕಿಮೈಶ್ವರ್ಯೇಣ ವೀರ್ಯೇಣ ತ್ರಿಲೋಕವಿಜಯೇನ ವಾ ॥೭॥
ಪುತ್ರೈಃ ಪೌತ್ರೈಃ ಪ್ರಪೌತ್ರೈಶ್ಚ ಜ್ಞಾತಿಭಿರ್ಬನ್ಧುಭಿಸ್ತಥಾ ।
ನ ಜ್ಞಾನಂ ನ ಚ ಕೈವಲ್ಯಂ ಬನ್ಧಾಯೈವ ಹಿ ಕೇವಲಮ್ ॥೮॥
ಯದ್ಬ್ರಹ್ಮತ್ಮೈಕ್ಯವಿಜ್ಞಾನಾತ್ ಮೋಕ್ಷೋ ಭವತಿ ಕೇವಲಃ ।
ಕಾಶ್ಯಾಂ ತು ಮರಣಾದೇವ ಯುದ್ಧೇವಾಭಿಮುಖಾಹತೇಃ ॥೯॥
ಬ್ರಹ್ಮಜ್ಞಾನಂ ನ ಲಭ್ಯಂ ಮೇ ವೈರಾಗ್ಯಂ ನಾಸ್ತಿ ಮೇ ಯತಃ ।
ಕಾಶ್ಯಾಮಪಿ ನ ಮೇ ಮೃತ್ಯುಃ ಪಾಪರಾಶೇರ್ದುರಾತ್ಮನಃ ॥೧೦॥

ಗಳ ಅಗ್ನಿಹೋತ್ರಗಳನ್ನೂ ಆಶ್ರಮಗಳನ್ನೂ ನಾನು ಬಹಳವಾಗಿ ಹಾಳುಮಾಡಿರುವೆನು ॥೫॥

ಇವೇ ಮೊದಲಾದ ಅಸಂಖ್ಯಾಕರಾಗಿರುವ ದುಷ್ಕರ್ಮಗಳು, ಪ್ರತಿಯೊಂದೂ ಅನೇಕಾವೃತ್ತಿ ನನ್ನಿಂದ ಮಾಡಲ್ಪಟ್ಟಿರುವುವು ಹೀಗಿರುವಾಗ ನನಗೆ ಮುಕ್ತಿ ಹೇಗೆ ಉಂಟಾದೀತು? ಈ ವಿಷಯದಲ್ಲಿಯೇ ನನಗಿಷ್ಟು ವಿಚಾರವುಂಟಾಗಿರುವುದು ॥೬॥

ಈಗ ನನಗೆ ಆಯುಸ್ಸೂ ವ್ಯರ್ಥವಾಗಿ ತೋರುವುದು, ಪ್ರಾಣಗಳೂ ವ್ಯರ್ಥವಾಗಿ ತೋರುವುವು ನನ್ನ ಬಲದಿಂದ ಪ್ರಯೋಜನವೇನು? ತೇಜಸ್ಸಿನಿಂದ ತಾನೆ ಫಲವೇನು? ಈ ಐಶ್ವರ್ಯದಿಂದಲಾಗಲಿ-ವೀರ್ಯದಿಂದಲಾಗಲಿ-ಲೋಕತ್ರಯಗಳನ್ನೂ ಜಯಿಸುವುದರಿಂದಲಾಗಲಿ ಏನು ಪ್ರಯೋಜನವು? ಹಾಗೆಯೇ, ಪುತ್ರರಿಂದಲೂ ಪೌತ್ರರಿಂದಲೂ ಪ್ರಪೌತ್ರದಿಂದಲೂ ಜ್ಞಾತಿಗಳೆಂದಲೂ ಬಂಧುಗಳೆಂದಲೂ ಏನು ಫಲವು? ಇದೊಂದರಿಂದಲೂ ಜ್ಞಾನವೂ ಹುಟ್ಟುವುದಿಲ್ಲ, ಮೋಕ್ಷವೂ ಸಿಕ್ಕುವುದಿಲ್ಲ ಇವೆಲ್ಲವೂ ಕೇವಲಬಂಧವನ್ನು ಮಾತ್ರವೇ ಕೊಡತಕ್ಕುವುಗಳಾಗಿರುವುವು ॥೭-೮॥

ಏತಕ್ಕೆಂದರೆ,-ಬ್ರಹ್ಮನಿಗೂ ಆತ್ಮನಿಗೂ ಐಕ್ಯಜ್ಞಾನವುಂಟಾದರೆ ಮೋಕ್ಷವು ಲಭಿಸುವುದು, ಅಥವಾ, ಕಾಶಿಯಲ್ಲಿ ಮರಣಮಾತ್ರದಿಂದಲೇ ಮುಕ್ತಿಯಾಗುವುದು, ಇದೂ ಇಲ್ಲದಿದ್ದರೆ, ಯುದ್ಧದಲ್ಲಿ ಅಭಿಮುಖನಾಗಿ ಮರಣಹೊಂದಿದರೆ ಆಗ ಮೋಕ್ಷವು ಲಭಿಸುವುದು ಇವು ಮೂರೇ ಮೋಕ್ಷಕ್ಕೆ ಮಾರ್ಗಗಳು ॥೯॥

ನನಗಾದರೋ, ಸುತರಾಂ ವೈರಾಗ್ಯವಿಲ್ಲದಿರುವಕಾರಣ ಬ್ರಹ್ಮಜ್ಞಾನವು ದುರ್ಲಭವಾಗಿರುವುದು. ಕೇವಲ ಪಾಪರಾಶಿಸ್ವರೂಪನಾಗಿರುವ ದುರಾತ್ಮನಾದ ನನಗೆ ಕಾಶಿಯಲ್ಲಿ ಮರಣವೂ ಸಂಭವಿಸುವುದಿಲ್ಲ ॥೧೦॥

ಯುದ್ಧೇ ರಾಮಹೃತಪ್ರಾಣೋ ಮೋಕ್ಷಂ ಪ್ರಾಪ್ಸ್ಯಾಮಿ ಸನ್ಮತಮ್ ।
ವಿನಾಪರಾಧಂ ಧರ್ಮಾತ್ಮಾ ರಾಮೋ ಮಾಂ ನ ಹನಿಷ್ಯತಿ ॥೧೧॥
ತದಹಂ ಕಿಲ್ಬಿಷಂ ಕೃತ್ವಾ ರಾಮೇಣ ನಿಹತಃ ಶರೈಃ ।
ಸರ್ವಪಾಪವಿಮುಕ್ತಾತ್ಮಾ ಮುಕ್ತಿಂ ಪ್ರಾಪ್ಸ್ಯಾಮಿ ದುರ್ಲಭಾಮ್ ॥೧೨॥
ಖರಾದಿಭಿಃ ಕೃತಂ ಕಿಂ ನು ಸುಕೃತಂ ಪೂರ್ವಜನ್ಮನಿ ।
ವಿಶ್ವರೂಪಂ ದೃಷ್ಟವನ್ತೋ ರಾಮಾತ್ಮಕತಯಾ ಜಗತ್ ॥೧೩॥
ವಿಶ್ವರೂಪಧರಂ ರಾಮಂ ಪಶ್ಯಾಮಿ ರಣಮೂರ್ಧನಿ ।
ಹತಪಾಪೋ ಭವಿಷ್ಯಾಮಿ ವಿನಾ ತೇನ ನ ತತ್ಕ್ಷಯಃ ॥೧೪॥
ಇತಿ ಸಂಚಿನ್ತ್ಯ ಮನಸಾ ರಾವಣಃ ಕಾಲಚೋದಿತಃ ।
ಸಹಾಯಂ ಪರಮಂ ಮೇನೇ ಮಾರೀಚಂ ಸ್ವಾರ್ಥಸಾಧನೇ ॥೧೫॥
ವಿಚಿನ್ತ್ಯೈವಂ ನಿಶಾಯಾಂ ಸಃ ಪ್ರಭಾತೇ ರಥಮಾಸ್ಥಿತಃ ।
ಯಯೌ ಮಾರೀಚಸದನಂ ಪರಂ ತೀರಮುದನ್ವತಃ ॥೧೬॥

ಅಂತು, ನನಗೆ ಯುದ್ದದಲ್ಲಿ ಮರಣವೆಂಬ ಮಾರ್ಗವೊಂದೇ ಅವಶಿಷ್ಟವಾಗಿರುವುದು. ಅದುಕಾರಣ, ನಾನು ಈಗ ಶ್ರೀರಾಮನಿಂದ ಕೊಲ್ಲಲ್ಪಟ್ಟು, ಸತ್ಪುರುಷರುಗಳಲ್ಲ ಅಭಿಮತವಾದ ಮೋಕ್ಷವನ್ನು ಪಡೆಯುವನು ಕೇವಲ ಧರ್ಮನಿಷ್ಠನಾಗಿರುವ ಶ್ರೀರಾಮನಾದರೋ, ಅಪರಾಧ ವಿಲ್ಲದೆ ನನ್ನನ್ನು ಕೊಲ್ಲುವುದಿಲ್ಲ ॥೧೧॥

ಅದುಕಾರಣ, ಈಗ ನಾನು ರಾಮನಲ್ಲಿ ಅಪರಾಧಮಾಡಿ, ಅವನ ಬಾಣಗಳಿಂದ ಕೊಲ್ಲ ಲ್ಪಟ್ಟವನಾಗಿ, ಸರ್ವಪಾಪಗಳಿಂದಲೂ ವಿಮುಕ್ತನಾಗಿ, ಅತಿ ದುರ್ಲಭವಾದ ಮೋಕ್ಷವನ್ನು ಪಡೆಯುವೆನು ॥೧೨॥

ಖರದೂಷಣಾದಿಗಳಿಂದ ಪೂರ್ವಜನ್ಮದಲ್ಲಿ ಯಾವ ಸುಕೃತವು ಮಾಡಲ್ಪಟ್ಟಿತೋ ನಾನರಿ ಯೆನು! ಅವರು ದಂಡಕಾರಣ್ಯದಲ್ಲಿ ವಿಶ್ವರೂಪವನ್ನು ಕಂಡರಲ್ಲ! ಸಮಸ್ತಜಗತ್ತೂ ರಾಮರೂಪ ವಾಗಿರುವಂತ ಅವರಿಗೆ ಗೋಚರವಾಯ್ತಲ್ಲ! ॥೧೩॥

ನಾನು ಯುದ್ಧರಂಗದಲ್ಲಿ ವಿಶ್ವರೂಪಧರನಾದ ಶ್ರೀರಾಮನನ್ನು ನೋಡುವೆನಾದ ಪಕ್ಷ ದಲ್ಲಿ, ಆಗ ಪಾಪರಹಿತನಾಗುವೆನು. ಅದಿಲ್ಲದೆ ನನ್ನ ಪಾಪಕ್ಷಯವಾಗುವುದಿಲ್ಲ ॥೧೪॥

ಈರೀತಿಯಾಗಿ ಕಾಲದಿಂದ ಪ್ರೇರಿತನಾದ ರಾವಣನು ತನ್ನ ಮನಸ್ಸಿನಲ್ಲಿ ಪರ್ಯಾಲೋಚಿಸಿ, ತನ್ನ ಇಷ್ಟಾರ್ಥವನ್ನು ಸಾಧಿಸುವುದರಲ್ಲಿ ಮಾರೀಚನು ಸರಿಯಾದ ಸಹಾಯವೆಂದು ನಿಶ್ಚಯಿಸಿ ಕೊಂಡನು ॥೧೫॥

ಹೀಗೆ ರಾತ್ರಿಯಲ್ಲಿ ನಿಶ್ಚಯಿಸಿಕೊಂಡು, ಆ ರಾವಣನು ಬೆಳಗ್ಗೆ ರಥವನ್ನು ಹತ್ತಿ, ಸಮುದ್ರದ ಆಚೆಯ ದಡದಲ್ಲಿದ್ದ ಮಾರೀಚನ ಆಶ್ರಮಕ್ಕೆ ಹೋದನು ॥೧೬॥

ಮಾರೀಚಸ್ಯ ಗೃಹಂ ಗತ್ವಾ ಕಾರ್ಯಾರ್ಥೀ ರಾವಣಃ ಸ್ವಯಮ್ ।
ಅತಿಥ್ಯಂ ಪ್ರಾಪ್ಯ ಮಾರೀಚಂ ಇದಂ ವಚನಮಬ್ರವೀತ್ ॥೧೬॥
ಮಾರೀಚ ಶ್ರೂಯತಾಂ ತಾತ ವಚನಂ ಮಮ ಭಾಷತಃ.
ಜಾನೀಷೇ ತ್ವಂ ಜನಸ್ಥಾನಂ ಭ್ರಾತಾ ಯತ್ರ ಖರೋ ಮಮ ॥೧೯॥
ಅನ್ಯೇ ಚ ಬಹವಃ ಶೂರಾಃ ಮತ್ತುಲ್ಯಬಲಶಾಲಿನಃ ।
ತತ್ರ ಸ್ಥಿತಾಸ್ತು ಮೇ ಸರ್ವೇ ರಾಮೇಣಂ ನಿಹತಾವೃಥಾ ॥೧೯॥
ಯೇನ ವೈರಂ ವಿನಾರಣ್ಯೇ ಸತ್ವಮಾಶ್ರಿತ್ಯ ಕೇವಲಮ್ ।
ಕರ್ಣನಾಸಾಪಹರಣಾತ್ ಭಗಿನೀ ಮೇ ವಿರೂಪಿತಾ ॥೨೦॥
ರಾಮಾಶ್ರಮಂ ಗನ್ತುಕಾಮಃ ಸೀತಾನಯನಕಾಂಕ್ಷಯಾ ।
ಸಾಹಾಯ್ಯಂ ಕುರು ಮೇ ತತ್ರ ಯೇನ ಸಾ ವಶಮೇಷ್ಯತಿ ॥೨೧।
ಶೃಣು ತತ್ ಕರ್ಮ ಸಾಹಾಯ್ಯೇ ಯತ್ ಕಾರ್ಯಂ ವಚನಾನ್ಮಮ॥೨೨॥
ಸೌವರ್ಣಸ್ತ್ವಂ ಮೃಗೋ ಭೂತ್ವಾ ಸೀತಾಯಾಃ ಪ್ರಮುಖೇ ಚರ ।
ತ್ವಾಂ ತು ಮಾಯಾಮೃಗಂ ದೃಷ್ಟ್ವಾ ಕಾಞ್ಚನಂ ಜಾತವಿಸ್ಮಯಾ ।
ಆನಯೈನಮಿತಿ ಕ್ಷಿಪ್ರಂ ರಾಮಂ ವಕ್ಷ್ಯತಿ ಮೈಥಿಲೀ ॥೨೩॥

ಆಗ ಕಾರ್ಯಾರ್ಥಿಯಾಗಿರುವ ರಾವಣನು ತಾನಾಗಿ ಮಾರೀಚನ ಮನೆಗೆ ಹೋಗಿ, ಅವನಿಂದ ಅತಿಥಿಸತ್ಕಾರವನ್ನು ಪಡೆದು, ಮಾರೀಚನನ್ನು ಕುರಿತು ಈ ಮಾತನ್ನು ಹೇಳಿದನು ॥೧೬॥

ಅಪ್ಪಾ ! ಮಾರೀಚ ! ನಾನು ಹೇಳುವ ಮಾತನ್ನು ಸ್ವಲ್ಪಕೇಳುವನಾಗು ನೀನು ಜನಸ್ಥಾನವನ್ನು ಬಲ್ಲೆಯಷ್ಟೆ! ನನ್ನ ಸಹೋದರನಾದ ಖರನು ಅಲ್ಲಿ ರಾಜನಾಗಿದ್ದನಲ್ಲವೆ' ॥೧೭॥

ಅಲ್ಲಿ ಇನ್ನೂ ಅನೇಕಮಂದಿ ಶೂರರಾದ ನನಗೆ ಸಮಾನಬಲಶಾಲಿಗಳಾದ ರಾಕ್ಷಸರು ವಾಸಮಾಡಿಕೊಂಡಿದ್ದರು ಈಗ ನಮ್ಮ ಆ ಖರಮುಂತಾದವರೆಲ್ಲರೂ ರಾಮನಿಂದ ನಿಷ್ಕಾರಣವಾಗಿ ಕೊಲ್ಲಲ್ಪಟ್ಟರು ॥೧೯॥

ಆ ರಾಮನು, ಯಾವ ವೈರಕಾರಣವೂ ಇಲ್ಲದೆಯೇ, ತನ್ನ ಬಲವೊಂದರಲ್ಲಿಯೇ ದೃಷ್ಟಿಯಿಟ್ಟು, ನನ್ನ ತಂಗಿಯಾದ ಶೂರ್ಪಣಖಿಯ ಕಿವಿ ಮೂಗುಗಳನ್ನು ಕತ್ತರಿಸಿ ವಿಕಾರಮಾಡಿರುವನು॥

ಆದುದರಿಂದ, ಈಗ ನಾನು ಸೀತೆಯನ್ನು ಅಪಹರಿಸುವುದಕ್ಕಾಗಿ ರಾಮನ ಆಶ್ರಮಕ್ಕೆ ಹೋಗಬೇಕೆಂದು ಬಂದಿರುವೆನು ಅವಳು ನನ್ನ ವಶವಾಗುವಂತೆ ನೀನು ನನಗೆ ಸಹಾಯಮಾಡಬೇಕು ॥೨೧॥

ಈಗ ನೀನು ನನ್ನ ಮಾತನ್ನು ಕೇಳಿಕೊಂಡು ನನ್ನ ಸಾಹಾಯ್ಯಾರ್ಥವಾಗಿ ಯಾವ ಕೆಲಸವನ್ನು ಮಾಡಬೇಕಾಗಿರುವುದೋ, ಅದನ್ನು ಕೇಳುವನಾಗು ನೀನು ಸುವರ್ಣಮಯವಾದ ಮೃಗದ ರೂಪವನ್ನು ಧರಿಸಿಕೊಂಡು ಸೀತೆಯ ಎದುರಾಗಿ ಸಂಚರಿಸು ಸುವರ್ಣಮಯವಾದ ಮಾಯಾಮೃಗದ ರೂಪದಲ್ಲಿರುವ ನಿನ್ನನ್ನುನೋಡಿ ಅತಿಕುತೂಹಲಯುಕ್ತಳಾದ ಸೀತೆಯು, ಇದನ್ನು ಬೇಗನೆ ತಂದುಕೊಡೆಂದು ರಾಮನನ್ನು ಪ್ರಾರ್ಥಿಸುವಳು ॥೨೨-೨೩॥

ಅಪಕ್ರಾಮ್ಯೈವ ಚ ಕಾಕುತ್ಸ್ಥೇ ದೂರಂ ಯಾತ್ವಾಪ್ಯುದಾಹರ ।
ಹಾ ಸೀತೇ ಲಕ್ಷ್ಮಣೇತ್ಯೇವಂ ರಾಮವಾಕ್ಯಾನುರೂಪಕಮ್ ॥೨೪॥
ತಚ್ಛ್ರುತ್ವಾ ರಾಮಪದವೀಂ ಸೀತಯಾ ಚ ಪ್ರಚೋದಿತಃ ।
ಅನುಗಚ್ಛತಿ ಸಂಭ್ರಾನ್ತಃ ಸೌಮಿತ್ರಿರಪಿ ಸೌಹೃದಾತ್ ॥೨೫॥
ಅಪಕ್ರಾನ್ತೇ ಚ ಕಾಕುತ್ಸ್ಥೇ ಲಕ್ಷ್ಮಣೇ ಚ ಯಥಾಸುಖಮ್ ।
ಆನಯಿಷ್ಯಾಮಿ ವೈದೇಹೀಂ ಸಹಸ್ರಾಕ್ಷಃ ಶಚೀಮಿವ ।
ಏವಂ ಕೃತೇ ತು ಮಾರೀಚ ರಾಜ್ಯಸ್ಯಾರ್ಧಂ ದದಾಮಿ ತೇ ॥೨೬॥
ಇತಿ ತಸ್ಯ ವಚಃ ಶ್ರುತ್ವಾ ಮಾರೀಚಃ ಪ್ರತ್ಯಭಾಷತ ॥೨೭॥
ಶೃಣು ರಾವಣ ತತ್ತ್ವೇನ ಹಿತಂ ವಕ್ಷ್ಯಾಮಿ ಕೇವಲಮ್ ।
ಸುಹೃದಸ್ತೇ ಹಿತಂ ಕಾರ್ಯಂ ಸರ್ವಥಾ ಸುಹೃದಾ ಮಯಾ ॥೨೮॥
ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೨೯॥

ಆಗ ನಿನ್ನನ್ನು ಹಿಡಿದು ತರುವುದಕ್ಕೋಸ್ಕರ ರಾಮನು ಆಶ್ರಮದಿಂದ ಹೊರಕ್ಕೆ ಬಂದು ಬಿಟ್ಟನೇಶ, ನೀನು ಬಹುದೂರ ಹೊರಟುಹೋಗಿ, ರಾಮನ ಧ್ವನಿಗೆ ಸದೃಶವಾಗಿರುವಂತೆ 'ಹಾ ಸೀತೇ ! ಹಾ ಲಕ್ಷ್ಮಣಾ!' ಎಂದು ಕೂಗಿಬಿಡು ॥೨೪॥

ಇದನ್ನು ಕೇಳಿಯೂ, ಸೀತೆಯಿಂದ ಪ್ರೇರಿತನಾಗಿಯೂ, ಲಕ್ಷ್ಮಣನು ಸೌಹಾರ್ದದಿಂದ ಕಳವಳಪಟ್ಟು ರಾಮನ ಮಾರ್ಗವನ್ನು ಅನುಸರಿಸಿಕೊಂಡು ಹೊರಡುವನು ॥೨೫॥

ಬಳಿಕ, ಹೀಗೆ ರಾಮನೂ ಲಕ್ಷ್ಮಣನೂ ತೊರಟುಹೋಗಲಾಗಿ, ಇಂದ್ರನು ಶಚಿಯನ್ನು ಕರೆತರುವಂತೆ ನಾನು ಸುಖವಾಗಿ ಸೀತೆಯನ್ನು ಕರೆದುಕೊಂಡುಬರುವೆನು ನೀನು ನನಗೋಸ್ಕರ ವಾಗಿ ಇಷ್ಟು ಕೆಲಸವನ್ನು ಮಾಡಿಕೊಟ್ಟರೆ, ಅಯ್ಯಾ ! ಮಾರೀಚ ! ನಾನು ನಿನಗೆ ನನ್ನ ರಾಜ್ಯ ದಲ್ಲಿ ಅರ್ಧವನ್ನು ಕೊಟ್ಟುಬಿಡುವೆನು ॥೨೬॥

ಹೀಗೆ ಹೇಳಿದ ರಾವಣನ ಮಾತನ್ನು ಕೇಳಿ, ಮಾರೀಚನು ಅವನಿಗೆ ಹೀಗೆ ಉತ್ತರಹೇಳಿದನು. ಅಯ್ಯಾ ! ರಾವಣ ! ನಾನು ಹೇಳುವ ಯಥಾರ್ಥವಾದ ಮಾತನ್ನು ಲಾಲಿಸುವನಾಗು ನಾನು ನಿನಗೆ ಕೇವಲ ಹಿತವನ್ನು ಹೇಳುವೆನು ನೀನು ನನಗೆ ಮಿತ್ರನಾಗಿರುವುದರಿಂದ, ನಿನ್ನ ಮಿತ್ರ ನಾದ ನಾನು ಸರ್ವಥಾ ನಿನಗೆ ಹಿತವನ್ನೇ ಮಾಡಬೇಕಾಗಿರುವುದು ॥೨೭–೨೮॥

ಅಯ್ಯಾ ! ರಾಕ್ಷಸರಾಜ ! ಲೋಕದಲ್ಲಿ ಸರ್ವದಾ ಪ್ರಿಯವಾದ ಮಾತನ್ನು ಹೇಳುವ ಪುರುಷರು ಬೇಕಾದಹಾಗೆ ಸಿಕ್ಕುವರು ಪ್ರಿಯವಲ್ಲದಿದ್ದರೂ ಹಿತವಾಗಿರುವ ಮಾತನ್ನು ಹೇಳುವ ವರು ಅತಿ ದುರ್ಲಭರು, ಇದನ್ನು ಕೇಳತಕ್ಕವರೂ ವಿರಳವಾಗಿಯೇ ಇರುವರು ॥೨೯॥

ರಾಮಶಕ್ತಿಂ ನ ಜಾನಾಸಿ ತತ್ತ್ವತೋ ರಾಕ್ಷಸಾಧಿಪ ।
ಯೇನ ಪ್ರಜೋದಿತಸ್ತ್ವಂ ಹಿ ಸ ತೇ ಕುಲವಿನಾಶಕಃ ॥೩೦॥
ಅಹಂ ರಾಮಂ ಪ್ರಜಾನಾಮಿ ಬಾಲ್ಯಾದಾರಭ್ಯ ರಾವಣ ॥೩೧॥
ಅತಿವೀರ್ಯಬಲೋಪೇತೋ ಮಹಾಬಲಪರಾಕ್ರಮಃ ।
ಶರಸನ್ಧಾನಕುಶಲೋ ದೃಢಮುಷ್ಟಿರ್ಗತಶ್ರಮಃ ।
ದರ್ಶನೀಯತಮಃ ಶ್ರೀಮಾ ದುರವಾಪ್ಯೋತಿವೇಗವಾ ॥೩೨॥
ಶಸ್ತ್ರಾಸ್ತ್ರವೇದೀ ಧರ್ಮಾತ್ಮಾ ದೇಶಕಾಲವಿಭಾಗವಿತ್ ।
ಪರಮಾತ್ಮಾ ಪರಾನನ್ದಃ ಕೇವಲಃ ಸರ್ವಗೋಚರಃ ॥೩೩॥
ಸಾಧೂನಾಂ ರಕ್ಷಣಾರ್ಥಾಯ ವಿನಾಶಾಯ ಚ ರಕ್ಷಸಾಮ್ ।
ಧರ್ಮಸಂಸ್ಥಾಪನಾರ್ಥಾಯ ಜಾತೋ ರಾಮಃ ಪರಾತ್ಪರಃ ॥೩೪॥
ನ ತ್ವಯಾ ಸಾಧಿತುಂ ಶಕ್ಯೋ ರಾವೋ ರಣಸುದುರ್ಧರಃ ॥೩೫॥

ಎಲೈ ರಾಕ್ಷಸಾಧಿಪತಿಯೆ! ನೀನು ರಾಮನ ಶಕ್ತಿಯನ್ನು ಯಥಾವತ್ತಾಗಿ ತಿಳಿಯ ನಿನ್ನನ್ನು ಈಗ ಯಾವನು ಈ ಕಲಸದಲ್ಲಿ ಪ್ರೇರಿಸಿರುವನೋ, ಅವನು ನಿನ್ನ ಕುಲವನ್ನು ಹಾಳುಮಾಡತಕ್ಕವನೆಂದು ತಿಳಿ ॥೩೦॥

ಅಯ್ಯಾ! ರಾವಣ! ನಾನು ಬಾಲ್ಯದಿಂದಲೂ ರಾಮನನ್ನು ಅರಿತಿರುವೆನು ಅವನು ಅತಿಯೊಗಿ ವೀರ್ಯದಿಂದಲೂ ಬಲದಿಂದಲೂ ಯುಕ್ತನಾಗಿರುವನು, ಅವನ ಬಲವೂ ಪರಾಕ್ರಮವೂ ಅತಿಮಹತ್ತಾಗಿರುವುವು, ಬಾಣಸಂಧಾನದಲ್ಲಿ ಅವನ ಕೌಶಲ್ಯವು ಅದ್ವಿತೀಯವಾದುದು , ಅವನ ಕೈಹಿಡಿತವು ಬಲುಗಟ್ಟಿಯಾಗಿರುವುದು, ಅವನು ಎಂತಹ ದುಷ್ಕರವಾದ ಕೆಲಸವನ್ನು ಮಾಡಿದರೂ ಶ್ರಮಹೊಂದುವುದಿಲ್ಲ, ಅವನು ಅತ್ಯಂತದರ್ಶನೀಯನಾಗಿಯೂ ಮಹಾಕಾಂತಿಸಂಪನ್ನನಾಗಿಯೂ ಇರುವನು, ಯಾರೂ ಅವನನ್ನು ಉಲ್ಲಂಘಿಸಲಾರರು ಅವನು ಮಹಾವೇಗಶಾಲಿಯು॥೩೧-೩೨

ಅವನು ಸಕಲಶಸ್ತ್ರಾಸ್ತ್ರಗಳನ್ನೂ ತಿಳಿದಿರುವನು, ಮಹಾಧರ್ಮಾತ್ಮನು, ದೇಶಕಾಲಗಳ ವಿಭಾಗವನ್ನು ಚನ್ನಾಗಿ ಅರಿತಿರುವನು ಇದಲ್ಲದೆ, ಅವನು ಕೇವಲಮನುಷ್ಯಮಾತ್ರನಲ್ಲ ಅವನು ಪರಮಾನಂದಸ್ವರೂಪನೂ ಕೇವಲನೂ ಸರ್ವವ್ಯಾಪಿಯೂ ಆದ ಪರಮಾತ್ಮನೆಂದು ತಿಳಿ ॥೩೩॥

ಸಾಧುಗಳನ್ನು ರಕ್ಷಿಸುವುದಕ್ಕಾಗಿಯೂ, ರಾಕ್ಷಸರನ್ನು ನಾಶಪಡಿಸುವುದಕ್ಕಾಗಿಯೂ, ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ ಕೂಡ, ಆ ಪರಾತ್ಪರಮೂರ್ತಿಯೇ ರಾಮನಾಗಿ ಅವತರಿಸಿರುವನು ॥೩೪॥

ಯುದ್ಧದಲ್ಲಿ ಯಾರಿಂದಲೂ ಎದುರಿಸಲಸಾಧ್ಯನಾದ ಆ ರಾಮನು ನಿನಗೆ ಸಾಧ್ಯನಾಗಲಾರನು. ಮಹಾತ್ಮನಾದ ಆ ರಾಘವನ ರಣವೇಗವನ್ನು ನೀನು ಅರಿಯೆ. ನಾನು ಅವನ ವೀರ್ಯ ಶೌರ್ಯ

ರಣವೇಗಂ ನ ಜಾನಾಸಿ ರಾಘವಸ್ಯ ಮಹಾತ್ಮನಃ ।
ಅಹಂ ಜಾನಾಮಿ ರಾಮಸ್ಯ ವೀರ್ಯಶೌರ್ಯಪರಾಕ್ರಮಾನ್ ।
ನ ಮಾನುಷಗತೀರಾಮೋ ರಣೇ ಮೇರುರಿವಾಚಲಃ ॥೩೬॥
ಕಿರೀಟೀ ಕವಚೀ ಧನ್ವೀ ಶರೀ ಖಡ್ಗೀ ಗದೀ ರಥೀ ।
ರಣಸ್ಯಾಭಿಮುಖೋ ರಾಮಃ ಪ್ರಯಾಸ್ಯತಿ ಯದಾ ತದಾ ॥೩೭॥
ಕೋ ರುದ್ರಃ ಕೋ ಯಮಸ್ತತ್ರ ಕೋ ವಾಗ್ನಿರ್ವಾ ಮರುತ್ಸಖಃ ।
ಮಹಾವೇಗಗತೀರಾಮಂ, ತತ್ತದೂಪೇಣ ದೃಶ್ಯತೇ ॥೩೮॥
ದ್ರಷ್ಟುಂ ನ ಶಕ್ಯತೇ ವೀರೋ ಯುದ್ಧವಾರ್ತಾ ತು ದೂರತಃ ॥೩೯॥
ನ ಹಿ ವಾರಯಿತುಂ ಶಕ್ಯಃ ಸೇಂದ್ರೈರಪಿ ಸುರಾಸುರೈಃ ।
ಕಃ ಸಮರ್ಥೋ ರಣೇ ಸೋಢುಂ ಬಾಣವೇಗಂ ಮಹಾತ್ಮನಃ ॥೪೦॥
ಬಾಣವೇಗಮಹಾವಾತ್ಯಾ ತ್ವಾಂ ಚ ಲಙ್ಕಾಂ ಚ ರಾಕ್ಷಸಾನ್ ।
ಶುಷ್ಕಪರ್ಣತೃಣಾನೀವ ಹರಿಷ್ಯತಿ ನ ಸಂಶಯಃ ॥೪೧॥
ರಾಮಾಪರಾಧಯುಕ್ತಸ್ಯ ನ ತೇ ಲಂಕಾ ಕುಲಂ ಸುಹೃತ್ ।
ರಾಮಾನಲಂ ಸಮಾಸಾದ್ಯ ವಯಂ ತೃಣಗಣಾಇವ ।
ಅಚಿರಾದೇವ ನಶ್ಯಾಮೋ ನಾತ್ರ ಕಾರ್ಯಾ ವಿಚಾರಣಾ ॥೪೨॥

ಪರಾಕ್ರಮಗಳನ್ನು ಜನ್ಮಾಗಿ ಅರಿತಿರುವೆನು ರಾಮನು ಸಾಮಾನ್ಯಮನುಷ್ಯರ ಹಾಗಿಲ್ಲ, ಅವನು ಯುದ್ಧರಂಗದಲ್ಲಿ ಮೇರುಪರ್ವತದಂತೆ ನಿಶ್ಚಲನಾಗಿ ನಿಲ್ಲುವನು ॥೩೫-೩೬॥

ಅವನು ಕಿರೀಟ ಕವಚ ಧನುಸ್ಸು ಬಾಣ ಖಡ್ಗ ಗದೆಗಳನ್ನು ಧರಿಸಿ-ರಥದಮೇಲೆ ಕುಳಿತು ಕೊಂಡು-ಯಾವಾಗ ಯುದ್ಧಾಭಿಮುಖವಾಗಿ ಹೊರಡುವನೋ, ಆಗ ಅಲ್ಲಿ ರುದ್ರನಾರು ? ಯಮನುತಾನೆ ಯಾರು? ವಾಯುವಿನೊಡಗೂಡಿರುವ ಅಗ್ನಿತಾನೆ ಎಷ್ಟರವನು ? ಮಹಾವೇಗಗತಿ ಸಂಪನ್ನನಾದ ಶ್ರೀರಾಮನೊಬ್ಬನೇ ಅವರೆಲ್ಲರ ಆಕಾರದಲ್ಲಿಯೂ ಕಾಣಿಸಿಕೊಳ್ಳುವನು॥ ೩೭-೩೮

ಆ ಮಹಾವೀರನನ್ನು ರಣರಂಗದಲ್ಲಿ ನೋಡುವುದೂ ಅಸಾಧ್ಯವಾಗುವುದು, ಅವನೊಡನೆ ಯುದ್ಧಮಾಡುವುದೆಂಬ ಮಾತೇ ಅತಿ ದೂರದಲ್ಲಿರುವುದು ಇಂದ್ರನೊಡಗೂಡಿದ ಸುರಾಸುರರೆಲ್ಲ ಒಟ್ಟಾದರೂ ಅವನನ್ನು ತಡೆಯುವುದಕ್ಕೆ ಆಗುವುದಿಲ್ಲ. ಇಂತಹ ಮಹಾನುಭಾವನಾದ ರಾಮನ ಬಾಣವೇಗವನ್ನು ಯುದ್ಧರಂಗದಲ್ಲಿ ಯಾವನುತಾನೆ ಸಹಿಸಬಲ್ಲನು ? ॥೩೯-೪೦॥

ಅಯ್ಯಾ ! ರಾವಣ ! ಆ ರಾಮನ ಬಾಣವೇಗವೆಂಬ ಜಂಝಾವಾತವು, ನಿನ್ನನ್ನೂ ಲಂಕೆಯನ್ನೂ ರಾಕ್ಷಸರನ್ನೂ ಕೂಡ, ಒಣಗಿದ ತರಗಿನಂತೆ ದೂರವಾಗಿ ಹೊತ್ತುಕೊಂಡು ಹೋಗಿ ಬಿಡುವುದು, ಇದರಲ್ಲಿ ಸಂಶಯವಿಲ್ಲ ॥೪೧॥

ರಾಮನಲ್ಲಿ ಅಪರಾಧಿಯಾದ ನಿನಗೆ, ಲಂಕೆಯೂ ವಂಶವೂ ಮಿತ್ರರೂ ಇಲ್ಲವಾಗುವರು ರಾಮನೆಂಬ ಅಗ್ನಿಗೆ ಗುರಿಯಾಗಿ, ನಾವುಗಳು ಹುಲ್ಲಿನಂತೆ ಕ್ಷಣದೊಳಗಾಗಿ ನಾಶಹೊಂದುವೆವು. ಈ ವಿಷಯದಲ್ಲಿ ಯಾವ ವಿಚಾರವೂ ಬೇಕಾಗಿಲ್ಲ ॥೪೨॥

ಬ್ರಹ್ಮಾಂಡಲಯಕರ್ತಾಸೌ ಶಿವಸ್ಯೈವ ಹಿ ಕೇವಲಮ್ ।
ರಣೇಽನ್ತಕಇವಾಭಾತಿ ತ್ರಿಶೂಲೀವ ಪುರಾಂ ವಧೇ ॥೪೩॥
ಅಹಂ ತಸ್ಯ ಪ್ರಭಾವಜ್ಞೋ ನ ಯುದ್ಧಂ ತೇನ ತೇ ಕ್ಷಮಮ್ ।
ಬಲಿಂ ವಾ ನಮುಚಿಂ ವಾಪಿ ಹನ್ಯಾದ್ಧಿ ರಘುನನ್ದನಃ ॥೪೪॥
ವಿಶ್ವಾಮಿತ್ರಾಧ್ವರೇ ಪೂರ್ವಂ ಅಹಂ ಸಾಕಂ ಸುಬಾಹುನಾ ।
ತಾಡಿತೋ ರಾಮಬಾಣೇನ ಕ್ಷಿಪ್ತಃ ಸಾಗರಮಧ್ಯಮೇ ॥೪೫॥
ಸುಬಾಹುಪ್ರಮುಖಾಃ ಸರ್ವೇ ರಾಕ್ಷಸಾಃ ಕೋಟಿಶೋ ಮೃತಾಃ ।
ತದಾಪ್ರಭೃತಿ ತದ್ಭೀತ್ಯಾ ತಪಃ ಕರ್ತುಮಿಹ ಸ್ಥಿತಃ ॥೪೬॥
ವೃಕ್ಷೇವೃಕ್ಷೇ ಹಿ ಪಶ್ಯಾಮಿ ಚೀರಕೃಷ್ಣಾಜಿನಾಮ್ಬರಮ್ ।
ಗೃಹೀತಧನುಷಂ ರಾಮಂ ಪಾಶಹಸ್ತಮಿವಾನ್ತಕಮ್ ॥೪೭॥
ಅಪಿ ರಾಮಸಹಸ್ರಾಣಿ ಭೀತಃ ಪಶ್ಯಾಮಿ ರಾವಣ ।
ರಾಮಭೂತಮಿದಂ ಸರ್ವಂ ಅರಣ್ಯಂ ಪ್ರತಿಭಾತಿ ಮೇ ॥೪೮॥

ಬ್ರಹ್ಮಾಂಡವನ್ನೆಲ್ಲ ಲಯಪಡಿಸತಕ್ಕ ಇವನು ಕೇವಲ ರುದ್ರನೇಯೆಂದು ತಿಳಿಯಬೇಕು ತ್ರಿಶೂಲಧಾರಿಯಾದ ಈಶ್ವರನು ತ್ರಿಪುರಸಂಹಾರಕಾಲದಲ್ಲಿ ಕಾಣಿಸಿಕೊಳ್ಳುತಿದ್ದಂತೆ, ಇವನು ರಣರಂಗದಲ್ಲಿ ಶತ್ರುಗಳಿಗೆ ಯಮನಹಾಗೆ ಕಾಣಿಸಿಕೊಳ್ಳುವನು ॥೪೩॥

ನಾನು ಅವನ ಪ್ರಭಾವವನ್ನು ಜನ್ನಾಗಿ ಒಲ್ಲೆನು ಅವನೊಡನೆ ಯುದ್ಧವೆಂದಿಗೂ ನನಗ ಯುಕ್ತವಲ್ಲ ಆ ರಘುನಂದನನು, ಬಲಜಕ್ರವರ್ತಿಯನ್ನಾದರೂ ನಮುಚಿಯನ್ನಾದರೂ ಕೊಲ್ಲ ಬಲ್ಲನು ॥೪೪॥

ಪೂರ್ವದಲ್ಲಿ ವಿಶ್ವಾಮಿತ್ರಮುನಿಯು ಯಾಗಮಾಡಿದಾಗ, ನಾನು ಸುಬಾಹುವಿನೊಡನ ರಾಮಬಾಣದಿಂದ ಹೊಡೆಯಲ್ಪಟ್ಟವನಾಗಿ ಸಮುದ್ರಮಧ್ಯದಲ್ಲಿ ಬೀಳಿಸಲ್ಪಟ್ಟೆನು ॥೪೫॥

ಸುಬಾಹು ಮೊದಲಾದ ರಾಕ್ಷಸರೆಲ್ಲರೂ ಕೋಟಿಸಂಖ್ಯಾಕರಾಗಿ ಆ ಕ್ಷಣವೇ ಮೃತರಾದರು ಆ ಕಾಲಮೊದಲುಗೊಂಡು, ನಾನು ಅವನ ಭಯದಿಂದ ಇಲ್ಲಿ ತಪಸ್ಸುಮಾಡಿಕೊಂಡಿರುವೆನು ॥೪೬॥


ಇಲ್ಲಿ ಪ್ರತಿಯೊಂದು ವೃಕ್ಷದಲ್ಲಿಯೂ ಚೀರಕೃಷ್ಣಾಜಿನಾಂಬರನಾಗಿ–ಪಾಶವನ್ನು ಧರಿಸಿರುವ ಯಮನಂತೆ ಕೈಯಲ್ಲಿ ಧನುಸ್ಸನ್ನು ಹಿಡಿದುಕೊಂಡು ರಾಮನು ನಿಂತಿರುವಹಾಗೆ ನನಗೆ ಕಾಣುತಿರುವುದು ॥೪೭॥

ಅಯ್ಯಾ! ರಾವಣ! ಕೇವಲಭಯಗ್ರಸ್ತನಾಗಿರುವ ನಾನು, ಎಲ್ಲೆಲ್ಲಿಯೂ ಸಾವಿರಾರುಮಂದಿ ರಾಮರಿರುವಂತೆ ನೋಡುತಿರುವೆನು. ಈ ಸಮಸ್ತವಾದ ಅರಣ್ಯವೂ ನನಗೆ ರಾಮಾಕಾರವಾಗಿ ತೋರುತಿರುವುದು ॥೪೮॥

ರಾಮಮೇವ ಹಿ ಪಶ್ಯಾಮಿ ರಹಿತೇ ರಾಕ್ಷಸಾಧಿಪ ।
ದೃಷ್ಟ್ವಾ ಸ್ವಪ್ನಗತಂ ರಾಮಂ ಉದ್ಭ್ರಮಾಮಿ ವಿಚೇತನಃ ॥೪೯॥
ರಕಾರಾದೀನಿ ನಾಮಾನಿ ರಾಮತ್ರಸ್ತಸ್ಯ ರಾವಣ ।
ರತ್ನಾನಿ ಚ ರಥಾಶ್ಚೈವ ತ್ರಾಸಂ ಸಂಜನಯನ್ತಿ ಮೇ ॥೫೦॥
ಜೀವಿತಂ ಚ ಸುಖಂ ಚೈವ ರಾಜ್ಯಂ ಚೈವ ಸುದುರ್ಲಭಮ್ ।
ಯದೀಚ್ಛಸಿ ಚಿರಂ ಭೋಕ್ತುಂ ಮಾಕೃಥಾರಾಮವಿಪ್ರಿಯಮ್ ॥೫೧॥

ಇದಂ ವಚೋ ಬನ್ಧುಹಿತಾರ್ಥಿನಾ ಮಯಾ
ಯಥೋಚ್ಯಮಾನಂ ಯದಿ ನಾಭಿಪದ್ಯಸೇ ।
ಸಬಾನ್ಧವಸ್ತ್ಯಕ್ಷ್ಯಸಿ ಜೀವಿತಂ ರಣೇ
ಹತೋದ್ಯ ರಾಮೇಣ ಶರೈ ರಜಿಂಹಗೈಃ ॥೫೨॥

ಇತಿ ಶ್ರೀಮದರಣ್ಯಕಾಣ್ಡೇ ರಾವಣಂ ಪ್ರತಿ ಮಾರೀಚನೀತಿಕಥನಂ ನಾಮ
ದ್ವಾದಶಃ ಸರ್ಗಃ



ಎಲೈರಾಕ್ಷಸಾಧಿಪತಿಯೆ! ಸಮೀಪದಲ್ಲಿ ಯಾರೂ ಇಲ್ಲದಿದ್ದರೆ, ಆಗ ನನಗೆ ರಾಮನೇ ಕಾಣಿಸುತ್ತಿರುವನು ಸ್ವಪ್ನದಲ್ಲಿಯೂ ರಾಮನನ್ನು ನೋಡಿ, ಚೈತನ್ಯಶೂನ್ಯನಾಗಿ ಸಂಭ್ರಾಂತನಾಗುವನು ॥೪೯॥

ಅಯ್ಯಾ! ರಾವಣ! ರಾಮನಿಂದ ಹೆದರಿರುವ ನನಗೆ, ರತ್ನ ರಥ ಮುಂತಾದ ರೇಫಾದಿಯಾಗಿರುವ ಶಬ್ದಗಳೆಲ್ಲವೂ ಭಯವನ್ನು ಹುಟ್ಟಿಸುತಿರುವುವು ॥೫೦॥

ಅಯ್ಯಾ! ರಾವಣ! ನೀನು ನಿನ್ನ ಪ್ರಾಣವನ್ನೂ ಸುಖವನ್ನೂ ಅತಿದುರ್ಲಭವಾಗಿರುವ ಈ ರಾಜ್ಯವನ್ನೂ ಬಹಳಕಾಲ ಅನುಭವಿಸಬೇಕೆಂದು ಇಚ್ಛಿಸುತಿರುವ ಪಕ್ಷದಲ್ಲಿ, ರಾಮನಿಗೆ ಅಪ್ರಿಯವಾದ ಕೆಲಸವನ್ನು ಮಾಡದಿರುವನಾಗು ॥೫೧॥

ಅಯ್ಯಾ! ಮಿತ್ರನಾದ ರಾವಣನೆ! ಬಂಧುಗಳಿಗೆ ಹಿತವುಂಟಾಗಬೇಕೆಂದು ಅಪೇಕ್ಷಿಸುತಿರುವ ನಾನು ಹೇಳಿದ ಮಾತನ್ನು ನೀನು ಸರಿಯಾಗಿ ನಡೆಯಿಸದೆ ಹೋದರೆ, ಈಗಲೇ ಮಹಾವೇಗವಂಪನ್ನಗಳಾದ ರಾಮನ ಬಾಣಗಳಿಂದ ಹೊಡೆಯಲ್ಪಟ್ಟು ಯುದ್ಧದಲ್ಲಿ ನಿನ್ನ ಒಂದುಗಳೊಡನೆ ನೀನು ಪ್ರಾಣವನ್ನು ಕಳೆದುಕೊಳ್ಳುವೆ ॥೫೨॥

ಇದು ಅರಣ್ಯಕಾಂಡದಲ್ಲಿ ರಾವಣನನ್ನು ಕುರಿತು ಮಾರೀಚನು ನೀತಿಯನ್ನು ಹೇಳಿದನೆಂಬಲ್ಲಿಗೆ
ಹನ್ನೆರಡನೆಯ ಸರ್ಗವು

ಅಥ ಶ್ರೀಮದರಣ್ಯಕಾಣ್ಡೇ ತ್ರಯೋದಶಃ ಸರ್ಗಃ.

ಶ್ರೀಶಿವಉವಾಚ

ಇತಿ ತದ್ವಚನಂ ಶ್ರುತ್ವಾ ರಾವಣಃ ಕಾಲಚೋದಿತಃ ।
ಕೋಶಾತ್ ಖಡ್ಗಂ ಸಮುದ್ಧೃತ್ಯ ಹನ್ತುಂ ಸಮುಪಚಕ್ರಮೇ ॥೧॥
ತಸ್ಯಾವಸ್ಥಾಂ ಪರಿಜ್ಞಾಯ ಮಾರೀಚೋ ಬುದ್ಧಿಮತ್ತರಃ ।
ಚಿನ್ತಯಾಮಾಸ ಮನಸಿ ಹಿತಂ ಪಥ್ಯಂ ನಿಜಾತ್ಮನಃ ॥೨॥
ರಾಕ್ಷಸಾನಾಂ ಪಿಶಾಚೇನ ಹತೋ ಯದಿ ಪಿಶಾಚತಾ ।
ರಾಮೇಣ ನಿಹತಃ ಪಾಪೈಸ್ಯೇ ಮುಕ್ತಿಂ ಮುನಿಸುದುರ್ಲಭಾಮ್ ॥೩॥
ಇತಿ ಸಂಚಿನ್ತ್ಯ ಮನಸಾ ಸಾಹಾಯ್ಯಾಯ ಮನೋ ದಧೇ ।
ಸಮಯೇ ಸಮನುಪ್ರಾಪ್ತೇ ನ ಸೀದನ್ತಿ ಮನೀಷಿಣಃ ॥೪॥

ಅರಣ್ಯಕಾಂಡದಲ್ಲಿ ಹದಿಮೂರನೆಯ ಸರ್ಗವು.

ಶ್ರೀಪರಮೇಶ್ವರನು ಮತ್ತೆ ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪರ್ವತಿ! ಮೊದಲೇ ಉಕ್ತರೀತಿಯಾಗಿ ತನಗೆ ಹಿತೋಪದೇಶಮಾಡಿದ ಮಾರೀಚನ ಮಾತನ್ನು ಕೇಳಿ, ಕಾಲಚೋದಿತನಾದ ರಾವಣನು, ಒರೆಯಿಂದ ಕತ್ತಿಯನ್ನು ಹಿರಿದು ಅವನನ್ನು ಕೊಲ್ಲಲುದ್ಯುಕ್ತನಾದನು ॥೧॥

ಹೀಗೆ ತನ್ನನ್ನು ಕೊಲ್ಲಲೆಳಸುತಿರುವ ರಾವಣನ ಸ್ಥಿತಿಯನ್ನು ತಿಳಿದುಕೊಂಡು, ಅತಿ ಬುದ್ಧಿಶಾಲಿಯಾದ ಮಾರೀಚನು, ತನಗೆ ಹಿತವಾಗಿಯೂ ಪಥ್ಯವಾಗಿಯೂ ಇರುವಂತೆ ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು ॥೨॥

ರಾಕ್ಷಸರಲ್ಲೆಲ್ಲ ಪಿಶಾಚಸ್ವರೂಪನಾಗಿರುವ ಈ ರಾವಣನಿಂದ ನಾನು ಹತನಾದಪಕ್ಷದಲ್ಲಿ, ನನಗೆ ಪಿಶಾಚಜನ್ಮವೇ ಸಿದ್ಧವಾಗುವುದು ಅದುಕಾರಣ, ನಾನು ರಾಮನಿಂದ ಹತನಾಗಿ, ಮುನಿಗಳಿಗೂ ಅತಿ ದುರ್ಲಭವಾಗಿರುವ ಮುಕ್ತಿಯನ್ನು ಪಡೆಯುವೆನು ॥೩॥

ಹೀಗೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಮಾರೀಚನು ರಾವಣನಿಗೆ ಸಾಹಾಯ್ಯಮಾಡುವುದಕ್ಕೆ ಮನಸ್ಸು ಮಾಡಿದನು. ಎಂತಹ ಸಮಯವೊದಗಿದರೂ, ಬುದ್ಧಿವಂತರಾದವರು ತಾಳ್ಮೆಗೆಡುವುದಿಲ್ಲವಲ್ಲವೆ! ॥೪॥

ಸಹಾಯಂ ಪ್ರಾಪ್ಯ ಮಾರೀಚಂ ರಾವಣಃ ಪಾಪಚೇತ್ತಕಃ ।
ದಂಡಕಾರಣ್ಯಮಾಸಾದ್ಯ ರನ್ಧ್ರಾನ್ವೇಷಪರೋಭವತ್ ॥೫॥
ಏತಸ್ಮಿನ್ನೇವ ಸಮಯೇ ನಾರದಃ ಸಮುಪಾಗತಃ ।
ರಾಮೇಣ ಪೂಜಿತಂ ಸಮ್ಯಕ್ ರಾಘವಂ ವಾಕ್ಯಮಬ್ರವೀತ್ ॥೬॥
ಬ್ರಹ್ಮಾದ್ಯೈಃ ಪ್ರೇಷಿತೋ ರಾಮ ದಶಾನನವಧಂ ಪ್ರತಿ ।
ಸಂಪ್ರಾಪ್ತಃ ಸಮಯೋ ರಾಮ ಕಾರ್ಯೋಪೇಕ್ಷಾ ನ ಚ ತ್ವಯಾ ॥೭॥
ಇತಿ ವಿಜ್ಞಾಪಿತೋ ರಾಮೋ ನಾರದೇನ ಮಹಾತ್ಮನಾ ।
ಜ್ಞಾತ್ವಾ ಸ್ವರೂಪಂ ದುರ್ಧರ್ಷಂ ನಾರದಂ ವಾಕ್ಯಮಬ್ರವೀತ್ ॥೮॥
ಸತ್ಯಮೇತನ್ಮಹಾನಿವರ ಯದುಕ್ತಂ ಬ್ರಹ್ಮಸೂನುನಾ ।
ಕರ್ತವ್ಯಂ ಚ ಮಯಾ ವಿಪ್ರ ಸರ್ವೇಷಾಂ ಜಗತಾಂ ಹಿತಮ್ ॥೯॥
ಕಿಂ ತು ತೇಹಂ ಪ್ರವಕ್ಷ್ಯಾಮಿ ಶೃಣು ನಾರದ ತತ್ತ್ವತಃ ।
ಭೂತಂ ಭವ್ಯಂ ಭವಿಷ್ಯಚ್ಚ ಮಯ್ಯಾಜ್ಞಾತಂ ನ ಕಿಂಚನ ॥೧೦॥

ಆಗ ಕಂಡವರಿಗೆ ಕೆಟ್ಟದುದನ್ನೇ ಬಯಸತಕ್ಕವನಾದ ರಾವಣನು, ಮಾರೀಚನನ್ನು ಸಹಾಯವನ್ನಾಗಿ ಪಡೆದು, ದಂಡಕಾರಣ್ಯಕ್ಕೆ ಬಂದು, ಅಲ್ಲಿ ರಂಧ್ರಾನ್ವೇಷಣ ಮಾಡುತಿದ್ದನು ॥೫॥

ಈ ಸಮಯದಲ್ಲಿಯೇ, ನಾರದಮುನಿಯು ಅಲ್ಲಿಗೆ ಬಂದು ರಾಮನಿಂದ ಚೆನ್ನಾಗಿ ಪೂಜಿಸಲ್ಪಟ್ಟು ಅವನನ್ನು ಕುರಿತು ಈ ಮಾತನ್ನು ಹೇಳಿದನು ॥೬॥

ಅಯ್ಯಾ! ರಾಮ! ನಾನು ಈಗ ಬ್ರಹ್ಮಾದಿದೇವತೆಗಳಿಂದ ರಾವಣನ ವಧೆಯ ನಿಮಿತ್ತವಾಗಿ ನಿನ್ನ ಹತ್ತಿರಕ್ಕೆ ಕಳುಹಿಸಲ್ಪಟ್ಟಿರುವೆನು ಅಯ್ಯಾ! ರಾಮಭದ್ರ! ರಾವಣನ ವಧೆಗೆ ಈಗ ತಕ್ಕ ಸಮಯವೊದಗಿರುವುದು ಈ ವಿಷಯದಲ್ಲಿ ನೀನು ಉಪೇಕ್ಷೆಮಾಡಕೂಡದು ॥೭॥

ಹೀಗಂದು ಮಹಾತ್ಮನಾದ ನಾರದಮುನಿಯಿಂದ ಪ್ರಾರ್ಥಿಸಲ್ಪಟ್ಟ ಶ್ರೀರಾಮನು, ತನ್ನ ಅಪ್ರಧೃಷ್ಯವಾದ ತಾತ್ವಿಕರೂಪವನ್ನು ಪರ್ಯಾಲೋಚಿಸಿದವನಾಗಿ, ನಾರದಮುನಿಯನ್ನು ಕುರಿತು ಹೀಗೆ ಹೇಳಿದನು ॥೮॥

ಅಯ್ಯಾ! ಮಹರ್ಷಿವರ್ಯನೆ! ಬ್ರಹ್ಮಮಾನಸ ಪುತ್ರನಾದ ನೀನು ಹೇಳಿದ ಈ ವಿಷಯವೆಲ್ಲವೂ ಸತ್ಯವಾಗಿರುವುದು ಎಲೈಬ್ರಾಹ್ಮಣೋತ್ತಮನೆ! ಸಮಸ್ತಜಗತ್ತಿಗೂ ಹಿತವನ್ನು ಮಾಡುವುದೇ ನನ್ನ ಕರ್ತವ್ಯವಾಗಿರುವುದು ॥೯॥

ಆದರೆ, ಅಯ್ಯಾ! ನಾರದಮುನಿಯೆ! ನಾನು ನಿನಗೆ ಒಂದು ತತ್ವವನ್ನು ಹೇಳುವೆನು, ಅದನ್ನು ಕೇಳುವನಾಗು ಭೂತ ಭವಿಷ್ಯತ್ ವರ್ತಮಾನಗಳಲ್ಲಿ ನನಗೆ ಗೊತ್ತಾಗದಿರುವುದು ಯಾವುದೂ ಇಲ್ಲ ॥೧೦॥

ಕಿಂ ತು ಲೋಕಹಿತಾರ್ಥಾಯ ಲೋಕಾನಾಂ ಚ ಪ್ರವೃತ್ತಯೇ ।
ನಿಷಿದ್ಧೇ ನ ಪ್ರವೃತ್ತಿರ್ಮೇ ವಿಹಿತೇಷು ಪ್ರವರ್ತನಮ್ ॥೧೧॥
ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥೧೨॥
ನಿತ್ಯವಿಜ್ಞಾನಪೂರ್ಣಸ್ಯ ಕೇವಲಸ್ಯ ಚಿದಾತ್ಮನಃ ।
ನ ಮೇ ವಿಧಿರ್ನಿಷೇಧೋ ವಾ ನ ಚ ದ್ವೇಷ್ಯೋಽಸ್ತಿ ನ ಪ್ರಿಯಃ ॥೧೩॥
ಹಿತಾಯ ಸರ್ವಲೋಕಾನಾಂ ಶಿಕ್ಷಣಾಯ ಚ ರಕ್ಷಸಾಮ್ ।
ಜಾತೋಽಹಂ ದಾಶರಥೇ ಗೇಹೇ ಸರ್ವಸಾಕ್ಷೀ ಶಿವೋಽಸ್ಮ್ಯಹಮ್ ॥೧೪॥
ಪಿತುರಾಜ್ಞಾಪದೇಶೇನ ಸೀತಾಲಕ್ಷ್ಮಣಸಂಯುತಃ ।
ಹನ್ತುಂ ದಾನವಕೋಟೀನಾಂ ಪ್ರವಿಷ್ಟೋ ದಣ್ಡಕಾವನಮ್ ॥೧೫॥
ತ್ರಯೋದಶಸಮಾಮಧ್ಯೇ ದೇವಕಾರ್ಯಂ ಕೃತಂ ಮಯಾ ।
ವಧೇನ ತೇಸಾಂ ಮೇ ಕೃತ್ಯಂ ರಾವಣಸ್ಯ ವಧಾರ್ಥಿನಃ ॥೧೬॥

ಆದರೂ, ಲೋಕಕ್ಕೆ ಹಿತವುಂಟಾಗುವುದಕ್ಕೋಸ್ಕರವೂ, ಜನರಿಗೆ ಸನ್ಮಾರ್ಗದಲ್ಲಿ ಪ್ರವೃತ್ತಿಯುಂಟಾಗುವುದಕ್ಕೋಸ್ಕರವೂಕೂಡ, ನಾನು ನಿಷಿದ್ಧಗಳನ್ನು ಪರಿಹರಿಸುತಲೂ ವಿಹಿತಕರ್ಮಗಳಲ್ಲಿ ಪ್ರವರ್ತಿಸುತಲೂ ಇರುವನು ॥೧೧॥

ಏಕೆಂದರೆ,-ಲೋಕದಲ್ಲಿ ಶ್ರೇಷ್ಠನೆನ್ನಿಸಿಕೊಂಡಿರುವವನು ಯಾವಯಾವುದನ್ನು ಆಚರಿಸುವನೋ, ಇತರಜನರೂ ಅದದನ್ನೇ ಆಚರಿಸುವರು, ಅವನು ಯಾವುದನ್ನು ಪ್ರಮಾಣವನ್ನಾಗಿ ತೋರಿಸುವನೋ, ಜನರೆಲ್ಲರೂ ಅದನ್ನೇ ಅನುಸರಿಸುವರು ಇದು ಪ್ರಪಂಚಸ್ವಭಾವವು ॥೧೨॥

ನಿತ್ಯನಾಗಿಯೂ ವಿಜ್ಞಾನಘನನಾಗಿಯೂ ಕೇವಲನಾಗಿಯೂ ಚಿದ್ರೂಪನಾಗಿಯೂ ಇರುವ ನನಗೆ, ವಿಧಿಯಾಗಲಿ ನಿಷೇಧವಾಗಲಿ ಇರುವುದಿಲ್ಲ ನನಗೆ ದ್ವೇಷ್ಯನೂ ಇಲ್ಲ, ಪ್ರಿಯನೂ ಇಲ್ಲ ॥೧೩॥

ನಾನು, ಸರ್ವಲೋಕಹಿತಾರ್ಥವಾಗಿಯೂ ರಾಕ್ಷಸರನ್ನು ಶಿಕ್ಷಿಸುವುದಕ್ಕಾಗಿಯೂ ದಶರಥನ ಮನೆಯಲ್ಲಿ ಅವತರಿಸಿರುವ ಸರ್ವಸಾಕ್ಷಿಯಾದ ಪರಮಾತ್ಮನಾಗಿರುವೆನು ॥೧೪॥

ಇಂತಹ ನಾನು, ತಂದೆಯ ಅಪ್ಪಣೆಯನ್ನು ವ್ಯಾಜಮಾಡಿಕೊಂಡು, ಅನೇಕ ಕೋಟಿ ರಾಕ್ಷಸರನ್ನು ಕೊಲ್ಲುವುದಕ್ಕಾಗಿ, ಸೀತಾಲಕ್ಷ್ಮಣರೊಡನೆ ದಂಡಕಾರಣ್ಯವನ್ನು ಪ್ರವೇಶಿಸಿರುವೆನು ॥೧೫॥

ಹೀಗೆ ಈ ದಂಡಕಾರಣ್ಯಕ್ಕೆ ಪ್ರವೇಶಮಾಡಿದ ಹದಿಮೂರು ವರ್ಷಗಳ ಮಧ್ಯದಲ್ಲಿ ನಾನು ಅನೇಕವಾಗಿ ದೇವತೆಗಳ ಕೆಲಸವನ್ನು ಮಾಡಿರುವೆನು ಏದುಕಾರಣ, ದುರಾತ್ಮನಾದ ರಾವಣನನ್ನು ಕೊಲ್ಲುವುದು ನನಗೆ ಅವಶ್ಯವಾದ ಕೆಲಸವಾಗಿರುವುದು ॥೧೬॥

ಸಂವತ್ಸರೋವಶಿಷ್ಟೋ ಮೇ ರಾವಣಸ್ಯ ವಧಾರ್ಥಿನಃ ।
ಸಬನ್ಧೋರತಿವೃತ್ತಸ್ಯ ಸನಿಮಿತ್ತವಧೋ ಭವೇತ್ ॥೧೩॥
ಸೀತಾಹರಣಕಾಮೇನ ರಾವಣೇನ ದುರಾತ್ಮನಾ ।
ಮಮಾಶ್ರಮಮಿದಂ ಪ್ರಾಪ್ತಂ ಅವಶಿಷ್ಟೇನ ಮನ್ತ್ರಿಣಾ ॥೧೪॥
ಏತೇನೈವ ನಿಮಿತ್ತೇನ ಹನ್ತುಂ ಶಕ್ಯೋ ಮಯಾಸುರಃ ।
ಅವಶಿಷ್ಟವಧಾರ್ಥಾಯ ಪುನರ್ಜನ್ಮ ಭವೇನ್ಮಮ ॥೧೫॥
ನ ಕೃತಂ ಸೇತುಬನ್ಧೋಪಿ ಬ್ರಹ್ಮಹತ್ಯಾನಿವಾರಕಃ ।
ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ ॥೧೦॥
ರಾವಣಂ ಪಾಪಕರ್ಮಾಣಂ ಹತ್ವಾ ಲಂಕಾಪುರೀಂ ಕ್ಷಣೇ ।
ಆಚನ್ದ್ರಾರ್ಕಂ ಮಹಾಖ್ಯಾತಿಃ ಪಾವನೀ ಸಂಭವಿಷ್ಯತಿ ।
ರಾಮಾಯಣಕಥಾ ಚಾಪಿ ಭವಿಷ್ಯತಿ ಸುಪಾವನೀ ॥೧೧॥

ನಾನು ರಾವಣನ ವಧಾರ್ಥಿಯಾಗಿಯೇ ಇರುವೆನು. ಅವನನ್ನು ಕೊಲ್ಲುವುದಕ್ಕೆ ನನಗೆ ಇನ್ನೊಂದು ವರ್ಷಕಾಲ ಅವಶಿಷ್ಟವಾಗಿರುವುದು. ಅತಿದುರ್ವೃತ್ತನಾಗಿರುವ ಅವನನ್ನು ಯಾವುದಾದರೊಂದು ನಿಮಿತ್ತಮಾಡಿಕೊಂಡು ಒಂಧುಸಹಿತನಾಗಿ ಕೊಲ್ಲಬೇಕಾಗಿರುವುದು ॥೧೩॥

ಆ ದುರಾತ್ಮನಾದ ರಾವಣನೂ ಕೂಡ, ಸೀತೆಯನ್ನು ಅಪಹರಿಸಬೇಕೆಂಬ ಇಚ್ಛೆಯಿಂದ ಹಿಂದೆ ವಿಶ್ವಾಮಿತ್ರಯಜ್ಞಕಾಲದಲ್ಲಿ ನನ್ನಿಂದ ಹತಶೇಷನಾದ ಮಂತ್ರಿಯಾದ ಮಾರೀಚನೊಡನೆ ನನ್ನ ಆಶ್ರಮಕ್ಕೆ ಬಂದಿರುವನು ॥೧೪॥

ಇದನ್ನೇ ನಿಮಿತ್ತಮಾಡಿಕೊಂಡು ನಾನು ಆ ರಾವಣನನ್ನು ಕೊಲ್ಲಬಹುದಾಗಿರುವುದು. ಆದರೆ, ಇಲ್ಲಿಯೇ ಅವನನ್ನು ಕೊಂದುಬಿಟ್ಟರೆ, ಮಿಕ್ಕ ರಾಕ್ಷಸರನ್ನೆಲ್ಲ ಕೊಲ್ಲುವುದಕ್ಕಾಗಿ ನಾನು ಪುನಃ ಅವತಾರಮಾಡಬೇಕಾಗುವುದು ॥೧೫॥

ಇದೂ ಅಲ್ಲದೆ, ಸರ್ವಜನರಿಗೂ ಬ್ರಹ್ಮಹತ್ಯಾ ನಿವಾರಕವಾದ ಸೇತುವೂ ನನ್ನಿಂದ ಇನ್ನೂ ಮಾಡಲ್ಪಡಲಿಲ್ಲ. ನಾನುಮಾಡುವ ಸಮುದ್ರಸೇತುವಿನ ದರ್ಶನಮಾತ್ರದಿಂದಲೇ ಮನುಷ್ಯನು ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳುವನು ॥೧೦॥

ಪಾಪಕರ್ಮನಾದ ರಾವಣನನ್ನೂ ಅವನ ರಾಜಧಾನಿಯಾದ ಲಂಕಾಪಟ್ಟಣವನ್ನೂ ಒಂದು ಕ್ಷಣ ಕಾಲದೊಳಗಾಗಿ ನಾಶಮಾಡಿಬಿಟ್ಟರೆ, ಆಗ ನನಗೆ ಆಚಂದ್ರಾರ್ಕವಾಗಿ ಪವಿತ್ರವಾದ ಮಹಾಖ್ಯಾತಿಯು ಉಂಟಾಗುವುದು, ಅತಿಪಾವನವಾದ ರಾಮಾಯಣಕಥೆಯೂ ಪ್ರಚುರವಾಗುವುದು ॥೧೧॥

ಹರ್ತುಂ ನ ಶಕ್ಯಾ ಪಾಪೇನ ಸೀತಾ ಮೇ ಹ್ಯನಪಾಯಿನೀ ॥೨೦॥
ಶ್ರೀಮೂರ್ತಿರೂಪಿಣೀ ದೇವೀ ಗೌರೀ ಲಕ್ಷ್ಮೀಃ ಸರಸ್ವತೀ ।
ದೇವತಾ ಸರ್ವಲೋಕಾನಾಂ ಅರ್ಚಿತಾ ಸರ್ವದಾಯಿನೀ ॥೨೧॥
ಅಹಂ ಸರ್ವಸ್ಯ ಜಗತಃ ಪೂಜನೀಯೋಸ್ಮಿ ದೈವತಮ್ ।
ಅತೋ ಮಾಯಾಮಯೀಂ ಸೀತಾಂ ಕಲ್ಪಯಾಮಿ ವಿಮೋಹಿನೀಮ್ ॥
ಮುನಿಮೇವಂ ಸಮಾಭಾಷ್ಯ ತಂ ವಿಸೃಜ್ಯ ರಘೂತ್ತಮಃ ।
ತತಃ ಸೀತಾಂ ಸಮಾಹೂಯ ವಚನಂ ಚೇದಮಬ್ರವೀತ್ ॥೨೩॥
ಪಶ್ಯ ವೈದೇಹಿ ಯತ್ ಕೃತ್ಯಂ ರಾವಣಸ್ಯ ದುರಾತ್ಮನಃ ।
ಮಹ್ಯಂ ದ್ರೋಹಂ ಕರ್ತುಮಿಚ್ಛುಃ ಮಾರೀಚೇನ ದುರಾತ್ಮನಾ ॥೨೬॥
ಮಾಂ ನ ಜಾನಾತಿ ದುರ್ವೃತ್ತೋ ಮಾಯಿನಾಮಪಿ ಮಾಯಿನಮ್ ।
ಮಾಯಾವಿಮೋಹಿತೋ ಹ್ಯೇಷಃ ಮಮ ಮಾಯಾ ದುರತ್ಯಯಾ ॥೨೭॥
ಮನ್ಮಾಯಾಮೋಹಿತಾಃ ಸರ್ವೇ ಬ್ರಹ್ಮರುದ್ರಾದಯೋಖಿಲಾಃ ।
ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥೨೮॥

ಎಂದಿಗೂ ನನ್ನನ್ನು ಬಿಡದಿರುವ ಸೀತೆಯನ್ನು ಆ ಪಾಪಾತ್ಮನು ಅಪಹರಿಸಲು ಸುತರಾಂ ಸಮರ್ಥನಾಗುವುದಿಲ್ಲ ಈ ಸೀತಾದೇವಿಯು, ಶ್ರೀದೇವಿಯ ಅವತಾರಭೂತಳು, ಗೌರಿಯೂ, ಲಕ್ಷ್ಮಿಯೂ, ಸರಸ್ವತಿಯೂ ಇವಳೇಯೆ, ಸಮಸ್ತಲೋಕಗಳಿಗೂ ಇವಳು ದೇವತಾಸ್ವರೂಪಳು, ಇವಳು ತನ್ನನ್ನು ಪೂಜಿಸಿದವರಿಗೆ ಇಷ್ಟಾರ್ಥಗಳನ್ನು ಕೊಡತಕ್ಕವಳು ॥೨೦-೨೧॥

ನಾನು ಸಮಸ್ತಲೋಕಗಳಿಗೂ ಪೂಜನೀಯನಾಗಿಯೂ ದೈವತವಾಗಿಯೂ ಇರುವೆನು ಅದುಕಾರಣ, ಸಕಲಲೋಕಮೋಹಕಳಾದ ಮಾಯಾಸೀತೆಯನ್ನು ಕಲ್ಪಿಸಿಕೊಳ್ಳುವೆನು ॥೨೪॥

ಹೀಗೆಂದು ನಾರದಮುನಿಗೆ ಹೇಳಿ ಅವನನ್ನು ಕಳುಹಿಸಿ, ಬಳಿಕ ರಾಮಚಂದ್ರನು ಸೀತಾದೇವಿಯನ್ನು ಕರೆದು ಈ ಮಾತನ್ನು ಹೇಳಿದನು ॥೨೫॥

ಎಲೌ ಸೀತೆ! ದುರಾತ್ಮನಾದ ರಾವಣನ ಕೆಲಸವನ್ನು ನೋಡುವಳಾಗು ಆ ಪಾಪಾತ್ಮನು, ಮಹಾನೀಚನಾದ ಮಾರೀಚನೊಡಗೂಡಿದವನಾಗಿ, ನನಗೆ ದ್ರೋಹಮಾಡಬೇಕೆಂದು ಇಚ್ಛಿಸುತಿರುವನು ॥೨೬॥

ಆ ದುರ್ವೃತ್ತನು, ನಾನು ಮಾಯಾವಂತರಿಗೆಲ್ಲ ಮಾಯೆಯನ್ನು ತೋರಿಸತಕ್ಕವನೆಂಬುದನ್ನು ಅರಿಯನು ಇವನು ನನ್ನಮಾಯೆಯಿಂದ ಮೋಹಿತನಾಗಿರುವನು. ನನ್ನ ಮಾಯೆಯನ್ನು ಯಾರೂ ಮೀರಲಾರರು ॥೨೭॥

ಬ್ರಹ್ಮ ರುದ್ರ ಮೊದಲಾದವರೆಲ್ಲರೂ ನನ್ನ ಮಾಯೆಯಿಂದ ಮೋಹಿತರಾಗಿರುವರು.

ಇತಿ ಸೀತಾಂ ಸಮಾಭಾಷ್ಯ ಸರ್ವಜ್ಞೋ ರಾಘವಃ ಸ್ವಯಮ್ ।
ಮೃತ್ಯುದೇವೀಂ ಸಮಾಹೂಯ ವಚನಂ ಚೇದಮಬ್ರವೀತ್ ॥೮॥
ರಾವಣಂ ಜಹಿ ಪಾಪಿಷ್ಠಂ ಗರ್ವಿತಂ ಸಹ ಬನ್ಧುಭಿಃ ।
ಪ್ರವಿಶ್ಯ ತತ್ಪುರೀಂ ದಿವ್ಯಾಂ ದೇವದಾನವದುರ್ಜಯಾಮ್ ॥೯॥

ಮೃತ್ಯುರುವಾಚ

ಪ್ರವೇಶೋ ನಾಸ್ತಿ ಲಂಕಾಯಾಂ ಮಮ ದೇವರಿಪೋರ್ಭಯಾತ್ ।
ಆಬ್ರಹ್ಮ ಸ್ತಮ್ಬಪರ್ಯನ್ತಂ ದುಷ್ಪ್ರವೇಶಾ ಹಿ ಸಾ ಪುರೀ ॥೧೦॥
ಕೋ ಹಿ ಲಂಕಾಂ ಪ್ರವಿಶತಿ ರಾವಣಾನುಗ್ರಹಂ ವಿನಾ ।
ಶಾಸನಂ ತಸ್ಯ ದುರ್ವೃತ್ತೇಃ ಮೃತ್ಯೋರಪಿ ಭಯಂಕರಮ್ ॥೧೧॥
ಗೃಹೀತ್ವಾ ಮಾಂ ದುರಾಚಾರೋ ಬಾಧತೇ ಪ್ರಾಣಸಙ್ಕಟಮ್ ।
ರಾವಣಾಧಿಷ್ಠಿತದಿಶೋ ವನ್ದನಂ ಕ್ರಿಯತೇ ಮಯಾ ॥೧೧॥

ಯಾರು ನನ್ನನ್ನೇ ಶರಣಾಗತರಾಗುವರೋ, ಅವರು ಮಾತ್ರವೇ ನನ್ನ ಈ ಮಾಯೆಯನ್ನು ದಾಟುವರು ॥೭೮॥

ಹೀಗಂದು ಸೀತೆಗೆ ಹೇಳಿ, ಸ್ವಯಂ ಸರ್ವಜ್ಞನಾದ ರಾಘವನು ಮೃತ್ಯುದೇವಿಯನ್ನು ಕರೆದು ಈ ಮಾತನ್ನು ಹೇಳಿದನು ॥೭೯॥

ಎಲೌ ಮೃತ್ಯುದೇವಿ! ದೇವತೆಗಳಿಗೂ ದಾನವರಿಗೂ ಜಯಿಸಲಸಾಧ್ಯವಾದ ರಾವಣನ ರಾಜಧಾನಿಗ ಹೋಗಿ, ಮಹಾಗರ್ವಿಷ್ಠನಾಗಿರುವ ಪಾಪಾತ್ಮನಾದ ರಾವಣನನ್ನು ಅವನ ಬಂಧುಗಳೊಡನೆ ಕೊಂದುಬಿಡು ॥೮೦॥

ಈ ಮಾತನ್ನು ಕೇಳಿ ಮೃತ್ಯುದೇವಿಯು ಹೇಳುವಳು —

ಸ್ವಾಮೀ! ದೇವತೆಗಳಿಗೆಲ್ಲ ಶತ್ರುವಾಗಿರುವ ಆ ರಾವಣನ ಹದರಿಕೆಯಿಂದ, ನಾನು ಲಂಕಾಪಟ್ಟಣದೊಳಕ್ಕೆ ಪ್ರವೇಶಿಸುವುದೇ ಅಸಾಧ್ಯವಾಗಿರುವುದು ಆ ಲಂಕಾಪಟ್ಟಣವು, ಚತುರ್ಮುಖಬ್ರಹ್ಮ ಮೊದಲುಮಾಡಿಕೊಂಡು ಒಂದು ತೃಣದವರೆಗ ಯಾರಿಂದಲೂ ಪ್ರವೇಶಿಸಲು ಅಸಾಧ್ಯವಾಗಿರುವುದು ॥೮೧॥

ರಾವಣನ ಅನುಗ್ರಹವಿಲ್ಲದೆ ಲಂಕಾಪಟ್ಟಣವನ್ನು ಯಾವನುತಾನೆ ಪ್ರವೇಶಿಸುವನು? ಅತಿದುರ್ವೃತ್ತನಾದ ಅವನ ಆಜ್ಞೆಯು ಮೃತ್ಯುವಿಗೂ ಭಯಜನಕವಾಗಿರುವುದು ॥೮೨॥

ದುರಾಚಾರನಾದ ಅವನು, ನನ್ನನ್ನು ಹಿಡಿದುಕೊಂಡು, ನನಗೆ ಪ್ರಾಣಸಂಕಟವುಂಟಾಗು

ಪ್ರಾಣಸಂಕಯಮಾಪನ್ನಾ ದುರ್ಲಭಂ ಜೀವಿತಂ ಮಮ ।
ತಥಾಪಿ ತಾಂ ಪ್ರವೇಕ್ಷ್ಯಾಮಿ ಶಾಸನಾತ್ ತವ ರಾಘವ ॥೩೪॥
ತಚ್ಛ್ರುತ್ವಾ ವಚನಂ ತಸ್ಯಾಃ ಹರ್ಷಾ ರಾಮೋ ಮಹಾಬಲಃ ।
ಭಯಂ ಸಂತ್ಯಜ್ಯತಾಂದೇವಿ ಮಯಿ ಕ್ಷೇಮಕರೇ ತವ ॥೩೫॥
ಮೃತ್ಯುಮೇವಂ ಸಮಾಶ್ವಾಸ್ಯ ಮಾಯಯಾ ರಘುನನ್ದನಃ ।
ರಾವಣಸ್ಯ ವಿನಾಶಾರ್ಥಂ ಮೃತ್ಯುಂ ಸೀತಾಮಕಲ್ಪಯತ್ ॥೩೬॥
ಕಲ್ಪಿತಾ ಸಾ ಜನಕಜಾ ಲಙ್ಕಾಪ್ರರವಿನಾಶಿನೀ ।
ವಿಸ್ಮೃತ್ಯ ಪೂರ್ವವೃತ್ತಾನ್ತಂ ರಾಮಸೇವಾಪರಾಭವತ್ ॥೩೭॥
ಮಾಯಾಸೀತಾಂ ಸಮಾಲೋಕ್ಯ ಸೀತಾ ಭೂತನಯಾಬ್ರವೀತ್ ॥೩೮॥
ಕಾ ವಾ ರಾಮ ತ್ವಯಾ ಸೀತಾ ಮಮ ರೂಪಾನುರೂಪಿಣೀ ।
ಮಾಮದಾನ್ಮೇ ಪಿತಾ ರಾಮ ವಿಶ್ವಸ್ಯ ಮಿಥಿಲಾಧಿಪಃ ।
ಅವಿಜ್ಞಾಯಾಪರಾಧಂ ಮೇ ನ ಚ ಮಾಂ ತ್ಯಕ್ತುಮರ್ಹಸಿ ॥೩೯॥

ವಂತೆ ಬಾಧೆಪಡಿಸುವನು. ಆದುಕಾರಣ, ರಾವಣನು ಯಾವ ದಿಕ್ಕಿನಲ್ಲಿರುವನೋ--ಆ ದಿಕ್ಕಿಗೇ ನಾನು ನಮಸ್ಕಾರಮಾಡುವೆನು ॥೩೩॥

ನನಗೆ ಈಗ ಪ್ರಾಣವುಳಿಯುವುದೇ ಸಂದಿಗ್ಧವಾಗಿರುವುದು, ಜೀವಿತವು ದುರ್ಲಭವಾಗಿರುವುದು. ರಾಮಭದ್ರ ! ಆದರೂ ನಾನು ನಿನ್ನ ಆಜ್ಞೆಯನ್ನು ವಿಚಾರಿಸದೆ ಲಂಕಾಪಟ್ಟಣವನ್ನು ಪ್ರವೇಶಿಸುವೆನು ॥೩೪॥

ಹೀಗೆ ಹೇಳಿದ ಆ ಮೃತ್ಯುದೇವಿಯ ಮಾತನ್ನು ಕೇಳಿ, ಮಹಾಬಲನಾದ ರಾಮಚಂದ್ರನು, ಅವಳನ್ನು ಕುರಿತು ' ಎಲೌ ಮೃತ್ಯುದೇವಿ ! ನಾನು ನಿನಗೆ ಕ್ಷೇಮವನ್ನುಂಟುಮಾಡತಕ್ಕವನಾಗಿರುವಾಗ, ನೀನು ಈ ಭಯವನ್ನು ಬಿಟ್ಟುಬಿಡು ' ಎಂದು ಹೇಳಿದನು ॥೩೫॥

ಹೀಗೆ ಆ ರಘುನಂದನನು ಮೃತ್ಯುದೇವಿಯನ್ನು ಸಮಾಧಾನಪಡಿಸಿ, ರಾವಣನ ವಧೆಗೋಸ್ಕರವಾಗಿ ಆ ಮೃತ್ಯುವನ್ನೇ ಸೀತೆಯನ್ನಾಗಿ ಮಾಡಿಬಿಟ್ಟನು ॥೩೬॥

ಈಗೀತಿಯಾಗಿ ಲಂಕಾಪುರವನ್ನು ನಾಶಮಾಡುವುದಕ್ಕೋಸ್ಕರ ಕಲ್ಪಿಸಲ್ಪಟ್ಟಿರುವ ಆ ಮಾಯಾಸೀತೆಯು, ತನ್ನ ಪೂರ್ವವೃತ್ತಾಂತವನ್ನೆಲ್ಲ ಮರೆತುಬಿಟ್ಟು, ರಾಮನ ಸೇವೆಯಲ್ಲಿ ನಿರತಳಾದಳು ॥೩೭॥

ಆಗ ಆ ಮಾಯಾಸೀತೆಯನ್ನು ಕಂಡು, ಭೂದೇವೀಸುತೆಯಾದ ತಾತ್ವಿಕಸೀತೆಯು ರಾಮಚಂದ್ರನನ್ನು ಕುರಿತು ' ಸ್ವಾಮೀ ! ನನ್ನ ರೂಪಕ್ಕೆ ಅನುರೂಪಳಾಗಿರುವ ಈ ಸೀತೆಯೊಬ್ಬ

ಇತ್ಯುಕ್ತಾಂ ಸುಮುಖೀಂ ಸೀತಾಂ ದೃಷ್ಟ್ವಾ ರಾಮೋ ದಯಾಮ್ಬುಧಿಃ ।
ಭಕ್ತಾರ್ತಿನಾಶನೋ ಗಾಢಂ ಸೀತಾಮಾಲಿಙ್ಗ್ಯ ಸತ್ವರಮ್ ॥೪೦॥
ಉದ್ವೃತ್ತಶಫರಪ್ರಾಯೇ ನೇತ್ರೇ ಕಜ್ಜಲಸುನ್ದರೇ ।
ಶ್ರೀಹಸ್ತೇನೈವ ಸಂಸ್ಪೃಶ್ಯ ಪ್ರಮಮಾರ್ಜಾಶು ನಿರ್ಗತಮ್ ॥೪೧॥
ತತಃ ಸೀತಾಂ ಸಮೂಶ್ವಾಸ್ಯ ವಾಚಾ ಮಧುರಯಾ ಹರಿಃ ।
ಶ್ರೀಹಸ್ತಸ್ಪರ್ಶನಂ ಕೃತ್ವಾ ಪಶ್ಯಪಶ್ಯೇತಿ ಚಾಬ್ರವೀತ್ ॥೪೨॥
ಅನುಗ್ರಹೇಣ ಸಾ ಪತ್ಯುಃ ದಿವ್ಯಜ್ಞಾನಸಮನ್ವಿತಾ ।
ಅಪಶ್ಯತ್ ತಾಂ ಮೃತ್ಯುದೇವೀಂ ಮಾಯಾಸೀತಾಂ ಪ್ರಕಲ್ಪಿತಾಮ್ ॥೪೩॥
ತಾಂ ದೃಷ್ಟ್ವಾ ತತ್ತ್ವತಃ ಸೀತಾ ಭಾವಿ ಕಾರ್ಯಂ ಚ ವಿಸ್ತರಮ್ ।
ಭಯಂ ತ್ಯಕ್ತ್ವಾ ಸುಸ್ಥಿರಾಙ್ಗೀ ಹಸನ್ತೀ ಪ್ರಾಹ ರಾಘವಮ್ ॥೪೪॥

ಳನ್ನು ನೀನು ಎಲ್ಲಿಂದ ತಂದೆ ? ರಾಮ ! ಮಿಥಿಲಾಧಿಪತಿಯಾದ ನನ್ನ ತಂದೆಯು, ನಿನ್ನಲ್ಲಿ ನಂಬಿ ಗೆಯಿಟ್ಟು ನನ್ನನ್ನು ನಿನಗೆ ಕೊಟ್ಟಿರುವನು ನನ್ನಲ್ಲಿ ಯಾವುದೊಂದು ಅಪರಾಧವನ್ನೂ ಕಾಣದೆ ನನ್ನನ್ನು ಬಟ್ಟುಬಿಡುವುದು ನಿನಗೆ ಯುಕ್ತವಲ್ಲ ' ಎಂದು ಹೇಳಿದಳು ॥೩೮-೩೯॥

ಹೀಗೆ ಹೇಳುತಿರುವ ಸುಮುಖಿಯಾದ ಸೀತೆಯನ್ನು ನೋಡಿ, ದಯಾಸಮುದ್ರನಾಗಿರುವ ಭಕ್ತಾರ್ತಿನಾಶಕನಾದ ರಾಮಭದ್ರನು, ಬೇಗನ ಸೀತೆಯನ್ನು ಗಾಢವಾಗಿ ಆಲಿಂಗಿಸಿಕೊಂಡು, ಜಲಿತವಾದ ಮೀನುಗಳಿಗೆ ಸಮಾನವಾಗಿ ಕಜ್ಜಲ(ಕಾಡಿಗೆ)ದಿಂದ ಸುಂದರವಾಗಿರುವ ಅವಳ ನೇತ್ರಗಳನ್ನು ತನ್ನ ದಿವ್ಯಹಸ್ತದಿಂದ ಪರಾಮರ್ಶಿಸಿ, ಅವಳ ಕಣ್ಣುಗಳಿಂದ ಹೊರಟೆದ್ದ ನೀರನ್ನು ಒರೆಸಿದನು ॥೪೦-೪೧॥

ಆನಂತರ, ಆ ಶ್ರೀಹರಿಯು ಮೃದುಮಧುರವಾದ ಮಾತಿನಿಂದ ಸೀತೆಯನ್ನು ಸಮಾಧಾನ ಪಡಿಸಿ, ತನ್ನ ದಿವ್ಯಕರದಿಂದ ಅವಳನ್ನು ಸ್ಪರ್ಶಮಾಡಿ, ಅಲ್ಲಿ ನೋಡುನೋಡು-ಎಂದು ಹೇಳಿದನು ॥೪೨॥

ಆಗ ಅವಳು ತನ್ನ ಪತಿಯ ಅನುಗ್ರಹದಿಂದ ದಿವ್ಯದೃಷ್ಟಿಯುಕ್ತಳಾಗಿ, ಆ ಮೃತ್ಯುದೇವತೆಯು ಮಾಯಾಸೀತೆಯಾಗಿ ಕಲ್ಪಿಸಲ್ಪಟ್ಟಿರುವುದನ್ನು ಕಂಡಳು ॥೪೩॥

ಹೀಗೆ ಸೀತೆಯು ಅವಳನ್ನು ನೋಡಿ, ಮುಂದೆ ನಡೆಯಬೇಕಾಗಿರುವ ವಿಶಾಲವಾದ ಕಾರ್ಯವನ್ನೂ ಪರ್ಯಾಲೋಚಿಸಿ, ಭಯವನ್ನು ಬಿಟ್ಟು ಸ್ಥಿರವಾದ ಶರೀರವುಳ್ಳವಳಾಗಿ, ಮಂದ ಹಾಸಮಾಡುತ ರಾಮನನ್ನು ಕುರಿತು ಹೀಗೆ ಹೇಳಿದಳು ॥೪೪॥

ಕಿಮಿದಂ ನಿರ್ಮಿತಂ ದೇವ ತ್ವಯಾ ವಿಶ್ವಸೃಜಾ ವಿಭೋ ।
ತತ್ತ್ವಂ ತೇ ನ ವಿಜಾನನ್ತಿ ಬ್ರಹ್ಮಾದ್ಯಾಃ ಕಿಮುತ ಸ್ತ್ರಿಯಃ ॥೪೫॥

ಶ್ರೀರಾಮಉವಾಚ

ತ್ವಯಾ ಪೂರ್ವಂ ವರೋ ದತ್ತೋ ದೇವಾನಾಂ ಶರಣಾರ್ಥಿನಾಮ್ ।
ಬನ್ದೀಗೃಹೇಪಿ ವಾ ಸ್ಥಿತ್ವಾ ಮೋಚಯಾಮಿ ಸುರಸ್ತ್ರಿಯಃ ॥೪೬॥
ಕಿಂ ಚ ದೇವೇಶಿ ವೈಕುಣ್ಠೇ ದ್ವಾರ್ಪಾಲೋಃ ಶಾಪಭೀತಯೋಃ ।
ಸಾಹಾಯ್ಯಂ ವಾಂ ಕರಿಷ್ಯಾಮೀತ್ಯೇವಂ ದತ್ತೋ ವರಸ್ತ್ವಯಾ ॥೪೭॥
ತದಾಪ್ರಭೃತಿ ಮೇ ಸಾನ್ನಿಧ್ಯೇ ವರ್ತತೇ ಯುಕ್ತಿಜಿನ್ತನಮ್ ॥೪೮॥
ಸತ್ಯಂ ಕರ್ತುಂ ವರಂ ದತ್ತಂ ತ್ವದ್ವಿಯೋಗಾಸಹಿಷ್ಣುನಾ ।
ಮಾಯಾಸೀತಾ ಮಯಾ ದೇವಿ ಕಲ್ಪಿತಾ ಮೃತ್ಯುದೇವತಾ ।
ಮಯಿ ಸುನ್ದರಿ ತೇ ತಸ್ಮಾತ್ ಭೀರು ನಾಸ್ತ್ಯತ್ರ ಸಂಶಯಃ ॥೪೯॥

ವಿಭೋ! ಸ್ವಾಮಿ! ವಿಶ್ವಕರ್ತನಾದ ನಿನ್ನಿಂದ ಇದೇನು ನಿರ್ಮಿಸಲ್ಪಟ್ಟಿತು ? ಬ್ರಹ್ಮಾದಿಗಳೂ ನಿನ್ನ ತತ್ವವನ್ನು ಅರಿಯಲಾರರು, ಇನ್ನು ಸ್ತ್ರೀಯರ ಪಾಡೇನು ? ॥೪೫॥

ಇದನ್ನು ಕೇಳಿ ಶ್ರೀರಾಮನು ಉತ್ತರಹೇಳುವನು —

ಎಲೌ! ಸೀತೆ! ನೀನು ಪೂರ್ವದಲ್ಲಿ ಶರಣಾಗತರಾಗಿ ಬಂದ ದೇವತಗಳಿಗ 'ನಾನು ಬಂಧನದಲ್ಲಿಯಾದರೂ ಇದ್ದುಗೊಂಡು ದೇವಸ್ತ್ರೀಯರನ್ನು ಬಿಡಿಸುವೆನು' ಎಂದು ವರವನ್ನು ಕೊಟ್ಟಿರುವೆ ॥೪೬॥

ಮತ್ತು, ಎಲೌ ದೇವೇಶ್ವರಿ! ವೈಕುಂಠದಲ್ಲಿ ಸನಕಾದಿಗಳ ಶಾಪದಿಂದ ಭಯಪಡುತಿರುವ ದ್ವಾರಪಾಲಕರಿಗ 'ನಾನು ನಿಮಗೆ ಸಾಹಾಯ್ಯವನ್ನು ಮಾಡುವೆನು' ಎಂದು ನಿನ್ನಿಂದ ವರವು ಕೊಡಲ್ಪಟ್ಟಿರುವುದು ॥೪೭॥

ಆ ಕಾಲ ಮೊದಲುಗೊಂಡು ನಾನು ಮನಸ್ಸಿನಲ್ಲಿ ಇದಕ್ಕೆ ತಕ್ಕ ಉಪಾಯವನ್ನು ಚಿಂತಿಸುತಲೇ ಇರುವೆನು ಎಲೌ ದೇವಿ ! ನಿನ್ನಿಂದ ಕೊಡಲ್ಪಟ್ಟ ವರವನ್ನು ಸತ್ಯವನ್ನಾಗಿ ಮಾಡುವುದ ಕ್ಕೋಸ್ಕರ, ನಿನ್ನ ವಿರಹವನ್ನು ಸಹಿಸಲಾರದೆ ನಾನು ಹೀಗೆ ಮೃತ್ಯುದೇವತೆಯನ್ನು ಮಾಯಾ ಸೀತೆಯನ್ನಾಗಿ ಕಲ್ಪಿಸಿದೆನು. ಎಲೌ ಸುಂದರಿಯೆ ! ಭಯಶಾಲಿನಿಯೆ! ಹೀಗಿರುವುದರಿಂದ, ನೀನು ಈ ವಿಷಯವನ್ನು ಕುರಿತು ನನ್ನಲ್ಲಿ ಸಂಶಯಪಡಬೇಡ ॥೪೮-೪೯॥

ಜಲೇ ಶೈತ್ಯಂ ಯಥಾ ವಹ್ನೌ ಉಷ್ಣತಾ ಹ್ಯನಪಾಯಿನೀ ।
ಶಿವಗೌರ್ಯೋರ್ಯಥಾ ತದ್ವತ್ ಮಯಿ ತೇ ಹ್ಯನಪಾಯಿತಾ ॥೪೦॥
ಯಥಾ ದೃಷ್ಟಂ ತಥಾ ಶ್ರುತ್ವಾ ಸೀತಾನನ್ದಪರಿಪ್ಲುತಾ ।
ಅಪರಾಧವತೀಂ ಮತ್ವಾ ನಿನಿನ್ದ ಸ್ತ್ರೀಷು ಚಾಪಲಮ್ ॥೪೧॥
ತತಃ ಸೀತಾಂ ಸಮಾಹೂಯ ರಾಮೋ ವಚನಮಬ್ರವೀತ್ತೆ ।
ಅದ್ಯಪ್ರಭೃತ್ಯೇಕವರ್ಷಂ ಅದೃಶ್ಯಾ ತಿಷ್ಠ ಮೇ ಹೃದಿ ॥೪೨॥
ಇತ್ಯುಕ್ತ್ವಾ ರಾಘವಃ ಸೀತಾಂ ಸರ್ವಜ್ಞೋ ಜಗದೀಶ್ವರಃ ।
ಸ್ವವಕ್ಷಸ್ಯೇವ ಸಂಸ್ಥಾಪ್ಯ ವಿಜಹಾರ ಯಥಾಸುಖಮ್ ॥೪೩॥
ಏವಂ ರಾಮಕೃತಾಂ ಮಾಯಾಂ ನ ವಿದುರ್ದೇವತಾಅಪಿ ।
ಕಿಂಚಿಜ್ಜ್ಞಾನಾತಿ ಸೌಮಿತ್ರಿಃ ತಥಾಪ್ಯಜ್ಞಾನಮೋಹಿತಃ ॥೪೪॥

ಬಲದಲ್ಲಿ ಶೈತ್ಯವು ಹೇಗೆ ಸರ್ವದಾ ಎಡೆಬಿಡದಿರುವುದೋ, ಅಗ್ನಿಯಲ್ಲಿ ಔಷ್ಣ್ಯವು ಹೇಗ ಇರುವುದೋ, ಶಿವನೂ ಗೌರಿಯೂ ಹೇಗೆ ಒಂದು ಕ್ಷಣವೂ ವಿಯುಕ್ತರಾಗದಿರುವರೋ, ಹಾಗೆ ಸೀನು ನನ್ನಲ್ಲಿ ಸರ್ವದಾ ಸಂಯುಕ್ತಳಾಗಿರುವ ॥೪೦॥

ಆಗ ಸೀತೆಯು ಜ್ಞಾನದೃಷ್ಟಿಯಲ್ಲಿ ತಾನು ಹೇಗೆ ಕಂಡಳೋ–ರಾಮನ ಬಾಯಲ್ಲಿಯೂ ಅದೇರೀತಿಯಾಗಿ ಕೇಳಿ, ಮಹಾನಂದಭರಿತಳಾಗಿ, ತಾನು ರಾಮನಲ್ಲಿ ಅಪರಾಧಮಾಡಿದಂತಾ ಯ್ತೆಂದು ತಿಳಿದುಕೊಂಡು, ಸ್ತ್ರೀಯರು ಕೇವಲ ಚಪಲಚಿತ್ತರೆಂದು ನಿಂದಿಸಿಕೊಂಡಳು ॥೪೧॥

ಅನಂತರ ರಾಮನು ಸೀತೆಯನ್ನು ಕರೆದು ' ಈ ದಿವಸ ಮೊದಲುಮಾಡಿಕೊಂಡು ಒಂದು ವರ್ಷಕಾಲ ನೀನು ನನ್ನ ಹೃದಯದಲ್ಲಿ ಯಾರಿಗೂ ಕಾಣದಂತೆ ವಾಸಮಾಡಿಕೊಂಡಿರು ' ಎಂದು ಹೇಳಿದನು ॥೪೨॥

ಹೀಗೆಂದು ಸೀತಗ ಹೇಳಿ, ಸರ್ವಜ್ಞನಾದ ಜಗನ್ನಾಯಕನಾದ ರಾಮಚಂದ್ರನು, ಸೀತೆಯನ್ನು ತನ್ನ ಹೃದಯದಲ್ಲಿಯೇ ಇಟ್ಟುಕೊಂಡು, ಸುಖವಾಗಿ ವಿಹರಿಸಿಕೊಂಡಿದ್ದನು ॥೪೩॥

ಎಲೌ ಪಾರ್ವತಿ ! ಆಗ್ಗ ರಾಮನು ಈರೀತಿಯಾಗಿ ಮಾಡಿದ ಮಾಯೆಯನ್ನು ದೇವತೆಗಳೂ ಅರಿಯರು ಲಕ್ಷ್ಮಣನು ಮಾತ್ರ ಸ್ವಲ್ಪಬಲ್ಲನ್ನು ಆದರೆ ಅವನೂ ಅಜ್ಞಾನದಿಂದ ಮೋಹಿತನಾಗಿಬಿಟ್ಟಿದ್ದನು ॥೪೪॥

ಏವಂ ವಿಮೋಹಿತೋ ರಾಮಮಾಯಯಾ ಲಕ್ಷ್ಮಣೋಪ್ಯಲಮ್ ।
ಕಿಂ ಪುನಃ ಪಾಮರಾಮತಾರ್ಯಃ ಸಂಸಾರಾಸಕ್ತಚೇತಸಃ ॥೫೫॥

ಇತಿ ಶ್ರೀಮದರಣ್ಯಕಾಣ್ಡೇ ಮಾಯಾಸೀತಾಕರಣಂ ನಾಮ
ತ್ರಯೋದಶಃ ಸರ್ಗಃ.

ಹೀಗೆ ರಾಮನ ಮಾಯೆಯಿಂದ ಲಕ್ಷ್ಮಣನೂ ಕೂಡ ಸಂಪೂರ್ಣವಾಗಿ ಮೋಹಗೊಂಡು ಬಿಟ್ಟಿದ್ದನು; ಇನ್ನು ಸಂಸಾರಾಸಕ್ತಮನಸ್ಕರಾಗಿರುವ ಪಾಮರರಾದ ಮನುಷ್ಯರ ವಿಷಯವನ್ನು ಹೇಳುವುದೇನು ? ॥೫೫॥

ಇದು ಅರಣ್ಯಕಾಂಡದಲ್ಲಿ ಮಾಯಾಸೀತಾಕಲ್ಪನೆಯೆಂಬ
ಹದಿಮೂರನೆಯ ಸರ್ಗವು.

ಅಥ ಶ್ರೀಮದರಣ್ಯಕಾಣ್ಡೇ ಚತುರ್ದಶಃ ಸರ್ಗಃ.

ಶ್ರೀಶಿವಉವಾಚ

ಏತಸ್ಮಿನ್ನೇವ ಸಮಯೇ ಮಾರೀಚಃ ಕಾಲಚೋದಿತಃ ।
ಮೃಗೋ ಭೂತ್ವಾಶ್ರಮದ್ವಾರಿ ರಾಮಸ್ಯ ವಿಚಚಾರ ಹ ॥೧॥
ಸ ತು ರೂಪಂ ಸಮಾಸ್ಥಾಯ ಮಹದದ್ಭುತದರ್ಶನಮ್ ।
ಮಣಿಶ್ರವರಶೃಙ್ಗಾಗ್ರಃ ಸಿತಾಸಿತಮೃಗಾಕೃತಿಃ ॥೨॥
ಕಿಂಚಿದಭ್ಯುನ್ನತಗ್ರೀವಃ ಇನ್ದ್ರನೀಲನಿಭೋದರಃ ।
ಕುನ್ದೇನ್ದುವಜ್ರಸಙ್ಕಾಶಂ ಉದರಂ ಶಶಿಭಾಸ್ವರಮ್ ॥೩॥
ವೈಡೂರ್ಯಸಙ್ಕಾಶಖುರಃ ತನುಜಙ್ಘಃ ಸುಸಂಹತಃ ।
ಇನ್ದ್ರಾಯುಧಸವರ್ಣೇನ ಪುಚ್ಛೇನೋರ್ಧ್ವಂ ವ್ಯರಾಜತ ॥೪॥
ಪ್ರಲೋಭನಾರ್ಥಂ ವೈದೇಹ್ಯಾಃ ನಾನಾಧಾತುವಿಚಿತ್ರಿತಃ ।
ಕ್ಷಣೇನ ರಾಕ್ಷಸೋ ಜಾತೋ ಮೃಗಃ ಪರಮಶೋಭನಃ ॥೫॥

ಅರಣ್ಯಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲಾ ಪಾರ್ವತಿ ! ಹೀಗೆ ನಾರದರು ಬಂದುಹೋದ ಸಮಯದಲ್ಲಿಯೇ, ಕಾಲಚೋದಿತನಾದ ಮಾರೀಚನು, ಮೃಗರೂಪವನ್ನು ಧರಿಸಿ ರಾಮನ ಆಶ್ರಮದ ಬಾಗಿಲಿನಲ್ಲಿ ಸಂಚರಿಸಿದನು ॥೧॥

ಆಗ ಆ ಮಾರೀಚನು, ನೋಡುವುದಕ್ಕೆ ಅತ್ಯಾಶ್ಚರ್ಯಕರವಾಗಿರುವ ರೂಪವನ್ನು ಸ್ವೀಕರಿಸಿ, ಕೊಂಬಿನ ತುದಿಯಲ್ಲಿ ದಿವ್ಯರತ್ನವುಳ್ಳ ಕಪ್ಪು ಬಿಳುಪು ಮಿಶ್ರವಾದ ಜಿಂಕೆಯ ಶರೀರವನ್ನು ಹೊಂದಿ, ಕುತ್ತಿಗೆಯನ್ನು ಸ್ವಲ್ಪ ಮೇಲಕ್ಕೆತ್ತಿಕೊಂಡು, ಉದರಪ್ರದೇಶವನ್ನು–ಒಂದು ಸಮಯದಲ್ಲಿ ಇಂದ್ರನೀಲಮಣಿಗೆ ಸಮಾನವನ್ನಾಗಿಯೂ–ಮತ್ತೊಂದು ಸಮಯದಲ್ಲಿ ಕುಂದ ಚಂದ್ರ ವಜ್ರಗಳಂತೆ ಶುಭ್ರವರ್ಣವನ್ನಾಗಿಯೂ ಚಂದ್ರನಹಾಗೆ ಪ್ರಕಾಶವುಳ್ಳದನ್ನಾಗಿಯೂ ಮಾಡಿಕೊಂಡು, ವೈಡೂರ್ಯವನ್ನು ಹೋಲುವ ಗೊರಸುಗಳನ್ನು ಧರಿಸಿ, ಸೂಕ್ಷ್ಮವಾದ ಜಂಘಾಪ್ರದೇಶವೂ ಪರಿಷ್ಕೃತವಾದ ಮೈಕಟ್ಟೂ ಉಳ್ಳವನಾಗಿ, ಇಂದ್ರಾಯುಧಕ್ಕೆ ಸಮಾನವಾದ ಊರ್ಧ್ವಮುಖವಾದ ಪುಚ್ಛವನ್ನು ಧರಿಸಿಕೊಂಡು ವಿರಾಜಿಸಿದನು ॥೨-೪॥

ಹೀಗೆ ಆ ರಾಕ್ಷಸನು ಸೀತೆಯ ಪ್ರಲೋಭನಾರ್ಥವಾಗಿ ಒಂದು ಕ್ಷಣಕಾಲದಲ್ಲಿ ನಾನಾಧಾತುವಿಚಿತ್ರವಾಗಿ ಪರಮೋತ್ಕೃಷ್ಟವಾದ ಮೃಗವಾಗಿಬಿಟ್ಟನು ॥೫॥

ಅದೃಷ್ಟಾಶ್ಚರ್ಯತಜಿತಾಜ್ಞಂ ಅದ್ಭುತಂ ತಂ ಮೃಗೋತ್ತಮಮ್ ।
ಮುನಿಕನ್ಯಾಃ ಸಮಾಲೋಕ್ಯ ಸೀತಾಯೈ ಸನ್ನ್ಯವೇದಯನ್ ॥೬॥
ಅದೃಷ್ಟಪೂರ್ವಂ ತಂ ದೃಷ್ಟ್ವಾ ನಾನಾರತ್ನಮಯಂ ಮೃಗಮ್ ।
ವಿಸ್ಮಯಂ ಪರಮಂ ಸೀತಾ ಜಗಾಮ ಜನಕಾತ್ಮಜಾ ॥೭॥
ಕಮ್ಪಯಿತ್ವಾ ಶಿರಃ ಕಿಞ್ಚಿತ್ ಪರ್ಣಶಾಲಾನ್ತರಂ ಗತಾ ।
ರಾಮಾಯಾಕಥಯದ್ದೇವೀ ಮೃಗಮದ್ಭುತದರ್ಶನಮ್ ॥೮॥
ಆರ್ಯಪುತ್ರಾಭಿರಾಮೋಽಸೌ ಮೃಗೋ ಹರತಿ ಮೇ ಮನಃ ।
ಆನಯೈನಂ ಮಹಾಬಾಹೋ ಕ್ರೀಡಾರ್ಥಂ ನೋ ಭವಿಷ್ಯತಿ ॥೯॥
ಜೀವಗ್ರಾಹಂ ಗೃಹೀತ್ವಾ ಮೇ ದಾತುಮರ್ಹಸಿ ಸಾಂಪ್ರತಮ್ ।
ಮಹಾವೇಗಬಲೋಪೇತೋ ಗಚ್ಛತ್ಯನ್ಯತ್ರ ರಾಘವ ॥೧೦॥
ಏವಂ ತಸ್ಯಾವಚಃ ಶ್ರುತ್ವಾ ಪ್ರಹಸ್ಯ ರಘುನನ್ದನಃ ।
ಇಯೇಷ ಮೃಗಮಾನೇತುಂ ಭಾವಿಕಾರ್ಯಸ್ಯ ಗೌರವಾತ್ ॥೧೧॥
ತತೋ ಬದ್ಧ್ವಾ ಮಹಾಖಡ್ಗಂ ಜಾಮ್ಬೂನದಮಯತ್ಸರುಮ್ ।
ಮಾರೀಚನಿಧನಂ ಕರ್ತುಂ ಧನುರ್ಬಾಣಯುತೋ ಯಯೌ ॥೧೨॥

ಆಗ, ಯಾವಾಗಲೂ ನೋಡಿಯೂ ಕೇಳಿಯೂ ಇಲ್ಲದ ವಿಚಿತ್ರವಾದ ಅವಯವವುಳ್ಳ ಆಶ್ಚರ್ಯಕರವಾದ ಆ ಮೃಗವನ್ನು ನೋಡಿ, ಋಷಿಕುಮಾರಿಕೆಯರು ಸೀತೆಗೆ ಹೋಗಿ ಹೇಳಿದರು॥

ಒಳಿಕ, ಹುಟ್ಟಿದಂದಿನಿಂದ ನೋಡದಿರುವ ನಾನಾರತ್ನಮಯವಾದ ಆ ಮೃಗವನ್ನು ನೋಡಿ, ಜನಕರಾಜಪುತ್ರಿಯಾದ ಸೀತೆಯು ಪರಮಾಶ್ಚರ್ಯಪಟ್ಟಳು ॥೭॥

ಅನಂತರ, ಆ ಸೀತಾದೇವಿಯು ಸ್ವಲ್ಪ ತಲೆಯನ್ನು ಅಳ್ಳಾಡಿಸುತ, ಪರ್ಣಶಾಲೆಯೊಳಕ್ಕೆ ಹೋಗಿ,ಅತ್ಯಾಶ್ಚರ್ಯವಾಗಿರುವ ಆ ಮೃಗದ ವಿಷಯವನ್ನು ಈರೀತಿಯಾಗಿ ರಾಮನಿಗೆ ತಿಳುಹಿದಳು॥

ಆರ್ಯಪುತ್ರ!ಅತಿಸುಂದರವಾಗಿರುವ ಈ ಮೃಗವು ನನ್ನಮನಸ್ಸನ್ನು ಅಪಹರಿಸಿಬಿಟ್ಟಿರುವುದು ಹೇಮಹಾಬಾಹೋ! ಇದನ್ನು ಹಿಡಿದುಕೊಂಡು ಬಾ, ಇದು ನಮಗೆಲ್ಲರಿಗೂ ಆಟಕ್ಕಾಗಿ ಅನುಕೂಲಿಸುವುದು ॥೯॥

ನೀನು ಇದನ್ನು ಈಗ ಜೀವನೊಡನೆ ಹಿಡಿದುಕೊಂಡು ಒಂದು ನನಗೆಕೊಡಬೇಕಾಗಿರುವುದು. ಹೇರಾಘವ! ಮಹಾವೇಗಬಲಸಂಪನ್ನವಾಗಿರುವ ಇದು ಬೇಗನೆ ಬೇರೇಕಡೆಗೆ ಹೊರಟುಹೋಗುವುದು ॥೧೦॥

ಹೀಗೆ ಹೇಳಿದ ಸೀತೆಯ ಮಾತನ್ನು ಕೇಳಿ, ಆ ರಘುನಂದನನು ಸ್ವಲ್ಪನಕ್ಕು, ಮುಂದಣ ಕಾರ್ಯಗೌರವದಲ್ಲಿ ದೃಷ್ಟಿಯಿಟ್ಟು, ಆ ಮೃಗವನ್ನು ತೆಗೆದುಕೊಂಡು ಬರಲು ಅಶಿಪಟ್ಟನು ॥೧೧॥

ಅನಂತರ, ಸುವರ್ಣಮಯವಾದ ಹಿಡಿಯುಳ್ಳ ಖಡ್ಗವನ್ನು ಹಿಡಿದುಕೊಂಡು, ಮಾರೀಚನಿಧನಾರ್ಥವಾಗಿ ಧನುರ್ಬಾಣಯುಕ್ತನಾಗಿ ಹೊರಟನು ॥೧೨॥

ಪರ್ಣಶಾಲಾದ್ವಾರದೇಶೇ ನಿಯುಜ್ಯ ಸ್ವಕನೀಯಸಮ್ ।
ತತೋ ಗಚ್ಛ ರಘುವರೋ ದದರ್ಶ ಹರಿಣಂ ಮೃಗಮ್ ॥೧೩॥
ಮಾರೀಚೋಪಿ ಹರಿಂ ದೃಷ್ಟ್ವಾ ಮಾಯಾವೀ ಮೃಗರೂಪಧೃಕ್ ।
ಮಾಯಾಂ ತನೋತಿ ದುರ್ಬುದ್ಧಿಃ ಮಾಯಿನಾಮಪಿ ಮಾಯಿನೀಮ್ ॥೧೪॥
ಕ್ವಚಿದುತ್ಪತ್ಯ ಚಲತಿ ಕ್ವಚಿದ್ಧಾವತಿ ಭೀತವತ್ ।
ಅವಲೋಕ್ಯ ಕ್ವಚಿತ್ ಪಶ್ಚಾತ್ ಶನೈರ್ಗಚ್ಛತ್ಯಭೀತವತ್ ॥೧೫॥
ಹಸ್ತಪ್ರಾಪ್ತ ಇವಾಭಾತಿ ರಾಮಾಕರ್ಷಣತತ್ಪರಃ ।
ಏವಂ ದೃಶ್ಯಾದೃಶ್ಯರೂಪಃ ತಮಾಕರ್ಷತ್ ಸುದೂರತಃ ॥೧೬॥
ಸಂಕ್ರುದ್ಧಸ್ತು ತದಾ ರಾಮಃ ಸೂರ್ಯಾಶ್ಮಿಸಮಪ್ರಭಮ್ ।
ಮುಮೋಚ ಜ್ವಲಿತಂ ದೀಪ್ತಂ ಶಸ್ತ್ರಂ ಬ್ರಹ್ಮವಿನಿರ್ಮಿತಮ್ ॥೧೭॥
ತಾಳಮಾತ್ರಮಥೋತ್ಪ್ಲುತ್ಯ ನ್ಯಪತತ್ ಸ ಶರಾತುರಃ ।
ಹಾ ಲಕ್ಷ್ಮಣೇತಿ ವಚನಂ ಸಮುಚ್ಚಾರ್ಯ ತತಸ್ತತಃ ॥೧೮॥
ತದ್ದೇಹಾದುತ್ಥಿತಂ ತೇಜಃ ಸರ್ವಲೋಕಸ್ಯ ಪಶ್ಯತಃ ।
ರಾಮಮೇವಾವಿಶದ್ದೇವಾಃ ವಿಸ್ಮಯಂ ಪರಮಂ ಯಯುಃ ॥೧೯॥

ಬಳಿಕ, ಪರ್ಣಶಾಲೆಯಲ್ಲಿ ರಕ್ಷಣೆಗಾಗಿ ತನ್ನ ತಮ್ಮನನ್ನು ನಿಯೋಗಿಸಿ ಮುಂದಕ್ಕೆ ಹೋಗುತ, ರಘುಶ್ರೇಷ್ಠನು ಸುವರ್ಣಮಯವಾದ ಮೃಗವನ್ನು ಕಂಡನು ॥೧೩॥

ಆಗ ಮೃಗರೂಪವನ್ನು ಧರಿಸಿದ್ದ ದುರ್ಬುದ್ಧಿಯಾದ ಮಾರೀಚನೂಕೂಡ, ಆ ಶ್ರೀಹರಿಯನ್ನು ನೋಡಿ, ಎಂತಹ ಮಾಯಾವಂತರಿಗೂ ಮೋಹವುಂಟುಮಾಡತಕ್ಕ ಮಾಯೆಯನ್ನು ಮಾಡಿದನು ॥೧೪॥

ಒಂದುಕಡೆ ಹಾರಿಹಾರಿ ಹೋಗುವನು, ಒಂದುಕಡೆ ಹದರಿದವನಂತೆ ಓಡುವನು. ಒಂದುಕಡೆ ಹಿಂದೆ ನೋಡಿ ಹದರಿಕೆಯಿಲ್ಲದವನಂತೆ ಮೆಲ್ಲನೆ ನಡೆಯುವನು, ಮತ್ತೊಂದಕಡೆ ರಾಮನನ್ನು ಸೆಳೆದುಕೊಂಡು ಹೋಗಲೆಳಸಿ ಕೈಗೆ ಸಿಕ್ಕಿದಂತೆ ಕಾಣಿಸಿಕೂಳ್ಳುವನು ಹೀಗೆ ಒಂದುಸಮಯದಲ್ಲಿ ಕಾಣಿಸಿಕೊಳ್ಳುತಲೂ, ಮತ್ತೊಂದುಸಮಯದಲ್ಲಿ ಕಾಣಿಸಿಕೊಳ್ಳದೆಯೂ, ಅವನನ್ನು ಬಹುದೂರ ಸೆಳೆದುಕೊಂಡುಹೋಗಿಬಿಟ್ಟನು ॥೧೫-೧೭॥

ಆಗ ಶ್ರೀರಾಮನಾದರೋ, ಅತಿಕುಪಿತನಾಗಿ, ಸೂರ್ಯಕಿರಣಕ್ಕೆ ಸಮಾನವಾಗಿ ಪ್ರಜ್ವಲಿಸುವ ಬ್ರಹ್ಮನಿರ್ಮಿತವಾದ ದಿವ್ಯಾಸ್ತ್ರವನ್ನು ಬಿಟ್ಟುಬಿಟ್ಟನು ॥೧೭॥

ಅನಂತರ, ಆ ಬಾಣದಿಂದ ಹತನಾದ ಮಾರೀಚನು, ಅಯ್ಯೋ! ಲಕ್ಷ್ಮಣಾ! ಎಂದು ಕೂಗಿಕೊಂಡು, ಒಂದು ತಾಳೆಯಮರದಷ್ಟು ಮೇಲಕ್ಕೆ ಹಾರಿ ಬಿದ್ದುಬಿಟ್ಟನು ॥೧೮॥

ಆಗ ಅವನ ದೇಹದದೆಸೆಯಿಂದ ಉತ್ಪನ್ನವಾದ ಒಂದು ತೇಜಸ್ಸು, ಸಮಸ್ತಲೋಕವೂ ನೋಡುತಿರುವಾಗ, ರಾಮನೊಳಗೆಯೇ ಪ್ರವೇಶಿಸಿತು, ಇದನ್ನುಕಂಡು ದೇವತೆಗಳೂ ಪರಮ ವಿಸ್ಮಯಭರಿತರಾದರು ॥೧೯॥

ಯನ್ನಾಮಾಜ್ಞೋಽಪಿ ಮರಣೇ ಸ್ಮೃತ್ವಾ ತತ್ಸಾಮ್ಯಮಾಪ್ನುಯಾತ್ ।
ಕಿಮುತಾಗ್ರೇ ಹರಿಂ ಪಶ್ಯ ತೇನೈವ ನಿಹತೋಸುರಃ ॥೨೦॥
ಕಿಂ ಕರ್ಮ ಕೃತ್ವಾ ಕಿಂ ಪ್ರಾಪ್ತಃ ಪಾತಕೀ ಮುನಿಹಿಂಸಕಃ ।
ಸರ್ವಥಾ ರಾಘವಸ್ಯಾಯಂ ಮಹಿಮಾ ನಾತ್ರ ವಿಸ್ಮಯಃ ॥೨೧॥
ರಾಮಬಾಣೇನ ಸಂವಿದ್ಧಃ ಪೂರ್ವಂ ರಾಮಮನುಸ್ಮರ ! ।
ಭಯಾತ್ ಸರ್ವಂ ಪರಿತ್ಯಜ್ಯ ಗೃಹವಿತ್ತಾದಿಕಂ ಚ ಯತ್ ॥೨೨॥
ಹೃದಿ ರಾಮಂ ಸದಾ ಧ್ಯಾಯ ನಿರ್ಧೂತಾಶೇಷಕಲ್ಮಷಃ ।
ತತೋ ರಾಮೇಣ ನಿಹತಃ ಪಶ್ಯ ರಾಮಮವಾಪ ಸಃ ॥೨೩॥
ದ್ವಿಜಾತಿರ್ನಿರ್ದ್ವಿಜಾತಿರ್ವಾ ಪಾಪಿಷ್ಠೋ ರಾಕ್ಷಸೋಪಿ ವಾ ।
ತ್ಯಜನ್ ಕಳೇಬರಂ ರಾಮಂ ಸ್ಮೃತ್ವಾ ಯಾತಿ ಪರಂ ಪದಮ್ ॥೨೪॥
ಶ್ರುತ್ವಾ ತು ತದ್ವಚಃ ಸೀತಾ ಲಕ್ಷ್ಮಣಂ ಪ್ರತ್ಯಚೋದಯತ್ ।೨೫॥

ಯಾವ ಶ್ರೀಹರಿಯ ನಾಮವನ್ನು ಮರಣಕಾಲದಲ್ಲಿ ಸ್ಮರಿಸಿ ಅಜ್ಞನೂಕೂಡ ಅವನ ಸಾರೂಪ್ಯವನ್ನು ಪಡೆಯುವನೋ, ಅಂತಹ ಶ್ರೀಹರಿಯನ್ನು ಸಾಕ್ಷಾತ್ತಾಗಿ ತನ್ನ ಮುಂದೆಯೇ ನೋಡುತ ಅವನಿಂದಲೇ ಹತನಾದ ಮಾರೀಚನು ಹರಿಸಾಯುಜ್ಯವನ್ನು ಹೊಂದುವುದರಲ್ಲಿ ಆಶ್ಚರ್ಯವೇನು? ॥

ಮಹಾಪಾತಕಿಯಾಗಿಯೂ ಮುನಿಹಿಂಸಾತತ್ಪರನಾಗಿಯೂ ಇರುವ ಆ ಮಾರೀಚನು ಮಾಡಿದ ಕೆಲಸವೆಂತಹುದು!–ಅವನು ಹೊಂದಿದ ಗತಿಯೆಂತಹುದು! ಇದು ಸರ್ವಥಾ ಶ್ರೀರಾಮನ ಮಹಿಮೆಯು, ಇದರಲ್ಲಿ ಸಂಶಯವಿಲ್ಲ ॥೨೧॥

ಪೂರ್ವದಲ್ಲಿ ರಾಮಬಾಣದಿಂದ ತಾಡಿತನಾಗಿ ಸರ್ವದಾ ರಾಮನನ್ನೇ ಸ್ಮರಿಸುತ, ಭಯದಿಂದ ಗೃಹಧನಾದಿಗಳನ್ನೆಲ್ಲ ಬಿಟ್ಟುಬಿಟ್ಟು, ಸಂತತವಾಗಿ ರಾಮಧ್ಯಾನಮಾಡಿದ ಮಹಿಮೆಯಿಂದ ಸಕಲಪಾಪಗಳನ್ನೂ ಕಳೆದುಕೊಂಡು, ಅಂತಕಾಲದಲ್ಲಿಯೂ ರಾಮನಿಂದ ಕೊಲ್ಲಲ್ಪಟ್ಟು, ರಾಮನ ದರ್ಶನವನ್ನು ಮಾಡುತ, ಆ ಮಾರೀಚನು ರಾಮಸಾಯುಜ್ಯವನ್ನು ಪಡೆದನು ॥೨೨–೨೩॥

ಈ ಲೋಕದಲ್ಲಿ, ಬ್ರಾಹ್ಮಣನೇ ಆಗಲಿ, ಅಥವಾ ಪಾಪಜನ್ಮದಲ್ಲಿ ಹುಟ್ಟಿದವನಾಗಲಿ, ಪಾಪಿಷ್ಠನಾಗಿರಲಿ, ರಾಕ್ಷಸನೇ ಆಗಿರಲಿ, ದೇಹತ್ಯಾಗಕಾಲದಲ್ಲಿ ರಾಮನನ್ನು ಸ್ಮರಿಸಿದರೆ, ಅವನು ಪರಮಪದವನ್ನು ಹೊಂದುವನು ॥೨೪॥

ಎಲೌಪಾರ್ವತಿ! ಇದು ಹಾಗಿರಲಿ, ಅತ್ತಲಾಗಿ ಆ ಮಾರೀಚನು ಪ್ರಾಣತ್ಯಾಗಕಾಲದಲ್ಲಿ ಮಾಡಿದ ಆರ್ತಶಬ್ದವನ್ನು ಕೇಳಿ, ಸೀತೆಯು ಲಕ್ಷ್ಮಣನನ್ನು ಈ ರೀತಿಯಾಗಿ ಪ್ರೇರಿಸಿದಳು ॥೨೫॥

ಪ್ರೇರಿತೋ ಮಮ ವಾಕ್ಯೇನ ರಾಘವೋ ವಿಪಿನಂ ಗತಃ ।
ಹಾ ಲಕ್ಷ್ಮಣೇತಿ ವಚನಂ ಶ್ರುತಂ ಮೇ ರಾಘವಾನುಜ ।
ಕಾಂಜೆದಾಪದಮಾಪನ್ನ ಇವ ಭಾತಿ ಮಮ ಪ್ರಿಯಃ ॥೬೬॥
ಗಚ್ಛ ಶೀಘ್ರಮಿತೋ ವೀರ ಶರಂ ಗೃಹ್ಯ ಶರಾಸನಮ್ ।
ನ ವಿಲಂಬಸ್ತ್ವಯಾ ಕಾರ್ಯೋ ರಾಮಂ ರಕ್ಷಿತುಮರ್ಹಸಿ ॥೬೭॥
ಕೋ ವಾ ಮೃಗಃ ಕುತಃ ಪ್ರಾಪ್ತಃ ಕಥಂ ಮೇ ದೃಷ್ಟಿಗೋಚರಃ ।
ಪ್ರೇರಿತಶ್ಚ ಕಥಂ ರಾಮಃ ಪಾಪೆನ್ಯಾ ಸುಖಮಾಸ್ಥಿತಃ ॥೬೮॥
ಇತ್ಯುದೀರಿತಮಾಕರ್ಣ್ಯ ಸೀತಾಯಾರಾಘವಾನುಜಃ ।
ಅಶ್ರುಸಂಪೂರ್ಣನಯನಾಂ ಸೀತಾಮಾಹ ಶುಭಂ ವಚಃ ॥೬೯॥
ತ್ಯಜ ಶೋಕಂ ಮನಸ್ತಾಪಂ ಚಾಪಲ್ಯಂ ಚಾಶ್ರುಪಾತನಮ್ ।
ರಾಮಃ ಶೀಘ್ರಮುಪಾಯಾತಿ ಕ್ಷೇಮಾರೋಗ್ಯಸಮನ್ವಿತಃ ॥೭೦॥

ಎಲೈ ರಾಮಸಹೋದರನೆ! ಶ್ರೀರಾಮನು, ನನ್ನಿಂದ ಪ್ರೇರಿತನಾಗಿ ಅರಣ್ಯಕ್ಕೆ ಹೋದನು. ಈಗಲಾದರೋ 'ಅಯ್ಯೋ! ಲಕ್ಷ್ಮಣಾ!' ಎಂಬ ಆರ್ತಧ್ವನಿಯು ನನಗೆ ಕೇಳಬಂದಿರುವುದು ಇದನ್ನು ನೋಡಿದರೆ, ನನ್ನ ಪ್ರಾಣನಾಥನು ಯಾವುದೋ ಒಂದು ವಿಪತ್ತನ್ನು ಹೊಂದಿರುವಂತೆ ತೋರುವುದು ॥೬೬॥

ಎಲೈವೀರನೆ! ನೀನು ಬೇಗನೆ ಧನುರ್ಬಾಣಗಳನ್ನು ತೆಗೆದುಕೊಂಡು ಇಲ್ಲಿಂದ ಹೊರಡು, ಸ್ವಲ್ಪವೂ ವಿಲಂಬಮಾಡಬೇಡ ಹೇಗಾದರೂಮಾಡಿ ನೀನು ಈಗ ರಾಮನನ್ನು ರಕ್ಷಿಸಬೇಕಾಗಿರುವುದು ॥೬೭॥

ಅಯ್ಯೋ! ಈ ಹಾಳುಮೃಗವಾವುದು! ಇದು ಎಲ್ಲಿಂದ ಬಂದಿತು! ನನ್ನದೃಷ್ಟಿಗೆ ಇದು ಹೇಗೆ ಬಿದ್ದಿತು! ಸುಖವಾಗಿ ಕುಳಿತುಕೊಂಡಿದ್ದ ಶ್ರೀರಾಮಚಂದ್ರನು, ಪಾಪಾತ್ಮಳಾದ ನನ್ನಿಂದ ಏಕೆ ಪ್ರೇರಿಸಲ್ಪಟ್ಟನು! ॥೬೮॥

ಹೀಗ ಹಂಬಲಿಸುತಿರುವ ಸೀತೆಯಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ರಾಮಸಹೋದರನಾದ ಲಕ್ಷ್ಮಣನು, ಅಶ್ರುಪೂರಿತನೇತ್ರಿಯಾದ ಸೀತೆಯನ್ನು ಕುರಿತು, ಅತಿಶುಭವಾದ ಈ ಮಾತನ್ನು ಹೇಳಿದನು ॥೬೯॥

ಎಲೌ ಸೀತಾದೇವಿ! ನೀನು ಈ ಶೋಕವನ್ನೂ ಮನಸ್ಸಿನ ಸಂತಾಪವನ್ನೂ ಚಾಪಲ್ಯವನ್ನೂ ಕಣ್ಣೀರುಸುರಿಸುವಿಕೆಯನ್ನೂ ಬಿಡುವಳಾಗು, ಶ್ರೀರಾಮನು ಕ್ಷೇಮದಿಂದಲೂ ಆರೋಗ್ಯದಿಂದಲೂ ಯುಕ್ತನಾಗಿ ಬೇಗನ ಬರುವನು ॥೭೦॥

ಯಸ್ಯ ಸ್ಮರಣಮಾತ್ರೇಣ ಕ್ಷೇಮಾರೋಗ್ಯಂ ಭವೇನ್ನೃಣಾಮ್ ।
ಘೋರವ್ಯಾಘ್ರಭಯಾಕೀರ್ಣೇ ಭಯೇ ಘೋರತರೇ ವನೇ ॥೩೧॥
ಅನನ್ಯಮನಸಾ ಯುಕ್ತೋ ರಾಮಂ ಸ್ಮರತಿ ಯೋ ನರಃ
ದುರ್ಗಾಣ್ಯತಿತರತ್ಯೇವ ದುರುಚ್ಛೇದಾಮಹಾಪದಃ ॥೩೨॥
ನಿರ್ಗರ್ಹಿತಂ ಚ ಹೀನಂ ಚ ಕಥಮಾರ್ಯೋಽಭಿಧಾಸ್ಯತಿ ।
ತ್ರಾಹೀತಿ ವಚನಂ ಸೀತೇ ಯಸ್ತ್ರಾಯೇತ ತ್ರಿದಶಾನಪಿ ॥೩೩॥
ಪನ್ನಗಾಸುರಗನ್ಧರ್ವದೇವಮಾನುಷರಾಕ್ಷಸೈಃ ।
ಅಕಕ್ಷ್ಯಸ್ತವ ವೈದೇಹಿ ಭರ್ತಾ ಜೇತುಂ ನ ಸಂಶಯಃ ॥೩೪॥
ನಿವಾರ್ಯಂ ಬಲಂ ತಸ್ಯ ಒಲ್ಲೈರ್ಬಲವತಾಮಪಿ ।
ತ್ರಿಭಿರ್ಲೋಕೈಃ ಸಮುದ್ಯುಕ್ತೈಃ ಸೇಶ್ವರೈರಪಿ ಸಾಮರೈಃ ।
ಅವಧ್ಯಃ ಸರ್ವತೋ ರಾಮೋ ನೈವಂ ತ್ವಂ ವಕ್ತುಮರ್ಹಸಿ ॥೩೫॥
ಆಗಮಿಷ್ಯತಿ ತೇ ಭರ್ತಾ ಶೀಘ್ರಂ ಹತ್ವಾ ಮೃಗೋತ್ತಮಮ್ ।
ನ ಸ ತಸ್ಯ ಸ್ವರೋ ವ್ಯಕ್ತೋ ಮಾಯಯಾ ಕೇನಚಿತ್ ಕೃತಃ ॥೩೬॥
ನ್ಯಸ್ತಾ ತ್ವಂ ಮಯಿ ರಾಮೇಣ ನ ತ್ವಾಂ ತ್ಯಕ್ತುಮಿಹೋತ್ಸಹೇ ॥೩೭॥

ಜೋರಭಯದಿಂದಲೂ ವ್ಯಾಘ್ರಭಯದಿಂದಲೂ ವ್ಯಾಪ್ತವಾಗಿರುವ ಅತಿಘೋರವಾದ ಅರಣ್ಯದಲ್ಲಿಯೂ ಕೂಡ, ಯಾವನ ಸ್ಮರಣಮಾತ್ರದಿಂದಲೇ ಮನುಷ್ಯರಿಗೆ ಕ್ಷೇಮಾರೋಗ್ಯಗಳು ಲಭಿಸುವುದೋ, ಅಂತಹ ಮಹಾನುಭಾವನಿಗ ಭಯವಾವುದು? ॥೩೧॥

ಯಾವ ಮನುಷ್ಯನು ಅನನ್ಯಚಿತ್ತನಾಗಿ ರಾಮನಲ್ಲಿಯೇ ಮನಸ್ಸಿಟ್ಟು ಅವನನ್ನು ಸ್ಮರಿಸುತಿರುವನೋ, ಅವನು ಎಂತಹ ದುರ್ಗಗಳನ್ನಾದರೂ ಎಂತಹ ದುರುಚ್ಛೇದಗಳಾದ ವಿಪತ್ತುಗಳನ್ನಾದರೂ ದಾಟಿಬಿಡುವನು, ಇದರಲ್ಲಿ ಸಂಶಯವಿಲ್ಲ ॥೩೨॥

ಎಲೌ ಸೀತಾದೇವಿ! ಯಾವ ಮಹಾನುಭಾವನು ದೇವತೆಗಳನ್ನೂ ಕೂಡ ಕಾಪಾಡುವೆನೋ, ಅಂತಹ ನಮ್ಮ ಆರ್ಯನು, ಅತಿಗರ್ಹಿತವಾಗಿಯೂ ಹೀನವಾಗಿಯೂ ಇರುವ 'ತ್ರಾಹಿ' ಎಂಬ ವಚನವನ್ನು ಹೇಗೆ ಹೇಳಿಯಾನು? ॥೩೩॥

ಎಲೌ ವಿದೇಹರಾಜಪುತ್ರಿ! ನಿನ್ನ ಪತಿಯು, ಪನ್ನಗ ಅಸುರ ಗಂಧರ್ವ ದೇವ ಮಾನುಷ ರಾಕ್ಷಸರಾರಿಂದಲೂ ಗೆಲ್ಲಲ್ಪಡಲು ಸಾಧ್ಯನಲ್ಲ, ಇದರಲ್ಲಿ ಸಂಶಯಪಡಬೇಡ ॥೩೪॥

ಮಹಾಬಲಶಾಲಿಗಳ ಬಲದಿಂದಲೂ ಅವನ ಬಲವು ನಿವಾರಿಸಲ್ಪಡಲು ಸಾಧ್ಯವಲ್ಲ. ಮೂರು ಲೋಕಗಳೂ ಪ್ರಯತ್ನಪಟ್ಟರೂ, ಪರಮೇಶ್ವರನೂ ಸಮಸ್ತದೇವತೆಗಳೂ ಬಂದುಸೇರಿದರೂ, ರಾಮನು ಸರ್ವಾತ್ಮನಾ ವಧಿಸಲು ಸಾಧ್ಯನಲ್ಲ ಅದುಕಾರಣ, ಈಗ ನೀನು ಹೀಗೆ ಹೇಳಬಾರದು ॥

ನಿನ್ನ ಭರ್ತನು, ಆ ಮೃಗವನ್ನು ಕೊಂದು ಬೇಗನೆ ಬಂದುಬಿಡುವನು ಈಗ ನಮ್ಮ ಕಿವಿಗೆ ಬಿದ್ದ ಸ್ವರವು ಅವನದಲ್ಲ; ಯಾವನೋ ಮಾಯೆಯಿಂದ ಅವನಹಾಗೆ ಸ್ವರವನ್ನು ಮಾಡಿರುವನು.

ಲಕ್ಷ್ಮಣೇನೈವಮುಕ್ತಾ ಸಾ ಕ್ರುದ್ಧಾ ಸಂರಕ್ತಲೋಚನಾ ।
ಅಬ್ರವೀತ್ ಪರುಷಂ ವಾಕ್ಯಂ ರಾಮಮಾಯಾವಿಮೋಹಿತಾ ॥೩೯॥
ಮಮ ಹೇತೋಃ ಪ್ರತಿಚ್ಛನ್ನಃ ಪ್ರಯುಕ್ತೋ ಭರತೇನ ವಾ ।
ತನ್ನ ಸಿಧ್ಯತಿ ಸೌಮಿತ್ರೇ ನ ಚಾಪಿ ಭರತಸ್ಯ ವಾ ॥೪೧॥
ಶುತ್ವಾ ತದ್ವಚನಂ ಕ್ರೂರಂ ಕರ್ಣನಾರಾಚಸನ್ನಿಭಮ್ ।
ದಧ್ಯೌ ಕ್ಷಣಂ ಮಹಾಬಾಹುಃ ಸರ್ವಮರ್ಮನಿಕೃನ್ತನಮ್ ॥೪೦॥
ಮಮ ಶೀಲಂ ಪರಿಜ್ಞಾಯ ರಾಮಸ್ಯಾಪಿ ಪರಾಕ್ರಮಮ್ ।
ಕಥಂ ಸೀತಾತಿಕಲುಷಾ ಮಾಮೇವಂ ದುರ್ವಚೋಬ್ರವೀತ್ ॥೪೧॥
ನೇಯಂ ಸೀತಾ ಜನಕಜಾ ಸಾ ಚೇದೇವಂ ನ ಮಾಂ ವದೇತ್ ।
ಅತಿಮರ್ಮಕರೋರಾಣಿ ನ ಮಾಂ ಸಾ ವಕ್ತಿ ಕರ್ಹಿಚಿತ್ ॥೪೨॥
ಮುಗ್ಧಾ ರಾಜಸುತಾ ಸಾಧ್ವೀ ನೇದೃಶಂ ವಕ್ತುಮರ್ಹತಿ ।
ಸಮ್ಮಾನಯತಿ ಮಾತೇವ ಯೋಗಕ್ಷೇಮವಿಧಾಯಿನೀ ॥೪೩॥

ಇದೆಲ್ಲವೂ ಹೀಗಿರಲಿ, ಶ್ರೀರಾಮನು ಹೊರಕ್ಕೆ ಹೋಗುವಾಗ ನಿನ್ನ ರಕ್ಷಣೆಯ ಭಾರವನ್ನು ನನಗೆ ವಹಿಸಿರುವನು ಆದುಕಾರಣ, ನಾನು ಈಗ ನಿನ್ನನ್ನು ಬಿಟ್ಟುಹೋಗಲಾರೆನು ॥೩೭-೩೮॥

ಹೀಗೆಂದು ಲಕ್ಷ್ಮಣನಿಂದ ಹೇಳಲ್ಪಟ್ಟ ಆ ಸೀತೆಯು, ರಾಮನ ಮಾಯೆಯಿಂದ ಮೋಹಿತಳಾಗಿ, ಕೋಪದಿಂದ ಕಣ್ಣುಕೆಂಪಗಮಾಡಿಕೊಂಡು, ಈರೀತಿಯಾಗಿ ಅತಿಪರುಷವಾದ ಮಾತನ್ನು ಹೇಳಿದಳು ॥೩೯॥

ಎಲಾ ಸುಮಿತ್ರಾಪುತ್ರನೇ! ನೀನು ನನಗೋಸ್ಕರ ಇಲ್ಲಿ ಪ್ರಚ್ಛನ್ನನಾಗಿ ಒಂದಿರುವೆಯೋ? ಅಥವಾ ಭರತನು ನಮ್ಮಗಳನ್ನು ನಾಶಪಡಿಸುವುದಕ್ಕಾಗಿ ನಿನ್ನನ್ನು ಕಳುಹಿಸಿರುವನೋ? ಆದರೆ, ನಿನ್ನ ಆಶೆಯೂ ನೆರವೇರುವುದಿಲ್ಲ, ಭರತನ ಅಭಿಪ್ರಾಯವೂ ಕೈಗೂಡುವುದಿಲ್ಲ ॥೪೧॥

ಈರೀತಿಯಾಗಿ ಸೀತೆಯಿಂದ ಹೇಳಲ್ಪಟ್ಟ-ಕಿವಿಗೆ ಬಾಣದಹಾಗಿರುವ ಆ ಕ್ರೂರವಾಕ್ಯವನ್ನು ಕೇಳಿ, ಆ ಮಹಾಬಾಹುವಾದ ಲಕ್ಷ್ಮಣನು, ಸಮಸ್ತಮರ್ಮಗಳನ್ನೂ ಛೇದಿಸುತಿರುವ ಆ ಮಾತುಗಳನ್ನು ಒಂದುಕ್ಷಣಕಾಲ ಮನಸ್ಸಿನಲ್ಲಿಯೇ ಧ್ಯಾನಿಸುತ, ಹೀಗೆ ಯೋಚಿಸಿದನು ॥೪೦॥

ಅಹಹ! ಈ ಸೀತೆಯು, ನನ್ನ ಶೀಲವನ್ನೂ ರಾಮನ ಪರಾಕ್ರಮವನ್ನೂ ತಿಳಿದಿದ್ದರೂ ಕೂಡ, ಅತಿಕಲುಷಳಾಗಿ ನನಗೆ ಇಂತಹ ದುರ್ವಾಕ್ಯವನ್ನು ಹೇಗೆ ಹೇಳಿದಳು? ॥೪೧॥

ಇವಳು, ಜನಕರಾಜಪುತ್ರಿಯಾದ ಸೀತೆಯಲ್ಲ ಅವಳೇ ಆಗಿದ್ದಪಕ್ಷದಲ್ಲಿ, ನನ್ನನ್ನು ಕುರಿತು ಇಂತಹ ಮಾತನ್ನು ಹೇಳುತಿರಲಿಲ್ಲ ಹೀಗೆ ಮರ್ಮಸ್ಪೃಕ್ಕಾಗಿ ಅತಿಕ್ರೂರವಾಗಿರುವ ವಚನಗಳನ್ನು ಅವಳೆಂದಿಗೂ ನನಗೆ ಹೇಳುವುದಿಲ್ಲ ॥೪೨॥

ಕೇವಲಮುಗ್ಧಳೂ ಅತಿಸ್ವಾಧ್ವಿಯೂ ಆದ ಆ ರಾಜಪುತ್ರಿಯು, ಇಂತಹ ಕ್ರೂರವಚನವನ್ನು ಹೇಳಲಾರಳು ಅವಳು, ಹೆತ್ತ ತಾಯಿಯಂತೆ ನನ್ನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ ಆದರಿಸುವಳು ॥೪೩॥

ನ ಜಾನೀಮೋತ್ರ ಪನ್ಥಾನಂ ರಾಮಮಾಯಾ ದುರತ್ಯಯಾ ।
ಬ್ರಹ್ಮಾದಯೋ ವಿಮುಹ್ಯನ್ತಿ ರಾಮಮಾಯಾಮಹಾರ್ಣವೇ ॥೪೪॥
ಇತಿ ಸಂಚಿನ್ತ್ಯ ನಿಶ್ವಸ್ಯ ಪ್ರಮೃಜ್ಯಾಶ್ರೂಣಿ ಲಕ್ಷ್ಮಣಃ ।
ಧೈರ್ಯಮಾಲಂಬ್ಯ ತೇಜಸ್ವೀ ಧನುರ್ಮಧ್ಯಮಥಾಸ್ಪೃಶತ್ ॥೪೫॥
ಜಾನಕೀರಕ್ಷಣಾರ್ಥಾಯ ಸೋಽಲಿಖತ್ ಸಪ್ತ ಮಣ್ಡಲಾನ್ ॥೪೬॥
ಪರ್ಣಶಾಲಾಙ್ಗಣತಟಂ ಸಪ್ತಮಣ್ಡಲಮಣ್ಡಿತಮ್ ।
ವ್ಯಾಘ್ರಾದಸ್ಯುಪಿಶಾಚಾದ್ಯಾಃ ಯಾತುಧಾನಾಶ್ಚ ರಾಕ್ಷಸಾಃ ।
ನ ವಿಲಂಘ್ಯಾಗಮೇ ಶಕ್ತಾಃ ಸುಖಂ ತಿಷ್ಠ ನಿಜಾಲಯೇ ॥೪೭॥
ಇತಿ ಲಕ್ಷ್ಮಣಮಾದಿಶ್ಯ ಮನಸಾ ಪ್ರತಿನನ್ದ್ಯ ತಾಮ್ ।
ಪ್ರಯಯೌ ಬದ್ಧನಿಸ್ತ್ರಿಂಶೋ ವನಂ ರಕ್ಷೋಗಣಾನ್ವಿತಮ್ ॥೪೮॥

ಇತಿ ಶ್ರೀಮದರಣ್ಯಕಾಣ್ಡೇ ಮಾರೀಚವಧಾದಿಕಥನಂ ನಾಮ

ಚತುರ್ದಶಃ ಸರ್ಗಃ

ಈಗ ಈ ಸಂದರ್ಭದಲ್ಲಿ ನನಗೆ ಯಾವ ಮಾರ್ಗವೂ ತೋರದಿರುವುದು ರಾಮನ ಮಾಯೆಯನ್ನು ಅತಿಕ್ರಮಿಸಲು ಯಾರಿಂದಲೂ ಸಾಧ್ಯವಿಲ್ಲ ರಾಮನ ಮಾಯೆಯೆಂಬ ದೊಡ್ಡ ಸಮುದ್ರದಲ್ಲಿ ಬ್ರಹ್ಮಾದಿಗಳೂ ಕೂಡ ಮೋಹಗೊಳ್ಳುವರು ॥೪೪॥

ಹೀಗೆಂದು ಯೋಚಿಸಿ, ಒಂದಾವೃತ್ತಿ ದೀರ್ಘವಾಗಿ ನಿಟ್ಟುಸಿರುಬಿಟ್ಟು, ಕಣ್ಣೀರೊರೆಸಿಕೊಂಡು, ಮಹಾತೇಜಸ್ವಿಯಾದ ಲಕ್ಷ್ಮಣನು, ಧೈರ್ಯವನ್ನವಲಂಬಿಸಿ, ಬಳಿಕ ಧನುಸ್ಸಿನ ಮಧ್ಯಭಾಗವನ್ನು ಹಿಡಿದುಕೊಂಡು, ಆಮೇಲೆ ಅವನು ಜಾನಕಿಯ ಸಂರಕ್ಷಣೆಗಾಗಿ ಏಳು ಗೆರೆಗಳನ್ನು ಬರೆದನು ॥೪೫-೪೬॥

ಅನಂತರ, ಸೀತೆಯನ್ನುದ್ದೇಶಿಸಿ ಹೀಗೆ ಹೇಳಿದನು — ಎಲೌ ಸೀತಾದೇವಿ ! ಜೋರಾದ ವ್ಯಾಘ್ರ ಪಿಶಾಚ ಮೊದಲಾದವರೂ ಯಾತುಧಾನರೂ ರಾಕ್ಷಸರೂ ಕೂಡ, ಈ ಯೇಳುಗೆರೆಯಿಂದ ಅಂಕಿತವಾಗಿರುವ ಪರ್ಣಶಾಲೆಯ ಅಂಗಳವನ್ನು ದಾಟಿ ಒಳಕ್ಕೆ ಬರಲು ಶಕ್ತರಾಗುವುದಿಲ್ಲ. ನೀನು ನಿನ್ನ ಆಲಯವನ್ನು ಬಿಟ್ಟು ಹೊರಕ್ಕೆ ಬರದೆ, ಒಳಗೆಯೇ ಸುಖವಾಗಿರು ॥೪೭॥

ಹೀಗೆಂದು ಸೀತೆಗೆ ಕಟ್ಟುಮಾಡಿ, ಮನಸ್ಸಿನಲ್ಲಿಯೇ ಅವಳ ಪತಿಭಕ್ತಿಯನ್ನು ಶ್ಲಾಘಿಸುತ, ಖಡ್ಗವನ್ನು ಧರಿಸಿದವನಾಗಿ, ಲಕ್ಷ್ಮಣನು ಅನೇಕರಾಕ್ಷಸಬೃಂದಪರಿವೃತವಾಗಿರುವ ಅರಣ್ಯವನ್ನು ಕುರಿತು ಹೊರಟನು ॥೪೮॥

ಇದು ಅರಣ್ಯಕಾಂಡದಲ್ಲಿ ಮಾರೀಚವಧಾದಿ ಕಥನವೆಂಬ

ಹದಿನಾಲ್ಕನೆಯ ಸರ್ಗವು

ಅಥ ಶ್ರೀಮದಧ್ಯಾತ್ಮರಾಮಾಯಣೇ ಪಞ್ಚೋದಶಃ ಸರ್ಗಃ.

ಶ್ರೀಶಿವಉವಾಚ

ಏತಸ್ಮಿನ್ನೇವ ಸಮಯೇ ರಾವಣೋ ರಂಧ್ರದರ್ಶನಃ ।
ಪರಿವ್ರಾಜ್ವೇಷಮಾಸಾದ್ಯ ದಿಶೋ ದಶ ವಿಲೋಕಯನ್ ।
ರಾಮಾಶ್ರಮಂ ಜಗಾಮಾಶು ಪಾದಚಾರೇಣ ಪಾಪಧೀಃ ॥೧॥
ಬಹಿರ್ಮಣ್ಡಲಮಾಸಾದ್ಯ ಸ್ವಸ್ತೀತ್ಯಾಹ ಸ ರಾವಣಃ ॥೨॥
ಸ್ಮರನ್ ನಾರಾಯಣಂ ದೇವಂ ಕಿಞ್ಚಿನ್ನಿಮೀಲಿತಲೋಚನಃ ।
ರುದ್ರಾಕ್ಷಮಾಲಾಬೀಜಾನಾಂ ಪ್ರತ್ಯೇಕಂ ಗ್ರಹಣಂ ಶನೈಃ ।
ಕುರ್ವನ್ ಮುಗ್ಧ ಇವಾಭಾತಿ ವಞ್ಚಕಾನಾಂ ಹಿ ಲಕ್ಷಣಮ್ ॥೩॥
ಯತಿವೇಷಾಗತಮಾಜ್ಞಾಯ ಸೀತಾ ಕಮಲಲೋಚನಾ ।
ಆಸನಾಚ್ಛಲಿತಾ ಭೂತ್ವಾ ಪಾದ್ಯಮಾದಾಯ ಸುವ್ರತಾ ॥೪॥
ರಾಮಾಗಮನಸಂಪ್ರಶ್ನಂ ಕರ್ತುಂ ಬಹಿರುಪಸ್ಥಿತಾ ।
ಪೂಜಾರ್ಥಂ ಯತತೇ ದೇವೀ ಮಣ್ಡಲಾಭ್ಯಾಶಮಾಗತಾ ॥೫॥

ಅರಣ್ಯಕಾಂಡದಲ್ಲಿ ಹದಿನೈದ್ನೆನೆಯ ಸರ್ಗವ್ರು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ ! ಈ ಸಮಯದಲ್ಲಿಯೇ, ರಂಧ್ರಾನ್ವೇಷಣಮಾಡಿಕೊಂಡಿದ್ದ ಪಾಪಬುದ್ಧಿಯಾದ ರಾವಣನು, ಸನ್ಯಾಸಿಯ ವೇಷವನ್ನು ಧರಿಸಿಕೊಂಡು, ಹತ್ತು ದಿಕ್ಕುಗಳನ್ನೂ ನೋಡುತ ಕಾಲುನಡೆಗೆಯಿಂದಲೇ ತಟ್ಟನೆ ರಾಮನ ಆಶ್ರಮಕ್ಕೆ ಒಂದನು ಅಲ್ಲಿ ಲಕ್ಷ್ಮಣನಿಂದ ಮಾಡಲ್ಪಟ್ಟಿದ್ದ ರೇಖೆಗಳ ಹೊರಗೆ ನಿಂತುಕೊಂಡು, ಸ್ವಸ್ತಿ (ಮಂಗಳವಾಗಲಿ)ಯೆಂದು ಹೇಳಿದನು ॥೧-೨॥

ಬಾಯಲ್ಲಿ ಶ್ರೀಮನ್ನಾರಾಯಣ ಸ್ಮರಣಮಾಡುತ, ಸ್ವಲ್ಪವಾಗಿ ಕಣ್ಣುಮುಚ್ಚಿಕೊಂಡು, ಜಪಸರದ ರುದ್ರಾಕ್ಷಗಳನ್ನು ಒಂದೊಂದಾಗಿ ಮೆಲ್ಲಗೆ ತಿರುಗಿಸುತ, ಆವೇಶಬಂದಿರುವವನಂತೆ ಕಾಣಿಸುತಿದ್ದನು ವಂಚಕರ ಲಕ್ಷಣವೇ ಹೀಗಿರುವುದು ॥೩॥

ಆಗ ಸನ್ಯಾಸಿ ಬಂದಿರುವನೆಂದು ತಿಳಿದು, ಮಹಾನಿಯಮಶೀಲಳಾದ ಕಮಲನೇತ್ರಿಯಾದ ಸೀತೆಯು, ತಾನು ಕುಳಿತಿದ್ದ ಆಸನವನ್ನು ಬಿಟ್ಟು ಎದ್ದವಳಾಗಿ, ಕೈಯಲ್ಲಿ ಪಾದ್ಯಾರ್ಥವಾದ ಜಲವನ್ನು ತೆಗೆದುಕೊಂಡು, ರಾಮನು ಯಾವಾಗ ಬರುವನೆಂದು ಕೇಳುವುದಕ್ಕೋಸ್ಕರ ಆಶ್ರಮದ ಹೊರಕ್ಕೆಬಂದು, ಲಕ್ಷ್ಮಣನು ಹಾಕಿದ್ದ ಗೆರೆಯ ಹತ್ತಿರದಲ್ಲಿ ನಿಂತುಕೊಂಡು, ಯತಿವೇಷಧಾರಿಯಾದ ಆ ರಾವಣನಿಗ ಪೂಜವಾಡಬೇಕೆಂದು ಪ್ರಯತ್ನಪಟ್ಟಳು ॥೪-೫॥

ಪೂಜಾಂ ಸಾ ಪ್ರೇಷಯಾಮಾಸ ಮಿತ್ರೇಣ ಮುನಿಕನ್ಯಯಾ ॥೬॥
ಪೂಜಾಂ ಪ್ರಾಪ್ಯ ನ ಸನ್ತುಷ್ಟೋ ಮಾಯಾವೇಷಧರೋಸುರಃ ।
ಮಾಯಾವಿನಾಂ ದೇಹಭೃತಾಂ ನಾಲಂ ಪೂಜಾ ಸುಖಾಪ್ತಯೇ ॥೭॥
ಮಣ್ಡಲೋಲ್ಲಂಘನಂ ಕರ್ತುಂ ಅಶಕ್ತೋ ರಾವಣಸ್ತದಾ ।
ಸೀತಾಹರಣಕಾಮೇನ ಚಾಙ್ಚಲ್ಯಂ ಪರಮಾಪ ಸಃ ॥೮॥
ವೇಷಂ ವಿಶ್ವಸ್ಯ ಸಾ ಸೀತಾ ಮುನಿಂ ಜ್ವಲಿತತೇಜಸಮ್ ।
ವಚನಂ ಪ್ರಾಹ ರಾಮಸ್ಯ ಪುನರಾಗಮನಂ ಪ್ರತಿ
ಕದಾಯಾಸ್ಯತಿ ಮೇ ಭರ್ತಾ ವನಂ ದೂರಮಿತೋ ಗತಃ ॥೯॥
ಸ ತಸ್ಯಾವಚನಂ ಶ್ರುತ್ವಾ ಯತಿಸ್ತಾಂ ಪ್ರತ್ಯಭಾಷತ ॥೧೦॥
ಇತಃಆಗಚ್ಛ ವೈದೇಹಿ ಪ್ರಶ್ನಂ ವಕ್ಷ್ಯಾಮಿ ತೇ ಹಿತಮ್ ।
ಅತಿಸುನ್ದರಸರ್ವಾಙ್ಗಿ ಹಸ್ತಂ ದೃಷ್ಟ್ವಾ ಶುಭಾಶುಭಮ್ ॥೧೧॥
ನಿದರ್ಶನಂ ಪ್ರವಕ್ಷ್ಯಾಮಿ ದೃಷ್ಟ್ವಾ ತೇ ಶುಭಲಕ್ಷಣಮ್ ।
ಪ್ರಶ್ನಲಕ್ಷಣವಿಜ್ಞಾನೇ ಕುಶಲೋಸ್ಮಿ ಶುಚಿಸ್ಮಿತೇ ॥೧೨॥

ಅನಂತರ, ತನ್ನ ಸಖಿಯಾದ ಒಬ್ಬ ಋಷಿಪುತ್ರಿಯದ್ವಾರಾ ಪೂಜಾದ್ರವ್ಯಗಳನ್ನು ಅವನಿಗೆ ಸಮರ್ಪಿಸಿದಳು ಆದರೆ, ಮಾಯೆಯಿಂದ ಸನ್ಯಾಸಿವೇಷವನ್ನು ಧರಿಸಿದ್ದ ಆ ರಾವಣನು, ಈ ಸತ್ಕಾರವನ್ನು ಸ್ವೀಕರಿಸಿ ಸಂತೋಷಪಡಲಿಲ್ಲ ಲೋಕದಲ್ಲಿ, ಮಾಯಾಶಾಲಿಗಳಾಗಿರತಕ್ಕ ಪ್ರಾಣಿಗಳಿಗೆ, ಈವಿಧವಾದ ಪೂಜೆಯು ಸಂತೋಷಲಾಭ ಮಾಡಲಾರದಲ್ಲವ ! ॥೬–೭॥

ಆಗ, ಆ ಮಂಡಲವನ್ನು ದಾಟಿಹೋಗುವುದಕ್ಕ ಸಾಮರ್ಥ್ಯವಿಲ್ಲದ ರಾವಣನು, ಸೀತೆಯನ್ನು ಅಪಹರಿಸಿಕೊಂಡು ಹೋಗಬೇಕೆಂಬ ಇಚ್ಛೆಯಿಂದ ವಿಶೇಷವಾಗಿ ತಳಮಳಿಸುತಿದ್ದನು ॥

ಇವನ ವೇಷದಲ್ಲಿ ನಂಬುಗೆಯಿಟ್ಟವಳಾದ ಸೀತಾದೇವಿಯು, ರಾಮನು ಯಾವಾಗ ಬರುವನೆಂದು ತಿಳಿದುಕೊಳ್ಳುವುದಕ್ಕೋಸ್ಕರ, ಮಹಾತೇಜಶ್ಶಾಲಿಯಾಗಿದ್ದ ಆ ಮುನಿ(ರಾವಣ)ಯನ್ನು ಕುರಿತು 'ಸ್ವಾಮಿ! ಇಲ್ಲಿಂದ ಬಹುದೂರವಾದ ಅರಣ್ಯಕ್ಕೆ ಹೋಗಿರುವ ನನ್ನ ಪತಿಯು ಯಾವಾಗ ಬರುವರು?' ಎಂದು ಕೇಳಿದಳು. ಇವಳ ಮಾತನ್ನು ಕೇಳಿ, ಯತಿವೇಷಧರನಾಗಿರುವ ರಾವಣನು ಅವಳನ್ನು ಕುರಿತು ಹೀಗೆ ಹೇಳಿದನು ॥೮–೧೦॥

ಎಲೌ ವಿದೇಹರಾಜಪುತ್ರಿಯೆ! ನಿನ್ನ ಅವಯವವೆಲ್ಲವೂ ಬಹುಸುಂದರವಾಗಿರುವುದು. ನಿನ್ನ ಹಸ್ತವನ್ನು ನೋಡಿ ಶುಭಾಶುಭಗಳನ್ನು ತಿಳಿದುಕೊಂಡು, ಬಳಿಕ ನಿನಗೆ ಹಿತವಾದ ಪ್ರಶ್ನೆಯನ್ನು ಹೇಳುವೆನು ॥೧೧॥

ಎಲೌ ಶುಚಿಸ್ಮಿತೆ! ನಿನ್ನ ಶುಭಲಕ್ಷಣವನ್ನು ನೋಡಿ, ಒಳಿಕ ನಾನು ನಿದರ್ಶನ(ಕಣಿ ಮುಂತಾದುದು) ವನ್ನು ಹೇಳುವೆನು ಪ್ರಶ್ನೆಗಳ ಲಕ್ಷಣವನ್ನು ತಿಳಿದುಕೊಳ್ಳುವುದರಲ್ಲಿ ನನಗೆ ವಿಶೇಷವಾಗಿ ಕೌಶಲ್ಯವಿರುವುದು ॥೧೨॥

ಇತಿ ತದ್ವಚನಂ ಶ್ರುತ್ವಾ ರಾಮಾಗಮನಕಾಙ್ಕ್ಷಯಾ ।
ಮಣ್ಡಲಾನ್ಯಪಿ ನಿಸ್ತೀರ್ಯ ಮುನಿಸನ್ನಿಧಿಮಾಯಯೌ ॥೧೩॥
ದೃಷ್ಟ್ವಾ ವಿನಿರ್ಗತಾಂ ಸೀತಾಂ ರಾಮಮಾಯಾವಿನಿರ್ಮಿತಾಮ್ ।
ಇಯೇಷ ಹರಣಂ ಕರ್ತುಂ ರಾವಣಃ ಕಾಮಮೋಹಿತಃ ॥೧೪॥
ಮೃತ್ಯುದೇವೀಂ ನ ಜಾನಾತಿ ಸ್ವಾತ್ಮನಃ ಸ್ವಕುಲಸ್ಯ ಚ ।
ವೀರರಾಕ್ಷಸಸಙ್ಘಾನಾಂ ಲಙ್ಕಾಯಾಂ ಕಾನನಶ್ರಿಯಃ ॥೧೫॥
ಸ್ವರೂಪಂ ದರ್ಶಯಾಮಾಸ ರಾವಣೋತಿಭಯಙ್ಕರಮ್ ।
ದಶಮಸ್ತಕಸಂಪನ್ನಂ ಭುಜವಿಂಶತಿಭೂಷಿತಮ್ ॥೧೬॥
ಬ್ರಹ್ಮರಾಕ್ಷಸರೂಪಂ ತಂ ದೃಷ್ಟ್ವಾ ಸೀತಾತಿಭೀಷಣಮ್ ।
ಪಪಾತ ಧರಣೀದೇಶೇ ವಾಯುನಾ ಕದಲೀ ಯಥಾ ॥೧೭॥
ತಾಂ ಭೂಮೌ ಪತಿತಾಂ ದೃಷ್ಟ್ವಾ ಶಾಪಭೀತೋತಿದಾರುಣಃ ।
ನಾಸ್ಪೃಶತ್ ಸ್ವತಿಶೂಲೇನ ಲೋಪ್ಟ್ರಮುದ್ಧೃತ್ಯ ತಾವತಾ ।
ಸ್ವರಥೇ ಸ್ಥಾಪಯಾಮಾಸ ರಾವಣಃ ಕಾಲಚೋದಿತಃ ॥೧೮॥

ಹೀಗೆ ಹೇಳಿದ ಯತಿಯ ಮಾತನ್ನು ಕೇಳಿ, ಆ ಸೀತೆಯು ಹೇಗಾದರೂ ರಾಮನು ಬಂದರೆ ಸಾಕೆಂಬ ಆಪೇಕ್ಷೆಯಿಂದ ಆ ಮಂಡಲ ರೇಖೆಗಳನ್ನೆಲ್ಲ ದಾಟಿಕೊಂಡು ಅವನ ಸನ್ನಿಧಿಗೆ ಬಂದವಳಾದಳು ॥೧೩॥

ಈತೀಯಾಗಿ ರಾಮಮಾಯಾನಿರ್ಮಿತಳಾದ ಸೀತೆಯು ಹೊರಕ್ಕೆ ಬಂದುದನ್ನು ನೋಡಿ, ಕಾಮಮೋಹಿತನಾದ ರಾವಣನು ಅವಳನ್ನು ಅಪಹರಿಸಬೇಕೆಂದು ಇಚ್ಛಿಸಿದನು ॥೧೪॥

ಈ ಸೀತೆಯು ತನಗೂ ತನ್ನ ಕುಲಕ್ಕೂ ವೀರರಾದ ರಾಕ್ಷಸರ ಸಮುದಾಯಗಳಿಗೂ ಲಂಕೆಗೂ ಅಲ್ಲಿನ ಉದ್ಯಾನಗಳಿಗೂ ಮೃತ್ಯುಸ್ವರೂಪಳೆಂಬುದನ್ನು, ಆ ರಾವಣನು ಅರಿಯಲಾರದವನಾಗಿದ್ದನು ॥೧೫॥

ಬಳಿಕ ಆ ರಾವಣನು, ಹತ್ತುತಲೆಗಳೆಂದಲೂ ಇಪ್ಪತ್ತುತೋಳುಗಳೆಂದಲೂ ಕೂಡಿಕೊಂಡು ಅತಿ ಭಯಂಕರವಾಗಿರುವ ತನ್ನ ಆಕಾರವನ್ನು ತೋರಿಸಿದನು ॥೧೬॥

ಹೀಗೆ ಬ್ರಹ್ಮರಾಕ್ಷಸರೂಪನಾಗಿರುವ ಅತಿಭಯಂಕರನಾದ ರಾವಣನನ್ನು ನೋಡಿ, ಗಾಳಿಯಿಂದ ಹೊಡೆಯಲ್ಪಟ್ಟ ಬಾಳೆಯಕಂಬದಂತೆ, ಸೀತೆಯು ಭೂಮಿಯಮೇಲೆ ಬಿದ್ದುಬಿಟ್ಟಳು॥೧೭॥

ಹೀಗೆ ಆ ಸೀತೆಯು ಭೂಮಿಯಮೇಲೆ ಬಿದ್ದುಬಿಟ್ಟುದುದನ್ನುಕಂಡು, ಅತಿದಾರುಣನಾದ ರಾವಣನು, ಪರಸ್ತ್ರೀಯನ್ನು ಒಲಾತ್ಕಾರದಿಂದ ಸ್ಪರ್ಶಮಾಡಿದರೆ ಆ ಕ್ಷಣವೇ ತನಗೆ ಮರಣ ಸಂಭವಿಸುವುದೆಂಬ ಶಾಪದಿಂದ ಭಯಪಟ್ಟು, ಅವಳನ್ನು ಸ್ಪರ್ಶಮಾಡಲಿಲ್ಲ, ಅವಳು ನಿಂತಿದ್ದಷ್ಟು ಭೂಮಿಯನ್ನು ತನ್ನ ಕೈಲಿದ್ದ ತ್ರಿಶೂಲದಿಂದ ಮಾಟಿಕೊಂಡು, ಕಾಲಚೋದಿತನಾಗಿ ಅವಳನ್ನು

ಶ್ರುತರಾಮಾಸ್ತ್ರಭೀತಃ ಸ್ವ ಯಯಾವಾಕಾಶಮಾರ್ಗತಃ ॥೧೯॥
ಸಾ ಪರ್ಣಶಾಲಾ ತದ್ಗರ್ತಂ ಅದ್ಯಾಪಿ ಪರಿದೃಶ್ಯತೇ ।
ಗೋದಾವರೀತಟೇ ಪುಣ್ಯೇ ದ್ರಷ್ಟೃಣಾಂ ಸರ್ವಾಘನಾಶಿನೀ ॥೨೦॥
ದೃಷ್ಟ್ವಾಥ ರಾವಣಂ ಯಾಂತಂ ಮಹಾವೇಗರಥಂ ಸ್ಥಿತಮ್ ।
ರೋರೂಯಮಾಣಾಂ ಸೀತಾಂ ಚ ರಥಸ್ಥಾಲನಿವಾಸಿನೀಮ್ ॥೨೧॥
ಜಟಾಯುರ್ವೃಕ್ಷಮೂಲಸ್ಥೋ ಮಹಾಬಲಪರಾಕ್ರಮಃ ।
ಸೀತಾಂ ಜ್ಞಾತ್ವಾ ರಾಮಪತ್ನೀಂ ಸ್ನುಷಾಂ ದಶರಥಸ್ಯ ಚ ॥೨೨॥
ತತಃ ಪರ್ವತಕೂಟಾಭಃ ತೀಕ್ಷ್ಣತುಂಡಃ ಖಗೋತ್ತಮಃ ।
ವನಸ್ಪತಿಗತಃ ಶ್ರೀಮಾನ್ ವ್ಯಾಜಹಾರ ಶುಭಾಂ ಗಿರಮ್ ॥೨೩॥
ಮುಷಿತ್ವಾ ಲೋಕನಾಥಸ್ಯ ಭಾರ್ಯಾಂ ಕೂನ್ಯಾದ್ವನಾನ್ತರಾತ್ ।
ಶುನಕೋ ಮನ್ತ್ರಪೂತಂ ತು ಪುರೋಡಾಶಮಿವಾಧ್ವರಾತ್ ।
ಕ್ವ ಗಮಿಷ್ಯಸಿ ದುರ್ಬುದ್ಧೇ ಮುಹೂರ್ತಂ ತಿಷ್ಠ ರಾವಣ ॥೨೪॥
ಶಯಿಷ್ಯಸಿ ಹತೋ ಭೂಮೌ ಯಥಾ ಪೂರ್ವಂ ಖರಸ್ತಥಾ ॥೨೫॥

ತನ್ನ ರಥದಲ್ಲಿ ಇರಿಸಿಕೊಂಡನು ಅನಂತರ, ಹಿಂದೆ ರಾಮನ ಅಸ್ತ್ರದ ಮಹಿಮೆಯನ್ನು ಕೇಳಿದ್ದ ನಾದಕಾರಣ ಅದಕ್ಕೆ ಹೆದರಿಕೊಂಡು, ಅಂತರಿಕ್ಷಮಾರ್ಗದಲ್ಲಿ ಹೊರಟುಬಿಟ್ಟನು ॥೧೮-೧೯॥

ಆಗ ರಾವಣನು ಸೀತೆಯನ್ನು ಅಪಹರಿಸಿಕೊಂಡುಹೋದ ಪರ್ಣಶಾಲೆಯೂ, ಅವನು ಭೂಮಿಯನ್ನು ಅಗೆದ ಗುಂಡಿಯೂ ಕೂಡ, ಈಗಲೂ ದರ್ಶನಮಾಡತಕ್ಕವರಿಗೆ ಸಕಲ ಪಾಪಗ ಳನ್ನೂ ನಿವಾರಣೆಮಾಡುತ ಗೋದಾವರೀನದಿಯ ತೀರದಲ್ಲಿ ದೃಷ್ಟಿಗೋಚರವಾಗುತಿರುವುವ॥

ಹೀಗೆ ರಾವಣನು ಹೊರಟಒಳಿಕ, ಮಹಾವೇಗವಾದ ರಥದಲ್ಲಿ ಕುಳಿಸುಕೊಂಡು ಹೋಗು ತಿರುವ ರಾವಣನನ್ನೂ-ಆ ರಥದೊಳಗೆ ವಿಶೇಷವಾಗಿ ರೋದನಮಾಡುತಿರುವ ಸೀತೆಯನ್ನೂ ಕಂಡು, ವೃಕ್ಷಮೂಲಸ್ಥಿತನಾಗಿದ್ದ ಮಹಾಬಲಪರಾಕ್ರಮನಾಗಿಯೂ ಪರ್ವತಶಿಖರಸಮಾನನಾ ಗಿಯೂ ತೀಕ್ಷ್ಣವಾದ ಕೊಕ್ಕುಳ್ಳವನಾಗಿಯೂ ಇರುವ ಪಕ್ಷಿಶ್ರೇಷ್ಠನಾದ, ಜಟಾಯುವು, ಆ ಪರ್ವತದಲ್ಲಿಯೇ ಇದ್ದುಗೊಂಡು ಈರೀತಿಯಾಗಿ ಅತಿ ಪ್ರಶಸ್ತವಾದ ಮಾತನ್ನು ಹೇಳಿದನು ॥

ಎಲೈ ದುರ್ಬುದ್ಧಿಯಾದ ರಾವಣನೆ ! ಮಂತ್ರಪೂತವಾದ ಪುರೋಡಾಶವನ್ನು ಅಪಹರಿಸಿ ಕೊಂಡು ಧಾಯಿಯು ಯಜ್ಞಶಾಲೆಯ ದೆಸೆಯಿಂದ ಓಡಿಹೋಗುವಂತೆ, ಲೋಕನಾಯಕನಾದ ಶ್ರೀರಾಮನ ಪತ್ನಿಯನ್ನು ಕದ್ದುಕೊಂಡು ಒಬ್ಬರೂ ಇಲ್ಲದಿರುವ ಈ ಅರಣ್ಯದಿಂದ ನೀನು ಎಲ್ಲಿಗೆ ಹೋಗುವೆ ? ಒಂದು ಮುಹೂರ್ತಮಾತ್ರ ಇಲ್ಲಿ ನಿಲ್ಲುವನಾಗು ಪೂರ್ವದಲ್ಲಿ ಖರನು ಹೇಗ ಬಿದ್ದನೋ, ಹಾಗೆ ನೀನೂ ರಾಮನಿಂದ ಹತನಾಗಿ ಭೂಮಿಯಲ್ಲಿ ಮಲಗುವೆ ॥೨೪-೨೫॥

ಕಥಂ ರಾಜಾ ಸ್ಥಿತೋ ಧರ್ಮೇ ಪರದಾರಾ ಪರಾಮೃಶೇತ್ ।
ರಕ್ಷಣೀಯಾವಿಶೇಷೇಣ ರಾಜದಾರಾಮಹಾಬಲ ॥೬೬॥
ನಿವರ್ತಯ ಮತಿಂ ನೀಚಾಂ ಪರದಾರಾಭಿಮರ್ಶನಾತ್ ।
ನ ತತ್ ಸಮಾಚರೇದ್ಧೀರೋ ಯತ್ ಪರೋಽಸ್ಯ ವಿಗರ್ಹಯೇತ್ ॥೬೭॥
ಸ ಭಾರಃ ಸೌಮ್ಯ ಭರ್ತವ್ಯೋ ಯೋ ನರಂ ನಾವಸಾದಯೇತ್ ।
ತದನ್ನಮೇವ ಭೋಕ್ತವ್ಯಂ ಜೀರ್ಯತೇ ಯದನಾಮಯಮ್ ॥೬೮॥
ಯತ್ ಕೃತ್ವಾ ನ ಭವೇದ್ಧರ್ಮೋ ನ ಕೀರ್ತಿರ್ನ ಯಶೋ ಭುವಿ ।
ಶರೀರಸ್ಯ ಭವೇತ್ ಖೇದಃ ಕಸ್ತತ್ ಕರ್ಮ ಸಮಾಚರೇತ್ ॥೬೯॥
ಪಾಪಸ್ವಭಾವಶ್ಚಪಲಃ ಕಥಂ ತ್ವಂ ರಂಕ್ಷ್ಯಸಾಧಮ ।
ಐಶ್ವರ್ಯಮಿಹ ಸಂಪ್ರಾಪ್ತೋ ವಿಮಾನಮಿವ ದುಷ್ಕೃತೀ ॥೭೦॥
ಕ್ಷಿಪ್ರಂ ವಿಸೃಜ ವೈದೇಹೀಂ ಮಾ ತ್ವಾಂ ಕೂರೇಣ ಚಕ್ಷುಷಾ ।
ದಹೇದ್ದಹನಭೂತೇನ ವೃತ್ರಮಿನ್ದ್ರಾಶನಿರ್ಯಥಾ ॥೭೧॥

ಲೋಕದಲ್ಲಿ ಧರ್ಮನಿಷ್ಠನಾದ ರಾಜನು ಪರದಾರ ಮರಾಮರ್ಶನವನ್ನು ಹೇಗೆತಾನೆ ಮಾಡಿಯಾನು? ಎಲೈ ಮಹಾಬಲನೆ! ತತ್ರಾಪಿ ರಾಜಪತ್ನಿಯನ್ನು ವಿಶೇಷವಾಗಿ ಕಾಪಾಡಬೇಕಾಗಿರುವುದಲ್ಲವೆ! ॥೬೬॥

ಅಯ್ಯಾ! ರಾವಣ! ನಿನ್ನ ನೀಚವಾದ ಬುದ್ಧಿಯನ್ನು ಪರದಾರಾಭಿಮರ್ಶನದದೆಸೆಯಿಂದ ಹಿಂದಿರುಗಿಸುವನಾಗು ಪ್ರಪಂಚದಲ್ಲಿ ಧೀರನಾದವನು-ಮುಂದೆ ತನಗೆ ಯಾವುದು ನಿಂದೆಯನ್ನುಂಟುಮಾಡತಕ್ಕುದಾಗಬಹುದೋ-ಅಂತಹ ಕೆಲಸವನ್ನು ಆಚರಿಸಬಾರದು ॥೬೭॥

ಅಯ್ಯಾ! ರಾವಣ! ಯಾವ ಭಾರವು ಪುರುಷನನ್ನು ಜನ್ಮಾಗಿ ಅಡುಮಿಬಡಲಾರದೋ, ಅಂತಹ ಭಾರವನ್ನೇ ತೂರಬೇಕು, ಯಾವ ಅನ್ನವು ರೋಗವುಂಟುಮಾಡದೆ ಜೀರ್ಣಿಸುವುದೋ, ಅಂತಹ ಅನ್ನವನ್ನೇ ತಿನ್ನಬೇಕು ॥೬೮॥

ಲೋಕದಲ್ಲಿ ಯಾವ ಕೆಲಸವನ್ನು ಮಾಡಿದರ ಧರ್ಮವೂ ಖ್ಯಾತಿಯೂ ಯಶಸ್ಸೂ ಉಂಟಾಗಲಾರವೋ, ಮತ್ತು-ಶರೀರಕ್ಕೆ ಖೇದಮಾತ್ರವುಂಟಾಗುವುದೋ, ಅಂತಹ ಕೆಲಸವನ್ನು ಯಾವನು ತಾನೆ ಮಾಡಿಯಾನು? ॥೬೯॥

ಎಲೈ! ರಾಕ್ಷಸಾಧಮನೆ! ಪಾಪಕರ್ಮಮಾಡಿದವನು ವಿಮಾನಯಾನವನ್ನು ಪಡೆದಂತೆ, ಪಾಪಸ್ವಭಾವನಾಗಿಯೂ ಚಪಲಚಿತ್ತನಾಗಿಯೂ ಇರುವ ನೀನು ಈ ಲೋಕೋತ್ತರವಾದ ಐಶ್ವರ್ಯವನ್ನು ಹೇಗೆ ಸಂಪಾದಿಸಿದೆ? ॥೭೦॥

ಈಗ ನೀನು ಬೇಗನೆ ಈ ಸೀತೆಯನ್ನು ಬಿಟ್ಟುಬಿಡು ಇಂದ್ರನ ವಜ್ರಾಯುಧವು ವೃತ್ರಾಸುರನನ್ನು ಭಸ್ಮಮಾಡಿದಂತೆ, ಇವಳು ಅಗ್ನಿಭೂತವಾದ ತನ್ನ ದೃಷ್ಟಿಯಿಂದ ನಿನ್ನನ್ನು ಭಸ್ಮಮಾಡಾ, ದಿರಲಿ ॥೭೧॥

ಇತ್ಯುಕ್ತ್ವಾತ್ಥ ದಶಗ್ರೀವಂ ಪಕ್ಷಿರಾಟ್ ಸಮುಪಸ್ಥಿತಃ ।
ತತೋನ್ತರಿಕ್ಷೇ ಸುಮಹತ್ ಯುದ್ಧಮಾಸೀತ್ ತಯೋರ್ದ್ವಯೋಃ ॥
ತುಣ್ಡಪಾದಾಗ್ರಹನನೈಃ ಜರ್ಝುರೀಕೃತವಿಗ್ರಹಂ ।
ಪ್ರಾಣಸಂಶಯಮಾಪನ್ನೋ ನಿಶ್ಚೇಷ್ಟೋಭೂದ್ರಣಾಜಿರೇ ॥೩೩॥
ಪುನಃ ಸ್ವಬಲಮಾಸ್ಥಾಯ ಧೈರ್ಯಾತ್ ಸ ಯುಯುಧೇಸುರಃ ।
ತತಃ ಸರ್ವಾಣ್ಯಾಯುಧಾನಿ ಮುಮೋಚ ಕ್ರಮಶೋ ರುಷಾ ॥೩೪॥
ಧನುಃ ಶರಾಂಶ್ಚ ಖಡ್ಗಾಂಶ್ಚ ಯದ್ಯದುತ್ತಮಮಾಯುಧಮ್ ।
ಪತಾಕಾಂ ಧ್ವಜದಣ್ಡಂಚ ಬಭಞ್ಜ ನಖತಾಡನೈಃ ॥೩೫॥
ಏವಂ ಯುದ್ಧೇ ದುರಾಧರ್ಷೇ ಪಕ್ಷಿರಾಜೇನ ಧೀಮತಾ ।
ಹತಶಕ್ತಿಬಲೋತ್ಸಾಹಃ ಜೆನ್ತ್ಯಾಮಾಸ ರಾವಣಃ ।
ಪಲಾಯನಂ ತು ವೀರಾಣಾಂ ನ ಯೋಗ್ಯಮಿತಿ ಮಾನಸೇ ॥೩೬॥
ಜೇಷ್ಯಾಮಿ ಕೂಟಯುದ್ಧೇನೇತ್ಯಾಲೋಚ್ಯೈವಮಭಾಷತ ॥೩೭॥
ಮರ್ಮದೇಶಂ ಪ್ರವಕ್ಷ್ಯಾಮಿ ಮಮ ತೇ ವಕ್ತುಮರ್ಹಸಿ ।
ಪಾದಾಬ್ಜಪೃಷ್ಠಂ ಹಿ ಮೇ ಮರ್ಮ ತವ ಮರ್ಮ ಪ್ರವಕ್ಷ್ಯತಾಮ್॥೩೮॥

ಹೀಗೆಂದು ರಾವಣನಿಗೆ ಹೇಳಿ, ಅನಂತರ ಆ ಜಟಾಯುವು ಮೇಲಕ್ಕೆ ಹಾರಿದನು ಆಮೇಲೆ, ಅಂತರಿಕ್ಷದಲ್ಲಿಯೇ ಅವರಿಬ್ಬರಿಗೂ ಅತಿಮಹತ್ತಾದ ಯುದ್ಧವಾಯಿತು ॥೩೪॥

ಆಗ ರಾವಣನು ಜಟಾಯುವಿನ ಕೊಕ್ಕಿನಿಂದಲೂ ಕಾಲುಗಳಿಂದಲೂ ಹೊಡೆಯಲ್ಪಟ್ಟು ಜರ್ಝರಶರೀರನಾಗಿ, ಪ್ರಾಣಸಂಶಯಕ್ಕೊಳಗಾಗಿ, ಯುದ್ಧಾಂಗಣದಲ್ಲಿ ಸ್ತಬ್ಧನಾಗಿಬಿಟ್ಟನು ॥

ಪುನಃ ತನ್ನ ಬಲವನ್ನು ಪಡೆದು ಆ ರಾವಣನು ಧೈರ್ಯದಿಂದ ಯುದ್ಧಮಾಡಿದನು, ಅನಂತರ ಕೋಪದಿಂದ ಕ್ರಮವಾಗಿ ತನ್ನ ಸಮಸ್ತವಾದ ಆಯುಧಗಳನ್ನೂ ಬಿಟ್ಟನು ॥೩೪॥

ಆಗ ಜಟಾಯುವು ರಾವಣನ ಧನುಸ್ಸು ಬಾಣ ಖಡ್ಗಗಳನ್ನೂ, ಇನ್ನೂ ಇತರವಾದ ಉತ್ತಮವಾದ ಆಯುಧಗಳನ್ನೂ, ಧ್ವಜ ಪತಾಕೆಗಳನ್ನೂ ಕೂಡ, ತನ್ನ ಉಗುರಿನ ಏಟುಗಳಿಂದ ಕತ್ತರಿಸಿದನು॥

ಹೀಗೆ ಅತಿಪ್ರಬಲವಾದ ಯುದ್ಧದಲ್ಲಿ, ಮಹಾಬುದ್ಧಿಶಾಲಿಯಾಗಿರುವ ಜಟಾಯುವಿನಿಂದ ತನ್ನ ಶಕ್ತಿ ಬಲ ಉತ್ಸಾಹಗಳು ನಾಶಪಡಿಸಲ್ಪಟ್ಟ ಬಳಿಕ, ರಾವಣನು, ವೀರರಿಗೆ ಯುದ್ಧರಂಗದಲ್ಲಿ ಪಲಾಯನವು ಯೋಗ್ಯವಲ್ಲವೆಂದು–ಅದುದರಿಂದ ಈ ಜಟಾಯುವನ್ನು ಕೂಟಯುದ್ಧದಿಂದ ಗೆಲ್ಲಬೇಕೆಂದೂ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಆ ಜಟಾಯುವನ್ನು ನೋಡಿ 'ಅಪ್ಪಾ! ಈಗ ನಾನು ನನ್ನ ಮರ್ಮದೇಶವನ್ನು ನಿನಗೆ ಹೇಳುವೆನು, ನೀನೂ ನಿನ್ನ ಮರ್ಮದೇಶವನ್ನು ನನಗೆ ಹೇಳುವ ಹಾಗು. ನನ್ನ ಮರ್ಮಸ್ಥಾನವು ಕಾಲಿನ ಅಂಗುಷ್ಠವು, ನಿನ್ನ ಮರ್ಮವಾವುದೋ ಅದನ್ನು ಹೇಳು.' ಎಂದು ಹೇಳಿದನು ॥೩೬-೩೮॥

ಶ್ರುತ್ವಾ ರಕ್ಷೋವಚೋ ಗೃಧ್ರಃ ಸ್ವಮರ್ಮ ಪ್ರಾಹ ಸತ್ಯವಾಕ್ ।
ಪಕ್ಷಮಧ್ಯೇ ಮರ್ಮದೇಶಃ ಪಕ್ಷಿಣಾಂ ಪ್ರಾಣಧಾರಣಮ್ ॥೫೯॥
ತತೋ ರಕ್ಷೋವಚಃ ಪಕ್ಷೀ ಸತ್ಯಂ ಮತ್ವಾ ಮಹಾಬಲಃ ।
ಅಙ್ಗುಷ್ಠಸ್ಯ ಪ್ರಹರಣಂ ಕರ್ತುಂ ವ್ಯವಸಿತೋಽಭವತ್ ॥೬೦॥
ತತಃ ಸ ಖಡ್ಗಮುದ್ಯಮ್ಯ ರಾವಣೋ ರಾಕ್ಷಸಾಧಮಃ ।
ಅಹನತ್ ಪಕ್ಷಿರಾಜಸ್ಯ ಪಕ್ಷಮಧ್ಯೇ ರುಷಾನ್ವಿತಃ ॥೬೧॥
ಖಡ್ಗಪ್ರಹಾರಕೃತ್ತಾಙ್ಗಃ ಪಪಾತ ಭುವಿ ಪಕ್ಷಿರಾಟ್ ।
ವಜ್ರಪಾತವಿನಿಚ್ಛಿನ್ನಂ ಭೂಧರಸ್ಯ ಶಿರೋ ಯಥಾ ॥೬೨॥
ತತೋಽತಿಜವಮಾಸ್ಥಾಯ ರಾವಣಂ ಪ್ರಯಯೌ ಭಿಯಾ ।
ಮುದ್ಗರೈಸ್ತಾಡಿತೋಲಕೋ೯ ಭಿನ್ನದೇಹೋ ಯಥಾ ಗೃಹಾತ್ ॥೬೩॥
ವಾನರಾ೯ ಸಙ್ಘಾ ದೃಷ್ಟ್ವಾ ಸಾ ಕಾನನೇ ಮೈಥಿಲೀಂ ಗತಾ೯ ।
ಕಾಶೇಯವಸ್ತ್ರಖಣ್ಡೈಸ್ತಾಂ ಪಾತಯಾಮಾಸ ಭೂಷಣಮ್ ॥೬೪॥
ಶಪ್ತಾ ದ್ರಮಿಡದೇಶಸ್ಥಾಃ ಸ್ತ್ರಿಯೋ ಹಾಸಪ್ರಕಾರಣಾತ್
ತ್ಯಕ್ತೋತ್ತರೀಯಾಃ ಸತತಂ ಕರ್ಣಾಲಂಕಾರವರ್ಜಿತಾಃ ॥೬೫॥

ಹೀಗ ಹೇಳಿದ ರಾವಣನ ಮಾತನ್ನು ಕೇಳಿ, ಸತ್ಯವಚನನಾದ ಜಟಾಯುವು 'ಪಕ್ಷಿಗಳಿಗೆ ರಕ್ಕೆಯ ಮಧ್ಯದಲ್ಲಿ ಪ್ರಾಣಧಾರಕವಾದ ಮರ್ಮದೇಶವಿರುವುದು' ಎಂದು, ತನ್ನ ಮರ್ಮವನ್ನು ಹೇಳಿಬಿಟ್ಟನು ॥೫೯॥

ಬಳಿಕ, ಮಹಾಬಲನಾದ ಜಟಾಯುವು, ರಾವಣಾಸುರನ ಮಾತನ್ನು ಸತ್ಯವೆಂದು ನಂಬಿದವನಾಗಿ, ಅವನ ಅಂಗುಷ್ಠವನ್ನು ಹೊಡೆಯುವುದಕ್ಕಾಗಿ ವ್ಯವಸಾಯಮಾಡಿದನು ॥೬೦॥

ಅನಂತರ, ರಾಕ್ಷಸಾಧಮನಾದ ರಾವಣನು, ಮಹಾಕೋಪಸಮನ್ವಿತನಾಗಿ ಖಡ್ಗವನ್ನು ಮೇಲಕ್ಕೆತ್ತಿ ಜಟಾಯುವಿನ ರಕ್ಕೆಯಮಧ್ಯದಲ್ಲಿ ಹೊಡೆದುಬಿಟ್ಟನು ॥೬೧॥

ಆಗ ಖಡ್ಗದ ಪೆಟ್ಟಿನಿಂದ ಛಿನ್ನವಾದ ಶರೀರವುಳ್ಳ ಜಟಾಯುವು, ವಜ್ರಾಯುಧದ ಏಟಿನಿಂದ ಕತ್ತರಿಸಲ್ಪಟ್ಟ ಪರ್ವತಶಿಖರದಂತೆ, ನೆಲದಮೇಲೆ ಬಿದ್ದುಬಿಟ್ಟನು ॥೬೨॥

ಆ ಬಳಿಕ, ಮುದ್ಗರದಿಂದ ಹೊಡೆಯಲ್ಪಟ್ಟು ಛಿನ್ನಶರೀರವಾದ ಶುನಕವು ಮನೆಯನ್ನು ಬಿಟ್ಟುಹೋಗುವಂತೆ, ರಾವಣನು ಭಯಪಟ್ಟು ಮಹಾವೇಗದಿಂದ ಹೊರಟುಹೋದನು ॥೬೩॥

ಹೀಗೆ ಹೋಗುತಿರುವಾಗ, ಸೀತೆಯು ಅರಣ್ಯದಲ್ಲಿ ಅಯ್ದುಮಂದಿ ವಾನರರು ಒಟ್ಟಾಗಿ ಕುಳಿತುಕೊಂಡಿರುವುದನ್ನು ಕಂಡು, ತನ್ನ(ಸೀತೆಯ)ಸೆರಗಿನಲ್ಲಿ ತನ್ನ ಆಭರಣಗಳನ್ನೆಲ್ಲ ಕಟ್ಟಿ ಅವರ ಹತ್ತಿರಕ್ಕೆ ಹಾಕಿದಳು ॥೬೪॥

ಆಗ ಸೀತೆಯನ್ನು ಕಂಡು ಇವಳು ಉತ್ತರೀಯ(ಸೆರಗು)ವನ್ನೂ ಕರ್ಣಾಭರಣವನ್ನೂ ತೆಗೆದುಬಿಟ್ಟಳೆಂದು ಪರಿಹಾಸವಾಡಿದಕಾರಣ, ಇವಳಿಂದ ಶಾಪಕೊಡಲ್ಪಟ್ಟ ದ್ರಮಿಡದೇಶದ ಸ್ತ್ರೀಯರು, ಈಗಲೂ ಉತ್ತರೀಯರಹಿತರಾಗಿ ಕರ್ಣಾಭರಣಶೂನ್ಯರಾಗಿರುವರು ॥೬೫॥

ದಕ್ಷಿಣೋದಧಿಮಾಸಾದ್ಯ ರಾವಣಃ ಸ್ಥಿರಮಾನಸಃ ।
ಯುದ್ಧಂ ಜಟಾಯುಷಃ ಸ್ಮೃತ್ವಾ ಸ್ವಿನ್ನದೇಹೋತಿಕಮ್ಪಿತಃ ॥೪೬।
ಲಂಕಾಶೋಕವನಂ ಪ್ರಾಪ್ಯ ಸುತಂ ಪ್ರಾಪ ಪುನರ್ಭವಃ ।
ಸೀತಾಮಶೋವನಿಕಾವೃಕ್ಷಮೂಲೇ ನ್ಯವೇಶಯತ್ ॥೪೭॥
ಅಶೋಕವನಿಕಾಮಧ್ಯೇ ಪೂಜಿತಾ ಜನಕಾತ್ಮಜಾ ।
ಆಸ್ತೇ ಮಘವತಾ ದತ್ತಪಾಯಸಾನ್ನೇನ ಜೀವತೀ ॥೪೮॥

ಇತಿ ಶ್ರೀವಾಲ್ಮೀಕಿರಾಮಾಯಣೇ ಸೀತಾಪಹಾರ ಜಟಾಯುರ್ಯುದ್ಧ ಕಥನಂ ನಾಮ
ಪಞ್ಚದಶಃ ಸರ್ಗಃ



ಬಳಿಕ ಸ್ಥಿರಹೃದಯನಾದ ರಾವಣನು, ದಕ್ಷಿಣ ಸಮುದ್ರಮಧ್ಯಕ್ಕೆ ಹೋಗಿ, ಅಲ್ಲಿಯೂ ಜಟಾಯುವಿನ ಯುದ್ಧವನ್ನು ಸ್ಮರಿಸಿಕೊಂಡು ಮೈಯೆಲ್ಲ ಬೆಮರುಕಟ್ಟಿ ನಡುಗುತ, ಲಂಕಾಪಟ್ಟಣದೊಳಗೆ ಅಶೋಕವನವನ್ನು ಸೇರಿ, ಆಗ ತಾನು ತಿರುಗಿ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದೆನೆಂದು ತಿಳಿದುಕೊಂಡು, ಸ್ವಲ್ಪಶಾಂತಿಸುಖವನ್ನು ಹೊಂದಿದವನಾಗಿ, ಸೀತೆಯನ್ನು ಆ ಅಶೋಕವನದ ಒಂದು ಮರದ ಕೆಳಗಡೆ ಇರಿಸಿದವನಾದನು ॥೪೬-೪೭॥

ಬಳಿಕ, ಸರ್ವಲೋಕವೂಜ್ಯಳಾದ ಜನಕರಾಜಪುತ್ರಿಯು, ಇಂದ್ರನಿಂದ ರಹಸ್ಯವಾಗಿ ಅಗ್ನಿಯ ದ್ವಾರಾ ಕಳುಹಿಸಲ್ಪಟ್ಟ ಪಾಯಸದಿಂದ ಜೀವನಮಾಡುತ, ಅಶೋಕವನದ ಮಧ್ಯದಲ್ಲಿ ಸುಖವಾಗಿದ್ದಳು ॥೪೮॥

ಇದು ಅರಣ್ಯಕಾಂಡದಲ್ಲಿ ಸೀತಾಪಹಾರ ಜಟಾಯುರ್ಯುದ್ಧ ಕಥನವೆಂಬ
ಹದಿನೈದನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ಷೋಡಶಃ ಸರ್ಗಃ.

ಶ್ರೀಶಿವಉವಾಚ.

ಏತಸ್ಮಿನ್ನೇವ ಸಮಯೇ ಮೃಗಂ ಹತ್ವಾ ಸ ರಾಘವಃ ।
ಆಯಾನ್ತಂ ಲಕ್ಷ್ಮಣಂ ದೃಷ್ಟ್ವಾ ಮನಃಕ್ಷೋಭನಿಪೀಡಿತಃ ।
ಸೀತಾವಾಕ್ಯರಸಂಘೂತಚೋದಿತಂ ಭಿನ್ನಮಾನಸಮ್ ॥೧॥
ಲಕ್ಷ್ಮಣಸ್ಯ ಮನಃಪೀಡಾಂ ಅಸಹಿಷ್ಣುರ್ದಯಾಪರಃ ।
ಭ್ರಾತೃದುಃಖಪ್ರಹಾರೇಚ್ಛುಃ ಸ್ವಭಕ್ತಾರ್ತಿವಿನಾಶನಃ ॥೨॥
ಆತ್ಮಾನಂ ದರ್ಶಯಾಮಾಸ ಸೀತಯಾ ಸಹಿತಂ ಪ್ರಭುಃ ॥೩॥
ಸೀತಾಸಮೇತಂ ಶ್ರೀರಾಮಂ ದೃಷ್ಟ್ವಾ ಸೌಮಿತ್ರಿರಾದರಾತ್ ।
ನಿರ್ಮಲಜ್ಞಾನಸಂಪನ್ನಃ ಪಪ್ರಚ್ಛ ಕಿಮಿದಂ ತ್ವಿತಿ ॥೪॥
ಇತಿ ಬ್ರುವಾಣಂ ಸೌಮಿತ್ರಿಂ ಸೀತಾದರ್ಶನವಿಸ್ಮಿತಮ್ ।
ಪ್ರಹಸನ್ ರಾಘವೋ ವಾಕ್ಯಂ ಜಗಾದ ಮಧುರಸ್ವನಃ ॥೫॥

ಅರಣ್ಯಕಾಂಡದಲ್ಲಿ ಹದಿನಾರನೆಯ ಸರ್ಗವು

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು.—

ಎಲೌ ಪಾರ್ವತಿ! ಹೀಗೆ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದ ಸಮಯದಲ್ಲಿಯೇ, ರಾಮನು ಮಾಯಾಮೃಗರೂಪಧಾರಿಯಾಗಿದ್ದ ಮಾರೀಚನನ್ನು ಕೊಂದು ಹಿಂದಿರುಗಿ ಬರುತ್ತ, ಸೀತೆಯ ವಾಕ್ಯುಗಳೆಂಬ ಶರಗಳಿಂದ ಪ್ರೇರಿತನಾಗಿ ವಿಶೀರ್ಣಹೃದಯನಾಗಿ ತನ್ನೆದುರಿಗೆ ಬರುತಿರುವ ಲಕ್ಷ್ಮಣನನ್ನು ಕಂಡು ಕಳವಳ ಪಟ್ಟವನಾಗಿ, ಕೇವಲದಯಾಶೀಲನಾದಕಾರಣ ಲಕ್ಷ್ಮಣನ ಮನೋವ್ಯಥೆಯನ್ನು ಸಹಿಸಲಾರದೆ, ತನ್ನ ಭಕ್ತರ ಆರ್ತಿಯನ್ನು ವಿನಾಶಪಡಿಸತಕ್ಕವನಾದುದರಿಂದ ತಮ್ಮನಾದ ಲಕ್ಷ್ಮಣನ ದುಃಖವನ್ನು ಹೋಗಲಾಡಿಸಬೇಕೆಂದು ಎಣಿಸಿದವನಾಗಿ, ಸೀತೆಯೊಡನೆ ವಿರಾಜಿಸುತಿರುವ ತನ್ನ ಸ್ವರೂಪವನ್ನು ಅವನಿಗೆ ತೋರಿಸಿದನು ॥೧-೩॥

ಆಗ ರಾಮನು ಸೀತಾಸಹಿತನಾಗಿರುವುದನ್ನು ಕಂಡು, ನಿರ್ಮಲಜ್ಞಾನಸಂಪನ್ನನಾಗಿರುವ ಲಕ್ಷ್ಮಣನು, ಅದರಾತಿಶಯದಿಂದ 'ಇದೇನು?' ಎಂದು ಪ್ರಶ್ನೆಮಾಡಿದನು ॥೪॥

ಹೀಗೆ ಸೀತಾದರ್ಶನದಿಂದ ಆಶ್ಚರ್ಯಪಟ್ಟು ಪ್ರಶ್ನೆಮಾಡುತಿರುವ ಲಕ್ಷ್ಮಣನನ್ನು ಕುರಿತು, ಶ್ರೀರಾಮನು ಮಂದಹಾಸಮಾಡುತ ಮಧುರವಾದ ಧ್ವನಿಯಿಂದ ಹೀಗೆ ಹೇಳಿದನು ॥೫॥

ಮಯೇದಂ ದರ್ಶಿತಂ ರೂಪಂ ದುರ್ಲಭಂ ಸನಕಾದಿಭಿಃ ।
ಮಮ ಭಕ್ತಸ್ಯ ತೇ ದುಃಖಂ ವನಮಧ್ಯೇ ಽಸಹಿಷ್ಣುನಾ ॥೬॥
ಪಿತಾಹಂ ಸರ್ವಲೋಕಾನಾಂ ಮಾತಾ ಜನಕನಂದಿನೀ ।
ಮಚ್ಛಕ್ತಿರ್ಜಾನಕೀ ತಸ್ಮಾತ್ ನೈತಾ ಮದನಪಾಯಿನೀ ॥೭॥
ರಾವಣಸ್ಯ ವಿನಾಶಾಯ ಮಾಯಾಸೀತಾಂ ಮಯಾ ಕೃತಾಮ್ ।
ಲಕ್ಷ್ಮಣ ತ್ವಂ ನ ಜಾನಾಸಿ ಮನ್ಮಾಯಾಮೋಹಿತೋ ಭೃಶಮ್ ॥೮॥
ತತ್ಸ್ವರೂಪಮವಿಜ್ಞಾಯ ಮಾರೀಚೇನ ಸ ರಾವಣಃ ।
ಮಮಾಶ್ರಮಮುಪಾಗಮ್ಯ ಮೋಹಯಾಮಾಸ ಜಾನಕೀಮ್ ॥೯॥
ತತೋ ಮಯಿ ಮೃಗಂ ಯಾತೇ ಪಶ್ಚಾತ್ ತ್ವಯ್ಯಪಿ ನಿರ್ಗತೇ ।
ರಾವಣೋ ಭಿಕ್ಷುರೂಪೇಣ ಮಾಯಾಸೀತಾಂ ಜಹಾರ ತಾಮ್ ॥೧೦॥
ತಸ್ಯ ಮಾಯಾಮಹಂ ವೇದ್ಮಿ ನ ಮೇ ಮಾಯಾಂ ಕುತಶ್ಚನ ।
ಜಾನಾತಿ ಪುರುಷವ್ಯಾಘ್ರ ವಿನಾ ಮತ್ಪಾದಸೇವಕಮ್ ॥೧೧॥

ವತ್ಸ! ಲಕ್ಷ್ಮಣ! ನನ್ನ ಈ ರೂಪವನ್ನು ಸನಕಾದಿಗಳೂ ನೋಡಲಾರರು, ಆದರೂ, ನನ್ನ ಭಕ್ತನಾದ ನೀನು ಅರಣ್ಯಮಧ್ಯದಲ್ಲಿ ಹೀಗೆ ದುಃಖಪಡುತ್ತಿರುವುದನ್ನು ಸಹಿಸಲಾರದೆ, ನಾನು ನಿನಗೆ ಈ ರೂಪವನ್ನು ತೋರಿಸಿರುವೆನು ॥೬॥

ನಾನು ಸಮಸ್ತಲೋಕಗಳಿಗೂ ತಂದೆಯು, ಸೀತೆಯು ಸರ್ವಜಗತ್ತಿಗೂ ತಾಯಿಯು ಹೀಗೆ ಈ ಸೀತೆಯು ನನ್ನ ಶಕ್ತಿಭೂತಳಾಗಿರುವಳು ಆದುಕಾರಣ ಇವಳು ನನ್ನನ್ನು ಬಿಟ್ಟು ಒಂದು ಕ್ಷಣಕಾಲವೂ ಇರತಕ್ಕವಳಲ್ಲ ॥೭॥

ವತ್ಸ! ಲಕ್ಷ್ಮಣ! ನೀನು ನನ್ನ ಮಾಯೆಯಿಂದ ಅತ್ಯಂತವಾಗಿ ಮೋಹಿತನಾಗಿರುವಕಾರಣ, ನಾನು ರಾವಣವಧಕ್ಕಾಗಿ ಮಾಯಾಸೀತೆಯನ್ನು ಕಲ್ಪಿಸಿರುವುದನ್ನು ನೀನು ತಿಳಿಯದವನಾಗಿರುವೆ ॥೮॥

ಅವಳ ಸ್ವರೂಪವನ್ನು ಅರಿಯದೆ, ಆ ರಾವಣನು ನನ್ನ ಆಶ್ರಮಕ್ಕೆ ಬಂದು, ಮಾರೀಚನ ದ್ವಾರಾ ಆ ಮಾಯಾಸೀತೆಯನ್ನು ವಂಚನೆಪಡಿಸಿದನು ॥೯॥

ಬಳಿಕ ನಾನು ಆ ಮಾಯಾಮೃಗವಾದ ಮಾರೀಚನನ್ನು ಬೆನ್ನಟ್ಟಿಕೊಂಡು ಹೋಗಲಾಗಿ, ಅನಂತರ ನೀನು ನನ್ನ ಹಿಂದೆಯೇ ಹೊರಟುಬಂದಮೇಲೆ, ರಾವಣನು ಸನ್ಯಾಸಿಯ ವೇಷವನ್ನು ಹಾಕಿಕೊಂಡು ಆ ಮಾಯಾಸೀತೆಯನ್ನು ಅಪಹರಿಸಿಬಿಟ್ಟಿರುವನು ॥೧೦॥

ಎಲೈ ಪುರುಷವ್ಯಾಘ್ರನೆ! ನಾನು ಅವನ ಮಾಯೆಯನ್ನು ಬಲ್ಲೆನು, ನನ್ನ ಮಾಯೆಯಾದರೋ, ನನ್ನ ಪಾದಸೇವಕನನ್ನು ಬಿಟ್ಟು ಮತ್ತಾರಿಗೂ ಹೇಗೂ ಗೊತ್ತಾಗಲಾರದು ॥೧೧॥

ಏತದುಕ್ತಂ ಮಯಾ ಸತ್ಯಮಿತಿ ಮತ್ವಾ ಸುಖೀ ಭವ ।
ಜ್ಞಾತ್ವಾಪ್ಯೇವಂ ವಜ್ಞಾನಾಯ ಶೋಚಾಮಿ ಪ್ರಾಕೃತೋ ಯಥಾ ॥೧೬॥
ಯದ್ಯಹಂ ವಿರತೋ ಭೂತ್ವಾ ತೂಷ್ಣೀಂ ಸ್ಥಾಸ್ಯಾಮಿ ಮನ್ದಿರೇ ।
ತದಾ ರಾಕ್ಷಸಕೋಟೀನಾಂ ವಧೋಪಾಯಃ ಕಥಂ ಭವೇತ್ ॥೧೩॥
ಅತಃ ಶೋಚಕ ವಿಜೆನ್ವಂಸ್ತಾಂ ಹನಿಷ್ಯೇ ಕ್ರಮಶೋಽಸುರಾ ।
ತಸ್ಮಾಚ್ಛೋಚಾಮ್ಯಜ್ಞ ಇವ ಬೃನ್ದಾಶಾಪವಶಾದಪಿ ॥೧೪॥
ಇತಿ ತೇ ಕಥಿತಂ ವೀರ ವೃತ್ತಾನ್ತಂ ಸರ್ವಮಾದಿತಃ ।
ಪ್ರಸನ್ನೋ ಭವ ಸೌಮಿತ್ರೇ ತ್ಯಜ ಶೋಕಂ ಹೃದಿ ಸ್ಥಿತಮ್ ॥೧೫॥
ಆತ್ಮಪ್ರಚ್ಛಾದನಂ ಕೃತ್ವಾ ಸೀತಾನ್ವೇಷಣಮಜ್ಞಾಸಾ ।
ಮಯಾ ದಾಮಸತಿಕ್ರಮ್ಯ ಲೋಕಸ್ಯ ಕರವಾವಹೈ ॥೧೬॥

ಶ್ರೀಸೂತಉವಾಚ

ಇತಿ ಶ್ರುತ್ವಾ ರಾಮತತ್ತ್ವಂ ಬ್ರಹ್ಮಾದೀನಾಂ ಸುದುರ್ಲಭಮ್ ।
ರಾಮಂ ಪರತರಂ ಮತ್ವಾ ಜಹೌ ಶೋಕಂ ಸ ಲಕ್ಷ್ಮಣಃ ॥೧೭॥

ಈಗ ನನ್ನಿಂದ ಹೇಳಲ್ಪಟ್ಟ ಈ ಮಾತು ಸತ್ಯವೆಂದು ನಂಬಿ ನೀನು ನಿರಾತಂಕನಾಗಿರು ನಾನು ಇದಷ್ಟೆಲ್ಲ ತಿಳಿದುಕೊಂಡಿದ್ದರೂ, ಲೋಕವಿಡಂಬನಾರ್ಥವಾಗಿ ಪ್ರಾಕೃತಮನುಜನಂತೆ ಶೋಕಿಸುವೆನು ॥೧೬॥

ನಾನು ಈ ಲೋಕವ್ಯಾಪಾರವನ್ನು ಬಿಟ್ಟು ಸುಮ್ಮನೆ ಮನೆಯಲ್ಲಿರುವೆನಾದರೆ, ಆಗ ಅಸಂಖ್ಯಾಕರಾದ ರಾಕ್ಷಸರ ವಧಯಾಗುವುದಕ್ಕೆ ಉಪಾಯವೇನು ? ॥೧೩॥

ಅದುಕಾರಣ, ನಾನು ಶೋಕಪಡುತ ಸೀತೆಯನ್ನು ಹುಡುಕುತ, ಕ್ರಮವಾಗಿ ರಾಕ್ಷಸರನ್ನೆಲ್ಲ ಕೊಲ್ಲಬಹುದು ಅದುದರಿಂದ, ನಾನು ಅಜ್ಞಾನಿಯಂತೆ ಈಗ ಶೋಕಿಸುವೆನು ಬೃಂದೆಯ ಶಾಪವೂ ಇದಕ್ಕೆ ಸಹಕಾರಿಯಾಗುವುದು ॥೧೪॥

ಎಲೈ ವೀರನೆ ಇದೋ ಈರೀತಿಯಾಗಿ ಸಮಸ್ತವೃತ್ತಾಂತವನ್ನೂ ಆದ್ಯಂತಯುಕ್ತವಾಗಿ ನಿನಗೆ ಹೇಳಿರುವೆನು ಎಲೈ ಸುಮಿತ್ರಾಪುತ್ರನೆ ನೀನು ಮನಸ್ಸಮಾಧಾನಹೊಂದು, ಹೃದಯದಲ್ಲಿನ ಈ ಶೋಕವನ್ನು ಬಿಟ್ಟುಬಿಡು ॥೧೫॥

ಈಗ ನಾವಿಬ್ಬರೂ ನಮ್ಮ ಸ್ವರೂಪವನ್ನು ಮರೆಮಾಡಿಕೊಂಡು, ಲೋಕಮರ್ಯಾದಾಪಾಲನಾರ್ಥವಾಗಿ ಈಗಲೇ ಸೀತಾನ್ವೇಷಣೆಯನ್ನು ಮಾಡಬೇಕಾಗಿರುವುದು ॥೧೬॥

ಶ್ರೀಸೂತರು ಶೌನಕಾದಿಗಳನ್ನು ಕುರಿತು ಹೇಳುವರು —

ಎಲೈ ಮಹರ್ಷಿಗಳಿರಾ! ಹೀಗೆ ಆ ಲಕ್ಷ್ಮಣನು ಬ್ರಹ್ಮಾದಿಗಳಿಗೂ ಅತಿದುರ್ಲಭವಾಗಿರುವ ಶ್ರೀರಾಮನ ತತ್ವವನ್ನು ಕೇಳಿ, ಶ್ರೀರಾಮನೇ ಸಾಕ್ಷಾತ್ ಪರಾತ್ಪರವಸ್ತುವೆಂದು ತಿಳಿದುಕೊಂಡು, ತನ್ನ ಹೃದಯದ ವ್ಯಥೆಯನ್ನು ಬಿಟ್ಟುಬಿಟ್ಟನು ॥೧೭॥

ಅಥ ಮಾಯಾಯವನಿಕಾಂ ಪ್ರಸಾರ್ಯ ರಘುನನ್ದನಃ ।
ಮೋಹಯನ್ಪ್ರಾಣಿನಃ ಸೀತಾಂ ವಿಜಿಘ್ರನ್ಸ್ವಾಶ್ರಮಂ ಯಯೌ ॥೧೪೯॥

ಋಷಯಊಚುಃ.

ಸೂತ ಜಾನಾಸಿ ಸರ್ವಂ ತ್ವಂ ವೇದವ್ಯಾಸಪ್ರಸಾದತಃ ।
ಬ್ರೂಹ್ಯಾಶಾಪಾಗಮಂ ವಿಷ್ಣೋಃ ಯಾಥಾತಥ್ಯೇನ ನೋ ವದ ॥೧೫೯॥

ಸೂತಉವಾಚ.

ಪುರಾ ಜಲನ್ಧರೋ ನಾಮ ಸಮುದ್ರತನಯೋಽಸುರಃ ।
ತ್ರೈಲೋಕ್ಯಂ ಬಾಧಿತಂ ತೇನ ಸದೇವಾಸುರಮಾನುಷಮ್ ॥೧೦॥
ತತೋ ದೇವಾಃ ಸಗನ್ಧರ್ವಾಃ ಸಂಪ್ರಾಪ್ಯ ಶರಣಂ ಹರಿಮ್ ।
ಊಚುಃ ಪ್ರಾಞ್ಜಲಯೋ ಭೂತ್ವಾ ಜಲನ್ಧರಕೃತಂ ಭಯಮ್ ॥೧೧॥
ವಯಂ ಜಲನ್ಧರಾಖ್ಯೇನ ರಕ್ಷಸಾ ಹತಸಂಪದಃ ।
ತನ್ನಿಹತ್ಯ ಭಯಾತ್ ತಸ್ಮಾತ್ ಮೋಚಯಾಸ್ಮಾನ್ ಜಗತ್ಪತೇ ॥೧೨॥

ಆಮೇಲೆ, ಆ ರಾಮಚಂದ್ರನು ಪುನಃ ತನ್ನ ಮಾಯೆಯೆಂಬ ತೆರೆಯನ್ನು ಪ್ರಸರಣಿಮಾಡಿ, ಪ್ರಾಣಿಗಳಿಗೆ ಮೋಹವನ್ನುಂಟುಮಾಡುತ, ಸೀತೆಯನ್ನು ಹುಡುಕಿಕೊಂಡು ತನ್ನ ಆಶ್ರಮವನ್ನು ಕುರಿತು ಹೊರಟವನಾದನು ॥೧೫೪॥

ಶೌನಕಾದಿಗಳು ಸೂತಪೌರಾಣಿಕನನ್ನು ಪ್ರಾರ್ಥಿಸುವರು —

ಎಲೈ ಸೂತಮುನಿಯೆ! ವೇದವ್ಯಾಸರ ಅನುಗ್ರಹಬಲದಿಂದ ನೀನು ಸಕಲವನ್ನೂ ತಿಳಿದವನಾಗಿರುವೆ, ಅದುಕಾರಣ, ವಿಷ್ಣುವಿಗೆ ಬ್ರಂದೆಯ ಶಾಪಬಂದ ಪ್ರಕ್ರಮವನ್ನು ನಮಗೆ ಯಥಾವತ್ತಾಗಿ ಹೇಳುವನಾಗು ॥೧೫೯॥

ಇದನ್ನು ಕೇಳಿ ಸೂತರು ಹೇಳುವರು —

ಎಲೈ ಮಹರ್ಷಿಗಳಿರಾ! ಪೂರ್ವದಲ್ಲಿ ಸಮುದ್ರನಿಗೆ ಪುತ್ರನಾದ ಜಲಂಧರನೆಂಬ ರಾಕ್ಷಸನೊಬ್ಬನಿದ್ದನು ದೇವಾಸುರ ಮನುಷ್ಯಸಹಿತವಾದ ಲೋಕತ್ರಯವೂ ಅದರಿಂದ ಬಾಧೆಪಡಿಸಲ್ಪಟ್ಟಿತು ॥೧೦॥

ಅನಂತರ, ಗಂಧರ್ವಾದಿಸಮೇತರಾದ ಸಮಸ್ತದೇವತೆಗಳೂ ಶ್ರೀಹರಿಯನ್ನು ಮರೆಹೊಕ್ಕು, ಅಂಜಲಿಬಂಧಮಾಡಿಕೊಂಡು 'ಹೇಜಗತ್ಪತೇ! ಜಲಂಧರನೆಂಬ ರಾಕ್ಷಸನು ನಮ್ಮ ಸಂಪತ್ತನ್ನೆಲ್ಲ ಅಪಹರಿಸಿಬಿಟ್ಟಿರುವನು ನೀನು ಅವನನ್ನು ಕೊಂದು ನಮಗೆ ಅವನ ಭಯವನ್ನು ಬಿಡಿಸಬೇಕು, ಎಂಬುದಾಗಿ, ಆ ಜಲಂಧರನ ಭಯವನ್ನು ಶ್ರೀಹರಿಗೆ ಅರಿಕೆಮಾಡಿಕೊಂಡರು ॥೧೧-೧೨॥

ತಚ್ಛ್ರುತ್ವಾ ವಚನಂ ತೇಷಾಂ ಶ್ರೀವಿಷ್ಣುಃ ಶಮ್ಭುನಾ ಸಹ ।
ಸಮಾಲೋಚ್ಯ ತತಸ್ತೇನ ಯೋದ್ಧುಂ ಶಿವಮಯೋಜಯತ್ ॥೨೩॥
ತತೋ ನಾರದವಾಕ್ಯೇನ ಜಲನ್ಧರಮುಪಾಗತಮ್ ।
ಯುಯುಧೇ ಶಙ್ಕರಃ ಸಾಕ್ಷಾತ್ ಸರ್ವೈರ್ದೇವಗಣೈಃ ಸಹ ॥೨೪॥
ಏವಂ ಬಹುತಿಥಂ ಕಾಲಂ ಶಙ್ಕರೇಣ ಮಹಾತ್ಮನಾ ।
ಯುಧ್ಯಮಾನಸ್ಯ ತಸ್ಯಾಪಿ ನ ಶ್ರಮೋ ವಾ ಪರಾಜಯಃ ॥೨೫॥
ಪತ್ನೀಪಾತಿವ್ರತ್ಯಬಲಾತ್ ಒಲೀ ಜಾಲನ್ಧರೋಸುರಃ ।
ಇತ್ಯಾಲೋಚ್ಯ ತತೋ ವಿಷ್ಣುಃ ಬೃನ್ದಾಗೃಹಮುಪಾಯಯೌ ॥೨೬॥
ತತೋ ಜಲನ್ಧರೋ ಭೂತ್ವಾ ಮಾಯಯಾ ತಾಂ ವಿಮೋಹಯನ್ ।
ಯುದ್ಧಂ ಕೃತ್ವಾಗತಇವ ಚಿರಂ ರೇಮೇ ತಯಾ ಸಹ ॥೨೭॥
ಸಾಪಿ ರೇಮೇ ಪತಿಭ್ರಾನ್ತ್ಯಾ ಬೃನ್ದಾ ಸುಖಗತಿಂ ಗತಾ ॥೨೮॥
ಪಾತಿವ್ರತ್ಯಸ್ಯ ಭಙ್ಗೋಭೂತ್ ಬೃನ್ದಾಯಾಅಥ ಕಾಮಿನಾ

ಹೀಗೆ ಆ ದೇವತೆಗಳು ಹೇಳಿದ ಮಾತನ್ನು ಕೇಳಿ, ಶ್ರೀಹರಿಯು ಪರಮೇಶ್ವರನೊಡನೆ ಆಲೋಚನೆಮಾಡಿ, ಬಳಿಕ ಜಲಂಧರನ ಸಂಗಡ ಯುದ್ಧಮಾಡುವುದಕ್ಕೆ ಈಶ್ವರನನ್ನು ಸಜ್ಜುಗೊಳಿಸಿದನು ॥೨೩॥

ಅನಂತರ ನಾರದರ ಮಾತಿನಮೇರೆಗ ಯುದ್ಧಾರ್ಥವಾಗಿ ಬಂದ ಜಲಂಧರಾಸುರನನ್ನು ಎದುರಿಸಿ, ಸಮಸ್ತದೇವತೆಗಳೊಡಗೂಡಿ ಶಂಕರನು ಯುದ್ಧಮಾಡಿದನು ॥೨೪॥

ಹೀಗೆ ಮಹಾತ್ಮನಾದ ಶಂಕರನೊಡನೆ ಬಹುದಿನಸ ಯುದ್ಧಮಾಡುತಿದ್ದರೂ, ಆ ಜಲಂಧರನಿಗೆ ಪರಾಜಯವಾಗಲಿಲ್ಲ, ಕೊನೆಗೆ ಸ್ವಲ್ಪ ಆಯಾಸವೂ ಉಂಟಾಗಲಿಲ್ಲ ॥೨೫॥

ಹೀಗಾದಬಳಿಕ, ಈ ಜಲಂಧರಾಸುರನು ಪತ್ನಿಯ ಪಾತಿವ್ರತ್ಯಮಹಿಮೆಯಿಂದ ಇಷ್ಟು ಬಲಿಷ್ಠನಾಗಿರುವನೆಂದು ಆಲೋಚಿಸಿ, ವಿಷ್ಣುವು ಅವನ ಪತ್ನಿಯಾದ ಬೃಂದೆಯ ಮನೆಗೆ ಬಂದವನಾದನು ॥೨೬॥

ಆಮೇಲೆ ತಾನು ಮಾಯೆಯಿಂದ ಜಲಂಧರನ ರೂಪವನ್ನು ಧರಿಸಿಕೊಂಡು, ಯುದ್ಧಮಾಡಿ ಬಂದವನಂತೆ ಅವಳಿಗೆ ಮೋಸವುಂಟುಮಾಡುತ, ಅವಳೊಡನೆ ಬಹುಕಾಲದವರೆಗೆ ರಮಿಸುತಿದ್ದನು ಆ ಬೃಂದೆಯೂಕೂಡ, ತನ್ನ ಪತಿಯಂಬ ಭ್ರಾಂತಿಯಿಂದ ವಿಶೇಷಸುಖಯುಕ್ತಳಾಗಿ ಅವನೂಡನೆ ರಮಿಸುತಿದ್ದಳು ॥೨೭-೨೮॥

ಈರೀತಿಯಾಗಿ ಬೃಂದೆಯ ಪಾತಿವ್ರತ್ಯಕ್ಕೆ ಭಂಗವುಂಟಾಯ್ತು, ಬಳಿಕ, ಕಾಮಾವಿಷ್ಟನಾದ

ಹರಿಣಾ ಕಲ್ಪಿತೇ ತಸ್ಯಾಃ ಪಾತಿವ್ರತ್ಯನಿವಾರಣೇ ।
ಜಲಂಧರಃ ಶಕ್ತಿಹೀನೋ ಬಭೂವಾಯೋಧನೇ ತದಾ ॥೯॥
ತತಃ ಪ್ರವವೃತೇ ಯುದ್ಧಂ ಘೋರಂ ದೇವಾಸುರೋಪಮಮ್ ।
ತತ್ರಸುಃ ಸರ್ವಭೂತಾನಿ ಬ್ರಹ್ಮಾಂಡಲಯಶಙ್ಕಯಾ ॥೧೦॥
ಹರೋ ಬ್ರಹ್ಮಾಸ್ತ್ರವೇಗೇನ ಜಲಂಧರಶಿರೋಽಹರತ್ ।
ಸ ಪಪಾತ ಮಹೀಪೃಷ್ಠೇ ಶಿವಬಾಣಹತೋಽಸುರಃ ॥೧೧॥
ಜಲಂಧರೇ ಹತೇ ಯುದ್ಧೇ ಹತಶೇಷಾನಿಶಾಚರಾಃ ।
ಬೃನ್ದಾಸಾನ್ನಿಧ್ಯಮಾಸಾದ್ಯ ಶಶಂಸುಃ ಸತ್ಯಮೇವ ತತ್ ॥೧೨॥
ನಿಶಮ್ಯ ಬೃನ್ದಾ ತದ್ಯುದ್ಧಂ ಪತ್ಯುರ್ಮರಣಕಾರಣಮ್ ।
ಹರಿಮೂಹೂಯ ಪಪ್ರಚ್ಛ ಕಿಮಿದಂ ನ್ಯಾಯಯಾ ಕೃತಮ್ ॥೧೩॥
ಇತ್ಯುಕ್ತ್ವಾ ಪತಿನಾಶೇನ ಬೃನ್ದಾ ಸಾತ್ಯನ್ತಕೋಪನಾ ।
ಶಾಪಂ ದದೌ ತದಾ ತಸ್ಯ ಹರೇರತ್ಯನ್ತದುಃಖಿತಾ ॥೧೪॥
ಸರ್ವಜ್ಞೇನ ತ್ವಯಾ ವಿಷ್ಣೋ ಮಾಯಯಾ ಮೇ ಹತಃ ಪತಿಃ ।
ಸ್ವರೂಪಂ ವಿಸ್ಮೃತಂ ತೇಽಸ್ತು ಪರಬೋಧೇನ ಭಾಸತಾಮ್ ॥೧೫॥

ವಿಷ್ಣುವಿನಿಂದ ಅವಳಿಗೆ ಪಾತಿವ್ರತ್ಯಭಂಗವುಂಟಾಗಲಾಗಿ, ಆಗ ಜಲಂಧರನು ಯುದ್ಧದಲ್ಲಿ ಶಕ್ತಿಯಿಲ್ಲದವನಾಗಿಬಿಟ್ಟನು ॥೯॥

ಅನಂತರ ಅವರಿಬ್ಬರಿಗೂ ಅತಿದಾರುಣವಾದ ಯುದ್ಧವು ಪ್ರಾರಂಭಿಸಿತು ಆಗ ಬ್ರಹ್ಮಾಂಡವು ಲಯಹೊಂದೀತೆಂಬ ಶಂಕೆಯಿಂದ ಸಕಲ ಪ್ರಾಣಿಗಳೂ ನಡುಗಲಾರಂಭಿಸಿದುವು ॥೧೦॥

ಬಳಿಕ, ಈಶ್ವರನು ಬ್ರಹ್ಮಾಸ್ತ್ರದ ವೇಗದಿಂದ ಜಲಂಧರನ ಶಿರಸ್ಸನ್ನು ಕತ್ತರಿಸಿದನು ಹೀಗೆ ಈಶ್ವರನ ಬಾಣದಿಂದ ಹತನಾದ ಆ ಜಲಂಧರಾಸುರನು ನೆಲದಮೇಲೆ ಬಿದ್ದುಬಿಟ್ಟನು ॥೧೧॥

ಈರೀತಿಯಾಗಿ ಜಲಂಧರನು ಯುದ್ಧದಲ್ಲಿ ಹತನಾದ ಬಳಿಕ, ಹತಶೇಷರಾದ ರಾಕ್ಷಸರು ಬೃಂದೆಯ ಹತ್ತಿರಕ್ಕೆ ಬಂದು ಆ ವೃತ್ತಾನ್ತವನ್ನೆಲ್ಲ ಯಥಾವತ್ತಾಗಿ ಹೇಳಿಬಿಟ್ಟರು ॥೧೨॥

ಆಗ ಆ ಯುದ್ಧವು ತನ್ನ ಪತಿಯ ಮರಣಕ್ಕೆ ಕಾರಣಭೂತವಾಗಿಬಿಟ್ಟುದುದನ್ನು ಕೇಳಿ, ಬೃಂದೆಯು ಹರಿಯನ್ನು ಕರೆದು 'ಇದೇನು ಇಂತಹ ಕಪಟವನ್ನು ಮಾಡಿದೆ?' ಎಂದು ಕೇಳಿದಳು ॥

ಹೀಗೆ ವಿಷ್ಣುವನ್ನು ಪ್ರಶ್ನಿಮಾಡಿ, ಅತ್ಯಂತವಾದ ಕೋಪದಿಂದಲೂ ದುಃಖದಿಂದಲೂ ಆಕ್ರಾಂತಳಾಗಿರುವ ಆ ಬೃಂದೆಯು 'ಎಲೈ ವಿಷ್ಣುವೆ! ನೀನು ಸರ್ವಜ್ಞನಾಗಿದ್ದುಗೊಂಡು ಮಾಯೆಯಿಂದ ನನ್ನ ಪತಿಯನ್ನು ಕೊಂದೆಯಾದಕಾರಣ, ನಿನಗೆ ನಿನ್ನ ಸ್ವರೂಪವು ವಿಸ್ಮೃತವಾಗಲಿ, ಆಮೇಲೆ ಇತರರು ಹೇಳಿದಬಳಿಕ ನಿನಗೆ ನಿನ್ನ ಸ್ವರೂಪವು ಪ್ರಕಾಶಿಸಲಿ' ಎಂದು ವಿಷ್ಣುವಿಗೆ ಶಾಪವನ್ನು ಕೊಟ್ಟಳು ॥೧೪-೧೫॥

ಶಾಪಂ ಶ್ರುತ್ವಾ ಹರಿಸ್ತಸ್ಯಾಃ ಪ್ರತ್ಯುವಾಚಾತಿಮೋಹಿತಂ ।
ರಾಮೋ ದಾಶರಥಿರ್ಭೂತ್ವಾ ಶಾಪಮೇತಂ ವಹಾಮ್ಯಹಮ್ ॥೩೬॥
ಏವಂ ಶಪ್ತ್ವಾ ಹರಿಂ ಬೃನ್ದಾ ದೇಹಂ ತತ್ಯಾಜ ಸಾ ಸತೀ ।
ಹರಿರ್ಬೃನ್ದಾಸ್ಮಶಾನೇ ತು ಚಚಾರಾತ್ಯನ್ತಮೋಹಿತಂ ॥೩೭॥
ವಿಷ್ಣೋರ್ದೈನ್ಯವಿಲಾಪಾರ್ಥಂ ಪ್ರಾದುರಾಸೀತ್ ತದಾ ವಿಧಿಃ ।
ಬೀಜತ್ರಯಂ ದದೌ ವಿಷ್ಣೋಃ ಬೃನ್ದಾವಿರಹಶಾನ್ತಯೇ ।
ತುಲಸೀಮಾಲತೀಧಾತ್ರೀಸಂಭವಂ ಹರಿತುಷ್ಟಿದಮ್ ॥೩೮॥
ವೃನ್ದಾವನಮಭೂತ್ ತತ್ರ ತುಲಸೀಬೀಜಸಂಭವಮ್ ॥೩೯॥
ಅತೋ ಬೃನ್ದಾವನಸ್ಥಾನಂ ಅಭವದ್ವಿಷ್ಣುತುಷ್ಟಿದಮ್ ।
ಬೃನ್ದಾವನವಿಹಾರೋಭೂತ್ ತದಾಪ್ರಭೃತಿ ಕೇಶವಃ ॥೪೦॥
ಬೃನ್ದಾವನಂ ಯಸ್ಯ ಗೇಹೇ ಹರಿಸ್ತಸ್ಯೈವ ತಿಷ್ಠತಿ ।
ವೈಕುಂಠಸದೃಶಂ ಗೇಹಂ ಯತ್ರ ತಿಷ್ಠತಿ ಮಾಧವಃ ॥೪೧॥

ಹೀಗೆ ಬೃಂದೆಯಿಂದ ಕೂಡಲ್ಪಟ್ಟ ಶಾಪಪ್ರಕಾರವನ್ನು ಕೇಳಿ, ಅತಿಮೋಹವಿಶಿಷ್ಟನಾದ ಹರಿಯು 'ನಾನು ದಶರಥಪುತ್ರನಾದ ರಾಮನಾಗಿ ಹುಟ್ಟಿ ಈ ಶಾಪವನ್ನು ವಹಿಸುವನು' ಎಂದು ಹೇಳಿದನು ॥೩೬॥

ಈರೀತಿಯಾಗಿ ವಿಷ್ಣುವಿಗೆ ಶಾಪಕೊಟ್ಟು, ಪತಿವ್ರತೆಯಾದ ಬೃಂದೆಯು ದೇಹವನ್ನು ಅಗ್ನಿಯಲ್ಲಿ ಸಮರ್ಪಿಸಿಬಿಟ್ಟಳು ವಿಷ್ಣುವಾದರೋ, ಅವಳಲ್ಲಿ ಅತ್ಯಂತ ಮೋಹಗೊಂಡವನಾಗಿ ಅವಳ ವಿರಹವನ್ನು ಸಹಿಸಲಾರದೆ ಬೃಂದೆಯ ಸ್ಮಶಾನದಲ್ಲಿ ವಾಸಮಾಡಿಕೊಂಡಿದ್ದನು ॥೩೭॥

ಆಗ ಆ ವಿಷ್ಣುವಿನ ದೈನ್ಯವನ್ನು ಹೋಗಲಾಡಿಸುವುದಕ್ಕೋಸ್ಕರ, ಚತುರ್ಮುಖಬ್ರಹ್ಮನು ಅವನ ಎದುರಾಗಿ ಬಂದು ನಿಂತನು ಅಲ್ಲಿ ಬೃಂದೆಯ ವಿರಹದಿಂದುಂಟಾದ ದುಃಖವು ಶಾಂತವಾಗುವುದಕ್ಕೋಸ್ಕರ, ಶ್ರೀಹರಿಗೆ ಸಂತೋಷವುಂಟಾಗುವಂತೆ ತುಲಸಿ ಮಾಲತಿ ಧಾತ್ರಿ (ನೆಲ್ಲಿ) ಈ ಮೂರು ಬೀಜಗಳನ್ನು ಅವನಿಗೆ ಕೊಟ್ಟನು ॥೩೮॥

ಆಗ ಬ್ರಹ್ಮನಿಂದ ಕೊಡಲ್ಪಟ್ಟ ತುಲಸೀಬೀಜವನ್ನು ಬಿತ್ತಿದಬಳಿಕ, ಅಲ್ಲಿ ತುಲಸೀಗಿಡಹುಟ್ಟಿ ಬೃಂದಾವನನೆನ್ನಿಸಿಕೊಂಡಿತು ಅದುಕಾರಣ, ಆಗಿನಿಂದ ಬೃಂದಾವನ ಪ್ರದೇಶವು ಶ್ರೀಹರಿಗೆ ಸಂತೋಷಪ್ರದವಾಗಿರುವುದು ಆಕಾಲದಿಂದಲುಗೊಂಡು ಶ್ರೀ ಕೇಶವನು ಬೃಂದಾವನ ವಿಹಾರಿಯಾಗಿರುವನು ॥೩೯-೪೦॥

ಅದುಕಾರಣ, ಯಾವನ ಮನೆಯಲ್ಲಿ ಬೃಂದಾವನವಿರುವುದೋ, ಅವನ ಮನೆಯಲ್ಲಿಯೇ ಶ್ರೀಹರಿಯು ನೆಲೆಸಿಬಿಡುವನು ಯಾವ ಗೃಹದಲ್ಲಿ ಶ್ರೀಮಾಧವಸ್ವಾಮಿಯಿರುವನೋ, ಆ ಗೃಹವು ವೈಕುಂಠಕ್ಕೆ ಸಮಾನವಾದುದು ॥೪೧॥

ಧಾತ್ರೀಫಲೈಸ್ತು ಯಃ ಪೂಜಾಂ ಕಾರ್ತಿಕ್ಯಾಂ ಕುರುತೇ ನರಃ ।
ಬ್ರಹ್ಮಾಂಡದಾನಜಂ ಪುಣ್ಯಂ ಸೋಽನಾಯಾಸೇನ ವಿನ್ದತಿ ॥೪೨॥
ಮಾಲತೀನಾಂ ಚ ಪುಷ್ಪಾಣಾಂ ಪೂಜಯಾ ತುಷ್ಯತೇ ಹರಿಃ ।
ಫಲಮೇಕೈಕಪುಷ್ಪಸ್ಯ ನಾಲಂ ವಕ್ತುಂ ವಿಧಿಃ ಸ್ವಯಮ್ ॥೪೩॥
ಇತ್ಥಂ ಬೃನ್ದಾಶಾಪವಶಾತ್ ಬೃನ್ದಾನುಗ್ರಹಕಾಮ್ಯಯಾ ।
ರಾಘವೋಽಜ್ಞ ಇವಾಭಾತಿ ವಸ್ತುತಸ್ತು ಚಿದಾತ್ಮಕಃ ॥೪೪॥

ಇತಿ ಶ್ರೀಮದಾರ್ಷ್ಯಕಾಣ್ಡೇ ಬೃನ್ದಾಶಾಪಾದಿಕಥನಂ ನಾಮ
ಷೋಡಶಃ ಸರ್ಗಃ



ಯಾವ ಮನುಜನು ಕಾರ್ತಿಕಮಾಸದಲ್ಲಿ ಧಾತ್ರೀಫಲ(ನೆಲ್ಲೀಕಾಯಿ)ಗಳಿಂದ ಶ್ರೀಹರಿಗ ಪೂಜೆಯನ್ನು ಮಾಡುವನೋ, ಅವನು ಅನಾಯಾಸವಾಗಿ ಬ್ರಹ್ಮಾಂಡದಾನಜನ್ಯವಾದ ಪುಣ್ಯ ವನ್ನು ಪಡೆಯುವನು ॥೪೨॥

ಮಾಲತೀಪುಷ್ಪದ ಪೂಜೆಯಿಂದಲೂ ಶ್ರೀಹರಿಯು ವಿಶೇಷವಾಗಿ ಸಂತುಷ್ಟನಾಗುವನು, ಒಂದೊಂದು ಪುಷ್ಪದ ಪೂಜೆಯ ಫಲವನ್ನು ಹೇಳುವುದಕ್ಕೂ ಬ್ರಹ್ಮನಿಗೂ ಶಕ್ತಿ ಸಾಲದು॥೪೩॥

ಎಲೈ ಋಷಿಗಳಿರಾ! ಹೀಗೆ ಬೃಂದೆಯ ಶಾಪಕ್ಕೆ ವಶವರ್ತಿನಾಗಿ ಬೃಂದೆಯಲ್ಲಿ ಅನುಗ್ರಹವ ನ್ನಿಟ್ಟು ಶ್ರೀರಾಮನು ಅಜ್ಞಾನಿಯಂತೆ ತೋರುತಿದ್ದನು ವಾಸ್ತವಗತಿಯನ್ನು ವಿಚಾರಮಾಡಿ ನೋಡಿದರೋ, ಅವನು ಕೇವಲ ಚಿತ್ಸ್ವರೂಪನಾಗಿಯೇ ಕಾಣುವನು ॥೪೪॥

ಇದು ಆರ್ಷ್ಯಕಾಂಡದಲ್ಲಿ ಬೃಂದಾಶಾಪಾದಿಕಥನವೆಂಬ
ಹದಿನಾರನೆಯ ಸರ್ಗವು.

ಅಥ ಶ್ರೀಮದರಣ್ಯಕಾಣ್ಡೇ ಸಪ್ತದಶಃ ಸರ್ಗಃ.

ಶ್ರೀ ಶಿವಉವಾಚ —

ತತೋ ವಿಚಿನ್ವ್ವ ವೈದೇಹೀಂ ಪ್ರಾಪ್ಯ ಗೋದಾವರೀಂ ಶನೈಃ ।
ಸ ತಾಮುಪಸ್ಥಿತೋ ರಾಮಃ ಕ್ವ ಸೀತೇತ್ಯೇವಮಬ್ರವೀತ್ ॥೧॥
ರಾವಣಸ್ಯ ಚ ತದ್ರೂಪಂ ಕರ್ಮಾಣಿ ಚ ದುರಾತ್ಮನಃ ।
ಧ್ಯಾತ್ವಾ ಭಯಾತ್ ತು ವೈದೇಹೀಂ ಸಾ ನದೀ ನ ಶಶಂಸ ತಾಮ್ ॥೨॥
ನಿರಾಶಸ್ತು ತಯಾ ನದ್ಯಾ ಸೀತಾಯಾದರ್ಶನೇ ಕೃತಃ ।
ಉವಾಚ ರಾಮಃ ಸೌಮಿತ್ರಿಂ ಸೀತಾದರ್ಶನಕರ್ಶಿತಃ ॥೩॥
ರಾವಣಾಸುರದುಶ್ಚೇಷ್ಟಾಂ ನ ಮೇ ಗಙ್ಗಾ ಪ್ರಶಂಸತಿ ।
ಗರ್ವಾನ್ವಾ ಗೌತಮೀ ನೂನಂ ಪಾವನೀತ್ಯಭಿಮಾನಿನೀ ॥೪॥
ಇತ್ಯುಕ್ತ್ವಾ ಗೌತಮೀಂ ತತ್ರ ಶಾಪಂ ದಾತುಂ ಸಮಾರಭತ್ ॥೫॥
ಗೌತಮಿ ತ್ವಯಿ ಯೇ ಮಗ್ನಾಃ ಪಾವನಾರ್ಥಂ ಜನಾಭುವಿ ।
ಸ್ನಾನಮಾತ್ರೇಣ ತೇ ಸರ್ವೇ ಚಣ್ಡಾಲಾಇವ ಜಾತಿಷು ।
ಭವಿಷ್ಯನ್ತಿ ಜನಾಃ ಸದ್ಯಃ ಕ್ಷೀಣಸ್ವಸ್ವೋಜಸಃ ಪರಮ್ ॥೬॥

ಅರಣ್ಯಕಾಂಡದಲ್ಲಿ ಹದಿನೇಳನೆಯ ಸರ್ಗವು.

ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಹೀಗ ರಾಮನು ಮಾರೀಚನನ್ನು ಕೊಂದು ಹಿಂದಿರುಗಿ ಬಂದ ಬಳಿಕ, ಅಲ್ಲಲ್ಲಿ ಸೀತಾದೇವಿಯನ್ನು ಹುಡುಕುತ, ಮೆಲ್ಲಗೆ ಗೋದಾವರೀನದಿಯ ಹತ್ತಿರಕ್ಕೆ ಬಂದು, ಅದನ್ನು ಸೇವಿಸಿ, ಸೀತೆಯೆಲ್ಲಿಗೆ ಹೋದಳೆಂದು ಪ್ರಶ್ನೆ ಮಾಡಿದನು ॥೧॥

ಆಗ ಆ ಗೋದಾವರಿಯು ದುರಾತ್ಮನಾದ ರಾವಣನ ಆ ರೂಪವನ್ನೂ ಕ್ರೂರಕರ್ಮಗಳನ್ನೂ ನೆನೆಸಿಕೊಂಡು ಭಯಪಟ್ಟು, ಸೀತೆಯು ರಾವಣನಿಂದ ಅಪಹರಿಸಲ್ಪಟ್ಟಿರುವಳೆಂಬ ವಿಷಯವನ್ನು ಶ್ರೀರಾಮನಿಗೆ ಹೇಳಲಿಲ್ಲ ॥೨॥

ಹೀಗೆ ಆ ಗೋದಾವರಿಯಿಂದ ಸೀತಾದರ್ಶನ ವಿಷಯದಲ್ಲಿ ನಿರಾಶನಾಗಿ ಮಾಡಲ್ಪಟ್ಟ ಶ್ರೀರಾಮನು, ಸೀತೆಯ ದರ್ಶನವಿಲ್ಲದೆ ಬಹಳವಾಗಿ ಕಳವಳಪಡುತ, ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು ॥೩॥

ಅಯ್ಯಾ! ಲಕ್ಷ್ಮಣ! ಈ ಗೋದಾವರೀನದಿಯು, ತಾನು ಮಹಾಪವಿತ್ರಳೆಂಬ ಅಭಿಮಾನದಿಂದ ಗರ್ವಿತಳಾಗಿ, ರಾವಣಾಸುರನು ಮಾಡಿರುವ ದುರ್ವ್ಯಾಪಾರವನ್ನು ನನಗೆ ಹೇಳದಿರುವಳು ॥

ಹೀಗೆಂದು ಲಕ್ಷ್ಮಣನೊಡನೆ ಹೇಳಿ, ಆ ಗೋದಾವರಿಯನ್ನು ಕುರಿತು 'ಎಲೌ ಗೋದಾ

ಏತಸ್ಮಿನ್ನೇವ ಸಮಯೇ ಬ್ರಹ್ಮಾದ್ಯಾದೇವತಾಸ್ತಥಾ ।
ಸನಕಾದ್ಯಾಲೋಕಪಾಲಾಃ ರಾಮದರ್ಶನಲಾಲಸಾಃ ॥೬॥
ಮುನಯೋ ಬ್ರಹ್ಮಲೋಕಸ್ಥಾಃ ಋಷಯಶ್ಚಾನ್ಯದೇಶಿನಃ ।
ಪಿತರೋ ದೇವತಾಃ ಸರ್ವಾಃ ಹವ್ಯಕವ್ಯಭುಜಃ ಪರೇ ।
ಆಗತಾಸ್ತತ್ರ ತೇ ಸರ್ವೇ ಲೋಕೇ ಸ್ವಾರ್ಥಾಭಿಕಾಂಕ್ಷಿಣಃ ॥೪॥
ತತಸ್ತು ದದೃಶೂರಾಮಂ ಸರ್ವಾನನ್ದಕರಂ ಪರಮ್ ।
ನೀಲೇನ್ದೀವರಸಶ್ಯಾಮಂ ನೀಲಜೀಮೂತಸನ್ನಿಭಮ್ ॥೯॥
ಆಜಾನುಬಾಹುಂ ಶ್ರೀಮನ್ತಂ ಅರವಿನ್ದಾಯತೇಕ್ಷಣಮ್ ।
ಸ್ವಭಾವಸುನ್ದರಂ ವೀರಂ ಭೂಷಾಭೂಷಿತವಿಗ್ರಹಮ್ ॥೧೦॥
ಬಾಣಮೇಕೇನ ಹಸ್ತೇನ ಭ್ರಾಮಯನ್ತಂ ಧನುರ್ಧರಮ್ ।
ರಾವಣಾಸುರಸಂಹಾರನಿಮಿತ್ತಜ್ಞಂ ಮಹಾಭುಜಮ್ ॥೧೧॥
ತಂ ದೃಷ್ಟ್ವಾ ತುಷ್ಟುವುಃ ಸರ್ವೇ ದೇವಾಬ್ರಹ್ಮಪುರೋಗಮಾಃ ॥೧೨॥
ಪಾದನ್ಯಾಸೇನ ತೇ ರಾಮ ಪಾವಿತಂ ದಣ್ಡಕಾವನಮ್ ।
ಪಾವಿತಾಃ ಪ್ರಾಣಿನಃ ಸರ್ವೇ ದಣ್ಡಕಾರಣ್ಯವಾಸಿನಃ ।
ಪೂಜಾದರ್ಶನಸಲ್ಲಾಪೈಃ ಅಹೋ ಭಾಗ್ಯಂ ವನೌಕಸಾಮ್ ॥೧೩॥

ವರಿ! ದೇಹಪರಿಶುದ್ಧವಾಗಬೇಕಂದು ಯಾವ ಜನರು ನಿನ್ನಲ್ಲಿ ಸ್ನಾನಮಾಡುವರೋ, ಆ ಕ್ಷಣವೆಲ್ಲ ಅವರೆಲ್ಲರೂ ಸ್ನಾನಮಾತ್ರದಿಂದಲೇ ಚಂಡಾಲರಂತೆ ಜಾತಿಬಹಿಷ್ಕೃತರಾಗಿ ತಂತಮ್ಮ ತೇಜಸ್ಸನ್ನೆಲ್ಲ ಕಳೆದು ಕೊಳ್ಳುವರು' ಎಂದು ಶಾಪವನ್ನು ಕೊಡಲುದ್ಯುಕ್ತನಾದನು ॥೫-೬॥

ಹೀಗಿರುವ ಸಮಯದಲ್ಲಿಯೇ, ಬ್ರಹ್ಮಾದಿ ಸಮಸ್ತದೇವತೆಗಳೂ, ಸನಕಾದಿ ಮಹರ್ಷಿಗಳೂ, ಅಷ್ಟದಿಕ್ಪಾಲಕರುಗಳೂ, ಬ್ರಹ್ಮಲೋಕದಲ್ಲಿರುವ ಸಮಸ್ತಮುನಿಗಳೂ, ಇತರ ದೇಶದಲ್ಲಿರುವ ಸಮಸ್ತಮಹರ್ಷಿಗಳೂ, ಸಮಸ್ತರಾದ ಪಿತೃದೇವತೆಗಳೂ, ಇನ್ನೂ ಇತರರಾದ ಹವ್ಯಕವ್ಯ ಭಾಗಿಗಳಾದ ಸಮಸ್ತರೂ ಕೂಡ, ಶ್ರೀರಾಮನ ದರ್ಶನವನ್ನು ಮಾಡಿ ತಂತಮ್ಮ ಇಷ್ಟಾರ್ಥಗಳನ್ನು ಪಡೆಯಬೇಕೆಂದು ಅಲ್ಲಿಗೆ ಬಂದರು ॥೭-೮॥

ಅಲ್ಲಿಗೆ ಬಂದ ಬಳಿಕ, ಸರ್ವರಿಗೂ ಆನಂದಪ್ರದನಾಗಿಯೂ, ನೀಲೇಂದೀವರಕ್ಕೂ ನೀಲಮೇಘಕ್ಕೂ ಸಮಾನವಾದ ದೇಹಕಾಂತಿಯುಳ್ಳವನಾಗಿಯೂ, ಆಜಾನುಬಾಹುವಾಗಿಯೂ, ಅರವಿಂದಲೋಚನನಾಗಿಯೂ, ಸ್ವಭಾವಸುಂದರನಾಗಿಯೂ, ಮಹಾವೀರನಾಗಿಯೂ, ಆಭರಣಾಲಂಕೃತಶರೀರನಾಗಿಯೂ, ಒಂದು ಕೈಯಲ್ಲಿ ಬಾಣವನ್ನು ಸುತ್ತಿಸುತ ಧನುಸ್ಸನ್ನು ಧರಿಸಿರುವನಾಗಿಯೂ, ರಾವಣಾಸುರನ ಸಂಹಾರಕ್ಕೆ ತಕ್ಕ ಕಾರಣವನ್ನು ಬಲ್ಲವನಾಗಿಯೂ ಇರುವ, ಮಹಾಭುಜನಾದ ಶ್ರೀರಾಮನನ್ನು ಕಂಡರು. ಅವನನ್ನು ಕಂಡನಂತರ, ಬ್ರಹ್ಮಮೊದಲಾದ ಸಮಸ್ತದೇವತೆಗಳೂ ಆ ಶ್ರೀರಾಮನನ್ನು ಹೀಗ ಸ್ತೋತ್ರಮಾಡಿದರು ॥೯-೧೩॥

ಸ್ವಾಮಿ! ರಾಮಚಂದ್ರ! ನಿನ್ನ ಪಾದನ್ಯಾಸದಿಂದ ಸಮಸ್ತವಾದ ದಂಡಕಾರಣ್ಯವೂ

ಆತಿಥ್ಯಮಪಿ ಸರ್ವೇಷಾಂ ನಿತ್ಯಂ ರಾಘವದರ್ಶನಮ್ ।
ವ್ಯಾಖ್ಯಾತಾ ಸರ್ವಧರ್ಮಾಂಶ್ಚ ಮುನೀನಾಂ ಯತ್ರ ರಾಘವಃ ॥೧೪॥
ಶರಣಂ ಶ್ರೀಮುಖಾದ್ಯತ್ರ ತದನು ಜ್ಞಾನದರ್ಶನಮ್ ।
ತ್ರಿಸನ್ಧ್ಯಂ ವನ್ದನಂ ಯೇಷಾಂ ತವ ಪಾದಾರವಿನ್ದಯೋಃ ॥೧೫॥
ತ್ವತ್ಸನ್ನಿಧಿಮನುಪ್ರಾಪ್ಯ ವನಂ ಸರ್ವಂ ಸಮೃದ್ಧಿಮತ್ ।
ಫಲಪುಷ್ಪಧರಾನಮ್ರಃ ಪುಟಕೇಪ್ರಟಕೇ ಮಧು ॥೧೬॥
ಕನ್ದಮೂಲಾನಿ ಜಿತ್ರಾಣಿ ಪೃಥೂನಿ ರಸವನ್ತಿ ಚ ।
ವಿನಾ ಸಾಧನಪರ್ಯಾಪ್ತಂ ಕರಗಾಹ್ಯಾಣಿ ಸರ್ವಶಃ ॥೧೭॥
ಯತ್ರ ತ್ವಯಾ ಮುನಿಗಣಾಃ ವೇದಾನ್ತಾರ್ಥವಿಚಾರಿಣಃ ।
ಜೈಮಿನೀಯಾದಿಶಾಸ್ತ್ರಾಣಿ ಜೀನ್ತಯನ್ತಿ ತ್ವಯೈವ ತೇ ।
ಧರ್ಮಶಾಸ್ತ್ರ ಪುರಾಣಾನಿ ಸಾಗಮಾನ್ಯಪಿ ರಾಘವ ॥೧೮॥

ಪರಿಶುದ್ಧಮಾಡಲ್ಪಟ್ಟಿತು ನಿನ್ನ ಪೂಜೆಯಿಂದಲೂ ದರ್ಶನದಿಂದಲೂ ಸಲ್ಲಾಪದಿಂದಲೂ ದಂಡಕಾರಣ್ಯವಾಸಿಗಳಾದ ಸಮಸ್ತಪ್ರಾಣಿಗಳೂ ಪರಿಶುದ್ಧಮಾಡಲ್ಪಟ್ಟುವು ಅಹಹ! ಈ ಅರಣ್ಯವಾಸಿಗಳ ಭಾಗ್ಯವನ್ನು ಎಷ್ಟುವರ್ಣಿಸೋಣ' ॥೧೩॥

ಶ್ರೀರಾಮನು ಎಲ್ಲಿರುವನೋ, ಅಲ್ಲಿ ಸಮಸ್ತರಿಗೂ ಅತಿಥಿಸತ್ಕಾರ ನಡೆಯುವುದು, ಸರ್ವದಾ ಶ್ರೀರಾಮನ ದರ್ಶನವು ಲಭಿಸುವುದು, ಶ್ರೀರಾಮನೇ ಸಾಕ್ಷಾತ್ತಾಗಿ ಸಮಸ್ತ ಮುನಿಗಳಿಗೂ ಸಕಲವಾದ ಧರ್ಮರಹಸ್ಯಗಳನ್ನೂ ವಿಶದವಾಗಿ ಉಪದೇಶಿಸತಕ್ಕವನಾಗಿರುವನು ॥೧೪॥

ಈ ಅರಣ್ಯದಲ್ಲಿ ಯಾರು ಸಂಧ್ಯಾತ್ರಯದಲ್ಲಿಯೂ ನಿನ್ನ ಪಾದಕಮಲಗಳಿಗೆ ಭಕ್ತಿಯಿಂದ ನಮಸ್ಕಾರಮಾಡುತಿರುವರೋ, ಅಂತಹ ಮುನಿಗಳಿಗೆ ಪ್ರಥಮತಃ ನಿನ್ನ ದಿವ್ಯವಾದ ಮುಖಕಮಲದಿಂದ ಅಭಯಪ್ರದಾನರೂಪವಾದ ರಕ್ಷಣೆ ದೊರಕುವುದು, ಬಳಿಕ ದಿವ್ಯಜ್ಞಾನವು ಲಭಿಸುವುದು ॥೧೫॥

ನಿನ್ನ ಸಾನ್ನಿಧ್ಯವುಂಟಾದುದರಿಂದ, ಈ ಅರಣ್ಯವೆಲ್ಲವೂ ಸಮೃದ್ಧಿಯುಕ್ತವಾಯ್ತು, ಇಲ್ಲಿರುವ ವೃಕ್ಷಗಳೆಲ್ಲವೂ, ಫಲಪುಷ್ಪಗಳನ್ನು ಧರಿಸಿ ಅವುಗಳ ಭಾರದಿಂದ ನಮ್ರಗಳಾಗಿಯೂ, ಪ್ರತಿಯೊಂದು ಪತ್ರದಲ್ಲಿಯೂ ಮಕರಂದವನ್ನು ವಹಿಸಿದುವುಗಳಾಗಿಯೂ ಇರುವುವು, ಕಂದ ಮೂಲಗಳು, ಅತಿವಿಚಿತ್ರಗಳಾಗಿಯೂ ಸ್ಥೂಲತಮಗಳಾಗಿಯೂ ರಸಭರಿತಗಳಾಗಿಯೂ ಇದುವು, ಯಾವ ಸಾಧನವೂ ಇಲ್ಲದೆಯೇ, ಎಲ್ಲೆಲ್ಲಿ ಹೋದರೂ ಫಲಗಳು ಕೈಗೆ ಸಿಕ್ಕುತಿರುವುವು ॥೧೬-೧೭॥

ಸ್ವಾಮಿ! ರಾಘವ! ಈ ಅರಣ್ಯದಲ್ಲಿ, ಸಮಸ್ತಮುನಿಗಳೂ ನಿನ್ನೊಡನೆ ವೇದಾಂತರಹಸ್ಯಗಳನ್ನು ವಿಚಾರಮಾಡುತಿರುವರು; ಮತ್ತು, ಮೀಮಾಂಸೆ ಮೊದಲಾದ ಶಾಸ್ತ್ರಗಳನ್ನೂ, ಆಗಮ ಧರ್ಮಶಾಸ್ತ್ರ ಪುರಾಣಗಳನ್ನೂ, ಅವರು ನಿನ್ನೊಡನೆಯೇ ಸರ್ವದಾ ವಿಚಾರಮಾಡುತಿರುವರು ॥

ನೈತದ್ಭಾಗ್ಯಂ ಮಮ ಗೃಹೇ ವೈಕುಣ್ಠೇ ಕಚ್ಯರಾಲಯೇ ।
ಯತ್ರ ತ್ವಂ ವರ್ತಸೇ ವೀರ ಪೂರ್ಣಂ ಬ್ರಹ್ಮ ಸತಾತನವ್ ॥೧೯॥
ದೇವತಾಪೇಕ್ಷಯಾನ್ಯತ್ರ ದಂಡಕಾರಣ್ಯಸಂಭವಮ್ ।
ವರಂ ತೃಣಲತಾದ್ಯೇವ ಸ್ಪೃಷ್ಟಂ ತ್ವತ್ಪಾದರೇಣುಭಿಃ ॥೨೦॥
ಶ್ರೀನಿಕೇತಃ ಶ್ರಿಯಾ ಯುಕ್ತಃ ಸೀತಾಲಙ್ಕೃತವಿಗ್ರಹಃ ।
ದೃಶ್ಯೋ ಭವಸ್ಯನಾದಾಸಾತ್ ಅಸ್ಮಾಕಂ ಪೂರ್ವಕೈಃ ಕೃತೈಃ ॥೨೧॥
ಇತಿ ಸ್ತುತ್ವಾ ರಮಾನಾಥಂ ಸ್ತವೈಸ್ತತ್ತ್ವಾರ್ಥದರ್ಶನೈಃ ।
ಪ್ರಸನ್ನಂ ರಾಘವಂ ಬ್ರಹ್ಮಾ ಪ್ರಾರ್ಥಯಾಮಾಸ ದೈವತೈಃ ॥೨೨॥
ಗಙ್ಗಾಶಾಪಂ ನಿವರ್ತಸ್ವ ಮುನಯಃ ಸನ್ತು ನಿರ್ಭಯಾಃ ।
ಲೋಕಾನಾಂ ಪಾವನಾರ್ಥಾಯ ನಿರ್ಮಿತಾ ಗೌತಮೀ ತ್ವಯಾ ॥೨೩॥
ಸಿದ್ಧಸ್ಥಾನಾನಿ ತತ್ತೀರೇ ದೇವತಾಯತನಾನಿ ಚ ।
ಶಾಪದಗ್ಧಾನಿ ತೇಽತ್ರ ಸ್ಯುಃ ಕಥಂ ಲೋಕಸ್ಯ ಪಾವನಮ್ ॥೨೪॥

ಮಹಾವೀರನೆ! ಸನಾತನವೂ ಆನಂದಘನವೂ ಆದ ಸಾಕ್ಷಾತ್ ಪರಬ್ರಹ್ಮವಾಗಿರುವ ನೀನು, ಈ ಅರಣ್ಯದಲ್ಲಿ ಸರ್ವದಾ ವಾಸಮಾಡುತಿರುವೆಯಲ್ಲವೆ! ಇಂತಹ ಭಾಗ್ಯವು, ನನ್ನ (ಬ್ರಹ್ಮನ) ಮನೆಯಲ್ಲಿಯೂ ವೈಕುಂಠದಲ್ಲಿಯೂ ಕೈಲಾಸದಲ್ಲಿಯೂ ಇಲ್ಲದೆಹೋಯ್ತು ॥೧೯॥

ಬೇರೆಕಡೆಯಲ್ಲಿ ದೇವತೆಗಳಾಗಿರುವುದಕ್ಕಿಂತಲೂ, ದಂಡಕಾರಣ್ಯದಲ್ಲಿ ತೃಣಲತಾದಿ ಜನ್ಮವನ್ನು ಪಡೆಯುವುದೇ ಮೇಲು ಇಲ್ಲಿರುವ ತೃಣಲತಾದಿಗಳಿಗೆ ನಿನ್ನ ಪಾದಧೂಳಿಸ್ಪರ್ಶಲಾಭವಾಗುವುದು ॥೨೦॥

ಲಕ್ಷ್ಮೀನಿವಾಸನಾಗಿಯೂ ದಿವ್ಯಕಾಂತಿಯುಕ್ತನಾಗಿಯೂ ಸೀತಾಲಂಕೃತದೇಹನಾಗಿಯೂ ಇರುವ ನೀನು, ನಮ್ಮಗಳ ಪೂರ್ವಜನ್ಮಸುಕೃತ ವಿಶೇಷದಿಂದ ನಮಗೆ ಹೀಗೆ ಪ್ರತ್ಯಕ್ಷನಾಗಿರುವೆ ॥೨೧॥

ಈರೀತಿಯಾಗಿ ತತ್ವದರ್ಶಕಗಳಾದ ಸ್ತೋತ್ರಗಳಿಂದ ಆ ರಾಘವರೂಪನಾದ ಲಕ್ಷ್ಮೀಪತಿಯನ್ನು ಸ್ತುತಿಸಿ, ಬಳಿಕ ಪ್ರಸನ್ನನಾದ ಆ ರಾಮನನ್ನು ಬ್ರಹ್ಮನು ಹೀಗೆ ಪ್ರಾರ್ಥಿಸಿಕೊಂಡನು ॥

ಸ್ವಾಮಿ! ರಾಮಭದ್ರ! ಈ ವೃದ್ಧಗಂಗೆಯ ಶಾಪವನ್ನು ನಿವಾರಣೆಮಾಡುವನಾಗು ಋಷಿಗಳೆಲ್ಲರೂ ಈಗ ಈ ಭಯವನ್ನು ಕಳೆದುಕೊಳ್ಳಲಿ ಲೋಕಗಳನ್ನೆಲ್ಲ ಪಾವನಮಾಡುವುದಕ್ಕಾಗಿಯೇ ನೀನು ಈ ಗೌತಮೀನದಿಯನ್ನು ನಿರ್ಮಿಸಿರುವೆಯಲ್ಲವೆ! ॥೨೩॥

ಇದೂ ಅಲ್ಲದೆ, ಈ ಗೌತಮೀನದೀತೀರದಲ್ಲಿ ಅನೇಕವಾದ ಸಿದ್ಧದೇಶಗಳೂ ದೇವಾಲಯಗಳೂ ಇರುವುವು, ಅವೆಲ್ಲವೂ ಈಗ ನಿನ್ನ ಶಾಪದಿಂದ ದಗ್ಧವಾಗಿಬಿಡುವುವು ಹೀಗಾದಮೇಲೆ, ಲೋಕವು ಶುದ್ಧವಾಗಿ ಸದ್ಗತಿಪಡೆಯುವುದು ಹೇಗೆ? ॥೨೪॥

ಇತಿ ಬ್ರಹ್ಮವಚಃ ಶ್ರುತ್ವಾ ರಾಘವಃ ಕರುಣಾಕರಃ ।
ನಿಜಗಾದ ಮಹಾತೇಜಾಃ ಬ್ರಹ್ಮಾಣಂ ಚತುರಾನನಮ್ ॥೨೫॥
ಮದ್ಭಕ್ತಾ ಶಬರೀ ಯತ್ರ ಹ್ರದಸ್ತತ್ರ ಪ್ರವರ್ತತೇ ।
ತಸ್ಯಾಸ್ತ್ರಿಪವಣಸ್ನಾನಪಯಸಾ ಪರಿಪೂರಿತಃ ॥೨೬॥
ಸಂಪರ್ಕಾತ್ ತಸ್ಯ ಪಯಸಃ ಶಾಪಮೋಕ್ಷೋ ಭವಿಷ್ಯತಿ ॥೨೭॥
ಗೌತಮೀ ಪಾವನೀ ತೇನ ಶಾಣೋಲ್ಲೀಢಮಣೀರ್ಯಥಾ ।
ಪ್ರಕಾಶಿತಾ ಭವಿತ್ರೀ ಸಾ ಗೌತಮೀ ಲೋಕಪಾವನೀ ॥೨೮॥
ನ ನಿನ್ದಾಸ್ಥಾನಮರ್ಹನ್ತಿ ರಾಮಭಕ್ತಾಃ ಕಥಂಚನ ।
ಜಿತಾರಿವರ್ಗಾಮದ್ಭಕ್ತಾಃ ತ್ರಿಲೋಕೀಂ ಪಾವಯನ್ತಿ ತೇ ।
ಶಾನ್ತಾ ಜಿತೇಂದ್ರಿಯಾನಿತ್ಯಂ ಯಥಾಲಾಭೇನ ತೋಷಿತಾಃ ॥೨೯॥
ಮತ್ಕಥಾಶ್ರವಣ ಧ್ಯಾನ ಪೂಜನ ಸ್ಮರಣಂ ವಿನಾ ।
ನಾನ್ಯತ್ ಕುರ್ವನ್ತಿ ಮದ್ಭೀತುಸಾಮಗ್ರೀಕರಣಂ ವಿನಾ ॥೩೦॥

ಹೀಗೆಂದು ಹೇಳಿದ ಬ್ರಹ್ಮನ ಮಾತನ್ನು ಕೇಳಿ, ಕೃಪಾನಿಧಿಯಾದ ಮಹಾತೇಜಸ್ವಿಯಾದ ರಾಘವನು, ಚತುರ್ಮುಖಬ್ರಹ್ಮನನ್ನು ಕುರಿತು ಹೀಗೆ ಹೇಳಿದನು ॥೨೫॥

ಅಯ್ಯಾ! ಚತುರ್ಮುಖನ! ನೀನು ಇಷ್ಟುಹೇಳಿದುದರಿಂದ ಇವಳಿಗೆ ಶಾಪಮೋಕ್ಷವನ್ನು ಮಾಡಬೇಕಾದುದು ಅವಶ್ಯಕವೇ ಸರಿ ಈ ಗೌತಮೀತೀರದಲ್ಲಿ ನನ್ನ ಭಕ್ತಳಾದ ಶಬರಿಯೆಲ್ಲಿರುವಳೋ, ಅಲ್ಲಿ ದೊಡ್ಡದೊಂದು ಮಡುವಿರುವುದು, ಅವಳು ತ್ರಿಷವಣಸ್ನಾನಮಾಡುವುದಂದ, ಆದರಲ್ಲಿ ತುಂಬಿರುವ ನೀರೆಲ್ಲವೂ ಪರಿಶುದ್ಧವಾಗಿರುವುದು ಹೀಗ ನನ್ನ ಭಕ್ತಳ ಸ್ನಾನೋದಕದ ಸಂಪರ್ಕದಿಂದ, ಈ ಗೌತಮೀನದಿಗೆ ಶಾಪಮೋಕ್ಷವಾಗುವುದು ॥೨೬-೨೭॥

ಇದರಿಂದ ಪಾವನಳಾದ ಗೌತಮೀನದಿಯು, ಸಾಣೆಗ ಹೊಟ್ಟ ರತ್ನದಂತೆ ಇನ್ನೂಹೆಚ್ಚಾಗಿ ಪ್ರಕಾಶವನ್ನು ಪಡೆಯುವಳು, ಅನಂತರ ಇವಳು ಲೋಕಕ್ಕೆಲ್ಲ ಪಾವನಳೂ ಆಗುವಳು ॥೨೮॥

ಲೋಕದಲ್ಲಿ ರಾಮಭಕ್ತರಾದವರು ಯಾವವಿಧವಾಗಿಯೂ ನಿಂದಗೆ ಪಾತ್ರರಾಗುವುದಿಲ್ಲ ಅರಿಷಡ್ವರ್ಗವನ್ನು ಗೆದ್ದು ಶಾಂತರಾಗಿ ಜಿತೇಂದ್ರಿಯರಾಗಿ ನಿತ್ಯವೂ ಯಥಾಲಾಭತುಷ್ಟರಾಗಿರುವ ನನ್ನ ಭಕ್ತರು, ಮೂರುಲೋಕಗಳನ್ನೂ ಪಾವನಮಾಡುವರು ॥೨೯॥

ನನ್ನ ಭಕ್ತರಾದವರು, ನನ್ನ ಕಥಾಶ್ರವಣ ಧ್ಯಾನ ಪೂಜೆ ಸ್ಮರಣ ಮುಂತಾದ-ನನಗೆ ತೃಪ್ತಿಯುಂಟುಮಾಡುವ ಸಾಮಗ್ರಿಗಳನ್ನು ಸಂಪಾದಿಸುವುದು ಹೊರತಾಗಿ ಮತ್ತಾವ ಕೆಲಸವನ್ನೂ ಮಾಡುವುದಿಲ್ಲ ॥೩೦॥

ಮದೇಕಶರಣಾಃ ಶಶ್ವತ್ ಮಚ್ಚಿತ್ತಾತ್ಮಮತ್ಪರಾಯಣಾಃ ।
ಲೋಕಂ ಪುನನ್ತಿ ಮದ್ಭಕ್ತಾಃ ದರ್ಶನಸ್ಪರ್ಶನಾದಿಭಿಃ ॥೩೧॥
ತಸ್ಮಾನ್ಮದ್ಭಕ್ತಶಬರೀಸ್ನಾನೋದಕಸಮಾಗಮಾತ್ ।
ಗೋದಾವರೀಶಾಪಮೋಕ್ಷೋ ಭವಿಷ್ಯತಿ ನ ಸಂಶಯಃ ॥೩೨॥

ದೇವಾಊಚುಃ —

ಕದಾ ತೇನುಗ್ರಹಸ್ತತ್ರ ಭವಿಷ್ಯತಿ ನದೀಜಲೇ ।
ಶಬರೀಸ್ನಾನತೀರ್ಥೇನ ಭವಿಷ್ಯತಿ ಸಮಾಗಮಃ ॥೩೩॥
ಇತಿ ವಿಜ್ಞಾಪಿತೋ ರಾಮಃ ಶಬರೀತೀರ್ಥಮುತ್ತಮಮ್ ।
ಗಙ್ಗಯಾ ಸಙ್ಗತಂ ಚಕ್ರೇ ಶಾರ್ಙ್ಗಕೋಟ್ಯಾ ದಯಾನಿಧಿಃ ॥೩೪॥
ಮಹಾಭಾಗವತಾನಾಂ ಚ ತೀರ್ಥಂ ಯಸ್ಯೋದರೇ ವಿಶೇತ್ ।
ತಚ್ಛರೀರಂ ಜಗದ್ವನ್ದ್ಯಂ ಭವಿಷ್ಯತಿ ನ ಸಂಶಯಃ ॥೩೫॥
ತತೋ ಗೋದಾವರೀ ಹೃಷ್ಟಾ ದೃಷ್ಟ್ವಾ ರಾಮಂ ಪರಾತ್ಪರಮ್ ।
ನತ್ವಾ ತಚ್ಚರಣದ್ವನ್ದ್ವಂ ತುಷ್ಟಾವ ಜಗದೀಶ್ವರಮ್ ॥೩೬॥

ಪುನಃಪುನಃ ನನ್ನನ್ನೊಬ್ಬನನ್ನೇ ಮರೆಹೊಗುತ ನನ್ನಲ್ಲಿ ಚಿತ್ತವನ್ನಿಟ್ಟು ನಾನೇ ಪರಮಗತಿ ಯೆಂದು ನಂಬಿಕೊಂಡಿರುವ ನನ್ನ ಭಕ್ತರು, ತಮ್ಮ ದರ್ಶನ ಸ್ಪರ್ಶನಾದಿಗಳಿಂದ ಲೋಕವನ್ನೆಲ್ಲ ಪರಿಶುದ್ಧಮಾಡುವರು ॥೩೧॥

ಹೀಗಿರುವುದರಿಂದ, ನನ್ನ ಭಕ್ತಳಾದ ಶಬರಿಯ ಸ್ನಾನೋದಕದ ಸಂಪರ್ಕದಿಂದ ಈ ಗೋದಾವರೀನದಿಗೆ ಶಾಪಮೋಕ್ಷವುಂಟಾಗುವುದು, ಇದರಲ್ಲಿ ಸಂಶಯವಿಲ್ಲ ॥೩೨॥

ಇದನ್ನು ಕೇಳಿ, ದೇವತೆಗಳು ಮತ್ತೆ ಪ್ರಾರ್ಥಿಸುವರು –

ಸ್ವಾಮೀ! ಈ ಗೋದಾವರೀನದೀ ಜಲದ ಮೇಲೆ ನಿನಗೆ ಯಾವಾಗ ಅನುಗ್ರಹಬರುವುದು? ನಿನ್ನ ಅನುಗ್ರಹದಿಂದ ಯಾವಾಗ ಈ ಗೋದಾವರೀನದೀಜಲಕ್ಕೆ ಶಬರೀಸ್ನಾನತೀರ್ಥದೊಡನೆ ಸಂಗಮವಾಗುವುದು ? ॥೩೩॥

ಎಲೌ ಪಾರ್ವತಿ! ಹೀಗೆಂದು ದೇವತೆಗಳಿಂದ ವಿಜ್ಞಾಪಿಸಲ್ಪಟ್ಟ ದಯಾನಿಧಿಯಾದ ಶ್ರೀರಾಮಚಂದ್ರನು, ತನ್ನ ಧನುಸ್ಸಿನ ತುದಿಯಿಂದ, ದಿವ್ಯವಾದ ಶಬರೀತೀರ್ಥವು ಗೋದಾವರಿಯೊಡನೆ ಸಂಗಮಹೊಂದುವಂತೆ ಮಾಡಿದನು ॥೩೪॥

ಲೋಕದಲ್ಲಿ ಮಹಾಭಗವದ್ಭಕ್ತರ ತೀರ್ಥವು ಯಾವನ ಉದರದಲ್ಲಿ ಪ್ರವೇಶಿಸುತ್ತದೆಯೋ, ಅವನ ಶರೀರವು ಲೋಕಕ್ಕೆಲ್ಲ ವಂದ್ಯವಾಗುವುದು, ಇದರಲ್ಲಿ ಸಂಶಯವಿಲ್ಲ ॥೩೫॥

ಹೀಗೆ ಶಾಪಮೋಕ್ಷವಾದ ಬಳಿಕ, ಹರ್ಷಯುಕ್ತಳಾದ ಗೋದಾವರಿಯು, ಪರಾತ್ಪರ

ತ್ವನ್ಮೂರ್ತಿದರ್ಶನಂ ರಾಮ ಯೋಗಿನಾಮಪಿ ದುರ್ಲಭಮ್ ।
ಜಿತದ್ವನ್ದ್ವಾರಿವರ್ಗಾಣಾಂ ಗುಪ್ತೈಕಾನ್ತನಿವಾಸಿನಾಮ್ ॥೬೬॥
ತಾದೃಶಂ ತ್ವಾಂ ಪ್ರಪಶ್ಯನ್ತಃ ಕಿಂ ವಾ ಪುಣ್ಯಂ ಪುರಾಽಚರನ್ ।
ದಣ್ಡಕಾರಣ್ಯನಿಲಯಾಃ ತರುಗುಲ್ಮಲತಾದಯಃ ॥೬೪॥
ಯೇಷಾಮಾಶ್ರಮದೇಶೇಷು ನಿತ್ಯಂ ಚರಸಿ ರಾಘವ ।
ಕಿಂ ವರ್ಣ್ಯತೇ ಭಾಗಧೇಯಂ ತವಾತಿಥ್ಯಂ ಪ್ರಕುರ್ವತಾಮ್ ॥೬೯॥
ತ್ವತ್ಪಾದಕಮಲೋದ್ಭೂತಾ ತ್ವದ್ಭಕ್ತಾ ತ್ವತ್ಸುತಾ ವರಾ ।
ತ್ವತ್ಪ್ರೀ ನ ಶಾಪಭೀತಿರ್ಮೇ ಪುತ್ರೀಕಾರುಣ್ಯಯನ್ತ್ರಿತಾತ್ ॥೬೦॥
ಇತಿ ಸ್ತುತಸ್ತಯಾ ರಾಮಃ ತಾಮಾಲಿಙ್ಗ್ಯ ಪ್ರತಿಸಾದರಮ್ ,
ಪ್ರೇಷಯಾಮಾಸ ಗೋದಾಂ ಚ ದೇವಾಂಶ್ಚ ಬ್ರಹ್ಮಾದಿಕಾಂಸ್ತಥಾ ॥೬೧॥

ಇತಿ ಶ್ರೀಮದರಣ್ಯಕಾಣ್ಡೇ ಗೋದಾವರೀಶಾಪವಿಮೋಚನಂ

ನಾಮ ಸಪ್ತದಶಃ ಸರ್ಗಃ

ನಾದ ಶ್ರೀರಾಮನನ್ನು ಕಂಡು, ಅವನ ಪಾದಯುಗ್ಮಕ್ಕೆ ನಮಸ್ಕಾರಮಾಡಿ, ಆ ಜಗತ್ಪತಿಯನ್ನು ಹೀಗೆ ಸ್ತುತಿಸಿದಳು ॥೬೬॥

ಸ್ವಾಮೀ! ರಾಮಚಂದ್ರ! ದ್ವಂದ್ವದುಃಖಗಳನ್ನೂ ಅರಿಷಡ್ವರ್ಗವನ್ನೂ ಜಯಿಸಿ ಗುಪ್ತವಾಗಿ ಏಕಾಂತವೀಲರಾಗಿರುವ ಯೋಗಿಗಳಿಗೂ ಕೂಡ, ನಿನ್ನ ದಿವ್ಯಮಂಗಳ ವಿಗ್ರಹದ ದರ್ಶನವು ದುರ್ಲಭವಾಗಿರುವುದು ॥೬೭॥

ಹೀಗಿರುವಾಗ, ಇಂತಹ ನಿನ್ನನ್ನು ನಿತ್ಯವೂ ಸಾಕ್ಷಾತ್ತಾಗಿ ದರ್ಶನಮಾಡುತಿರುವ ದಂಡಕಾರಣ್ಯವಾಸಿಗಳಾದ ತರು ಗುಲ್ಮ ಲತಾದಿಗಳು ಪೂರ್ವದಲ್ಲಿ ಯಾವ ಪುಣ್ಯವನ್ನು ಮಾಡಿದ್ದುವೋ ನನಗೆ ತಿಳಿಯದು ॥೬೮॥

ಎಲೈ ರಾಘವನೆ! ನೀನು ಯಾರ ಆಶ್ರಮಪ್ರದೇಶದಲ್ಲಿ ನಿತ್ಯವೂ ಸಂಚರಿಸುತಿರುವೆಯೋ, ನಿನಗೆ ಅತಿಥಿಸತ್ಕಾರವನ್ನು ಮಾಡುತಿರುವ ಆ ಮಹರ್ಷಿಗಳ ಭಾಗ್ಯವನ್ನು ಎಷ್ಟೆಂದು ವರ್ಣಿಸುವುದು? ॥೬೯॥

ನಾನು, ನಿನ್ನ ಪಾದಕಮಲದಲ್ಲಿ ಹುಟ್ಟಿದವಳು, ನಿನಗೆ ಪ್ರೇಮಪುತ್ರಿಯಾದವಳು ಹೀಗಿರುವಕಾರಣ, ಪುತ್ರೀಪ್ರೇಮ ನಿಯಂತ್ರಿತ ಹೃದಯನಾದ ನೀನು ನನಗೆ ಶಾಪಕೊಡುತ್ತೀಯಂಬ ಭಯವೇ ನನಗಿರುವುದಿಲ್ಲ ॥೭೦॥

ಎಲೌ ಪಾರ್ವತಿ! ಈರೀತಿಯಾಗಿ ಆ ಗೋದಾವರಿಯಿಂದ ಸ್ತುತಿಸಲ್ಪಟ್ಟ ರಾಮಚಂದ್ರನು, ಅತ್ಯಾದರ ಪೂರ್ವಕವಾಗಿ ಅವಳನ್ನು ಆಲಿಂಗಿಸಿಕೊಂಡು, ಬಳಿಕ ಆ ಗೋದಾವರಿಯನ್ನೂ ಬ್ರಹ್ಮಾದಿ ದೇವತೆಗಳನ್ನೂ ಕಳುಹಿಸಿಬಿಟ್ಟನು ॥೭೧॥

ಇದು ಅರಣ್ಯಕಾಂಡದಲ್ಲಿ ಗೋದಾವರೀ ಶಾಪವಿಮೋಚನೆಯೆಂಬ

ಹದಿನೇಳನೆಯ ಸರ್ಗವು

ಅಥ ಶ್ರೀಮದರಣ್ಯಕಾಣ್ಡೇ ಅಷ್ಟಾದಶಃ ಸರ್ಗಃ.

ಶ್ರೀಶಿವಉವಾಚ

ತತಃ ಪದ್ಮಪಲಾಶಾಕ್ಷಃ ಸೀತಾನ್ವೇಷಣಮಾಚರನ್ ।
ದದರ್ಶಾಗ್ರೇ ಗೃಧ್ರರಾಜಂ ಪತಿತಂ ಪರ್ವತೋಪಮಮ್ ॥೧॥
ತತಃ ಕಣ್ಠಗತಪ್ರಾಣಂ ರಾಘವಸನ್ದರ್ಶನೋತ್ಸುಕಮ್ ।
ಸ್ಮರನ್ತಂ ರಾಮರಾಮೇತಿ ಧ್ಯಾಯನ್ತಂ ಮನಸಾ ಹರಿಮ್ ॥೨॥
ಪ್ರಾಣಸಂಕಯಮಾಪನ್ನಂ ದೃಷ್ಟ್ವಾ ರಾಮಃ ಸವಿಸ್ಮಯಃ ।
ಪಪ್ರಚ್ಛ ರಾಘವಃ ಶ್ರೀಮಾನ್ ಕೇನ ಚ ತ್ವಂ ಜಿಘಾಂಸಿತಃ ॥೩॥
ಗೃಧ್ರಸ್ತು ರಾಘವಂ ದೃಷ್ಟ್ವಾ ಮನ್ದಂಮನ್ದಮುವಾಚ ಹ ॥೪॥
ರಾವಣೇನ ಹೃತಾ ರಾಮ ತವ ಭಾರ್ಯಾ ಬಲೀಯಸಾ ।
ಕೃತ್ವಾ ಪರಿಭವಂ ತಸ್ಯ ಪಶ್ಚಾತ್ ತೇನ ಜಿತೋಸ್ಮ್ಯಹಮ್ ॥೫॥

ಅರಣ್ಯಕಾಂಡದಲ್ಲಿ ಹದಿನೆಂಟನೆಯ ಸರ್ಗವು

ಶ್ರೀಪರಮೇಶ್ವರನು ಪುನಃ ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ ! ಹೀಗೆ ಗೋದಾವರಿಗೆ ಶಾಪನಿವೃತ್ತಿಮಾಡಿದ ಬಳಿಕ, ಕಮಲನೇತ್ರನಾದ ರಾಮನು, ಪುನಃ ಸೀತೆಯನ್ನು ಹುಡುಕುತ ಹೊರಟು, ಮುಂದುಗಡೆ ಪರ್ವತದಂತೆ ಬಿದ್ದಿದ್ದ ಜಟಾಯುವನ್ನು ಕಂಡನು ॥೧॥

ಅನಂತರ, ಕಂಠಗತಪ್ರಾಣನಾಗಿ ಶ್ರೀರಾಮನನ್ನು ನೋಡಬೇಕೆಂದು ಉತ್ಕಂಠಿಸಿಡುತ ರಾಮರಾಮ ಎಂದು ಸ್ಮರಿಸುತ ಮನಸ್ಸಿನಲ್ಲಿ ಶ್ರೀಹರಿಯನ್ನೇ ಧ್ಯಾನಿಸುತಿರುವ ಜಟಾಯುವು ಬದುಕಲಾರದ ಸ್ಥಿತಿಯಲ್ಲಿರುವುದನ್ನು ಕಂಡು, ರಘುಕುಲತಿಲಕನಾದ ಮಹಾನುಭಾವನಾದ ರಾಮನು, ಆಶ್ಚರ್ಯದಿಂದ 'ನಿನ್ನನ್ನು ಯಾರು ಹೀಗೆ ಕೊಲ್ಲಲು ಪ್ರಯತ್ನಪಟ್ಟವರು ?' ಎಂದು ಕೇಳಿದನು ಆಮೇಲೆ ಆ ಗೃಧ್ರರಾಜನು ಶ್ರೀರಾಮನನ್ನು ನೋಡಿ ಮೆಲ್ಲಮೆಲ್ಲಗೆ ಮಾತನಾಡಿದನು ॥೨-೪॥

ವತ್ಸ! ರಾಮ! ಮಹಾಬಲಶಾಲಿಯಾದ ರಾವಣನಿಂದ ನಿನ್ನ ಭಾರ್ಯೆಯು ಅಪಹರಿಸಲ್ಪಟ್ಟಳು; ಆಗ ಅದನ್ನು ಕಂಡು ನಾನು ಅವನಿಗೆ ವಿಶೇಷವಾಗಿ ಪೊಂದರೆಕೊಟ್ಟ ಬಳಿಕ, ಅವನಿಂದ ನಾನು ಈರೀತಿಯಾಗಿ ಜಯಿಸಲ್ಪಟ್ಟೆನು ॥೫॥

ರಾವಣಂ ಜಹಿ ಪಾಪಿಷ್ಠಂ ಲೋಕಾಃ ಸನ್ತು ನಿರಾಮಯಾಃ ।
ದೇವೀ ಮಾಂ ರಾಮ ರಾಜೇಂದ್ರ ಯಾವತ್ ಸಂಭಾಪಣಂ ಮಮ ।
ಭವಿತಾ ತಾವದಾಸ್ತಾಂ ತೇ ಪ್ರಾಣಇತ್ಯಾಹ ಜಾನಕೀ ॥೬॥
ಏವಂ ಬ್ರುವತಿ ಪಕ್ಷೀನ್ದ್ರೇ ಸ್ವಕಾರ್ಯೇ ತ್ಯಕ್ತಜೀವಿತೇ ।
ಉವಾಚ ರಾಮೋ ಧರ್ಮಾತ್ಮಾ ಕಿಮಭೀಪ್ಟಂ ದದಾಮಿ ತೇ ॥೭॥

ಜಟಾಯುರುವಾಚ

ಮಮಾಭೀಪ್ಟಫಲಂ ಪ್ರಾಪ್ತಂ ಪ್ರಯಾಣೇ ದೃಷ್ಟವಾ ಯತಃ ।
ಸೀತಾಲಕ್ಷ್ಮಣಸಂಯುಕ್ತಂ ತ್ವಾಂ ತು ಕೋದಣ್ಡಧಾರಿಣಮ್ ॥೮॥
ವಾಮೇ ಕೋದಣ್ಡದಣ್ಡಾಂ ನಿಜಕರಕಮಲೇ ದಕ್ಷಿಣೇ ಬಾಣಮೇಕಂ
ಪಶ್ಚಾದ್ಭಾಗೇ ಚ ನಿತ್ಯಂ ದಧತಮಭಿಮತಂ ಸಾಸಿತೂಣೀರಭಾರಮ್ ।
ವಾಮೇ ಭಾಗೇ ಲಸದ್ಭ್ಯಾಂ ಸಹ ಮಿಳಿತತನುಂ ಜಾನಕೀಲಕ್ಷ್ಮಣಾಭ್ಯಾಂ
ರಾಮಂ ಶ್ಯಾಮಂ ಭಜೇಹಂ ಪ್ರಣತಜನಮನಃಖೇದವಿಚ್ಛೇದದಕ್ಷಮ್ ॥೯॥
ಧ್ಯಾತ್ವೈವಂ ರಾಘವಂ ಪಶ್ಯನ್ ರಾಮರಾಮೇತಿ ಕೀರ್ತಯನ್ ।
ಶ್ರೀರಾಮಸನ್ನಿಧಾವೇವ ಮುಮೋಚಾಸೂನ್ ಖಗೋತ್ತಮಃ ॥೧೦॥

ಈಗ ನೀನು ಆ ದುರಾತ್ಮನಾದ ರಾವಣನನ್ನು ಕೊಲ್ಲುವನಾಗು, ಲೋಕಗಳು ನಿರಾಪಾಧವಾಗಲಿ ಎಲೈ ರಾಜೇಂದ್ರನ! ಸೀತಾದೇವಿಯು 'ನನ್ನ ವಿಷಯವನ್ನು ಶ್ರೀರಾಮನಿಗೆ ತಿಳಿಯಿಸುವವರೆಗೂ ನಿನಗ ಪ್ರಾಣವಿರಲಿ' ಎಂದು ನನಗ ಅನುಗ್ರಹವಾಡಿರುವಳು ॥೬॥

ಈರೀತಿಯಾಗಿ ತನ್ನ ಕಾರ್ಯಕೋಸ್ಕರ ಪ್ರಾಣವನ್ನು ಕಳೆದುಕೊಂಡ ಗೃಧ್ರರಾಜನು ಹೇಳುತಿರಲಾಗಿ, ಆಗ ಧರ್ಮಾತ್ಮನಾದ ರಾಮನು, ಆ ಪಕ್ಷಿರಾಜನನ್ನು ಕುರಿತು 'ನಿನಗೆ ಯಾವ ಇಷ್ಟಾರ್ಥವನ್ನು ಕೊಡಲಿ?-ಹೇಳು' ಎಂದು ಕೇಳಿದನು ॥೭॥

ಇದಕ್ಕೆ ಜಟಾಯುವು ಉತ್ತರಹೇಳುವನು —

ಸ್ವಾಮೀ! ನನ್ನ ಪ್ರಾಣಪ್ರಯಾಣಸಮಯದಲ್ಲಿ, ಸೀತಾಲಕ್ಷ್ಮಣಯುಕ್ತನಾಗಿಯೂ ಧನುರ್ಧಾರಿಯಾಗಿಯೂ ಇರುವ ನಿನ್ನ ದರ್ಶನವು ನನಗೆ ಲಭಿಸಿತಲ್ಲವೆ! ನನಗೆ ಸಮಸ್ತವಾದ ಇಷ್ಟಾರ್ಥಫಲವೂ ಪ್ರಾಪ್ತವಾದಂತೆಯೇ ಆಯ್ತು ॥೮॥

ಎಡಗೈಯಲ್ಲಿ ಧನುಸ್ಸನ್ನೂ ಒಲಗೈಯಲ್ಲಿ ಒಂದು ಬಾಣವನ್ನೂ ಬೆನ್ನಿನಲ್ಲಿ ಅಕ್ಷಯ ತೂಣೀರಗಳನ್ನೂ ಧರಿಸಿಕೊಂಡು--ಎಡಬಲಗಳಲ್ಲಿ ಸೀತಾಲಕ್ಷ್ಮಣರಿಂದ ವಿರಾಜಮಾನನಾಗಿರುವ--ಭಕ್ತರ ಮನಸ್ಸಿನಲ್ಲಿ ಉದಯಿಸುವ ಖೇದವನ್ನು ಛೇದಿಸುವುದರಲ್ಲಿ ದಕ್ಷನಾದ-ನೀಲಮೇಘಶ್ಯಾಮನಾದ ಶ್ರೀರಾಮನನ್ನು ನಾನು ನಿತ್ಯವೂ ಭಜಿಸುವೆನು ॥೯॥

ಎಲೌ ಪಾರ್ವತಿ! ಆಗ ಈರೀತಿಯಾಗಿ ರಾಮನನ್ನು ಧ್ಯಾನಿಸಿ ಸಾಕ್ಷಾತ್ತಾಗಿ ಅವನ

ರಾಮೋ ಭಕ್ತಪರಾಧೀನಇತಿ ಖ್ಯಾಪಯಿತುಂ ಭುವಿ ।
ಸ್ವಭಕ್ತಂ ಪಕ್ಷಿರಾಜಂ ತಂ ಸಂಸ್ಕೃತ್ಯೇದಮಥಾಬ್ರವೀತ್ ॥೧೧॥
ಯಾ ಗತಿರ್ಯಜ್ವಶೀಲಾನಾಂ ಆಹಿತಾಗ್ನೇಶ್ಚ ಯಾ ಗತಿಃ ।
ಅಪರಾವರ್ತಿನಾಂ ಯಾ ಚ ಯಾ ಚ ಭೂಮಿಪ್ರದಾಯಿನಾಮ್ ॥೧೨॥
ಏತಾಗತೀರತಿಕ್ರಮ್ಯ ಮತ್ಸಾರೂಪ್ಯಗತಿಃ ಸ್ವಯಮ್ ।
ಮಯಾ ತ್ವಂ ಸಮನುಜ್ಞಾತೋ ಗಚ್ಛ ಲೋಕಾನನುತ್ತಮಾನ್ ॥೧೩॥
ಏವಮುಕ್ತೋ ತತಃ ಪಕ್ಷೀ ದಿವ್ಯರೂಪಧರಃ ಸ್ವಯಮ್ ।
ವಿಮಾನವರಮಾರುಹ್ಯ ಭಾಸ್ವರಂ ಭಾನುಸನ್ನಿಭಮ್ ॥೧೪॥
ಖಂ ದ್ಯೋತಯನ್ ಪ್ರಕಾಶೇನ ಹರಿರೂಪಧರೋತುಲಃ ।
ಶಙ್ಖಚಕ್ರಗದಾಪದ್ಮವನಮಾಲಾವಿಭೂಷಿತಃ ॥೧೫॥
ಸ್ತೂಯಮಾನಃ ಸುರಗಣೈಃ ಪಾರ್ಷದೈರಭಿಪೂಜಿತಃ ।
ಕೃತಾಞ್ಜಲಿಪುಟೋ ಭೂತ್ವಾ ತುಷ್ಟಾವ ರಘುನನ್ದನಮ್ ॥೧೬॥

ದರ್ಶನವನ್ನು ಅನುಭವಿಸುತಿರುವ ಆ ಜಟಾಯುವು, ರಾಮರಾನು ಎಂದು ಬಾಯಲ್ಲಿ ಹೇಳುತ, ಶ್ರೀರಾಮನ ಸನ್ನಿಧಿಯಲ್ಲಿಯ ೇ ಪ್ರಾಣವನ್ನು ಬಿಟ್ಟುಬಟ್ಟನು ॥೧೦॥

ಆಗ ಶ್ರೀರಾಮನು, ತಾನು ಭಕ್ತಪರಾಧೀನನೆಂದು ಲೋಕದಲ್ಲ ಪ್ರಖ್ಯಾತಿಯನ್ನು ಸ್ಥಿರಪಡಿಸುವುದಕ್ಕೋಸ್ಕರ, ಆ ಜಟಾಯುವನ್ನು ತಾನೇ ಸಂಸ್ಕಾರಮಾಡಿ, ಅನಂತರ ಈ ಮಾತನ್ನು ಹೇಳಿದನು ॥೧೧॥

ಅಯ್ಯಾ ಜಟಾಯುವೆ! ನಿಯಮದಿಂದ ಯಜ್ಞಮಾಡತಕ್ಕವರಿಗ ಯಾವ ಗತಿ ಬರುವುದೋ, ಅಹಿತಾಗ್ನಿಗೆ ಯಾವ ಗತಿ ಬರುವುದೋ, ಯುದ್ಧದಲ್ಲಿ ಹಿಂದಿರುಗದಿರುವವರಿಗೆ ಯಾವ ಗತಿ ಬರುವುದೋ, ಭೂದಾನಮಾಡಿದವರಿಗೆ ಯಾವ ಗತಿ ಬರುವುದೋ, ಇವುಗಳನ್ನೆಲ್ಲ ನೀನು ಅತಿಕ್ರಮಿಸಿ, ನನ್ನ ಸಾರೂಪ್ಯಗತಿಯನ್ನು ಪಡದು, ನನ್ನಿಂದ ಅನುಜ್ಞೆಮಾಡಲ್ಪಟ್ಟವನಾಗಿ, ಸರ್ವೋತ್ತಮಗಳಾದ ಪುಣ್ಯಲೋಕಗಳನ್ನು ಹೊಂದುವನಾಗು ॥೧೨–೧೩॥

ಎಲೌ ತಾರ್ಕ್ಷ್ಯ! ಹೀಗೆಂದು ಶ್ರೀರಾಮನಿಂದ ಹೇಳಲ್ಪಡಲಾಗಿ, ಅನಂತರ ಆ ಪಕ್ಷಿರಾಜನು, ಸ್ವಯಂ ದಿವ್ಯದೇಹವನ್ನು ಧರಿಸಿದವನಾಗಿ, ಸೂರ್ಯನಂತೆ ಪ್ರಕಾಶಮಾನವಾದ ಉತ್ತಮ ವಿಮಾನದಲ್ಲಿ ಕುಳಿತುಕೊಂಡು, ತನ್ನ ತೇಜಸ್ಸಿನಿಂದ ಆಕಾಶಪ್ರದೇಶದಲ್ಲೆಲ್ಲ ಬೆಳಕುಂಟುಮಾಡುತ, ಶ್ರೀಹರಿಯ ಸಾರೂಪ್ಯವನ್ನು ಪಡೆದು, ಶಂಖ ಚಕ್ರ ಗದಾ ಪದ್ಮ ವನಮಾಲೆಗಳಿಂದ ಅಲಂಕೃತನಾಗಿ, ದೇವಸಮೂಹಗಳಿಂದ ಸ್ತುತಿಸಲ್ಪಡುತ, ಸಾಮಾಜಿಕರಿಂದ ಪೂಜಿಸಲ್ಪಡುತ, ಅಂಜಲಿಬದ್ಧವಾಡಿಕೊಂಡು, ಈರೀತಿಯಾಗಿ ಆ ರಘುನಂದನನನ್ನು ಸ್ತುತಿಸಿದನು ॥೧೪–೧೬॥

ಅಗಣಿತಗುಣಮಪ್ರಮೇಯಮಾದ್ಯಂ ಸಕಲಜಗತ್ಸ್ಥಿತಿಸಂಯಮಾದಿಹೇತುಮ್ ।
ಉಪರಮಪರಮಂ ಪರಾತ್ಮರೂಪಂ ಸತತಮಹಂ ಪ್ರಣತೋಸ್ಮಿ ರಾಮಚನ್ದ್ರಮ್‌॥
ನಿರವಧಿಸುಖಮಿನ್ದಿರಾಕಟಾಕ್ಷಕ್ಷಿತಸುರೇನ್ದ್ರಚತುರ್ಮುಖಾದಿದುಃಖಮ್ ।
ನರವರಮನಿಶಂ ನತೋಸ್ಮಿ ರಾಮಂ ವರದಮಹಂ ವರಚಾಪಬಾಣಹಸ್ತಮ್‌ ॥೧೪॥
ತ್ರಿಭುವನಕಮನೀಯಮಾತ್ಮರೂಪಂ ರವಿಶತಭಾಸುರಮಿಪ್ಸಿತಪ್ರದಾನಮ್ ।
ಶರಣಮದಮನಿಶಂ ಸುರದ್ರುಮೂಲೇ ಕೃತನಿಲಯಂ ರಘುನನ್ದನಂ ಪ್ರಪದ್ಯೇ ।೧೫॥
ಭವನಿಪನದವಾಗ್ನಿನಾಮಧೇಯಂ ಭವಮುಖದೈವತದೈವತಂ ದಯಾಳುಮ್ ।
ದನುಜಪತಿಸಹಸ್ರಕೋಟಿನಾಶಂ ರವಿತನಯಾಸದೃಶಂ ಹರಿಂ ಪ್ರಪದ್ಯೇ ॥೧೦॥
ಅವಿರತಭವಭಾವನಾವಿದೂರಂ ಭವವಿಮುಖೈರ್ಮುನಿಭಿಃ ಸದೈವ ವಂದ್ಯಮ್ ।
ಭವಜಲಧಿಸುತಾರಣಾಂಘ್ರಿಪೋತಂ ಶರಣಮಹಂ ರಘುನನ್ದನಂ ಪ್ರಪದ್ಯೇ ॥೧೧॥
ಗಿರಿಶಗಿರಿಸುತಾಮನೋವಿಕಾಸಂ ಗಿರಿವರಧಾರಿಣಮಾಹಿತಾರ್ಥದಂ ಚ ।
ಸುರವರದನುಜೇನ್ದ್ರಸೇವಿತಾಙ್ಘ್ರಿಂ ಸುರವರದಂ ರಘುನಾಯಕಂ ಪ್ರಪದ್ಯೇ ॥೧೨॥

ಅಗಣಿತವಾದ ಕಲ್ಯಾಣಗುಣವುಳ್ಳವನಾಗಿಯೂ, ಸಮಸ್ತಕ್ಕೂ ಆದಿಭೂತನಾಗಿಯೂ, ಸಕಲವಾದ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಹೇತುವಾಗಿಯೂ, ಉಪಶಾಂತಿಪ್ರಧಾನನಾಗಿಯೂ, ಸಾಕ್ಷಾತ್ ಪರಮಾತ್ಮಸ್ವರೂಪನಾಗಿಯೂ ಇರುವ ಶ್ರೀರಾಮಚಂದ್ರನನ್ನು, ಸರ್ವದಾ ನಾನು ನಮಸ್ಕರಿಸುವೆನು ॥೧೩॥

ಅಖಂಡಾನಂದರೂಪನಾಗಿಯೂ, ಲಕ್ಷ್ಮೀನಿವಾಸವಾದ ತನ್ನ ಕಟಾಕ್ಷಗಳಿಂದ ಬ್ರಹ್ಮೇಂದ್ರಾದಿಗಳ ದುಃಖವನ್ನೆಲ್ಲ ನಾಶಪಡಿಸತಕ್ಕವನಾಗಿಯೂ, ದಿವ್ಯವಾದ ಧನುರ್ಬಾಣಗಳನ್ನು ಕೈಯಲ್ಲಿ ಧರಿಸಿದವನಾಗಿಯೂ, ತನ್ನ ಭಕ್ತರಿಗೆ ಸಕಲ ವರಗಳನ್ನೂ ಕೊಡತಕ್ಕವನಾಗಿಯೂ ಇರುವ, ಪುರುಷೋತ್ತಮನಾದ ಶ್ರೀರಾಮನನ್ನು, ನಾನು ಸರ್ವದಾ ನಮಸ್ಕರಿಸುವೆನು ॥೧೪॥

ತ್ರಿಲೋಕಮೋಹನಾಕಾರನಾಗಿಯೂ, ಪರಮಾತ್ಮರೂಪನಾಗಿಯೂ, ನೂರು ಸೂರ್ಯಮಂಡಲಗಳಂತೆ ದೇದೀಪ್ಯಮಾನನಾಗಿಯೂ, ಸಕಲವಾದ ಇಷ್ಟಾರ್ಥವನ್ನು ಕೊಡತಕ್ಕವನಾಗಿಯೂ, ಸರ್ವಲೋಕಶರಣ್ಯನಾಗಿಯೂ ಇರುವ, ಕಲ್ಪವೃಕ್ಷಮೂದಲ್ಲಿ ಕೃತವಾಸನಾದ ಶ್ರೀರಘುನಾಥನನ್ನು, ನಾನು ಸರ್ವಥಾ ಶರಣಾಗತನಾಗುವೆನು ॥೧೫॥

ಸಂಸಾರವೆಂಬ ಅರಣ್ಯಕ್ಕೆ ದಾವಾಗ್ನಿರೂಪವಾದ ದಿವ್ಯನಾಮವುಳ್ಳವನಾಗಿಯೂ, ಪರಮೇಶ್ವರನೇ ಮೊದಲಾದ ಸಮಸ್ತ ದೇವತೆಗಳಿಗೂ ದೇವತೆಯಾಗಿಯೂ, ಕೋಟಿಸಹಸ್ರಸಂಖ್ಯಾಕರಾದ ರಾಕ್ಷಸ ಶ್ರೇಷ್ಠರನ್ನು ನಾಶಗೊಳಿಸತಕ್ಕವನಾಗಿಯೂ ಇರುವ, ಕಾಳಿಂದೀನದಿಗೆ ಸಮಾನವಾದ ದೇಹಪ್ರಭೆಯುಳ್ಳ ಶ್ರೀಹರಿಯನ್ನು, ನಾನು ಶರಣಾಗತನಾಗಿರುವೆನು ॥೧೦॥

ಸಾಂದ್ರವಾದ ಸಂಸಾರಭಾವನೆಗೆ ದೂರನಾಗಿಯೂ, ಶಿವನೇ ಮೊದಲಾದ ದೇವತೆಗಳಿಗೂ ಸಮಸ್ತಮುನಿಗಳಿಗೂ ಸರ್ವದಾ ವಂದ್ಯನಾಗಿಯೂ, ಸಂಸಾರಸಮುದ್ರವನ್ನು ದಾಟಿಸತಕ್ಕ ಪಾದ ನೌಕೆಯುಳ್ಳವನಾಗಿಯೂ ಇರುವ ರಘುನಂದನನನ್ನು, ನಾನು ಶರಣಾಗತನಾಗಿರುವೆನು ॥೧೧॥

ಪಾರ್ವತೀಪರಮೇಶ್ವರರಿಗೆ ಸರ್ವದಾ ಮನೋವಿಲಾಸಹೇತುಭೂತನಾಗಿಯೂ, ಮಂದರಪರ್ವತವನ್ನು ಉದ್ಧಾರಮಾಡಿದವನಾಗಿಯೂ, ಸಕಲರಿಗೂ ಇಷ್ಟಾರ್ಥಗಳನ್ನು ಕೊಡತಕ್ಕವನಾಗಿಯೂ, ಸುರಾಸುರವರರಿಂದ ಸೇವಿತವಾದ ಪಾದವುಳ್ಳವನಾಗಿಯೂ, ದೇವತೆಗಳಿಗೆ ವರಪ್ರದನಾಗಿಯೂ ಇರುವ ಶ್ರೀರಘುನಂಥನನ್ನು, ನಾನು ಶರಣಾಗತನಾಗಿರುವೆನು ॥೧೨॥

ಪರಧನಪರದಾರವರ್ಜಿತಾನಾಂ ಪರಗುಣಭೂತಿಷು ತುಷ್ಟಮಾನಸಾನಾಮ್ ।
ಪರಹಿತನಿಯತಾತ್ಮನಾಂ ಸುಸೇವ್ಯಂ ರಘುವರಮಮ್ಬುಜಲೋಚನಂ ಪ್ರಪದ್ಯೇ ॥೨೩॥
ಹರಿಕಮಲಜಕಮ್ಬುರೂಪಭೇದಾತ್ ತ್ವಮಿಹ ವಿಭಾಸಿ ಗುಣೋಜ್ಜ್ವಯಾನುವೃತ್ತಃ ।
ರವಿರಿವ ಜಲಪೂರಿತೋದಪಾತ್ರೇಷ್ವಮರಪತಿಸ್ತುತಿಪಾತ್ರಮೀಶಮೀಡೇ ॥೨೪॥
ರತಿಪತಿಶತಕೋಟಿಸುನ್ದರಾಙ್ಗಂ ಶ್ರುತಿಪಥಗೋಚರಭಾವನಾವಿದೂರಮ್ ।
ಯತಿಪತಿಹೃದಯೇ ಸದಾ ವಿಭಾನ್ತಂ ರಘುಪತಿಮೂರ್ತಿಧರಂ ಹರಿಂ ಪ್ರಪದ್ಯೇ ॥೨೫॥
ಇತ್ಯೇವಂ ಸ್ತುವತಸ್ತಸ್ಯ ಪ್ರಸನ್ನಃ ಸ ರಘೂತ್ತಮಃ ।
ಉವಾಚ ಗಚ್ಛ ಭದ್ರಂ ತೇ ಮಮ ವಿಷ್ಣೋಃ ಪರಂ ಪದಮ್ ॥೨೬॥
ಸ ಗೃಧ್ರರಾಜಃ ಕೃತವಾನ್ ಯಶಸ್ಕರಂ ಸುದುಷ್ಕರಂ ಕರ್ಮ ರಣೇ ನಿಪಾತಿತಃ ।
ಮಹರ್ಷಿಕಲ್ಪೇನ ಚ ಸಂಸ್ಕೃತಸ್ತದಾ ಜಗಾಮ ಪುಣ್ಯಾಂ ಗತಿಮೂತ್ತಮಾಂ ಶುಭಾಮ್ ॥

ಇತಿ ಶ್ರೀಮದರಣ್ಯಕಾಣ್ಡೇ ಜಟಾಯುರ್ಮೋಕ್ಷಕಥನಂ ನಾಮ
ಅಷ್ಟಾದಶಃ ಸರ್ಗಃ

ಪರಧನ ಪರದಾರರಲ್ಲಿ ಆಸಕ್ತಿಯಿಡದೆ-ಪರರ ಗುಣಗಳಲ್ಲಿಯೂ ಸಂಪತ್ತುಗಳಲ್ಲಿಯೂ ಸಂತುಷ್ಟಹೃದಯರಾಗಿ ಪರಹಿತಾಚರಣೆಯಲ್ಲಿಯೇ ನಿಯತರಾಗಿರುವ ಮಹಾತ್ಮರಿಗೆ ಸೇವ್ಯನಾದ ಪುಂಡರೀಕಾಕ್ಷನಾಗಿರುವ ಶ್ರೀರಘುವರನನ್ನು ನಾನು ಶರಣಾಗತನಾಗಿರುವೆನು ॥೨೩॥

ಭೋಃ ಸ್ವಾಮಿ ! ಒಬ್ಬನೇ ಸೂರ್ಯನು ಜಲಪೂರಿತವಾದ ಅನೇಕ ಕುಂಭಗಳಲ್ಲಿ ಅನೇಕ ವಿಧವಾಗಿ ಕಾಣುವಂತೆ, ನೀನೊಬ್ಬನೇ ಸತ್ವಾದಿಗುಣಭೇದಯುಕ್ತನಾಗಿ ಬ್ರಹ್ಮ ವಿಷ್ಣು ಮಹೇಶ್ವರ ರೂಪದಿಂದ ಭಿನ್ನಭಿನ್ನನಾಗಿ ಭಾಸಿಸುತಿರುವೆ ಸಕಲ ದೇವಾಧೀಶ್ವರರಿಗೂ ಸ್ತುತ್ಯನಾದ-ಸರ್ವ ಲೋಕಮಹೇಶ್ವರನಾದ ನಿನ್ನನ್ನು ನಾನು ಸ್ತುತಿಸುವೆನು ॥೨೪॥

ನೂರಾರುಕೋಟಿ ಮನ್ಮಥರಂತೆ ಸುಂದರವಿಗ್ರಹನಾಗಿಯೂ, ಸಕಲ ವೇದಪ್ರತಿಪಾದ್ಯನಾಗಿಯೂ, ಪುರುಷರ ಭಾವನೆಗೆ ದೂರನಾಗಿಯೂ, ಜಿತೇಂದ್ರಿಯರಾದವರ ಹೃದಯದಲ್ಲಿ ಸರ್ವದಾ ವಿಶಾಜಿಸುವನಾಗಿಯೂ ಇರುವ, ಶ್ರೀರಾಮರೂಪಧರನಾದ ಹರಿಯನ್ನು ಶರಣಾಗತನಾಗಿರುವೆನು॥

ಎಲೌ ಪಾರ್ವತಿ ! ಆಗ ಈರೀತಿಯಾಗಿ ಸ್ತೋತ್ರಮಾಡುತಿರುವ ಜಟಾಯುವಿಗೆ ಪ್ರಸನ್ನನಾಗಿ, ಶ್ರೀರಾಮನು ಅವನನ್ನು ಕುರಿತು ' ನಿನಗೆ ಕುಶಲವಾಗಲಿ, ನೀನು ನನ್ನ ಪರಮಪದವನ್ನು ಹೊಂದು ' ಎಂದು ಅನುಗ್ರಹಿಸಿದನು ॥೨೬॥

ಹೀಗೆ ಆ ಗೃಧ್ರರಾಜನು ಅತಿ ದುಷ್ಕರವಾಗಿಯೂ ಯಶಸ್ಕರವಾಗಿಯೂ ಇರುವ ಕರ್ಮವನ್ನು ಮಾಡಿ, ಯುದ್ಧದಲ್ಲಿ ರಾವಣನಿಂದ ಹೊಡೆಯಲ್ಪಟ್ಟವನಾಗಿ, ಮಹರ್ಷಿಕಲ್ಪನಾದ ಶ್ರೀರಾಮನಿಂದ ಆಗ ಸಂಸ್ಕರಿಸಲ್ಪಟ್ಟು, ತನ್ನ ಪುಣ್ಯಲೋಕವನ್ನು ಹೊಂದಿದವನಾದನು ॥೨೭॥

ಇದು ಆರಣ್ಯಕಾಂಡದಲ್ಲಿ ಜಟಾಯುರ್ಮೋಕ್ಷಕಥನವೆಂಬ
ಹದಿನೆಂಟನೆಯ ಸರ್ಗವು

ಅಥ ಶ್ರೀಮದರಣ್ಯಕಾಣ್ಡೇ ಏಕೋನವಿಂಶಃ ಸರ್ಗಃ

ಶ್ರೀಶಿವಉವಾಚ

ಗತೇ ತಸ್ಮಿನ್ ನಿಜಸ್ಥಾನಂ ಗಹನಂ ವನಮಾಶ್ರಿತೌ ।
ಆಸೇದತುರಮಿತ್ರಘ್ನೌ ಭ್ರಾತರೌ ರಾಮಲಕ್ಷ್ಮಣೌ ॥೧॥
ಅಥ ತೌ ಸಮತಿಕ್ರಮ್ಯ ಕ್ರೌಞ್ಚಮಾತ್ರೇ ದದರ್ಶತುಃ ।
ಮಹಾನ್ತಂ ದಾರುಣಂ ಭೀಮಂ ಕಬನ್ಧಂ ಭುಜಸಂವೃತಮ್ ॥೨॥
ಬಾಹುಪಾಶಪರಿಕ್ಷಿಪ್ತಃ ಕಬನ್ಧೋ ದುಷ್ಟದಾನವಃ ।
ವಿದಾರ್ಯಾಸ್ಯಂ ತದಾ ರೌದ್ರಃ ತೌ ಭಕ್ಷಯಿತುಮಾರಭತ್ ॥೩॥
ತತಸ್ತೌ ದೇಶಕಾಲಜ್ಞೌ ಖಡ್ಗಾಭ್ಯಾಮೇವ ರಾಘವೌ ।
ಅಚ್ಛಿನ್ದತಾಂ ಸುಸಂಹೃಷ್ಟೌ ಬಾಹೂ ತಸ್ಯಾಂಸದೇಶತಃ ॥೪॥
ಸ ಪಪಾತ ಮಹಾಬಾಹುಃ ಛಿನ್ನಬಾಹುರ್ಮಹಾರ ಚ ॥೫॥

ಅರಣ್ಯಕಾಂಡದಲ್ಲಿ ಹತ್ತೊಂಭತ್ತನೆಯ ಸರ್ಗವು

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಹೀಗೆ ಆ ಜಟಾಯುವು ತನ್ನ ಗತಿಯನ್ನು ಹೊಂದಿದ ಬಳಿಕ, ಶತ್ರು ಸಂಹಾರಕರಾದ ರಾಮಲಕ್ಷ್ಮಣರು ಆ ಕ್ಷಣವೇ ಅತಿ ಗಹನವಾದ ವನವನ್ನು ಪ್ರವೇಶಿಸಿದರು ॥೧॥

ಅನಂತರ, ಅವರಿಬ್ಬರೂ ಸ್ವಲ್ಪಹೊತ್ತು ನಡೆದುಹೋಗಿ, ಒಂದು ಹರಿದಾರಿಯಷ್ಟು ದೂರದಲ್ಲಿ, ಅತಿ ಕ್ರೂರವಾಗಿಯೂ ಬಾಹುಮಾತ್ರಯುಕ್ತವಾಗಿಯೂ ಇರುವ ದೊಡ್ಡದಾದ ಒಂದು ಕಬಂಧ(ತಲೆಯಿಲ್ಲದ ಮುಂಡ)ವನ್ನು ಕಂಡರು ॥೨॥

ಆಗ ರೌದ್ರನಾದ ಆ ಕಬಂಧನಾಮಕನಾದ ದುಷ್ಟರಾಕ್ಷಸನು, ತನ್ನ ಭುಜಗಳನ್ನು ಪಾಶದಂತೆ ಬೀಸುತ್ತ, ತನ್ನ ಬಾಯನ್ನು ತೆರೆದುಕೊಂಡು, ಆ ರಾಮಲಕ್ಷ್ಮಣರನ್ನು ತಿಂದು ಬಿಡುವುದಕ್ಕೆ ಉಪಕ್ರಮಿಸಿದನು ॥೩॥

ಒಳಿಕ, ದೇಶಕಾಲಗಳನ್ನು ಬಲ್ಲವರಾದ ಆ ರಾಮಲಕ್ಷ್ಮಣರು, ಕೇವಲ ಹರ್ಷಯುಕ್ತರಾಗಿ, ತಮ್ಮ ಖಡ್ಗಗಳಿಂದಲೇ ಆ ಕಬಂಧಾಸುರನ ತೋಳುಗಳನ್ನು ಅಂಸ(ಹೆಗಲು)ಪ್ರದೇಶದ ದೆಸೆಯಿಂದ ಕತ್ತರಿಸಿ ಕೆಡುಹಿಬಿಟ್ಟರು. ಆಗ ಮಹಾಭುಜನಾದ ಆ ಕಬಂಧನು, ಛಿನ್ನಭುಜನಾಗಿ ಕೆಳಕ್ಕೆ ಬಿದ್ದು ಮರಣಹೊಂದಿದವನಾದನು ॥೪—೫॥

ತತೋ ರಾಮಸ್ತು ತದ್ವಾಕ್ಯಾತ್ ಅವಟೇ ತಂ ಸುವಿಸ್ತರೇ ।
ನಿಕ್ಷಿಪ್ಯ ಪ್ರಾದಹತ್ ಕಾಷ್ಠೈಃ ತತಸ್ತದ್ದೇಹತಃ ಪುಮಾನ್ ।
ಉತ್ಥಿತೋ ದೇವತಾರೂಪಃ ಸರ್ವಾಭರಣಭೂಷಿತಃ ॥೬॥
ರಾಮಂ ಪ್ರದಕ್ಷಿಣಂ ಕೃತ್ವಾ ಸಾಷ್ಟಾಂಗಂ ಪ್ರಣಿಪತ್ಯ ಸಃ ।
ಕೃತಾಂಜಲಿರುವಾಚೇದಂ ಭಕ್ತಿಗದ್ಗದಯಾ ಗಿರಾ ॥೭॥
ಸ್ತೋತುಮುತ್ಸಹತೇ ಮೇದ್ಯ ಮನೋ ರಾಮಾತಿಸಂಭ್ರಮಾತ್ ।
ತ್ವಾಮತ್ಯನ್ತಮನಾದ್ಯನ್ತಂ ಮನೋವಾಚಾಮಗೋಚರಮ್ ॥೮॥
ಸೂಕ್ಷ್ಮಂ ತೇ ರೂಪಮವ್ಯಕ್ತಂ ದೇಹದ್ವಯವಿಲಕ್ಷಣಮ್ ।
ದೃಗ್ರೂಪಮಿತರತ್ ಸರ್ವಂ ದೃಶ್ಯಂ ಜಡಮನಾತ್ಮಕಮ್ ॥೯॥
ತತ್ ಕಥಂ ತ್ವಾಂ ವಿಜಾನೀಯಾತ್ ವ್ಯತಿರಿಕ್ತಂ ಮನಃ ಪ್ರಭೋ ॥೧೦॥
ಬುದ್ಧ್ಯಾತ್ಮಾಭಾಸಯೋರೈಕ್ಯಂ ಜೀವಇತ್ಯಭಿಧೀಯತೇ ।
ಬುದ್ಧ್ಯಾದಿಸಾಕ್ಷೀ ಬ್ರಹ್ಮೈವ ತಸ್ಮಿನ್ ನಿರ್ವಿಷಯೇಽಖಿಲಮ್ ।
ಆರೋಪ್ಯತೇಽಜ್ಞಾನವಶಾತ್ ನಿರ್ವಿಕಾರೇಽಖಿಲಾತ್ಮನಿ ॥೧೧॥

ಆಮೇಲೆ ಶ್ರೀರಾಮನು ಆ ಕಬಂಧನ ಪ್ರಾರ್ಥನಾನುಸಾರವಾಗಿ ಅವನ ದೇಹವನ್ನು ದೊಡ್ಡ ಗುಂಡಿಯಲ್ಲಿಟ್ಟು ಕಾಷ್ಠಗಳಿಂದ ದಹನಮಾಡಿದನು. ಬಳಿಕ ಅವನ ದೇಹದದೆಸೆಯಿಂದ ಸರ್ವಾಭರಣಭೂಷಿತನಾಗಿರುವ ದೇವತಾರೂಪನಾದ ಒಬ್ಬ ಪುರುಷನು ಉದಯಿಸಿದನು ॥೬॥

ಅವನು, ರಾಮನಿಗೆ ಪ್ರದಕ್ಷಿಣೆಯನ್ನೂ ಸಾಷ್ಟಾಂಗನಮಸ್ಕಾರವನ್ನೂ ಮಾಡಿ, ಅಂಜಲಿ ಬಂಧಮಾಡಿಕೊಂಡು, ಭಕ್ತಿಯಿಂದ ಗದ್ಗದವಾಗಿರುವ ಧ್ವನಿಯಲ್ಲಿ ಹೀಗೆ ವಿಜ್ಞಾಪಿಸಿದನು ॥೭॥

ಸ್ವಾಮಿ! ರಾಮಭದ್ರ! ಮನಸ್ಸಿಗೂ ವಾಕ್ಕಿಗೂ ಅಗೋಚರನಾಗಿ ಸುತರಾಂ ಅದ್ಯಂತ ಶೂನ್ಯನಾಗಿರುವ ನಿನ್ನನ್ನು ಸ್ತುತಿಸಬೇಕೆಂದು, ಈಗ ನನ್ನ ಮನಸ್ಸು ಅತಿ ಸಂಭ್ರಮದಿಂದ ಆಶೆ ಪಡುತಿರುವುದು ॥೮॥

ಆದರೆ, ನಿನ್ನ ರೂಪವು-ಅತಿ ಸೂಕ್ಷ್ಮವಾಗಿಯೂ ಅವ್ಯಕ್ತವಾಗಿಯೂ ದೇಹದ್ವಯ (ಸ್ಥೂಲ-ಸೂಕ್ಷ್ಮ) ವಿಲಕ್ಷಣವಾಗಿಯೂ ದೃಗ್ರೂಪವಾಗಿಯೂ ಇರುವುದು, ತದ್ಭಿನ್ನವಾದ ಸಮಸ್ತ ಜಡಪದಾರ್ಥವೂ ದೃಶ್ಯವೆನ್ನಿಸುವುದು ಹೀಗಿರುವುದರಿಂದ, ಸರ್ವಲೋಕಪ್ರಭುವಾದ ರಾಮಚಂದ್ರನೆ! ಸರ್ವಾತಿರಿಕ್ತನಾಗಿರುವ ನಿನ್ನನ್ನು ನನ್ನ ಮನಸ್ಸು ಹೇಗೆ ತಿಳಿದುಕೊಳ್ಳಬಲ್ಲುದು?॥

ಜ್ಞಾನ-ಆತ್ಮಾಭಾಸ (ಪರಮಾತ್ಮನ ಮಾಯಾಜನ್ಯವಾದ ರೂಪ)-ಇವುಗಳ ಐಕ್ಯ (ಸೇರುವಿಕೆ)ವೇ ಜೀವನೆಂದು ಹೇಳಲ್ಪಡುವುದು ಬುದ್ಧಿ ಮುಂತಾದುವುಗಳಿಗೆಲ್ಲ ಬ್ರಹ್ಮಪದಾರ್ಥವೇ ಸಾಕ್ಷಿಭೂತವಾಗಿರುವುದು. ನಿರ್ವಿಷಯವಾಗಿಯೂ ನಿರಾಕಾರವಾಗಿಯೂ ಸರ್ವಾತ್ಮಕವಾಗಿಯೂ ಇರುವ ಆ ಬ್ರಹ್ಮವಸ್ತುವಿನಲ್ಲಿ, ಅಜ್ಞಾನದಿಂದ ಈ ಸಮಸ್ತಪ್ರಪಂಚವೂ ಆರೋಪಿಸಲ್ಪಡುವುದು ॥೧೧॥

ಹೈರಣ್ಯಗರ್ಭಂ ತೇ ಸೂಕ್ಷ್ಮಂ ದೇಹಂ ಸ್ಥೂಲಂ ವಿರಾಟ್ ಸ್ಮೃತಮ್ ।
ಭಾವನಾವಿಷಯಂ ರಾಮ ಸೂಕ್ಷ್ಮಂ ತೇ ಧ್ಯಾನಮರ್ಥವತ್ ॥೧೨॥
ಭೂತಂ ಭವ್ಯಂ ಭವಿಷ್ಯಚ್ಚ ಯದಿದಂ ದೃಶ್ಯತೇ ಜಗತ್ ।
ಸ್ಥೂಲೇಽಣ್ಡಕೋಶೇ ದೇಹೇ ತೇ ಮಹದಾದಿಭಿರಾವೃತೇ ॥೧೩॥
ತ್ವಮೇವ ಸರ್ವವೈಕಲ್ಪಂ ಲೋಕಾಸ್ತ್ವೇವಯವಾಃ ಸ್ಮೃತಾಃ ॥೧೪॥
ಪಾತಾಳಂ ತೇ ಪಾದಮೂಲಂ ಗುಲ್ಫಸ್ತ್ವಳಮಿತೀರ್ಯತೇ ।
ಜಾನುನೀ ಸುತಳಂ ರಾಮ ಊರೂ ತೇ ವಿತಳಂ ತಥಾ ॥೧೫॥
ಅತಳಂ ಚ ಮಹೀ ರಾಮ ಜಘನಂ ನಾಭಿವನ್ನಭಃ ।
ಉರಸ್ಸ್ಥಲಂ ತೇ ಜ್ಯೋತಿಶ್ಚಿಂಷ್ಣು ಗ್ರೀವಾ ತೇ ಮಹದುಚ್ಯತೇ ॥೧೬॥
ವದನಂ ಜನಲೋಕಸ್ತೇ ತಪಸ್ತೇ ಕರ್ಣದೇಶಜಮ್ ।
ಸತ್ಯಲೋಕೋ ಮಹಾಬಾಹೋ ಶೀರ್ಷಾರ್ಣ್ಯಾಸಃ ರಘೂತ್ತಮ ॥೧೭॥
ಇನ್ದ್ರಾದಯೋ ಲೋಕಪಾಲಾಃ ಬಾಹವಸ್ತೇ ದಿಶಃ ಶ್ರುತೀ ।
ಅಶ್ವಿನೌ ನಾಸಿಕೇ ರಾಮ ವಕ್ತ್ರಂ ತ್ವಗ್ನಿರುದಾಹೃತಃ ॥೧೮॥

ರಾಮಭದ್ರ! ಅನಂತರ, ಹಿರಣ್ಯಗರ್ಭಾಖ್ಯವಾದ ನಿನ್ನ ಸೂಕ್ಷ್ಮದೇಹವು, ಸ್ಥೂಲರೂಪವಾಗಿ ವಿರಾಟ್ಸಂಜ್ಞೆಯನ್ನು ಪಡೆದು, ಸರ್ವರಿಗೂ ಭಾವನಾಗೋಚರವಾಗುವುದು, ಈ ದಿವ್ಯ ಮಂಗಳ ವಿಗ್ರಹವು ಧ್ಯಾನಾರ್ಥವಾಗಿ ಏರ್ಪಡುವುದು ॥೧೨॥

ಭೂತ ಭವಿಷ್ಯತ್ ವರ್ತಮಾನರೂಪವಾದ ಈ ಯಾವ ಜಗತ್ತು ದೃಶ್ಯಮಾನವಾಗಿರುವುದೋ, ಅದೆಲ್ಲವೂ-ಮಹತ್ತತ್ವವೇ ಮೊದಲಾದುವುಗಳಿಂದ ಆವರಿಸಲ್ಪಟ್ಟಿರುವ ನಿನ್ನ ಸ್ಥೂಲ ದೇಹದಲ್ಲಿ ಸೇರಿರುವುದು ॥೧೩॥

ಸ್ವಾಮಿ! ರಾಮಭದ್ರ! ಏಕಲಾತ್ಮಕವಾದ ಈ ಸಮಸ್ತವೂ ನೀನೆಯೇ. ಸಮಸ್ತ ಲೋಕಗಳೂ ನಿನ್ನ ಅವಯವಗಳೆಂದು ಹೇಳಲ್ಪಡುವುವು. ಪಾತಾಳವು ನಿನಗೆ ಪಾದಮೂಲವು, ತಲಲೋಕವು ನಿನ್ನ ಗುಲ್ಫ(ಹಿಮ್ಮಡಿ)ವೆನ್ನಿಸುವುದು, ಸುತಲಲೋಕವು ನಿನ್ನ ಜಾನು(ಮಂಡಿ)ಗಳು, ವಿತಳಲೋಕವೇ ನಿನ್ನ ಊರುಗಳು ॥೧೪—೧೫॥

ಹೇ ರಾಮ! ಅತಳಲೋಕವು ನಿನ್ನ ಜಂಘಾಪ್ರದೇಶ(ಮೊಣಕಾಲು)ವಾಗಿರುವುದು, ಭೂಮಿಯು ನಿನ್ನ ಜಘನವಾಗಿಯೂ, ಆಕಾಶವು ನಿನ್ನ ನಾಭಿಯಾಗಿಯೂ, ಜ್ಯೋತಿರ್ಲೋಕವು ನಿನ್ನ ಉರಸ್ಸಾಗಿಯೂ, ಮಹಲೋಕವು ನಿನ್ನ ಗ್ರೀವೆ(ಕುತ್ತಿಗೆ)ಯಾಗಿಯೂ ಇರುವುವು ॥೧೬॥

ಎಲೈ ಮಹಾಬಾಹುವೆ! ರಘೂತ್ತಮನೆ! ಜನಲೋಕವು ನಿನ್ನ ಮುಖವು, ತಪೋಲೋಕವು ನಿನ್ನ ಕರ್ಣಪ್ರದೇಶವು, ಸತ್ಯಲೋಕವೇ ನಿನ್ನ ಶಿರೋಭಾಗವು ॥೧೭॥

ರಾಮಚಂದ್ರ! ಇಂದ್ರಾದಿ ದಿಕ್ಪಾಲಕರು ನಿನ್ನ ಬಾಹುಗಳು, ದಿಕ್ಕುಗಳೇ ನಿನ್ನ ಶ್ರೋತ್ರೇಂದ್ರಿಯಗಳು, ಅಶ್ವಿನಿದೇವತೆಗಳೇ ನಿನ್ನ ನಾಸಿಕೆಯು, ಅಗ್ನಿಯೇ ಮುಖವೆಂದು ಉಕ್ತನಾಗಿರುವನು ॥೧೮॥

ಚಕ್ಷುಸ್ತೇ ಸವಿತಾ ರಾಮ ಮನಶ್ಚನ್ದ್ರ ಉದಾಹೃತಃ ।
ಭ್ರೂಭಙ್ಗವಿವ ಕಾಲಸ್ತೇ ಬುದ್ಧಿಸ್ತೇ ವಾಕ್ಪತಿರ್ಭವೇತ್ ॥೧೯॥
ಇನ್ದ್ರೋಹಙ್ಕಾರರೂಪಸ್ತೇ ವಾಚಶ್ಚನ್ದಾಂಸಿ ತೇ ವ್ಯಯ ।
ಯಮಸ್ತೇ ದಂಷ್ಟ್ರದೇಶಸ್ಥೋ ನಕ್ಷತ್ರಾಣಿ ದ್ವಿಜಾಳಯಃ ॥೨೦॥
ಹಾಸೋ ಮೋಹಕರೀ ಮಾಯಾ ಸೃಷ್ಟಿಸ್ತೇಪಾಙ್ಗವೀಕ್ಷಣಮ್ ।
ಧರ್ಮಃ ಪುರಸ್ತೇ ಽಧರ್ಮಶ್ಚ ಪೃಷ್ಠಭಾಗಉದಾಹೃತಃ ॥೨೧॥
ನಿಮೇಷೋನ್ಮೇಷಣೇ ರಾತ್ರಿಃ ದಿವಾ ಚೈವ ರಘೂತ್ತಮ ।
ಸಮುದ್ರಾಃ ಸಪ್ತ ತೇ ಕುಕ್ಷೇಃ ನಾಡ್ಯೋ ನದ್ಯಸ್ತವ ಪ್ರಭೋ ॥೨೨॥
ರೋಮಾಣಿ ವೃಕ್ಷಾಪಧಯೋ ರೇತೋ ವೃಷ್ಟಿಸ್ತವ ಪ್ರಭೋ ।
ಮಹಿಮಾ ಜ್ಞಾನಶಕ್ತಿಸ್ತೇ ಹ್ಯೇವಂ ಸ್ಥೂಲವಪುಸ್ತವ ॥೨೩॥
ಯಪಿತತ್ಸ್ಥೂಲರೂಪೇ ತೇ ಮನಃ ಸನ್ಧಾರಯೇಚ್ಛುಭೇ ।
ಅನಾಯಾಸೇನ ಮುಕ್ತಃ ಸ್ಯಾತ್ ತತೋನ್ಯನ್ನ ಹಿ ಕಿಞ್ಚನ ॥೨೪॥
ಅತೋಹಂ ರಾಮ ರೂಪಂ ತೇ ಸ್ಥೂಲಮೇವಾನುಭಾವಯೇ ।
ಯಸ್ಮಿನ್ ಧ್ಯಾತೇ ಪ್ರೇಮರಸಃ ಸರೋಮಪುಲಕೋ ಭವೇತ್ ॥೨೫॥

ರಾಮಭದ್ರ! ಸೂರ್ಯನೇ ನಿನ್ನ ನೇತ್ರವು, ಚಂದ್ರನು ನಿನ್ನ ಮನಸ್ಸೆಂದು ಹೇಳಲ್ಪಟ್ಟಿರುವನು; ಕಾಲವೇ ನಿನ್ನ ಭ್ರೂವಿಲಾಸವು, ಆ ಬೃಹಸ್ಪತಿಯೇ ನಿನ್ನ ಬುದ್ಧಿಯಾಗಿರುವನು ॥೧೯॥

ಎಲೈ ಅವ್ಯಯನಾದವನೆ! ಇಂದ್ರನು ನಿನ್ನ ಅಹಂಕಾರರೂಪನಾದವನು, ಸಮಸ್ತ ವೇದಗಳೂ ನಿನ್ನ ವಚನಗಳು, ಯಮನು ನಿನ್ನ ದಂಷ್ಟ್ರಾಪ್ರದೇಶಸ್ಥಿತನು, ನಕ್ಷತ್ರಗಳು ನಿನ್ನ ದಂತ ಪಂಕ್ತಿಗಳು ॥೨೦॥

ನಿನ ಮಂದಹಾಸವೇ ಸಕಲಭುವನ ಮೋಹಕರಿಯಾದ ಮಾಯೆಯು, ನಿನ್ನ ಕಟಾಕ್ಷ ವೀಕ್ಷೇಪವೇ ಪ್ರಪಂಚಸೃಷ್ಟಿಯು, ಧರ್ಮವು ನಿನ್ನ ಪುರೋಭಾಗವೆಂದೂ, ಅಧರ್ಮವು ನಿನ್ನ ಪೃಷ್ಠಂ ಭಾಗವೆಂದೂ ಹೇಳಲ್ಪಟ್ಟಿರುವುವು ॥೨೧॥

ಎಲೈ ರಘುನಾಯಕನೆ! ನಿನ್ನ ನೇತ್ರನಿಮೀಲನವು ರಾತ್ರಿಯೆಂದೂ, ನೇತ್ರೋನ್ಮೀಲನವು ಹಗಲೆಂದೂ ಉಕ್ತವಾಗಿರುವುವು ಎಲೈ ಪ್ರಭುವೆ! ಸಪ್ತಸಮುದ್ರಗಳೇ ನಿನ್ನ ಉದರವು, ನದಿಗಳೇ ನಿನ್ನ ಶರೀರದಲ್ಲಿರುವ ನಾಡಿಗಳು ॥೨೨॥

ಹೇ ಪ್ರಭೋ! ವೃಕ್ಷಲತೆಗಳೂ ನಿನ್ನ ರೋಮಗಳು, ವೃಷ್ಟಿಯೇ ನಿನ್ನ ರೇತಸ್ಸು, ಜ್ಞಾನಶಕ್ತಿಯೇ ನಿನ್ನ ಮಹಿಮೆಯು ಇದು ನಿನ್ನ ಸ್ಥೂಲಶರೀರವು ॥೨೩॥

ಸರ್ವಲೋಕಶುಭಕರವಾದ ಈ ನಿನ್ನ ಸ್ಥೂಲಶರೀರದಲ್ಲಿ ಯಾವನು ಮನಸ್ಸನ್ನು ಅಚಲವಾಗಿ ನಿಲ್ಲಿಸುವನೋ, ಅವನು ಅನಾಯಾಸವಾಗಿ ಮುಕ್ತನಾಗುವನು ಅಮೇಲೆ ಅವನಿಗೆ ಪ್ರಾಪ್ಯವಾಗಿ ಮತ್ತೇನೂ ಉಳಿಯುವುದಿಲ್ಲ ॥೨೪॥

ಅದುಕಾರಣ, ರಾಮಭದ್ರ! ಯಾವ ಸ್ಥೂಲದೇಹವನ್ನು ಧ್ಯಾನಮಾಡಿದರೆ ರೋಮಾಂಚ

ತದೈವ ಮುಕ್ತಿಃ ಸ್ಯಾದ್ರಾಮ ಯದಾಸಿ ಸ್ಥೂಲಭಾವಿತಃ ।
ತದಪ್ಯಸ್ತಾಂ ತವೈವಾಹಂ ಏವಂ ರೂಪಂ ವಿಜಿನ್ತಯೇ ॥೬೬॥
ಧನುರ್ಬಾಣಧರಂ ರಾಮಂ ಜಟಾವಲ್ಕಲಧಾರಿಣಮ್ ।
ಇದಮೇವ ಸದಾ ಮೇ ಸ್ಯಾತ್ ಮಾನಸೇ ರಘುನನ್ದನ ॥೬೭॥
ಸರ್ವಜ್ಞಃ ಶಬ್ಕರಃ ಸಾಕ್ಷಾತ್ ಪಾರ್ವತ್ಯಾ ಸಹಿತಸ್ತಥಾ ।
ತ್ವದ್ರೂಪಮೇವ ಸತತಂ ಧ್ಯಾಯನ್ನಾಸ್ತೇ ರಘೂತ್ತಮ ॥೬೮॥
ಮುಮೂರ್ಷೂಣಾಂ ಸದಾ ಕಾಶ್ಯಾಂ ತಾರಕಬ್ರಹ್ಮವಾಚಕಮ್ ।
ರಾಮರಾಮೇತ್ಯುಪದಿಶ್ಯ ಸದಾ ಸನ್ತುಷ್ಟಮಾನಸಃ ॥೬೯॥
ಅತಸ್ತ್ವಂ ಜಾನಕೀನಾಥ ಪರಮಾತ್ಮಾ ಸುನಿಶ್ಚಿತಮ್ ।
ಸರ್ವೇ ತೇ ಮಾಯಯಾ ಮೂಢಾಃ ತ್ವಾಂ ನ ಜಾನನ್ತಿ ತತ್ತ್ವತಃ ॥೭೦॥
ನಮಸ್ತೇ ರಾಮಚನ್ದ್ರಾಯ ವೇಧಸೇ ಪರಮಾತ್ಮನೇ ।
ಅಯೋಧ್ಯಾಧಿಪತೇ ತುಭ್ಯಂ ನಮಃ ಸೌಮಿತ್ರಿಸೇವಿತ ।
ತ್ರಾಹಿತಃ ಸಿ ಜಗನ್ನಾಥ ಮಾಯಾ ಮಾಂ ನಾನೃಣೋತು ತೇ ॥೭೧॥

ಸಹಿತವಾಗಿ ಪ್ರೇಮರಸವಾವಿರ್ಭವಿಸುವುದೋ, ಅಂತಹ ಸ್ಥೂಲದೇಹವನ್ನೇ ನಾನು ಸರ್ವದಾ ಹೃದಯದಲ್ಲಿ ಭಾವಿಸುತಿರುವೆನು ॥೬೫॥

ಸ್ವಾಮಿ! ಯಾವಾಗ ನಿನ್ನ ಸ್ಥೂಲರೂಪವು ಭಾವಿಸಲ್ಪಡುವುದೋ, ಆಗಲೇ ಮುಕ್ತಿ ಸಿದ್ಧವಾಗುವುದು ಆದರೂ, ಇದೆಲ್ಲವೂ ಹಾಗಿರಲಿ, ನಾನು ಈಗ ಇಲ್ಲಿ ಧನುರ್ಬಾಣಧರನಾಗಿಯೂ ಜಟಾವಲ್ಕಲಯುತವಾಗಿಯೂ ಇರುವ ನಿನ್ನ ಈ ದಿವ್ಯರೂಪವನ್ನೇ ಭಾವಿಸುತಿರುವೆನು. ಹೇ ರಘುನಂದನ! ಈ ರೂಪವೇ ಸರ್ವದಾ ನನ್ನ ಮನಸ್ಸಿನಲ್ಲಿ ನೆಲೆಸಿರುವಂತೆ ಅನುಗ್ರಹಿಸುವನಾಗು॥

ಎಲೈ ರಘುನಾಯಕನೆ! ಸರ್ವಜ್ಞನಾದ ಆ ಸಾಕ್ಷಾತ್ ಪರಮೇಶ್ವರನೂ ಕೂಡ, ಪಾರ್ವತೀದೇವಿಯೊಡಗೂಡಿ ಸರ್ವದಾ ನಿನ್ನ ರೂಪವನ್ನೇ ಹೃದಯದಲ್ಲಿ ಧ್ಯಾನಿಸುತ, ಕಾಶಿಯಲ್ಲಿ ಮುಮುಕ್ಷುಗಳಾದವರಿಗೆ ತಾರಕಬ್ರಹ್ಮನಾಮಕವಾದ 'ರಾಮರಾಮ' ಎಂಬ ನಿನ್ನ ಮಂತ್ರವನ್ನು ಉಪದೇಶಿಸುತ, ಸರ್ವದಾ ಸಂತುಷ್ಟಹೃದಯನಾಗಿ ವಾಸಮಾಡಿಕೊಂಡಿರುವನು॥೬೮-೬೯॥

ಆದುದರಿಂದ, ಎಲೈ ಜಾನಕೀನಾಯಕನೆ! ನೀನು ಸಾಕ್ಷಾತ್ ಪರಮಾತ್ಮನೆಂಬುದೇ ನಿಶ್ಚಯವು ಸಮಸ್ತಜನರೂ ನಿನ್ನ ಮಾಯೆಯಿಂದ ಮೋಹಿತರಾಗಿ ನಿನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿಯದಿರುವರು ॥೭೦॥

ಎಲೈ ಅಯೋಧ್ಯಾಧಿಪತಿಯೇ! ಸಕಲಲೋಕವಿಧಾಯಕನಾಗಿಯೂ ಪರಮಾತ್ಮನಾಗಿಯೂ ರಾಮಚಂದ್ರರೂಪದಲ್ಲಿ ಅವತರಿಸಿದವನಾಗಿಯೂ ಇರುವ ನಿನಗೆ ನಮಸ್ಕಾರವು. ಲಕ್ಷ್ಮಣನಿಂದ ಸೇವಿತನಾದವನೆ! ನಿನಗೆ ನಮಸ್ಕಾರವು ಎಲೈ ಜಗನ್ನಾಥನೆ! ನನ್ನನ್ನು ರಕ್ಷಿಸು. ನಿನ್ನ ಮಾಯೆಯು ನನ್ನನ್ನು ಆವರಿಸಿಕೊಳ್ಳದಂತೆ ಅನುಗ್ರಹಿಸು ॥೭೧॥

ಇತಿ ಸ್ತುತೋ ರಘುಶ್ರೇಷ್ಠೋ ಗನ್ಧರ್ವಂ ಪುನರಬ್ರವೀತ್ ॥೩೦॥
ತುಷ್ಟೋಽಹಂ ದೇವ ಗನ್ಧರ್ವ ಭಕ್ತ್ಯಾ ಸ್ತುತ್ಯಾ ಚ ತೇನಘ ।
ಯಾಹಿ ಮೇ ಪರಮಂ ಸ್ಥಾನಂ ಯೋಗಿಗಮ್ಯಂ ಸನಾತನಮ್ ॥೩೩॥

ಜಪನ್ತಿ ಯೇ ನಿತ್ಯಮನನ್ಯಬುದ್ಧ್ಯಾ
ಭಕ್ತ್ಯಾ ತ್ವಯೋಕ್ತಂ ಸ್ತವಮಾಗಮೋಕ್ತಮ್ ।
ತೇಽಜ್ಞಾನಸಂಭೂತಭವಂ ವಿಹಾಯ
ಮಾಂ ಯಾನ್ತಿ ನಿತ್ಯಾನುಭವಾನುಮೇಯಮ್ ॥೩೪॥

ಲಬ್ಧ್ವಾ ವರಂ ಸ ಗನ್ಧರ್ವೋ ವಿಮಾನೇನಾರ್ಕವರ್ಚಸಾ ।
ಯಯೌ ವಿಷ್ಣುಪುರಂ ರಾಮಸ್ಮರಣೇ ಫಲಮೀದೃಶಮ್ ॥೩೫॥
ತ್ಯಕ್ತ್ವಾಥ ವಿಪಿನಂ ಘೋರಂ ಸಿಂಹವ್ಯಾಘ್ರಾದಿದೂಷಿತಮ್ ।
ಶನೈರಾಪಾಶ್ರಮಪದಂ ಶಬರ್ಯಾ ರಘುನನ್ದನಃ ॥೩೬॥
ತೌ ತು ದೃಷ್ಟ್ವಾ ತದಾ ಸಿದ್ಧಾ ಸಮುತ್ಥಾಯ ಕೃತಾಞ್ಜಲಿಃ ।
ರಾಮಸ್ಯ ಪಾದೌ ಜಗ್ರಾಹ ಲಕ್ಷ್ಮಣಸ್ಯ ಚ ಧೀಮತಃ ॥೩೭॥

ಎಲೌ ಪಾರ್ವತಿ! ಈರೀತಿಯಾಗಿ ಆ ಗಂಧರ್ವನಿಂದ ಸ್ತುತಿಸಲ್ಪಟ್ಟ ರಾಮಚಂದ್ರನು, ಪುನಃ ಅವನನ್ನು ಕುರಿತು 'ಎಲೈ ಗಂಧರ್ವನೆ! ನಾನು ನಿನ್ನ ಭಕ್ತಿಯಿಂದಲೂ ಸ್ತುತಿಯಿಂದಲೂ ಸಂತುಷ್ಟನಾದೆನು ಎಲೈ ದೋಷರಹಿತನೆ! ಯೋಗಿಗಳಿಗೆ ಲಭ್ಯವಾಗಿಯೂ ಸನಾತನವಾಗಿಯೂ ಇರುವ ನನ್ನ ಪರಮಪದವಿಯನ್ನು ನೀನು ಹೊಂದುವನಾಗು ಈಗ ನಿನ್ನಿಂದ ಉಕ್ತವಾಗಿರುವ ವೇದಾರ್ಥಪ್ರತಿಪಾದಕವಾದ ಈ ಸ್ತುತಿಯನ್ನು ಯಾರು ನಿತ್ಯವೂ ಅನನ್ಯಚಿತ್ತರಾಗಿ ಭಕ್ತಿಯಿಂದ ಪಠಿಸುವರೋ, ಅವರು ಅಜ್ಞಾನಜನ್ಯವಾದ ಈ ಸಂಸಾರಬಂಧವನ್ನು ಕಳೆದುಕೊಂಡು-ಅನುಭವೈಕವೇದ್ಯನಾದ ನನ್ನ ಪದವಿಯನ್ನು ಹೊಂದುವರು' ಎಂದು ವರವನ್ನು ಕೊಟ್ಟನು॥೩೨-೩೪॥

ಆಗ ಈರೀತಿಯಾಗಿ ರಾಮನನಿಸಿಯಿಂದ ವರನ್ನು ಪಡೆದುಕೊಂಡು, ಆ ಗಂಧರ್ವನು ಸೂರ್ಯನಂತೆ ಪ್ರಜ್ವಲಿಸುತಿರುವ ವಿಮಾನದಲ್ಲಿ ಕುಳಿತು ವಿಷ್ಣುಪುರಾಲೋಕ್ಯವನ್ನು ಪಡೆದನು ಎಲೌ ಪಾರ್ವತಿ! ರಾಮನಾಮಸ್ಮರಣೆಯ ಫಲವು ಈರೀತಿಯಾಗಿರುವುದು ॥೩೫॥

ಆ ಬಳಿಕ, ಸಿಂಹ ವ್ಯಾಘ್ರ ಮೊದಲಾದುವುಗಳಿಂದ ಅತಿ ಭಯಂಕರವಾಗಿರುವ ಆ ಅರಣ್ಯವನ್ನು ಕಳೆದುಕೊಂಡು, ಶ್ರೀರಘುನಾಯಕನು ಮೆಲ್ಲಗೆ ಶಬರಿಯ ಆಶ್ರಮಪದಕ್ಕೆ ಬಂದವನಾದನು ॥೩೬॥

ಆಗ ತನ್ನ ಆಶ್ರಮಕ್ಕೆ ಬಂದ ಆ ರಾಮಲಕ್ಷ್ಮಣರನ್ನು ಕಂಡು, ಯೋಗಸಿದ್ಧಳಾದ ಶಬರಿಯು, ತಟ್ಟನೆ ಎದ್ದು ಅಂಜಲಿಬಂಧಮಾಡಿಕೊಂಡು, ಶ್ರೀರಾಮನ ಪಾದವನ್ನೂ ಪ್ರಾಜ್ಞಶಿರೋಮಣಿಯಾದ ಲಕ್ಷ್ಮಣನ ಪಾದವನ್ನೂ ಹಿಡಿದುಕೊಂಡಳು ॥೩೭॥

ಪ್ರತ್ಯುದ್ಗಮ್ಯ ಪ್ರಣಮ್ಯಾಥ ನಿವೇಶ್ಯ ಕುಶವಿಷ್ಟರೇ ।
ಪಾದಪ್ರಕ್ಷಾಳನಂ ಕೃತ್ವಾ ತತ್ತೋಯಂ ಪಾಪನಾಶನಮ್ ।
ಧೃತ್ವಾ ಚ ಶಿರಸಾ ಪೀತ್ವಾ ವನ್ಯೈಃ ಪುಷ್ಪೈರಪೂಜಯತ್ ॥೫೯॥
ಫಲಾನಿ ಚ ಸುಪಕ್ವಾನಿ ಮೂಲಾನಿ ಮಧುರಾಣಿ ಚ ।
ಸ್ವಯಮಾಸ್ವಾದ್ಯ ಮಾಧುರ್ಯಂ ಸಮೀಕ್ಷ್ಯ ಪರಭಕ್ತಿತಃ ॥೬೦॥
ಪಶ್ಚಾನ್ನಿವೇದಯಾಮಾಸ ರಾಘವಾಭ್ಯಾಂ ದೃಢವ್ರತಾ ॥೬೦॥
ತಾಮುವಾಚ ತತೋ ರಾಮಃ ಶ್ರಮಣೀಂ ಸಂಶಿತವ್ರತಾಮ್ ॥೬೧॥
ಕಚ್ಚಿತ್ ತೇ ನಿರ್ಜಿತಾವಿಘ್ನಾಃ ಕಚ್ಚಿತ್ ತೇ ವರ್ಧತೇ ತಪಃ ।
ಕಚ್ಚಿತ್ ತೇ ನಿಯತಃ ಕ್ರೋಧಃ ಆಹಾರಶ್ಚ ತಪೋಧನೇ ॥೬೨॥
ಕಚ್ಚಿತ್ ತೇ ನಿಯಮಾಃ ಪ್ರಾಪ್ತಾಃ ಕಚ್ಚಿತ್ ತೇ ನಿಯಮಃ ಸುಖಃ ।
ಕಚ್ಚಿತ್ ತೇ ಗುರುಶುಶ್ರೂಷಾ ಸಫಲಾ ಚಾರುಭಾಷಿಣಿ ।
ಕಚ್ಚಿತ್ ತೇ ಮನಸೋ ಧೈರ್ಯಂ ಕಚ್ಚಿತ್ ತೇ ವಿರತಿರ್ದೃಢಾ ॥೬೩॥

ಹೀಗೆ ಅವರಿಗೆ ಪ್ರತ್ಯುತ್ಥಾನವನ್ನೂ ನಮಸ್ಕಾರವನ್ನೂ ಮಾಡಿ, ಬಳಿಕ ದರ್ಭಾಸನದಲ್ಲಿ ಅವರನ್ನು ಕುಳ್ಳಿರಿಸಿ ಅವರ ಪಾದಗಳನ್ನು ತೊಳೆದು, ಪಾಪಪರಿಹಾರಕವಾದ ಆ ಪಾದತೀರ್ಥವನ್ನು ತನ್ನ ತಲೆಯಮೇಲೆ ಧರಿಸಿ, ಹೊಟ್ಟಗೂ ಪ್ರಾಶನಮಾಡಿ, ಆರಣ್ಯಕಗಳಾದ ಪುಷ್ಪಗಳಿಂದ ಅವರಿಬ್ಬರಿಗೂ ಪೂಜೆಮಾಡಿದಳು ॥೫೯॥

ದೃಢವ್ರತಳಾದ ಆ ಶಬರಿಯು, ಪಕ್ವವಾದ ಫಲಗಳನ್ನೂ, ಮಧುರವಾದ ಕಂದಮೂಲಗಳನ್ನೂ, ಮೊದಲು ತಾನು ಆಸ್ವಾದಿಸಿ, ಅವುಗಳ ಮಾಧುರ್ಯವನ್ನು ನೋಡಿ, ಬಳಿಕ ಮಹಾಭಕ್ತಿಯಿಂದ ರಾಮಲಕ್ಷ್ಮಣರಿಗ ಸಮರ್ಪಿಸಿದಳು ಅನಂತರ, ಮಹಾನಿಯಮಸಂಪನ್ನಳಾಗಿರುವ ಆ ಶಬರಿಯನ್ನು ಕುರಿತು ಶ್ರೀರಾಮನು ಹೀಗ ಹೇಳಿದನು ॥೫೯-೬೧॥

ಎಲೌ ತಪೋಧನಯೆ! ನಿನಗೆ ಇಲ್ಲಿ ವಿಘ್ನಗಳೆಲ್ಲವೂ ಪರಾಸ್ತಗಳಾಗಿರುವುವೆ? ತಪೋವೃದ್ಧಿಯು ಕ್ರಮವಾಗಿ ನಡೆಯುತ್ತಿದೆಯೆ? ನಿನಗೆ ಕೋಪವು ಜಿತವಾಗಿರುವುದೆ? ಆಹಾರವು ನಿನ್ನ ಅಧೀನದಲ್ಲಿರುವುದೆ? ॥೬೨॥

ನಿನಗೆ ನಿಯಮಗಳೆಲ್ಲವೂ ಸರಿಯಾಗಿ ನಡೆಯುವುವೆ? ಈ ತಪೋನಿಯಮವು ನಿನಗೆ ವಿಶೇಷ ಕ್ಲೇಶಕರವಾಗದಿರುವುದ? ಎಲೌ ಚಾರುಭಾಷಿಣಿ! ನೀನು ಮಾಡಿದ ಗುರುಶುಶ್ರೂಷೆಯು ಸಫಲವಾಗಿರುವುದೆ? ನಿನ್ನ ಮನಸ್ಸಿನಲ್ಲಿ ಸ್ಥೈರ್ಯವು ಚೆನ್ನಾಗಿರುವುದೆ? ನಿನ್ನ ಈ ವೈರಾಗ್ಯವು ದೃಢವಾಗಿದೆಯೆ? ॥೬೩॥

ತೇನೈವಂ ತಾಪಸೀ ಪೃಷ್ಟಾ ಸಾ ಸಿದ್ಧಾ ಸಿದ್ಧಸಮ್ಮತಾ ।
ಶಶಂಸ ಶಬರೀ ವೃದ್ಧಾ ರಾಮಾಯ ಪ್ರತ್ಯುಪಸ್ಥಿತಾ ॥೪೪॥
ಅದ್ಯ ಪ್ರಾಪ್ತಾ ತಪಸ್ಸಿದ್ಧಿಃ ತವ ಸನ್ದರ್ಶನಾನ್ಮಯಾ ।
ಅದ್ಯ ಮೇ ಸಫಲಂ ತಪ್ತಂ ಗುರವಶ್ಚ ಸುಪೂಜಿತಾಃ ॥೪೫॥
ಅದ್ಯ ಮೇ ಸಫಲಂ ಜನ್ಮ ಸ್ವರ್ಗಶ್ಚೈವ ಭವಿಷ್ಯತಿ ।
ತ್ವಯಿ ದೇವವರೇ ರಾಮ ಪೂಜಿತೇ ಪುರುಷರ್ಷಭ ॥೪೬॥
ತವಾಹಂ ಚಕ್ಷುಷಾ ಸೌಮ್ಯ ಪೂತಾ ಸೌಮ್ಯೇನ ಮಾನದ ।
ಗಮಿಷ್ಯಾಮ್ಯಕ್ಷಯಾಂ ಲೋಕಾಂ ತ್ವತ್ಪ್ರಸಾದಾದರಿನ್ದಮ ॥೪೭॥
ತವ ಸನ್ದರ್ಶನಂ ರಾಮ ಗುರೂಣಾಮಪಿ ಮೇ ನ ಹಿ ।
ಯೋಷಿನ್ಮೂಢಾತ್ಮಪ್ರಮೇಯಾತ್ಮ ಹೀನಜಾತಿಸಮುದ್ಭವಾ ॥೪೮॥
ತವ ದಾಸಸ್ಯ ದಾಸಾನಾಂ ಶತಸಂಖ್ಯೋತ್ತರಸ್ಯ ವಾ ।
ದಾಸೀತ್ವೇ ನಾಧಿಕಾರೋಸ್ತಿ ಕುತಃ ಸಾಕ್ಷಾತ್ ತವೈವ ಹಿ ॥೪೯॥

ಹೀಗೆಂದು ಶ್ರೀರಾಮನಿಂದ ಪ್ರಶ್ನೆಮಾಡಲ್ಪಟ್ಟವಳಾಗಿ, ಯೋಗಸಿದ್ಧಿಯನ್ನು ಪಡೆದವಳಾಗಿಯೂ ಸಿದ್ಧರಿಗೆಲ್ಲ ಬಹುಮಾನಪಾತ್ರಳಾಗಿಯೂ ಇರುವ ವೃದ್ಧಳಾದ ಆ ಶಬರಿಯು, ಶ್ರೀರಾಮನ ಹತ್ತಿರದಲ್ಲಿ ಭಕ್ತಿಯಿಂದ ನಿಂತುಕೊಂಡು ಹೀಗೆ ವಿಜ್ಞಾಪಿಸಿದಳು ॥೪೪॥

ಹೇ ಭಗವನ್! ನಿನ್ನ ದರ್ಶನಲಾಭವಾಗುದರಿಂದ, ಈಗ ನನ್ನ ತಪಸ್ಸಿದ್ಧಿಯು ಪ್ರಾಪ್ತವಾಯಿತು, ನನ್ನ ತಪಸ್ಸೆಲ್ಲವೂ ಈಗ ಫಲಿಸಿತು, ನಾನು ಮಾಡಿದ ಗುರುಪೂಜೆಯಲ್ಲವೂ ಈಗ ಸಾರ್ಥಕವಾಯ್ತು ॥೪೫॥

ಹೇ ಪುರುಷೋತ್ತಮ! ರಾಮಭದ್ರ! ಸಕಲದೇವದೇವನಾದ ನಿನ್ನನ್ನು ಪೂಜಿಸಿದ ಕಾರಣ, ಈಗ ನನ್ನ ಜನ್ಮವು ಸಫಲವಾಯ್ತು, ಸ್ವರ್ಗಸುಖವೂ ಈಗ ಪ್ರಾಪ್ತವಾಯ್ತು ॥೪೬॥

ಎಲೈ ಸೌಮ್ಯಮೂರ್ತಿಯೆ! ಸಕಲಲೋಕಸಂತೋಷಹೇತುವೆ! ಶತ್ರುನಿವಾರಕನೆ! ನಾನು ಈಗ ನಿನ್ನ ಕಟಾಕ್ಷದಿಂದ ಪರಿಪೂತಳಾಗಿ ನಿನ್ನ ಅನುಗ್ರಹದಿಂದ ಅಕ್ಷಯವಾದ ಪುಣ್ಯಲೋಕವನ್ನು ಪಡೆಯುವೆನು ॥೪೭॥

ಅಪ್ರಮೇಯರೂಪ! ರಾಮಭದ್ರ! ಸಾಕ್ಷಾತ್ತಾಗಿ ನಿನ್ನ ದರ್ಶನಲಾಭವು ನನ್ನ ಗುರುಗಳಿಗೂ ಸಿದ್ಧಿಸಲಿಲ್ಲ ನಾನಾದರೋ, ಸ್ವಭಾವತಃ ಹೆಂಗಸು, ಕೇವಲ ಮೂಢಾತ್ಮಳು, ನಿಕೃಷ್ಟ ಜಾತಿಯಲ್ಲಿ ಹುಟ್ಟಿದವಳು ನಿನ್ನ ದಾಸನಾದವನ ದಾಸರಿಗೂ-ಅವರ ದಾಸರಿಗೂ ಕೂಡ ನಾನು ದಾಸಿಯಾಗಿರಲು ಅಧಿಕಾರವಿಲ್ಲದವಳಾಗಿರುವೆನು ಹೀಗಿರುವಾಗ, ಸಾಕ್ಷಾತ್ತಾಗಿ ನಿನಗೇ ದಾಸಿಯಾಗುವಷ್ಟು ಯೋಗ್ಯತೆ ನನಗೆಲ್ಲಿ ಬಂದೀತು ? ॥೪೮-೪೯॥

ಕಥಂ ರಾಮಾದ್ಯ ಮೇ ದೃಷ್ಟಃ ತ್ವಂ ವಾಚಾಮಪ್ಯಗೋಚರಃ ।
ಸ್ತೋತುಂ ನ ಜಾನೇ ದೇವೇಶ ಕಿಂ ಕರೋಮಿ ಪ್ರಸೀದ ಮೇ ॥೫೦॥

ಶ್ರೀರಾಮಉವಾಚ.

ಪುಂಸ್ತ್ವಸ್ತ್ರೀತ್ವವಿಶೇಷೋ ವಾ ಜಾತಿನಾಮಾಶ್ರಮಾದಯಃ ।
ನ ಕಾರಣಂ ಮದ್ಭಜನೇ ಭಕ್ತಿರೇವ ಹಿ ಕಾರಣಮ್ ॥೫೧॥
ಯದಾ ಜ್ಞಾನತಪೋಭಿರ್ವಾ ವೇದಾಧ್ಯಯನಕರ್ಮಭಿಃ ।
ನೈವ ದೃಶ್ಯಮಹಂ ಶಕ್ಯೋ ಮದ್ಭಕ್ತಿವಿಮುಖೈಃ ಸದಾ ।
ತಸ್ಮಾದ್ಭಾಮಿನಿ ಸಂಕ್ಷೇಪಾತ್ ವಕ್ಷ್ಯೇಹಂ ಭಕ್ತಿಕಾರಣಮ್ ॥೫೨॥
ಸತಾಂ ಸಙ್ಗತಿರೇವಾತ್ರ ಸಾಧನಂ ಪ್ರಥಮಂ ಸ್ಮೃತಮ್ ।
ದ್ವಿತೀಯಂ ಮತ್ಕಥಾಲಾಪಃ ತೃತೀಯಂ ಮದ್ಗುಣೋದಿರಣಮ್ ॥೫೩॥
ವ್ಯಾಖ್ಯಾತೃತ್ವಂ ಮದ್ವಚಸಾಂ ಚತುರ್ಥಂ ಸಾಧನಂ ಭವೇತ್ ॥೫೪॥
ಆಚಾರ್ಯೋಪಾಸನಂ ಭದ್ರೇ ಮದ್ಬುದ್ಧ್ಯಾ ಮಾಯಯಾ ನ ಚ ।
ಪಞ್ಚಮಂ ಪುಣ್ಯಶೀಲತ್ವಂ ಯಮಾದಿ ನಿಯಮಾದಿ ಚ ॥೫೫॥

ಪ್ರಭೋ! ರಾಮಭದ್ರ! ನಿನ್ನ ಸ್ವರೂಪವನ್ನು ಮಾತಿನಿಂದ ಹೇಳುವುದೂ ಅಸಾಧ್ಯವಾಗಿರುವುದಲ್ಲ! ಇಂತಹ ನೀನು ಈಗ ನನಗೆ ಪ್ರತ್ಯಕ್ಷನಾಗಿ ಬಂದುದು ಹೇಗೆ? ಹೇ ದೇವೇಶ! ನನಗೆ ಸ್ತೋತ್ರಮಾಡುವುದಕ್ಕೆ ಬಾರದು ಎನುಮಾಡಬೇಕೋ ತಿಳಿಯದು ನೀನೇ ನನ್ನಲ್ಲಿ ಪ್ರಸನ್ನನಾಗು ॥೫೦॥

ಇದನ್ನು ಕೇಳಿ ಶ್ರೀರಾಮನು ಹೇಳುವನು —

ಎಲೌ ಶಬರಿ! ಸ್ತ್ರೀಪುರುಷಭೇದವಾಗಲಿ-ಜಾತಿ ನಾಮ ಆಶ್ರಮಾದಿಗಳಾಗಲಿ-ನನ್ನ ಸೇವೆಯಲ್ಲಿ ಕಾರಣವಲ್ಲ, ಭಕ್ತಿಯೊಂದೇ ಮುಖ್ಯಕಾರಣವೆನ್ನಿಸುವುದು ॥೫೧॥

ಎಲೌ ಶಬರಿ! ನನ್ನಲ್ಲಿ ಭಕ್ತಿಯಿಲ್ಲದವರಿಗೆ, ಜ್ಞಾನದಿಂದಲಾಗಲಿ ತಪಸ್ಸಿನಿಂದಲಾಗಲಿ ವೇದಾಧ್ಯಯನದಿಂದಲಾಗಲಿ ಯಜ್ಞಾದಿಕರ್ಮಗಳಿಂದಲಾಗಲಿ ಎಂದಿಗೂ ಸುತರಾಂ ನಾನು ಲಭ್ಯನಲ್ಲ, ಅದುಕಾರಣ, ನನ್ನ ಭಕ್ತಿಗ ಸಾಧನವನ್ನು ಸಂಕ್ಷೇಪದಲ್ಲಿ ನಿನಗೆ ಹೇಳುವೆನು ॥೫೨॥

ನನ್ನಲ್ಲಿ ಭಕ್ತಿಹುಟ್ಟುವುದಕ್ಕೆ, ಸತ್ಪುರುಷರ ಸಮಾಗಮವೇ ಪ್ರಥಮಸಾಧನವೆನ್ನಿಸುವುದು ನನ್ನ ಕಥೆಯ ಆಲಾಪವು ದ್ವಿತೀಯಸಾಧನವು ನನ್ನ ಗುಣಗಳ ಕಥನೆಯು ತೃತೀಯಸಾಧನವು ॥೫೩॥

ನನ್ನ ಮಾತುಗಳಿಗೆ ವ್ಯಾಖ್ಯಾನಮಾಡುವುದು ನಾಲ್ಕನೆಯ ಸಾಧನವಾಗಿರುವುದು ಎಲೌ ಪುಣ್ಯಶೀಲಳೆ! ಆಚಾರ್ಯನೇ ನಾನೆಂಬ ಬುದ್ಧಿಯನ್ನಿಟ್ಟು ಸ್ವಲ್ಪವೂ ಕಪಟವಿಲ್ಲದೆ ಅವನನ್ನು ಸೇವಿಸುವುದೂ ಯಮ ನಿಯಮಾದಿಗಳೂ ಅಯ್ದನೆಯ ಸಾಧನವೆನ್ನಿಸುವುದು ॥೫೪-೫೫॥

ನಿಷ್ಕಾ ಮತ್ಪೂಜನೇ ನಿತ್ಯಂ ಷಷ್ಠಂ ಸಾಧನಮುತ್ತಮಮ್ ।
ಮಮ ಮನ್ತ್ರೋಪಾಸನಂ ಚ ಸಾಙ್ಗಂ ಸಪ್ತಮಮುಚ್ಯತೇ ॥೫೬॥
ಮದ್ಭಕ್ತೇಷ್ವಧಿಕಾ ಪೂಜಾ ಸರ್ವಭೂತೇಷು ಮನ್ಮತಿಃ ।
ಬಾಹ್ಯೇರ್ಥೇಷ್ವ ವಿರಾಗಿತ್ವಂ ಶಮಾದಿಸಹಿತಂ ತಥಾ ।
ಅಷ್ಟಮಂ ನವಮಂ ತತ್ತ್ವವಿಚಾರೋ ಮಮ ಭಾಮಿನಿ ॥೫೭॥
ಏವಂ ನವವಿಧಂ ಭಕ್ತಿಸಾಧನಂ ಯಸ್ಯಕಸ್ಯ ವಾ ।
ಭಕ್ತಿಃ ಸಂಜಾಯತೇ ಪ್ರೇಮಲಕ್ಷಣಾ ಶುಭಲಕ್ಷಣೇ ॥೫೮॥
ಭಕ್ತ್ಯುತ್ಥಂ ಸಂಜಾತಮಾತ್ರಾಯಾಂ ಭವತ್ಯನುಭವಸ್ತದಾ ।
ಮಮಾನುಭವಸಿದ್ಧಸ್ಯ ಮುಕ್ತಿಸ್ತತ್ರೈವ ಜನ್ಮನಿ ।
ಸ್ಯಾತ್ ತಸ್ಮಾತ್ ಕಾರಣಂ ಭಕ್ತಿಃ ಮೋಕ್ಷಸ್ಯೇತಿ ಸುನಿಶ್ಚಿತಮ್ ॥೫೯॥
ಪ್ರಥಮಂ ಸಾಧನಂ ಯಸ್ಯ ಭವೇತ್ ತಸ್ಯ ಕ್ರಮೇಣ ತು ।
ಭವೇತ್ ಸರ್ವಂ ತತೋ ಭಕ್ತಿಃ ಮುಕ್ತಿರೇವೇತಿ ನಿಶ್ಚಿತಮ್ ।೬೦।
ಏವಂ ಸಾಧನಸಂಪತ್ತಿಃ ತವಾಸ್ತು ಸುದೃಢವ್ರತೇ ।
ತಸ್ಮಾನ್ಮದ್ಭಕ್ತಿಯುಕ್ತಾ ತ್ವಂ ಅತೋಹಂ ತ್ವಾಮುಪಸ್ಥಿತಃ ॥೬೧॥
ಇತೋ ಮದ್ದರ್ಶನಾನ್ಮುಕ್ತಿಃ ತವ ನಾಸ್ತ್ಯತ್ರ ಸಂಶಯಃ ॥೬೨॥

ನಿತ್ಯವೂ ನನ್ನ ಪೂಜೆಯಲ್ಲಿ ಆಸಕ್ತಿಯು ಉತ್ತಮವಾದ ಆರನೆಯ ಸಾಧನವು ಸಾಂಗವಾಗಿ ನನ್ನ ಮಂತ್ರವನ್ನು ಪುರಶ್ಚರಣೆಮಾಡುವುದೇ ಸಪ್ತಮಸಾಧನವೆಂದು ಹೇಳಲ್ಪಡುವುದು ॥

ಎಲೈ ಶಬರಿ! ನನ್ನ ಭಕ್ತರನ್ನು ಹೆಚ್ಚಾಗಿ ಪೂಜಿಸುವುದೂ, ಸರ್ವಭೂತಗಳನ್ನೂ ನಾನೆಂದು ತಿಳಿದುಕೊಳ್ಳುವುದೂ, ಬಾಹ್ಯವಿಷಯಗಳಲ್ಲಿ ವಿರಕ್ತಿಯೂ, ಶಮದಮಾದಿ ಸಂಪತ್ತಿಯೂ ಕೂಡ, ಎಂಟನೆಯ ಸಾಧನವೆನ್ನಿಸುವುದು ನನ್ನ ತತ್ವವನ್ನು ವಿಚಾರಮಾಡುವಿಕೆಯೇ ಒಂಭತ್ತನೆಯ ಸಾಧನವು ॥೫೭॥

ಎಲೌ ಶುಭಲಕ್ಷಣೆ! ಈಗ ಹೇಳಲ್ಪಟ್ಟ ಈ ನವವಿಧವಾದ ಭಕ್ತಿಸಾಧನವು ಯಾವನಿಗಿರುವುದೋ, ಅವನಿಗೆ ನನ್ನಲ್ಲಿ ಪ್ರೇಮರೂಪವಾದ ಭಕ್ತಿಯುದಯಿಸುವುದು ॥೫೮॥

ಭಕ್ತಿಹುಟ್ಟಿದ ಕ್ಷಣವೇ ನನ್ನ ಅನುಭವವುಂಟಾಗುವುದು ನನ್ನ ಅನುಭವದಲ್ಲಿ ಸಿದ್ಧಿಪಡೆದವನಿಗೆ ಆ ಜನ್ಮದಲ್ಲಿಯೇ ಮುಕ್ತಿ ಲಭಿಸುವುದು ಆದುದರಿಂದ, ಮೋಕ್ಷಕ್ಕೆ ನನ್ನಲ್ಲಿ ಭಕ್ತಿಯೇ ಕಾರಣವೆಂದು ಚೆನ್ನಾಗಿ ಸಿದ್ಧಾಂತಿತವಾಗುವುದು ॥೫೯॥

ಈಗ ಹೇಳಿದ ಒಂಭತ್ತುಬಗೆಯ ಸಾಧನಗಳಲ್ಲಿ ಮೊದಲನೆಯದಾದ ಸಾಧುಸಮಾಗಮವೆಂಬ ಸಾಧನವೊಂದು ಯಾವನಿಗುಂಟಾಗುವುದೋ, ಅವನಿಗೆ ಕ್ರಮೇಣ ಇತರಸಾಧನಗಳೂ ಸಿದ್ಧಿಸುವುವು ಆಮೇಲೆ ಭಕ್ತಿಯು ಅಚಲವಾಗುವುದು. ಬಳಿಕ ಮುಕ್ತಿಯೂ ಆಗಿಯೇ ಆಗುವು

ಶ್ರೀಶಿವಉವಾಚ

ಇತಿ ಸಂಬೋಧಿತಾ ತೇನ ಶಬರೀ ಭಕ್ತಿಸಾಧನೈಃ ।
ದೃಢಭಕ್ತಿಮತೀ ರಾಮೇ ಕಿಞ್ಚಿದ್ವಕ್ತುಮುಪಾಕ್ರಮತ್ ।
ತ್ವಯೇಚ್ಛಾಮ್ಯಭ್ಯನುಜ್ಞಾತಾ ತ್ಯಕ್ತುಮೇತತ್ ಕಳೇಬರಮ್ ॥೬೫॥
ಧರ್ಮಿಷ್ಠಂ ತದ್ವಚಃ ಶ್ರುತ್ವಾ ವಿಸ್ಮಯಂ ಪ್ರಾಪ ರಾಘವಃ ॥೬೪॥
ತಾಮುವಾಚ ತತೋ ರಾಮಃ ಶ್ರಮಣೀಂ ಸಂಶಿತವ್ರತಾಮ್ ।
ಅರ್ಚಿತೋಽಹಂ ತ್ವಯಾ ಭದ್ರೇ ಗಚ್ಛ ಕಾಮಂ ಯಥಾಸುಖಮ್ ॥೬೫॥
ಇತಿ ರಾಮಾಭ್ಯನುಜ್ಞಾತಾ ಸಾ ಪ್ರವಿಶ್ಯ ಹುತಾಶನಮ್ ।
ರಾಮಪ್ರಸಾದಾಚ್ಛಬರೀ ಮೋಕ್ಷಂ ಪ್ರಾಪಾತಿದುರ್ಲಭಮ್ ॥೬೬॥
ಕಿಂ ದುರ್ಲಭಂ ಜಗನ್ನಾಥೇ ಶ್ರೀರಾಮೇ ಭಕ್ತವತ್ಸಲೇ ।
ಪ್ರಸನ್ನೇಽತಿಮಜನ್ಮಾಪಿ ಶಬರೀ ಮುಕ್ತಿಮಾಪ ಸಾ ॥೬೭॥

ದೆಂದು ನಿಶ್ಚಯವು ಹೀಗಿರುವುದರಿಂದ, ಈಗ ನಿನಗೆ ನನ್ನ ದರ್ಶನಲಾಭವಾಗಿರುವಕಾರಣ ಮುಕ್ತಿ ಸಿದ್ಧವಾಗಿಯೇ ಇರುವುದು ಇದರಲ್ಲಿ ಸಂಶಯವಿಲ್ಲ ॥೬೦-೬೨॥

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಏಲೌ ಪ್ರಿಯ! ಪಾರ್ವತಿ! ಈರೀತಿಯಾಗಿ ಶ್ರೀರಾಮನಿಂದ ಉಪದೇಶಿಸಲ್ಪಟ್ಟ ಆ ಶಬರಿಯು, ಭಕ್ತಿಸಾಧನಗಳಿಂದ ಶ್ರೀರಾಮನಲ್ಲಿ ದೃಢವಾದ ಭಕ್ತಿಯುಳ್ಳವಳಾಗಿ, ಸ್ವಲ್ಪ ಮಾತನಾಡುವುದಕ್ಕುಪಕ್ರಮಿಸಿ 'ಸ್ವಾಮೀ! ನಿನು ಅನುಜ್ಞೆಕೊಟ್ಟರೆ ಈ ಕಳೇಬರವನ್ನು ಈಗಲೇ ಬಿಟ್ಟುಬಿಡಬೇಕೆಂದು ಇಚ್ಛಿಸುವೆನು' ಎಂದು ವಿಜ್ಞಾಪಿಸಿದಳು ॥೬೩॥

ಆಗ ಮಹಾಧರ್ಮಯುಕ್ತವಾದ ಅವಳ ಮಾತನ್ನು ಕೇಳಿ, ಶ್ರೀರಾಮನು ಅತಿಯಾಗಿ ಆಶ್ಚರ್ಯಪಟ್ಟನು ಬಳಿಕ, ಮಹಾನಿಯಮಸಂಪನ್ನೆಯಾದ ಆ ಶಬರಿಯನ್ನು ಕುರಿತು 'ಎಲೌ ಭದ್ರೆ! ನೀನು ನನ್ನನ್ನು ಚನ್ನಾಗಿ ಅರ್ಚಿಸಿರುವೆ ಈಗ ನಿನಗಿಷ್ಟಬಂದಂತೆ ಸುಖವಾಗಿ ಪುಣ್ಯ ಲೋಕಗಳಿಗೆ ಹೋಗು' ಎಂದು ಹೇಳಿದನು ॥೬೪-೬೫॥

ಈರೀತಿಯಾಗಿ ಶ್ರೀರಾಮನಿಂದ ಅನುಜ್ಞೆಮಾಡಲ್ಪಟ್ಟ ಆ ಶಬರಿಯು, ಅಗ್ನಿಯನ್ನು ಪ್ರವೇಶಿಸಿ, ಶ್ರೀರಾಮನ ಅನುಗ್ರಹದಿಂದ, ಮಹಾಮುನಿಗಳಿಗೂ ಅತಿ ದುರ್ಲಭವಾದ ಮೋಕ್ಷವನ್ನು ಪಡೆದುಬಿಟ್ಟಳು ॥೬೬॥

ನಿಖಿಲಜಗನ್ನಾಯಕನೂ ಭಕ್ತವತ್ಸಲನೂ ಆದ ಶ್ರೀರಾಮನು ಪ್ರಸನ್ನನಾದರೆ, ಈ ಲೋಕದಲ್ಲಿ ಯಾವುದುತಾನೆ ದುರ್ಲಭವು? ಶ್ರೀರಾಮನೆ ಅನುಗ್ರಹಬಲದಿಂದ, ನೀಚಜಾತಿಯವ

ಕಿಂಪುನರ್ಬ್ರಾಹ್ಮಣಾಮುಖ್ಯಾಃ ಪುಣ್ಯಾಃ ಶ್ರೀರಾಮಚಿನ್ತಕಾಃ ।
ರಾಮಸ್ಯ ಮುಕ್ತಿಮಾಪ್ನೋತಿ ಕಿಂಪುನರ್ಭಕ್ತಿವಾನ್ ಹರೌ ॥೬೪॥
ಪತಿತೋ ನೀಚಜಾತಿರ್ವಾ ಭ್ರಾನ್ತ್ಯಾ ವಾ ನಾಮ ಕೀರ್ತಯನ್ ।
ಮುಕ್ತಿಂ ಯಾತೀತಿ ತದ್ಭಕ್ತ್ಯಾ ಮುಕ್ತಿರೇವ ನ ಸಂಶಯಃ ॥೬೫॥

ಇತಿ ಶ್ರೀಮದರಣ್ಯಕಾಣ್ಡೇ ಕಬನ್ಧಶಬರ್ಯೋರ್ಮುಕ್ತಿಪ್ರದಾನಕಥನಂ
ನಾಮ ಏಕೋನವಿಂಶಃ ಸರ್ಗಃ.



ಳಾಗಿದ್ದರೂ ಶಬರಿಯು ಮುಕ್ತಿಯನ್ನು ಪಡೆದುಬಿಟ್ಟಳು, ಬ್ರಾಹ್ಮಣಜನ್ಮನೆತ್ತಿ ಸರ್ವದಾ ಶ್ರೀ ರಾಮಧ್ಯಾನವನ್ನು ಮಾಡುತಿರುವ ಪುಣ್ಯಾತ್ಮರಾದ ಶ್ರೀರಾಮಭಕ್ತಾಗ್ರೇಸರರು ಮುಕ್ತಿಯನ್ನು ಪಡೆಯುವರೆಂಬುದನ್ನು ಹೇಳುವುದೇನು? ಶ್ರೀರಾಮನಲ್ಲಿ ಭಕ್ತಿಯನ್ನಿಟ್ಟರೆ ಎಂಥವರಿಗೂ ಮುಕ್ತಿ ಯುಂಟಾಗೀಯೇ ಆಗುವುದು ಇದರಲ್ಲಿ ಸಂಶಯವಿಲ್ಲ ॥೬೨-೬೩॥

ಪತಿತನಾಗಲಿ, ನೀಚಜಾತಿಯವನಾಗಲಿ, ಭ್ರಮೆಯಿಂದ ಶ್ರೀರಾಮನಾಮವನ್ನು ಉಚ್ಚ ರಿಸಿದಾಗ್ಗೂ ಮುಕ್ತಿಪಾತ್ರನಾಗುವನು ಇನ್ನು ಶ್ರೀಹರಿಯಾದ ರಾಮನಲ್ಲಿ ಸರ್ವದಾ ಭಕ್ತಿಯಿಟ್ಟಿ ರುವವನ ವಿಷಯವನ್ನು ಹೇಳುವುದೇನು ? ॥೬೪॥

ಇದು ಅರಣ್ಯಕಾಂಡದಲ್ಲಿ ಕಬಂಧನಿಗೂ ಶಬರಿಗೂ ಮುಕ್ತಿಪ್ರದಾನ ಕಥನವೆಂಬ
ಹತ್ತೊಂಭತ್ತನೆಯ ಸರ್ಗವು



ಅಥ ಶ್ರೀಮದರಣ್ಯಕಾಣ್ಡೇ ವಿಂಶಃ ಸರ್ಗಃ.

ಶ್ರೀಶಿವಉವಾಚ

ಅತ್ರಾಪ್ಯುದಾಹರನ್ತೀಮಂ ಇತಿಹಾಸಂ ಪುರಾತನಮ್ ।
ಅವನ್ತೀವಿಷಯೇ ಕಶ್ಚಿತ್ ಬ್ರಾಹ್ಮಣೋ ವೇದಪಾರಗಃ ।
ಶಾಸ್ತ್ರಾಧ್ಯಯನಸಮ್ಪನ್ನೋ ವಿದ್ಯಾಧರಇತಿ ಶ್ರುತಃ ॥೧॥
ಧನಿನಾಂ ಶ್ರೋತ್ರಿಯಾಣಾಂ ಚ ಸ್ವಾಧ್ಯಾಯವ್ರತಶಾಲಿನಾಮ್ ।
ಕುಲೇ ಜಾತೋ ವಿಶೇಷೇಣ ಸ್ನಾನಾನುಷ್ಠಾನತತ್ಪರಃ ॥೨॥
ಸ್ವವಯಸ್ಯೈರ್ದ್ವಿಜಗಣೈಃ ವೇದಪಾರರತೋಪಿ ಸಃ ।
ಸತ್ಕನ್ಯಾಂ ಶ್ರೋತ್ರಿಯಕುಲೇ ಪರಿಣೀಯ ಶುಚಿಸ್ಮಿತಾಮ್ ॥೩॥
ಮನ್ದಹಾಸೇತಿ ವಿಖ್ಯಾತಾಂ ಶ್ಯಾಮಾಂ ಸರ್ವಾಙ್ಗಸುನ್ದರೀಮ್ ।
ಸದ್ವಿಜೋಗ್ನೀನ್ ಸ್ನಾತಿ ಕಾಲೇ ಜುಹೋತಿ ಸ್ಮ ವಿಧಾನತಃ ॥೪॥
ಏವಂಭೂತೋ ದ್ವಿಜವರೋ ವೇದವಾದಬಹಿಷ್ಕೃತೈಃ ।
ಕದಾಚಿತ್ ಕೃತಸಂವಾದಃ ತತ್ರ ಸಭ್ಯಮರೋಚಯತ್ ॥೫॥

ಅರಣ್ಯಕಾಂಡದಲ್ಲಿ ಇಪ್ಪತ್ತನೆಯ ಸರ್ಗವು.

ಪುನಃ ಶ್ರೀಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಈ ರಾಮಭಕ್ತಿಯ ಪ್ರಾಶಸ್ತ್ಯವಿಷಯದಲ್ಲಿ, ಇದೊಂದು ಪುರಾತನವಾದ ಇತಿಹಾಸವನ್ನು ದೊಡ್ಡವರು ಹೇಳುವರು ಅದೇನೆಂದರೆ,—ಅವಂತೀದೇಶದಲ್ಲಿ, ವೇದಪಾರಗನೂ ಶಾಸ್ತ್ರಾಧ್ಯಯನ ಸಂಪನ್ನನೂ ಆದ ವಿದ್ಯಾಧರನೆಂಬ ಒಬ್ಬಬ್ರಾಹ್ಮಣನಿದ್ದನು ಅವನು, ಧನಿಕರೂ ವೇದವ್ರತ ಸಂಪನ್ನರೂ ಆದ ಶ್ರೋತ್ರಿಯರ ವಂಶದಲ್ಲಿ ಹುಟ್ಟಿದವನು, ವಿಶೇಷವಾಗಿ ಸ್ನಾನಸಂಧ್ಯಾವಂದನಾದಿ ಸತ್ಕರ್ಮಾಚರಣೆಯಲ್ಲಿ ನಿರತನಾಗಿದ್ದನು ॥೧-೨॥

ಆ ಬ್ರಾಹ್ಮಣಶ್ರೇಷ್ಠನು, ಸರ್ವದಾ ತನ್ನ ಸಹಪಾಠಿಗಳೂಡನೆ ವೇದಾಧ್ಯಯನದಲ್ಲಿ ನಿರತನಾಗಿದ್ದರೂ, ಶ್ರೋತ್ರಿಯರ ವಂಶದಲ್ಲಿ ಹುಟ್ಟಿದವಳಾಗಿಯೂ ಶುಚಿಸ್ಮಿತೆಯಾಗಿಯೂ ಸರ್ವಾಂಗಸುಂದರಿಯಾಗಿಯೂ ಇರುವ ಪ್ರಾಪ್ತವಯಸ್ಕಳಾದ ಮಂದಹಾಸೆಯೆಂಬ ಒಬ್ಬಕನ್ಯಕೆಯನ್ನು ವಿವಾಹ ಮಾಡಿಕೊಂಡು, ಆಯಾಕಾಲಗಳಲ್ಲಿ ಯಥಾವಿಧಿಯಾಗಿ ಸ್ನಾನ ದಾನ ಹೋಮಾದಿಗಳನ್ನು ಮಾಡಿಕೊಂಡಿದ್ದನು ॥೩-೪॥

ಇಷ್ಟು ಪ್ರಶಸ್ತನಾಗಿದ್ದ ಆ ವಿದ್ಯಾಧರನೆಂಬ ಬ್ರಾಹ್ಮಣೋತ್ತಮನು, ಒಂದುಸಮಯದಲ್ಲಿ ವೇದಬಹಿಷ್ಕೃತರಾದ ಪಾಷಂಡರೊಡನೆ ಸಂಭಾಷಣೆ ಮಾಡಿದವನಾಗಿ, ಅವರಲ್ಲಿಯೇ ಸ್ನೇಹವನ್ನು ಬೆಳೆಯಿಸಿದನು ॥೫॥

ವಿಹಾಯ ವೈದಿಕಾನ್ ಧರ್ಮಾನ್ ಶ್ರುತಿಸ್ಮೃತ್ಯುರರೀಕೃತಾನ್ ।
ಪಾಷಣ್ಡೈಃ ಕೃತಸಂಸರ್ಗಃ ಪರದಾರಪರಾಯಣಃ ॥೬॥
ವೇಶಾವ್ಯತಿರಭೂನ್ನಿತ್ಯಂ ದ್ರವ್ಯತ್ಯಾಗಕೃತಾದರಃ ॥೭॥
ಏವಂ ಧನೇಷು ಗಚ್ಛತ್ಸು ವಿಭಜ್ಯ ಭ್ರಾತರೋ ಧನಮ್ ।
ಉಪೇಕ್ಷಾಞ್ಚಕ್ರುರನಿಶಂ ತಂ ದ್ವಿಜಂ ವೇದದೂಷಕಮ್ ॥೮॥
ನಷ್ಟೇಷು ದ್ರವ್ಯಜಾತೇಷು ಸ್ವದಾರನಿರತೋಭವತ್ ।
ಸಾ ಪತ್ನೀ ತು ಕ್ಷುಧಾ ದಗ್ಧಾ ಪಣ್ಯತ್ವಂ ಗಮಿತಾ ಶುಭಾ ॥೯॥
ಹತಾ ರಾಮೇತಿ ವಿಜ್ಞಾಯ ಚಿನ್ತಯಾನೋ ದಿವಾನಿಶಮ್ ।
ವಿಷಯೇಷ್ವನುರಕ್ತೋಸೌ ಹಾರಾಮೇತಿ ರುರೋದ ಹ ॥೧೦॥
ಇಮಂ ಶಬ್ದಂ ಸುಬಹುಶಃ ಕುರ್ವನ್ ಸಂಚರತಿ ಕ್ಷಿತೌ ।
ಏವಂ ಕಾಲೇ ಬಹು ಗತೇ ಗತಕಲ್ಮಷಪಞ್ಜರಃ ।
ರಾಮಸ್ಮರಣಮಾಹಾತ್ಮ್ಯಾತ್ ಜೀವನ್ಮುಕ್ತಶ್ಚಚಾರ ಸಃ ॥೧೧॥

ಒಳಕ ಆ ಪಾಷಂಡರೊಡನೆ ಸಂಸರ್ಗಮಾಡಿಕೊಂಡು, ಅವರ ಸಹವಾಸದೋಷದಿಂದ ಶ್ರುತಿಸ್ಮೃತ್ಯುಕ್ತವಾದ ಸಮಸ್ತವೈದಿಕಧರ್ಮಗಳನ್ನೂ ಪರಿತ್ಯಜಿಸಿ, ಸರ್ವದಾ ವೇಶ್ಯಾಲಂಪಟನಾಗಿ, ತನ್ನ ದ್ರವ್ಯವನ್ನೆಲ್ಲ ವೇಶ್ಯೆಯರಿಗೆ ಕೊಡಲುಪಕ್ರಮಿಸಿದನು ॥೬-೭॥

ಹೀಗೆ ತಮ್ಮ ಧನವೆಲ್ಲ ಹೋಗುತಿರಲಾಗಿ, ಅವನ ಸಹೋದರರೆಲ್ಲರೂ ತಂತಮ್ಮ ದ್ರವ್ಯವನ್ನು ವಿಭಾಗಮಾಡಿಕೊಂಡುಬಿಟ್ಟು, ವೇದನಿಂದಕನಾದ ಆ ಬ್ರಾಹ್ಮಣನನ್ನು ಸರ್ವದಾ ಉಪೇಕ್ಷಿಸಿಬಿಟ್ಟರು ॥೮॥

ಅನಂತರ, ತನ್ನ ದ್ರವ್ಯಸಮುದಾಯವೆಲ್ಲವೂ ನಷ್ಟವಾದ ಬಳಿಕ, ವೇಶ್ಯೆಯಿಂದ ನಿರಾಕೃತನಾದ ಅವನು ತನ್ನ ಪತ್ನಿಯಲ್ಲಿಯೇ ಆಸಕ್ತನಾದನು. ಅಷ್ಟರೊಳಗಾಗಿ, ಹೊಟ್ಟಿಗಿಲ್ಲದೆ ಹಸಿವಿನಿಂದ ತಪ್ತಳಾಗಿಹೋದ ಅವನ ಪತ್ನಿಯು ಮರಣಹೊಂದಿಬಿಟ್ಟಳು ॥೯॥

ಆಗ ತನ್ನ ರಾಮೆ(ಸ್ತ್ರೀ)ಯು ಮೃತಳಾದುದನ್ನು ತಿಳಿದು, ಕೇವಲ ವಿಷಯಾಸಕ್ತನಾದ ಆ ಬ್ರಾಹ್ಮಣನು ರಾತ್ರಿ ಹಗಲೂ ಅವಳನ್ನೇ ಚಿಂತಿಸುತ, ಹಾ ರಾಮಾ! (ಅಯ್ಯೋ! ಕಾ-ತೇ) ಎಂದು ಅಳಲುಪಕ್ರಮಿಸಿದನು ॥೧೦॥

ಹೀಗೆ ತನ್ನ ಆ ರಮಣಿಯನ್ನು ಉದ್ದೇಶಿಸಿಕೊಂಡು 'ಹಾ ರಾಮಾ' ಎಂದು ಒಹಳವಿಧವಾಗಿ ಗೋಳಿಡುತ ಅವನು ಭೂಮಿಯಲ್ಲಿ ಸಂಚರಿಸುತಿದ್ದನು ಹೀಗೆ ಬಹುಕಾಲಕಳೆದಮೇಲೆ 'ರಾಮಾ' ಎಂಬ ಶಬ್ದದಲ್ಲಿದ್ದ 'ರಾಮ' ಎಂಬ ವರ್ಣಗಳನ್ನು ಸ್ಮರಣೆಮಾಡಿದ ಮಹಿಮೆಯಿಂದ ತನ್ನ ಪಾಪ ಪಂಜರವನ್ನೆಲ್ಲ ಕಳೆದುಕೊಂಡು, ಆ ಬ್ರಾಹ್ಮಣನು ಜೀವನ್ಮುಕ್ತನಾಗಿ ಸಂಚರಿಸಲುಪಕ್ರಮಿಸಿದನು ॥೧೧॥

ಏವಂಭೂತಂ ದ್ವಿಜವರಂ ಕಿಙ್ಕರಾಃ ಕಾಲಚೋದಿತಾಃ ।
ಸಂಗೃಹ್ಯ ಸರ್ವಪ್ರಾಣಾನ್ವೈ ವಿಕ್ರಮ್ಯೋದ್ಯೋಗಮಾಸ್ಥಿತಾಃ ॥೧೦॥
ವಾಚಂ ಪ್ರಾಣೇಷು ಸಂಯೋಜ್ಯ ಪ್ರಾಣಾಸ್ತೇಜಸಿ ಯೋಜಿತಾಃ ।
ತೇಜಸ್ಯಾಕೃಷ್ಯಮಾಣೇ ತು ತತ್ರೈವ ಸ ಲಯಂ ಗತಃ ॥೧೧॥
ವಿದ್ಯಾಧರಮದೃಷ್ಟ್ವಾತ್ರ ಕ್ವ ಗತೋ ಬ್ರಾಹ್ಮಣಾಧಮಃ ।
ಇತಿ ಶಙ್ಕಿತಚಿತ್ತಾಸ್ತೇ ಮಾರ್ಗನ್ತಿ ಸ್ಮ ಪರಸ್ಪರಮ್ ॥೧೨॥
ಮಾರ್ಗಿತ್ವಾ ಬಹುಕಾಲಂ ತು ದೂತಾಃ ಸ್ವಿನ್ನಮುಖಾಭ್ಯಶಮ್ ।
ರಾಜ್ಞೇ ನಿವೇದಯಾಮಾಸುಃ ಬ್ರಾಹ್ಮಣಾನಯನಕ್ರಿಯಾಮ್ ॥೧೩॥
ಶೃಣು ಪ್ರೇತಪತೇ ಯಸ್ಯ ಗಣಿಕಸ್ಯ ಮುಖಾಚ್ಚ್ರುತಮ್ ।
ವಾಕ್ಯಮಾಕರ್ಣ್ಯ ಹಿ ವಯಂ ಗತಾಃ ಸ್ಮೋ ಬ್ರಾಹ್ಮಣಾನ್ತಿಕಮ್ ॥೧೪॥
ಮಹಾನ್ತಂ ಯತ್ನಮಾಸ್ಥಾಯ ಬ್ರಾಹ್ಮಣಗ್ರಹಣೇ ಕೃತೇ।
ತೇ ತತ್ರ ಕಿಂಚನಾನ್ವೇಷ್ಟ್ವಾ ನಿರಾಶಾಜೀವಿತೇ ವಯಮ್।
ಅಸ್ಮಾಕಂ ರಕ್ಷಸ್ವ ರಾಜೇನ್ದ್ರ ತವಾಜ್ಞಾಕಾರಿಣೋ ವಯಮ್ ॥೧೫॥

ಈರೀತಿಯಾಗಿರುವ ಆ ಬ್ರಾಹ್ಮಣಶ್ರೇಷ್ಠನನ್ನು, ಯಮನಿಂದ ಆಜ್ಞಾಪಿತರಾದ ಭಟರು ಬಂದು, ಅವನ ಸರ್ವಪ್ರಾಣಗಳಲ್ಲಿಯೂ ಹಿಡಿದುಕೊಂಡು ಸೆಳೆಯಲುಪಕ್ರಮಿಸಿದರು ॥೧೦॥

ಪ್ರಥಮತಃ ವಾಕ್ಕನ್ನು ಪ್ರಾಣಗಳಲ್ಲಿ ಲಯಪಡಿಸಿದರು; ಬಳಿಕ ಪ್ರಾಣಗಳನ್ನು ತೇಜಸ್ಸಿನಲ್ಲಿ ಲಯಪಡಿಸಿದರು ಆಮೇಲೆ ತೇಜಸ್ಸನ್ನು ಹಿಡಿದುಕೊಂಡು ಅವರು ಎಳೆಯಲಾಗಿ, ಅವನು ಅಲ್ಲಿಯೇ ಲಯಹೊಂದಿಬಿಟ್ಟನು ॥೧೧॥

ಆಗ ಆ ಬ್ರಾಹ್ಮಣನನ್ನು ಅಲ್ಲಿ ಕಾಣದೆ, ಈ ಬ್ರಾಹ್ಮಣಾಧಮನೆಲ್ಲಿ ಹೋದನೆಂದು ಪರಸ್ಪರವಾಗಿ ಹೇಳಿಕೊಳ್ಳುತ, ಮನಸ್ಸಿನಲ್ಲಿ ಶಂಕೆಪಟ್ಟು ಅವರು ಹುಡುಕಲುಪಕ್ರಮಿಸಿದರು ॥೧೨॥

ಆಮೇಲೆ ಆ ಯಮದೂತರು ಬಹುಕಾಲ ಹುಡುಕಿದರೂ ಅವನನ್ನು ಕಾಣದೆ ಮುಖದಲ್ಲೆಲ್ಲ ಬೆಮರಿದವರಾಗಿ, ಬಂದು ಬ್ರಾಹ್ಮಣನನ್ನು ಕರೆತರುವುದಕ್ಕೆ ಹೋಗಿದ್ದ ಕೆಲಸವನ್ನು ತಮ್ಮ ಒಡೆಯನಿಗೆ ಈರೀತಿಯಾಗಿ ವಿಜ್ಞಾಪಿಸಿದರು ॥೧೩॥

ಮಹಾಪ್ರಭೋ! ಯಮಧರ್ಮರಾಜ! ಆಲೈಸಬೇಕು. ನಾವು ಯಾವ ಗಣಕ(ಗುಮಾಸ್ತೆ)ನ ಮಾತನ್ನು ಕೇಳಿಕೊಂಡು ಬ್ರಾಹ್ಮಣನ ಹತ್ತಿರಕ್ಕೆ ಇಲ್ಲಿಂದ ಹೋದೆವೋ, ಅವನು ಸರಿಯಾದ ಗಣಕನಲ್ಲ ॥೧೪॥

ಅಲ್ಲಿ ಹೋಗಿ ಮಹಾಪ್ರಯತ್ನದಿಂದ ಆ ಬ್ರಾಹ್ಮಣನನ್ನು ಹಿಡಿದುಕೊಂಡರೂ, ಆಮೇಲೆ ನೋಡಲಾಗಿ ಅಲ್ಲಿ ಯಾವುದೊಂದನ್ನೂ ಕಾಣದ, ನಾವು ನಮ್ಮ ಪ್ರಾಣದಲ್ಲಿ ಆಶೆಯಿಲ್ಲದವರಾಗಿ ಇಲ್ಲಿಗೆ ಬಂದುಬಿಟ್ಟೆವು ಹೇಮಹಾಪ್ರಭೋ! ನಮ್ಮನ್ನು ಕಾಪಾಡಬೇಕು. ನಾವು ತಮ್ಮ ಆಜ್ಞೆಯಂತೆ ನಡೆದುಬಿಟ್ಟಿರುವೆವು ॥೧೫॥

ಇತ್ಯುಕ್ತೋ ದೂತಮುಖ್ಯೈಸ್ತು ಚಿತ್ರಗುಪ್ತಮುಪಾಹ್ವಯತ್ ॥೧೯॥
ಚಿತ್ರಗುಪ್ತ ತ್ವಯಾ ಸರ್ವಂ ಜ್ಞಾತಂ ಸರ್ವಜನಸ್ಯ ಚ ।
ಧರ್ಮಾಧರ್ಮಸ್ವರೂಪಂ ಚ ಪಾಪಿನಾಂ ಧರ್ಮಿಣಾಮಪಿ ॥೧೯॥
ತಸ್ಯ ವಿದ್ಯಾಧರಾಖ್ಯಸ್ಯ ಬ್ರಾಹ್ಮಣಸ್ಯ ವಿಚೇಷ್ಟಿತಮ್ ।
ಆಲೋಕ್ಯಾಚಕ್ಷ್ವ ಗಣಕ ಪಕ್ಷಾಪಕ್ಷವಿವರ್ಜಿತಮ್ ॥೨೦॥
ಪತ್ರಜಾಲಂ ಪರಾಮೃಶ್ಯ ಚಿತ್ರಗುಪ್ತೋ ವೈದ್ಯಾಧರಂ ವಚಃ ।
ಪ್ರೋವಾಚ ನಾಥ ಮದ್ವಾಕ್ಯಂ ಯಥಾವಚ್ಛೃಣು ಸೂರ್ಯಜ ॥೨೧॥
ಜನ್ಮಪ್ರಭೃತಿ ವಿಪ್ರೇಣ ಪರದಾರಾಭಿಮರ್ಶನಮ್ ।
ವೃಷಳೀಸಙ್ಗಮಶ್ಚೈವ ಶೂದ್ರಸ್ತ್ರೀಸಙ್ಗಮಸ್ತಥಾ ॥೨೨॥
ಸೂಚಿಕಾರಸ್ಯ ಲಲನಾ ಪ್ರಿಯಾ ಕ್ರಾಕಚಿಕಸ್ಯ ಚ ।
ವೇಶ್ಯಾಯಾಃ ಸಙ್ಗಮಶ್ಚೈವ ಕೃತೋ ರಾಗವಶಾದ್ಭೃಶಮ್ ॥೨೩॥
ಆರೂಢಪತಿತಾಜ್ಜಾತಾ ವರ್ಧಕೀ ಕುಲಟಾಙ್ಗನಾ ।
ರಜಸೋ ದರ್ಶನಾತ್ ಪೂರ್ವಂ ಅನೂಢಾ ಬ್ರಾಹ್ಮಣಾಙ್ಗನಾ ॥೨೪॥
ಊಢಾ ಚ ಸಮಗೋತ್ರಾ ಚ ವೃಷಳ್ಯಃ ಪರಿಕೀರ್ತಿತಾಃ ॥೨೫॥

ಹೀಗೆಂದು ತನ್ನ ದೂತರಿಂದ ಹೇಳಲ್ಪಟ್ಟ ಬಳಿಕ, ಆ ಯಮಧರ್ಮರಾಜನು ಚಿತ್ರಗುಪ್ತನೆಂಬ ಗಣಕನನ್ನು ಕರೆಯಿಸಿದನು ಅವನು ಬಂದನಂತರ ಅವನನ್ನು ಕುರಿತು 'ಎಲೆಗಣಕನೆ! ನೀನು ಸಮಸ್ತಜನರ ಕರ್ಮಗಳನ್ನೆಲ್ಲ ತಿಳಿದಿರುವೆ ಪಾಪಿಷ್ಠರಾಗಿಯೂ ಧರ್ಮಿಷ್ಠರಾಗಿಯೂ ಇರುವ ಜನರ ಧರ್ಮಾಧರ್ಮಸ್ವರೂಪವೆಲ್ಲ ನಿನಗೆ ಗೊತ್ತಿರುವುದು ಆ ವಿದ್ಯಾಧರನೆಂಬ ಬ್ರಾಹ್ಮಣನ ಲೆಕ್ಕವನ್ನೆಲ್ಲ ಚೆನ್ನಾಗಿ ನೋಡಿ ಸ್ವಪಕ್ಷ ಪರಪಕ್ಷಭೇದವಿಲ್ಲದೆ ಕ್ರಮವಾಗಿ ಹೇಳು' ಎಂದು ಆಜ್ಞಾಪಿಸಿದನು ॥

ಆಗ ಚಿತ್ರಗುಪ್ತನು ವಿದ್ಯಾಧರ ಬ್ರಾಹ್ಮಣನ ಲೆಕ್ಕಪತ್ರವನ್ನೆಲ್ಲ ಹುಡುಕಿ, ಹೀಗೆ ವಿಜ್ಞಾಪಿಸಿಕೊಂಡನು ಸ್ವಾಮಿ! ಸೂರ್ಯಪುತ್ರ! ನಾನು ಯಥಾವತ್ತಾಗಿ ಅರಿಕೆಮಾಡುವೆನು ನನ್ನ ಮಾತನ್ನು ಚಿತ್ತವಿಸಬೇಕು ॥೨೧॥

ಈ ವಿದ್ಯಾಧರನೆಂಬ ಬ್ರಾಹ್ಮಣನು, ಜನ್ಮಾರಭ್ಯ-ಪರದಾರಪರಾಮರ್ಶಮಾಡಿರುವನು, ವೃಷಳೀಸಂಗಮ ಶೂದ್ರಸ್ತ್ರೀಸಂಗಮಗಳನ್ನು ಮಾಡಿರುವನು ಸೂಚಿಕ(ಚಿಪ್ಪಿಗ-ದರ್ಜಿ)ನ ಪತ್ನಿಯನ್ನೂ, ಗರಗಸದವನ ಪ್ರಿಯೆಯನ್ನೂ, ಅನುಭವಿಸಿರುವನು ಅತಿರಾಗಾವೇಶದಿಂದ ಸರ್ವದಾ ವೇಶ್ಯಾಸ್ತ್ರೀಸಂಸರ್ಗದಲ್ಲಿಯೇ ಇದ್ದನು ॥೨೨-೨೩॥

ಆರೂಢಪತಿತ(ಮೇಲುಜಾತಿಯಿಂದ ಕೀಳುಜಾತಿಗೆ ಸೇರಿದವನು)ನ ಹೂಟ್ಟಿಯಲ್ಲಿ ಹುಟ್ಟಿದವಳು, ಬಡಗಿಯ ಹಂಡತಿ, ವ್ಯಭಿಚಾರಿಣಿಯಾದ ಜಂಗಸು, ರಜೋದರ್ಶನಕ್ಕಿಂತ ಮೊದಲೇ ವಿವಾಹವಾಗದಿರುವ ಬ್ರಾಹ್ಮಣವಧು, ಏಕಗೋತ್ರದಲ್ಲಿ ವಿವಾಹಮಾಡಿಕೊಂಡ ಕನ್ಯಕೆ, ಇವರಿಷ್ಟುಮಂದಿಯೂ ವೃಷಲಿಗಳೆಂದು ಹೇಳಲ್ಪಡುವರು ॥೨೪-೨೫॥

ಯಃ ಕರೋತ್ಯೇಕರಾತ್ರೇಣ ವೃಷಳೀಸೇವನಂ ದ್ವಿಜಃ ।
ಸ ಭೈಕ್ಷ್ಯಭುಗ್ಜಪ್ತ್ಯ ದೇವೀಂ ತ್ರಿಭಿರ್ವರ್ಷೈರ್ವಿಶುಧ್ಯತಿ ॥೧೬॥
ವೃಷಳೀಗಮನಾದ್ವಿಪ್ರಃ ಕುಮ್ಭೀಪಾಕೇಷು ಪಚ್ಯತೇ ।
ಪರದಾರಾಭಿಗಮನಾತ್ ಕಾಲಸೂತ್ರೇಷು ಪಚ್ಯತೇ ॥೧೭॥
ಅಯಂ ವಿದ್ಯಾಧರೋ ವಿಪ್ರಃ ಪಾಪಿನಾಮಗ್ರಸಮ್ಮತಃ ।
ಅಭಕ್ಷ್ಯಭಕ್ಷಣಂ ಚೈವ ಗೃಞ್ಜಾನಾಂ ಚ ಭಕ್ಷಣಮ್ ॥೧೮॥
ಕಳಞ್ಜಭಕ್ಷಣಂ ಚೈವ ಲಶುನಂ ಮಾಂಸಭಕ್ಷಣಮ್ ।
ಏಕೋದ್ದಿಷ್ಟಂ ನವಶ್ರಾದ್ಧಂ ಸಪಿಣ್ಡೀಪ್ರೇತಭೋಜನಮ್ ।
ಗೋದಾನಗ್ರಹಣಂ ಚೈವ ಕೃತವಾ್ ಸ ತು ಪಾತಕೀ ॥೧೯॥
ಯತೀನಾಂ ನಿನ್ದಕಶ್ಚಾಯಂ ಮಹತಾಂ ದೂಷಕಸ್ತಥಾ ।
ಏವಮಾದೀನಿ ಪಾಪಾನಿ ಕೃತವಾ್ ಬುದ್ಧಿಪೂರ್ವಕಮ್ ॥೨೦॥
ತಸ್ಮಾದ್ವಿದೇಹನಿರ್ವಾಣಪದವೀಂ ನಾರ್ಹತಿ ದ್ವಿಜಃ ॥೨೧॥

ಬ್ರಾಹ್ಮಣಜಾತಿಯಲ್ಲಿ ಹುಟ್ಟಿದ ಯಾವ ಪುರುಷನು ಒಂದುರಾತ್ರಿ ವೃಷಲೀಸಂಗಮವನ್ನು ಮಾಡುವನೋ, ಅವನು ಮೂರುವರ್ಷಕಾಲ ನಿತ್ಯವೂ ಭಿಕ್ಷಾನ್ನದಿಂದ ಜೀವಿಸಿಕೊಂಡಿದ್ದು ಗಾಯತ್ರೀಜಪಮಾಡಿದರೆ ಶುದ್ಧನಾಗುವನು, ಅನ್ಯಥಾ ಪತಿತನಾಗುವನು ॥೧೬॥

ವೃಷಲೀಗಮನಮಾಡಿ ಪ್ರಾಯಶ್ಚಿತ್ತಮಾಡಿಕೊಳ್ಳದಿರುವ ಬ್ರಾಹ್ಮಣನು ಕುಂಭೀಪಾಕ ನರಕದಲ್ಲಿ ಕುದಿಯಿಸಲ್ಪಡಬೇಕು ಪರದಾರರತನಾದವನು ಕಾಲಸೂತ್ರನರಕದಲ್ಲಿ ಯಾತನೆಯನ್ನನುಭವಿಸಬೇಕಾಗಿರುವುದು ॥೧೭॥

ಈ ವಿದ್ಯಾಧರನೆಂಬ ಬ್ರಾಹ್ಮಣನಾದರೋ, ಈಗ ಹೇಳಿದ ವೃಷಲೀಗಮನ ಪರದಾರಗಮನಗಳನ್ನು ಅಸಂಖ್ಯಾಕವಾಗಿ ಮಾಡಿರುವುದಲ್ಲದೆ, ಪಾಪಿಗಳಲ್ಲಲ್ಲ ಮೊದಲನೆಯವನಾಗಿರುವನು ಅಭಕ್ಷ್ಯಭಕ್ಷಣೆಯನ್ನು ಮಾಡಿರುವನು, ಗೃಂಜನ (ಈರುಳ್ಳಿ) ಕಳಂಜ(ಬೆಳ್ಳುಳ್ಳಿ) ಮಾಂಸಗಳನ್ನು ತಿಂದಿರುವನು ಏಕೋದ್ದಿಷ್ಟಭೋಜನ ನವಶ್ರಾದ್ಧಭೋಜನ ಸಂಪಿಡೀಕರಣಶ್ರಾದ್ಧದಲ್ಲಿ ಪ್ರೇತ ಸ್ಥಾನಭೋಜನ-ಇವುಗಳನ್ನೆಲ್ಲ ಮಾಡಿರುವನು ಉತ್ಕ್ರಾಂತಿ ವೈತರಣೀ ಗೋದಾನಗಳನ್ನು ಸ್ವೀಕರಿಸಿರುವನು ಹೀಗಿರುವುದರಿಂದ, ಇವನು ಮಹಾಪಾತಕಿಯೆಂದು ಗಣಿಸಲ್ಪಟ್ಟಿರುವನು ॥

ಇದೂಅಲ್ಲದೆ, ಇವನು ಯತಿನಿಂದೆಯನ್ನೂ ಮಹಾತ್ಮರ ದೂಷಣೆಯನ್ನೂ ಮಾಡಿರುವನು. ಇನ್ನೂ ಇಂತಹ ಪಾಪಗಳನ್ನು ಇವನು ಲೆಕ್ಕವಿಲ್ಲದಷ್ಟು ಬುದ್ಧಿಪೂರ್ವಕವಾಗಿ ಮಾಡಿರುವನು. ಆದುಕಾರಣ, ಈ ವಿದ್ಯಾಧರನೆಂಬ ವಿಪ್ರನು ವಿದೇಹಮುಕ್ತಿಗೆ ಸುತರಾಂ ಅರ್ಹನಾಗಿಲ್ಲ ॥

ಜಿತ್ರಗುಪ್ತವಚಃ ಶ್ರುತ್ವಾ ಕಾಲದಂಡಧರೋ ರುಷಾ ।
ದಂಡಂ ಮುದ್ರಾಂ ಚ ಸಂಗೃಹ್ಯ ವೇಧಸೋನ್ತಿಕಮಾಯಯೌ ॥೩೦॥
ಪ್ರಣಮ್ಯ ಸತ್ಯಲೋಕಸ್ಥಂ ಚತುರಾನನಮಬ್ರವೀತ್ ।
ಭಗವನ್ ದೇವದೇವೇಶ ಮಹಾಪಾತಕಿನಾಂ ವರಃ ।
ವಿದ್ಯಾಧರಃ ಕಥಂ ವಿಪ್ರಃ ಸಾಯುಜ್ಯಂ ಮೋಕ್ಷಮನ್ವಗಾತ್ ॥೩೩॥

ಬ್ರಹ್ಮೋವಾಚ

ಧರ್ಮರಾಜ ಪ್ರವಕ್ಷ್ಯಾಮಿ ವಿಪ್ರಸ್ಯ ಚರಿತಂ ಮಹತ್ ।
ಯಚ್ಚ್ರವಣಸ್ಮರಣಾತ್ಪ್ರೀಣ ಜೀವನ್ಮುಕ್ತೋ ನ ಸಂಶಯಃ ॥೩೪॥
ಅಯಂ ಬ್ರಾಹ್ಮಣದಾಯಾದೋ ರಾಮನಾಮ ಸದಾಸ್ಮರತ್ ।
ಸಹಸ್ರನಾಮಸದೃಶೋ ರಾಮನಾಮಾತ್ಮಕೋ ಮನುಃ ॥೩೫॥
ಕೋಟಿಯಜ್ಞಾಸವೋ ರಾಮಚಂದ್ರಭದ್ರೇತ್ಯಯಂ ಮನುಃ ।
ನವೋನ್ತಶ್ರುತಿನಾ ಪ್ರೋಕ್ತೋ ವೇದಾನ್ತೇಷು ಯಥಾಕ್ರಮಮ್ ॥೩೬॥

ಹೀಗೆ ವಿಜ್ಞಾಪಿಸಿದ ಚಿತ್ರಗುಪ್ತನ ಮಾತನ್ನು ಕೇಳಿ, ಯಮಧರ್ಮರಾಜನು ಮಹಾಕೋಪ ಸಮನ್ವಿತನಾಗಿ ಕೈಯಲ್ಲಿ ದಂಡವನ್ನೂ ಅಧಿಕಾರಮುದ್ರೆಯನ್ನೂ ಹಿಡಿದುಕೊಂಡು ಬ್ರಹ್ಮದೇವನ ಹತ್ತಿರಕ್ಕೆ ಬಂದನು ॥೩೨॥

ಆಗ ಸತ್ಯಲೋಕದಲ್ಲಿರುವ ಬ್ರಹ್ಮನಿಗೆ ನಮಸ್ಕರಿಸಿ 'ಭಗವಂತನೆ! ಸಕಲದೇವಾಧಿಪತಿಯೆ! ಮಹಾಪಾತಕಿಗಳಲ್ಲೆಲ್ಲ ಮೊದಲನೆಯವನಾಗಿದ್ದ ವಿದ್ಯಾಧರನೆಂಬ ಬ್ರಾಹ್ಮಣನು ಸಾಯುಜ್ಯಮುಕ್ತಿಯನ್ನು ಹೇಗೆ ಪಡೆದನು? ಇಂಥವನಿಗೆ ಸಾಯುಜ್ಯವನ್ನು ನೀನು ಕೊಟ್ಟಿರುವುದಕ್ಕೆ ಕಾರಣವೇನು? ಇಂತಹ ಅಧಿಕಾರದಿಂದ ನಾನೇನು ಮಾಡಿಕೊಳ್ಳಲಿ? ನಿನ್ನ ಮುದ್ರೆಯನ್ನೂ ದಂಡವನ್ನೂ ಈಗ ಒಪ್ಪಿಸಿಬಿಡುವೆನು' ಎಂದು ಹೇಳಿದನು ॥೩೩॥

ಇದನ್ನು ಕೇಳಿ ಬ್ರಹ್ಮನು ಸಮಾಧಾನಪಡಿಸುವನು —

ಧರ್ಮರಾಜ! ಆ ವಿದ್ಯಾಧರನೆಂಬ ಬ್ರಾಹ್ಮಣನ ಚರಿತ್ರೆಯು ಬಲು ದೊಡ್ಡದಾಗಿರುವುದು, ಅದನ್ನು ನಿನಗೆ ಹೇಳುವೆನು, ಕೇಳು ಅವನು ಕೇವಲ ನಾಮಸ್ಮರಣಮಾತ್ರದಿಂದಲೇ ಜೀವನ್ಮುಕ್ತಿ ಪಡೆದಿರುವನು, ಇದರಲ್ಲಿ ಸಂಶಯವಿಲ್ಲ ॥೩೪॥

ಈ ಬ್ರಾಹ್ಮಣಕುಲೋತ್ಪನ್ನನು, ಸರ್ವದಾ ರಾಮನಾಮವನ್ನು ಸ್ಮರಿಸುತಿದ್ದನು ಈ ರಾಮನಾಮವೆಂಬ ಮಂತ್ರವು ಸಹಸ್ರನಾಮಕ್ಕೆ ಸಮಾನವಾದುದು॥೩೫॥

'ರಾಮ ರಾಮಚಂದ್ರ ರಾಮಭದ್ರ' ಎಂಬ ಮಂತ್ರಕ್ಕೆ ಕೊನೆಯಲ್ಲಿ 'ನಮಃ' ಎಂಬುದನ್ನು ಸೇರಿಸಿ 'ರಾಮಾಯನಮಃ ರಾಮಚನ್ದ್ರಾಯನಮಃ ರಾಮಭದ್ರಾಯನಮಃ' ಎಂದು ಕ್ರಮವಾಗಿ ಜಪಮಾಡಿದರೆ, ಕೋಟಿಯಜ್ಞಫಲವುಂಟಾಗುವುದೆಂದು ವೇದಾಂತಗಳಲ್ಲಿ ಉಕ್ತವಾಗಿರುವುದು ॥೩೬॥

ರಾಮೇತಿ ರಾಮಚನ್ದ್ರೇತಿ ರಾಮಭದ್ರೇತಿ ವಾ ಮನುಷ್ಯಃ ।
ಯಾವಜ್ಜೀವಂ ಜಪೇತ್ತು ಮತ್ಕ್ರೋ ಜೀವನ್ಮುಕ್ತೋ ನ ಸಂಶಯಃ ॥೩೭॥
ತಸ್ಮಾತ್ ಕಾಶಿಕಗೋತ್ರೋಯಂ ಜಪೇತ್ ವೈ ಪರಮಂ ಮನುಷ್ಯಃ ।
ರಾಮಚನ್ದ್ರಸ್ಯ ಸತತಂ ಮುಕ್ತಿಮಾಪ ಸುದುರ್ಲಭಾಮ್ ॥೩೮॥

ಯಮಉವಾಚ.

ಅನೇನ ಸರ್ವಂ ಪಾಪಂ ಚ ಕೃತಂ ಬುದ್ಧಿಪುರಸ್ಸರಮ್ ।
ಬುದ್ಧಿಪೂರ್ವಂ ಕೃತೇ ಪಾಪೇ ಪ್ರಾಯಶ್ಚಿತ್ತಂ ನ ವಿದ್ಯತೇ ॥೩೯॥
ಪರದಾರ ಪರದ್ರವ್ಯ ಪರಾನ್ನ ಗ್ರಹಣೇ ರತಃ ।
ಏವಮ್ಭೂತಸ್ಯ ವಿಪ್ರಸ್ಯ ಕಥಂ ಮುಕ್ತಿರ್ಭವಿಷ್ಯತಿ ॥೪೦॥

ಬ್ರಹ್ಮೋವಾಚ

ಶ್ರೀರಾಮನಾಮ್ನಾಸದೃಶಂ ಅವಶೇನಾಪಿ ಸಂಸ್ಮರ್ತ ।
ಮುಕ್ತಿಂ ಪ್ರಾಪ್ನೋತಿ ಮನುಜಃ ಕಿಂಪುನರ್ಬುದ್ಧಿಪೂರ್ವಕಮ್ ॥೪೧॥

ಅಥವಾ 'ರಾಮ ರಾಮಚಂದ್ರ ರಾಮಭದ್ರ' ಎಂಬ ಇಷ್ಟೇಮಂತ್ರವನ್ನಾಗಲಿ ಯಾವ ಜೀವವೂ ಜಪವಾಡುತಿದ್ದರ, ಮನುಷ್ಯನು ಜೀವನ್ಮುಕ್ತನಾಗುವನು, ಇದರಲ್ಲಿ ಸಂಶಯವಿಲ್ಲ ॥

ಹೀಗಿರುವುದರಿಂದ, ಕೌಶಿಕಗೋತ್ರೋತ್ಪನ್ನನಾದ ಈ ವಿದ್ಯಾಧರನು, ಸರ್ವೋತ್ತಮವಾದ ರಾಮಚಂದ್ರ ಮಂತ್ರವನ್ನು ಸರ್ವದಾ ಜಪಿಸುತಿದ್ದನಾದಕಾರಣ, ಇವನು ಅತಿದುರ್ಲಭವಾದ ಮುಕ್ತಿಗೆ ಪಾತ್ರನಾದನು ॥೩೮॥

ಇದನ್ನು ಕೇಳಿ ಯಮನು ಪುನಃ ಪ್ರಶ್ನೆಮಾಡುವನು —

ಸ್ವಾಮಿ! ಬ್ರಹ್ಮದೇವ! ಈ ವಿದ್ಯಾಧರನೆಂಬ ಬ್ರಾಹ್ಮಣನು, ಸಮಸ್ತಪಾಪಗಳನ್ನೂ ಬುದ್ಧಿಪೂರ್ವಕವಾಗಿಯೇ ಮಾಡಿರುವನು ಬುದ್ಧಿಪೂರ್ವಕವಾಗಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವಲ್ಲವೆ? ॥೩೯॥

ಇವನು, ಪರದಾರ ಪರದ್ರವ್ಯ ಪರಾನ್ನಗಳನ್ನು ಸಂಗ್ರಹಿಸುವುದರಲ್ಲಿಯೇ ಆಸಕ್ತನಾಗಿದ್ದನು ಇಷ್ಟದೋಷಿಯಾದ ಈ ವಿದ್ಯಾಧರನಿಗೆ ಮುಕ್ತಿ ಹೇಗೆ ಲಭಿಸುವುದು? ॥೪೦॥

ಇದಕ್ಕೆ ಬ್ರಹ್ಮದೇವನು ಉತ್ತರಹೇಳುವನು —

ಅಯ್ಯಾ! ಯಮ! ನೀನು ಕೇಳಿದುದು ಯುಕ್ತವೇ ಸರಿ ಆದರೆ, ರಾಮನಾಮ ಮಹಿಮೆಯು ಅಸದೃಶವಾದುದು ಈ ರಾಮನಾಮವನ್ನು ಹರಾತ್ತಾಗಿ ಒಂದುಸಲ ಸ್ಮರಿಸಿದವನಿಗೂ ಮುಕ್ತಿ ಸುಲಭವಾಗಿರುವುದು ಹೀಗಿರುವಾಗ, ಇನ್ನು ಬುದ್ಧಿ ಪೂರ್ವಕವಾಗಿ ಅದನ್ನು ಜಪಿಸಿದವನ ವಿಷಯದಲ್ಲಿ ಹೇಳುವುದೇನು? ॥೪೧॥

ರಾಶಬ್ದೋಚ್ಚಾರಣೇ ಜಾತೇ ವಕ್ತ್ರಾತ್ ಪಾಪಸ್ಯ ನಿರ್ಗಮಃ ।
ಮಕಾರೋಚ್ಚಾರಣೇ ಜಾತೇ ಭಸ್ಮೀಭಾವಂ ಗಮಿಷ್ಯತಿ ॥೪೦॥
ಬ್ರಹ್ಮಹತ್ಯಾಸಹಸ್ರಾಣಿ ಸ್ವರ್ಣಸ್ತೇಯಶತಾನಿ ಚ ।
ಸುರಾಪಾನಶತಂ ಚಾಪಿ ಗುರುಸ್ತ್ರೀಗಮನಂ ತಥಾ ॥೪೧॥
ತತ್ಸಂಯೋಗಶತಂ ಚಾಪಿ ನಶ್ಯನ್ತೇ ರಾಮಕೀರ್ತನಾತ್ ।
ಪ್ರಳಯಾನಲಸಮ್ಪರ್ಕಾತ್ ತೂಲಂಘೂಣಿವ ಸ್ಫುಟಮ್ ॥೪೨॥
ಔಪಾಸನೇನ ರಹಿತಾಃ ಪಞ್ಚಯಜ್ಞಪರಾಙ್ಮುಖಾಃ ।
ಸಂಧ್ಯಾವನ್ದನಹೀನಾಶ್ಚ ಶುದ್ಧಾರಾಮಸ್ಯ ಕೀರ್ತನಾತ್ ॥೪೩॥
ಅಭಕ್ಷ್ಯಭಕ್ಷಣಾಸಕ್ತಾಃ ವೃಷಲೀಗಮನೇ ರತಾಃ ।
ಉಚ್ಚಾರ್ಯ ಸತತಂ ರಾಮಶಬ್ದಂ ಮುಕ್ತಾನ ಸಂಶಯಃ ॥೪೪॥
ಗಚ್ಛನ್ತಿಷ್ಠನ್ ಸ್ವಪನ್ ನೃತ್ಯನ್ ಭುಞ್ಜಾನೋ ವಾಪಿ ಮಾನವಃ ।
ಮುಚ್ಯತೇ ರಘುನಾಥಸ್ಯ ಕೀರ್ತನಾನ್ನಾನ್ಯತೋ ದ್ವಿಜಃ ॥೪೫॥

'ರಾಮ' ಎಂಬ ಪದದಲ್ಲಿರುವ 'ರಾ' ಎಂಬ ಶಬ್ದವನ್ನು ಬಾಯಲ್ಲಿ ಉಚ್ಚರಿಸಿದಮಾತ್ರದಲ್ಲಿಯೇ, ಪಾಪವೆಲ್ಲವೂ ಹೊರಕ್ಕೆ ಓಡುಬಿಡುವುದು, ಆಮೇಲೆ 'ಮ' ಎಂಬ ಅಕ್ಷರವನ್ನು ಉಚ್ಚರಿಸಿಬಿಟ್ಟರೆ ಆ ಪಾಪವೆಲ್ಲವೂ ಭಸ್ಮವಾಗಿಬಿಡುವುದು ॥೪೦॥

ಸಾವಿರಾರು ಬ್ರಹ್ಮಹತ್ಯೆಗಳೂ, ನೂರಾರು ಸ್ವರ್ಣಸ್ತೇಯಗಳೂ, ನೂರಾರುಸಲ ಸುರಾಪಾನವೂ, ಹೀಗೆಯೇ ಅಸಂಖ್ಯಾಕವಾದ ಗುರುಸ್ತ್ರೀಗಮನವೂ, ಇವುಗಳ ಸಂಸರ್ಗದಿಂದ ಉಂಟಾದ ಪಾಪವೂಕೂಡ, (ಪಂಚಮಹಾತಕ) ಪ್ರಳಯಾಗ್ನಿಯ ಸಂಯೋಗದಿಂದ ತೂಲರಾಶಿಯು ಭಸ್ಮವಾಗುವಂತ, ಶ್ರೀರಾಮನಾಮ ಕೀರ್ತನೆಯಿಂದ ಭಸ್ಮವಾಗಿಬಿಡುವುವು ಇದರಲ್ಲಿ ಸಂಶಯವಿಲ್ಲ ॥೪೧-೪೪॥

ಔಪಾಸನವನ್ನು ಬಿಟ್ಟಿರತಕ್ಕವರೂ, ಪಂಚಯಜ್ಞದಲ್ಲಿ ಪರಾಙ್ಮುಖರಾದವರೂ, ಸಂಧ್ಯಾವಂದನರಹಿತರಾದವರೂ ಕೂಡ, ಶ್ರೀರಾಮನಾಮ ಕೀರ್ತನೆಯಿಂದ ಶುದ್ಧರಾಗುವರು ॥೪೩॥

ಅಭಕ್ಷ್ಯಭಕ್ಷಣದಲ್ಲಿ ನಿರತರಾದವರೂ, ವೃಷಲೀಗಮನದಲ್ಲಿ ಆಸಕ್ತರಾದವರೂ, ರಾಮ ನೆಂಬ ಶಬ್ದವನ್ನು ಸರ್ವದಾ ಉಚ್ಚರಿಸುತಿದ್ದ ಮಾತ್ರದಲ್ಲಿಯೇ ಮುಕ್ತರಾಗುವರು, ಸಂಶಯವಿಲ್ಲ॥

ಮನುಷ್ಯನಾದವನು, ನಡೆಯುತಿರುವಾಗಲಾಗಲಿ ನಿಂತಿರುವಾಗಲಾಗಲಿ ಮಲಗಿರುವಾಗಲಾಗಲಿ ನರ್ತನಮಾಡುತಲಾಗಲಿ ಊಟಮಾಡುತಲಾಗಲಿ ಶ್ರೀರಾಮನಾಮ ಸಂಕೀರ್ತನಮಾಡಿದರೆ ಮುಕ್ತನಾಗುವನು ಈ ಕಲಿಯುಗದಲ್ಲಿ ಬ್ರಾಹ್ಮಣನು ಮುಕ್ತಿಪಡೆಯುವುದಕ್ಕೆ ಮತ್ತಾವ ಸುಲಭಸಾಧನವೂ ಇಲ್ಲ ॥೪೬॥

ರಘುನಾಥಸ್ಯ ನಾಮಾನಿ ಯೇ ಗೃಣನ್ತಿ ನರಾಭುವಿ ।
ವಿಮುಕ್ತಸರ್ವಪಾಪಾಸ್ತೇ ವೈ ಮೋದನ್ತೇ ವಿಷ್ಣುಮನ್ದಿರೇ ॥೪೯॥
ಇದಂ ಪಥ್ಯಮಿದಂ ತಥ್ಯಂ ಇದಂ ಸತ್ಯಂ ನ ಸಂಶಯಃ ॥೪೯॥

ಶ್ರೀ ಸೂತಉವಾಚ

ಶ್ರುತ್ವಾ ಯಮೋ ವಿಶ್ವಸೃಜಸ್ತು ವಾಕ್ಯಂ ನಿವೃತ್ತಶೋಕಶ್ಚತುರಾನನಸ್ಯ ।
ಭೃತ್ಯೈಃಸ್ತತಃ ಸಂಯಮಿನೀಮಗಾತ್ ಪುರೀಂ ಪುನಸ್ತದಾ ವಿಶ್ವಸೃಜಂ ಪ್ರಣಮ್ಯ ॥
ಭಕ್ತಿರ್ಮುಕ್ತಿವಿಧಾಯಿನೀ ಭಗವತಃ ಶ್ರೀರಾಮಚಂದ್ರಸ್ಯ ಭೋಃ
ಲೋಕಾಃ ಕಾಮದುಘಾಂಘ್ರಿಪದ್ಮಯುಗಳಂ ಸೇವಧ್ವಮತ್ಯುತ್ಸುಕಾಃ ।
ನಾನಾಜ್ಞಾನವಿಶೇಷಮನ್ತ್ರವಿತತಿಂ ತ್ಯಕ್ತ್ವಾ ಸುದೂರೇ ಭೃಶಂ
ರಾಮಂ ಶ್ಯಾಮತನುಂ ಸ್ಮರಾರಿಹೃದಯೇ ಭಾನ್ತಂ ಭಜಧ್ವಂ ಬುಧಾಃ ॥೪೧॥

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾನನ್ದಸರಸ್ವತೀ ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದಸರಸ್ವತೀ ಸಂಕಲಿತೇ ನಾನಾಪುರಾಣಾಗಮಾದಿನಿಷ್ಠ ತತ್ವಸಂಗ್ರಹಭೂತೇ ಶ್ರೀ ತತ್ವಸಂಗ್ರಹರಾಮಾಯಣೇ ಶ್ರೀಮದರಣ್ಯಕಾಣ್ಡೇ ಶ್ರೀರಾಮನಾಮವೈಭವಕಥನಂ ನಾಮ ವಿಂಶಃ ಸರ್ಗಃ

ಈ ಲೋಕದಲ್ಲಿ ಯಾವ ಮನುಜರು ಶ್ರೀರಾಮನಾಮಗಳನ್ನು ಉಚ್ಚರಿಸುವರೋ, ಅವರು ಸರ್ವಪಾಪವಿಮುಕ್ತರಾಗಿ ವಿಷ್ಣುಲೋಕದಲ್ಲಿ ಆನಂದಿಸುವರು ಇದು ಪಥ್ಯವು, ಇದು ತಥ್ಯವು, ಸದು ಸತ್ಯವು ಇದರಲ್ಲಿ ಸಂಶಯವಿಲ್ಲ ॥೪೮-೪೯॥

ಶ್ರೀಸೂತಪೌರಾಣಿಕರು ಶೌನಕಾದಿಮುನಿಗಳನ್ನು ಕುರಿತು ಹೇಳುವರು —

ಆಯ್ಯಾ! ಶೌನಕಾದಿಗಳಿರಾ! ಈರೀತಿಯಾಗಿ ಹೇಳಿದ ಸರ್ವಲೋಕವಿಧಾಯಕನಾದ ಚತುರ್ಮುಖನ ಮಾತನ್ನು ಕೇಳಿ, ಬಳಿಕ ಯಮನು ತನ್ನ ಮನಸ್ಸಿನ ವ್ಯಥೆಯನ್ನು ಬಿಟ್ಟವನಾಗಿ, ಮತ್ತೆ ಆ ಚತುರಾನನನಿಗೆ ನಮಸ್ಕಾರಮಾಡಿ, ತನ್ನ ಭೃತ್ಯರೊಡನೆ ರಾಜಧಾನಿಯಾದ ಸಂಯಮಿನೀಪಟ್ಟಣಕ್ಕೆ ಹೊರಟುಹೋದನು ॥೫೦॥

ಎಲೈ ಜನರೇ! ಶ್ರೀರಾಮಚಂದ್ರನಲ್ಲಿ ಭಕ್ತಿಯು ಸರ್ವರಿಗೂ ಮುಕ್ತಿಪ್ರದವಾದುದು ಸಕಲ ಲೋಕಕ್ಕೂ ಕಾಮಧೇನುವಿನಂತಿರುವ ಆ ಶ್ರೀರಾಮನ ಪಾದಯುಗ್ಮವನ್ನು ಸರ್ವದಾ ಆಸಕ್ತಿಯಿಂದ ಸೇವಿಸಿರಿ ಎಲೈ ಪ್ರಾಜ್ಞರಾದವರೇ! ನಾನಾವಿಧವಾದ ಜ್ಞಾನವಿಶೇಷಗಳನ್ನೂ ಮಂತ್ರ ಪುರಶ್ಚರಣೆಗಳನ್ನೂ ಅತಿದೂರವಾಗಿ ಬಿಟ್ಟುಬಿಟ್ಟು, ಸರ್ವದಾ ಶ್ರೀಪರಮೇಶ್ವರನ ಹೃದಯಕಮಲದಲ್ಲಿ ವಿರಾಜಿಸುತಿರುವ ನೀಲಮೇಘಶ್ಯಾಮನಾದ ಶ್ರೀರಾಮಚಂದ್ರನನ್ನು ಅತ್ಯಂತವಾಗಿ ಭಕ್ತಿಯಿಂದ ಭಜಿಸಿರಿ ॥೫೧॥

ಇದು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾನಂದಸರಸ್ವತೀಪೂಜ್ಯಪಾದಶಿಷ್ಯರಾದ ಶ್ರೀರಾಮಬ್ರಹ್ಮಾನಂದಸರಸ್ವತೀ ಸ್ವಾಮಿಗಳಿಂದ ಸಂಕಲಿತವಾದ ನಾನಾಪುರಾಣಾಗಮಾದಿನಿಷ್ಠ ತತ್ವಸಂಗ್ರಹಭೂತವಾಗಿರುವ ಶ್ರೀತತ್ವಸಂಗ್ರಹರಾಮಾಯಣದ ಅರಣ್ಯಕಾಂಡದಲ್ಲಿ ಶ್ರೀರಾಮನಾಮ ವೈಭವಕಥನವೆಂಬ ಇಪ್ಪತ್ತನೆಯ ಸರ್ಗವು

ಇಂತು ಶ್ರೀಮದಖಿಲ ಮಹೀಮಂಡಲಮಂಡನಾಯಮಾನ ಕರ್ನಾಟಕಜನಪದಾಧೀಶ್ವರ ಶ್ರೀಕೃಷ್ಣರಾಜ ಒಡೆಯರ್ ಜಿ ಸಿ ಎಸ್ ಐ ಯವರ ಆಸ್ಥಾನಪಂಡಿತ ಸದ್ವಿದ್ಯಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ ವಿರಚಿತವಾದ ತತ್ವಪ್ರಕಾಶವೆಂಬ ಶ್ರೀತತ್ವಸಂಗ್ರಹರಾಮಾಯಣದ ಟೀಕಿನೊಳಗೆ ಅರಣ್ಯಕಾಂಡವು ಸಂಪೂರ್ಣವು

ಓಮ್ ತತ್ ಸತ್

ಶ್ರೀ ತತ್ತ್ವಸಂಗ್ರಹ ರಾಮಾಯಣಂ

ಅರಣ್ಯಕಾಂಡಂ

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೫	೫	ದಣ್ಡವತ	ದಣ್ಡವತ್
೮	೪	ಪೃಷ್ಠಾಂಚ	ಪೃಷ್ಠಾಂಶ್ಚ
,,	೧೯	ಪುಣ್ಯಪ	ಪುಣ್ಯಫ
೧೪	೧೮	ಥರಿಸರ	ದರಿಶರ
೨೦	೧೩	ಅಥವಾ	ಅಥವಾ
,,	ಕೊನೆ	ಗಳಿಗಳಿಂದ	ಗಳಿಂದ
೨೧	೨೮	ಏಂ ಶ್ರೀಂ	ಏಂ ಶ್ರೀಂ ಶ್ರೀಂ
೨೫	೨೦	ಶುದ್ಧಿ	ಶುದ್ಧಿ
೨೬	೨೬	ನಿಂರ್ಮಾರ್ದ	ನಿರ್ಮಾರ್ಥ
,,	೨೯	ಬಿಳಯ	ಬಿಳಿಯ
೨೮	೧೮	ಶೀದಿಸಿ	ಶೀಲಿಸಿ
೨೯	೧೨	ಸಷ್ಟೋಣ	ಷಟ್ಕೋಣ
,,	೧೩	ಲಕ್ಷ್ಮೀಭೀಜ	ಲಕ್ಷ್ಮೀಬೀಜ
೩೦	,,	ಯೊಂದಕ್ಕು	ಯೂಂದಕ್ಕೂ
,,	೧೫	ಒರೆಯು	ಒರಯು
,,	೧೯	ಲಕ್ಷ್ಮ್ಮಿ	ಲಕ್ಷ್ಮೀ
೪೦	೨೧	ಏಲೌ	ಎಲೌ
೪೩	೨೩	ಒಳಿಕ	ಬಳಿಕ
೪೫	೧	ಋುಭಿಃ	ಋಷಿಭಿಃ
,,	೧೨	ಗಳನ್ಮೂ	ಗಳನ್ನೂ
,,	೧೫	ಬ್ರಹ	ಬ್ರಹ್ಮ
೪೬	೨೪	ಹರಿಸು	ಹರಿಸ
೪೭	೧೨	ಪಾದಾಮ್ಮ	ಪಾದಾಮು
,,	೧೩	ವಾಲನೆ	ಪಾಲನೆ
,,	೨೧	ರಾಳುವೆಂ	ರಾಳುವೆಂ
೪೮	೨೪	ಯಪ್ಪಪಿ	ಯದ್ಯಪಿ
೫೧	೧೨	ಕಂಡ	ಕಾಂಡ
೫೬	೧	ವಹೆ	ಮಹೆ
೫೯	,,	ಧುಷ್ಪದ	ದುಷ್ಪ್ರದ
೬೨	೫	ನುಪತ್ತ್ಯರ್ಥಂ	ನುತ್ಯರ್ಥಂ
೬೩	೭	ಸಾತ್ಪಿಕಾತ	ಸಾತ್ಪಿಕಾತ್
೭೩	೧೩	ಜದಾನನ್ತಾ	ಚಿದಾನನ್ದಾ
೭೫	೧	ತದೇ	ತದೆಂ
೭೭	,,	ಕಣ್ಣೆಂ	ಕಾಣ್ಕೆಂ
,,	೧೫	ಕರಿತು	ಕುರಿತು
೭೮	೨೪	೦೧	೧೦
೭೯	೨೬	ಸಂಪನ್ನನು	ಸಂಪನ್ನರು

ಪುಟ	ಪಂಕ್ತಿ	ಅಶುದ್ಧ	ಶುದ್ಧ
೬೯	೨೬	ಕಣ್ಣು	ಕಣ್ಣು
೪೦	೧೯	ಇವರಿಬ್ಬ	ಇವರಿಬ್ಬ
೪೨	೨೩	ಹುಟ್ಟಿರಿ	ಹುಟ್ಟಿರಿ
೪೭	೨೪	ಸೈನ್ಯವು	ಸೈನಿಕರು
೯೦	೨೪	ನಿರುವಾ	ನರುಪಾ
೯೭	೧೪	ವುದೆಂನೂ	ವುದೆಂದೂ
೯೪	೨೩	ಭಾವಿಸು	ಭಾಸಿಸು
೧೦೦	೨೧	ಸಾಕ್ಷಾತ	ಸಾಕ್ಷಾತ್
೧೦೭	೧೬	ಲ್ಪಟ್ಟುದು	ಲ್ಪಟ್ಟುದ
೧೦೯	೯	ತಧಾ್ಪತಾ	ತದಾ್ಪತಾ
೧೧೨	೧೪	ಬಿಗೆ	ಹಿಂಗೆ
,,	೨೬	ದಪರಿಗೆ	ದವರಿಗೆ
೧೧೪	೧೪	ಪ್ರಪೌತ್ರದಿಂ	ಪ್ರಪೌತ್ರರಿಂ
,,	೨೨	ಬ್ರಹ್ಮ	ಬ್ರಹ್ಮ
೧೨೧	೪	ಗಚ್ಛತಿ	ಗಚ್ಛಃ
೧೨೬	೧೩	ಪರ್ವತಿ	ಪಾರ್ವತಿ
೧೨೭	,,	ಕೆಟ್ಟ	ಕಟ್ಟು
೧೩೧	೧	ಸಮಾಭ್ಯಾಸ್ಯ	ಸಮಾಭಾಷ್ಯ
೧೩೩	೧೪	ಹೊರಟಿದ್ದ	ಹೊರಟಿದ್ದ
೧೩೫	೩	ಪರಿಪ್ಲುತಾ	ಪರಿಪ್ಲುತಾ
,,	೫	ವಿಂತೆ	ವಿಂತ್
,,	೨೩	ಬಲ್ಲನ್ನು	ಒಬ್ಬನು,
೧೪೩	೧೪	ಮಾಯೆಂಗುಂದ	ಮಾಯೆಯಿಂದ
೧೪೯	೨	ಒಲ	ಬಲ
,,	೧೬	ಬುದ್ಧಿ	ಬುದ್ಧಿ
೧೫೬	೧೪	ಗಳಿಗೆ	ಗಳಿಗ
೧೫೯	೪	ತ್ತತ್ರ	ತತ್ರ
೧೬೧	೨೩	ಯುಂದ	ಯಿಂದ
೧೬೨	೧೬	ಕ್ಷಣವ್ಲೆಂ	ಕ್ಷಣವೆಂ
,,	೧೭	ತೇಂಜಸ	ತೇಜಸ್ಸ
೧೬೫	೬	ಪಾಪನೀ	ಪಾವನಿಂ
,,	೨೬	ಸವನೂ	ಸವನ್ನೂ
೧೬೯	೧೬	ಜೀಂದ್ರನೆ	ಜೀಂದ್ರನ
೧೭೪	ಕೊನೆ	ಸಲ	ಸಲ್ಪ
೧೭೭	೧೭	ದರನಾ	ಧರವಾ
೧೪೧	೧೬	ಎನು	ಏನು
೧೪೬	೩	ವೇಂಶಾಪ್ಯ	ವಿಶ್ವಾಪ
,,	೧೫	ವೇಶ್ಯೆಂಯ	ವೇಶ್ಯೆಯ
೧೪೭	,,	ಆವನ	ಅವನ
೧೪೪	೧೯	ಆಜ್ಞಾ	ಆಜ್ಞಾ
೧೪೯	೨೩	ಉತ್ಕಾಂತಿ	ಉತ್ಕ್ರಾಂತಿ
೧೯೧	೬	ಬುದ್ಧಿ	ಬುದ್ಧಿ
೧೯೨	,,	ತೂಲಂಘಾ	ತೂಲಸಂಘಾ

॥ श्रीः ॥

ಶ್ರೀ ತತ್ವಸಂಗ್ರಹ ರಾಮಾಯಣಂ

ಕಿಷ್ಕಿಂಧಾಕಾಂಡಂ

ಶ್ರೀಮನ್ಮಹಾರಾಜ

ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್, ಜೆ ಸಿ ಎಸ್ ಐ,

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಕಾಸ್ತ್ರಿ ವಿರಚಿತ

ತತ್ವಪ್ರಕಾಶನಾಮಕ ಟೀಕಾಸಹಿತಂ

ಆನಂದ ಸಂ॥ ಚೈತ್ರ ಶು॥ ೯

ಮೈಸೂರು

ಜಿ ಟಿ ಎ ಪ್ರೆಸ್

೧೯೧೪

(ಆಲ್‌ರೈಟ್ಸ್ ರಿಜಸ್ಟರ್ಡ್)

ಶ್ರೀ ತತ್ವಸಜ್ಜ್ಞಾನ ರಾಮಾಯಣಂ

ಕಿಷ್ಕಿಂಧಾ ಕಾಂಡ

ವಿಷಯಸೂಚಿಕಾ

ಸರ್ಗ	ವಿಷಯ	ಪುಟ
೧	ಹನುಮದ್ರಾಮದರ್ಶನ ..	೧
೨	ಸುಗ್ರೀವಸಖ್ಯಾದಿ ಕಥನ . .	೧೧
೩	ಶ್ರೀರಾಮ ವಿಶ್ವರೂಪ ಪ್ರದರ್ಶನ ..	೨೦
೪	ಶ್ರೀರಾಮ ಸಹಸ್ರನಾಮ	೨೫
೫	ವಾಲಿವಧಕಥನ	೧೦೧
೬	ರಾಮಕೃತ ತಾರಾತತ್ವೋಪದೇಶ .. .	೧೦೩
೭	ಸುಗ್ರೀವಪಟ್ಟಾಭಿಷೇಕ ಕಥನ	೧೩೪
	ತತ್ವಮಾರ್ಗವ್ಯಾಜೇನ ವರ್ಷರ್ತು ವರ್ಣನ ..	
೮	ಶ್ರೀರಾಮಭಕ್ತಿ ಸಾಧನ	೧೪೦
	ವರ್ಣಾಶ್ರಮಧರ್ಮಮಾರ್ಗ ಕಥನ ...	
೯.	ರಾಮನಾಮಕೋಟಿಜಪ ವಿಧಾನ ...	೧೫೧
೧೦.	ಸುಗ್ರೀವಾಗಮನ ..: ...	೧೫೭
೧೧	ವಾನರಪ್ರೇಷಣಾದಿ ಕಥನ	೧೬೪
೧೨,	ಹನೂಮದುತ್ಪತ್ತಿಪರಾಕ್ರಮಕಥನ ..	೧೭೨
೧೩	ಹನೂಮದ್ವರದಾನ ಮುದ್ರಿಕಾಪ್ರದಾನಕಥನ ...	೧೭೬
೧೪.	ಶ್ರೀರಾಮವಜ್ರಕವಚ ಕಥನಂ	೧೮೧
೧೫	ಸೀತಾವಿಚಯಯೋಗಿನೀದರ್ಶನಕಥನ ...	೧೮೫
೧೬	ಸ್ವಯಂಪ್ರಭಾಖ್ಯಾನ	೧೯೧
೧೭.	ಸಮ್ಪಾತಿಸಮಾಗಮ	೧೯೮
೧೮	ಸಮುದ್ರತರಣೋದ್ಯೋಗ	೨೧೩



ಓಮ್

॥ ಶ್ರೀರಸ್ತು ॥

ಶ್ರೀ ತತ್ವಸಂಗ್ರಹ ರಾಮಾಯಣಂ.

ಕಿಷ್ಕಿಂಧಾಕಾಂಡಮ್

ಶ್ರೀರಾಮಚಂದ್ರಾಯ ಪರಮಾತ್ಮನೇ ನಮೋನಮಃ

ಶ್ರೀಶಿವಉವಾಚ

ತತಃ ಸಲಕ್ಷ್ಮಣೋ ರಾಮಃ ಶನೈಃ ಪಮ್ಪಾಸರಸ್ತಟಮ್ ।
ಆಗತ್ಯ ಸರಸಾಂ ಶ್ರೇಷ್ಠಂ ದೃಷ್ಟ್ವಾ ವಿಸ್ಮಯಮಾಯಯೌ ॥೧॥
ಏತಸ್ಮಿನ್ನೇವ ಸಮಯೇ ಗಿರಿಮಸ್ತಕದೇಶಭಾಕ್ ।
ದದರ್ಶ ತತ್ರ ಸುಗ್ರೀವಃ ಪಮ್ಪಾತೀರೇ ರಘೂತ್ತಮಮ್ ॥೨॥
ವಲ್ಕಲಾಜಿನಸಂವೀತಂ ಖಡ್ಗತೂಣೀಧನುರ್ಧರಮ್ ।
ವೀರಮೂರ್ತಿಂ ವೀರರಾಮಂ ವೀರಶ್ರೀಬನ್ಧುರಾಙ್ಗಕಮ್ ॥೩॥

ಶ್ರೀರಸ್ತು

ಕಿಷ್ಕಿಂಧಾಕಾಂಡವು.

ಶ್ರೀಪರಮೇಶ್ವರನು ಪಾರ್ವತೀದೇವಿಯನ್ನು ಕುರಿತು ಪುನಃ ಹೇಳಲುಪಕ್ರಮಿಸಿದನು —

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಶಬರಿಗೆ ಸದ್ಗತಿಯನ್ನು ಕೊಟ್ಟ ಬಳಿಕ, ಶ್ರೀರಾಮನು ಲಕ್ಷ್ಮಣನೊಡನೆ ಪಂಪಾಸರಸ್ಸಿನ ತೀರಕ್ಕೆ ಬಂದು, ದಿವ್ಯವಾದ ಆ ಸರೋವರವನ್ನು ನೋಡಿ ಅತಿ ವಿಸ್ಮಯಪರವಶನಾದನು ॥೧॥

ಈ ಸಮಯದಲ್ಲಿಯೇ, ಋಶ್ಯಮೂಕಪರ್ವತದ ಮೇಲುಗಡೆಯಿದ್ದ ಸುಗ್ರೀವನು, ಆ ಪಂಪಾತೀರದಲ್ಲಿದ್ದ ರಘುನಾಥನನ್ನು ಕಂಡನು ॥೨॥

ಆಗ, ವಲ್ಕಲ ಕೃಷ್ಣಾಜಿನಗಳಿಂದ ಆಚ್ಛಾದಿತನಾಗಿಯೂ- ಧನುಸ್ಸು ಖಡ್ಗ ತೂಣೀರಗಳನ್ನು ಧರಿಸಿಯೂ-ವೀರಮೂರ್ತಿಯಾಗಿಯೂ-ವೀರಶ್ರೀಬಂಧುರಶರೀರನಾಗಿಯೂ ಇರುವ ವೀರರಾಘವಮೂರ್ತಿಯನ್ನು ಕಂಡು, ಆ ಸುಗ್ರೀವನು ಮನಸ್ಸಿನಲ್ಲಿಯೇ ವಿಸ್ಮಯಪಡುತ ಹೀಗೆ ಯೋಚಿಸಿದನು.—ಅತ್ಯದ್ಭುತನಾಗಿ ಕಾಣಿಸುತಿರುವ ಈ ಪುರುಷನು ಯಾರಿರಬಹುದು? ತ್ರಿಪುರಾಸುರ ಸಂಹಾರಮಾಡಿದ ಶ್ರೀಶಿವನೆ? ಅಥವಾ ಶ್ರೀಮನ್ನಾರಾಯಣನೇ ಭೂಭಾರಹರಣಕ್ಕಾಗಿ ಹೀಗೆ

ದೃಷ್ಟ್ವಾ ತಂ ವಿಸ್ಮಿತಮನಾಃ ಕೋಯಮದ್ಭುತದರ್ಶನಃ ।
ಶಿವಸ್ತ್ರಿಪುರಸಂಹರ್ತಾ ಹರಿರ್ನಾರಾಯಣೋಧ ವಾ ।
ಭೂಭಾರಹರಣಾರ್ಥಾಯ ನೂನಂ ಮಾನುಷತಾಂ ಗತಃ ॥೪॥
ಉಭಯಾತ್ಮಾ ಇವಾಭಾತಿ ನ ಹಿ ಕೇವಲಮಾನುಷಃ ॥೫॥
ನೈತದ್ರೂಪಂ ದೇವತಾಸು ಮಾನುಷೇಷು ತು ಕಾ ಕಥಾ ।
ಅಹೋಸ್ಯ ದೇಹಸೌನ್ದರ್ಯಂ ನ ದೃಷ್ಟಂ ನ ಚ ಮೇ ಶ್ರುತಮ್ ।
ಅಪೂರ್ವದೇಹಸೌನ್ದರ್ಯಾತ್ ಪುರುಷೋಯಂ ನ ಮಾನುಷಂ ॥೬॥
ಇತಿ ಸಞ್ಚಿನ್ತ್ಯ ಮನಸಾ ಹನೂಮನ್ತಮಥಾಬ್ರವೀತ್ ॥೭॥
ಆಗಚ್ಛ ಹನುಮನ್ ವೀರ ಮಹಾಬಲಪರಾಕ್ರಮ ।
ಶಿವೋಸಿ ಜನ್ಮತಃ ಸಾಕ್ಷಾತ್ ಶಿವವೀರ್ಯಸಮುದ್ಭವಃ ।೮॥
ತ್ರೈಲೋಕ್ಯಾನ್ನ ಭಯಂ ತೇಸ್ತಿ ಭಯಙ್ಕರ್ಪವಿನಾಶನ ।
ತವ ಸ್ಮರಣಮಾತ್ರೇಣ ಚೋರಶತ್ರುವಿನಾಶನಮ್ ॥೯॥
ಅಯಂ ಪಮ್ಪಾಸರಸ್ತೀರೇ ದೃಶ್ಯತೇ ಮನುಜಾಕೃತಿಃ ।
ಮಹಾಬಲಃ ಸಾನುಚರೋ ಧೃತಕೋದಣ್ಡಸಾಯಕಃ ॥೧೦।
ತಸ್ಯಾಗಮನಕಾರ್ಯಂ ಕಿಂ ಪಮ್ಪಾತೀರೇ ನಿವೇಶನಮ್ ।
ವಾಲಿನಾ ಪ್ರೇರಿತೋ ವಾಪಿ ಸ್ವತನ್ತ್ರೋ ವಾ ವನಕ್ಷಮಃ ॥೧೧॥

ಮನುಷ್ಯರೂಪವನ್ನು ಸ್ವೀಕರಿಸಿ ಬಂದಿರಬಹುದು, ಇದೇ ನಿಶ್ಚಯವು ಇವನು ಶ್ರೀಹರಿಹರಾತ್ಮಕನಾಗಿರುವನೆಂದು ನನಗೆ ತೋರುವುದು, ಕೇವಲ ಮನುಷ್ಯಮಾತ್ರನಲ್ಲ ದೇವತೆಗಳಲ್ಲಿಯೇ ಇಂತಹ ರೂಪವಿಲ್ಲ, ಇನ್ನು ಮನುಷ್ಯರಲ್ಲಿ ಹೇಳುವುದೇನು ? ಅಹಹ ! ಇವನ ದೇಹದಲ್ಲಿರುವಂತಹ ಸೌಂದರ್ಯವನ್ನು ನಾನು ನೋಡಿಯೂ ಇಲ್ಲ, ಕೊನೆಗ ಕೇಳಿಯೂ ಇಲ್ಲ ಅಪೂರ್ವವಾದ ದೇಹ ಸೌಂದರ್ಯವಿರುವುದರಿಂದ, ಈ ಪುರುಷನು ಮನುಷ್ಯನಲ್ಲ ಈರೀತಿಯಾಗಿ ಮನಸ್ಸಿನಲ್ಲಿ ಯೋಚಿಸಿ, ಬಳಿಕ ಹನುಮಂತನನ್ನು ಕುರಿತು ಹೀಗೆ ಹೇಳಿದನು ॥೩-೭॥

ಎಲೈ ಮಹಾವೀರನಾದ ಹನುಮಂತನೆ ! ಇಲ್ಲಿ ಬಾ ನೀನು ಮಹಾಬಲಶಾಲಿಯು, ನಿನ್ನ ಪರಾಕ್ರಮವು ಅತಿ ಮಹತ್ತಾದುದು ನೀನು ಸಾಕ್ಷಾತ್ ಪರಮಶಿವಸ್ವರೂಪನು, ಶಿವವೀರ್ಯದಿಂದ ಹುಟ್ಟಿದವನು ॥೮॥

ಸಮಸ್ತ ಲೋಕಗಳಿಗೂ ಭಯವನ್ನೂ ಕಂಪವನ್ನೂ ನಾಶಪಡಿಸತಕ್ಕವನೆ ! ನಿನಗೆ ಮೂರು ಲೋಕದಲ್ಲಿಯೂ ಭಯವಿಲ್ಲ ನಿನ್ನ ಸ್ಮರಣಮಾತ್ರದಿಂದಲೇ ಚೋರರೂ ಶತ್ರುಗಳೂ ನಾಶಹೊಂದುವರು ॥೯॥

ಇದೋ ಈ ಪಂಪಾಸರಸ್ಸಿನ ತೀರದಲ್ಲಿ ಒಬ್ಬ ಮನುಷ್ಯನಂತಿರುವವನು ಕಾಣಿಸುವನು ಇವನು ಮಹಾಬಲಶಾಲಿಯೆಂದು ತೋರುವುದು ; ಇವನ ಹಿಂದುಗಡೆ ಒಬ್ಬ ಅನುಚರನಿರುವನು, ಇವನು ಧನುಸ್ಸನ್ನೂ ಬಾಣವನ್ನೂ ಧರಿಸಿರುವನು ॥ ೧೦॥

ಇವನು ಇಲ್ಲಿ ಬರುವುದಕ್ಕೆ ಏನು ಉದ್ದೇಶವಿರಬಹುದು ? ಈ ಪಂಪಾತೀರದಲ್ಲಿ ಇಳಿದು

ಭಯಮಸ್ಮಾತ್ ಸಮುತ್ಪನ್ನಂ ಹೃದಯಂ ನ ತು ಕಮ್ಪತೇ ।
ಮಮ ಬನ್ಧುರಿವಾಭಾತಿ ಸ್ವಾಮಿವಾಖಿಲದಾಯಕಃ ।
ಹೃದಯಂ ವಕ್ತಿ ಮೇ ತಸ್ಮಾತ್ ಶ್ರೇಯಃಪ್ರಾಪ್ತಿರ್ಭವಿಷ್ಯತಿ ॥೧೦॥
ತಥಾಪಿ ನಿಕಟೇ ಶತ್ರುಃ ವರ್ತತೇ ಬಲವತ್ತರಃ ।
ತಸ್ಮಾದ್ಭಯಂ ಸಮುತ್ಪನ್ನಂ ತದ್ದೂತೋಽಯಂ ಭವಿಷ್ಯತಿ ॥೧೧॥
ಸುಗ್ರೀವೇಣೈವಮುಕ್ತಃ ಸ ಹನೂಮಾನ್ ಪ್ರತ್ಯುವಾಚ ತಮ್ ॥೧೪॥
ಪ್ರತಿಭಾತಿ ಸ್ವತನ್ತ್ರೋಽಯಂ ನ ಹಿ ದೂತತ್ವಮೇಷ್ಯತಿ ।
ನ ಹೀದೃಶಾಭವಿಷ್ಯನ್ತಿ ದೂತಾಸ್ತೇಜೋಬಲೋನ್ನತಾಃ ॥೧೩॥
ಸರ್ವೇ ದಾಸತ್ವಮೇಷ್ಯನ್ತಿ ನ ಹ್ಯಸ್ಮಾದಧಿಕಃ ಪುಮಾನ್ ।
ಅತ್ರ ತೇಜೋಽವಿಶೇಷೋಽಸ್ತಿ ಜಗತ್ಸ್ವಾಮಿತ್ವಸೂಚಕಃ ॥೧೬॥
ವ್ಯಾಚಷ್ಟೇ ರೂಪಮಸ್ಯೈವ ನಿಗ್ರಹಾನುಗ್ರಹಕ್ಷಮಮ್ ।
ನ ಭಯಂ ವಿದ್ಯತೇಽಸ್ಮಾಕಂ ಅಸ್ಮಾತ್ ಪುರುಷಸತ್ತಮಾತ್ ।
ದಕ್ಷಿಣಃ ಸ್ಪನ್ದತೇ ಬಾಹುಃ ಪರಂ ಶ್ರೇಯೋ ಭವಿಷ್ಯತಿ ॥೧೭॥

ಕೊಂಡಿರುವುದೇಕೆ ? ಇವನು ವಾಲಯಿಂದ ಪ್ರೇರಿತನಾಗಿ ಬಂದಿರುವನೆ ? ಅಥವಾ, ವನಸಂಚಾರದಲ್ಲಿ ಕುಶಲನಾದ ಸ್ವತಂತ್ರ ಪುರುಷನೆ ? ॥೧೧॥

ಇವನದೆಸೆಯಿಂದ ನನಗ ಭಯವೇನೋ ಹುಟ್ಟಿರುವುದು, ಮನುಸ್ಸಾದರೋ ಸ್ವಲ್ಪವೂ ನಡುಗದಿರುವುದು ಇವನು ನನಗೆ ಒಂದುವಿನಂತೆಯೂ ಸಕಲ ಶ್ರೇಯಸ್ಸನ್ನೂ ಕೊಡುವ ಸ್ವಾಮಿಯಂತೆಯೂ ತೋರುವನು ಇವನಿಂದ ನನಗ ಶ್ರೇಯೋಲಾಭವುಂಟಾಗುವುದೆಂದು ನನ್ನ ಮನಸ್ಸು ನನಗ ಹೇಳುತಿರುವುದು ॥೧೨॥

ಆದರೂ, ಸಮೀಪದಲ್ಲಿಯೇ ಅತಿ ಪ್ರಬಲನಾದ ಶತ್ರುವಿರುವನು, ಇವನು ಅವನ ದೂತನಾಗಿರಬಹುದೆಂಬ ಶಂಕೆಯಿಂದ ಇವನಿಗೆ ಹದರಬೇಕಾಗಿರುವುದು ಆದುಕಾರಣ, ಇವನ ಸ್ವರೂಪವನ್ನು ಚೆನ್ನಾಗಿ ತಿಳಿಯಲು ಇಚ್ಛಿಸುತಿರುವೆನು ॥೧೩॥

ಹೀಗೆಂದು ಹೇಳಿ ಸುಗ್ರೀವನು ಸುಮ್ಮನಾಗಲಾಗಿ, ಅವನಿಂದ ಈರೀತಿಯಾಗಿ ಹೇಳಲ್ಪಟ್ಟ ಮಹಾಪ್ರಾಜ್ಞಶಿರೋಮಣಿಯಾದ ಹನುಮಂತನು, ತನ್ನ ಪ್ರಭುವಾದ ಸುಗ್ರೀವನನ್ನು ಕುರಿತು ಹೀಗೆ ಉತ್ತರ ಹೇಳಿದನು ॥೧೪॥

ಪ್ರಭೋ ! ಸುಗ್ರೀವ ! ಅಲ್ಲಿ ಕಾಣುವ ಪುರುಷನು ಪ್ರಾಯಶಃ ಸ್ವತಂತ್ರನೇ ಆಗಿರಬಹುದೆಂದು ನನಗ ತೋರುವುದು ಇವನು ದೂತತ್ವವನ್ನು ಹೊಂದಿದಲಾರನು ಇಂತಹ ಪ್ರಬಲವಾದ ತೇಜೋಬಲಸಂಪನ್ನರಾದವರು ಎಂವಿಗೂ ಒಬ್ಬರಿಗೆ ದೂತರಾಗಿರುವುದಿಲ್ಲ ॥೧೫॥

ಇವನನ್ನು ನೋಡಿದರೆ, ಇವನಿಗೇ ಎಲ್ಲರೂ ದಾಸರಾಗಿರಬಹುದೆಂದೂ, ಇವನಿಗಿಂತ ಮೇಲಾದ ಮನುಷ್ಯನೇ ಈ ಪ್ರಪಂಚದಲ್ಲಿಲ್ಲವೆಂದೂ ತೋರುವುದು. ಜಗತ್ತಿಗೆಲ್ಲಾ ಒಡೆಯನೆಂದು ಸೂಚಿಸುವ ತೇಜೋವಿಶೇಷವಿವನಲ್ಲಿರುವುದು ॥೧೬॥

ಇವನ ರೂಪವೇ ಇವನು ಸರ್ವಲೋಕಗಳಿಗೂ ನಿಗ್ರಹಾನುಗ್ರಹದಕ್ಷನೆಂಬುದನ್ನು ಹೇಳುತಿರುವುದು ಇಂತಹ ಈ ಪುರುಷೋತ್ತಮನದೆಸೆಯಿಂದ ನಮಗೆ ಸ್ವಲ್ಪವೂ ಭಯವಿರುವುದಿಲ್ಲ. ಈಗ ನನಗೆ ಒಳ್ಳುವ ಹಾರುವುದು ಸರ್ವಥಾ ಹಬ್ಬಾಗಿ ಶ್ರೇಯಃಪ್ರಾಪ್ತಿಯಾಗುವುದು॥

ಇತ್ಯುಕ್ತ್ವಾ ಪ್ರೇಷಿತಸ್ತೇನ ಹನೂರ್ಮಾ ಮಾರುತಾತ್ಮಜಃ ।
ಮಹಾವೇಗಃ ಸಮಾಸಾದ್ಯ ಪ್ರಯಯೌ ರಾಮಸನ್ನಿಧಿಮ್ ॥೧೯॥
ಸಮಕ್ಷಕ್ರೇಥ ರಾಮಾಯ ಪ್ರೇರಿತೋ ರಾಮತೇಜಸಾ ।
ಮಹತ್ಸನ್ನಿಧಿಮಾಸಾದ್ಯ ಕಸ್ಯ ಪ್ರೀತಿರ್ನ ಜಾಯತೇ ॥೧೯॥
ಮಹಾಮೇರುಸಮಾಕಾರಂ ರತ್ನಭೂಷಣಭೂಷಿತಮ್ ।
ಸುವರ್ಣಕುಂಡಲಧರಂ ಮುಕ್ತಾಹಾರಾತಿಶೋಭಿತಮ್ ॥೨೦॥
ಮೌಞ್ಜೀಸನ್ನದ್ಧಕೌಪೀನಂ ಪಾದಾಙ್ಗದರಣತ್ಪದಮ್ ।
ಪ್ರಸನ್ನವದನಂ ಸ್ವಚ್ಛಸ್ವರ್ಣನಿರ್ಮಲವಿಗ್ರಹಮ್ ॥೨೧॥
ದೃಷ್ಟ್ವಾ ರಾಮಃ ಪ್ರಸನ್ನಾತ್ಮಾ ಹನೂಮನ್ತಮಥಾಬ್ರವೀತ್ ॥೨೨॥
ಸೌಮ್ಯಾಕಾರಗುಣೋಪೇತ ಕಸ್ಮಾದಾಗಮಸಂ ತವ ।
ದರ್ಶನೇನ ಕಿಮಸ್ಮಾಕಂ ವದಾಸ್ಮಾಭಿಃ ಪ್ರಯೋಜನಮ್ ॥೨೩॥

ಶ್ರೀಹನುಮಾನುವಾಚ

ಸುಗ್ರೀವಇತಿ ವಿಖ್ಯಾತೋ ವಾನರೌಘಪತಿರ್ಬಲೀ ।
ತಸ್ಯ ಭ್ರಾತಾ ಮಹಾವಿರ್ಯೋ ವಾಲೀ ಬಲವತಾಂ ವರಃ ॥೨೪॥

ಹೀಗೆಂದು ಹೇಳಿದಬಳಿಕ, ಸುಗ್ರೀವನಿಂದ ಪ್ರೇಷಿತನಾಗಿ, ವಾಯುಪುತ್ರನಾದ ಆ ಹನುಮಂತನು, ಮಹತ್ತಾದ ವೇಗವನ್ನು ಆಶ್ರಯಿಸಿ ಶ್ರೀರಾಮನ ಸನ್ನಿಧಿಗೆ ಒಂದು ನಿಮಿಷಾರ್ಧದಲ್ಲಿ ಬಂದನು ॥೧೮॥

ಅಲ್ಲಿಗೆ ಬಂದ ಬಳಿಕ, ಶ್ರೀರಾಮನ ತೇಜಸ್ಸು ಇವನಿಗೆ ನಮಸ್ಕಾರಮಾಡುವಂತೆ ಅವನನ್ನು ಪ್ರೇರಿಸಿತು, ಹೀಗೆ ಪ್ರೇರಿಸಲ್ಪಟ್ಟವನಾಗಿ, ಶ್ರೀರಾಮನಿಗೆ ನಮಸ್ಕಾರಮಾಡಿದನು ಮಹಾತ್ಮರ ಸನ್ನಿಧಿಗೆ ಬಂದರೆ ಯಾವನಿಗೆತಾನೆ ಪ್ರೀತಿ ಹುಟ್ಟುವುದಿಲ್ಲ ? ॥೧೯॥

ಆ ಬಳಿಕ, ಮಹಾಮೇರುಸಮಾನದೇಹನಾಗಿಯೂ, ರತ್ನಭೂಷಣಗಳಿಂದಲಂಕೃತನಾಗಿಯೂ, ಸುವರ್ಣಕುಂಡಲಗಳನ್ನು ಧರಿಸಿದವನಾಗಿಯೂ, ಮುಕ್ತಾಹಾರದಿಂದ ವಿಶೇಷವಾಗಿ ವಿರಾಜಮಾನನಾಗಿಯೂ, ಮೌಂಜಿಯಲ್ಲಿ ಕೌಪೀನವನ್ನು ಕಟ್ಟಿಕೊಂಡಿರತಕ್ಕವನಾಗಿಯೂ, ನೂಪುರಗಳಿಂದ ಧ್ವನಿಗೈಯುತಿರುವ ಚರಣವುಳ್ಳವನಾಗಿಯೂ, ಪ್ರಸನ್ನಮುಖನಾಗಿಯೂ, ಪುಟಪಾಕಶೋಧಿತವಾಗಿರುವ ಸುವರ್ಣದಂತೆ ಸ್ವಚ್ಛವಾದ ಶರೀರವುಳ್ಳವನಾಗಿಯೂ ಇರುವ ಹನುಮಂತನನ್ನು ನೋಡಿ, ಶ್ರೀರಾಮನು ಹೀಗೆ ಹೇಳಿದನು ॥೨೦-೨೨॥

ಅತಿ ಸೌಮ್ಯವಾದ ಆಕಾರದಿಂದಲೂ ಗುಣಗಳಿಂದಲೂ ಯುಕ್ತನಾಗಿರುವ ಎಲೈ ಮಹಾನುಭಾವನೆ! ನೀನು ಎಲ್ಲಿಂದ ಬಂದಿರುವೆ ? ನಮ್ಮ ದರ್ಶನದಿಂದ ನಿನಗೆ ಏನು ಆಗಬೇಕಾಗಿರುವುದು? ನಮ್ಮಗಳಿಂದ ನಿನಗೆ ಯಾವ ಪ್ರಯೋಜನವು ಸಿದ್ಧಿಸಬೇಕಾಗಿರುವುದು ? ಹೇಳುವನಾಗು ॥೨೩॥

ಹೀಗೆಂದು ಪ್ರಶ್ನೆಮಾಡಲ್ಪಟ್ಟ ಹನುಮಂತನು ವಿಜ್ಞಾಪಿಸುವನು:—

ಸುಗ್ರೀವನೆಂದು ಪ್ರಸಿದ್ಧನಾಗಿರುವ ಅತಿ ಬಲಶಾಲಿಯಾದ ಕಪಿರಾಜನೊಬ್ಬನಿರುವನು;

ತಯೋರ್ವಿವಾದಃ ಸುಮಹಾನ್ ಅಸೀತ್ ತಾರಾನಿಮಿತ್ತತಃ ।
ರೂಪವತ್ಯಾಃ ಸ್ತ್ರಿಯೋ ಮೂಲಂ ವೈರಸ್ಯ ನಿಧನಾಯ ಚ ॥೨೫॥
ಪತ್ನೀರಾಜ್ಯಪರಿಭ್ರಷ್ಟೋ ದುರ್ವಿಚಾರಹತೋದ್ಯಮಃ ।
ಋಶ್ಯಮೂಕಾದ್ರಿಶಿಖರೇ ಸ್ಥಿತಃ ಸೂರ್ಯಸುತೋ ಬಲೀ ॥೨೬॥
ದೃಷ್ಟ್ವಾ ಭವನ್ತಮಾಯಾನ್ತಂ ಪಮ್ಪಾತೀರನಿವಾಸಿನಮ್ ।
ದೇವತಾಭಾವನಾಯುಕ್ತೋ ಯುವಯೋರ್ದರ್ಶನಾತ್ ಸುಧೀಃ ।
ಅತ್ಯಾನನ್ದಭರಾಕಾನ್ತೋ ದುಃಖನೀರಧಿಮಧ್ಯಗಃ ॥೨೭॥
ನತ್ವಾ ಮಹೋನ್ನತಂ ವೀರಂ ಶರಣ್ಯಂ ಶರಣಾರ್ಥಿನಾಮ್ ।
ಯುವಾಭ್ಯಾಂ ಸಹ ಧರ್ಮಾತ್ಮಾ ಸುಗ್ರೀವಃ ಸಖ್ಯಮಿಚ್ಛತಿ ॥೨೮॥
ತಸ್ಯ ಮಾಂ ಸಚಿವಂ ವಿದ್ಧಿ ವಾನರಂ ಪವನಾತ್ಮಜಮ್ ।
ಋಶ್ಯಮೂಕಾದಿಹ ಪ್ರಾಪ್ತಂ ಕಾಮಗಂ ಕಾಮರೂಪಿಣಮ್ ॥೨೯॥
ಮದಾಗಮನವೃತ್ತಾನ್ತಃ ಸುಗ್ರೀವಸ್ಯ ಚ ಶಂಸಿತಃ
ಯುಷ್ಮತ್ತತ್ತ್ವಂ ನ ಜಾನಾಮಿ ಶ್ರೋತುಮುತ್ಸಹೇ ॥೩೦॥

ಅವನಿಗೆ, ಮಹಾವೀರ್ಯನಾಗಿಯೂ ಒಲಿಷ್ಕರಲ್ಲೆಲ್ಲ ಶ್ರೇಷ್ಠನಾಗಿಯೂ ಇರುವ ವಾಲಿಯೆಂಬ ಅಗ್ರಜನೊಬ್ಬನಿರುವನು ॥೨೪॥

ಈ ವಾಲಿಸುಗ್ರೀವರಿಬ್ಬರಿಗೂ ತಾರೆಯೆಂಬ ಒಬ್ಬ ಸ್ತ್ರೀಯ ನಿಮಿತ್ತದಿಂದ ಅತಿ ಪ್ರಬಲವಾದ ಕಲಹವುಂಟಾಗಿಬಿಟ್ಟಿತು ಲೋಕದಲ್ಲಿ ರೂಪವತಿಯರಾದ ಸ್ತ್ರೀಯರೇ, ವೈರಕ್ಕೂ ಕೊನೆಗೆ ಮರಣಕ್ಕೂ ಮೂಲಕಾರಣರಾಗಿರುವರಲ್ಲವೆ! ॥೨೫॥

ಈ ಕಾರಣದಿಂದ, ಮಹಾಬಲಶಾಲಿಯಾಗಿದ್ದರೂ ಸೂರ್ಯಪುತ್ರನಾಗಿರುವ ಸುಗ್ರೀವನು ತನ್ನ ಪತ್ನಿಯನ್ನೂ ರಾಜ್ಯವನ್ನೂ ಕಳೆದುಕೊಂಡು, ಸರ್ವದಾ ವಿಚಾರಮಗ್ನನಾಗಿ ಯಾವ ಪ್ರಯತ್ನವನ್ನೂ ಮಾಡಲಾಗದ ಈ ಋಶ್ಯಮೂಕಪರ್ವತದ ಶಿಖರದಲ್ಲಿ ವಾಸಮಾಡುತಿರುವನು ॥೨೬॥

ಹೀಗಿರುವ ಮಹಾನುಭಾವನಾದ ಆ ಸುಗ್ರೀವನು, ನೀನು ಮಾರ್ಗದಲ್ಲಿ ಬರುತ ಪಂಪಾತೀರದಲ್ಲಿ ಇಳಿದುಕೊಂಡಿರುವುದನ್ನು ಕಂಡು, ನಿಮ್ಮಿಬ್ಬರನ್ನೂ ನೋಡಿ ಸಾಕ್ಷಾದ್ದೇವತೆಗಳೆಂದು ಭಾವಿಸಿಕೊಂಡವನಾಗಿ, ದುಃಖಸಮುದ್ರಮಧ್ಯದಲ್ಲಿ ಮುಣುಗಿದ್ದವನಾದರೂ ಈಗ ಅತಿಯಾಗಿ ಆನಂದಾತಿರೇಕದಿಂದ ವ್ಯಾಪ್ತನಾಗಿರುವನು ॥೨೭॥

ಧರ್ಮಾತ್ಮನಾದ ಆ ಸುಗ್ರೀವನು, ಸರ್ವಲೋಕೋತ್ತರನಾಗಿಯೂ ಮಹಾ ವೀರನಾಗಿಯೂ ಶರಣಾರ್ಥಿಗಳಿಗೆಲ್ಲ ಶರಣಪ್ರದನಾಗಿಯೂ ಇರುವ ನಿನಗೆ ನಮಸ್ಕಾರಮಾಡಿ, ನಿಮ್ಮಿಬ್ಬರೊಡನೆಯೂ ಸಖ್ಯವನ್ನು ಬೆಳೆಯಿಸಬೇಕೆಂದು ಇಚ್ಛಿಸುತಿರುವನು ॥೨೮॥

ಆರ್ಯಾ! ಮಹಾನುಭಾವನ! ನಾನು ಆ ಸುಗ್ರೀವನಿಗೆ ಮಂತ್ರಿಯಾದ ವಾಯುಪುತ್ರನಾದ ವಾನರನೆಂಬುದಾಗಿ ತಿಳಿ ನಾನು ಈಗ ಋಶ್ಯಮೂಕಪರ್ವತದಿಂದ ಇಲ್ಲಿಗೆ ಬಂದಿರುವೆನು; ಸ್ವೇಚ್ಛೆಯಾಗಿ ಸಂಚರಿಸುವುದಕ್ಕೂ ಬೇಕಾದ ರೂಪವನ್ನು ಗ್ರಹಿಸುವುದಕ್ಕೂ ನನಗೆ ಸಾಮರ್ಥ್ಯವುಂಟು ॥೨೯॥

ಸ್ವಾಮೀ! ಇದೋ ಹೀಗೆ ನಾನು ಇಲ್ಲಿಗೆ ಬಂದಿರುವ ವೃತ್ತಾಂತವನ್ನೂ, ಸುಗ್ರೀವನ

ಅಜ್ಞಾಪ್ಯತಾಂ ಮಹಾತೇಜಃ ಶ್ರೋತುಂ ಮೇ ಯೋಗ್ಯತಾಸ್ತಿ ಚೇತ್ ॥
ಏವಮುಕ್ತ್ವಾ ತು ಹನುಮಾ ತೌ ವೀರೌ ರಾಮಲಕ್ಷ್ಮಣೌ ।
ವಾಕ್ಯಜ್ಞೌ ವಾಕ್ಯಕುಶಲಃ ಪುನರ್ವೋವಾಚ ಕಿಞ್ಚನ ॥೩೦॥
ತಚ್ಛ್ರುತ್ವಾ ವಚನಂ ತಸ್ಯ ರಾಮೋ ಲಕ್ಷ್ಮಣಮಬ್ರವೀತ್ ।
ಪ್ರಹೃಷ್ಟವದನಃ ಶ್ರೀಮಾ ಭ್ರಾತರಂ ಪಾರ್ಶ್ವತಃ ಸ್ಥಿತಮ್ ॥೩೧॥
ಸಚಿವೋಯಂ ಕಪೀನ್ದ್ರಸ್ಯ ಸುಗ್ರೀವಸ್ಯ ಮಹಾತ್ಮನಃ ।
ತಮೇವ ಕಾಂಕ್ಷಮಾಣಸ್ಯ ಮಮಾನ್ತಿಕಮುಪಾಗತಃ ॥೩೨॥
ನಾಋಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ ।
ನಾಸಾಮವೇದವಿದುಷಃ ಶಕ್ಯಮೇವಂ ಪ್ರಭಾಷಿತುಮ್ ॥೩೩॥
ನೂನಂ ವ್ಯಾಕರಣಂ ಕೃತ್ಸ್ನಂ ಅನೇನ ಬಹುಧಾ ಶ್ರುತಮ್ ।
ಬಹು ವ್ಯಾಹರತಾನೇನ ನ ಕಿಞ್ಚಿದಪಶಬ್ದಿತಮ್ ॥೩೪॥
ಸಂಸ್ಕಾರಕ್ರಮಸಂಪನ್ನಾಂ ಅದ್ರುತಾಮವಿಲಮ್ಬಿತಾಮ್
ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್ ॥೩೫॥

ವಿಷಯವನ್ನೂ ತಮ್ಮಲ್ಲಿ ತಿಳುಹಿಸಿರುವೆನು, ಆದರೆ, ನಿಮ್ಮಗಳ ಯಾಥಾರ್ಥ್ಯಜ್ಞಾನವು ನನಗುಂಟಾಗಲಿಲ್ಲ ತಮ್ಮ ಮುಖಕಮಲದಿಂದ ಅದನ್ನು ಕೇಳಿ ತಿಳಿದುಕೊಳ್ಳಬೇಕೆಂದು ಬಹಳವಾಗಿ ಉತ್ಸುಕಿತನಾಗಿರುವೆನು ಎಲೈ ಮಹಾ ತೇಜಸ್ವಿಯ! ಅದನ್ನು ಕೇಳುವುದಕ್ಕೆ ನನಗೆ ಯೋಗ್ಯತೆಯಿದ್ದಪಕ್ಷದಲ್ಲಿ, ಅದನ್ನು ಅನುಗ್ರಹವಿಟ್ಟು ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುವೆನು ॥

ಎಲೌ ಪಾರ್ವತಿ! ಈರೀತಿಯಾಗಿ ವಾಕ್ಯಜ್ಞರಾಗಿರುವ ಮಹಾವೀರರಾದ ರಾಮಲಕ್ಷ್ಮಣರಿಗೆ ಹೇಳಿಬಿಟ್ಟು, ವಾಕ್ಯಕುಶಲನಾದ ಆ ಹನುಮಂತನು ಮತ್ತೆ ಯಾವ ಮಾತನ್ನೂ ಆಡಲಿಲ್ಲ॥

ಆಗ ಈರೀತಿಯಾಗಿ ಹೇಳಿದ ಆ ಹನುಮಂತನ ಮಾತನ್ನು ಕೇಳಿ ಮುಖದಲ್ಲಿ ವಿಶೇಷವಾಗಿ ಹರ್ಷತೋರುತಿರುವ ಶ್ರೀರಾಮಚಂದ್ರನು, ಪಾರ್ಶ್ವದಲ್ಲಿರುವ ತನ್ನ ಸಹೋದರನಾದ ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು ॥೩೩॥

ಲಕ್ಷ್ಮಣ! ಇವನು ಆ ಮಹಾತ್ಮನಾದ ಸುಗ್ರೀವನ ಸಚಿವನು ನಾನು ಸುಗ್ರೀವನ ದರ್ಶನವನ್ನೇ ಪ್ರಾರ್ಥಿಸುತಿರುವಾಗ, ಇವನೇ ನನ್ನ ಹತ್ತಿರಕ್ಕೆ ಬಂದಿರುವನು ॥೩೪॥

ಇವನಾಡಿದ ಮಾತನ್ನು ನೋಡಿದೆಯಾ ? ಋಗ್ವೇದದಲ್ಲಿ ಶಿಕ್ಷಿತನಾಗದೆಯೂ ಯಜುರ್ವೇದವನ್ನು ಧರಿಸದೆಯೂ ಸಾಮವೇದವನ್ನು ತಿಳಿಯದೆಯೂ ಇರುವವನಿಗ, ಹೀಗೆ ಮಾತನಾಡುವುದು ಶಕ್ಯವಲ್ಲ ॥೩೫॥

ನಿಶ್ಚಯನಾಗಿ ಇವನು ಸಮಗ್ರವಾದ ವ್ಯಾಕರಣಶಾಸ್ತ್ರವನ್ನು ಅನೇಕವೇಳೆ ಓಲೋಡಿಸಿರುವನು ಇಷ್ಟುಹೆಚ್ಚಾಗಿ ಮಾತನಾಡಿದರೂ, ಇವನ ಬಾಯಲ್ಲಿ ಒಂದಪಶಬ್ದವಾದರೂ ಹೊರಡಲಿಲ್ಲವಲ್ಲ! ॥೩೬॥

ಇವನು ಹೇಳುವ ಮಾತು, ವ್ಯಾಕರಣಶುದ್ಧವಾಗಿಯೂ ಪರಸ್ಪರ ಸಂಬಂಧಯುಕ್ತವಾಗಿಯೂ ಇರುವುದು ಅತಿ ದ್ರುತವಾಗಿಯೂ ಅತಿ ವಿಲಂಬವಾಗಿಯೂ ಇರದೆ, ಸುಶ್ರಾವ್ಯವಾ

ಏವಂ ಗುಣಗಣೈರ್ಯುಕ್ತಾಃ ಯಸ್ಯ ಸ್ಯುಃ ಕಾರ್ಯಸಾಧಕಾಃ ।
ತಸ್ಯ ಸಿಧ್ಯನ್ತಿ ಸರ್ವಾರ್ಥಾಃ ದೂತವಾಕ್ಯಪ್ರಚೋದಿತಾಃ ॥೪೪॥
ಪ್ರಶಸ್ಯೈವಂ ಹನೂಮನ್ತಂ ರಾಘವೋ ಲಕ್ಷ್ಮಣಂ ಪ್ರತಿ ।
ಹನೂಮನ್ತಮುವಾಚೇದಂ ಸುಗ್ರೀವಸ್ಯ ಹಿತೈಷಿಣಮ್ ॥೪೫॥
ಪಿತುರಾಜ್ಞಾಂ ಪುರಸ್ಕೃತ್ಯ ವನವಾಸಾಯ ದೀಕ್ಷಿತಃ ।
ರಾಮೋ ದಾಶರಥಿರ್ನಾಮ್ನಾ ಲಕ್ಷ್ಮಣೋಯಂ ಮಮಾನುಜಃ ॥೪೬॥
ಸಾಧೂನಾಂ ರಕ್ಷಣಂ ಕರ್ತುಂ ರಾಕ್ಷಸಾನಾಂ ವಿನಾಶನಮ್ ।
ಶರಣಾಗತಸನ್ತ್ರಾಣಂ ರಾಜ್ಯಭ್ರಷ್ಟಾಧಿರೋಹಣಮ್ ॥೪೭॥
ರಾವಣಾಸುರಸಂಹಾರಂ ಅಪಿ ದುಷ್ಪ್ರನಿಬರ್ಹಣಮ್ ।
ಮಹಾರಣ್ಯಂ ಪ್ರವಿಷ್ಟೋಸ್ಮಿ ತ್ರಯೋದಶ ಸಮಾ ಗತಾಃ ॥೪೮॥
ಅವಶಿಷ್ಟಾ ಸನ್ತ್ಯೇಕಾ ಮೇ ರಾವಣಾದಿವಧಂ ಪ್ರತಿ ।
ವರ್ಷೇಸ್ಮಿನ್ ಹನುಮನ್ ಸತ್ಯಂ ಹನಿಷ್ಯೇ ದಶಕನ್ಧರಮ್ ॥೪೯॥
ಇತ್ಯುಕ್ತೋ ಹನುಮಾನ್ ಜ್ಞಾತ್ವಾ ರಾಘವಂ ಪರಮೇಶ್ವರಮ್ ।
ಸುಗ್ರೀವೋಕ್ತಂ ತು ಯದ್ವಾಕ್ಯಂ ತದ್ರಾಮಾಯ ನ್ಯವೇದಯತ್ ॥೫೦॥

ಗಿಯೂ ಸುಬೋಧವಾಗಿಯೂ ಇರುವುದು, ಮತ್ತು, ಶುಭವಾಗಿಯೂ ಮನೋಹರವಾಗಿಯೂ ಇರುವುದು ॥೩೯॥

ಹೀಗೆ ಸುಗುಣಗಣಗಳಿಂದ ಯುಕ್ತರಾಗಿರುವ ದೂತರು ಯಾವನಿಗೆ ಕಾರ್ಯಸಾಧಕರಾಗಿರುವರೋ, ಅಂತಹ ಪುಣ್ಯಶಾಲಿಗೆ-ದೂತರ ವಚನಚಾತುರ್ಯದಿಂದಲೇ ಸಮಸ್ತ ಕಾರ್ಯಗಳೂ ಸಿದ್ಧಿಸುವುವು ॥೪೪॥

ಎಲೌ ಪಾರ್ವತಿ! ಈರೀತಿಯಾಗಿ ಶ್ರೀರಾಮನು ಲಕ್ಷ್ಮಣನೊಡನೆ ಹನುಮಂತನನ್ನು ಶ್ಲಾಘಿಸಿ, ಅನಂತರ ಸುಗ್ರೀವಹಿತಕಾರಿಯಾಗಿರುವ ಹನುಮಂತನನ್ನು ಕುರಿತು ಹೀಗ ಮಾತನಾಡಿದನು ॥೪೫॥

ಅಯ್ಯಾ! ಕಪಿಶ್ರೇಷ್ಠನೆ! ಈಗ ನೀನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವೆನು ನಾನು ತಂದೆಯ ಆಪ್ಪಣೆಯನ್ನು ತಲೆಯಮೇಲಿಟ್ಟುಕೊಂಡು ವನವಾಸದಲ್ಲಿ ದೀಕ್ಷೆಮಾಡಿದವನಾಗಿ ಇಲ್ಲಿಗೆ ಬಂದಿರುವೆನು ನನ್ನ ಹಸರು ರಾಮನೆಂದು, ನಾನು ದಶರಥಮಹಾರಾಜನ ಮಗನು ಇವನು ನನ್ನ ತಮ್ಮನಾದ ಲಕ್ಷ್ಮಣನು ॥೪೦॥

ಸಾಧುಗಳ ಸಂರಕ್ಷಣೆಯನ್ನೂ, ರಾಕ್ಷಸರ ನಾಶನವನ್ನೂ, ಶರಣಾಗತರ ಪರಿಪಾಲನೆಯನ್ನೂ, ರಾಜ್ಯಭ್ರಷ್ಟರಾದವರಿಗ ಪುನಃ ರಾಜ್ಯಪ್ರಾಪ್ತಿಯನ್ನೂ, ರಾವಣಾಸುರನ ಸಂಹಾರವನ್ನೂ ಇತರರಾದ ದುಷ್ಟರ ನಿರಾಸವನ್ನೂ ಮಾಡುವುದಕ್ಕಾಗಿ, ನಾನು ಈ ಮಹಾವನವನ್ನು ಪ್ರವೇಶಿಸಿರುವೆನು ನಾನು ಈ ಅರಣ್ಯಪ್ರವೇಶಮಾಡಿ ಹದಿಮೂರು ವರ್ಷಗಳಾದುವು ॥೪೭-೪೯॥

ಇನ್ನು ಈ ರಾವಣಾದಿಗಳ್‌ವಧೆಗೆ ಒಂದು ವರ್ಷಕಾಲ ಅವಧಿಯುಳಿದಿರುವುದು. ಆಯ್ಯಾ! ಹನುಮಂತನೆ! ಈ ವರ್ಷದೊಳಗಾಗಿ ತಪ್ಪದೆ ರಾವಣನನ್ನು ಕೊಲ್ಲುವೆನು ॥೪೯॥

ಹೀಗೆಂದು ಶ್ರೀರಾಮನಿಂದ ಹೇಳಲ್ಪಟ್ಟ ಹನುಮಂತನು, ಆ ರಾಘವನನ್ನು ಸಾಕ್ಷಾತ್

ಪಿತುರಾಜ್ಞಾಂ ಪುರಸ್ಕೃತ್ಯ ರಾಮೋ ದಶರಥಾತ್ಮಜಃ ।
ಧರಣೀಭಾರಸಂಹರ್ತಾ ಮುನಿಬ್ರುನ್ದಾರ್ತಿನಾಶನಃ ॥೪೫॥
ಅಪ್ರಮೇಯಬಲೋ ವೀರಃ ಶರಣ್ಯಃ ಶರಣಾರ್ಥಿನಾಮ್ ।
ದಯಾವಾನ್ ಸರ್ವಭೂತೇಷು ಪ್ರತಿಜ್ಞಾತಾರ್ಥಪಾಲಕಃ ॥೪೬॥
ತಥಾ ತ್ರಿಭುವನೀನಾಥೋ ಬ್ರಹ್ಮಾಣ್ಡದಹನಕ್ಷಮಃ ।
ಏವಂ ಗುಣಗಣೈರ್ಯುಕ್ತೋ ರಾಮಂ ಪಮ್ಪಾಶ್ರಿತೋಧುನಾ ।
ತಾರಯಿಷ್ಯತಿ ವೋ ನೂನಂ ಆಪದ್ಭ್ಯಃ ಪರವೀರಹಾ ॥೪೭॥
ಇತಿ ಚಾರಮುಖಾತ್ ಜ್ಞಾತ್ವಾ ಪ್ರೇಷಿತೋಸ್ಮಿ ತವಾನ್ತಿಕಮ್ ॥೪೮॥
ಅಗಾಧಜಲಮಗ್ನಾನಾಂ ಯಥಾ ನೌಕಾವಲಮ್ಬನಮ್ ।
ಯಥಾನ್ಧತಮಸಾ ದೇವ ಸೀದತಾಂ ಭಾಸ್ಕರೋದಯಃ ।
ನಿಧಿರ್ಯಥಾ ದರಿದ್ರಾಣಾಂ ಬಾಲಾನಾಂ ಮಾತೃದರ್ಶನಮ್ ॥೪೯॥
ತ್ವಂ ನೋ ಭವ ಮಹಾಬಾಹೋ ಭೀತಾನಾಮಭಯಪ್ರದಃ ॥೫೦॥
ಇತಿತಿ ಭುವನೀನಾಥ ತ್ವದಧೀನಾವಯಂ ಪ್ರಭೋ ।
ತತೋ ನಃ ಪಾಲಯ ಕ್ಷಿಪ್ರಂ ನ ವಿಲಮ್ಬಸ್ಯ ಕಾರಣಮ್ ॥೫೧॥

ಪರಮೇಶ್ವರನೆಂದು ತಿಳಿದುಕೊಂಡು, ಸುಗ್ರೀವನು ಹೇಳಿರುವ ಮಾತನ್ನು ಅವನಿಗ ಹೀಗೆ ಹೇಳಿದನು ॥೪೪॥

ಸ್ವಾಮಿ ! ರಾಮಭದ್ರ! ನಮ್ಮ ಒಡೆಯನಾದ ಸುಗ್ರೀವನು, ತನ್ನ ಚಾರರ ಮುಖದಿಂದ, ದಶರಥಪುತ್ರನಾದ ರಾಮನು ತಂದೆಯ ಆಪ್ಪಣೆಯಂತೆ ಅರಣ್ಯವಾಸವನ್ನು ಸ್ವೀಕರಿಸಿರುವನೆಂದೂ-ಅವನು ಭೂಭಾರೋತ್ತಾರಕನೆಂದೂ-ಋಷಿಗಳ ಕಷ್ಟವನ್ನು ಪರಿಹರಿಸತಕ್ಕವನೆಂದೂ-ಮಹಾಬಲವೀರ್ಯಸಂಪನ್ನನೆಂದೂ-ಶರಣಾಗತರಕ್ಷಕನೆಂದೂ-ಸರ್ವಭೂತ ದಯಾಶಾಲಿಯೆಂದೂ-ಪ್ರತಿಜ್ಞಾತವಾದ ವಿಷಯವನ್ನು ತಪ್ಪದೆ ನಡೆಯಿಸತಕ್ಕವನೆಂದೂ-ತ್ರಿಲೋಕನಾಥನೆಂದೂ-ಬ್ರಹ್ಮಾಂಡವನ್ನೆಲ್ಲ ಸುಟ್ಟುಬಿಡಬೇಕಾದರೂ ಸಮರ್ಥನೆಂದೂ-ಇಂತಹ ಸದ್ಗುಣಭರಿತನಾದ ಆ ಶ್ರೀರಾಮನು ಈಗ ಪಂಪಾತೀರದಲ್ಲಿ ಒಂದು ಇಳಿದಿರುವನೆಂದೂ-ಶತ್ರುವೀರವಿನಾಶಕನಾದ ಅವನು ಈಗ ನಮ್ಮನ್ನೆಲ್ಲ ಆಪತ್ತುಗಳ ದೆಸೆಯಿಂದ ಉತ್ತಾರಣಮಾಡಿಸುವನೆಂದೂ ತಿಳಿದು, ಈಗ ನನ್ನನ್ನು ನಿನ್ನ ಹತ್ತಿರಕ್ಕೆ ಕಳುಹಿಸಿರುವನು ॥೪೫-೪೮॥

ಎಲೈ ಸ್ವಾಮಿಯೇ! ಮಹಾಭುಜನೆ! ಅಗಾಧವಾದ ಜಲದಲ್ಲಿ ಮಗ್ನರಾದವರಿಗೆ ನೌಕೆಯು ಹೇಗೆ ಆಶ್ರಯವಾಗುವುದೋ, ಗಾಢಾಂಧಕಾರದಿಂದ ಕಷ್ಟಪಡುತಿರುವವರಿಗೆ ಸೂರ್ಯೋದಯವು ಹೇಗೋ, ದರಿದ್ರರಿಗೆ ನಿಧಿಪ್ರಾಪ್ತಿಯಾಗುವುದು ಹೇಗೋ, ಬಾಲಕರಿಗೆ ಮಾತೃ ದರ್ಶನವು ಹೇಗೋ, ಹಾಗೆ ನೀನು ಮಹಾಭಯಗ್ರಸ್ತರಾಗಿರುವ ನಮಗೆ ಅಭಯಪ್ರದನಾಗು ॥

ಎಲೈ ತ್ರಿಲೋಕನಾಥನೆ! ಇದೋ ಹೀಗೆ ನಾವೆಲ್ಲರೂ ನಿನಗೆ ಅಧೀನರಾಗಿರುವೆವು ಅದುಕಾರಣ, ಈಗ ನೀನು ಕ್ಷಿಪ್ರವಾಗಿ ನಮ್ಮನ್ನು ಪರಿಪಾಲಿಸು, ಇನ್ನು ವಿಲಂಬಮಾಡುವುದಕ್ಕೆ ಕಾರಣವಿಲ್ಲ ॥೪೯॥

ಶ್ರೀರಾಮ ಉವಾಚ.

ಸುಗ್ರೀವಮಾನಯ ಕ್ಷಿಪ್ರಂ ದತ್ತಮಸ್ಯಾಭಯಂ ಮಯಾ ।
ಕಪಿರಾಜ್ಯೇಭಿಷೇಕ್ಷ್ಯಾಮಿ ಹತ್ವಾ ವಾಲಿನಮಾಹವೇ ॥೫೦॥
ಪ್ರತಿಜ್ಞಾಂ ಶೃಣು ಮೇ ವೀರ ಮಮ ಭಕ್ತೋ ನ ಸೀದತಿ ।
ವತ್ಸಂ ಗೌರಿವ ರಕ್ಷೇಽಹಂ ರಾಮೋ ದ್ವಿರ್ನಾಭಿಭಾಷತೇ ॥೫೧॥
ಮಮ ಸೇವಾ ಮದ್ಭಜನಂ ಮಮ ಭಕ್ತೈಶ್ಚ ಶಾಶ್ವತೀ ।
ದರಿದ್ರಾಣಾಂ ಚ ಧನಿನಾಂ ಇಹಾಮುತ್ರ ಫಲಪ್ರದಾ ॥೫೪॥
ಇತಿ ತಸ್ಯ ವಚಃ ಶ್ರುತ್ವಾ ರಾಘವಸ್ಯಾಮಿತೌಜಸಃ ।
ಪರಮಾನನ್ದಸನ್ದೋಹೋ ಮನಸ್ಯೇವಮಚಿನ್ತಯತ್ ॥೫೫॥
ಮಮೇಷ್ಟದೇವತೈನಾಯಂ ಮದ್ಧ್ಯಾನಪಥಗೋಚರಃ ।
ಬ್ರಹ್ಮಾದೀನಾಮಪಿ ಹೃದಿ ಧ್ಯಾನಗಮ್ಯೋ ಹ್ಯಯಂ ಪ್ರಭುಃ ॥೫೬॥
ಯದ್ಯಸ್ಯಾನುಗ್ರಹೋ ಮೇಽಸ್ತಿ ಜನ್ಮ ಮೇ ಸಫಲಂ ಭವೇತ್ ।
ಯಸ್ಯಾಙ್ಘ್ರಿದರ್ಶನಂ ನಾಸ್ತಿ ಸನಕಾದಿಮಹಾತ್ಮನಾಮ್ ॥೫೭॥

ಇದನ್ನು ಕೇಳಿ ಶ್ರೀರಾಮನು ಹೇಳುವನು —

ಆರ್ಯಾ! ಹನುಮಂತನೆ! ಬೇಗನೆ ಸುಗ್ರೀವನನ್ನು ಕರೆತರುವನಾಗು ಅವನಿಗ ನಾನು ಅಭಯಪ್ರದಾನಮಾಡಿರುವೆನು ವಾಲಿಯನ್ನು ಕೊಂದು ಸುಗ್ರೀವನಿಗೆ ರಾಜ್ಯಾಭಿಷೇಕಮಾಡುವೆನು ॥೫೦॥

ಎಲೈ ಮಹಾವೀರನೆ ! ನನ್ನ ಪ್ರತಿಜ್ಞೆಯನ್ನು ಕೇಳುವನಾಗು ನನ್ನ ಭಕ್ತನು ಎಂದಿಗೂ ಕ್ಲೇಶಕ್ಕೆ ಗುರಿಯಾಗುವುದಿಲ್ಲ, ಹಸುವು ಕರುವನ್ನು ಕಾಪಾಡುವಂತೆ, ನಾನು ನನ್ನ ಭಕ್ತನನ್ನು ಕಾಪಾಡುವೆನು. ರಾಮನು ಎಂದಿಗೂ ಎರಡುಮಾತಾಡುವುದಿಲ್ಲವೆ-ದು ನಂಬು ॥೫೧॥

ನನ್ನ ಸೇವೆಯೂ, ನನ್ನ ಭಜನೆಯೂ, ನನ್ನಲ್ಲಿ ಸ್ಥಿರವಾದ ಭಕ್ತಿಯೂ ಕೂಡ, ಧನಿಕರಿಗೂ ದರಿದ್ರರಿಗೂ ಐಹಿಕಾಮುಷ್ಮಿಕಫಲಗಳೆರಡನ್ನೂ ಕೊಡುವುವು ॥೫೪॥

ಹೀಗೆ ಹೇಳುತಿರುವ ಅಪರಿಮಿತತೇಜಸ್ಕನಾದ ಶ್ರೀರಾಮನ ಮಾತನ್ನು ಕೇಳಿ, ಪರಮಾನುದತುಂದಿಲನಾಗಿ ಹನುಮಂತನು ತನ್ನ ಮನಸ್ಸಿನಲ್ಲಿ ಹೀಗೆ ಆಲೋಚಿಸಿದನು ॥೫೫॥

ಇವನು, ಸರ್ವದಾ ನನ್ನ ಧ್ಯಾನಮಾರ್ಗವಿಷಯವಾದ ಇಷ್ಟದೇವತೆಯೇ, ಬ್ರಹ್ಮಾದಿಗಳಿಗೂ ಹೃದಯದಲ್ಲಿ ಧ್ಯಾನಗಮ್ಯನಾದ ಮಹಾಪ್ರಭುವಿವನು ॥೫೬॥

ಇವನ ಅನುಗ್ರಹವು ನನ್ನಮೇಲಿದ್ದುಬಿಟ್ಟರೆ, ಆಗ ನನ್ನ ಜನ್ಮ ಸಾರ್ಥಕವಾಗುವುದು. ಇವನ ಪಾದದರ್ಶನವು ಸನಕಾದಿಗಳಾದ ಮಹಾತ್ಮರಿಗೂ ಸಿಕ್ಕದಿರುವುದು ॥೫೭॥

ಮಮ ಜನ್ಮಫಲಂ ಹ್ಯಸ್ಯ ಪಾದಸೇವನಯಾ ಭವೇತ್ ।
ಪಾವಯೇಯಂ ಮಮ ಜನಿಂ ತಿರ್ಯಕ್ತ್ವಮಪಿ ದೂಷಿತಮ್ ।
ಭಜೇಹಂ ತತ್ಪದದ್ವನ್ದ್ವಂ ಯೇನ ಖ್ಯಾತಿರ್ಭವಿಷ್ಯತಿ ॥೫೪॥
ಇತಿ ಸಞ್ಚಿನ್ತ್ಯ ಹನುಮಾ ಸ್ತೋತುಂ ಸಮುಪಚಕ್ರಮೇ ॥೫೯॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾನಂದಸರಸ್ವತೀ ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದಸರಸ್ವತೀ ಸಂಕಲಿತೇ ನಾನಾಪುರಾಣಾಗಮಾದಿ ನಿಷ್ಠ ತತ್ವಸಂಗ್ರಹಭೂತೇ ಶ್ರೀತತ್ತ್ವಸಙ್ಗ್ರಹರಾಮಾಯಣೇ ಕಿಷ್ಕಿನ್ಧಾಕಾಣ್ಡೇ ಹನೂಮತೋ ರಾಮದರ್ಶನಂ ನಾಮ
ಪ್ರಥಮಃ ಸರ್ಗಃ

ಇವನ ಪಾದಸೇವನೆಯಿಂದ ನನ್ನ ಜನ್ಮಕ್ಕೆ ಸಾಫಲ್ಯವುಂಟಾಗುವುದು ಲೋಕದಲ್ಲಿ ದೂಷಿತವಾಗಿರುವ ಈ ತಿರ್ಯಗ್ಯೋನಿಸಂಭವವನ್ನೂ ನನ್ನ ಜನ್ಮವನ್ನೂ ಈಗ ಪರಿಶುದ್ಧಿಗೊಳಿಸಿಕೊಳ್ಳುವೆನು ಇವನ ಪಾದಯುಗ್ಮವನ್ನು ಸರ್ವದಾ ನಾನು ಭಜಿಸುತಿರಬೇಕು ಹೀಗೆ ಮಾಡಿದರೆ, ನನಗೆ ಈ ಲೋಕದಲ್ಲಿ ಶಾಶ್ವತವಾದ ಕೀರ್ತಿಯೂ ಪರಲೋಕದಲ್ಲಿ ಸದ್ಗತಿಯೂ ಉಂಟಾಗುವುವು ಎಂದು ತನ್ನ ಮನಸ್ಸಿನಲ್ಲಿ ಯೋಚಿಸಿ, ಬಳಿಕ ಆ ಹನುಮಂತನು ಶ್ರೀರಾಮನನ್ನು ಈರೀತಿಯಾಗಿ ಸ್ತುತಿಸಲುಪಕ್ರಮಿಸಿದನು ॥೫೮-೫೯॥

ಇದು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾನಂದಸರಸ್ವತೀ ಪೂಜ್ಯಪಾದ ಶಿಷ್ಯರಾದ ಶ್ರೀರಾಮಬ್ರಹ್ಮಾನಂದಸರಸ್ವತೀ ಸ್ವಾಮಿಗಳಿಂದ ಸಂಕಲಿತವಾದ ನಾನಾ ಪುರಾಣಾಗಮಾದಿನಿಷ್ಠ ತತ್ವಸಂಗ್ರಹಭೂತವಾದ ಶ್ರೀತತ್ವಸಂಗ್ರಹರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ಹನುಮಂತನಿಗೆ ಶ್ರೀರಾಮದರ್ಶನಲಾಭವಾದುದಂಬಲ್ಲಿಗ ಮೊದಲನಯ ಸರ್ಗವ.

ಇಂತು ಶ್ರೀಮದಖಿಲಮಹೀಮಂಡಲಮಂಡನಾಯಮಾನ ಕರ್ನಾಟಕ ಜನಪದಾಧೀಶ್ವರ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಜೆ ಸಿ ಎಸ್ ಐ. ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ ವಿರಚಿತವಾದ ತತ್ವಪ್ರಕಾಶವೆಂಬ ಶ್ರೀ ತತ್ವಸಂಗ್ರಹರಾಮಾಯಣದ ಟೀಕೆಯೊಳಗೆ ಕಿಷ್ಕಿಂಧಾಕಾಂಡದ
ಪ್ರಥಮಸರ್ಗವು.

ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ದ್ವಿತೀಯಃ ಸರ್ಗಃ.

ಶ್ರೀಹನೂಮಾನುವಾಚ

ತಿರಶ್ಚಾಮಪಿ ಯೋ ರಾತಿಃ ಸಮುವಾಯಮುಪೇಯುಷಾಮ್
ಯಥಾ ಸುಗ್ರೀವಮುಖ್ಯಾನಾಂ ತಮುದಾರಂ ನಮಾಮ್ಯಹಮ್ ॥೧॥
ಸಕೃದೇವ ಪ್ರಪನ್ನಾಯ ವಿಶಿಷ್ಟಾಮದದಚ್ಛ್ರಿಯಮ್ ।
ವಿಭೀಷಣಾಯಾದ್ರಿತಟೇ ಯಸ್ತಂ ವೀರಂ ನಮಾಮ್ಯಹಮ್ ॥೨॥
ಯೋ ಮಹಾ ಪೂಜಿತೋದ್ಯಾಪಿ ದಯಾಬ್ಧಿಃ ಸುಗುಣಾಕರಃ ।
ಸ್ಮೃತಂ ಯೇನ ಜಟಾಯೋಶ್ಚ ಮಹಾವಿಷ್ಣುಂ ನಮಾಮ್ಯಹಮ್ ॥೩॥
ತೇಜಸಾವ್ಯಾಯಿತಾಯಸ್ಯ ಜ್ವಲನ್ತಿ ಜ್ವಲನಾದಯಃ ।
ಪ್ರಕಾಶತೇ ಪ್ರಜ್ವಲಯಂ ತಂ ಜ್ವಲನ್ತಂ ನಮಾಮ್ಯಹಮ್ ॥೪॥

ಕಿಷ್ಕಿಂಧಾಕಾಂಡದಲ್ಲಿ ಎರಡನೆಯ ಸರ್ಗ ಪ್ರಾರಂಭ.

ಶ್ರೀಹನುಮಂತನು ರಾಮಚಂದ್ರನನ್ನು ಸ್ತುತಿಸುವನು —

ಯಾವ ಮಹಾನುಭಾವನು ತನ್ನ ಸಖ್ಯಸಂಬಂಧವನ್ನು ಹೊಂದಿದ ತಿರ್ಯಗ್ಜಂತುಗಳಿಗೂ ಕೂಡ ತಾನು ಮಿತ್ರನಾಗುವನೋ,–ಇದಕ್ಕೆ ಸುಗ್ರೀವ ಮೊದಲಾದವರೇ ಉದಾಹರಣೆಯು– ಅಂತಹ ಉದಾರಹೃದಯನನ್ನು ನಾನು ನಮಸ್ಕರಿಸುವೆನು ॥೧॥

(೧) ಒಂದೇ ಒಂದುಸಲ ಶರಣಾಗತನಾಗಿ ನಮಸ್ಕಾರಮಾಡಿದ ವಿಭೀಷಣನಿಗೆ ಮಹೇಂದ್ರ ಪರ್ವತತಟದಲ್ಲಿ ಸಕಲಸಂಪತ್ತನ್ನೂ ಯಾವನು ಕೊಟ್ಟನೋ, ಅಂತಹ ಮಹಾವೀರನನ್ನು ನಮಸ್ಕರಿಸುವೆನು ॥೨॥

ಸದ್ಗುಣಗಳಿಗ ಆಕರಸ್ಥಾನನಾದ ಯಾವ ಮಹಾನುಭಾವನು ಭಕ್ತರಿಂದ ಪೂಜಿಸಲ್ಪಟ್ಟು ಆವರಿಗ ದಯಾಸಾಗರನಾಗಿರುವನೋ, ಯಾವ ಮಹಾಮಹಿಮನಿಂದ ಜಟಾಯುವಿನ ಭಕ್ತಿಯನ್ನು ನೆನೆಸಿಕೊಂಡು ಅವನಿಗ ಸಂಸ್ಕಾರಾದಿಗಳೂ ಮಾಡಲ್ಪಟ್ಟವ್ವೋ, ಅಂತಹ ಶ್ರೀಮನ್ಮಹಾವಿಷ್ಣುವನ್ನು ನಾನು ನಮಸ್ಕರಿಸುವೆನು ॥೩॥

ಅಗ್ನಿ ಸೂರ್ಯ ಮೊದಲಾದವರೂ ಯಾವನ ತೇಜಸ್ಸಿನಿಂದ ಆಪ್ಯಾಯಿತರಾಗಿ ಪ್ರಜ್ವಲಿಸುವರೋ, ಯಾವನು ಸಮಸ್ತವನ್ನೂ ಪ್ರಜ್ವಲನಮಾಡಿಸುತ ಪ್ರಕಾಶಿಸುವನೋ, ಅಂತಹ ದಿವ್ಯತೇಜಸ್ಸಮನ್ವಿತನಾದ ಪರಮಾತ್ಮನನ್ನು ನಾನು ನಮಸ್ಕರಿಸುವೆನು ॥೪॥

---

(೧) ಈ ಶ್ಲೋಕದಲ್ಲಿ ಹೇಳಿರುವ ವಿಷಯವು, ಆಪಾತತಃ ಅನುಪಪನ್ನವಾಗಿ ಕಾಣುವುದು ವಿಭೀಷಣಶರಣಾಗತಿಯು ಯುದ್ಧಕಾಂಡದಲ್ಲಿ ಬರತಕ್ಕುದು ಆದರೆ, ಕಲ್ಪಾಂತರಗಳಲ್ಲಿ ನಡೆದಿರುವ ರಾಮಾವತಾರಕಥೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹನುಮಂತನು ಈಗ ಹೀಗೆ ಹೇಳಿರಬಹುದೆಂದು ತಿಳಿಯಬೇಕು

ಸರ್ವತೋಮುಖತಾ ಯೇನ ಲೀಲಯಾ ದರ್ಶಿತಾ ರಣೇ ।
ರಾಕ್ಷಸೇಶ್ವರಯೋಧಾನಾಂ ತಂ ವನ್ದೇ ಸರ್ವತೋಮುಖಮ್ ॥೫॥
ನೃಭಾವಂ ಯಃ ಪ್ರಪನ್ನಾನಾಂ ಹಿನಸ್ತಿ ಚ ತಥಾ ನೃಷು ।
ಸಿಂಹಃ ಸತ್ವೇಷ್ವಿವೋತ್ಕೃಷ್ಟಃ ತಂ ನೃಸಿಂಹಂ ನಮಾಮ್ಯಹಮ್ ॥೬॥
ಯಸ್ಮಾದ್ಬಿಭ್ಯತಿ ವಾತಾರ್ಕಜ್ವಲನೇನ್ದ್ರಾಃ ಸಮೃತ್ಯವಃ ।
ಭಿಯಂ ಸಂಹರತೇ ಪ್ರಾಪ್ತಭೀಷಣಂ ತಂ ನಮಾಮ್ಯಹಮ್ ॥೭॥
ಪರಸ್ಯ ಯೋಗ್ಯತಾಪೇಕ್ಷಾರಹಿತೋ ನಿತ್ಯಮಙ್ಗಳಮ್ ।
ದದಾತ್ಯೇವ ನಿಜೌದಾರ್ಯಾತ್ ಯಸ್ತಂ ಭದ್ರಂ ನಮಾಮ್ಯಹಮ್ ॥೮॥
ಯೋ ಮೃತ್ಯುಂ ನಿಜದಾಸಾನಾಂ ಮಾರಯತ್ಯಖಿಲೇಷ್ವದಃ ।
ತತೋಽದಾಹೃತಯೋ ಬಹ್ವ್ಯೋ ಮೃತ್ಯೋರ್ಮೃತ್ಯುಂನಮಾಮ್ಯಹಮ್ ॥೯॥

ಯಾವನು ಯುದ್ಧರಂಗದಲ್ಲಿ ಖರಾದಿರಾಕ್ಷಸಭಟರಿಗೆ ತಾನು ಸರ್ವತೋಮುಖನಾಗಿರುವೆನೆಂಬುದನ್ನು ಲೀಲೆಯಿಂದ ತೋರಿಸಿದನೋ, ಅಂತಹ ಸರ್ವತೋಮುಖನಾದ ಶ್ರೀಮನ್ನಾರಾಯಣನನ್ನು ನಾನು ನಮಸ್ಕರಿಸುವೆನು ॥೫॥

ಯಾವ ಮಹಾಮಹಿಮನು ಶರಣಾಗತರ (೧) ನೃಭಾವವನ್ನು ಹಿಂಸಿಸುವನೋ, ಮತ್ತು–ಮೃಗಗಳಲ್ಲಿ ಸಿಂಹವಿರುವಂತೆ–ನರರಲ್ಲಿ ಉತ್ಕೃಷ್ಟನಾಗಿರುವನೋ, ಅಂತಹ ನೃಸಿಂಹಮೂರ್ತಿಯನ್ನು ನಾನು ನಮಿಸುವೆನು ॥೬॥

ವಾಯು ಸೂರ್ಯ ವಹ್ನಿ ಇಂದ್ರ ಮೃತ್ಯುಗಳೂ ಕೂಡ ಯಾವನಿಗೆ ಹೆದರಿಕೊಂಡು ತಂತಮ್ಮ ಕೆಲಸಗಳನ್ನು ನಡೆಯಿಸುತಿರುವರೋ, ಯಾವನು ಸಮಸ್ತಲೋಕಕ್ಕೂ ಭಯವನ್ನು ಸಂಹರಿಸುವನೋ, ಪಾಪಗಳಿಗೆಲ್ಲ ಭಯಂಕರನಾಗಿರುವ ಆ ಮಹಾನುಭಾವನನ್ನು ನಮಸ್ಕರಿಸುವೆನು ॥

ಪರರ ಯೋಗ್ಯತೆಯನ್ನು ನಿರೀಕ್ಷಿಸದೆಯೇ ಯಾವನು ಶಾಶ್ವತವಾದ ಮಂಗಳವನ್ನು ಕೊಡುತಿರುವನೋ, ಅಂತಹ ದಿವ್ಯಮಂಗಳಮೂರ್ತಿಯನ್ನು ನಾನು ನಮಸ್ಕರಿಸುವೆನು ॥೮॥

ಸಕಲಾಭೀಷ್ಟಪ್ರದನಾದ ಯಾವ ಮಹಾಮಹಿಮನು ತನ್ನ ದಾಸರ ಮೃತ್ಯುವನ್ನು ಸಂಹರಿಸುವನೋ,–ಈ ವಿಷಯದಲ್ಲಿ ಸಾವಿರಾರು ಉದಾಹರಣೆಗಳು ಸಿಕ್ಕುವುವು –ಮೃತ್ಯುವಿಗೂ ಮೃತ್ಯುವಾದ ಆ ಪರಮಾತ್ಮನನ್ನು ನಾನು ನಮಸ್ಕರಿಸುವೆನು ॥೯॥

---

(೧) ನೃಭಾವವೆಂದರೆ ಮನುಷ್ಯಜನ್ಮವೆಂದರ್ಥವು ಹಿಸಿ ಹಿಂಸಾಯಾಂ ಎಂಬ ಧಾತುವಿನಿಂದ ಸಿಂಹ ಶಬ್ದವು ನಿಷ್ಪನ್ನವಾಗಿರುವುದು ನೃಸಿಂಹ ಎಂಬ ಶಬ್ದದಲ್ಲಿರುವ ನೃ ಎಂಬ ಶಬ್ದವು ಭಾವಪ್ರಧಾನವಾಗಿ ನಿರ್ದಿಷ್ಟವಾಗಿರುವುದೆಂದಿಟ್ಟುಕೊಂಡು, ಭಕ್ತರ ನೃಭಾವ(ಮನುಷ್ಯಜನನ ಮರಣಪ್ರವಾಹವೆಂದರ್ಥವು)ವನ್ನು ಹಿಂಸಿಸತಕ್ಕವನಾದುದರಿಂದ ನೃಸಿಂಹನೆಂದು ಒಂದು ವಿಧವಾಗಿ ಅರ್ಥಮಾಡಿ ಪೊಗಳಲು ಹೇಳಿಯಾಯ್ತು ಆಮೇಲೆ ನೃಷು ಸಿಂಹಃ ಮನುಷ್ಯರಲ್ಲಿ ಸಿಂಹಪ್ರಾಯ(ಉತ್ಕೃಷ್ಟ)ನೆಂಬುದಾಗಿ ವ್ಯುತ್ಪತ್ತಿಮಾಡಿ ಮತ್ತೊಂದುವಿಧವಾಗಿ ಅರ್ಥಮಾಡಿ ಸ್ತುತಿಮಾಡಲ್ಪಟ್ಟಿರುವುದು.

ಯತ್ಪಾದಪದ್ಮಪ್ರಣತೇಃ ಭವತ್ಯುತ್ತಮಪೂರುಷಃ ।
ತಮಹಂ ಸರ್ವದೇವಾನಾಂ ಮಾನನೀಯಂ ನಮಾಮ್ಯಹಮ್ ॥೧೦॥
ಅಹಮ್ಭಾವಂ ಸಮುತ್ಸೃಜ್ಯ ದಾಸ್ಯೇನೈವ ರಘೂತ್ತಮಮ್ ।
ಭಜೇಹಂ ಪ್ರತ್ಯಹಂ ರಾಮಂ ಸಸೀತಂ ಸಹಲಕ್ಷ್ಮಣಮ್ ॥೧೧॥
ಶಿವಮಯ್ಯೋ ದಿಶಸ್ತಸ್ಯ ಸಿದ್ಧಯಸ್ತಸ್ಯ ದಾಸಿಕಾಃ ।
ನಿತ್ಯಂ ಶ್ರೀರಾಮಭಕ್ತಸ್ಯ ಕಿಙ್ಕರಾಯಮಕಿಙ್ಕರಾಃ ॥೧೨॥
ಇತಿ ಸ್ತುತೋ ರಘುಶ್ರೇಷ್ಠಃ ಪ್ರಸಾದಾಭಿಮುಖೋಭವತ್ ।
ವರಂ ವರಯ ದಾಸ್ಯೇಹಂ ಯತ್ ತೇಭಿಲಿಷಿತಂ ಕಪೇ ॥೧೩॥

ಹನುಮಾನುವಾಚ

ಸರ್ವಜ್ಞ ಕರುಣಾಸಿನ್ಧೋ ವಾಞ್ಛಿತಾರ್ಥಾಧಿಕಪ್ರದ ।
ನಾನ್ಯಂ ವರಂ ವೃಣೇ ರಾಮ ದಾಸ್ಯೇನೈವ ಗೃಹಾಣ ಮಾಮ್ ॥೧೪॥
ಇತ್ಯುಕ್ತ್ವಾ ಪಾದಯೋಃ ಸ್ವಸ್ಯ ಪತಿತಂ ಮಾರುತಿಂ ತದಾ ।
ಉತ್ಥಾಪ್ಯಾಲಿಙ್ಗ್ಯ ತದ್ಭಾಸ್ಯಂ ಅಙ್ಗೀಚಕ್ರೇ ಸ ರಾಘವಃ ॥೧೫॥

ಯಾವನ ಪಾದಪದ್ಮಗಳ ನಮಸ್ಕಾರಪ್ರಭಾವದಿಂದ ಮನುಷ್ಯನು ಸರ್ವರಲ್ಲಿಯೂ ಉತ್ತಮನೆನ್ನಿಸುವನೋ, ಸಕಲದೇವತೆಗಳಿಗೂ ಮಾನನೀಯನಾದ ಆ ಮಹಾನುಭಾವನನ್ನು ನಾನು ನಮಸ್ಕರಿಸುವೆನು ॥೧೦॥

ನಾನು ಅಹಂಕಾರವನ್ನು ತ್ಯಜಿಸಿದು ಕೇವಲ ದಾಸಭಾವದಿಂದಲೇ ಆ ರಘುಕುಲತಿಲಕನಾದ ಸೀತಾಲಕ್ಷ್ಮಣ ಯುಕ್ತನಾಗಿರುವ ಶ್ರೀರಾಮನನ್ನು ನಿತ್ಯವೂ ಭಜಿಸುವೆನು ॥ ೧೧॥

ನಿತ್ಯವೂ ಶ್ರೀರಾಮನಲ್ಲಿ ಭಕ್ತಿಯಿಟ್ಟಿರತಕ್ಕವನಿಗೆ, ಯಮಕಿಂಕರರೂ ಕಿಂಕರರಾಗುವರು, ಸಕಲದಿಕ್ಕುಗಳೂ ಅವನಿಗೆ ಮಂಗಳಮಯಗಳಾಗುವುವು, ಸಕಲಸಿದ್ಧಿಗಳೂ ಅವನ ದಾಸಿಗಳಾಗುವುವು (ಹೀಗೆಂದು ಆ ಹನುಮಂತನು ಸ್ತುತಿಸಿದನು) ॥೧೨॥

ಈರೀತಿಯಾಗಿ ಹನುಮಂತನಿಂದ ಸ್ತುತಿಸಲ್ಪಟ್ಟ ರಘುನಾಥನು, ಅವನಲ್ಲಿ ಪ್ರಸಾದಾಭಿಮುಖನಾದನು ಮತ್ತು 'ಎಲೈ ಕಪೀಶ್ವರನೆ! ನಿನಗೆ ಯಾವುದು ಅಭಿಲಷಿತವೋ-ಅಂತಹ ವರವನ್ನು ಕೇಳಿಕೋ, ನಾನು ನಿನ್ನ ಅಭೀಷ್ಟವನ್ನು ಕೊಡುವೆನು' ಎಂದು ಹೇಳಿದನು ॥೧೩॥

ಇದನ್ನು ಕೇಳಿ ಹನುಮಂತನು ಪ್ರಾರ್ಥಿಸುವನು —

ಎಲೈ ಸರ್ವಜ್ಞನೆ! ಕರುಣಾಸಾಗರನೆ! ವಾಂಛಿತವಾದುದಕ್ಕಿಂತ ಅಧಿಕವಾಗಿ ಇಷ್ಟಾರ್ಥಗಳನ್ನು ಕೊಡತಕ್ಕವನೆ! ನಾನು ಮತ್ತೊಂದು ವರವನ್ನೂ ಕೇಳಿಕೊಳ್ಳುವುದಿಲ್ಲ, ಸ್ವಾಮಿ! ರಾಮಚಂದ್ರ! ನನ್ನನ್ನು ನಿನ್ನ ದಾಸನನ್ನಾಗಿ ಸ್ವೀಕರಿಸುವನಾಗು ॥೧೪॥

ಹೀಗೆಂದು ವಿಜ್ಞಾಪಿಸಿ ತನ್ನ ಪಾದಗಳಲ್ಲಿ ನಮಸ್ಕಾರಮಾಡುತಿರುವ ಆ ಮಾರುತಿಯನ್ನು,

ತತಃ ಸಂಹೃಷ್ಟಹೃದಯೋ ಹನೂಮಾನತಿರಂಹಸಾ ।
ಸುಗ್ರೀವಂ ಪುನರಾಗತ್ಯ ವಚನಂ ಚೇದಮಬ್ರವೀತ್ ॥೧೬॥
ಶೃಣು ಮೇ ವಚನಂ ರಾಜನ್ ಫಲಿತಸ್ತೇ ಮನೋರಥಃ ।
ಅಯಂ ಸರ್ವಗುಣೋಪೇತಃ ಸರ್ವಜ್ಞಃ ಸರ್ವದರ್ಶನಃ ॥೧೬॥
ನಿತ್ಯೋಯಂ ನಿರ್ವಿಕಾರೋಯಂ ನಿತ್ಯಾನನ್ದೋ ನಿರಞ್ಜನಃ ।
ಉತ್ಪತ್ತಿಸ್ಥಿತಿಸಂಹಾರಕರ್ತಾಯಂ ಸಕಲಾತ್ಮನಾಮ್ ॥೧೯॥
ಅಸ್ಯೈವ ಮಾಯಾ ಜೀವಾನಾಂ ಭಾಸ್ಮಿಕಾಜ್ಞಾನಸಾಗರೇ ।
ಯಸ್ಮಿನ್ ಜೀವಾನಿಮಜ್ಜನ್ತಿ ಬ್ರಹ್ಮಾದ್ಯಾಃ ಪ್ರಳಯಾವಧಿ ॥೧೯॥
ಅಸ್ಯಾನುಗ್ರಹಮಾಸಾದ್ಯ ಮುಕ್ತಿಮೇಷ್ಯನ್ತಿ ಚಾಪರೇ ।
ಸೇವ್ಯೋಯಂ ಸರ್ವಲೋಕಾನಾಂ ಭಜನೀಯೋ ಮಹಾಪ್ರಭುಃ ॥೨೦॥
ಅಸ್ಯಾನುಗ್ರಹಮಾಸಾದ್ಯ ಮೇರುಸ್ತೃಣಮಿವಾಲ್ಪಕಃ ।
ಅಸ್ಯ ವೈಮುಖ್ಯಮಾಸಾದ್ಯ ತೃಣಂ ಮೇರುಸಮಂ ಭವೇತ್ ॥೨೧॥

ಆಗ ಶ್ರೀರಾಮನು ಮೇಲಕ್ಕೆ ಎಬ್ಬಿಸಿ ಅವನನ್ನು ಆಲಿಂಗಿಸಿಕೊಂಡು, ಅವನು ತನ್ನ ದಾಸನಾಗಿರುವಂತೆ ಒಪ್ಪಿಕೊಂಡನು ॥೧೫॥

ಬಳಿಕ ಅತಿ ಹರ್ಷಯುಕ್ತವಾದ ಮನಸ್ಸುಳ್ಳವನಾಗಿ ಹನುಮಂತನು ಮಹಾವೇಗದಿಂದ ಮತ್ತೆ ಸುಗ್ರೀವನ ಹತ್ತಿರಕ್ಕೆ ಬಂದು ಈ ಮಾತನ್ನು ಹೇಳಿದನು ॥೧೬॥

ಎಲೈ ಕಪಿರಾಜನ! ನನ್ನ ಮಾತನ್ನು ಆಲೈಸು ನಿನ್ನ ಮನೋರಥವು ಈಗ ಫಲಿಸಿತು ಈಗ ನಾವು ಪಂಪಾತೀರದಲ್ಲಿ ನೋಡಿದ ಪುರುಷನು, ಸಕಲ ಸದ್ಗುಣಸಂಪನ್ನನು, ಸರ್ವಜ್ಞನು, ಸರ್ವಸಾಕ್ಷಿಯಾದವನು ॥೧೭॥

ಇವನು ನಿತ್ಯನಾದವನು, ನಿರ್ವಿಕಾರನು ನಿತ್ಯಾನಂದನು, ನಿರಂಜನ(ಮಾಯಾಲೇಪಶೂನ್ಯ)ನು ಇವನು, ಸಕಲ ಪ್ರಾಣಿಗಳಿಗೂ ಉತ್ಪತ್ತಿ ಸ್ಥಿತಿ ಸಂಹಾರಗಳನ್ನು ಮಾಡತಕ್ಕವನು ॥೧೮॥

ಇವನ ಮಾಯೆಯೇ ಜೀವರನ್ನು ಅಜ್ಞಾನಸಮುದ್ರದಲ್ಲಿ ಸುತ್ತಿಸುತಿರುವುದು ಬ್ರಹ್ಮಾದಿಗಳೂ ಕೂಡ ಈ ಅಜ್ಞಾನಸಾಗರದಲ್ಲಿ ಮಹಾಪ್ರಳಯದವರೆಗೂ ಮುಳುಗಿರುವರು ॥೧೯॥

ಮತ್ತೆ ಕೆಲವು ಜೀವರಾದರೋ, ಇವನ ಅನುಗ್ರಹವನ್ನು ಪಡೆದು ಮುಕ್ತಿಭಾಜನರಾಗುವರು ಸರ್ವಲೋಕಗಳೂ ಈ ಮಹಾಪ್ರಭುವನ್ನು ಉಪಜೀವಿಸಿಕೊಂಡಿರುವುವು, ಸಮಸ್ತರೂ ಇವನನ್ನು ಭಜಿಸಬೇಕಾಗಿರುವುದು ॥೨೦॥

ಇವನ ಅನುಗ್ರಹಕ್ಕೆ ಪಾತ್ರರಾದರೆ ಮೇರುವೂ ತೃಣದಂತೆ ಅಲ್ಪವಾಗುತ್ತದು, ಇವನು ಅನುಗ್ರಹವಿಮುಖನಾದರೆ ತೃಣವೂ ಮೇರುವಿಗೆ ಸಮಾನವಾಗುವುದು ॥೨೧॥

ಸ್ವತನ್ತ್ರಃ ಸರ್ವಲೋಕೇಷು ರಾಮೋಯಂ ನಾತ್ರ ಸಂಶಯಃ ।
ತವ ರಾಜ್ಯಾಭಿಷೇಕಾಯ ಪ್ರತಿಜ್ಞಾತಂ ಮಹಾತ್ಮನಾ ॥೨೦॥
ಶೀತಳೇತರತಾಂ ಚನ್ದ್ರಃ ಸೂರ್ಯಃ ಶೀತಳತಾಂ ವ್ರಜೇತ್ ।
ಯದಿ ಮೇರುಃ ಪ್ರಚಲತಿ ರಾಮೋ ದ್ವಿರ್ನಾಭಿಭಾಷತೇ ॥೨೧॥
ಇತಿ ತದ್ವಚನಂ ಶ್ರುತ್ವಾ ಸುಗ್ರೀವೋ ಹೃಷ್ಟಮಾನಸಃ ।
ಹನೂಮತಾ ನೀತಿಮತಾ ಪ್ರಯಯೌ ರಾಮಸನ್ನಿಧಿಮ್ ॥೨೪॥
ನಮಶ್ಚಕ್ರೇಧ ರಾಮಾಯ ಸಾಷ್ಟಾಙ್ಗಂ ಭಕ್ತಿಸಂಯುತಃ ।
ದರ್ಶನಾದ್ಭಾವತನೋಃ ಆನನ್ದಾಶ್ರುಪರಿಪ್ಲುತಃ ॥೨೫॥
ತಮುತ್ಥಾಪ್ಯ ಮಹಾತೇಜಾಃ ಆಶೀರ್ವಾದಪುರಸ್ಸರಮ್ ।
ಭೂಸಂಜ್ಞಯಾ ಚಕಾರಾಜ್ಞಾಂ ಉಪವೇಷ್ಟುಂ ಸುಖಾಸನೇ ॥೨೬॥
ಕುಶಾಸನಗತೋ ರಾಮಂ ಪ್ರಾಞ್ಜಲಿಃ ಪ್ರಯತಃ ಶುಚಿಃ ।
ಉವಾಚ ವಚನಂ ಶ್ರೇಷ್ಠಂ ಹರ್ಷಯನ್ ಶುಭಯಾ ಗಿರಾ ॥೨೭॥

ಇಂತಪ ನುಹಾನುಭಾವನಾದ ಈ ರಾಮಚಂದ್ರನು, ಸರ್ವಲೋಕದಲ್ಲಿಯೂ ಸ್ವತಂತ್ರನಾದನನು, ಇದರಲ್ಲಿ ಸಂಶಯವಿಲ್ಲ ಆ ಮಹಾತ್ಮನಿಂದ ನಿನ್ನ ರಾಜ್ಯಾಭಿಷೇಕ ವಿಷಯದಲ್ಲಿ ಪ್ರತಿಜ್ಞೆ ಮಾಡಲ್ಪಟ್ಟಿರುವುದು ॥೨೨॥

ಚಂದ್ರನು ಉಷ್ಣತೆಯನ್ನು ಹೊಂದಿದರೂ, ಸೂರ್ಯನು ಶೀತಲತ್ವವನ್ನು ಹೊಂದಿದರೂ, ಮೇರುಪರ್ವತವು ಚಲಿಸಿಬಿಟ್ಟರೂ, ರಾಮನು ಮಾತ್ರ ಎರಡು ಮಾತಾಡುವುದಿಲ್ಲ ॥೨೩॥

ಹೀಗೆಂದು ಹೇಳಿದ ಹನುಮಂತನ ಮಾತನ್ನು ಕೇಳಿ ಮಹಾಹರ್ಷಸಮನ್ವಿತಹೃದಯನಾದ ಸುಗ್ರೀವನು, ಮಹಾನೀತಿಯುಕ್ತನಾದ ಹನುಮಂತನೊಡನೆ ರಾಮನ ಸನ್ನಿಧಿಗೆ ಬಂದನು ॥೨೪॥

ಬಳಿಕ, ಆ ರಾಮನ ದಿವ್ಯಶರೀರ ದರ್ಶನದಿಂದ ಆನಂದಬಾಷ್ಪ ಪರಿಪೂರ್ಣನಾಗಿ, ಬಹಳ ಭಕ್ತಿಯಿಂದ ಶ್ರೀರಾಮನಿಗ ಸಾಷ್ಟಾಂಗ ನಮಸ್ಕಾರಮಾಡಿದನು ॥೨೫॥

ಆಗ ಮಹಾತೇಜಸ್ವಿಯಾದ ರಾಮಭದ್ರನು ಆ ಸುಗ್ರೀವನನ್ನು ಆಶೀರ್ವಾದ ಪೂರ್ವಕವಾಗಿ ಮೇಲಕ್ಕೆಬ್ಬಿಸಿ, ಸುಖವಾದ ಆಸನದಲ್ಲಿ ಕುಳಿತುಕೊಳ್ಳುವಂತೆ ಭೂಸಂಜ್ಞೆಯಿಂದ ಅವನಿಗೆ ಅಪ್ಪಣೆ ಕೊಟ್ಟನು ॥೨೬॥

ಬಳಿಕ ದರ್ಭಾಸನದಲ್ಲಿ ಸುಖೋಪವಿಷ್ಟನಾದ ಸುಗ್ರೀವನು, ಕೈಮುಗಿದುಕೊಂಡು ಭಯ ಭಕ್ತಿಗಳೊಡನೆ ಪರಿಶುದ್ಧ ಹೃದಯನಾಗಿ ಶ್ರೀರಾಮನಿಗ ಹರ್ಷವುಂಟುಮಾಡುತ ಈರೀತಿಯಾಗಿ ಶುಭತರವಾದ ವಚನವನ್ನು ಹೇಳಿದನು ॥೨೭॥

ಅಮಙ್ಗಳಂ ವಿನಷ್ಟಂ ಮೇ ರಾಮ ಸನ್ದರ್ಶನಾತ್ ತವ ।
ಅನೇಕಜನ್ಮಸಂಸಿದ್ಧಂ ತ್ವತ್ತಃ ಶ್ರೇಯಶ್ಚ ಮೇ ಭವೇತ್ ॥೮॥
ಮನೋ ಮೇ ಚಞ್ಚಲತರಂ ಪದ್ಮಪತ್ರಜಲೋಪಮಮ್ ।
ತವ ಸನ್ದರ್ಶನಾದದ್ಯ ಕೃತಕೃತ್ಯೋ ನ ಸಂಶಯಃ ॥೯॥
ತ್ವಜೇದ್ವಿಷ್ಣುರಿವಾಭಾಸಿ ಬ್ರಹ್ಮೇವ ಶಿವವತ್ ತ್ವಜೇತ್ ।
ಸಾಂಪ್ರತಂ ರಾಮರೂಪೋಽಸಿ ತವ ಮಾಯಾ ದುರತ್ಯಯಾ ।
ಕರುಣಾಕರ ಮಾಂ ರಕ್ಷ ತ್ವಂ ಗತಿಃ ಶರಣಾರ್ಥಿನಾಮ್ ॥೧೦॥
ಇತ್ಯುಕ್ತೋ ರಾಘವಃ ಪ್ರಾಹ ಸಖ್ಯಂ ಕೃತ್ವಾಗ್ನಿಸಾಕ್ಷಿಕಮ್ ॥೧೧॥
ತವ ರಾಜ್ಯಂ ಪ್ರದಾಸ್ಯಾಮಿ ಹತ್ವಾ ವಾಲಿನಮಾಹವೇ ।
ರುಮಾಂ ತಾರಾಂ ಚ ದಾಸ್ಯಾಮಿ ಸ್ತ್ರೀರತ್ನಮತುಲಪ್ರಭಾಮ್ ॥೧೨॥
ವಿದ್ಧಿ ಮೇ ವನವಾಸೋಽಪಿ ದುಷ್ಟಸತ್ತ್ವಾಪನುತ್ತಯೇ ।
ತತೋ ಲಙ್ಕಾಂ ರಾವಣಂ ಚ ಹನಿಷ್ಯಾಮಿ ವಿನಾ ಶ್ರಮಮ್ ॥೧೩॥

ಸ್ವಾಮಿ! ರಾಮಚಂದ್ರ! ಈಗ ನಿನ್ನ ದರ್ಶನವಾದುದರಿಂದ ನನ್ನ ಅಮಂಗಳವೆಲ್ಲವೂ ನಷ್ಟವಾಯ್ತು, ನನಗೆ ಅನೇಕವಾದ ಪೂರ್ವಜನ್ಮಗಳಲ್ಲಿ ಪ್ರಾಪ್ತವಾಗಿರುವ ಶ್ರೇಯಸ್ಸೆಲ್ಲವೂ ಈಗ ಫಲಿಸಿತು ॥೮॥

ನನ್ನ ಮನಸ್ಸಾದರೋ, ತಾವರೆಯೆಲೆಯ ಮೇಲಿರುವ ನೀರ ಹನಿಯಂತೆ ಅತಿಚಂಚಲವಾಗಿರುವುದು, ಈಗ ನಿನ್ನ ಸಂದರ್ಶನದಿಂದ ನಾನು ಕೃತಾರ್ಥನಾದೆನು, ಇದರಲ್ಲಿ ಸಂಶಯವಿಲ್ಲ ॥

ಸ್ವಾಮೀ! ನೀನು ಕೆಲವುಕಡೆ ವಿಷ್ಣುವಾಗಿ ಕಾಣಿಸುವೆ, ಕೆಲವುಕಡೆ ಬ್ರಹ್ಮನಾಗಿ ಕಾಣಿಸುವೆ, ಕೆಲವುಕಡೆ ಶಿವನಾಗಿ ಕಾಣಿಸುವೆ ಈಗಲಾದರೋ, ಮನುಷ್ಯಾವತಾರಮಾಡಿ ರಾಮನೆಂದು ಹೆಸರಿಟ್ಟುಕೊಂಡು ವಿರಾಜಿಸುವೆ ನಿನ್ನ ಮಾಯೆಯನ್ನು ಯಾರೂ ವಿಚಾರ ನಡೆಯಲಾರರು ಎಲೈ ಕೃಪಾನಿಧಿಯೆ! ನನ್ನನ್ನು ರಕ್ಷಿಸು ಶರಣಾರ್ಥಿಗಳಿಗೆಲ್ಲ ನೀನೇ ಗತಿಯು (ಎಂದು ಸುಗ್ರೀವನು ಹೇಳಿದನು) ॥೧೦॥

ಹೀಗೆಂದು ಸುಗ್ರೀವನಿಂದ ಪ್ರಾರ್ಥಿಸಲ್ಪಟ್ಟ ಆ ರಘುಕುಲತಿಲಕನಾದ ಶ್ರೀರಾಮನು, ಆಗ ಅವನೊಡನೆ ಅಗ್ನಿ ಸಾಕ್ಷಿಯಾಗಿ ಸಖ್ಯವನ್ನು ಮಾಡಿ, ಬಳಿಕ ಅವನನ್ನು ಕುರಿತು ಹೀಗೆ ಹೇಳಿದನು॥

ಅಯ್ಯಾ! ಮಿತ್ರನಾದ ಸುಗ್ರೀವನೆ! ನೀನು ಭಯಪಡಬೇಡ ವಾಲಿಯನ್ನು ಯುದ್ದದಲ್ಲಿ ಕೊಂದು ನಿನಗೆ ರಾಜ್ಯವನ್ನು ಕೊಡುವೆನು, ಮತ್ತು, ಸ್ತ್ರೀಯರಲ್ಲಿ ರತ್ನಭೂತಳಾದ ಅನುಪಮ ಸೌಂದರ್ಯವತಿಯಾದ ರುಮೆಯನ್ನೂ ತಾರೆಯನ್ನೂ ನಿನಗ ಬರಮಾಡಿಕೊಡುವೆನು ॥೧೨॥

ನಾನು ಈ ಅರಣ್ಯವಾಸವನ್ನು ಸ್ವೀಕರಿಸಿರುವುದೂ ಕೂಡ ದುಷ್ಟಪ್ರಾಣಿಗಳ ಶಿಕ್ಷಣಾರ್ಥವಾದುದೆಂದು ತಿಳಿಯುವನಾಗು ಅದುಕಾರಣ, ನಾನು ಸ್ವಲ್ಪವೂ ಶ್ರಮವಿಲ್ಲದೆಯೇ ಲಂಕೆಯನ್ನೂ ರಾವಣನನ್ನೂ ನಿಗ್ರಹಿಸುವೆನು ॥೧೩॥

ಸತ್ಯಂ ವಿದ್ಧಿ ವಚೋ ವೀರ ರಾಮೋ ದ್ವಿರ್ನಾಭಿಭಾಷತೇ ।
ಅತ್ರ ಸ್ಥಿತ್ವಾ ಹನಿಷ್ಯಾಮಿ ಸರ್ವಾನಪಿ ಚ ರಾಕ್ಷಸಾನ್ ॥೩೪॥
ನ ಹಿ ಮೇಽವಿದಿತಂ ಕಿಞ್ಚಿತ್ ತ್ರಿಷು ಲೋಕೇಷು ವಿದ್ಯತೇ ।
ನಾಸಾಧ್ಯಂ ಯತ್ನಸಾಧ್ಯಂ ವಾ ಸ್ಮರಣೇನೈವ ಸಿಧ್ಯತಿ ॥೩೫॥
ಕಿಂ ತು ಜನ್ಮಾನುಸಾರೇಣ ಕ್ರೀಡಾ ಮೇ ರೋಚತೇಽನಘ ।
ಜಾನೀಹಿ ಸತ್ಯಮೇತನ್ಮೇ ವಾಕ್ಯಂ ಕಪಿಗಣೇಶ್ವರ ॥೩೬॥
ರಾಮಸ್ಯ ವಚನಂ ಶ್ರುತ್ವಾ ಹರ್ಷಪೌರುಷವರ್ಧನಮ್ ।
ಸುಗ್ರೀವಃ ಪೂಜಯಾಂಚಕ್ರೇ ರಾಘವಂ ಪ್ರಶಶಂಸ ಚ ॥೩೭॥
ಅಸಂಶಯಂ ಪ್ರಜ್ವಲಿತಃ ತೀಕ್ಷ್ಣಂ ಮರ್ಮಾತಿಗೈಃ ಶರೈಃ ।
ತ್ವಂ ದಹೇಃ ಕುಪಿತೋ ಲೋಕಾನ್ ಯುಗಾನ್ತಾನಿವ ಭಾಸ್ಕರಃ ॥೩೮॥
ವಾಲಿನಃ ಪೌರುಷಂ ಯಚ್ಚ ಯಚ್ಚ ವೀರ್ಯಂ ಧೃತಿಶ್ಚ ಯಾ ।
ತನ್ಮಮೈಕಮನಾಃ ಶ್ರುತ್ವಾ ನಿಧತ್ಸ್ವ ಯದನನ್ತರಮ್ ॥೩೯॥

ಎಲೈ ಮಹಾವೀರನ! ನನ್ನ ಮಾತನ್ನು ದಿಟವೆಂದು ನಂಬು, ರಾಮನು ಎಂದಿಗೂ ಎರಡು ಮಾತಾಡುವುದಿಲ್ಲ ನಾನು ಇಲ್ಲಿಯೇ ಇದ್ದುಗೊಂಡುಬೇಕಾದರೂ ಸಮಸ್ತ ರಾಕ್ಷಸರನ್ನೂ ಕೊಲ್ಲಬಲ್ಲೆನು ॥೩೪॥

ಈ ಮೂರು ಲೋಕದೊಳಗಾಗಿ ನನಗೆ ತಿಳಿಯದಿರುವುದು ಯಾವುದೊಂದೂ ಇಲ್ಲ, ಅಸಾಧ್ಯವಾದುದಾಗಲಿ-ಪ್ರಯತ್ನಸಾಧ್ಯವಾದುದಾಗಲಿ ಯಾವುದೂ ಇರುವುದಿಲ್ಲ ಯಾವ ಕೆಲಸ ಬೇಕಾದರೂ ಸ್ಮರಿಸಿದಮಾತ್ರದಿಂದಲೇ ನನಗೆ ಸಿದ್ಧಿಸುವುದು ॥೩೫॥

ಆದರೆ, ಎಲೈ ನಿರ್ದೋಷನ! ನಾನು ಎತ್ತಿರುವ ಅವತಾರಕ್ಕೆ ಅನುಸಾರವಾಗಿ ಕ್ರೀಡಿಸಿ ಕೊಂಡಿರಬೇಕೆಂದು ನನಗೆ ಇಷ್ಟವಾಗಿರುವುದು ಎಲೈ ಕಪಿಗಣನಾಯಕನೆ! ನಾನು ಹೇಳುವ ಈ ಮಾತನ್ನು ನಿಜವೆಂದು ನಂಬುವನಾಗು ॥೩೬॥

ಹೀಗೆ ಹೇಳಿದ ಹರ್ಷಪೌರುಷವರ್ಧಕವಾದ ಶ್ರೀರಾಮಚಂದ್ರನ ಈ ಮಾತನ್ನು ಕೇಳಿ, ಸುಗ್ರೀವನು ಶ್ರೀರಾಮನನ್ನು ಬಹಳವಾಗಿ ಶ್ಲಾಘಿಸಿ ಪೂಜಿಸಿ ಹೀಗೆ ಹೇಳಿದನು ॥೩೭॥

ಸ್ವಾಮಿ! ರಾಮಭದ್ರ! ನೀನು ಕೋಪಾವಿಷ್ಟನಾದರೆ, ಪ್ರಳಯಕಾಲದ ಸೂರ್ಯನಂತೆ ಪ್ರಜ್ವಲಿಸುತ ಮರ್ಮಭೇದಿಗಳಾದ ಬಾಣಗಳಿಂದ ಲೋಕಗಳನ್ನೆಲ್ಲ ನಿಸ್ಸಂಶಯವಾಗಿ ದಹಿಸಿ ಬಿಡುವೆ ॥೩೮॥

ಆದರೂ, ವಾಲಿಯ ಪೌರುಷವೆಷ್ಟಿರುವುದೋ, ಅವನ ಏರ್ಯವೆಷ್ಟಿರುವುದೋ, ಧೈರ್ಯವೆಷ್ಟಿರುವುದೋ, ಅದೆಲ್ಲವನ್ನೂ ಏಕಾಗ್ರಚಿತ್ತನಾಗಿ ನನ್ನ ಮುಖದಿಂದ ಕೇಳಿ ತಿಳಿದುಕೊಂಡು, ಅಮೇಲೆ ಯಾವುದು ಉಚಿತವಾಗಿ ಕಾಣುವುದೋ ಅದನ್ನು ಮಾಡು ॥೩೯॥

ಅಗ್ರ್ಯಾಣ್ಯಾರುಹ್ಯ ಶೈಲಾನಾಂ ಶಿಖರಾಣಿ ಮಹಾನ್ತ್ಯಪಿ ।
ಊರ್ಧ್ವಮುತ್ಕ್ಷಿಪ್ಯ ಸಹಸಾ ಪ್ರತಿಗೃಹ್ಣಾತಿ ವೀರ್ಯವಾ್ ॥೪೦॥
ಬಹವಃ ಸಾರವನ್ತಶ್ಚ ವನೇಷು ವಿವಿಧಾದ್ರುಮಾಃ ।
ವಾಲಿನಾ ತರಸಾ ಭಗ್ನಾಃ ಬಲಂ ಪ್ರಥಯತಾತ್ಮನಃ ॥೪೧॥
ಇಮೇ ಚ ವಿಪುಲಾಃ ಸಾಲಾಃ ಸಪ್ತ ಶಾಖಾಬಲಮ್ಬಿನಃ ।
ಯತ್ರೈಕಂ ಘುಟತೇ ವಾಲೀ ನಿಷ್ಪತ್ರಯಿತುಮೋಜಸಾ ॥೪೦॥
ಏತದಸ್ಯಾಸಮಂ ವೀರ್ಯಂ ಮಯಾ ರಾಮಾದ್ಯ ಕೀರ್ತಿತಮ್ ।
ಕಥಂ ತ್ವಂ ವಾಲಿನಂ ಹನ್ತುಂ ಸಮರೇ ಶಕ್ಷ್ಯಸೇ ನೃಪ ॥೪೩॥
ಏತಚ್ಚ ವಚನಂ ಶ್ರುತ್ವಾ ಸುಗ್ರೀವೇಣ ಸುಭಾಷಿತಮ್ ।
ಪ್ರತ್ಯಯಾರ್ಥಂ ಮಹಾತೇಜಾಃ ರಾಮೋ ಜಗ್ರಾಹ ಕಾರ್ಮುಕಮ್ ॥೪೪॥
ಸ ಗೃಹೀತ್ವಾ ಧನುಘೋರಂ ಶರಮೇಕಂ ಚ ಮಾನದಃ
ಸಾಲಾನುದ್ದಿಶ್ಯ ಚೈಕ್ಷೇಪ ಜ್ಯಾಶಬ್ದೇನ ಪೂರಯನ್ ದಿಶಃ ॥೪೫॥

ಮಹಾವೀರ್ಯಸಂಪನ್ನನಾದ ಆ ವಾಲಿಯು, ಪರ್ವತಗಳ ತುದಿಗ ಹತ್ತಿ, ಪರ್ವತಗಳ ದೊಡ್ಡ ದೊಡ್ಡ ಶಿಖರಗಳನ್ನು ಮೇಲಕ್ಕೆ ಎಸೆದುಬಿಟ್ಟ, ಅವುಗಳು ಬೀಳುತಿರುವಾಗ ತಟ್ಟನೆ ಅವುಗಳನ್ನು ತನ್ನ ಕೈಯಲ್ಲಿ ಹಿಡಿದುಕೂಳ್ಳುವನು ॥೪೦॥

ಆ ವಾಲಿಯು ತನ್ನ ಒಲವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅರಣ್ಯದಲ್ಲಿರುವ ಮಹಾಸಾರವತ್ತಾದ ನಾನಾವಿಧವೃಕ್ಷಗಳನ್ನು ಅನೇಕವಾಗಿ ಮುರಿದುಹಾಕಿರುವನು ॥೪೧॥

ಹೀಗೆ ವಾಲಿಯು ಮುರಿದುಹಾಕಿದ್ದ ವೃಕ್ಷಗಳೊಳಗೆ ಸಪ್ತಸಾಲವೃಕ್ಷಗಳೂ ಸೇರಿರುವುವು, ಇವು ಮಹಾವಿಶಾಲವಾಗಿಯೂ ಅನೇಕ ಶಾಖೋಪಶಾಖೆಗಳೂಡನೆ ಯುಕ್ತವಾಗಿಯೂ ಇರುವುವು ಇವುಗಳಲ್ಲಿ ಯಾವುದಾದರೊಂದನ್ನು ಆ ವಾಲಯು ತನ್ನ ಒಲದಿಂದ ಎಲೆಯಿಲ್ಲದಂತೆ ಮಾಡಿಬಿಡಒಲ್ಲನು ॥೪೨॥

ಅಯ್ಯಾ! ರಾಮ! ಇದೋ ಈ ವಾಲಿಯ ಅಸದೃಶವಾದ ವೀರ್ಯವು ನನ್ನಿಂದ ಹೇಳಲ್ಪಟ್ಟಿರುವುದು ಎಲೈ ರಾಜಾಧಿರಾಜನೆ! ಇಂತಹ ಬಲಶಾಲಿಯಾದ ವಾಲಯನ್ನು ನೀನು ಹೇಗ ಯುದ್ಧದಲ್ಲಿ ಕೊಲ್ಲಲು ಶಕ್ತನಾಗುವೆ? ॥೪೩॥

ಹೀಗೆಂದು ಸುಗ್ರೀವನಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ಮಹಾತೇಜಸ್ವಿಯಾದ ಶ್ರೀರಾಮನು, ಅವನಿಗೆ ನಂಬುಗೆಯುಂಟಾಗುವುದಕ್ಕಾಗಿ ಕೈಯಲ್ಲಿ ಧನುಸ್ಸನ್ನು ತೆಗೆದುಕೊಂಡನು ॥

ಹೀಗೆ ಘೋರವಾದ ಧನುಸ್ಸನ್ನು ತೆಗೆದುಕೊಂಡು, ಮೌರ್ವೀಧ್ವನಿಯನ್ನು ದಿಕ್ಕುಗಳಲ್ಲೆಲ್ಲ ತುಂಬುತ, ಮಹಾನುಭಾವನಾದ ಶ್ರೀರಾಮನು, ಆ ಸಪ್ತಸಾಲವೃಕ್ಷಗಳನ್ನು ಗುರಿಮಾಡಿ ಒಂದು ಬಾಣವನ್ನು ಬಿಟ್ಟನು ॥೪೫॥

ಸ ವಿಸೃಷ್ಟೋ ಬಲವತಾ ಬಾಣಃ ಸ್ವರ್ಣಪರಿಷ್ಕೃತಃ ।
ಭಿತ್ತ್ವಾ ಸಾಲಾ ಗಿರಿಪ್ರಸ್ಥೇ ಸಪ್ತ ಭೂಮಿಂ ವಿವೇಶ ಹ ॥೪೬॥
ಪ್ರವಿಷ್ಟಶ್ಚ ಮುಹೂರ್ತೇನ ರಸಾಂ ಭಿತ್ತ್ವಾ ಮಹಾಬಲಃ ।
ನಿಪತ್ಯ ಚ ಪುನಸ್ತೂರ್ಣಂ ಸ್ವತೂಣೀಂ ಪುನರಾವಿಶತ್ ॥೪೭॥
ತಾಂ ದೃಷ್ಟ್ವಾ ಸಪ್ತ ನಿರ್ಭಿನ್ನಾಂ ಸಾಲಾಂ ವಾನರಪುಙ್ಗವಃ ।
ರಾಮಸ್ಯ ಶರವೇಗೇನ ವಿಸ್ಮಯಂ ಪರಮಂ ಗತಃ ॥೪೮॥

ಇತಿ ಶ್ರೀ ಕಿಷ್ಕಿನ್ಧಾಕಾಣ್ಡೇ ರಾಮಸುಗ್ರೀವಸಖ್ಯಾದಿಕಥನಂ ನಾಮ
ದ್ವಿತೀಯಃ ಸರ್ಗಃ



ಈರೀತಿಯಾಗಿ ಮಹಾಪರಾಕ್ರಮಶಾಲಿಯಾದ ರಾಮನಿಂದ ಬಿಡಲ್ಪಟ್ಟ ಸುವರ್ಣಾಲಂಕೃತವಾದ ಆ ಬಾಣವು, ಪರ್ವತ ತಟದಲ್ಲಿದ್ದ ಸಪ್ತಸಾಲಗಳನ್ನೂ ಭೇದಿಸಿಕೊಂಡು ಭೂಮಿಯೊಳಗ ಪ್ರವೇಶಿಸಿಬಿಟ್ಟಿತು ॥೪೬॥

ಹೀಗೆ ಒಂದು ಮುಹೂರ್ತದೊಳಗಾಗಿ ಭೂಮಿಯನ್ನು ಕೂರೆದುಕೊಂಡು ಒಳಗ ಪ್ರವೇಶಿಸಿದ ಮಹಾಸಾರವತ್ತಾದ ಆ ಬಾಣವು, ಪುನಃ ಮೇಲಕ್ಕೆ ಹೊರಟು ತಟ್ಟನ ತನ್ನ ಬತ್ತಳಿಕೆಯೊಳಗೆ ಸೇರಿಕೊಂಡಿತು ॥೪೭॥

ಈರೀತಿಯಾಗಿ ಆ ಏಳುಸಾಲವೃಕ್ಷಗಳೂ ಶ್ರೀರಾಮನ ಬಾಣವೇಗದಿಂದ ಕತ್ತರಿಸಲ್ಪಟ್ಟುದುದನ್ನು ಕಂಡು, ವಾನರಾಧಿಪತಿಯಾದ ಸುಗ್ರೀವನು ಬಹಳವಾಗಿ ಆಶ್ಚರ್ಯಗೊಂಡನು ॥೪೮॥

ಇದು ಕಿಷ್ಕಿಂಧಾಕಾಂಡದಲ್ಲಿ ರಾಮಸುಗ್ರೀವ ಸಖ್ಯಾದಿಕಥನವೆಂಬ
ಎರಡನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ತೃತೀಯಃ ಸರ್ಗಃ.

ಶ್ರೀಶಿವಉವಾಚ.

ಏವಂ ಪ್ರತ್ಯಯಮುತ್ಪಾದ್ಯ ಸುಗ್ರೀವಸ್ಯ ರಘೂತ್ತಮಃ ।
ಸ್ವಸ್ವರೂಪಂ ದರ್ಶಯಿತುಂ ರಾಮಃ ಸುಗ್ರೀವಮಬ್ರವೀತ್ ॥೧॥
ಕಪೇ ಮಮಾದ್ಭುತಂ ರೂಪಂ ಪಶ್ಯ ತದ್ದರ್ಶಯಾಮಿ ತೇ ।
ದ್ರಷ್ಟುಂ ನ ಶಕ್ಯಂ ತದ್ರೂಪಂ ಮಮ ಪ್ರಾಕೃತಲೋಚನೈಃ ।
ದಾಸ್ಯೇ ತುಭ್ಯಂ ದಿವ್ಯಚಕ್ಷುಃ ಯೇನ ಮಾಂ ದ್ರಕ್ಷ್ಯಸೀಶ್ವರಮ್ ॥೨॥
ಇತ್ಯುಕ್ತ್ವಾ ದರ್ಶಯಾಮಾಸ ಸ್ವಸ್ವರೂಪಂ ಸನಾತನಮ್ ॥೩॥
ತತೋ ದದರ್ಶ ಸುಗ್ರೀವೋ ರಾಮದೇಹೇ ಮಹಾದ್ಭುತೇ ।
ಕ್ವಚಿದ್ದೇವಾ೯ ಕ್ವಚಿದ್ವಿಪ್ರಾ೯ ಕ್ವಚಿದ್ಗನ್ಧರ್ವಕಿನ್ನರಾ೯ ॥೪॥
ಅನೇಕವಕ್ತ್ರನಯನಂ ಅನೇಕಶ್ರುತಿಪಾದವತ್ ।
ಅನೇಕದಿವ್ಯಾಭರಣಂ ನಾನಾವರ್ಣಾಮ್ಬರಸ್ರಜಮ್ ॥೫॥

ಕಿಷ್ಕಿಂಧಾಕಾಂಡದಲ್ಲಿ ಮೂರನೆಯ ಸರ್ಗವು

ಪುನಃ ಶ್ರೀಪರಮೇಶ್ವರನು ಪಾರ್ವತಿಯೊಡನೆ ಹೇಳುವನು :—

ಎಲೌ ಪ್ರಿಯೆ! ಪಾರ್ವತಿ! ಹೀಗೆ ರಘುಶ್ರೇಷ್ಠನಾದ ಶ್ರೀರಾಮನು ಸುಗ್ರೀವನಿಗೆ ನಂಬುಗೆಯನ್ನು ಹುಟ್ಟಿಸಿ, ಬಳಿಕ ತನ್ನ ನಿಜರೂಪವನ್ನು ತೋರಿಸುವುದಕ್ಕೋಸ್ಕರ ಸುಗ್ರೀವನನ್ನು ಕುರಿತು ಹೀಗೆ ಮಾತನಾಡಿದನು ಎಲೈ ಕಪಿನಾಯಕನೆ! ಈಗ ನನ್ನ ಅದ್ಭುತವಾದ ರೂಪವನ್ನು ನೋಡುವನಾಗು. ನಾನು ಅದನ್ನು ನಿನಗೆ ತೋರಿಸುವೆನು ಆ ನನ್ನ ರೂಪವು ಪ್ರಾಕೃತ ನೇತ್ರದಿಂದ ನೋಡಲು ಸಾಧ್ಯವಲ್ಲ ಅದುಕಾರಣ, ವಿಶ್ವರೂಪನಾದ ನನ್ನನ್ನು ನೋಡಲು ಸಮರ್ಥವಾಗುವಂತೆ ದಿವ್ಯಚಕ್ಷುಸ್ಸನ್ನು ನಿನಗೆ ಕೊಡುವೆನು ಹೀಗೆಂದು ಹೇಳಿ, ಆ ಶ್ರೀರಾಮನು ಸುಗ್ರೀವನಿಗೆ ತನ್ನ ದಿವ್ಯರೂಪವನ್ನು ತೋರಿಸಿದನು ॥೧–೩॥

ಬಳಿಕ ಆ ಸುಗ್ರೀವನು ಅತ್ಯದ್ಭುತವಾದ ಶ್ರೀರಾಮನ ದೇಹದೊಳಗೆ, ಕೆಲವುಕಡೆ ದೇವತೆಗಳನ್ನೂ ಕೆಲವುಕಡೆ ಬ್ರಾಹ್ಮಣರನ್ನೂ ಕೆಲವುಕಡೆ ಗಂಧರ್ವ ಕಿನ್ನರರನ್ನೂ ಕಂಡನು ॥೪॥

ಅನೇಕವಾದ ವಕ್ತ್ರಗಳೂ ನೇತ್ರಗಳೂ ಉಳ್ಳವನಾಗಿಯೂ, ಅನೇಕವಾದ ಶ್ರೋತ್ರಗಳಿಂದಲೂ ಪಾದಗಳಿಂದಲೂ ಯುಕ್ತವಾಗಿಯೂ, ಅನೇಕ ದಿವ್ಯಾಭರಣ ಭೂಷಿತವಾಗಿಯೂ, ನಾನಾವರ್ಣವಾದ ವಸ್ತ್ರಗಳನ್ನೂ ಮಾಲೆಗಳನ್ನೂ ಧರಿಸಿದುವನಾಗಿಯೂ ಇರುವಂತೆ, ಆ ಶ್ರೀರಾಮನ ಶರೀರವನ್ನು ಸುಗ್ರೀವನು ಕಂಡನು ॥೫॥

ಕ್ವಚಿದ್ಘೋರಂ ಕ್ವಚಿಚ್ಛಾನ್ತಂ ಕ್ವಚಿತ್ ತೇಜಃ ಕ್ವಚಿತ್ ತಮಃ ।
ಕ್ವಚಿದ್ರಾದ್ರಂ ಕರಾಳಂ ಚ ಕ್ವಚಿದದ್ಭುತದರ್ಶನಮ್ ॥೬॥
ತತೋ ಧರಾಂ ಸರ್ವತಾಂಶ್ಚ ಸಪ್ತ ಸಾಗರವೇಷ್ಟಿತಾಃ ।
ಮೇರುವಿಂಧ್ಯೌ ಹಿಮಗಿರಿಂ ಸಪ್ತ ದ್ವೀಪಾಂ ಮಹಾಚಲಾನ್ ॥೭॥
ಚಕ್ರವಾಳಂ ಮಹಾನ್ತಂ ಚ ಯೇನ ವಿಷ್ವಗ್ವೃತಾ ಧರಾ ।
ಸೂರ್ಯಕ್ಷ್ಮಾಧಾರಮನ್ಯತ್ರ ಯದ್ದರ್ಶಸ್ತೇಜಸಾ ವೃತಃ ॥೮॥
ಲೋಕಾಂಶ್ಚತುರ್ದಶ ಪ್ರಖ್ಯಾನ್ ನಗರಾಣಿ ಚ ಕೋಟಿಶಃ ।
ಅನನ್ತಕೋಟಿಜೀವಾಂಶ್ಚ ಸ್ವಧರ್ಮಾದೃತವರ್ಮಣಃ ॥೯॥
ದಿಕ್ಪಾಲಾನ್ ಮರುತಾಂ ಸಙ್ಘಾನ್ ಮುನಿಸಙ್ಘಾನ್ ಸಹಸ್ರಶಃ ।
ಸಪ್ತಪಾತಾಳಲೋಕೇಷು ಮಹೋನ್ನತಶರೀರಿಣಃ ॥೧೦॥
ಊರ್ಧ್ವಲೋಕೇಷ್ವಪಿ ತಥಾ ತೇಜೋರೂಪಾನ್ ಮಹಾಬಲಾನ್ ।
ವಿಹಾರಚಿತ್ರದೇಶಾಂಶ್ಚ ನಾನಾರಣ್ಯಾನಿ ಕೋಟಿಶಃ ॥೧೧॥
ರವ್ಯೃಕ್ಷವರ್ಮಾ ಮುನೀನಾಂ ಚ ಬ್ರಹ್ಮಲೋಕಂ ಸುವಿಸ್ತರಮ್ ।
ಕೈಲಾಸಂ ವಿಷ್ಣುಸದನಂ ರಾಮದೇಹೇ ಸ ದೃಷ್ಟವಾನ್ ॥೧೨॥

ಆ ದಿವ್ಯದೇಹದೊಳಗೆ ಕೆಲವುಕಡೆ ಘೋರವಾಗಿಯೂ ಕೆಲವುಕಡೆ ಶಾಂತವಾಗಿಯೂ ಕೆಲವುಕಡೆ ತೇಜೋಮಯವಾಗಿಯೂ ಕೆಲವುಕಡೆ ತಮೋಮಯವಾಗಿಯೂ ಕೆಲವುಕಡೆ ರಾದ್ರಕರಾಳವಾಗಿಯೂ ಕೆಲವುಕಡೆ ನೋಡುವುದಕ್ಕೆ ಅತ್ಯದ್ಭುತವಾಗಿಯೂ ಇರುವಂತೆ ಕಂಡನು ॥೬॥

ಅನಂತರ, ಭೂಮಿಯನ್ನೂ ಸಪ್ತಸಮುದ್ರವೇಷ್ಟಿತವಾದ ಪರ್ವತಗಳನ್ನೂ ಮೇರು ವಿಂಧ್ಯ ಹಿಮಾಚಲಗಳನ್ನೂ ಸಪ್ತದ್ವೀಪಗಳನ್ನೂ ಸಪ್ತಕುಲಾಚಲಗಳನ್ನೂ ಆ ರಾಮದೇಹದೊಳಗೆ ನೋಡಿದನು ॥೭॥

ಒಂದುಕಡೆಯಲ್ಲಿ- ಭೂಮಿಯನ್ನೆಲ್ಲ ಆವರಿಸಿಕೊಂಡಿರುವ ಚಕ್ರವಾಳಪರ್ವತವನ್ನೂ, ಮತ್ತೊಂದುಕಡೆಯಲ್ಲಿ-ತೇಜೋಮಯವಾದ ಮಧ್ಯಭಾಗಗಳುಳ್ಳದಾಗಿರುವ ಸೂರ್ಯನಕ್ಷತ್ರಮಂಡಲಗಳನ್ನೂ ಅವಲೋಕಿಸಿದನು ॥೮॥

ಪ್ರಸಿದ್ಧವಾದ ಚತುರ್ದಶಲೋಕಗಳನ್ನೂ, ಅನೇಕಕೋಟಿಸಂಖ್ಯಾಕವಾದ ನಗರಗಳನ್ನೂ, ತಂತಮ್ಮ ಕರ್ಮಾನುಗುಣವಾಗಿ ಶರೀರಗ್ರಹಣಮಾಡಿರುವ ಅನೇಕಕೋಟಿ ಜೀವರನ್ನೂ ಆ ರಾಮದೇಹದಲ್ಲಿ ನೋಡಿದವನಾದನು ॥೯॥

ದಿಕ್ಪಾಲಕರನ್ನೂ, ದೇವಸಂಘಗಳನ್ನೂ, ಅನೇಕ ಸಹಸ್ರಸಂಖ್ಯೆಯಾಗಿರುವ ಮುನಿಸಂಘಗಳನ್ನೂ, ಅತಲವಿತಲಾದಿ ಸಪ್ತಲೋಕಗಳಲ್ಲಿರುವ ಮಹೋನ್ನತ ಶರೀರಗಳಾದ ಪ್ರಾಣಿಗಳನ್ನೂ ಅಲ್ಲಿ ನೋಡಿದನು ॥೧೦॥

ಹಾಗೆಯೇ ಊರ್ಧ್ವಲೋಕದಲ್ಲಿರತಕ್ಕುವುಗಳಾದ ತೇಜೋರೂಪಗಳಾಗಿಯೂ ಮಹಾಬಲಗಳಾಗಿಯೂ ಇರುವ ಪ್ರಾಣಿಸಂಘಗಳನ್ನೂ, ವಿಹಾರಾಶ್ರಯವಾದ ವಿಚಿತ್ರಪ್ರದೇಶಗಳನ್ನೂ, ಅಸಂಖ್ಯಾಕಗಳಾಗಿರುವ ನಾನಾವಿಧವಾದ ಅರಣ್ಯಗಳನ್ನೂ, ಸುಗ್ರೀವನು ರಾಮನ ದೇಹದೊಳಗೆ ಕಂಡನು ॥೧೧॥

ಮನೋಹರವಾಗಿರುವ ಋಷ್ಯಾಶ್ರಮಗಳನ್ನೂ, ಅತಿ ವಿಸ್ತೃತವಾದ ಬ್ರಹ್ಮಲೋಕವನ್ನೂ, ಕೈಲಾಸ ವೈಕುಂಠಗಳನ್ನೂ, ಶ್ರೀರಾಮನ ದೇಹದಲ್ಲಿ ಅವನು ನೋಡಿದನು ॥೧೨॥

ನಾನಾಮುಖಾನ್ಯನೇಕಾನಿ ತನ್ಮಧ್ಯೇ ರಾಕ್ಷಸಾ ಬಹೂ ।
ಬಹುರಾವಣಸಙ್ಘಾಂಶ್ಚ ಕುಂಭಕರ್ಣಾ ಸಹಸ್ರಶಃ ॥೧೩॥
ಸಾಹಸ್ರಂ ವಾಲಿನಾಂ ತತ್ರ ದದರ್ಶ ಚಣಕೋಪಮವ್ ।
ಜ್ವಾಲಾಕರಾಳಮತ್ಯುಗ್ರಂ ವಿಶ್ವರೂಪಂ ದದರ್ಶ ಚ ॥೧೪॥
ರೂಪಮತ್ಯದ್ಭುತಂ ದೃಷ್ಟ್ವಾ ವಿರಾಜಂ ಹರಿಪುಙ್ಗವಃ।
ಸ ಮೂರ್ಧ್ನಾ ನ್ಯಪತದ್ಭೂಮೌ ಪ್ರಲಮ್ಬೀಕೃತಭೂಷಣಃ ॥೧೫॥
ಸುಗ್ರೀವಃ ಪರಮಪ್ರೀತೋ ರಾಘವಾಯ ಕೃತಾಞ್ಜಲಿಃ ।
ಇದಂ ಚೋವಾಚ ಭೀತಃ ಸನ್ ಕರ್ಮಣಾ ತೇನ ಹರ್ಷಿತಃ ॥೧೬॥
ತವೈತದದ್ಭುತಂ ರೂಪಂ ದೃಷ್ಟ್ವಾಸ್ಮಿ ಭಯವಿಹ್ವಲಃ ।
ಪಾಹಿ ಮಾಂ ಕರುಣಾಸಿನ್ಧೋ ಪೂರ್ವರೂಪಪ್ರದರ್ಶನಾತ್ ॥೧೭॥

ಶ್ರೀರಾಮ ಉವಾಚ

ಏತತ್ ತೇ ದರ್ಶಿತಂ ರೂಪಂ ತ್ವದ್ಭಕ್ತ್ಯೋಪಾಸನಾಯ ಮೇ ।
ಇದಾನೀಂ ಪಶ್ಯ ಮೇ ರೂಪಂ ಪೂರ್ವೋಕ್ತಂ ಮಾ ಭಯಂ ತವ ॥೧೮॥

ಶ್ರೀಶಿವ ಉವಾಚ

ಇತ್ಯುಕ್ತ್ವಾ ರಾಮಚನ್ದ್ರಸ್ತಂ ಪೂರ್ವರೂಪಂ ಸಲಕ್ಷ್ಮಣಮ್ ।

ಇನ್ನೂ ನಾನಾವಿಧಮುಖವುಳ್ಳ ಅನೇಕಜಂತುಗಳನ್ನೂ, ಅನೇಕರಾದ ರಾಕ್ಷಸರನ್ನೂ ಅನೇಕರಾಗಿ ಗುಂಪುಗುಂಪಾಗಿರುವ ರಾವಣರನ್ನೂ, ಸಾವಿರಾರುಮಂದಿ ಕುಂಭಕರ್ಣರನ್ನೂ, ಆ ದೇಹಮಧ್ಯದಲ್ಲಿ ಅವಲೋಕಿಸಿದನು ॥೧೩॥

ಸಾವಿರಾರುಮಂದಿ ವಾಲಿಗಳು ಆ ದೇಹದೊಳಗೆ ಕಡಲೆಕಾಳುಗಳಂತೆ ಓಡಾಡುತಿರುವುದನ್ನು ನೋಡಿದನು ಜ್ವಾಲಾಮಾಲೆಗಳಿಂದ ಕರಾಳವಾಗಿ ಅತ್ಯುಗ್ರವಾಗಿರುವ ವಿಶ್ವರೂಪವನ್ನು ಆ ಸುಗ್ರೀವನು ದರ್ಶನಮಾಡಿದನು ॥೧೪॥

ಹೀಗೆ ಅತ್ಯುದ್ಭುತವಾಗಿರುವ ಆ ವಿರಾಡ್ರೂಪವನ್ನೂ ನೋಡಿ, ಆ ಕಪಿನಾಯಕನು ತನ್ನ ಆಭರಣಗಳನ್ನು ಜೋಲಾಡಿಸುತ ನೆಲದಮೇಲೆ ಮಲಗಿ ದೀರ್ಘವಾಗಿ ನಮಸ್ಕಾರಮಾಡಿದನು ॥

ಆಗ ವಿಶ್ವರೂಪದರ್ಶನದಿಂದ ಹರ್ಷಿತನಾಗಿ ಮಹಾಪ್ರೀತಿಯುಕ್ತನಾಗಿರುವ ಸುಗ್ರೀವನು, ಭಯಪಟ್ಟು ಅಂಜಲಿಬಂಧಮಾಡಿಕೊಂಡು ಶ್ರೀರಾಮನಿಗೆ ಹೀಗೆ ವಿನಯಮಾಡಿಕೊಂಡನು ॥೧೬॥

ಸ್ವಾಮಿ! ನಿನ್ನ ಈ ಅದ್ಭುತವಾದ ರೂಪವನ್ನು ನೋಡಿ ನಾನು ಭಯಭ್ರಾಂತನಾಗಿರುವೆನು ಎಲೈ ಕೃಪಾಸಾಗರನೆ! ನಿನ್ನ ಪೂರ್ವರೂಪವನ್ನು ತೋರಿಸಿ ನನ್ನನ್ನು ಪರಿಪಾಲಿಸು ॥೧೭॥

ಇದನ್ನು ಕೇಳಿ ಶ್ರೀರಾಮನು ಹೇಳುವನು,—

ಅಯ್ಯಾ! ಸುಗ್ರೀವನೆ! ನೀನು ನನ್ನಲ್ಲಿಟ್ಟಿರುವ ಭಕ್ತಿಯನ್ನು ನೋಡಿ, ಉಪಾಸನಾರ್ಥವಾಗಿ ನಿನಗೆ ಈ ವಿಶ್ವರೂಪವು ನನ್ನಿಂದ ತೋರಿಸಲ್ಪಟ್ಟಿತು ಈಗ ಪುನಃ ನನ್ನ ಹಿಂದಣ ರೂಪವನ್ನು ನೋಡುವನಾಗು ನೀನು ಭಯಪಡಬೇಡ ॥೧೮॥

ಶ್ರೀಪರಮೇಶ್ವರನು ಪಾರ್ವತಿಗೆ ಹೇಳುವನು —

ಎಲೌ ಪಾರ್ವತಿ! ಹೀಗೆಂದು ಸುಗ್ರೀವನಿಗೆ ಹೇಳಿ, ಲಕ್ಷ್ಮಣಯುಕ್ತವಾಗಿದ್ದ ತನ್ನ ಪೂರ್ವರೂಪವನ್ನು ಅವನಿಗೆ ತೋರಿಸಿ, ಪುನಃ ಆ ಕಪೀಶ್ವರನನ್ನು ಕುರಿತು ಹೀಗೆ ಹೇಳಿದನು ॥೧೯॥

ದರ್ಶಯಿತ್ವಾಥ ಭೂಯೋಪಿ ಪ್ರಾಹ ದೇವಿ ಕಪೀಶ್ವರಮ್ ॥೧೯॥
ಕುರು ಮದ್ವಚನಂ ವೀರ ತವ ಕಾಮಾಭಿಪೂರ್ತಯೇ ।
ನಿಯಮೇನ ಕಪಿಶ್ರೇಷ್ಠ ಮಮಾರಾಧನಮುತ್ತಮಮ್ ॥೨೦॥
ಶುಚೌ ದೇಶೇ ಸಮಾವಿಶ್ಯ ಭೂತ್ವಾ ಶುಚಿರತನ್ದ್ರಿತಃ ।
ಹೃದಯಾಮ್ಬುಜಮುದ್ಭೋಧ್ಯ ತನ್ಮಧ್ಯೇ ಕಲ್ಪಭೂರುಹಮ್ ॥೨೧॥
ತನ್ಮಧ್ಯೇ ರತ್ನಖಚಿತಮಣಿಮಣ್ಟಪಮುತ್ತಮಮ್ ।
ಹೀರಮುಕ್ತಾರತ್ನಬದ್ಧಮಣಿಸಿಂಹಾಸನಂ ತತಃ ॥೨೨॥
ತನ್ಮಧ್ಯೇಷ್ಟದಳಂ ಪದ್ಮಂ ನಾನಾರತ್ನಾಭಿವೇಷ್ಟಿತಮ್ ।
ತನ್ಮಧ್ಯೇ ಮಾಂ ಸುಖಾಸೀನಂ ಸೀತಾಲಿಙ್ಗಿತವಿಗ್ರಹಮ್ ॥೨೩॥
ಭರತೇನ ಧೃತಚ್ಛತ್ರಂ ಯಮಳಾಭ್ಯಾಂ ಚ ವೀಜಿತಮ್ ।
ಹನೂಮದ್ಧೃತಪಾದಾಬ್ಜಂ ಜ್ಞಾನಮುದ್ರಾವಿರಾಜಿತಮ್ ॥೨೪॥
ವಸಿಷ್ಠವಾಮದೇವಾಭ್ಯಾಂ ಆಶ್ರಿತಂ ಪುರತಃ ಪ್ರಭುಮ್ ।
ವೀರಾಸನೇ ಸಮಾಸೀನಂ ಮುಕ್ತಾಹಾರಾಭಿಸುನ್ದರಮ್ ॥೨೫॥
ರತ್ನಕುಣ್ಡಲಕರ್ಣಾನ್ತಂ ಕಿರೀಟಾರ್ಕಸಮದ್ಯುತಿಮ್ ।
ಸ್ಮಿತವಕ್ತ್ರಂ ದೀರ್ಘಬಾಹುಂ ಕರ್ಣಾನ್ತಾಯತಲೋಚನಮ್ ॥೨೬॥

ಎಲ್ಲ ಮಹಾವೀರನಾದ ಕಪಿಶ್ರೇಷ್ಠನೆ! ನಿನ್ನ ಅಭೀಷ್ಟಸಿದ್ಧಿಗಾಗಿ ನಿತ್ಯವೂ ನಿಯಮದಿಂದ ನನ್ನ ಭಜನೆಯನ್ನೂ ನನ್ನ ಆರಾಧನೆಯನ್ನೂ ಮಾಡುವನಾಗು ॥೨೦॥

ನನ್ನ ಆರಾಧನಯ ಕ್ರಮ ಹೇಗೆಂದರೆ,-ಶುಚಿಯಾದ ಪ್ರದೇಶದಲ್ಲಿ ಕುಳಿತುಕೊಂಡು, ನೀನು ಶುಚಿಯಾಗಿಯೂ ಆಲಸ್ಯರಹಿತನಾಗಿಯೂ ಇರುತ್ತ, (೧) ಹೃದಯಕಮಲವನ್ನು ಉದ್ಬೋಧನೆಮಾಡಿ, ಅದರ ಮಧ್ಯದಲ್ಲಿ ಕಲ್ಪವೃಕ್ಷವನ್ನು ಧ್ಯಾನಿಸು ॥೨೧॥

ಆ ಕಲ್ಪವೃಕ್ಷದ ಕೆಳಗೆ ರತ್ನಖಚಿತವಾದ ದಿವ್ಯವಾದ ಮಣಿಮಂಟಪವನ್ನೂ, ಒಳಿಕ ನವರತ್ನಮಂಟಪದ ಮಧ್ಯದಲ್ಲಿ ವಜ್ರ ಮುಕ್ತಾಫಲ ಪದ್ಮರಾಗಾದಿಗಳಿಂದ ನಿಬದ್ಧವಾದ ರತ್ನಸಿಂಹಾಸನವನ್ನೂ ಧ್ಯಾನಿಸು ॥೨೨॥

ಆರತ್ನಸಿಂಹಾಸನದ ಮಧ್ಯದಲ್ಲಿ ನಾನಾರತ್ನ ಪರಿವೇಷ್ಟಿತವಾದ ಅಷ್ಟದಳ ಪದ್ಮವನ್ನೂ, ಅದರ ಮಧ್ಯದಲ್ಲಿ ಸೀತಾಲಿಂಗಿತ ಗಾತ್ರನಾಗಿ ಸುಖಾಸೀನನಾಗಿರುವ ನನ್ನನ್ನೂ ಧ್ಯಾನಿಸು ॥೨೩॥

ಅಲ್ಲಿ ಭರತನು ನನಗೆ ಛತ್ರವನ್ನು ಹಿಡಿದುಕೊಂಡಿರುವಂತೆಯೂ, ಲಕ್ಷ್ಮಣ ಶತ್ರುಘ್ನರು ಚಾಮರಗಳಿಂದ ಬೀಸುತಿರುವಂತೆಯೂ, ಹನುಮಂತನು ನನ್ನ ಪಾದಕಮಲಗಳನ್ನು ಒತ್ತುತಿರುವಂತೆಯೂ, ನಾನು ಕೈಯಲ್ಲಿ ಜ್ಞಾನಮುದ್ರೆಯನ್ನು ಧರಿಸಿ ವಿರಾಜಿಸುತಿರುವಂತೆಯೂ ಧ್ಯಾನಿಸು॥

ವಸಿಷ್ಠವಾಮದೇವರು ಮುಂಭಾಗದಲ್ಲಿ ನನ್ನನ್ನು ಅನುಸರಿಸಿ ಕುಳಿತಿರುವಂತೆಯೂ, ನಾನು ವೀರಾಸನದಲ್ಲಿ ಕುಳಿತು ಮುಕ್ತಾಹಾರಗಳಿಂದ ಶೋಭಿಸುತಿರುವಂತೆಯೂ, ಧ್ಯಾನಮಾಡು ॥೨೫॥

ನಾನು ರತ್ನಕುಂಡಲಗಳನ್ನು ಕಿವಿಯಲ್ಲಿ ಧರಿಸಿರುವಂತೆಯೂ, ಸೂರ್ಯಸಮಾನವಾದ ಕಿರೀ

---

(೧) ಹೃದಯದಲ್ಲಿ ಒಂದು ಕಮಲವಿರುವುದೆಂದೂ, ಅದು ಅಧೋಮುಖವಾಗಿ ಕೋಶ (ಮೊಗ್ಗು) ರೂಪವಾಗಿರುವುದೆಂದೂ, ಯೋಗಾಭ್ಯಾಸಮಾಡತಕ್ಕವನು ಪ್ರಾಣಾಯಾಮಾದಿಗಳನ್ನು ಮಾಡಿದಾಗ ಅದು ಊರ್ಧ್ವಮುಖವಾಗಿ ವಿಕಸಿತವಾಗುವುದೆಂದೂ, ಯೋಗಶಾಸ್ತ್ರದಲ್ಲಿ ವಿಶೇಷವಾಗಿ ವಿವರಿಸಲ್ಪಟ್ಟಿರುವುದು

ಮಣಿಕಙ್ಕಣಕೇಯೂರಮುದ್ರಿಕಾಭಿರಲಙ್ಕೃತಮ್ ।
ಪೀತಾಮ್ಬರಾನುಸನ್ನದ್ಧರತ್ನದಾಮವಿಭೂಷಿತಮ್ ॥೨೬॥
ಪಾದಾಙ್ಗದಾದಿಸನ್ನದ್ಧಪಾದಯುಗ್ಮಂ ಪರಾತ್ಪರಮ್ ।
ದಿವ್ಯಚನ್ದನಲಿಪ್ತಾಙ್ಗಂ ಪುಷ್ಪಮನ್ದಾರಮಾಲಿಕಮ್ ॥೨೭॥
ಸನಕಾದಿಮುನಿಸ್ತುತ್ಯಂ ದಿಕ್ಪಾಲಗಣಸೇವಿತಮ್ ।
ಬ್ರಹ್ಮಾದಿಮಕುಟಸ್ಪೃಷ್ಟಪಾದಪದ್ಮಂ ಮಹಾದ್ಯುತಿಮ್ ॥೨೮॥
ಏವಂ ಧ್ಯಾತ್ವಾ ತತಃ ಸರ್ವೈಃ ಉಪಚಾರೈಃ ಸಮರ್ಚಯ ।
ತತೋ ನಾಮ್ನಾಂ ಸಹಸ್ರೇಣ ಜಪಂ ಕುರು ಸಮಾಹಿತಃ ॥೨೯॥
ಇತ್ಯುಕ್ತ್ವೋಪಾದಿಶದ್ರಾಮಃ ಸ್ವಸ್ಯ ನಾಮ್ನಾಂ ಸಹಸ್ರಕಮ್ ।
ಸದೀಕ್ಷಾವಿಧಿ ಸಧ್ಯಾನಂ ಸನ್ಯಾಸಂ ಸರಹಸ್ಯಕಮ್ ॥೩೧॥
ಉಪದೇಶಮವಾಪ್ಯೈವಂ ಸಾಕ್ಷಾದ್ರಾಮಮುಖಾಮ್ಬುಜಾತ್ ।
ಮೇನೇ ಕೃತಾರ್ಥಮಾತ್ಮಾನಂ ಸುಗ್ರೀವೋ ಹೃಷ್ಟಮಾನಸಃ ॥೩೨॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸುಗ್ರೀವಾಯ ರಾಮೇಣ
ವಿಶ್ವರೂಪಪ್ರದರ್ಶನಂ ನಾಮ ತೃತೀಯಃ ಸರ್ಗಃ

ಟದಿಂದ ಪ್ರಕಾಶಮಾನನಾಗಿರುವಂತೆಯೂ, ಮುಖದಲ್ಲಿ ಮಂದಹಾಸಮಾಡುತ ದೀರ್ಘಬಾಹುವಾಗಿ ಕರ್ಣಾಂತವಿಸ್ತೃತನಯನನಾಗಿರುವಂತೆಯೂ ಧ್ಯಾನಿಸು ॥೨೬॥

ರತ್ನಖಚಿತವಾದ ಕಟಕ ಅಂಗದ ಮುದ್ರಿಕೆ (ಉಂಗುರ) ಗಳಿಂದ ಅಲಂಕೃತನಾಗಿಯೂ, ಪೀತಾಂಬರವನ್ನುಟ್ಟುಕೊಂಡು ಆದರಮೇಲೆ ರತ್ನಗಳನ್ನು ಪವಣಿಸಿ ಮಾಡಿರುವ ರಶನೆ(ಒಡಿದಾರ)ಯನ್ನು ಕಟ್ಟಿಕೊಂಡೂ ಇರುವಂತೆ ನನ್ನನ್ನು ಧ್ಯಾನಿಸು ॥೨೭॥

ನೂಪುರ(ಕಾಲುಸರ)ಗಳಿಂದ ವಿರಾಜಮಾನವಾದ ಪಾದಯುಗ್ಮವುಳ್ಳವನಾಗಿಯೂ, ದಿವ್ಯ ಚಂದನವನ್ನು ಶರೀರದಲ್ಲೆಲ್ಲ ಲೇಪಿಸಿಕೊಂಡವನಾಗಿಯೂ, ಮಂದಾರಪುಷ್ಪಮಾಲಿಕೆಯನ್ನು ಧರಿಸಿದವನಾಗಿಯೂ ಇರುವಂತೆ, ಪರಾತ್ಪರನಾದ ನನ್ನನ್ನು ಧ್ಯಾನಿಸುವನಾಗು ॥೨೮॥

ಸನಕಾದಿಮುನಿಗಳು ನನ್ನನ್ನು ಸ್ತುತಿಸುತಿರುವಂತೆಯೂ, ದಿಕ್ಪಾಲಸಮೂಹವು ಸೇವಿಸುತಿರುವಂತೆಯೂ, ಬ್ರಹ್ಮಾದಿ ದೇವತೆಗಳು ತಮ್ಮ ಕಿರೀಟಗಳಿಂದ ನನ್ನ ಪಾದಪದ್ಮಗಳನ್ನು ಸ್ಪರ್ಶಿಸುತಿರುವಂತೆಯೂ ಧ್ಯಾನಿಸು ॥೨೯॥

ಈರೀತಿಯಾಗಿ ಧ್ಯಾನಮಾಡಿ, ಬಳಿಕ ಸಕಲೋಪಚಾರಗಳಿಂದಲೂ ನನ್ನನ್ನು ಪೂಜಿಸು. ಆಮೇಲೆ ಸ್ಥಿರಚಿತ್ತನಾಗಿ ನನ್ನ ಸಹಸ್ರನಾಮದಿಂದ ಜಪಮಾಡುವನಾಗು (ಎಂದು ಶ್ರೀರಾಮನು ಸುಗ್ರೀವನಿಗ ಹೇಳಿದನು) ॥೩೦॥

ಹೀಗೆಂದು ಹೇಳಿ, ಬಳಿಕ ಆ ಸುಗ್ರೀವನಿಗೆ ದೀಕ್ಷಾವಿಧಿ ಧ್ಯಾನ ನ್ಯಾಸ ರಹಸ್ಯಗಳೊಡನೆ ತನ್ನ ಸಹಸ್ರನಾಮವನ್ನುಪದೇಶಿಸಿದನು ॥೩೧॥

ಈರೀತಿಯಾಗಿ ಶ್ರೀರಾಮನ ಮುಖಕಮಲದಿಂದಸೇ ಉಪದೇಶವನ್ನು ಹೊಂದಿ, ಆನಂದಿತ ಹೃದಯನಾದ ಸುಗ್ರೀವನು, ಆಗ ತಾನು ಕೃತಾರ್ಥನಾದೆನೆಂದು ತಿಳಿದುಕೊಂಡನು ॥೩೨॥

ಇದು ಕಿಷ್ಕಿಂಧಾಕಾಂಡದಲ್ಲಿ ಸುಗ್ರೀವನಿಗೆ ಶ್ರೀರಾಮನು ವಿಶ್ವರೂಪಪ್ರದರ್ಶನ ಮಾಡಿಸಿದ ನೆಂಬಲ್ಲಿಗೆ ಮೂರನೆಯ ಸರ್ಗವು.

ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಚತುರ್ಥಃ ಸರ್ಗಃ.

ಶ್ರೀಪಾರ್ವತ್ಯುವಾಚ

ಕೋತುಮಿಚ್ಛಾಮಿ ದೇವೇಶ ರಾಮನಾಮಸಹಸ್ರಕಮ್ ।
ಪ್ರೋಕ್ತಂ ಯತ್ ಕಪಿರಾಜಾಯ ರಾಘವೇಣ ವದಸ್ವ ತತ್ ॥೧॥

ಕಿಷ್ಕಿಂಧಾಕಾಂಡದಲ್ಲಿ ನಾಲ್ಕನೆಯ ಸರ್ಗವು.

ಶ್ರೀ ಪಾರ್ವತಿಯು ಪರಮೇಶ್ವರನನ್ನು ಪ್ರಾರ್ಥಿಸುವಳು —

ದೇವದೇವೇಶ್ವರನೆ! ನಾನು ಶ್ರೀರಾಮನ ಸಹಸ್ರನಾಮವನ್ನು ಕೇಳಬೇಕೆಂದು ಇಚ್ಛಿಸುವೆನು ಶ್ರೀರಾಮನಿಂದ ಸುಗ್ರೀವನಿಗೆ ಯಾವುದು ಹೇಳಲ್ಪಟ್ಟಿತೋ, ಅದನ್ನು ಈಗ ತಾವು ಅನುಗ್ರಹಿಸಿ ನನಗೆ ಅಪ್ಪಣೆಕೊಡಬೇಕು ॥೧॥

ಮೂ॥ ಶ್ರೀಶಿವಉವಾಚ

ಅಥ ವಕ್ಷ್ಯಾಮಿ ಗಿರಿಜೇ ರಾಮನಾಮಸಹಸ್ರಕಮ್ ।
ಶೃಣುಷ್ವೈಕಮನಾಃ ಸ್ತೋತ್ರಂ ಗುಹ್ಯಾದ್ಗುಹ್ಯತಮಂ ಮಹತ್ ॥೨॥
ಋಷಿರ್ವಿನಾಯಕಶ್ಚಾಸ್ಯ ಗಾಯತ್ರೀ ಚ್ಛನ್ದ ಏವ ಚ ।
ಪರಬ್ರಹ್ಮಾತ್ಮಕೋ ರಾಮೋ ದೇವತಾ ಶುಭದರ್ಶನೇ ॥೩॥

ಶ್ರೀ ಪರಮೇಶ್ವರನು ಪಾರ್ವತಿಗೆ ಉತ್ತರಹೇಳುವನು —

ಎಲೌ ಹಿಮಾಚಲಸುತೆಯಾದ ಗೌರಿಯೆ! ಈಗ ನಾನು ಶ್ರೀರಾಮ ಸಹಸ್ರನಾಮವನ್ನು ಹೇಳುವೆನು ಈ ಸಹಸ್ರನಾಮಸ್ತೋತ್ರವು, ರಹಸ್ಯಗಳಲ್ಲೆಲ್ಲ ರಹಸ್ಯವಾದುದು ಇದನ್ನು ಸಾವಧಾನಚಿತ್ತಳಾಗಿ ಕೇಳು ಈ ರಾಮಸಹಸ್ರನಾಮ ಸ್ತೋತ್ರಕ್ಕೆ, ವಿನಾಯಕನು ಋಷಿಯು, ಗಾಯತ್ರಿ ಚ್ಛಂದಸ್ಸು ಎಲೌ ಶುಭದರ್ಶನೆಯೆ! ಪರಬ್ರಹ್ಮಾತ್ಮಕನಾದ ಶ್ರೀರಾಮನೇ ದೇವತೆಯು॥

ಮೂ॥ ಅಥ ಧ್ಯಾನಮ್

ಸೌವರ್ಣೇ ಮಣ್ಟಪೇ ಮಧ್ಯೇ ಪುಷ್ಪಕೇ ಸುವಿರಾಜಿತೇ ।
ಮೂಲೇ ಕಲ್ಪತರೋಃ ಸ್ವರ್ಣಪೀಠೇ ಸಿಂಹಾಷ್ಟಸೇವಿತೇ ॥೪॥
ಮೃದುಶ್ಲಕ್ಷ್ಣತರೇ ತತ್ರ ಜಾನಕ್ಯಾ ಸಹ ಸಂಸ್ಥಿತಮ್ ।
ರಾಮಂ ನೀಲೋತ್ಪಲಶ್ಯಾಮಂ ದ್ವಿಭುಜಂ ಪೀತವಾಸಸಮ್ ॥೫॥

ಸ್ಮಿತವಕ್ತ್ರಂ ಸುಖಾಸೀನಂ ಪದ್ಮಪತ್ರನಿಭೇಕ್ಷಣಮ್ ।
ಕಿರೀಟಹಾರಕೇಯೂರಕುಂಡಲೈಃ ಕಟಕಾದಿಭಿಃ ।
ವಿರಾಜಮಾನಂ ವಿಜ್ಞಾನಮುದ್ರಂ ವೀರಾಸನೇ ಸ್ಥಿತಮ್ ॥೬॥
ಸ್ಪೃಶನ್ತಂ ಸ್ತನಯೋರಗ್ರಂ ಜಾನಕ್ಯಾಃ ಸವ್ಯಪಾಣಿನಾ ॥೭॥
ವಸಿಷ್ಠವಾಮದೇವಾದ್ಯೈಃ ಸೇವಿತಂ ಲಕ್ಷ್ಮಣಾದಿಭಿಃ ।
ಅಯೋಧ್ಯಾನಗರೇ ರಮ್ಯೇ ಹ್ಯಭಿಷಿಕ್ತಂ ರಘೂದ್ವಹಮ್ ॥೮॥
ಏವಂ ಧ್ಯಾತ್ವಾ ಜಪೇನ್ನಿತ್ಯಂ ರಾಮನಾಮಸಹಸ್ರಕಮ್ ।
ಹತ್ಯಾಕೋಟಿಯುತೋ ವಾಪಿ ಮುಚ್ಯತೇ ನಾತ್ರ ಸಂಶಯಃ ॥೯॥

ಬಳಿಕ ಧ್ಯಾನಪ್ರಕ್ರಮವನ್ನು ಕೇಳುವಳಾಗು —

ಕಲ್ಪವೃಕ್ಷದ ಕೆಳಗೆ, ವಿರಾಜಮಾನವಾದ ಪುಷ್ಪಕ ವಿಮಾನದ ಮಧ್ಯದಲ್ಲಿ, ಸುವರ್ಣಮಯವಾದ ಮಂಟಪದೊಳಗೆ, ಎಂಟು ಮೂಲೆಯಲ್ಲಿಯೂ ಎಂಟು ಸಿಂಹಗಳಿಂದ ಅಲಂಕೃತವಾಗಿಯೂ ಮೃದುವಾಗಿಯೂ ಅತಿಶ್ಲಕ್ಷ್ಣ(ನುಣುಪು)ವಾಗಿಯೂ ಇರುವ ಸುವರ್ಣಸಿಂಹಾಸನದ ಮೇಲುಗಡೆ, ಸೀತಾದೇವಿಯೊಡನೆ ಕೂಳಿತಿರುವ ನೀಲೋತ್ಪಲಶ್ಯಾಮನಾದ ದ್ವಿಭುಜನಾದ ಪೀತಾಂಬರಧಾರಿಯಾದ ಶ್ರೀರಾಮನನ್ನು ಧ್ಯಾನಿಸಬೇಕು ಮುಖದಲ್ಲಿ ಮಂದಹಾಸಮಾಡುತಲೂ, ಸುಖೋಪವಿಷ್ಟನಾಗಿಯೂ, ಪದ್ಮಪತ್ರಸಮಾನನೇತ್ರನಾಗಿಯೂ, ಕಿರೀಟ ಹಾರ ಕೇಯೂರ ಕುಂಡಲ ಕಟಕಾದಿಗಳಿಂದ ವಿರಾಜಮಾನನಾಗಿಯೂ, ಕೈಯಲ್ಲಿ ಜ್ಞಾನಮುದ್ರೆಯನ್ನು ಧರಿಸಿದವನಾಗಿಯೂ, ವೀರಾಸನ ಸಂಸ್ಥಿತನಾಗಿಯೂ, ತನ್ನ ಎಡಗೈಯಿಂದ ಶ್ರೀಸೀತಾದೇವಿಯ ಸ್ತನಾಗ್ರಸ್ಪರ್ಶವಾಗುವಂತೆ ಅವಳನ್ನು ಕುಳ್ಳಿರಿಸಿಕೊಂಡಿರುವನಾಗಿಯೂ, ವಸಿಷ್ಠವಾಮದೇವಾದಿಗಳಿಂದಲೂ ಲಕ್ಷ್ಮಣ ಭರತಾದಿಗಳಿಂದಲೂ ಸೇವಿತನಾಗಿಯೂ, ರಮ್ಯವಾದ ಅಯೋಧ್ಯಾಪುರದಲ್ಲಿ ಪಟ್ಟಾಭಿಷಿಕ್ತನಾಗಿಯೂ ಇರುವಂತೆ, ಶ್ರೀರಾಮಚಂದ್ರನನ್ನು ಧ್ಯಾನಿಸಬೇಕು ಈರೀತಿಯಾಗಿ ಧ್ಯಾನಮಾಡಿ, ನಿತ್ಯವೂ ಈ ಸಹಸ್ರನಾಮವನ್ನು ಜಪಿಸಬೇಕು ಹೀಗೆ ಭಕ್ತಿಯಿಂದ ಜಪಿಸಶಕ್ಯವನು, ಕೋಟಿ ಬ್ರಹ್ಮಹತ್ಯೆಗಳಿಂದ ಯುಕ್ತನಾಗಿದ್ದರೂ ಮುಕ್ತನಾಗುವನು, ಇದರಲ್ಲಿ ಸಂಶಯವಿಲ್ಲ ॥೪-೯॥

ಮೂ॥ ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ ।
ಲೋಕಾಭಿರಾಮಂ ಶ್ರೀರಾಮಂ ಭೂಯೋಭೂಯೋ ನಮಾಮ್ಯಹಮ್ ॥

ಸಮಸ್ತವಿಪತ್ತುಗಳನ್ನೂ ಪರಿಹರಿಸತಕ್ಕವನಾಗಿಯೂ, ಸಕಲವಿಧಸಂಪತ್ತುಗಳನ್ನೂ ಕೊಡತಕ್ಕವನಾಗಿಯೂ, ಸರ್ವಲೋಕಮನೋಹರನಾಗಿಯೂ ಇರುವ ಶ್ರೀರಾಮನನ್ನು, ನಾನು ಪುನಃ ಪುನಃ ನಮಸ್ಕರಿಸುತ್ತೇನು ॥೧೦॥

ಓಮ್ ರಾಮಃ ಶ್ರೀಮಾನ್ ಮಹಾವಿಷ್ಣುಃ ಜಿಷ್ಣುರ್ದೇವಹಿತಾವಹಃ ।
ತತ್ತ್ವಾತ್ಮಾ ತಾರಕಬ್ರಹ್ಮ ಶಾಶ್ವತಃ ಸರ್ವಸಿದ್ಧಿದಃ ॥೧೧॥

ಶ್ರೀಪರಮೇಶ್ವರನ ನಾಮಸ್ಮೃತಿಯೇ ಸರ್ವರಿಗೂ ಸರ್ವದಾ ಉತ್ತಾರಕವೆಂಬುದನ್ನು, ಸರ್ವರೂ ನಿರ್ವಿವಾದವಾಗಿ ಒಪ್ಪುವರು ಶ್ರೀಶಂಕರಭಗವತ್ಪಾದಾಚಾರ್ಯ ಸ್ವಾಮಿಗಳವರೂ ಕೂಡ, ಶ್ರೀ ವಿಷ್ಣುಸಹಸ್ರನಾಮ ಭಾಷ್ಯದ ಪ್ರಾರಂಭದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ವಿಶದಪಡಿಸಿರುವರು ತತ್ರಾಪಿ, ಈ ಕಲಿಯುಗದಲ್ಲಿ ' ಕಲೌ ಸಂಕೀರ್ತ್ಯ ಕೇಶವಂ ' ಇತ್ಯಾದಿವಚನಾನುಸಾರವಾಗಿ ಭಗವನ್ನಾಮಸ್ಮೃತಿಯೊಂದು ಹೊರತು, ಮತ್ತಾವ ಶ್ರೇಯಸ್ಸಾಧನವೂ ಸುಲಭವಾಗಲಾರದು ಅದರಲ್ಲಿಯೂ ' ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ । ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ ॥ ' ಎಂದು ಶ್ರೀಪರಮೇಶ್ವರನೇ ರಾಮನಾಮ ಮಹಿಮೆಯನ್ನು ವಿಶೇಷವಾಗಿ ಹೇಳಿರುವನು ಇಂತಹ ಶ್ರೀರಾಮನ ನಾಮಸಹಸ್ರವನ್ನು ಪಾರಾಯಣ ಮಾಡುವುದರ ಪ್ರಾಶಸ್ತ್ಯವನ್ನು ಪ್ರತ್ಯೇಕವಾಗಿ ಹೇಳುವುದನಾವಶ್ಯಕವು ಈ ರಾಮಸಹಸ್ರನಾಮದ ಸಂಖ್ಯಾನಿರ್ಪಾಹವು ಬಹುಕಷ್ಟವಾಗಿ ಪರಿಣಮಿಸಿತು ಆಚ್ಚಾಗಿರುವ ಕೆಲವು ಪುಸ್ತಕಗಳನ್ನು ತರಿಸಿ ನೋಡಲಾಗಿ, ಕೆಲವು ಪುಸ್ತಕಗಳಲ್ಲಿ ಸಹಸ್ರಸಂಖ್ಯೆಗಿಂತ ವಿಶೇಷ ಅಧಿಕವಾಗಿಯೂ, ಕೆಲವು ಪುಸ್ತಕಗಳಲ್ಲಿ ನ್ಯೂನವಾಗಿಯೂ, ನಾಮಗಳು ಕಂಡುಬಂದುವು, ಮತ್ತೆ ಕೆಲವು ಪುಸ್ತಕಗಳಲ್ಲಿ ಯಾದರೋ, ಪ್ರಕ್ಷಿಪ್ತವಾವ ಹೆಚ್ಚು ಶ್ಲೋಕಗಳನ್ನಿಟ್ಟುಕೊಂಡು ಎರಡು ಮೂರು ನಾಮಗಳನ್ನು ಒಟ್ಟಾಗಿ ಸೇರಿಸಿ ಒಂದೊಂದು ನಾಮದಂತೆ ಲೆಕ್ಕಮಾಡಿ ಸಂಖ್ಯಾನಿರ್ಪಾಹ ಮಾಡಲ್ಪಟ್ಟಿರುವಂತೆ ಕಂಡುಬಂದಿತು ' ಆನಂದ ರಾಮಾಯಣ ' ವೆಂಬ ಗ್ರಂಥದಲ್ಲಿರುವ ರಾಮಸಹಸ್ರನಾಮಕ್ಕೂ ಇದಕ್ಕೂ ಬಹುಮಟ್ಟಿಗೆ ವ್ಯತ್ಯಾಸವೇ ಕಂಡುಬರುವುದು. ಸಾಮಾನ್ಯವಾಗಿ ಸರ್ವಪುಸ್ತಕಗಳಲ್ಲಿಯೂ ' ರಾಜೀವಲೋಚನಃ ಶ್ರೀಮಾನ್ ' ಎಂಬ ಶ್ಲೋಕದಿಂದಲೇ ಪ್ರಾರಂಭವಾಗಿರುವುದು ಆದರೆ, ನಮಗೆ ಸಿಕ್ಕಿರುವ ಪ್ರಾಚೀನಪುಸ್ತಕಗಳಲ್ಲೆಲ್ಲ ' ರಾಮಃ ಶ್ರೀಮಾನ್ ಮಹಾವಿಷ್ಣುಃ ' ಎಂಬ ಶ್ಲೋಕದಿಂದಲೇ ಪ್ರಾರಂಭವಾಗಿರುವುದು ವಿಚಾರಮಾಡತಕ್ಕವರಿಗೆ ಈ ಪಾಠವೇ ಯುಕ್ತವಾಗಿ ಕಾಣುವುದು. ರಾಮಸಹಸ್ರನಾಮದಲ್ಲಿ ' ರಾಮ ' ಎಂಬ ನಾಮವು ಪ್ರಾರಂಭದಲ್ಲಿರಬೇಕಾದುದೆಂದು ಸರ್ವರೂ ಒಪ್ಪಲೇಬೇಕು. ವಿಷ್ಣುಸಹಸ್ರನಾಮದಲ್ಲಿಯೂ ಕೂಡ ' ವಿಶ್ವಂ ' ಎಂಬ ನಾಮವು ಪ್ರಾರಂಭದಲ್ಲಿರುವ ವಿಷಯದಲ್ಲಿ ಭಾಷ್ಯಕಾರರು ವಿಶೇಷ ಚರ್ಚೆಮಾಡಿ ನಿರ್ಪಾಹಮಾಡಿರುವರು ನಮ್ಮಲ್ಲಿರುವ ಅತಿಪ್ರಾಚೀನವಾದ ನಾಲ್ಕಯ್ದು ಆದರ್ಶ ಪುಸ್ತಕಗಳಲ್ಲಿಯಾದರೋ ' ರಾಮಃ ಶ್ರೀಮಾನ್ ಮಹಾವಿಷ್ಣುಃ ' ಎಂಬ ಶ್ಲೋಕದಿಂದಲೇ ಪ್ರಾರಂಭವಾಗಿರುವುದಲ್ಲದೆ, ಈಗ ನಾವು ಮುದ್ರಿಸಿರುವಷ್ಟು ಶ್ಲೋಕಗಳು ಮಾತ್ರವೇ ಏಕರೀತಿಯಾಗಿರುವುವು. ನಮ್ಮ ಸ್ವಕಪೋಲಕಲ್ಪಿತವಾದುದನ್ನು ಸೇರಿಸುವುದಕ್ಕಾಗಲಿ ಇದ್ದುದನ್ನು ಬಿಟ್ಟುಬಿಡುವುದಕ್ಕಾಗಲಿ ನಮ್ಮ ಮನಸ್ಸು ಸುತರಾಂ ಒಪ್ಪದಿರುವಕಾರಣ, ಪ್ರಾಚೀನಪುಸ್ತಕಗಳಲ್ಲಿ ಇದ್ದಷ್ಟು ಶ್ಲೋಕಗಳನ್ನೇ ಇಟ್ಟುಕೊಂಡು ಅವುಗಳಲ್ಲಿಯೇ ಸಹಸ್ರಸಂಖ್ಯಾನಿರ್ಪಾಹವನ್ನು ಮಾಡಬೇಕಾಯ್ತು ಇಷ್ಟು ಕಷ್ಟಪಟ್ಟರೂ, ಕೆಲವು ನಾಮಗಳು ಅನೇಕಾವೃತ್ತಿ ಬಂದಿರುವುವು. ಅವುಗಳಿಗೆಲ್ಲ ಸಾಧ್ಯವಾದ ಮಟ್ಟಿಗೂ ಅರ್ಥದಲ್ಲಿ ಭೇದವನ್ನು ವಿವರಿಸಿ ಪೌನರುಕ್ತ್ಯವು ಪರಿಹರಿಸಲ್ಪಟ್ಟಿರುವುದು ಆದರೂ, ಕೆಲವುಕಡೆ ಅಪರಿಹಾರ್ಯವಾಗಿ ಸಂಭವಿಸಿಬಿಟ್ಟಿರಬಹುದು ಶ್ರೀವಿಷ್ಣುಸಹಸ್ರನಾಮದಲ್ಲಿಯೂ ಕೂಡ ಇಂತಹ ಅನುಪಪತ್ತಿ ಇದ್ದೇಇರುವುದು. ಅಲ್ಲಿಯೂ ಶ್ರೀಶಂಕರಾಚಾರ್ಯರೇ ಮೊದಲಾದ ಭಾಷ್ಯಕಾರರು ವಿಶೇಷಶ್ಲೇಷಪಟ್ಟು ಅರ್ಥಭೇದವನ್ನು ಕಲ್ಪಿಸಿರುವರು ಆದರೂ, ಅಲ್ಲಿಯೂ ಕೆಲವುಕಡೆ ಪೌನರುಕ್ತ್ಯವು ಅಪರಿಹಾರ್ಯವಾಗಿಯೇ ಇರುವಂತೆ ತೋರುವುದು. ಆದರೆ, ಶಬ್ದಭೇದವಿರುವಕಡೆ ಅರ್ಥದಲ್ಲಿ ಏಕರೂಪತ್ವವು ತೋರಿಬಂದರೂ, ಶಬ್ದಭೇದವಿರುವಕಾರಣ ಅದು ಪುನರುಕ್ತಿಯಲ್ಲವೆಂದು ಆಚಾರ್ಯಸ್ವಾಮಿಗಳೂ ಅಭಿಪ್ರಾಯಪಟ್ಟಿರುವರು. ಸಹೃದಯರಾದ ಆಸ್ತಿಕರು ' ಸಾಂಕೇತ್ಯಂ ಪಾರಿಹಾಸ್ಯಂ ಚ ಸ್ತೋಭಂ ಹೇಳನಮೇವ ವಾ । ವೈಶುಣ್ಯನಾಮಸ್ಮರಣಂ ಸರ್ವಾಘೌಘಹರಂ ವಿದುಃ ॥ ' ಎಂಬ ಅಭಿಯುಕ್ತೋಕ್ತಿಯಂತೆ ಹೇಗಾದರೂ ಇದರ ಪಠನೆಯು ಶ್ರೇಯಸ್ಸಾಧನವೆಂದು ಪರಾಮರ್ಶಿಸಿ ಪುಣ್ಯಭಾಗಿಗಳಾಗುವರೆಂಬುದರಲ್ಲಿ ಸಂಶಯಲೇಶವೂ ಇಲ್ಲ

ಓಮ್ ೧. ರಾಮಃ (1) ಸಮಸ್ತಯೋಗಿಗಳೂ ನಿತ್ಯಾನಂದಚಿತ್ಸ್ವರೂಪನಾಗಿರುವ ಇವನಲ್ಲಿ ರಮಿಸುವರಾದಕಾರಣ, * ಯೋಗಿಗಳಿಗೆ ಆನಂದಾಶ್ರಯನು ೨ ಶ್ರೀಮಾ್. (2) ಜ್ಞಾನೈಶ್ವರ್ಯಸಂಪನ್ನನು ೩ ಮಹಾವಿಷ್ಣುಃ (3) ಸಮಸ್ತಭೂತಗಳಲ್ಲಿಯೂ † ಅನುಪ್ರವೇಶಮಾಡಿರತಕ್ಕ ಮಹಾನುಭಾವನು ೪ ಜಿಷ್ಣುಃ (4) ಸರ್ವದಾ ‡ ಜಯಶೀಲನು ೫ ದೇವ ಹಿತಾವಹಃ (5) ದೇವತೆಗಳಿಗೆ ಹಿತವನ್ನುಂಟುಮಾಡತಕ್ಕವನು ೬ ತತ್ತ್ವಾತ್ಮಾ (6) ಪರ ಮಾರ್ಥಸತ್ಯಸ್ವರೂಪನು ಅಥವಾ, ಸರ್ವಸಾರಭೂತನು ಅಥವಾ ಸರ್ವರಹಸ್ಯಭೂತನು ಅಥವಾ, (7) ಪೃಥಿವ್ಯಾದಿ § ತತ್ವಸ್ವರೂಪನು ಅಥವಾ, (8) ಪೃಥಿವ್ಯಾದಿಗಳಿಗೆಲ್ಲ ಆತ್ಮಭೂತನಾದವನು ೭ ತಾರಕಬ್ರಹ್ಮ (9) ಸಮಸ್ತಲೋಕಗಳನ್ನೂ ಸಂಸಾರಸಮುದ್ರದಿಂದ ದಾಟಿಸತಕ್ಕ ** ಪರಬ್ರಹ್ಮರೂಪನು ೮ ಶಾಶ್ವತಃ (10) ಭೂತ ಭವಿಷ್ಯತ್ ವರ್ತಮಾನರೂಪವಾದ ಕಾಲತ್ರಯದಲ್ಲಿಯೂ ಇರತಕ್ಕವನು ೯ ಸರ್ವಸಿದ್ಧಿದಃ (11) ಅಣಿಮಾದಿ ಸಕಲವಿಧ ಸಿದ್ಧಿಗಳನ್ನೂ ಕೊಡತಕ್ಕವನು ಅಥವಾ, ಕರ್ಮವನ್ನು ಮಾಡಿದವರಿಗ ಅವರವರ ಯೋಗ್ಯತಾನುಸಾರವಾಗಿ ಫಲವನ್ನು ಕೊಡತಕ್ಕವನು ಅಥವಾ, (12) ಸಕಲರಿಗೂ ಮೋಕ್ಷಸಿದ್ಧಿಯನ್ನು ಕೊಡತಕ್ಕವನು ||

(1) ರಮಂತೇ ಅಸ್ಮಿನ್ನಿತಿ ರಾಮಃ (2) ಶ್ರೀಃ ಅಸ್ಯ ಅಸ್ತಿ ಇತಿ ಶ್ರೀಮಾ್ (3) ವಿಶತಿ ಇತಿ ವಿಷ್ಣುಃ (4) ಜಯತಿ ಇತಿ ಜಿಷ್ಣುಃ ಜಿ ಜಯೇ, ಅಭಿಭವೇ ವಾ (5) ಅವಹತಿ ಇತಿ ಅವಹಃ, ಹಿತಸ್ಯ ಅವಹಃ ಹಿತಾವಹಃ, ದೇವಾನಾಂ ಹಿತಾವಹಃ ದೇವಹಿತಾವಹಃ (6) ತತ್ತ್ವಂ ಆತ್ಮಾ ಯಸ್ಯ ಸಃ ತತ್ತ್ವಾತ್ಮಾ (7) ತತ್ತ್ವಾನಿ ಆತ್ಮಾ ಯಸ್ಯ ಸಃ ತತ್ತ್ವಾತ್ಮಾ (8) ತತ್ತ್ವಾನಾಂ ಆತ್ಮಾ ತತ್ತ್ವಾತ್ಮಾ (9) ತಾರಯತಿ ಇತಿ ತಾರಕಮ್ ತಾರಕಂ ಚ ತತ್ ಬ್ರಹ್ಮ ಚ ತಾರಕಬ್ರಹ್ಮ (10) ಶಶ್ವತ್ ಭವಃ ಶಾಶ್ವತಃ (11) ಸರ್ವಾಶ್ಚ ತಾಃ ಸಿದ್ಧಯಶ್ಚ ಸರ್ವಸಿದ್ಧಯಃ, ಸರ್ವಸಿದ್ಧೀಃ ದದಾತಿ ಇತಿ ಸರ್ವಸಿದ್ಧಿದಃ (12) ಸಿದ್ಧೀಃ ದದಾತಿ ಇತಿ ಸಿದ್ಧಿದಃ, ಸರ್ವೇಷಾಂ ಸಿದ್ಧಿದಃ ಸರ್ವಸಿದ್ಧಿದಃ

* 'ರಮಂತೇ ಯೋಗಿನೋನಂತೇ ನಿತ್ಯಾನಂತೇ ಚಿದಾತ್ಮನಿ ' ಇತಿ ರಾಮಪದೇನಾಸೌ ಪರಂ ಬ್ರಹ್ಮಾಭಿಧೀಯತೇ॥" (ರಾಮತಾಪಿನ್ಯುಪನಿಷತ್ತು)

† ವಿವೇಶ ಭೂತಾನಿ ಚರಾಚರಾಣಿ, ತದೇವಾನುಪ್ರಾವಿಶತ್ (ತೈತ್ತಿರೀಯೋಪನಿಷತ್ತು) ಯಸ್ಮಾದ್ವಿಷ್ಟವಿದಂ ಸರ್ವಂ ತಸ್ಯ ಶಕ್ತ್ಯಾ ಮಹಾತ್ಮನಃ | ತಸ್ಮಾದ್ವಿಷ್ಣುರಿತಿ ಖ್ಯಾತೋ ವಿಶೇರ್ಧಾತೋಃ ಪ್ರವೇಶನಾತ್॥ (ವಿಷ್ಣುಪುರಾಣ)

‡ ಎಲ್ಲರಿಗಿಂತಲೂ ಮೇಲಾಗಿ ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರತಕ್ಕವನೆಂದು ಭಾವವು

§ ಪೃಥಿವಿ ಅಪ್ಪು ತೇಜಸ್ಸು ವಾಯು ಆಕಾಶಗಳೆಂಬ ಅಯ್ದು ಮಹಾಭೂತಗಳೂ, ಪ್ರಾಣ ಅಪಾನ ವ್ಯಾನ ಉದಾನ ಸಮಾನಗಳೆಂಬ ಅಯ್ದು ಪ್ರಾಣವಾಯುಗಳೂ, ವಾಕ್ ಪಾಣಿ ಪಾದ ಪಾಯು ಉಪಸ್ಥಗಳೆಂಬ ಅಯ್ದು ಕರ್ಮೇಂದ್ರಿಯಗಳೂ, ತ್ವಕ್ ಚಕ್ಷುಸ್ ಶ್ರೋತ್ರ ಜಿಹ್ವೆ ಘ್ರಾಣಗಳೆಂಬ ಅಯ್ದು ಜ್ಞಾನೇಂದ್ರಿಯಗಳೂ, ಮನಸ್ಸು ಬುದ್ಧಿ ಚಿತ್ತ ಅಹಂಕಾರಗಳೆಂಬ ನಾಲ್ಕು ಅಂತಃಕರಣಭೇದಗಳೂ ಸೇರಿ, ಇಪ್ಪತ್ತನಾಲ್ಕು ತತ್ವಗಳೆಂದು ಸಾಂಖ್ಯಶಾಸ್ತ್ರಮತವು ಇವುಗಳ ಜತೆಗೆ, ಮಹತ್ತತ್ವ ಕಾಲ ಪ್ರಧಾನ ಮಾಯೆ ಅವಿದ್ಯೆ ಜೀವಗಳೆಂಬ ಆರು ತತ್ವಗಳನ್ನು ಸೇರಿಸಿ ಮುವ್ವತ್ತು ತತ್ವಗಳೆಂದು ಪೌರಾಣಿಕಮತವು. ಹೀಗೆಯೇ, ಕೆಲವರು ಪಂಚವಿಂಶತಿ ತತ್ವವೆಂದೂ, ಕೆಲವರು ಷಡ್ವಿಂಶತಿ ತತ್ವವೆಂದೂ, ಕೆಲವರು ಸಪ್ತತ್ರಿಂಶತ್ ತತ್ವವೆಂದೂ, ಅನೇಕವಿಧವಾಗಿ ಸಿದ್ಧಾಂತಮಾಡಿಕೊಂಡಿರುವರು

** 'ಷಡಕ್ಷರಂ ಮಹಾಮಂತ್ರಂ ತಾರಕಬ್ರಹ್ಮ ಕೀರ್ತಿತಮ್ | ಯೇ ಭಜಂತಿ ಚ ಭಕ್ತ್ಯಾ ಮಾಂ ತೇಷಾಂ ಮುಕ್ತಿರ್ನ ಸಂಶಯಃ ||' ಶ್ರೀರಾಮಷಡಕ್ಷರೀಮಂತ್ರವು ತಾರಕಬ್ರಹ್ಮವೆಂದು ಹೇಳಲ್ಪಡುವುದು ಈ ಮಂತ್ರ

ಪುರಶ್ಚರಣಮಾಡಿ ಯಾರು ನನ್ನನ್ನು ಭಕ್ತಿಯಿಂದ ಭಜಿಸುವರೋ, ಅವರಿಗೆ ಮುಕ್ತಿಯು ಲಭಿಸುವುದು, ಇದರಲ್ಲಿ ಸಂಶಯವಿಲ್ಲ (ಪದ್ಮಪುರಾಣ)

ಮೂ॥ ರಾಜೀವಲೋಚನಃ ಶ್ರೀಮಾ೯ ಶ್ರೀರಾಮೋ ರಘುಪುಙ್ಗವಃ ।
ರಾಮಭದ್ರಃ ಸದಾಚಾರೋ ರಾಜೇನ್ದ್ರೋ ಜಾನಕೀಪತಿಃ ॥೧೨॥

೧೦ ರಾಜೀವಲೋಚನಃ (1)ತಾವರೆಯೆಲೆಗಳಂತೆ ಕಣ್ಣುಗಳುಳ್ಳವನು ೧೧ ಶ್ರೀಮಾ೯ (2)ಹೃದಯದಲ್ಲಿ ಸರ್ವದಾ ಲಕ್ಷ್ಮಿಯು ವಾಸವಾಗಿರತಕ್ಕವನು ೧೨ ಶ್ರೀರಾಮಃ (3)ಲಕ್ಷ್ಮೀ ದೇವಿಯನ್ನು ಆನಂದಪಡಿಸತಕ್ಕವನು ಅಥವಾ, (4) ಶ್ರೀಯುಕ್ತನಾದ * ರಾಮನು ೧೩. ರಘುಪುಙ್ಗವಃ (5) ರಘುವಂಶೋತ್ಪನ್ನರಲ್ಲೆಲ್ಲ ಶ್ರೇಷ್ಠನಾದವನು ೧೪ ರಾಮಭದ್ರಃ (6) ಪ್ರಪಂಚಕ್ಕೆಲ್ಲ ಮಂಗಳಸ್ವರೂಪನಾದ (ಅಥವಾ ಮಂಗಳಪ್ರದನಾದ) † ರಾಮನು ೧೫ ಸದಾಚಾರಃ (7) ಸರ್ವೋತ್ತಮವಾದ ‡ ಆಚರಣೆಯುಳ್ಳವನು ಅಥವಾ, (8) ಸರ್ವದಾ (ಕಾಲತ್ರಯದಲ್ಲಿಯೂ) ಇರತಕ್ಕವನು ಅಥವಾ, ಸರ್ವದಾ ಪ್ರಾಣಿಗಳ ಹೃದಯಗುಹೆಯಲ್ಲಿ ಗೂಢವಾಗಿ ವಾಸಮಾಡತಕ್ಕವನು ೧೬ ರಾಜೇನ್ದ್ರಃ (9) ರಾಜರಲ್ಲೆಲ್ಲ ಪ್ರಶಸ್ತನಾದವನು ೧೭ ಜಾನಕೀಪತಿಃ (10) ಜನಕರಾಜಪುತ್ರಿಯಾದ ಸೀತಾದೇವಿಯ ಪತಿಯು ॥೧೨॥

(1) ರಾಜೀವೇ ಇವ ಲೋಚನೇ ಯಸ್ಯ ಸಃ ರಾಜೀವಲೋಚನಃ (2) ಶ್ರೀಃ ಅಸ್ಮಿನ್ ಅಸ್ತಿ ಇತಿ ಶ್ರೀಮಾ೯ (3) ಶ್ರಿಯಂ ರಮಯತಿ ಇತಿ ಶ್ರೀರಾಮಃ (4) ಶ್ರೀಯುಕ್ತಶ್ಚಾಸೌ ರಾಮಶ್ಚ ಶ್ರೀರಾಮಃ (5) ಪುಮಾನ್ ಚಾಸೌ ಗೌಶ್ಚ ಪುಂಗವಃ, ರಘೂಣಾಂ ಪುಙ್ಗವಃ ರಘುಪುಂಗವಃ (6) ಭದ್ರಶ್ಚಾಸೌ ರಾಮಶ್ಚ ರಾಮಭದ್ರಃ (7) ಸನ್ ಆಚಾರೋ ಯಸ್ಯ ಸಃ (8) ಸದಾ ಚರತಿ ಇತಿ ಸದಾಚಾರಃ (9) ರಾಜ್ಞಾಂ ಇನ್ದ್ರಃ (10) ಜನಕಸ್ಯ ಅಪತ್ಯಂ ಸ್ತ್ರೀ ಜಾನಕೀ, ಜಾನಕ್ಯಾಃ ಪತಿಃ

* 'ತ್ರ್ಯಕ್ಷರಂ ತಾರಕಂ ಬ್ರಹ್ಮ ಶ್ರೀರಾಮೇತಿ ಜಪನ್ತಿ ಯೇ । ದರ್ಮಾರ್ಥಕಾಮಮೋಕ್ಷಾಣಾಂ ಸಿದ್ಧಿಸ್ತೇಷು ನ ಸಂಶಯಃ ॥' ಯಾರು 'ಶ್ರೀರಾಮ' ಎಂಬ ಅಕ್ಷರತ್ರಯಾತ್ಮಕವಾದ ತಾರಕಬ್ರಹ್ಮ ಮಂತ್ರವನ್ನು ಜಪಿಸುವರೋ, ಅವರಿಗೆ ದರ್ಮ ಅರ್ಥ ಕಾಮ ಮೋಕ್ಷಗಳೆಲ್ಲವೂ ಸಿದ್ಧಿಸುವುವು, ಇದರಲ್ಲಿ ಸಂಶಯವಿಲ್ಲ

† 'ಷ್ಟ್ಯಕ್ಷರಶ್ಚನ್ದ್ರಭದ್ರಾಸ್ತ್ರೋ ದ್ವಿವಿಧಶ್ಚತುರಕ್ಷರಃ । ಏವಂ ಲಬ್ಧ್ವಾ ಜಯಾರ್ಧೀ ತು ವರ್ಣಲಕ್ಷಂ ಜಪೇನ್ಮನುಮ್ ॥' ರಾಮ ಎಂಬ ಅಕ್ಷರದ್ಯಯಾತ್ಮಕವಾದ ಶಬ್ದವು, ಕೊನೆಯಲ್ಲಿ ಚಂದ್ರ ಶಬ್ದವನ್ನಾಗಲಿ ಭದ್ರ ಶಬ್ದವನ್ನಾಗಲಿ ಸೇರಿಸಿದರೆ, ರಾಮಚಂದ್ರ ಎಂಬುದಾಗಿಯೂ ರಾಮಭದ್ರ ಎಂಬುದಾಗಿಯೂ ಅಕ್ಷರ ಚತುಷ್ಟಯಾತ್ಮಕವಾದ ಎರಡು ಮಂತ್ರವಾಗುವುದು ಜಯಾಪೇಕ್ಷಿಯಾದವನು ಈ ಮಂತ್ರವನ್ನು ಗುರುಮುಖದಿಂದ ಉಪದೇಶ ಪಡೆದು ಅಕ್ಷರಲಕ್ಷದಂತೆ ಜಪಿಸಬೇಕು (ರಾಮರಹಸ್ಯೋಪನಿಷತ್ತು)

‡ ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ । ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥ ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ । ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ ಲೋಕದಲ್ಲಿ ಶ್ರೇಷ್ಠನಾದವನು ಯಾವಯಾವ ಕೆಲಸವನ್ನು ಮಾಡುವನೋ, ಇತರರೂ ಅದನ್ನೇ ಆಚರಿಸುವರು, ಅವನು ಯಾವುದನ್ನು ಪ್ರಮಾಣವನ್ನಾಗಿ ಮಾಡಿಕೊಳ್ಳುವನೋ, ಲೋಕವೆಲ್ಲವೂ ಅದನ್ನೇ ಅನುಸರಿಸುವುದು॥ ಅಯ್ಯಾ ! ಅರ್ಜುನ ! ನನಗೆ ಈ ಮೂರುಲೋಕದೊಳಗಾಗಿ ಮಾಡಬೇಕಾದ ಕೆಲಸವಾವುದೂ ಇಲ್ಲ, ಹೊಂದಲ್ಪಡಬೇಕಾದುದಾವುದೂ ಹೊಂದಲ್ಪಡದೆಯೂ ಇಲ್ಲ ಆದರೂ, ನನ್ನ ನಡತೆಯನ್ನು ನೋಡಿ ಜನರೆಲ್ಲರೂ ಸನ್ಮಾರ್ಗಗಾಮಿಗಳಾಗಿರಲೆಂಬ ಅಭಿಪ್ರಾಯದಿಂದ, ನಾನು ನಿರಂತರವೂ ಸತ್ಕರ್ಮಾಚರಣೆಯಲ್ಲಿಯೇ ಇರುವೆನು. ಹೀಗೆಂದು ಶ್ರೀಗೀತೆ

ಯಲ್ಲಿ ಸ್ವಾಮಿಯು ತಾನೇ ಸಾಕ್ಷಾತ್ತಾಗಿ ಆಪತ್ತಿಗೊಟ್ಟರುವಂತೆ, ಲೋಕಸಂಗ್ರಹಾರ್ಥವಾಗಿ ಸಕಲಸತ್ಕರ್ಮಗಳನ್ನೂ ಆಚರಿಸಕ್ಕವನೆಂದು ಭಾವವು

ಮೂ॥ ಅಗ್ರಗಣ್ಯೋ ವರೇಣ್ಯಶ್ಚ ವರದಃ ಪರಮೇಶ್ವರಃ ।
ಜನಾರ್ದನೋ ಜಿತಾಮಿತ್ರಃ ಪರಾರ್ಥೈಕಪ್ರಯೋಜನಃ ॥೧೩॥

೧೮ ಅಗ್ರಗಣ್ಯಃ (1) ಸಮಸ್ತರಲ್ಲಿಯೂ ಮುಂದೆ ಗಣಿಸಲ್ಪಡಬೇಕಾದವನು ೧೯. ವರೇಣ್ಯಃ (2) ಮೋಕ್ಷಾರ್ಥಿಗಳಿಂದ ವರಿಸಲ್ಪಡತಕ್ಕವನು ೨೦ ವರದಃ. (3) ಭಕ್ತರಿಗೆ ಇಷ್ಟವಾದ ವರಗಳನ್ನು ಕೊಡತಕ್ಕವನು ಅಥವಾ, ಶ್ರೇಷ್ಠವಾದ ಮೋಕ್ಷವನ್ನು ಕೊಡತಕ್ಕವನು ಅಥವಾ, ಯಜ್ಞಯಜಮಾನರೂಪನಾಗಿ ಋತ್ವಿಕ್ಕರುಗಳಿಗೆ * ದಕ್ಷಿಣೆಯನ್ನು ಕೊಡತಕ್ಕವನು. ೨೧ ಪರಮೇಶ್ವರಃ (4) ಸಮಸ್ತಲೋಕಕ್ಕೂ ಮುಖ್ಯನಾದ ಸ್ವಾಮಿಯು ೨೨ ಜನಾರ್ದನಃ (5) ಸಮುದ್ರದಲ್ಲಿರುವ ಜನನಾಮಕರಾದ ರಾಕ್ಷಸರನ್ನು ಹಿಂಸಿಸತಕ್ಕವನು ಅಥವಾ, ದುರ್ಜನರನ್ನು ಹಿಂಸಿಸತಕ್ಕವನು ಅಥವಾ, ಇವರನ್ನು ನರಕಾದಿಗಳಿಗೆ ಹೊಂದಿಸತಕ್ಕವನು ಅಥವಾ, ಸಜ್ಜನರನ್ನು ಸ್ವರ್ಗಾದ್ಯುತ್ತಮಲೋಕಗಳಿಗೆ ಹೊಂದಿಸತಕ್ಕವನು ಅಥವಾ, ಪ್ರಳಯಕಾಲದಲ್ಲಿ ಜನರನ್ನೆಲ್ಲ ಲಯಪಡಿಸತಕ್ಕವನು ಅಥವಾ, (6) ಜನನ(ಜನ್ಮ)ವನ್ನು ಹಿಂಸಿಸತಕ್ಕವನು. (ಜನ್ಮಭಯಶೂನ್ಯನು) ೨೩ ಜಿತಾಮಿತ್ರಃ (7) ಜಯಿಸಲ್ಪಟ್ಟ-ಕಾಮ ಕ್ರೋಧ ಮುಂತಾದ ೨ಭ್ಯಂತರ ಶತ್ರುಗಳೂ-ರಾವಣ ಕುಂಭಕರ್ಣ ಮೊದಲಾದ ಬಾಹ್ಯಶತ್ರುಗಳೂ ಉಳ್ಳವನು. ೨೪ ಪರಾರ್ಥೈಕಪ್ರಯೋಜನಃ (8) ಪರರ ಕಾರ್ಯವೇ † ಮುಖ್ಯವಾದ ಪ್ರಯೋಜನವಾಗಿ ಉಳ್ಳವನು. ಅಥವಾ, (9) ಪರಮಪುರುಷಾರ್ಥವೇ ‡ ಮುಖ್ಯವಾದ ಪ್ರಯೋಜನವಾಗಿ ಉಳ್ಳವನು ॥೧೩॥

(1) ಅಗ್ರೇ ಗಣ್ಯಃ (2) ವ್ರಿಯತೇ ಇತಿ ವರೇಣ್ಯಃ (3) ವರಂ ದದಾತಿ ಇತಿ ವರದಃ (4) ಪರಮಶ್ಚಾಸೌ ಈಶ್ವರಶ್ಚ (5) ಜನಾನ್ ಅರ್ದಯತಿ ಇತಿ ಜನಾರ್ದನಃ ಅರ್ದ ಹಿಂಸಾಯಾಮ್ ಅರ್ದ ಗತೌ ಯಾಚನೇ ಚ (6) ಜನಂ ಅರ್ದಯತಿ ಇತಿ ಜನಾರ್ದನಃ ಜನಿ॰ ಪ್ರಾದುರ್ಭಾವೇ ಛಷ್ (ಜನನಮ್) (7) ಜಿತಾಃ ಅಮಿತ್ರಾಃ ಯೇನ ಸಃ (8) ಪರೇಷಾಂ ಅರ್ಥಃ ಪರಾರ್ಥಃ, ಪರಾರ್ಥಃ ಏಕಪ್ರಯೋಜನಂ ಯಸ್ಯ ಸಃ (9) ಪರಶ್ಚಾಸೌ ಅರ್ಥಶ್ಚ ಪರಾರ್ಥಃ, ಪರಾರ್ಥಃ ಏಕಪ್ರಯೋಜನಂ ಯಸ್ಯ ಸಃ

* ಕರ್ಮಕಾಲದಲ್ಲಿ ಕೊಡುವ ದಕ್ಷಿಣೆಗೆ 'ವರ' ವೆಂದು ವ್ಯವಹಾರವುಂಟು 'ಗೌರ್ವೈ ವರಃ' ಎಂದು ಶ್ರೌತಸೂತ್ರದಲ್ಲಿಯೂ, 'ಬ್ರಹ್ಮಣೇ ವರಂ ದದಾತಿ' ಎಂದು ಗೃಹ್ಯಸೂತ್ರದಲ್ಲಿಯೂ, ಆಪಸ್ತಂಬಮಹರ್ಷಿಗಳು ಹೇಳಿರುವರು

† ತನ್ನ ಕೆಲಸಕ್ಕಿಂತ ಇತರರ ಕೆಲಸವನ್ನೇ ಮುಖ್ಯವಾಗಿ ಮಾಡತಕ್ಕವನೆಂದು ಭಾವವು.

‡ ಪರಮಪುರುಷಾರ್ಥವಾದ ಮೋಕ್ಷವೇ ಇವನ ದೆಸೆಯಿಂದ ಮುಖ್ಯವಾಗಿ ಹೊಂದಲ್ಪಡಬೇಕಾದ ಪ್ರಯೋಜನವೆಂದು ಭಾವವು.

ಮೂ॥ ವಿಶ್ವಾಮಿತ್ರಪ್ರಿಯೋ ದಾನ್ತಃ ಶತ್ರುಜೇಷ್ಟಶ್ಚ ತುರ್ತಾಪನಃ ।
ಸರ್ವಜ್ಞಃ ಸರ್ವದೇವಾದಿಃ ಶರಣ್ಯೋ ವಾಲಿಮರ್ದನಃ ॥೧೪॥

೨೫. ವಿಶ್ವಾಮಿತ್ರಪ್ರಿಯಃ. (1) ವಿಶ್ವಾಮಿತ್ರ ಮಹರ್ಷಿಗೆ ಪ್ರೀತಿಪಾತ್ರನಾದವನು ೨೬. ದಾನ್ತಃ. (2) ಇಂದ್ರಿಯಗಳನ್ನು ನಿಗ್ರಹಿಸಿರತಕ್ಕವನು. ಅಥವಾ, ನರನಾರಾಯಣಾವ

ತಾರದಲ್ಲಿಯೂ ಶ್ರೀರಾಮಾವತಾರದ ಅರಣ್ಯವಾಸಕಾಲದಲ್ಲಿಯೂ ತಪಃಕ್ಲೇಶಗಳನ್ನು ಸಹಿಸಿದವನು ೨೭ ಶತ್ರುಜಿತ್. (3) ದೇವತೆಗಳ ಶತ್ರುಗಳನ್ನು ಗೆಲ್ಲುತಕ್ಕವನು ೨೮ ಶತ್ರುತಾಪನಃ. (4) ಭಕ್ತರ ಶತ್ರುಗಳನ್ನು ಸಂತಾಪಪಡಿಸತಕ್ಕವನು. ೨೯ ಸರ್ವಜ್ಞಃ (5) ಸರ್ವಸ್ವರೂಪನೂ ಸರ್ವಜ್ಞನೂ ಆದವನು. ೩೦ ಸರ್ವ * ದೇವಾದಿ (6) ಸಮಸ್ತದೇವತೆಗಳಿಗೂ ಆದಿಭೂತನಾದವನು ೩೧ ಶರಣ್ಯಃ (7) ಆರ್ತರ ವ್ಯಸನವನ್ನು ತಪ್ಪಿಸಿ ಕಾಪಾಡುವುದರಲ್ಲಿ ಸಮರ್ಥನು. ೩೨ ವಾಲಿಮರ್ದನಃ (8) ವಾಲಿಯನ್ನು ಸಂಹರಿಸಿದವನು ॥೧೪॥

(1) ವಿಶ್ವಾಮಿತ್ರಸ್ಯ ಪ್ರಿಯಃ (2) ದಮು ಉಪಶಮೇ, ಕರ್ಮಣಿ ಕ್ತಪ್ರತ್ಯಯಃ (3) ಶತ್ರೂನ್ ಜಯತಿ ಇತಿ ಶತ್ರುಜಿತ್ (4) ಶತ್ರೂನ್ ತಾಪಯತಿ ಇತಿ ಶತ್ರುತಾಪನಃ (5) ಸರ್ವಶಾಸ್ತ್ರೇಷ್ವಜ್ಞಶ್ಚ (6) ಸರ್ವೇ ಚ ತೇ ದೇವಾಶ್ಚ ಸರ್ವದೇವಾಃ, ಸರ್ವದೇವಾನಾಂ ಆದಿಃ (7) ಶರಣೇ ಸಾಧುಃ, (8) ವಾಲಿನಂ ಮರ್ದಯತಿ ಇತಿ ವಾಲಿಮರ್ದನಃ,

* ಇಲ್ಲಿ 'ಸರ್ವದೇವಾದಿಃ' ಎಂದು ಪುಸ್ತಕಾಂತರದಲ್ಲಿ ಪಾಠವಿರುವುದು ಆ ಪಾಠವನ್ನಿಟ್ಟುಕೊಂಡರೆ, ಸಮಸ್ತವೇದಗಳಿಗೂ ಆದಿಭೂತವಾದ ಪ್ರಣವಸ್ವರೂಪನೆಂದು ಅರ್ಥವಾಗುವುದು

ಮೂ॥ ಜ್ಞಾನಭಾವ್ಯೋಽಪರಿಚ್ಛೇದ್ಯೋ ವಾಗ್ಮೀ ಸತ್ಯವ್ರತಃ ಶುಚಿಃ ।
ಜ್ಞಾನಗಮ್ಯೋ ದೃಢಪ್ರಜ್ಞಃ ಖರಧ್ವಂಸೀ ಪ್ರತಾಪವಾನ್ ॥೧೫॥

೩೩ ಜ್ಞಾನ*ಭಾವ್ಯಃ (1) ಜ್ಞಾನದಿಂದ ಭಾವನೆ (ಧ್ಯಾನ) ಮಾಡಲ್ಪಡಬೇಕಾದವನು ೩೪ ಅಪರಿಚ್ಛೇದ್ಯಃ (2) ದೇಶ ಕಾಲ ವಸ್ತು + ಪರಿಚ್ಛೇದಗಳಿಗೆ ವಿಷಯನಾಗದಿರತಕ್ಕವನು ೩೫ ವಾಗ್ಮೀ (3) ಸತ್ಯವಾದ ‡ ವಾಕ್ಕು ಉಳ್ಳವನು ೩೬ ಸತ್ಯವ್ರತಃ. (4) ಸತ್ಯವಾದ (ಕಪಟವಿಲ್ಲದ) ನಿಯಮವುಳ್ಳವನು ೩೭ ಶುಚಿಃ (5) ತನ್ನ ಸ್ಮರಣೆಮಾಡತಕ್ಕವರನ್ನೂ ಧ್ಯಾನಮಾಡತಕ್ಕವರನ್ನೂ ಪೂಜಿಮಾಡತಕ್ಕವರನ್ನೂ ಪರಿಶುದ್ಧಿಗೊಳಿಸತಕ್ಕವನು. ಅಥವಾ, (6) ಶತ್ರುಗಳಿಗೆ ಶೋಕಹೇತುವಾದವನು, ಅಥವಾ, (7) ಮಹಾಪ್ರಕಾಶಯುಕ್ತನಾದವನು. ೩೮ ಜ್ಞಾನಗಮ್ಯಃ (8) ಕೇವಲಕರ್ಮದಿಂದಾಗಲಿ ಕರ್ಮಸಹಿತವಾದ ಜ್ಞಾನದಿಂದಲಾಗಲಿ ತಿಳಿಯಲ್ಪಡಲಸಾಧ್ಯನಾಗಿ, ಕೇವಲ ಜ್ಞಾನದಿಂದ ಮಾತ್ರವೇ ತಿಳಿಯಲ್ಪಡಬೇಕಾದವನು. ೩೯ ದೃಢಪ್ರಜ್ಞಃ (9) ಯಾವ ಕಾರಣದಿಂದಲೂ ಚಲಿಸದೆ ಸ್ಥಿರವಾಗಿರುವ ಪ್ರಜ್ಞೆಯುಳ್ಳವನು ೪೦ ಖರಧ್ವಂಸೀ (10) ಕ್ರೂರವಾದ ಅಜ್ಞಾನವನ್ನು ಸಂಹರಿಸತಕ್ಕವನು ಅಥವಾ, ಖರನೆಂಬ ರಾಕ್ಷಸನನ್ನು ಸಂಹರಿಸಿದವನು ಅಥವಾ, (11) ಕ್ರೂರರಾದ ರಾಕ್ಷಸಾದಿಗಳನ್ನೆಲ್ಲ ಸಂಹರಿಸಿದವನು ೪೧ ಪ್ರತಾಪವಾನ್ (12) ಲೋಕೋತ್ತರವಾದ ಪ್ರತಾಪವುಳ್ಳವನು ॥೧೫॥

(1) ಜ್ಞಾನೇನ ಭಾವ್ಯಃ (2) ಪರಿಚ್ಛೇತ್ತುಂ ಅಶಕ್ಯಃ (3) ಪ್ರಶಸ್ತಾ ವಾಚಃ ಅಸ್ಯ ಸನ್ತಿ ಇತಿ ವಾಗ್ಮೀ, (4) ಸತ್ಯಂ ವ್ರತಂ ಯಸ್ಯ (5) ಶುಚಿಂ ಕರೋತಿ ಇತಿ ಶುಚಿಃ ಶತ್ಕರೋತೀತಿ ಣ್ಯನ್ತಾತ್ ಇಪ್ರತ್ಯಯಃ (6) ಶೋಚನ್ತಿ ಅನೇನ ಇತಿ ಶುಚಿಃ (7) ಶುಚ ದೀಪ್ತೌ, ಇಕ್ ಪ್ರತ್ಯಯಃ (8) ಜ್ಞಾನೇನ ಗಮ್ಯಃ (9) ದೃಢಾ ಪ್ರಜ್ಞಾ ಯಸ್ಯ ಸಃ. (10) ಖರಂ ಧ್ವಂಸಯತಿ ಇತಿ ಖರಧ್ವಂಸೀ (11) ಖರಾನ್ ಧ್ವಂಸಯತಿ ಇತಿ ಖರಧ್ವಂಸೀ (12) ಪ್ರಶಸ್ತಃ ಪ್ರತಾಪಃ ಅಸ್ಯ ಅಸ್ತಿ ಇತಿ ಪ್ರತಾಪವಾನ್

* ಇಲ್ಲಿ 'ಜ್ಞಾನಭವ್ಯಃ' ಎಂದು ಪಾಠಾಂತರವಿರುವುದು ಜ್ಞಾನಸ್ವರೂಪನೂ ಪ್ರಶಸ್ತನೂ ಆದವನೆಂದು ಅರ್ಥವು ಆಗ ಜ್ಞಾನಂ ಚಾಸೌ ಭವ್ಯಶ್ಚ ಜ್ಞಾನಭವ್ಯಃ' ಎಂದು ವಿಗ್ರಹವಾಗುವುದು

† ' ಇದು ಹೀಗಿದೆ' ಯೆಂದು ನಿಷ್ಕರ್ಷಿಸಿ ಹೇಳುವುದಕ್ಕೆ ಪರಿಚ್ಛೇದವೆಂದು ಹೆಸರು ಈ ಪರಿಚ್ಛೇದವು ದೇಶಪರಿಚ್ಛೇದವೆಂದೂ ವಸ್ತುಪರಿಚ್ಛೇದವೆಂದೂ ಕಾಲಪರಿಚ್ಛೇದವೆಂದೂ ಮೂರುಬಗೆಯಾಗಿರುವುದು ಪ್ರಾಪಂಚಿಕವಾದ ಸಮಸ್ತಪದಾರ್ಥವೂ, ಈ ತ್ರಿವಿಧಪರಿಚ್ಛೇದಕ್ಕೆ ವಿಷಯವಾಗುವುದು ಒಂದು ಮಾವಿನಮರವನ್ನು ಉದಾಹರಣೆಯಾಗಿಟ್ಟುಕೊಂಡು ನೋಡುವ ಈ ಮಾವಿನಮರವು ಒಂದುಪ್ರದೇಶದಲ್ಲಿರುವುದೆಂದೂ ಇದು ಮತ್ತೊಂದು ಪ್ರದೇಶದಲ್ಲಿಲ್ಲವೆಂದೂ ವ್ಯವಹರಿಸಲ್ಪಡುವುದು, ಇದು ದೇಶ ಪರಿಚ್ಛೇದವು ಈ ಮಾವಿನಮರವು ನಿನ್ನೆ ಇದ್ದಿತೆಂದೂ ಈ ಹೊತ್ತು ಇರುವುದೆಂದೂ ನಾಳೆ ಇರುವುದಿಲ್ಲವೆಂದೂ ವ್ಯವಹರಿಸಲ್ಪಡುವುದು, ಇದು ಕಾಲಪರಿಚ್ಛೇದವು ಇದು ಮಾವಿನಮರವಾಗಿರುವೆಂದೂ ಬೇವಿನಮರವಲ್ಲವೆಂದೂ ಬೇಲದಮರವಲ್ಲವೆಂದೂ ವ್ಯವಹರಿಸಲ್ಪಡುವುದು, ಇದು ವಸ್ತುಪರಿಚ್ಛೇದವು ಹೀಗೆಯೇ ಈ ಪರಿಚ್ಛೇದತ್ರಯವು ಪ್ರಾಪಂಚಿಕಪದಾರ್ಥಗಳೆಲ್ಲೆಲ್ಲ ಕಾಣುವುದು ಪರಬ್ರಹ್ಮನಾದರೋ, ಈ ಪ್ರದೇಶದಲ್ಲಿರುವನೆಂದೂ ಆ ಪ್ರದೇಶದಲ್ಲಿಲ್ಲವೆಂದೂ ವ್ಯವಹರಿಸಲ್ಪಡುವುದಿಲ್ಲ, ಅವನು ಸರ್ವದೇಶದಲ್ಲಿಯೂ ಇರುವನು ಆದುಕಾರಣ, ಅವನಲ್ಲಿ ದೇಶಪರಿಚ್ಛೇದವಿಲ್ಲ ಪರಮಾತ್ಮನು ನಿನ್ನೆ ಇದ್ದನೆಂದೂ ನಾಳೆ ಇರುವುದಿಲ್ಲವೆಂದೂ ಹೇಳಲಾಗುವುದಿಲ್ಲ, ಅವನು ಸರ್ವಕಾಲದಲ್ಲಿಯೂ ಇರತಕ್ಕವನು ಆದುಕಾರಣ ಅವನಲ್ಲಿ ಕಾಲಪರಿಚ್ಛೇದವಿಲ್ಲ ಆ ಪರಮಾತ್ಮನು ಇನನಾಗಿರುವನೆಂದೂ ಅವನಾಗುವುದಿಲ್ಲವೆಂದೂ ಹೇಳಲಾಗುವುದಿಲ್ಲ, ಅವನು ಸರ್ವಪದಾರ್ಥಸ್ವರೂಪನಾಗಿರುವನು ಆದುಕಾರಣ ಅವನಲ್ಲಿ ವಸ್ತುಪರಿಚ್ಛೇದವಿಲ್ಲ ಹೀಗೆ ಪರಬ್ರಹ್ಮಮೂರ್ತಿಯಾದ ರಾಮಚಂದ್ರನು ದೇಶ ಕಾಲ ವಸ್ತುಪರಿಚ್ಛೇದಗಳಿಗೆ ವಿಷಯನಾಗದಿರತಕ್ಕವನೆಂದು ತಾತ್ಪರ್ಯವು.

‡ ಸರ್ವೋತ್ತಮವಾದ ವೆಂದವಚನಗಳು ಇವನ ವೆಸೆಯಿಂದ ಉದಯಿಸಿರುವುವೆಂದು ಭಾವವು ಅಥವಾ, ಸರ್ವರಿಗೂ ಆನಂದವುಂಟಾಗುವಂತೆ ಪ್ರಶಸ್ತವಾಗಿ ಮಾತನಾಡತಕ್ಕವನೆಂದು ಭಾವವು

ಮೂ॥ ದ್ಯುತಿಮಾನಾತ್ಮವಾ॑ ವೀರೋ ಜಿತಕ್ರೋ॑ಧೋರಿಮರ್ದನಃ ।

ವಿಶ್ವರೂಪೋ ವಿಶಾಲಾಕ್ಷಃ ಪ್ರಭುಃ ಪರಿವೃಢೋ ವೃಢಃ ॥೧೬॥

೪೨ ದ್ಯುತಿಮಾ॑ (1) ಅತಿಪ್ರಶಸ್ತವಾದ ಜ್ಞಾನವೆಂಬ ಪ್ರಕಾಶವುಳ್ಳವನು ಅಥವಾ, ಪ್ರಶಸ್ತವಾದ ದೇಹಕಾಂತಿಯುಳ್ಳವನು ೪೩. ಆತ್ಮವಾ॑, (2) ಅತ್ಯುತ್ತಮವಾದ ಸ್ವಭಾವವುಳ್ಳವನು ೪೪ ವೀರಃ (3) ಪ್ರಶಸ್ತವಾದ ಗತಿ ಕಾಂತಿ ಮುಂತಾದ ಗುಣವುಳ್ಳವನು ಅಥವಾ (4) ವೀರರಸರೂಪನಾದವನು ೪೫ ಜಿತಕ್ರೋಧಃ (5) ಜಯಿಸಲ್ಪಟ್ಟ * ಕೋಪವುಳ್ಳವನು ೪೬ ಅರಿಮರ್ದನಃ. (6) ತನ್ನ ಭಕ್ತರ ಶತ್ರುಗಳನ್ನು ಮರ್ದಿಸತಕ್ಕವನು ೪೭ ವಿಶ್ವರೂಪಃ (7) ಪ್ರಪಂಚವೇ ರೂಪನಾಗಿ ಉಳ್ಳವನು ಅಥವಾ, (8) ಸಮಸ್ತವಿಧವಾದ † ರೂಪಗಳುಳ್ಳವನು ೪೮ ವಿಶಾಲಾಕ್ಷಃ (9) ವಿಶಾಲವಾದ ನೇತ್ರಗಳುಳ್ಳವನು. ಅಥವಾ, ತೇಜಸ್ಸಿನಿಂದ ವಿಸ್ತೃತವಾದ ಸೂರ್ಯಚಂದ್ರರೆಂಬ ನೇತ್ರಗಳುಳ್ಳವನು ಅಥವಾ, (10) ವಿಸ್ತೃತವಾದ ಜ್ಞಾನದೃಷ್ಟಿಯುಳ್ಳವನು ಅಥವಾ, (11) ವಿಶಾಲವಾದ ‡ ಇಂದ್ರಿಯಗಳುಳ್ಳವನು ಅಥವಾ, (12) ವಿಶಾಲವಾದ ಪ್ರಪಂಚವನ್ನು ವ್ಯಾಪಿಸಿಕೊಂಡಿರತಕ್ಕವನು ಅಥವಾ, (13) ಇದನ್ನು ಕ್ಷಯಪಡಿಸತಕ್ಕವನು ೪೯. ಪ್ರಭುಃ (14) ಯಾವುದನ್ನು ಬೇಕಾದರೂ ಮಾಡುವುದಕ್ಕೂ ಬಿಡುವುದಕ್ಕೂ ಅನ್ಯಥಾ ಮಾಡುವುದಕ್ಕೂ ಸಮರ್ಥನಾದವನು ೫೦. ಪರಿವೃಢಃ (15) ಸರ್ವಲೋಕಮಹೇಶ್ವರನು. ಅಥವಾ, (16) ಸುತ್ತಲೂ ಅಭಿವೃದ್ಧಿ (ವ್ಯಾಪ್ತಿ) ಪಡೆಯತಕ್ಕವನು.

೫೧ ದೃಢಃ. (17) ತನ್ನ ಸ್ವರೂಪ ಸಾಮರ್ಥ್ಯ ಮುಂತಾದುವುಗಳಿಂದ ಎಂದಿಗೂ ಚ್ಯುತನಾಗದಿರುವವನು. ಅಥವಾ, ಸರ್ವಲೋಕಾತಿಶಯಭೂತನಾದವನು ಅಥವಾ, ಲೋಕೋತ್ತರಶಕ್ತಿಶಾಲಿಯಾದವನು ಅಥವಾ, ತನ್ನ ಶಕ್ತುಗಳಲ್ಲಿ ಮಹಾಕರಿನನಾದವನು. ಅಥವಾ, ಮಹಾಸ್ಥೂಲ (ಸರ್ವಲೋಕವ್ಯಾಪಿ) ನಾದವನು ॥೧೬॥

(1) ಪ್ರಶಸ್ತಾ ದ್ಯುತಿಃ ಅಸ್ಯ ಅಸ್ತಿ ಇತಿ ದ್ಯುತಿಮಾನ್ (2) ಪ್ರಶಸ್ತಃ ಆತ್ಮಾ ಅಸ್ಯ ಅಸ್ತಿ ಇತಿ ಆತ್ಮವಾನ್ (3) ವೀ ಗತಿ ಪ್ರಜನ ಕಾನ್ತ್ಯಸನ ಖಾದನೇಷು (4) ವೀರ ಯತಿ ಇತಿ ವೀರಃ, ವೀರವಿಕ್ರಾನ್ತೌ. (5) ಜಿತಃ ಕ್ರೋಧಃ ಯೇನ ಸಃ (6) ಅರೀನ್ ಮರ್ದಯತಿ ಇತಿ ಅರಿಮರ್ದನಃ (7) ವಿಶ್ವಂ ರೂಪಂ ಯಸ್ಯ ಸಃ. (8) ವಿಶ್ವಾನಿ ರೂಪಾಣಿ ಯಸ್ಯ ಸಃ (9) ವಿಶಾಲೇ ಅಕ್ಷಿಣೀ ಯಸ್ಯ ಸಃ (10) ವಿಶಾಲಂ ಅಕ್ಷಿ ಯಸ್ಯ ಸಃ. (11) ವಿಶಾಲಾನಿ ಅಕ್ಷಾಣಿ ಯಸ್ಯ ಸಃ (12) ವಿಶಾಲಂ ಅಕ್ಷತಿ ಇತಿ ವಿಶಾಲಾಕ್ಷಃ. ಅಕ್ಷೂ ವ್ಯಾಪ್ತೌ (13) ವಿಶಾಲಂ ಅಕ್ಷಾಯತಿ ಇತಿ ವಿಶಾಲಾಕ್ಷಃ ಕ್ಷೈ ಕ್ಷಯೇ ಆಜಿಘ್ರ್ಯಃ (14) ಪ್ರಭವತಿ ಇತಿ ಪ್ರಭುಃ (15) ಪರಿವೃಂಹತಿ ಇತಿ ಪರಿವೃಢಃ (16) ಪರಿತಃ ವೃಂಹತಿ ಇತಿ ಪರಿವೃಢಃ. ವೃಹಿ ವೃದ್ಧೌ (17) ದೃಂಹತಿ ಇತಿ ದೃಢಃ ದೃಢಿ ವೃದ್ಧೌ

* ಕೋಪಪರವಶನಾಗಿ ಮಾಡಬಾರದ ಕೆಲಸಗಳನ್ನು ಮಾಡತಕ್ಕವನಲ್ಲವೆಂದು ಭಾವವು

† ಸ್ವೇಚ್ಛಾರೂಪವನು ತನಗೆ ಬೇಕಾದಾಗ ಬೇಕಾದ ರೂಪವನ್ನು ಧರಿಸತಕ್ಕವನೆಂದು ಭಾವವು

‡ ವಿಶಾಲವೆಂದರೆ ಸರ್ವಲೋಕಜ್ಞಾನ ಸಮರ್ಥವೆಂದು ಅರ್ಥವು

ಮೂ॥ ಈಶಃ ಖಗಧರಃ ಶ್ರೀಮಾನ್ ಕೌಸಲ್ಯೇಯೋಽನಸೂಯಕಃ ।
ವಿಪುಲಾಂಸೋ ಮಹೋರಸ್ಕಃ ಪರಮೇಷ್ಠೀ ಪರಾಯಣಮ್ ॥೧೭॥

೫೨ ಈಶಃ. (1) ಸರ್ವಭೂತನಿಯಾಮಕನು ಅಥವಾ, ಈಶ್ವರ(ಶಿವ)ಸ್ವರೂಪನು. ೫೩ ಖಗಧರಃ * (2) ಬಾಣವನ್ನು ಧರಿಸಿರತಕ್ಕವನು ಅಥವಾ, ಸೂರ್ಯನನ್ನು ನೇತ್ರವನ್ನಾಗಿ ಧರಿಸಿರತಕ್ಕವನು ಅಥವಾ, ಗರುಡನನ್ನು ಧ್ವಜದಲ್ಲಿಯೂ ವಾಹನವನ್ನಾಗಿಯೂ ಧರಿಸಿರತಕ್ಕವನು ಅಥವಾ, ಜಟಾಯುವೆಂಬ ಪಕ್ಷಿಗ ಉತ್ತಮಗತಿಯನ್ನು ಕೊಟ್ಟು ಉದ್ಧಾರಮಾಡಿದವನು ೫೪. ಶ್ರೀಮಾನ್, (3) ಲೋಕೋತ್ತರವಾದ ಕಾಂತಿಯುಳ್ಳವನು ೫೫ ಕೌಸಲ್ಯೇಯಃ (4) ಕೌಸಲ್ಯದೇವಿಯ ಪುತ್ರನಾದವನು ೫೬ ಅನಸೂಯಕಃ. (5) ಅಸೂಯಾಗುಣ†ವಿಲ್ಲದವನು ೫೭ ವಿಪುಲಾಂಸಃ (6) ವಿಶಾಲವಾದ ಹೆಗಲುಳ್ಳವನು. ೫೮ ಮಹೋರಸ್ಕಃ (7) ದೊಡ್ಡ ಎದೆಯುಳ್ಳವನು ೫೯. ಪರಮೇಷ್ಠೀ (8) ಅತ್ಯುತ್ತಮವಾದ ಯೋಗಿಗಳ ಹೃದಯಾಕಾಶದಲ್ಲಿ ವಾಸಮಾಡತಕ್ಕವನು ಅಥವಾ, ಉತ್ಕೃಷ್ಟವಾದ ಸ್ಥಾನದಲ್ಲಿರತಕ್ಕವನು. ೬೦ ಪರಾಯಣಮ್ (9) ಉತ್ಕೃಷ್ಟ(ಪುನರಾವೃತ್ತಿರಹಿತ)ವಾದ ಸ್ಥಾನಭೂತನಾದವನು. ಅಥವಾ, ಮೋಕ್ಷಾರ್ಥಿಗಳಿಗೆ ಉತ್ತಮಮಾರ್ಗರೂಪನಾದವನು. ಅಥವಾ, (10) ಪ್ರಳಯಕಾಲದಲ್ಲಿ ಸಮಸ್ತ ಭೂತಗಳೂ ಇವನನ್ನು ಪ್ರವೇಶಿಸುವುದರಿಂದ ಪರಾಯಣನು‡ ॥೧೭॥

(1) ಈಷ್ಟೇ ಇತಿ ಈಶಃ (2) ಧರತಿ ಇತಿ ಧರಃ, ಖಗಸ್ಯ ಧರಃ (3) ಪ್ರಶಸ್ತಾ ಶ್ರೀಃ ಅಸ್ಯ ಅಸ್ತಿ ಇತಿ ಶ್ರೀಮಾನ್ (4) ಕೌಸಲ್ಯಾಯಾಃ ಅಪತ್ಯಂ ಪುಮಾನ್ ಕೌಸಲ್ಯೇಯಃ (5) ನಾಸ್ತಿ ಅಸೂಯಾ ಯಸ್ಯ ಸಃ (6) ವಿಪುಲೌ ಅಂಸೌ ಯಸ್ಯ ಸಃ (7) ಮಹತ್ ಉರಃ ಯಸ್ಯ ಸಃ (8) ಪರಮೇ ತಿಷ್ಠತಿ ಇತಿ ಪರಮೇಷ್ಠೀ. (9) ಪರಂಚ ತತ್ ಅಯನಂ ಚ. (10) ಪರಾ ಯಸ್ತಿ ಇದಂ ಇತಿ ಪರಾಯಣಮ್.

* ಇಲ್ಲಿ 'ಖಡ್ಗಧರಃ' ಎಂದು ಪಾಠಾಂತರವುಂಟು ಖಡ್ಗಾಯುಧವನ್ನು, ಅಥವಾ ನಂದಕವೆಂಬ ಖಡ್ಗವನ್ನು ಧರಿಸಿರತಕ್ಕವನೆಂದು ಅರ್ಥವು

† ಗುಣಗಳಲ್ಲಿ ದೋಷಾರೋಪಣೆಮಾಡುವುದಕ್ಕೆ ಅಸೂಯೆ ಎಂದು ಹೆಸರು

‡ ಇಲ್ಲಿ 'ಪರಾಯಣಃ' ಎಂದು ಪುಲ್ಲಿಂಗವಾಗಿ ಪಾಠಾಂತರವುಂಟು ಆಗ ಉತ್ತಮವಾದ ಸ್ಥಾನ ಅಥವಾ ಗತಿಯುಳ್ಳವನೆಂದು ಅರ್ಥವು ಪರಂ ಅಯನಂ ಯಸ್ಯ ಸಃ ಪರಾಯಣಃ

ಮೂ॥ ಸತ್ಯವ್ರತಃ ಸತ್ಯಸನ್ಧೋ ಗುರುಃ ಪರಮಧಾರ್ಮಿಕಃ ।
ಲೋಕಜ್ಞೋ ಲೋಕವನ್ದ್ಯಶ್ಚ ಲೋಕಾತ್ಮಾ ಲೋಕಕೃತ್ ಪರಃ ॥೧೪॥

೬೧ ಸತ್ಯವ್ರತಃ (1) ಸತ್ಯವೇ * ವ್ರತವಾಗಿ ಉಳ್ಳವನು. ಅಥವಾ, (2) ಸತ್ಯವಾದ †ವ್ರತವುಳ್ಳವನು ೬೨ ಸತ್ಯಸನ್ಧಃ (3) ಸತ್ಯವಾದ ‡ ಪ್ರತಿಜ್ಞೆಯುಳ್ಳವನು ೬೩ ಗುರುಃ (4) ಸಮಸ್ತ ಪದಾರ್ಥಗಳಿಗೂ ದೊಡ್ಡವನು ೬೪ ಪರಮಧಾರ್ಮಿಕಃ (5) ಧರ್ಮಾಧರ್ಮಗಳರಡೂ ತನಗಿಲ್ಲದಿದ್ದರೂ, ಲೋಕಶಿಕ್ಷಣಾರ್ಥವಾಗಿ ಸರ್ವದಾ ಉತ್ಕೃಷ್ಟವಾದ ಧರ್ಮವನ್ನೇ ಆಚರಿಸತಕ್ಕವನು ಅಥವಾ, ಸಾಮಾನ್ಯವಾಗಿ ಲೋಕದಲ್ಲಿ ಧರ್ಮವನ್ನೇ ಆಚರಿಸತಕ್ಕವನು ಕೇವಲ ಧಾರ್ಮಿಕನೆನ್ನಿಸುವನು , ಸಕಲಲೋಕ ವಿಲಕ್ಷಣವಾದ ಧರ್ಮವುಳ್ಳವನಾದಕಾರಣ, ಶ್ರೀರಾಮಚಂದ್ರಮೂರ್ತಿಯು ಪರಮಧಾರ್ಮಿಕನೆನ್ನಿಸಿಕೊಳ್ಳುವನು ೬೫ ಲೋಕಜ್ಞಃ (6) ಲೋಕದ ಸಮಸ್ತ ವ್ಯಾಪಾರವನ್ನೂ ತಿಳಿಯತಕ್ಕವನು ೬೬ ಲೋಕವನ್ದ್ಯಃ (7) ಸಮಸ್ತ ಲೋಕಗಳಿಗೂ ವಂದನೀಯನು ೬೭ ಲೋಕಾತ್ಮಾ (8) ಲೋಕಗಳಿಗೆಲ್ಲ ಆತ್ಮಭೂತನಾದವನು ೬೮ ಲೋಕಕೃತ್ (9) ರಜೋಗುಣದಿಂದ ಲೋಕಗಳನ್ನೆಲ್ಲ ಉಂಟುಮಾಡತಕ್ಕವನು ೬೯ ಪರಃ (10) ಸರ್ವಪ್ರಾಣಿಗಳಿಗೂ ಉತ್ಕೃಷ್ಟನಾದವನು ಅಥವಾ, ಸಮಸ್ತಪ್ರಪಂಚಕ್ಕೂ ಭಿನ್ನನಾದವನು ॥೧೪॥

(1) ಸತ್ಯಮೇವ ವ್ರತಂ ಯಸ್ಯ ಸಃ (2) ಸತ್ಯಾನಿ ವ್ರತಾನಿ ಯಸ್ಯ ಸಃ (3) ಸತ್ಯಾ ಸನ್ಧಾ ಯಸ್ಯ ಸಃ (4) ಗೃಣಾತಿ ಇತಿ ಗುರುಃ ಗೃ ಶಬ್ದೇ (5) ಧರ್ಮಂ ಚರತಿ ಇತಿ ಧಾರ್ಮಿಕಃ, ಪರಮಶ್ಚಾಸೌ ಧಾರ್ಮಿಕಶ್ಚ. (6) ಲೋಕಾಃ ಜಾನಾತಿ ಇತಿ ಲೋಕಜ್ಞಃ (7) ವನ್ದಿತುಂ ಯೋಗ್ಯಃ ವನ್ದ್ಯಃ, ಲೋಕಾನಾಂ ವನ್ದ್ಯಃ (8) ಲೋಕಾನಾಂ ಆತ್ಮಾ (9) ಲೋಕಾಃ ಕರೋಂತಿ ಇತಿ ಲೋಕಕೃತ್ (10) ಪಿಪರ್ತಿ ಇತಿ ಪರಃ ಪೃ ಪಾಲನಪೂರಣಯೋಃ

* ಸತ್ಯವನ್ನು ಬಹು ನಿಯಮದಿಂದ ಕಾಪಾಡಿಕೊಳ್ಳತಕ್ಕವನೆಂದು ಭಾವವು

† ತನ್ನ ನಿಯಮಗಳನ್ನು ಸ್ವಲ್ಪವೂ ಬಿಡದಿರತಕ್ಕವನೆಂದು ಭಾವವು

‡ 'ರಾಮೋ ದ್ವಿರ್ನಾಭಿಭಾಷತೇ' ರಾಮನು ಎರಡುಮಾತಾಡುವುದಿಲ್ಲವೆಂದೂ, 'ಅಪಿ ವಾ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್ । ನ ತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ,, ಎಲೌ ಸೀತೆ ! ನಾನು ನನ್ನ ಪ್ರಾಣವನ್ನಾದರೂ ಬಿಟ್ಟುಬಿಟ್ಟೇನು , ನಿನ್ನನ್ನಾದರೂ ಬಿಟ್ಟೇನು , ಲಕ್ಷ್ಮಣನನ್ನಾದರೂ ಬಿಟ್ಟೇನು. ಆದರೆ, ಮಾಡಿದ ಪ್ರತಿಜ್ಞೆಯನ್ನು ಮಾತ್ರ ಬಿಡಲಾರೆನು ತತ್ರಾಪಿ, ಬ್ರಾಹ್ಮಣರಿಗೆ ಮಾಡಿಕೊಟ್ಟ ಪ್ರತಿಜ್ಞೆಯು ಅತಿ ವಿಶೇಷನಾದುದು ಎಂದು ಸ್ವಾಮಿಯು ಅಪ್ಪಣೆಕೊಟ್ಟರುವನು.

ಮೂ॥ ಅನಾದಿರ್ಭಗವಾನ್ ಸೇವ್ಯೋ ಜೀತಮಾಯೋ ರಘೂದ್ವಹಃ ।
ರಾಮೋ ದಯಾಕರೋ ದಕ್ಷಃ ಸರ್ವಜ್ಞಃ ಸರ್ವಪಾಲಕಃ ॥೧೫॥

೭೦ ಅನಾದಿಃ (1) ಕಾರಣ*ಶೂನ್ಯನಾದವನು ೭೧. ಭಗವಾನ್ (2) ಸಮಗ್ರವಾದ ಐಶ್ವರ್ಯ ವೀರ್ಯ ಯಶಸ್ಸು ಸಂಪತ್ತು ಜ್ಞಾನ ವೈರಾಗ್ಯಗಳು ಉಳ್ಳವನು ೭೨ ಸೇವ್ಯಃ (3) ಸಕಲರಿಂದಲೂ ಜೀವಿಸಲ್ಪಡಬೇಕಾದವನು ಅಥವಾ, (4) ಕೇವಲ ಸೌಮ್ಯನಾಗಿ ಸರ್ವರಿಗೂ ಸುಖವಾಗಿ ಸೇವಿಸಲ್ಪಡಲು ಶಕ್ಯನಾದವನು ೭೩ ಜಿತಮಾಯಃ (5) ಗೆಲ್ಲಲ್ಪಟ್ಟ†ಮಾಯೆಯುಳ್ಳವನು ‡೭೪ ರಘೂದ್ವಹಃ (6) ರಘುಮಹಾರಾಜನ ವಂಶದಲ್ಲಿ ಹುಟ್ಟಿದವರನ್ನೆಲ್ಲ ಮೇಲಕ್ಕೆ § ಎತ್ತತಕ್ಕವನು ೭೫ ರಾಮಃ (7) ಅತಿ ಸುಂದರವಾದ ಶರೀರವುಳ್ಳವನು ೭೬ ದಯಾಕರಃ (8) ದಯೆಗೆ ನಿಧಿಭೂತನಾದವನು ೭೭ ದಕ್ಷಃ (9) ಸರ್ವ ಸಮರ್ಥನು ಅಥವಾ, ಜಗದ್ರೂಪದಲ್ಲಿ ಅಭಿವೃದ್ಧಿ ಪಡೆಯುತಕ್ಕವನು ಅಥವಾ, ಶೀಘ್ರಕಾರಿಯಾದವನು ೭೮ ಸರ್ವಜ್ಞಃ (10) ಸರ್ವವನ್ನೂ ತಿಳಿದಿರತಕ್ಕವನು ೭೯ ಸರ್ವಪಾಲಕಃ (11) ಸರ್ವವನ್ನೂ ಪರಿಪಾಲಿಸತಕ್ಕವನು ॥೯॥

(1) ನಾಸ್ತಿ ಆದಿಃ ಯಸ್ಯ ಸಃ (2) ಭಗಃ ಅಸ್ಮಿನ್ ಅಸ್ತಿ ಇತಿ ಭಗವಾನ್ (3) ಸೇವಿತುಂ ಯೋಗ್ಯಃ (4) ಸೇವಿತುಂ ಶಕ್ಯಃ (5) ಜಿತಾ ಮಾಯಾ ಯೇನ ಸಃ (6) ರಘೂಣಾಂ ಉದ್ವಹಃ (7) ರಮತೇ ಇತಿ ರಾಮಃ (8) ದಯಾಯಾಃ ಆಕರಃ (9) ದಕ್ಷತೇ ಇತಿ ದಕ್ಷಃ ದಕ್ಷವೃದ್ಧೌ, ಶೀಘ್ರಾರ್ಥೇ ಚ (10) ಸರ್ವಂ ಜಾನಾತಿ ಇತಿ ಸರ್ವಜ್ಞಃ (11) ಸರ್ವಂ ಪಾಲಯತಿ ಇತಿ ಸರ್ವಪಾಲಕಃ

* ಯಾವುದೊಂದು ವಸ್ತುವಿರಬೇಕಾದರೂ, ಅದಕ್ಕೆ ಪೂರ್ವವೃತ್ತಿಯಾದ ಕಾರಣವೊಂದು ಇದ್ದೇತೀರಬೇಕಾಗಿರುವುದು ಇವನಿಗೆ ಅಂತಹ ಕಾರಣವೊಂದೂ ಇಲ್ಲವೆಂದು ಭಾವವು

† ಮಾಯೆಗೆ ತಾನು ಅಧೀನನಾಗದೆ, ಮಾಯೆಯನ್ನೇ ತನ್ನ ವರದಲ್ಲಿಟ್ಟುಕೊಂಡಿರತಕ್ಕವನೆಂದು ಭಾವವು

‡ ‘ಸಂಪ್ರೇಜಿತಮಾಯಃ’ ಎಂಬಲ್ಲಿ ‘ಸಂವ್ಯಃ ಅಜಿತಮಾಯಃ’ ಎಂದೂ ಪದಚ್ಛೇದವಾಗಬಹುದು ಆಗ ‘ಅಜಿತಾ ಮಾಯಾ ಯಸ್ಯ ಸಃ’ ಎಂದು ವಿಗ್ರಹವು ಇವನ ಮಾಯೆಯು ಇವನಲ್ಲಿ ಭಕ್ತಿಯಿಲ್ಲದವಗಿಂದ ಗೆಲ್ಲಲ್ಪಡುವುದಿಲ್ಲವೆಂದು ತಾತ್ಪರ್ಯವು ‘ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥’ ತ್ರಿಗುಣಾತ್ಮಕವಾದ ನನ್ನ ಮಾಯೆಯು, ಎಂಥವರಿಗೂ ನಿವಾರಿಸಲಸಾಧ್ಯವಾದುದು ಯಾರು ನನ್ನನ್ನೇ ಮರೆಹೊಗುವರೋ, ಅವರೇ ಈ ಮಾಯೆಯನ್ನು ದಾಟಬಲ್ಲರು (ಭಗವದ್ವಾಕ್ಯವು.)

§ ಇವರಿಗೆಲ್ಲ ಸದ್ಗತಿಯುಂಟುಮಾಡತಕ್ಕವನೆಂದು ಭಾವವು

ಮೂ॥ ಬ್ರಹ್ಮಣ್ಯೋ ನೀತಿಮಾನ್ ಗೋಪ್ತಾ ಸರ್ವದೇವಮಯೋ ಹರಿಃ ।
ಸುಂದರಃ ಪೀತವಾಸಾಶ್ಚ ಸೂತ್ಕಾರಃ ಸನಾತನಃ ॥೬೦॥

೮೦ ಬ್ರಹ್ಮಣ್ಯಃ (1) ಬ್ರಾಹ್ಮಣನಿಗೆ, ಅಥವಾ, ತಪಸ್ಸಿಗ ಹಿತನಾದವನು ೮೧ ನೀತಿಮಾನ್ (2) ಅತಿ ಪ್ರಶಸ್ತವಾದ ನೀತಿ(ನ್ಯಾಯ)ಯುಳ್ಳವನು *೮೨ ಗೋಪ್ತಾ (3) ಸಮಸ್ತ ಜಗತ್ತನ್ನೂ ರಕ್ಷಿಸತಕ್ಕವನು ೮೩ ಸರ್ವದೇವಮಯಃ (1) ಸಕಲ ದೇವತಾಸ್ವರೂಪನು ೮೪ ಹರಿಃ (5) ತನ್ನ ಭಕ್ತರ ಸಂಸಾರವನ್ನೂ, ಇದಕ್ಕೆ ಕಾರಣವಾದ ಮಾಯೆಯನ್ನೂ ಸಂಹರಿಸತಕ್ಕವನು ಅಥವಾ, ಸ್ಮರಣಮಾತ್ರದಿಂದಲೇ ಪಾಪವನ್ನು ಸಂಹರಿಸತಕ್ಕವನು ಅಥವಾ, ಯಜ್ಞಗಳಲ್ಲಿ ಹವಿರ್ಭಾಗವನ್ನು ಸ್ವೀಕರಿಸತಕ್ಕವನು ಅಥವಾ, ಹರಿತವರ್ಣವಾದ ಶರೀರವುಳ್ಳವನು † ೮೫. ಸುಂದರಃ (6) ಲೋಕಾತಿಶಯವಾದ ಸೊಬಗುಳ್ಳವನು ೮೬ ಪೀತವಾಸಾಃ

(7) ಪೀತವರ್ಣವಾದ ವಸ್ತ್ರವುಳ್ಳವನು. ಅಥವಾ, (8) ಸರ್ವಲೋಕಕ್ಕೂ ಜ್ಞಾನಾಚ್ಛಾದಕವಾದ ಅಜ್ಞಾನಾವರಣವನ್ನು ನುಂಗಿಬಿಟ್ಟಿರತಕ್ಕವನು. ೮೭ ಸೂತ್ರಕಾರಃ (9) ವೇದಾದಿ ಸಕಲನಿಯಮಗಳನ್ನೂ ಮಾಡಿರತಕ್ಕವನು. ಅಥವಾ, ಕಪಿಲ ವ್ಯಾಸಾದಿರೂಪದಿಂದ ಅವತರಿಸಿ ಸಾಂಖ್ಯ ವೇದಾಂತಾದಿ ಸೂತ್ರಗಳನ್ನು ಮಾಡಿದವನು ಅಥವಾ, (10) ಸೂತ್ರಾತ್ಮನಾದ ಜಗದ್ಯೋನಿಯನ್ನು ಸೃಷ್ಟಿಸಿರತಕ್ಕವನು. ೮೯ ಸನಾತನಃ. (11) ಸರ್ವದಾ ಇರತಕ್ಕವನು ॥೨೦॥

(1) ಬ್ರಹ್ಮಣೋ ಽಪತಃ (2) ಪ್ರಶಸ್ತಾ ನೀತಿಃ ಅಸ್ಮಿನ್ ಅಸ್ತಿ ಇತಿ ನೀತಿಮಾನ್ (3) ಗೋಪಾಯತಿ ಇತಿ ಗೋಪಾಸ್ತಾ (4) ಸರ್ವಂ ಚ ತೇ ವೈವಾಶ್ವ ಸರ್ವದೇವಾಃ, ಸರ್ವದೇವಾಏವ ಸರ್ವದೇವಮಯಃ (5) ಹರತಿ ಇತಿ ಹರಿಃ (೧) ಸು ದ್ರಿಯತೇ ಇತಿ ಸುನ್ದರಃ ದೃಙ್ ಆದರೇ (7) ಪೀತಂ ವಾಸಃ ಯಸ್ಯ ಸಃ (೪) ಪೀತಂ ವಾಸಃ ಯೇನ ಸಃ (9) ಸೂತ್ರಾಣಿ ಕರೋತಿ ಇತಿ ಸೂತ್ರಕಾರಃ (10) ಸೂತ್ರಂ ಕರೋತಿ ಇತಿ ಸೂತ್ರಕಾರಃ (11) ಸನಾ ಧ್ರುವಃ ಸನಾತನಃ

* ಇಲ್ಲಿ ' ಬ್ರಹ್ಮಣೋ ನೀತಿಮಾನ್ ' ಎಂಬಲ್ಲಿ ' ಬ್ರಹ್ಮಣ್ಯಃ ಅನೀತಿಮಾನ್ ' ಎಂದೂ ಪದಚ್ಛೇದವಾಗಬಹುದು ಆಗ ' ಅನೀತಿಮಾನ್ ' ಎಂದರೆ ಈತಿಬಾಧಾರಹಿತನೆಂದು ಅರ್ಥವು ನ ಈತಿಮಾನ್

† ' ಹರಾಮ್ಯಹಂ ಚ ಸ್ಮರ್ತೃಣಾಂ ಹವಿರ್ಭಾಗಂ ಕ್ರತುಷ ಕ್ರಮ್ | ವರ್ಣಶ್ಚ ಮೇ ಹರಿಶ್ಶೇತಿ ತಸ್ಮಾದ್ಧರಿರಹಂ ಸ್ಮೃತಃ ' ಎಂದು ಸ್ವಾಮಿಯೇ ಅಪ್ಪಣೆಕೊಟ್ಟಿರುವನು (ಮಹಾಭಾರತ ಶಾಂತಿಪರ್ವ)

ಮೂ॥ ಸೌಮ್ಯೋ ಮಹರ್ಷಿಃ ಕೋದಣ್ಡೀ ಸರ್ವಗಃ ಸರ್ವಗೋಚರಃ |
ಕವಿಃ ಸುಗ್ರೀವವರದಃ ಸರ್ವಪುಣ್ಯಾಧಿಕಪ್ರದಃ ॥೨೧॥

೮೯ ಸೌಮ್ಯಃ (1) ಚಂದ್ರನಂತೆ ಸಕಲ ಜಗದಾಹ್ಲಾದಕನು ೯೦ ಮಹರ್ಷಿಃ (2) ವೇದಪ್ರವರ್ತಕನಾದ ಮಹರ್ಷಿಯು ಅಥವಾ, ದಂಡಕಾರಣ್ಯದಲ್ಲಿ ಮಹರ್ಷಿಗಳಂತೆ ವಾಸ ಮಾಡಿಕೊಂಡಿದ್ದವನು ಅಥವಾ ನರನಾರಾಯಣಾವತಾರದಲ್ಲಿ ತಪಸ್ಸಿಯಾಗಿದ್ದ ಮಹರ್ಷಿಯು ೯೧ ಕೋದಣ್ಡೀ (3) ಪ್ರಶಸ್ತವಾದ ಧನುಸ್ಸುಳ್ಳವನು ೯೨ ಸರ್ವಗಃ (4) ಕಾರಣಮೂರ್ತಿಯಾಗಿ ವ್ಯಾಪಿಸಿಕೊಂಡು ಸಕಲಪದಾರ್ಥಗಳಲ್ಲಿಯೂ ಹೋಗತಕ್ಕವನು ೯೩ ಸರ್ವಗೋಚರಃ (5) ಸಮಸ್ತ ವೇದ ವಚನಗಳಿಗೂ ವಿಷಯನಾದವನು ಅಥವಾ (6) ಸಕಲ ಜಗದ್ವ್ಯಾಪಾರವೂ ಗೋಚರವಾಗಿ ಉಳ್ಳವನು ೯೪ ಕವಿಃ (7) ಸಮಸ್ತ ವಿಷಯವನ್ನೂ ಸುಂದರವಾಗಿ ರಚಿಸಿಹೇಳತಕ್ಕವನು ೯೫ ಸುಗ್ರೀವವರದಃ (8) ಸುಗ್ರೀವನಿಗೆ ವರವನ್ನು ಕೊಟ್ಟವನು ಅಥವಾ, (9) ತನ್ನ ಸ್ತೋತ್ರದಿಂದ ಪ್ರಶಸ್ತನಾದ ಕಂರವುಳ್ಳವರಿಗೆ (ತನ್ನನ್ನು ಸ್ತುತಿಸತಕ್ಕವರಿಗೆ) ವರಗಳನ್ನು ಕೊಡತಕ್ಕವನು. ೯೬ ಸರ್ವಪುಣ್ಯಾಧಿಕಪ್ರದಃ (10) ಸಕಲ ಪುಣ್ಯಗಳಿಗಿಂತಲೂ ಅಧಿಕವಾದ ಮೋಕ್ಷವನ್ನು ಕೊಡತಕ್ಕವನು ಅಥವಾ, (11) ಸಕಲರಾದ ಪುಣ್ಯಶಾಲಿಗಳಿಗೂ ವಿಶೇಷವಾಗಿ ವರವನ್ನು ಕೊಡತಕ್ಕವನು ॥೨೧॥

(1) ಸೋಮಇವ ಸೋಮಃ, ಸೋಮಏವ ಸೌಮ್ಯಃ (2) ಮಹಾಂಶ್ಚಾಸೌ ಋಷಿಶ್ಚ (3) ಪ್ರಶಸ್ತಃ ಕೋದಣ್ಡಃ ಅಸ್ಯ ಅಸ್ತಿ ಇತಿ ಕೋದಣ್ಡೀ (4) ಸರ್ವಂ ಗಚ್ಛತಿ ಇತಿ ಸರ್ವಗಃ (5) ಸರ್ವೇಷಾಂ ಗೋಚರಃ. (6) ಸರ್ವೇ ಗೋಚರಾಃ ಯಸ್ಯ ಸಃ (7) ಕವತೇ ಇತಿ ಕವಿಃ ಕುಙ್ ಶಬ್ದೇ (8) ವರಂ ದದಾತಿ ಇತಿ ವರದಃ, ಸುಗ್ರೀವಾಯ ವರದಃ (9) ಸರ್ವಾಣಿ ಚ ತಾನಿ ಪುಣ್ಯಾನಿ ಚ ಸರ್ವಪುಣ್ಯಾನಿ, ಸರ್ವಪುಣ್ಯೇಭ್ಯಃ ಅಧಿಕಂ ಸರ್ವಪುಣ್ಯಾಧಿಕಂ, ಸರ್ವಪುಣ್ಯಾಧಿಕಂ ಪ್ರದದಾತಿ ಇತಿ ಸರ್ವಪುಣ್ಯಾಧಿಕಪ್ರದಃ (9) ಸರ್ವೇ ಚ ತೇ ಪುಣ್ಯಾಶ್ಚ ಸರ್ವಪುಣ್ಯಾಃ. ಅಧಿಕಂ ಪ್ರದದಾತಿ ಇತಿ ಅಧಿಕಪ್ರದಃ, ಸರ್ವಪುಣ್ಯೇಭ್ಯಃ ಅಧಿಕಪ್ರದಃ

ಮೂ॥ ಭವ್ಯೋ ಜಿತಾರಿಷಡ್ವರ್ಗೋ ಮಹೋದಾರೋಽಘನಾಶನಃ ।
ಸುಕೀರ್ತಿರಾದಿಪುರುಷಃ ಕ್ಷ್ಮಾನ್ತಃ ಪುಣ್ಯಃ ಕೃತಾಗಮಃ ॥೨೦॥

೧೬ ಭವ್ಯಃ (1) ಕುಶಲನು. ಅಥವಾ, ಮಂಗಳಾತ್ಮಕನು ೧೮ ಜಿತಾರಿಷಡ್ವರ್ಗಃ (2) ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳೆಂಬ ಅರಿಷಡ್ವರ್ಗವನ್ನು ಗೆದ್ದಿರತಕ್ಕವನು ೧೯ ಮಹೋದಾರಃ (3) ಎಲ್ಲರಿಗಿಂತಲೂ ದೊಡ್ಡವನು ಅಥವಾ, ಇತರರಿಂದ ಕೊಡಲಸಾಧ್ಯವಾದ ಮೋಕ್ಷವನ್ನು ಕೊಡುವ ಮಹಾದಾತನು ಅಥವಾ, (4) ಉತ್ಸವಗಳಿಂದ ಪ್ರಶಸ್ತನಾದವನು ಅಥವಾ, ಭಕ್ತರಿಗೆ ಉತ್ಸವಗಳನ್ನು ಕೊಡತಕ್ಕವನು ೧೦೦ ಅಘನಾಶನಃ. (5) ತನ್ನ ಭಕ್ತರ ದುಃಖವನ್ನೂ ಪಾಪವನ್ನೂ ನಾಶಪಡಿಸತಕ್ಕವನು ಅಥವಾ, ಕೃಷ್ಣಾವತಾರದಲ್ಲಿ 'ಅಘ'ನೆಂಬ ರಾಕ್ಷಸನನ್ನು ಸಂಹರಿಸಿದವನು ೧೦೧ ಸುಕೀರ್ತಿಃ (6) ಅತಿ ಪ್ರಶಸ್ತವಾದ ಯಶಸ್ಸುಳ್ಳವನು ಅಥವಾ, ಸರ್ವರಿಗೂ ಶ್ರೇಯಃಪ್ರದವಾದ ತನ್ನ ನಾಮಸಂಕೀರ್ತನೆಯುಳ್ಳವನು ೧೦೨ ಆದಿಪುರುಷಃ (7) ಸರ್ವಭೂತಗಳಿಗೂ ಆದಿಯಾದ ಪುರುಷನು ಅಥವಾ, (8) ಸರ್ವಭೂತಗಳನ್ನೂ ಸ್ವೀಕರಿಸತಕ್ಕ ಪುರುಷನು ೧೦೩ ಕ್ಷ್ಮಾನ್ತಃ (9) ಕ್ಷಮಾ * ಯುಕ್ತನು ೧೦೪ ಪುಣ್ಯಃ (10) ತನ್ನ ಸ್ಮರಣಮಾತ್ರದಿಂದಲೇ ಸರ್ವರಿಗೂ ಪಾಪಕ್ಷಯವುಂಟುಮಾಡತಕ್ಕವನು ೧೦೫ ಕೃತಾಗಮಃ (11) ವೇದರೂಪವಾದ ಶಾಸ್ತ್ರವನ್ನು ಮಾಡಿರತಕ್ಕವನು. ಅಥವಾ, (12) ತಮ್ಮಿಂದ ಮಾಡಲ್ಪಟ್ಟ ಶುಭಾಶುಭಕರ್ಮಗಳನ್ನೆಲ್ಲ ಜ್ಞಾನಿಗಳಿಗೆ ತಿಳಿಯಪಡಿಸತಕ್ಕವನು ಅಥವಾ, (13) ಸುಕೃತದಿಂದ ತಿಳಿಯಲ್ಪಡತಕ್ಕವನು ॥೨೦॥

(1) ಭವತಿ ಇತಿ ಭವ್ಯಃ (2) ಷಣ್ಣಾಂ ವರ್ಗಃ ಷಡ್ವರ್ಗಃ, ಅರೀಣಾಂ ಷಡ್ವರ್ಗಃ ಅರಿಷಡ್ವರ್ಗಃ, ಜಿತಃ ಅರಿಷಡ್ವರ್ಗಃ ಯೇನ ಸಃ (3) ಮಹಾಂಶ್ಚಾಸೌ ಉದಾರಶ್ಚ (4) ಮಖೈಃ ಉದಾರಃ (5) ಮಹಾನಾಂ ಉದಾರಃ (6) ಶೋಭನಾ ಕೀರ್ತಿಃ ಯಸ್ಯ ಸಃ (7) ಆದಿಶ್ಚಾಸೌ ಪೂರುಷಶ್ಚ (8) ಆದೀಯನ್ತೇ ಅನೇನ ಇತಿ ಆದಿಃ (9) ಕ್ಷಮತೇ ಸ್ಮ ಇತಿ ಕ್ಷ್ಮಾನ್ತಃ (10) ಪುನಾತಿ ಇತಿ ಪುಣ್ಯಃ. (11) ಕೃತಾಃ ಆಗಮಾಃ ಯೇನ ಸಃ (12) ಕೃತಂ ಆಗಮಯತಿ ಇತಿ ಕೃತಾಗಮಃ (13) ಕೃತೇನ ಆಗಮ್ಯತೇ ಇತಿ ಕೃತಾಗಮಃ

*ತನ್ನ ಭಕ್ತರು ಮಾಡಿದ ಅಪರಾಧಗಳನ್ನು ಮನ್ನಿಸತಕ್ಕವನೆಂದು ಭಾವವು

ಮೂ॥ ಅಕಲ್ಮಷಶ್ಚತುರ್ಬಾಹುಃ ಸರ್ವಾವಾಸೋ ದುರಾಸದಃ ।
ಮಿತಭಾಷೀ ನಿವೃತ್ತಾತ್ಮಾ ಸ್ಮೃತಿಮಾ ವೀರ್ಯವಾ ಪ್ರಭುಃ ॥೨೧॥

೧೦೬ ಅಕಲ್ಮಷಃ (1) ಪಾಪಶೂನ್ಯನಾದವನು ಅಥವಾ, ಮಾಯಾಸಂಬಂಧ ಶೂನ್ಯನಾದವನು ೧೦೭ ಚತುರ್ಬಾಹುಃ (2) ನಾಲ್ಕುತೋಳುಳ್ಳವನು ೧೦೮ ಸರ್ವಾವಾಸಃ (3) ಸಮಸ್ತಪ್ರಪಂಚಕ್ಕೂ ಆಶ್ರಯಭೂತನಾದವನು ಅಥವಾ, (4) ಸಮಸ್ತಪ್ರಾಣಿವರ್ಗದಲ್ಲಿಯೂ ವಾಸಮಾಡತಕ್ಕವನು ೧೦೯ ದುರಾಸದಃ (5) ಶತ್ರುಗಳಿಂದ ಅಥವಾ ಪಾಪಿಷ್ಠರಿಂದ ಹೊಂದಲ್ಪಡಲು ಅಸಾಧ್ಯನು ಅಥವಾ, ವಾಕ್ಕಿಗೂ ಮನಸ್ಸಿಗೂ ದುರ್ಲಭ (ಅಗೋಚರ) ನಾದವನು. ೧೧೦ ಮಿತ*ಭಾಷೀ (6) ಮಿತವಾಗಿ † ಮಾತನಾಡತಕ್ಕವನು ೧೧೧ ನಿವೃತ್ತಾತ್ಮಾ (7) ಸಂಸಾರಬಂಧದಿಂದ ತಪ್ಪಿಸಿಕೊಂಡಿರುವ ಸ್ವರೂಪವುಳ್ಳವನು ಅಥವಾ, ಸ್ವಭಾವತಃ ವಿಷಯಗಳದೆಸೆಯಿಂದ ನಿವೃತ್ತನಾಗಿರತಕ್ಕವನು. ೧೧೨ ಸ್ಮೃತಿಮಾ (8) ಭೂತ ಭವಿಷ್ಯತ್

ವರ್ತಮಾನಗಳಾದ ಸಕಲ ಕಾರ್ಯಗಳ ಸ್ಮರಣೆಯೂ ಉಳ್ಳವನು ೧೧೩ ವೀರ್ಯವಾ೯ (9) ಲೋಕೋತ್ತರವಾದ ಪರಾಕ್ರಮವುಳ್ಳವನು ಅಥವಾ, ವಿಕಾರಹೇತುಗಳಿದ್ದರೂ ವಿಕಾರ ಹೊಂದದಿರುವ ಸ್ವಭಾವವುಳ್ಳವನು ೧೧೪ ಪ್ರಭುಃ (10) ಸರ್ವಲೋಕಕ್ಕೂ ಸ್ವಾಮಿಯಾದವನು ॥೨೫॥

(1) ನಾಸ್ತಿ ಕಲ್ಮಷಂ ಯಸ್ಮಿ೯ ಸಃ (2) ಚತ್ವಾರಃ ಬಾಹವಃ ಯಸ್ಯ ಸಃ (3) ಸರ್ವೇಷಾಂ ಆವಾಸಃ (4) ಸರ್ವಂ ಆವಸತಿ ಇತಿ ಸರ್ವಾವಾಸಃ (5) ಆಸಾದಯಿತುಂ ಅಶಕ್ಯಃ (6) ಮಿತಂ ಭಾಷತೇ ಇತಿ ಮಿತಭಾಷೀ (7) ನಿವೃತ್ತಃ ಆತ್ಮಾ ಯಸ್ಯ ಸಃ (8) ಪ್ರಶಸ್ತಾ ಸ್ಮೃತಿಃ ಅಸ್ಯ ಅಸ್ತಿ ಇತಿ ಸ್ಮೃತಿಮಾ೯ (9) ಪ್ರಶಸ್ತಂ ವೀರ್ಯಂ ಅಸ್ಯ ಅಸ್ತಿ ಇತಿ ವೀರ್ಯವಾ೯ (10) ಪ್ರಭವತಿ ಇತಿ ಪ್ರಭುಃ

* ಇಲ್ಲಿ 'ಸ್ಮಿತಭಾಷೀ' ಎಂದು ಪಾಠಾಂತರವಿರುವುದು ಆಗ ಮಂದಹಾಸಪೂರ್ವಕವಾಗಿ ಮಾತನಾಡತಕ್ಕವನೆಂದು ಅರ್ಥವು 'ಸ್ಮಿತಪೂರ್ವಾಭಿಭಾಷೀ ಚ ಪೂರ್ವಭಾಷೀ ಚ ರಾಘವಃ' ಎಂದು ಶ್ರೀಮದ್ರಾಮಾಯಣವಚನವಿರುವುದು

† ತಿಳಿಯಿಸಬೇಕಾದ ವಿಷಯವನ್ನು ತಿಳಿಯಿಸುವಷ್ಟು ಮಾತ್ರವೇ

ಮೂ॥ ಧೀರೋದಾತ್ತೋ ಘನಶ್ಯಾಮಃ ಸರ್ವಾಯುಧವಿಶಾರದಃ ।
ಸರ್ವತೀರ್ಥಮಯಃ ಶೂರಃ ಸರ್ವಯಜ್ಞಫಲಪ್ರದಃ ॥೨೬॥

೧೧೫ ಧೀರೋದಾತ್ತಃ (1) ಆತ್ಮಜ್ಞಾನಿಗಳಿಗೆ ಮೋಕ್ಷವನ್ನು ಕೊಡತಕ್ಕ ಮಹಾದಾತನು ಅಥವಾ, ಧೀರರಲ್ಲೆಲ್ಲ ಶ್ರೇಷ್ಠನಾದವನು ಅಥವಾ, (2) ಧೀರೋದಾತ್ತನಾಯಕೋಚಿತ ಗುಣಸಂಪನ್ನನು ೧೧೬ ಘನಶ್ಯಾಮಃ (3) ಮೇಘದಂತೆ ನೀಲವರ್ಣನಾದವನು ೧೧೭ ಸರ್ವಾಯುಧವಿಶಾರದಃ (4) ಸಮಸ್ತವಾದ ಆಯುಧಗಳಲ್ಲಿಯೂ ಕುಶಲನಾದವನು ೧೧೮ ಸರ್ವತೀರ್ಥಮಯಃ (5) ಸಕಲತೀರ್ಥಸ್ವರೂಪನಾದವನು ಅಥವಾ, ಸಮಸ್ತಶ್ರೇಷ್ಠವಸ್ತುಸ್ವರೂಪನಾದವನು ೧೧೯ ಶೂರಃ (6) ಮಹಾವಿಕ್ರಮಶಾಲಿಯು ೧೨೦ ಸರ್ವಯಜ್ಞಫಲಪ್ರದಃ (7) ಸಮಸ್ತವಾದ ಯಜ್ಞ(ಆರಾಧನೆ)ಗಳಿಗೂ ಫಲವನ್ನು ಕೊಡತಕ್ಕವನು ॥೨೬॥

(1) ಧೀರಾಣಾಂ ಉದಾತ್ತಃ (2) ಧೀರಶ್ಚಾಸೌ ಉದಾತ್ತಶ್ಚ (3) ಘನಇವ ಶ್ಯಾಮಃ (4) ಸರ್ವಾಣಿ ಚ ತಾನಿ ಆಯುಧಾನಿ ಚ, ಸರ್ವಾಯುಧೇಷು ವಿಶಾರದಃ, (5) ಸರ್ವಾಣಿ ಚ ತಾನಿ ತೀರ್ಥಾನಿ ಚ ಸರ್ವತೀರ್ಥಾನಿ, ಸರ್ವತೀರ್ಥಾನ್ಯೇವ ಸರ್ವತೀರ್ಥಮಯಃ (6) ಶೂರಯತಿ ಇತಿ ಶೂರಃ ಶೂರವಿಕ್ರಾನ್ತೌ. (7) ಸರ್ವೇ ಚ ತೇ ಯಜ್ಞಾಶ್ಚ, ಸರ ಯಜ್ಞಾನಾಂ ಫಲಂ, ಸರ್ವಯಜ್ಞಫಲಂ ಪ್ರದದಾತಿ ಇತಿ ಸರ್ವಯಜ್ಞಫಲಪ್ರದಃ

* ಧೀರೋದಾತ್ತ ಧೀರೋದ್ಧತ ಧೀರಲಲಿತ ಧೀರಶಾಂತರೆಂದು ನಾಲ್ಕುವಿಧನಾಯಕರಿರುವರು ಇವರಲ್ಲಿ ಧೀರೋದಾತ್ತನೇ ಗುಣಾಧಿಕನೆಂದೂ, ಇವನಿಗೆ ಉತ್ತಮನಾಯಕನೆಂಬ ವ್ಯವಹಾರವೆಂದೂ, ಉತ್ತಮಕಾವ್ಯಕ್ಕೆ ಇಂತಹ ನಾಯಕನೇ ಆಗಬೇಕೆಂದೂ, ಅಲಂಕಾರಶಾಸ್ತ್ರಗಳಲ್ಲಿ ವಿಶೇಷವಾಗಿ ಉಕ್ತವಾಗಿರುವುದು ಶ್ರೀರಾಮನು ಧೀರೋದಾತ್ತರಲ್ಲಿ ಅಗ್ರಗಣ್ಯನೆಂಬುದೂ, ಇವನನ್ನು ನಾಯಕನನ್ನಾಗಿಟ್ಟುಕೊಂಡು ಅನೇಕಮಹಾಕಾವ್ಯಗಳೂ ಚಂಪುಗಳೂ ನಾಟಕಗಳೂ ರಚಿತವಾಗಿರುವುವೆಂಬುದೂ ಸುಪ್ರಸಿದ್ಧವು

† ಸಕಲಪುಣ್ಯತೀರ್ಥಗಳೂ ಇವನಲ್ಲಿಯೇ ಇರುವುವೆಂದು ಭಾವವು

ಮೂ॥ ಯಜ್ಞಸ್ವರೂಪೋ ಯಜ್ಞೇಶೋ ಜರಾಮರಣವರ್ಜಿತಃ ।
ವರ್ಣಾಶ್ರಮಗುರುರ್ವರ್ಣೀ ಶತ್ರುಜಿತ್ ಪುರುಷೋತ್ತಮಃ ॥೨೭॥

೧೨೧ ಯಜ್ಞಸ್ವರೂಪಃ (1) ಸಕಲಯಜ್ಞ * ಸ್ವರೂಪನಾದವನು ೧೨೨ ಯಜ್ಞೇಶಃ (2) ಸಕಲಯಜ್ಞಗಳಿಗೂ ಸ್ವಾಮಿಯಾದವನು. ೧೨೩. ಜರಾಮರಣವರ್ಜಿತ (3) ಜರೆ

ಯಿಂದಲೂ ಮರಣದಿಂದಲೂ ಬಿಡಲ್ಪಟ್ಟಿರತಕ್ಕವನು ೧೨೪ ವರ್ಣಾಶ್ರಮಗುರುಃ ಬ್ರಹ್ಮಚರ್ಯಾದ್ಯಾಶ್ರಮಗಳಿಗೂ (4) ಬ್ರಾಹ್ಮಣಾದಿವರ್ಣಗಳಿಗೂ ಗುರುವಾದನು ೧೨೫ ವರ್ಣ್ಯಃ (5) ಉತ್ತಮವಾದ ದೇಹಕಾಂತಿಯುಳ್ಳವನು ಅಥವಾ, ಪ್ರಶಸ್ತವಾದ † ಸ್ತೋತ್ರವುಳ್ಳವನು ೧೨೬ ಶತ್ರುಜಿತ್ (6) ರಾವಣಾದಿಸಮಸ್ತಶತ್ರುಗಳನ್ನೂ ಗೆದ್ದವನು ೧೨೭ ಪುರುಷೋತ್ತಮಃ (7) ಕ್ಷರ (ಸಂಸಾರವೃಕ್ಷ) ಕ್ಕಿಂತಲೂ ಅಕ್ಷರ(ಸಂಸಾರವೃಕ್ಷಬೀಜವಾದ ವಾಸನೆ (ಕ್ಕಿಂತಲೂ ಅತೀತನಾದವನು ‡ ॥೨೫॥

(1) ಯಜ್ಞಃ ಸ್ವರೂಪಂ ಯಸ್ಯ ಸಃ (2) ಯಜ್ಞಾನಾಂ ಈಶಃ (3) ಜರಾ ಚ ಮರಣಂ ಚ ಜರಾಮರಣೇ, ಜರಾಮರಣಾಭ್ಯಾಂ ವರ್ಜಿತಃ (4) ವರ್ಣಾಶ್ಚ ಆಶ್ರಮಾಶ್ಚ ವರ್ಣಾಶ್ರಮಾಃ, ವರ್ಣಾಶ್ರಮಾಣಾಂ ಗುರುಃ. (5) ಪ್ರಶಸ್ತಃ ವರ್ಣಃ ಅಸ್ಮಿನ್ ಅಸ್ತಿ ಇತಿ ವರ್ಣೀ (6) ಶತ್ರೂನ್ ಜಯತಿ ಇತಿ ಶತ್ರುಜಿತ್ (7) ಪುರುಷೇಷು ಉತ್ತಮಃ ಪುರುಷೋತ್ತಮಃ

* 'ಯಜ್ಞೋ ವೈ ವಿಷ್ಣುಃ' ಎಂದು ಶ್ರುತಿ ಹೇಳುವುದು.

† ಇವನನ್ನು ಸ್ತುತಿಸುವುದರಿಂದ ಸಕಲವಾದ ಇಷ್ಟಾರ್ಥವೂ ಸಿದ್ಧಿಸುವುದೆಂದು ಭಾವವು

‡ 'ಯಸ್ಮಾತ್ ಕ್ಷರಮತೀತೋಹಂ ಅಕ್ಷರಾದಪಿ ಚೋತ್ತಮಃ । ಅತೋಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥' (ಭಗವದ್ಗೀತೆ)

ಮೂ॥ ಶಿವಲಿಙ್ಗಪ್ರತಿಷ್ಠಾತಾ ಪರಮಾತ್ಮಾ ಪರಂತ್ವರಃ ।
ಪ್ರಮಾಣಭೂತೋ ದುರ್ಜ್ಞೇಯಃ ಪೂರ್ಣಃ ಪರಪುರಞ್ಜಯಃ ॥೨೬॥

೧೨೮ ಶಿವಲಿಙ್ಗಪ್ರತಿಷ್ಠಾತಾ (1) ರಾವಣಾದಿವಧಾನಂತರದಲ್ಲಿ ಶಿವಲಿಂಗವನ್ನು ಪ್ರತಿಷ್ಠೆಮಾಡಿದವನು ಅಥವಾ, (2) ಸರ್ವಲೋಕಮಂಗಳಕರಗಳಾದ ತನ್ನ ಚಿಹ್ನಗಳನ್ನು ಲೋಕರಕ್ಷಣಾರ್ಥವಾಗಿ ಸ್ಥಾಪಿಸಿದವನು ೧೨೯ ಪರಮಾತ್ಮಾ (3) ಕಾರ್ಯಕಾರಣ ವಿಲಕ್ಷಣನೂ ನಿತ್ಯ ಶುದ್ಧ ಬುದ್ಧ ಮುಕ್ತಸ್ವರೂಪನೂ ಆಗಿ ಪರಮಾತ್ಮನು ೧೩೦ ಪರಾತ್ಪರಃ ಎಲ್ಲಕ್ಕಿಂತಲೂ ಅಚಿಂತ್ಯಿರತಕ್ಕವನು ೧೩೧ ಪ್ರಮಾಣಭೂತಃ (4) ಸ್ವಯಂ ಚಿತ್ಸ್ವರೂಪನಾಗಿ ಸರ್ವಕ್ಕೂ ಪ್ರಮಾಣಭೂತನಾಗಿರತಕ್ಕವನು ೧೩೨ ದುರ್ಜ್ಞೇಯಃ (5) ತಪಸ್ಸಿನಿಂದಲಾಗಲಿ ವಿದ್ಯೆಯಿಂದಲಾಗಲಿ ಇನ್ನೂ ಇತರವಾದ ಯಾವ ಲೌಕಿಕ ಸಾಧನಗಳಿಂದಲಾಗಲಿ ತಿಳಿಯಲ್ಪಡಲು ಅಸಾಧ್ಯನಾಗಿರತಕ್ಕವನು ೧೩೩ ಪೂರ್ಣಃ (6) ಸಕಲಕಾಮಿತಾರ್ಥಗಳಿಂದಲೂ ಪರಿಪೂರ್ಣನಾದವನು ೧೩೪ ಪರಪುರಞ್ಜಯಃ (7) ಅನಾತ್ಮಭೂತನಾದ ದೇಹವನ್ನು ಸ್ವಾಧೀನಪಡಿಸಿಕೊಂಡಿರತಕ್ಕವನು ಅಥವಾ, (8) ಶತ್ರುಗಳ ಪಟ್ಟಣವನ್ನು ಗೆದ್ದಿರತಕ್ಕವನು ॥೨೬॥

(1) ಶಿವಸ್ಯ ಲಿಂಗಂ, ಶಿವಲಿಂಗಸ್ಯ ಪ್ರತಿಷ್ಠಾತಾ (2) ಶಿವಾನಿ ಚ ತಾನಿ ಲಿಂಗಾನಿ ಚ, ಶಿವಲಿಂಗಾನಾಂ ಪ್ರತಿಷ್ಠಾತಾ (3) ಪರಮಶ್ಚಾಸೌ ಆತ್ಮಾ ಚ (4) ಪ್ರಮಾಣಂ ಭೂತಃ (5) ಜ್ಞಾತುಂ ಅಶಕ್ಯಃ (6) ಪೂರ್ಯತೇ ಸ್ಮ ಇತಿ ಪೂರ್ಣಃ ಪೂರೀ ಆಪ್ಯಾಯನೇ (7) ಪರಂ ಚ ತತ್ ಪುರಂ ಚ, ಪರಪುರಂ ಜಯತಿ ಇತಿ ಪರಪುರಞ್ಜಯಃ. (8) ಪರೇಷಾಂ ಪುರಾಣಿ, ಪರಪುರಾಣ ಜಯತಿ ಇತಿ ಪರಪುರಞ್ಜಯಃ

ಮೂ॥ ಅಧ್ಯಾತ್ಮಯೋಗನಿಲಯಃ ಸುಮನಾಲಕ್ಷ್ಮಣಾಗ್ರಜಃ ।
ಅನಸ್ತದೃಷ್ಟಿರಾನನ್ದೋ ಧನುರ್ವೇದೋ ಧನುರ್ಧರಃ ॥೨೭॥

೧೩೫. ಅಧ್ಯಾತ್ಮಯೋಗನಿಲಯಃ (1) ಆತ್ಮವಿಷಯಕವಾದ ಯೋಗಕ್ಕೆ * ಮುಖ್ಯಾಶ್ರಯಭೂತನು ೧೩೬ ಸುಮನಾಃ (2) ಭಕ್ತರಲ್ಲಿ ಅನುಗ್ರಹಯುಕ್ತವಾದ ಮನಸ್ಸುಳ್ಳವನು. ಅಥವಾ, (3) ಪ್ರಾಜ್ಞಶ್ರೇಷ್ಠನಾದವನು ೧೩೭ ಲಕ್ಷ್ಮಣಾಗ್ರಜಃ (4) ಲಕ್ಷ್ಮಣನಿಗೆ ಅಣ್ಣನು. ೧೩೮ ಅನನ್ತದೃಷ್ಟಿಃ (5) ಅಪರಿಮಿತವಾದ ದೃಷ್ಟಿಯುಳ್ಳವನು ಅಥವಾ, ನಾಶರಹಿತವಾದ ಜ್ಞಾನವುಳ್ಳವನು ೧೩೯ ಅನನ್ದಃ (6) ನಿತ್ಯಾನಂದಸ್ವರೂಪನು ಅಥವಾ, (7) ತನ್ನ ಭಕ್ತರನ್ನು ಆನಂದಪಡಿಸತಕ್ಕವನು ೧೪೦ ಧನುರ್ವೇದಃ (8) ಧನುರ್ವಿದ್ಯೆಯನ್ನು ಚೆನ್ನಾಗಿಬಲ್ಲವನು ಅಥವಾ, (9) ಧನುರ್ವೇದಸ್ವರೂಪನು ೧೪೧ ಧನುರ್ಧರಃ (10) ಧನುಸ್ಸನ್ನು ಧರಿಸಿರತಕ್ಕವನು ॥೨೭॥

(1) ಆತ್ಮನಿ ಅಧ್ಯಾತ್ಮ, ಅಧ್ಯಾತ್ಮ ಯೋಗಃ, ತಸ್ಯ ನಿಲಯಃ (2) ಶೋಭನಂ ಮನಃ ಯಸ್ಯ ಸಃ (3) ಸುಷ್ಠು ಮನ್ಯತೇ ಇತಿ ಸುಮನಾಃ (4) ಲಕ್ಷ್ಮಣಸ್ಯ ಅಗ್ರಜಃ (5) ಅನನ್ತಾ ದೃಷ್ಟಿಃ ಯಸ್ಯ ಸಃ (6) ಆನನ್ದತಿ ಇತಿ ಆನನ್ದಃ (7) ಆನನ್ದಯತಿ ಇತಿ ಆನನ್ದಃ (8) ಧನುಃ ವೇತ್ತಿ ಇತಿ ಧನುರ್ವೇದಃ (9) ಧನುಷಃ ವೇದಃ. (10) ಧನುಷಃ ಧರಃ.

* 'ಯೋಗಶ್ಚಿತ್ತವೃತ್ತಿನಿರೋಧಃ' ಚಿತ್ತವೃತ್ತಿಯನ್ನು ನಿರೋಧಿಸುವುದಕ್ಕೆ ಯೋಗವೆಂದು ಹೆಸರು ಎಂಬುದಾಗಿ ಯೋಗಸೂತ್ರವು ಹೇಳುವುದು ಪ್ರಾಣೇನ್ದ್ರಿಯಾಣಿ ಸರ್ವಾಣಿ ನಿಗೃಹ್ಯ ಮನಸಾ ಸಹ। ಏಕತ್ವಭಾವನಾ ಯೋಗಃ ಕ್ಷೇತ್ರಜ್ಞಪರಮಾತ್ಮನೋಃ ॥ ಸಮಸ್ತವಾದ ಪ್ರಾಣಗಳನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಿ ಜೀವಾತ್ಮಪರಮಾತ್ಮರಿಗೆ ಅಭೇದಭಾವನೆಮಾಡುವುದಕ್ಕೆ ಯೋಗವೆಂದು ಶಂಜ್ಞೆ ಎಂಬುದಾಗಿ ಶ್ರೀಶಂಕರಭಗವತ್ಪಾದಾಚಾರ್ಯರು ಅಪ್ಪಣೆಕೊಟ್ಟಿರುವರು ಹೀಗೆ ಸಮಸ್ತರೂ ಮಾಡುವ ಯೋಗಕ್ಕೆಲ್ಲ ಈ ಸ್ವಾಮಿಯು ಮುಖ್ಯವಿಷಯನೆಂದು ಭಾವವು

ಮೂ॥ ಗುಣಾಕರೋ ಗುಣಶ್ರೇಷ್ಠಃ ಸಚ್ಚಿದಾನನ್ದವಿಗ್ರಹಃ ।
ಅಭಿವಾದ್ಯೋ ಮಹಾಯೋಗೀ ವಿಶ್ವಕರ್ಮಾ ವಿಶಾರದಃ ॥೨೮॥

೧೪೨ ಗುಣಾಕರಃ (1) ಅನಂತಕಲ್ಯಾಣಗುಣಗಣಗಳಿಗೆ ನಿಧಿಯಾದವನು ಅಥವಾ ಸತ್ವರಜಸ್ತಮೋಗುಣ * ಗಳಿಗೆ ಆಶ್ರಯಭೂತನಾದವನು ೧೪೩ ಗುಣಶ್ರೇಷ್ಠಃ (2) ಸದ್ಗುಣಗಳಿಂದ ಸರ್ವಶ್ರೇಷ್ಠನಾದವನು ೧೪೪ ಸಚ್ಚಿದಾನನ್ದವಿಗ್ರಹಃ (3) ಸತ್ಯಜ್ಞಾನಾನಂದ ಶರೀರನಾದವನು ೧೪೫ ಅಭಿವಾದ್ಯಃ (4) ಸಕಲಲೋಕದಿಂದಲೂ ನಮಸ್ಕರಿಸಲ್ಪಡುವುದಕ್ಕೆ ಯೋಗ್ಯನಾದವನು ೧೪೬ ಮಹಾಯೋಗೀ (5) ಪ್ರಶಸ್ತವಾದ ಯೋಗವುಳ್ಳವನು. ೧೪೭. ವಿಶ್ವಕರ್ಮಾ (6) ಸಮಸ್ತವಾದ ಕರ್ಮವೂ ಉಳ್ಳವನು ಅಥವಾ, ಲೋಕಶಿಕ್ಷಾರ್ಥವಾಗಿ ಯಜ್ಞಾದಿಸಮಸ್ತ ಕರ್ಮಗಳೂ ಉಳ್ಳವನು ಅಥವಾ, ತಾನು ಮಾಡತಕ್ಕ ಸಮಸ್ತವ್ಯಾಪಾರವೂ ವಿಚಿತ್ರವಾಗಿ ಉಳ್ಳವನು. ಅಥವಾ (7) ಪ್ರಪಂಚರಚನೆಯೇ ಕರ್ಮವಾಗಿ ಉಳ್ಳವನು ೧೪೮. ವಿಶಾರದಃ (8) ಸಮಸ್ತಕರ್ಮಗಳಲ್ಲಿಯೂ ಪ್ರತಿಭಾಶಾಲಿಯಾದವನು ಅಥವಾ, (9) ಪದೇ ಪದೇ ನೋಡುತಿರುವವರಿಗೂ ಕೂಡ ವಿಶೇಷತಃ ಹೊಸಹೊಸಬನಾಗಿಯೇ ಕಾಣಿಸತಕ್ಕವನು.

(1) ಗುಣಾನಾಂ ಆಕರಃ. (2) ಗುಣೈಃ ಶ್ರೇಷ್ಠಃ (3) ಸಚ್ಚ ಚಿಚ್ಚ ಆನನ್ದಶ್ಚ ಸಚ್ಚಿದಾನನ್ದಾಃ, ಸಚ್ಚಿದಾನನ್ದಾಃ ವಿಗ್ರಹಃ ಯಸ್ಯ ಸಃ. (4) ಅಭಿವಾದಯಿತುಂ ಯೋಗ್ಯಃ(5) ಮಹಾಂಶ್ಚಾಸೌ ಯೋಗಶ್ಚ ಮಹಾ

ಯೋಗಃ ಅಸ್ಯ ಅಸ್ತಿ ಇತಿ ಮಹಾಯೋಗೀ (6) ವಿಶ್ವಾನಿ ಕರ್ಮಾಣಿ ಯಸ್ಯ ಸಃ (7) ವಿಶ್ವಮೇವ ಕರ್ಮ ಯಸ್ಯ ಸಃ (8) ವಿವರೀತಃ ಶಾರದಃ ವಿಶಾರದಃ (9) ವಿಶೇಷೇಷಣ ಶಾರದಃ ವಿಶಾರದಃ

* ವಸ್ತುತಃ ಮಾಯೆಯೇ ಗುಣಮಯಿಯಾಗಿಯೂ ಆತ್ಮನು ನಿರ್ಗುಣನಾಗಿಯೂ ಇದ್ದರೂ, ಮಾಯಾನಿಷ್ಠವಾದ ಗುಣತ್ರಯಾತ್ಮಕತ್ವವು ಆತ್ಮನಲ್ಲಿ ಔಪಾಧಿಕವಾಗಿ ಹೇಳಲ್ಪಡುವುದು

† ಯೋಗನೆಂದರೆ ಚಿತ್ತವೃತ್ತಿ ನಿರೋಧವೆಂದರ್ಥವು ಈ ಯೋಗವುಳ್ಳವನು ಯೋಗಿಯೆನ್ನಿಸಿಕೊಳ್ಳುವನು ಸಾಮಾನ್ಯರಾದ ಯೋಗಿಗಳಿಗೆಲ್ಲ ಚಿತ್ತವೃತ್ತಿಯು ಕದಾಚಿತ್ ಪ್ರಚ್ಯುತವಾಗಬಹುದು, ಇವನ ಚಿತ್ತವೃತ್ತಿಯೆಂದಿಗೂ ಪ್ರಚ್ಯುತವಾಗುವುದಿಲ್ಲವಾದಕಾರಣ, ಇವನು ಮಹಾಯೋಗಿಯನ್ನಿಸಿಕೊಳ್ಳುವನು

ಮೂ॥ ವಿನೀತಾತ್ಮಾ ವೀತರಾಗಃ ತಪಸ್ವೀಶೋ ಜನೇಶ್ವರಃ ।

ಕಲ್ಯಾಣಪ್ರಕೃತಿಃ ಕಲ್ಯಃ ಸರ್ವೇಶಃ ಸರ್ವಕಾಮದಃ ॥೮೯॥

೧೪೯ ವಿನೀತಾತ್ಮಾ (1) ದೊಡ್ಡವರಲ್ಲಿ ವಿನಯಯುಕ್ತವಾದ ಸ್ವಭಾವವುಳ್ಳವನು. ಅಥವಾ, ಜನ್ಮಾಗಿ ಶಿಕ್ಷಿತವಾದ ಮನಸ್ಸುಳ್ಳವನು ಅಥವಾ (2) ಗರುಡಪಕ್ಷಿಯಿಂದ ವಹಿಸಲ್ಪಡುವ ಶರೀರವುಳ್ಳವನು ೧೫೦ ವೀತರಾಗಃ (3) ವಿಷಯಾಭಿನಿವೇಶಶೂನ್ಯನಾದವನು ಅಥವಾ (4) ತನ್ನ ಭಕ್ತರಲ್ಲೆಲ್ಲ ಇರಿಸಲ್ಪಟ್ಟ ಅನುರಾಗವುಳ್ಳವನು ೧೫೧ ತಪಸ್ವೀಶಃ (5) ತಪಸ್ವಿಗಳಿಗೆಲ್ಲ ಒಡೆಯನಾದವನು ಅಥವಾ, (6) ತಪಸ್ವಿಯಾಗಿಯೂ ಸ್ವಾಮಿಯಾಗಿಯೂ * ಇರತಕ್ಕವನು ೧೫೨ ಜನೇಶ್ವರಃ (7) ಸಮಸ್ತಜನಗಳಿಗೂ ಒಡೆಯನಾದವನು ಅಥವಾ, (8) ಜನನಕ್ಕೆ ಅಧಿಪತಿಯಾದವನು † ೧೫೩ ಕಲ್ಯಾಣಪ್ರಕೃತಿಃ (9) ಮಂಗಳಸ್ವಭಾವನಾದವನು ಅಥವಾ, ಲೋಕಕ್ಕೆಲ್ಲ ಅಜ್ಞಾನಾವರಣವನ್ನುಂಟುಮಾಡತಕ್ಕುದಾಗಿದ್ದರೂ ತನ್ನ ವಿಷಯದಲ್ಲಿ ಶುಭರೂಪವಾಗಿರುವ ಮಾಯೆಯುಳ್ಳವನು ಅಥವಾ, (10) ಪ್ರಪಂಚಕ್ಕೆಲ್ಲ ಮಂಗಳವನ್ನುಂಟುಮಾಡುವುದೇ ಸ್ವಭಾವವಾಗಿ ಉಳ್ಳವನು ೧೫೪ ಕಲ್ಯಃ (11) ಸರ್ವಕಾರ್ಯದಕ್ಷನು ಅಥವಾ, (12) ಸಂಸಾರರೋಗಶೂನ್ಯನು ಅಥವಾ, (13) ತನ್ನ ಭಕ್ತರಿಗೆಲ್ಲ ಪ್ರಭಾತಪ್ರಾಯನಾಗಿ ಪ್ರಕಾಶಹೇತುವಾದವನು ಅಥವಾ, (14) ಸರ್ವರಿಗೂ ಹೃದಯದಲ್ಲಿ ಧ್ಯಾನಮಾಡಲು ಯೋಗ್ಯನಾದವನು ೧೫೫ ಸರ್ವೇಶಃ (15) ಸಮಸ್ತಕ್ಕೂ ಸ್ವಾಮಿಯಾದವನು ೧೫೬ ಸರ್ವಕಾಮದಃ (16) ಸಮಸ್ತವಾದ ಇಷ್ಟಾರ್ಥಗಳನ್ನೂ ಕೊಡತಕ್ಕವನು ॥೮೯॥

(1) ವಿನೀತಃ ಆತ್ಮಾ ಯಸ್ಯ ಸಃ (2) ವಿನಾ ನೀತಃ ವಿನೀತಃ, ವಿನೀತಃ ಆತ್ಮಾ ಯಸ್ಯ ಸಃ (3) ವೀತಃ ರಾಗ ಯಸ್ಮಾತ್ ಸಃ ಇಣ್ ಗತೌ ವಿಪೂರ್ವಕಾತ್ ಕ್ತಃ (4) ವೀತಃ ರಾಗಃ ಯೇನ ಸಃ ವೀ ಗತಿಪ್ರಜನಕಾನ್ತ್ಯಸನಖಾದನೇಷು ಅಸನಾರ್ಥಕಾತ್ ಕರ್ಮಣಿ ಕ್ತಃ (5) ತಪಸ್ವಿನಾಂ ಈಶಃ (6) ತಪಸ್ವೀ ಚಾಸೌ ಈಶಶ್ಚ (7) ಜನಾನಾಂ ಈಶ್ವರಃ (8) ಜನಸ್ಯ ಈಶ್ವರಃ (9) ಕಲ್ಯಾಣೀ ಪ್ರಕೃತಿಃ ಯಸ್ಯ ಸಃ (10) ಕಲ್ಯಾಣಂ ಪ್ರಕೃತಿಃ ಯಸ್ಯ ಸಃ (11) ಕಲಯತಿ ಇತಿ ಕಲ್ಯಃ (12) ಕಂ ಶಾಸು ಸಾಧುಃ ಕಲ್ಯಃ (13) ಕಲ್ಯಸದೃಶಃ ಕಲ್ಯಃ (14) ಕಲಯಿತುಂ ಯೋಗ್ಯಃ ಕಲ್ಯಃ (15) ಸರ್ವೇಷಾಂ ಈಶಃ (16) ಸರ್ವಕಾಮಾನ್ ದದಾತಿ ಇತಿ ಸರ್ವಕಾಮದಃ

* ಸರ್ವಲೋಕ ಮಹೇಶ್ವರನಾಗಿದ್ದರೂ ತಪಸ್ವಿಯಾಗಿದ್ದವನೆಂದು ಭಾವವು

† ಜನನವನ್ನು ತನ್ನ ವಶವಲ್ಲಿಟ್ಟುಕೊಂಡಿರತಕ್ಕವನು ಸ್ವೇಚ್ಛೆಯಿಂದ ಅವತಾರಮಾಡತಕ್ಕವನೆಂದು ಭಾವವು

ಮೂ॥ ಅಕ್ಷರಃ ಪುರುಷಃ ಸಾಕ್ಷೀ ಕೇಶವಃ ಪುರುಷೋತ್ತಮಃ ।
ಲೋಕಾಧ್ಯಕ್ಷೋ ಮಹಾಯೋಗೀ ವಿಭೀಷಣವರಪ್ರದಃ ॥೩೦॥

೧೫೭. ಅಕ್ಷರಃ (1) ಸಂಚಲಿಸದಿರತಕ್ಕವನು (ಸ್ಥಿರನಾದವನು) ಅಥವಾ, (2) ಸರ್ವತ್ರ ವ್ಯಾಪನಶೀಲನಾದವನು ೧೫೮. ಪುರುಷಃ (3) ಎಲ್ಲರಿಗಿಂತಲೂ * ಮೊದಲೇ ಇದ್ದವನು ಅಥವಾ, (4) ಸರ್ವರಿಗೂ † ಆಪ್ಯಾಯನಮಾಡತಕ್ಕವನು ೧೫೯. ಸಾಕ್ಷೀ (5) ಮಧ್ಯದಲ್ಲಿ ಯಾವ ವ್ಯವಧಾನವೂ ಇಲ್ಲದೆ ಸಮಸ್ತವನ್ನೂ ಸಾಕಲ್ಯಾತ್ತಾಗಿ ತಿಳಿಯತಕ್ಕವನು ೧೬೦. ಕೇಶವಃ (6) ಪ್ರಶಸ್ತವಾದ ಕೇಶಗಳುಳ್ಳವನು ಅಥವಾ (7) ಬ್ರಹ್ಮನು ಪುತ್ರನಾಗಿಯೂ ಶಿವನು ‡ ಪೌತ್ರನಾಗಿಯೂ ಉಳ್ಳವನು ಅಥವಾ, (8) ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳೂ ಅಧೀನರಾಗಿ ಉಳ್ಳವನು ೧೬೧. ಪುರುಷೋತ್ತಮ (9) ಪುರುಷರಲ್ಲೆಲ್ಲ ಶ್ರೇಷ್ಠನು ೧೬೨. ಲೋಕಾಧ್ಯಕ್ಷಃ (10) ಸಮಸ್ತ ಲೋಕಕ್ಕೂ ಸ್ವಾಮಿಯಾದವನು ೧೬೩. ಮಹಾಯೋಗೀ (11) ಅತಿಪ್ರಶಸ್ತವಾದ ಉಪಾಯಗಳುಳ್ಳವನು ೧೬೪. ವಿಭೀಷಣವರಪ್ರದಃ (12) ಭೀಷಣವಲ್ಲದ-ಅಂದರೆ ಅತಿ ಮಧುರವಾದ-ವರಗಳನ್ನು ಕೊಡತಕ್ಕವನು ಅಥವಾ, (13) ವಿಭೀಷಣನಿಗೆ ರಾಜ್ಯರೂಪವಾದ ವರವನ್ನು ಕೊಟ್ಟವನು ಅಥವಾ, ಇವನಿಗೆ ಶ್ರೀರಂಗನಾಥ ಮೂರ್ತಿಯೆಂಬ ಸರ್ವೋತ್ತಮವಸ್ತುವನ್ನು § ಕೊಟ್ಟವನು ॥೩೦॥

(1) ನ ಕ್ಷರತಿ ಇತಿ ಅಕ್ಷರಃ ಕ್ಷರ ಸಂಚಲನೇ. (2) ಅಶ್ನುತೇ ಇತಿ ಅಕ್ಷರಃ ಅಶೂ ವ್ಯಾಪ್ತೌ (3) ಪುರತಿ ಇತಿ ಪುರುಷಃ ಪುರ ಅಗ್ರಗಮನೇ (4) ಪೂರಯತಿ ಇತಿ ಪುರುಷಃ ಪೂರೀ ಆಪ್ಯಾಯನೇ (5) ಸಾಕ್ಷಾತ್ ದ್ರಷ್ಟಾ (6) ಪ್ರಶಸ್ತಾಃ ಕೇಶಾಃ ಅಸ್ಯ ಸನ್ತಿ ಇತಿ ಕೇಶವಃ, (7) ಕಶ್ಚ ಈಶಶ್ಚ ಕೇಶೌ, ಕೇಶೌ ಅಸ್ಯ ಸ್ತಃ ಇತಿ ಕೇಶವಃ (8) ಕಶ್ಚ ಅಶ್ಚ ಈಶಶ್ಚ ಕೇಶಾಃ, ಕೇಶಾಃ ಅಸ್ಯ ಸನ್ತಿ ಇತಿ ಕೇಶವಃ (9) ಪುರುಷೇಷು ಉತ್ತಮಃ (10) ಲೋಕಾನಾಂ ಅಧ್ಯಕ್ಷಃ (11) ಮಹಾಯೋಗಃ ಅಸ್ಮಿನ್ ಅಸ್ತಿ ಇತಿ ಮಹಾಯೋಗೀ (12) ವಿಭೀಷಣಾಶ್ಚ ತೇ ವರಾಶ್ಚ, ತಾನ್ ಪ್ರದದಾತಿ ಇತಿ ವಿಭೀಷಣವರಪ್ರದಃ (13) ವರಂ ಪ್ರದದಾತಿ ಇತಿ ವರಪ್ರದಃ, ವಿಭೀಷಣಾಯ ವರಪ್ರದಃ

* 'ಪೂರ್ವಮಂವಾಹವಿಹಾಸವಿತಿ, ತತ್ ಪುರುಷಸ್ಯ ಪುರುಷತ್ವಮ್' ಎಂದು ಶ್ರುತಿಯಿರುವುದು.

† 'ಪೂರಣಾತ್ ಸದನಾಚ್ಚೈವ ತತೋಽಸೌ ಪುರುಷೋತ್ತಮಃ' (ಮಹಾಭಾರತ)

‡ 'ಶಮ್ಭೋಃ ಪಿತಾಮಹೋ ಬ್ರಹ್ಮಪಿತಾ ಶಕ್ರಾದ್ಯಧಿಶ್ಚರಃ' (ಪದ್ಮಪುರಾಣ)

§ ಈ ವಿಷಯವು, ಶ್ರೀತತ್ವಸಂಗ್ರಹರಾಮಾಯಣದ ಯುದ್ಧಕಾಂಡದಲ್ಲಿಯೇ ಸ್ಪಷ್ಟವಾಗಿರುವುದು

ಮೂ॥ ಅನನ್ದವಿಗ್ರಹೋ ಜ್ಯೋತಿಃ ಹನೂಮತ್ಪ್ರಭುರವ್ಯಯಃ ।
ಭಾಜಿಷ್ಣುರ್ಭೋಜನಂ ಭೋಕ್ತಾ ಸತ್ಯವಾದೀ ಬಹುಶ್ರುತಃ ॥೩೧॥

೧೬೫. ಅನನ್ದವಿಗ್ರಹಃ. (1) ಆನಂದಮಯವಾದ ಶರೀರವುಳ್ಳವನು ಅಥವಾ, (2) ಸರ್ವರನ್ನೂ ಆನಂದಪಡಿಸತಕ್ಕ * ಶರೀರವುಳ್ಳವನು ೧೬೬. ಜ್ಯೋತಿಃ. (3) ಸ್ವಯಂಪ್ರಕಾಶಸ್ವರೂಪನಾದವನು ೧೬೭. ಹನೂಮತ್ಪ್ರಭುಃ. (4) ಭಕ್ತಾಗ್ರೇಸರನಾದ ಹನುಮಂತನಿಗೆ ಸ್ವಾಮಿಯಾದವನು ೧೬೮. ಅವ್ಯಯಃ (5) ಸಕಲ ಕಾಲದಲ್ಲಿಯೂ ಸಕಲ ದೇಶದಲ್ಲಿಯೂ ವಿಕಾರವಿಲ್ಲದೆ ಏಕರೀತಿಯಾಗಿರತಕ್ಕವನು. ೧೬೯. ಭಾಜಿಷ್ಣುಃ. (6) ಮಹಾಪ್ರಕಾಶಶೀಲನಾ

ದವನು ೧೬೦ ಭೋಜನಮ್ (7) ಮಾಯಾರೂಪದಿಂದ ಭೋಜ್ಯನಾಗತಕ್ಕವನು ೧೬೧. ಭೋಕ್ತಾ (8) ಪುರುಷರೂಪದಿಂದ ಭೋಗಕರ್ತೃವಾಗತಕ್ಕವನು ೧೬೨. ಸತ್ಯವಾದೀ (9) ಸತ್ಯವನ್ನೇ ನುಡಿಯತಕ್ಕವನು ಅಥವಾ, ಸತ್ಯವಸ್ತುವಾದ ಬ್ರಹ್ಮವನ್ನು ಮಹರ್ಷಿಗಳಿಗೆ ಪ್ರವಚನಮಾಡತಕ್ಕವನು ೧೬೩ ಬಹುಶ್ರುತಃ (10) ಬಹಳವಾದ ಶಾಸ್ತ್ರಜ್ಞಾನವುಳ್ಳವನು ಅಥವಾ, (11) ಸಮಸ್ತರಿಂದಲೂ ಬಹಳ ಸಲ ಕೇಳಲ್ಪಟ್ಟವನು ॥ ೪ ॥

(1) ಆನನ್ದಏವ ವಿಗ್ರಹಂ ಯಸ್ಯ ಸಃ (2) ಆನನ್ದಯತಿ ಇತಿ ಆನನ ಃ, ಆನನ್ದಃ ವಿಗ್ರಹಃ ಯಸ್ಯ ಸಃ (3) ದ್ಯೋತತೇ ಇತಿ ಜ್ಯೋತಿಃ (4) ಹನೂಮತಃ ಪ್ರಭುಃ (5) ನ ವ್ಯೇತಿ ಇತಿ ಅವ್ಯಯಃ (6) ಭ್ರಾಜತೇ ಇತಿ ಭ್ರಾಜಷ್ಣುಃ (7) ಭುಜ್ಯತೇ ಇತಿ ಭೋಜನಮ್ (8) ಭುಂಕ್ತೇ ಇತಿ ಭೋಕ್ತಾ (9) ಸತ್ಯಂ ವದತಿ ಇತಿ ಸತ್ಯವಾದೀ (10) ಬಹು ಶ್ರುತಂ ಯಸ್ಯ ಸಃ (11) ಬಹು ಯದಾ ತಥಾ ಶ್ರುತಃ ಬಹುಶ್ರುತಃ

* 'ಪುಂಸಾಂ ಮೋಹನರೂಪಾಯ' ಎಂದು ಲೋಕದಲ್ಲೆಲ್ಲ ಪ್ರಸಿದ್ಧವಾಗಿರುವ ವಿಶೇಷಣವು, ಶ್ರೀರಾಮನೊಬ್ಬನಿಗಲ್ಲದೆ ಮತ್ತಾರಿಗೂ ಯಾರಿಂದಲೂ ಇದುವರೆಗೆ ಎಲ್ಲಿಯೂ ಉಪಯೋಗಿಸಲ್ಪಟ್ಟಿಲ್ಲ.

ಮೂ॥ ಸುಖದಃ ಕಾರಣಂ ಕರ್ತಾ ಭವಬನ್ಧವಿಮೋಚಕಃ ।
ದೇವಚೂಡಾಮಣಿರ್ನೇತಾ ಬ್ರಹ್ಮಣ್ಯೋ ಬ್ರಹ್ಮವರ್ಧನಃ ॥೫॥

೧೬೪ ಸುಖದಃ (1) ಸದ್ವೃತ್ತರಾದವರಿಗೆ ಸುಖವನ್ನು ಕೊಡತಕ್ಕವನು ೧೬೫ ಕಾರಣಂ (2) ಜಗತ್ತಿಗೆ * ಉಪಾದಾನಕಾರಣಭೂತನಾದವನು ೧೬೬ ಕರ್ತಾ (3) ಸ್ವತಂತ್ರನಾಗಿ ಜಗತ್ಸೃಷ್ಟಿಕರ್ತನು ೧೬೭ ಭವಬನ್ಧವಿಮೋಚಕಃ (4) ಸಂಸಾರವೆಂಬ ಬನ್ಧವನ್ನು ಬಿಡಿಸತಕ್ಕವನು ಅಥವಾ, (5) ತನ್ನ ಭಕ್ತನಾದ ಈಶ್ವರನಿಗೆ ಬಂಧವಿಮೋಚನಮಾಡಿಸಿದವನು ೧೬೮ ದೇವಚೂಡಾಮಣಿಃ (6) ದೇವತಗಳೆಗೆಲ್ಲ ಕಿರೀಟಪ್ರಾಯನಾದವನು. ೧೬೯ ನೇತಾ (7) ಜಗತ್ತೆಂಬ ಯಂತ್ರವನ್ನು ನಡೆಯಿಸತಕ್ಕವನು ೧೭೦ ಬ್ರಹ್ಮಣ್ಯಃ (8) ವೇದಕ್ಕೆ ಅಥವಾ ಜ್ಞಾನಕ್ಕೆ ಹಿತನಾದವನು ೧೭೧ ಬ್ರಹ್ಮವರ್ಧನಃ (9) ಬ್ರಾಹ್ಮಣರನ್ನೂ ತಪಸ್ಸನ್ನೂ ಜ್ಞಾನವನ್ನೂ ಅಭಿವೃದ್ಧಿಪಡಿಸತಕ್ಕವನು † ॥೫॥

(1) ಸುಖಂ ದದಾತಿ ಇತಿ ಸುಖದಃ (2) ಕಾರ್ಯತೇ ಅನೇನ ಇತಿ ಕಾರಣಮ್ (3) ಕರೋತಿ ಇತಿ ಕರ್ತಾ (4) ಭವಸ್ಯ ಬನ್ಧಃ, ತಸ್ಯ ವಿಮೋಚಕಃ (5) ಬನ್ಧಂ ವಿಮೋಚಯತಿ ಇತಿ ಬನ್ಧವಿಮೋಚಕಃ, ಭವಸ್ಯ ಬನ್ಧನಿವಾರಕಃ (6) ದೇವಾನಾಂ ಚೂಡಾಮಣಿಃ (7) ನಯತಿ ಇತಿ ನೇತಾ (8) ಬ್ರಹ್ಮಣೇ ಹಿತಃ (9) ಬ್ರಹ್ಮ ವರ್ಧಯತಿ ಇತಿ ಬ್ರಹ್ಮವರ್ಧನಃ

* ಒಂದು ಘಟವು ಹುಟ್ಟಬೇಕಾದರೆ, ಮಣ್ಣೂ ಕುಂಬಾರನೂ ಚಕ್ರ ಮುಂತಾದುವುಗಳೂ ಬೇಕಾಗಿರುವುವಲ್ಲವೆ ' ಯಾವುದರಿಂದ ದ್ರವ್ಯವು ನಿಷ್ಪನ್ನವಾಗುತ್ತದೆಯೋ, ಅದಕ್ಕೆ ಉಪಾದಾನವೆಂದು ಹೆಸರು ಇಲ್ಲಿ ಘಟವು ಮಣ್ಣಿನಿಂದ ನಿಷ್ಪನ್ನವಾಗುವುದಾದಕಾರಣ, ಮಣ್ಣಿಗೇ ಉಪಾದಾನವೆಂದು ಸಂಜ್ಞೆಯು ಯಾವುದು ದ್ರವ್ಯವನು ಸ್ವತಂತ್ರವಾಗಿ ನಿರ್ಮಾಪಿಸುತದೆಯೋ, ಅದಕ್ಕೆ ನಿಮಿತ್ತಕಾರಣವೆಂದೂ ಕರ್ತೃವೆಂದೂ ಹೆಸರು ಇಲ್ಲಿ ಕುಂಬಾರನು ಸ್ವತಂತ್ರನಾಗಿ ಘಟವನ್ನು ಸೃಷ್ಟಿಸುವನಾದಕಾರಣ, ಅವನಿಗೆ ನಿಮಿತ್ತವೆಂದೂ ಕರ್ತೃವೆಂದೂ ಸಂಜ್ಞೆಯು ಇತರವಾದ ಸಾಮಗ್ರಿಗಳಿಗೆ ಕಾರಣವೆಂದು ಹೆಸರು ಇಲ್ಲಿ ದಂಡ ಚಕ್ರ ನೀರು ಮುಂತಾದುವುಗಳಿಗೆ ಕಾರಣವೆಂದು ಸಂಜ್ಞೆಯು ಇವರಂತೆಯೇ, ಪ್ರಪಂಚನಿಷ್ಪತ್ತಿ ವಿಷಯದಲ್ಲಿಯೂ ಪರ್ಯಾಲೋಚಿಸಬೇಕು ಪ್ರಪಂಚವೆಂಬ ಪದಾರ್ಥವು ಮೃತ್ತಿನಿಂದ ಘಟವುಂಟಾಗುವಂತೆ ಪರಮಾತ್ಮನಿಂದಲೇ ನಿಷ್ಪನ್ನವಾಗುವದಾರಣ, ಪ್ರಪಂಚಕ್ಕೆ ಪರಮಾತ್ಮನೇ ಉಪಾ

ಮೂ॥ ಸಂಸಾರತಾರಕೋ ರಾಮಃ ಸರ್ವದುಃಖವಿಮೋಕ್ಷಕೃತ್ ।
ವಿದ್ವತ್ತಮೋ ವಿಶ್ವಹರ್ತಾ ವಿಶ್ವಭರ್ತಾ ಚ ವಿಶ್ವಕೃತ್ ॥೩೫॥

೧೮೨ ಸಂಸಾರತಾರಕಃ (1) ಸಂಸಾರದ ದೆಸೆಯಿಂದ ಭಕ್ತರನ್ನು ದಾಟಿಸತಕ್ಕವನು ೧೮೩ ರಾಮಃ (2) ಪ್ರಪಂಚಕ್ಕೆ * ಸ್ವಾಮಿಯಾದವನು ೧೮೪ ಸರ್ವದುಃಖವಿಮೋಕ್ಷಕೃತ್ (3) ಸಮಸ್ತವಾದ ದುಃಖಗಳನ್ನೂ ತಪ್ಪಿಸತಕ್ಕವನು ಅಥವಾ, (4) ಸಮಸ್ತರಿಗೂ ಸಂಸಾರದುಃಖವನ್ನು ತಪ್ಪಿಸತಕ್ಕವನು ೧೮೫ ವಿದ್ವತ್ತಮಃ (5) ಸರ್ವದಾ ಸರ್ವವಸ್ತುಗಳನ್ನೂ ನಿರತಿಶಯವಾಗಿ ತಿಳಿದುಕೊಳ್ಳತಕ್ಕವನು ೧೮೬ ವಿಶ್ವಹರ್ತಾ (6) ಪ್ರಳಯಕಾಲದಲ್ಲಿ ರುದ್ರರೂಪದಿಂದ ಪ್ರಪಂಚವನ್ನೆಲ್ಲ ಸಂಹರಿಸತಕ್ಕವನು ೧೮೭ ವಿಶ್ವಭರ್ತಾ (7) ಸ್ಥಿತಿಕಾಲದಲ್ಲಿ ವಿಷ್ಣುರೂಪದಿಂದ ಪ್ರಪಂಚವನ್ನು ರಕ್ಷಿಸತಕ್ಕವನು ೧೮೮ ವಿಶ್ವಕೃತ್ (8) ಸೃಷ್ಟಿಕಾಲದಲ್ಲಿ ಬ್ರಹ್ಮರೂಪದಿಂದ ಪ್ರಪಂಚವನ್ನು ಉಂಟುಮಾಡತಕ್ಕವನು ॥೩೫॥

(1) ಸಂಸಾರಾತ್ ತಾರಯತಿ ಇತಿ ಸಂಸಾರತಾರಕಃ (2) ರಾಯಾಃ ಮಃ (3) ಸರ್ವಾಣಿ ಚ ತಾನಿ ದುಃಖಾನಿ ಚ, ಸರ್ವದುಃಖಾನಾಂ ವಿಮೋಕ್ಷಃ, ಸರ್ವದುಃಖವಿಮೋಕ್ಷಂ ಕರೋತಿ ಇತಿ ಸರ್ವದುಃಖ ವಿಮೋಕ್ಷಕೃತ್ (4) ದುಃಖಸ್ಯ ವಿಮೋಕ್ಷಃ, ದುಃಖವಿಮೋಕ್ಷಂ ಕರೋತಿ ಇತಿ ದುಃಖವಿಮೋಕ್ಷಕೃತ್, ಸರ್ವೇಷಾಂ ದುಃಖವಿಮೋಕ್ಷಕೃತ್ (5) ಅತಿಶಯೇನ ವಿದ್ವಾನ್ (6) ವಿಶ್ವಸ್ಯ ಹರ್ತಾ (7) ವಿಶ್ವಸ್ಯ ಭರ್ತಾ (8) ವಿಶ್ವಂ ಕರೋತಿ ಇತಿ ವಿಶ್ವಕೃತ್

* 'ರಾಶಬ್ದೋ ವಿಶ್ವವಚನೋ ಮಶ್ಚಾಪೀಶ್ವರವಾಚಕಃ, । ವಿಶ್ವಾನಾಮೀಶ್ವರೋ ಯೋ ಹಿ ತೇನ ರಾಮಃ ಪ್ರಕೀರ್ತಿತಃ ॥' (ಬ್ರಹ್ಮವೈವರ್ತಪುರಾಣ)

ಮೂ॥ ನಿತ್ಯೋ ನಿಯತಕಲ್ಯಾಣಃ ಸೀತಾಶೋಕವಿನಾಶನಃ ।
ಕಾಕುತ್ಸ್ಥಃ ಪುಂಡರೀಕಾಕ್ಷೋ ವಿಶ್ವಾಮಿತ್ರಭಯಾಪಹಃ ॥೩೬॥

೧೮೯ ನಿತ್ಯಃ (1) ಅನವರತವೂ ಇರತಕ್ಕವನು ೧೯೦ ನಿಯತಕಲ್ಯಾಣಃ (2) ಸ್ಥಿರವಾದ ಮಂಗಳವುಳ್ಳವನು ಅಥವಾ (3) ಶಾಶ್ವತಮಂಗಳಸ್ವರೂಪನಾದವನು ಅಥವಾ, (4) ನಿಗ್ರಹಿಸಲ್ಪಟ್ಟ ಪಾಪಶಕ್ತಿಯುಳ್ಳವನು ೧೯೧ ಸೀತಾಶೋಕವಿನಾಶನಃ (5) ಸೀತೆಯ ಶೋಕವನ್ನು ನಾಶಪಡಿಸಿದವನು ೧೯೨ ಕಾಕುತ್ಸ್ಥಃ (6) ಕಕುತ್ಸ್ಥಮಹಾರಾಜನ ವಂಶದಲ್ಲಿ ಹುಟ್ಟಿದವನು * ೧೯೩ ಪುಂಡರೀಕಾಕ್ಷಃ (7) ತಾವರೆಯೆಲೆಗಳಂತೆ ಕಣ್ಣುಗಳುಳ್ಳವನು ೧೯೪ ವಿಶ್ವಾಮಿತ್ರಭಯಾಪಹಃ (8) ವಿಶ್ವಾಮಿತ್ರಮಹರ್ಷಿಗಳಿಗೆ ರಾಕ್ಷಸರಿಂದ ಉಂಟಾಗಿದ್ದ

ಭಯವನ್ನು ತಪ್ಪಿಸಿದವನು ಅಥವಾ, (9) ಲೋಕಕಂಟಕರಾಗಿದ್ದ ರಾವಣಾದಿಗಳ ಭಯವನ್ನು ತಪ್ಪಿಸಿದವನು ಅಥವಾ, (10) ಸಮಸ್ತರಾದ ಶತ್ರುಗಳ ಭಯವನ್ನೂ ತಪ್ಪಿಸಿಕೊಂಡಿರತಕ್ಕವನು. ಅಥವಾ, (11) ಸಮಸ್ತರಿಗೂ ಕಾಮ ಕ್ರೋಧಾದಿ ಶತ್ರುಗಳ ಭಯವನ್ನು ತಪ್ಪಿಸತಕ್ಕವನು||೩೪||

(1) ನಿಯಮೇನ ಭವಃ ನಿತ್ಯಃ (2) ನಿಯತಂ ಕಲ್ಯಾಣಂ ಯಸ್ಮಿನ್ ಸಃ (3) ನಿಯತಂ ಯಥಾ ತಥಾ ಕಲ್ಯಾಣಃ ನಿಯತಕಲ್ಯಾಣಃ (4) ಕಲೇಃ ಅಣಃ ಕಲ್ಯಾಣಃ, (ಅಣ ಪ್ರಾಣನೇ, ದ್ಯೌವಾದಿಕಃ) ನಿಯತಃ ಕಲ್ಯಾಣಃ ಯೇನ ಸಃ (5) ಶೋಕಸ್ಯ ವಿನಾಶನಃ, ಸೀತಾಯಾಃ ಶೋಕವಿನಾಶನಃ (6) ಕಕುದಿ ತಿಷ್ಠತಿ ಇತಿ ಕಕುತ್ಸ್ಥಃ, ಕಕುತ್ಸ್ಥಸ್ಯ ಗೋತ್ರಾಪತ್ಯಂ ಪುಮಾನ್ (7) ಪುಣ್ಡರೀಕೇ ಇವ ಅಕ್ಷಿಣೀ ಯಸ್ಯ ಸಃ (8) ವಿಶ್ವಸ್ಯ ಮಿತ್ರಂ ವಿಶ್ವಾಮಿತ್ರಃ, ಭಯಂ ಅಪಹನ್ತಿ ಇತಿ ಭಯಾಪಹಃ, ವಿಶಾ ಮಿತ್ರಶ್ಚ ಭಯಾಪಹಃ (9) ವಿಶ್ವಸ್ಯ ಅಮಿತ್ರಾಃ, ತೇಭ್ಯಃ ಭಯಂ, ವಿಶ್ವಾಮಿತ್ರಭಯಂ ಅಪಹನ್ತಿ ಇತಿ ವಿಶ್ವಾಮಿತ್ರಭಯಾಪಹಃ (10) ವಿಶ್ವೇ ಚ ತೇ ಅಮಿತ್ರಾಶ್ಚ, ವಿಶಾ ಮಿತ್ರೇಭ್ಯಃ ಭಯಂ ವಿಶ್ವಾಮಿತ್ರಭಯಂ ಅಪಹನ್ತಿ ಇತಿ ವಿಶ್ವಾಮಿತ್ರಭಯಾಪಹಃ (11) ಅಮಿತ್ರೇಭ್ಯಃ ಭಯಂ, ಅಮಿತ್ರಭಯಂ ಅಪಹನ್ತಿ ಇತಿ ಅಮಿತ್ರಭಯಾಪಹಃ, ವಿಶ್ಲೇಷಾಂ ಅಮಿತ್ರಭಯಾಪಹಃ

* ಸೂರ್ಯವಂಶದಲ್ಲಿ ಪುರಂಜಯನೆಂದು ಪ್ರಸಿದ್ಧನಾಗಿದ್ದ ದೊರೆಯೊಬ್ಬನಿದ್ದನು ಅವನು, ದೇವತೆಗಳ ಸಹಾಯಾರ್ಥವಾಗಿ ರಾಕ್ಷಸರೊಡನೆ ಯುದ್ಧಮಾಡುವುದಕ್ಕೆ ಹೊಂಗಿದ್ದನು ಆಗ ದೇವೇಂದ್ರನು ತಾನು ವೃಷಭದೇಹವನ್ನು ಧರಿಸಿಕೊಂಡು ಈ ರಾಜನನ್ನು ತನ್ನ ಹಗಲಮೇಲೆ ಕುಳ್ಳಿರಿಸಿಕೊಂಡಿದ್ದನು ಆ ಯುದ್ಧದಲ್ಲಿ ಪುರಂಜಯನು ಜಯಶಾಲಿಯಾಗಿ ಹಿಂದಿರುಗಿಬಂದನು. ಅಂದಿನಿಂದ ಆ ಪುರಂಜಯನಿಗೆ ಕಕುತ್ಸ್ಥನೆಂದು ಹೆಸರುಂಟಾಯ್ತು. ಕಕುತ್ ಎಂದರೆ ಎತ್ತಿನ ಹಿರಿಳಿಗೆ ಹೆಸರು ಅದರಲ್ಲಿ ಕುಳಿತುಕೊಂಡಿದ್ದನಾದ್ದರಿಂದ, ಇವನಿಗೆ ಕಕುತ್ಸ್ಥನೆಂದು ಹೆಸರು ಬಂದಿತು

ಮೂ|| ಮಾರೀಚಮಥನೋ ಮಾನ್ಯೋ ವಿರಾಧವಧಪಣ್ಡಿತಃ ।
ದುಸ್ಸ್ವಪ್ನನಾಶನೋ ರಮ್ಯಃ ಕಿರೀಟೀ ತ್ರಿದಶಾಧಿಪಃ ||೩೫||

೧೯೫ ಮಾರೀಚಮಥನಃ (1) ಮಾರೀಚನೆಂಬ ರಾಕ್ಷಸನನ್ನು ಕೊಂದವನು ೧೯೬ ಮಾನ್ಯಃ (2) ಸಮಸ್ತರಿಗೂ ಮಾನನೀಯನು ೧೯೭ ವಿರಾಧವಧಪಣ್ಡಿತಃ ವಿರಾಧನೆಂಬ ರಾಕ್ಷಸನ ಕೊಲೆಯಲ್ಲಿ ಸಮರ್ಥನು ಅಥವಾ, (3) ಭಕ್ತರ ಅಪರಾಧಗಳನ್ನೆಲ್ಲ ಪರಿಹರಿಸುವುದರಲ್ಲಿಯೇ ಜ್ಞಾನವುಳ್ಳವನು (4) ೧೯೮ ದುಸ್ಸ್ವಪ್ನನಾಶನಃ (5) ಮುಂದೆ ಉಂಟಾಗುವ ಅನರ್ಥಗಳಿಗೆ ಸೂಚಕಗಳಾದ ಕೆಟ್ಟ ಸ್ವಪ್ನಗಳನ್ನು ನಾಶಪಡಿಸತಕ್ಕವನು ಅಥವಾ, ಈ ಸಂಸಾರರೂಪವಾದ ಕೆಟ್ಟ ಸ್ವಪ್ನವನ್ನು ನಾಶಪಡಿಸತಕ್ಕವನು ೧೯೯ ರಮ್ಯಃ (6) ಸರ್ವಲೋಕಮನೋಹರನಾದವನು ೨೦೦ ಕಿರೀಟೀ (7) ರತ್ನಮಯವಾದ ಕಿರೀಟವುಳ್ಳವನು ೨೦೧ ತ್ರಿದಶಾಧಿಪಃ (8) ದೇವತೆಗಳಿಗೆ * ಅಧಿಪತಿಯಾದವನು ಅಥವಾ, (9) ಜಾಗ್ರತ್ ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ಸ್ವಾಧೀನಪಡಿಸಿಕೊಂಡಿರತಕ್ಕವನು ||೩೫||

(1) ಮಾರಿಂಚಂ ಮಥ್ನಾತಿ ಇತಿ ಮಾರೀಚಮಥನಃ (2) ಮಾನಯಿತುಂ ಯೋಗ್ಯಃ (3) ವಿರಾಧಸ್ಯ ವಧಃ, ವಿರಾಧವಧೇ ಪಣ್ಡಿತಃ (4) ವಿರಾಧಾನಾಂ ವಧಃ, ತಸ್ಮಿನ್ ಪಣ್ಡಿತಃ (5) ದುಸ್ಸ್ವಪ್ನಂ ನಾಶಯತಿ ಇತಿ ದುಸ್ಸ್ವಪ್ನನಾಶನಃ (6) ರನ್ತುರ ಯೋಗ್ಯಃ ರಮ್ಯಃ (7) ಪ್ರಶಸ್ತಃ ಕಿರೀಟಃ ಅಸ್ಯ ಅಸ್ತಿ ಇತಿ ಕಿರೀಟೀ (8) ತಿಸ್ರಃ ದಶಾಃ ಯೇಷಾಂ ತೇ, ತ್ರಿದಶಾನಾಂ ಅಧಿಪಃ (9) ತಿಸ್ರಃ ದಶಾಃ ತ್ರಿದಶಾಃ, ತ್ರಿದಶಾನಾಂ ಅಧಿಪಃ,

* ಬಾಲ್ಯ ಯೌವನ ಕೌಮಾರ ವಾರ್ಧಕಗಳೆಂಬ ನಾಲ್ಕು ಅವಸ್ಥೆಗಳೂ ಸಾಮಾನ್ಯವಾಗಿ ಸಕಲ ಪ್ರಾಣಿಗಳಿಗೂ ಉಂಟಷ್ಟೆ ; ದೇವತೆಗಳಿಗಾದರೋ, ವಾರ್ಧಕವಿಲ್ಲ, ಇದರಿಂದಲೇ ಅವರಿಗೆ ನಿರ್ಜರರೆಂದು ಹೆಸರಿರುವುದು ಉಳಿದ ಬಾಲ್ಯ ಯೌವನ ಕೌಮಾರಗಳೆಂಬ ಮೂರು ಅವಸ್ಥೆಗಳು ಮಾತ್ರವೇ ಇವರಿಗಿರುವಕಾರಣ, ಇವರನ್ನು ತ್ರಿದಶರೆಂದು ಕರೆಯುವರು

ಮೂ॥ ಮಹಾಧನುರ್ಮಹಾಕಾಯೋ ಭೀಮೋ ಭೀಮಪರಾಕ್ರಮಃ ।
ತತ್ತ್ವಸ್ವರೂಪೀ ತತ್ತ್ವಜ್ಞಃ ತತ್ತ್ವವಾದೀ ಸುವಿಕ್ರಮಃ ॥೩೬॥

೨೦೨ ಮಹಾಧನುಃ (1) ಅತಿಶ್ರೇಷ್ಠವಾದ ಧನುಸ್ಸುಳ್ಳವನು ೨೦೩ ಮಹಾಕಾಯಃ (2) ಅತಿಶ್ರೇಷ್ಠವಾದ (ಅಪ್ರಾಕೃತ-ಅಥವಾ ವಿಶ್ವವ್ಯಾಪಿ) ಶರೀರವುಳ್ಳವನು ೨೦೪ ಭೀಮಃ (3) ಸಮಸ್ತರಿಗೂ * ಭಯಹೇತುವಾದವನು ೨೧ಥವಾ, † ರುದ್ರಸ್ವರೂಪವನು ೨೦೫ ಭೀಮಪರಾಕ್ರಮಃ (4) ಶತ್ರುಗಳಿಗೆ ಭಯಂಕರವಾದ ಪರಾಕ್ರಮವುಳ್ಳವನು ೨೦೬ ತತ್ತ್ವ ಸ್ವರೂಪೀ (5) ತತ್ತ್ವಗಳೇ ಸ್ವರೂಪವಾಗಿ ಉಳ್ಳವನು ಅಥವಾ, ಪರಮಾರ್ಥಸತ್ಯವಾದ ಬ್ರಹ್ಮ ರೂಪನಾದವನು ೨೦೭ ತತ್ತ್ವಜ್ಞಃ (6) ಪದಾರ್ಥಗಳ ಯಾಥಾರ್ಥ್ಯವನ್ನು ಬಲ್ಲವನು ಅಥವಾ, ಸ್ವಸ್ವರೂಪವನ್ನು ಒಲ್ಲವನು ೨೦೮ ತತ್ತ್ವವಾದೀ (7) ವಾಸ್ತವ್ಯವಾದ ವಿಷಯ ವನ್ನು ಉಪದೇಶಿಸತಕ್ಕವನು ೨೦೯ ಸುವಿಕ್ರಮಃ (8) ಅತ್ಯುತ್ತಮವಾದ ಪರಾಕ್ರಮವು ಳ್ಳವನು ॥೩೬॥

(1) ಮಹತ್ ಧನುಃ ಯಸ್ಯ ಸಃ (2) ಮಹಾನ್ ಕಾಯಃ ಯಸ್ಯ ಸಃ, (3) ಬಿಭೇತಿ ಅಸ್ಮಾತ್ ಇತಿ ಭೀಮಃ (4) ಭೀಮಃ ಪರಾಕ್ರಮಃ ಯಸ್ಯ ಸಃ (5) ತತ್ತ್ವಸ್ವರೂಪಂ ಅಸ್ಯ ಅಸ್ತಿ ಇತಿ ತತ್ತ್ವಸ್ವರೂಪೀ (6) ತತ್ತ್ವಂ ಜಾನಾತಿ ಇತಿ ತತ್ತ್ವಜ್ಞಃ, (7) ತತ್ತ್ವಂ ವದತಿ ಇತಿ ತತ್ತ್ವವಾದೀ (8) ಶೋಭನಃ ವಿಕ್ರಮಃ ಯಸ್ಯ ಸಃ,

* ಪರಮೇಶ್ವರನ ಭಯದಿಂದಲೇ ಸಮಸ್ತ ಜಗದ್ವ್ಯಾಪಾರವೂ ಕ್ರಮವಾಗಿ ನಡೆಯುತಿರುವುದೆಂದೂ, ಅದಿಲ್ಲದಿದ್ದರೆ ಪ್ರಪಂಚವೆಲ್ಲ ಹಾಳಾಗುವುದೆಂದೂ ಭಾವವು ‘ಭೀಷಾಸ್ಮಾದ್ವಾತಃ ಪವತೇ’ ಇತ್ಯಾದಿ ಶ್ರುತಿಯೂ ಇದೇ ಅರ್ಥವನ್ನು ಹೇಳುತಿರುವುದು ಇಲ್ಲಿ ‘ಅಭೀಮಃ,’ ಎಂದು ಬೇಕಾದರೂ ಪದಚ್ಛೇದವಾಗಬಹುದು ಆಗ, ಸನ್ಮಾರ್ಗಗಾಮಿಗಳಿಗೆ ಅಭಯಂಕರನಾದವನೆಂದು ಅರ್ಥವಾಗುವುದು

† ‘ಭೀಮಃ’ ಎಂದು ಈಶ್ವರನಿಗೂ ಹೆಸರುಂಟು ವೈಮಕೋಶೋ ಭವೋ ಭೀಮಃ, (ಅಮರಕೋಶ)

ಮೂ॥ ಭೂತಾತ್ಮಾ ಭೂತಕೃತ್ ಸ್ವಾಮೀ ಕಾಲಜ್ಞಾನೀ ಮಹಾವಟುಃ ।
ಅನಿರ್ವಿಣ್ಣೋ ಗುಣಗ್ರಾಹೀ ನಿಷ್ಕಳಶ್ಚ ಕಳಶ್ಚಹಾ ॥೩೭॥

೨೧೦ ಭೂತಾತ್ಮಾ (1) ಭೂತಗಳಿಗೆಲ್ಲ ಆತ್ಮನಾದವನು ಅಥವಾ, (2) ಯಥಾರ್ಥ ಭೂತನಾದ ಆತ್ಮನು ೨೧೧ ಭೂತಕೃತ್ (3) ಬ್ರಹ್ಮರೂಪದಿಂದ ಭೂತಗಳನ್ನು ಸೃಜಿಸತಕ್ಕ ವನು ಅಥವಾ, (4) ರುದ್ರರೂಪದಿಂದ ಭೂತಗಳನ್ನು ಸಂಪರಿಸತಕ್ಕವನು ೨೧೨ ಸ್ವಾಮೀ (5) ಸಮಸ್ತಲೋಕವೂ ತನ್ನದಾಗಿ ಉಳ್ಳವನು ೨೧೩ ಕಾಲಜ್ಞಾನೀ (6) ಕಾಲತ್ರಯಸ್ವ ರೂಪವನ್ನೂ ಚೆನ್ನಾಗಿ ಅರಿತಿರತಕ್ಕವರು ೨೧೪ ಮಹಾವಟುಃ (7) ವಾಮನಾವತಾರವಾಡಿ ಅತ್ಯುತ್ತಮವಾದ ಬ್ರಹ್ಮಚರ್ಯವನ್ನು ನಡೆಸಿದವನು ೨೧೫ ಅನಿರ್ವಿಣ್ಣಃ (8) ಅವಾಪ್ತ ಸಮಸ್ತ ಕಾಮನಾಗಿರುವುದರಿಂದ ತನಗೆ ಇದು ಸಿಕ್ಕಲಿಲ್ಲವೆಂಬ ನಿರ್ವೇದವಿಲ್ಲದವನು. ೨೧೬ ಅಥವಾ, ತಾನು

ಮಾಡುವ ಪ್ರಯತ್ನವು ನಿಷ್ಫಲವಾಗುವುದೆಂದು ತಿಳಿದು ಪ್ರಯತ್ನಶೂನ್ಯನಾಗತಕ್ಕವನಿಗೆ ನಿರ್ವಿಣ್ಣನೆಂದು ಹೆಸರು, ಹೀಗೆ ನಿರ್ವಿಣ್ಣನಾಗದೆ ಪ್ರಜಾಪಾಲನರೂಪವಾದ ಕಾರ್ಯವನ್ನು ಅವಿಚ್ಛಿನ್ನವಾಗಿ ಮಾಡತಕ್ಕವನು ೨೧೬ ಗುಣಗ್ರಾಹೀ (9) ತನ್ನ ಭಕ್ತರಲ್ಲಿ ಗುಣಗಳನ್ನು ಮಾತ್ರವೇ ಗ್ರಹಿಸತಕ್ಕವನು ಅಥವಾ, ಮಾಯಾನಿಷ್ಠವಾದ ಸತ್ವ ರಜ ಸ್ತಮೋಗುಣಗಳನ್ನು ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗಾಗಿ ಸ್ವೀಕರಿಸತಕ್ಕವನು ೨೧೭ ನಿಷ್ಕಳಬ್ಧಃ (10) ಸಕಲ ವಿಧವಾದ ದೋಷಗಳಿಂದಲೂ ಶೂನ್ಯನಾದವನು ಅಥವಾ, ಸುತರಾಂ ಲೋಕಾಪವಾದರಹಿತನಾದವನು ೨೧೮ ಕಳಙ್ಕಹಾ (11) ತಾನು ನಿಷ್ಕಳಂಕನಾಗಿರುವುದಲ್ಲದೆ, ತನ್ನ ಭಕ್ತರ ದೋಷಗಳನ್ನೂ ಅಪವಾದಗಳನ್ನೂ ಪರಿಹರಿಸತಕ್ಕವನು ॥೩೭॥

(1) ಭೂತಾನಾಂ ಆತ್ಮಾ (2) ಭೂತಶ್ಚಾಸೌ ಆತ್ಮಾ ಚ (3) ಭೂತಾನಿ ಕರೋತಿ ಇತಿ ಭೂತಕೃತ್ (4) ಭೂತಾನಿ ಕೃನ್ತತಿ ಇತಿ ಭೂತಕೃತ್ (5) ಸ್ವಂ ಅಸ್ಯ ಅಸ್ತಿ ಇತಿ ಸ್ವಾಮೀ (6) ಕಾಲಸ್ಯ ಜ್ಞಾನಂ ಕಾಲಜ್ಞಾನಮ್, ಕಾಲಜ್ಞಾನಂ ಅಸ್ಯ ಅಸ್ತಿ ಇತಿ ಕಾಲಜ್ಞಾನೀ (7) ಮಹಾಂಶ್ಚಾಸೌ ವಟುಶ್ಚ (8) ನ ನಿರ್ವಿಣ್ಣಃ (9) ಗುಣಾನ್ ಗೃಹ್ಣಾತಿ ಇತಿ ಗುಣಗ್ರಾಹೀ (10) ನಿರ್ಗತಾಃ ಕಳಙ್ಕಾಃ ಯಸ್ಮಾತ್ ಸಃ (11) ಕಳಂಕಾನ್ ಹನ್ತಿ ಇತಿ ಕಳಂಕಹಾ

ಮೂ॥ ಸ್ವಭಾವಭದ್ರಃ ಸರ್ವಜ್ಞಃ ಕೇಶವಃ ಸ್ಥಾಣುರೀಶ್ವರಃ ।
ಭೂತಾದಿಃ ಶಮ್ಭುರಾದಿತ್ಯಃ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೪೯॥

೨೧೯ ಸ್ವಭಾವಭದ್ರಃ (1) ಸ್ವಭಾವತಃ ಮಂಗಳಾತ್ಮಕನಾದವನು ಅಥವಾ, ತಾನಿರುವುದರಿಂದಲೇ ಪ್ರಪಂಚವಲ್ಲ ಸುಖವಾಗಿರುವಂತೆ ಮಾಡತಕ್ಕವನು ೨೨೦ ಸರ್ವಜ್ಞಃ (2) ಭೂತ ಭವಿಷ್ಯತ್ ವರ್ತಮಾನಕಾಲಿಕಗಳಾದ ಸಮಸ್ತವನ್ನೂ ತಿಳಿದಿರತಕ್ಕವನು ೨೨೧ ಕೇಶವಃ (3) ಕೇಶಿಯಂಬ ರಾಕ್ಷಸನನ್ನು *ಕೊಂದವನು ಅಥವಾ, (4) ಪ್ರಶಸ್ತವಾದ ಕಿರಣಗಳುಳ್ಳವನು. ಅಥವಾ, ಬ್ರಹ್ಮ ವಿಷ್ಣು ಶಿವರಂಬ ಶಕ್ತಿತ್ರಯವುಳ್ಳವನು ಅಥವಾ, (5) ಬ್ರಹ್ಮನೂ ಶಿವನೂ ಇವನ ಅಂಶದಿಂದ ಉತ್ಪನ್ನರಾಗಿರುವಕಾರಣ। ಕೇಶವನು ೨೨೨ ಸ್ಥಾಣುಃ (6) ನಿಶ್ಚಲನಾದವನು ೨೨೩ ಈಶ್ವರಃ (7) ನಿರುಪಾಧಿಕವಾದ ಸ್ವಾಮಿತ್ವವುಳ್ಳವನು ೨೨೪ ಭೂತಾದಿಃ (8) ಸಮಸ್ತ ಭೂತಗಳಿಗೂ ಆದಿಕಾರಣನಾದವನು ೨೨೫ ಶಮ್ಭುಃ (9) ಭಕ್ತರಿಗ ಸುಖವನ್ನು ಉಂಟುಮಾಡತಕ್ಕವನು ೨೨೬ ಆದಿತ್ಯಃ (10) ಸೂರ್ಯಮಂಡಲಮಧ್ಯಗತನಾದ ಹಿರಣ್ಮಯಪುರುಷನು. ಅಥವಾ, (11) ಅಖಿಂಡಭೂಮಂಡಲಕ್ಕೆ ಅಧಿಪತಿಯಾದವನು ಅಥವಾ, (12) ಒಬ್ಬನೇ ಸೂರ್ಯನು ಅನೇಕವಾದ ಜಲಪಾತ್ರಗಳಲ್ಲಿ ಪ್ರತಿಬಿಂಬಿತನಾಗಿ ಕಾಣುವಂತ ತಾನೊಬ್ಬನೇ ಅನೇಕ ಶರೀರಗಳಲ್ಲಿ ಭಿನ್ನಭಿನ್ನನಾಗಿ ಕಾಣಿಸತಕ್ಕವನು ೨೨೭ ಸ್ಥವಿಷ್ಠಃ (13) ಎಶ್ವರೂಪನಾದುದರಿಂದ ಅತಿಶಯವಾಗಿ ಸ್ಥೂಲನಾದವನು ೨೨೮ ಸ್ಥವಿರಃ (14) ಸಮಸ್ತ ಪದಾರ್ಥಗಳಿಗಿಂತಲೂ ಪ್ರಾಚೀನನಾದವನು ೨೨೯ ಧ್ರುವಃ ಶಾಶ್ವತನಾದವನು ॥೪೯॥

(1) ಸ್ವಭಾವೇನ ಭದ್ರಃ (2) ಸರ್ವಂ ಜಾನಾತಿ ಇತಿ ಸರ್ವಜ್ಞಃ. (3) ಕೇಶಿನಂ ಹತವಾನ್ ಕೇಶವಃ. (4) ಕೇಶಾಃ ಅಸ್ಯ ಸನ್ತಿ ಇತಿ ಕೇಶವಃ (5) ಕಶ್ಚ ಈಶಶ್ಚ ಕೇಶೌ, ಕೇಶೌ ಅಸ್ಯ ಸ್ತಃ ಇತಿ ಕೇಶವಃ (6) ತಿಷ್ಠತಿ ಇತಿ ಸ್ಥಾಣುಃ (7) ಈಷ್ಟೇ ಇತಿ ಈಶ್ವರಃ (8) ಭೂತಾನಾಂ ಆದಿಃ (9) ಶಂ ಭವತಿ (ಭಾವಯತಿ) ಇತಿ

ಶಮ್ಭುಃ (10) ಆದಿತ್ಯೇ ಭವಃ ಆದಿತ್ಯಃ (11) ಆದಿತೇಃ ಪತಿಃ (ಅಥವಾ ಅಯಂ) ಆದಿತ್ಯಃ (12) ಆದಿತ್ಯೇನ ಸದೃಶಃ ಆದಿತ್ಯಃ (13) ಅತಿಶಯೇನ ಸ್ಥೂಲಃ ಸ್ಥವಿಷ್ಠಃ (14) ತಿಷ್ಠತಿ ಇತಿ ಸ್ಥವಿರಃ (15) ಧ್ರುವತಿ ಇತಿ ಧ್ರುವಃ ಧ್ರು ಗತಿ ಸ್ಥೈರ್ಯಯೋಃ

* ' ಯಸ್ಮಾತ್ ತ್ವಯೈಷ ದುಷ್ಟಾತ್ಮಾ ಹತಃ ಕೇಶೀ ಜನಾರ್ದನ । ತಸ್ಮಾತ್ ಕೇಶವನಾಮ್ನಾ ತ್ವಂ ಲೋಕೇ ಖ್ಯಾತಿಂ ಗಮಿಷ್ಯಸಿ ॥ ,ಜನಾರ್ದನನೆ! ದುಷ್ಟಾತ್ಮನಾದ ಈ ಕೇಶಿಯೆಂಬ ರಾಕ್ಷಸನು ನಿನ್ನಿಂದ ಹತನಾದಕಾರಣ, ನೀನು ಲೋಕದಲ್ಲಿ ' ಕೇಶವ ' ಎಂಬ ಹೆರಿನಿಂದ ಪ್ರಸಿದ್ಧಿಪಡೆಯುವೆ (ವಿಷ್ಣುಪುರಾಣದಲ್ಲಿ ನಾರದವಚನ)

† ' ಕೋ ಬ್ರಹ್ಮೇತಿ ಸಮಾಖ್ಯಾತಃ ಈಶೋಹಂ ಸರ್ವದೇಹಿನಾಮ್ । ಆವಾಂ ತವಾಂಶಸಮ್ಭೂತೌ ತಸ್ಮಾತ್ ಕೇಶವನಾಮವಾನ್ ॥ ' ಬ್ರಹ್ಮನು ' ಕ ' ಎಂಬ ಶಬ್ದದಿಂದ ಹೇಳಲ್ಪಡುವನು ಸಮಸ್ತ ದೇಹಿಗಳಿಗೂ ಒಡೆಯನಾದ ನಾನು ' ಈಶ ' ಶಬ್ದದಿಂದ ಹೇಳಲ್ಪಡುವೆನು ನಾವಿಬ್ಬರೂ ನಿನ್ನ ಅಂಶದಿಂದ ಹುಟ್ಟಿರುವೆವು ಅದುಕಾರಣ, ನೀನು ' ಕೇಶವ ಎಂಬ ಹೆಸರುಳ್ಳವನಾದೆ (ಹರಿವಂಶ)

ಮೂ॥ ಕವಚೀ ಕುಣ್ಡಲೀ ಚಕ್ರೀ ಖಡ್ಗೀ ಭಕ್ತಜನಪ್ರಿಯಃ ।
ಅಮೃತ್ಯುರ್ಜನ್ಮರಹಿತಃ ಸರ್ವಜಿತ್ ಸರ್ವಗೋಚರಃ ॥೩೯॥

೨೩೦ ಕವಚೀ (1) ದಿವ್ಯಕವಚವುಳ್ಳವನು ೨೩೧ ಕುಣ್ಡಲೀ (2) ಸಾಂಖ್ಯಯೋಗಗಳೆಂಬ ಎರಡು ಕರ್ಣಕುಂಡಲಗಳುಳ್ಳವನು ೨೩೨ ಚಕ್ರೀ (3) ಮನಸ್ತತ್ವರೂಪವಾದ ಸುದರ್ಶನಚಕ್ರವನ್ನು * ಹಿಡಿದಿರತಕ್ಕವನು ೨೩೩ ಖಡ್ಗೀ (4) ವಿದ್ಯಾತತ್ವಾತ್ಮಕವಾದ ನಂದಕವೆಂಬ ದಿವ್ಯಖಡ್ಗವುಳ್ಳವನು ೨೩೪ ಭಕ್ತಜನಪ್ರಿಯಃ (5) ಭಕ್ತರಲ್ಲಿ ಬಹಳ ಪ್ರೀತಿಯುಳ್ಳವನು ೨೩೫ ಅಮೃತ್ಯುಃ (6) ಮೃತ್ಯುವಿಲ್ಲದವನು ೨೩೬ ಜನ್ಮರಹಿತಃ, (7) ಉತ್ಪತ್ತಿಶೂನ್ಯನಾದವನು ಅಥವಾ, (8) ಪ್ರಾಣಿಗಳಿಗೆ ಹಿತನಾದವನು ೨೩೭ ಸರ್ವಜಿತ್ (9) ಸಕಲವಿಧವಾದ ಸಾಂಸಾರಿಕಕ್ಲೇಶಗಳನ್ನೂ ಗೆದ್ದಿರತಕ್ಕವನು ಅಥವಾ, ಸಕಲಶತ್ರುಗಳನ್ನೂ ಗೆದ್ದವನು ಅಥವಾ, ಸಮಸ್ತರನ್ನೂ ಅತಿಶಯಿಸತಕ್ಕವನು ೨೩೮ ಸರ್ವಗೋಚರಃ (10) ಸಮಸ್ತ ಪ್ರಪಂಚವ್ಯಾಪಾರವೂ ಪ್ರತ್ಯಕ್ಷವಾಗಿ ಉಳ್ಳವನು ಅಥವಾ, (11) ಸಕಲಪದಾರ್ಥಗಳಲ್ಲಿಯೂ ಸನ್ನಿಹಿತನಾಗಿರತಕ್ಕವನು ॥೩೯॥

(1) ಕವಚಃ ಅಸ್ಯ ಅಸ್ತಿ ಇತಿ ಕವಚೀ, (2) ಕುಣ್ಡಲೇ ಅಸ್ಯ ಸ್ತಃ ಇತಿ ಕುಣ್ಡಲೀ (3) ಚಕ್ರಂ ಅಸ್ಯ ಅಸ್ತಿ ಇತಿ ಚಕ್ರೀ (4) ಖಡ್ಗಃ ಅಸ್ಯ ಅಸ್ತಿ ಇತಿ ಖಡ್ಗೀ. (5) ಭಕ್ತಜನಾಃ ಪ್ರಿಯಾಃ ಯಸ್ಯ ಸಃ (6) ಜನ್ಮನಾ ರಹಿತಃ (7) ಜನ್ಮ ರಾಸ್ತಿ ಇತಿ ಜನ್ಮರಾಃ, ರಾ ಆದಾನೇ, ಜನ್ಮರಾಶಾಂ ಹಿತಃ ಜನ್ಮರಹಿತಃ (8) ಸರ್ವಾನ್ ಜಯತಿ ಇತಿ ಸರ್ವಜಿತ್ (9) ಸರ್ವೇ ಗೋಚರಾಃ ಯಸ್ಯ ಸಃ (10) ಸರ್ವೇಷು ಗೋಚರಃ

* 'ಚಲಸ್ವರೂಪಮತ್ಯನ್ತಂ ಜವೇನಾನ್ತರಿತಾನಿಲಮ್ । ಚಕ್ರಸ್ವರೂಪಂ ಚ ಮನೋ ಧತ್ತೇ ವಿಷ್ಣೋಃ ಕರೇ ಸ್ಥಿತಮ್ ॥' (ವಿಷ್ಣುಪುರಾಣಂ)

ಮೂ॥ ಅನುತ್ತಮೋಪ್ರಮೇಯಾತ್ಮಾ ಸರ್ವಾದಿರ್ಗುಣಸಾಗರಃ ।
ಸಮಃ ಸಮಾತ್ಮಾ ಸಮಗೋ ಜಟಾಮಕುಟಮಣ್ಡಿತಃ ॥೪೦॥

೨೩೯. ಅನುತ್ತಮಃ (1) ಸರ್ವೋತ್ತಮನಾದವನು ೨೪೦. ಅಪ್ರಮೇಯಾತ್ಮಾ. (2) ಪ್ರಮಾಣಾತೀತವಾದ ಸ್ವರೂಪವುಳ್ಳವನು ೨೪೧ ಸರ್ವಾದಿಃ. (3) ಸಮಸ್ತ ಪದಾರ್ಥ

ಗಳಿಗೂ ಆದಿಭೂತನಾದವನು ೨೪೨ ಗುಣಸಾಗರಃ (4) ಸಮಸ್ತ ಸದ್ಗುಣಗಳಿಗೂ ಸಮುದ್ರಪ್ರಾಯನಾದವನು ೨೪೩ ಸಮಃ (5) ಸರ್ವತ್ರ ಸಮದೃಷ್ಟಿಯಾದವನು ಅಥವಾ, ಸುಖದುಃಖಾದಿದ್ವಂದ್ವಗಳಲ್ಲಿ ಏಕರೀತಿಯಾಗಿರತಕ್ಕವನು ಅಥವಾ, (6) ಜಗನ್ಮಾತೆಯಾದ ಶ್ರೀಲಕ್ಷ್ಮೀದೇವಿಯೊಡಗೂಡಿದವನು ೨೪೪ ಸಮಾತ್ಮಾ (7) ಸರ್ವತ್ರ ಏಕರೀತಿಯಾಗಿರುವ ಸ್ವಭಾವವುಳ್ಳವನು ಅಥವಾ, ಸರ್ವಸಮಯದಲ್ಲಿಯೂ ರಾಗದ್ವೇಷಾದಿ ಶೂನ್ಯವಾದ ಮನಸ್ಸುಳ್ಳವನು ಅಥವಾ, ಸರ್ವಸ್ವರೂಪನಾದವನು ೨೪೫ ಸಮಗಃ (8) ಸಕಲ ಪದಾರ್ಥಗಳಲ್ಲಿಯೂ ಏಕರೀತಿಯಾಗಿ ಅನುಪ್ರವೇಶಮಾಡಿರತಕ್ಕವನು ಅಥವಾ, (9) ಸಕಲ ಶಾಸ್ತ್ರವನ್ನೂ ಹೇಳಿರತಕ್ಕವನು. ೨೪೬ ಜಟಾಮಕುಟಮಂಡ್ಡಿತಃ (10) ಜಟೆಯಿಂದಲೂ ಕಿರೀಟದಿಂದಲೂ ಅಲಂಕೃತನಾದವನು * ॥೪೦॥

(1) ನಾಸ್ತ ಉತ್ತಮಃ ಯಸ್ಮಾತ್ ಸಃ (2) ಪ್ರಮಾತುಂ ಅಶಕ್ಯಃ ಅಪ್ರಮೇಯಃ, ಅಪ್ರಮೇಯಃ ಆತ್ಮಾ ಯಸ್ಯ ಸಃ (3) ಸರ್ವೇಷಾಂ ಆದಿಃ (4) ಗುಣಾನಾಂ ಸಾಗರಃ (5) ಸಮತಿ ಇತಿ ಸಮಃ ಷಮ ಅನೈಕಭ್ಯೇ (6) ಮಯಾ ಸಹ ವರ್ತತೆ ಇತಿ ಸಮಃ (7) ಸಮಃ ಆತ್ಮಾ ಯಸ್ಯ ಸಃ (8) ಸಮಂ ಗಚ್ಛತಿ ಇತಿ ಸಮಗಃ (9) ಸಮಂ ಗಾಯತಿ ಇತಿ ಸಮಸಃ ಗೈಶಬ್ದೇ (10) ಜಟಾಮಕುಟಾಭ್ಯಾಂ ಮಂಡ್ಡಿತಃ

* ಇವನು ಜಟೆಯನ್ನು ದರಿಸಿದ್ದರೂ ಕಿರೀಟವನ್ನು ದರಿಸಿದಂತೆಯೇ ಅಲಂಕಾರನಾಗಿತ್ತೆಂದೂ, ಮುಖದಲ್ಲಿಯೂ ಯಾವವಿದವಾದ ವಿಕಾರವೂ ಇರಲಿಲ್ಲವೆಂದೂ ಭಾವವು ಈ ವಿಷಯವನ್ನು ಶ್ರೀವಾಲ್ಮೀಕಿಮುನಿಗಳು ಬಹು ಚೆನ್ನಾಗಿ ವರ್ಣಿಸಿರುವರು

ಮೂ॥ ಅಜಯ್ಯಃ ಸರ್ವಭೂತಾತ್ಮಾ ವಿಷ್ವಕ್ಸೇನೋ ಮಹಾತಪಾಃ ।
ಲೋಕಾಧ್ಯಕ್ಷೋ ಮಹಾಬಾಹುಃ ಅಮೃತೋ ವೇದವಿತ್ತಮಃ ॥೪೧॥

೨೪೭ ಅಜಯ್ಯಃ (1) ಯಾರಿಂದಲೂ ಗೆಲ್ಲಲ್ಪಡಲು ಅಸಾಧ್ಯನು ೨೪೮ ಸರ್ವಭೂತಾತ್ಮಾ (2) ಸರ್ವಪ್ರಾಣಿಸ್ವರೂಪನಾದವನು ೨೪೯ ವಿಷ್ವಕ್ಸೇನಃ (3) ಇವನ ವೇಗದಿಂದಲೇ ಸಮಸ್ತ ಶತ್ರುಸೈನ್ಯವೂ ಭಯಪಟ್ಟು ಏಕ್ಕುಪಾಲಾಗಿ ಓಡಿಹೋಗುವುದರಿಂದ ಇವನು ವಿಷ್ವಕ್ಸೇನನು ೨೫೦ ಮಹಾತಪಾಃ (4) ಅತ್ಯಧಿಕವಾದ ತಪಸ್ಸು ಅಥವಾ ಜ್ಞಾನವುಳ್ಳವನು ೨೫೧ ಲೋಕಾಧ್ಯಕ್ಷಃ (5) ಸಮಸ್ತಲೋಕ ವ್ಯಾಪಾರವನ್ನೂ ಸಾಕ್ಷಾತ್ತಾಗಿ ತಿಳಿದುಕೊಳ್ಳತಕ್ಕವನು ೨೫೨ ಮಹಾಬಾಹುಃ (6) ಸರ್ವಲೋಕಸಂರಕ್ಷಣ ಸಮರ್ಥಗಳಾದ ತೋಳುಗಳುಳ್ಳವನು ೨೫೩ ಅಮೃತಃ (7) ಮರಣಶೂನ್ಯನು ಅಥವಾ, ಮೋಕ್ಷಹೇತುವಾದವನು. ೨೫೪ ವೇದವಿತ್ತಮಃ (8) ವೇದಾರ್ಥಗಳನ್ನೆಲ್ಲ ಅತಿಶಯವಾಗಿ ತಿಳಿದಿರತಕ್ಕವನು ಅಥವಾ, (9) ವೇದವಚನಗಳನ್ನೆಲ್ಲ ಹೊಂದತಕ್ಕವನು (ಶ್ರುತಿಗೋಚರನಾದವನು) ॥೪೧॥

(1) ಜೇತುಂ ಅಶಕ್ಯಃ (2) ಸರ್ವಭೂತಾನಿ ಆತ್ಮಾ ಯಸ್ಯ ಸಃ (3) ವಿಷೂಚೀ ಸೇನಾ ಯಸ್ಮಾತ್ ಸಃ. (4) ಮಹತ್ ತಪಃ ಯಸ್ಯ ಸಃ (5) ಲೋಕಾನ್ ಅಧ್ಯಕ್ಷಯತಿ ಇತಿ ಲೋಕಾಧ್ಯಕ್ಷಃ (6) ಮಹಾನ್ತಃ ಬಾಹವಃ ಯಸ್ಯ ಸಃ (7) ನಾಸ್ತಿ ಮೃತಂ ಯಸ್ಯ ಸಃ (8) ವೇದಾನ್ ವೇತ್ತಿ ಇತಿ ವೇದವಿತ್, ಅತಿಶಯೇನ ವೇದವಿತ್ ವೇದವಿತ್ತಮಃ (9) ವೇದಾನ್ ವಿನ್ದತಿ ಇತಿ ವೇದವಿತ್, ಅತಿಶಯೇನ ವೇದವಿತ್

ಮೂ॥ ಸಹಿಷ್ಣುಃ ಸದ್ಗತಿಃ ಸತ್ತಾ ವಿಶ್ವಯೋನಿರ್ಮಹಾದ್ಯುತಿಃ ।
ಅತೀನ್ದ್ರಿಯೋ ಜಿತಪ್ರಾಂಶುಃ ಉಪೇನ್ದ್ರೋ ವಾಮನೋ ಬಲೀ ॥೪೦॥

೨೫೫. ಸಹಿಷ್ಣುಃ (1) ತನ್ನ ಭಕ್ತರ ಅಪರಾಧಗಳನ್ನೆಲ್ಲ ಮನ್ನಿಸತಕ್ಕವನು ಅಥವಾ, ಯುದ್ದದಲ್ಲಿ ಶತ್ರುಗಳನ್ನು ಎದುರಿಸತಕ್ಕವನು ಅಥವಾ, ಶೀತೋಷ್ಣ ಸುಖದುಃಖಾದಿಗಳನ್ನು ಸಹಿಸತಕ್ಕವನು ೨೫೬ ಸದ್ಗತಿಃ (2) ಸತ್ಪುರುಷರಿಗೆ ಗತಿಯಾದವನು ಅಥವಾ, (3) ಉತ್ತಮವಾದ ಜ್ಞಾನವುಳ್ಳವನು ೨೫೭ ಸತ್ತಾ (4) ಸಜಾತೀಯಾದಿಭೇದರಹಿತಸ್ವಾನುಭವರೂಪನಾದವನು. ೨೫೮ ವಿಶ್ವಯೋನಿಃ (5) ಸಕಲ ಪ್ರಪಂಚಕ್ಕೂ ಉತ್ಪತ್ತಿಸ್ಥಾನಭೂತನಾದವನು ೨೫೯ ಮಹಾದ್ಯುತಿಃ (6) ಅತ್ಯಧಿಕವಾದ ಜ್ಞಾನಪ್ರಕಾಶವುಳ್ಳವನು ೨೬೦ ಅತೀನ್ದ್ರಿಯಃ (7) ಇಂದ್ರಿಯಗಳಿಗೆ ಗೋಚರನಾಗದಿರತಕ್ಕವನು ೨೬೧ ಜಿತಪ್ರಾಂಶುಃ (8) ಮದಶಾಲಿಗಳಾಗಿ ಉದ್ಧತರಾದವರನ್ನೆಲ್ಲ ಜಯಿ-ರತಕ್ಕವನು † ೨೬೨ ಉಪೇನ್ದ್ರಃ (9) ಎಲ್ಲರಿಗೂ ಮೇಲಾಗಿರತಕ್ಕ ‡ ಸ್ವಾಮಿಯು ಅಥವಾ, (10) ಇಂದ್ರನಿಗೆ ಅನುಜನಾಗಿ ಅವತಾರಮಾಡಿದವನು ೨೬೩ ವಾಮನಃ (11) ದುರಾತ್ಮರ ಮದವನ್ನು ಕಕ್ಕಿಸತಕ್ಕವನು ೨೬೪ ಬಲೀ (12) ಪ್ರಶಸ್ತವಾದ ಶಕ್ತಿ ಅಥವಾ ರೂಪ ಅಥವಾ ಸೇನೆಯುಳ್ಳವನು ॥೪೦॥

(1) ಸಹತೇ ಇತಿ ಸಹಿಷ್ಣುಃ (2) ಸತಾಂ ಗತಿಃ (3) ಸತೇ ಗತಿಃ ಯಸ್ಯ ಸಃ (4) ಸತಃ ಭಾವಃ ಸತ್ತಾ (5) ವಿಶ್ವಸ್ಯ ಯೋನಿಃ (6) ಮಹತೀ ದ್ಯುತಿಃ ಯಸ್ಯ ಸಃ (7) ಇನ್ದ್ರಿಯಾಣಿ ಅತಿಕ್ರಾನ್ತಃ (8) ಜಿತಾಃ ಪ್ರಾಂಶವಃ ಯೇನ ಸಃ (9) ಉಪರಿ ಇನ್ದ್ರಃ ಉಪೇನ್ದ್ರಃ (10) ಇನ್ದ್ರಂ ಉಪಗತಃ ಉಪೇನ್ದ್ರಃ. (11) ವಾಮಯತಿ ಇತಿ ವಾಮನಃ (12) ಪ್ರಶಸ್ತಂ ಬಲಂ ಅಸ್ಯ ಅಸ್ತಿ ಇತಿ ಬಲೀ.

† 'ಅತೀನ್ದ್ರಿಯೋಜಿತಪ್ರಾಂಶುಃ' ಎಂಬಲ್ಲಿ 'ಅಜಿತಪ್ರಾಂಶುಃ' ಎಂದೂ ಪದಚ್ಛೇದವಾಗಬಹುದು ಆಗ ಯಾರಿಂದಲೂ ಜಯಿಸಲ್ಪಡದಿರುವ ಮಹೋನ್ನತನೆಂದು ಅರ್ಥವು ಅಜಿತಶ್ಚಾಸೌ ಪ್ರಾಂಶುಶ್ಚ ಅಜಿತಪ್ರಾಂಶುಃ

‡ 'ಮಮೋಪರಿ ಯಥೇನ್ದ್ರಸ್ತ್ವಂ ಸ್ಥಾಪಿತೋ ಗೋಪತೀಶ್ವರಃ। ಉಪೇನ್ದ್ರ ಇತಿ ಕೃಷ್ಣ ತ್ವಾಂ ಗಾಸ್ಯನ್ತಿ ಭುವಿ ದೇವತಾಃ॥' (ಹರಿವಂಶ)

ಮೂ॥ ಧನುರ್ವೇದವಿಧಾತಾ ಚ ಬ್ರಹ್ಮಾ ವಿಷ್ಣುಶ್ಚ ಶಙ್ಕರಃ ।
ಹಂಸೋ ಮರೀಚಿರ್ಗೋವಿನ್ದೋ ರತ್ನಗರ್ಭೋ ಮಹಾದ್ಯುತಿಃ ॥೪೧॥

೨೬೫ ಧನುರ್ವೇದವಿಧಾತಾ (1) ಧನುರ್ವೇದವನ್ನು ಮಾಡಿದವನು ೨೬೬ ಬ್ರಹ್ಮಾ (2) ಜಗತ್ಕುಟುಂಬಿಬ್ರಹ್ಮರೂಪನಾಗಿ ಸೃಷ್ಟಿಮಾಡತಕ್ಕವನು ೨೬೭ ವಿಷ್ಣುಃ (3) ವಿಷ್ಣುರೂಪನಾಗಿ ರಕ್ಷಣೆಮಾಡತಕ್ಕವನು ೨೬೮ ಶಂಕರಃ (4)ಮಹೇಶ್ವರರೂಪನಾಗಿ ಲಯಮಾಡತಕ್ಕವನು. ೨೬೯ ಹಂಸಃ (5) ಸರ್ವಪದಾರ್ಥಗಳಲ್ಲಿಯೂ ಅನುಗತನಾಗಿರುವ ಪರಮಾತ್ಮನು ೨೭೦ ಮರೀಚಿಃ (6) ಸಕಲ ತೇಜಸ್ಸುಗಳಿಗೂ ತೇಜೋರೂಪನಾದವನು ಅಥವಾ, ಮರೀಚಿಯೆಂಬ ಮಹರ್ಷಿರೂಪನಾಗಿ ಅವತರಿಸಿದವನು. ೨೭೧ ಗೋವಿನ್ದಃ (7) ಭೂಮಿಯನ್ನು * ಸಂಪಾದಿಸಿದವನು ಅಥವಾ, † ಸಮಸ್ತ ವಾಕ್ಯಗಳಿಗೂ ಅಧಿಪತಿಯಾದವನು ಅಥವಾ, (8) ವೇದವಚನಗಳನ್ನು ‡ ಹೊಂದತಕ್ಕವನು (ಗೋಚರನಾದವನು) ೨೭೨ ರತ್ನಗರ್ಭಃ (9) ಉತ್ತಮವಾದ ವಸ್ತುಗಳೆಲ್ಲವೂ ಗರ್ಭದಲ್ಲಿ ಉಳ್ಳವನು ೨೭೩ ಮಹಾದ್ಯುತಿಃ (10) ಅತ್ಯುತ್ತಮವಾದ ಶರೀರಕಾಂತಿಯುಳ್ಳವನು ॥೪೧॥

(1) ಧನುರ್ವೇದಸ್ಯ ವಿಧಾತಾ (2) ಬೃಂಹತಿ ಇತಿ ಬ್ರಹ್ಮಾ. (3) ವೇವೇಷ್ಟಿ ಇತಿ ವಿಷ್ಣುಃ, ವಿಷ್ಲೃ ವ್ಯಾಪ್ತೌ (4) ಶಂ ಕರೋತಿ ಇತಿ ಶಂಕರಃ (5) ಹನ್ತಿ ಇತಿ ಹಂಸಃ ಹನ ಹಿಂಸಾ ಗತ್ಯೋಃ (6) ವಿಶ್ವಯನ್ತೇ ಅಸ್ಮಿನ್ ತಮಾಂಸಿ ಇತಿ ಮರೀಚಿಃ (7) ಗಾಂ ವಿನ್ದತಿ ಇತಿ ಗೋವಿನ್ದಃ (8) ಗಾಃ ವಿನ್ದತಿ ಇತಿ ಗೋವಿನ್ದಃ (9) ರತ್ನಾನಿ ಗರ್ಭೇ ಯಸ್ಯ ಸಃ (10) ಮಹತೀಂ ದ್ಯುತಿಃ ಯಸ್ಯ ಸಃ

*'ನಷ್ಟಾಂ ವೇದಗಣಾಂ ಪೂರ್ವಂ ಅವಿನ್ದಂ ವೈಗುಹಾಗತಾಮ್ ಗೋವಿನ್ದಇತಿ ತೇನಾಹಂ ವೈಷ್ಣವಾಗ್ರ್ಯಭಸುತಃ॥' (ಮಹಾಭಾರತ ಶಾಂತಿಪರ್ವ)

†'ಅಹಂ ಕಿಲೇಷ್ವಿಂ ದೈನಾನಾಂ ತ್ರಂ ಗವಾಮಿನ್ದ್ರತಾಂ ಗತಃ ಗೋವಿನ್ದಇತಿ ಲೋಕಾಸ್ತ್ವಂ ಸ್ತೋಷ್ಯನ್ತಿ ಭುವಿ ಶಾಶ್ವತಮ್॥' (ಹರಿವಂಶ)

‡ ಗವೇನಾ ತು ತಥಾ ವಾನೇಂ ತಾಂ ಚ ವಿನ್ದತಿ ಭಗವಾನ್ | ಗೋವಿನ್ದಸ್ತು ತತೋದೇವ ಮುನಿಭಿಃ ಕಥ್ಯತೇ ಭಗವಾನ್ ॥ (ಹರಿವಂಶ)

ಮೂ॥ ವ್ಯಾಸೋ ವಾಚಸ್ಪತಿಃ ಸರ್ವದೃಕ್ ಸರ್ವಾಸುರಮರ್ದನಃ ।
ಜಾನಕೀವಲ್ಲಭಃ ಪೂಜ್ಯಃ ಪ್ರಕಟಃ ಪ್ರೀತಿವರ್ಧನಃ ॥೪೪॥

೪೭೪ ವ್ಯಾಸಃ (1) ಸಮಸ್ತವನ್ನೂ ವಿಸ್ತಾರಪಡಿಸತಕ್ಕವನು ಅಥವಾ, ವೇದಗಳನ್ನು * ವಿಭಾಗಿಸಿದ ಬ್ರಹ್ಮನು ಅಥವಾ, † ವ್ಯಾಸಮಹರ್ಷಿರೂಪದಲ್ಲಿ ಅವತರಿಸಿದವನು ೪೭೫ ವಾಚಸ್ಪತಿಃ (2) ಸಮಸ್ತ ವಿದ್ಯೆಗೂ ಅಧಿಪತಿಯಾದವನು ೪೭೬ ಸರ್ವದೃಕ್ (3) ಸಮಸ್ತವನ್ನೂ ನೋಡತಕ್ಕವನು ಅಥವಾ, (4) ಸಮಸ್ತ ಜ್ಞಾನರೂಪನಾದವನು ಅಥವಾ, (5) ಸಮಸ್ತರಿಗೂ ದೃಷ್ಟಿರೂಪನಾದವನು ೪೭೭ ಸರ್ವಾಸುರಮರ್ದನ (6) ಸಮಸ್ತರಾದ ರಾಕ್ಷಸರನ್ನೂ ಸಂಹರಿಸಿದವನು ಅಥವಾ, (7) ಸಮಸ್ತ ಪ್ರಪಂಚವನ್ನೂ ತೋರ್ಪಡಿಸತಕ್ಕ ‡ ಮಾಯಾವಿಕ್ಷೇಪಶಕ್ತಿಯನ್ನು ನಾಶಪಡಿಸತಕ್ಕವನು ೪೭೮ ಜಾನಕೀವಲ್ಲಭಃ (8) ಜನಕ ರಾಜ ಪುತ್ರಿಯಾದ ಸೀತಾದೇವಿಗೆ ಪ್ರಾಣಪ್ರಿಯನಾದವನು ೪೭೯ ಪೂಜ್ಯಃ (9) ಸಮಸ್ತ ಲೋಕಕ್ಕೂ ಪೂಜಾರ್ಹನಾದವನು ೪೮೦ ಪ್ರಕಟಃ (10) ಸಮಸ್ತ ಭಕ್ತರಿಗೂ ಪ್ರತ್ಯಕ್ಷನಾಗತಕ್ಕವನು ೪೮೧ ಪ್ರೀತಿವರ್ಧನಃ (11) ಭಕ್ತರ ಆನಂದವನ್ನು ಹೆಚ್ಚಿಸತಕ್ಕವನು ॥೪೪॥

(1) ವ್ಯಸ್ಯತಿ ಇತಿ ವ್ಯಾಸಃ (2) ವಾಚಃ ಪತಿಃ (3) ಸರ್ವಾಣಿ ಪಶ್ಯತಿ ಇತಿ ಸರ್ವದೃಕ್ (4) ಸರ್ವಾಚ ಸಾ ದೃಕ್ ಚ (5) ಸರ್ವೇಷಾಂ ದೃಕ್ (6) ಸರ್ವೇ ಚ ತೇ ಅಸುರಾಶ್ಚ ಸರ್ವಾಸುರಾಃ, ಸರ್ವಾಸುರಾನ್ ಮರ್ದಯತಿ ಇತಿ ಸರ್ವಾಸುರಮರ್ದನಃ (7) ಸರ್ವಂ ಅಸ್ಯತಿ ಇತಿ ಸರ್ವಾಸುರಂ, ಸರ್ವಾಸುರಂ ಮರ್ದಯತಿ ಇತಿ ಸರ್ವಾಸುರಮರ್ದನಃ (8) ಜಾನಕ್ಯಾಃ ವಲ್ಲಭಃ (9) ಪೂಜಯಿತುಂ ಯೋಗ್ಯಃ (10) ಪ್ರಕಟಃ ಇತಿ ಪ್ರಕಟಃ (10) ಪ್ರೀತಿಂ ವರ್ಧಯತಿ ಇತಿ ಪ್ರೀತಿವರ್ಧನಃ

* ಪೂರ್ವದಲ್ಲಿ ಸಮಸ್ತ ವೇದಗಳೂ ಅಖಂಡರಾಶಿರೂಪವಾಗಿ ಬಿದ್ದಿದ್ದುವು ಜನರು ಅಲ್ಪಶಕ್ತಿಕರಾಗಿ ಅವಷ್ಟನ್ನೂ ಪಾರಮಾಡಲು ಅಸಮರ್ಥರಾಗುತ ಬಂದುದನ್ನು ಕಂಡು, ಬ್ರಹ್ಮನು ಮೊದಲು ವೇದಗಳನ್ನು ಋಗ್ವೇದ ಯಜುರ್ವೇದ ಸಾಮವೇದ ಅಥರ್ವವೇದಗಳೆಂದು ನಾಲ್ಕುವಿಭಾಗಮಾಡಿ, ಅಮೇಲೆ ಋಗ್ವೇದವನ್ನು ಇಪ್ಪತ್ತೊಂದು ಶಾಖೆಯಾಗಿಯೂ, ಯಜುರ್ವೇದವನ್ನು ನೂರೊಂದು ಶಾಖೆಯಾಗಿಯೂ, ಸಾಮವೇದವನ್ನು ಸಾವಿರಶಾಖೆಯಾಗಿಯೂ, ಅಥರ್ವವೇದವನ್ನು ಒಂಭತ್ತುಶಾಖೆಯಾಗಿಯೂ ವಿಂಗಡಿಸಿದನೆಂದು, ಪುರಾಣಗಳಲ್ಲಿ ಪ್ರಸಿದ್ಧವಾಗಿರುವುದು. ವೇದವ್ಯಾಸರೇ ಈ ಕೆಲಸವನ್ನು ಮಾಡಿದರೆಂದೂ ಉಕ್ತವಾಗಿರುವುದು.

೧ ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯಃ ಪುಣ್ಯರಿಂಕಾಕ್ಷಾತ್ ಮಹಾಭಾರತಕೃದ್ಭವೇತ್ ॥ (ವಿಷ್ಣುಪುರಾಣ)

‡ ಮಾಯೆಗೆ ಆವರಣಶಕ್ತಿಯೆಂದೂ ವಿಕ್ಷೇಪಶಕ್ತಿಯೆಂದೂ ಎರಡು ಶಕ್ತಿಯುಂಟು ಆವರಣಶಕ್ತಿಯಿಂದ ಆತ್ಮನ ಜ್ಞಾನವನ್ನು ಆವರಿಸಿಕೊಳ್ಳುವುದು, ವಿಕ್ಷೇಪಶಕ್ತಿಯಿಂದ ಪ್ರಪಂಚವನ್ನೆಲ್ಲ ತೋರ್ಪಡಿಸುವುದು

ಮೂ॥ ಸಂಭಾವ್ಯೋತೀನ್ದ್ರಿಯೋಽವೇದ್ಯೋಽನಿರ್ದೇಶ್ಯೋ ಜಾಮ್ಬವತ್ಪ್ರಭುಃ।
ಮದನೋ ದಮನೋ ವ್ಯಾಪೀ ಚೆತ್ಸ್ವರೂಪೀ ನಿರಞ್ಜನಃ ॥೪೫॥

೨೮೨ ಸಮ್ಭಾವ್ಯಃ (1) ಸಮಸ್ತ ಒನರಿಗೂ ಸಮ್ಮಾನಿಸಲ್ಪಡುವುದಕ್ಕೆ ಯೋಗ್ಯನು ಅಥವಾ, ಆತ್ಮನು ಇರುವನೆಂದು ಸಮಸ್ತರಿಂದಲೂ ಒಪ್ಪಲ್ಪಡಬೇಕಾದವನು ೨೮೩ ಅತೀನ್ದ್ರಿಯಃ (2) ಸಮಸ್ತವನ್ನೂ ಅತಿಕ್ರಮಿಸುವ ಅಪ್ರಾಕೃತವಾದ ಇಂದ್ರಿಯಗಳುಳ್ಳವನು ಅಥವಾ, (3) ಅಂತಃಕರಣ(ಮನಸ್ಸು)ಕ್ಕೆ ಗೋಚರನಾಗದಿರತಕ್ಕವನು ೨೮೪ ಅವೇದ್ಯಃ (4) ಅತೀಂದ್ರಿಯನಾದುದರಿಂದಲೇ, ಯಾರಿಂದಲೂ ಸಾಮಾನ್ಯವಾಗಿ ತಿಳಿಯಲ್ಪಡಲು ಸಾಧ್ಯನಾಗದಿರತಕ್ಕವನು * ೨೮೫ ಅನಿರ್ದೇಶ್ಯಃ (5) ಇವನು ಹೀಗಿರುವನೆಂದು ಒಬ್ಬರಿಗೆ ಹೇಳಲು ಅಸಾಧ್ಯನಾದವನು ೨೮೬ ಜಾಮ್ಬವತ್ಪ್ರಭುಃ (6) ಜಾಂಬವಂತನೆಂಬ ಋಕ್ಷಾಧಿಪತಿಯಾದ ಭಕ್ತನಿಗೆ ಸ್ವಾಮಿಯಾದವನು ೨೮೭ ಮದನಃ (7) ಸರ್ವರಿಗೂ ಮದವುಂಟು ಮಾಡತಕ್ಕ ನೋಪಸಮೂರ್ತಿಯು ೨೮೮ ದಮನಃ (8) ಅಂತಸ್ಥ ಧರ್ಮಗಳಲ್ಲಿ ಅಚಾಗರೂಕರಾದವರನ್ನು ನಿಗ್ರಹಿಸುವ ಸ್ವಭಾವವುಳ್ಳವನು ೨೮೯ ವ್ಯಾಪೀ (9) ಆಕಾಶದಂತೆ ಸರ್ವತ್ರ ವ್ಯಾಪನಶೀಲನಾದವನು ೨೯೦ ಚೆತ್ಸ್ವರೂಪೀ (10) ಜ್ಞಾನಸ್ವರೂಪವುಳ್ಳವನು ೨೯೧ ನಿರಞ್ಜನಃ (11) ಮಾಯಾಲೇಪಶೂನ್ಯನು ॥೪೫॥

(1) ಸಮ್ಭಾವಯಿತುಂ ಯೋಗ್ಯಃ (2) ಅತಿ ಇನ್ದ್ರಿಯಾಣಿ ಯಸ್ಯ ಸಃ (3) ಇನ್ದ್ರಿಯಂ ಅತಿಕ್ರಾನ್ತಃ (4) ವೇದಿತುಂ ಅಶಕ್ಯಃ. (5) ನಿರ್ದೇಷ್ಟುಂ ಅಶಕ್ಯಃ (6) ಜಾಮ್ಬವತಃ ಪ್ರಭುಃ (7) ಮದಯತಿ ಇತಿ ಮದನಃ (8) ದಮಯತಿ ಇತಿ ದಮನಃ (9) ವ್ಯಾಪ್ನೋತಿ ಇತಿ ವ್ಯಾಪೀ (10) ಚಿತ್ಸ್ವರೂಪಂ ಅಸ್ಯ ಅಸ್ತಿ ಇತಿ ಚಿತ್ಸ್ವರೂಪೀ (11) ನಿರ್ಗತಂ ಅಞ್ಜನಂ ಯಸ್ಮಾತ್ ಸಃ

* ಇಲ್ಲಿ 'ವೇದ್ಯಃ' ಎಂದೂ ಪದಚ್ಛೇದವಾಗಬಹುದು ಆಗ, ಮೋಕ್ಷಾರ್ಥಿಗಳಿಂದ ತಿಳಿಯಲ್ಪಡಬೇಕಾದವನೆಂದು ಅರ್ಥವು ವೇದಿತುಂ ಯೋಗ್ಯಃ ವೇದ್ಯಃ

ಮೂ॥ ನಾರಾಯಣೋಗ್ರಣೀಃ ಸಾಧುಃ ಜಟಾಯುಃಪ್ರೀತಿವರ್ಧನಃ ।
ನೈಕರೂಪೋ ಜಗನ್ನಾಥಃ ಸುರಕಾರ್ಯಹಿತಃ ಪ್ರಭುಃ ॥೪೬॥

೨೯೨ ನಾರಾಯಣಃ (1) ನರನಂದರೆ ಪರಮಾತ್ಮನಿಗೆ ಹೆಸರು ಅವನಿಂದ ಹುಟ್ಟಿದ ತತ್ವ(ಪದಾರ್ಥ)ಗಳಿಗೆ ನಾರಗಳೆಂದು ಸಂಜ್ಞೆಯು ಅವುಗಳೇ ಅಯನ(ಸ್ಥಾನ-ಆಶ್ರಯ)ವಾಗಿ ಉಳ್ಳವನು * ೨೯೩ ಅಗ್ರಣೀಃ (2) ಮೋಕ್ಷಾರ್ಥಿಗಳನ್ನೆಲ್ಲ ಪರಮಪದಕ್ಕೆ ಹೊಂದಿಸತಕ್ಕವನು ಅಥವಾ, ಎಲ್ಲರಿಗೂ ಮುಂದಾಳಾಗಿರತಕ್ಕವನು ೨೯೪ ಸಾಧುಃ (3) ಧರ್ಮಮಾರ್ಗವನ್ನು ಸಾಧಿಸತಕ್ಕವನು ಅಥವಾ, ಸರ್ವಲೋಕಮನೋಹರನು ೨೯೫ ಜಟಾಯುಃ ಪ್ರೀತಿವರ್ಧನಃ (4) ಜಟಾಯುವಿಗೆ ವಿಶೇಷವಾಗಿ ಪ್ರೀತಿಯನ್ನು ಹೆಚ್ಚಿಸಿದವನು ೨೯೬ ನೈಕರೂಪಃ (5) ಅಸಂಖ್ಯಾಕವಾದ ರೂಪವುಳ್ಳವನು ೨೯೭ ಜಗನ್ನಾಥಃ (6) ಜಗತ್ತುಗಳಿಗೆಲ್ಲ

ಒಡೆಯನಾದವನು ೨೯ ಸುರಕಾರ್ಯಹಿತಃ (7) ದೇವತೆಗಳ ಕೆಲಸದಲ್ಲಿ ಹಿತನಾದವನು ೨೯ ಪ್ರಭುಃ (8) ಪ್ರಕರ್ಷದಿಂದ ಇರತಕ್ಕವನು ॥೪೬॥

(1) ನರಾತ್ ಭವಸ್ತಿ ಇತಿ ನಾರಾಣಿ, ನಾರಾಣಿ ಅಯನಾನಿ ಯಸ್ಯ ಸಃ (2) ಅಗ್ರಂ ನಯತಿ ಇತಿ ಅಗ್ರಣೀಃ (3) ಸಾಧ್ನೋತಿ ಇತಿ ಸಾಧುಃ (4 ಜಟಾಯುಷಃ ಪ್ರೀತಿವರ್ಧನಃ (5) ಸ್ಯೈಕಾನಿ ರೂಪಾಣಿ ಯಸ್ಯ ಸಃ (6) ಜಗತಾಂ ನಾಥಃ. (7) ಸುರಾಣಾಂ ಕಾರ್ಯಾಣಿ, ಸುರಕಾರ್ಯೇಷು ಹಿತಃ. (8) ಪ್ರಕರ್ಷೇಣ ಭವತಿ ಇತಿ ಪ್ರಭುಃ

* 'ನಯತೀತಿ ನರಃಪ್ರೋಕ್ತಃ ಪರಮಾತ್ಮಾ ಸನಾತನಃ' (ವ್ಯಾಸವಚನ) 'ಯಚ್ಚ ಕಿಂಚಿಜ್ಜಗತ್ ಸರ್ವಂ ದೃಶ್ಯತೇ ಶ್ರೂಯತೇಪಿ ವಾ। ಅನ್ತರ್ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ॥'(ತೈತ್ತಿರೀಯೋಪನಿಷತ್ತು) 'ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ತತೋ ವಿದುಃ, ತಾನ್ಯೇವ ಚಾಯನಂ ತಸ್ಯ ತೇನ ನಾರಾಯಣಃ ಸ್ಮೃತಃ॥' (ಮಹಾಭಾರತ-ಉದ್ಯೋಗಪರ್ವ)

ಮೂ॥ ಜಿತಕ್ರೋಧೋ ಜಿತಾರಾತಿಃ ಪ್ಲವಙ್ಗಾಧಿಪರಾಜ್ಯದಃ ।
ವಸುದಃ ಸುಭುಜೋ ನೈಕಮಾಯೋ ಭವ್ಯಃ ಪ್ರಮೋದನಃ ॥೪೭॥

೪೦೦ ಜಿತಕ್ರೋಧಃ (1) ಜಯಿಸಲ್ಪಟ್ಟ * ಕೋಪವುಳ್ಳವನು ೪೦೧ ಜಿತಾರಾತಿಃ (2) ಜಯಿಸಲ್ಪಟ್ಟ ಶತ್ರುಗಳುಳ್ಳವನು ೪೦೨ ಪ್ಲವಙ್ಗಾಧಿಪರಾಜ್ಯದಃ (3) ಕಪಿರಾಜನಾದ ಸುಗ್ರೀವನಿಗೆ ರಾಜ್ಯವನ್ನು ಕೊಟ್ಟವನು ೪೦೩ ವಸುದಃ (4) ತೇಜಸ್ಸಿಗೆಲ್ಲ ಮುಖ್ಯಾಶ್ರಯಭೂತನಾದವನು ಅಥವಾ, (5) ಧನ ರತ್ನ ಮುಂತಾದ ಶ್ರೇಷ್ಠವಸ್ತುಗಳಿಗೆಲ್ಲ ಮುಖ್ಯಾಶ್ರಯಭೂತನಾದವನು † ೪೦೪ ಸುಭುಜಃ (6) ಜಗತ್ತನ್ನೆಲ್ಲ ರಕ್ಷಿಸುವ ಪ್ರಶಸ್ತವಾದ ಬಾಹುಗಳುಳ್ಳವನು ೪೦೫ ನೈಕಮಾಯಃ (7) ಬಹುರೂಪವಾದ ಮಾಯೆಯುಳ್ಳವನು ೪೦೬ ಭವ್ಯಃ (8) ಸತ್ಯಸ್ವರೂಪನಾದವನು ಅಥವಾ, ಧರ್ಮರಕ್ಷಣಾರ್ಥವಾಗಿ ಆಯಾ ಸಮಯಗಳಲ್ಲಿ ಅವತಾರಮಾಡತಕ್ಕವನು ೪೦೭ ಪ್ರಮೋದನಃ (9) ಸರ್ವದಾ ಆನಂದಸ್ವರೂಪನಾಗಿರತಕ್ಕವನು ಅಥವಾ, (10) ತನ್ನ ಭಕ್ತರನ್ನು ಆನಂದಪಡಿಸತಕ್ಕವನು ॥೪೭॥

(1) ಜಿತಃ ಕ್ರೋಧಃ ಯೇನ ಸಃ (2) ಜಿತಾಃ ಅರಾತಯಃ ಯೇನ ಸಃ (3) ಪ್ಲವಂಗಾನಾಂ ಅಧಿಪಃ, ರಾಜ್ಯಂ ದದಾತಿ ಇತಿ ರಾಜ್ಯದಃ, ಪ್ಲವಂಗಾಧಿಪಾಯ ರಾಜ್ಯದಃ (4) ವಸೂ= ದಧಾತಿ ಇತಿ ವಸುಧಃ, (5) ವಸೂನಿ ದಧಾತಿ ಇತಿ ವಸುದಃ (6) ಶೋಭನಾಃ ಭುಜಾಃ ಯಸ್ಯ ಸಃ. (7) ನ ಏಕಾಃ ನೈಕಾಃ, ನಿಷೇಧಾರ್ಥಕೇನ ನಶಬ್ದೇನ ಸಹ ಸಮಾಸಃ, ನೈಕಾಃ ಮಾಯಾಃ ಯಸ್ಯ ಸಃ, (8) ಭವತಿ ಇತಿ ಭವ್ಯಃ (9) ಪ್ರಮೋದತೇ ಇತಿ ಪ್ರಮೋದನಃ (10) ಪ್ರಮೋದಯತಿ ಇತಿ ಪ್ರಮೋದನಃ

* ವೇದ ಮರ್ಯಾದಾಪಾಲನಾರ್ಥವಾಗಿ ಮಾತ್ರವೇ ದುಷ್ಟರನ್ನು ಕೊಲ್ಲತಕ್ಕವನಲ್ಲದೆ, ಕೋಪಪರವಶನಾಗಿ ಕೊಲ್ಲತಕ್ಕವನಲ್ಲವೆಂದು ಭಾವವು

† ಇಲ್ಲಿ 'ವಸುದಃ' ಎಂದೂ ಪಾಠವುಂಟು ಆಗ, ಸಮಸ್ತರಾದ ಭಕ್ತರಿಗೂ ದಿವ್ಯತೇಜಸ್ಸನ್ನು ಅಥವಾ ಧನ ಕನಕಾದಿಗಳನ್ನು ಕೊಡತಕ್ಕವನೆ ದು ಅರ್ಥವು ವಸೂ= ವಸೂನಿ ವಾ ದದಾತಿ ಇತಿ ವಸುದಃ

ಮೂ॥ ಚಣ್ಡಾಂಶುಃ ಸಿದ್ಧಸಙ್ಕಲ್ಪಃ ಶರಣಾಗತವತ್ಸಲಃ ।
ಅಗದೋ ರೋಗಹರ್ತಾ ಚ ಮನ್ತ್ರವಿಚ್ಛಸ್ತ್ರಭಾವನಃ ॥೪೮॥

೪೦೮ ಚಣ್ಡಾಂಶುಃ (1) ಸಮಸ್ತ ದುಷ್ಟರನ್ನೂ ಸಂತಾಪಪಡಿಸುವ ಕ್ರೂರವಾದ ತೇಜಸ್ಸುಳ್ಳವನು ಅಥವಾ, ಆದಿತ್ಯಸ್ವರೂಪನು ೪೦೯ ಸಿದ್ಧಸಙ್ಕಲ್ಪಃ (2) ಸಿದ್ಧವಾದ * ಸಂಕ

ಲ್ಪವುಳ್ಳವನು. ೫೧೦ ಶರಣಾಗತವತ್ಸಲಃ (3) ತನ್ನನ್ನು ಮರೆಹೊಕ್ಕವರಲ್ಲಿ ವಿಶೇಷವಾಗಿ ಪ್ರೀತಿಯಿಡತಕ್ಕವನು ೫೧೧ ಅಗದಃ (4) ಸಂಸಾರರೋಗಶೂನ್ಯನಾದವನು ಅಥವಾ, (5) ಭಕ್ತರ ದುಃಖವೆಂಬ ಪರ್ವತವನ್ನು ಸೀಳತಕ್ಕವನು ೫೧೨ ರೋಗಹರ್ತಾ (6) ಶರಣಾಗತರ ಸಂಸಾರ ರೋಗವನ್ನು ಪರಿಹರಿಸತಕ್ಕವನು ೫೧೩ ಮನ್ತ್ರವಿತ್ (7) ಋಕ್ ಯಜುಸ್ ಸಾಮಗಳೇಂಬ ಮಂತ್ರಗಳನ್ನು ಬಲ್ಲವನು ಅಥವಾ, ಯಾವ ಸಮಯದಲ್ಲಿ ಏನುಮಾಡಬೇಕೆಂಬ ಆಲೋಚನೆಯನ್ನು ಬಲ್ಲವನು ೫೧೪ ಶಾಸ್ತ್ರಭಾವನಃ (8) ಶ್ರುತಿಸ್ಮೃತಿರೂಪವಾದ ಶಾಸ್ತ್ರಗಳನ್ನು ಏರ್ಪಡಿಸಿರತಕ್ಕವನು ||೪೯||

(1) ಚಣ್ಡಾಃ ಅಂಶವಃ ಯಸ್ಯ ಸಃ. (2) ಸಿದ್ಧಃ ಸಂಕಲ್ಪಃ ಯಸ್ಯ ಸಃ (3) ಶರಣಾಗತೇಷು ವತ್ಸಲಃ (4) ನಾಸ್ತಿ ಗದಃ ಯಸ್ಯ ಸಃ (5) ಅಗಂ ದ್ಯತಿ ಇತಿ ಅಗದಃ, ದೋ ಅವಖಣ್ಡನೇ, (6) ರೋಗಂ ಹರತಿ ಇತಿ ರೋಗಹರ್ತಾ (7) ಮನ್ತ್ರಂ ವೇತ್ತಿ ಇತಿ ಮನ್ತ್ರವಿತ್ (8) ಶಾಸ್ತ್ರಾಣಿ ಭಾವಯತಿ ಇತಿ ಶಾಸ್ತ್ರಭಾವನಃ

* ಇವನು ತನ್ನ ಮನಸ್ಸಿನಲ್ಲಿ ನೆನೆಸಿದೊಡನೆಯೇ ಸಕಲಕಾರ್ಯಗಳೂ ಸಿದ್ಧಿಸುವುವೆಂದು ಭಾವವು

ಮೂ। ಸೌಮಿತ್ರಿವತ್ಸಲೋ ಧುರ್ಯೋ ವ್ಯಕ್ತಾವ್ಯಕ್ತಸ್ವರೂಪಧೃತ್ ।
ವಿಶಿಷ್ಟೋ ಗ್ರಾಮಣೀಃ ಶ್ರೀಮಾನ್ ಅನುಕೂಲಃ ಪ್ರಿಯಂವದಃ ॥೪೯॥

೫೧೫ ಸೌಮಿತ್ರಿವತ್ಸಲಃ (1) ಲಕ್ಷ್ಮಣನಲ್ಲಿ ವಿಶೇಷವಾಗಿ ಪ್ರೀತಿಯಿಟ್ಟವನು ೫೧೬, ಧುರ್ಯಃ. (2) ಸಮಸ್ತ ಲೋಕದ ಉತ್ಪತ್ತಿ ಸ್ಥಿತಿ ಸಂರಕ್ಷಣೆಗಳ ಭಾರವನ್ನು ವಹಿಸಿರತಕ್ಕವನು ೫೧೭ ವ್ಯಕ್ತಾವ್ಯಕ್ತಸ್ವರೂಪಧೃತ್ (3) ವ್ಯಕ್ತವೆಂಬ ಮಹತ್ತತ್ವ– ಆ ವ್ಯಕ್ತವೆಂಬ ಅಹಂಕಾರ– ಇವುಗಳ ಸ್ವರೂಪವನ್ನು ತನ್ನಲ್ಲಿ ಧರಿಸಿರತಕ್ಕವನು ಅಥವಾ, (4) ಭೂತವಿಕಾರಯುಕ್ತವಾಗಿರುವ * ರೂಪವನ್ನೂ ಭೂತವಿಕಾರರಹಿತವಾಗಿರುವ ರೂಪವನ್ನೂ ಧರಿಸಿರತಕ್ಕವನು ಅಥವಾ (5) ಕ್ಷರಾಕ್ಷರ † ಸ್ವರೂಪಗಳನ್ನು ಧರಿಸಿರತಕ್ಕವನು ಅಥವಾ, ಸಮಷ್ಟಿವ್ಯಷ್ಟಿ ‡ ಸ್ವರೂಪವನ್ನು ಧರಿಸಿರತಕ್ಕವನು ಅಥವಾ, ವ್ಯಕ್ತಶಬ್ದವಾಚ್ಯವಾದ ಇಪ್ಪತ್ತುಮೂರು ತತ್ವಗಳ § ಸ್ವರೂಪವನ್ನೂ–ಅವ್ಯಕ್ತಶಬ್ದವಾಚ್ಯವಾದ ಚತುರ್ವಿಂಶತಿತಮ ತತ್ವಸ್ವರೂಪವನ್ನೂ ಧರಿಸಿರತಕ್ಕವನು ಅಥವಾ, ನಿರ್ಮಲ ಹೃದಯರಿಗೆ ಪ್ರಕಾಶವಾಗಿಯೂ ಕಲುಷಹೃದಯರಿಗೆ ಅಪ್ರಕಾಶವಾಗಿಯೂ ಇರುವ ರೂಪವನ್ನು ಧರಿಸಿರತಕ್ಕವನು ೫೧೮ ವಿಶಿಷ್ಟಃ (6) ಸಮಸ್ತವನ್ನೂ ಅತಿಶಯಿಸಿರತಕ್ಕವನು ೫೧೯ ಗ್ರಾಮಣೀಃ (7) ಭೂತಗ್ರಾಮಗಳಿಗೆಲ್ಲ ನಾಯಕನಾದವನು ೫೨೦ ಶ್ರೀಮಾನ್ (8) ಅತಿಶಯವಾದ ಬುದ್ಧಿ ಸಂಪತ್ತುಳ್ಳವನು ೫೨೧ ಅನುಕೂಲಃ (9) ಸರ್ವಾತ್ಮನಾಗಿ ಸರ್ವರಿಗೂ ಅನುಕೂಲನಾಗಿರತಕ್ಕವನು ಅಥವಾ, ಮದ ಮಾನಾದಿಗಳಿಂದ ಮೇಲೆಯನ್ನು ಮಾರಿ ನಡೆಯದಿರತಕ್ಕವನು ೫೨೨ ಪ್ರಿಯಂವದಃ (10) ಪ್ರಿಯವಾಗಿ ಮಾತನಾಡತಕ್ಕವನು ||೪೯||

(1) ಸುಮಿತ್ರಾಯಾಃ ಅಪತ್ಯಂ ಪುಮಾನ್ ಸೌಮಿತ್ರಿಃ, ಸೌಮಿತ್ರೌ ವತ್ಸಲಃ (2) ಧುರಂ ವಹತಿ ಇತಿ ಧುರ್ಯಃ (3) ವ್ಯಕ್ತಂ ಚ ಅವ್ಯಕ್ತಂ ಚ ವ್ಯಕ್ತಾವ್ಯಕ್ತೇ, ವ್ಯಕ್ತಾವ್ಯಕ್ತಯೋಃ ಸ್ವರೂಪಂ ದರತಿ ಇತಿ ವ್ಯಕ್ತಾವ್ಯಕ್ತ ಸ್ವರೂಪಧೃತ್, (4) ವ್ಯಕ್ತಂ ಚ ತತ್ ಅವ್ಯಕ್ತಂ ಚ ವ್ಯಕ್ತಾವ್ಯಕ್ತಂ, ವ್ಯಕ್ತಾವ್ಯಕ್ತಂ ಚ ತತ್ ಸ್ವರೂಪಂ ಚ ವ್ಯಕ್ತಾವ್ಯಕ್ತಸ್ವರೂಪಂ, ವ್ಯಕ್ತಾವ್ಯಕ್ತಸ್ವರೂಪಂ ಧರತಿ ಇತಿ ವ್ಯಕ್ತಾವ್ಯಕ್ತಸ್ವರೂಪಧೃತ್ (5) ವ್ಯಕ್ತಂ ಚ ಅವ್ಯಕ್ತಂ ಚ ವ್ಯಕ್ತಾವ್ಯಕ್ತೇ, ವ್ಯಕ್ತಾವ್ಯಕ್ತಯೋಃ ಸ್ವರೂಪಂ ಧರತಿ ಇತಿ ವ್ಯಕ್ತಾವ್ಯಕ್ತಸ್ವರೂಪಧೃತ್ (6) ವಿಶಿಷ್ಯತೇ ಇತಿ

ವಿಷ್ವಃ, (7) ಗ್ರಾಮ್ಯಾನ್ ನಯತಿ ಇತಿ ಗ್ರಾಮಣೀಃ (8) ಪ್ರಶಸ್ತಾ ಶ್ರೀಃ ಅಸ್ಯ ಅಸ್ತ ಇತಿ ಶ್ರೀಮಾನ್. (9) ಕೂಲಂ ಅನುವರ್ತತೇ ಇತಿ ಅನುಕೂಲಃ (10) ಪ್ರಿಯಂ ವದತಿ ಇತಿ ಪ್ರಿಯಂವದಃ

* 'ಭೂತಭಾವವಿಕಾರೇಣ ದ್ವಿತೀಯೇನ ಸದುಚ್ಯತೇ। ವ್ಯಕ್ತಂ ತೇನ ವಿಹೀನತ್ವಾತ್ ಅವ್ಯಕ್ತಮಸದಿತ್ಯಪಿ॥' (ಲಿಂಗಪುರಾಣ)

† 'ಉಕ್ತಮಕ್ಷರಮವ್ಯಕ್ತಂ ವ್ಯಕ್ತಂ ಕ್ಷರಮುದಾಹೃತಮ್' (ಮತ್ಸ್ಯಪುರಾಣ)

‡ 'ಸಮಷ್ಟಿಂ ವಿದುರವ್ಯಕ್ತಂ ವ್ಯಕ್ತಂ ವ್ಯಷ್ಟಿಂ ಮುನೀಶ್ವರಾಃ' (ನೃಸಿಂಹಪುರಾಣ)

§ 'ತ್ರಯೋವಿಂಶತಿತತ್ತ್ವಾನಿ ವ್ಯಕ್ತ ಶಬ್ದೇನ ಸೂರಯಃ। ನದನ್ತ್ಯವ್ಯಕ್ತಶಬ್ದೇನ ಪ್ರಕೃತಿಂ ಚ ಪರಾಂ ತಥಾ॥' (ಬ್ರಹ್ಮಾಣ್ಡಪುರಾಣ)

ಮೂ॥ ಅತುಲಃ ಸಾತ್ವಿಕೋ ಧೀರಃ ಶರಾಸನವಿಶಾರದಃ।
ಜ್ಯೇಷ್ಠಃ ಸರ್ವಗುಣೋಪೇತಃ ಶಕ್ತಿಮಾಂಸ್ತಾಟಕಾನ್ತಕಃ ॥೫೦॥

೫೨೩ ಅತುಲಃ (1) ಅಸದೃಶನಾದವನು ೫೨೪ ಸಾತ್ವಿಕಃ (2) ಸತ್ವಗುಣಪ್ರಧಾನನಾದವನು ೫೨೫ ಧೀರಃ (3) ಸರ್ವಜ್ಞನು ಅಥವಾ, ರಣಧೀರನು ಅಥವಾ (4) ತನ್ನ ಬುದ್ಧಿಯನು ಸರ್ವತ್ರ ಪ್ರೇರಿಸತಕ್ಕವನು ಅಥವಾ, ಭಕ್ತರ ಬುದ್ಧಿಗ ಪ್ರೇರಣೆಯುಂಟುಮಾಡತಕ್ಕವನು ೫೨೬ ಶರಾಸನವಿಶಾರದಃ (5) ಧನುರ್ವೇದದಲ್ಲಿಯೂ ಧನುರ್ಯುದ್ಧದಲ್ಲಿಯೂ ವಿಶಾರದನಾದವನು ೫೨೭ ಜ್ಯೇಷ್ಠಃ (6) ಎಲ್ಲರಿಗಿಂತಲೂ ಪ್ರಶಸ್ತನಾದವನು. ಅಥವಾ. ಅತಿಪ್ರಾಜ್ಞನು ೫೨೮ ಸರ್ವಗುಣೋಪೇತಃ (7) ಸಮಸ್ತ ಕಲ್ಯಾಣಗುಣಯುಕ್ತನಾದವನು ೫೨೯ ಶಕ್ತಿಮಾನ್ (8) ಚಿಚ್ಛಕ್ತಿಯುಳ್ಳವನು ೫೩೦ ತಾಟಕಾನ್ತಕಃ (9) ತಾಟಕೆಯೆಂಬ ರಾಕ್ಷಸಿಗೆ ಯಮಸ್ವರೂಪನಾದವನು ॥೫೦॥

(1) ನಾಸ್ತಿ ತುಲಾ ಯಸ್ಯ ಸಃ (2) ಸತ್ವಂ ಪ್ರಧಾನಂ ಅಸ್ಯ ಇತಿ ಸಾತ್ವಿಕಃ (3) ಧಿಯಂ ರಾತಿ, ಇತಿ ಧೀರಃ (4) ಧಿಯಂ ಈರಯತಿ ಇತಿ ಧೀರಃ (5) ಶರಾಸನೇ ವಿಶಾರದಃ (6) ಅತಿಶಯೇನ ಪ್ರಶಸ್ಯಃ (7) ಸರ್ವಗುಣೈಃ ಉಪೇತಃ (8) ಶಕ್ತಿಃ ಅಸ್ಯಾಸ್ತಿ ಇತಿ ಶಕ್ತಿಮಾನ್ (9) ತಾಟಕಾಯಾಃ ಅನ್ತಕಃ

ಮೂ॥ ವೈಕುಣ್ಠಃ ಪ್ರಾಣಿನಾಂ ಪ್ರಾಣಃ ಕಮಠಃ ಕಮಲಾಧಿಪಃ।
ಗೋವರ್ಧನಧರೋ ಮತ್ಸ್ಯರೂಪಃ ಕಾರುಣ್ಯಸಾಗರಃ ॥೫೧॥

೫೩೧ ವೈಕುಣ್ಠಃ (1) ತತ್ವಗಳೆಗಲ್ಲ ಪರಸ್ಪರ ಸಂಶ್ಲೇಷವನ್ನುಂಟುಮಾಡಿ * ನಿರ್ಬಂಧಪಡಿಸತಕ್ಕವನು ೫೩೨ ಪ್ರಾಣಿನಾಂ ಪ್ರಾಣಃ (2) ಸಮಸ್ತ ಪ್ರಾಣಿಗಳಿಗೂ ಪ್ರಾಣಸ್ವರೂಪನಾಗಿ ವ್ಯಾಪಾರಪ್ರವರ್ತಕನಾದವನು ೫೩೩ ಕಮಠಃ (3) ಕ್ಷೀರಸಮುದ್ರವಾಸಿಯಾದವನು ಅಥವಾ, ಕೂರ್ಮಾವತಾರಮಾಡಿದವನು ೫೩೪ ಕಮಲಾಧಿಪಃ (4) ಲಕ್ಷ್ಮೀಪತಿಯಾದವನು. ೫೩೫ ಗೋವರ್ಧನಧರಃ (5) ಗೋವರ್ಧನವೆಂಬ ಪರ್ವತವನ್ನು ಮೇಲಕ್ಕೆ ಎತ್ತಿದವನು ೫೩೬. ಮತ್ಸ್ಯರೂಪಃ (6) ಮತ್ಸ್ಯಾವತಾರಮಾಡಿದವನು ೫೩೭ ಕಾರುಣ್ಯಸಾಗರಃ (7) ಕೃಪೆಗೆ ಸಮುದ್ರಪ್ರಾಯನಾದವನು ॥೫೧॥

(1) ವಿವಿಧಾಃ ಕುಣ್ಠಾಃ ವಿಕುಣ್ಠಾಃ, ವಿಕುಣ್ಠಾನಾಂ ಅಯಂ ವೈಕುಣ್ಠಃ (2) ಪ್ರಾಣಯತಿ ಇತಿ ಪ್ರಾಣಃ (3) ಕೇ ಮರತಿ ಇತಿ ಕಮಠಃ ಮಠ ಮನೆನವಾಸಯೋಃ (4) ಕಮಲಾಯಾಃ ಅಧಿಪಃ, (5) ಗೋವರ್ಧನಸ್ಯ ಧರಃ. (6) ಮತ್ಸ್ಯಸ್ಯ ರೂಪಂ ಯಸ್ಯ ಸಃ (7) ಕರುಣೈವ ಕಾರುಣ್ಯಮ್, ಕಾರುಣ್ಯಸ್ಯ ಸಾಗರಃ

* 'ಮಯಾ ಸಂಶ್ಲೇಷಿತಾ ಭೂಮಿಃ ಅದ್ಭಿರ್ವ್ಯೋಮ ಚ ವಾಯುನಾ। ವಾಯುಶ್ಚ ತೇಜಸಾ ಸಾರ್ಧಂ ವೈಕುಣ್ಠತ್ವಂ ತತೋ ಮಮ॥' (ಮಹಾಭಾರತ ಶಾಂತಿಪರ್ವ।)

ಮೂ॥ ಕುಂಭಕರ್ಣಪ್ರಹರ್ತಾ ಚ ಗೋಪೀಗೋಪಾಲವಲ್ಲಭಃ ।
ಮಾಯಾವೀ ಸ್ವಾಪನೋ ವ್ಯಾಪೀ ರೈಣುಕೇಯಬಲಾಪಹಃ ।೫೬॥

೫೫೮ ಕುಮ್ಭಕರ್ಣಪ್ರಹರ್ತಾ. (1) ಕುಂಭಕರ್ಣನನ್ನು ಸಂಹರಿಸಿದವನು ೫೫೯ ಗೋಪೀ ಗೋಪಾಲವಲ್ಲಭಃ (2) ಗೋಪಿಕಾಸ್ತ್ರೀಯರಿಗೂ ಗೋಪಾಲಕರಿಗೂ ಸ್ವಾಮಿಯಾದವನು ೫೬೦ ಮಾಯಾವೀ (3) ತನಗೆ ವಶವಾದ ಮಾಯೆಯುಳ್ಳವನು ೫೬೧ ಸ್ವಾಪನಃ (4) ತನ್ನಲ್ಲಿ ಭಕ್ತಿಯಿಲ್ಲದವರನ್ನು ಮಹಾಮೋಹಕ್ಕೆ ಒಳಪಡಿಸತಕ್ಕವನು ವ್ಯಾಪೀ (5) ಸ್ವಯಂ ಕಾರಣಭೂತನಾಗಿ ಕಾರ್ಯವಾದ ಸಮಸ್ತ ವಸ್ತುವನ್ನೂ ವ್ಯಾಪಿಸಿರತಕ್ಕವನು ೫೬೩ ರೈಣುಕೇಯಬಲಾಪಹಃ (6) ರೇಣುಕೆಯ ಮಗನಾದ ಬಲರಾಮನ ಶಕ್ತಿಯನ್ನು ಅಪಹರಿಸಿದವನು ॥೫೬॥

(1) ಕುಮ್ಭಕರ್ಣಸ್ಯ ಪ್ರಹರ್ತಾ (2) ಗೋಪ್ಯಶ್ಚ ಗೋಪಾಲಾಶ್ಚ ಗೋಪೀಗೋಪಾಲಾಃ, ಗೋಪೀಗೋಪಾಲಾನಾಂ, ವಲ್ಲಭಃ (3) ಮಾಯಾ ಅಸ್ಯ ಅಸ್ತಿ ಇತಿ ಮಾಯಾವೀ (4) ಸ್ವಾಪಯತಿ ಇತಿ ಸ್ವಾಪನಃ (5) ವ್ಯಾಪ್ನೋತಿ ಇತಿ ವ್ಯಾಪೀ (6) ರೇಣುಕಾಯಾಃ ಅಪತ್ಯಂ ಪುಮಾನ್ ರೈಣುಕೇಯಃ, ರೈಣುಕೇಯಸ್ಯ ಬಲಂ ಅಪಹನ್ತಿ ಇತಿ ರೈಣುಕೇಯ ಬಲಾಪಹಃ

ಮೂ॥ ಪಿನಾಕಮಥನೋ ವನ್ದ್ಯಃ ಸಮರ್ಧೋ ಗರುಡಧ್ವಜಃ ।
ಲೋಕತ್ರಯಾಶ್ರಯೋ ಲೋಕೋ ಭವಿತಾ ಭರತಾಗ್ರಜಃ ॥೫೭॥

೫೫೫. ಪಿನಾಕಮಥನಃ (1) ಪಿನಾಕನಾಮಕವಾದ ಶಿವಧನುಸ್ಸನ್ನು ಮುರಿದವನು ೫೫೬ ವನ್ದ್ಯಃ (2) ಸರ್ವರಿಗೂ ನಮಸ್ಕಾರ ಪಾತ್ರನು ೫೫೭ ಸಮರ್ಧಃ (3) ಸರ್ವಕಾರ್ಯ ಸಮರ್ಥನು ೫೫೮ ಗರುಡಧ್ವಜಃ (4) ಗರುಡನೇ ಚಿಹ್ನೆಯಾಗಿ ಉಳ್ಳವನು ೫೫೯ ಲೋಕತ್ರಯಾಶ್ರಯಃ (5) ಮೂರುಲೋಕಕ್ಕೂ ಆಶ್ರಯಭೂತನಾದವನು ೫೬೦ ಲೋಕಃ (6) ಸಮಸ್ತವನ್ನೂ ನೋಡತಕ್ಕವನು ಅಥವಾ, ಸರ್ವಲೋಕ ಸ್ವರೂಪನು ೫೬೧ ಭವಿತಾ (7) ಸರ್ವದಾ ಇರತಕ್ಕವನು ಅಥವಾ, ತನಗೆ ಬೇಕಾದಾಗ ಧರ್ಮರಕ್ಷಣಾರ್ಥವಾಗಿ ಅವತಾರಮಾಡತಕ್ಕವನು ೫೬೨ ಭರತಾಗ್ರಜಃ (8) ಭರತನಿಗ ಜ್ಯೇಷ್ಠ ಸಹೋದರನು ॥೫೭॥

(1) ಪಿನಾಕಸ್ಯ ಮಥನಃ (2) ವನ್ದ್ಯತುಂ ಯೋಗ್ಯಃ (3) ಸಮರ್ಥತೇ ಇತಿ ಸಮರ್ಧಃ (4) ಗರುಡಃ ಧ್ವಜಃ ಯಸ್ಯ ಸಃ, (5) ಲೋಕತ್ರಯಸ್ಯ ಆಶ್ರಯಃ (6) ಲೋಕಯತಿ ಇತಿ ಲೋಕಃ (7) ಭವತಿ ಇತಿ ಭವಿತಾ (8) ಭರತಸ್ಯ ಅಗ್ರಜಃ

ಮೂ॥ ಶ್ರೀಧರಃ ಸದ್ಗತಿರ್ಲೋಕಸಾಕ್ಷೀ ನಾರಾಯಣೋ ಬುಧಃ ।
ಮನೋವೇಗೀ ಮನೋರೂಪೀ ಪೂರ್ಣಃ ಪುರುಷಪುಜ್ಜವಃ ॥೫೮॥

೫೫೨ ಶ್ರೀಧರಃ (1) ಜಗನ್ಮಾತೆಯಾದ ಲಕ್ಷ್ಮಿಯನ್ನು ಹೃದಯದಲ್ಲಿ ಧರಿಸಿರತಕ್ಕವನು ೫೫೩ ಸದ್ಗತಿಃ (2) ಸರ್ವರಿಗೂ ಪರಮಪ್ರಾಪ್ಯಭೂತನಾದವನು ೫೫೪ ಲೋಕಸಾಕ್ಷೀ. (3) ಲೋಕಗಳೆಲ್ಲ ಸಾಕ್ಷಿಭೂತನಾದವನು. ೫೫೫ ನಾರಾಯಣಃ (4) ಪ್ರಳಯ

ಕಾಲದಲ್ಲಿ ಸಮಸ್ತ ತತ್ವಗಳಿಗೂ * ಲಯಸ್ಥಾನನಾದವನು ೩೫೫ ಬುಧಃ. (5) ಸರ್ವಜ್ಞನಾದವನು ೩೫೬ ಮನೋವೇಗೀ (6) ಮನಸ್ಸಿನಂತೆ ವೇಗವುಳ್ಳವನು ೩೫೭ ಮನೋರೂಪೀ (7) ಮನಸ್ಸಿನ ರೂಪವುಳ್ಳವನು ೩೫೮ ಪೂರ್ಣಃ ಸಕಲ ಶಕ್ತಿಗಳಿಂದಲೂ ಪರಿಪೂರ್ಣನಾದವನು ೩೫೯ ಪುರುಷಪುಙ್ಗವಃ (8) ಪುರುಷೋತ್ತಮನು ॥೫೪॥

(1) ಶ್ರಿಯಃ ಧರಃ (2) ಸತೀ ಚ ಸಾ ಗತಿಶ್ಚ (3) ಲೋಕಾನಾಂ ಸಾಕ್ಷೀ (4) ನಾರಾಣಾಂ ಅಯನಂ (5) ಬುದ್ಧಃ ಇತಿ ಬುಧಃ (6) ಮನಸಇವ ವೇಗಃ ಅಸ್ಯ ಅಸ್ತಿ ಇತಿ ಮನೋವೇಗೀ (7) ಮನಸಃ ರೂಪಂ ಅಸ್ಯ ಅಸ್ತಿ ಇತಿ ಮನೋರೂಪೀ (8) ಪುರುಷಾಣಾಂ ಪುಙ್ಗವಃ

* 'ಯತ್ ಪ್ರಯಂತ್ಯಭಿಸಂವಿಶನ್ತಿ' (ತೈತ್ತಿರೀಯೋಪನಿಷತ್ತು) 'ನಾರಾಣಾಮಯನಂ ಯಸ್ಮಾತ್ ತಸ್ಮಾನ್ನಾರಾಯಣಃ ಸ್ಮೃತಃ' (ಬ್ರಹ್ಮವೈವರ್ತಪುರಾಣ)

ಮೂ॥ ಯದುಶ್ರೇಷ್ಠೋ ಯದುಪತಿಃ ಭೂತಾವಾಸಃ ಸುವಿಕ್ರಮಃ ।
ತೇಜೋಧರೋ ಧರಾಧ್ಯಕ್ಷಃ ಚತುರ್ಮೂರ್ತಿರ್ಭ್ರತುರ್ಭುಜಃ ॥೫೫॥

೩೬೧ ಯದುಶ್ರೇಷ್ಠಃ (1) ಯಾದವರಲ್ಲೆಲ್ಲ ಮುಖ್ಯನಾದವನು. ೩೬೨ ಯದುಪತಿಃ (2) ಯಾದವರಿಗೆಲ್ಲ ಸ್ವಾಮಿಯಾದವನು ೩೬೩ ಭೂತಾವಾಸಃ (3) ಸಮಸ್ತಪ್ರಾಣಿಗಳಿಗೂ * ಆಶ್ರಯಭೂತನಾದವನು ೩೬೪ ಸುವಿಕ್ರಮಃ (4) ಉತ್ತಮವಾದ ಪಕ್ಷಿ-ಎಂದರೆ ಗರುಡನಿಂದ-ಸಂಚಾರವುಳ್ಳವನು ೩೬೫ ತೇಜೋಧರಃ (5) ಸರ್ವೋತ್ತಮವಾದ ತೇಜಸ್ಸನ್ನು ಧರಿಸಿರತಕ್ಕವನು ೩೬೬ ಧರಾಧ್ಯಕ್ಷಃ (6) ಭೂದೇವಿಗೆ ಪತಿಯಾದವನು. ಅಥವಾ, ಭೂಮಿಗೆಲ್ಲ ಒಡೆಯನಾದವನು ಅಥವಾ, (7) ಲೋಕಪಾಲಕರಿಗಲ್ಲ ವಿಚಾರಣಕರ್ತನಾದವನು. ೩೬೭ ಚತುರ್ಮೂರ್ತಿಃ (8) ವಿರಾಟ್ ಸೂತ್ರಾತ್ಮ ಅವ್ಯಾಕೃತ ತುರೀಯಗಳೆಂಬ ನಾಲ್ಕು ಶರೀರಗಳುಳ್ಳವನು. ಅಥವಾ, ಶುಕ್ಲ ರಕ್ತ ಪೀತ ಕೃಷ್ಣವರ್ಣಗಳಾದ ನಾಲ್ಕು ಶರೀರಗಳುಳ್ಳವನು. ಅಥವಾ, ಶರೀರಪುರುಷ ಧೃಷ್ಟಿಪುರುಷ ವೇದಪುರುಷ ಮಹಾಪುರುಷ ನಾಮಕಗಳಾಗಿ ಉಪನಿಷದುಕ್ತವಾದ ನಾಲ್ಕು ವ್ಯೂಹಶರೀರವುಳ್ಳವನು. ಅಥವಾ, ಸಂಕರ್ಷಣ ವಾಸುದೇವ ಅನಿರುದ್ಧ ಪ್ರದ್ಯುಮ್ನರೆಂಬ ನಾಲ್ಕು ವ್ಯೂಹಶರೀರವುಳ್ಳವನು ಅಥವಾ, ರಾಮ ಲಕ್ಷ್ಮಣ ಭರತ ಶತ್ರುಘ್ನರೆಂಬ ನಾಲ್ಕು ರೂಪವುಳ್ಳವನಾಗಿ ಅವತರಿಸಿದವನು ೩೬೮ ಚತುರ್ಭುಜಃ (9) ನಾಲ್ಕು ತೋಳುಗಳುಳ್ಳವನು ॥೫೫॥

(1) ಯದೂನಾಂ ಶ್ರೇಷ್ಠಃ (2) ಯದೂನಾಂ ಪತಿಃ (3) ಭೂತಾನಾಂ ಆವಾಸಃ (4) ಶೋಭನಃ ವಿಃ ಸುವಿಃ, ಸುವಿನಾ ಕ್ರಮಃ ಯಸ್ಯ ಸಃ (5) ತೇಜಸಃ ಧರಃ (6) ಧರ ಯಾಃ ಅಧ್ಯಕ್ಷಃ (7) ಧರಸ್ತ ಇತಿ ಧರಾಃ, ಧರಾಣಾಂ ಅಧ್ಯಕ್ಷಃ (8) ಚತಸ್ರಃ ಮೂರ್ತಯಃ ಯಸ್ಯ ಸಃ (9) ಚತ್ವಾರಃ ಭುಜಾಃ ಯಸ್ಯ ಸಃ

* 'ವಸನ್ತಿ ತ್ವಯಿ ಭೂತಾನಿ ಭೂತಾವಾಸಸ್ತತೋ ಭವಾನ್' (ಹರಿವಂಶ)

ಮೂ॥ ಚಾಣೂರಮರ್ದನೋ ವನ್ದ್ಯಃ ಶಾನ್ತೋ ಭರತವನ್ದಿತಃ ।
ಶಬ್ದಾತಿಗೋ ಗಭೀರಾತ್ಮಾ ಕೋಮಲಾಙ್ಗಃ ಪ್ರಜಾಗರಃ ॥೫೬॥

೩೬೯ ಚಾಣೂರಮರ್ದನಃ (1) ಚಾಣೂರನೆಂಬ ರಾಕ್ಷಸನನ್ನು ಮರ್ದಿಸಿದವನು.

೫೭೦ ವನ್ದ್ಯಃ. (2) ಎಲ್ಲರಿಂದಲೂ ಸ್ತುತಿಸಲ್ಪಡುವುದಕ್ಕೆ ಯೋಗ್ಯನು * ೫೭೧ ಶಾನ್ತಃ (3) ವಿಷಯಸುಖಗಳಲ್ಲಿ ಆಸಕ್ತಿಯಿಲ್ಲದವನು ೫೭೨ ಭರತವನ್ದಿತಃ (4) ಭರತನಿಂದ ಸ್ತುತಿಸಲ್ಪಟ್ಟೂ ನಮಸ್ಕರಿಸಲ್ಪಟ್ಟೂ ಇರತಕ್ಕವನು ಅಥವಾ, (5) ಸ್ತುತಿಪಾರಕರಿಂದ ಹೊಗಳಲ್ಪಡುತಿದ್ದವನು ೫೭೩ ಶಬ್ದಾತಿಗಃ (6) ಸಮಸ್ತ ಶಬ್ದಗಳನ್ನೂ † ಅತಿಕ್ರಮಿಸಿರತಕ್ಕವನು (ಎಂದರೆ ವಾಚಾಮಗೋಚರನು) ೫೭೪ ಗಭೀರಾತ್ಮಾ (7) ಅಪರಿಚ್ಛೇದ್ಯವಾದ ದೇಹವೂ ಮನಸ್ಸೂ ಉಳ್ಳವನು ೫೭೫ ಕೋಮಲಾಭ್ಜಃ (8) ಅತಿ ಮೃದುವಾದ ಅಂತರಂಗವುಳ್ಳವನು ಅಥವಾ, ಸುಕುಮಾರವಾದ ಶರೀರವುಳ್ಳವನು ೫೭೬ ಪ್ರಜಾಗರಃ (9) ನಿತ್ಯಪ್ರಬುದ್ಧನಾಗಿರತಕ್ಕವನು ॥೫೭೬॥

(1) ಚಾಣೂರಸ್ಯ ಮರ್ದನಃ (2) ವನ್ದ್ಯಿತುಂ ಯೋಗ್ಯಃ (3) ಶಾಮ್ಯತಿಸ್ಮ ಇತಿ ಶಾನ್ತಃ (4) ಭರತೇನ ವನ್ದಿತಃ (5) ಭರತೈಃ ವನ್ದಿತಃ. (6) ಶಬ್ದಾನ್ ಅತೀತ್ಯ ಗಚ್ಛತಿ ಇತಿ ಶಬ್ದಾತಿಗಃ (7) ಗಭೀರಃ ಆತ್ಮಾ ಯಸ್ಯ ಸಃ (8) ಕೋಮಲಂ ಅಭ್ಜಂ ಯಸ್ಯ ಸಃ (9) ಪ್ರಕರ್ಷೇಣ ಜಾಗರ್ತಿ ಇತಿ ಪ್ರಜಾಗರಃ

* 'ಚಾಣೂರಮರ್ದನೋವನ್ದ್ಯಃ ಎನ್ನುವಲ್ಲಿ 'ಅವನ್ದ್ಯಃ' ಎಂದೂ ಪದಚ್ಛೇದವಾಗಬಹುದಾಗಿರುವಕಾರಣ, ಆಗ ಯಾರಿಂದಲೂ ಸ್ತುತಿಸಲ್ಪಡುವುದಕ್ಕೆ ಅಸಾಧ್ಯನೆಂದು ಅರ್ಥಹೇಳಬೇಕು ವನ್ದಿತುಂ ಅಶಕ್ಯಃ ಅವನ್ದ್ಯಃ

† ಪ್ರಪಂಚದಲ್ಲಿ, ಜಾತಿಪ್ರವೃತ್ತಿನಿಮಿತ್ತಕಗಳೆಂದೂ, ಕ್ರಿಯಾಪ್ರವೃತ್ತಿನಿಮಿತ್ತಕಗಳೆಂದೂ, ಗುಣಪ್ರವೃತ್ತಿನಿಮಿತ್ತಕಗಳೆಂದೂ, ಯದೃಚ್ಛಾಶಬ್ದಗಳೆಂದೂ, ನಾಲ್ಕುವಿಧವಾದ ಶಬ್ದಗಳಿರುವುವು ಪ್ರವೃತ್ತಿ ನಿಮಿತ್ತವೆಂದರೆ, ಆ ಶಬ್ದವು ಆ ಅರ್ಥದಲ್ಲಿ ಪ್ರವರ್ತಿಸುವುದಕ್ಕೆ ಕಾರಣವೆಂದು ತಾತ್ಪರ್ಯವು ಬ್ರಾಹ್ಮಣ ಶೂದ್ರ ವೃಕ್ಷ ಪರ್ವತ ಮುಂತಾದ ಶಬ್ದಗಳು ಜಾತಿ ಪ್ರವೃತ್ತಿ ನಿಮಿತ್ತಕಗಳು, ಹೋದವನು ಬಂದವನು ಇತ್ಯಾದಿ ಶಬ್ದಗಳೆಲ್ಲವೂ ಕ್ರಿಯಾ ಪ್ರವೃತ್ತಿನಿಮಿತ್ತಕಗಳು, ಬಿಳುಪು ಕೆಂಪು ಸಾಧು ದುಷ್ಟ ಇತ್ಯಾದಿಗಳೆಲ್ಲವೂ ಗುಣಪ್ರವೃತ್ತಿನಿಮಿತ್ತಕಗಳು, ರಾಮ ಕೃಷ್ಣ ಮುಂತಾದ ಸಂಜ್ಞಾವಾಚಕಗಳು ಯದೃಚ್ಛಾಶಬ್ದಗಳು ಪರಮಾತ್ಮನಲ್ಲಿ ಜಾತಿ ಕ್ರಿಯಾ ಗುಣ ಸಂಜ್ಞೆಗಳೊಂದೂ ಇಲ್ಲದಿರುವ ಕಾರಣ, ಅವನನ್ನು ಯಾವ ಶಬ್ದವೂ ಗೋಚರಿಸಲಾರದು 'ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ' (ತೈತ್ತಿರೀಯೋಪನಿಷತ್ತು) 'ನ ಶಬ್ದಗೋಚರಂ ಯಸ್ಯ ಯೋಗಿಧ್ಯೇಯಂ ಪರಂ ಪದಮ್' (ವಿಷ್ಣುಪುರಾಣ)

ಮೂ॥ ಲೋಕೋರ್ಧ್ವಗಃ ಶೇಷಶಾಯೀ ಕ್ಷೀರಾಬ್ಧಿನಿಲಯೋಽನಲಃ ।
ಆತ್ಮಯೋನಿರಯೋನಿಶ್ಚ ಸಪ್ತಜಿಹ್ವಃ ಸಹಸ್ರಪಾತ್ ॥೫೭೭॥

೫೭೭. ಲೋಕೋರ್ಧ್ವಗಃ (1) ಸಮಸ್ತ ಲೋಕಗಳಿಗೂ ಮೇಲಿರತಕ್ಕವನು ೫೭೮ ಶೇಷಶಾಯೀ (2) ಆದಿಶೇಷನಮೇಲೆ ಮಲಗಿರತಕ್ಕವನು ೫೭೯ ಕ್ಷೀರಾಬ್ಧಿನಿಲಯಃ (3) ಕ್ಷೀರಸಮುದ್ರವೇ ಗೃಹವಾಗಿ ಉಳ್ಳವನು ೫೮೦ ಅನಲಃ (4) ಪ್ರಾಣಗಳನ್ನು ಆತ್ಮನೆಂದು ಸ್ವೀಕರಿಸತಕ್ಕ ಜೀವಾತ್ಮನು ಅಥವಾ, (5) 'ಅಗನ್ಧಮರಸಂ' ಇತ್ಯಾದಿ ಬೃಹದಾರಣ್ಯಕೋಪನಿಷದುಕ್ತರೀತಿಯಾಗಿ ಗನ್ಧಶೂನ್ಯನಾದವನು ಅಥವಾ, (6) ಇವನಿಗೆ ತಕ್ಕಷ್ಟು ಪದಾರ್ಥವೊಂದೂ ಇಲ್ಲದಿರುವುದರಿಂದ ಅನಲನು ಅಥವಾ (7) ಶಕ್ತಿ ಸಂಪತ್ತುಗಳಿಗೆ ಪರ್ಯಾಪ್ತಿಯೇ ಇಲ್ಲದವನು ೫೮೧ ಆತ್ಮಯೋನಿಃ (8) ತನಗೆ ತಾನೇ ಉತ್ಪತ್ತಿಕಾರಣವಾಗಿ ಉಳ್ಳವನು ಅಥವಾ, (9) ಜೀವಾತ್ಮರಿಗೆಲ್ಲ ಉತ್ಪತ್ತಿಸ್ಥಾನ ಭೂತನಾದವನು. ಅಥವಾ, (10) ಆತ್ಮ

ಜ್ಞಾನಕ್ಕೆ ಉದಯಕಾರಣಭೂತನು ೩೮೨ ಅಯೋನಿಃ (11) ತಾನು ಎಲ್ಲಿಯೂ ಹುಟ್ಟದಿರತಕ್ಕವನು ೩೮೩ ಸಪ್ತಜಿಹ್ವಃ (12) ಕಾಳೀ ಕರಾಳೀ ಮುಂತಾದ ಏಳು ನಾಲ್ಗೆಗಳುಳ್ಳ ಅಗ್ನಿಸ್ವರೂಪನು ೩೮೪ ಸಹಸ್ರಪಾತ್ (13) ಸಹಸ್ರಪಾದಗಳುಳ್ಳವನು ॥೫೭॥

(1) ಲೋಕಾನಾಂ ಊರ್ಧ್ವಂ ಗಚ್ಛತಿ ಇತಿ ಲೋಕೋರ್ಧ್ವಗಃ (2) ಶೇಷೇ ಶೇತೇ ಇತಿ ಶೇಷಶಾಯೀ, (3) ಕ್ಷೀರಾಬ್ಧಿಃ ನಿಲಯಃ ಯಸ್ಯ ಸಃ (4) ಅನಸ್ತಿ ಇತಿ ಅನಾಃ, ಅನಾಶ್ ಲಾತಿ ಇತಿ ಅನಲಃ (5) ನಲತಿ ಇತಿ ನಲಃ, ಣಲ ಗನ್ಧೇ ನ ನಲಃ ಅನಲಃ (6) ನಾಸ್ತಿ ಅಲಂ ಯಸ್ಮೈ ಸಃ (7) ನಾಸ್ತಿ ಅಲಂ ಯಸ್ಮಿನ್ ಸಃ (8) ಆತ್ಮೈವ ಯೋನಿಃ ಯಸ್ಯ ಸಃ (9) ಆತ್ಮನಾಂ ಯೋನಿಃ (10) ಆತ್ಮನಃ ಯೋನಿಃ (11) ನಾಸ್ತಿ ಯೋನಿಃ ಯಸ್ಯ ಸಃ (12) ಸಪ್ತ ಜಿಹ್ವಾಃ ಯಸ್ಯ ಸಃ (13) ಸಹಸ್ರಂ ಪಾದಾಃ ಯಸ್ಯ ಸಃ

ಮೂ॥ ಅಮೃತಾಂಶುರ್ಮಹಾಗರ್ಭೋ ನಿವೃತ್ತವಿಷಯಸ್ಪೃಹಃ ।
ತ್ರಿಕಾಲಜ್ಞೋ ಮುನಿಃ ಸಾಕ್ಷೀ ವಿಹಾಯಸಗತಿಃ ಕೃತೀ ॥೫೮॥

೩೮೫ ಅಮೃತಾಂಶುಃ (1) ನಾಶರಹಿತನಾದ ಕಿರಣವುಳ್ಳವನು ಅಥವಾ, (2) ಅಮೃತಮಯಕಿರಣನಾದ ಚಂದ್ರರೂಪನು ೩೮೬ ಮಹಾಗರ್ಭಃ (3) ಸಮಸ್ತ ಬ್ರಹ್ಮಾಂಡವನ್ನೂ ಅಡಗಿಸಿಕೊಂಡಿರುವ ದೊಡ್ಡ ಗರ್ಭವುಳ್ಳವನು ೩೮೭ ನಿವೃತ್ತವಿಷಯಸ್ಪೃಹಃ (4) ವಿಷಯಾಭಿಲಾಷ ಶೂನ್ಯನಾದವನು ೩೮೮ ತ್ರಿಕಾಲಜ್ಞಃ (5) ಭೂತ ಭವಿಷ್ಯತ್ ವರ್ತಮಾನರೂಪವಾದ ಕಾಲತ್ರಯವನ್ನೂ ತಿಳಿದಿರತಕ್ಕವನು ೩೮೯ ಮುನಿಃ (6) ಮೌನಶೀಲನು ೩೯೦ ಸಾಕ್ಷೀ (7) ಸಮಸ್ತ ಪ್ರಪಂಚವ್ಯವಹಾರವನ್ನೂ ಸಾಕ್ಷಿಭೂತನಾಗಿ ಉದಾಸೀನವೃತ್ತಿಯಿಂದ ನೋಡತಕ್ಕವನು ೩೯೧ ವಿಹಾಯಸಗತಿಃ (8) ಆಕಾಶವೇ ಆಶ್ರಯವಾಗಿ ಉಳ್ಳವನು ಅಥವಾ, (9) ಆಕಾಶದಂತೆ ನಿರ್ಲೇಪವಾದ ಅವಸ್ಥೆಯುಳ್ಳವನು ೩೯೨ ಕೃತೀ (10) ಸರ್ವ ಕರ್ಮ ಕುಶಲನು * ॥೫೮॥

(1) ನ ಮೃತಾಃ ಅಮೃತಾಃ ಅಮೃತಾಃ ಅಂಶವಃ ಯಸ್ಯ ಸಃ (2) ಅಮೃತಂ ಅಂಶವಃ ಯಸ್ಯ ಸಃ (3) ಮಹಾನ್ ಗರ್ಭಃ ಯಸ್ಯ ಸಃ (4) ನಿವೃತ್ತಾ ವಿಷಯಸ್ಪೃಹಾ ಯಸ್ಮಾತ್ ಸಃ (5) ತ್ರಯಾಣಾಂ ಕಾಲಾನಾಂ ಸಮಾಹಾರಃ ತ್ರಿಕಾಲಮ್, ತ್ರಿಕಾಲಂ ಜಾನಾತಿ ಇತಿ ತ್ರಿಕಾಲಜ್ಞಃ (6) ಮನ್ಯತೇ ಇತಿ ಮುನಿಃ (7) ಸಾಕ್ಷಾತ್ ಪಶ್ಯತಿ ಇತಿ ಸಾಕ್ಷೀ (8) ವಿಹಾಯಸಂ ಗತಿಃ ಯಸ್ಯ ಸಃ (9) ವಿಹಾಯಸಸ್ಯೇವ ಗತಿಃ ಯಸ್ಯ ಸಃ (10) ಕೃತಂ ಅಸ್ಯ ಅಸ್ತಿ ಇತಿ ಕೃತೀ

* ಇಲ್ಲಿ 'ಕೃತಿಃ' ಎಂದೂ ಪಾಠಾಂತರವುಂಟು ಆಗ ಪುರುಷಪ್ರಯತ್ನರೂಪನಾದವನೆಂದು ಅರ್ಥವು

ಮೂ॥ ಪರ್ಜನ್ಯಃ ಕುಮುದೋ ಭೂತಾವಾಸಃ ಕಮಲಲೋಚನಃ ।
ಶ್ರೀವತ್ಸವಕ್ಷಾಃ ಶ್ರೀವಾಸೋ ವೀರಹಾ ಲಕ್ಷ್ಮಣಾಗ್ರಜಃ ॥೫೯॥

೩೯೩ ಪರ್ಜನ್ಯಃ (1) ಮೇಘದಂತೆ ತಾಪನಿವಾರಕನಾಗಿಯೂ ಕಾಮಾಭಿವರ್ಷಕನಾಗಿಯೂ ಇರತಕ್ಕವನು ೩೯೪ ಕುಮುದಃ (2) ಭೂಮಿಗೆ ಭಾರವನ್ನು ನಿವಾರಣೆಮಾಡಿ ಸಂತೋಷವುಂಟುಮಾಡತಕ್ಕವನು ೩೯೫ ಭೂತಾವಾಸಃ (3) ಸಕಲ ಲೋಕಕ್ಕೂ ಯಥಾರ್ಥವಾದ ಆಶ್ರಯಸ್ವರೂಪನು ೩೯೬ ಕಮಲಲೋಚನಃ (4) ತಾವರೆಯೆಲೆಯಂತೆ ಕಣ್ಣು

ಗಳುಳ್ಳವನು. ೫೯೭ ಶ್ರೀವತ್ಸವಕ್ಷಾಃ (5) ಶ್ರೀವತ್ಸವೆಂಬ ಚಿಹ್ನೆಯೇ ಎದೆಯಲ್ಲಿ ಉಳ್ಳವನು ೫೯೮. ಶ್ರೀವಾಸಃ (6) ಲಕ್ಷ್ಮೀದೇವಿಗ ಆವಾಸಭೂತನಾದವನು ೫೯೯ ವೀರಹಾ (7) ಅಸುರವೀರರನ್ನು ಕೊಂದವನು ಅಥವಾ, (8) ಮುಕ್ತರಾದವರ ವಿವಿಧಕರ್ಮಗತಿಗಳನ್ನು ನಾಶ ಮಾಡತಕ್ಕವನು ೬೦೦ ಲಕ್ಷ್ಮಣಾಗ್ರಜಃ (9) ಸೌಂದರ್ಯಶಾಲಿಗಳೆಲ್ಲರ ಅಗ್ರಗಾಮಿಯಾದ ವನು ॥೫೯೭॥

(1) ಪಿಪರ್ತಿ ಇತಿ ಪರ್ಜನ್ಯಃ ಪೃ ಪಾಲನ ಪೂರಣಯೋಃ ಅಥವಾ, ಪರ್ಜತಿ ಇತಿ ಪರ್ಜನ್ಯ ಪೃಷು ಸೇಂ ಚನೇ (2) ಕುಂ ಮೋದಯತಿ ಇತಿ ಕುಮುದಃ (3) ಭೂತಶ್ರಾಸ ಆವಾಸಶ್ಚ (4) ಕಮಲೇ ಇವ ಲೋಂ ಚನೇ ಯಸ್ಯ ಸಃ, (5) ಶ್ರೀವತ್ಸಃ ವಕ್ಷಸಿ ಯಸ್ಯ ಸ (6) ಶ್ರಿಯಃ ವಾಸಃ (7) ವೀರಾನ್ ಹನ್ತಿ ಇತಿ ವೀರಹಾ (8) ವಿವಿಧಾಃ ಈರಾಃ ವೀರಾಃ, ವೀರಾಃ ಹನ್ತಿ ಇತಿ ವೀರಹಾ (9) ಲಕ್ಷ್ಮೀ ಏಷು ಅನ್ತಿ ಇತಿ ಲ ಕ್ಷ್ಮಣಃ, ಲಕ್ಷ್ಮಣಾನಾಂ ಅಗ್ರಜಃ ಲಕ್ಷ್ಮಣಾಗ್ರಜಃ

ಮೂ॥ ಲೋಕಾಭಿರಾಮೋ ಲೋಕಾರಿಮರ್ದನಃ ಸೇವಕಪ್ರಿಯಃ ।
ಸನಾತನತಮೋ ಮೇಘಶ್ಯಾಮಲೋ ರಾಕ್ಷಸಾನ್ತಕಃ ॥೬೦॥

೬೦೧ ಲೋಕಾಭಿರಾಮಃ (1) ಲೋಕದಲ್ಲೆಲ್ಲ ಸುಂದರನಾದವನು ೬೦೨ ಲೋಕಾ ರಿಮರ್ದನಃ (2) ಲೋಕಕಂಟಕರಾದ ರಾಕ್ಷಸರನ್ನು ಸಂಹರಿಸತಕ್ಕವನು ಅಥವಾ, (3) ಜ್ಞಾನಕ್ಕೆ ವಿರೋಧಿಯಾದ ಅಜ್ಞಾನವನ್ನು ನಾಶಪಡಿಸತಕ್ಕವನು. ೬೦೩ ಸೇವಕಪ್ರಿಯಃ (4) ಸೇವಕರಿಗೆ ಪ್ರೀತಿಪಾತ್ರನಾದವನು ೬೦೪ ಸನಾತನತಮಃ (5) ಬ್ರಹ್ಮಾದಿಗಳಿಗಿಂತ ಪ್ರಾಚೀ ನನು ೬೦೫ ಮೇಘಶ್ಯಾಮಲಃ (6) ಮೇಘದಂತೆ ಶ್ಯಾಮವರ್ಣವಾದ ದೇಹವುಳ್ಳವನು ೬೦೬ ರಾಕ್ಷಸಾನ್ತಕಃ (7) ರಾಕ್ಷಸರಿಗೆಲ್ಲ ಯಮಪ್ರಾಯನಾದವನು ॥೬೦॥

(1) ಲೋಕೇಷು ಅಭಿರಾಮಃ (2) ಲೋಕಾನಾಂ ಅರಯಃ, ಲೋಕಾರೀಣಾಂ ಮರ್ದನಃ (3) ಲೋ ಕಸ್ಯ ಅರಿಃ, ಲೋಕಾರೇಃ ಮರ್ದನಃ (4) ಸೇವಕಾನಾಂ ಪ್ರಿಯಃ (5) ಅತ್ಯಂತಂ ಸನಾತನಃ (6) ಮೇಘ ಇವ ಶ್ಯಾಮಲಃ (7) ರಾಕ್ಷಸಾನಾಂ ಅನ್ತಕಃ

ಮೂ॥ ದಿವ್ಯಾಯುಧಧರಃ ಶ್ರೀಮಾನ್ ಅಪ್ರಮೇಯೋ ಜಿತೇನ್ದ್ರಿಯಃ ।
ಭೂದೇವವನ್ದ್ಯೋ ಜನಕಪ್ರಿಯಕೃತ್ ಪ್ರಪಿತಾಮಹಃ ॥೬೧॥

೬೦೭ ದಿವ್ಯಾಯುಧಧರಃ (1) ಅಪ್ರಾಕೃತವಾದ ಆಯುಧಗಳನ್ನು ಧರಿಸಿರತಕ್ಕವನು ೬೦೮ ಶ್ರೀಮಾನ್. ಅತಿಶಯವಾದ ಶೌರ್ಯಲಕ್ಷ್ಮಿಯುಳ್ಳವನು ೬೦೯ ಅಪ್ರಮೇಯಃ (2) ಇವನು ಹೀಗಿದ್ದಾನೆಂದು ನಿಷ್ಕರ್ಷಿಸುವುದಕ್ಕೆ ಅಸಾಧ್ಯನು ೬೧೦ ಜಿತೇನ್ದ್ರಿಯಃ (3) ಜಯಿಸಲ್ಪಟ್ಟ ಇಂದ್ರಿಯಗಳುಳ್ಳವನು ೬೧೧ ಭೂದೇವವನ್ದ್ಯಃ (4) ಸಮಸ್ತ ಬ್ರಹ್ಮರ್ಷಿಗ ಳಿಂದಲೂ ನಮಸ್ಕರಿಸಲ್ಪಡತಕ್ಕವನು ೬೧೨ ಜನಕಪ್ರಿಯಕೃತ್ (5) ತಂದೆಗ ಪ್ರೀತಿಯ ನ್ನುಂಟುಮಾಡುವುದಕ್ಕಾಗಿ ಅರಣ್ಯವಾಸಾದಿಗಳನ್ನು ಸ್ವೀಕರಿಸಿದವನು ಅಥವಾ, ಜನಕರಾಜನ ಪುತ್ರಿಯನ್ನು ಮದುವೆಮಾಡಿಕೊಂಡು ಅವನಿಗೆ ಸಂತೋಷವುಂಟುಮಾಡಿದವನು ೬೧೩ ಪ್ರಪಿತಾ ಮಹಃ (6) ಚತುರ್ಮುಖ ಬ್ರಹ್ಮನು ಲೋಕಕ್ಕೆಲ್ಲ ಪಿತಾಮಹನು ಇವನು ಆ ಚತುರ್ಮುಖನಿಗೂ ತಂದೆಯಾದುದರಿಂದ ಪ್ರಪಂಚಕ್ಕೆಲ್ಲ ಪ್ರಪಿತಾಮಹನು ॥೬೧॥

(1) ದಿವ್ಯಾನಿ ಚ ತಾನಿ ಆಯುಧಾನಿ ಚ, ದಿವ್ಯಾಯುಧಾನಾಂ ಧರಃ (2) ಪ್ರಮಾತುಂ ಅಶಕ್ಯಃ (3) ಜಿತಾನಿ ಇನ್ದ್ರಿಯಾಣಿ ಯೇನ ಸಃ (4) ಭುವಿ ದೇವಾನಃ, ಭೂದೇವಾನಾಂ ವನ್ದ್ಯಃ (5) ಜನಕಸ್ಯ ಪ್ರಿಯಕೃತ್. (6) ಪಿತಾಮಹಸ್ಯ ಪಿತಾ

ಮೂ॥ ಉತ್ತಮಃ ಸಾತ್ವಿಕಃ ಸತ್ಯಃ ಸತ್ಯಸನ್ಧಸ್ತ್ರಿವಿಕ್ರಮಃ ।
ಸುವ್ರತಃ ಸುಲಭಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ॥೬೦॥

೪೧೪ ಉತ್ತಮಃ (1) ಪ್ರಪಂಚದಲ್ಲಿ ಸರ್ವರಿಗಿಂತಲೂ ಉತ್ತಮನಾದವನು ೪೧೫ ಸಾತ್ವಿಕಃ (2) ಸತ್ವಗುಣಕ್ಕೆ ಅರ್ಹನು ೪೧೬ ಸತ್ಯಃ (3) ಅವಿತಥ * ರೂಪನು ಅಥವಾ, † ಮೂರ್ತಾಮೂರ್ತಸ್ವರೂಪನು ಅಥವಾ, ‡ ಪ್ರಾಣ ಅನ್ನ ಆದಿತ್ಯ ರೂಪನು ಅದವಾ, § ಸತ್ಯಮಜನ ಧರ್ಮರೂಪನಾದವನು ೪೧೭ ಸತ್ಯಸನ್ಧಃ (4) ಸತ್ಯವನ್ನು ನುಡಿಯುವುದರಲ್ಲಿಯೇ ಪ್ರತಿಜ್ಞೆಯುಳ್ಳವನು ೪೧೮ ತ್ರಿವಿಕ್ರಮಃ (5) ಮೂರುಸಲ ** ಪಾದವಿಕ್ಷೇಪಮಾಡಿದವನು ೪೧೯ ಸುವ್ರತಃ (6) ಶರಣಾಗತರಕ್ಷಣೆಯಂಬ ಅತ್ಯುತ್ತಮವಾದ †† ವ್ರತವುಳ್ಳವನು ೪೨೦ ಸುಲಭಃ (7) ಕೇವಲ ಭಕ್ತಿಮಾತ್ರದಿಂದಲೇ ಸುಖವಾಗಿ ಹೊಂದಲು ಶಕ್ಯನಾಗಿರುವಕಾರಣ ‡‡ ಸುಲಭನು ೪೨೧ ಸೂಕ್ಷ್ಮಃ (8) ಪರಮಾಣುಸ್ವರೂಪನು ೪೨೨ ಸುಘೋಷಃ (9) ವೇದರೂಪವಾದ ಉತ್ತಮಘೋಷವುಳ್ಳವನು ಅಥವಾ, ಮೇಘದಂತೆ ಗಂಭೀರವಾದ ಧ್ವನಿಯುಳ್ಳವನು ಅಥವಾ, (10) ಎಲ್ಲರಿಂದಲೂ ಜನ್ಮಾಗಿ ಉದ್ಘೋಷಿಸಲ್ಪಟ್ಟ ಮಹಾತ್ಮನು ೪೨೩ ಸುಖದಃ (11) ದುರ್ವೃತ್ತರಿಗೆ ಸುಖವನ್ನು ಖಂಡಿಸತಕ್ಕವನು ೪೨೪ ಸುಹೃತ್ (12) ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಪರೋಪಕಾರ ನಿರತವಾದ ಹೃದಯವುಳ್ಳವನು॥

(1) ಅತಿಶಯೇನ ಉತ್ಕೃಷ್ಟಃ ಉತ್ತಮಃ (2) ಸತ್ಯಂ ಅರ್ಹತಿ ಇತಿ ಸಾತ್ವಿಕಃ (3) ಸತಿ ಸಾಧುಃ ಸತ್ಯಃ (4) ಸತ್ಯಮೇವ ಸನ್ಧಾ ಯಸ್ಯ ಸಃ (5) ತ್ರಯಃ ವಿಕ್ರಮಾಃ ಯಸ್ಯ ಸಃ (6) ಶೋಭನಂ ವ್ರತಂ ಯಸ್ಯ ಸಃ (7) ಸುಖೇನ ಲಭ್ಯುಂ ಶಕ್ಯಃ (8) ಸೂಚ್ಯತೇ ಇತಿ ಸೂಕ್ಷ್ಮಃ (9) ಶೋಭನಃ ಘೋಷಃ ಯಸ್ಯ ಸಃ (10) ಸುಷ್ಠು ಘುಷ್ಯತೇ ಇತಿ ಸುಘೋಷಃ (11) ಸುಖಂ ದದಾತಿ ಇತಿ ಸುಖದಃ ದೋ ಅವಖಣ್ಡನೇ (12) ಶೋಭನಂ ಹೃತ್ ಯಸ್ಯ ಸಃ

* 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈತ್ತಿರೀಯೋಪನಿಷತ್ತು)

† 'ಸಚ್ಚ ತ್ಯಚ್ಚಾಭವತ್' (ತೈತ್ತಿರೀಯೋಪನಿಷತ್ತು)

‡ 'ಸದಿತಿ ಪ್ರಾಣಾಃ ತೀತ್ಯನ್ನಂ ಯದಿತ್ಯಸಾವಾದಿತ್ಯಃ' (ಶ್ರುತಿ)

§ 'ತಸ್ಮಾತ್ ಸತ್ಯಂ ಪರಮಂ ವದನ್ತಿ' (ತೈತ್ತರೀಯೋಪನಿಷತ್ತು)

** 'ತ್ರೀಣಿ ಪದಾ ವಿಚಕ್ರಮೇ' (ತೈತ್ತಿರೀಯಬ್ರಾಹ್ಮಣ)

†† 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವದಾ ತಸ್ಮೈ ದದಾಮ್ಯೇತದ್ವ್ರತಂ ಮಮ ॥' (ಶ್ರೀಮದ್ರಾಮಾಯಣ)

‡‡ ಪತ್ರೇಷು ಪುಷ್ಪೇಷು ಫಲೇಷು ತೋಯೇಷ್ವಕೃತಲಭ್ಯೇಷು ಸದೈವ ಸತ್ಸು । ಭಕ್ತ್ಯೈಕಲಭ್ಯೇ ಪುರುಷೇ ಪುರಾಣೇ ಮುಕ್ತೈ ಕಥಂ ನ ಕ್ರಿಯತೇ ಪ್ರಯತ್ನಃ ॥ (ಮಹಾಭಾರತ)

ಮೂ॥ ದಾಮೋದರೋಽಚ್ಯುತಃ ಶಾಙ್ರ್ಗೀ ವಾಮನೋ ಮಧುರಾಧಿಪಃ ।
ದೇವಕೀನನ್ದನಃ ಶೌರಿಃ ಮಧುಕೈಟಭಮರ್ದನಃ ॥೬೧॥

೪೫೫ ದಾಮೋದರಃ. (1) ಉದರಪ್ರದೇಶದಲ್ಲಿ ದಿವ್ಯವಾದ ವನಮಾಲಿಕೆಯುಳ್ಳವನು ಅಥವಾ, ಶಮಾದಿಗುಣ ಸಂಪನ್ನವಾದ ಮತಿಯುಳ್ಳವನು. ಅಥವಾ, * ಕೃಷ್ಣಾವತಾರದಲ್ಲಿ ಯಶೋದೆಯಿಂದ ಉದರಪ್ರದೇಶದಲ್ಲಿ ಕಟ್ಟಲ್ಪಟ್ಟ ಹಗ್ಗವುಳ್ಳವನು ಅಥವಾ, (2) ಸಮಸ್ತ ಲೋಕಗಳೂ ಹೊಟ್ಟೆಯೊಳಗ † ಉಳ್ಳವನು ೪೫೬ ಅಚ್ಯುತಃ (3) ತನ್ನ ಸ್ವರೂಪ ಸಾಮರ್ಥ್ಯಾದಿಗಳದಸೆಯಿಂದ ಯಾವಾಗಲೂ ‡ ತಪ್ಪಿಹೋಗದಿರತಕ್ಕವನು ೪೫೭ ಶಾರ್ಙ್ಗೀ. (4) ಇಂದ್ರಿಯಾದ್ಯಹಂಕಾರಾತ್ಮಕವಾದ ಶಾರ್ಙ್ಗವೆಂಬ ಧನುಸ್ಸುಳ್ಳವನು ೪೫೮ ವಾಮನಃ ಬಲಿಚಕ್ರವರ್ತಿಯ ನಿಗ್ರಹಾರ್ಥವಾಗಿ ವಾಮನಾವತಾರಮಾಡಿದವನು ೪೫೯ ಮಧುರಾಧಿಪಃ (5)ತನ್ನ ಭಕ್ತರಿಗೆ ಮಧುರವಾಗಿ ಕಾಣಿಸುವ ಸಂಸಾರದಿಂದ ಉಂಟಾದ ವ್ಯಥೆಗಳನ್ನೆಲ್ಲ ಪಾರುಮಾಡಿಬಿಡತಕ್ಕವನು ಅಥವಾ, (6) ಕೃಷ್ಣಾವತಾರದಲ್ಲಿ ಮಧುರಾನಗರಿಗೆ ಒಡೆಯನಾಗಿದ್ದವನು ಅಥವಾ, (7) ಅಸ್ವಾದ್ಯವಾದ ಉತ್ತಮವಸ್ತುಗಳಿಗಲ್ಲ ಅಧಿಪತಿಯಾದವನು ಅಥವಾ, (8) ಎಲ್ಲರಿಗೂ ಸುಹೃದಯನಾದ ಸ್ವಾಮಿಯು ೪೬೦ ದೇವಕೀನಂದನಃ (9) ಕೃಷ್ಣಾವತಾರದಲ್ಲಿ ದೇವಕೀದೇವಿಗ ಪುತ್ರನಾಗಿದ್ದವನು ೪೬೧ ಶೌರಿಃ (10) ಶೂರನೆಂಬವನ ವಂಶದಲ್ಲಿ ಹುಟ್ಟಿದ್ದವನು ೪೬೨ ಮಧುಕೈಟಭಮರ್ದನಃ (11) ಪ್ರಪಂಚವೆಲ್ಲ ಜಲಮಯವಾಗಿದ್ದಾಗ ಮಧು ಕೈಟಭರೆಂಬ ರಾಕ್ಷಸರನ್ನು ಸಂಹರಿಸಿದವನು ||೬೨||

(1) ದಾಮ ಉದರೇ ಯಸ್ಯ ಸಃ (2) ದಾಮಾನಿ ಉದರೇ ಯಸ್ಯ ಸಃ (3) ನ ಚ್ಯುತಃ (4) ಶಾರ್ಙ್ಗಂ ಅಸ್ಯ ಅಸ್ತಿ ಇತಿ ಶಾರ್ಙ್ಗೀ (5) ಮದುರ್ಭಿಃ ಆಧಿಃ, ಮಧುಗಾಧಿಂ ಪಿಬತಿ ಇತಿ ಮದುರಾಧಿಪಃ (6) ಮಧುರಾಯಾಃ ಅಧಿಪಃ (7) ಮಧುರಾಣಾಂ ಅಧಿಪಃ (8) ಮಧುರಸ್ಯಾಸ್ಯ ಅಧಿಪಶ್ಚ (9) ದೇವಕ್ಯಾಃ ನನ್ವನಃ (10) ಶೂರಸ್ಯ ಗೋತ್ರಾಪತ್ಯಂ ಪುಮಾನ್ (11) ಮಧುಕೈಟಭೌ ಮರ್ದಯತಿ ಇತಿ ಮಧುಕೈಟಭಮರ್ದನಃ

* 'ದಮಾದ್ವಾ ಮೋದರಂ ವಿದುಃ' (ಮಹಾಭಾರತ)

† ತಯೋರ್ಮಧ್ಯಗತಂ ವಿಶ್ವಂ ದಾಮ್ನಾ ಗಾಢಂ ತಯೋದರಮ್ | ತತಶ್ಚ ದಾಮೋದರತಾಂ ಸ ಯಯೌ ದಾಮ ಬಧ್ನತಾತ್ || (ಬ್ರಹ್ಮಪುರಾಣ)

‡ 'ದಾಮಾನಿ ಲೋಕನಾಮಾನಿ ತಾನಿ ಯಸ್ಮೋದರಾನ್ತರೇ ತೇನ ದಾಮೋದರೋ ದೇವಃ' (ವ್ಯಾಸವಚನ)

ಸ 'ಯಾತ್ಮಾನ್ನ ಚ್ಯುತಪೂರ್ವೋಹಂ ಅಚ್ಯುತಸ್ತೇನ ಕರ್ಮಣಾ' (ಶಾಂತಿಪರ್ವ)

ಮೂ| ಸಪ್ತತಾಳಪ್ರಭೇತ್ತಾ ಚ ಮಿತ್ರವಂಶಪ್ರವರ್ಧನಃ |
ಕಾಲಸ್ವರೂಪೀ ಕಾಲಾತ್ಮಾ ಕಾಲಃ ಕಲ್ಯಾಣದಃ ಕಲಿಃ ||೬೪||

೪೬೩ ಸಪ್ತತಾಳಪ್ರಭೇತ್ತಾ (1) ಸಪ್ತತಾಳವೃಕ್ಷಗಳನ್ನು ಸೀಳಿದವನು ೪೬೪ ಮಿತ್ರವಂಶಪ್ರವರ್ಧನಃ (2) ಸೂರ್ಯವಂಶವನ್ನು ಹೆಚ್ಚಿಸಿದವನು ಅಥವಾ (3) ತನ್ನ ಮಿತ್ರರಾದ ಸುಗ್ರೀವ ವಿಭೀಷಣಾದಿಗಳ ವಂಶವನ್ನು ಬೆಳೆಯಿಸಿದವನು ೪೬೫ ಕಾಲಸ್ವರೂಪೀ. (4) ಶತ್ರುಗಳಿಗೆ ಯಮಸ್ವರೂಪನಾದವನು ೪೬೬ ಕಾಲಾತ್ಮಾ (5) ಅಖಂಡಕಾಲಾತ್ಮಕನಾದವನು ೪೬೭ ಕಾಲಃ (6) ಸಮಸ್ತವನ್ನೂ ಭಾವನೆಮಾಡತಕ್ಕವನು ೪೬೮ ಕಲ್ಯಾಣದಃ (7) ತನ್ನ ಭಕ್ತರಿಗೆಲ್ಲ ಇಹ ಪರ ಶ್ರೇಯಸ್ಸುಗಳನ್ನು ಕೊಡತಕ್ಕವನು ೪೬೯, ಕಲಿಃ (8) ಮಹಾಶೂರನು||

(1) ಸಪ್ತತಾಳಾನಾಂ ಪ್ರಭೇತ್ತಾ (2) ಮಿತ್ರಸ್ಯ ವಂಶಃ, ತಸ್ಯ ಪ್ರವರ್ಧನಃ (3) ಮಿತ್ರಾಣಾಂ ವಂಶಃ,

ತಸ್ಯ ಪ್ರವರ್ಧನಃ (4) ಕಾಲಸ್ವರೂಪಂ ಅಸ್ಯ ಅಸ್ತಿ ಇತಿ ಕಾಲಸ್ವರೂಪೀ (5) ಕಾಲಃ ಆತ್ಮಾ ಯಸ್ಯ ಸಃ. (6) ಕಲಯತಿ ಇತಿ ಕಾಲಃ (7) ಕಲ್ಯಾಣಂ ದದಾತಿ ಇತಿ ಕಲ್ಯಾಣದಃ (8) ಕಲಯತಿ ಇತಿ ಕಲಿಃ

ಮೂ॥ ಸಂವತ್ಸರಋತುಃ ಪಕ್ಷೋ ಹ್ಯಯನೋ ದಿವಸೋ ಯುಗಃ ।

ಸ್ತವ್ಯೋ ವಿವಿಕ್ತೋ ನಿರ್ಲೇಪಃ ಸರ್ವವ್ಯಾಪೀ ನಿರಾಕುಲಃ ॥೬೫॥

೪೪೦ ಸಂವತ್ಸರಃ (1) ಸಂವತ್ಸರವಂಬುದಾಗಿ ಪರಿಚ್ಛಿನ್ನವಾದ ಕಾಲಸ್ವರೂಪನು ಅಥವಾ, ಸಮಸ್ತರೂ ಇವನಲ್ಲಿ ಸುಖವಾಗಿ ವಾಸಮಾಡುವರಾದಕಾರಣ ಸಂವತ್ಸರನು ೪೪೧ ಋತುಃ (2) ಋತುವೆಂದು ಪರಿಚ್ಛಿನ್ನವಾದ ಕಾಲಸ್ವರೂಪನು ಅಥವಾ, ಸಂಚರಣಶೀಲನು ೪೪೨ ಪಕ್ಷಃ (3) ಪಕ್ಷವೆಂದು ಪರಿಚ್ಛಿನ್ನವಾದ ಕಾಲಸ್ವರೂಪನು ಅಥವಾ, ಎಲ್ಲರಿಂದಲೂ ತಮ್ಮವನೆಂದು ಪರಿಗ್ರಹಿಸಲ್ಪಡತಕ್ಕವನು ೪೪೩ ಅಯನಮ್ (4) ಅಯನನೆಂದು ಪರಿಚ್ಛಿನ್ನವಾದ ಕಾಲಸ್ವರೂಪನು ಅಥವಾ, ಎಲ್ಲರಿಗೂ ಗತಿಯಾದವನು ೪೪೪ ದಿವಸಃ (5) ದಿವಸವೆಂದು ಪರಿಚ್ಛಿನ್ನವಾದ ಕಾಲಸ್ವರೂಪನು ಅಥವಾ, ಸಮಸ್ತರೂ ಇವನಲ್ಲಿ ವಿಹರಿಸುವರಾದ ಕಾರಣ ದಿವಸನು ೪೪೫ ಯುಗಮ್ (6) ಯುಗವೆಂದು ಪರಿಚ್ಛಿನ್ನವಾದ ಕಾಲರೂಪನು ಅಥವಾ, ಮಾಯಾಶಬಳಚೈತನ್ಯರೂಪನು ೪೪೬ ಸ್ತವ್ಯಃ (7) ಎಲ್ಲರಿಂದಲೂ ತಾನು ಸ್ತುತಿಸಲ್ಪಡತಕ್ಕವನಲ್ಲದೆ, ತಾನು ಒಬ್ಬರನ್ನೂ ಸ್ತುತಿಸಬೇಕಾದುದಿಲ್ಲದವನು ೪೪೭ ವಿವಿಕ್ತಃ (8) ಮಹಾಪರಿಶುದ್ಧನು ೪೪೮ ನಿರ್ಲೇಪಃ (9) ಕರ್ಮವಾಸನಾಲೇಪಶೂನ್ಯನು ೪೪೯ ಸರ್ವವ್ಯಾಪೀ (10) ಸರ್ವ ಪದಾರ್ಥಗಳಲ್ಲಿಯೂ ವ್ಯಾಪಿಸಿಕೊಂಡಿರತಕ್ಕವನು ೪೫೦ ನಿರಾಕುಲಃ (11) ಮಾಯಾಸಾನ್ನಿಧ್ಯವಿದ್ದರೂ ವ್ಯಾಕುಲವಾಗದಿರತಕ್ಕವನು ॥೬೫॥

(1) ಸಮ್ಯಕ್ ವಸನ್ತಿ ಅಸ್ಮಿನ್ ಇತಿ ಸಂವತ್ಸರಃ (2) ಋಚ್ಛತಿ ಇತಿ ಋತುಃ (3) ಪಕ್ಷ್ಯತೇ ಇತಿ ಪಕ್ಷಃ ಪಕ್ಷ ಪರಿಗ್ರಹೇ (4) ಅಯತೇ ಇತಿ ಅಯನಮ್ (5 ದೀವ್ಯನ್ತಿ ಅಸ್ಮಿನ್ ಇತಿ ದಿವಸಃ (6) ಯುಜ್ಯತೇ ಇತಿ ಯುಗಮ್ (7) ಸ್ತೋತುಂ ಯೋಗ್ಯಃ (8) ವಿವಿಜ್ಯತೇ ಸ್ಮ ಇತಿ ವಿವಿಕ್ತಃ ವಿಜ ಪೃಥಗ್ಭಾವೇ (9) ನಿರ್ಗತಂ ಲೇಪಃ ಯಸ್ಮಾತ್ ಸಃ (10) ಸರ್ವಂ ವ್ಯಾಪ್ನೋತಿ ಇತಿ ಸರ್ವವ್ಯಾಪೀ (11) ನ ಆಕುಲಃ (ನಿಷೇಧಾರ್ಥಕೋ 'ನಿರ್' ಉಪಸರ್ಗಃ) ಅಥವಾ, ನಿರ್ಗತಂ ಆಕುಲಂ ಯಸ್ಮಾತ್ ಸಃ (ಭಾವಪ್ರಧಾನೋ ನಿರ್ದೇಶಃ)

* 'ನಮಾಂ ಲಮ್ಬನ್ತಿ ಕರ್ಮಾಣಿ' (ಭಗವದ್ಗೀತೆ)

ಮೂ॥ ಅನಾದಿನಿಧನಃ ಸರ್ವಲೋಕಪೂಜ್ಯೋ ನಿರಾಮಯಃ ।

ರಸೋ ರಸಜ್ಞಃ ಸಾರಜ್ಞೋ ಲೋಕಸಾರೋ ರಸಾತ್ಮಕಃ ॥೬೬॥

೪೫೧ ಅನಾದಿ ನಿಧನಃ (1) ಜನನ ಮರಣಗಳಿಲ್ಲದವನು ೪೫೨ ಸರ್ವಲೋಕಪೂಜ್ಯಃ (2) ಸಮಸ್ತ ಲೋಕಗಳಿಂದಲೂ ಪೂಜಿಸಲ್ಪಡಬೇಕಾದವನು ೪೫೩ ನಿರಾಮಯಃ. (3) ಆಧ್ಯಾಧಿಶೂನ್ಯನು ಅಥವಾ, ನಿರಾಕಾರನಾದುದರಿಂದ ರೋಗಶೂನ್ಯನು ೪೫೪ ರಸಃ. (4) ಆನಂದ * ರೂಪನು ೪೫೫ ರಸಜ್ಞಃ (5) ಸಮಸ್ತ ವಸ್ತುವಿನಲ್ಲಿಯೂ ಇರುವ ಆಸ್ವಾದವನ್ನು ಬಲ್ಲವನು. ೪೫೬ ಸಾರಜ್ಞಃ (6) ಸಾರವನ್ನು ಬಲ್ಲವನು ೪೫೭. ಲೋಕಸಾರಃ. (7)

ಪ್ರಪಂಚದಲ್ಲೆಲ್ಲ ಸಾರಭೂತನಾದವನು ಅಥವಾ, (8) ಜ್ಞಾನವೇ ಸಾರವಾಗಿ ಉಳ್ಳವನು ಳಱಲ ರಸಾತ್ಮಕಃ (9) ಆನಂದ ಸ್ವರೂಪನಾದವನು ॥೬೬॥

(1) ನ ವಿದ್ಯೇತೇ ಆದಿಸಧನೇ ಯಸ್ಯ ಸಃ (2) ಸರ್ವಲೋಕಾನಾಂ ಪೂಜ್ಯಃ (3) ನಿರ್ಗತಃ ಆಮಯಃ ಯಸ್ಮಾತ್ ಸಃ (4) ರಸ್ಯತೇ ಇತಿ ರಸಃ (5) ರಸಂ ಜಾನಾತಿ ಇತಿ ರಸಜ್ಞಃ (6) ಸಾರಂ ಜಾನಾತಿ ಇತಿ ಸಾರಜ್ಞಃ (7) ಲೋಕೇಷು ಸಾರಃ (8) ಲೊಕಃ ಸಾರಃ ಯಸ್ಯ ಸಃ (9) ರಸಃ ಆತ್ಮಾ ಯಸ್ಯ ಸಃ

* 'ರಸೋ ವೈ ಸಃ' (ತೈತ್ತಿರಿಯೋಪನಿಷತ್ತು)

ಮೂ॥ ಸರ್ವದುಃಖಾತಿಗೋ ವಿದ್ಯಾರಾಶಿಃ ಪರಮಗೋಚರಃ ।
ಶೇಷೋ ವಿಶೇಷೋ ವಿಗತಕಲ್ಮಷೋ ರಘುಪುಙ್ಗವಃ ॥೬೭॥

ಳಱಱ ಸರ್ವ ದುಃಖಾತಿಗಃ (1) ಸಮಸ್ತವಾದ ದುಃಖವನ್ನೂ ಅತಿಕ್ರಮಿಸಿರತಕ್ಕವನು ಳಬಂ ವಿದ್ಯಾರಾಶಿಃ (2) ಜ್ಞಾನಕ್ಕೆ ನಿಧಿಯಾದವನು ಅಥವಾ, (3) ಚತುರ್ದಶ * ವಿದ್ಯೆಗಳಿಗೂ ನಿಧಿಯಾದವನು ಳಬಗ ಪರಮಗೋಚರಃ (4) ಸಮಸ್ತ ವೇದವಚನಗಳಿಗೂ ಮುಖ್ಯ ವಿಷಯಭೂತನಾದವನು ಅಥವಾ, ಸಮಸ್ತರ ಧ್ಯಾನಕ್ಕೂ ಮುಖ್ಯವಿಷಯಭೂತನು ಅಥವಾ, (5) ಸುತರಾಂ ಅಗೋಚರನಾದವನು ಳಬಶ ಶೇಷಃ (6) ಪ್ರಳಯಕಾಲದಲ್ಲಿ ಸಮಸ್ತವೂ ಲಯಹೊಂದಿದಾಗಲೂ ಉಳಿದಿರತಕ್ಕವನು ಅಥವಾ, ಆದಿಶೇಷ ಸ್ವರೂಪನು ಳಬಷ. ವಿಶೇಷಃ (7) ಸಮಸ್ತ ವಸ್ತುಗಳಿಗಿಂತ ವಿಲಕ್ಷಣನಾದವನು ಅಥವಾ, ಎಲ್ಲರಿಂಗಿತಲೂ ಶ್ರೇಷ್ಠನಾದವನು ಳಬಳ ವಿಗತ ಕಲ್ಮಷಃ (8) ಪಾಪಶೂನ್ಯನಾದವನು ಅಥವಾ, ರಜಸ್ತಮೋಗುಣಗಳೆಂಬ ಕಲ್ಮಷ ವಿಲ್ಲದವನು ಳಬಱ ರಘುಪುಙ್ಗವಃ ರಘುಶ್ರೇಷ್ಠನು ॥೬೭॥

(1) ಸರ್ವದುಃಖಾನಿ ಅತಿಗಚ್ಛತಿ ಇತಿ ಸರ್ವದುಃಖಾತಿಗಃ (2) ವಿದ್ಯಾಯಾಃ ರಾಶಿಃ (3) ವಿದ್ಯಾನಾಂ ರಾಶಿಃ (4) ಪರಮಶ್ಚಾಸೌ ಗೋಚರಶ್ಚ (5) ಪರಂ ಅಗೋಚರಃ (6) ಶಿಷ್ಯತೇ ಇತಿ ಶೇಷಃ (7) ವಿಶಿಷ್ಯತೇ ಇತಿ ವಿಶೇಷಃ (8) ವಿಗತಂ ಕಲ್ಮಷಂ ಯಸ್ಮಾತ್ ಸಃ

* 'ಅಙ್ಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ । ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥'

ಮೂ॥ ವರ್ಣಶ್ರೇಷ್ಠೋ ವರ್ಣಭವ್ಯೋ ವರ್ಣೀ ವರ್ಣಗುಣೋಜ್ಜ್ವಲಃ ।
ಕರ್ಮಸಾಕ್ಷೀ ಗುರುಃ ಶ್ರೇಷ್ಠೋ ದೇವಾಸುರನಮಸ್ಕೃತಂ ॥೬೮॥

ಳಬಬ ವರ್ಣಶ್ರೇಷ್ಠಃ (1) ಅಕ್ಷರಗಳೆಲ್ಲೆಲ್ಲ ಶ್ರೇಷ್ಠವಾದ ಅಕಾರವಾಚ್ಯನಾದವನು. ಅಥವಾ, (2) ಉತ್ತಮವರ್ಣದಲ್ಲಿ ಜನಿಸಿದವನು ಳಬ' ವರ್ಣಭವ್ಯಃ (3) ಸ್ತುತಿಸುವ ವಿಷಯದಲ್ಲಿ ಉತ್ತಮಪಾತ್ರನಾದವನು ಳಬಲ ವರ್ಣೀ (4) ವಾಮನಾವತಾರಮಾಡಿ ಉತ್ತಮವಾದ ಬ್ರಹ್ಮಚರ್ಯವನ್ನು ವಹಿಸಿದ್ದವನು ಅಥವಾ, ನರನಾರಾಯಣಾವತಾರದಲ್ಲಿ, ಅಥವಾ, ಶ್ರೀರಾಮಾವತಾರದಲ್ಲಿ ಉತ್ತಮವಾದ ಬ್ರಹ್ಮಚರ್ಯವನ್ನು ವಹಿಸಿದ್ದವನು ಳಬಳ ವರ್ಣಗುಣೋಜ್ಜ್ವಲಃ. (5) ತನ್ನ ಕ್ಷತ್ರಿಯ ವರ್ಣಕ್ಕೆ ಇರಬೇಕಾದ ಶೌರ್ಯಾದಿಗುಣಗಳಿಂದ ಪ್ರಕಾಶಿಸತಕ್ಕವನು. ಳಭಂ ಕರ್ಮಸಾಕ್ಷೀ (6) ಪ್ರಪಂಚದಲ್ಲಿ ಸಮಸ್ತರೂ ಮಾಡುವ-ಪಾಪಪುಣ್ಯಕರ್ಮಗಳಿಗೆ ಸಾಕ್ಷಿಭೂತನಾದವನು. ಳಭಗ. ಗುರುಃ. ಸಮಸ್ತ ಲೋಕಕ್ಕೂ ತಂದೆಯಾದವನು. ಳಭಶ.

ಶ್ರೇಷ್ಠಃ (7) ಅತ್ಯಂತ ಪ್ರಶಸ್ತನಾದವನು ೪೭೩. ದೇವಾಸುರನಮಸ್ಕೃತಃ. (8) ದೇವತೆಗಳಿಂದಲೂ ರಾಕ್ಷಸರಿಂದಲೂ ನಮಸ್ಕರಿಸಲ್ಪಡತಕ್ಕವನು ||೬೮||

(1) ವರ್ಣೇಷು ಶ್ರೇಷ್ಠಃ (2) ವರ್ಣೇನ ಶ್ರೇಷ್ಠಃ (3) ವರ್ಣೇ ಭವ್ಯಃ. (4) ವರ್ಣಃ ಅಸ್ಯ ಅಸ್ತಿ ಇತಿ ವರ್ಣೀ, (5) ವರ್ಣಗುಣೈಃ ಉಜ್ವಲಃ (6) ಕರ್ಮಣಾಂ ಸಾಕ್ಷೀ (7) ಅತಿಶಯೇನ ಪ್ರಶಸ್ಯಃ (8) ದೇವಾಸುರೈಃ ನಮಸ್ಕೃತಃ

ಮೂ॥ ದೇವಾದಿದೇವೋ ದೇವರ್ಷಿಃ ದೇವಾಸುರವರಪ್ರದಃ ।
ಸರ್ವದೇವಮಯಶ್ಚಕ್ರೀ ಶಾರ್ಙ್ಗಪಾಣಿರನುತ್ತಮಃ ॥೬೯॥

೪೭೪ ದೇವಾದಿದೇವಃ (1) ಸಮಸ್ತ ದೇವತೆಗಳಿಗೂ ಆದಿಭೂತನಾದ ದೇವನು ೪೭೫. ದೇವರ್ಷಿಃ (2) ದೇವತೆಗಳಿಗೆಲ್ಲ ಮಂತ್ರೋಪದೇಶಕನಾದ ಋಷಿಯು ೪೭೬ ದೇವಾಸುರವರ ಪ್ರದಃ (3) ದೇವತಗಳಿಗೂ ಅಸುರರಿಗೂ ವೈಷಮ್ಯವಿಲ್ಲದೆ ಅವರವರ ಕರ್ಮಾನುಗುಣವಾಗಿ ವರವನ್ನು ಕೊಡತಕ್ಕವನು ೪೭೭ ಸರ್ವದೇವಮಯಃ (4) ಸರ್ವದೇವತೆಗಳ ಅಂಶಗಳಿಂದಲೂ ವ್ಯಾಪ್ತವಾಗಿರುವ ಶರೀರವನ್ನು ಸ್ವೀಕರಿಸಿದವನು ೪೭೮ ಚಕ್ರೀ ತನಗೆ ಅಧೀನವಾಗಿ ನಡ ಯುವ ಸಂಸಾರ ಚಕ್ರವುಳ್ಳವನು ೪೭೯ ಶಾರ್ಙ್ಗಪಾಣಿಃ (5) ಶಾರ್ಙ್ಗವೆಂಬ ಧನುಸ್ಸೇ ಕೈಯಲ್ಲಿ ಉಳ್ಳವನು ೪೮೦ ಅನುತ್ತಮಃ (6) ಕೊನೆಯಲ್ಲದಿರುವವನು (ಆದಿಭೂತನು)||೬೯||

(1) ದೇವಾನಾಂ ಆದಿದೇವಃ (2) ದೇವಾನಾಂ ಋಷಿಃ (3) ದೇವಾಸುರಾಣಾಂ ವರಪ್ರದಃ (4) ಸರ್ವದೇವೈಃ ಪ್ರಚುರಃ (5) ಶಾರ್ಙ್ಗಂ ಪಾಣೌ ಯಸ್ಯ ಸಃ (6) ನ ಉತ್ತಮಃ

ಮೂ॥ ಮನೋ ಬುದ್ಧಿರಹಙ್ಕಾರಃ ಪ್ರಕೃತಿಃ ಪುರುಷೋಽವ್ಯಯಃ ।
ನ್ಯಾಯೋ ನ್ಯಾಯನಿಧಿಃ ಶ್ರೀಮಾನ್ ನಯೋ ನಗಧರೋ ಧ್ರುವಃ ॥೭೦॥

೪೭೧ ಮನಃ (1) ಮನಸ್ಸೆಂಬ ತತ್ವಸ್ವರೂಪನು ೪೭೨ ಬುದ್ಧಿಃ. (2) ಬುದ್ಧಿ ತತ್ವ ಸ್ವರೂಪನು ೪೭೩ ಅಹಙ್ಕಾರಃ (3) ಅಹಂಕಾರತತ್ವಸ್ವರೂಪನು. ೪೭೪. ಪ್ರಕೃತಿಃ. (4) ಪ್ರಕೃತಿ ತತ್ವಸ್ವರೂಪನು ೪೭೫ ಪುರುಷಃ (5) ದೇಹದಲ್ಲಿ * ವಾಸಮಾಡತಕ್ಕವನು ೪೭೬. ಅವ್ಯಯಃ (6) ಪ್ರಳಯಕಾಲದಲ್ಲಿ ಸಮಸ್ತ ಭೂತಗಳೂ ಲಯಹೊಂದುವಕಾರಣ ಅವ್ಯಯನು. ೪೭೭ ನ್ಯಾಯಃ (7) ತಪ್ಪಿಲ್ಲದೆ ಯುಕ್ತವಾಗಿ ಕೆಲಸಮಾಡತಕ್ಕವನು ೪೭೮ ನ್ಯಾಯನಿಧಿಃ. (8) ಸಮಸ್ತ ನ್ಯಾಯಗಳಿಗೂ ನಿಧಿಸ್ವರೂಪನು ೪೭ *ಶ್ರೀಮಾನ್ ಪ್ರಶಸ್ತವಾದ ರಾಜ್ಯ ಲಕ್ಷ್ಮಿಯುಳ್ಳವನು ೪೮೦ ನಯಃ (9) ಸಮಸ್ತರನ್ನೂ ಉತ್ತಮಗತಿಯನ್ನು ಹೊಂದಿಸತಕ್ಕ ವನು ೪೮೧ ನಗಧರ (10) ಗೋವರ್ಧನಪರ್ವತವನ್ನು ಎತ್ತಿ ಹಿಡಿದುಕೊಂಡವನು ೪೮೨. ಧ್ರುವಃ ಎಂತಹ ವಿಷಮಸ್ಥಿತಿಯಲ್ಲಿಯೂ ಚಲಸದಿರತಕ್ಕವನು ||೭೦||

(1) ಮನ್ಯತೇ ಅನೇನ ಇತಿ ಮನಃ (2) ಬುಧ್ಯತೇ ಆನಯಾ ಇತಿ ಬುದ್ಧಿಃ (3) 'ಅಹಂ' ಇತಿ ಕರಣಂ ಅಹಙ್ಕಾರಃ (4) ಪ್ರಕರೋತಿ ಇತಿ ಪ್ರಕೃತಿಃ (5) ಪುರಿ ಶೇತೇ ಇತಿ ಪುರುಷಃ (6) ಅಪಿಯನ್ತ್ಯ ಅಸ್ಮಿನ್ ಇತಿ ಅವ್ಯಯಃ (7) ನ ಈಯತೇ ಇತಿ ನ್ಯಾಯಃ. (8) ನ್ಯಾಯಸ್ಯ ನಿಧಿಃ. (9) ನಯತಿ ಇತಿ ನಯಃ (10) ನಗಸ್ಯ ಧರಃ

* "ನವದ್ವಾರಂ ಪುರಂ ಪುಣ್ಯಂ ಏತೈರ್ಭಾವೈಃ ಸಮನ್ವಿತಮ್ | ವ್ಯಾಪ್ಯ ಶೇತೇ ಮಹಾತ್ಮಾ ಯಃ ತಸ್ಮಾತ್ ಪುರುಷಉಚ್ಯತೇ ॥ (ಮಹಾಭಾರತ)

ಮೂ॥ ಲಕ್ಷ್ಮೀವಿಶ್ವಮ್ಭರಾಭರ್ತಾ ದೇವೇನ್ದ್ರೋ ಬಲಿಮರ್ದನಃ ।
ಚಾಣೂರಮರ್ದನೋ ಯಜ್ವಾ ನುತ್ತಮೋ ಮುನಿಸೇವಿತಃ ॥೬೧॥

೪೯೩ ಲಕ್ಷ್ಮೀವಿಶ್ವಮ್ಭರಾಭರ್ತಾ (1) ಶ್ರೀದೇವಿ ಭೂದೇವಿಯರಿಗ ಪತಿಯಾದವನು ೪೯೪. ದೇವೇನ್ದ್ರಃ (2)ಸಮಸ್ತ ದೇವತೆಗಳಿಗೂ ಪರಮೇಶ್ವರನಾದವನು ೪೯೫ ಬಲಿಮರ್ದನಃ (3) ಬಲಿಚಕ್ರವರ್ತ್ತಿಯನ್ನು ಮರ್ದಿಸಿದವನು ಅಥವಾ, (4) ಅತಿಬಲಿಷ್ಠರಾದ ಶತ್ರುಗಳನ್ನು ಗೆದ್ದವನು ಅಥವಾ, (5) ಬಲವತ್ತರವಾದ ಇಂದ್ರಿಯ ಗ್ರಾಮವನ್ನು ಗೆಲ್ಲುತಕ್ಕವನು ೪೯೬ ಚಾಣೂರಮರ್ದನಃ. ಚಾಣೂರನನ್ನು ಕೂಂದವನು ೪೯೭ ಯಜ್ವಾ (6) ಯಜ್ಞದಲ್ಲಿ ಯಜಮಾನಸ್ವರೂಪನು. ೪೯೮ ನುತ್ತಮಃ (7) ಸಮಸ್ತ ಪ್ರಾಣಿಗಳಿಗೂ ಅಂತರ್ಯಾಮಿಯಾಗಿದ್ದು ಗೊಂಡು ಚನ್ನಾಗಿ ಪ್ರೇರಿಸತಕ್ಕವನು *(೮) ೪೯೯ ಮುನಿಸೇವಿತಃ (9) ಸಮಸ್ತ ಮಹರ್ಷಿಗಳೆಂದಲೂ ಸೇವಿಸಲ್ಪಟ್ಟವನು ॥೬೧॥

(1) ಲಕ್ಷ್ಮೀವಿಶ್ವಮ್ಭರಾಭರ್ತಾ (2) ದೇವಾನಾಂ ಇನ್ದ್ರಃ (3) ಬಲಿಂ ಮರ್ದಯತಿ ಇತಿ ಬಲಿಮರ್ದನಃ (4) ಬಲಿನಃ ಮರ್ದಯತಿ ಇತಿ ಬಲಿಮರ್ದನಃ (5) ಬಲಿನಂ ಮರ್ದಯತಿ ಇತಿ ಬಲಿಮರ್ದನಃ (6) ಯಜತಿ ಇತಿ ಯಜ್ವಾ (7) ಅತಿಶಯೇನ ನುದತಿ ಇತಿ ನುತ್ತಮಃ (8) ಮುನಿಭಿಃ ಸೇವಿತಃ

* ಇಲ್ಲಿ ಅನುತ್ತಮಃ ಎಂದೂ ಪದವಾಗಬಹುದು

ಮೂ॥ ದೇವಾಗ್ರಣೀಃ ಶಿವಧ್ಯಾನತತ್ಪರಃ ಪರಮೇಶ್ವರಃ ।
ಸಾಮಗಾನಪ್ರಿಯೋಽಕ್ರೂರಃ ಪುಣ್ಯಕೀರ್ತಿಃ ಸುಲೋಚನಃ ॥೬೨॥

೫೦೦ ದೇವಾಗ್ರಣೀಃ (1) ದೇವತೆಗಳಿಗೆಲ್ಲ ಮುಂದಾದವನು ೫೦೧ ಶಿವಧ್ಯಾನತತ್ಪರಃ (2) ಪ್ರಪಂಚಕ್ಕೆಲ್ಲ ಮಂಗಳವುಂಟಾಗಲೆಂಬ ಅಭಿಸಂಧಿಯಲ್ಲಿಯೇ ನಿರತನಾದವನು ಅಥವಾ, ಈಶ್ವರನ ಧ್ಯಾನದಲ್ಲಿ ನಿರತನಾದವನು ೫೦೨ ಪರಮೇಶ್ವರಃ ತಾನು ಈಶ್ವರನನ್ನು ಧ್ಯಾನಿತಕ್ಕವನಾಗಿಯೂ, ಸ್ವಯಂ ಆ ಪರಮೇಶ್ವರರೂಪನಾಗಿಯೂ ಇರತಕ್ಕವನು ೫೦೩ ಸಾಮಗಾನಪ್ರಿಯಃ (3) ಸಾಮವೇದಗಾನದಲ್ಲಿ ಅತಿಯಾಗಿ ಪ್ರೀತಿಯುಳ್ಳವನು ೫೦೪ ಅಕ್ರೂರಃ (4) ಕೋಪವಿಲ್ಲದವನಿಗೆ ಕ್ರೌರ್ಯಹುಟ್ಟುವುದಿಲ್ಲ, ಕಾಮವಿಲ್ಲದವನಿಗ ಕೋಪವೇ ಹುಟ್ಟುವುದಿಲ್ಲ ಇವನು ಅವಾಪ್ತ ಸಮಸ್ತ ಕಾಮಗಳುಳ್ಳವನಾದ ಕಾರಣ, ಇವನಿಗೆ ಕಾಮವೇ ಇಲ್ಲ; ಅತಪವ ಕೋಪವೂ ಇಲ್ಲ ಅದುದರಿಂದ ಇವನು ಕ್ರೂರನೆಲ್ಲದಿರುವನು ೫೦೫. ಪುಣ್ಯಕೀರ್ತಿಃ (5) ಲೋಕದಲ್ಲೆಲ್ಲ ಪವಿತ್ರವಾದ ಯಶಸ್ಸುಳ್ಳವನು. ಅಥವಾ, ಸಮಸ್ತರನ್ನೂ ಪಾವನ ಮಾಡತಕ್ಕ ನಾಮಕೀರ್ತನೆಯುಳ್ಳವನು ೫೦೬ ಸುಲೋಚನಃ. (6) ಅತಿ ಪ್ರಶಸ್ತವಾದ ಜ್ಞಾನ ದೃಷ್ಟಿಯುಳ್ಳವನು ಅಥವಾ, (7) ಸರ್ವಲೋಕ ಮನೋಹರವಾದ ನೇತ್ರಗಳುಳ್ಳವನು ॥೬೨॥

(1) ದೇವಾನಾಂ ಅಗ್ರಣೀಃ (2) ಶಿವಸ್ಯ ಧ್ಯಾನಂ, ಶಿವಧ್ಯಾನೇ ತತ್ಪರಃ (3) ಸಾಮ್ನಾಂ ಗಾನಂ, ಗಾನೇ ಪ್ರಿಯಃ (4) ನ ಕ್ರೂರಃ ಅಕ್ರೂರಃ (5) ಪುಣ್ಯಾ ಕೀರ್ತಿಃ ಯಸ್ಯ ಸಃ (6) ಶೋಭನಂ ಲೋಚನಂ ಯಸ್ಯ. (7) ಶೋಭನೇ ಲೋಚನೇ ಯಸ್ಯ

ವ್ಯೂ॥ ಪುಣ್ಯಃ ಪುಣ್ಯಾಧಿಕಃ ಪೂರ್ವಃ ಪೂರ್ಣಃ ಪೂರಯಿತಾ ರವಿಃ ।
ಜಟಿಲಃ ಕಲ್ಮಷಧ್ವಾನ್ತಪ್ರಧ್ವಂಸನವಿಭಾವಸುಃ ॥೬೫॥

೫೧೦ ಪುಣ್ಯಃ ಪಾಪಿಗಳನ್ನೂ ಪರಿಶುದ್ಧಿಮಾಡತಕ್ಕವನು ೫೧೧ ಪುಣ್ಯಾಧಿಕಃ (1) ಪವಿತ್ರಗೊಳ್ಳಿಸತಕ್ಕವರೆಲ್ಲರ ಅತ್ಯುತ್ತಮನು ೫೧೨ ಪೂರ್ವಃ (2) ಎಲ್ಲಕ್ಕಿಂತಲೂ ಪ್ರಾಚೀನನಾದವನು ಅಥವಾ, ಎಲ್ಲರಿಗಿಂತಲೂ ಅಗ್ರಪೂಜೆಗದಲ್ಲಿರತಕ್ಕವನು ೫೧೩ ಪೂರ್ಣಃ ಅಖಂಡ ರೂಪನಾದವನು ೫೧೪ ಪೂರಯಿತಾ (3) ಸಮಸ್ತರನ್ನೂ ಸಕಲ ಕಾಮಗಳಿಂದಲೂ ಪರಿಪೂರ್ತಿಗೊಳ್ಳಿಸತಕ್ಕವನು ೫೧೫ ರವಿಃ (4) ಸಮಸ್ತರಿಂದಲೂ ಸ್ತುತಿಸಲ್ಪಡತಕ್ಕವನು ಅಥವಾ, ಉದಿತ್ಯರೂಪನು ೫೧೬ ಜಟಿಲಃ (5) ಸಮಸ್ತ ಭೂತಬ್ರಂದಗಳಿಂದಲೂ ವ್ಯಾಪ್ತನಾದವನು. ಅಥವಾ, ಜಟಾಧಾರಿಯಾದವನು ೫೧೭ ಕಲ್ಮಷಧ್ವಾನ್ತಪ್ರಧ್ವಂಸನ ವಿಭಾವಸುಃ (6) ಪಾಪವೆಂಬ ಅಂಧಕಾರವನ್ನು ಧ್ವಂಸಗೊಳಿಸುವ ಕೆಲಸದಲ್ಲಿ ಸೂರ್ಯನಾದವನು ॥೬೫॥

(1) ಪುಣ್ಯೇಷು ಅಧಿಕಃ (2) ಪೂರ್ವಯತಿ ಇತಿ ಪೂರ್ವಃ ಪೂರ್ವ ಸಕೇತನೇ (3) ಪೂರಯತಿ ಇತಿ ಪೂರಯಿತಾ (4) ರೂಯತೇ ಇತಿ ರವಿಃ ರು ಶಬ್ದೇ (5) ಜಟಾ ಅಸ್ಯ ಅಸ್ತಿ ಇತಿ ಜಟಿಲಃ (6) ಕಲ್ಮಷಮೇವ ಧ್ವಾನ್ತಮ್, ಧ್ವಾನ್ತಸ್ಯ ಪ್ರಧ್ವಂಸನಮ್, ಪ್ರಧ್ವಂಸನೇ ವಿಭಾವಸುಃ

ಮೂ॥ ಅವ್ಯಕ್ತಲಕ್ಷ್ಮಣೋ ವ್ಯಕ್ತೋ ದಶಾಸ್ಯದ್ವಿಪಕೇಸರೀ ।
ಕಲಾನಿಧಿಃ ಕಾಲರೂಪಃ ಕಮಲಾನನ್ದವರ್ಧನಃ ॥೬೬॥

೫೧೮ ಅವ್ಯಕ್ತಲಕ್ಷ್ಮಣಃ (1) ಅವ್ಯಕ್ತವೆಂಬ * ಮಾಯಾಸ್ಫೂರ್ತಿಯ ರೂಪವುಳ್ಳವನು ಅಥವಾ, † ವಿಷ್ಣುಸ್ವರೂಪನಾದವನು ಅಥವಾ, (2) ಪ್ರಾಪಂಚಿಕವಾಗಿ ಸ್ಫುರಿಸದಿರುವ ಸ್ವರೂಪವುಳ್ಳವನು ೫೧೯ ವ್ಯಕ್ತಃ (3) ಪ್ರಪಂಚರೂಪವಾಗಿ ಸ್ಫುರಣಿಸೊಂದಿದವನು ಅಥವಾ, ಸರ್ವಜ್ಞನು ೫೨೦ ದಶಾಸ್ಯದ್ವಿಪಕೇಸರೀ (4) ರಾವಣನೆಂಬ ಗಜಕ್ಕೆ ಸಿಂಹವಾದವನು ೫೨೧ ಕಲಾನಿಧಿಃ (5) ತೇಜಸ್ಸಿಗಲ್ಲ ನಿಧಿಯಾದವನು ಅಥವಾ, ಚತುಷ್ಷಷ್ಟಿ ಕಳೆಗಳಿಗೂ ನಿಧಿಯಾದವನು ೫೨೨ ಕಾಲರೂಪಃ (6) ಕಾಲಾತ್ಮಕನಾದವನು ಅಥವಾ, (7) ಕಾಲಸ್ವರೂಪವನ್ನು ಏನೇಕಪಡಿಸತಕ್ಕವನು ೫೨೩ ಕಮಲಾನನ್ದವರ್ಧನಃ (8) ಲಕ್ಷ್ಮೀದೇವಿಗೆ ಸಂತೋಷವನ್ನು ಹುಟ್ಟಿಸತಕ್ಕವನು ॥೬೬॥

(1) ಅವ್ಯಕ್ತಸ್ಯ ಲಕ್ಷಣಂ ಯಸ್ಯ ಸಃ (2) ಅವ್ಯಕ್ತಂ ಲಕ್ಷಣಂ ಯಸ್ಯ ಸಃ (3) ವ್ಯಜ್ಯತೇ ಸ್ಮ ಇತಿ ವ್ಯಕ್ತಃ (4) ದಶಾಸ್ಯಏವ ದ್ವಿಪಃ, ತಸ್ಯ ಕೇಸರೀ (5) ಕಲಾನಾಂ ನಿಧಿಃ (6) ಕಾಲಸ್ಯ ರೂಪಂ ಯಸ್ಯ ಸಃ (7) ಕಾಲಂ ರೂಪಯತಿ ಇತಿ ಕಾಲರೂಪಃ (8) ಕಮಲಾಯಾಃ ಆನನ್ದಂ ವರ್ಧಯತಿ ಇತಿ ಕಮಲಾನನ್ದವರ್ಧನಃ

* ಅವ್ಯಕ್ತವೆಂದರೆ, ಮಾಯೆಯ ಸ್ಫೂರ್ತಿಯೆಂದರ್ಥವು ಸೃಷ್ಟಿಕಾಲದಲ್ಲಿ ಮಾಯೆಯು ಪ್ರಥಮತಃ ಸ್ಫುರಿಸುವುದಕ್ಕೆ ಅವ್ಯಕ್ತವೆಂದು ಸಾಂಖ್ಯಶಾಸ್ತ್ರಸಂಕೇತವು ಸೂಕ್ಷ್ಮಮಲಿಙ್ಗಮಚೇತನಮನಾದಿನಿದನಂ ತಥಾ ಪ್ರಸವಧರ್ಮಿ । ನಿರವಯವಮೇಕಮೇವ ಹಿ ಸಾಧಾರಣ ಮೇತದವ್ಯಕ್ತಮ್ ॥ (ಸಾಂಖ್ಯಸಪ್ತತಿ)

† ಪ್ರಧಾನಮವ್ಯಕ್ತಂ ಯೋನಿಃ ಅವ್ಯಕ್ತಂ ಪ್ರಕೃತಿಸ್ತಮಾಃ । ವಿಷ್ಣೋರೇತಾನಿ ನಾಮಾನಿ ನಿತ್ಯಂಪ್ರಸವಧರ್ಮಿಣಃ ॥ (ಲಿಂಗಪುರಾಣ)

ಮೂ॥ ಜಯೋ ಜೀತಾರಿಃ ಸಂಪೂರ್ಣಃ ಸುಮನೋಭವಭಜ್ಞನಃ ।
ಅಲಜ್ಯರಿಷ್ಣುರಚಲೋ ರೋಚಿಷ್ಣುರ್ವಿಕ್ರಮೋತ್ತಮಃ ॥೬೫॥

೬೨೧. ಜಯಃ (1) ಜಯಿಸತಕ್ಕವನು ೬೨೨ ಜೀತಾರಿಃ (2) ಜಯಿಸಲ್ಪಟ್ಟ ಶತ್ರುಗಳುಳ್ಳವನು ೬೨೩ ಸಮ್ಪೂರ್ಣಃ. (3) ಸಕಲೈಶ್ವರ್ಯಗಳಿಂದಲೂ ಪರಿಪೂರ್ಣನಾದವನು ೬೨೪ ಸುಮನೋಭವಭಜ್ಞನಃ (4) ಜ್ಞಾನಿಗಳಿಗೆ ಸಂಸಾರಕ್ಲೇಶವನ್ನು ನಾಶಪಡಿಸತಕ್ಕವನು ಅಥವಾ, (5) ದೇವತೆಗಳಿಗೆ ಅಮಂಗಳವನ್ನು ನಾಶಪಡಿಸತಕ್ಕವನು ಅಥವಾ, (6) ಮನ್ಮಥಎಕಾರವನ್ನು ಜನ್ನಾಗಿ ಭಂಗಪಡಿಸತಕ್ಕವನು ೬೨೫ ಅಲಜ್ಯರಿಷ್ಣುಃ (7) ಸಮಸ್ತ ಪ್ರಪಂಚವನ್ನೂ ಅಲಂಕಾರಪಡಿಸತಕ್ಕವನು ೬೨೬ ಅಚಲಃ (8) ಸ್ಥಿರನಾದವನು. ೬೨೭ ರೋಚಿಷ್ಣುಃ (9) ಅನವರತವಾಗಿ ಪ್ರಕಾಶಿಸತಕ್ಕವನು ೬೨೮ ವಿಕ್ರಮೋತ್ತಮಃ (10) ಎಲ್ಲರಿಗಿಂತ ಅಧಿಕವಿಕ್ರಮಯುಕ್ತನು ॥೬೫॥

(1) ಜಯತಿ ಇತಿ ಜಯಃ (2) ಜಿತಾಃ ಅರಯಃ ಯೇನ ಸಃ (3) ಸಮ್ಪೂರ್ಣಂ ಸ್ಮ ಇತಿ ಸಮ್ಪೂರ್ಣಃ, (4) ಸುಮನಸಾಂ ಭವಂ ಚನಕ್ತಿ ಇತಿ ಸುಮನೋಭವಭಜ್ಞನಃ (5) ಸುಮನಸಾಂ ಅಭವಂ ಚನಕ್ತಿ ಇತಿ ಸುಮನೋಭವಭಜ್ಞನಃ (6) ಸುಷ್ಠು ಮನೋಭವಂ ಭನಕ್ತಿ ಇತಿ ಸುಮನೋಭವಭಜ್ಞನಃ (7) ಅಲಂ ಕರ್ತುಂ ಶೀಲಮಸ್ಯ ಇತಿ ಅಲಜ್ಯರಿಷ್ಣುಃ (8) ನ ಚಲತಿ ಇತಿ ಅಚಲಃ (9) ರೋಚತೇ ತಾಚ್ಛೀಲ್ಯೇನ ಇತಿ ರೋಚಿಷ್ಣುಃ (10) ವಿಕ್ರಮೇಣ ಉತ್ತಮಃ

ಮೂ॥ ಅಂಶುಃ ಶಬ್ದಪತಿಃ ಶಬ್ದಗೋಚರೋ ರಜ್ಞನೋ ಲಘುಃ ।
ನಿಶ್ಶಬ್ದಃ ಪ್ರಣವೋಽಮೇಯಃ ಸ್ಥೂಲಃ ಸೂಕ್ಷ್ಮೋ ವಿಚಕ್ಷಣಃ ॥೬೬॥

೬೨೯ ಅಂಶುಃ (1) ಸಮಸ್ತವನ್ನೂ ಯಥಾವತ್ತಾಗಿ ವಿಭಾಗಮಾಡತಕ್ಕವನು ಅಥವಾ, ತೇಜಸ್ಸುಗಳಲ್ಲಿರುವ ಕಿರಣಾತ್ಮಕನು ಅಥವಾ, ಸೂರ್ಯರೂಪನು ೬೩೦ ಶಬ್ದಪತಿಃ (2) ಸಮಸ್ತ ಶಬ್ದಗಳಿಗೂ ಸ್ವಾಮಿಯಾದವನು ೬೩೧ ಶಬ್ದಗೋಚರಃ (3) ಸಮಸ್ತ ಶಬ್ದಗಳಿಗೂ ವಿಷಯಭೂತನಾದವನು. ಅಥವಾ, (4) ಶಬ್ದಶ್ರವಣಮಾತ್ರದಿಂದಲೇ ಗುರಿಕಟ್ಟಿ ಓಡೆಯತ್ಕವನು ೬೩೨ ರಜ್ಞನಃ (5) ಸಮಸ್ತರನ್ನೂ ಅನುರಾಗಪಡಿಸತಕ್ಕವನು ೬೩೩ ಲಘುಃ (6) ಎಲ್ಲವನ್ನೂ ಅತಿಕ್ರಮಿಸತಕ್ಕವನು ಅಥವಾ, ಸೂಕ್ಷ್ಮರೂಪನು ಅಥವಾ, ಮನೋಹರರೂಪನು. ೬೩೪ ನಿಶ್ಶಬ್ದಃ (7) ತನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿಯಿಸತಕ್ಕ ಶಬ್ದವೊಂದೂ ಇಲ್ಲದವನು ೬೩೫ ಪ್ರಣವಃ (8) ಓಂಕಾರಸ್ವರೂಪನು ಅಥವಾ, ಸಮಸ್ತರಿಂದಲೂ ಸಮಸ್ತ ವೇದಗಳಿಂದಲೂ ಸ್ತುತಿಸಲ್ಪಡತಕ್ಕನು ಅಥವಾ, * ಸಮಸ್ತ ವೇದಗಳಿಂದಲೂ ನಮಿಸಲ್ಪಡತಕ್ಕವನು ಅಥವಾ, (9) ಉತ್ಕೃಷ್ಟವಾದ ಸ್ತುತಿಯುಳ್ಳವನು ಅಥವಾ, (10) ಎಷ್ಟು ಪರಿಚಿತನಾದರೂ ಹೊಸಹೊಸಬನಾಗಿ ಕಾಣಿಸತಕ್ಕವನು ೬೩೬ ಅಮೇಯಃ (11) ಗೊತ್ತುಮಾಡಲ್ಪಡಲು ಅಸಾಧ್ಯನು ೬೩೭ ಸ್ಥೂಲಃ (12) ಸ್ವಯಂ ವಿಶ್ವರೂಪನಾದುದರಿಂದ ಎಲ್ಲಕ್ಕಿಂತ ಸ್ಥೂಲನಾಗಿರತಕ್ಕವನು. ೬೩೮ ಸೂಕ್ಷ್ಮಃ. ಪರಮಾಣುಸ್ವರೂಪನಾದುದರಿಂದ ಎಲ್ಲಕ್ಕಿಂತ ಸೂಕ್ಷ್ಮನಾಗಿರತಕ್ಕವನು. ೬೩೯. ವಿಚಕ್ಷಣಃ. (13) ಪ್ರಾಜ್ಞತೆಯನು ॥೬೬॥

(1) ಅಂಶಯತಿ ಇತಿ ಅಂಶುಃ ಅಂಶ ವಿಭಜನೇ (2) ಶಬ್ದಾನಾಂ ಪತಿಃ (3) ಶಬ್ದಾನಾಂ ಗೋಚರಃ (4) ಶಬ್ದೇನ ಗೋಚರಯತಿ ಇತಿ ಶಬ್ದಗೋಚರಃ (5) ರಕ್ಷತಿ ಇತಿ ರಕ್ಷಿತಾ (6) ಲಕ್ಷ್ಯತೇ ಇತಿ ಲಕ್ಷ್ಮಃ (7) ನಿರ್ಗತಃ ಶಬ್ದಃ ಯಸ್ಮಾತ್ ಸಃ, (8) ಪ್ರಣಾಯತೇ ಇತಿ ಪ್ರಣವಃ ಣು ಶಬ್ದೇ (9) ಪ್ರಕೃಷ್ಟಃ ನವಃ ಯಸ್ಯ ಸಃ (10) ಪ್ರಕರ್ಷೇಣ ನವಃ (11) ಮಾತುಂ ಅಶಕ್ಯಃ (12) ಸ್ಥೂಲಯತಿ ಇತಿ ಸ್ಥೂಲಃ ಸ್ಥೂಲ ಬೃಂಹಣೇ (13) ವಿ ಚಷ್ಟೇ ಇತಿ ವಿಚಕ್ಷಣಃ

* ಪ್ರಣಮನ್ತಿ ಸಹ ಯಂ ವೇದಾಃ ತಸ್ಮಾತ್ ಪ್ರಣವಉಚ್ಯತೇ (ಸನತ್ಕುಮಾರವಚನ)

ಮೂ॥ ಸನಾತನತಮಃ ಸ್ಯಗ್ವೀ ಪೇಶಲೋ ಜಯಿನಾಂ ವರಃ

ಶಕ್ತಿಮಾನ್ ಶಙ್ಖಭೃನ್ನನ್ದೀ ಗದಾಪದ್ಮರಥಾಙ್ಗಭೃತ್ ॥೬॥

೫೪೦ ಸನಾತನತಮಃ ಅತಿ ಪುರಾಣವಾದ ಅವಿಚ್ಛಿನ್ನವಾದ ಪ್ರಾಚೀನನು ೫೪೧ ಸ್ಯಗ್ವೀ (1) ಭೂತತನ್ಮಾತ್ರಾರೂಪವಾದ ವೈಜಯಂತಿಯೆಂಬ ದಿವ್ಯಮಾಲಿಕೆಯುಳ್ಳವನು ಅಥವಾ, ನವರತ್ನಮಯವಾದ ಹಾರವುಳ್ಳವನು ೫೪೨ ಪೇಶಲಃ (2) ಸಮಾಧಿನಿಷ್ಠನು ಅಥವಾ, ವಾಕ್ ಕರ್ಮ ಶರೀರಗಳಲ್ಲಿ ಮಧುರನಾದವನು ೫೪೩ ಜಯಿನಾಂ ವರಃ (3) ಇಂದ್ರಿಯ ಜಯವನ್ನೂ ಮನೋಜಯವನ್ನೂ ಮಾಡಿರುವ ಮಹಾತ್ಮರಿಗಿಲ್ಲ ವರಿಷ್ಠನೂ ಅಥವಾ, ಜಯಶಾಲಿಗಳಲ್ಲಿಲ್ಲ ಪ್ರಶಸ್ತನಾದವನು ೫೪೪ ಶಕ್ತಿಮಾನ್ ಸರ್ವಕಾರ್ಯದಲ್ಲಿಯೂ ಸಾಮರ್ಥ್ಯವುಳ್ಳವನು ೫೪೫ ಶಙ್ಖಭೃತ್ (4) ಅಸುರಬ್ಲಾರಾತ್ಮಕವಾದ ಪಾಂಚಜನ್ಯವೆಂಬ ಶಂಖವನ್ನು ಧರಿಸಿರತಕ್ಕವನು ೫೪೬ ನನ್ದೀ (5) ನಂದಕವೆಂಬ ಖಡ್ಗವುಳ್ಳವನು ಅಥವಾ, ಆನಂದವುಳ್ಳವನು ೫೪೭ ಗದಾಪದ್ಮರಥಾಙ್ಗಭೃತ್ (6) ಗದಾ ಪದ್ಮ ಚಕ್ರಗಳನ್ನು ಧರಿಸಿರತಕ್ಕವನು ॥೬॥

(1) ಸ್ಯಕ್ ಅಸ್ಯ ಅಸ್ತಿ ಇತಿ ಸ್ಯಗ್ವೀ (2) ಪೇಶಃ ಅಸ್ಯ ಅಸ್ತಿ ಇತಿ ಪೇಶಲಃ ಪಿಶ ಸಮಾಧೌ (3) ವ್ರಿಯತೇ ಇತಿ ವರಃ (4) ಶಬ್ದಂ ಬಿಭರ್ತಿ ಇತಿ ಶಬ್ದಭೃತ್ (5) ನನ್ದಃ ಅಸ್ಯ ಅಸ್ತಿ ಇತಿ ನನ್ದೀ (6) ಗದಾ ಚ ಪದ್ಮಂ ಚ ರಥಾಙ್ಗಂ ಚ ಗದಾಪದ್ಮರಥಾಙ್ಗಾನಿ, ತಾನಿ ಬಿಭರ್ತಿ ಇತಿ ಗದಾಪದ್ಮರಥಾಙ್ಗಭೃತ್

ಮೂ॥ ನಿರೀಹೋ ನಿರ್ವಿಕಲ್ಪಶ್ಚ ವಿರೂಪೋ ವೀತಸಾಧ್ವಸಃ

ಶತಾನನ್ದಃ ಸಹಸ್ರಾಕ್ಷಃ ಶತಮೂರ್ತಿರ್ಘನಪ್ರಭಃ ॥೭॥

೫೪೮ ನಿರೀಹಃ (1) ಎಷಯಾಭಿಲಾಷಶೂನ್ಯನಾದವನು ೫೪೯ ನಿರ್ವಿಕಲ್ಪಃ (2) ವಿಕಾರಶೂನ್ಯನು ೫೫೦ ವಿರೂಪಃ (3) ನಿರಾಕಾರನು ಅಥವಾ, (4) ವಿವಿಧವಾದ ಆಕಾರವುಳ್ಳವನು ೫೫೧ ವೀತಸಾಧ್ವಸಃ (5) ಭಯಶೂನ್ಯನಾದವನು ೫೫೨ ಶತಾನನ್ದಃ (6) ಸ್ವಯಂ ಅದ್ವಿತೀಯಾನನ್ದಸ್ವರೂಪನಾಗಿದ್ದರೂ ಉಪಾಧಿಭೇದದಿಂದ ಅನೇಕ ವಿಧವಾಗಿ ಭಿನ್ನವಾಗುವ ಆನಂದವುಳ್ಳವನು ೫೫೩ ಸಹಸ್ರಾಕ್ಷಃ (7) ಸಾವಿರ (ಅನೇಕ) ಕಣ್ಣುಗಳು ಉಳ್ಳವನು ೫೫೪ ಶತಮೂರ್ತಿಃ (8) ನಾನಾವಿಧ ಶರೀರಗಳುಳ್ಳವನು ೫೫೫ ಘನಪ್ರಭಃ (9) ಸಾಂದ್ರವಾದ ಕಾಂತಿಯುಳ್ಳವನು ಅಥವಾ, (10) ಮೇಘದೋಪಾದಿಯಲ್ಲಿ ಕಾಂತಿಯುಳ್ಳವನು ॥೭॥

(1) ನಿರ್ಗತಾ ಈಡಾ ಯಸ್ಮಾತ್ ಸಃ (2) ನಿರ್ಗತಾಃ ವಿಕಲ್ಪಾಃ ಯಸ್ಮಾತ್ ಸಃ (3) ವಿಗತಂ ರೂಪಂ ಯಸ್ಯ ಸಃ (4) ವಿವಿಧಾನಿ ರೂಪಾಣಿ ಯಸ್ಯ ಸಃ (5) ವೀತಂ ಸಾಧ್ವಸಂ ಯಸ್ಮಾತ್ ಸಃ (6) ಶತಾನಿ ಆನನಾನಿ ಯಸ್ಯ ಸಃ (7) ಸಹಸ್ರಾಣಿ ಅಕ್ಷೀಣಿ ಯಸ್ಯ ಸಃ (8) ಶತಾನಿ ಮೂರ್ತಯಃ ಯಸ್ಯ ಸಃ (9) ಘನಾ ಪ್ರಭಾ ಯಸ್ಯ ಸಃ (10) ಘನಸ್ಯ ಪ್ರಬೋವ ಪ್ರಬಾ ಯಸ್ಯ ಸಃ

ಮೂ॥ ಹೃತ್ಪುಣ್ಡರೀಕಶಯನೋ ವಿಮಲೋ ಧ್ರುವಶ್ಚ ।
ಉಷ್ಣೋ ಗ್ರಹಪತಿಃ ಕೃಷ್ಣಃ ಸಮರ್ಥೋನರ್ಥನಾಶನಃ ॥೬೯॥

ಪದಚ್ಛೇ ಹೃತ್ಪುಣ್ಡರೀಕಶಯನಃ (1) ಸರ್ವರ ಹೃದಯಕಮಲದಲ್ಲಿಯೂ ವರ್ತಮಾನತ್ವನು ೫ ೭ ವಿಮಲಃ (2) ನಿರ್ಮಲನಾದವನು ೫೫೮ ಧ್ರುವಃ ನ್ಯಾಯಮಾರ್ಗವನ್ನು ಬಿಟ್ಟು ನಡೆಯದಿರತಕ್ಕವನು ೫೫೯ ಉಷ್ಣಃ (3) ಪಾಪಗಳನ್ನು, ಅಥವಾ ಅಜ್ಞಾನವನ್ನು ದಹಿಸುತಕ್ಕವನು ಅದವಾ, ಪ್ರತಾಪಶಾಲಿಯಾದವನು ೫೬೦ ಗ್ರಹಪತಿಃ (1) ಸಮಸ್ತರನ್ನೂ ಹಿಡಿದುಕೂಳ್ಳತಕ್ಕು ವುಗಳಾದ ಇಂದ್ರಿಯಗಳನ್ನು ವಶ್ವಾಧೀನಪಡಿಸಿಕೊಂಡಿರತಕ್ಕವನು ಅಥವಾ ಆಶ್ರಿತರೂಪಸಾದವನು ೫೬೧ ಕೃಷ್ಣಃ (5) ಪ್ರಳಯಾದಲ್ಲಿ ಸಮಸ್ತ ಭೂತಗಳನ್ನೂ ಸಂಹರಿಸತಕ್ಕವನು ಅಥವಾ, ಸಮಸ್ತ ಶತ್ರುಗಳನ್ನೂ ಹಿಂಸಿಸತಕ್ಕವನು, ೫೬೨ ಸಮರ್ಥಃ (6) ಸಮೀಚೀನನಾದ ಅರ್ಥಗಳುಳ್ಳವನು ೫೬೩ ಅನರ್ಥನಾಶನಃ (7) ಸಂಸಾರರೂಪವಾದ ಅನರ್ಥವನ್ನು ನಾಶಪಡಿಸತಕ್ಕವನು ಅದವಾ, ಭಕ್ತರಿಗೆ ಬಂದ ವಿಪತ್ತುಗಳನ್ನು ಪರಿಹರಿತಕ್ಕವನು ॥

(1) ಹೃತ್ಪುಣ್ಡರೀಕೇ ಶೇತೇ ಇತಿ ಹೃತ್ಪುಣ್ಡರೀಕಶಯನಃ (2) ವಿಗತಃ ಮಲಃ ಯಸ್ಮಾತ್ ಸಃ (3) ಓಷತಿ ಇತಿ ಉಷ್ಣಃ ಉಷ ದಾಹೇ (4) ಗ್ರಹಾಣಾಂ ಪತಿಃ (5) ಕರ್ಷಂ ಇತಿ ಕೃಷ್ಣಃ (6) ಸಮ್ಯಕ್ ಅರ್ಥಾಃ ಯಸ್ಯ ಸಃ (7) ಅನರ್ಥಂ ನಾಶಯತಿ ಇತಿ ಅನರ್ಥನಾಶನಃ

ಮೂ। ಅಧರ್ಮಶತ್ರುರಕ್ಷಯ್ಯಃ ಪುರಹೂತಃ ಪುರುಷ್ಟುತಃ
ಬ್ರಹ್ಮಗರ್ಭೋ ಬೃಹದ್ಗರ್ಭೋ ಧರ್ಮಧೇನುರ್ಧನಾಗಮಃ ॥೭೦॥

೫೬೪ ಅಧರ್ಮಶತ್ರುಃ (1) ಅಧರ್ಮಕ್ಕೆ ಶತ್ರುವಾದವನು ೫೬೫ ಅಕ್ಷಯ್ಯಃ (2) ಯಾರಿಂದಲೂ ಯಾವ ಕಾರಣದಿಂದಲೂ ಕ್ಷಯಪಡಿಸುವುದಕ್ಕೆ ಅಸಾಧ್ಯನಾದವನು ೫೬೬ ಪುರುಹೂತಃ (3) ಅಸಂಖ್ಯಾಕವಾದ ನಾಮಗಳುಳ್ಳವನು ಅಥವಾ, (1) ಅನೇಕರಿಂದ ಪ್ರಾರ್ಥಿಸಲ್ಪಟ್ಟವನು ೫೬೭ ಪುರುಷ್ಟುತಃ (5) ಅನೇಕರಿಂದ ಸ್ತುತಿಸಲ್ಪಟ್ಟವನು ೫೬೮ ವೇದಗರ್ಭಃ (6) ಸಮಸ್ತ ವೇದವೂ ತನ್ನ ಹೃದಯದಲ್ಲಿ ಉಳ್ಳವನು. ಅಥವಾ, (7) ಚತುರ್ಮುಖಬ್ರಹ್ಮನಿಗೆ ಉತ್ಪತ್ತಿಸ್ಥಾನಭೂತನು ೫೬೯ ಬೃಹದ್ಗರ್ಭಃ (8) ಸಮಸ್ತ ಬ್ರಹ್ಮಾಂಡವೂ ಹಿಡಿಯುವಷ್ಟು ದೊಡ್ಡದಾದ ಉದರವುಳ್ಳವನು ೫೭೦ ಧರ್ಮಧೇನುಃ (9) ಧರ್ಮಗಳಿಗೆಲ್ಲ ಪ್ರಸವಸ್ಥಾನವಾದವನು * ೫೭೧ ಧನಾಗಮಃ (10)ಧನವನ್ನು ಅಪೇಕ್ಷಿಸತಕ್ಕವರಿಗೆಲ್ಲ ಧನಸ್ಪ್ರಾಪ್ತಿ ಹೇತುವಾದವನು ॥೭೦॥

(1) ಅಧರ್ಮಸ್ಯ ಶತ್ರುಃ (2) ಕ್ಷೇತುಂ ಅಶಕ್ಯಃ (3) ಪುರೂಣಿ ಹೂತಾನಿ ಯಸ್ಯ ಸಃ (4) ಪುರುಭಿಃ ಹೂತಃ (5) ಪುರುಭಿಃ ಸ್ತುತಃ (6) ಬ್ರಹ್ಮ ಗರ್ಭೇ ಯಸ್ಯ ಸಃ (7) ಬ್ರಹ್ಮಣಃ ಗರ್ಭಃ (8) ಬೃಹತ್ ಗರ್ಭಃ ಯಸ್ಯ ಸಃ (9) ದರ್ಮಾಣಾಂ ಧೇನುಃ (10) ಧನಾನಾಂ ಆಗಮಃ

* ಧೇನುವಿನ ಡ ಹಾಲು ಹೇಗೆ ಸ್ರವಿಸುವುದೋ, ಹಾಗೆ ಇವನಿಂದ ಧರ್ಮಗಳು ಸ್ರವಿಸುವುವೆಂದು ಭಾವವು

ಮೂ॥ ಹಿರಣ್ಯಗರ್ಭೋ ಜ್ಯೋತಿಷ್ಮಾ೯ ಸುಲಲಾಟಃ ಸುವಿಕ್ರಮಃ ।
ಶಿವಪೂಜಾರತಃ ಶ್ರೀಮಾ೯ ಭವಾನೀಪ್ರಿಯಕೃದ್ವಶೀ ॥೪೦॥

೫೭೨. ಹಿರಣ್ಯಗರ್ಭ (1) ಸುವರ್ಣಮಯವಾದ * ಅಂಡವೇ ಗರ್ಭದಲ್ಲಿ ಉಳ್ಳವನು ೫೭೩ ಜ್ಯೋತಿಷ್ಮಾ೯ (2) ಅತಿಯಾಗಿ ತೇಜಸ್ಸುಳ್ಳವನು ೫೭೪ ಸುಲಲಾಟಃ (3) ಅತಿ ವಿಶಾಲವಾಗಿ ಲಕ್ಷಣಯುಕ್ತವಾಗಿರುವ ಹಣೆಯುಳ್ಳವನು ೫೭೫ ಸುವಿಕ್ರಮಃ ಲೋಕೋತ್ತರವಾದ ತ್ರಿವಿಕ್ರಮಾವತಾರವುಳ್ಳವನು ೫೭೬ ಶಿವಪೂಜಾರತಃ (4) ಈಶ್ವರನ ಪೂಜೆಯಲ್ಲಿ ನಿರತನಾದವನು ಅಥವಾ, (5) ಸರ್ವಲೋಕಮಂಗಳಕರವಾದ ಆತ್ಮಾರಾಧನೆಯಲ್ಲಿ ತತ್ಪರನಾದವನು ೫೭೭ ಶ್ರೀಮಾ೯ ಪತ್ನಿಯಾದ ಲಕ್ಷ್ಮೀದೇವಿಯೊಡಗೂಡಿದವನು ೫೭೮ ಭವಾನೀಪ್ರಿಯಕೃತ್ (6) ತನ್ನ ಭಗಿನಿಯಾದ ಪಾರ್ವತೀದೇವಿಗ ಪ್ರೀತಿಯನ್ನುಂಟುಮಾಡತಕ್ಕವನು ೫೭೯ ವಶೀ (7) ಲೋಕಾನುಗ್ರಹದಲ್ಲಿ ಇಚ್ಛೆಯುಳ್ಳವನು ॥೪೧॥

(1) ಹಿರಣ್ಮಂ ಗರ್ಭೇ ಯಸ್ಯ ಸಃ (2) ಜ್ಯೋತಿಃ ಅಸ್ಯ ಅಸ್ತಿ ಇತಿ ಜ್ಯೋತಿಷ್ಮಾ೯ (3) ಶೋಭನಂ ಲಲಾಟಂ ಯಸ್ಯ ಸಃ (4) ಶಿವಸ್ಯ ಪೂಜಾ, ತಸ್ಯಾಂ ರತಃ (5) ಶಿವಾ ಚ ಸಾ ಪೂಜಾ ಚ, ತಸ್ಯಾಂ ರತಃ (6) ಭವಾನ್ಯಾಃ ಪ್ರಿಯಕೃತ್ (7) ವಶಃ ಅಸ್ಯ ಅಸ್ತಿ ಇತಿ ವಶೀ.

* ತದಣ್ಡಮಭವದ್ಧೈಮಮ್ (ಮನುವಚನ)

ಮೂ॥ ನರೋ ನಾರಾಯಣೋ ರಾಮಃ ಕಪರ್ದೀ ನೀಲಲೋಹಿತಃ ।
ರುದ್ರಃ ಪಶುಪತಿಃ ಸ್ಥಾಣುಃ ವಿಶ್ವಾಮಿತ್ರೋ ದ್ವಿಜೇಶ್ವರಃ ॥೪೨॥

೫೮೦ ನರಃ (1) ಸಮಸ್ತರಾದ ಭಕ್ತರನ್ನೂ ಉತ್ತಮಗತಿಹೊಂದಿಸತಕ್ಕವನು ೫೮೧ ನಾರಾಯಣಃ (2) ಜಲವೇ ಸ್ಥಾನವಾಗಿ ಉಳ್ಳವನು ೫೮೨ ರಾಮಃ ಇವನ ಗುಣಗಳಿಂದ ಶೀಕೃತರಾದವರು ಇವನಲ್ಲಿ ರಮಿಸುವರಾದಕಾರಣ ರಾಮನು ೫೮೩ ಕಪರ್ದೀ (2) ಉತ್ತಮವಾದ ಜಟಾಬಂಧವುಳ್ಳವನು ೫೮೪ ನೀಲಲೋಹಿತಃ (3) ಸ್ವಯಂ ಶುದ್ಧಸತ್ವಮಯನಾಗಿ ಶುಭ್ರನಾಗಿದ್ದರೂ, ಲಯಕಾಲದಲ್ಲಿ ತಮೋಗುಣಪ್ರಧಾನನಾಗಿಯೂ, ಸೃಷ್ಟಿಕಾಲದಲ್ಲಿ ರಜೋಗುಣಪ್ರಧಾನನಾಗಿಯೂ ಇರತಕ್ಕವನು ಅಥವಾ, ಈಶ್ವರರೂಪನಾದವನು ೫೮೫ ರುದ್ರಃ (4) ಶತ್ರುಗಳನ್ನು ಅಳಿಸತಕ್ಕವನು ಅಥವಾ, ಪ್ರಳಯಕಾಲದಲ್ಲಿ ಪ್ರಜೆಗಳನ್ನು ಅಳಿಸತ್ಕವನು, ಅಥವಾ, (5)ತನ್ನ ಭಕ್ತರ ರೋದನವನ್ನು ತಾನು ಸ್ವೀಕರಿಸತಕ್ಕವನು ಅಥವಾ, (6) ದುಃಖವನ್ನು ಓಡಿಸತಕ್ಕವನು ೫೮೬ ಪಶುಪತಿಃ (7) ಅಜ್ಞಾನನಿಯಂತರಾದ ಜೀವರಿಗಲ್ಲ ಸಂರಕ್ಷಕನಾದ ಸ್ವಾಮಿಯು ೫೮೭ ಸ್ಥಾಣುಃ (8) ಸಮಸ್ತಪ್ರಪಂಚವೂ ತನ್ನಲ್ಲಿ ನಲಸಿರತಕ್ಕವನು ೫೮೮ ವಿಶ್ವಾಮಿತ್ರಃ (9) ಮಿಥ್ಯಾಭೂತವಾಗಿರುವ ಪ್ರಪಂಚಕ್ಕ ವಿರೋಧಿಯಾದ ಸತ್ಯಸ್ವರೂಪನಾದವನು. ಅಥವಾ, (10) ಅಜ್ಞಾನಿಗಳಾದ ಮತ್ತು ದುಷ್ಟರಾದ ಸಮಸ್ತರಿಗೂ ಶತ್ರುಸ್ಥಾನನಾದವನು. ಅಥವಾ, (11) ವಿಶ್ವಾಮಿತ್ರಮುನಿಗೆ ಮುಖ್ಯಾಶ್ರಯಪ್ರದನಾದ ಕಾರಣ ವಿಶ್ವಾಮಿತ್ರನು ೫೮೯ ದ್ವಿಜೇಶ್ವರಃ (12) ದ್ವಿಜರಿಗೆಲ್ಲ ಸ್ವಾಮಿಯು ಅಥವಾ, ಗರುಡನಿಗೆ ಸ್ವಾಮಿಯು ॥೪೨॥

(1) ನಯತಿ ಇತಿ ನರಃ (2) ಕಪರ್ದಃ ಅಸ್ಯ ಅಸ್ತಿ ಇತಿ ಕಪರ್ದೀ (3) ನೀಲಶ್ಚಾಸೌ ಲೋಹಿತಶ್ಚ (4) ರೋದಯತಿ ಇತಿ ರುದ್ರಃ (5) ರುದಂ ರಾತಿ ಇತಿ ರುದ್ರಃ (6) ರುದಂ ದ್ರಾವಯತಿ ಇತಿ ರುದ್ರಃ (7) ಪಶೂನಾಂ ಪತಿಃ (8) ತಿಷ್ಠತಿ ಇತಿ ಸ್ಥಾಣುಃ (9) ವಿಶ್ವಸ್ಯ ಅಮಿತ್ರಃ (10) ವಿಶ್ವೇಷಾಂ ಅಮಿತ್ರಃ (11) ವಿಶ್ವಸ್ಯ ಮಿತ್ರಂ ವಿಶ್ವಾಮಿತ್ರಃ. (12) ದ್ವಿಜಾನಾಂ ಈಶ್ವರಃ (13) ದ್ವಿಜಸ್ಯ ಈಶ್ವರಃ

* ಆಪೋ ನಾರಾಇತಿ ಪ್ರೋಕ್ತಾಃ ಆಪೋ ವೈ ನರಸೂನವಃ । ತಾಯದಸ್ಯಾಯನಂ ಪೂರ್ವಂ ತಸ್ಮಾನ್ನಾರಾಯಣಃ ಸ್ಮೃತಃ ॥ (ಮನುಸ್ಮೃತಿ)

ಮೂ॥ ಮಾತಾಮಹೋ ಮಾತರಿಶ್ವಾ ವಿರಿಞ್ಚಿರ್ವಿಷ್ಟರಶ್ರವಾಃ ।
ಆಕ್ಷ್ನೋಭ್ಯಃ ಸರ್ವಭೂತಾನಾಂ ಚಣ್ಡಃ ಸತ್ಯಪರಾಕ್ರಮಃ ॥೮॥

೫೯೦ ಮಾತಾಮಹಃ (1) ಪ್ರಪಂಚಕ್ಕೆಲ್ಲ ತಾಯಿಯಾದ ವೇದಕ್ಕೆ ತಂದೆಯಾಗಿರುವಕಾರಣ, ಇವನು ಪ್ರಪಂಚಕ್ಕೆ ಮಾತಾಮಹನು ೫೯೧ ಮಾತರಿಶ್ವಾ (2) ಆಕಾಶದಲ್ಲೆಲ್ಲ ವ್ಯಾಪಿಸಿರತಕ್ಕವನು ೫೯೨ ವಿರಿಞ್ಚಿಃ (3) ಸಕಲ ಪ್ರಪಂಚವನ್ನೂ ವಿರಚಿಸತಕ್ಕವನು ೫೯೩ ವಿಷ್ಟರಶ್ರವಾಃ (4) ಅಶ್ವತ್ಥವೃಕ್ಷದಲ್ಲಿ ವಾಸಿಸತಕ್ಕವನೆಂದು ಪ್ರಸಿದ್ಧನಾದವನು ೫೯೪ ಸರ್ವಭೂತಾನಾಮಕ್ಷ್ನೋಭ್ಯಃ (5) ಸಮಸ್ತಪ್ರಾಣಿಗಳಿಂದಲೂ ಕ್ಷೋಭೆಪಡಿಸುವುದಕ್ಕೆ ಅಸಾಧ್ಯನು ೫೯೫ ಚಣ್ಡಃ (6) ದುಷ್ಟರಲ್ಲಿ ಮಹಾಕೋಪಶಾಲಿಯಾದವನು ೫೯೬ ಸತ್ಯಪರಾಕ್ರಮಃ (7) ನಿಶ್ಚಿತವಾದ ಪರಾಕ್ರಮವುಳ್ಳವನು ಅಥವಾ, (8) ಸತ್ಯವೇ ಪರಾಕ್ರಮವಾಗಿ ಉಳ್ಳವನು ॥೮॥

(1) ಮಾತುಃ ಪಿತಾ (2) ಮಾತರಿ ಶ್ವಯತೇ ಇತಿ ಮಾತರಿಶ್ವಾ (3) ವಿರಚಯತಿ ಇತಿ ವಿರಿಞ್ಚಿಃ (4) ವಿಷ್ಟರೇ ಶ್ರೂಯತೇ ಇತಿ ವಿಷ್ಟರಶ್ರವಾಃ (5) ಕ್ಷೋಭಯಿತುಂ ಅಶಕ್ಯಃ (6) ಚಣ್ಡತೇ ಇತಿ ಚಣ್ಡಃ. ಚಡಿ ಕೋಪೇ (7) ಸತ್ಯಃ ಪರಾಕ್ರಮಃ ಯಸ್ಯ ಸಃ. (8) ಸತ್ಯಮೇವ ಪರಾಕ್ರಮಃ ಯಸ್ಯ ಸಃ

ಮೂ॥ ವಾಲಖಿಲ್ಯೋ ಮಹಾಕಲ್ಪಃ ಕಲ್ಪವೃಕ್ಷಃ ಕಲಾಧರಃ ।
ನಿಧಾಘಸ್ತಪನೋ ಮೇಘಃ ಶ್ಲಕ್ಷ್ಣಃ ಪರಬಲಾಪಹಃ ॥೯॥

೫೯೭ ವಾಲಖಿಲ್ಯಃ ವಾಲಖಿಲ್ಯನಾಮಕ ಮಹರ್ಷಿಸ್ವರೂಪನು ೫೯೮ ಮಹಾಕಲ್ಪಃ (1) ಮಹಾಪ್ರಳಯಹೇತುವಾದವನು ಅಥವಾ (2) ಲೋಕರಕ್ಷಣೆಯಲ್ಲಿ ಅತಿ ದೃಢವಾದ ಸಂಕಲ್ಪವುಳ್ಳವನು ಅಥವಾ, (3) ಪ್ರಪಂಚಕ್ಕೆಲ್ಲ ಅತಿ ಪ್ರಶಸ್ತವಾದ ಅಲಂಕಾರಪ್ರಾಯನಾದವನು. ಅಥವಾ, (4) ಅತ್ಯುತ್ತಮವಾದ ದಿವ್ಯಾಭರಣಗಳುಳ್ಳವನು ೫೯೯ ಕಲ್ಪವೃಕ್ಷಃ (5) ಭಕ್ತರಿಗೆ-ಅಥವಾ ಯಾಜಕರಿಗೆ-ಕಲ್ಪವೃಕ್ಷಸ್ವರೂಪನು. ೬೦೦ ಕಲಾಧರಃ (6) ತೇಜಸ್ಸುಗಳನ್ನು-ಅಥವಾ ಚತುಷ್ಷಷ್ಟಿಕಲೆಗಳನ್ನು ಧರಿಸಿರತಕ್ಕವನು ೬೦೧ ನಿಧಾಘಃ (7) ಸಮಸ್ತ ಪಾಪ ಪುಣ್ಯಕರ್ಮಗಳನ್ನೂ * ಭಸ್ಮಮಾಡತಕ್ಕವನು ಅಥವಾ, ಶತ್ರುಗಳೆಂಬ ಕ್ಷುದ್ರ ಜಲಾಶಯಗಳಿಗೆ ಗ್ರೀಷ್ಮಕಾಲಪ್ರಾಯನಾದವನು. ೬೦೨ ತಪನಃ (8) ಸಮಸ್ತ ಶತ್ರುಗಳಿಗೂ ಸಂತಾಪವುಂಟುಮಾಡತಕ್ಕವನು ೬೦೩ ಮೇಘಃ (9) ಮೇಘದಂತೆ ಧರ್ಮಾಮೃತಧಾರಗಳನ್ನು ವರ್ಷಿಸತಕ್ಕವನು. ೬೦೪ ಶ್ಲಕ್ಷ್ಣಃ (10) ಅತಿ ಮೃದುವಾದವನು. ೬೦೫ ಪರಬಲಾಪಹಃ. (11) ಶತ್ರುಗಳ ಬಲವನ್ನು ಅಪಹರಿಸತಕ್ಕವನು ॥೯॥

(1) ಮಹಾಂಶ್ಚಾಸೌ ಕಲ್ಪಶ್ಚ (2) ಮಹಾಶ್ಚ ಕಲ್ಪಃ ಯಸ್ಯ ಸಃ (3) ಮಹಾಂಶ್ಚಾಸೌ ಆಕಲ್ಪಶ್ಚ (4) ಮಹಾಶ್ಚ ಆಕಲ್ಪಃ ಯಸ್ಯ ಸಃ (5) ಕಲ್ಪಶ್ಚಾಸೌ ವೃಕ್ಷಶ್ಚ. (6) ಕಲಾನಾಂ ಧರಃ (7) ಶತರಾಂ ದಹತಿ ಇತಿ ನಿದಾಘಃ (8) ತಪತಿ ಇತಿ ತಪನಃ (9) ಮೇಹತಿ ಇತಿ ಮೇಘಃ ಮಿಹ ಸೇಚನೇ. (10) ಶ್ಲಿಷ್ಯತಿ ಇತಿ ಶ್ಲಕ್ಷ್ಣಃ (11) ಪರೇಷಾಂ ಬಲಂ ಅವಹಸ್ತಿ ಇತಿ ಪರಬಲಾಪಹಃ

ಲೋಕದಲ್ಲಿ ಅಧಮನಾದ ದಾತನು ಮೊದಲು ಮುಖವನ್ನು ಕಪ್ಪುಮಾಡಿಕೊಂಡು ನಿಷ್ಠುರ ವಾಕ್ಯಗಳನ್ನಾಡುತ ದಾನಮಾಡಿ ಆಮೇಲೆ ಮುಖದಲ್ಲಿ ಬಿಳುಪನ್ನೂ ಜನರಲ್ಲಿ ಲಾಘವವನ್ನೂ ಪಡೆಯುವಂತೆ, ಇಲ್ಲಿ ಮೇಘವು ಪ್ರಥಮತಃ ಜಲಭರಿತವಾಗಿ ಕೃಷ್ಣವರ್ಣವಾಗಿದ್ದು ಗರ್ಜಿಸುತ ಜಲವನ್ನು ವರ್ಷಿಸಿ ಬಳಿಕ ಜಲವೆಲ್ಲ ಸುರಿದುಹೋದಕಾರಣ ಶ್ವೇತವರ್ಣವನ್ನೂ ಲಾಘವ (ಭಾರವಿಲ್ಲದಿರುವಿಕೆ) ವನ್ನೂ ಪಡೆಯುತಿರುವುದು ॥೩೪॥

ವನೇ ದವಾಗ್ನಯಃ ಶಾನ್ತಾಃ ಶೀತಾಭೂದ್ವೃಷ್ಟಿಭಿರ್ಧರಾ ।
ಮದ್ಭಕ್ತ್ಯಾ ಸ್ಯಾದ್ಯಥಾ ಬುದ್ಧಿಃ ಶೀತಾ ತಾಪತ್ರಯಕ್ಷಯಾತ್ ॥೩೫॥
ತ್ಯಕ್ತ್ವಾ ವನಜಲಂ ಹಂಸಾಃ ಗತಾಸ್ತನ್ಮಾನಸಂ ಸರಃ ।
ಗಾಢೇಷಣವತಾಂ ಸಙ್ಗಂ ತ್ಯಕ್ತ್ವೇವ ಪರಹಂಸಕಾಃ ॥೩೬॥
ಪಶ್ಯ ಲಕ್ಷ್ಮಣ ಮಣ್ಡೂಕಾಃ ಶುಷ್ಕತರ್ಕರತಾಇವ ।
ವೃಥಾ ಕೋಷಂ ಪ್ರಕುರ್ವನ್ತಿ ಪರಸ್ಪರವಿವೋತ್ಸುಕಾಃ ॥೩೭॥
ಕುಮಾರ್ಗಗತಲಕ್ಷ್ಮೀಕಾಇವ ಕುಲ್ಯಾಗಿರೀನ್ದ್ರಜಾಃ ।
ಕ್ಷಣಾದ್ದುಸ್ತರತಾಂ ಯಾನ್ತಿ ಕ್ಷಣಾತ್ ತೋಯವಿವರ್ಜಿತಾಃ ॥೩೮॥
ಗೂಢಂ ಚರನ್ತಿ ತತ್ತ್ವಜ್ಞಾಃ ವೇಶೇ ಮೂಢಜನೇ ಯಥಾ ।
ತದ್ವನ್ಮಕ್ತ್ವಾತ್ಮಸನ್ನಾದಾ ಪಿಕಾಃ ಪ್ರಚ್ಛನ್ನಚಾರಿಣಃ ॥೩೯॥

ನನ್ನಲ್ಲಿ ಭಕ್ತಿಯಿಟ್ಟರೆ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕಗಳಂಬ ತಾಪತ್ರಯವು ಕ್ಷಯಿಸಿ ಮನಸ್ಸು ಶಾಂತವಾಗುವಂತೆ, ಕಾಡಿನಲ್ಲಿ ಕಾಡುಗಿಚ್ಚುಗಳೆಲ್ಲ ಶಾಂತವಾಗಿ ಭೂಮಿಯೆಲ್ಲವೂ ವೃಷ್ಟಿಯಿಂದ ಶೀತಲವಾಗಿರುವುದು ॥೩೫॥

ಪ್ರಪಂಚದಲ್ಲಿ ಪರಮಹಂಸಪದವಿಯನ್ನು ಪಡದ ಜ್ಞಾನಿಗಳು ಪುತ್ರೇಷಣಾದಿಗಳಲ್ಲಿ ಅತಿ ಪ್ರಬಲವಾಗಿ ಮಗ್ನರಾಗಿರುವವರ ಸಹವಾಸವನ್ನು ಬಿಟ್ಟು ಹೊರಟುಹೋಗುವಂತೆ, ಹಂಸಪಕ್ಷಿಗಳು ಈ ವನದಲ್ಲಿರುವ ಜಲಾಶಯಗಳನ್ನು ಬಿಟ್ಟುಬಿಟ್ಟು ಆ ದಿವ್ಯವಾದ ಮಾನಸಸರೋವರಕ್ಕೆ ಹೊರಟುಹೊದುವು ॥೩೬॥

ವತ್ಸ ! ಲಕ್ಷ್ಮಣ ! ಇಲ್ಲಿ ನೋಡು ಲೋಕದಲ್ಲಿ ಶುಷ್ಕತರ್ಕನಿರತರಾದವರು ಒಬ್ಬರು ಮಾಡಿದ ವಾದವನ್ನು ಕೇಳಿ ತಾವೂ ಅವರಿಗಿಂತ ಗಟ್ಟಿಯಾಗಿ ವಾದಮಾಡುತ ಕೋಲಾಹಲದಲ್ಲಿ ಉತ್ಸುಕರಾಗಿ ವ್ಯರ್ಥವಾಗಿ ಕೂಗಾಡುವಂತೆ, ಈ ಕಪ್ಪಗಳು ಒಂದು ಕೂಗುವುದನ್ನು ಕೇಳಿ ಮತ್ತೊಂದೂ ಕಿರಿಚುತ ವ್ಯರ್ಥವಾಗಿ ಕೋಲಾಹಲಮಾಡುತ್ತಿರುವುವು ॥೩೭॥

ತಮ್ಮ ಸಂಪತ್ತನ್ನು ದುಮಾರ್ಗದಲ್ಲಿ ವಿನಿಯೋಗಿಸುತಿರುವ ಧುಷ್ಟರು ಒಂದು ಕ್ಷಣಕಾಲ ಯಾರಿಗೂ ಅಪ್ರಧೃಷ್ಯರಾಗಿದ್ದುಗೊಂಡು ಉತ್ತರಕ್ಷಣದಲ್ಲಿಯೇ ಧನವಿಹೀನರಾಗುವಂತೆ, ಈ ಋಶ್ಯಮೂಕಪರ್ವತದಲ್ಲಿ ಹುಟ್ಟಿರುವ ನಿರ್ಝರಗಳು ಒಂದುಕ್ಷಣ ಸುತರಾಂ ದಾಟಿಹೋಗಲಸಾಧ್ಯಗಳಾಗಿದ್ದುಗೊಂಡು ಉತ್ತರಕ್ಷಣದಲ್ಲಿಯೇ ಜಲವಿಹೀನವಾಗುತಿರುವುವು ॥೩೮॥

ಮೂಢಜನಧರಿತವಾದ ಪ್ರದೇಶದಲ್ಲಿ ತತ್ವಜ್ಞಾನಿಗಳು ತಮ್ಮ ಆತ್ಮವಿಚಾರವಿಷಯಕವಾದ ಮಾತೊಂದನ್ನೂ ಹೊರಗೆ ಹೊರಡಿಸದೆ ರಹಸ್ಯವಾಗಿ ಸಂಚರಿಸುವಂತೆ, ಇಲ್ಲಿ ಕೋಗಿಲೆಗಳು ತಮ್ಮ ಮಧುರವಾದ ಧ್ವನಿಯನ್ನೆಲ್ಲ ಬಿಟ್ಟುಬಿಟ್ಟು ನಿಗೂಢವಾಗಿ ಸಂಚರಿಸುವುವು. (ಎಂದು ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು) ॥೩೯॥

ಶ್ರೀ ಶಿವ ಉವಾಚ.

ಏವಂ ವರ್ಷಾಸು ಚತೃಷು ಮಾಲ್ಯವತ್ಪರ್ವತೇ ಶುಭೇ ।
ವಸತಸ್ತಸ್ಯ ರಾಮಸ್ಯ ರತಿರಲ್ಪಾಪಿ ನಾಭವತ್ ॥೪೦॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸುಗ್ರೀವಪಟ್ಟಾಭಿಷೇಕ ವರ್ಷರ್ತು
ವರ್ಣನಂ ನಾಮ ಸಪ್ತಮಃ ಸರ್ಗಃ



ಪರಮೇಶ್ವರನು ಪಾರ್ವತಿಗೆ ಹೇಳುವನು —

ಎಲೌ ಪಾರ್ವತಿ! ಹೀಗೆ ಲಕ್ಷಣನೊಡನ ಹೇಳುತಲೂ ತಾನು ಖೇದಪಡುತಲೂ ಆ ರಮಣೀಯವಾದ ಮಾಲ್ಯವತ್ಪರ್ವತದಲ್ಲಿ ವಾಸಮಾಡಿಕೊಂಡಿದ್ದ ಶ್ರೀ ರಾಮನಿಗೆ, ವರ್ಷಾಕಾಲವಾದ ಆ ನಾಲ್ಕುತಿಂಗಳಲ್ಲಿಯೂ ಸ್ವಲ್ಪವೂ ಸಂತೊಷವುಂಟಾಗಲಿಲ್ಲ ॥೪೦॥

ಇದು ಕಿಷ್ಕಿಂಧಾಕಾಂಡದಲ್ಲಿ ಸುಗ್ರೀವಪಟ್ಟಾಭಿಷೇಕ ವರ್ಷರ್ತು ವರ್ಣನೆಯೆಂಬ
ಏಳನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಅಷ್ಟಮಃ ಸರ್ಗಃ.

ಶ್ರೀ ಶಿವಉವಾಚ

ಏವಂ ಕತಿಪಯೇ ಕಾಲೇ ಗತೇ ತಸ್ಮಿನ್ ಮಹಾಗಿರೌ ।
ಕದಾಚಿಲ್ಲಕ್ಷ್ಮಣೋ ರಾಮಂ ಪ್ರಣಿಪತ್ಯೇದಮಬ್ರವೀತ್ ॥೧॥
ಭಗವನ್ ಭಕ್ತಿಯೋಗೋ ಮೇ ಪುರಾ ಪ್ರೋಕ್ತಸ್ತ್ವಯಾನಘಃ ।
ತ್ವದ್ಭಕ್ತಿಸಾಧನಂ ಮುಖ್ಯಂ ವದ ಮೇ ಸಙ್ಗ್ರಹಾತ್ ಪ್ರಭೋ ॥೨॥

ಶ್ರೀ ರಾಮಉವಾಚ

ಸಾಧನಾನಿ ಬಹೂನ್ಯಙ್ಗ ಮದ್ಭಕ್ತೇಃ ಸನ್ತಿ ತೇಷ್ವಪಿ ।
ಸ್ವಸ್ವವರ್ಣಾಶ್ರಮಾಚಾರೋ ಮುಖ್ಯಂ ಸಾಧನಮುಚ್ಯತೇ ॥೩॥
ಸ್ವಧರ್ಮಃ ಕಾಮಧೇನುಃ ಸ್ಯಾತ್ ಸ್ವಧರ್ಮಃ ಪಾರಿಜಾತಕಃ ।
ಸ್ವಧರ್ಮೈರೇವ ಮದ್ಭಕ್ತಿಃ ನಾನ್ಯಥಾ ಶತ್ರುಸೂದನ ॥೪॥
ಸ್ವಧರ್ಮನಿರತಾಃ ಸರ್ವೇ ಪರತ್ರೇಹ ಚ ಪೂಜಿತಾಃ ।
ಶ್ಲಾಘ್ಯಾಃ ಶ್ಲಾಘ್ಯತರಂ ಚಾಪಿ ಸ್ವಕರ್ಮ ಸುಖಸಾಧನಮ್ ॥೫॥

ಕಿಷ್ಕಿಂಧಾಕಾಂಡದಲ್ಲಿ ಎಂಟನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಪುನಃ ಹೇಳುವನು —

ಹೀಗೆಯೇ ಆ ಋಶ್ಯಮೂಕಪರ್ವತದಲ್ಲಿ ಕೆಲವುಕಾಲ ಕಳಯಲಾಗಿ, ಒಂದು ಸಮಯದಲ್ಲಿ ಲಕ್ಷ್ಮಣನು ಶ್ರೀರಾಮನನ್ನು ನಮಸ್ಕರಿಸಿ ಹೀಗೆ ಪ್ರಾರ್ಥಿಸಿದನು ॥೧॥

ಪೂಜ್ಯನೆ! ಅತಿಪ್ರಶಸ್ತವಾದ ಭಕ್ತಿಯೋಗವು ಹಿಂದೆ ನಿನ್ನಿಂದ ನನಗೆ ಹೇಳಲ್ಪಟ್ಟಿತು ಹೇ ಪ್ರಭೋ! ಈಗ ನಿನ್ನ ಭಕ್ತಿಗೆ ಮುಖ್ಯವಾದ ಸಾಧನವನ್ನು ಸಂಗ್ರಹಿಸಿ ನನಗೆ ಅಪ್ಪಣೆಕೊಡಿಸಬೇಕು ॥೨॥

ಹೀಗೆ ಲಕ್ಷ್ಮಣನಿಂದ ಪ್ರಾರ್ಥಿಸಲ್ಪಟ್ಟ ಶ್ರೀರಾಮನು ಅವನನ್ನು ಕುರಿತು ಹೇಳುವನು —

ವತ್ಸ! ಲಕ್ಷ್ಮಣ! ನನ್ನ ಭಕ್ತಿಗೆ ಅನೇಕವಾದ ಸಾಧನಗಳುಂಟು. ಅವುಗಳಲ್ಲಿಯೂ, ಸ್ವವರ್ಣ ಸ್ವಾಶ್ರಮೋಚಿತವಾದ ಕರ್ಮಾಚರಣೆಯು ಮುಖ್ಯಸಾಧನವೆಂದು ಹೇಳಲ್ಪಡುವುದು ॥೩॥

ಸ್ವಧರ್ಮವು ಕಾಮಧೇನುವು, ಸ್ವಧರ್ಮವೇ ಕಲ್ಪವೃಕ್ಷವು. ಅಯ್ಯಾ! ಶತ್ರುಸಂಹಾರಕನೆ! ಪುರುಷನಿಗೆ ಸ್ವಧರ್ಮಾಚರಣೆಯಿಂದಲೇ ನನ್ನಲ್ಲಿ ಭಕ್ತಿ ಹುಟ್ಟಬೇಕಲ್ಲದೆ, ಮತ್ತಾವ ಮಾರ್ಗವೂ ಸರಿಯಾಗಿಲ್ಲ ॥೪॥

ಸ್ವಧರ್ಮದಲ್ಲಿ ನಿರತರಾಗಿರುವವರೆಲ್ಲರೂ, ಇಹಪರಗಳಲ್ಲಿ ಪೂಜ್ಯರಾಗಿಯೂ ಶ್ಲಾಘನೀಯರಾಗಿಯೂ ಇರುವರು. ಅದುಕಾರಣ, ಸ್ವಧರ್ಮವೇ ಶ್ಲಾಘ್ಯವಾದ ಸುಖಸಾಧನವು ॥೫॥

ಬ್ರಾಹ್ಮಣಾಃ ಕ್ಷತ್ರಿಯಾವೈಶ್ಯಾಃ ಶೂದ್ರಾಶ್ಚಾಪಿ ತಥಾ ಪರೇ।
ಸ್ವಧರ್ಮನಿರತಾಃ ಪುಣ್ಯಾಃ ನಾಕಲೋಕಂ ವ್ರಜನ್ತಿ ತೇ ॥೬॥
ಕಲ್ಪಾದೌ ಪ್ರಥಮಂ ತಾತ ಮದಙ್ಗೇಭ್ಯಃ ಕ್ರಮಾನ್ಮಯಾ।
ಸೃಷ್ಟಾವರ್ಣಾಶ್ಚಾಶ್ರಮಾಶ್ಚ ಗುಣಕರ್ಮವಿಭಾಗತಃ ॥೭॥
ಮನ್ಮುಖಾದ್ಬ್ರಾಹ್ಮಣಾಜಾತಾಃ ಸತ್ವೇನಾಗಮಜೀವಿನಃ।
ಬಾಹುಭ್ಯಾಂ ಕ್ಷತ್ರಿಯಾಜಾತಾಃ ಸತ್ವಯುಕ್ತರಜೋಧಿಕಾಃ ॥೮॥
ವೈಶ್ಯಾಮಮೋರುಸಂಜಾತಾಃ ರಜೋಧಿಕತಮೋಯುತಾಃ।
ಶೂದ್ರಾಮೇ ಪಾದಸಂಜಾತಾಃ ತಾಮಸಾಪಿವ ಲಕ್ಷ್ಮಣ ॥೯॥
ಹೃದಯಾದ್ಬ್ರಹ್ಮಚರ್ಯಂ ಮೇ ಗಾರ್ಹಸ್ಥ್ಯಂ ಜಘನಾನ್ಮಮ।
ವಾನಪ್ರಸ್ಥಾಶ್ರಮಃ ಕಣ್ಠಾತ್ ನ್ಯಾಸೋ ಮನ್ಮೂರ್ಧತೋಭವತ್ ॥೧೦॥
ಧರ್ಮೋ ಮದ್ಧೃದಯಾದಾಸೀತ್ ಅರ್ಥಃ ಸ್ಯಾದೂರುದೇಶತಃ।
ಕಾಮೋ ಜಘನತಶ್ಚಾಸೀತ್ ಮೋಕ್ಷಃ ಸ್ಯಾನ್ಮಸ್ತಕಾನ್ಮಮ ॥೧೧॥

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣದವರೂ, ಈ ಚಾತುರ್ವರ್ಣ್ಯಕ್ಕೆ ಭಿನ್ನರಾದವರೂ ಕೂಡ, ತಮ್ಮ ತಮ್ಮ ಧರ್ಮದಲ್ಲಿ ನಿರತರಾಗಿದ್ದರೆ, ಅತಿ ಪುಣ್ಯಶಾಲಿಗಳಾಗಿ ಸ್ವರ್ಗಾದ್ಯುತ್ತಮಲೋಕಗಳನ್ನು ಪಡೆಯುವರು ॥೬॥

ಸೃಷ್ಟ್ಯಾದಿಯಲ್ಲಿ, ನಾನು ನನ್ನ ಅಂಗಗಳದೆಸೆಯಿಂದ ಕ್ರಮವಾಗಿ ಗುಣಧರ್ಮ ವಿಭಾಗವನ್ನು ಅನುಸರಿಸಿ ವರ್ಣಗಳನ್ನೂ ಆಶ್ರಮಗಳನ್ನೂ ಸೃಜಿಸಿರುವನು ॥೭॥

ಅದರಲ್ಲಿ ಬ್ರಾಹ್ಮಣರು ನನ್ನ ಮುಖದಿಂದ ಹುಟ್ಟಿದವರು, ಇವರು ಸತ್ವ ಗುಣಪ್ರಧಾನರಾಗಿಯೂ ಶಾಸ್ತ್ರಾಭ್ಯಾಸದಿಂದ ಜೀವಿಸತಕ್ಕವರಾಗಿಯೂ ಇರುವರು ನನ್ನ ತೋಳುಗಳಿಂದ ಕ್ಷತ್ರಿಯರು ಜನಿಸಿದರು, ಇವರಲ್ಲಿ ಸತ್ವಗುಣಮಿಶ್ರವಾದ ರಜೋಗುಣವು ಹೆಚ್ಚಾಗಿರುವುದು ॥೮॥

ವೈಶ್ಯರು ನನ್ನ ತೊಡೆಯಲ್ಲಿ ಹುಟ್ಟಿದವರು, ಇವರಲ್ಲಿ ರಜೋಗುಣವಧಿಕವಾಗಿ ತಮೋಗುಣವಿರುವುದು ಶೂದ್ರರು ನನ್ನ ಪಾದದಲ್ಲಿ ಹುಟ್ಟಿದವರು, ಇವರು ಕೇವಲ ತಮೋಗುಣಭರಿತರಾಗಿರುವರು ॥೯॥

ಹೀಗೆ ವರ್ಣಗಳು ಹುಟ್ಟಿರುವಂತೆಯೇ, ಆಶ್ರಮಗಳೂ ನನ್ನ ಶರೀರದಿಂದ ಹುಟ್ಟಿರುವುವು. ನನ್ನ ಹೃದಯದಿಂದ ಬ್ರಹ್ಮಚರ್ಯವೂ, ಜಘನದಿಂದ ಗೃಹಸ್ಥಾಶ್ರಮವೂ, ಕಂಠದಿಂದ ವಾನಪ್ರಸ್ಥಾಶ್ರಮವೂ, ತಲೆಯಿಂದ ಸನ್ಯಾಸವೂ ಉಂಟಾಗಿರುವುವು ॥೧೦॥

ಇದರಂತೆ ಪುರುಷಾರ್ಥಗಳೂ ನನ್ನಿಂದಲೇ ಉಂಟಾಗಿರುವುವು ಧರ್ಮವು ನನ್ನ ಹೃದಯದಿಂದಲೂ, ಊರುಪ್ರದೇಶದಿಂದ ಅರ್ಥವೂ, ಜಘನಪ್ರದೇಶದಿಂದ ಕಾಮವೂ, ನನ್ನ ಶಿರಸ್ಸಿನಿಂದ ಮೋಕ್ಷವೂ ಉದಯಿಸಿರುವುವು ॥೧೧॥

ಏವಂ ವರ್ಣಾಶ್ರಮಾ ಸೃಷ್ಟ್ವಾ ತತ್ತದ್ವರ್ಣಾಶ್ರಮೋಚಿತಾಃ ।
ಧರ್ಮಾಅಪಿ ಮಯಾ ಪ್ರೋಕ್ತಾಃ ಸೌಮಿತ್ರೇ ಸರ್ವಕಾಮದಾಃ ॥೧೦॥
ತಸ್ಮಾನ್ಮಾಂ ಸರ್ವಭೂತಾನಾಂ ಧಾತಾರಂ ಪರಮಂ ಗುರುಮ್ ।
ಸ್ವಧರ್ಮೈರ್ನರ್ಭಜ ಮತೋ ಮ್ಯೇ ಗುರುದ್ರೋಹಾತ್ ತವೋ ವ್ರಜೇತ್ ॥೧೧॥
ಸ್ವಧರ್ಮೇಣೈವ ಮಾಮಿಷ್ಟ್ವಾ ಸಿದ್ಧಿಂ ವಿನ್ದತಿ ಮಾನವಃ ।
ತತ್ತತ್ಸ್ವಭಾವಧರ್ಮಾಂಸ್ತೇ ಕ್ರಮಾದ್ವಕ್ಷ್ಯೇ ನಿಬೋಧ ಮೇ ॥೧೪॥
ಶಮೋ ದಮಸ್ತಪಃ ಶೌಚಂ ಕ್ಷಾನ್ತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಸನ್ತೋಷೋ ಮಿತಭೋಜನಮ್ ॥೧೫॥
ಆಚಾರ್ಯೋಪಾಸನಂ ಸ್ಥೈರ್ಯಂ ಸರ್ವಕರ್ಮಾರ್ಪಣಂ ಮಯಿ ।
ದಯಾ ಮೈತ್ರೀ ಪ್ರಶ್ರಯಶ್ಚ ಪ್ರಾಣಿಷ್ವಜ್ಞ ಯಥೋಚಿತಮ್ ॥೧೬॥
ಸರ್ವಭೂತೇಷು ಮದ್ದೃಷ್ಟಿಃ ಮದ್ಭಕ್ತಿರನಪಾಯಿನೀ ।
ಮನ್ನಾಮಕೀರ್ತನಂ ಶಶ್ವತ್ ಶಿಲೋಞ್ಛಾದ್ಯೈಶ್ಚ ಜೀವನಮ್ ॥೧೭॥
ಹಿತಸತ್ಯಪ್ರವಚನಂ ಪಿತೃದೇವಾದಿಪೂಜನಮ್ ।
ನಿಷಿದ್ಧವರ್ಜನಂ ಚಾಪಿ ಬ್ರಾಹ್ಮಣಸ್ಯೋತ್ತಮಂ ಧನಮ್ ॥೧೮॥

ಅಯ್ಯಾ ! ಸುಮಿತ್ರಾಪುತ್ರನೆ ! ಹೀಗೆ ವರ್ಣಾಶ್ರಮಗಳನ್ನು ಸೃಜಿಸಿ, ಆಯಾ ವರ್ಣಾಶ್ರಮಗಳಿಗೆ ಉಚಿತಗಳಾದ ಧರ್ಮಗಳೂ ನನ್ನಿಂದ ಹೇಳಲ್ಪಟ್ಟಿರುವುವು ಈ ಧರ್ಮಗಳೇ, ಸಕಲರಿಗೂ ಸಕಲವಾದ ಇಷ್ಟಾರ್ಥಗಳನ್ನೂ ಕೊಡತಕ್ಕುವು ॥೧೨॥

ಹೀಗಿರುವಕಾರಣ, ಸರ್ವಧರ್ಮಗಳನ್ನೂ ಉಪದೇಶಿಸಿರುವ ಪರಮಗುರುವಾದ ನನ್ನನ್ನು ಸ್ವಧರ್ಮಾಚರಣದ್ವಾರಾ ಸೇವಿಸದಿರುವ ಮನುಜನು, ಗುರುದ್ರೋಹಿಯಾಗಿ ನರಕಭಾಜನನಾಗುವನು॥

ಆದುದರಿಂದ, ಸ್ವಧರ್ಮಾಚರಣೆಯಿಂದಲೇ ನನ್ನನ್ನು ಆರಾಧಿಸಿ ಮನುಷ್ಯನು ಸಿದ್ಧಿಯನ್ನು ಪಡೆಯುವನು ಅಯ್ಯಾ ! ಲಕ್ಷ್ಮಣ ! ಈಗ ಆಯಾ ವರ್ಣಾಶ್ರಮಗಳಿಗೆ ಸ್ವಭಾವಸಿದ್ಧವಾದ ಧರ್ಮಗಳನ್ನು ನಿನಗೆ ಕ್ರಮವಾಗಿ ಹೇಳುವೆನು , ನೀನು ಅವುಗಳನ್ನು ನನ್ನಿಂದ ಕೇಳಿ ತಿಳಿದುಕೊಳ್ಳುವನಾಗು ॥೧೪॥

ಶಮ, ದಮ, ತಪಸ್ಸು, ಶೌಚ, ಕ್ಷಾಂತಿ, ಋಜುತ್ವ, ಜ್ಞಾನ, ವಿಜ್ಞಾನ(ಶಾಸ್ತ್ರಜ್ಞಾನ), ಆಸ್ತಿಕತೆ, ಸಂತೋಷ, ಮಿತಾಹಾರ, ಗುರುಸೇವ, ಚಿತ್ತಸ್ಥೈರ್ಯ, ಸರ್ವಕರ್ಮಗಳನ್ನೂ ನನ್ನಲ್ಲಿ ಅರ್ಪಿಸುವಿಕೆ, ಸಕಲ ಪ್ರಾಣಿಗಳಲ್ಲಿಯೂ ಅವವುಗಳಿಗೆ ತಕ್ಕಂತೆ ದಯೆಯನ್ನೂ ಸ್ನೇಹವನ್ನೂ ವಿನಯವನ್ನೂ ತೋರಿಸುವಿಕೆ, ಸಕಲ ಭೂತಗಳನ್ನೂ ಆತ್ಮನೆಂದು ತಿಳಿದುಕೊಳ್ಳುವುದು, ನನ್ನಲ್ಲಿ ಸ್ಥಿರತಮವಾದ ಭಕ್ತಿ, ಪುನಃಪುನಃ ನನ್ನ ನಾಮಸಂಕೀರ್ತನೆ, ಶಿಲ ಉಂಛ ಮುಂತಾದ ವೃತ್ತಿಗಳಿಂದ ಜೀವನ, ಸರ್ವದಾ ಸರ್ವಭೂತಗಳಿಗೂ ಹಿತವಾಗಿಯೂ ಸತ್ಯವಾಗಿಯೂ ಇರುವ ಮಾತನ್ನು ಹೇಳುತಿರುವುದು, ದೇವತಾ ಪಿತೃ ಅತಿಥಿ ಮುಂತಾದವರ ಪೂಜೆ, ಶಾಸ್ತ್ರನಿಷಿದ್ಧವೆನಿಸಿದ ಕರ್ಮಗಳ ಪರಿತ್ಯಾಗ,– ಇವೆಲ್ಲವೂ ಬ್ರಾಹ್ಮಣಧರ್ಮವು , ಇದೇ ಅವನಿಗೆ ಉತ್ತಮವಾದ ಧನವಾಗಿರುವುದು ॥೧೫–೧೮॥

ಯಾಗಸ್ವಾಧ್ಯಾಯದಾನಾನಿ ಮದ್ಭಕ್ತಿರನಪಾಯಿನೀ ।
ಮದರ್ಚಾ ಕೀರ್ತನಂ ಶಶ್ವತ್ ನಿತ್ಯಂ ಬ್ರಾಹ್ಮಣಪೂಜನಮ್ ॥೧೯॥
ಶೌರ್ಯಂ ತೇಜೋ ಧೃತಿರ್ದಾರ್ಢ್ಯಂ ಯುದ್ಧೇ ಚಾಪ್ಯಪಲಾಯನಮ್ ।
ಶೌಚಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥೨೦॥
ವೈಶ್ಯಸ್ಯಾಧ್ಯಯನಂ ಯಜ್ಞೋ ದಾನಂ ಧರ್ಮಶ್ಚ ದಾಸತಾ ।
ಪಾಶುಪಾಲ್ಯಂ ಚ ವಾಣಿಜ್ಯಂ ಕೃಷಿಶ್ಚಾಪಿ ನರೋತ್ತಮ ॥೨೧॥
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯ ಶ್ರುತಿಚೋದಿತಮ್ ।
ದಾನಂ ಶೌಚಂ ಚ ಮದ್ಭಕ್ತಿಃ ಭೃತ್ಯಾದಿಭರಣಂ ತಥಾ ॥೨೨॥
ಕ್ಷಾತ್ರಂ ಕರ್ಮ ದ್ವಿಜಸ್ಯೋಕ್ತಂ ವೈಶ್ಯಕರ್ಮ ತಥಾಪದಿ ।
ರಾಜನ್ಯಸ್ಯ ಚ ವೈಶ್ಯೋಕ್ತಂ ಶೂದ್ರಕರ್ಮ ನ ಚೈತಯೋಃ ॥೨೩॥
ವೈಶ್ಯಸ್ಯ ಶೂದ್ರಕರ್ಮೋಕ್ತಂ ಶೂದ್ರಃ ಕಾರುಕಟುಕ್ರಿಯಃ ।
ಸಾಮರ್ಥ್ಯೇ ಸತಿ ತತ್ ತ್ಯಾಜ್ಯಂ ಸರ್ವೈರಪಿ ಚ ಲಕ್ಷ್ಮಣ ॥೨೪॥
ಭಿಕ್ಷಾನ್ನನಿರತಃ ಶುದ್ಧಃ ಸ್ನಾನಂ ತ್ರಿಸವನಂ ಚರ ।

ಯಜ್ಞ ವೇದಾಧ್ಯಯನ ದಾನಗಳೂ, ನನ್ನಲ್ಲಿ ನಿಶ್ಚಲವಾದ ಭಕ್ತಿಯೂ, ನನ್ನ ಪೂಜೆಯೂ, ಪದೇ ಪದೇ ನನ್ನ ನಾಮಕೀರ್ತನೆಯೂ, ನಿತ್ಯವಾಗಿ ಬ್ರಾಹ್ಮಣಸೇವೆಯೂ, ಶೌರ್ಯ ತೇಜಸ್ಸು ಧೈರ್ಯ ಸ್ಥೈರ್ಯಗಳೂ, ಯುದ್ದದಲ್ಲಿ ಓಡಿಹೋಗದಿರುವಿಕೆಯೂ, ಬಾಹ್ಯಾಭ್ಯಂತರಶೌಚಗಳೂ, ಪ್ರಭು ಶಕ್ತಿಯ ಪ್ರಯೋಗವೂ ಕೂಡ, ಕ್ಷತ್ರಿಯನಿಗೆ ಸ್ವಭಾವಸಿದ್ಧವಾದ ಕರ್ಮವು ॥೧೯-೨೦॥

ಅಯ್ಯಾ! ಪುರುಷಶ್ರೇಷ್ಠ! ವೇದಾಧ್ಯಯನ ಯಜ್ಞ ದಾನ ಧರ್ಮ ದಾಸ್ಯಗಳೂ, ಪಾಶುಪಾಲ್ಯವೂ, ವಾಣಿಜ್ಯವೂ, ಕೃಷಿಯೂ ಕೂಡ, ವೈಶ್ಯನಿಗೆ ಸ್ವಭಾವಸಿದ್ದವಾದ ಕರ್ಮವು ॥೨೧॥

ಶೂದ್ರನಿಗೆ, ಪರಿಚರ್ಯಾರೂಪವಾದ ಕರ್ಮವೊಂದೇ ಶಾಸ್ತ್ರವಿಹಿತವಾಗಿರುವುದು ದಾನವೂ, ಶೌಚವೂ, ನನ್ನಲ್ಲಿ ಭಕ್ತಿಯೂ, ಭೃತ್ಯಾದಿಗಳ ಪೋಷಣೆಯೂ ಕೂಡ, ಅವನಿಗ ವಿಹಿತವಾಗಿರುವುವು ॥೨೨॥

ಇದುವರೆಗೆ ಹೇಳಿದ ಕರ್ಮವೆಲ್ಲವೂ, ಸಾಮಾನ್ಯಕಾಲದಲ್ಲಿ ವಿಹಿತವಾಗಿರುವುವು ಆಪತ್ಕಾಲದಲ್ಲಿಯಾದರೋ, ಬ್ರಾಹ್ಮಣನಿಗೆ ಕ್ಷತ್ರಿಯ ವೈಶ್ಯವೃತ್ತಿಗಳೂ, ಕ್ಷತ್ರಿಯನಿಗೆ ವೈಶ್ಯವೃತ್ತಿಯೂ ಅನುಜ್ಞಾತವಾಗಿರುವುವು. ಆದರೆ, ಶೂದ್ರವೃತ್ತಿ ಮಾತ್ರ ಇವರಿಬ್ಬರಿಗೂ ವಿಹಿತವಾಗಿಲ್ಲ ॥೨೩॥

ವೈಶ್ಯನಿಗೆ ಮಾತ್ರ ಆಪತ್ಕಾಲದಲ್ಲಿ ಶೂದ್ರವೃತ್ತಿಯು ಉಕ್ತವಾಗಿರುವುದು ಶೂದ್ರನು, ಸ್ವಭಾವತಃ ಶಿಲ್ಪಾದಿಕರ್ಮಕಾರಿಯು ಅಯ್ಯಾ! ಲಕ್ಷ್ಮಣ! ಶಕ್ತಿಯಿರುವ ಪಕ್ಷದಲ್ಲಿ, ಮೂರು ವರ್ಣದವರೂ ಶೂದ್ರವೃತ್ತಿ(ಸೇವೆ)ಯನ್ನು ಬಿಟ್ಟುಬಿಡಬೇಕು ॥೨೪॥

ಈ ರೀತಿಯಾಗಿ ವರ್ಣಧರ್ಮಗಳನ್ನು ಹೇಳಿಯಾಯ್ತಷ್ಟೆ! ಇನ್ನು ಆಶ್ರಮಧರ್ಮಗಳನ್ನು ಹೇಳುವೆನು ಭಿಕ್ಷಾನ್ನದಲ್ಲಿ ನಿರತನಾಗಿಯೂ, ಶುದ್ಧನಾಗಿಯೂ, ತ್ರಿಸವನಸ್ನಾನಶೀಲನಾಗಿಯೂ,

ಸಾಯಂಪ್ರಾತರ್ಹುತಾಗ್ನಿಶ್ಚ ಬ್ರಹ್ಮಚಾರೀ ಸಉಚ್ಯತೇ ॥೨೫॥
ದಣ್ಡಾಜಿನೇ ಚ ಕೌಪೀನಂ ಬ್ರಹ್ಮಚರ್ಯಮಖಣ್ಡಿತಮ್ ।
ಸ್ವಾಧ್ಯಾಯೋ ನಿತ್ಯಸನ್ತುಷ್ಟಿಃ ಗುರುಶುಶ್ರೂಷಣಂ ಪರಮ್ ॥೨೬॥
ತೀರ್ಥಕ್ಷೇತ್ರಾದಿಗಮನಂ ಅಪೈಶುನ್ಯಮಲೋಲತಾ ।
ಏತೇ ಯಸ್ಯ ಗುಣಾಃ ಸನ್ತಿ ಸ ನಾಕಂ ವ್ರಜತಿ ಧ್ರುವಮ್ ॥೨೭॥
ಸ್ನಾನಂ ಸನ್ಧ್ಯಾ ಜಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।
ಅಯಾಚಿತಂ ಬ್ರಹ್ಮಚರ್ಯಂ ಸ್ವದಾರೇಷು ರತಿಸ್ತಪಃ ।
ಅಹಿಂಸಾ ಸತ್ಯಮಕ್ಲೇಶಃ ತ್ಯಾಗಃ ಶಾನ್ತಿರಪೈಶುನಮ್ ॥೨೮॥
ದೇವಾರ್ಚನಂ ವೈಶ್ವದೇವಂ ಅತಿಥ್ಯಂ ಬಲಿಕರ್ಮ ಚ ।
ಅಧ್ಯಾಪನಂ ಚಾಧ್ಯಯನಂ ಯಜನಂ ಯಾಜನಂ ತಥಾ ।
ದಾನಂ ಪ್ರತಿಗ್ರಹಶ್ಚೈವ ಮಾರ್ದವಂ ಹ್ರೀರಚಾಪಲಮ್ ॥೨೯॥
ತೇಜಃ ಕ್ಷಮಾ ಧೃತಿಃ ಶೌಚಂ ಇತಿ ಧರ್ಮಾಗೃಹಾಧಿಪೇ ।
ಏವಂ ಗುಣಗಣೈರ್ಯುಕ್ತೋ ಗೃಹೀ ಸ್ವರ್ಗಮವಾಪ್ನುಯಾತ್ ॥೩೦॥
ವಾನಪ್ರಸ್ಥೋಽಗ್ರಾಮವಾಸೀ ಕನ್ದಮೂಲಫಲಾಶನಃ ।
ಕೃಷ್ಟಪಚ್ಯಂ ಪರಿತ್ಯಜ್ಯ ವನ್ಯೈರಾಹಾರಮಾಚರೇತ್ ॥೩೧॥

ಸಾಯಂಕಾಲ ಪ್ರಾತಃಕಾಲಗಳೆರಡರಲ್ಲಿಯೂ ಅಗ್ನಿಕಾರ್ಯ ಮಾಡತಕ್ಕವನಾಗಿಯೂ ಯಾವನಿರುವನೋ, ಅವನು ಬ್ರಹ್ಮಚಾರಿಯೆಂದು ಹೇಳಲ್ಪಡುವನು ॥೨೫॥

ದಂಡ ಅಜಿನ ಕೌಪೀನ ಅಸ್ಖಲಿತವಾದ ಬ್ರಹ್ಮಚರ್ಯ ವೇದಾಭ್ಯಾಸ ನಿತ್ಯತೃಪ್ತತೆ ಅಧಿಕವಾದ ಗುರುಶುಶ್ರೂಷೆ ತೀರ್ಥಕ್ಷೇತ್ರಾದ್ರಿ ಅಪೈಶುನ್ಯ(ಚಾಡಿ ಹೇಳದಿರುವಿಕೆ) ವಿಷಯವಿರಾಗ,– ಈ ಗುಣಗಳು ಯಾವ ಬ್ರಹ್ಮಚಾರಿಯಲ್ಲಿರುವುವೋ, ಅವನು ಸದ್ಗತಿಯನ್ನು ಪಡೆಯುವನು, ಇದರಲ್ಲಿ ಸಂಶಯವಿಲ್ಲ ॥೨೬-೨೭॥

ಸ್ನಾನ ಸಂಧ್ಯೆ ಜಪ ಹೋಮ ವೇದಾಧ್ಯಯನ ಪಿತೃತರ್ಪಣ ಯಾಚನಾಪರಾಙ್ಮುಖತೆ ಬ್ರಹ್ಮಚರ್ಯ ಸ್ವಕಳತ್ರದಲ್ಲಿ ಮಾತ್ರವೇ ವಿಷಯಾನುಭವ ತಪಸ್ಸು ಅಹಿಂಸ' ಸತ್ಯ ಅಕ್ಲೇಶ ತ್ಯಾಗ ಶಾಂತಿ ಅಪೈಶುನ ದೇವತಾರ್ಚನ ವೈಶ್ವದೇವ ಅತಿಥಿಪೂಜೆ ಬಲಿಕರ್ಮ ಅಧ್ಯಾಪನ ಅಧ್ಯಯನ ಯಜನ ಯಾಜನ ದಾನ ಪ್ರತಿಗ್ರಹ ಮಾರ್ದವ ಲಜ್ಜೆ ಚಾಪಲ್ಯಾಭಾವ ತೇಜಸ್ಸು ಕ್ಷಮೆ ಸಂತೋಷ ಶೌಚ,– ಇವಿಷ್ಟೂ ಗೃಹಸ್ಥನಲ್ಲಿರುವ ಧರ್ಮಗಳು ಈ ಗುಣಗಳಿಂದ ಯುಕ್ತನಾದ ಗೃಹಸ್ಥನು ಸ್ವರ್ಗವನ್ನು ಹೊಂದುವನು ॥೨೮-೩೦॥

ವಾನಪ್ರಸ್ಥಾಶ್ರಮದಲ್ಲಿರತಕ್ಕವನು, ಗ್ರಾಮದೊಳಗೆ ವಾಸವನ್ನು ಪರಿತ್ಯಜಿಸಬೇಕು, ಕಂದ ಮೂಲ ಫಲಗಳನ್ನು ಆಹಾರ ಮಾಡಬೇಕು. ಕೃಷ್ಟಪಚ್ಯ(ಉತ್ತು ಬೆಳೆದುದು)ವನ್ನು ಬಿಟ್ಟು

ಸಾಯಂಪ್ರಾತರ್ಹುತಾಗ್ನಿಶ್ಚ ಸ್ನಾನಂ ತ್ರಿಷವಣಂ ತಥಾ ।
ಸಹ ಪತ್ನ್ಯಾ ಶುಚಿಃ ಶಾನ್ತೋ ಯತವಾಕ್ಕಾಯಮಾನಸಃ ॥೩೦॥
ಪಿತೃದೇವಾತಿಥೀಶ್ಚ ಪೂಜ್ಯ ಪಞ್ಚಾಯಜ್ಞಾವಶೇಷಿತಮ್ ।
ಭುಕ್ತ್ವಾ ಚ ಕಾಲಶೇಷಂ ತು ಪುರಾಣಪರನೈರ್ಯತೇತ್ ॥೩೧॥
ಜಿತೇನ್ದ್ರಿಯೋ ಜಿತಾಹಾರೋ ವಾನಪ್ರಸ್ಥೋ ಜಟೀ ಭವೇತ್ ।
ಏವಂವೃತ್ತಸಮಾರಮ್ಭಃ ಸ ಲೋಕಾನ್ ಜಯತಿ ಧ್ರುವಾನ್ ॥೩೪॥
ವೈರಾಗ್ಯಾದ್ಗೃಹಮುತ್ಸೃಜ್ಯ ಕಾಷಾಯವಸನಃ ಶುಚಿಃ ।
ಶಾನ್ತೋ ದಾನ್ತಸ್ಥಿತಿಕ್ಷುಶ್ಚ ಸ್ಥಿರಬುದ್ಧಿರನಾಶ್ರಯಃ ॥೩೫॥
ಅಕೋಪನೋಽಸಂಗ್ರಹೀ ಚ ಬ್ರಹ್ಮಲೋಕನತತ್ಪರಃ ।
ನಿಸ್ಸಂಗೋ ನಿರ್ಮಮಃ ಶುದ್ಧಃ ಸ್ನಾನಂ ತ್ರಿಷವಣಂ ಸ್ಪೃಶೇತ್ ॥೩೬॥
ಸಾಯಂಕಾಲಾಭಿಗಾಮೀ ಚ ಪಾತ್ರಾಪತಿತಭೋಜನಃ ।

ಬಿಟ್ಟು, ಆರಣ್ಯಕಪದಾರ್ಥಗಳಿಂದಲೇ ಆಹಾರ ಮಾಡಬೇಕು ಸಾಯಂಕಾಲ ಪ್ರಾತಃಕಾಲಗಳಲ್ಲಿ ಹೋಮವನ್ನೂ, ತ್ರಿಷವಣಸ್ನಾನವನ್ನೂ ಮಾಡುತ, ಪತ್ನೀಯುಕ್ತನಾಗಿ, ಶುಚಿಯಾಗಿಯೂ ಶಾಂತನಾಗಿಯೂ ಇರುತ, ಕರಣತ್ರಯವನ್ನೂ ಸ್ವಾಧೀನದಲ್ಲಿಟ್ಟುಕೊಂಡು, ದೇವ ಪಿತೃ ಅತಿಥಿಗಳನ್ನು ಪೂಜಿಸುತ, ಪಂಚಯಜ್ಞಾವಶಿಷ್ಟವಾದ ಆಹಾರವನ್ನು ಭುಜಿಸುತ, ಉಳಿದ ಕಾಲವನ್ನೆಲ್ಲ ಪುರಾಣಪರನದಲ್ಲಿ ಕಳೆಯಬೇಕು ॥೩೧-೩೩॥

ವಾನಪ್ರಸ್ಥನಾದವನು, ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಗೊಳ್ಳಬೇಕು, ಸ್ವೇಚ್ಛೆಯಾಗಿ ಆಹಾರವನ್ನು ತಿನ್ನಬಾರದು, ಜಟಾವಲ್ಕಲಗಳನ್ನು ಧರಿಸಿರಬೇಕು ಈವಿಧವಾದ ವ್ಯಾಪಾರವುಳ್ಳ ವಾನಪ್ರಸ್ಥನು, ಸಕಲ ಪುಣ್ಯಲೋಕಗಳನ್ನೂ ವಶಪಡಿಸಿಕೊಳ್ಳುವನು, ಇದರಲ್ಲಿ ಸಂಶಯವಿಲ್ಲ ॥೩೪॥

ಸಮಸ್ತ ಲೋಕವ್ಯಾಪಾರದಲ್ಲಿಯೂ ವಿರಕ್ತಿಯುಂಟಾಗಿ ಗೃಹವನ್ನು ಪರಿತ್ಯಜಿಸಿ ಕಾಷಾಯವಸ್ತ್ರವನ್ನು ಧರಿಸಿದವನೇ ಸನ್ಯಾಸಿಯು ಇವನು, ಸರ್ವದಾ ಶುಚಿಯಾಗಿರಬೇಕು, ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಗೊಂಡಿರಬೇಕು, ಕ್ಲೇಶವನ್ನು ಸಹಿಸಬೇಕು, ಚಿತ್ತವನ್ನು ಸ್ಥಿರಪಡಿಸಿಕೊಳ್ಳಬೇಕು ಇವನಿಗೆ ನಿಯತವಾದ ವಾಸಸ್ಥಾನವೇ ಇಲ್ಲ ॥೩೫॥

ಸನ್ಯಾಸಾಶ್ರಮವನ್ನು ಸ್ವೀಕರಿಸಿದವನು, ಸುತರಾಂ ಕೋಪವನ್ನು ಪರಿತ್ಯಜಿಸಬೇಕು, ಯಾವುದೊಂದನ್ನೂ ಸಂಗ್ರಹಿಸಕೂಡದು, ಸರ್ವದಾ ಬ್ರಹ್ಮವಿಚಾರದಲ್ಲಿಯೇ ನಿರತನಾಗಿರಬೇಕು, ಯಾವ ಸಂಬಂಧವನ್ನೂ ಮಾಡಕೂಡದು, ಯಾವುದೊಂದನ್ನೂ ತನ್ನದೆಂದು ತಿಳಿಯಕೂಡದು, ತ್ರಿಕರಣಶುದ್ಧನಾಗಿ ಕಾಲತ್ರಯದಲ್ಲಿಯೂ ಸ್ನಾನವನ್ನು ಮಾಡಬೇಕು ॥೩೬॥

ಇವನು ಭಿಕ್ಷಾರ್ಥವಾಗಿ ಮಾತ್ರವೇ ಗ್ರಾಮಪ್ರವೇಶ ಮಾಡಬೇಕು. ಸಾಯಂಕಾಲದಲ್ಲಿ ಗ್ರಾಮದ ಹೊರಗಿರುವ ತನ್ನ ಪರ್ಣಶಾಲೆ ಮುಂತಾದ ವಾಸಸ್ಥಾನಕ್ಕೆ ಒಂದುಬಿಡಬೇಕು

ಸನ್ತುಷ್ಟಃ ಸತತಂ ಯೋಗೀ ಬ್ರಹ್ಮತಾಸ್ತಾವಲೋಕಕಃ ॥೩೬॥
ವಿವಿಕ್ತಸೇವೀ ಧರ್ಮಾತ್ಮಾ ಸರ್ವಪ್ರಾಣಿಹಿತೇ ರತಃ ।
ದಯಾವಾ೯ ಸತ್ಯಸನ್ಧಶ್ಚ ಕರುಣಾಪೂರ್ಣಮಾನಸಃ ॥೩೭॥
ನಿತ್ಯಂ ದ್ವಾದಶಸಾಹಸ್ರಂ ಜಪೇತ್ ಪ್ರಣವಮುತ್ತಮಮ್ ।
ಯತಿರೇತೈರ್ಗುಣೈರ್ಯುಕ್ತೋ ಬ್ರಹ್ಮಭೂಯಾಯ ಕಲ್ಪತೇ ॥೩೮॥
ವಿರಕ್ತಸ್ಯೈವ ಸನ್ನ್ಯಾಸೋ ವಿರಕ್ತಿಃ ಸಾ ತ್ರಿಧಾ ಸ್ಮೃತಾ ।
ಮನ್ದಾ ತೀವ್ರಾ ತೀವ್ರತರಾ ತತ್ರ ನ್ಯಾಸಾಶ್ಚತುರ್ವಿಧಾಃ ॥೪೦॥
ಕುಟೀಚಕೋ ಬಹೂದಶ್ಚ ಹಂಸಾಖ್ಯಃ ಪರಹಂಸಕಃ ॥೪೧॥
ತತ್ರ ಪುತ್ರಾದಿನಾಶೋತ್ಥಾ ಮನ್ದಾ ನ್ಯಾಸೋತ್ರ ಕೋಪಿ ನ ।
ಅಸ್ಮಿನ್ ಜನ್ಮನಿ ಸಂಸಾರೋ ಮಮ ಮಾಸ್ತ್ವಿತಿ ಯಾ ಮತಿಃ ।
ಸೈವ ತೀವ್ರತರಾ ತಸ್ಯಾಂ ಹಂಸಾಖ್ಯಃ ಪರಹಂಸಕಃ ॥೪೩॥
ನಿತ್ಯಕರ್ಮಪ್ರಧಾನಃ ಸ್ಯಾ ಚ್ಛ್ರವಣಾದ್ಯುಪಸರ್ಜನಃ ।

ತನ್ನ ಎಲೆಗೆ ಯಾವುದು ಬಂದು ಬೀಳುತ್ತದೆಯೋ, ಅದನ್ನು ಮಾತ್ರ ಭುಜಿಸಬೇಕು, ಆಹಾರದಲ್ಲಿ ರುಚಿಯನ್ನು ಅಪೇಕ್ಷಿಸಬಾರದು ಸರ್ವದಾ ಸಂತುಷ್ಟಚಿತ್ತನಾಗಿರಬೇಕು ಚಿತ್ತವೃತ್ತಿಯನ್ನು ನಿರೋಧಿಸಬೇಕು ಜ್ಞಾನಶಾಸ್ತ್ರಗಳನ್ನು ವಿಚಾರಮಾಡುತಿರಬೇಕು ॥೩೬॥

ನಿರ್ಜನಪ್ರದೇಶದಲ್ಲಿ ವಾಸಮಾಡಬೇಕು ಧರ್ಮದಲ್ಲಿಯೇ ಮನಸ್ಸಿಟ್ಟಿರಬೇಕು, ಸಮಸ್ತ ಪ್ರಾಣಿಗಳಿಗೂ ಹಿತಮಾಡುವುದರಲ್ಲಿ ನಿರತನಾಗಿರಬೇಕು ದಯಾಶೀಲನಾಗಿಯೂ ಸತ್ಯಸಂಧನಾಗಿಯೂ ಇರಬೇಕು ॥೩೭॥

ಪ್ರತಿದಿನವೂ ನಿತ್ಯವಾದ ಪ್ರಣವಮನ್ತ್ರವನ್ನು ಪನ್ನಿರ್ತುಸಾವಿರ ಸಲ ಜಪಿಸಬೇಕು ಈ ಗುಣಗಳಿಂದ ಯುಕ್ತನಾಗಿರುವ ಯತಿಯು, ಬ್ರಹ್ಮಸಾಮ್ಯಮುಕ್ತಿಗೆ ಅರ್ಹನಾಗುವನು ॥೩೮॥

ಈ ಸನ್ಯಾಸಾಶ್ರಮವು, ವಿರಕ್ತನಾದವನಿಗೆ ಮಾತ್ರವೇ ಉಚಿತವಾಗಿರುವುದು ಆ ವಿರಕ್ತಿಯೆಂಬುದು, ಮಂದ ತೀವ್ರ ತೀವ್ರತರ ಎಂದು ಮೂರು ವಿಧವಾಗಿ ಹೇಳಲ್ಪಟ್ಟಿರುವುದು. ಇದರಲ್ಲಿ, ಸನ್ಯಾಸವು ಕುಟೀಚಕ ಬಹೂದಕ ಹಂಸ ಪರಮಹಂಸ ಎಂಬುದಾಗಿ ನಾಲ್ಕು ವಿಧವಾಗಿರುವುದು ॥೪೦ ೪೧॥

ಅಲ್ಲಿ ಪುತ್ರಾದಿನಾಶದಿಂದ ಉಂಟಾಗುವ ವಿರಕ್ತಿಯು ಮಂದವೆನ್ನಿಸುವುದು ಇದರಲ್ಲಿ ಯಾವ ಸನ್ಯಾಸಾಶ್ರಮಭೇದವೂ ಸೇರುವುದಿಲ್ಲ ಮುಂದೆ ನನಗೆ ಸಂಸಾರ ಬೇಡವೆಂಬ ಇಚ್ಛೆಗೆ ತೀವ್ರವಿರಕ್ತಿಯೆಂದು ಹೆಸರು ಇದರಲ್ಲಿ ಕುಟೀಚಕ ಬಹೂದಕರಿಬ್ಬರೂ ಇರುವರು ನನಗೆ ಈ ಜನ್ಮದಲ್ಲಿಯೇ ಸಂಸಾರವಿಚ್ಛಿತ್ತಿಯುಂಟಾಗಬೇಕೆಂಬ ಉತ್ಕಟೇಚ್ಛೆ ಯಾವುದುಂಟೋ, ಇದೇ ತೀವ್ರತರವಾದ ವಿರಕ್ತಿಯು ಇದರಲ್ಲಿ ಹಂಸ ಪರಮಹಂಸರಿಬ್ಬರೂ ಇರುವರು ॥೪೨॥

ನಿತ್ಯಕರ್ಮವನ್ನು ಪ್ರಧಾನವಾಗಿಯೂ ಶ್ರವಣಮನನಾದಿಗಳನ್ನು ಉಪಸರ್ಜನವಾಗಿಯೂ

ಯಾತ್ರಾದ್ಯಶಕ್ತಃ ಕುಟ್ಯಾಂ ಯಃ ಚಕಾಸ್ತೇ ಸ ಕುಟೀಚಕಃ ॥೪೩॥
ಶ್ರವಣಾದಿಪ್ರಧಾನಃ ಸನ್ ನಿತ್ಯಕರ್ಮೋತ್ಸರ್ಜನಃ ।
ಯಾತ್ರಾದಿಶಕ್ತಃ ಸರ್ವತ್ರ ಸ ಬಹೂದಕಸಂಜ್ಞಿತಃ ॥೪೪॥
ಶ್ರವಣೈಕಪ್ರಧಾನಃ ಸನ್ ಏಕದಣ್ಡಾದಿಲಕ್ಷಣಃ ।
ಹಂಸಃ ಪ್ರೋಕ್ತಃ ಸುನಿಷ್ಪನ್ನಶ್ರವಣಃ ಪರಹಂಸಕಃ ॥೪೫॥
ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾಽನಪೇಕ್ಷಕಃ ।
ಸಲಿಙ್ಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ॥೪೬॥
ಶೌಚಮಾಚಮನಂ ಸ್ನಾನಂ ನ ತು ಚೋದನಮಾಚರೇತ್ ।
ಅನ್ಯಾಂಶ್ಚ ನಿಯಮಾ ಜ್ಞಾನೀ ಯಥಾಹಂ ಲೀಲಯೇಶ್ವರಃ ॥೪೭॥
ಭಿಕ್ಷೋರ್ಧರ್ಮಃ ಶಮೋಽಹಿಂಸಾ ತಪಈಕ್ಷಾ ವನೌಕಸಃ ।
ಗೃಹಿಣಾಂ ಭೂತರಕ್ಷೇಜ್ಯಾ ದ್ವಿಜಸ್ಯಾಚಾರ್ಯಸೇವನಮ್ ॥೪೮॥

ಇಟ್ಟುಗೊಂಡು, ತೀರ್ಥಯಾತ್ರಾದಿಗಳನ್ನು ಮಾಡಲು ಸಾಮರ್ಥ್ಯವಿಲ್ಲದೆ, ಯಾವನು ತನ್ನ ಕುಟಿ (ಪರ್ಣಶಾಲೆ)ಯಲ್ಲಿಯೇ ವಾಸಮಾಡಿಕೊಂಡಿರುವನೋ, ಅವನು ಕುಟೀಚಕನು ॥೪೩॥

ಶ್ರವಣ ಮನನಾದಿಗಳನ್ನು ಮುಖ್ಯವಾಗಿಯೂ ನಿತ್ಯಕರ್ಮಗಳನ್ನು ಉಪಸರ್ಜನವಾಗಿಯೂ ಇಟ್ಟುಗೊಂಡು, ತೀರ್ಥಯಾತ್ರಾದಿಗಳಲ್ಲಿ ಶಕ್ತನಾಗಿ, ಅವುಗಳನ್ನೆಲ್ಲ ಯಾವನು ಮಾಡುತಿರುವನೋ, ಇವನಿಗೆ ಬಹೂದಕನೆಂದು ಹೆಸರು ॥೪೪॥

ಶ್ರವಣವೊಂದನ್ನೇ ಪ್ರಧಾನವಾಗಿಟ್ಟುಕೊಂಡು, ಏಕದಂಡ ಮುಂತಾದ ಆಶ್ರಮಚಿಹ್ನೆಗಳನ್ನು ಧರಿಸಿರತಕ್ಕವನು, ಹಂಸನೆಂದು ಹೇಳಲ್ಪಡುವನು ಶ್ರವಣವು ಸುಪಾಕದಶೆಗೆ ಬಂದಿರತಕ್ಕವನು ಪರಮಹಂಸನೆನ್ನಲ್ಪಡುವನು ॥೪೫॥

ಈ ಪರಮಹಂಸನು, ವಿರಕ್ತನಾಗಿ ಜ್ಞಾನಮಾರ್ಗವನ್ನಾದರೂ ಅವಲಂಬಿಸಿರಬಹುದು, ಅಥವಾ, ಯಾವ ಫಲಾಭಿಸಂಧಿಯೂ ಇಲ್ಲದೆ ಭಕ್ತಿಮಾರ್ಗವನ್ನಾದರೂ ಅವಲಂಬಿಸಿ ನನ್ನಲ್ಲಿ ಭಕ್ತಿಯಿಟ್ಟಿರಬಹುದು ಇವನು ಸನ್ಯಸ್ತವಾದ ಆಶ್ರಮಚಿಹ್ನಗಳನ್ನೂ ಬಿಟ್ಟುಬಿಟ್ಟಿರಬಹುದು. ಇವನಿಗೆ ಯಾವ ವಿಧಿನಿಷೇಧಗಳೂ ಇಲ್ಲ ॥೪೬॥

ಹೀಗೆ ಪರಿಣತಜ್ಞಾನವುಳ್ಳವನಾದ ಪರಮಹಂಸನು, ಸರ್ವಲೋಕೇಶ್ವರನಾದ ನು ಲೀಲೆಯಿಂದಿರುವಂತೆ, ಶೌಚ ಆಚಮನ ಸ್ನಾನ ಮುಂತಾದ ಧರ್ಮಗಳನ್ನೂ ಇತರ ನಿಯಮಗಳನ್ನೂ ಕೂಡ ಆಚರಿಸಬೇಕಾದುದಿಲ್ಲ ॥೪೭॥

ಇದುವರೆಗೆ ವರ್ಣಾಶ್ರಮಧರ್ಮಗಳನ್ನು ವಿಸ್ತರಿಸಿ ಹೇಳಿಯಾಯ್ತಷ್ಟೆ! ಈಗ ಅವುಗಳಲ್ಲಿ ಮುಖ್ಯವಾದುವುಗಳನ್ನು ಮಾತ್ರ ಹೇಳುವೆನು ಸನ್ಯಾಸಿಗೆ ಶಮವೂ ಅಹಿಂಸೆಯೂ ಮುಖ್ಯಧರ್ಮಗಳು, ವಾನಪ್ರಸ್ಥನಿಗೆ ತಪಸ್ಸೂ ತತ್ವವಿಚಾರವೂ ಮುಖ್ಯಗಳು, ಗೃಹಸ್ಥನಿಗೆ ಪ್ರಾಣಿಸಂರಕ್ಷಣೆಯೂ ಯಜ್ಞವೂ ಮುಖ್ಯಗಳು, ಬ್ರಹ್ಮಚಾರಿಗೆ ಆಚಾರ್ಯಸೇವೆಯೊಂದೇ ಮುಖ್ಯವು ॥೪೮॥

ದಯಾ ಚ ಸರ್ವಭೂತೇಷು ಮದ್ಭಕ್ತೇಷು ಚ ಸೌಹೃದಮ್ |
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಸರ್ವೇಷಾಂ ಮದುಪಾಸನಮ್ ॥೪೯॥
ಏವಂ ಸ್ವಧರ್ಮೈರ್ಮಾಮಿತ್ಥಾ ಫಲಾಕಾಂಕ್ಷಾವಿವರ್ಜಿತಃ |
ವೈರಾಗ್ಯಂ ಸಮುಪಾಶ್ರಿತ್ಯ ಮದ್ಭಕ್ತಿಂ ವಿನ್ದತೇ ಪರಾಮ್ ॥೫೦॥
ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಪಿ ಲಕ್ಷ್ಮಣ |
ತತೋ ಮಾಂ ತತ್ತ್ವತೋ ಜ್ಞಾತ್ವಾ ತತ್ಸಾಯುಜ್ಯಮವಾಪ್ನುಯಾತ್ ॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ವರ್ಣಾಶ್ರಮಾಚಾರಕಥನಂ
ನಾಮ ಅಷ್ಟಮಃ ಸರ್ಗಃ


ಸರ್ವಭೂತಗಳಲ್ಲಿಯೂ ದಯೆ, ನನ್ನ ಭಕ್ತರಲ್ಲಿ ಮೈತ್ರಿ, ಜ್ಞಾನ, ವಿಜ್ಞಾನ, ಆಸ್ತಿಕಬುದ್ಧಿ, ನನ್ನ ಉಪಾಸನೆ,–ಇವು ಸಮಸ್ತ ವರ್ಣದವರಿಗೂ ಸಮಸ್ತ ಆಶ್ರಮದವರಿಗೂ ಸಾಮಾನ್ಯವಾದ ಧರ್ಮವೆಂದು ತಿಳಿಯಬೇಕು ॥೪೯॥

ಹೀಗೆ ಸ್ವಧರ್ಮಗಳಿಂದ ನನ್ನನ್ನು ಫಲಾಭಿಸಂಧಿಯಿಲ್ಲದೆ ಆರಾಧಿಸಿದರೆ, ನನ್ನಲ್ಲಿ ಅತ್ಯುತ್ತಮವಾದ ಭಕ್ತಿಯುಂಟಾಗುವುದು ॥೫೦॥

ಅಯ್ಯಾ! ಲಕ್ಷ್ಮಣ! ಬಳಿಕ ಭಕ್ತಿಯಿಂದ ಪುರುಷನು ನನ್ನನ್ನು ತಿಳಿದುಕೊಳ್ಳುವನು. ಈರೀತಿಯಾಗಿ ನಾನು ಯಾರೆಂಬುದನ್ನೂ ನನ್ನ ಪರಿಮಾಣವೆಷ್ಟೆಂಬುದನ್ನೂ ತಿಳಿದುಕೊಂಡರೆ, ಬಳಿಕ ನನ್ನ ಸಾಯುಜ್ಯವನ್ನು ಪಡೆಯುವನು ॥೫೧॥

ಇದು ಕಿಷ್ಕಿಂಧಾಕಾಂಡದಲ್ಲಿ ವರ್ಣಾಶ್ರಮಾಚಾರಕಥನವೆಂಬ
ಎಂಟನೆಯ ಸರ್ಗವು.

ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ನವಮಃ ಸರ್ಗಃ.



ಶ್ರೀರಾಮಉವಾಚ.

ಸ್ವಸ್ವವರ್ಣಾಶ್ರಮಾಚಾರಾನುಪ್ಯಾನೆರಹಿತಾಅಪಿ ।
ಕಲೌ ಮುಕ್ತಿಂ ಪ್ರಯಾನ್ತ್ಯೇವ ಮನ್ನಾಮಸ್ಮರಣಾನ್ನರಾಃ ॥೧॥
ಕಲೌ ದುಷ್ಟಧಿಯಾಂ ತಾತ ಮನ್ನಾಮಸ್ಮೃತಿವನ್ತರಾ ।
ಸ ಸಾಧನಂ ವಿದ್ಯತೇತ್ರ ತಸ್ಮಾನ್ನಾಮಪರೋ ಭವೇತ್ ॥೨॥

ಶ್ರೀ ಶಿವಉವಾಚ.

ಏವಂ ರಾಮಮುಖಾಚ್ಛ್ರುತ್ವಾ ಧರ್ಮಾನ್ ಭಾಗವತಾನ್ ಶುಭಾನ್ ।
ಲಕ್ಷ್ಮಣಶ್ಚಿನ್ನಸನ್ದೇಹೋ ರಾಮಸೇವಾಪರೋಭವತ್ ॥೩॥

ಶ್ರೀ ಪಾರ್ವತ್ಯುವಾಚ

ತನ್ನಾಮಕೀರ್ತನಂ ಕರ್ತುಂ ನಿಯಮಾಃ ಸನ್ತಿ ವಾ ನ ವಾ ।
ಸಂಖ್ಯಾಯಮಪಿ ತತ್ತ್ವೇನ ವದ ಮೇ ಕೃಪಯಾ ಶಿವ ॥೪॥

ಕಿಷ್ಕಿಂಧಾಕಾಂಡದಲ್ಲಿ ಒಂಭತ್ತನೆಯ ಸರ್ಗವು.

ಪುನಃ ಶ್ರೀರಾಮಚಂದ್ರನು ಲಕ್ಷ್ಮಣನನ್ನು ಕುರಿತು ಹೇಳುವನು —

ವತ್ಸ ! ಲಕ್ಷ್ಮಣ ! ಇದುವರೆಗೆ ವರ್ಣಾಶ್ರಮಾಚಾರಗಳನ್ನು ನಿನಗೆ ಹೇಳಿಯಾಯ್ತು ಷ್ಟ ! ಇದರಲ್ಲಿಯೂ ಶಕ್ತಿಯಿಲ್ಲದವರು, ಕಲಿಯುಗದಲ್ಲಿ ನನ್ನ ನಾಮಸ್ಮರಣೆ ಮಾತ್ರದಿಂದಲೇ ಮುಕ್ತಿಯನ್ನು ಪಡೆಯುವರು ॥೧॥

ವತ್ಸ ! ಕಲಿಯುಗದಲ್ಲಿ ಕಲುಷಹೃದಯರಾದ ಪುರುಷರಿಗೆ, ನನ್ನ ನಾಮಸ್ಮರಣೆಯನ್ನು ಬಿಟ್ಟರೆ ಬೇರೆಯಾದ ಉಪಾಯವೂಂದೂ ಇಲ್ಲ ಅದುಕಾರಣ, ಪುರುಷನು ಸರ್ವದಾ ನನ್ನ ನಾಮಸ್ಮರಣೆಯಲ್ಲಿ ನಿರತನಾಗಬೇಕು (ಎಂದು ಶ್ರೀರಾಮನು ಹೇಳಿದನು) ॥೨॥

ಶ್ರೀ ಪರಮೇಶ್ವರನು ಪಾರ್ವತಿಗ ಹೇಳುವನು —

ಎಲೌ ಪಾರ್ವತಿ ! ಈರೀತಿಯಾಗಿ ಲಕ್ಷ್ಮಣನು ಶ್ರೀರಾಮನ ಮುಖದಿಂದ ಅತಿ ಪವಿತ್ರವಾದ ವಿಷ್ಣುಭಕ್ತರ ಧರ್ಮಗಳನ್ನೆಲ್ಲ ಕೇಳಿ ತಿಳಿದುಕೊಂಡು, ತನ್ನ ಮನಸ್ಸಿನ ಸಂಶಯಗಳನ್ನು ಬಿಟ್ಟುಬಿಟ್ಟು, ಶ್ರೀ ರಾಮನ ಸೇವೆಯಲ್ಲಿ ನಿರತನಾದನು ॥೩॥

ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಶ್ನೆಮಾಡುವಳು —

ಪರಮೇಶ್ವರ ! ಆ ರಾಮನಾಮ ಜಪಮಾಡುವುದಕ್ಕೆ ನಿಯಮಗಳೇನಾದರೂ ಇರುವುವೋ? ಅಥವಾ ಇಲ್ಲವೋ ? ಸಂಖ್ಯಾನಿಯಮವೂ ಉಂಟೋ?– ಅಥವಾ ಅದೂ ಇಲ್ಲವೋ ? ಈ ವಿಷಯವನ್ನು ಯಥಾವತ್ತಾಗಿ ಕೃಪೆಯಿಟ್ಟು ಅಪ್ಪಣೆಕೊಡಿಸಬೇಕು ॥೪॥

ಶ್ರೀ ಶಿವಉವಾಚ

ನಿಯಮೇನ ತು ಯತ್ ಕಾರ್ಯಂ ನ ಕಾರ್ಯಂ ನಿಯಮಂ ವಿನಾ ।
ತತ್ ತನ್ನಾಮಜಪಂ ವಕ್ಷ್ಯೇ ಶೃಣು ಪಾರ್ವತಿ ಸಾದರಮ್ ॥೫॥
ರಾಮಕೋಟಿಜಪಂ ಕೃತ್ವಾ ರಾಮೋ ಭವತಿ ಮಾನವಃ ।
ನಿಯಮೇನೈವ ಕರ್ತವ್ಯಂ ಯಾವತ್ಸಂಖ್ಯಾಪ್ರಪೂರಣಮ್ ॥೬॥
ಪಞ್ಚಾಙ್ಗಶುದ್ಧದಿವಸೇ ನಾಮ ಲಬ್ಧ್ವಾ ಗುರೋರ್ಮುಖಾತ್ ।
ತದಾದಿ ನಿಯತಃ ಶಾನ್ತೋ ದೃಢಭಕ್ತೋ ಜಿತೇನ್ದ್ರಿಯಃ ॥೭॥
ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಜಪನ್ತಯೇದ್ರಘುನನ್ದನಮ್ ।
ರಾಮ ರಾಮೇತಿ ರಾಮೇತಿ ತಾರಕಾಖ್ಯಂ ಪರಂ ಮನುಮ್ ॥೮॥

ಪ್ರಾತಃ ಸ್ಮರಾಮಿ ದಿನನಾಯಕವಂಶಭೂಷಂ
ವೇದಾನ್ತವೇದ್ಯಮಭಯಙ್ಕರರಾಜವೇಷಮ್ ।
ವೈದೇಹಿಲಕ್ಷ್ಮಣಯುತಂ ಸ್ವಜನಾಭಿರಾಮಂ
ಸಂಸಾರಸರ್ಪಗರಳೋಪಶಮಾಯ ರಾಮಮ್ ॥೯॥

ಶ್ರೀ ಪರಮೇಶ್ವರನು ಉತ್ತರ ಹೇಳುವನು —

ಎಲೌ ಪಾರ್ವತಿ ! ನಿಯಮದಿಂದ ಮಾಡಬೇಕಾದ ಕರ್ಮವಾವುದಿರುವುದೋ, ಅದನ್ನು ನಿಯಮವಿಲ್ಲದೆ ಮಾಡಬಾರದು ಅದುಕಾರಣ, ಆ ರಾಮನಾಮಜಪದ ನಿಯಮವನ್ನು ನಾನು ನಿನಗೆ ಹೇಳುವೆನು , ನೀನು ಇದನ್ನು ಆದರದೊಡನೆ ಕೇಳುವಳಾಗು ॥೫॥

ರಾಮಮಂತ್ರವನ್ನು ಕೋಟಿಸಲ ಜಪಮಾಡಿದರ, ಪುರುಷನು ಶ್ರೀ ರಾಮನೇ ಆಗಿಬಿಡುವನು ಅದುಕಾರಣ, ಈ ಕೋಟಿಸಂಖ್ಯಾಪೂರ್ತಿಯಾಗುವವರೆಗೂ ಇದನ್ನು ನಿಯಮದಿಂದಲೇ ಮಾಡಬೇಕು ॥೬॥

ಆ ನಿಯಮವನೆಂದರೆ,–ಪಂಚಾಂಗಶುದ್ಧಿಯುಳ್ಳ ದಿವಸದಲ್ಲ, ಗುರುವಿನ ಮುಖದಿಂದ ಈ ರಾಮನಾಮವನ್ನು ಉಪದೇಶಪಡೆದು, ಆ ಕಾಲ ಮೊದಲುಗೊಂಡು ನಿಯಮಶೀಲನಾಗಿಯೂ ಶಾಂತನಾಗಿಯೂ ಶ್ರೀರಾಮನಲ್ಲಿ ದೃಢವಾದ ಭಕ್ತಿಯುಳ್ಳವನಾಗಿಯೂ ಜಿತೇಂದ್ರಿಯನಾಗಿಯೂ ಇರಬೇಕು ॥೭॥

ಬ್ರಾಹ್ಮಮುಹೂರ್ತದಲ್ಲಿ ಎದ್ದು, ಶ್ರೀರಘುನಂದನನನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು ಆ ಬಳಿಕ , ರಾಮ ರಾಮ ರಾಮ ಎಂಬ ಸರ್ವೋತ್ತಮವಾದ ತಾರಕ ಮಂತ್ರವನ್ನು ಸ್ಮರಿಸಬೇಕು॥

ಅನಂತರ ಈ ಮೂರು ಶ್ಲೋಕಗಳನ್ನು ಹೇಳಬೇಕು —ಸೂರ್ಯವಂಶಕ್ಕೆ ಅಲಂಕಾರಭೂತನಾಗಿಯೂ, ಸಕಲ ವೇದಾಂತಗೋಚರನಾಗಿಯೂ, ಸಮಸ್ತರಿಗೂ ಅಭಯಪ್ರದವಾಗಿರುವ ರಾಜವೇಷವನ್ನು ಧರಿಸಿರುವನಾಗಿಯೂ, ಸೀತಾಲಕ್ಷ್ಮಣಯುಕ್ತನಾಗಿಯೂ, ತನ್ನ ಭಕ್ತರಿಗ ಮನೋಪರನಾಗಿಯೂ ಇರುವ ಶ್ರೀರಾಮನನ್ನು, ಸಂಸಾರವೆಂಬ ಸರ್ಪವಿಷವು ಶಾಂತಿಹೊಂದುವುದಕ್ಕಾಗಿ, ನಾನು ಪ್ರಾತಃಕಾಲದಲ್ಲಿ ಧ್ಯಾನಿಸುವೆನು ॥೯॥

ಪ್ರಾತರ್ಗೃಣಾಮಿ ಚರಿತಂ ದುರಿತಂ ನಿಹನ್ತುಂ
ರಾಮಸ್ಯ ತಸ್ಯ ಪಲಭಕ್ಷಕುಲಾನ್ತಕಸ್ಯ ।
ಯಃ ಸಿನ್ಧುಬನ್ಧಕಥಯಾ ಭವಬನ್ಧಹರ್ತಾ
ರಾಜ್ಯಂ ಕರೋತಿ ಚ ವಿಭೀಷಣರಾಜ್ಯದಾತಾ ॥೧೦॥
ಪ್ರಾತಃ ಕರೋಮಿ ಕಲಿಕಲ್ಮಷನಾಶಿ ಕರ್ಮ
ತದ್ದುರ್ಲಭಂ ಭವತು ಭಕ್ತಿಕರಂ ಪರಂ ಮೇ ।
ಅನ್ತಃ ಸ್ಥಿತೇನ ಸುಖಭಾವಜದಾತ್ಮಕೇನ
ರಾಮೇಣ ರಾಜಗುರುದೇವತಯಾ ನಿಯುಕ್ತಃ ॥೧೧॥
ಏವಂ ಶ್ಲೋಕತ್ರಯಂ ಪ್ರಾತಃ ಪರಿತ್ಯಾ ತನ್ಮನಾಬುಧಃ ।
ಕುರ್ಯಾಚ್ಛೌಚಾದಿಕಂ ಕರ್ಮ ಶಾಸ್ತ್ರೋಕ್ತವಿಧಿನಾ ತತಃ ॥೧೨॥
ಆಚಮ್ಯ ತು ಯಥಾಶಾಸ್ತ್ರಂ ದನ್ತಧಾವನಪೂರ್ವಕಮ್ ।
ಹ್ರದೇ ನದ್ಯಾಂ ತಟಾಕೇ ವಾ ಕೃತ್ವಾ ಸ್ನಾನಂ ಯಥಾವಿಧಿ ॥೧೩॥
ತತಃ ಸಂಕ್ಷೇಪತೋ ದೇವಾರ್ಷಿ ಮನುಷ್ಯಾಂಸ್ತರ್ಪಯೇತ್ ಪಿತೄನ್ ।
ಪೀಡಯಿತ್ವಾಮ್ಬರಂ ಚೋರೂ ಪ್ರಕ್ಷಾಳ್ಯಾಚಮ್ಯ ಯತ್ನತಃ ॥೧೪॥

ಯಾವ ಶ್ರೀರಾಮಚಂದ್ರನು, ಸಮುದ್ರದಲ್ಲಿ ಸೇತುಬಂಧವನ್ನು ಮಾಡಿ ಆ ಕಥೆಯ ಸ್ಮರಣ ಮಾತ್ರದಿಂದಲೇ ಜನರಿಗೆ ಸಂಸಾರಬಂಧವನ್ನು ಪರಿಹರಿಸತಕ್ಕವನಾಗಿರುವನೋ, ವಿಭೀಷಣನಿಗೆ ರಾಜ್ಯವನ್ನು ಅನುಗ್ರಹಿಸಿದ ಯಾವ ಮಹಾನುಭಾವನು ಧರ್ಮಸ್ಥಾಪನಾರ್ಥವಾಗಿ ರಾಜ್ಯಭಾರ ಮಾಡಿದನೋ, ಅಂತಹ ರಾಕ್ಷಸಕುಲಾಂತಕನಾದ-ಶ್ರೀರಾಮನ ಚರಿತ್ರೆಯನ್ನು, ನಾನು ಸಕಲ ದುರಿತವನ್ನೂ ಕಳೆದುಕೊಳ್ಳುವುದಕ್ಕಾಗಿ ಪ್ರಾತಃಕಾಲದಲ್ಲಿ ಕೀರ್ತಿಸುವೆನು ॥೧೦॥

ಸಚ್ಚಿದಾನಂದಾತ್ಮಕನಾದ ಶ್ರೀರಾಮನಿಂದ ಅಂತರ್ಯಾಮಿಯಾಗಿ ಗುರುರೂಪದಿಂದಲೂ ದೇವತಾರೂಪದಿಂದಲೂ ನಿಯಮಿಸಲ್ಪಟ್ಟು, ನಾನು ಪ್ರಾತಃಕಾಲದಲ್ಲಿ ಕಲಿಕಲ್ಮಷನಾಶಕವಾದ ಶ್ರೀರಾಮಸೇವಾಕರ್ಮವನ್ನು ಆಚರಿಸುವೆನು ಅತಿ ದುರ್ಲಭವಾದ ಆ ಕರ್ಮವು, ನನಗೆ ವಿಶೇಷವಾಗಿ ಶ್ರೀರಾಮನಲ್ಲಿ ಭಕ್ತಿಯನ್ನು ಹುಟ್ಟಿಸತಕ್ಕುದಾಗಲಿ ॥೧೧॥

ಎಲೌ ಪಾರ್ವತಿ! ಹೀಗೆ ಈ ಮೂರು ಶ್ಲೋಕಗಳನ್ನೂ ಪ್ರಾತಃಕಾಲದಲ್ಲಿ ಪಠಿಸಿ, ಆ ಶ್ರೀರಾಮನಲ್ಲಿಯೇ ಮನಸ್ಸಿಟ್ಟುಕೊಂಡು, ಬಳಿಕ ಶಾಸ್ತ್ರೋಕ್ತವಿಧಿಯಿಂದ ಶೌಚಾದಿ ಕರ್ಮವನ್ನೆಲ್ಲ ನೆರವೇರಿಸಬೇಕು ॥೧೨॥

ಆ ಬಳಿಕ, ದಂತಧಾವನ ಮಾಡಿಕೊಂಡು ಯಥಾಶಾಸ್ತ್ರವಾಗಿ ಆಚಮನಮಾಡಿ, ಬಾವಿಯಲ್ಲಾಗಲಿ ಹೊಳೆಯಲ್ಲಾಗಲಿ ಕೆರೆಯಲ್ಲಾಗಲಿ ಯಥಾವಿಧಿಯಾಗಿ ಸ್ನಾನಮಾಡಿ, ಒಳಿಕ ಸಂಕ್ಷೇಪವಾಗಿ ದೇವ ಋಷಿ ಪಿತೃತರ್ಪಣವನ್ನು ಮಾಡಿ, ಸ್ನಾನಕಾಲದಲ್ಲಿ ಧರಿಸಿದ್ದ ವಸ್ತ್ರವನ್ನು ಹಿಂಡಿ, ವಾದಗಳನ್ನು ಪ್ರಕ್ಷಾಳನೆಮಾಡಿಕೊಂಡು, ಕ್ರಮವಾಗಿ ಆಚಮನ ಮಾಡಿ, ಶುದ್ಧವಾದ

ಧಾರಯೇದ್ವಾಸಸೀ ಶುದ್ಧೇ ಪರಿಧಾಯೋತ್ತರೀಯಕೇ ।
ಆಚ್ಛಿನ್ನೇ ಸವಿತೇ ಶುಕ್ಲೇ ಆಚಾಮೇತ್ ತೀರಸಂಸ್ಥಿತಃ ॥೧೫॥
ನಿತ್ಯಕರ್ಮರತೋ ವಿಪ್ರಃ ಸ್ನಾನಾರ್ದ್ರಂ ತು ಯದಮ್ಬರಮ್ ।
ನಿಷ್ಪೀಡಯಿತ್ವಾ ವಸ್ತ್ರಂ ತತ್ ಪುನಃ ಸನ್ಧ್ಯಾಂ ಸಮಾಚರೇತ್ ॥೧೬॥
ಕೇಶವಾದ್ಯೈರ್ದ್ವಾದಶಭಿಃ ನಾಮಭಿರ್ದ್ವಾದಶಸ್ಥಲೇ ।
ಗೋಪಿಕಾಚನ್ದನೇನೋರ್ಧ್ವಪುಂಡ್ರಾಣಿ ದ್ವಾದಶ ಧಾರಯೇತ್ ॥೧೭॥
ಕೃತ್ವಾ ಸಂಧ್ಯಾಂ ಚ ಗಾಯತ್ರೀಂ ಜಪ್ತ್ವೋಪಸ್ಥಾಯ ವಾಗ್ಯತಃ ।
ಹುತ್ವಾಗ್ನೌ ವಿಧಿವದ್ವಿಪ್ರಃ ಪ್ರಾತಃಕೃತ್ಯಂ ಸಮಾಪ್ಯ ಚ ॥೧೮॥
ವಿಷ್ಣುಭಕ್ತಾನ್ ಪರಸ್ಕೃತ್ಯ ರಾಮಮನ್ತ್ರಮುದೀರ್ಯನ್ ಶಾಸ್ತ್ರತಃ ।
ರಾಮಕೋಟಿಂ ಕರೋಮೀತಿ ಕುರ್ಯಾತ್ ಸಙ್ಕಲ್ಪಮಾದಿತಃ ॥೧೯॥
ಜಿತಾಸನೋ ರಾಮನಾಮಜಪಂ ಕುರ್ಯಾದತನ್ದ್ರಿತಃ ।
ಅನುಧ್ಯಾಹ್ನಂ ತತಃ ಸ್ನಾನಪೂಜಾಹೋಮಾದಿಕಂ ಚರೇತ್ ॥೨೦॥

ವಸ್ತ್ರಗಳನ್ನು ಧರಿಸಬೇಕು ಅಖಂಡಿತವಾಗಿಯೂ ಸದಶ(ಚಂಚುಳ್ಳ)ವಾಗಿಯೂ ಶುಭ್ರವಾಗಿಯೂ ಇರುವ ವಸ್ತ್ರಗಳನ್ನು ಧರಿಸಿ, ತೀರದಲ್ಲಿ ಕುಳಿತುಕೊಂಡು ಆಚಮನ ಮಾಡಬೇಕು ॥೧೩-೧೫॥

ನಿತ್ಯಕರ್ಮರತನಾದ ಬ್ರಾಹ್ಮಣನು, ತಾನು ಸ್ನಾನಕಾಲದಲ್ಲಿ ನೆನೆಯಿಸಿದ ವಸ್ತ್ರವನ್ನು ಹಿಂಡಿಬಿಟ್ಟು, ಆನಂತರವೇ ಸಂಧ್ಯಾವಂದನೆಯನ್ನು ಮಾಡಬೇಕು ॥೧೬॥

ಆ ಬಳಿಕ, ಕೇಶವಾದಿ ದ್ವಾದಶನಾಮಗಳಿಂದ, ತಲಾಟಾದಿ ದ್ವಾದಶಸ್ಥಳಗಳಲ್ಲಿ ಗೋಪೀ ಚಂದನದಿಂದ ದ್ವಾದಶೋರ್ಧ್ವಪುಂಡ್ರಗಳನ್ನು ಧರಿಸಬೇಕು ॥೧೭॥

ಆನಂತರ, ಸಂಧ್ಯಾವಂದನೆಯನ್ನು ಮಾಡಿ, ಗಾಯತ್ರೀಜಪವನ್ನು ಆಚರಿಸಿ, ವಾಗ್ಯತನಾಗಿ ಉಪಸ್ಥಾನವನ್ನು ಮಾಡಿ, ಔಪಾಸನಾದಿ ಹೋಮವನ್ನು ಯಥಾವಿಧಿಯಾಗಿ ನಡೆಯಿಸಿ, ಹೀಗೆ ಪ್ರಾತಃಕಾಲ ನಡೆಯಿಸಬೇಕಾದ ಆಹ್ನಿಕಕೃತ್ಯವನ್ನು ಮುಗಿಯಿಸಿಕೊಂಡು, ಆಮೇಲೆ ವಿಷ್ಣುಭಕ್ತರಾದವರನ್ನು ಆರಾಧಿಸಿ, ಶ್ರೀರಾಮಚಂದ್ರನನ್ನು ಶಾಸ್ತ್ರೋಕ್ತವಿಧಿಯಿಂದ ಪೂಜಿಸಿ, ಕೋಟಿ ರಾಮಮಂತ್ರಜಪವನ್ನು ಮಾಡುತ್ತೇನೆಂದು ಪ್ರಥಮತಃ ಸಂಕಲ್ಪ ಮಾಡಬೇಕು ॥೧೮-೧೯॥

ಹೀಗೆ ಸಂಕಲ್ಪ ಮಾಡಿ, ಏಕಾಸನದಲ್ಲಿ ಕುಳಿತುಕೊಂಡು, ಆಲಸ್ಯವಿಲ್ಲದೆ ಮಧ್ಯಾಹ್ನದ ವರೆಗೂ ರಾಮನಾಮವನ್ನು ಜಪಿಸುತಿರಬೇಕು, ಆಮೇಲೆ ಮಾಧ್ಯಾಹ್ನಿಕ-ಸ್ನಾನ ದೇವತಾರ್ಚನ ವೈಶ್ವದೇವಾದಿಗಳನ್ನು ಆಚರಿಸಬೇಕು ॥೨೦॥

ಜಪಂ ಕೃತ್ವೈವಮಾಲಕ್ಷ್ಯಂ ಪ್ರತಿಲಕ್ಷ್ಯಂ ದಶಾಂಶತಃ ।
ತರ್ಪಣಂ ತದ್ದಶಾಂಶೇನ ಜುಹುಯಾದಾಜ್ಯಪಾಯಸೈಃ ॥೦೧॥
ಬ್ರಾಹ್ಮಣಾ೯ ಭೋಜಯೇಚ್ಛುದ್ಧಾ೯ ಲಕ್ಷೇಲಕ್ಷೇ ದಶ ಕ್ರಮಾತ್ ॥೦೨॥
ಏವಂ ಕೋಟಿಜಪಂ ಕೃತ್ವಾ ರಾಮೇತಿ ದ್ವ್ಯಕ್ಷರಂ ಬುಧಃ ।
ಪೂರ್ವೇ ವಿಶೇಷತೋ ದದ್ಯಾತ್ ಭೋಜನಂ ದಕ್ಷಿಣಾಮಪಿ ।
ಏವಂ ಕೋಟಿಜಪಂ ಕೃತ್ವಾ ತರತ್ಯೇವ ಭವಾರ್ಣವಮ್ ॥೦೩॥
ಬಾಲ್ಯೇ ವಾ ಯೌವನೇ ವಾಪಿ ಕೌಮಾರೇ ವಾರ್ಧಕೇಪಿ ವಾ ।
ಜಪ್ಯಂ ಜಪ್ಯಂ ಪುನರ್ಜಪ್ಯಂ ರಾಮನಾಮ ಸುಖೇಪ್ಸುನಾ ॥೦೪॥
ಏಕವಾರಂ ದ್ವಿವಾರಂ ವಾ ತ್ರಿವಾರಂ ಚೈವಮಾಚರೇತ್ ॥೦೫॥
ಪ್ರಥಮಾವೃತ್ತಿಜಪ್ತೇನ ದ್ವಿತೀಯಾಚ್ಛಿವಮಂದಿರಮ್ ।
ತೃತೀಯಾದ್ವಿಷ್ಣುಭವನಂ ಗತ್ವಾ ತೈರೇವ ಮೋದತೇ ।
ಇತೋ ವಿಶೇಷತೋ ಜಪ್ತ್ವಾ ರಾಮಸಾಯುಜ್ಯಮಾಪ್ನುಯಾತ್ ॥೦೬॥

ಈರೀತಿಯಾಗಿ ಒಂದು ಲಕ್ಷವಾಗುವವರೆಗೂ ಜಪಮಾಡಿ, ಆಮೇಲೆ ಪ್ರತಿಯೊಂದುಲಕ್ಷ ಪೂರ್ತಿಯಾದಾಗಲೂ ಜಪದಲ್ಲಿ ದಶಾಂಶವಾಗಿ ತರ್ಪಣವನ್ನೂ -ತರ್ಪಣದಲ್ಲಿ ದಶಾಂಶವಾಗಿ ಆಜ್ಯ ಪಾಯಸಗಳಿಂದ ಹೋಮವನ್ನೂ ಮಾಡಬೇಕು ಪ್ರತಿಯೊಂದು ಲಕ್ಷಪೂರ್ತಿಯಾದಾಗಲೂ, ಹತ್ತುಹತ್ತುಮಂದಿ ಶುದ್ಧರಾದ ಬ್ರಾಹ್ಮಣರಿಗ ಭೋಜನ ಮಾಡಿಸಬೇಕು ॥೨೧-೨೨॥

ಹೀಗ ಪ್ರಾಜ್ಞನಾದವನು ' ರಾಮ ' ಎಂಬ ಎರಡಕ್ಷರವುಳ್ಳ ಮಂತ್ರವನ್ನು ಕೋಟಿಸಂ ಖ್ಯಾಕವಾಗಿ ಜಪಿಸಿ, ಕೋಟಿಜಪ ಪೂರ್ತಿಯಾದಾಗ ವಿಶೇಷವಾಗಿ ದಾನಗಳನ್ನೂ ಬ್ರಾಹ್ಮಣ ಭೋಜನವನ್ನೂ ನಡೆಯಿಸಬೇಕು ಈಗೆ ಕೋಟಿ ಜಪವನ್ನು ಮಾಡಿದರೆ, ಈ ಸಂಸಾರಸಮುದ್ರ ವನ್ನು ದಾಟಿಯೇ ದಾಟುವನು , ಇದರಲ್ಲ ಸಂಶಯವಿಲ್ಲ ॥೨೩॥

ಬಾಲ್ಯದಲ್ಲಾಗಲಿ, ಯೌವನದಲ್ಲಾಗಲಿ, ಕೌಮಾರದಲ್ಲಾಗಲಿ, ವಾರ್ಧಕದಲ್ಲಾಗಲಿ, ಸುಖಾರ್ಥಿಯಾದವನು ಈ ರಾಮನಾಮವನ್ನು ಜಪಿಸಬೇಕು , ನಿಶ್ಚಯವಾಗಿ ಜಪಿಸಬೇಕು , ಮತ್ತೆ ಮತ್ತೆ ಜಪಿಸಬೇಕು ಈಗ ಹೇಳಿದ ಈ ಕೋಟಿರಾಮನಾಮ ಜಪವನ್ನು, ಒಂದಾವೃತ್ತಿ ಯಾಗಲಿ- ಎರಡಾವೃತ್ತಿಯಾಗಲ-ಮೂರಾವೃತ್ತಿಯಾಗಲ ಆಚರಿಸಬೇಕು ॥೨೪-೨೫॥

ಹೀಗೆ ಮಾಡಿದರ, ಪ್ರಥಮಾವೃತ್ತಿ ಮಾಡಿದ ಜಪದಿಂದ ಬ್ರಹ್ಮಲೋಕವನ್ನೂ, ಎರಡನಯಾ ವೃತ್ತಿ ಮಾಡಿದ ಜಪದಿಂದ ಶಿವಲೋಕವನ್ನೂ, ಮೂರನಯ ಸಲ ಮಾಡಿನುದರಿಂದ ವಿಷ್ಣುಲೋ ಕವನ್ನೂ ಪಡೆದು, ಅಲ್ಲ ಅವರೊಡನೆಯೇ ಆನಂದಪಡುತಿರುವನು ಇನ್ನು ಇದಕ್ಕಿಂತಲೂ ಹಚ್ಚಾಗಿ ಜಪಮಾಡಿದರೆ, ತ್ರೈಲೋಮಸಲ್ಲ ಏಕ್ಯಹೊಂದುವನು ॥೨೬॥

ಯಾವಜ್ಜೀವಂ ಜಾಪಕಸ್ಯ ನ ಸಂಖ್ಯಾನಿಯಮಕ್ರಮಃ ।
ಶ್ರೇಯಃ ಪರಮವಾಪ್ನೋತಿ ಸತ್ಯಂಸತ್ಯಂ ಮಯೋದಿತಮ್ ॥೦೩॥
ಏತದ್ರಹಸ್ಯಂ ಪರಮಂ ಮಯಾ ಪ್ರೋಕ್ತಂ ತವಾಸಖೇ ।
ಏತತ್ ಕೃತ್ವಾ ಜ್ಞಾನವಾ೯ ಸ್ಯಾತ್ ಕೃತಕೃತ್ಯಶ್ಚ ಪಾರ್ವತಿ ॥೦೪॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ರಾಮಕೋಟಿಜಪವಿಧಾನಕಥನಂ ನಾಮ
ನವಮಃ ಸರ್ಗಃ



ಎಲೌ ಪಾರ್ವತಿ! ಹೀಗೆ ಕೋಟಿಸಂಖ್ಯಾನಿಯಮದಿಂದ ಜಪಮಾಡತಕ್ಕ ವಿಧ ಗೂತ್ತಾ ಯ್ತಷ್ಟೆ! ಆದರೆ, ಯಾವಜ್ಜೀವವೂ ಜಪಮಾಡತಕ್ಕವನಿಗೆ ಈ ಸಂಖ್ಯಾನಿಯಮ ತರ್ಪಣ ಹೋಮಾದಿ ಕ್ರಮಗಳೊಂದೂ ಇಲ್ಲ ಹೀಗೆ ಜಪಮಾಡತಕ್ಕವನು ಪರಮಶ್ರೇಯೋಭಾಗಿಯಾಗುವನು ಇದು ಸಂಪೂರ್ಣವಾಗಿ ಸತ್ಯವೆಂದು ನಾನು ಪುನಃಪುನಃ ಹೇಳುವೆನು ॥೨೭॥

ಎಲೌ ನಿರ್ದೋಷಶರೀರವಳ! ಇದೋ ಈರೀತಿಯಾಗಿ ಪರಮರಹಸ್ಯವಾದ ರಾಮಮಂತ್ರ ಉಪಾಧಿಯನ್ನು ನಾನು ನಿನಗ ಹೇಳಿರುವೆನು ಎಲೌ ಪಾರ್ವತಿ! ನಾನು ಹೇಳಿರುವಂತೆ ಇದನ್ನು ಆಚರಿಸಿದರೆ, ಪುರುಷನು ಜ್ಞಾನಯುಕ್ತನಾಗಿ ಕೃತಾರ್ಥನಾಗುವನು ॥೨೮॥

ಇದು ಕಿಷ್ಕಿಂಧಾಕಾಂಡದಲ್ಲಿ ರಾಮಕೋಟಿಜಪವಿಧಾನಕಥನವೆಂಬ
ಒಂಭತ್ತನೆಯ ಸರ್ಗವು.



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ದಶಮಃ ಸರ್ಗಃ.

ಶ್ರೀ ಶಿವಉವಾಚ

ಏವಂ ಧರ್ಮಕಥಾಲಾಪೈಃ ನೀತ್ವಾ ವರ್ಷಾಃ ಸ ರಾಘವಃ ।
ಅಪಶ್ಯಚ್ಛರದಂ ಸ್ವಚ್ಛದಿಗ್ವಿಯಜ್ಜಲಪಙ್ಕಜಾಮ್ ॥೧॥
ವೀಕ್ಷ್ಯಾಥ ಸಮುಯಾತೀತಂ ಕಪಿರಾಜಂ ಚ ಕಾಮುಕಃ ।
ಲಕ್ಷ್ಮಣಂ ಚಾಹ ಪಾರ್ಶ್ವಸ್ಥಂ ಕೋಪರಕ್ತಾನ್ತಲೋಚನಃ ॥೨॥
ಗಚ್ಛ ಸುಗ್ರೀವನಗರೇ ಕ್ಷಿಪ್ರಮೇವ ಧನುರ್ಧರಃ ।
ಸುಗ್ರೀವಮಾನಯ ಕ್ಷಿಪ್ರಂ ರಾಜ್ಯಶ್ರೀಮದವಿಮೋಹಿತಮ್ ॥೩॥

ಇತಿ ರಾಮವಚಃ ಶ್ರುತ್ವಾ ಲಕ್ಷ್ಮಣೋ ಲಕ್ಷ್ಮವರ್ಧನಃ ।
ಕಿಷ್ಕಿನ್ಧಾಂ ಪ್ರಾಪ್ಯ ತೇಜಸ್ವೀ ದ್ವಾರದೇಶಾಙ್ಗದೇ ಸ್ಥಿತಃ ॥೪॥
ಸೋಙ್ಗದಂ ರೋಷತಾಮ್ರಾಕ್ಷಃ ಸನ್ದಿದೇಶ ಮಹಾಯಶಾಃ ।
ಸುಗ್ರೀವಃ ಕಥ್ಯತಾಂ ವತ್ಸ ಮಮಾಗಮನಮಿತ್ಯುತ ॥೫॥

ಕಿಷ್ಕಿಂಧಾಕಾಂಡದಲ್ಲಿ ಹತ್ತನೆಯ ಸರ್ಗವು

ಪುನಃ ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ ! ಹೀಗೆ ಆ ರಾಘವನು ಧರ್ಮಕಥಾಪ್ರಸ್ತಾವಗಳಿಂದ ವರ್ಷಾಕಾಲವನ್ನು ಕಳೆದು, ದಿಕ್ಕು ಆಕಾಶ ಜಲ ಕಮಲಗಳೆಲ್ಲವೂ ಸ್ವಚ್ಛವಾಗುತಿರುವ ಶರತ್ಕಾಲವು ಪ್ರಾಪ್ತವಾದುದನ್ನು ಕಂಡನು ॥೧॥

ಹೀಗೆ ಶರತ್ಕಾಲವುಪಸ್ಥಿತವಾದುದನ್ನೂ, ಇನ್ನೂ ತನ್ನ ಪ್ರತಿಜ್ಞೆಯಂತೆ ಸುಗ್ರೀವನು ಬಾರದಿರುವುದನ್ನೂ ಕಂಡು, ಕೋಪದಿಂದ ಕಡಗಣ್ಣನ್ನು ಕೆಂಪಗೆ ಮಾಡಿಕೊಂಡು, ಶ್ರೀರಾಮನು ಲಕ್ಷ್ಮಣನನ್ನು ಕುರಿತು ' ವತ್ಸ ! ಲಕ್ಷ್ಮಣ ! ನೀನು ಈಗಲೇ ಕ್ಷಣದೊಳಗಾಗಿ ಧನುಸ್ಸನ್ನು ಪಿಡಿದುಕೊಂಡೇ ಸುಗ್ರೀವನ ಪಟ್ಟಣದೊಳಕ್ಕೆ ಹೋಗು, ಅಲ್ಲಿ ರಾಜ್ಯಲಕ್ಷ್ಮೀಮದಮೋಹಿತನಾಗಿರುವ ಸುಗ್ರೀವನನ್ನು ನಿಮಿಷಾರ್ಧದಲ್ಲಿ ಕರೆದುಕೊಂಡು ಬಾ.' ಎಂದು ಆಜ್ಞಾಪಿಸಿದನು ॥೨-೩॥

ಹೀಗೆ ಹೇಳಿದ ಶ್ರೀರಾಮನ ಮಾತನ್ನು ಕೇಳಿ, ಮಹಾತೇಜಸ್ಸಂಪನ್ನನಾದ ಮಹಾಕೀರ್ತಿಶಾಲಿಯಾದ ಶ್ರೀ ಲಕ್ಷ್ಮಣನು, ಕಿಷ್ಕಿಂಧಾಪಟ್ಟಣವನ್ನು ಪ್ರವೇಶಿಸಿ, ಅಲ್ಲಿ ಊರ ಬಾಗಿಲಲ್ಲಿರುವ ಅಂಗಳದೊಳಗೆ ನಿಂತುಕೊಂಡು, ರೋಷದಿಂದ ಅರುಣನಯನನಾಗಿ, ಅಂಗದನನ್ನು ನೋಡಿ ' ವತ್ಸ ! ಅಂಗದ ! ನಾನು ಬಂದಿರುವೆನೆಂದು ಸುಗ್ರೀವನಿಗೆ ತಿಳುಪಿಸು ಎಂದು ಆಜ್ಞಾಪಿಸಿದನು ॥೪-೫॥

ಲಕ್ಷ್ಮಣಸ್ಯ ವಚಃ ಶ್ರುತ್ವಾ ಶೋಕಾವಿಷ್ಟೋಽಬ್ರವೀತ್ ।
ಪಿತುಃ ಸಮೀಪಮಾಗತ್ಯ ಸುಮಿತ್ರಾತನಯಮಾಗತಃ ॥೬॥

ತಸ್ಯ ಮೂರ್ಧ್ನಿ ಪ್ರಣಮ್ಯ ತ್ವಂ ಸಪುತ್ರಃ ಸಪು ಬನ್ಧುಭಿಃ ।
ಗಚ್ಛ ಶೀಘ್ರಂ ಮಹಾರಾಜ ರೋಷೋ ಹ್ಯಸ್ಯ ನಿವರ್ತ್ಯತಾಮ್ ॥೭॥

ಯದಾಹ ರಾಮೋ ಧರ್ಮಾತ್ಮಾ ತತ್ ಕುರುಷ್ವ ಸಮಾಹಿತಃ ।
ರಾಜಂಸ್ತಿಷ್ಠ ಸ್ವಸಮಯೇ ಭವ ಸತ್ಯ ಪ್ರತಿಶ್ರವಃ ॥೮॥

ತಚ್ಛ್ರುತ್ವಾ ವಚನಂ ತಸ್ಯ ಕ್ರೂರಂ ದಾರುಣಸಮ್ಮಿತಮ್ ।
ಭೀತಾಸ್ತಾರಾದಿಕಾನಾರ್ಯಾಃ ಶಙ್ಕಮಾನಾಃ ಸಮುತ್ಥಿತಾಃ ॥೯॥

ತ್ಯಕ್ತಾಭರಣಮಾಲ್ಯಾದ್ಯಾಃ ತ್ಯಕ್ತತಾಮ್ಬೂಲಚರ್ವಣಾಃ ।
ಸುಗ್ರೀವಂ ಮಧ್ಯತಃ ಕೃತ್ವಾ ಯಯುಃ ಸರ್ವಾಃ ಪುರಾಙ್ಗಣಮ್ ॥೧೦॥

ದೃಷ್ಟ್ವಾ ತು ಲಕ್ಷ್ಮಣಂ ತತ್ರ ಲಯಕಾಲಾನಲೋಪಮಮ್ ।
ಸುಗ್ರೀವಂ ಪೃಷ್ಠತಃ ಕೃತ್ವಾ ಪ್ರಣೇಮುಸ್ತತ್ರ ತಾಃ ಸ್ತ್ರಿಯಃ ॥೧೧॥

ಆನಂತರ, ಲಕ್ಷ್ಮಣನ ಮಾತನ್ನು ಕೇಳಿ, ಶೋಕಾವಿಷ್ಟನಾದ ಅಂಗದನು, ತನ್ನ ತಂದೆಯಾದ ಸುಗ್ರೀವನ ಹತ್ತಿರಕ್ಕೆ ಬಂದು, ಲಕ್ಷ್ಮಣನು ಬಂದಿರುವನೆಂದು ಹೇಳಿ, ಮತ್ತ ಈರೀತಿಯಾಗಿ ವಿಜ್ಞಾಪಿಸಿಕೊಂಡನು ॥೬॥

ತಾತ! ಈಗ ಲಕ್ಷ್ಮಣನು ಒಳಕೋಪದಿಂದ ಒಂದಿರುವನು ನೀನು ಬೇಗನೆ ನಿನ್ನ ಪುತ್ರರೊಡನೆಯೂ ಬಂಧುಗಳೊಡನೆಯೂ ಅಲ್ಲಿಗೆ ಹೋಗು, ಮಹಾರಾಜ! ಅವನಿಗ ತಲೆವಾಗಿ ನಮಸ್ಕಾರಮಾಡಿ, ಅವನ ರೋಷವನ್ನು ಶಾಂತಿಗೊಳಿಸು ॥೭॥

ಒಳ್ಳೆ ರಾಜನೆ! ಧರ್ಮಾತ್ಮನಾದ ಶ್ರೀರಾಮನು ನಿನ್ನುಹೇಳುವಸ್ತೋ ಅದನ್ನು ಏಕಾಗ್ರಚಿತ್ತನಾಗಿ ನಡೆಯಿಸು ನೀನು ನಿನ್ನ ಪ್ರತಿಜ್ಞೆಯಲ್ಲ ನಿರತನಾಗಿರು, ನಿನ್ನ ಪ್ರತಿಜ್ಞೆಯು ಸತ್ಯವಾಗುವಂತೆ ಮಾಡಿಕೋ ॥೮॥

ಹೀಗೆ ಅಂಗದನು ಸುಗ್ರೀವನಿಗ ಹೇಳಿದ ಅತಿಕ್ರೂರವಾಗಿರುವ ವಜ್ರಸಮಾನವಾದ ಮಾತನ್ನು ಕೇಳಿ, ತಾರ ಮೊದಲಾದ ಸ್ತ್ರೀಯರೆಲ್ಲರೂ ಪದರಿಕೊಂಡು ಶಂಕಾವಿಷ್ಟರಾಗಿ ಎದ್ದರು ॥೯॥

ಆಮೇಲೆ ಆ ಸಮಸ್ತ ಸ್ತ್ರೀಯರೂ, ಆಭರಣಗಳನ್ನೂ ಪುಷ್ಪಮಾಲಕೆಗಳನ್ನೂ ತೆಗದು ಹಾಕಿ, ತಾಂಬೂಲಚರ್ವಣವನ್ನು ಬಿಟ್ಟುಬಿಟ್ಟು, ಸುಗ್ರೀವನನ್ನು ತಮ್ಮಗಳ ಮಧ್ಯದಲ್ಲಿಟ್ಟುಗೊಂಡು, ಲಕ್ಷ್ಮಣಸಿದ್ದ ಊರಹೊರಗಿನ ಅಂಗಳಕ್ಕೆ ಹೋದರು ॥೧೦॥

ಅಲ್ಲಿ ಪ್ರಳಯಾಗ್ನಿಸದೃಶನಾಗಿರುವ ಲಕ್ಷ್ಮಣನನ್ನು ಕಂಡು, ಸುಗ್ರೀವನನ್ನು ಹಿಂದಕ್ಕೆ ಬಿಟ್ಟುಗೊಂಡು, ಆ ಸ್ತ್ರೀಯರೆಲ್ಲರೂ ಲಕ್ಷ್ಮಣನಿಗೆ ನಮಸ್ಕರಿಸಿದರು ॥೧೧॥

ಪ್ರಣಮ್ಯೋತ್ಥಾಪಿತಾಃ ಸರ್ವಾಃ ಬದ್ಧಾಞ್ಜಲಿಪುಟಾಸ್ತದಾ ।
ಪತಿಭಿಕ್ಷಾಂ ಚ ದೇಹೀತಿ ತಾಪಿತಾಹೀತಿ ಚಾಬ್ರುವ॑ ॥೯॥

ಸಮಸ್ಕಾರರತಾನಾರೀಃ ತಾದೃಷ್ಟ್ವಾ ಲಕ್ಷ್ಮಣಸ್ತದಾ ।
ಕಿಞ್ಚಿದ್ದಯಾರ್ದ್ರಹೃದಯೋ ಬಭೂವ ಪರವೀರಹಾ ॥೧೩॥

ಏತಸ್ಮಿನ್ನೇವ ಸಮಯೇ ತಾರಾ ಲಕ್ಷ್ಮಣವೇದಿನೀ ।
ಲಕ್ಷ್ಮಣಸ್ಯ ಮನೋ ಜ್ಞಾತ್ವಾ ಮನ್ದಂಮನ್ದಮುವಾಚ ಹ ॥೧೪॥

ಕಿಂ ಕೋಪಮೂಲಂ ಮನುಜೇನ್ದ್ರಪುತ್ರ ಕಸ್ತೇ ನ ಸನ್ತಿಷ್ಠತಿ ವಾಜ್ನಿದೇಶೇ ।
ಕಃ ಶುಷ್ಕವೈಕ್ಷಂ ವನಮಾಪತನ್ತಂ ದವಾಗ್ನಿಮಾಸೀದತಿ ನಿರ್ವಿಶಙ್ಕಃ ॥೧೫॥

ಸ ತಸ್ಯಾವಚನಂ ಶ್ರುತ್ವಾ ಸಾನ್ತ್ವಪೂರ್ವಮಶಙ್ಕಿತಮ್ ।
ಭೂಯಃ ಪ್ರಣಯದೃಷ್ಟ್ಯರ್ಥಂ ಲಕ್ಷ್ಮಣೋ ವಾಕ್ಯಮಬ್ರವೀತ್ ॥೧೬॥

ಕಮಯಂ ಕಾಮವೃತ್ತಸ್ತೇ ಲುಪ್ತಧರ್ಮಾರ್ಥಸಙ್ಗ್ರಹಃ ।
ಭರ್ತಾ ಭರ್ತೃಹಿತೇ ಯುಕ್ತೇ ನ ಚೈನಮವಬುಧ್ಯಸೇ ॥೧೭॥

ಸ ಮಾಸಾನ್ಬಹ್ವತುರಃ ಕೃತ್ವಾ ಪ್ರಮಾಣಂ ಪ್ಲವಗೇಶ್ವರಃ ।
ವ್ಯತೀತಾಂಸ್ತಾನ್ಹಿ ಮದನ್ಯಗೊಽಯೀ ವಿಹರ॑ನಾವಬುಧ್ಯತೇ ॥೧೮॥

ಹೀಗೆ ನಮಸ್ಕಾರ ಮಾಡಿ ಎದ ಆ ಸ್ತ್ರೀಯರೆಲ್ಲರೂ, ಆಗ ಅಂಜಲಿಬಂಧ ಮಾಡಿಕೊಂಡು, ನಮಗ ಪತಿಭಿಕ್ಷೆಯನ್ನು ಅನುಗ್ರಹಿಸಿ ನಮ್ಮನ್ನು ಕಾಪಾಡಬೇಕೆಂದು ಲಕ್ಷ್ಮಣನನ್ನು ಪ್ರಾರ್ಥಿಸಿದರು ॥೧೨॥

ಹೀಗೆ ಮತ್ತ ಮತ್ತೆ ನಮಸ್ಕಾರ ಮಾಡುತಿರುವ ಆ ಸ್ತ್ರೀಯರನ್ನು ನೋಡಿ, ಆಗ ಶತ್ರು ಸಂಹಾರಕನಾದ ಲಕ್ಷ್ಮಣನು ಸ್ವಲ್ಪ ದಯಾರ್ದ್ರಹೃದಯನಾದನು ॥೧೩॥

ಈ ಸಮಯದಲ್ಲಿಯೇ, ಲಕ್ಷ್ಮಣಪತ್ನಿಯಾದ ತಾರೆಯು, ಲಕ್ಷ್ಮಣನ ಮನಸ್ಸಿನಲ್ಲಿ ಸ್ವಲ್ಪ ದಯಯುದಯಿಸಿರುವುದನ್ನು ತಿಳಿದುಕೊಂಡು, ಮೆಲ್ಲಮೆಲ್ಲಗ ಹೀಗ ಹೇಳಿದಳು ॥೧೪॥

ಎಲೈ ರಾಜಪುತ್ರನೆ ! ನೀನು ಹೀಗೆ ಕೋಪಮಾಡುವುದಕ್ಕ ಮೂಲವೇನು ? ನಿನ್ನ ಆಜ್ಞೆಯನ್ನು ಮೀರತಕ್ಕವರಾರುಸರು ? ಸುರಗಳಲ್ಲ ಬಣಗಿಹೋಗಿರುವ ಕಾಡಿನೊಳಗೆ ಅಗ್ನಿಯು ಪ್ರವೇಶಿಸುವಾಗ, ಆ ಕಾಡುಗಿಚ್ಚನ್ನು ಯಾವನುತಾನೆ ನಿರಾತಂಕನಾಗಿ ಸಮೀಪಿಸುವನು ? ॥೧೫॥

ಹೀಗೆ ಸಮಾಧಾನ ಮಾಡುತ-ನಿರಾತಂಕವಾಗಿಯೂ ಪ್ರೇಮಭರಿತವಾಗಿಯೂ ವಿಜ್ಞಾಪಿಸಿದ ತಾರೆಯ ಮಾತನ್ನು ಕೇಳಿ, ಲಕ್ಷ್ಮಣನು ಮತ್ತ ಈ ರೀತಿಯಾಗಿ ಮಾತನಾಡಿದನು ॥೧೬॥

ಪತಿಹಿತಾಚರಣೆಯಲ್ಲಿ ನಿರತೆಯಾದ ಎಲೌ ತಾರೆ ! ನಿನ್ನ ಪತಿಯು ಇದೇನು ಹೀಗೆ ಕಾಮಪ್ರಧಾನನಾಗಿ ಧರ್ಮಾರ್ಥಗಳನ್ನು ಲೋಪಪಡಿಸುತಿರುವನು ? ಇವನು ಹೀಗ ಅಪರಾಧಿಯಾಗಿರುವುದು ಮಾತ್ರ ನಿನಗೆ ಗೊತ್ತಾಗುವುದಿಲ್ಲ ॥೧೭॥

ನಿನ್ನ ಭರ್ತನಾದ ಈ ಕಪಿರಾಜನು, ನಾಲ್ಕು ತಿಂಗಳು ಅವಧಿಯನ್ನು ಮಾಡಿಕೊಂಡು ಬಂದು, ಇಲ್ಲಿ ಹೀಗೆ ಮದವ್ಯಗ್ರನಾಗಿ ವಿಹರಿಸುತ, ಆ ನಾಲ್ಕುತಿಂಗಳು ಕಳೆದುಹೋದರೂ ತಿಳಿಯದೆಯೇ ಇರುವನಲ್ಲ ! ॥೧೮॥

ತದೇವಂ ಪ್ರಸ್ತುತೇ ಕಾರ್ಯೇ ಕಾರ್ಯಮಸ್ಮಾಭಿರುತ್ತಮಮ್ ।
ಯತ್ ಕಾರ್ಯಂ ಕಾರ್ಯತತ್ತ್ವಜ್ಞೇ ತದುದಾಹರ್ತುಮರ್ಹಸಿ ॥೧೯॥
ತಾರೈವಂ ವಚನಂ ಶ್ರುತ್ವಾ ಲಕ್ಷ್ಮಣೋಪಹಿತಾಚ್ಛ್ರುತಮ್ ।
ಉವಾಚ ಮಧುರಂ ವಾಕ್ಯಂ ಭಯಸಂದಿಗ್ಧಯಾ ಗಿರಾ ॥೨೦॥

ನ ಕೋಪಕಾಲಃ ಕ್ಷಿತಿಪಾಲಪುತ್ರ ನ ಚಾಪಿ ಕೋಪಃ ಸ್ವಜನೇ ವಿಧೇಯಃ।
ತ್ವದರ್ಥಕಾಮಸ್ಯ ಜನಸ್ಯ ತಸ್ಯ ಪ್ರಮಾದಮಪ್ಯರ್ಹಸಿ ವೀರ ಸೋಢುಮ್'॥೨೧॥
ಕೋಪಂ ಕಥಂ ನಾಮ ಗುಣಪ್ರಕೃಷ್ಟಃ ಕುಮಾರ ಕುರ್ಯಾದಪಕೃಷ್ಟಸತ್ವೇ।
ನ ತ್ವದ್ವಿಧಃ ಕೋಪವಶಂ ಹಿ ಗಚ್ಛೇತ್ ಸತ್ವಾವರುದ್ಧಸ್ತಪಸಃ ಪ್ರಸೂತಿಃ ॥೨೨॥
ತ್ವಂ ಕಾಮವೃತ್ತಂ ಮಮ ಸನ್ನಿಕೃಷ್ಟಂ ಕಾಮಾಭಿಯೋಗಾಚ್ಚ ನಿವೃತ್ತಲಜ್ಜಮ್ ।
ಕ್ಷಮಸ್ವ ತಾವತ್ ಪರವೀರಹಂತಃ ತ್ವದ್ಭ್ರಾತರಂ ವಾನರವಂಶನಾಥಮ್ ॥೨೩॥
ಏವಂ ಪ್ರಸಾದ್ಯ ಸೌಮಿತ್ರಿಂ ತಾರಾ ಸಮಯವೇದಿನೀ ।
ಪಾತಯಾಮಾಸ ಸುಗ್ರೀವಂ ಪ್ರಭೋಃ ಪಾದದ್ವಯೇ ಸತೀ ॥೨೪॥

ಎಲೌ ತಾರೆ! ಸಕಲ ಕಾರ್ಯಸ್ವರೂಪವನ್ನೂ ನೀನೇ ಬಲ್ಲೆಯಷ್ಟೆ! ಈಗ ಪ್ರಕೃತಕಾರ್ಯದಲ್ಲಿ ನಾವು ಯಾವ ಕೆಲಸವನ್ನು ಮಾಡುವುದು ಯುಕ್ತವೋ-ಅದನ್ನು ನೀನೇ ನನಗೆ ಹೇಳುವಳಾಗು ॥೧೯॥

ಹೀಗೆಂದು ಲಕ್ಷ್ಮಣನ ಮುಖದಿಂದ ಹೊರಟ ಮಾತನ್ನು ಕೇಳಿ, ತಾರೆಯು ಭಯದಿಂದ ಸಂದೇಹಪಡುತ ಹೀಗೆ ಮಧುರವಾಗಿ ಮಾತನಾಡಿದಳು ॥೨೦॥

ಎಲೈ ರಾಜಪುತ್ರನೆ! ಈಗ ನೀನು ಕೋಪಮಾಡುವ ಕಾಲವಲ್ಲ, ಸ್ವಜನರಲ್ಲಿ ಕೋಪವನ್ನು ಮಾಡಲೂಬಾರದು ಎಲೈ ಮಹಾವೀರನೆ! ನಿನ್ನ ಕೆಲಸವನ್ನೇ ನೆರವೇರಿಸಲು ಪ್ರಯತ್ನಪಡುತಿರುವ ನಿನ್ನವನಾದ ಈ ಸುಗ್ರೀವನಿಂದ ಏನಾದರೊಂದು ಅಪರಾಧ ಸಂಭವಿಸಿದ್ದರೂ, ಅದನ್ನು ನೀನು ಕ್ಷಮಿಸಬೇಕಾಗಿರುವುದು ॥೨೧॥

ಹೇ ರಾಜಕುಮಾರ! ಗುಣಾಧಿಕನಾದವನು, ತನಗಿಂತ ಹೀನಬಲನಾದವನಮೇಲೆ ಹೇಗೆ ತಾನೆ ಕೋಪಮಾಡಿಯಾನು? ಕೇವಲ ಸತ್ವಸಂಪನ್ನನಾಗಿಯೂ ಜ್ಞಾನನಿಧಿಯಾಗಿಯೂ ಇರುವ ನಿನ್ನಂಥವನು ಎಂದಿಗೂ ಕೋಪಕ್ಕೆ ಅಧೀನನನಾಗಲಾರನಲ್ಲವೆ! ॥೨೨॥

ಶತ್ರುವೀರವಿನಾಶಕನೆ! ಈ ಸುಗ್ರೀವನು, ಈಗ ಕೇವಲ ಕಾಮಪರತಂತ್ರನಾಗಿ ನನ್ನ ಸಮಾಪದಲ್ಲಿದ್ದನು, ಕಾಮಾಭಿನಿವೇಶದಿಂದ ಇವನಿಗೆ ಲಜ್ಜೆಯೂ ಹೋಗಿಬಿಟ್ಟಿರುವುದು ನಿನ್ನ ಸಹೋದರಪ್ರಾಯನಾದ ಈ ಕಪಿರಾಜನನ್ನು ನೀನು ಅನುಗ್ರಹವಿಟ್ಟು ಕ್ಷಮಿಸಬೇಕು. (ಎಂದು ತಾರೆಯು ಪ್ರಾರ್ಥಿಸಿದಳು) ॥೨೩॥

ಹೀಗೆ ಲಕ್ಷ್ಮಣನನ್ನು ಸಮಾಧಾನಪಡಿಸಿ, ಕಾಲೋಚಿತವನ್ನು ಬಲ್ಲವಳಾದ ತಾರೆಯು, ತನ್ನ ಪತಿಯಾದ ಸುಗ್ರೀವನನ್ನು ಆ ಲಕ್ಷ್ಮಣನ ಚರಣಕಮಲದ ಮೇಲೆ ಕೆಡುಹಿದಳು ॥೨೪॥

ಸ ತಂ ಪಾದದ್ವಯೇ ಭೃತ್ಯಂ ಪ್ರನರುತ್ಥಾಯ ಸಂಸ್ಥಿತಮ್ ।
ಪ್ರಾಞ್ಜಲಿಂ ದೀನವದನಂ ಪ್ರೋವಾಚ ವಚನಂ ಪ್ರಭುಃ ॥೨೫॥

ತ್ವಾದೃಶೋ ಯಸ್ಯ ಭೃತ್ಯೋಸ್ತಿ ಸ ಕಪೇ ಸುಖಮೇಧತೇ ।
ತ್ವಾದೃಶಸ್ಯೋಪಕರ್ತಾತ್ರ ರಾಮೋಪಿ ಸುಖಮೇಧತೇ ॥೨೬॥

ತ್ವಂ ಕೃತಘ್ನೋಸಿ ದುಷ್ಟಾತ್ಮನ್ ರಾಮಸ್ತೇ ವಿಸ್ಮೃತೋ ಯತಃ ॥೨೭॥

ಗೋಘ್ನೇ ಚೈವ ಸುರಾಪೇ ಚ ಸ್ತೇಯೇ ಚ ಗುರುತಲ್ಪಗೇ ।
ನಿಷ್ಕೃತಿರ್ವಿಹಿತಾ ಸದ್ಭಿಃ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೨೮॥

ಕಪಿಸೇನಾ ಬಲವತೀ ಬಲಂ ಸ್ವಭುಜಯೋರಪಿ ।
ರಾಮಸ್ಮರಣಹೀನಸ್ಯ ಸರ್ವಂ ಬಾಣಾಗ್ರಸಂಸ್ಥಿತಮ್ ॥೨೯॥

ನ ಚ ಸಂಕುಚಿತಃ ಪನ್ಥಾ ಯೇನ ವಾಲೀ ಹತೋ ಗತಃ ।
ಸಮಯೇ ತಿಷ್ಠ ಸುಗ್ರೀವ ಮಾ ವಾಲಿಪಥಮನ್ವಗಾಃ ॥೩೦॥

ಏಕಏವ ರಣೇ ವಾಲೀ ರಾಮೇಣ ನಿಹತೋ ಬಲೀ ।

ಹೀಗೆ ತನ್ನ ಪಾದಯುಗ್ಮದಲ್ಲಿ ನಮಸ್ಕರಿಸಿ ಎದ್ದು ನಿಂತುಗೊಂಡು ದೀನವದನನಾಗಿ ಕಯು ಗಿಯುತಿರುವ ಸುಗ್ರೀವನನ್ನು ನೋಡಿ, ಲಕ್ಷ್ಮಣನು ಹೀಗೆ ಹೇಳಿದನು ॥೨೫॥

ಎಲೈ ಕಪಿನಾಯಕನ! ನಿನ್ನಂತಹ ಭೃತ್ಯನು ಯಾರಿಗಿರುವನೋ, ಅವನು ಜೆನ್ನಾಗಿ ಸುಖ ಪಡಬಹುದಲ್ಲವೆ! ನಿನ್ನಂಥವನಿಗ ಉಪಕಾರಮಾಡಿದ ನಮ್ಮ ಶ್ರೀರಾಮನೂ ಸುಖವನ್ನು ಪಡೆ ದಂತೆಯೇ ಆಯ್ತಲ್ಲವೆ! ॥೨೬॥

ಎಲಾ ದುರಾತ್ಮನೆ! ನಿನಗ ಅತ್ಯುಪಕಾರಿಯಾದ ಶ್ರೀರಾಮನನ್ನು ಮರತಯಲ್ಲ! ನೀನು ಮಹಾ ಕೃತಘ್ನನು ಗೋವಧ ಮಾಡಿದವನಿಗೂ, ಸುರಾಪಾನ ಮಾಡಿದವನಿಗೂ, ಸ್ವರ್ಣ ಸ್ತೇಯ ಮಾಡಿದವನಿಗೂ, ಗುರುತಲ್ಪಗಮನ ಮಾಡಿದವನಿಗೂ ಕೂಡ, ಶಾಸ್ತ್ರಕಾರರಾದ ಮಹಾ ತ್ಮರು ಪ್ರಾಯಶ್ಚಿತ್ತವನ್ನು ವಿಧಿಸಿರುವರು ಕೃತಘ್ನನಿಗೆ ಯಾವ ನಿಷ್ಕೃತಿಯೂ ವಿಹಿತವಾ ಗಿಲ್ಲ ॥೨೭–೨೮॥

ನೀನು ಈಗ ಶ್ರೀರಾಮನ ಸ್ಮರಣೆಯೇ ಇಲ್ಲದವನಾಗಿರುವಕಾರಣ, ನಿನ್ನ ಈ ಪ್ರಬಲವಾದ ಕಪಿಸೇನೆ–ನಿನ್ನ ಭುಜಪರಾಕ್ರಮ–ಮುಂತಾದುದೆಲ್ಲವೂ ಶ್ರೀ ರಾಮನ ಬಾಣದ ತುದಿಯಲ್ಲಿ ನಿಂತಿರುವುದೆಂದು ತಿಳಿಯುವನಾಗು ॥೨೯॥

ಎಲಾ ಸುಗ್ರೀವ! ನಿಮ್ಮ ಅಣ್ಣನಾದ ವಾಲಯು ನಮ್ಮ ಅಣ್ಣನಿಂದ ಹತನಾಗಿ ಯಾವ ಮಾರ್ಗವನ್ನು ಹಿಡಿದು ಹೋದನೋ, ಆ ಮಾರ್ಗವು ಇನ್ನೂ ವಿಶಾಲವಾಗಿರುವುದು ನೀನು ಈಗಲಾದರೂ ನಿನ್ನ ಸಮಯಬಂಧನವನ್ನು ಮಾತ್ರ ನಡೆಯದಿರು ವಾಲಿಯು ಮಾರ್ಗವನ್ನು ಅನುಸರಿಸಿ ಹೋಗಬೇಡ ॥೩೦॥

ವಾಲಯು ತಾನೊಬ್ಬನುಮಾತ್ರವೇ ಯುದ್ಧದಲ್ಲಿ ಶ್ರೀರಾಮನಿಂದ ಕೊಲ್ಲಲ್ಪಟ್ಟನು. ನೀನಾ

ಅತೀತಸಮಯಂ ತ್ವಾಂ ತು ಹನ್ಯಾತ್ ಸಕುಲಬಾನ್ಧವಮ್ ॥೩೧॥

ಕಪಿರಾಜ ಸುದುರ್ಬುದ್ಧೇ ದ್ವಯಂ ತೇದ್ಯ ಪ್ರಯೋಜನಮ್ ।
ರಾಮಪಾದಂ ಭಜಸ್ವಾದ್ಯ ಯಮರಾಜಸ್ಯ ವಾ ಪುನಃ ॥೩೨॥

ಇತ್ಯುದೀರಿತಮಾಕರ್ಣ್ಯ ಲಕ್ಷ್ಮಣಸ್ಯಾತಿಕೋಪಿನಃ ।
ಶಮಯಾಮಾಸ ಸೌಮಿತ್ರಿಂ ವಚನೈರಮೃತೋಪಮೈಃ ॥೩೩॥

ತತಃ ಕಪಿವರಾಃ ಸರ್ವೇ ನಾನಾರಣ್ಯನಿವಾಸಿನಃ ।
ಸುಗ್ರೀವಾಜ್ಞಾಂ ಪುರಸ್ಕೃತ್ಯಾಯಯುಸ್ತೇ ಬದ್ಧಸೌಹೃದಾಃ ॥೩೪॥

ತತಃ ಸ ರಥಮಾರುಹ್ಯ ಲಕ್ಷ್ಮಣೇನ ಸಮನ್ವಿತಃ ।
ವಾನರೈಃ ಸಹಿತೋ ರಾಜಾ ರಾಮಮೇವಾನ್ವಪದ್ಯತ ॥೩೫॥

ಭೇರೀಮೃದಙ್ಗೈರ್ಬಹುಭಿರ್ಋಕ್ಷವಾನರೈಃ
ಶ್ವೇತಾತಪತ್ರೈರ್ವ್ಯಜನೈಶ್ಚ ಶೋಭಿತಃ ।
ನೀಲಾಙ್ಗದಾದ್ಯೈರ್ಹರಿಸುಮತ್ಪ್ರಧಾನೈಃ
ಸಮಾವೃತೋ ರಾಘವಮಭ್ಯಗಾದ್ಧರಿಃ ॥೩೬॥

ದರೋ, ಈಗ ಕೊಟ್ಟಮಾತಿಗ ತಪ್ಪರುನೆಯಾದಕಾರಣ, ನಿನ್ನ ಕುಲ ಬಂಧು ಮಿತ್ರಸಹಿತನಾಗಿ ಕೊಲ್ಲಲ್ಪಡುವುದರಲ್ಲಿ ಸಂಶಯವಿಲ್ಲ ॥೩೧॥

ಎಲಾ ಮಹಾ ದುರ್ಬುದ್ಧಿಯಾದ ಸುಗ್ರೀವನ! ಈಗ ನಿನಗ ಇರಡರಲ್ಲಿ ಯಾವುದಾದ ರೊಂದು ಮಾರ್ಗವೇ ಸಿದ್ಧವಾಗಿರುವುದು ಈ ಕ್ಷಣವೇ ನೀನು ಶ್ರೀರಾಮನ ಪಾದಕಮಲಕ್ಕೆ ಶರಣಾಗತನಾಗು, ಅದಿಲ್ಲದಿದ್ದರ, ಯಮನ ಹತ್ತಿರಕ್ಕೆ ಹೋಗಿ ಅವನ ಸೇವಕನಾಗು ॥೩೨॥

ಹೀಗಂದು ಮಹಾಕೋಪಸಮನ್ವಿತನಾದ ಲಕ್ಷ್ಮಣನಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ಸುಗ್ರೀವನು ಅಮೃತಪಾನವಾದ ಮಧುರವಚನಗಳಿಂದ ಅವನನ್ನು ಶಾಂತಿಪಡಿಸಿದನು ॥೩೩॥

ಆ ಒಳಿಕ, ನಾನಾ ವನವಾಸಿಗಳಾಗಿದ್ದ ಸಮಸ್ತ ಕಪಿಶ್ರೇಷ್ಠರೂ ಕೂಡ, ಸುಗ್ರೀವನ ಆಜ್ಞೆಯನ್ನು ಶಿರಸಾ ವಹಿಸಿ ಅವನಲ್ಲಿ ಪ್ರೀತಿಯಿಟ್ಟು ಒಂದು ಸೇರಿದವರಾದರು ॥೩೪॥

ಅನಂತರ, ಆ ವಾನರರಾಜನು ಲಕ್ಷ್ಮಣಯುಕ್ತನಾಗಿ ರಥದ ಮೇಲೆ ಕುಳಿತುಕೊಂಡು, ವಾನರರೊಡನೆ ಶ್ರೀರಾಮನನ್ನು ಬಂದು ಸೇರಿದನು ॥೩೫॥

ಆಗ ಭೇರೀಮೃದಂಗಾದಿ ವಾದ್ಯಗಳಿಂದಲೂ ಶ್ವೇತಚ್ಛತ್ರ ಚಾಮರಗಳಿಂದಲೂ ಅನೇಕ ಋಕ್ಷವಾನರ ಸಂಘಗಳಿಂದಲೂ ಶೋಭಿತನಾದ ಸುಗ್ರೀವನು, ನೀಲ ಅಂಗದ ಮೊದಲಾದ ಕಪಿನಾಯಕರುಂದ ಪರಿವೃತನಾಗಿ ಶ್ರೀರಾಘವನ ಹತ್ತಿರಕ್ಕೆ ಹೋದನು ॥೩೬॥

ರಾಮಸನ್ನಿಧಿಮಾಸಾದ್ಯ ಲಕ್ಷ್ಮಣಃ ಪರವೀರಹಾ ।
ವಿಜ್ಞಾಪ್ಯ ಸರ್ವಂ ರಾಮಾಯ ತಸ್ಥೌ ದ್ವಾರೇಧಿಕಾರತಃ ॥೩೭॥
ಸುಗ್ರೀವೋಽಪಿ ಮಹಾತೇಜಾಃ ರಾಮಪಾದಾವುಪಸ್ಪೃಶ್ಯ ।
ತತ್ರೈವ ನತ್ವಾ ವಿಲುರ್ಠ ರಾಮಪಾದಾಸ್ತಿಕಂ ಯಯೌ ॥೩೮॥
ತತಃಉತ್ಥಾಯ ಸ ರಘುಶ್ರೇಷ್ಠಂ ನತ್ವಾ ಪುನಃಪುನಃ ।
ಕೃತಪಸ್ತದ್ವಯಪುಟೋ ರಾಮೊಯಂ ಪರಮಾತ್ಮನೇ ॥೩೯॥
ಭಯಗದ್ಗದಯಾ ವಾಚಾ ದೀನಯಾ ಚ ಸಗದ್ಗದಮ್ ।
ಅಪರಾಧಿನಮಾತ್ಮಾನಂ ವೇದಯಾಮಾಸ ನಿಶ್ಚಲಃ ॥೪೦॥
ಸುಗ್ರೀವವಚಸಂ ಶ್ರುತ್ವಾ ರಾಘವಃ ಕರುಣಾಕರಃ ।
ಭೂಭಭಜ್ಗೀಸ ನಿವೇಶಸ್ಯ ಸ್ವಾನವೋಜ್ಞಾಪಯತ್ ಪ್ರಭುಃ ॥೪೧॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸುಗ್ರೀವಾಗಮನಂ ನಾಮ
ದಶಮಃ ಸರ್ಗಃ




ಆಮೇಲೆ, ಶತ್ರುಪರಸಂಹಾರಕನಾದ ಲಕ್ಷ್ಮಣನು, ಶ್ರೀರಾಮನ ಸನ್ನಿಧಿಯನ್ನು ಸೇರಿ, ಕಿಷ್ಕಿಂಧಾಪ್ರಾಣದಲ್ಲಿ ನಡೆದ ಸೃತಾತ್ತಾಂತವನ್ನೆಲ್ಲ ಶ್ರೀರಾಮನಿಗ ವಿಜ್ಞಾಪಿಸಿ, ಪರ್ಣಶಾಲೆಯ ದ್ವಾರದಲ್ಲಿ ತನ್ನ ಅಧಿಕಾರವನ್ನು ಪಾಲಿಸುತ ನಿಂತುಗೊಂಡನು ॥೩೭॥

ಆಗ ಮಹಾತೇಜಸ್ವಿಯಾದ ಸುಗ್ರೀವನೂ ಕೂಡ ಶ್ರೀರಾಮನ ಪಾದಗಳನ್ನು ಮುಟ್ಟಿ ನಮಸ್ಕಾರಮಾಡಿ, ಅಲ್ಲಿಯೇ ಬಿದ್ದು ಹೊರಳಾಡುತ, ಮಲ್ಲಗ ರಾಮನ ಪಾದಸನ್ನಿಧಿಗೆ ಬಂದನು ॥

ಆಮೇಲೆ ಎದ್ದು, ಮತ್ತೆಮತ್ತೆ ಆ ರಘುನಾಥನಿಗ ನಮಸ್ಕಾರ ಮಾಡುತ, ಎರಡು ಕಯ್ಗಳನ್ನೂ ಜೋಡಿಸಿಕೊಂಡು, ಸ್ತಬ್ಧನಾಗಿ ನಿಂತುಗೊಂಡು, ಭಯದಿಂದ ಗದ್ಗದವಾಗಿಯೂ ಅತಿ ದೀನವಾಗಿಯೂ ಇರುವ ಮಾತಿನಿಂದ, ತಾನು ಮಹಾಪರಾಧಿಯೆಂದು ಮಹಾತ್ಮನಾದ ಶ್ರೀರಾಮನಿಗೆ ವಿಜ್ಞಾಪಿಸಿದನು ॥೩೮-೪೦॥

ಒಳಿಕ, ದಯಾನಿಧಿಯಾದ ಶ್ರೀರಾಮಚಂದ್ರಪ್ರಭುವು, ಸುಗ್ರೀವನ ಪ್ರಾರ್ಥನೆಯನ್ನು ಲಾಲಿಸಿ, ಕುಳಿತುಕೊಳ್ಳು ವಂತೆ ತನ್ನ ಭೂಸಂಜ್ಞೆಯಿಂದ ಅವನಿಗೆ ಅಪ್ಪಣೆಕೊಟ್ಟನು ॥೪೧॥

ಇದು ಕಿಷ್ಕಿಂಧಾಕಾಂಡದಲ್ಲಿ ಸುಗ್ರೀವಾಗಮನವೆಂಬ
ಹತ್ತನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಏಕಾದಶಃ ಸರ್ಗಃ.

ಶ್ರೀ ಶಿವ ಉವಾಚ

ತತೋಽಬ್ರವೀದ್ರಘುಶ್ರೇಷ್ಠಂ ಸುಗ್ರೀವೋ ಭಕ್ತಿಸಮ್ಪ್ರಧೀಃ ।
ದೇವ ಪಶ್ಯ ಸಮಾಯಾನ್ತೀಂ ವಾನರಾಣಾಂ ಮಹಾಚಮೂಮ್ ॥೧॥
ಕುಲಾಚಲಾದಿಸಂಭೂತಾಃ ಮೇರುಮನ್ದರಸಂಭವಾಃ ।
ನಾನಾದ್ವೀಪಸರಿಚ್ಛೈಲವಾಸಿನಃ ಪರ್ವತೋಪಮಾಃ ॥೨॥
ಅಸಂಖ್ಯಾತಾಃ ಸಮಾಯಾನ್ತಿ ಹರಯಃ ಕಾಮರೂಪಿಣಃ ।
ಮಹಾಬಲಾಮಹಾವೀರ್ಯಾಃ ಶಕ್ರತುಲ್ಯಪರಾಕ್ರಮಾಃ ॥೩॥
ಏತಸ್ಮಿನ್ನನ್ತರೇ ಚೈವ ರಜಃ ಸಮಭಿವರ್ತತ ।
ಉಷ್ಣಾಂ ತೀವ್ರಾಂ ಸಹಸ್ರಾಂಶೋಃ ಛಾದಯದ್ಗಗನೇ ಪ್ರಭಾಮ್ ॥೪॥
ದಿಶಃ ಪರ್ಯಾಕುಲಾಶ್ಚಾಸ್ತ್ರ ರಜಸಾ ತೇನ ಮೂರ್ಛಿತಾಃ ।
ಚಚಾಲ ಚ ಮಹೀ ಸರ್ವಾ ಸಶೈಲವನಕಾನನಾ ॥೫॥
ತರುಣಾದಿತ್ಯವರ್ಣೈಶ್ಚ ಶಶಿಗೌರೈಶ್ಚ ವಾನರೈಃ ।

ಕಿಷ್ಕಿಂಧಾಕಾಂಡದಲ್ಲಿ ಹನ್ನೊಂದನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಹೀಗೆ ಶ್ರೀರಾಮನ ಅಪ್ಪಣೆಯಿಂದ ಆಸನದಲ್ಲಿ ಕುಳಿತುಕೊಂಡ ಬಳಿಕ, ಭಕ್ತಿಯಿಂದ ಸಮ್ಮತವಾದ ಬುದ್ಧಿಯುಳ್ಳ ಸುಗ್ರೀವನು, ಶ್ರೀರಾಮನನ್ನು ಕುರಿತು 'ಸ್ವಾಮಿ! ಇಲ್ಲಿ ನಮ್ಮ ವಾನರರ ದೊಡ್ಡ ಸೈನ್ಯ ಬರುತಿರುವುದನ್ನು ನೋಡು ಇದರೊಳಗೆ, ಕುಲಪರ್ವತಗಳಲ್ಲಿ ಹುಟ್ಟಿದವರೂ, ಮೇರು ಮಂದರ ಪರ್ವತಗಳಲ್ಲಿ ಹುಟ್ಟಿದವರೂ, ಅನೇಕವಾದ ದ್ವೀಪ ನದೀ ಪರ್ವತಗಳಲ್ಲಿ ವಾಸಮಾಡತಕ್ಕವರೂ ಕೂಡ ತುಂಬಿರುವರು ಇವರೆಲ್ಲರೂ, ಸಾಮಾನ್ಯವಾಗಿ ಪರ್ವತಸದೃಶ ಶರೀರರಾಗಿರುವರು, ಸ್ವೇಚ್ಛೆಯಿಂದ ಬೇಕಾದ ರೂಪವನ್ನು ಸ್ವೀಕರಿಸಬಲ್ಲರು ಮಹಾಬಲರಾಗಿಯೂ ಮಹಾವೀರ್ಯರಾಗಿಯೂ ಇಂದ್ರಸಮಪರಾಕ್ರಮಿಗಳಾಗಿಯೂ ಇರುವರು ಇಂತಹ ವಾನರರು ಅಸಂಖ್ಯಾಕರಾಗಿ ಬರುತಿರುವರು' ಎಂದು ವಿಜ್ಞಾಪಿಸಿದನು ॥೧-೩॥

ಹೀಗೆಂದು ಸುಗ್ರೀವನು ಶ್ರೀರಾಮನಿಗೆ ವಿಜ್ಞಾಪಿಸುತಿರುವಾಗಲೇ, ಉಷ್ಣವಾಗಿಯೂ ತೀವ್ರವಾಗಿಯೂ ಇರುವ ಸೂರ್ಯನ ಪ್ರಭೆಯನ್ನು ಮರೆಮಾಡುತ, ಅಂತರಿಕ್ಷದಲ್ಲಿ ಧೂಳಿಯೆದ್ದಿತು ॥

ಆ ಧೂಳಿಯಿಂದ ವ್ಯಾಪ್ತವಾಗಿ, ಸಮಸ್ತ ದಿಕ್ಕುಗಳೂ ವ್ಯಾಕುಲಪಟ್ಟವು ಶೈಲ ವನ ಸಹಿತವಾದ ಸಮಸ್ತ ಭೂಮಿಯೂ ನಡುಗಿಬಿಟ್ಟಿತು ॥೪॥

ಆಗ, ಬಾಲಸೂರ್ಯಸಮಾನ ತೇಜಸ್ಕರಾಗಿಯೂ, ಚಂದ್ರನಂತೆ ಶುಭ್ರರಾಗಿಯೂ ಇರುವ

ಕೋಟೀಸಹಸ್ರೈರ್ದಶಭಿಃ ಶ್ರೀಮಾ೯ ಪರಿವೃತಸ್ತದಾ ।
ವೀರಃ ಶತವಲಿರ್ನಾಮ ವಾನರಃ ಪ್ರತ್ಯದೃಶ್ಯತ ॥೬॥
ತಥಾ ಪರೇಣ ಕೋಟೀನಾಂ ಸಹಸ್ರೇಣ ಸಮನ್ವಿತಃ ।
ಪಿತಾ ರುಮಾಯಾಃ ಸಂಪ್ರಾಪ್ತಃ ಸುಗ್ರೀವಶ್ವಶುರೋ ವಿಭುಃ ॥೭॥
ಅನೇಕೈಃ ಕೋಟಿಸಾಹಸ್ರೈಃ ವಾನರಾಣಾಂ ಸಮನ್ವಿತಃ ।
ಪಿತಾ ಹನುಮತಃ ಶ್ರೀಮಾ೯ ಕೇಸರೀ ಪ್ರತ್ಯದೃಶ್ಯತ ॥೮॥
ಶತಕೋಟಿಸಹಸ್ರೈಶ್ಚ ವಾನರೈಃ ಸರ್ವತೋಪಮೈಃ ।
ಗೋಲಾಙ್ಗೂಲಪತಿರ್ವೀರೋ ಗವಾಕ್ಷೋ ಭೀಮವಿಕ್ರಮಃ ॥೯॥
ವೃತಃ ಕೋಟಿಸಹಸ್ರೇಣ ವಾನರಾಣಾಮದೃಶ್ಯತ ॥೧೦॥
ತತಃ ಕೋಟಿಸಹಸ್ರಾಣಾಂ ಸಹಸ್ರೇಣ ಶತೇನ ಚ ।
ಪೃಷ್ಠತೋನುಗತಃ ಪ್ರಾಪ್ತೋ ಹರಿಭಿರ್ಗನ್ಧಮಾದನಃ ॥೧೧॥
ಋಕ್ಷರಾಜೋ ಮಹಾತೇಜಾಃ ಜಾಮ್ಬವಾ೯ ನಾಮ ನಾಮತಃ ।
ಕೋಟಿಭಿರ್ದಶಭಿಃ ಪ್ರಾಪ್ತಃ ಸುಗ್ರೀವಸ್ಯ ವಶೇ ಸ್ಥಿತಃ ॥೧೨॥
ಕೈಲಾಸಶಿಖರಾಕಾರೈಃ ವಾನರೈರ್ಭೀಮವಿಕ್ರಮೈಃ ।
ವೃತಃ ಕೋಟಿಸಹಸ್ರೇಣ ಹನೂಮಾ೯ ಪ್ರತ್ಯದೃಶ್ಯತ ॥೧೩॥

ಹತ್ತು ಸಹಸ್ರಕೋಟಿ ವಾನರರಿಂದ ಯುಕ್ತನಾಗಿ, ಶತವಲಿಯೆಂಬ ಮಹಾವೀರನಾದ ವಾನರನು ಸುಗ್ರೀವನೆದುರಿಗೆ ಬಂದು ಕಾಣಿಸಿಕೊಂಡನು ॥೬॥

ಹಾಗೆಯೇ, ಮತ್ತೊಂದು ಸಹಸ್ರಕೋಟಿ ವಾನರಯುಕ್ತನಾಗಿ, ರುಮೆಗೆ ತಂದೆಯಾಗಿ ಸುಗ್ರೀವನಿಗೆ ಮಾವನಾಗಿರುವ ವಾನರನೂ ಬಂದನು ॥೭॥

ಆ ಬಳಿಕ, ಅನೇಕ ಸಹಸ್ರಕೋಟಿ ವಾನರರಿಂದ ಸಹಿತನಾಗಿ, ಹನುಮಂತನ ತಂದೆಯಾದ ಕೇಸರಿಯೆಂಬ ವಾನರನು ಬಂದು ಕಾಣಿಸಿಕೊಂಡನು ॥೮॥

ಪರ್ವತಸಮಾನರಾದ ಒಂದು ಲಕ್ಷಕೋಟಿ ವಾನರರಿಂದ ಪರಿವೃತನಾಗಿ, ಮಹಾವೀರನೂ ಮಹಾ ಭೀಮಪರಾಕ್ರಮನೂ ಆಗಿರುವ ಗೋಲಾಂಗೂಲಾಧಿಪತಿಯಾದ ಗವಾಕ್ಷನು ಎದುರಿಗೆ ಬಂದುನಿಂತನು ॥೯ ೧೦॥

ಆಮೇಲೆ, ಹತ್ತುಲಕ್ಷದ ಬಂದುನೂರುಕೋಟಿ ವಾನರರಿಂದ ಹಿಂಬಾಲಿಸಲ್ಪಡುತಿರುವ ಗಂಧಮಾದನನು ಬಂದು ಸೇರಿದನು ॥೧೧॥

ಅನಂತರ, ಜಾಂಬವಂತನೆಂದು ಪ್ರಸಿದ್ಧನಾದ ಮಹಾತೇಜಸ್ವಿಯಾದ ಋಕ್ಷರಾಜನು, ಹತ್ತುಕೋಟಿ ಋಕ್ಷ(ಕರಡಿ)ಗಳಿಂದ ಯುಕ್ತನಾಗಿ ಬಂದು, ಸುಗ್ರೀವನ ಅಧೀನದಲ್ಲಿ ನಿಂತನು ॥

ಆಮೇಲೆ, ಕೈಲಾಸಶಿಖರಸಮಾನರಾಗಿಯೂ ಮಹಾಭೀಮಪರಾಕ್ರಮರಾಗಿಯೂ ಇರುವ ಸಹಸ್ರಕೋಟಿ ಸಂಖ್ಯಾಕರಾದ ವಾನರರಿಂದ ಪರಿವೃತನಾಗಿ, ಹನುಮಂತನು ಬಂದು ಕಾಣಿಸಿಕೊಂಡನು ॥೧೩॥

ನಲಶ್ಚಾಪಿ ಮಹಾವೀರ್ಯಃ ಕೋಟಿಭಿಸ್ತಿಸೃಭಿರ್ವೃತಃ ।
ನೀಲಾಞ್ಜನಚಯಾಕಾರೋ ನೀಲೋ ನಾಮಾಥ ಯೂಥಪಃ ॥೧೪॥

ಶರಭಃ ಕುಮುದೋ ವಹ್ನಿಃ ವಾನರೋ ರಂಭ ಏವ ಚ ।
ಏತೇ ಚಾನ್ಯೇ ಚ ಬಹವೋ ವಾನರಾಃ ಕಾಮರೂಪಿಣಃ ॥೧೫॥

ಆವೃತ್ಯ ಪೃಥಿವೀಂ ಸರ್ವಾಂ ಪರ್ವತಾಂಶ್ಚ ವನಾನಿ ಚ ।
ಯೂಥಪಾಃ ಸಮನುಪ್ರಾಪ್ತಾಃ ಯೇಷಾಂ ಸಂಖ್ಯಾ ನ ವಿದ್ಯತೇ ॥೧೬॥

ಆಪ್ಲವನ್ತಃ ಪ್ಲವನ್ತಶ್ಚ ಗರ್ಜನ್ತಶ್ಚ ಪ್ಲವಙ್ಗಮಾಃ ।
ಅಭ್ಯವರ್ತನ್ತ ಸುಗ್ರೀವಂ ಸೂರ್ಯಮಭ್ರಗಣಾ ಇವ ॥೧೭॥

ಸಂಖ್ಯಾಸ್ತಿ ಭುವಿ ರೇಣೂನಾಂ ನಕ್ಷತ್ರಾಣಾಂ ವಿಹಾಯಸಿ ।
ಸಂಖ್ಯಾಸ್ತಿ ವೃಷ್ಟಿಧಾರಾಣಾಂ ತೇಷಾಂ ಸಂಖ್ಯಾ ನ ವಿದ್ಯತೇ ॥೧೮॥

ಅಥ ರಾಜಾ ಸಮೃದ್ಧಾರ್ಥಃ ಸುಗ್ರೀವಃ ಪ್ಲವಗೇಶ್ವರಃ ।
ಉವಾಚ ನರಶಾರ್ದೂಲಂ ರಾಮಂ ಪರಬಲಾರ್ದನಮ್ ॥೧೯॥

ಆಗತಾಶ್ಚ ನಿವಿಷ್ಟಾಶ್ಚ ಬಲಿನಃ ಕಾಮರೂಪಿಣಃ ।
ವಾನರಾವಾರಣೋನ್ದ್ರಾಭಾಃ ಯೇ ಮದ್ವಿಷಯವಾಸಿನಃ ॥೨೦॥

ಆ ಬಳಿಕ, ಮೂರುಕೋಟಿ ವಾನರರಿಂದ ಪರಿವೃತನಾದ ನಳನೂ, ನೀಲವಾದ ಅಂಜನ (ಕಾಡಿಗೆ) ರಾಶಿಯಂತಿರುವ ನೀಲನೆಂಬ ಯೂಥಪತಿಯೂ, ಶರಭನೂ, ಕುಮುದನೂ, ವಹ್ನಿಯೂ, ರಂಭನೂ,-ಇನ್ನೂ ಇವರಂತೆಯೇ ಕಾಮರೂಪಿಗಳಾಗಿರುವ ಅಸಂಖ್ಯಾಕರಾದ ವಾನರಯೂಥ ಪತಿಗಳೂ, ಸಮಸ್ತ ಭೂಮಿಯನ್ನೂ ವನಗಳನ್ನೂ ಪರ್ವತಗಳನ್ನೂ ಆವರಿಸಿಕೊಳ್ಳುತ ಬಂದವ ರಾದರು ॥೧೪-೧೬॥

ಆಗ ಆ ವಾನರರು, ಹಾರುತಲೂ, ಕುಣಿಯುತಲೂ, ಗರ್ಜನೆಮಾಡುತಲೂ, ಮೇಘಬೃಂದ ಗಳು ಸೂರ್ಯನ ಸುತ್ತಲೂ ಬಂದು ಸೇರುವಂತೆ, ಸುಗ್ರೀವನ ಸುತ್ತಲೂ ಒಂದು ಸೇರಿದರು ॥೧೭॥

ಭೂಮಿಯಲ್ಲಿರುವ ಧೂಳಿಗಳನ್ನಾದರೂ ಎಣಿಸಬಹುದು, ಆಕಾಶದಲ್ಲಿರುವ ನಕ್ಷತ್ರಗಳ ನ್ನಾದರೂ ಎಣಿಸಬಹುದು, ಆಗ ಸುಗ್ರೀವನ ಹತ್ತಿರಕ್ಕೆ ಒಂದು ಸೇರಿದ ಕಪಿಗಳನ್ನು ಎಣಿಸುವುದ ಕ್ಕಾಗಲಾರದು ॥೧೮॥

ಆ ಬಳಿಕ, ಕೃತಕೃತ್ಯನಾದ ವಾನರೇಶ್ವರನಾದ ಸುಗ್ರೀವನು, ಶತ್ರುಬಲ ಸಂಹಾರಕನಾದ ಶ್ರೀರಾಮಚಂದ್ರನನ್ನು ಕುರಿತು, ಹೀಗೆ ವಿಜ್ಞಾಪಿಸಿದನು ॥೧೯॥

ಸ್ವಾಮಿ! ರಾಮಭದ್ರ! ಇದೋ ನನ್ನ ದೇಶದಲ್ಲಿ ವಾಸಮಾಡತಕ್ಕ ಮಹಾಬಲಿಷ್ಠರೂ ಕಾಮರೂಪಿಗಳೂ ಗಜಸಮಾನದೇಹರೂ ಆದ ಈ ವಾನರರುಗಳು ಇಲ್ಲಿ ಬಂದು ನೆಲೆಸಿ ರುವರು ॥೨೦॥

ಅಭಿಪ್ರೇತಮನುಷ್ಠಾತುಂ ತವ ಶಕ್ಷ್ಯಂತ್ಯರಿನ್ದಮ ।
ಯನ್ಮನ್ಯಸೇ ನರವ್ಯಾಘ್ರ ಪ್ರಾಪ್ತಕಾಲಂ ತದುಚ್ಯತಾಮ್ ॥೨೧॥
ಸುಗ್ರೀವವಚನಂ ಶ್ರುತ್ವಾ ದೃಷ್ಟ್ವಾ ಚ ಹರಿವಾಹಿನೀಮ್ ।
ರಾಮಃ ಸುಗ್ರೀವಮಾಲಿಂಗ್ಯ ಹರ್ಷಪೂರ್ಣಾಶ್ರುಲೋಚನಃ ॥೨೨॥
ಪ್ರಾಹ ಸುಗ್ರೀವ ಜಾನಾಸಿ ಸರ್ವಂ ತತ್ ಕಾರ್ಯಗೌರವಮ್ ।
ಮಾರ್ಗಣಾರ್ಥೇ ಹಿ ಜಾನಕ್ಯಾಃ ನಿಯುಂಕ್ಷ್ವ ಮಮ ಶಾಸನಾತ್ ॥೨೩॥
ವಿನಮುಕ್ತಸ್ತು ಸುಗ್ರೀವೋ ವಿನತಂ ನಾಮ ಯೂಥಪಮ್ ।
ಅಬ್ರವೀದ್ರಾಮಸಾನ್ನಿಧ್ಯೇ ಲಕ್ಷ್ಮಣಸ್ಯ ಚ ಧೀಮತಃ ॥೨೪ ॥
ವೃತಃ ಶತಸಹಸ್ರೇಣ ವಾನರಾಣಾಂ ತರಸ್ವಿನಾಮ್ ।
ಅಭಿಗಚ್ಛ ದಿವಂ ಪೂರ್ವಾಂ ಸಶೈಲವನಕಾನನಾಮ್ ॥೨೫॥
ತತ್ರ ಸೀತಾಂ ಚ ವೈದೇಹೀಂ ನಿಲಯಂ ರಾವಣಸ್ಯ ಚ ।
ಮಾರ್ಗಧ್ವಂ ಗಿರಿದುರ್ಗೇಷು ವನೇಷು ಚ ಸದೀಪು ಚ ॥೨೬॥
ತತಃ ಸಮುದ್ರದ್ವೀಪಾಂಶ್ಚ ಸುಭೀಮಾ ದ್ರಷ್ಟುಮರ್ಹಥ ॥೨೭॥

ಶತ್ರು ಸಂಹಾರಕನಾದವನೆ ! ಇವರೆಲ್ಲರೂ ನಿನ್ನ ಇಷ್ಟಾರ್ಥವನ್ನು ನೆರವೇರಿಸುವುದಕ್ಕೆ ಶಕ್ತರಾಗಿರುವರು ಹೇ ನರವ್ಯಾಘ್ರ ! ಈಗ ಯಾವುದು ಪ್ರಕೃತೋಚಿತವೆಂದು ನಿನಗೆ ತೋರುವುದೋ, ಅದನ್ನು ಅಪ್ಪಣೆಕೊಡಿಸುವನಾಗು ॥೨೧॥

ಹೀಗೆ ವಿಜ್ಞಾಪಿಸಿದ ಸುಗ್ರೀವನ ಮಾತನ್ನು ಕೇಳಿ, ತನ್ನೆದುರಿಗ ಬಂದು ನಿದ್ದವಾಗಿರುವ ಆ ಕಪಿಸೈನ್ಯವನ್ನೂ ನೋಡಿ, ಶ್ರೀರಾಮನು, ಆನಂದಬಾಷ್ಪ ಪರಿಪೂರಿತನೇತ್ರನಾಗಿ, ಸುಗ್ರೀವನನ್ನು ಆಲಿಂಗಿಸಿಕೊಂಡು,- " ಅಯ್ಯಾ ! ಸುಗ್ರೀವ ! ನನ್ನ ಕಾರ್ಯಗೌರವವೆಲ್ಲವೂ ನಿನಗ ಗೊತ್ತೇ ಇರುವುದು. ನನ್ನ ಆಜ್ಞಾನುಸಾರವಾಗಿ ಈ ಕಪಿಗಳನ್ನೆಲ್ಲ ಸೀತೆಯನ್ನು ಹುಡುಕುವುದಕ್ಕೋಸ್ಕರ ನಿಯೋಗಿಸು " ಎಂದು ಹೇಳಿದನು ॥೨೨-೨೪॥

ಈಗಂದು ಶ್ರೀರಾಮನಿಂದ ಹೇಳಲ್ಪಟ್ಟ ಸುಗ್ರೀವನು, ಆ ರಾಮಲಕ್ಷ್ಮಣರೆದುರಿಗೆ ವಿನತ ನೆಂಬ ಸೇನಾಪತಿಯನ್ನು ಕರದು ಹೀಗೆ ಹೇಳಿದನು ॥೨೪॥

ಎಲೈ ವಿನತನೆ ! ನೀನು ಮಹಾಬಲಶಾಲಿಗಳಾದ ಒಂದುಲಕ್ಷ ವಾನರರೊಡನೆ ಯುಕ್ತನಾಗಿ, ಪೂರ್ವದಿಕ್ಕಿಗೆ ಹೋಗು , ಅಲ್ಲಿ, ಶೃಲ ವನ ದುರ್ಗಗಳಲ್ಲೆಲ್ಲ ಸಂಚರಿಸು ॥೨೫॥

ಅಲ್ಲಿ ನೀವು ಗಿರಿದುರ್ಗಗಳಲ್ಲಿಯೂ ವನದುರ್ಗಗಳಲ್ಲಿಯೂ ನದೀಮಧ್ಯಗಳಲ್ಲಿಯೂಕೂಡ, ಆ ಎದೇಪರರಾಜವುತ್ರಿಯಾದ ಸೀತೆಯನ್ನೂ ರಾವಣನ ನಿಲಯವನ್ನೂ ಚೆನ್ನಾಗಿ ಹುಡುಕಿರಿ. ಆಮೇಲೆ, ಅತಿ ಭಯಂಕರಗಳಾಗಿರುವ ಸಮುದ್ರಗಳನ್ನೂ ದ್ವೀಪಗಳನ್ನೂ ನೀವು ನೋಡಬೇಕು ॥೨೬ – ೨೭॥

ಅಧಿಗಮ್ಯ ತು ವೈದೇಹೀಂ ನಿಲಯಂ ರಾವಣಸ್ಯ ಚ ।
ಮಾಸೇ ಪೂರ್ಣೇ ನಿವರ್ತಧ್ವಂ ಉದಯಂ ಪ್ರಾಪ್ಯ ಪರ್ವತಮ್ ।
ಮಾಸಾದೂರ್ಧ್ವಂ ನ ವಸ್ತವ್ಯಂ ವಸತಾ ವಧ್ಯೋಽ ಭವೇನ್ಮಮ ॥೨೯॥
ಅಥ ಪ್ರಸ್ಥಾಪ್ಯ ಸುಗ್ರೀವಃ ತನ್ಮಹದ್ವಾನರಂ ಬಲಮ್ ।
ಸುಷೇಣಾದಿಕಪೀನ್ದ್ರಾಣಾಂ ಪ್ರತೀಚೀಮಾದಿಶದ್ದಿಶಮ್ ॥೩೦॥
ದ್ವಾಭ್ಯಾಂ ಶತಸಹಸ್ರಾಭ್ಯಾಂ ಕಪೀನಾಂ ಕಪಿಸತ್ತಮಾಃ ।
ಸುಷೇಣಪ್ರಮುಖಾಯೂಯಂ ವೈದೇಹೀಂ ಪರಿಮಾರ್ಗತ ॥೩೧॥
ಅಧಿಗಮ್ಯ ತು ವೈದೇಹೀಂ ನಿಲಯಂ ರಾವಣಸ್ಯ ಚ ।
ಪೂರ್ಣೇ ಮಾಸೇ ನಿವರ್ತಧ್ವಂ ಪಶ್ಚಿಮಂ ಪ್ರಾಪ್ಯ ಪರ್ವತಮ್ ॥೩೨॥
ಊರ್ಧ್ವಂ ಮಾಸಾನ್ನ ವಸ್ತವ್ಯಂ ವಸತಾ ವಧ್ಯೋಽ ಭವೇನ್ಮಮ ॥೩೩॥
ತತಃ ಸನ್ದಿಶ್ಯ ಸುಗ್ರೀವಃ ಶ್ವಶುರಂ ಪಶ್ಚಿಮಾಂ ದಿಶಮ್ ।
ವೀರಂ ಶತವಲಿಂ ನಾಮ ವಾನರಂ ವಾಕ್ಯಮಬ್ರವೀತ್ ॥೩೪॥
ವೃತಃ ಶತಸಹಸ್ರೇಣ ತ್ವದ್ವಿಧಾನಾಂ ವನೌಕಸಾಮ್ ।
ವೈವಸ್ವತಸುತೈಃ ಸಾರ್ಧಂ ಪ್ರತೀಚ್ಛ ಸ್ವ ಸ್ವಮಸ್ತ್ರಿಭಿಃ ॥೩೫॥

ಹೀಗೆ ಒಂದು ತಿಂಗಳವರೆಗೂ ಹುಡುಕುತ, ಉದಯಪರ್ವತದವರೆಗೂ ಹೋಗಿ, ಸೀತಾದೇವಿಯನ್ನೂ ರಾವಣನ ನಿಲಯವನ್ನೂ ಗೊತ್ತುಮಾಡಿಕೊಂಡು ಬರಬೇಕು, ಒಂದು ತಿಂಗಳು ತುಂಬಿದಕೂಡಲೆ ಹಿಂದಿರುಗಿ ಬಂದು ಸೇರಬೇಕು, ಒಂದು ತಿಂಗಳಿಗಿಂತ ಹೆಚ್ಚಾಗಿ ಯಾರೂ ಎಲ್ಲಿಯೂ ವಾಸಮಾಡಕೂಡದು ಹಾಗೆ ಯಾರಾದರೂ ನಿಂತುಬಿಟ್ಟಪಕ್ಷದಲ್ಲಿ, ಅವನು ನನಗೆ ವಧ್ಯನಾಗುವನು ॥೨೮॥

ಹೀಗೆ ಹೇಳಿ ಆ ವಿನತಸೊಡಗೂಡಿದ ದೊಡ್ಡ ಕಪಿಸೈನ್ಯವನ್ನು ಪೂರ್ವದಿಕ್ಕಿಗೆ ಕಳುಹಿಸಿಕೊಟ್ಟು, ಆಮೇಲೆ ಸುಷೇಣ ಮೊದಲಾದ ಕಪಿರಾಜರಿಗೆ ಪಶ್ಚಿಮದಿಕ್ಕನ್ನು ಆಜ್ಞಾಪಿಸಿದನು ॥೨೯॥

ಎಲೈ ಸುಷೇಣಪ್ರಮುಖರಾದ ಕಪಿಶ್ರೇಷ್ಠರೆ! ನೀವುಗಳು ಎರಡುಲಕ್ಷ ಕಪಿಸೈನ್ಯಗಳೂಡಗೂಡಿದವರಾಗಿ, ಪಶ್ಚಿಮದಿಕ್ಕಿನಲ್ಲಿ ಸೀತೆಯನ್ನು ಹುಡುಕಿರಿ ॥೩೦॥

ಅಲ್ಲಿ ಸೀತೆಯನ್ನೂ ರಾವಣನ ನೆಲೆಯನ್ನೂ ಗೊತ್ತುಮಾಡಿಕೊಂಡು, ಅಸ್ತಪರ್ವತದ ವರೆಗೂ ಹೋಗಿ, ಒಂದು ತಿಂಗಳು ತುಂಬಿದೊಡನೆಯೇ ಹಿಂದಿರುಗಿ ಬಂದು ಸೇರಬೇಕು ಒಂದು ತಿಂಗಳಿಗಿಂತ ಹೆಚ್ಚಾಗಿ ಯಾರೂ ಇರಕೂಡದು, ಯಾವನಾದರೂ ಇದ್ದಪಕ್ಷದಲ್ಲಿ, ಅವನನ್ನು ಕೊಲೆಗೆ ಗುರಿಮಾಡುತ್ತೇನೆ ॥೩೧-೩೨॥

ಹೀಗೆಂದು ಸುಗ್ರೀವನು ತನ್ನ ಮಾವನನ್ನು ಪಶ್ಚಿಮದಿಕ್ಕಿಗೆ ಆಜ್ಞಾಪಿಸಿ, ಮಹಾವೀರನಾದ ಶತವಲಿಯೆಂಬ ವಾನರನನ್ನು ಕರೆದು ಹೀಗೆ ಹೇಳಿದನು ॥೩೩॥

ಅಯ್ಯಾ! ಶತವಲಿ! ನೀನು ನಿನಗೆ ಸಮಾನವೀರ್ಯರಾಗಿರುವ ಒಂದೆಲಕ್ಷ ಕಪಿಗಳಿಂದ ಪರಿವೃತನಾಗಿ, ಯಮಪುತ್ರರಾದ ನಿನ್ನ ಮಂತ್ರಿಗಳೊಡನೆ ಹೊರಡು ॥೩೪॥

ದಿಶಂ ಹ್ಯುದೀಚೀಂ ವಿಕ್ರಾನ್ತಾಃ ಹಿಮಶೈಲಾವತಂಸಿತಾಮ್ ।
ಸರ್ವತಃ ಪರಿಮಾರ್ಗಧ್ವಂ ರಾಮಪತ್ನೀಮನಿನ್ದಿತಾಮ್ ॥೩೫॥

ತತ್ರ ಪರ್ವತಪೃಷ್ಠೇಷು ನಿರ್ದುರ್ಗೇಷು ಗುಹಾಸು ಚ ।
ರಾವಣಃ ಸಹ ವೈದೇಹ್ಯಾ ಮಾರ್ಗಿತವ್ಯಸ್ತತಸ್ತತಃ ॥೩೬॥

ಮಾಸೇ ಪೂರ್ಣೇ ನಿವರ್ತಧ್ವಂ ಗತ್ವೋದೀಚೀಂ ದಿಶಂ ಪುನಃ ।
ಮಾಸಾದೂರ್ಧ್ವಂ ನ ವಸ್ತವ್ಯಂ ವಸತ ವಧ್ಯೋ ಭವೇನ್ಮಮ ॥೩೭॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ವಾನರಪ್ರೇಷಣಾದಿಕಥನಂ ನಾಮ
ಏಕಾದಶಃ ಸರ್ಗಃ



ಇಲ್ಲಿಂದ ಹೊರಟು, ಹಿಮಾಲಯಪರ್ವತದಿಂದ ಆಲಂಕೃತವಾಗಿರುವ ಉತ್ತರದಿಕ್ಕನ್ನು ನೀವೆಲ್ಲರೂ ಹೋಗಿ ಸೇರಿರಿ , ಅಲ್ಲಿ, ಮಹಾಮಹಿಮಳಾದ ಆ ಸೀತಾದೇವಿಯನ್ನು ಎಲ್ಲಾಕಡೆಯಲ್ಲೂ ಹುಡುಕಿರಿ ॥೩೫॥

ಅಲ್ಲಿ ಪರ್ವತಶಿಖರಗಳಲ್ಲಿಯೂ ಗಿರಿನಿರ್ದುರ್ಗಪ್ರದೇಶಗಳಲ್ಲಿಯೂ ಗುಹೆಗಳಲ್ಲಿಯೂ ಸೀತೆಯನ್ನೂ ರಾವಣನನ್ನೂ ಹುಡುಕಬೇಕು ॥೩೬॥

ಹೀಗೆ ಉತ್ತರದಿಕ್ಕಿಗೆ ಹೋಗಿ, ಒಂದು ತಿಂಗಳಾದಕೂಡಲೆ ಹಿಂದಿರುಗಿ ಬರಬೇಕು ಒಂದು ತಿಂಗಳಿಗ ಹೆಚ್ಚಾಗಿ ಇರಕೂಡದು ಹಾಗ ನಿಂತವನು ವಧ್ಯನಾಗುವನೆಂದು ತಿಳಿಯಿರಿ (ಎಂದು ಸುಗ್ರೀವನು ಕಪಿಗಳಿಗ ಆಜ್ಞಾಪಿಸಿದನು) ॥೩೭॥

ಇದು ಕಿಷ್ಕಿಂಧಾಕಾಂಡದಲ್ಲಿ ಹನ್ನೊಂದನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ದ್ವಾದಶಃ ಸರ್ಗಃ.

ಶ್ರೀ ಶಿವಉವಾಚ

ತತಃ ಪ್ರಸ್ಥಾಪ್ಯ ಸುಗ್ರೀವಃ ತನ್ಮಹದ್ವಾನರಂ ಬಲಮ್ ।
ದಕ್ಷಿಣಾಂ ಪ್ರೇಷಯಾಮಾಸ ವಾನರಾನಖಿಲಕ್ಷಿತಾ ॥೧॥

ನೀಲಮಗ್ನಿಸುತಂ ಚೈವ ಹನೂಮನ್ತಂ ಚ ವಾನರಮ್ ।
ಪಿತಾಮಹಸುತಂ ಚೈವ ಜಾಮ್ಬವನ್ತಂ ಮಹಾಬಲಮ್ ॥೨॥

ಸುಹೋತ್ರಂ ಚ ಸುರಾರಿಂ ಚ ಶರಗುಲ್ಮಂ ತಥೈವ ಚ ।
ಗಜಂ ಗವಾಕ್ಷಂ ಗವಯಂ ಸುಷೇಣಮೃಷಭಂ ತಥಾ ॥೩॥

ಮೈನ್ದಂ ಚ ದ್ವಿವಿದಂ ಚೈವ ವಿಜಯಂ ಗನ್ಧಮಾದನಮ್ ।
ಉಲ್ಕಾಮುಖಮಸಙ್ಗಂ ಚ ಹುತಾಶನಸುತಾವುಭೌ ॥೪॥

ಅಙ್ಗದಪ್ರಮುಖಾ ವೀರಾ ವೀರಃ ಕಪಿಗಣೇಶ್ವರಃ ।
ವೇಗವಿಕ್ರಮಸಂಪನ್ನಾ ಸನ್ದಿದೇಶ ವಿತೀಪವಿತ್ ॥೫॥

ತೇಷಾಮಗ್ರೇಸರಂ ಚೈವ ಮಹಾಬಲಮಥಾಙ್ಗದಮ್ ।
ವಿಧಾಯ ಹರಿವೀರಾಣಾಂ ಆದಿಶದ್ದಕ್ಷಿಣಾಂ ದಿಶಮ್ ॥೬॥

ಕಿಷ್ಕಿಂಧಾಕಾಂಡದಲ್ಲಿ ಹನ್ನೆರಡನೆಯ ಸರ್ಗವು

ಪುನಃ ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ ! ಹೀಗೆ ಆ ದೊಡ್ಡ ಕಪಿಸೈನ್ಯವನ್ನು ಕಳುಹಿಸಿ, ಅನಂತರ, ಮಹಾವೀರನೂ ವಿಶೇಷಜ್ಞನೂ ಆಗಿರುವ ಕಪಿರಾಜನಾದ ಸುಗ್ರೀವನು, ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹುಡುಕುವದಕ್ಕೋಸ್ಕರ, ಅಗ್ನಿಪುತ್ರನಾದ ನೀಲ, ವಾನರೋತ್ತಮನಾದ ಹನೂಮಂತ, ಬ್ರಹ್ಮಪುತ್ರನಾದ ಮಹಾಬಲಿಷ್ಠನಾದ ಜಾಂಬವಂತ, ಸುಹೋತ್ರ ಸುರಾರಿ ಶರಗುಲ್ಮ ಗಜ ಗವಾಕ್ಷ ಗವಯ ಸುಷೇಣ ಋಷಭ ಮೈಂದ ದ್ವಿವಿದ ವಿಜಯ ಗಂಧಮಾದನರು, ಉಲ್ಕಾಮುಖ ಅಸಂಗರೆಂಬ ಇಬ್ಬರು ಅಗ್ನಿಪುತ್ರರು, ಇನ್ನೂ ಇತರರಾದ ಅನೇಕಮಂದಿ ಮಹಾವಿಕ್ರಮ ಸಂಪನ್ನರಾಗಿ ಮುಖ್ಯರಾಗಿರುವ ವಾನರಶ್ರೇಷ್ಠರು,– ಇವರುಗಳನ್ನೆಲ್ಲ ಆಜ್ಞಾಪಿಸಿದನು ॥೧–೫॥

ಆ ಒಳಿಕ, ಮಹಾಬಲಿಷ್ಠನಾದ ಅಂಗದನನ್ನು ಈ ಕಪಿಶ್ರೇಷ್ಠರಿಗೆಲ್ಲ ಅಧಿಪತಿಯನ್ನಾಗಿ ನಿಯಮಿಸಿ, ಅವರಿಗೆಲ್ಲ ದಕ್ಷಿಣದಿಕ್ಕಿನಲ್ಲಿ ಸೀತೆಯನ್ನು ಹುಡುಕುವಂತೆ ಆಜ್ಞಾಪಿಸಿದನು ॥೬॥

ವಿಶೇಷೇಣ ತು ಸುಗ್ರೀವೋ ಹನೂಮತ್ಯರ್ಥಮುಕ್ತವಾನ್।
ಸ ಹಿ ತಸ್ಮಿನ್ ಹರಿಶ್ರೇಷ್ಠೇ ನಿಶ್ಚಿತಾರ್ಥೋಽರ್ಥಸಾಧನೇ ॥೬॥
ತತೋ ರಾಮಃ ಪ್ರಸನ್ನಾತ್ಮಾ ಹನೂಮನ್ತಂ ಮಹಾಬಲಮ್ ।
ಆನೀಯ ಸನ್ನಿಧಿಂ ಪ್ರೀತ್ಯಾ ಪ್ರೋವಾಚ ವಚನಂ ಪರಮ್ ॥೭॥
ಈಶ್ವರಾಂಶಸಮುದ್ಭೂತ ಮಹಾಬಲಪರಾಕ್ರಮ ।
ಅಮಿತಂ ತೇ ಬಲಂ ವೀರ್ಯಂ ಶೃಣು ತೇ ಜನ್ಮ ಪಾವನಮ್ ॥೮॥
ಪುರಾ ಕೈಲಾಸಶಿಖರೇ ಪಾರ್ವತೀಪರಮೇಶ್ವರೌ ।
ಕ್ರೀಡನ್ತೌ ವಾನರಾಣಾಂ ತೌ ವನೇ ದ್ವನ್ದ್ವಾನ್ಯಪಶ್ಯತಾಮ್ ॥೯॥
ದೃಷ್ಟ್ವಾಮ್ಬಿಕಾಯಾಃ ಕಪೀನಾಂ ಮಿಥುನಾನಿ ವನಾನ್ತರೇ ।
ತಸ್ಯಾಶ್ಚ ತಾದೃಶೀ ಪ್ರೀತಿಃ ಅಭೂದ್ಭಾವ್ಯರ್ಥಹೇತುನಾ ॥೧೦॥
ಶಿವಸ್ತದ್ಧೃದಯಂ ಜ್ಞಾತ್ವಾ ಪ್ರದದೌ ರತಿಮುತ್ತಮಾಮ್ ।
ತಸ್ಯಾಸ್ತೇನಾಭವದ್ಗರ್ಭೋ ಗುರುಭಾರಸಮನ್ವಿತಃ ॥೧೧॥
ತಂ ಸೋಢುಂ ನಾಶಕದ್ಗೌರೀ ಗರ್ಭಂ ಮೇರುಸಮಂ ತದಾ ।
ತಯಾ ವಿಜ್ಞಾಪಿತಃ ಶಮ್ಭುಃ ಗರ್ಭಭಾರಾತಿಪೀಡಯಾ ॥೧೨॥

ಆಗ ಸುಗ್ರೀವನು ಹನುಮಂತನಲ್ಲಿ ವಿಶೇಷವಾಗಿ ಪ್ರಕೃತ ವಿಷಯವನ್ನು ತಿಳಿದನು ಹನುಮಂತನೇ ಕಾರ್ಯವನ್ನು ಸಾಧಿಸತಕ್ಕವನೆಂದು, ಸುಗ್ರೀವನು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡಿದ್ದನು ॥೬॥

ಆ ಬಳಿಕ, ಪ್ರಸನ್ನಾತ್ಮನಾದ ರಾಮನು, ಮಹಾಬಲನಾದ ಹನ ಮಂತನನ್ನು ತನ್ನ ಪತ್ತಿರಕ್ಕೆ ಕರೆದು, ಪ್ರೀತಿಪೂರ್ವಕವಾಗಿ ಈ ಮಾತನ್ನು ಹೇಳಿದನು ॥೮॥

ಎಲೈ ಈಶ್ವರಾಂಶಸಮುತ್ಪನ್ನನೆ! ಮಹಾಬಲಪರಾಕ್ರಮನೆ! ನಿನ್ನ ಬಲವೂ ವೀರ್ಯವೂ ಅಪರಿಮಿತವಾಗಿರುವವು ಅತಿ ಪವಿತ್ರವಾದ ನನ್ನ ಉತ್ಪತ್ತಿಯನ್ನು ಕೇಳುವನಾಗು ॥೯॥

ಪೂರ್ವದಲ್ಲಿ, ಕೈಲಾಸಪರ್ವತ ಶಿಖರದಲ್ಲಿ ಅರಣ್ಯದೊಳಗೆ ವಿಹರಿಸುತಿರುವ ಪಾರ್ವತೀ ಪರಮೇಶ್ವರರು, ಕಪಿಗಳು ಹಣ್ಣೂ ಗಂಡೂ ಸೇರಿ ಕ್ರೀಡಿಸುತ್ತಿರುವುದನ್ನು ಕಂಡರು ॥೧೦॥

ಹೀಗೆ ವನಮಧ್ಯದಲ್ಲಿ ಕ್ರೀಡಿಸುತ್ತಿರುವ ಕಪಿಮಿಥುನಗಳನ್ನು ಕಂಡು, ಭವಿಷ್ಯತ್ಕಾರ್ಯಗೌರವದಿಂದ, ಆ ಪಾರ್ವತಿಗೂ ಆರೀತಿಯಾದ ಪ್ರೀತಿ ಹುಟ್ಟಿತು ॥೧೧॥

ಅನಂತರ ಪರಮೇಶ್ವರನು ಅವಳ ಮನಸ್ಸನ್ನು ತಿಳಿದವನಾಗಿ, ಅವಳ ಅಭಿಪ್ರಾಯವನ್ನು ನೆರವೇರಿಸಿದನು. ಆಮೇಲೆ, ಆ ಪಾರ್ವತಿಗೆ ಮಹಾಭಾರಯುಕ್ತವಾದ ಗರ್ಭವುದಯಿಸಿತು ॥೧೨॥

ಆಗ ಶ್ರೀ ಪಾರ್ವತಿಯು, ಮೇರುಪರ್ವತಕ್ಕೆ ಸಮಾನವಾದ ಆ ಗರ್ಭವನ್ನು ಧರಿಸಲಾರದವಳಾಗಿ, ಆ ಗರ್ಭಭಾರದ ವ್ಯಥೆಯಿಂದ ಶ್ರೀ ಪರಮೇಶ್ವರನಿಗೆ ವಿಜ್ಞಾಪಿಸಿದಳು ॥೧೩॥

ಶಮ್ಭುಸ್ತದ್ಗೌರವಂ ಜ್ಞಾತ್ವಾ ನಾಭಿದೇಶಾದಪಾನುದತ್ ।
ಭೂತಲಂ ಚಾಪಿ ತಂ ಗರ್ಭಂ ನೆ ದಧಾರಾತಿಪೀಡಯಾ ॥೧೪॥

ಏತಸ್ಮಿನ್ನೇವ ಸಮಯೇ ಗೌತಮಸ್ಯ ಸುತಾ ಸತೀ ।
ಸಾ ಘೋರಂ ತಪಆಪೇದೇ ಧೀರಾ ಪುತ್ರಸ್ಯ ಕಾಂಕ್ಷಯಾ ॥೧೫॥

ಚಕಮೇ ತಾಂ ಸುರೂಪಾಢ್ಯಾಂ ವಾಯುಃ ಸನ್ತಾಸಕಾಂಕ್ಷಯಾ ।
ತಂ ಗರ್ಭಮಜ್ಜಲೌ ತಸ್ಯಾಃ ಪ್ರದದೌ ಫಲಸಮ್ಮಿತಮ್ ॥೧೬॥

ಅವಿಚಾರ್ಯೈವ ಸಾ ದೇವೀ ತಂ ಗರ್ಭಮಪಿಬನ್ಮುದಾ ।
ಸೋಗಚ್ಛದ್ದೌದರಂ ದೇಶಂ ಮಹಾಮೇರುರಿವಾಪರಃ ॥೧೭॥

ಗರ್ಭಸೂಚಕಚಿಹ್ನಾನಿ ದೇಹೇ ತಸ್ಯಾಬಭೂಃ ಸ್ಫುಟಮ್ ।
ನವಮಾಸೇಷು ಪೂರ್ಣೇಷು ಜಾತೋಸಿ ಕಪಿಪುಙ್ಗವ ।
ವಟುವೇಷಧರೋ ವೀರಃ ಸಕಲಾಭರಣಾಙ್ಕಿತಃ ॥೧೮॥
ಶಿವಾವತಾರಸ್ತ್ವಂ ವೀರ ಶಿವಪಿವಾಸಿ ಜನ್ಮತಃ ॥೧೯॥

ಬಳಿಕ ಶ್ರೀ ಪರಮೇಶ್ವರನು ಆ ಗರ್ಭದ ಗೌರವವನ್ನು ತಿಳಿದುಕೊಂಡವನಾಗಿ, ಅದನ್ನು ನಾಭಿಪ್ರದೇಶದಿಂದ ಹೊರಕ್ಕೆ ತೆಗೆದುಬಿಟ್ಟನು ಆಮೇಲೆ ಭೂಮಿಯೂ ಕೂಡ ಆ ಗರ್ಭವನ್ನು ಧರಿಸಲಾರದುದಾಯ್ತು ॥೧೪॥

ಈ ಸಮಯದಲ್ಲಿಯೇ, ಅತಿ ಸ್ಥಿರಚಿತ್ತಳಾದ ಗೌತಮಮುನಿಯ ಪುತ್ರಿಯು, ಪುತ್ರಾಪೇಕ್ಷೆಯಿಂದ ಘೋರವಾದ ತಪಸ್ಸನ್ನು ಮಾಡುತಿದ್ದಳು ॥೧೫॥

ಹೀಗಿರುವಾಗ, ಸರ್ವಗತನಾದ ಮಹಾತ್ಮನಾದ ವಾಯುವು, ಅತಿ ಸುಂದರಿಯಾಗಿದ್ದ ಅಪಳನ್ನು ಕಾಮಿಸಿದನು ಬಳಿಕ ಅವಳ ಕ್ರೀಡೆಯಿಂದ ಸಂತುಷ್ಟನಾಗಿ, ಅವಳು ಸಂತಾನವನ್ನು ಬಯಸಿದಕಾರಣ, ಪಾರ್ವತಿಯಿಂದ ಬಿಡಲ್ಪಟ್ಟಿದ್ದ ಆ ಗರ್ಭವನ್ನು, ಒಂದು ಹಣ್ಣಿನಂತೆ ಅವಳ ಕೈಯಲ್ಲಿ ತಂದು ಇರಿಸಿದನು ॥೧೬॥

ಆಗ ಆ ಗೌತಮಮುನಿಪುತ್ರಿಯು, ವಿಚಾರವೇ ಇಲ್ಲದೆ ಸಂತೋಷದಿಂದ ಆ ಗರ್ಭವನು ಸಾನಮಾಡಿಬಿಟ್ಟಳು ಬಳಿಕ ಆ ಗರ್ಭವು, ಇದೇ ಒಂದು ಮಹಾಮೇರುಪರ್ವತವೋ ಎಂಬಂತೆ ಅವಳ ಉದರಪ್ರದೇಶವನ್ನು ಸೇರಿತು ॥೧೭॥

ಒಳಿಕ ಅವಳ ದೇಹದಲ್ಲಿ ಗರ್ಭಸೂಚಕವಾದ ಚಿಹ್ನೆಗಳು ಸ್ಪಷ್ಟವಾಗಿ ವಿರಾಜಿಸಿದುವು ಎಲೈ ಕಪಿಶ್ರೇಷ್ಠನೆ! ಅನಂತರ ಅವಳಿಗೆ ನವಮಾಸಗಳು ಪೂರ್ಣವಾಗಲಾಗಿ, ನೀನು ಬ್ರಹ್ಮಚಾರಿವೇಷಧರನಾಗಿಯೂ ಸರ್ವಾಭರಣಭೂಷಿತನಾಗಿಯೂ ಜನಿಸಿದೆ. ಎಲೈ ಮಹಾವೀರನೆ! ಹೀಗೆ ನೀನು ಜನ್ಮತಃ ಶ್ರೀ ಶಿವನ ಅವತಾರಭೂತನಾಗಿ, ಸಾಕ್ಷಾತ್ ಶಿವನೇ ಆಗಿರುವೆ ॥೧೮-೧೯॥

ಜಾತೋಸಿ ಪೂರ್ಣದೇಹೇನ ಮಾರುತಾನನ್ದವರ್ಧನಃ ।
ದೃಷ್ಟ್ವಾ ನತ್ವಾ ಮಾತರಂ ತ್ವಂ ಉಕ್ತವಾನಸಿ ಸಾದರಮ್ ॥೦೦॥

ಕಾ ಮಾತಾ ಜನಕಃ ಕೋ ವಾ ಕೋವಾಽಽಹಾರೋ ವದಸ್ವ ಮೇ ।
ಕಾ ವೃತ್ತಿರ್ದೇವತಾ ಕಾ ವಾ ಸ್ಮರಣಂ ಪೂಜನಂ ಕಥಮ್ ॥೦೧॥

ತದಾವ್ಯಕ್ತಮವ್ಯಥಪ್ರಾಯಂ ಶ್ರುತ್ವಾ ಕರ್ಣರಸಾಯನಮ್ ।
ಜ್ಞಾತ್ವಾ ಭವನ್ತಂ ಮಹಸಾ ಮಹಾಬುದ್ಧಿಬಲಾನ್ವಿತಮ್ ।
ಪ್ರೋವಾಚ ವಾಕ್ಯಂ ತೇ ಮಾತಾ ಪರಮಾನನ್ದನನ್ದಿತಾ ॥೦೨॥

ಮಾತಾಹಮಞ್ಜನಾ ದೇವೀ ಗೌತಮಸ್ಯ ಸುತಾ ಪ್ರಿಯಾ ।
ವಾಯುರ್ದೇವಸ್ತವ ಪಿತಾ ಮಹಾಭೂತೋ ಜಗದ್ಧಿತಃ ॥೦೩॥

ರಕ್ತಂ ಫಲಂ ತವಾಹಾರಃ ಸುಪಕ್ವಂ ಮಧುರಂ ಚ ಯತ್ ।
ರಾಮಸೇವಾ ಪರಾ ವೃತ್ತಿಃ ದೇವತಾ ಚ ಸನಿವ ತೇ ॥೦೪॥

ಸ್ಮರಣಂ ರಾಮಚನ್ದ್ರಸ್ಯ ಪೂಜನಂ ಪರಮೇಶಿತುಃ ।
ಯಥೇಷ್ಟಂ ಗಚ್ಛ ಜೀವ ತ್ವಂ ಬ್ರಹ್ಮಾಯುಃ ಪುತ್ರ ತೇ ಮತಮ್ ॥೦೫॥

ಈರೀತಿಯಾಗಿ ನೀನು ವಾಯುವಿಗ ಆನಂದವನ್ನು ಅಭಿವೃದ್ಧಿಪಡಿಸತಕ್ಕವನಾಗಿ ಅವನ ಪೂರ್ಣದೇಹದಿಂದ ಅವತರಿಸಿದೆ ಒಡನೆಯೇ, ನಿನ್ನ ತಾಯನ್ನು ಕಂಡು, ಅವಳಿಗೆ ನಮಸ್ಕರಿಸಿ, ಆದರದೊಡನೆ ' ನನಗೆ ತಾಯಿಯಾರು ? ತಂದೆಯಾರು ? ನನಗೆ ವೃತ್ತಿಯಾವುದು ? ಜೀವನವಾವುದು ? ಯಾವ ದೇವರನ್ನು ನಾನು ಉಪಾಸಿಸತಕ್ಕುದು ? ಯಾವ ದೇವರನ್ನು ಸ್ಮರಿಸತಕ್ಕುದು ? ಯಾವ ದೇವರನ್ನು ಪೂಜಿಸತಕ್ಕುದು ' ನೀನು ಹೇಳುವಳಾಗು ' ಎಂದು ಹೇಳಿದೆ ॥೨೨-೨೧॥

ಆಗ ಅವ್ಯಕ್ತಪ್ರಾಯವಾಗಿರುವ ಶ್ರೋತ್ರರಸಾಯನವಾದ ನಿನ್ನ ಮಾತನ್ನು ಕೇಳಿ, ನಿನ್ನ ತೇಜಸ್ಸಿನಿಂದ ನೀನು ಮಹಾ ಬುದ್ಧಿಬಲಸಮನ್ವಿತನೆಂದು ತಿಳಿದುಕೊಂಡು, ಪರಮಾನಂದಭರಿತಳಾದ ನಿನ್ನ ತಾಯಿಯು ಹೀಗೆ ಹೇಳಿದಳು ॥೨೨॥

ವತ್ಸ ! ನಿನಗೆ, ಗೌತಮಪುತ್ರಿಯಾದ ಅಂಜನಾದೇವಿಯೆಂಬ ನಾನೇ ತಾಯಿಯು, ಲೋಕಕ್ಕೆಲ್ಲ ಹಿತಕರನಾದ ಆ ಮಹಾತ್ಮನಾದ ವಾಯುದೇವರೇ ನಿನ್ನ ತಂದೆಯು ॥೨೩॥

ಚೆನ್ನಾಗಿ ಪಕ್ವವಾಗಿಯೂ ಮಧುರವಾಗಿಯೂ ಇರುವ ಫಲವೇ ನಿನಗ ಆಹಾರವು ಶ್ರೀ ರಾಮನ ಸೇವೆಯೇ ಮುಖ್ಯವಾದ ವೃತ್ತಿಯು ಆ ರಾಮಚಂದ್ರನೇ ನಿನ್ನ ಪರದೈವವು ನೀನು ಸರ್ವದಾ ಅವನನ್ನೇ ಸ್ಮರಿಸತಕ್ಕುದು ಪರಮೇಶ್ವರನಾದ ಅವನನ್ನೇ ನೀನು ಪೂಜಿಸತಕ್ಕುದು ಪುತ್ರ ! ಇನ್ನು ನೀನು ನಿನ್ನ ಮನಬಂದಕಡೆಗೆ ಹೋಗಬಹುದು ನೀನು ಸುಖವಾಗಿ ಬಾಳು ಬ್ರಹ್ಮನ ಆಯುಸ್ಸಿನಷ್ಟು ಆಯುಸ್ಸು ನಿನಗಿರುವುದು ಎಂದು ಅಂಜನಾದೇವಿ ಹೇಳಿದಳು ॥೨೪-೨೫॥

ಮಾತ್ರೈವಮುಕ್ತೇ ಶ್ರುತ್ವಾ ತ್ವಂ ಉದ್ಯಂತಂ ಸೂರ್ಯಮಂಡಲಮ್ ।
ದೃಷ್ಟ್ವಾಽಽಹಾರಂ ಪರಂ ಮತ್ವಾ ಸಂಭ್ರಮೇಣ ಸಮುತ್ಥಿತಃ ॥೨೬॥
ಚಕ್ರವಾಳಂ ಸಮುದ್ದಿಶ್ಯ ಸಮುತ್ಪತಿತವಾನಸಿ ।
ಭೂಚಕ್ರವಲಯಂ ಭೀಮಂ ಸಪ್ತಸಿನ್ಧುಬಹಿಸ್ಸ್ಥಿತಮ್ ॥೨೭॥
ಸೂರ್ಯೋಸ್ತಮಗಮದ್ಭೀತ್ಯಾ ತವ ವೇಗಂ ದುರಾಸದಮ್ ।
ಅಸಹಿಷ್ಣುಃ ಪರಂ ತೇಜಃ ಚಕ್ರವಾಳಾನ್ನಹಾಗಿರೇಃ ॥೨೮॥
ತ್ವಮುಲ್ಲಂಘ್ಯಾದಧೀ ಸಪ್ತ ಗೋಷ್ಪದಪ್ರಾಯಮದ್ಭುತಮ್ ।
ಚಕ್ರವಾಳತಟಂ ಪ್ರಾಪ್ಯ ವಿಚರ ವಿಸ್ಮಿತಃ ಸ್ಥಿತಃ ॥೨೯॥
ಜಗದಣ್ಡಂ ತಮೋವ್ಯಾಪ್ತಂ ನ ಸಜ್ಞ್ಯಾರಃ ಶರೀರಿಣಾಮ್ ॥೩೦॥
ಸ್ನಾನಂ ಸನ್ಧ್ಯಾ ಜಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।
ಸ್ವಾಹಾಕಾರಃ ಸ್ವಧಾಕಾರಃ ತೀರ್ಥಯಾತ್ರಾದಿಸತ್ಕ್ರಿಯಾಃ ।
ಸರ್ವಂ ವಿಲೋಪಮಾಪನ್ನಂ ಸೂರ್ಯಸ್ಯಾದರ್ಶನಾದ್ಭುವಿ ॥೩೧॥
ಕುಪಿತೋ ದೇವರಾಜಸ್ತು ಗಜಾರೂಢೋ ಭಯಾದ್ದ್ರುತಃ ॥೩೨॥

ಅಯ್ಯಾ! ಹನುಮಂತನೆ! ಆಗ ನಿನ್ನ ತಾಯಿಂದ ಹೀಗೆ ಹೇಳಲ್ಪಡಲಾಗಿ, ನೀನು ಆಗ ತಾನೆ ಉದಯಿಸುತಿರುವ ಸೂರ್ಯಮಂಡಲವನ್ನು ಕಂಡು, ಇದು ನನಗೆ ಉತ್ತಮವಾದ ಆಹಾರವೆಂದು ತಿಳಿದು, ಸಂಭ್ರಮದಿಂದ ಮೇಲಕ್ಕೆ ಹಾರಿದವನಾದೆ ॥೨೬॥

ಆಗ ನೀನು ಸಪ್ತಸಮುದ್ರದ ಹೊರಗಿರುವ ಭೂಮಂಡಲವನ್ನೂ ದಾಟಿ, ಚಕ್ರವಾಳಪರ್ವತವನ್ನು ಗುರಿಮಾಡಿಕೊಂಡು ಹಾರಿಹೋದೆ ॥೨೭॥

ಅನಂತರ, ನಿನ್ನ ದುರಾಸದವಾದ ವೇಗವನ್ನೂ–ಅತ್ಯಧಿಕವಾವ ತೇಜಸ್ಸನ್ನೂ ಸಹಿಸಲಾರದವನಾಗಿ, ಸೂರ್ಯನು ಭಯಪಟ್ಟು ಆ ಚಕ್ರವಾಳಪರ್ವತದ ದೆಸೆಯಿಂದ ಅಸ್ತಹೊಂದಿಬಿಟ್ಟನು ॥೨೮॥

ಆಗ ನೀನು, ಸರ್ವರೂ ಆಶ್ಚರ್ಯಪಡುವ ರೀತಿಯಲ್ಲಿ ಸಪ್ತಸಮುದ್ರಗಳನ್ನೂ ಒಂದು ಗೋಷ್ಪದಂತೆ ದಾಟಿಬಿಟ್ಟು, ಚಕ್ರವಾಳಪರ್ವತದ ತಟವನ್ನು ಸೇರಿ, ಅಲ್ಲಿ ವಿಸ್ಮಯಯುಕ್ತನಾಗಿ ಸಂಚರಿಸುತಿದ್ದೆ ॥೨೯॥

ಆ ಬಳಿಕ, ಸೂರ್ಯೋದಯವೇ ಇಲ್ಲವಾಗಲಾಗಿ, ಬ್ರಹ್ಮಾಂಡವಲ್ಲವೂ ತಮಸ್ಸಿನಿಂದ ವ್ಯಾಪ್ತವಾಯ್ತು, ಪ್ರಾಣಿಗಳಿಗೆ ಸಂಚಾರವಿಲ್ಲವಾಯ್ತು, ಸ್ನಾನ ಸಂಧ್ಯೆ ಜಪ ಹೋಮ ವೇದಾಧ್ಯಯನ ಪಿತೃತರ್ಪಣ ಸ್ವಾಹಾಕಾರ ಸ್ವಧಾಕಾರ ತೀರ್ಥಯಾತ್ರಾದಿ ಸತ್ಕರ್ಮ–ಇವೇ ಮೊದಲಾದ ಸಮಸ್ತವೂ ಲೋಪಹೊಂದಿಬಿಟ್ಟಿತು ॥೩೦–೩೧॥

ಆಗ ಭೂಮಿಯಲ್ಲಿ ಯಜ್ಞಾದಿಗಳೊಂದೂ ನಡೆಯದಿರುವಕಾರಣ, ಹವ್ಯಭೋಕ್ತೃಗಳಾದ ದೇವತೆಗಳಿಗೆ ಆಹಾರವೇ ತಪ್ಪಿಹೋಗಲಾಗಿ, ದೇವರಾಜನಾದ ಇಂದ್ರನು ಮಹಾಕೋಪಸಮ

ಐರಾವತಂ ತತೋ ದೃಷ್ಟ್ವಾ ಮಹತ್ತ್ವಾದಿದಮಿತ್ಯಪಿ ।
ಫಲಂ ತಂ ಹಸ್ತಿರಾಜಾನಂ ಮಾರುತೇಭಿದ್ರುತೋಸ್ಯಲಮ್ ॥೩೩॥

ತತಸ್ತೇ ಧಾವತೋ ರೂಪಂ ಐರಾವತಜಿಘೃಕ್ಷಯಾ ।
ಮುಹೂರ್ತಮಭವದ್ಘೋರಂ ಇನ್ದ್ರಾಗ್ನ್ಯೋರಿವ ಭಾಸ್ವರಮ್ ॥೩೪॥

ದೃಷ್ಟ್ವಾಯಾನ್ತಂ ಸುರಪತಿಃ ತ್ವಾಂ ವಜ್ರೇಣಾಭ್ಯತಾಡಯತ್ ।
ತತೋ ಗಿರೌ ಸಿಪತಿತಃ ತ್ವಂ ವಜ್ರೇಣಾಭಿತಾಡಿತಃ ।
ಪತಮಾನಸ್ಯ ತೇ ತತ್ರ ವಾಮೋ ಹಸುರಭಜ್ಯತ ॥೩೫॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಹನೂಮದುತ್ಪತ್ತಿಪರಾಕ್ರಮಕಥನಂ ನಾಮ
ದ್ವಾದಶಃ ಸರ್ಗಃ

ಸ್ತಿತನಾಗಿ, ಐರಾವತಗಜವನ್ನು ಹತ್ತಿಕೊಂಡು ಅಲ್ಲಿಗ ಬಂದನು ಅಯ್ಯಾ! ಮಾರುತಿಯೆ! ಆಗ ನೀನು ಆ ಐರಾವತವನ್ನು ಕಂಡು, ಅದು ಬಲು ದೊಡ್ಡದಾಗಿದ್ದ ಕಾರಣ– ಇದೂ ಒಂದು ಹಣ್ಣೆಂದು ತಿಳಿದುಕೊಂಡು, ಆ ಗಜರಾಜನನ್ನು ಬೆನ್ನಟ್ಟಿಕೊಂಡು ಓಡಿಹೋದೆ ॥೩೨–೩೩॥

ಅನಂತರ, ಆ ಐರಾವತವನ್ನು ಹಿಡಿದುಕೊಳ್ಳಬೇಕೆಂದು ಓಡಿಹೋಗುತಿರುವ ನಿನ್ನ ರೂಪವು, ಒಂದು ಮುಹೂರ್ತಕಾಲ ಇಂದ್ರಾಗ್ನಿಗಳ ರೂಪದಂತೆ ಅತಿ ಘೋರವಾಗಿ ಕಾಣಿಸಿತು ॥೩೪॥

ಹೀಗೆ ನೀನು ಬೆನ್ನಟ್ಟಿ ಬರುತಿರುವುದನ್ನು ಕಂಡು, ದೇವೇಂದ್ರನು ನಿನ್ನನ್ನು ವಜ್ರದಿಂದ ಹೊಡೆದನು. ಬಳಿಕ ನೀನು ವಜ್ರಾಯುಧದಿಂದ ತಾಡಿತನಾಗಿ ಪರ್ವತದಮೇಲೆ ಬಿದ್ದುಬಿಟ್ಟೆ. ಅಲ್ಲಿ ಬಿದ್ದಾಗ ನಿನ್ನ ಎಡಗಡೆಯ ಮುಸುಡಿಯು ಭಗ್ನವಾಯ್ತು ॥೩೫॥

ಇದು ಕಿಷ್ಕಿಂಧಾಕಾಂಡದಲ್ಲಿ ಹನೂಮದುತ್ಪತ್ತಿಪರಾಕ್ರಮ ಕಥನವೆಂಬ
ಹನ್ನೆರಡನೆಯ ಸರ್ಗವು.

ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ತ್ರಯೋದಶಃ ಸರ್ಗಃ.

ಶ್ರೀ ರಾಮಉವಾಚ

ತತೋ ವಾಯುರ್ಮಹಾತೇಜಾಂ ಸರ್ವದೇಹಿಶರೀರಗಃ ।
ಮಹಾಶೋಕಪರೀತಾತ್ಮಾ ಕುಪಿತಃ ಪುತ್ರಪೀಡನಾತ್ ॥೧॥
ಸರ್ವಾ ವಾಯೂಂ ಸಮಾಕೃಷ್ಯ ಪ್ರಯಯೌ ಸ ರಸಾತಳಮ್ ।
ತತೋ ಬ್ರಹ್ಮಾಣ್ಡಗೋಳಸ್ಥಂ ಶವವತ್ಪ್ರಾಯಮಭೂತ್ ತದಾ ॥೨॥
ಹರಿಬ್ರಹ್ಮಶಿವಾದೀನಾಂ ಆಸೀತ್ ತತ್ರ ಸಮಾಗಮಃ ।
ದತ್ವಾ ವಾಯುಸುತಪ್ರಾಣಾ ವಾಯುಂ ಸಂಸ್ತುತ್ಯ ದೇವತಾಃ ।
ಕಿಞ್ಚಿದೂನಹನುತ್ವಾತ್ ತ್ವಾಂ ಹನೂಮನ್ತಂ ಪ್ರಚಕ್ರಿರೇ ॥೩॥
ಅಥೋವಾಚ ಸುರಾ ಬ್ರಹ್ಮಾ ನೂರುತಪ್ರಿಯಕಾಮ್ಯಯಾ ॥೪॥
ಭೋ ಮಹೇನ್ದ್ರಾಗ್ನಿವರುಣಪ್ರಾಣೇಶ್ವರಧನೇಶ್ವರಾಃ ।
ಜಾನತಾಮಪಿ ವಃ ಸರ್ವಂ ಹಿತಂ ವಕ್ಷ್ಯಾಮಿ ಶ್ರೂಯತಾಮ್ ॥೫॥

ಕಿಷ್ಕಿಂಧಾಕಾಂಡದಲ್ಲಿ ಹದಿಮೂರನೆಯ ಸರ್ಗವು

ಪುನಃ ಶ್ರೀರಾಮನು ಹನುಮಂತನನ್ನು ಕುರಿತು ಹೇಳುವನು --

ಅಯ್ಯಾ! ಮಾರುತಿಯ! ಹೀಗ ನಿನ್ನ ಹನು(ಮುಸುಡಿ)ವು ಛಿದ್ರವಾಗಲಾಗಿ, ಸರ್ವಪ್ರಾಣಗಳಿಗೂ ಶರೀರಾಂತರ್ಗತನಾಗಿರುವ ಮಹಾತೇಜಸ್ವಿಯಾದ ವಾಯುವು, ತನ್ನ ಮಗನಾದ ನಿನಗ ಹೀಗ ಹಿಂಸಯುಂಟಾದುದರಿಂದ ಅತಿಯಾಗಿ ಶೋಕಪಟ್ಟು, ಮಹಾಕೋಪಯುಕ್ತನಾದನು ॥೧॥

ಆಗ ಅವನು ಲೋಕದಲ್ಲಿರುವ ಸಮಸ್ತ ವಾಯುಗಳನ್ನೂ ಸಳದುಕೊಂಡು ಪಾತಾಳಕ್ಕೆ ಹೊರಟುಹೋದನು ಅನಂತರ, ಬ್ರಹ್ಮಾಂಡಮಧ್ಯದಲ್ಲಿರುವ ಸಮಸ್ತ ಪ್ರಾಣಸಮೂಹವು ಶವದ ಹಾಗೆ ಆಗಿಬಿಟ್ಟಿತು ॥೨॥

ಆಮೇಲೆ, ಬ್ರಹ್ಮ ವಿಷ್ಣು ಮಹೇಶ್ವರಾದಿಗಳಲ್ಲರೂ ಅಲ್ಲಿಗೆ ಬಂದು ಸೇರಿದರು ಅಲ್ಲಿ ಆ ಸಮಸ್ತ ದೇವತೆಗಳೂ ವಾಯುಪುತ್ರನಿಗೆ ಪ್ರಾಣವನ್ನು ಕೊಟ್ಟು, ವಾಯುವನ್ನು ಸ್ತೋತ್ರಮಾಡಿ, ನಿನ್ನ ಹನುವು ಸ್ವಲ್ಪ ಊನವಾದುದರಿಂದ ನಿನಗೆ ಹನುಮಂತನೆಂದು ನಾಮಕರಣಮಾಡಿದರು॥೩॥

ಅನಂತರ, ವಾಯುವಿಗೆ ಪ್ರೀತಿಯುಂಟಾಗುವುದಕ್ಕೋಸ್ಕರ, ಬ್ರಹ್ಮನು ದೇವತೆಗಳನ್ನು ಕುರಿತು 'ಎಲ್ಲೆ ಇಂದ್ರ ವರುಣ ಯಮ ಕುಬೇರರೇ! ನೀವು ವಸ್ತುತಃ ಸಮಸ್ತವನ್ನೂ ಬಲ್ಲವರಾಗಿದ್ದಾಗ್ಯೂ, ನಿಮಗೆ ಒಂದು ಹಿತವನ್ನು ಹೇಳುವೆನು,-ಕೇಳಿರಿ. ಏನೆಂದರೆ,- ಈ ಬಾಲಕನಿಂದ ಮುಂದೆ ನಿಮಗೆ ವಿಶೇಷವಾಗಿ ಕೆಲಸವು ಮಾಡಲ್ಪಡಬೇಕಾಗಿರುವುದು, ಆದುದರಿಂದ, ನಮ್ಮ

ಅನೇನ ಶಿಶುನಾ ಕಾರ್ಯಂ ಕರ್ತವ್ಯಂ ವೋ ಭವಿಷ್ಯತಿ ।
ತದ್ದದಧ್ವಂ ವರಾ೯ ಸರ್ವೇ ಮಾರುತಸ್ಯಾಸ್ಯ ತುಷ್ಟಯೇ ॥೬॥
ತತಃ ಸಹಸ್ರನಯನಃ ಪ್ರೀತಿಯುಕ್ತಃ ಶುಭಾನನಃ ।
ಕುಶೇಶಯಮಯೀಂ ಮಾಲಾಂ ಸಮುತ್ಕ್ಷಿಪ್ಯೇದಮಬ್ರವೀತ್ ॥೭॥
ಮತ್ಕರೋತ್ಸೃಷ್ಟವಜ್ರೇಣ ಹನುರಸ್ಯ ಯಥಾ ಕ್ಷತಃ ।
ನಾಮ್ನಾ ವೈ ಕಪಿಶಾರ್ದೂಲೋ ಭವಿತಾ ಹನುಮಾನಿತಿ ॥೮॥
ಅಹಮೇವಾಸ್ಯ ದಾಸ್ಯಾಮಿ ಹ್ಯಪರಂ ವರಮುತ್ತಮಮ್ ।
ಇತಃಪ್ರಭೃತಿ ವಜ್ರಸ್ಯ ಮಮಾವಧ್ಯೋ ಭವಿಷ್ಯತಿ ॥೯॥
ಮಾತರ್ಮಾಣ್ಡವ್ಯ ಇತ್ಯುಕ್ತ್ವಾ ತತ್ರ ದದಾಮಿ ಶತಕ್ರತುಃ ಕಲಾಮ್ ॥೧೦॥
ಯಥಾ ತು ಶಾಸ್ತ್ರಾಣ್ಯಧ್ಯೇತುಂ ಶಕ್ತಿರಸ್ಯ ಭವಿಷ್ಯತಿ ।
ತಥಾಸ್ಯ ಶಾಸ್ತ್ರಂ ದಾಸ್ಯಾಮಿ ಯೇನ ವಾಗ್ಮೀ ಭವಿಷ್ಯತಿ ।
ನ ಚಾಸ್ಯ ಸದೃಶಃ ಕಶ್ಚಿತ್ ಭವಿತಾ ಶಾಸ್ತ್ರದರ್ಶನೇ ॥೧೧॥
ವರುಣಸ್ತೂ ವರಂ ಪ್ರಾದಾತ್ ನಾಸ್ಯ ಮೃತ್ಯುರ್ಭವಿಷ್ಯತಿ ।

ವಾಯುವಿಗೆ ಸಂತೋಷವುಂಟಾಗುವುದಕ್ಕಾಗಿ, ನೀವೆಲ್ಲರೂ ಈ ಬಾಲಕನಿಗ ವರಗಳನ್ನು ಕೊಡಿರಿ ಎಂದು ಹೇಳಿದನು ॥೪-೬॥

ಹೀಗೆ ಬ್ರಹ್ಮದೇವನು ಹೇಳಿದ ಬಳಿಕ, ಪ್ರೀತಿಯಿಂದ ಪ್ರಸನ್ನಮುಖನಾದ ಮಹೇಂದ್ರನು, ಒಂದು ದಿವ್ಯ ಕಮಲಮಾಲಿಕೆಯನ್ನು ಕೈಯಲ್ಲಿ ಪಿಡಿದುಕೊಂಡು ಹೀಗೆ ಹೇಳಿದನು ॥೭॥

ನನ್ನ ಕೈಯಿಂದ ವಜ್ರಾಯುಧಪ್ರಹಾರವನ್ನು ತಿಂದು ಇವನ ಹನುವು ಭಗ್ನವಾದಕಾರಣ, ಇವನು ಲೋಕದಲ್ಲಿ ಹನುಮಂತನೆಂದು ಪ್ರಸಿದ್ಧನಾಗುವನು ॥೮॥

ನಾನೇ ಇವನಿಗೆ ಇನ್ನೂ ಒಂದು ಉತ್ತಮವಾದ ವರವನ್ನು ಕೊಡುವೆನು ಏನೆಂದರೆ,-ಇನ್ನು ಮುಂದೆ ಇವನು ನನ್ನ ವಜ್ರಾಯುಧಕ್ಕೆ ವಧ್ಯನಾಗುವುದಿಲ್ಲ ॥೯॥

ಹೀಗೆ ಮಹೇಂದ್ರನು ಹೇಳಿ ಆ ದಿವ್ಯ ಕಮಲಮಾಲೆಯನ್ನು ನಿನ್ನ ಕೊರಲಿಗೆ ಹಾಕಿದ ಬಳಿಕ, ಸೂರ್ಯನು ಸಮಸ್ತ ದೇವತಗಳ ಪ್ರತ್ಯಕ್ಷವಾಗಿ 'ನಾನು ಇವನಿಗೆ ನನ್ನ ಕಿರಣದಲ್ಲಿ ನೂರ ನೆಯೊಂದರಷ್ಟನ್ನು ಕೊಡುವೆನು. ಇದಲ್ಲದೆ, ಶಾಸ್ತ್ರಾಧ್ಯಯನ ಮಾಡುವುದಕ್ಕೆ ಸರಿಯಾದ ಸಾಮರ್ಥ್ಯವುಂಟಾಗುವಂತೆ, ಇವನಿಗ ಸಮಸ್ತ ಶಾಸ್ತ್ರಗಳನ್ನೂ-ಮುಖ್ಯವಾಗಿ ವ್ಯಾಕರಣಶಾಸ್ತ್ರವನ್ನೂ-ಉಪದೇಶಿಸುವೆನು. ಆದರಿಂದ ಇವನು ಮಹಾವಾಗ್ಮಿಯಾಗುವನು, ಮತ್ತು, ಶಾಸ್ತ್ರ ಜ್ಞಾನದಲ್ಲಿ ಯಾರೂ ಇವನಿಗೆ ಸರಿಯೆನ್ನಿಸಲಾರರು.' ಎಂದು ವರವನ್ನು ಕೊಟ್ಟನು ॥೧೦-೧೧॥

ಅನಂತರ, ವರುಣನು ನಿನಗೆ ವರವನ್ನು ಕೊಟ್ಟನು ಏನೆಂದರೆ,-ಇವನಿಗೆ ನೂರಾವೃತ್ತಿ ಹತ್ತುಸಾವಿರ ವರ್ಷ ಕಳೆದರೂ ಮೃತ್ಯುವುಂಟಾಗುವುದಿಲ್ಲ, ನನ್ನ ಪಾಶದಿಂದಲೂ ಇವ

ವರ್ಷಾಯುತಶತೇನಾಪಿ ಮತ್ಪ್ರಾಣಾದುದಕಾದಪಿ ।
ನ ವಧ್ಯೋ ವಾಯುಪುತ್ರೋಯಂ ಇತ್ಯಾಹ ವರುಣೋ ಬಲೀ ॥೧೨॥
ಯಮೋ ದದಾವರೋಗತ್ವಂ ಅವಧ್ಯತ್ವಂ ಚ ನಿತ್ಯಕಃ ।
ಸದಾ ತಸ್ಯ ವರಂ ತುಷ್ಟೋ ಹ್ಯಪಿಷಾವಂ ಚ ಸಂಯುಗೇ ॥೧೩॥
ಗದೇಯಂ ಮಾಮಿಕಾ ನೈನಂ ಸಂಯುಗೇಷು ವಧಿಷ್ಯತಿ ।
ಇತ್ಯೇವಂ ವರದಃ ಪ್ರಾಹ ತದಾ ಹ್ಯೇಕಾಕ್ಷಪಿಙ್ಗಳಃ ॥೧೪॥
ಮತ್ತೋಽಪಿ ಮದಾಯುಧಾನಾಂ ಚ ಹ್ಯವಧ್ಯೋಯಂ ಭವಿಷ್ಯತಿ ।
ಇತ್ಯೇವಂ ಕಜ್ಜರೇಣಾಪಿ ದತ್ತೋಸ್ಯ ಪರಮೋ ವರಃ ॥೧೫॥
ಸರ್ವೇಷಾಂ ಬ್ರಹ್ಮದಣ್ಡಾನಾಂ ಅವಧ್ಯೋಯಂ ಭವಿಷ್ಯತಿ ।
ದೀರ್ಘಾಯುಷ್ಮಾ ಮಹಾತ್ಮಾ ಚ ಇತಿ ಬ್ರಹ್ಮಾಬ್ರವೀದ್ವಚಃ ॥೧೬॥
ವಿಶ್ವಕರ್ಮಾ ತು ದೃಷ್ಟ್ವಾ ತ್ವಾಂ ಬಾಲಸೂರ್ಯೋಪಮಂ ವಿಭುಮ್ ।
ಶಿಲ್ಪಿನಾಂ ಪ್ರವರಃ ಪ್ರಾಹ ವರಂ ತವ ಮಹಾಮತಿಃ ॥೧೭॥
ನಿರ್ಮಿತಾನಿ ದೇವಾನಾಂ ಆಯುಧಾನಿ ಮಹಾಕಪೇ ।
ತೇಷಾಂ ಸಂಗ್ರಾಮಕಾಲೇಷು ಹ್ಯವಧ್ಯಸ್ತ್ವಂ ಭವಿಷ್ಯಸಿ ॥೧೮॥

ದಲೂ ಈ ವಾಯುಪುತ್ರನು ವಧ್ಯನಾಗುವುದಿಲ್ಲ ಹೀಗಂದು, ಆ ಬಲಿಷ್ಠನಾದ ವರುಣನು ಹೇಳಿದನು ॥೧೨॥

ಆಮೇಲೆ, ಯಮನು ಸರ್ವದಾ ಆರೋಗತ್ವವನ್ನೂ ಅವಧ್ಯತ್ವವನ್ನೂ ಕೊಟ್ಟನು, ಮತ್ತು, ಅತ್ಯಂತ ಸಂತುಷ್ಟನಾಗಿ, ಯುದ್ಧದಲ್ಲಿ ಆಯಾಸವುಂಟಾಗದಿರಲೆಂದೂ ವರವನ್ನು ಕೂಟ್ಟನು ಇದೂ ಅಲ್ಲದೆ, ಅಲ್ಲಿ ನನ್ನ ಗದೆಯು ಇವನನ್ನು ಯುದ್ಧದಲ್ಲಿ ಹೂಡೆಯುವುದಿಲ್ಲವಂಬುದಾಗಿಯೂ, ವರಪ್ರದನಾದ ಆ ಯಮನು ವರವನ್ನು ಕೊಟ್ಟನು ॥೧೩-೧೪॥

ಆ ಬಳಿಕ, ನನ್ನಿಂದಲೂ ನನ್ನ ಆಯುಧಗಳಿಂದಲೂ ಇವನು ವಧ್ಯನಾಗದಿರುವನೆಂದು, ಶ್ರೀ ಪರಮೇಶ್ವರನೂ ಸರ್ವೋತ್ತಮವಾದ ವರವನ್ನು ಕೊಟ್ಟನು ॥೧೫॥

ಇವನು ಸಮಸ್ತವಿಧವಾದ ಬ್ರಹ್ಮದಂಡಗಳಿಗೂ ಅವಧ್ಯನಾಗಿಯೂ ದೀರ್ಘಾಯುಷ್ಮಂತನಾಗಿಯೂ ಮಹಾತ್ಮನಾಗಿಯೂ ಇರುವನೆಂದು, ಬ್ರಹ್ಮದೇವನು ಹೇಳಿದನು ॥೧೬॥

ಅಂ ! ಹನುಮಂತನೆ ! ಹೀಗೆ ಇವರೆಲ್ಲರೂ ವರಗಳನ್ನು ಕೊಡುತಿರುವ ಸಮಯದಲ್ಲ, ಎಲ್ಲಿಗಳಲ್ಲೆಲ್ಲ ಪರಿಷ್ಕರನಾದ ಮಹಾಮತಿಯಾದ ವಿಶ್ವಕರ್ಮನು, ಬಾಲಸೂರ್ಯನಿಗೆ ಸಮಾನನಾಗಿ ಪ್ರಜ್ವಲಿಸುತಿರುವ ಬಾಲಕನಾದ ನಿನ್ನನ್ನು ನೋಡಿ, ' ಎಲೈ ಮಹಾಕಪಿಯ ! ನಾನು ಇದುವರೆಗೆ ದೇವತೆಗಳಿಗೆ ಯಾವಯಾವ ಆಯುಧಗಳನ್ನು ನಿರ್ಮಿಸಿಕೊಟ್ಟಿರುವನೋ, ಅವುಗಳಲ್ಲೊಂದರಿಂದಲೂ ನಿನಗೆ ಕೊಲೆಯಾಗಬೇಡ. ' ಎಂದು ಹೇಳಿದನು ॥೧೭-೧೮॥

ತತಃ ಸುರಾಣಾಂ ತು ವರೈಃ ದೃಷ್ಟ್ವಾ ತ್ವಾಂ ಸಮಲಂಕೃತಮ್ ।
ಚತುರ್ಮುಖಸ್ತುಷ್ಟಮನಾಃ ವಾಯುಮಾಹ ಜಗದ್ಗುರುಃ ॥೧೯॥

ಅಮಿತ್ರಾಣಾಂ ಭಯಕರೋ ಮಿತ್ರಾಣಾಮಭಯಂಕರಃ ।
ಅಜಯ್ಯೋ ಭವಿತಾ ಪುತ್ರಃ ತವ ಮಾರುತ ಮಾರುತಃ ॥೨೦॥

ರಾವಣೋತ್ಸಾದನಾರ್ಥಾಸಿ ರಾಮಪ್ರೀತಿಕರಾಣಿ ಚ ।
ರೋಮಹರ್ಷಕರಾಣ್ಯೇವ ಕರ್ತಾ ಕರ್ಮಾಣಿ ಸಂಯುಗೇ ॥೨೧॥

ಏವಮುಕ್ತ್ವಾ ತವಾಮನ್ತ್ರ್ಯ ಮಾರುತಂ ತ್ವಮರಾಸ್ತತಃ ।
ಯಥಾಗತಂ ಯಯುಃ ಸರ್ವೇ ಪಿತಾಮಹಪುರೋಗಮಾಃ ॥೨೨॥

ತತಃ ಪೂಷೋದಯಂ ಪ್ರಾಪ್ತೋ ವಾಯುರ್ವಾಯುಮಮುಞ್ಚತ ।
ಯಥಾಪೂರ್ವಂ ಚರನ್ತಿ ಸ್ಮ ಸರ್ವಲೋಕೇಷು ದೇಹಿನಃ ॥೨೩॥

ಏವಂ ತೇ ಕಥಿತಂ ಜನ್ಮ ಸಫಲಂ ಕಲ್ಮಷಾಪಹಮ್ ॥೨೪॥

ತವ ಶೃಣ್ವನ್ತಿ ಯೇ ಜನ್ಮ ಮಹಾಪಾತಕನಾಶನಮ್ ।
ತವ ಪ್ರಸಾದಾತ್ ಸರ್ವೇಷಾಂ ಭವಿಷ್ಯನ್ತಿ ಮನೋರಥಾಃ ।

ಆಮೇಲೆ, ಹೀಗೆ ಸಮಸ್ತ ದೇವತೆಗಳೂ ಕೊಟ್ಟ ವರಗಳಿಂದ ಅಲಂಕೃತನಾಗಿರುವ ನಿನ್ನನ್ನು ನೋಡಿ, ಲೋಕಗುರುವಾದ ಚತುರ್ಮುಖನು ಸಂತುಷ್ಟನಾಗಿ, ನಿನ್ನ ತಂದೆಯಾದ ವಾಯುವನ್ನು ಕುರಿತು 'ಅಯ್ಯಾ! ವಾಯುದೇವನೆ! ನಿನ್ನ ಮಗನಾದ ಈ ಮಾರುತಿಯು, ಶತ್ರುಗಳಿಗೆ ಭಯ ಜನಕನಾಗಿಯೂ, ಮಿತ್ರರಿಗೆ ಭಯನಿವಾರಕನಾಗಿಯೂ, ಯಾರಿಂದಲೂ ಜಯಿಸಲು ಅಸಾಧ್ಯನಾ ಗಿಯೂ ಆಗುವನು ಇವನು ಯುದ್ಧರಂಗದಲ್ಲಿ ರಾವಣನಿಗೆ ಕ್ಷಯಕರಗಳಾಗಿಯೂ ರಾಮನಿಗೆ ಪ್ರೀತಿಕರಗಳಾಗಿಯೂ ಸರ್ವರಿಗೂ ರೋಮಹರ್ಷವನ್ನುಂಟುಮಾಡತಕ್ಕವಾಗಿಯೂ ಇರುವ ಕರ್ಮಗಳನ್ನು ಮಾಡುವನು' ಎಂದು ಹೇಳಿದನು ॥೧೯-೨೧॥

ಅಯ್ಯಾ! ಹನುಮಂತನೆ! ಆಗ ಹೀಗೆ ಹೇಳಿ, ನಿನ್ನ ತಂದೆಯಾದ ಮಾರುತನನ್ನೂ ನಿನ್ನನ್ನೂ ಕೇಳಿಕೊಂಡು, ಬ್ರಹ್ಮ ಮೊದಲಾದ ಸಮಸ್ತ ದೇವತೆಗಳೂ ಯಥಾಗತವಾಗಿ ತೊರಟು ಹೋದರು ॥೨೨॥

ಅನಂತರ, ಸೂರ್ಯನು ಉದಯವಾಹೊಂದಿದನು ವಾಯುವು ವಾಯುವನ್ನು ಬಿಟ್ಟನು, ಸಮಸ್ತ ಲೋಕದಲ್ಲಿಯೂ ಸಮಸ್ತ ಪ್ರಾಣಿಗಳೂ ಯಥಾಪೂರ್ವಕವಾಗಿ ಸಂಚರಿಸಲುಪಕ್ರಮಿಸಿ ದುವು ॥೨೩॥

ಆಂಜನೇಯ! ಇದೋ ಹೀಗೆ ನಿನ್ನ ಉತ್ಪತ್ತಿಯನ್ನು ಹೇಳಿರುವೆನು. ಇದು ಸರ್ವರಿಗೂ ಸಮಸ್ತ ಫಲಗಳನ್ನೂ ಕೊಡುವುದು, ಸಕಲ ಪಾಪಗಳನ್ನೂ ನಿವಾರಿಸುವುದು ಹೀಗೆ ಮಹಾಪಾತಕ ನಿವಾರಕವಾಗಿರುವ ನಿನ್ನ ಜನ್ಮವನ್ನು ಯಾರು ಕೇಳುವರೋ, ಅವರಿಗೆ ನಿನ್ನ ಅನುಗ್ರಹದಿಂದ

ಭೂತಪ್ರೇತಪಿಶಾಚಾನಾಂ ಭವೇದುಚ್ಚಾಟನಂ ಕ್ರಮಾತ್ ॥೨೫॥
ಇತ್ಯುಕ್ತ್ವಾ ರಾಘವಃ ಶ್ರೀಮಾ೯ ಸೀತಾಪ್ರತ್ಯಯಕಾರಣಾತ್ ।
ದದೌ ರಾಮಃ ಸ್ವನಾಮಾಙ್ಕಂ ರತ್ನಬದ್ಧಾಙ್ಗುಳೀಯಕಮ್ ॥೨೬॥
ದತ್ವಾ ರಾಮಃ ಕಪಿವರಂ ಭಾವಿಕಾರ್ಯಾರ್ಥತತ್ತ್ವವಿತ್ ।
ಹನೂಮದ್ಧಿತಮನ್ವಿಚ್ಛ೯ ಪುನರ್ವಚನಮಬ್ರವೀತ್ ॥೨೭॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಹನೂಮದ್ವರದಾನ ಮುದ್ರಿಕಾಪ್ರದಾನ
ಕಥನಂನಾಮ ತ್ರಯೋದಶಃ ಸರ್ಗಃ



ಸಮಸ್ತ ಸುಸೋರಥಗಳೂ ಸಿದ್ಧಿಸುವುವು, ಭೂತ ಪ್ರೇತ ಪಿಶಾಚಾದಿಗಳೂ ಕೂಡ ಕ್ರಮೇಣ ಉಚ್ಚಾಟನ ಹೊಂದುವುವು. (ಎಂದು ಶ್ರೀರಾಮನು ಹನುಮಂತನಿಗ ಹೇಳಿದನು) ॥೨೪-೨೫॥

ಹೀಗೆಂದು ಹೇಳಿ, ಮಹಾಲಕ್ಷ್ಮೀಸಂಪನ್ನನಾದ ರಘುಕುಲತಿಲಕನಾದ ಶ್ರೀರಾಮಭದ್ರನು, ಸೀತೆಗೆ ನಂಬುಗ ಹುಟ್ಟುವುದಕ್ಕೋಸ್ಕರವಾಗಿ, ತನ್ನ ನಾಮಾಂಕಿತವಾಗಿರುವ ದಿವ್ಯವಾದ ಉಂಗುರವನ್ನು ಹನುಮಂತನ ಕೈಗ ಕೊಟ್ಟನು ॥೨೬॥

ಅಂಗುಳೀಯಕವನ್ನು ಕೊಟ್ಟು, ಭವಿಷ್ಯತ್ಕಾರ್ಯ ಗೌರವವನ್ನು ತಿಳಿದವನಾಗಿ ಬಲ್ಲವನಾದ ಶ್ರೀರಾಮನು, ಹನುಮಂತನಿಗೆ ಹಿತವುಂಟಾಗಲೆಂದು ಬಯಸಿದವನಾಗಿ, ಆ ಕಪಿನಾಯಕನನ್ನು ಕುರಿತು ಮತ್ತೆ ಈ ಮಾತನ್ನು ಹೇಳಿದನು ॥೨೭॥

ಇದು ಕಿಷ್ಕಿಂಧಾಕಾಂಡದಲ್ಲಿ ಹನೂಮದ್ವರಪ್ರದಾನ ಮುದ್ರಿಕಾಪ್ರದಾನಾದಿ ಕಥನವೆಂಬ
ಹದಿಮೂರನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಚತುರ್ದಶಃ ಸರ್ಗಃ.



ಶ್ರೀ ರಾಮಉವಾಚ

ಲಙ್ಕಾಯಾಂ ರಾವಣಸಮಾಃ ಬಹವಃ ಸನ್ತಿ ರಾಕ್ಷಸಾಃ ।
ತೈಃ ಸಾಕಂ ಭವತೋ ಯುದ್ಧಂ ಭವಿಷ್ಯತಿ ಗತೇ ತ್ವಯಿ ॥೧॥
ತದರ್ಥಂ ತವ ದಾಸ್ಯಾಮಿ ವಜ್ರಪಞ್ಜರನಾಮಕಮ್ ।
ಮದೀಯಂ ಕವಚಂ ಯತ್ ತತ್ ಸುತೀಕ್ಷ್ಣಾಯಾಹ ಕುಮ್ಭಜಃ ॥೨॥
ಯಸ್ಯ ಸ್ಮರಣಮಾತ್ರೇಣ ವಜ್ರಾಙ್ಗೋ ಮಾನವೋ ಭವೇತ್ ।
ಬ್ರಹ್ಮರಾಕ್ಷಸಭೂತಾನಿ ಪಿಶಾಚಾಯಾನ್ತಿ ದೂರತಃ ॥೩॥
ಅಗಸ್ತ್ಯ ಋಷಿರಸ್ಯಾಸೀತ್ ಛನ್ದೋನುಷ್ಟುಪ್ ಪ್ರಕೀರ್ತಿತಮ್ ।
ದೇವತಾಹಂ ಸಾಸಿತೂಣಬಾಣಕೋದಣ್ಡಭೃತ್ ಸ್ವಯಮ್ ॥೪॥
ತಾರೋ ಬೀಜಂ ನತಿಃ ಶಕ್ತಿಃ ಫಲಂ ಸ್ವೇಷ್ಟಾರ್ಥಉಚ್ಯತೇ ।
ಷಡ್ದೀರ್ಘಸ್ವರಯುಗ್ವಹ್ನಿಬೀಜೇನ ಸ್ಯಾತ್ ಷಡಙ್ಗಕಮ್ ॥೫॥

ಕಿಷ್ಕಿನ್ಧಾಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು



ಆಗ ಶ್ರೀರಾಮನು ಹನುಮಂತನಿಗೆ ಹೇಳಿದುದೇನೆಂದರ —

ಅಯ್ಯಾ ! ಹನುಮಂತ ! ಲಂಕಾಪಟ್ಟಣದೊಳಗೆ, ರಾವಣನಿಗ ಸಮಾನರಾದ ಅನೇಕ ಮಂದಿ ರಾಕ್ಷಸರುವರು ನೀನು ಇಲ್ಲಿಂದ ಹೋದಮೇಲೆ, ಅವರೊಡನೆ ನಿನಗೆ ಯುದ್ಧವು ಸಂಭವಿಸುವುದು ॥೧॥

ಆಗ ನಿನಗೆ ಕ್ಷೇಮವುಂಟಾಗುವುದಕ್ಕಾಗಿ, ಹಿಂದೆ ಅಗಸ್ತ್ಯ ಮುನಿಯಿಂದ ಸುತೀಕ್ಷ್ಣನಿಗೆ ಉಪದೇಶಿಸಲ್ಪಟ್ಟಿರುವ, ವಜ್ರಪಂಜರನಾಮಕವಾದ ನನ್ನ ಕವಚವನ್ನು ನಿನಗೆ ಉಪದೇಶಿಸುವೆನು ॥೨॥

ಈ ವಜ್ರಪಂಜರ ಕವಚದ ಸ್ಮರಣಮಾತ್ರದಿಂದಲೇ, ಮನುಷ್ಯನು ವಜ್ರಕಾಯನಾಗುವನು , ಬ್ರಹ್ಮರಾಕ್ಷಸಗಳೂ ಭೂತಗಳೂ ಪಿಶಾಚಗಳೂ ದೂರವಾಗಿ ಓಡಿಹೋಗುವುವು ॥೩॥

ಈ ವಜ್ರಕವಚಕ್ಕೆ, ಅಗಸ್ತ್ಯನೇ ಋಷಿಯು, ಅನುಷ್ಟುವು ಛಂದಸ್ಸು, ಖಡ್ಗ ತೂಣೀರ ಬಾಣ ಧನುರ್ಧರನಾಗಿರುವ ನಾನೇ ದೇವತೆಯು, ಓಂಕಾರದ ತಾರಸ್ವರವೇ ಬೀಜವು, ನಮಃ ಎಂಬುದೇ ಶಕ್ತಿಯು. ಆಸರವರ ಇಷ್ಟಾರ್ಥವೇ ಫಲವು ದೀರ್ಘದಿಂದಲೂ ಅನುಸ್ವಾರದಿಂದಲೂ ಯುಕ್ತವಾಗಿರುವ ಅಗ್ನಿಬೀಜವಾದ ' ರ ' ಎಂಬ ಅಕ್ಷರದಿಂದ (ರಾಂ ರೀಂ ಇತ್ಯಾದಿ) ಷಡಂಗನ್ಯಾಸಗಳು ಏರ್ಪಟ್ಟಿರುವುವು ॥೪-೫॥

ನಮಃ ಕೋದಂಡಹಸ್ತಾಯ ಸನ್ಧೀಕೃತಶರಾಯ ಚ ।
ದಣ್ಡಿತಾಖಿಲದೈತ್ಯಾಯ ಭಕ್ತದುಃಖಾರ್ತಿಹಾರಿಣೇ ॥೬॥

ಧ್ಯಾತ್ವೈವಂ ಮಾಂ ವೀರರೂಪಂ ದುಷ್ಟಾನಾಮತಿಭೀಷಣಮ್ ।
ಭಕ್ತಾಭಯಪ್ರದಾತಾರಂ ಜಪೇನ್ಮತ್ಕವಚಂ ಶುಚಿಃ ॥೭॥

ಶ್ರೀರಾಮಃ ಪಾತು ಮೇ ಮೂರ್ಧ್ನಿ ತತ್ಪೂರ್ವಂ ರಘುವಂಶಜಃ ।
ದಕ್ಷಿಣೇ ಮೇ ರಘುಪತಿಃ ಪಶ್ಚಿಮೇ ಪಾತು ರಾಘವಃ ॥೮॥

ಉತ್ತರೇ ಮೇ ಹೃಷೀಕೇಶಃ ಫಾಲಂ ದಶರಥಾತ್ಮಜಃ ।
ಭ್ರುವೌ ದೂರ್ವಾದಳಶ್ಯಾಮಃ ತಯೋರ್ಮಧ್ಯಂ ಜನಾರ್ದನಃ ॥೯॥

ನೇತ್ರಂ ಮೇ ಪಾತು ರಾಜೇನ್ದ್ರೋ ನೇತ್ರೇ ರಾಜೀವಲೋಚನಃ ।
ಘ್ರಾಣೌ ಮೇ ಪಾತು ರಾಜರ್ಷಿಃ ಗಣ್ಡೌ ಮೇ ಜಾನಕೀಪತಿಃ ॥೧೦॥

ಕರ್ಣಮೂಲೇ ಪರಧ್ವಂಸೀ ತಾಲೂ ಮೇ ರಘುವಲ್ಲಭಃ ।
ಜಿಹ್ವಾಂ ಮೇ ವಾಕ್ಪತಿಃ ಪಾತು ದನ್ತಾವಳೀ ರಘೂತ್ತಮಃ ॥೧೧॥

ಓಷ್ಠೌ ಶ್ರೀರಾಮಚನ್ದ್ರೋ ಮೇ ಮುಖಂ ಪಾತು ಪರಾತ್ಪರಃ ।
ಜ್ಞಾನೇನ್ದ್ರಿಯಾಣಿ ಮೇ ಪಾತು ರಾಮಚನ್ದ್ರಸ್ತು ಸರ್ವದಾ ॥೧೨॥

ಹೀಗ ಅಂಗನ್ಯಾಸ ಕರನ್ಯಾಸಗಳವರೆಗೂ ಆದಸಂತರ ಕೋದಂಡಹಸ್ತನಾಗಿ ಶರಸಂಧಾನಮಾಡಿಕೊಂಡು ನಿಂತಿರುವ ಸಕಲ ದೈತ್ಯ ನಿಕ್ಷಕನೂ ಭಕ್ತ ದುಃಖ ನಿವಾರಕನೂ ಆದ ಶ್ರೀರಾಮನಿಗ ನಮಸ್ಕಾರವ ' ಎಂದು, ವೀರರೂಪನಾಗಿಯೂ ದುಷ್ಟರಿಗೆ ಅತಿ ಭಯಂಕರನಾಗಿಯೂ ಭಕ್ತರಿಗೆ ಅಭಯಪ್ರದನಾಗಿಯೂ ಇರುವ ನನ್ನನ್ನು ಧಾ ನಮಾಡಿ, ಅತ್ಯಂತ ಶುಚಿಯಾಗಿ ನನ್ನ ಕವಚವನ್ನು ಜಪಿಸಬೇಕು ॥೬-೭॥

ಆ ಕವಚವಾವುದೆಂದರೆ, ಶ್ರೀರಾಮನು ನನ್ನ ತಿರಸ್ಸಿನಲ್ಲಿ ಕಾಪಾಡಲಿ, ರಘುವಂಶಜನು ಆ ತಿರಸ್ಸಿನ ಪೂರ್ವದಿಕ್ಕಿನಲ್ಲಿಯೂ, ರಘುಪತಿಯು ದಕ್ಷಿಣದಿಕ್ಕಿನಲ್ಲಿಯೂ, ರಾಘವನು ಪಶ್ಚಿಮ ದಿಕ್ಕಿನಲ್ಲಿಯೂ, ಹೃಷೀಕೇಶನು ಉತ್ತರದಿಕ್ಕಿನಲ್ಲಿಯೂ ರಕ್ಷಿಸಲಿ ದಶರಥಪುತ್ರನು ಫಾಲ (ಹಣೆ) ವನ್ನೂ, ದೂರ್ವಾದಳಶ್ಯಾಮನು ಹುಬ್ಬುಗಳನ್ನೂ, ಜನಾರ್ದನನು ಭ್ರೂಮಧ್ಯವನ್ನೂ ರಕ್ಷಿಸಲಿ ॥

ರಾಜೇಂದ್ರನು ನನ್ನ ಕಿವಿಗಳನ್ನೂ, ರಾಜೀವಲೋಚನನು ನೇತ್ರಗಳನ್ನೂ ರಕ್ಷಿಸಲಿ. ರಾಜರ್ಷಿಯು ನಾಸಿಕೆಯನ್ನೂ, ಜಾನಕೀಪತಿಯು ಗಂಡಸ್ಥಲಗಳನ್ನೂ ರಕ್ಷಿಸಲಿ ॥೮-೧೦॥

ಪರಧ್ವಂಸಿಯು ನನ್ನ ಕರ್ಣಮೂಲಗಳನ್ನೂ, ರಘುವಲ್ಲಭನು ತಾಲುಗಳನ್ನೂ, ವಾಕ್ಪತಿಯು ನನ್ನ ಜಿಹ್ವೆಯನ್ನೂ, ರಘೂತ್ತಮನು ದಂತಪಂಕ್ತಿಯನ್ನೂ ರಕ್ಷಿಸಲಿ ॥೧೧॥

ಶ್ರೀರಾಮಚಂದ್ರನು ನನ್ನ ಓಷ್ಠಗಳನ್ನೂ, ಪರಾತ್ಪರನು ಮುಖವನ್ನೂ ರಕ್ಷಿಸಲಿ, ರಾಮಚಂದ್ರನು ಸರ್ವದಾ ನನ್ನ ಜ್ಞಾನೇಂದ್ರಿಯಗಳನ್ನು ರಕ್ಷಿಸಲಿ ॥೧೨॥

ಕರ್ಣೌ ಪಾತು ಜಗದ್ವನ್ದ್ಯಃ ಸ್ಕನ್ಧೌ ಮೇ ರಾವಣಾನ್ತಕಃ ।
ಹನೂ ಬಾಣಧರಃ ಪಾತು ಭುಜೌ ಮತ್ತಾರಿಮರ್ದನಃ ॥೧೩॥
ಸರ್ವಾಙ್ಗಾಜ್ಗುಳಿಪರ್ವಾಣಿ ಹಸ್ತೌ ಮೇ ರಾವಣಾನ್ತಕಃ ।
ಕಕ್ಷೌ ಮೇ ಪಾತು ಕಾಕುತ್ಸ್ಥಃ ಪಾತು ಮೇ ಹೃದಯಂ ಹರಿಃ ॥೧೪॥
ಸ್ತನೌ ಸೀತಾಪತಿಃ ಪಾತು ಜಠರಂ ಜಾಮದಗ್ನ್ಯಜಿತಃ ।
ಮಧ್ಯಂ ದಾಶರಥಿಃ ಪಾತು ನಾಭಿಂ ಮೇ ರಘುವಲ್ಲಭಃ ॥೧೫॥
ಕೌಸಲ್ಯೇಯಃ ಕಟೀ ಪಾತು ಪೃಷ್ಠಂ ದುರ್ಗಾವಿನಾಶನಃ ।
ಗುಹ್ಯಂ ಪಾತು ಹೃಷೀಕೇಶಃ ಸಕ್ಥನೀ ಸತ್ಯವಿಕ್ರಮಃ ॥೧೬॥
ಊರೂ ಪಾತ್ಯರ್ಘ್ಯಧರಂ ಪಾತು ಜಾನುನೀ ಹನುಮತ್ಪ್ರಿಯಃ ।
ಜಙ್ಘೇ ಪಾತು ಜಗದ್ವನ್ದ್ಯಃ ಪಾದೌ ಮೇ ಪಾತು ವಾಮನಃ ॥೧೭॥
ಸರ್ವಾಙ್ಗಂ ಪಾತು ಮೇ ವಿಷ್ಣುಃ ಸರ್ವಸನ್ಧಿಮನಾಮಯಃ ।
ಜಾನಕೀವಲ್ಲಭಃ ಪಾತು ಶಜ್ಞಾದಿಭ್ಯೋ ವಿಷಯಾಸಪಿ ॥೧೮॥
ಪೃಥಿವ್ಯಾದೀನಿ ಭೂತಾನಿ ಮತ್ಸಮ್ಬನ್ಧೀನಿ ಯಾನಿ ಚ ।
ರೋಮಕೂಪಾನ್ಯಶೇಷಾಣಿ ಪಾತು ಸುಗ್ರೀವರಾಜ್ಯದಃ ॥೧೯॥

ಜಗದ್ವಂದ್ಯನು ನನ್ನ ಕಂಠವನ್ನೂ, ರಾವಣಾಂತಕನು ಭುಜಶಿರಸ್ಸುಗಳನ್ನೂ, ಬಾಣಧರನು ಹನುಪ್ರದೇಶಗಳನ್ನೂ, ಮತ್ತಾರಿಮರ್ದನನು ಭುಜಗಳನ್ನೂ ರಕ್ಷಿಸಲಿ ॥೧೩॥

ರಾವಣಾಂತಕನು ನನ್ನ ಸಮಸ್ತಪಾದ ಅಂಗುಷ್ಠಪರ್ವ(ಪರುಷಗಿಣ್ಣು)ಗಳನ್ನೂ ಹಸ್ತಗಳನ್ನೂ ರಕ್ಷಿಸಲಿ ಕಾಕುತ್ಸ್ಥನು ನನ್ನ ಪಕ್ಷಗಳನ್ನೂ, ಹರಿಯು ನನ್ನ ಹೃದಯವನ್ನೂ ರಕ್ಷಿಸಲಿ ॥

ಸೀತಾಪತಿಯು ಸ್ತನಗಳನ್ನೂ, ಜಾಮದಗ್ನ್ಯಜೇತೃವು ಜಠರವನ್ನೂ, ದಾಶರಥಿಯು ಮಧ್ಯಪ್ರದೇಶವನ್ನೂ, ರಘುವಲ್ಲಭನು ನನ್ನ ನಾಭಿಯನ್ನೂ ರಕ್ಷಿಸಲಿ ॥೧೫॥

ಕೌಸಲ್ಯಾಪುತ್ರನು ನನ್ನ ಕಟಿಪ್ರದೇಶವನ್ನೂ, ದುರ್ಗಾವಿನಾಶನನು ಪೃಷ್ಠಭಾಗ(ಬನ್ನು)ವನ್ನೂ ರಕ್ಷಿಸಲಿ ಹೃಷೀಕೇಶನು ಗುಹ್ಯಪ್ರದೇಶವನ್ನೂ, ಸತ್ಯವಿಕ್ರಮನು ಸಕ್ಥಿಗಳನ್ನೂ ರಕ್ಷಿಸಲಿ ॥೧೬॥

ರಾಘ್ಯರ್ಘ್ಯಧರನು ಊರುಗಳನ್ನೂ, ಹನುಮತ್ಪ್ರಿಯನು ಜಾನುಗಳನ್ನೂ ರಕ್ಷಿಸಲಿ. ಜಗದ್ವಂದ್ಯನು ಜಂಘಗಳನ್ನು ರಕ್ಷಿಸಲಿ. ವಾಮನನು ನನ್ನ ಪಾದಗಳನ್ನು ರಕ್ಷಿಸಲಿ ॥೧೭॥

ವಿಷ್ಣುವು ನನ್ನ ಸರ್ವಾಂಗಗಳನ್ನೂ, ಅನಾಮಯನು ಸಮಸ್ತ ಸಂಧಿಪ್ರದೇಶಗಳನ್ನೂ ರಕ್ಷಿಸಲಿ ಜಾನಕೀವಲ್ಲಭನು ನನ್ನ ಶಜ್ಞಾದಿವಿಷಯಗಳನ್ನೆಲ್ಲ ರಕ್ಷಿಸಲಿ ॥೧೮॥

ಸುಗ್ರೀವರಾಜ್ಯ ಪ್ರದಾತನು, ನನಗೆ ಸಂಬಂಧಿಸಿದ ಪೃಥಿವ್ಯಾದಿ ಸಮಸ್ತ ಭೂತಗಳನ್ನೂ ಸಕಲ ರೋಮಕೂಪಗಳನ್ನೂ ರಕ್ಷಿಸಲಿ ॥೧೯॥

ವಾಙ್ಮನೋಬುದ್ಧ್ಯಹಙ್ಕಾರಜ್ಞಾನಾಜ್ಞಾನಕೃತಾನಿ ಚ ।
ಜನ್ಮಾನ್ತರಕೃತಾನೀಹ ಪಾಪಾನಿ ವಿವಿಧಾನಿ ಚ ॥೦೦॥
ತಾನಿ ಸರ್ವಾಣಿ ದಗ್ಧ್ವಾವ್ಯಾತ್ ಹರಕೋಪದಂಷ್ಟ್ರಾಖಣ್ಡನಃ ।
ಪಾತು ಮಾಂ ಸರ್ವತೋ ರಾಮಃ ಶಾರ್ಙ್ಗಬಾಣಧರಃ ಸದಾ ॥೦೧॥
ಇತಿ ತೇ ರಾಮಚನ್ದ್ರಸ್ಯ ಕವಚಂ ವಜ್ರಸಂಜ್ಞಿತಮ್ ।
ಗುಹ್ಯಾದ್ಗುಹ್ಯತಮಂ ನಿತ್ಯಂ ಹನೂಮರ್ಕ ಕಥಿತಂ ಮಯಾ ॥೦೨॥
ಯಃ ಪಠೇಚ್ಛೃಣುಯಾದ್ವಾಪಿ ಶ್ರಾವಯೇದ್ವಾ ಸಮಾಹಿತಃ ।
ಸ ಯಾತಿ ಪರಮಂ ಸ್ಥಾನಂ ರಾಮಚನ್ದ್ರಪ್ರಸಾದತಃ ॥೦೩॥
ಮಹಾಪಾತಕಯುಕ್ತೋ ವಾ ಗೋಘ್ನೋ ವಾ ಭ್ರೂಣಹಾ ತಥಾ ।
ಶ್ರೀರಾಮವಜ್ರಕವಚಸ್ಮರನಾಚ್ಛುದ್ಧಿಮಾಪ್ನುಯಾತ್ ॥೦೪॥
ಜ್ವರಾಪಸ್ಮಾರಕುಷ್ಠಾದಿವ್ಯಾಧಿಭಿಃ ಪೀಡಿತೋಪಿ ಸನ್ ।
ರವಿವಾರೇ ಜಲೇ ಸ್ಥಿತ್ವಾ ಜಪ್ತ್ವಾ ಶಾನ್ತಿಮವಾಪ್ನುಯಾತ್ ॥೦೫॥

— —

ವಾಕ್ಕು ಮನಸ್ಸು ಬುದ್ಧಿ ಅಹಂಕಾರಗಳಿಂದಲೂ, ಜ್ಞಾನಪೂರ್ವಕವಾಗಿಯೂ, ಅಜ್ಞಾನ ಪೂರ್ವಕವಾಗಿಯೂ ಈ ಜನ್ಮದಲ್ಲಿಯೂ-ಹಿಂದಣ ಜನ್ಮಗಳಲ್ಲಿಯೂ, ನಿನ್ನಿಂದ ಮಾಡಲ್ಪಟ್ಟ ನಾನಾ ವಿಧವಾದ ಯಾವ ಪಾಪಗಳಿರುವುವೋ, ಅವುಗಳನ್ನೆಲ್ಲ ದಹಿಸಿ, ಪರಕೋದಂಡಖಂಡನನು ನನ್ನನ್ನು ರಕ್ಷಿಸಲಿ ಧನುರ್ಬಾಣಧರನಾಗಿರುವ ಶ್ರೀರಾಮನು ನನ್ನನ್ನು ಸರ್ವದಾ ಸರ್ವಸ್ಥಳಗಳಲ್ಲಿಯೂ ರಕ್ಷಿಸಲಿ ॥೨೦-೨೧॥

ಅಯ್ಯಾ! ಹನುಮಂತನೆ! ಇದೋ ಈರೀತಿಯಾಗಿ ವಜ್ರಪಂಜರನಾಮಕವಾದ ರಾಮ ಕವಚವು ನಿನಗೆ ಉಪದೇಶಿಸಲ್ಪಟ್ಟಿರುವುದು, ಇದು ರಹಸ್ಯಗಳಲ್ಲೆಲ್ಲ ರಹಸ್ಯಭೂತನಾದುದು ಇದನ್ನು ಯಾವನು ಸಮಾಧಾನಚಿತ್ತದಿಂದ ಪಠಿಸುವನೋ, ಅಥವಾ ಯಾವನು ಇದನ್ನು ಶ್ರವಣ ಮಾಡುವನೋ, ಅವನು ರಾಮಚಂದ್ರನ ಅನುಗ್ರಹದಿಂದ ಲೋಕೋತ್ತರ ಶ್ರೇಯಸ್ಸನ್ನು ಪಡೆಯುವನು ॥೨೨-೨೩॥

ಮಹಾಪಾತಕಯುಕ್ತನಾದವನಾಗಲಿ, ಗೋಹತ್ಯಮಾಡಿದವನಾಗಲಿ, ಭ್ರೂಣಹತ್ಯಮಾಡಿದವನಾಗಲಿ, ಶ್ರೀರಾಮವಜ್ರಪಂಜರವನ್ನು ಪಠಿಸಿದರೆ ಪರಿಶುದ್ಧನಾಗುವನು ॥೨೪॥

ಜ್ವರ ಅಪಸ್ಮಾರ ಕುಷ್ಠ ಮೊದಲಾದ ವ್ಯಾಧಿಗಳಿಂದ ಪೀಡಿತನಾಗಿದ್ದರೂ, ಭಾನುವಾರದಲ್ಲಿ ನೀರಿನೊಳಗೆ ನಿಂತುಕೊಂಡು ಈ ಕವಚವನ್ನು ಜಪಿಸಿದರೆ, ಅವನಿಗ ಆ ರೋಗಗಳು ಶಾಂತವಾಗುವುವು ॥೨೫॥

ರಣೇ ಶತ್ರುಭಯೇ ಚೈವ ಭಯೇ ರಾಜಭಯೇ ತಥಾ |
ಧ್ಯಾತ್ವಾ ಶ್ರೀಮದ್ರಘುಪತಿಂ ಕ್ರುದ್ಧಮೈಂದ್ರರಥಸ್ಥಿತಮ್ ||೬೩||
ಶ್ರೀರಾಮವಜ್ರಕವಚಪರನಾದ್ವಿಜಯೀ ಭವೇತ್ |
ಆಯುರಾರೋಗ್ಯಮೈಶ್ವರ್ಯಂ ಭವೇತ್ ತಸ್ಯ ನ ಸಂಶಯಃ ||೬೪||

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಶ್ರೀರಾಮವಜ್ರಪಂಜರಕವಚಕಥನಂ
ನಾಮ ಚತುರ್ದಶಃ ಸರ್ಗಃ




ಯುದ್ಧರಂಗದಲ್ಲಾಗಲಿ, ಶತ್ರುಭಯದಲ್ಲಾಗಲ, ರೋಗಾದಿಭಯದಲ್ಲಾಗಲಿ, ರಾಜಭಯದಲ್ಲಾಗಲಿ, ಕ್ರೋಧಮುದ್ರೆಯಿಂದ ಇಂದ್ರನ ರಥದಲ್ಲಿ ಕುಳಿತಿರುವ ಶ್ರೀರಾಮನನ್ನು ಧ್ಯಾನಿಸಿ ಈ ವಜ್ರಪಂಜರಕವಚವನ್ನು ಪಠಿಸಿದರೆ, ಪುರುಷನು ಜಯಶಾಲಿಯಾಗುವನು, ಅವನಿಗೆ ಆಯುರಾರೋಗ್ಯೈಶ್ವರ್ಯಗಳೆಲ್ಲವೂ ಲಭಿಸುವುದು, ಇದರಲ್ಲಿ ಸಂಶಯವಿಲ್ಲ ||೬೩-೬೪||

ಇದು ಕಿಷ್ಕಿಂಧಾಕಾಂಡದಲ್ಲಿ ಶ್ರೀರಾಮವಜ್ರಪಂಜರಕವಚ ಕಥನವೆಂಬ
ಹದಿನಾಲ್ಕನೆಯ ಸರ್ಗವು




ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸಪ್ತದಶಃ ಸರ್ಗಃ.



ಶ್ರೀ ಶಿವ ಉವಾಚ

ಕವಚಂ ತೂಪವಿಶ್ಯೈವಂ ರಕ್ಷಾರ್ಥಂ ತಸ್ಯ ವರ್ಷ್ಮಣಃ ।
ಪುನರ್ಮಾರುತಿಮಾಹೂಯ ರಾಘವೋ ವಾಕ್ಯಮಬ್ರವೀತ್ ॥೧॥
ವಿಕ್ರಮಸ್ವ ಮಹಾಬಾಹೋ ವರ್ಧಯಸ್ವ ಸ್ವಕಂ ಬಲಮ್ ।
ಕೀರ್ತಿಂ ಲಭಸ್ವ ಯುದ್ಧೇಷು ಪ್ಲವಗರ್ಕ್ಷಗಣೇಷು ಚ ॥೨॥
ಶ್ರುತ್ವಾ ತ್ರಿರಾಮವಚನಂ ಹನೂಮಾನ್ ಮಾರುತಾತ್ಮಜಃ ।
ಸುಗ್ರೀವವ್ಯಾಪಿ ವಚನಂ ಮಾಸಾದಾಗಮನಂ ಪುನಃ ॥೩॥
ಅಮನ್ದಾನನ್ದಸನ್ದೋಹಃ ಕರ್ತುಂ ಕಾರ್ಯಂ ಮನೋ ದಧೇ ॥೪॥
ವ್ಯವಧಾನಂ ಮಾಸಮಾತ್ರಂ ನ ಸೇಹೇ ಮಾರುತಾತ್ಮಜಃ ।
ಶ್ರೀತಮರ್ಮಧ್ಯಾಹ್ನಕರ್ತವ್ಯಭೋಜನೇ ಮನುಜೋ ಯಥಾ ।
ಸಿಮಿಪಾರ್ಧೇನ ಕರ್ತವ್ಯೇ ಕಾರ್ಯೇ ವಿಘ್ನಮಿವಾಸ್ಮರತ್ ॥೫॥

ಕಿಷ್ಕಿಂಧಾಕಾಂಡದಲ್ಲಿ ಹದಿನಯ್ದನೆಯ ಸರ್ಗವು.



ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೆ ಪಾರ್ವತಿ ! ಹೀಗೆ ಆ ಹನುಮಂತನ ಶರೀರರಕ್ಷಣೆಗಾಗಿ ವಜ್ರಪಂಜರಕವಚವನ್ನುಪದೇಶಿಸಿ, ಪುನಃ ಅವನನ್ನು ಹತ್ತಿರಕ್ಕೆ ಕರೆದು, ಶ್ರೀರಾಮನು 'ಎಲೈ ಮಹಾಬಾಹುವೆ ! ನೀನು ನನಗಾಗಿ ಪರಾಕ್ರಮ ಮಾಡು ! ನಿನ್ನ ಬಲವನ್ನು ತೋರ್ಪಡಿಸು, ಯುದ್ಧರಂಗಗಳಲ್ಲಿ, ಸಮಸ್ತ ಕಪಿ ಋಕ್ಷಸಮೂಹಗಳ ಮಧ್ಯದಲ್ಲಿಯೂ ಶ್ರೇಷ್ಠನೆಂಬುದಾಗಿ ಕೀರ್ತಿಯನ್ನು ಪಡೆಯುವನಾಗು' ಎಂದು ಆಜ್ಞಾಪಿಸಿದನು ॥೧-೨॥

ಹೀಗೆ ಹೇಳುತ್ತಿರುವ ಶ್ರೀರಾಮನ ಮಾತನ್ನೂ, ಒಂದು ತಿಂಗಳೊಳಗಾಗಿ ಹಿಂದಿರುಗಿ ಬರಬೇಕೆಂದು ಹೇಳಿದ ಸುಗ್ರೀವನ ಮಾತನ್ನೂ ಕೇಳಿದವನಾಗಿ, ವಾಯುಪುತ್ರನಾದ ಹನುಮಂತನು, ಮಹಾನಂದಭರಿತನಾಗಿ, ಶ್ರೀರಾಮನ ಕಾರ್ಯವನ್ನು ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡನು ॥೩-೪॥

ಆಗ ಆ ಮಾರುತಪುತ್ರನು, ಮಧ್ಯಾಹ್ನದಲ್ಲಿ ಮಾಡಬೇಕಾದ ಭೋಜನಕ್ಕೆ ಮರುದಿನ ಬೆಳಗಿನಸರೆಗೂ ಅವಧಿಯನ್ನು ಮನುಷ್ಯನು ಸಹಿಸಲಾರದಿರುವಂತೆ, ಒಂದು ತಿಂಗಳಿನ ಅವಧಿಯನ್ನು ಸ್ವಲ್ಪವೂ ಸಹಿಸಲಿಲ್ಲ, ಒಂದು ಸಿಮಿಪಾರ್ಧದೊಳಗಾಗಿ ಮಾಡಬಹುದಾಗಿರುವ ಈ ಕೆಲಸದಲ್ಲಿ ಇಷ್ಟು ಹೆಚ್ಚು ಕಾಲದ ಅವಧಿಯನ್ನು ಕೊಟ್ಟಿರುವುದು ಒಂದು ವಿಘ್ನದಂತೆ ಅವನಿಗೆ ತೋರಿತು ॥೫॥

ಲಙ್ಕಾಮಧ್ಯಸ್ಥಿತಂ ಮೇನೇ ಸ್ವಮಾತ್ಮಾನಂ ಮರುತ್ಸುತಃ ॥೬॥
ಬ್ರಹ್ಮಾಣ್ಡಮಪಿ ದುರ್ಧರ್ಷಂ ಮುಷ್ಟಿಪ್ರಹಾತೈರ್ನಿಪಾತಯೇ ।
ಚತುರ್ದಿಕ್ಷು ಸಮುದ್ರಾಂಶ್ಚ ಪಾದಘಾತೇನ ಶೋಷಯೇ ॥೭॥
ಸುವೇಲಾದ್ರಿಸನೋಪೇತಂ ಲಙ್ಕಾಪ್ರಾಕಾರಶೋಭಿತಮ್ ।
ಕುಮ್ಭಕರ್ಣಾದಿಭಿರ್ವ್ಯಾಪ್ತಂ ರಾವಣೇನ್ದ್ರಜಿದಾದಿಭಿಃ ॥೮॥
ಸಮುತ್ಪಾಟ್ಯ ತ್ರಿಕೂಟಾದ್ರಿಂ ರಾಘವಾಯ ನಿವೇದಯೇ ।
ಪ್ರಭುಪ್ರಸನ್ನತಾಕಾಮೀ ಜಮ್ಬೂರಮಿವ ಯಾಚಕಃ ॥೯॥
ಇತ್ಯುಕ್ತ್ವಾ ಹನೂಮಾ೯ ಸರ್ವೈಃ ಸಂವೃತೋ ಹರಿಯೂಥಪೈಃ ।
ಕೃತ್ವಾ ಸ್ವಾನ್ತೇ ರಾಘವಸ್ಯ ಪಾದಯುಗ್ಮಮನನ್ಯಧೀಃ ।
ವಿಚೇತುಂ ದಕ್ಷಿಣಾಮಾಶಾಂ ಪ್ರಯಯೌ ರಾಘವಾಜ್ಞಯಾ ॥೧೦॥
ತತಃ ಸರ್ವೇ ಹರಿವರಾಃ ಸ್ವಾಂಸ್ವಾಂ ದಿಶಮತನ್ದ್ರಿತಾಃ ।
ವಿಜಿತ್ಯ ತತ್ರ ತೇ ಸೀತಾಂ ಅದೃಷ್ಟ್ವೈವಾಗತಾಃ ಪುನಃ ॥೧೧॥
ದಕ್ಷಿಣಾಶಾಂ ಗತಾವೀರಾಃ ಮಹಾಬಲಪರಾಕ್ರಮಾಃ ।

ಆಗ ಅವನು, ರಾಮಸುಗ್ರೀವರ ಸನ್ನಿಧಿಯಲ್ಲಿ ' ಅತಿದುರ್ಧರ್ಷವಾದ ಬ್ರಹ್ಮಾಂಡವನ್ನು ಬೇಕಾದರೂ ಮುಷ್ಟಿಪ್ರಹಾರದಿಂದ ಕೆಡುಪಬಲ್ಲೆನು, ನಾಲ್ಕು ದಿಕ್ಕುಗಳಲ್ಲಿಯೂ ಇರುವ ಸಮುದ್ರಗಳನ್ನಾದರೂ ನನ್ನ ಪಾದಘಾತದಿಂದ ಒಣಗಿಸಿಬಿಡುವನು, ಮತ್ತು, ಸುವೇಲಪರ್ವತ ಸನೇತವಾಗಿಯೂ-ಲಂಕಾಪ್ರಾಕಾರ ವಿರಾಜಿತವಾಗಿಯೂ ರಾವಣ ಕುಂಭಕರ್ಣ ಇಂದ್ರಜಿತು ಮೊದಲಾದವರಿಂದ ವ್ಯಾಪ್ತವಾಗಿಯೂ ಇರುವ-ತ್ರಿಕೂಟಪರ್ವತವನ್ನೇ ಬೇಕಾದರೂ ಕಿತ್ತು ಬಿಟ್ಟು, ಪ್ರಭುವಿನ ಪ್ರಸಾದವನ್ನು ಅಪೇಕ್ಷಿಸುವ ಯಾಚಕನು ಜಂಬೀರ (ಸಿಂಬಿ) ಫಲವನ್ನು ಅವನ ಮುಂದೆ ಸಮರ್ಪಿಸುವಂತೆ, ಶ್ರೀರಾಮಚಂದ್ರಪ್ರಭುವಿನ ಸನ್ನಿಧಿಯಲ್ಲಿ ಅದನ್ನು ತಂದು ಇಟ್ಟುಬಿಡುವೆನು ' ಎಂದು ಹೇಳಿ, ಸಮಸ್ತರಾದ ಕಪಿನಾಯಕರಿಂದಲೂ ಪರಿವೃತನಾಗಿ, ಅನನ್ಯಚಿತ್ತನಾಗಿ ಶ್ರೀ ರಾಮಚಂದ್ರನ ಪಾದಕಮಲವನ್ನು ತನ್ನ ಮನಸ್ಸಿನಲ್ಲಿ ಸ್ಮರಿಸುತ, ಶ್ರೀರಾಮನ ಆಜ್ಞೆಯಿಂದ ದಕ್ಷಿಣದಿಕ್ಕಿನಲ್ಲಿ ಸೀತಾದೇವಿಯನ್ನು ಹುಡುಕುವುದಕ್ಕಾಗಿ ಹೊರಟನು॥೬-೧೦॥

ಹೀಗೆ ಸಮಸ್ತ ಕಪಿಗಳೂ ಹೊರಟುಹೋದಬಳಿಕ, ಪೂರ್ವ ಪಶ್ಚಿಮೋತ್ತರ ದಿಕ್ಕುಗಳಿಗೆ ಹೋಗಿದ್ದ ಕಪಿನಾಯಕರು, ತಂತಮಗೆ ನಿಯಮಿತವಾಗಿದ್ದ ದಿಕ್ಕುಗಳನ್ನೆಲ್ಲ ಸಾವಧಾನವಾಗಿ ಹುಡುಕಿ, ಅಲ್ಲೆಲ್ಲೂ ಸೀತಾದೇವಿಯನ್ನು ಕಾಣದೆಯೇ ಹಿಂದಿರುಗಿ ಬಂದು ಸುಗ್ರೀವನ ಸನ್ನಿಧಿಯನ್ನು ಸೇರಿದರು ॥೧೧॥

ದಕ್ಷಿಣದಿಕ್ಕಿನಲ್ಲಿ ಹೋಗಿದ್ದ ಮಹಾವೀರರೂ ಮಹಾ ಬಲಶಾಲಿಗಳೂ ಆದ ಹನುಮಂತನೇ ಮೊದಲಾಗಿರುವ ಕಪಿನಾಯಕರಾದರೋ, ವೃಕ್ಷ ಗುಲ್ಮ ಲತೆಗಳಲ್ಲಿಯೂ ಕೂಡ ಸೀತೆಯನ್ನು

ಹನುಮತ್ಪ್ರಮುಖಾಃ ಸರ್ವೇ ಬಲವನ್ತಃ ಪವಙ್ಗಮಾಃ ॥೧೨॥
ತರುಗುಲ್ಮಲತಾದೀಂಶ್ಚ ವಿಚಿನ್ವನ್ತೋ ಮದೋತ್ಕಟಾಃ ।
ತತಸ್ತತೋ ಗತಾದೂರಂ ಕ್ಷುತ್ಪಿಪಾಸಾತುರಾಭೃಶಮ್ ।
ನಾಪಶ್ಯಂಸ್ತೇ ಫಲಂ ವಾಪಿ ಜಲಂ ವಾ ಬಿನ್ದುಮಾತ್ರಕಮ್ ॥೧೩॥
ಅಙ್ಗದಪ್ರಮುಖಾಃ ಸರ್ವೇ ಹನೂಮನ್ತಮಥಾಬ್ರುವ ॥೧೪॥
ಮಹಾವೇಗಬಲೋಪೇತ ಹನೂಮ ಮಾರುತಾತ್ಮಜ ।
ಕಪಯಃ ಕ್ಷುತ್ಪಿಪಾಸಾರ್ತಾಃ ಬಲವೇಗವಿವರ್ಜಿತಾಃ ।
ನ ಕ್ಷಮನ್ತೇ ಗತಿಂ ಕರ್ತುಂ ತತ್ರ ಬುದ್ಧಿರ್ವಿಚಾರ್ಯತಾಮ್ ॥೧೫॥
ಇತ್ಯುಕ್ತೋ ಹನುಮಾ ವೀರಃ ಪ್ರೋವಾಚ ಹರಿಯೂಥಪಾ ॥೧೬॥
ಸಮಾರೋಹನ್ತು ಮೇ ದೇಹಂ ರೋಮಚ್ಛಾಯಾಸು ಸರ್ವತಃ ।
ತಿಷ್ಠನ್ತು ಸುಖಿನಃ ಸರ್ವೇ ಪಥಿಶ್ರಮವಿವರ್ಜಿತಾಃ ।
ವಹನ್ನೇವ ಚ ಗಚ್ಛಾಮಿ ಶತಕೋಟಿಪ್ಲವಙ್ಗಮಾ ॥೧೭॥
ಇತ್ಯುಕ್ತ್ವಾ ವಾಯುತನಯಃ ತಥಾ ವೃದ್ಧಿಂ ಗತೋ ಮುದಾ ।
ಪ್ಲವಙ್ಗಮಾಯಥಾ ತತ್ರ ವಿಶ್ರಾಸ್ತಿಂ ಪ್ರತಿಪೇದಿರೇ ॥೧೮॥

ಹುಡುಕುತ, ಬಹುದೂರ ಹೋಗಿಬಿಟ್ಟು, ಅತ್ಯಂತ ಕ್ಷುತ್ತಿನಿಂದಲೂ ಬಾಯಾರಿಕೆಯಿಂದಲೂ ಪೀಡಿತರಾದರು, ಆಗ ಅವರಿಗೆ ಅಲ್ಲಿ ಒಂದು ಫಲವಾಗಲಿ ಒಂದು ಹನಿ ನೀರಾಗಲಿ ಕಾಣಿಸಲಿಲ್ಲ ॥

ಆಗ, ಅಂಗದ ಮೊದಲಾದ ಸಮಸ್ತ ಕಪಿಗಳೂ, ಹನುಮಂತನನ್ನು ಕುರಿತು 'ಮಹಾವೇಗಬಲ ಸಮನ್ವಿತನಾದವನೆ! ಮಾರುತಪುತ್ರನಾದ ಹನುಮಂತನೆ! ಈಗ ಸಮಸ್ತ ಕಪಿಗಳೂ ಕ್ಷುತ್ಪಿಪಾಸೆಗಳಿಂದ ಪೀಡಿತರಾಗಿಬಿಟ್ಟಿರುವರು, ಇವರ ಬಲವೂ ವೇಗವೂ ನಿಶ್ಶೇಷವಾಗಿ ಅಸ್ತ ಹೊಂದಿರುವುವು ಅಯ್ಯಾ! ಮಹಾವೀರ! ಇನ್ನು ಮುಂದಕ್ಕೆ ಪ್ರಯಾಣಮಾಡಲು ಇವರಿಗೆ ಸ್ವಲ್ಪವೂ ಸಾಮರ್ಥ್ಯವಿಲ್ಲ ಈ ವಿಷಯದಲ್ಲಿ ಸರಿಯಾಗಿ ವಿಚಾರ ಮಾಡಬೇಕಾಗಿರುವುದು' ಎಂದು ಹೇಳಿದರು ॥೧೪-೧೫॥

ಬಳಿಕ, ಈರೀತಿಯಾಗಿ ಅಂಗದಾದಿಗಳಿಂದ ಹೇಳಲ್ಪಟ್ಟ ಮಹಾವೀರನಾದ ಹನುಮಂತನು, ಆ ಕಪಿಯೂಥಪತಿಗಳನ್ನು ಕುರಿತು 'ಈಗ ಸಮಸ್ತ ಕಪಿಗಳೂ ನನ್ನ ದೇಹದಮೇಲೆ ಹತ್ತಿ ರೋಮಗಳನ್ನು ಅವಲಂಬಿಸಿ ಮಾರ್ಗಾಯಾಸವಿಲ್ಲದೆ ಕುಳಿತುಕೊಳ್ಳಲಿ, ನಾನು ಅಸಂಖ್ಯಾಕರಾದ ಕಪಿಗಳನ್ನೆಲ್ಲ ಹೊತ್ತುಕೊಂಡೇ ಮುಂದಕ್ಕೆ ಹೋಗುವೆನು' ಎಂದು ಹೇಳಿದನು॥೧೬-೧೭॥

ಈರೀತಿಯಾಗಿ ಹೇಳಿ, ಸಮಸ್ತ ಕಪಿಗಳೂ ತನ್ನ ದೇಹದಮೇಲೆ ವಿಶ್ರಮಿಸಿಕೊಂಡು ಸುಖವಾಗಿರುವಷ್ಟು ದೊಡ್ಡದಾಗಿ ತನ್ನ ದೇಹವನ್ನೂ ವಿಸ್ತಾರಪಡಿಸಿಕೊಂಡನು ॥೧೮॥

ಆರುಹ್ಯ ವಾನರಾಃ ಸರ್ವೇ ರೋಮಕೂಪೇಷು ಮಾರುತೇಃ ।
ಲೀಕ್ಷ್ಣಾ ಇವ ಪ್ರದೃಶ್ಯನ್ತೇ ರೋಮಚ್ಛಾಯಾಮುಪಾಶ್ರಿತಾಃ ॥೧೯॥
ವಿಶ್ರಮ್ಯ ವಾನರಾಃ ಸರ್ವೇ ತ್ಯಕ್ತ್ವಾ ಮಾರ್ಗಶ್ರಮಂ ಪರಮ್ ।
ರೋಮಾಣ್ಯಾರುಹ್ಯ ತೇ ಸರ್ವೇ ಮರ್ಕಟಪ್ಲುತಮೋಚರನ್ ॥೨೦॥
ಜಾಮ್ಬವಾನಬ್ರವೀದ್ಧೃಷ್ಟೋ ಪಾರ್ಶ್ವದ್ವಯಮುಪಾಗತೌ ।
ಲಜ್ಜಯಾ ತಮನಾರೂಢೌ ಮಹಾಬಲಪರಾಕ್ರಮೌ ।
ತತೋ ವಾಯುಸುತೋ ವೀರಃ ಪ್ರಯಯೌ ವಾಯುಮಾರ್ಗತಃ ॥೨೧॥
ಏವಂ ಗತ್ವಾ ಮಹಾದೂರಂ ಬಲವಾ ನ್ತಸ್ಮಿಂಶ್ಚ ತಶ್ರಮಃ ।
ದದರ್ಶಾಗ್ರೇ ಪಕ್ಷಿಸಙ್ಘಾ ಪದ್ಮಕಿಞ್ಜಲ್ಕಸನ್ನಿಭಾ ॥೨೨॥
ಜಲಸ್ನಾನಸ್ನಿಗ್ಧದೇಹಾ ದೃಷ್ಟ್ವಾ ಮಾರುತನನ್ದನಃ ।
ಪರಮಾನನ್ದಸನ್ದೋಹಃ ಪ್ರೋವಾಚೋಭಯಪಾರ್ಶ್ವಗೌ ॥೨೩॥
ಏತೇ ಪಕ್ಷಿಗಣಾವೀರೌ ಬಿಲಮಧ್ಯಾದುಪಾಗತಾಃ ।
ಬಿಲಮುದ್ಯೇ ಜಲಂ ನೂನಂ ತಿಷ್ಠತೀತಿ ಮತಿರ್ಮಮ ॥೨೪॥

ಆಗ ಆ ಆಂಜನೇಯನ ಶರೀರವನ್ನು ಹತ್ತಿಕೊಂಡು ರೋಮಗಳನ್ನು ಅವಲಂಬಿಸಿ ಕುಳಿತಿದ್ದ ವಾನರರು, ಕೂರೆಯಂತೆ ಕಾಣುತಿದ್ದರು ॥೧೯॥

ಬಳಿಕ, ಆ ಸಮಸ್ತರಾದ ವಾನರರೂ, ಅಲ್ಲಿ ವಿಶ್ರಮಿಸಿಕೊಂಡು ಮಾರ್ಗಾಯಾಸವನ್ನು ಕಳೆದುಕೊಂಡವರಾಗಿ, ಮರದ ಕೊಂಬೆಗಳನ್ನು ಹಿಡಿದುಕೊಳ್ಳುವಂತೆ ಆ ಹನುಮಂತನ ರೋಮಗಳನ್ನು ಹಿಡಿದುಕೊಂಡು, ಕಪಿಜಾತಿ ಸಹಜವಾದ ಕುಣಿದಾಟಗಳನ್ನು ಮಾಡುತಿದ್ದರು ॥೨೦॥

ಅಷ್ಟು ದೊಡ್ಡ ಕಪಿಯೂಥದ ಮಧ್ಯದಲ್ಲಿ, ಮಹಾಬಲ ಪರಾಕ್ರಮರಾದ ಅಂಗದ ಜಾಂಬವಂತರಿಬ್ಬರು ಮಾತ್ರವೇ, ಲಜ್ಜೆಯಿಂದ ಆ ಹನುಮಂತನ ಶರೀರದ ಮೇಲೆ ಹತ್ತದೆ ಅವನ ಪಾರ್ಶ್ವದ್ವಯದಲ್ಲಿ ಬರುತಿದ್ದರು ಬಳಿಕ ಮಹಾವೀರನಾದ ಆಂಜನೇಯನು, ವಾಯುಮಾರ್ಗದಲ್ಲಿ ಮುಂದಕ್ಕೆ ಹೊರಟುಬಿಟ್ಟನು ॥೨೧॥

ಹೀಗೆ ಅವರನ್ನೆಲ್ಲ ಹೊತ್ತುಕೊಂಡೇ ಬಹುದೂರ ಹೋಗಿ, ಸ್ವಭಾವತಃ ಬಲಿಷ್ಠನಾದ ಕಾರಣ ಶ್ರಮವನ್ನು ಸಹಿಸಿಕೊಂಡು, ಮುಂದುಗಡೆ ಪದ್ಮಕೇಸರಗಳಂತಿರುವ ಪಕ್ಷಿ ಸಮೂಹಗಳನ್ನು ಕಂಡನು , ಆಗ ಅವುಗಳು ನೀರಿನಲ್ಲಿ ಮುಳುಗಿ ಮೈಯಲ್ಲ ಒದ್ದೆಯಾಗಿರುವುದನ್ನು ನೋಡಿ, ಮಹಾನಂದ ಭರಿತನಾದ ಆ ಮಾರುತಿಯು, ತನ್ನ ಉಭಯ ಪಾರ್ಶ್ವಗಳಲ್ಲಿದ್ದ ಅಂಗದ ಜಾಂಬವಂತರನ್ನು ಕುರಿತು ' ಎಲೈ ಮಹಾವೀರರಾ ! ಇಲ್ಲಿ ಈ ಪಕ್ಷಿ ಸಮುದಾಯಗಳು ಒಂದು ಗುಹೆಯೊಳಗಿನಿಂದ ಮೈಯನ್ನು ನೆನಸಿಕೊಂಡು ಬರುತಿರುವುವು , ಈ ಗುಹೆಯೊಳಗ ನಿಸ್ಸಂಶಯವಾಗಿ ನೀರಿದೆಯೆಂದು ನನಗೆ ತೋರುವುದು ' ಎಂದು ಹೇಳಿದನು ॥೨೨–೨೪॥

ತಾವುಭಾವಪಿ ನಿಶ್ಚಿತ್ಯ ಜಲಂ ವಿವರಮಧ್ಯಗಮ್ ।
ಆಪ್ಲವಯಾಮಾಸತುಃ ಕ್ಷಿಪ್ರಂ ಕಪಿವೀರಾ ಮಹೌಜಸಃ ॥೨೫॥
ಪರ್ವತಾದಿವ ತೌ ಸರ್ವೇ ಸಮುತ್ಪ್ಲುತ್ಯ ರಸಾತಲಮ್ ।
ಅಭ್ಯದಂ ಪರಿವಾರ್ಯಾಥ ಯಯುರ್ಬಿಲತಟಂ ಮುದಾ ॥೨೬॥
ಅಥ ಪ್ರಕೃತಿಮಾಪೇದೇ ಹನೂಮಾ ಮಾರುತಾತ್ಮಜಃ ।
ಬಿಲದ್ವಾರಮುಖಾತ್ ಸರ್ವೇ ಪಾತಾಳನಗರಂ ಗತಾಃ ॥೨೭॥
ತತ್ರ ರಾಜಗೃಹಂ ದೃಷ್ಟಂ ಮಣಿಮುನ್ದಿರಕೋಭಿತಮ್ ।
ಸರ್ವೇನ್ದ್ರಿಯಸುಖಾವಾಪ್ತ್ಯೈ ಚನ್ದ್ರಮಣ್ಡಲಸನ್ನಿಭಮ್ ॥೨೮॥
ತತ್ರೈಕಾ ಯೋಗಿನೀ ದೃಷ್ಟಾ ದೇವೇನ್ದ್ರೇಣ ನಿಯೋಜಿತಾ ।
ಉನ್ನತೋನ್ನತಗೇಹಸ್ಥಾ ಪುರೋಪವನರಕ್ಷಿಣೀ ॥೨೯॥
ತತಃ ಸಾ ಯೋಗಿನೀ ದೃಷ್ಟ್ವಾ ಕಪೀನ್ ಪ್ರಾಹ ಮಹಾಬಲಾನ್ ।
ಕುತೋ ವಾ ಕಸ್ಯ ವಾ ದೂತಾಃ ಮತ್ಸಿದ್ಧಿಂ ಕಿಂ ಪ್ರಧರ್ಷಥ ॥೩೦॥
ತಚ್ಛ್ರುತ್ವಾ ಹನುಮಾನಾಹ ಶೃಣು ವಕ್ಷ್ಯಾಮಿ ದೇವಿ ತೇ ॥೩೧॥

ಆಮೇಲೆ ಅವರಿಬ್ಬರೂ ಆ ಗುಹೆಯ ಮಧ್ಯದಲ್ಲಿ ನೀರಿರುವುದೆಂದು ನಿಶ್ಚಯಿಸಿಕೊಂಡು, ಮಹಾ ತೇಜಸ್ವಿಗಳಾದ ಕಪಿವೀರರನ್ನೆಲ್ಲ ಬೇಗ ಬನ್ನಿರೆಂದು ಕರೆದರು ॥೨೫॥

ಆಗ ಕಪಿಗಳೆಲ್ಲರೂ ಪರ್ವತದಿಂದ ಧುಮಿಕುವಂತ ಆ ಹನುಮಂತನ ದೇಹದಿಂದ ಕಳಕ್ಕ ಧುಮಿಕಿ, ಬಳಿಕ ಅಂಗದನ ಸುತ್ತಲೂ ಮುತ್ತಿಗೊಂಡು, ಆ ಗುಹಾದ್ವಾರಕ್ಕೆ ಹೋದರು ॥೨೬॥

ಅನಂತರ, ಮಾರುತ ಪುತ್ರನಾದ ಹನುಮಂತನು, ಆಗ ಮಾಡಿಕೊಂಡಿದ್ದ ಶರೀರ ವೃದ್ಧಿಯನ್ನು ಉಪಸಂಹರಿಸಿ ಪೂರ್ವಾವಸ್ಥೆಯನ್ನು ಪಡೆದನು ಆಮೇಲೆ ಅವರೆಲ್ಲರೂ ಗುಹೆಯೊಳಗ ಪ್ರವೇಶಿಸಿ ಕೊನೆಗೆ ಪಾತಾಳಕ್ಕೆ ಹೋಗಿ ಸೇರಿಬಿಟ್ಟರು ॥೨೭॥

ಅಲ್ಲಿ ರತ್ನಮಯವಾದ ಗೃಹಗಳಿಂದ ಅಲಂಕೃತವಾಗಿ ಚಂದ್ರ ಮಂಡಲದಂತೆ ಸರ್ವೇಂದ್ರಿಯಗಳಿಗೂ ಆಪ್ಯಾಯಕವಾಗಿರುವ ಒಂದು ಅರಮನೆಯನ್ನು ಕಂಡರು ॥೨೮॥

ಅದರೊಳಗೆ, ದೇವೇಂದ್ರನಿಂದ ನಿಯುಕ್ತಳಾಗಿ ಅತ್ಯುನ್ನತ ಪ್ರಾಸಾದದಲ್ಲಿ ವಾಸಮಾಡುತ ಉಪವನವನ್ನು ರಕ್ಷಿಸಿಕೊಂಡಿದ್ದ ಒಬ್ಬ ಯೋಗಿನಿಯನ್ನು ನೋಡಿದರು ॥೨೯॥

ಬಳಿಕ, ಆ ಯೋಗಿನಿಯು ಮಹಾಬಲರಾದ ಈ ಕಪಿಗಳನ್ನು ನೋಡಿ ' ನೀವು ಯಾರು ? ಯಾರ ದೂತರು ? ನನ್ನ ಅವಾಸವನ್ನು ಏತಕ್ಕಾಗಿ ಪೀಡಿಸುವಿರಿ ? ' ಎಂದು ಕೇಳಿದಳು ॥೩೦॥

ಹೀಗೆ ಅವಳು ಹೇಳಿದ ಮಾತನ್ನು ಕೇಳಿ, ಹನುಮಂತನು ಅವಳನ್ನು ಕುರಿತು ' ಎಲೌ ಯೋಗಿನಿ ! ನಿನಗೆ ನಾನೆಲ್ಲವನ್ನೂ ಹೇಳುವೆನು, ಕೇಳು. ನಾವೆಲ್ಲರೂ ವಾನರರು , ಶ್ರೀರಾಮನಿಂದ ಆಜ್ಞಾಪ್ತರಾಗಿ, ಅವನ ಕಾರ್ಯವನ್ನು ಉದ್ದೇಶಮಾಡಿಕೊಂಡು, ಸೀತೆಯನ್ನು ಹುಡುಕುವುದ

ರಾಮಕಾರ್ಯಂ ಸಮುದ್ದಿಶ್ಯ ಸೀತಾನ್ವೇಷಣತತ್ಪರಾಃ ।
ಶ್ರೀರಾಮಪ್ರೇರಿತಾಃ ಸರ್ವೇ ವಾನರಾವಯವಾಗತಾಃ ॥೩೦॥
ಅಲಬ್ಧಾಹಾರನಿಲಯಾಃ ಕ್ಷುತ್ತೃಪಾಸಾತಿಪೀಡಿತಾಃ ।
ಪ್ರವಿಷ್ಟಾಗಹ್ವರಂ ಘೋರಂ ದೈವಾದತ್ರ ಸಮಾಗತಾಃ ॥೩೩॥
ಹನೂಮತ್ಪೈವಮುಕ್ತಾ ಸಾ ಯೋಗಿನೀ ಪ್ರಮುಮೋದ ಹ ॥೩೪॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸೀತಾವಿಚಯೇ ಯೋಗಿನೀದರ್ಶನ ಕಥನಂ
ನಾಮ ಪಞ್ಚದಶಃ ಸರ್ಗಃ



ಕ್ಕೋಸ್ಕರ ಬಂದಿರುವವು ನಮಗ ಇಲ್ಲಿ ಆಹಾರವೂ ಅವಾಸವೂ ಸಿಕ್ಕದೆ, ನಾವು ಕ್ಷುತ್ತೃಪಾಸ ಗಳಿಂದ ಬಹಳ ಪೀಡಿತರಾಗಿ, ಅತಿ ಘೋರವಾದ ಒಂದು ಗುಹಯನ್ನು ಪ್ರವೇಶಿಸಿದೆವು, ಆಮೇಲೆ ದೈವಯೋಗದಿಂದ ಇಲ್ಲಿಗ ಒಂದು ಸೇರಿದೆವು ಎಂದು ಹೇಳಿದನು ಹೀಗೆ ಹನುಮಂತನಿಂದ ಹೇಳ ಲ್ಪಟ್ಟ ಆ ಯೋಗಿನಿಯು, ಅತಿಯಾಗಿ ಆನಂದಪಟ್ಟಳು ॥೩೧-೩೪॥

ಇದು ಕಿಷ್ಕಿಂಧಾಕಾಂಡದಲ್ಲಿ ಸೀತಾನ್ವೇಷಣ ಯೋಗಿನೀದರ್ಶನ ನಿರೂಪಣವೆಂಬ
ಪದಿನಯ್ದನೆಯ ಸರ್ಗವು.



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಷೋಡಶಃ ಸರ್ಗಃ.

ಶ್ರೀ ಶಿವ ಉವಾಚ

ತತಃ ಶ್ರುತ್ವಾ ರಾಮಕಾರ್ಯಂ ಯೋಗಿನೀ ಹೃಷ್ಟಮಾನಸಾ ।
ಪುಳಕಾಙ್ಕಿತಸರ್ವಾಙ್ಗೀ ನಮಸ್ಕೃತ್ಯ ರಘೂತ್ತಮಮ್ ॥೧॥
ಅದ್ಯ ಮೇ ಸಫಲಂ ಜನ್ಮ ರಾಮದೂತಾಭಿದರ್ಶನಾತ್ ।
ರಾಮನಾಮಾಮೃತಂ ಪೀತ್ವಾ ಪ್ರಯಾಸ್ಯಾಮ್ಯಮೃತಂ ಪದಮ್ ॥೨॥
ಸನಕಾದಿಮುನೀನ್ದ್ರಾಣಾಂ ಹೃದಯೇಷ್ವಪಿ ದುರ್ಲಭಃ ।
ಭವತಾಂ ತಾದೃಶೋ ರಾಮಃ ಸಾಕ್ಷಾದ್ದರ್ಶನಮಾಗತಃ ॥೩॥
ಧರ್ಮಾಃ ಸರ್ವೇ ಪುರಾ ಜೀರ್ಣಾಃ ದುರ್ಲಭಾಯೇ ಹಿ ದೇಹಿನಾಮ್ ।
ನಿಷ್ಕಳಙ್ಕೀನ ಮನಸಾ ಯುಷ್ಮಾಭಿಃ ಕೋಟಿಜನ್ಮಸು ॥೪॥
ಪರಬ್ರಹ್ಮಸ್ವರೂಪೋಽಯಂ ಸೇವಿತೋ ರಘುನನ್ದನಃ ।
ಕಿಂ ವರ್ಣಯಾಮಿ ಭಾಗ್ಯಂ ವಃ ಕಪೀನಾಮತಿದುರ್ಲಭಮ್ ॥೫॥
ಜೆದಾನನ್ದಶ್ಚಿತ್ಸ್ವರೂಪೋ ಭವದ್ದೃಷ್ಟಿಪಥಂ ಗತಃ ॥೬॥

ಕಿಷ್ಕಿನ್ಧಾಕಾಂಡದಲ್ಲಿ ಹದಿನಾರನೆಯ ಸರ್ಗವು

ಮತ್ತೆ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ ! ಹೀಗೆ ಹನುಮಂತನು ಹೇಳಿದ ಬಳಿಕ, ಆ ಯೋಗಿನಿಯು ಶ್ರೀರಾಮನ ಕಾರ್ಯವನ್ನು ಕೇಳಿ ಹೃಷ್ಟಮನಸ್ಕಳಾಗಿ, ಶರೀರವೆಲ್ಲ ರೋಮಾಂಚ ಹುಟ್ಟಿದವಳಾಗಿ, ಆ ರಘೂತ್ತಮನನ್ನು ಅಲ್ಲಿಯೇ ನಮಸ್ಕರಿಸಿ, ಬಳಿಕ ಆ ಕಪಿಗಳನ್ನು ಕುರಿತು ' ಈಗ ನನ್ನ ಜನ್ಮವು ರಾಮದೂತರ ದರ್ಶನವಾದುದರಿಂದ ಸಫಲವಾಯ್ತು , ನಾನು ಈಗ ಶ್ರೀರಾಮನಾಮವೆಂಬ ಅಮೃತವನ್ನು ಪಾನಮಾಡಿ ಪರಮ ಪದವಿಯನ್ನು ಪಡೆಯುವೆನು ಯಾವ ಶ್ರೀರಾಮನು ಸನಕಾದಿ ಮುನೀಂದ್ರರಿಗೂ ಧ್ಯಾನ ಗೋಚರನಾಗುವುದೂ ದುರ್ಲಭವೋ, ಅಂತಹ ರಾಮನು ನಿಮಗೆ ಸಾಕ್ಷಾತ್ತಾಗಿ ದರ್ಶನ ಕೊಟ್ಟಿರುವನಲ್ಲ ! ನೀವು ಮನುಷ್ಯ ಸಾಮಾನ್ಯಕ್ಕೇ ದುರ್ಲಭವಾಗಿರುವ ಸಮಸ್ತಧರ್ಮಗಳನ್ನೂ ಕೋಟ್ಯಂತರ ಜನ್ಮಗಳಲ್ಲಿ ನಿರ್ಮಲ ಚಿತ್ತರಾಗಿ ಮಾಡಿರುವಿರಿ ಆದುದರಿಂದಲೇ ಈಗ ಪರಬ್ರಹ್ಮಸ್ವರೂಪನಾದ ಶ್ರೀರಾಮನ ಸೇವೆ ನಿಮಗೆ ಸುಲಭವಾಯಿತು ಕಪಿ ಜಾತಿಯಲ್ಲಿ ಹುಟ್ಟಿದವರಿಗೆ ಅತಿ ದುರ್ಲಭವಾಗಿರುವ ನಿಮ್ಮ ಭಾಗ್ಯವನ್ನು ಎಷ್ಟೆಂದು ವರ್ಣಿಸಲಿ ' ಆ ಸಚ್ಚಿದಾನಂದ ಸ್ವರೂಪನಾದ ಶ್ರೀರಾಮನು ನಿಮಗೆ ದೃಷ್ಟಿಗೋಚರನಾದನಲ್ಲ ! ಎಂದು ಹೇಳಿ,

ಇತಿ ಸಾ ವಾನರಾನಾಹ ಸ್ತುತ್ವಾತ್ಯನ್ತಂ ಪ್ರಹೃಷ್ಟಧೀಃ ।
ಯಥೇಷ್ಟಂ ಫಲಮೂಲಾನಿ ಜಗ್ಧ್ವಾ ಪೀತ್ವಾಽಮೃತಂ ಪಯಃ ।
ಕ್ಲುಪ್ತಿಪಾಸಾನಿವೃತ್ತಾಶ್ಚ ಪುನರಾಗನ್ತುಮರ್ಹಥ ॥೬॥
ತತಸ್ತೇ ವಾನರಾಃ ಸರ್ವೇ ತದ್ವನಂ ವಿವಿಶುರ್ಮುದಾ ।
ಉಭಾಭ್ಯಾಮಪಿ ಹಸ್ತಾಭ್ಯಾಂ ಬುಭುಜುಃ ಫಲಮುತ್ತಮಮ್ ॥೭॥
ಕ್ಲುಪ್ತಿಪಾಸಾನಿವೃತ್ತಾಃ ಸರೋಽಗತ್ವಾಽಪಿಬಂಸ್ತತ್ಸಲಿಲಂ ಶುಭಮ್ ।
ತತೋಽಙ್ಗದವಚಃ ಶ್ರುತ್ವಾ ಯೋಗಿನೀಸನ್ನಿಧಿಂ ಗತಾಃ ॥೮॥
ಯೋಗಿನೀಮಾಯಯಾ ಸರ್ವೇ ಬಹಿರ್ದೇಶಮುಪಾಗತಾಃ ।
ಸಾಪಿ ತ್ಯಕ್ತ್ವಾ ಗುಹಾಂ ಶ್ರೇಷ್ಠಾಂ ಯಯೌ ರಾಘವಸನ್ನಿಧಿಮ್ ॥೯॥
ತತ್ರ ರಾಮಂ ಸಸುಗ್ರೀವಂ ಲಕ್ಷ್ಮಣಂ ಚ ದದರ್ಶ ಸಾ ।
ಕೃತ್ವಾ ಪ್ರದಕ್ಷಿಣಂ ರಾಮಂ ಪ್ರಣಮ್ಯೇದಮುವಾಚ ಯೋಗಿನೀ ॥೧೦॥
ದಾಸೀ ತವಾಹಂ ರಾಜೇನ್ದ್ರ ದರ್ಶನಾರ್ಥಮಿಹಾಗತಾ ।
ಬಹುವರ್ಷಸಹಸ್ರಾಣಿ ತಪ್ತಂ ಮೇ ದುಶ್ಚರಂ ತಪಃ ॥೧೧॥

ಕೇವಲ ಹರ್ಷದಿಂದ ಅವರನ್ನು ವಿಶೇಷವಾಗಿ ಸ್ತುತಿಸಿ, ಪುನಃ ಅವರನ್ನು ಕುರಿತು ' ಇನ್ನು ನೀವು ಯಥೇಷ್ಟವಾಗಿ ಫಲಮೂಲಗಳನ್ನು ತಿಂದು, ಅಮೃತತುಲ್ಯವಾದ ಜಲವನ್ನು ಪಾನಮಾಡಿ, ನಿಮ್ಮ ಕ್ಲುಪ್ತಿಪಾಸೆಗಳನ್ನು ಶಾಂತಿಗೊಳಿಸಿಕೊಂಡು ಬನ್ನಿರಿ ಎಂದು ಹೇಳಿದಳು ॥೧-೬॥

ಹೀಗೆ ಆ ಯೋಗಿನಿಯಿಂದ ಹೇಳಲ್ಪಟ್ಟ ಬಳಿಕ, ಆ ಕಪಿಗಳೆಲ್ಲರೂ ಸಂತೋಷದಿಂದ ಆ ದಿವ್ಯವನವನ್ನು ಪ್ರವೇಶಿಸಿದರು, ಅಲ್ಲಿ ಎರಡು ಕೈಗಳಿಂದಲೂ ಬೇಕಾದಷ್ಟು ದಿವ್ಯಫಲಗಳನ್ನು ಭಕ್ಷಿಸಿದರು ॥೭॥

ಬಳಿಕ ಹಸಿವನ್ನು ಕಳದುಕೊಂಡು ಅಲ್ಲಿದ್ದ ಸರೋವರಕ್ಕೆ ಹೋಗಿ, ಅಲ್ಲಿ ಪವ್ಯವಾದ ಜಲವನ್ನು ಪಾನಮಾಡಿದರು, ಆಮೇಲೆ ಅಂಗದನ ಮಾತನ್ನು ಕೇಳಿ, ಮತ್ತೆ ಆ ಯೋಗಿನಿಯಿರುವ ಸ್ಥಳಕ್ಕೆ ಬಂದರು ॥೮॥

ಅನಂತರ, ಅವರೆಲ್ಲರೂ ಯೋಗಿನಿಯ ಮಹಿಮೆಯಿಂದ ಗುಹೆಯನ್ನು ಬಿಟ್ಟು ಹೊರಗೆ ಬಂದುಬಿಟ್ಟರು. ಬಳಿಕ ಅವಳೂ ಆ ಗುಹೆಯನ್ನು ಬಿಟ್ಟು ಶ್ರೀರಾಮನ ಸನ್ನಿಧಿಯನ್ನು ಸೇರಿದಳು॥

ಅಲ್ಲಿ ಸುಗ್ರೀವಸಹಿತನಾದ ರಾಮನನ್ನೂ ಲಕ್ಷ್ಮಣನನ್ನೂ ಕಂಡಳು ಆಮೇಲೆ ಶ್ರೀರಾಮನಿಗೆ ನಮಸ್ಕಾರಮಾಡಿ ಹೀಗೆ ಸ್ತಾಧಿಸಿದಳು ॥೧೧॥

ಹೇ ರಾಜೇಂದ್ರ! ನಾನು ನಿನ್ನ ದಾಸಿಯು, ನಿನ್ನ ದರ್ಶನಕ್ಕೋಸ್ಕರ ಇಲ್ಲಿ ಬಂದಿರುವೆನು ನಾನು ಅನೇಕಸಹಸ್ರವರ್ಷಕಾಲ ಬಹು ದುಷ್ಕರವಾದ ತಪಸ್ಸನ್ನು ಮಾಡಿದೆನು ॥೧೨॥

ಅದ್ಯ ಹಿ ತ್ವಾಂ ನಮಸ್ಯಾಮಿ ಮಾಯಯಾಽಽ ಪರತಃ ಸ್ಥಿತಮ್ !
ಯೋಗಮಾಯಾಯವನಿಕಾಚ್ಛನ್ನೋ ಮಾನುಷವಿಗ್ರಹಃ |
ನ ಲಕ್ಷ್ಯಸೇ ಜ್ಞಾನದೃಶಾಂ ಶೈಲೂಷಇವ ವೇಷಧೃತ್ ॥೧೩॥
ಮಹಾಭಾಗವತಾನಾಂ ತ್ವಂ ಭಕ್ತಿಯೋಗವಿಧಿತ್ಸಯಾ |
ಅವತೀರ್ಣೋಽಸಿ ಭಗವನ್ ಕಥಂ ಜಾನಾಮಿ ತಾಮಸೀ ॥೧೪॥
ಲೋಕೇ ಜಾನಾತು ಯಾಕಾಚಿತ್ ತವ ತತ್ತ್ವಂ ರಘೂತ್ತಮ |
ಮಮೈತದೇವ ರೂಪಂ ತೇ ಸದಾ ಭಾತು ಹೃದಾಲಯೇ ॥೧೫॥
ಧನ ಪುತ್ರ ಕಳತ್ರಾದಿ ವಿಭೂತಿಪರಿದರ್ಪಿತಃ |
ಅಕಿಞ್ಚನಧನಂ ತ್ವಾಂ ತು ನಾಭಿಜಾನಾತಿ ದುರ್ಮತಿಃ ॥೧೬॥
ನಿವೃತ್ತಗುಣಮಾರ್ಗಾಯ ನಿಷ್ಕಿಞ್ಚನಧನಾಯ ತೇ |
ನಮಃ ಸಾತ್ವತ್ಕುಲೀರಾಮಾಯ ನಿರ್ಗುಣಾಯ ಗುಣಾತ್ಮನೇ ॥೧೭॥
ಕಾಲರೂಪಿಣಮೀಶಾನಂ ಆದಿಮಧ್ಯಾನ್ತವರ್ಜಿತಮ್ |
ಸಮಂ ಚರನ್ತಂ ಸರ್ವತ್ರ ಮನ್ಯೇ ತ್ವಾಂ ಪುರುಷಂ ಪರಮ್ ॥೧೮॥

ಈಗ, ನನಗೆ ಮಾಯಾತೀತನಾದ ನಿನ್ನ ದರ್ಶನ ಲಾಭವಾಯ್ತು ನೀನು ಯೋಗಮಾಯ ಯಂಬ ತರಯಿಂದ ಮರೆಯಾಗಿ, ಮನುಷ್ಯವೇಷವನ್ನು ಧರಿಸಿಕೊಂಡು, ವೇಷವನ್ನು ಧರಿಸಿರುವ ನಟಗಾರನಂತೆ, ನಿನ್ನ ನಿಜಸ್ವರೂಪವನ್ನು ಯಾರಿಗೂ ಗೋಚರಪಡಿಸದಿರುವ ॥೧೩॥

ಎಲೈ ಭಗವಂತನೆ ! ನೀನು ಮಹಾತ್ಮರಾದ ಭಾಗವತರುಗಳ ಭಕ್ತಿಯೋಗವನ್ನುಂಟುಮಾಡುವದಕ್ಕಾಗಿ ಈಗ ಮನುಷ್ಯರೂಪದಲ್ಲಿ ಅವತರಿಸಿರುವೆ ಕೇವಲ ತಮೋಗುಣಪ್ರಧಾನಳಾದ ನಾನು, ನಿನ್ನ ಸ್ವರೂಪವನ್ನು ಹೇಗೆ ಅರಿಯಬಲ್ಲೆನು ? ॥೧೪॥

ಎಲೈ ರಘುನಾಥನೆ ! ಲೋಕದಲ್ಲಿ ಮತ್ತಾರಾದರೂ ನಿನ್ನ ತಾತ್ವಿಕರೂಪವನ್ನು ಬೇಕಾದರೆ ತಿಳಿದುಕೊಳ್ಳಲಿ, ನನಗಾದರೋ, ನಿನ್ನ ಈ ರೂಪವೇ ಸರ್ವದಾ ಹೃದಯಗೃಹದಲ್ಲಿ ಪ್ರಕಾಶಿಸುತಿರಲಿ ॥೧೫॥

ಧನ ಪುತ್ರ ಕಳತ್ರ ಮುಂತಾದ ನಶ್ವರ ಸಂಪತ್ತಿನಿಂದ ಗರ್ವಿತನಾದ ದುರಾತ್ಮನು, ಅಕಿಂಚನ ಧನ (ಬಡವನಿಗೆ ನಿಧಿ)ನಾದ ನಿನ್ನನ್ನು ಅರಿಯಲಾರನು ॥೧೬॥

ತ್ರಿಗುಣಮಯವಾದ ಮಾಯಾಪ್ರಪಂಚವನ್ನು ಅತಿಕ್ರಮಿಸಿದವನೂ-ಅಕಿಂಚನರಿಗೆಲ್ಲ ನಿಧಿರೂಪನೂ ನಿರ್ಗುಣಬ್ರಹ್ಮರೂಪನೂ ಆಗಿರುವ- ಸಾತ್ವತ್ಕುಲಾಮನಾದ ನಿನಗೆ ನಮಸ್ಕಾರವು॥೧೭

ಎಲೈ ಭಗವಂತನೆ ! ನೀನು ಕಾಲಸ್ವರೂಪನೂ- ಸರ್ವಲೋಕೇಶ್ವರನೂ- ಆದಿಮಧ್ಯಾಂತವರ್ಜಿತನೂ ಸರ್ವಭೂತಗಳಲ್ಲಿಯೂ ಸಮವಾಗಿ ವಾಸಿಸುತಕ್ಕವನೂ ಆದ- ಪರಮಪುರುಷನೆಂದು, ನಾನು ತಿಳಿದಿರುವನು ॥೧೮॥

ದೇವ ತೇ ಚೇಷ್ಟಿತಂ ಕ್ವಿತ್ ನ ವೇದ ನೃವಿಡಮ್ಬನಮ್ ।
ತ್ವಾಮಾಹುರಕ್ಷಯಂ ಜಾತಂ ಕಥಾಶ್ರವಣಸಿದ್ಧಯೇ ॥೧೯॥
ಕೌಸಲ್ಯಯಾ ಪ್ರಾರ್ಥ್ಯಮಾನಂ ಜಾತಮಾಹುಃ ಪರೇ ಜನಾಃ ।
ದುಷ್ಟರಾಕ್ಷಸಭೂಭಾರಹರಣಾಯಾರ್ಥಿತೋ ವಿಭುಃ ।
ಬ್ರಹ್ಮಣಾ ನರರೂಪೇಣ ಜಾತೋಯಮಿತಿ ಕೇಚನ ॥೨೦॥
ಶೃಣ್ವನ್ತಿ ಗಾಯನ್ತಿ ಚೈಕೇ ಕಥಾಸ್ತೇ ರಘುನನ್ದನ ।
ಪಶ್ಯನ್ತಿ ತವ ಪಾದಾಬ್ಜಂ ಭವಾರ್ಣವಸುತಾರಣಮ್ ॥೨೧॥
ತ್ವನ್ಮಾಯಾಗುಣಬದ್ಧಾಹಂ ವ್ಯತಿರಿಕ್ತಂ ಗುಣಾಶ್ರಯಮ್ ।
ಕಥಂ ತ್ವಾಂ ದೇವ ಜಾನೀಯಾಂ ಸ್ತೋತುಂ ವಾ ವಿಭವೇ ವಿಭೋ ॥೨೨॥
ನಮಸ್ಯಾಮಿ ರಘುಶ್ರೇಷ್ಠಂ ಬಾಣಾಸನಕರಾನ್ವಿತಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ಸುಗ್ರೀವಾದಿಭಿರನ್ವಿತಮ್ ॥೨೩॥
ಏವಂ ಸ್ತುತ್ವಾ ರಘುಶ್ರೇಷ್ಠಂ ತೂಷ್ಣೀಮಾಸೀತ್ ಸ್ವಯಂಪ್ರಭಾ ।

ಎಲೈ ದೇವದೇವನೆ! ನೀನು ಹೀಗೆ ಮನುಷ್ಯರೂಪವನ್ನು ವಿಡಂಬಿಸುತ ನಡೆಯಿಸುವ ವ್ಯಾಪಾರವನ್ನು ಯಾರೂ ಅರಿಯಲಾರರು ಆದರೆ, ಅಕ್ಷಯನಾದ ನೀನು ನಿನ್ನ ಕಥಾಶ್ರವಣವು ಲೋಕಕ್ಕೆಲ್ಲ ಸಿದ್ಧಿಸುವುದಕ್ಕಾಗಿ ಹೀಗೆ ಅವತರಿಸಿರುವೆಯಂದು ಪ್ರಾಜ್ಞರು ಹೇಳುವರು ॥೧೯॥

ಕೌಸಲ್ಯೆಯಿಂದ ಪ್ರಾರ್ಥಿತನಾಗಿ ನೀನು ಹೀಗೆ ಅವತರಿಸಿದೆಯಂದು ಕೆಲವರು ಹೇಳುವರು, ದುಷ್ಟರಾದ ರಾಕ್ಷಸರನ್ನು ಕೊಲ್ಲುವುದಕ್ಕಾಗಿ ಬ್ರಹ್ಮನಿಂದ ಪ್ರಾರ್ಥಸಲ್ಪಟ್ಟು ಹೀಗೆ ಮನುಷ್ಯರೂಪದಿಂದ ಅವತರಿಸಿರುವೆಯಂದು ಮತ್ತೆ ಕೆಲವರು ಹೇಳುವರು ॥೨೦॥

ಎಲೈ ರಘುನಾಥನೆ! ಕೆಲವರು ನಿನ್ನ ಕಥೆಯನ್ನು ಶ್ರವಣಮಾಡುವರು, ಕೆಲವರು ಅದನ್ನು ಗಾನಮಾಡುವರು ಮತ್ತೆ ಕೆಲವರು, ಸಂಸಾರಸಮುದ್ರತಾರಕವಾದ ನಿನ್ನ ಪಾದಕಮಲದ ದರ್ಶನಮಾಡಿ ಕೃತಾರ್ಥರಾಗುವರು ॥೨೧॥

ಎಲೈ ವಿಭುವೆ! ನಿನ್ನ ಮಾಯಾಗುಣದಿಂದ ಬದ್ಧಳಾಗಿರುವ ನಾನು, ಒಂದು ಸಲ ಮಾಯಾತೀತನಾಗಿಯೂ - ಮತ್ತೊಂದು ಸಲ ಮಾಯಾನಿಷ್ಠವಾದ ತ್ರಿಗುಣಗಳಿಗೆ ಆಶ್ರಯನಾಗಿಯೂ ತೋರುತಿರುವ ನಿನ್ನನ್ನು, ಹೇಗ ತಿಳಿಯಬಲ್ಲೆನು ? ಕೊನೆಗೆ ನಿನ್ನ ವೈಭವವನ್ನು ಸ್ತುತಿಸುವುದಕ್ಕಾಗಲಿ ನನಗೆಲ್ಲಿ ಶಕ್ತಿಯಿರುವುದು ? ॥೨೨॥

ಧನುರ್ಬಾಣಸಹಿತನಾಗಿ - ಸಹೋದರನಾದ ಲಕ್ಷ್ಮಣನೊಡನೆಯೂ ಸುಗ್ರೀವಾದಿಗಳೊಡನೆಯೂ ಯುಕ್ತನಾಗಿರುವ- ರಘುಕುಲತಿಲಕನಾದ ನಿನ್ನನ್ನು ನಾನು ನಮಸ್ಕರಿಸುವೆನು ॥೨೩॥

ಈ ರೀತಿಯಾಗಿ ಶ್ರೀರಾಮನನ್ನು ಸ್ತುತಿಸಿ, ಆ ಸ್ವಯಂಪ್ರಭೆಯು ಸುಮ್ಮನಾದಳು. ಆ ಬಳಿಕ, ಭಕ್ತರ ಇಷ್ಟಾರ್ಥಗಳೆನ್ನೆಲ್ಲ ಕೊಡತಕ್ಕವನಾದ ಶ್ರೀರಾಮಚಂದ್ರನು, ಆ ಸ್ವಯಂಪ್ರಭೆ

ತತೋ ರಾಮಃ ಪ್ರಸನ್ನಾತ್ಮಾ ಭಕ್ತಾಭೀಷ್ಟಪ್ರದಾಯಕಃ।
ಉವಾಚ ಯೋಗಿನೀಂ ಭಕ್ತಾಂ ಕಿಂ ತೇ ಮನಸಿ ಕಾಂಕ್ಷಿತಮ್ ॥೦೪॥
ಸಾ ಪ್ರಾಹ ರಾಘವಂ ಭಕ್ತಾ ಭಕ್ತಿಂ ತೇ ಭಕ್ತವತ್ಸಲ।
ಯತ್ರಕುತ್ರಾಪಿ ಜಾತಾಯಾಃ ನಿಶ್ಚಲಾಂ ದೇಹಿ ಮೇ ಪ್ರಭೋ ॥೦೫॥
ತ್ವದ್ಭಕ್ತೇಷು ಸದಾ ಸಂಗೋ ಭೂಯಾನ್ಮೇ ಪ್ರಾಕೃತೇಷು ನ।
ಜಿಹ್ವಾ ಮೇ ರಾಮರಾಮೇತಿ ಭಕ್ತ್ಯಾ ಸ್ಮರತು ಸರ್ವದಾ ॥೦೬॥
ಮನಸ್ತೇ ಶ್ಯಾಮಲಂ ರೂಪಂ ಸೀತಾಲಕ್ಷ್ಮಣಸಂಯುತಮ್।
ಧನುರ್ಬಾಣಧರಂ ಪೀತವಸನಂ ಮಕುಟೋಜ್ಜ್ವಲಮ್ ॥೦೭॥
ಅಙ್ಗದೈಸ್ನೂಪುರೈರ್ಮುಕ್ತಾಹಾರೈಃ ಕೌಸ್ತುಭಕುಣ್ಡಲೈಃ।
ಯುಕ್ತಂ ಸ್ಮರತು ಮೇ ರಾಮ ವರಂ ನಾನ್ಯಂ ವೃಣೇ ಪ್ರಭೋ ॥೦೮॥

ಶ್ರೀರಾಮಉವಾಚ

ಭವತ್ಯೇವಂ ಮಹಾಭಾಗೇ ಗಚ್ಛ ತ್ವಂ ಬದರೀವನಮ್।
ತತ್ರೈವ ಮಾಂ ಸ್ಮರನ್ತೀ ತ್ವಂ ತ್ಯಕ್ತ್ವೇಮಾಂ ಭೌತಿಕೀಂ ತನುಮ್।

ಯಲ್ಲಿ ಅನುಗ್ರಹವಿಟ್ಟು, ಮಹಾಭಕ್ತಳಾದ ಅವಳನ್ನು ಕುರಿತು 'ನಿನ್ನ ಮನಸ್ಸಿನಲ್ಲಿ ಏನಿರುವುದು?' ಎಂದು ಪ್ರಶ್ನೆ ಮಾಡಿದನು ॥೦೪॥

ಆಗ ರಾಮಭಕ್ತಳಾದ ಅವಳು, ಶ್ರೀರಾಮನನ್ನು ಕುರಿತು 'ಎಲೈ ಭಕ್ತವತ್ಸಲನೆ! ನನಗೆ ಸರ್ವದಾ ನಿನ್ನ ಭಕ್ತರಲ್ಲಿಯೇ ಸಂಗವುಂಟಾಗಲಿ, ಇತರರಾದ ಪ್ರಾಕೃತರಲ್ಲಿಂದಿಗೂ ಬೇಡ ನನ್ನ ನಾಲಿಗೆಯು ಸರ್ವದಾ ಭಕ್ತಿಯಿಂದ 'ರಾಮ ರಾಮ' ಎಂದು ಉಚ್ಚರಿಸುತಿರಲಿ ನನ್ನ ಮನಸ್ಸು, ನೀಲಮೇಘಶ್ಯಾಮಲವಾಗಿಯೂ- ಸೀತಾಲಕ್ಷ್ಮಣಯುಕ್ತವಾಗಿಯೂ- ಧನುರ್ಬಾಣಧರವಾಗಿಯೂ- ಪೀತಾಂಬರಧರವಾಗಿಯೂ- ಕಿರೀಟಶೋಭಿತವಾಗಿಯೂ- ಅಂಗದ ನೂಪುರ ಮುಕ್ತಾಹಾರ ಕೌಸ್ತುಭ ಕುಂಡಲಗಳಿಂದ ಅಲಂಕೃತವಾಗಿಯೂ ಇರುವ- ನಿನ್ನ ದಿವ್ಯರೂಪವನ್ನು ಸರ್ವದಾ ಸ್ಮರಿಸುತಿರಲಿ ಎಲೈ ಪ್ರಭುವೆ! ನಾನು ಮತ್ತಾವ ವರವನ್ನೂ ವರಿಸುವುದಿಲ್ಲ' ಎಂದು ಪ್ರಾರ್ಥಿಸಿದಳು ॥೦೫-೦೮॥

ಹೀಗೆ ಪ್ರಾರ್ಥಿಸುತಿರುವ ಸ್ವಯಂಪ್ರಭೆಯನ್ನು ಕುರಿತು ಶ್ರೀರಾಮನು ಹೇಳುವನು —

ಎಲೈ ಮಹಾನುಭಾವಳೆ! ನಿನ್ನ ಇಷ್ಟದಂತೆಯೇ ಆಗಲಿ ನೀನು ಬದರಿಕಾಶ್ರಮಕ್ಕೆ ಹೋಗು, ಅಲ್ಲಿಯೇ ನನ್ನನ್ನು ಸ್ಮರಿಸುತ ಈ ಪಾಂಚಭೌತಿಕ ದೇಹವನ್ನು ಬಿಟ್ಟುಬಿಡುವೆ. ಸ್ವಲ್ಪ ಕಾಲದಲ್ಲಿಯೇ ನೀನು ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆಯುವೆ —ಎಂದು ಶ್ರೀರಾಮನು

ಮಾಮೇವ ಪರಮಾತ್ಮಾನಂ ಅಚಿರಾತ್ ಪ್ರತಿಪದ್ಯಸೇ ॥೨೯॥
ರಾಘವೇಣೈವಮುಕ್ತಾ ಸಾ ಪ್ರಯಯೌ ಬದರೀವನಮ್ ॥೩೦॥
ಸ್ಮೃತ್ವಾ ರಘೂತ್ತಮವಚೋಽಮೃತಸಾರಕಲ್ಪಂ
ಗತ್ವಾ ತಥೈವ ಬದರೀತರುಷಂಡಮುಷ್ಟವಮ್ ।
ಕ್ಷೇತ್ರಂ ಸದಾ ರಘುಪತಿಂ ಮನಸಾ ಸ್ಮರಂತೀ
ತ್ಯಕ್ತ್ವಾ ಕಳೇಬರಮವಾಪ ಪರಂ ಪದಂ ಸಾ ॥೩೧॥

ಇತಿ ಶ್ರೀಮತ್ಕಿಷ್ಕಿಂಧಾಕಾಂಡೇ ಸ್ವಯಂಪ್ರಭಾಖ್ಯಾನಕಥನಂ ನಾಮ
ಷೋಡಶಃ ಸರ್ಗಃ



ಹೇಳಿದನು ಹೀಗೆ ಶ್ರೀರಾಮನಿಂದ ಆಜ್ಞಾಪಿತಳಾದ ಆ ಸ್ವಯಂಪ್ರಭೆಯು, ಬದರಿಕಾಶ್ರಮವನ್ನು ಕುರಿತು ಹೊರಟಳು ॥೨೯-೩೦॥

ಒಳಿಕ, ಆ ಶಬರಿಯು, ಅಮೃತಸಾರಸದೃಶವಾದ ಶ್ರೀರಾಮನ ಮಾತನ್ನು ಸ್ಮರಿಸಿಕೊಂಡು, ಅವನ ಆಜ್ಞೆಯಂತೆಯೇ ಬದರೀವೃಕ್ಷಶೋಭಿತವಾದ ಬದರಿಕಾಶ್ರಮಕ್ಕೆ ಹೋಗಿ, ಅಲ್ಲಿ ಸರ್ವದಾ ಶ್ರೀರಾಮನನ್ನು ಧ್ಯಾನಿಸುತಿದ್ದು, ಕೊನೆಯಲ್ಲಿ ಈ ಪಾಂಚಭೌತಿಕ ದೇಹವನ್ನು ತ್ಯಜಿಸಿ ಪರಮ ಪದವನ್ನು ಹೊಂದಿದಳು ॥೩೧॥

ಇದು ಕಿಷ್ಕಿಂಧಾಕಾಂಡದಲ್ಲಿ ಸ್ವಯಂಪ್ರಭಾಖ್ಯಾನ ಕಥನವೆಂಬ
ಹದಿನಾರನೆಯ ಸರ್ಗವು



ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸಪ್ತದಶಃ ಸರ್ಗಃ

ಶ್ರೀಶಿವಉವಾಚ

ಅಥ ತತ್ರ ಸಮೂಸೀನಾಃ ವೃಕ್ಷಷಣ್ಡೇಷು ವಾನರಾಃ ।
ದಿಗ್ಭ್ರಾನ್ತಾ ಇವ ದೃಶ್ಯನ್ತೇ ಕಪಯಸ್ತನ್ನಿರೀಕ್ಷಣಾತ್ ॥೧॥
ತತಶ್ಚಿಹ್ನಾನಿ ಸಂದೃಶ್ಯ ದಿಗ್ವಿಭಾಗವಿವೇಕಿನಃ ।
ಕಪಯಶ್ಚಿನ್ತಯಾಮಾಸುಃ ಕಾಲೋತೀತಇತಿ ಸ್ಫುಟಮ್ ॥೨॥
ತತಃ ಸಮುದ್ರನಿಕಟಂ ಪ್ರಾಪ್ಯ ಸರ್ವೇ ಹರೀಶ್ವರಾಃ ।
ವೇಲಾತಟಮನುಪ್ರಾಪ್ಯ ಚಕ್ರುರನ್ಯೋನ್ಯಭಾಷಣಮ್ ॥೩॥
ಶಾಸನಾತ್ ಕಪಿರಾಜಸ್ಯ ವಯಂ ಸರ್ವೇ ವಿನಿರ್ಗತಾಃ ।
ಮಾಸಃ ಪೂರ್ಣೋ ಬಿಲಸ್ಥಾನಾಂ ಉಪಾಯಃ ಕಿಂ ನ ಬುಧ್ಯತೇ ॥೪॥
ತೀಕ್ಷ್ಣಃ ಪ್ರಕೃತ್ಯಾ ಸುಗ್ರೀವಃ ಸ್ವಾಮಿಭಾವೇ ವ್ಯವಸ್ಥಿತಃ ।
ನ ಕ್ಷಮಿಷ್ಯತಿ ನಃ ಸರ್ವಾನ್ ಅಪರಾಧಕೃತೋ ಗತಾನ್ ॥೫॥

ಕಿಷ್ಕಿಂಧಾಕಾಂಡದಲ್ಲಿ ಹದಿನೇಳನೆಯ ಸರ್ಗವು

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ ! ಹೀಗೆ ಸ್ವಯಂಪ್ರಭೆ ಹೋಟುಹೋದ ಬಳಿಕ, ಅಲ್ಲಿ ವೃಕ್ಷಸಮೂಹಗಳೊಳಗೆ ಕುಳಿತುಕೊಂಡಿರುವ ಆ ಅಂಗದ ಮೊದಲಾದ ಕಪಿಗಳು, ಅವುಗಳನ್ನೆಲ್ಲ ನೋಡಿ ದಿಗ್ಭ್ರಮೆಹಿಡಿದವರಂತೆ ತೋರುತಿದ್ದರು ॥೧॥

ಆಮೇಲೆ ಆ ಕಪಿಗಳು ಮೆಲ್ಲಮೆಲ್ಲಗೆ ಗುರುತುಹಿಡಿದು ದಿಗ್ವಿಭಾಗವನ್ನು ಗೊತ್ತುಮಾಡಿಕೊಂಡವರಾಗಿ, ಸುಗ್ರೀವನಿಂದ ನಿರ್ದೇಶಿಸಲ್ಪಟ್ಟಿದ್ದ ಕಾಲ ಕಳದುಹೋಯ್ತೆಂದು ಯೋಚಿಸಿದರು॥

ಬಳಿಕ ಸಮುದ್ರದ ಹತ್ತಿರ ಬಂದು, ಅಲ್ಲಿ ತೀರದಲ್ಲಿ ಕುಳಿತುಕೊಂಡು, ಹೀಗೆ ಒಬ್ಬರಿಗೊಬ್ಬರು ಮಾತಾಡಿಕೊಂಡರು ॥೩॥

ನಾವು ನಮ್ಮ ದೊರೆಯ ಅಪ್ಪಣೆಯಂತೆ ಹೊರಟುಬಂದುಬಿಟ್ಟೆವು ಈಗ ಈ ಗುಹೆಯಲ್ಲಿ ಹೋಗಿ ಸೇರಿಕೊಂಡಿರುವಾಗ, ನಮಗೆ ಗೊತ್ತೇ ಇಲ್ಲದೆ ಒಂದು ತಿಂಗಳು ಕಳೆದುಹೋಯ್ತು ಇನ್ನು ಮುಂದೇನುಪಾಯಮಾಡಬೇಕೋ ಗೊತ್ತಾಗುವುದಿಲ್ಲ ॥೪॥

ನಮ್ಮ ಸುಗ್ರೀವನೋ, ಸ್ವಭಾವತಏವ ಅತಿ ಕ್ರೂರನು, ಈಗ ಅವನಿಗೆ ದೊರೆತನವೇರೆ ಬಂದುಬಿಟ್ಟಿದೆ ನಾವು ಅಪರಾಧಮಾಡಿ ಇಲ್ಲಿಂದ ಹೋದರೆ, ಅವನು ನಮ್ಮೆಲ್ಲರಮೇಲೂ ಕೋಪಮಾಡುವನು ॥೫॥

ಅಪ್ರವೃತ್ತೌ ಚ ಸೀತಾಯಾಃ ಪಾಪಮೇವ ಕರಿಷ್ಯತಿ ।
ತಸ್ಮಾತ್ ಕ್ಷಮಮಿಹಾದ್ಯೈವ ಪ್ರಾಯೋಪವಿಶನಂ ಹಿ ನಃ ।
ನ ಕ್ಷಮಂ ತ್ವಪರಾದ್ಧಾನಾಂ ಗಮನಂ ಸ್ವಾಮಿಪಾರ್ಶ್ವತಃ ॥೬॥
ರಾಘವಪ್ರಿಯಕಾಮಾಯ ಘಾತಯಿಷ್ಯತ್ಯಸಂಶಯಃ ॥೭॥
ಕ್ವ ರಾಮಃ ಕ್ವ ಚ ವಾ ಸೀತಾ ರಾಮಸುಗ್ರೀವಸಂಗಮಃ ।
ಕ್ವ ಸೀತಾಸ್ವೀಷಣಂ ಭೂಮೌ ವಯಂ ಯೇನ ಹತಾವೃಥಾ ॥೮॥
ವೈದೇಹ್ಯಾಃ ಪ್ರಿಯಕಾಮೇನ ಕೃತಂ ಕರ್ಮ ಜಟಾಯುಷಾ ।
ಗೃಧ್ರರಾಜೇನ ಯತ್ ತತ್ರ ಶ್ರುತಂ ವಸ್ತದಶೇಷತಃ ॥೯॥
ಸ ಸುಖೀ ಗೃಧ್ರರಾಜಸ್ತು ರಾವಣೇನ ಹತೋ ರಣೇ ।
ಮುಕ್ತಶ್ಚ ಸುಗ್ರೀವಭಯಾತ್ ಗತಶ್ಚ ಪರಮಾಂ ಗತಿಮ್ ॥೧೦॥
ತತ್ ತು ಶ್ರುತ್ವಾ ತದಾ ವಾಕ್ಯಂ ಅಙ್ಗದೋಽಕ್ತಂ ಗುಹಾಮುಖಾತ್ ।
ನಿರ್ಗತ್ಯಾಬ್ರವೀದ್ವಾಕ್ಯಂ ಸಂಪಾತಿರ್ವಾ ಮೃಧ್ರರಾಟ್ ॥೧೧॥

ತತ್ರಾಪಿ, ಸೀತಾದೇವಿಯ ವೃತ್ತಾಂತವನ್ನಾದರೂ ನಾವು ತಿಳಿದುಕೊಂಡು ಹೋದರೆ ಸ್ವಲ್ಪವಾದರೂ ಆಶಯುಂಟು, ಈಗ ಅದೂ ಇಲ್ಲವಾದುದರಿಂದ, ನಮ್ಮೆಲ್ಲರನ್ನೂ ಅವನು ಕೊಲ್ಲಿಸಿಯೇಬಿಡುವನು ಅದುಕಾರಣ, ನಾವು ಇಲ್ಲಿಯೇ ಈಗ ಪ್ರಾಯೋಪವೇಶಮಾಡುವುದೇ ಯುಕ್ತವಾಗಿ ಕಾಣುವುದು. ಇಗೆ ಅಪರಾಧಮಾಡಿ ನಮ್ಮ ಒಡೆಯನ ಹತ್ತಿರಕ್ಕೆ ಹೋಗುವುದೆಂದಿಗೂ ಯುಕ್ತವಲ್ಲ ನಾವು ಅಲ್ಲಿಗೆ ಹೋದಪಕ್ಷದಲ್ಲಿ, ಕೊನೆಗೆ ಶ್ರೀರಾಮನ ಪ್ರೀತಿಸಂಪಾದನಕ್ಕಾಗಿಯಾದರೂ ಸುಗ್ರೀವನು ನಮ್ಮನ್ನು ಕೊಲ್ಲಿಸಿಬಿಡುವನು, ಇದರಲ್ಲಿ ಸಂಶಯವಿಲ್ಲ॥೬-೭॥

ಅಯ್ಯೋ! ಈ ರಾಮನೆಲ್ಲ ಬಂದನು! ಸೀತೆಯಲ್ಲಿದ್ದಳು! ಇವಳನ್ನೇಕೆ ರಾವಣನು ಅಪಹರಿಸಿಕೊಂಡು ಹೋದನು! ಸುಗ್ರೀವನಿಗೂ ರಾಮನಿಗೂ ಸ್ನೇಹವೆಲ್ಲಾಯ್ತು! ಸೀತೆಯನ್ನು ಹುಡುಕುವುದಕ್ಕಾಗಿ ನಮ್ಮನ್ನಲ್ಲ ಏಕೆ ನಿಯೋಗಿಸಿದನು! ಇದರಿಂದಲ್ಲವೆ ನಾವೆಲ್ಲರೂ ವ್ಯರ್ಥವಾಗಿ ಈಗ ಸಾಯಬೇಕಾಗಿರುವುದು! ॥೮॥

ಆಗ ಸೀತೆಯನ್ನು ರಕ್ಷಿಸುವುದಕ್ಕಾಗಿ ಜಟಾಯುವ್ಸೆಂಬ ಗೃಧ್ರರಾಜನು ಮಾಡಿದ ಕೆಲಸವೆಲ್ಲವೂ ನಿಮಗೆಲ್ಲರಿಗೂ ಗೊತ್ತೇ ಇದೆಯಷ್ಟೆ! ॥೯॥

ಆ ಸಮಯದಲ್ಲಿ ಶ್ರೀರಾಮಕಾರ್ಯಕ್ಕಾಗಿ ಹೊರಟು ರಾವಣನಿಂದ ಕೊಲ್ಲಲ್ಪಟ್ಟ ಆ ಗೃಧ್ರರಾಜನೇ ಸುಖಶಾಲಿಯೆಂದು ತಿಳಿಯಬೇಕು. ಅವನಿಗ ಈ ಸುಗ್ರೀವನ ಭಯವಿಲ್ಲ, ಉತ್ತಮವಾದ ಗತಿಯೂ ಸಿಕ್ಕಿತು ॥೧೦॥

ಹೀಗಂದು ಕೂನೆಯ ಮಾತು ಅಂಗದನ ಮುಖದಿಂದ ಹೊರಟುದುದನ್ನು ಕೇಳಿ, ಆಗ ಅಲ್ಲಿಯೇ ಒಂದು ಗುಹೆಯೊಳಗೆ ವಾಸಮಾಡಿಕೊಂಡಿದ್ದ ಸಂಪಾತಿಯಂಬ ಗೃಧ್ರರಾಜನು, ತಾನಿದ್ದ ಗುಹೆಯಿಂದ ಸ್ವಲ್ಪ ಈಚೆಗೆ ಬಂದು, ಆ ಕಪಿಗಳನ್ನು ಕುರಿತು ಹೀಗೆ ಪ್ರಶ್ನೆಮಾಡಿದನು ॥೧೧॥

ಕೋಯಂ ವೀರೋ ಭೋಷಯತಿ ಪ್ರಾಣಾತ್ಪ್ರಿಯತರಸ್ಯ ಮೇ ।
ಜಟಾಯುಷೋ ವಧಂ ಭ್ರಾತುಃ ಕಮ್ಪಯನ್ನಿವ ಮೇ ಮನಃ ॥೧೦॥

ಅಂಗದಲುವಾಚ

ರಾಮೋ ದಾಶರಥಿಃ ಪಿತ್ರಾ ನಿಯುಕ್ತೋ ವನಮಾಗತಃ ।
ಸೀತಾಂ ಜಹಾರ ತದ್ಭಾರ್ಯಾಂ ರಾವಣೋ ವಿಜನೇ ಸ್ಥಿತಾಮ್ ॥೧೩॥
ರಾಮಭಕ್ತೋ ಜಟಾಯುಸ್ತು ಸೀತಾರ್ಥಂ ನಿಹತೋ ರಣೇ ।
ರಕ್ಷಸಾ ರಾಘವಸಖಃ ಸುಗ್ರೀವೋ ಜಾನಕೀಕೃತೇ ॥೧೪॥
ಸ ಕಪೀ೯ ಪ್ರೇಷಯಾಮಾಸ ದಿಶೋ ದಶ ತತೋ ವಯಮ್ ।
ವಿಜೇತ್ಯೈತಾಂ ದಿಶಂ ಸೀತಾಂ ಅದೃಷ್ಟ್ವಾ ಪ್ರಾಯಮಾಸ್ಮಿತಾಃ ॥೧೫॥
ಇತ್ಯುಕ್ತಃ ಕರುಣಂ ವಾಕ್ಯಂ ವಾನರೈಸ್ತ್ಯಕ್ತಜೀವಿತೈಃ ।
ಸಬಾಷ್ಪಾ೯ ವಾನರಾ೯ ಗೃಧ್ರಃ ಪ್ರತ್ಯುವಾಚ ಮಹಾಸ್ವನಃ ॥೧೬॥
ಯವೀಯಾ೯ ಮಮ ಸ ಭ್ರಾತಾ ಯಮಾಖ್ಯಾತ ರಣೇ ಹತಮ್ ।

ಅದಾರಪ್ಪಾ ! ನನ್ನ ಪ್ರಾಣಕ್ಕಿಂತ ಪ್ರಿಯತರನಾಗಿರುವ ಸಹೋದರನಾದ ಜಟಾಯುಸ್ಸು ಕೊಲ್ಲಲ್ಪಟ್ಟನೆಂದು ಹೇಳುತಿರುವಿರಲ್ಲ ! ಈ ಮಾತನ್ನು ಕೇಳಿ, ನನ್ನ ಮನಸ್ಸು ಕಂಪಿತವಾಗಿ ಬಿಟ್ಟಿರುವುದು ॥೧೨॥

ಹೀಗೆ ಸಂಪಾತಿ ಕೇಳಿದುದಕ್ಕೆ ಅಂಗದನು ಉತ್ತರ ಹೇಳುವನು —

ಅಯ್ಯಾ ! ಗೃಧ್ರಶ್ರೇಷ್ಠನೆ ! ದಶರಥಪುತ್ರನಾದ ರಾಮನಂಬವನು, ತಂದೆಯಿಂದ ನಿಯುಕ್ತನಾಗಿ ಅರಣ್ಯಕ್ಕೆ ಬಂದನು ಅಲ್ಲಿ ಯಾರೂ ಇಲ್ಲದಿರುವಾಗ ರಾವಣನು ಅವನ ಹೆಂಡತಿಯಾದ ಸೀತೆಯನ್ನು ಅಪಹರಿಸಿಬಿಟ್ಟನು ॥೧೩॥

ಆಗ ಸೀತೆಯನ್ನು ಬಿಡಿಸಿಕೊಳ್ಳುವುದಕ್ಕೋಸ್ಕರ ಹೋರಟ ರಾಮಭಕ್ತನಾದ ಜಟಾಯುವು ರಾವಣನಿಂದ ಕೊಲ್ಲಲ್ಪಟ್ಟನು ಆ ಮೇಲೆ ರಾಮನಿಗೆ ಸ್ನೇಹಿತನಾದ ಸುಗ್ರೀವನು, ಸೀತೆಯನ್ನು ಹುಡುಕುವುದಕ್ಕಾಗಿ ಹತ್ತು ದಿಕ್ಕಿಗೂ ಕಪಿಗಳನ್ನು ಕಳುಹಿಸಿರುವನು ಅದರಲ್ಲಿ ಈ ದಿಕ್ಕಿಗೆ ಕಳುಹಿಸಲ್ಪಟ್ಟ ನಾವು, ಇಲ್ಲೆಲ್ಲ ಹುಡುಕಿ, ಎಲ್ಲಿಯೂ ಸೀತೆಯನ್ನು ಕಾಣದೆ, ಸುಗ್ರೀವನಿಗೆ ಹೆದರಿ ಇಲ್ಲಿ ಹೀಗೆ ಪ್ರಾಯೋಪವೇಶ ಮಾಡಿರುವವು ॥೧೪-೧೫॥

ಹೀಗೆ ಪ್ರಾಣದಮೇಲೆ ಆಶೆಯನ್ನು ಬಿಟ್ಟಿರುವ ಆ ಕಪಿಗಳು ಬಹು ದೀನವಾಗಿ ಹೇಳಿದ ಬಳಿಕ, ಆ ಗೃಧ್ರರಾಜನಾದ ಸಂಪಾತಿಯು, ಕಣ್ಣೀರು ಸುರಿಯಿಸುತಿರುವ ಆ ವಾನರರನ್ನು ಕುರಿತು, ಹೀಗೆ ಗಟ್ಟಿಯಾಗಿ ಹೇಳಿದನು ॥೧೬॥

ಅಪ್ಪಾ ! ಕಪಿಗಳಿರಾ ! ನೀವು ಯಾವನನ್ನು ಯುದ್ದದಲ್ಲಿ ಹತನೆಂದು ಹೇಳುವಿರೋ, ಆ ಜಟಾಯುವು ನನ್ನ ತಮ್ಮನು ನಾನು ಈಗ ಮುದುಕನಾಗಿಬಿಟ್ಟನು, ನನ್ನ ರೆಕ್ಕೆಗಳೂ

ವೃದ್ಧಭಾವಾದಪಕ್ಷತ್ವಾತ್ ಶೃಣ್ವಂತ್ಯದಪಿ ಮರ್ಷಯೇ ॥೧೬॥
ರಹಸ್ಯಂ ಕಿಂ ಚ ವೋ ವಕ್ಷ್ಯೇ ಪುರಾಹಂ ಕಾರಣಾಂತರೇ ।
ದಗ್ಧಪಕ್ಷಶ್ಚನ್ದ್ರಮಾಖ್ಯಂ ಋಷಿಮಭ್ಯಗಮಂ ಶನೈಃ ।
ತಮಾ ದೃಷ್ಟ್ವಾ ಪ್ರಾಹ ಸ ಮುನಿಃ ದಗ್ಧಪಕ್ಷಂ ನಿಶಾಕರಃ ॥೧೮॥
ದಗ್ಧಿ ಕಿಮರ್ಥಂ ತೇ ಪಕ್ಷೌ ಕಥ್ಯತಾಂ ಯದಿ ಮನ್ಯಸೇ ॥೧೯॥
ತತೋಽಹಮಬ್ರುವಂ ವಿಪ್ರಂ ಜಟಾಯುರಹಮೇವ ಚ ।
ಸ್ವಸ್ವವೀರ್ಯಪರೀಕ್ಷಾರ್ಥಂ ಗತಾವಾಮಂಡಲಂ ರವೇಃ ॥೨೦॥
ನೀದನ್ತಂ ಸೂರ್ಯತಾಪೇನ ತತೋಽರಕ್ಷಂ ಜಟಾಯುಷಮ್ ।
ಸೂರ್ಯಾಂಶುದಗ್ಧಪಕ್ಷೌಽಸ್ಮಿ ಮಾಂ ರಕ್ಷ ಶರಣಾಗತಮ್ ॥೨೧॥

ನಿಶಾಕರಉವಾಚ

ದೇಹಮೂಲಮಿದಂ ದುಃಖಂ ದೇಹಃ ಕರ್ಮಸಮುದ್ಭವಃ ।
ಕರ್ಮಾಽಭಿಮಾನಸಂಭೂತಂ ಜಾತಃ ಸೋಽಸ್ಯವಿವೇಕತಃ ।

ಹೋಗಿಬಿಟ್ಟಿವೆ ಹೀಗಿರುವುದರಿಂದ, ಇಂತಹ ಕೆಟ್ಟ ಸಮಾಚಾರವನ್ನು ಕೇಳೆಯೂ ನಾನು ಸಹಿಸ ಬೇಕಾಗಿರುವುದು ॥೧೬॥

ಮತ್ತು, ಈಗ ನಿಮಗೆ ನಾನೊಂದು ರಹಸ್ಯವನ್ನು ಹೇಳುವೆನು ಪೂರ್ವದಲ್ಲಿ ನಾನು ಏನೋ ಒಂದು ಕಾರಣದಿಂದ ರಕ್ಕೆಯನ್ನು ಸುಟ್ಟುಗೊಂಡು, ಮೆಲ್ಲಗೆ ನಿಶಾಕರನೆಂಬ ಮುನಿಯ ಹತ್ತಿರಕ್ಕೆ ಹೋದೆನು ॥೧೭॥

ಆಗ ರಕ್ಕೆ ಸುಟ್ಟುಹೋಗಿರುವ ನನ್ನನ್ನು ನೋಡಿ, ಆ ನಿಶಾಕರನೆಂಬ ಮುನಿಯು, ನನ್ನನ್ನು ಕುರಿತು ' ಎಲೈ ಗೃಧ್ರನ! ನಿನ್ನ ರಕ್ಕೆ ಏತಕ್ಕೆ ಸುಟ್ಟುಹೋಯ್ತು ? ನಿನಗೆ ಗೊತ್ತಿದ್ದರೆ ಹೇಳು ' ಎಂದು ಕೇಳಿದನು ॥೧೮-೧೯॥

ಅದಕ್ಕೆ ನಾನು ' ಅಯ್ಯಾ! ಮಹರ್ಷಿಯೇ! ನಾನೂ, ನನ್ನ ತಮ್ಮನಾದ ಜಟಾಯುವೂ, ನಮ್ಮ ವೀರ್ಯಶಕ್ತಿಯನ್ನು ಪರೀಕ್ಷಿಸುವುದಕ್ಕೋಸ್ಕರ ಸೂರ್ಯಮಂಡಲದವರೆಗೂ ಹೋಗಿಬಿಟ್ಟೆವು. ಆಮೇಲೆ, ಸೂರ್ಯಕಿರಣತಾಪದಿಂದ ಸಂಕಟಪಡುತಿರುವ ಜಟಾಯುವನ್ನು, ನಾನು ನನ್ನ ರಕ್ಕೆಯನ್ನು ಮರೆಮಾಡಿಕೊಂಡು ಸಂರಕ್ಷಿಸಿದೆನು. ನನ್ನ ರಕ್ಕೆಗಳು ಸೂರ್ಯಕಿರಣದಿಂದ ಸುಟ್ಟು ಹೋದುವು ನಾನು ನಿನಗೆ ಶರಣಾಗತನಾಗಿರುವೆನು ನನ್ನನ್ನು ನೀನು ಕಾಪಾಡಬೇಕು ' ಎಂದು ಪ್ರಾರ್ಥಿಸಿದೆನು ॥೨೧॥

ಆಗ ನಿಶಾಕರ ಮುನಿಯು ನನ್ನನ್ನು ಕುರಿತು ಹೀಗೆ ಹೇಳಿದನು —

ಅಪ್ಪಾ! ಗೃಧ್ರ! ಈ ಪ್ರಾಪಂಚಿಕ ದುಃಖವೆಲ್ಲವೂ ದೇಹಮೂಲಕವಾದುದು, ಈ ದೇಹವು ಕರ್ಮದಿಂದ ಹುಟ್ಟಿರುವುದು, ಕರ್ಮವು ಅಭಿಮಾನದಿಂದ ಜನಿಸುವುದು, ಆ ಅಭಿಮಾನವು

ಸೋಪಿ ಮೋಹಾತ್ಮಕಾಜ್ಞಾನಾತ್ ತಚ್ಚಾಧ್ಯಸ್ತಂ ನಿಜಾತ್ಮನಿ ॥೨೦॥
ಏವಮಜ್ಞಾನಜೋ ದೇಹೇ ಜನ್ಮಮೃತ್ಯುಜರಾದಯಃ ।
ಸಿದ್ಧಾಸ್ತಾನೇವ ಹಿ ಭ್ರಾಸ್ತ್ಯಾ ಕಲ್ಪಂತೇ ಪಾಮರಾಃ ಪರೇ ॥೨೧॥
ಸತ್ಸಙ್ಗರಹಿತಾಃ ಶಾಸ್ತ್ರವಿಚಾರಪರಿವರ್ಜಿತಾಃ ॥೨೨॥
ಏವಮೂಢಸ್ಯ ದೇಹಸ್ಯ ಜನನಂ ಮರಣಂ ತಥಾ ।
ವಕ್ಷ್ಯಾಮಿ ಪಕ್ಷಿ ತತ್ ಸರ್ವಂ ಸಾವಧಾನಮನಾಃ ಶೃಣು ॥೨೩॥
ಮೃತಿಕಾಲೋತ್ಥಿತೋದಾನವಹ್ನಿತಾಪಿತಶೋಣಿತಮ್ ।
ಜಲಂ ಸ್ಯಾತ್ ತದನಾಧಾರೋ ವ್ಯಾನೋ ಗಾತ್ರಂ ತ್ಯಜೇಚ್ಛನೈಃ ॥೨೬॥
ತತಃ ಸವಹ್ನ್ಯುದಾನೇನ ನುತ್ತಃ ಸೋಪಾನದೇಶತಃ ।
ಅಪಾನಂ ಪ್ರೇರಯೇತ್ ಸೋಪಿ ಪ್ರಾಣಬಂಧಂ ತ್ಯಜತ್ಯಥ ॥೨೭॥
ತೇ ನಾಭಿಗಾಃ ಪ್ರೇರಯಂತಿ ಸಮಾನಂ ಸ ಚ ತೃಟ್ ಸಹ ।
ಪ್ರಾಣಂ ಕ್ಷಿಪೇತ್ ಸ ಚಾಽಸ್ಥಾನಃ ಪಿತ್ತಂ ತಚ್ಚ ಕಫಂ ತತಃ ॥೨೮॥

ಅನೇಕದಿಂದ ಹುಟ್ಟುವುದು, ಆ ಅನೇಕವೆಂಬುದು ಮೋಹರೂಪವಾದ ಅಜ್ಞಾನದಿಂದ ಹುಟ್ಟುವುದು, ಈ ಅಜ್ಞಾನವಾದರೋ, ಆತ್ಮನಲ್ಲಿ ಆರೋಪಿತವಾಗಿರುವುದು ॥೨೨॥

ಹೀಗೆ ಅಜ್ಞಾನ ಜನ್ಯವಾಗಿರುವ ಈ ದೇಹದಲ್ಲಿ ಜನನ ಮರಣಾದಿಗಳುಂಟಾಗಿರುವುವು ಇವುಗಳನ್ನೇ, ಅಜ್ಞಾನಿಗಳು, ಸತ್ಸಂಗವೂ ಶಾಸ್ತ್ರ ವಿಚಾರವೂ ಇಲ್ಲದೆ ಮೋಹದಿಂದ ಪರಮಾತ್ಮನಲ್ಲಿ ಕಲ್ಪಿಸಿಕೊಳ್ಳುವರು ॥೨೩-೨೪॥

ಎಲೈ ಗೃಧ್ರನ! ಈ ರೀತಿಯಾಗಿರುವ ದೇಹಕ್ಕೆ ಜನನ ಮರಣಗಳುಂಟಾಗುವ ಬಗೆಯನ್ನು ಹೇಳುವನು, ಇದನ್ನೆಲ್ಲ ನೀನು ಸಾವಧಾನ ಚಿತ್ತನಾಗಿ ಕೇಳುವನಾಗು ॥೨೫॥

ಪ್ರಾಣಿಗಳಿಗೆ ಮರಣಕಾಲದಲ್ಲಿ ಉದಾನನಾಮಕವಾದ ವಾಯುವು ವಿಶೇಷವಾಗಿ ಉಲ್ಬಣವಾಗುವುದು, ಆಗ ಅದು ಅಗ್ನಿರೂಪವಾಗಿ ದೇಹದಲ್ಲಿರುವ ರಕ್ತವನ್ನೆಲ್ಲ ಕಾಯಿಸಿಬಿಟ್ಟು ನೀರಾಗುವುದು ಆಗ ವ್ಯಾನವೆಂಬ ವಾಯುವು ಆಧಾರಶೂನ್ಯವಾಗಿ ಮೆಲ್ಲಗ ಶರೀರವನ್ನು ಬಿಟ್ಟುಬಿಡುವುದು ॥೨೬॥

ಆಮೇಲೆ ಅಗ್ನಿ ರೂಪವಾದ ಉದಾನವಾಯುವಿನಿಂದ ಪ್ರೇರಿತವಾಗಿ, ಆ ವ್ಯಾನವಾಯುವು ಅಪಾನದೇಶಕ್ಕೆ ಹೋಗಿ, ಅಲ್ಲಿ ಅಪಾನವಾಯುವನ್ನು ಪ್ರೇರಿಸುವುದು, ಬಳಿಕ ಅದೂ ಪ್ರಾಣ ಬಂಧವನ್ನು ಬಿಟ್ಟುಬಿಡುವುದು ॥೨೭॥

ಆಗ ಈ ಉದಾನ ವ್ಯಾನ ಅಪಾನಗಳೆಲ್ಲವೂ ಸೇರಿ ನಾಭಿಸ್ಥಾನಕ್ಕೆ ಹೋಗಿ, ಅಲ್ಲಿ ಸಮಾನ ಎಂಬ ವಾಯುವನ್ನು ಪ್ರೇರಿಸುವುವು ಆಮೇಲೆ ಈ ಉದಾನಾದಿಗಳೊಡನೆ ಸೇರಿದ ಸಮಾನ ವಾಯುವು, ಪ್ರಾಣವಾಯುವನ್ನು ಪ್ರೇರಿಸುವುದು ಬಳಿಕ ಆ ಪ್ರಾಣವಾಯುವೂ ನಿರಾಧಾರವಾಗಿ ಪಿತ್ತವನ್ನು ಪ್ರೇರಿಸುವುದು, ಆಮೇಲೆ ಪಿತ್ತವು ಕಫನನ್ನು ಪ್ರೇರಿಸುವುದು ॥೨೮॥

ರುದ್ಧಮಾರ್ಗಾಸ್ತತಃ ಪ್ರಾಣಾಃ ಕಣ್ಠೇ ತ್ ಕಾಲಂ ಹೃದಿ ಸ್ಥಿತಾಃ ।
ಉದಾನೇನಾಹೃತಾಶೇಷಭೂತಸೂಕ್ಷ್ಮೇನ್ದ್ರಿಯೈಃ ಸಹ ॥೧೯॥
ಉದಾನಸ್ತಾಂತ್ಸಮಾಕರ್ಷ ಕೃಛ್ರಾತ್ ಕಣ್ಠಾದ್ವಿನಿರ್ಗಮೇತ್ ।
ಸಜೀವಃ ಶ್ರೋತ್ರನೇತ್ರಾದಿಮಾರ್ಗಾದ್ಯಾತಿ ಶನೈಶ್ಶನೈಃ ॥೨೦॥
ತತೋಽನ್ಯೇ ವಾಯವೋ ಜೀವೋ ದೃಢಾಭ್ಯಸ್ತಕ್ರಿಯಾಂ ಸ್ಮರ ।
ಭೂತಸೂಕ್ಷ್ಮೈರ್ವೃತೋ ಯಾತಿ ದಕ್ಷಿಣಾಯನತೋ ಹರಾತ್ ॥೨೧॥
ಅತಿವಾಹೋಽಮರೈರ್ನೀತೋ ಧೂಮರಾತ್ರ್ಯಾದಿಪರ್ವಭಿಃ ।
ಕ್ರಮಾತ್ ಪ್ರಾಪ್ತಶ್ಚನ್ದ್ರಲೋಕಂ ನೇಹಂ ಜಲಮಯಂ ವಿಶೇತ್ ॥೨೨॥
ತತ್ರ ಸ್ಥಿತ್ವಾ ಭುಕ್ತಭೋಗಃ ಕರ್ಮನಾಶೋತ್ಥತಾಪತಃ ।
ಧಾರಾತ್ಮನಾ ಸ್ರವದ್ಗಾತ್ರಃ ಪತತಿ ಸ್ಥಾತುಮಕ್ಷಮಃ ॥೨೩॥
ಪ್ರಾಪ್ಯಾಥ ಪೂರ್ವಪನ್ಥಾನಂ ಕ್ರಮಾದ್ವಾಯ್ವಾದಿರೂಪತಃ ।
ಭೂಸ್ಥೋ ವ್ರೀಹ್ಯನ್ನಶುಕ್ಲಾತ್ಮಾ ಸ್ವಯೋಗ್ಯಾಂ ಯೋನಿಮಾವಿಶೇತ್ ॥

ಆಮೇಲೆ ಈ ಪ್ರಾಣವಾಯುಗಳು ಉದಾನದಿಂದ ಸಳೆಯಲ್ಪಟ್ಟ ಪಂಚತನ್ಮಾತ್ರೆಗಳೊಡನೆಯೂ ಸೂಕ್ಷ್ಮೇಂದ್ರಿಯಗಳೊಡನೆಯೂ ಸೇರಿಕೊಂಡು, ಸ್ವಲ್ಪಕಾಲ ಹೃದಯದೇಶದಲ್ಲಿ ಇರುವುವು ॥೧೯॥

ಬಳಿಕ ಉದಾನವಾಯುವು ಇವುಗಳನ್ನೆಲ್ಲ ಆಕರ್ಷಿಸಿಕೊಂಡು ಅತಿ ಕಷ್ಟದಿಂದ ಕಂಠವನ್ನು ಬಿಟ್ಟು ಹೊರಡುವುದು ಆಗ ಜೀವನೂ ಶ್ರೋತ್ರ ನೇತ್ರ ಮುಂತಾದ ಮಾರ್ಗದಿಂದ ನಿಧಾನವಾಗಿ ಹೊರಟುಹೋಗುವನು ॥೨೦॥

ಅನಂತರ, ಉಳಿದ ವಾಯುಗಳೂ ಹೊರಟುಹೋಗುವುವು ಬಳಿಕ ಜೀವನು ತನ್ನ ಚಿರಾಭ್ಯಸ್ತವಾದ ಕರ್ಮವನ್ನು ಸ್ಮರಿಸಿಕೊಂಡು, ಸೂಕ್ಷ್ಮಭೂತಗಳೊಡನೆ ಯುಕ್ತನಾಗಿ, ಒಲಾತ್ಕಾರದಿಂದ ದಕ್ಷಿಣಾಯನ ಮಾರ್ಗದಲ್ಲಿ ಹೊರಡುವನು ॥೨೧॥

ಆಮೇಲೆ ಅತಿವಾಹಿಕ(ಲಿಂಗ)ದೇಹವುಳ್ಳವನಾಗಿರುವ ಈ ಜೀವನು, ದೇವತೆಗಳಿಂದ ಧೂಮಾದಿ ಮಾರ್ಗದಲ್ಲಿ ಒಯ್ಯಲ್ಪಟ್ಟವನಾಗಿ, ಕ್ರಮೇಣ ಚಂದ್ರಲೋಕವನ್ನು ಹೊಂದಿ, ಜಲಮಯವಾದ ಶರೀರವನ್ನು ಪ್ರವೇಶಿಸುವನು ॥೨೨॥

ಅಲ್ಲಿದ್ದುಗೊಂಡು ಭೋಗವನ್ನನುಭವಿಸಿ, ಆಮೇಲೆ ತನ್ನ ಕರ್ಮನಾಶವಾಗಲಾಗಿ, ಇದರ ತಾಪದಿಂದ ಧಾರಾರೂಪದಲ್ಲಿ ಸ್ರವಿಸಿದ ಶರೀರವುಳ್ಳವನಾಗಿ, ಅಲ್ಲಿ ನಿಲ್ಲಲು ಶಕ್ತಿಯಿಲ್ಲದೆ ಬಿದ್ದು ಬಿಡುವನು ॥೨೩॥

ಆಮೇಲೆ ಮತ್ತೆ ವಾಯು ಮುಂತಾದ ರೂಪದಿಂದ ಪೂರ್ವದ ಮಾರ್ಗವನ್ನು ಹೊಂದಿ, ಭೂಮಿಯಲ್ಲಿ ಕ್ರಮವಾಗಿ ಮೊದಲು ವ್ರೀಹಿರೂಪವನ್ನೂ ಆಮೇಲೆ ಅನ್ನರೂಪವನ್ನೂ ಬಳಿಕ ಶುಕ್ಲರೂಪವನ್ನೂ ಪಡೆದು, ಅನಂತರ ತನಗೆ ಯೋಗ್ಯವಾಗಿರುವ ಯೋನಿಯನ್ನು ಪ್ರವೇಶಿಸುವನು ॥೨೪॥

ಸ್ತ್ರೀಮೃತ್ಸ್ನಃ ಸ್ಯಾತ್ ಸ ವೀರ್ಯಂ ತು ಸರಕ್ತಂ ತಪ್ತಮಗ್ನಿನಾ ।
ಕ್ರಮಶಃ ಸಪ್ತಮೇ ಮಾಸಿ ಸಮಗಾಙ್ಗಿಂ ಭವೇದ್ವಪುಃ ॥೩೫॥

ತನ್ಮಾಸ್ಯಸೌ ಬ್ರಹ್ಮರಂಧ್ರಂ ತತ್ರಾವಿಷ್ಟೋಸ್ಥಿಪೀಡಿತಃ ।
ಮಲಮೂತ್ರವಸೋಲ್ಬಾದಿವೃತೋ ವಿಷ್ಣುಂ ಸ್ತುವ್ ವಸೇತ್ ॥೩೬॥

ನಾಭಿಸೂತ್ರಾಲ್ಪರನ್ಧ್ರೇಣ ಮಾತೃಭುಕ್ತಾನ್ನಸಾರತಃ ।
ವರ್ಧತೇ ಗರ್ಭಗಃ ಪಿಣ್ಡೋ ನ ವಿಪದ್ಯೇತ ಸ್ವಕರ್ಮತಃ ॥೩೭॥

ಪ್ರಸೂತಿವಾತಸ್ಪೃಷ್ಟೋಧ ಮೂಢೋ ಯೋನೇಃ ಪತೇದ್ಭುವಿ ।
ಏವಂ ಪುನಃಪುನರ್ಜನ್ಮ ಮೃತ್ಯೋಶ್ಚಾನ್ತೋಸ್ತಿ ತಸ್ಯ ನ ॥೩೮॥

ಶ್ರೀರಾಮಾನುಗ್ರಹಪ್ರಾಪ್ತಗುರುಪ್ರೋಕ್ತಾತ್ಮವಿದ್ಯಯಾ ।
ಉದ್ಧೃತಃ ಸ ಸುಖಂ ತಿಷ್ಠೇತ್ ಪ್ರವಾಹೋದ್ಧೃತಕೀಟವತ್ ॥೩೯॥

ಜೆದ್ವಾಪ್ತಾಹಂಕೃತಿಃ ಪಕ್ಷಿನ್ ತಪ್ತಾಯಃಪಿಣ್ಡವತ್ ಸದಾ ।

ಆಮೇಲೆ ಅವನು ಸ್ತ್ರೀಯರ ಉದರವನ್ನು ಸೇರುವನು ಅಲ್ಲಿ ಶುಕ್ಲ ಶೋಣಿತಗಳೆರಡೂ ಸೇರಿ ಅಗ್ನಿತಪ್ತವಾಗುವುವು ಬಳಿಕ ಕ್ರಮೇಣ ಏಳನಯ ತಿಂಗಳಲ್ಲಿ ಅವಯವಪೂರ್ಣವಾದ ಶರೀರವಾಗುವುದು ॥೩೫॥

ಆ ಯೇಳನೆಯ ತಿಂಗಳಲ್ಲಿ, ಈ ಜೀವನು ಸ್ತ್ರೀಗರ್ಭದಲ್ಲಿ ಬ್ರಹ್ಮರಂಧ್ರವನ್ನು ಪ್ರವೇಶಿಸಿ, ಅಲ್ಲಿ ಅಸ್ಥಿಗಳಿಂದ ಪೀಡಿತನಾಗಿ, ಸ್ತ್ರೀದೇಹದ ಮಲ ಮೂತ್ರ ವಸೆ ಮೊದಲಾದುವುಗಳಿಂದ ಪರಿವೃತನಾಗಿ, ವಿಷ್ಣುವನ್ನು ಸ್ತುತಿಸುತ ಅಲ್ಲಿ ವಾಸವಾಗಿರುವನು ॥೩೬॥

ಅಲ್ಲಿ, ತಾಯಿ ಊಟಮಾಡಿದ ಆಹಾರದ ಸಾರವು, ನಾಭಿಸೂತ್ರದೊಳಗಿರುವ ಸೂಕ್ಷ್ಮವಾದ ರಂಧ್ರದ ದ್ವಾರಾ ಈ ಗರ್ಭಕ್ಕೆ ಹೋಗಿ ಸೇರುವುದು ಇದುಂದ ಈ ಗರ್ಭ ಬೆಳೆಯುವುದು ಕರ್ಮಪ್ರಾಬಲ್ಯದಿಂದ ಮರಣಹೊಂದದಿರುವುದು ॥೩೭॥

ಆಮೇಲೆ ಪ್ರಸವವಾಯುವಿನಿಂದ ಪ್ರೇರಿತನಾಗಿ ಗುಹ್ಯದ್ವಾರಾ ಭೂಮಿಯಲ್ಲಿ ಪತನ ಹೊಂದುವನು ಹೀಗೆ ಮತ್ತೆಮತ್ತೆ ಈತನಿಗೆ ಜನನವೂ ಮರಣವೂ ಉಂಟಾಗುತಲೇ ಇರುವುವು, ಇವಕ್ಕೆ ಕೊನೆಯೇ ಇಲ್ಲ ॥೩೮॥

ಹೀಗೆ ಅನೇಕ ಜನ್ಮಗಳು ಕಳೆದಬಳಿಕ, ಶ್ರೀರಾಮನ ಅನುಗ್ರಹದಿಂದ ಸದ್ಗುರು ಲಭಿಸುವನು, ಇಂತಹ ಗುರುವಿನಿಂದ ಜ್ಞಾನೋಪದೇಶವನ್ನು ಪಡೆದು, ದೊಡ್ಡ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತಿದ್ದು ಈಚೆಗೆ ತೆಗೆಯಲ್ಪಟ್ಟ ಒಂದು ಕೀಟದಂತೆ, ಆ ಬ್ರಹ್ಮವಿದ್ಯೆಯಿಂದ ಉದ್ಧೃತನಾಗಿ ಸುಖವಾಗಿರುವನು ॥೩೯॥

ಅಯ್ಯಾ ! ಪಕ್ಷಿರಾಜನೆ ! ಅಯಃಪಿಂಡವು ತಪ್ತವಾದಮೇಲೆ ಹೇಗೆ ಉಷ್ಣತೆಯನ್ನು ಸ್ವೀಕರಿಸುವುದೋ, ಹಾಗೆ ಅಹಂಕಾರವು ಚಿತ್ತಿನಿಂದ ವ್ಯಾಪ್ತವಾಗಿ ಜ್ಞಾನಶಕ್ತಿಯನ್ನು ಪಡೆಯುವುದು,

ತೇನ ದೇಹಸ್ಯ ತಾದಾತ್ಮ್ಯಾತ್ ದೇಹಶ್ಚೇತನಭಾಗ್ಭವೇತ್ ॥೪೦॥
ದೇಹೋಽಹಮಿತಿ ಬುದ್ಧಿಃ ಸ್ಯಾತ್ ಆತ್ಮನೋಽಹಂಕೃತೇರ್ಬಲಾತ್ ।
ತನ್ಮೂಲಏವ ಸಂಸಾರಃ ಸುಖದುಃಖಾದಿಸಾಧಕಃ ॥೪೧॥

ಆತ್ಮನೋ ನಿರ್ವಿಕಾರಸ್ಯ ಮಿಥ್ಯಾತ್ವಾಧ್ಯಾಸತಃ ಸದಾ ।
ದೇಹೋಽಹಂ ಕರ್ಮಕರ್ತಾಽಹಂ ಇತಿ ಸಙ್ಕಲ್ಪ್ಯ ಸರ್ವದಾ ॥೪೨॥

ಜೀವಃ ಕರೋತಿ ಕರ್ಮಾಣಿ ತತ್ಫಲೈರ್ಬದ್ಧ್ಯತೇಽವಶಃ ।
ಊರ್ಧ್ವಾಧೋ ಭ್ರಮತೇ ನಿತ್ಯಂ ಪಾಪಪುಣ್ಯಾತ್ಮಕಃ ಸ್ವಯಮ್ ॥೪೩॥
ಪುನರ್ಬಾಲ್ಯಾದಿದುಃಖಾನಿ ಭವನ್ತ್ಯಭಿನಿವೇಶತಃ ॥೪೪॥

ಏವಂ ದುಃಖಾಕರೇ ದೇಹೇ ತ್ಯಕ್ತ್ವಾಽಧ್ಯಾಸಂ ಗುರೋರ್ಮುಖಾತ್ ।
ಶರೀರತ್ರಿತಯಾದ್ಭಿನ್ನಂ ಜ್ಞಾತ್ವಾತ್ಮಾನಂ ಸುಖೀ ಭವ ॥೪೫॥
ಏವಂ ವಿಚಾರಿತೇ ತತ್ತ್ವೇ ದುಃಖಂ ತೇ ನಶ್ಯತಿ ಧ್ರುವಮ್ ।
ತತೋ ದೇಹೇನ ಸಹಿತೋ ಯಾವತ್ಪ್ರಾರಬ್ಧಸಂಕ್ಷಯಃ ।
ತಾವತ್ ತಿಷ್ಠ ಸುಖೇನ ತ್ವಂ ಮುಕ್ತಕಞ್ಚುಕಸರ್ಪವತ್ ॥೪೬॥

ಒಳಕ ಅದು ದೇಹದಲ್ಲಿ ಆತ್ಮಭಾವನೆಯನ್ನಿಡುವುದು, ಆಮೇಲೆ ದೇಹವೂ ಚೈತನ್ಯಯುಕ್ತವಾಗುವುದು ॥೪೦॥

ಬಳಿಕ, ಆ ಅಹಂಕಾರದ ಬಲದಿಂದ ಆತ್ಮನಿಗೆ ದೇಹವೇ ನಾನೆಂಬ ಬುದ್ಧಿಯುಂಟಾಗುವುದು ಈ ದೇಹಾತ್ಮಭಾವನಾಮೂಲವಾಗಿಯೇ, ಸುಖದುಃಖಾದಿ ಸಾಧಕವಾದ ಸಂಸಾರವುದಯಿಸುವುದು ॥೪೧॥

ನಿರ್ವಿಕಾರನಾದ ಆತ್ಮನಲ್ಲಿ ಮಿಥ್ಯಾತ್ವವನ್ನಾರೋಪಿಸಿ ' ಈ ದೇಹವೇ ನಾನು, ನಾನು ಕರ್ಮ ಮಾಡತಕ್ಕವನು ' ಎಂದು ಸಂಕಲ್ಪ ಮಾಡಿಕೊಂಡು, ಜೀವನು ಕರ್ಮಗಳನ್ನು ಮಾಡುವನು, ಆ ಮೇಲೆ ಆ ಕರ್ಮಗಳ ಫಲದಿಂದ ಬದ್ಧನಾಗುವನು ಬಳಿಕ ಕೇವಲ ಕರ್ಮಪರತಂತ್ರನಾಗಿ, ಆಯಾ ಪುಣ್ಯಪಾಪಗಳ ಸ್ವರೂಪದಲ್ಲಿ, ಮೇಲಕ್ಕೂ ಕೆಳಕ್ಕೂ ಭ್ರಮಿಸುತ್ತಿರುವನು ಆಮೇಲೆ, ಇವನ ಪ್ರಾಕ್ತನವಾಸನಾನುಗುಣವಾಗಿ ಮತ್ತೆ ಬಾಲ್ಯಾದಿ ದುಃಖಗಳುಂಟಾಗುವುವು ॥೪೨-೪೪॥

ಎಲೈ ಪಕ್ಷಿಯೆ ! ಹೀಗೆ ದುಃಖಾಕರವಾಗಿರುವ ದೇಹದಲ್ಲಿ ಆತ್ಮತ್ವಾರೋಪವುಂಟಾಗುವುದೆಂಬ ವಿಷಯವನ್ನು ಗುರುವಿನ ಮುಖದಿಂದ ತಿಳಿದುಕೊಂಡು, ಆಮೇಲೆ ಆತ್ಮನು ಸ್ಥೂಲಾದಿ ದೇಹತ್ರಯಕ್ಕಿಂತ ಭಿನ್ನನೆಂಬುದನ್ನೂ ನಿಶ್ಚಯಿಸಿಕೊಂಡು ನೀನು ಸುಖಿಯಾಗಿರು ॥೪೫॥

ಈ ರೀತಿಯಾಗಿ ತತ್ವವನ್ನು ವಿಚಾರಮಾಡಿದರೆ, ನಿನಗೆ ನಿಶ್ಚಯವಾಗಿ ದುಃಖನಾಶವಾಗುವುದು. ಆಮೇಲೆ, ಪ್ರಾರಬ್ಧಕರ್ಮ ಕ್ಷಯವಾಗುವವರೆಗೂ, ಪೊರೆಯನ್ನು ಬಿಟ್ಟಿರುವ ಹಾವಿನಂತೆ, ಈ ದೇಹವನ್ನೇ ಆಶ್ರಯಿಸಿಕೊಂಡಿರು ॥೪೬॥

ಅನ್ಯದ್ವಕ್ಷ್ಯಾಮಿ ತೇ ಪಕ್ಷಿನ್ ಶೃಣು ಮೇ ಪರಮಂ ಹಿತಮ್ ॥೪೩॥
ತ್ರೇತಾಯುಗೇ ದಾಶರಥಿಃ ಭೂತ್ವಾ ನಾರಾಯಣೋಽವ್ಯಯಃ ।
ರಾವಣಸ್ಯ ವಿನಾಶಾಯ ದಂಡಕಾವನಮೇಷ್ಯತಿ ।
ಸೀತಯಾ ಭಾರ್ಯಯಾ ಸಾರ್ಧಂ ಲಕ್ಷ್ಮಣೇನ ಸಮನ್ವಿತಃ ॥೪೪॥
ತತ್ರಾಶ್ರಮೇ ಜನಕಜಾಂ ಭ್ರಾತೃಭ್ಯಾಂ ರಹಿತಾಂ ವನೇ ।
ರಾವಣಶ್ಚೋರವನ್ನೀತ್ವಾ ಲಙ್ಕಾಯಾಂ ಸ್ಥಾಪಯಿಷ್ಯತಿ ॥೪೫॥
ತಸ್ಯಾಃ ಸುಗ್ರೀವನಿರ್ದೇಶಾತ್ ವಾನರಾಃ ಪರಿಮಾರ್ಗಣೇ ।
ಆಗಮಿಷ್ಯನ್ತಿ ಜಲಧೇಃ ತೀರಂ ತತ್ರ ಸಮಾಗಮಃ ।
ತವ ತೈಃ ಕಾರಣವಶಾತ್ ಭವಿಷ್ಯತಿ ನ ಸಂಶಯಃ ॥೪೬॥
ತದಾ ಸೀತಾಸ್ಥಿತಿಂ ತೇಭ್ಯಃ ಕಥಯಸ್ವ ಯಥಾರ್ಥತಃ ।
ತದೈವ ತವ ಪಕ್ಷೌ ದ್ವೌ ಉತ್ಪತ್ಸ್ಯೇತೇ ಪುನರ್ಭವೌ ॥೪೭॥
ಏವಂ ಮಾಂ ಬೋಧಯಾಮಾಸ ನಿಶಾಕರಮುನೀಶ್ವರಃ ।
ಪಶ್ಯನ್ತು ಪಕ್ಷೌ ಮೇ ಜಾತೌ ನೂತನಾವತಿಕೋಮಲೌ ॥೪೮॥
ಪಕ್ಷೋತ್ಪತ್ತ್ಯೈವ ವೋ ಜಾನೇ ಕಾರ್ಯಸಿದ್ಧಿಂ ಕರೇ ಸ್ಥಿತಾಮ್ ॥೪೯॥

ಎಲೈ ಪಕ್ಷಿಯ ! ನಿನಗೆ ಇನ್ನೂ ಒಂದು ಹಿತವಾದುದನ್ನು ಉಪದೇಶಿಸುವೆನು, ಕೇಳು ಮುಂದೆ ತ್ರೇತಾಯುಗದಲ್ಲಿ ಅವ್ಯಯನಾದ ಶ್ರೀಮನ್ನಾರಾಯಣನು, ರಾವಣನ ವಧೆಗೋಸ್ಕರ ವಾಗಿ, ಹೆಂಡತಿಯಾದ ಸೀತೆಯೊಡನೆಯೂ ಅನುಜನಾದ ಲಕ್ಷ್ಮಣನೊಡನೆಯೂ ಕೂಡಿಕೊಂಡು, ದಂಡಕಾವನಕ್ಕೆ ಬರುವನು ॥೪೭-೪೮॥

ಅಲ್ಲಿ ಆಶ್ರಮದೊಳಗೆ ಈ ರಾಮಲಕ್ಷ್ಮಣರಿಬ್ಬರೂ ಇಲ್ಲದಿರುವಾಗ ರಾವಣನು ಕಳ್ಳ ನಂತೆ ಸೀತೆಯನ್ನು ಅಪಹರಿಸಿಕೊಂಡು ಹೋಗಿ ಲಂಕಾಪಟ್ಟಣದಲ್ಲಿ ಇರಿಸುವನು ॥೪೯॥

ಬಳಿಕ ಸೀತೆಯನ್ನು ಹುಡುಕುವುದಕ್ಕಾಗಿ ಸುಗ್ರೀವನ ಅಪ್ಪಣೆಯಿಂದ ಹೊರಟು, ವಾನ ರರು ಸಮುದ್ರತೀರಕ್ಕೆ ಬರುವರು ಅಲ್ಲಿ ನಿನಗೆ ಕಾರಣಾಂತರದಿಂದ ಅವರೊಡನೆ ಸಮಾಗಮವಾ ಗುವುದು , ಇದರಲ್ಲಿ ಸಂಶಯವಿಲ್ಲ ॥೪೯॥

ಆಗ ನೀನು ಅವರಿಗೆ ಸೀತೆಯ ವೃತ್ತಾಂತವನ್ನು ಯಥಾವತ್ತಾಗಿ ಹೇಳು ಆ ಕ್ಷಣವೇ ನಿನ್ನ ಎರಡು ರಕ್ಕೆಗಳೂ ಪುನಃ ಉತ್ಪನ್ನವಾಗುವುವು ॥೪೯॥

ಅಯ್ಯಾ ! ವಾನರಾಧಿಪತಿಗಳಿರಾ ! ಹೀಗೆಂದು ಆ ನಿಶಾಕರನೆಂಬ ಮುನಿಶ್ರೇಷ್ಠನು ಆಗ ನನಗೆ ಹೇಳಿದನು. ಇದೋ- ಇಲ್ಲಿ ನೋಡಿ , ನನಗೆ ಈಗ ಹೊಸದಾಗಿ ಅತಿ ಕೋಮಲವಾದ ರಕ್ಕೆಗಳು ಹುಟ್ಟಿದುವು. ನನಗೆ ರಕ್ಕೆ ಹುಟ್ಟಿದುದರಿಂದಲೇ, ನಿಮ್ಮ ಕಾರ್ಯಸಿದ್ಧಿ ಹಸ್ತಗತವಾಗಿ ರುವುದೆಂದು ನಾನು ನಂಬುವೆನು ॥೪೩-೪೯॥

ಲಙ್ಕಾಯಾಂ ರಾವಣಾಗಾರೇ ಪ್ರಮದಾವನಮಧ್ಯಮೇ ।
ಸ್ವಸ್ತಿ ವೋಽಸ್ತು ಗಮಿಷ್ಯಾಮಿ ಸೀತಾಂ ದ್ರಕ್ಷ್ಯಥ ನಿಶ್ಚಯಃ ।
ಯತ್ನಂ ಕುರುಧ್ವಂ ದುರ್ಲಙ್ಘ್ಯಸಮುದ್ರಸ್ಯ ವಿಲಙ್ಘನೇ ॥೫೪॥

ಸಂಪಾತಿಸ್ತ್ವೇವಮುಕ್ತ್ವಾ ತಾ᳘ ಸ್ಮರ᳘ ರಾಮಮನನ್ಯಧೀಃ ।
ಜಿಜ್ಞಾಸುಃ ಸ್ವಗತಿಂ ವೀರಃ ಪ್ರಯಯೌ ಸ ವಿಹಾಯಸಾ ॥೫೫॥

ಇತ್ಯುಕ್ತಾಃ ಪಕ್ಷಿರಾಜೇನ ವಾನರಾಬುದ್ಧಿಮತ್ತರಾಃ ।
ತತಸ್ತದಮೃತಾಸ್ವಾದಂ ಸೀತಾವೃತ್ತಾನ್ತಗೋಚರಮ್ ।
ಶ್ರುತ್ವಾ ಪಕ್ಷಿವಚಃ ಸರ್ವೇ ವೇಲಾಯಾಂ ನ್ಯವಸ᳘ ಸುಖಮ್ ॥೫೬॥

ಇತಿ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಸಂಪಾತಿಸಮಾಗಮೋ ನಾಮ
ಸಪ್ತದಶಃ ಸರ್ಗಃ




ನಿಮಗೆ ಕುಶಲವಾಗಲಿ ನಾನಿನ್ನು ಹೋಗುವೆನು ನೀವು ನಿಶ್ಚಯವಾಗಿ ಸೀತೆಯನ್ನು ಕಾಣುವಿರಿ ಈಗ ಮೊದಲು ದುಸ್ತರವಾದ ಈ ಸಮುದ್ರವನ್ನು ದಾಟುವುದರಲ್ಲಿ ಪ್ರಯತ್ನ ಮಾಡಿ (ಎಂದು ಸಂಪಾತಿಯು ಅಂಗದಾದಿಗಳಿಗೆ ಹೇಳಿದನು) ॥೫೪॥

ಎಲೌ ಪಾರ್ವತಿ ! ಆಗ ಸಂಪಾತಿಯು ಆ ವಾನರರಿಗ ಹೀಗ ಹೇಳಿ, ತಾನು ಅನನ್ಯಚಿತ್ತನಾಗಿ ಶ್ರೀರಾಮನನ್ನು ಸ್ಮರಿಸುತ, ತನ್ನ ಗಮನಶಕ್ತಿಯನ್ನು ತಿಳಿದುಕೊಳ್ಳಬೇಕೆಂದು, ಅಂತರಿಕ್ಷ ಮಾರ್ಗದಲ್ಲಿ ಹೊರಟುಹೋದನು ॥೫೫॥

ಈರೀತಿಯಾಗಿ ಆ ಜಟಾಯುವಿನಿಂದ ಹೇಳಲ್ಪಟ್ಟ ಮಹಾಬುದ್ಧಿಶಾಲಿಗಳಾದ ಅಂಗದಾದಿ ವಾನರರೆಲ್ಲರೂ, ಅಮೃತದಂತೆ ಮಧುರವಾಗಿರುವ ಸೀತಾವೃತ್ತಾಂತ ವಿಷಯಕವಾದ ಅವನ ಮಾತನ್ನು ಕೇಳಿ, ಆ ಸಮುದ್ರತೀರದಲ್ಲಿ ಸುಖವಾಗಿ ವಾಸಮಾಡಿದರು ॥೫೬॥

ಇದು ಕಿಷ್ಕಿಂಧಾಕಾಂಡದಲ್ಲಿ ಸಂಪಾತಿಸಮಾಗಮವೆಂಬ
ಹದಿನೇಳನೆಯ ಸರ್ಗವು.

ಅಥ ಶ್ರೀಮತ್ಕಿಷ್ಕಿನ್ಧಾಕಾಣ್ಡೇ ಅಷ್ಟಾದಶಃ ಸರ್ಗಃ




ಶ್ರೀ ಶಿವ ಉವಾಚ

ತತಸ್ತೇ ವಾನರಾಃ ಸರ್ವೇ ಸಮ್ಪಾತಿವಚನಾದ್ಧಿತಾತ್ ।
ಸಮುವಾಯಂ ಸಮಾಸಾದ್ಯ ಭಾವಿ ಕಾರ್ಯಮಚಿನ್ತಯನ್ ॥೧॥
ಜಾಮ್ಬವಾನಬ್ರವೀದೇನ ವೀರೋ ಹನೂಮಾನ್ ಮಾರುತಾತ್ಮಜಃ ।
ಅನ್ಯೇ ಕಪಿವರಾಃ ಶೂರಾಃ ಕುಶಲಾಬುದ್ಧಿಮತ್ತರಾಃ ॥೨॥

ಅಙ್ಗದ ಉವಾಚ

ವೃತ್ತಾನ್ತಸ್ತೂಪಲಬ್ಧೋ ನಃ ಸೀತಾಯಾದ್ವಿಜಸತ್ತಮಾತ್ ।
ಸಮುದ್ರಮಧ್ಯಗಾ ಲಙ್ಕಾ ದುಷ್ಪ್ರವೇಶಾ ಸುರಾಸುರೈಃ ॥೩॥
ಲಙ್ಘನೀಯಃ ಸಮುದ್ರಶ್ಚ ಶತಯೋಜನವಿಸ್ತರಃ ।
ಸಮುದ್ರಲಙ್ಘನೇ ಶಕ್ತಿಃ ಕಸ್ಯ ವಃ ಪ್ಲವಗೋತ್ತಮಾಃ ॥೪॥
ತಂ ಪಶ್ಯಾಮಿ ಮಹಾವೀರ್ಯಂ ಸ್ವಾಮಿಕಾರ್ಯಧುರನ್ಧರಮ್ ।
ಕೃತಕೃತ್ಯಾಭವಿಷ್ಯಾಮಃ ಸೀತಾಂ ದೃಷ್ಟ್ವಾ ಮಹಾಬಲಾಃ ।

ಕಿಷ್ಕಿಂಧಾಕಾಂಡದಲ್ಲಿ ಹದಿನೆಂಟನೆಯ ಸರ್ಗವು.



ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಹೀಗೆ ಸಂಪಾತಿಯು ಹೇಳಿ ಹೊರಟುಹೋದ ಬಳಿಕ, ಅತಿ ಹಿತಕರವಾಗಿರುವ ಸಂಪಾತಿಯ ಮಾತಿನಂತೆ, ಜಾಂಬವಂತ, ಮಹಾವೀರನಾದ ಅಂಗದ, ವಾಯುಪುತ್ರನಾದ ಹನುಮಂತ, ಇನ್ನೂ ಇತರರಾದ ಕಾರ್ಯದಕ್ಷರೂ ಬುದ್ಧಿಶಾಲಿಗಳೂ ಆಗಿರುವ ಸಮಸ್ತ ಕಪಿಗಳೂ ಸಭೆ ಸೇರಿ, ಮುಂದೆ ಮಾಡಬೇಕಾದ ಕೆಲಸವನ್ನು ಆಲೋಚಿಸಿದರು ॥೧-೨॥

ಆಗ ಅಂಗದನು ಹೀಗೆ ಹೇಳಿದನು —

ಈಗ ನಮಗೆ ಸಂಪಾತಿಯ ಮುಖದಿಂದ ಸೀತಾದೇವಿಯ ವೃತ್ತಾಂತವೇನೋ ಗೊತ್ತಾಯಿತು, ಆದರೆ, ಈ ಸಮುದ್ರ ಮಧ್ಯದಲ್ಲಿರುವ ಲಂಕಾಪಟ್ಟಣವು, ಸುರಾಸುರರಿಗೂ ದುಷ್ಪ್ರವೇಶವಾಗಿರುವುದು ॥೩॥

ಈಗ ನೂರು ಗಾವುದದಗಲವುಳ್ಳ ಈ ಸಮುದ್ರವನ್ನು ದಾಟಬೇಕಾಗಿರುವುದು. ಅಯ್ಯಾ! ಕಪಿಶ್ರೇಷ್ಠರಾ! ಈ ಸಮುದ್ರವನ್ನು ದಾಟುವುದಕ್ಕೆ ನಿಮ್ಮಲ್ಲಿ ಯಾರಿಗೆ ಸಾಮರ್ಥ್ಯವಿರುವುದು? ॥

ಯಾವನು ಈ ಸಮುದ್ರವನ್ನು ದಾಟುವನೋ, ಅವನೇ ನಮ್ಮಲ್ಲೆಲ್ಲ ಮಹಾವೀರ್ಯನೆಂದೂ ಸ್ವಾಮಿಕಾರ್ಯಧುರಂಧರನೆಂದೂ ನಾನು ತಿಳಿಯುವೆನು. ಎಲೈ ಮಹಾಬಲರಾದ ವಾನರಶ್ರೇಷ್ಠರೇ! ನಾವು ಇನ್ನು ಸೀತಾದೇವಿಯನ್ನು ಸೋಡಿಕೊಂಡು ಹೋದರೆ, ಆಗ ಕೃತಕೃತ್ಯರಾಗು

ಸಮಯೇ ಸ್ವಾಮಿನಃ ಕಾರ್ಯಂ ಯಃ ಕರೋತಿ ಸ ಗಣ್ಯತೇ ॥೫॥
ಇತ್ಯಙ್ಗದವಚಃ ಶ್ರುತ್ವಾ ಸರ್ವೇ ತೇ ವಾನರೋತ್ತಮಾಃ ।
ಪ್ರೋಚುಃ ಸ್ವಂಸ್ವಂ ಬಲಂ ತತ್ರ ಸಮುದ್ರಸ್ಯ ವಿಲಙ್ಘನೇ ॥೬॥
ಕಶ್ಚಿತ್ ತ್ರಿಂಶದ್ಯೋಜನಾನಿ ಕಶ್ಚಿದ್ವಿಂಶತಿಸಂಮಿತಮ್ ।
ಚತ್ವಾರಿಂಶತ್ ಕಶ್ಚಿದಾಪ ಪಞ್ಚಾಶದಪರಃ ಕಪಿಃ ॥೭॥
ಅಙ್ಗದಃ ಪ್ರಾಪ ತಜ್ಜ್ಞಾತ್ವಾ ಈಷನ್ನ್ಯೂನಂ ತದೇವಮು ಧಿಮ್ ॥೮॥
ಜಾಮ್ಬವಾನ್ ವಚನಂ ಪ್ರಾಪ ತರೀಹಂ ಪೂರ್ವಮನ ಧಿಮ್ ।
ವೃದ್ಧತ್ವಾತ್ಪ್ರವನಾರ್ಹತ್ವಾತ್ ಸಂಶಯಃ ಪುನರಾಗಮೇ ॥೯॥
ಪುನಾ ಮೇರ್ವರ್ಚನಾಸಕ್ತಃ ತ್ರಿಃ ಪ್ರದಕ್ಷಿಣಮಾಚರಮ್ ।
ತ್ರಯಸ್ತ್ರಿಂಶತ್ಕೋಟಿದೇವಾಃ ಯತ್ರ ತಿಷ್ಠನ್ತಿ ಸಸ್ತ್ರಿಯಃ ॥೧೦॥
ಅಷ್ಟ ದಿಕ್ಪಾಲಕಾಯಸ್ಯ ಪ್ರದೇಶಪುರಸಂಸ್ಥಿತಾಃ ।
ಹರಿರ್ವೈಕುಣ್ಠಮಧ್ಯಸ್ಥಃ ಶಿವಃ ಕೈಲಾಸಮಧ್ಯಗಃ ॥೧೧॥
ಬ್ರಹ್ಮಾ ಚತುರ್ಮುಖೋ ದೇವಃ ಸತ್ಯಲೋಕಂ ಪ್ರಪಾಸತಿ ॥೧೨॥

ವೆವು ಸಮಯದಲ್ಲಿ ಯಾವನು ಸ್ವಾಮಿಕಾರ್ಯವನ್ನು ಮಾಡುವನೋ, ಅವನೇ ಗಣ್ಯನಾಗುವನು ಎಂದು ಅಂಗದನು ಹೇಳಿದನು ॥೫॥

ಹೀಗೆ ಹೇಳಿದ ಅಂಗದನ ಮಾತನ್ನು ಕೇಳಿ, ಆ ಸಮಸ್ತ ವಾನರಶ್ರೇಷ್ಠರೂ, ಆಗ ಸಮುದ್ರವನ್ನು ದಾಟುವ ವಿಷಯದಲ್ಲಿ ತಮ್ಮ ತಮ್ಮ ಬಲವನ್ನು ಹೇಳಿಕೊಂಡರು ॥೬॥

ಒಬ್ಬನು ಇಪ್ಪತ್ತುಯೋಜನಗಳನ್ನು ದಾಟಬಲ್ಲನೆಂದೂ, ಒಬ್ಬನು ಮೂವತ್ತುಯೋಜನಗಳನ್ನು ದಾಟಬಲ್ಲನಂದೂ, ಇನ್ನೊಬ್ಬನು ನಾಲ್ವತ್ತುಯೋಜನಗಳನ್ನೂ, ಮತ್ತೊಬ್ಬ ವೀರನು ಅಯ್ವತ್ತುಯೋಜನಗಳನ್ನೂ ಹೇಳಿದರು ಇದನ್ನೆಲ್ಲ ಕೇಳಿ, ಅಂಗದನು ತಾನು ಸ್ವಲ್ಪ ಕಡಮೆಯಾಗಿ ಸಮುದ್ರವನ್ನು ದಾಟಬಲ್ಲೆನೆಂದು ಹೇಳಿದನು ॥೭-೮॥

ಆ ಬಳಿಕ ಜಾಂಬವಂತನು ಹೀಗೆ ಹೇಳಿದನು,-ನಾನು ಈ ಸಮುದ್ರವನ್ನು ಸಂಪೂರ್ಣವಾಗಿ ದಾಟಿಕೊಂಡು ಹೋಗಬಲ್ಲೆನು ಆದರೆ, ಈಗ ಕೇವಲ ವೃದ್ಧನಾಗಿ ವ್ಯಾಧಗ್ರಸ್ತನಾಗಿರುವಕಾರಣ, ಹಿಂದಿರುಗಿ ಬರಲು ಸಾಧ್ಯವಾಗುವುದೋ ಇಲ್ಲವೋ ಎಂದು ಸಂಶಯವಾಗುವುದು॥

ಪೂರ್ವದಲ್ಲಿ ನಾನು ಮಹಾಮೇರುಪರ್ವತವನ್ನು ಪೂಜಿಸಬೇಕೆಂದು ಪ್ರಾರಂಭಿಸಿ, ಮುವ್ವತ್ತುಮೂರುಕೋಟಿ ದೇವತೆಗಳು ತಮ್ಮ ಕುಟುಂಬದೊಡನೆ ವಾಸಮಾಡಿಕೊಂಡಿರುವ ಅತಿವಿಶಾಲವಾದ ಆ ಮಹಾಮೇರುವನ್ನು, ಮೂರಾವೃತ್ತಿ ಪ್ರದಕ್ಷಿಣಮಾಡಿದೆನು ॥೯॥

ಆ ಮೇರುಪರ್ವತದಲ್ಲಿ, ಅಷ್ಟದಿಕ್ಪಾಲಕರೂ ಒಂದು ಮೂಲೆಯೊಳಗೆ ವಾಸಮಾಡುತಿರುವರು ; ಅಲ್ಲಿಯೇ ವೈಕುಂಠ ಮಧ್ಯದಲ್ಲಿ ವಿಷ್ಣುವು, ಕೈಲಾಸ ಮಧ್ಯದಲ್ಲಿ ಶಿವನೂ ವಾಸಮಾಡಿಕೊಂಡಿರುವರು, ಚತುರ್ಮುಖಬ್ರಹ್ಮನು ಸತ್ಯಲೋಕವನ್ನು ಸಂರಕ್ಷಿಸುತಿರುವುದೂ, ಆ ಮೇರುಪರ್ವತದೊಳಗೆಯೇ ॥೧೦-೧೨॥

ಯೋಗಿನಾಮಪಿ ಸಿದ್ಧಾನಾಂ ದೇವಾನಾಮಪಿ ರಕ್ಷಸಾಮ್ ।
ದುರ್ಲಭಂ ಸರ್ವಜಂತೂನಾಂ ಗಿರೇರ್ಮೇರೋಃ ಪ್ರದಕ್ಷಿಣಮ್ ॥೧೩॥
ಜಾನುದೇಶೇ ಮಮ ರಯಾತ್ ಶಿಖರಂ ತಾಡನಾತ್ ಸ್ಥಿತಮ್ ।
ಯಥಾ ಪಾದತಳೇ ವ್ಯಕ್ತಃ ಕಣ್ಟಕೋಪಿ ಸುದುಃಖದಃ ।
ತದ್ವನ್ಮೇ ಜಾನುದೇಶಸ್ಥಂ ಶಿಖರಂ ಚ ಸುದುಃಖದಮ್ ॥೧೪॥
ವಿವಮುಕ್ತ್ವಾ ಜಾಂಬವಾಂಸ್ತಂ ಹನೂಮಂತಮಥಾಬ್ರವೀತ್ ॥೧೫॥
ವೀರ ಗಚ್ಛ ಮಹಾತೇಜೋ ಹನೂಮನ್ ಮಾರುತಾತ್ಮಜ ।
ಶತಕೋಟಿಪ್ಲವಙ್ಗಾನಾಂ ಅಸ್ಮಾಕಂ ತ್ವಂ ಗತಿರ್ಭವ ॥೧೬॥
ಜ್ಞಾತ್ವಾ ತ್ವಾ ಸೀತಾಪ್ರವೃತ್ತಿಂ ಹಿ ಸುಖಂ ಗಚ್ಛಾಮಹೇ ವಯಮ್ ।
ದುರ್ಯಾತಃ ಪ್ರಾಣಸಂದೇಹಃ ಸ್ವಾಮಿಕಾರ್ಯವಿನಾಶನೇ ॥೧೭॥
ಋಕ್ಷರಾಜವಚಃ ಶ್ರುತ್ವಾ ಹನೂಮಾನ್ ಮಾರುತಾತ್ಮಜಃ ।
ಪ್ರತ್ಯುವಾಚ ಮಹಾತೇಜಾಃ ಹರ್ಷಯನ್ ಕಪಿನಾಯಕಾನ್ ॥೧೮॥

ಇಂತಹ ಮಹಾಮೇರುವಿನ ಪ್ರದಕ್ಷಿಣ ಕಾರ್ಯವು, ಯೋಗಿಗಳಿಗೂ ಸಿದ್ಧರಿಗೂ ದೇವತೆಗಳಿಗೂ ರಾಕ್ಷಸರಿಗೂ ಕೂಡ ಅತಿದುರ್ಲಭವಾದುದು ॥೧೩॥

ಹೀಗೆ ನಾನು ಮೇರುವನ್ನು ಪ್ರದಕ್ಷಿಣೆ ಮಾಡುತಿರುವಾಗ, ನನ್ನ ವೇಗದಿಂದ ಏಟುಬಿದ್ದು ಮುಂದುಹೋಗಿ ಆ ಮೇರುಪರ್ವತದ ಒಂದು ಶಿಖರವು ನನ್ನ ಜಾನುಪ್ರದೇಶದಲ್ಲಿ ಸಿಕ್ಕಿಕೊಂಡಿತು ಆಗ ಅಂಗಾಲಿನಲ್ಲಿ ಹೊಕ್ಕಿಕೊಂಡ ಮುಳ್ಳು ಎಷ್ಟುಮಟ್ಟಿಗ ವ್ಯಥೆಯುಂಟುಮಾಡುವುದೋ, ನನ್ನ ಜಾನುಪ್ರದೇಶದಲ್ಲಿ ಸಿಕ್ಕಿಕೊಂಡ ಮೇರುಶಿಖರವೂ ನನಗ ಅಷ್ಟುಮಾತ್ರವೇ ವ್ಯಥೆಯನ್ನುಂಟು ಮಾಡಿತು ॥೧೪॥

ಹೀಗೆಂದು ಆ ಸಮಸ್ತ ಕಪಿಸಮೂಹಕ್ಕೂ ಹೇಳಿ, ಜಾಂಬವಂತನು, ಬಳಿಕ ಹನುಮಂತನನ್ನು ಕುರಿತು ' ಎಲೈ ಮಹಾವೀರನೆ! ಮಹಾತೇಜಸ್ವಿಯೆ! ವಾಯುಪುತ್ರನಾದ ಹನುಮಂತನ! ಇದೇನು ಹೀಗೆ ಸುಮ್ಮನೆ ಕುಳಿತಿರುವೆ? ನೀನು ಹೊರಡು, ನಮ್ಮ ಶತಕೋಟಿ ಸಂಖ್ಯಾಕರಾದ ಕಪಿಗಳಿಗೆಲ್ಲ ಈಗ ನೀನೇ ಗತಿಯಾಗಬೇಕಾಗಿರುವುದು. ಈಗ ಸೀತೆಯ ವೃತ್ತಾಂತ ಗೊತ್ತಾದರೆ, ನಾವೆಲ್ಲರೂ ಸುಖವಾಗಿ ಹೋಗಬಹುದು, ಅದಲ್ಲದೆ ಸ್ವಾಮಿಕಾರ್ಯವನ್ನು ಹಾಳು ಮಾಡಿಬಿಟ್ಟರೋ, ಆಗ ನಮ್ಮಗಳಿಗೆಲ್ಲ ಅಪಯಶಸ್ಸು ಬರುವುದಲ್ಲದೆ, ನಾವು ಉಳಿಯುವುದೇ ಸಂದೇಹಾಸ್ಪದವಾಗುವುದು.' ಎಂದು ಹೇಳಿದನು ॥೧೫-೧೭॥

ಹೀಗೆ ಹೇಳಿದ ಆ ಋಕ್ಷಾಧಿಪತಿಯ ಮಾತನ್ನು ಕೇಳಿ, ಮಹಾತೇಜಸ್ವಿಯಾದ ಹನುಮಂತನು, ಆ ಸಮಸ್ತ ಕಪಿನಾಯಕರಿಗೂ ಸಂತೋಷವುಂಟಾಗುವಂತೆ ಹೀಗೆ ಮಾತನಾಡಿದನು ॥೧೮॥

ಪ್ರಾಯೋಪವೇಶನಗತಾಃ ಕಪಯಃ ಕಪಿನಾಯಕಾಃ ।
ಕಿಮರ್ಥಂ ಕ್ಲೇಶಮಾಪನ್ನಾಃ ಮಯಿ ತಿಷ್ಠತಿ ಕಿಙ್ಕರೇ ॥೧೯॥
ಉತ್ತಿಷ್ಠನ್ತು ಮಹಾಭಾಗಾಃ ಶೃಣ್ವನ್ತು ವಚನಂ ಮಮ ।
ಸತ್ಯಮೇವ ಪ್ರವಕ್ಷ್ಯಾಮಿ ವಿಶ್ವಸನ್ತು ಮಹಾಬಲಾಃ ॥೨೦॥
ಪ್ರಾಣಪ್ರಯಾಣಸಮಯೇ ಯಸ್ಯ ನಾಮ ಸಕೃತ್ ಸ್ಮರನ್ ।
ನರಸ್ತೀರ್ತ್ವಾ ಭವಾಮ್ಭೋಧಿಂ ಅಪಾರಂ ಯಾತಿ ತತ್ಪದಮ್ ॥೨೧॥
ಕಿಂ ಪುನಸ್ತಸ್ಯ ದೂತೋಽಹಂ ತದಙ್ಕಾಙ್ಕಾಙ್ಗುಳಿಮುದ್ರಕಃ ।
ತಮೇವ ಹೃದಯೇ ಧ್ಯಾಯನ್ ಲಙ್ಘಯಾಮ್ಯಲ್ಪವಾರಿಧಿಮ್ ॥೨೨॥
ಏಕಪ್ಲುತೇನ ಸಹಸಾ ತರಿಷ್ಯೇ ಸಪ್ತ ಸಾಗರಾನ್ ।
ಮೂರ್ಧ್ನಿ ಕೃತ್ವಾ ಕುಲಗಿರೀನ್ ಹಿಮವಾದ್ರಿಂ ಮೇರುಮನ್ದರೌ ॥೨೩॥
ಕಿಮು ಸ್ವಲ್ಪಂ ಜಲನಿಧಿಂ ಶತಯೋಜನವಿಸ್ತರಮ್ ।
ಲಙ್ಘಾಪರ್ಯನ್ತಜಲಧಿಃ ಗೋಷ್ಪದಂ ಮಮ ದೃಶ್ಯತೇ ॥೨೪॥
ಸಿನ್ಧುಂ ಪ್ರತೀರ್ಯ ಲಙ್ಕಾಯಾಂ ದೃಷ್ಟ್ವಾ ಜನಕಜಾಮಪಿ ।

ಎಲೈ ಕಪಿಶ್ರೇಷ್ಠರೆ! ಈಗ ನಮ್ಮ ಕಪಿಗಳೆಲ್ಲರೂ ಹೀಗೇಕೆ ಪ್ರಾಯೋಪವೇಶ ಮಾಡಿರುವರು? ನಿಮ್ಮೆಲ್ಲರಿಗೂ ಸೇವಕನಾದ ನಾನಿರುವಾಗ, ನೀವುಗಳೆಲ್ಲ ಇಷ್ಟು ಕ್ಲೇಶಪಡಲು ಕಾರಣವೇನು? ॥೧೯॥

ಎಲೈ ಮಹಾನುಭಾವರೆ! ಇನ್ನು ನೀವೆಲ್ಲರೂ ನಿಲ್ಲಿರಿ, ನನ್ನಮಾತನ್ನು ಕೇಳಿರಿ ನಾನು ದಿಟವನ್ನೇ ಹೇಳುತ್ತೆನು ಸಮಸ್ತ ವಾನರರೂ ನನ್ನ ಮಾತನ್ನು ನಂಬಿರಿ ॥೨೦॥

ಪ್ರಾಣಪ್ರಯಾಣಕಾಲದಲ್ಲಿ ಯಾವ ಮಹಾತ್ಮನ ನಾಮವನ್ನು ಒಂದಾವೃತ್ತಿ ಸ್ಮರಿಸಿದ ಮಾತ್ರದಿಂದಲೇ, ಪುರುಷನು ಸಂಸಾರವೆಂಬ ಅಸಾರವಾದ ಸಮುದ್ರವನ್ನು ದಾಟಿ ಆ ದಿವ್ಯಪದವನ್ನು ಪಡೆಯುವನೋ, ಅಂತಹ ಶ್ರೀರಾಮಚಂದ್ರದೇವನ ದೂತನಾಗಿ–ಅವನ ಅಂಗುಳಿಮುದ್ರೆಯನ್ನು ಜತೆಯಲ್ಲಿಟ್ಟುಗೊಂಡು–ಅವನನ್ನೇ ಹೃದಯದಲ್ಲಿ ನಿರಂತರವೂ ಸ್ಮರಿಸುತಿರುವ ನನಗೆ, ಈ ಅತ್ಯಲ್ಪವಾದ ಸಮುದ್ರವನ್ನು ದಾಟುವುದು ಹೇಗ ದುಷ್ಕರವಾಗುವುದು? ॥೨೧-೨೨॥

ನಾನು ಸಪ್ತಕುಲಾಚಲಗಳನ್ನೂ ಹಿಮವತ್ಪರ್ವತವನ್ನೂ ಮೇರುಮಂದರಗಳನ್ನೂ ತಲೆಯ ಮೇಲೆ ಹೊತ್ತುಗೊಂಡು ಸಪ್ತಸಮುದ್ರಗಳನ್ನು ಬೇಕಾದರೂ ಒಂದೇ ನೆಗೆತದಿಂದ ದಾಟಿಬಿಡುವೆನು, ಇನ್ನು–ನೂರುಗಾವುದಮಾತ್ರವಿರುವ ಅತ್ಯಲ್ಪವಾದ ಈ ಸಮುದ್ರವನ್ನು ದಾಟುವುದೆಷ್ಟರ ಕೆಲಸವು? ಈ ಲಂಕೆಯವರೆಗಿರುವ ಸಮುದ್ರವು, ನನಗೊಂದು ಗೋಷ್ಪದವಾಗಿ ಕಾಣುತಿರುವುದು ॥೨೩–೨೪॥

ನಾನು ಈಗಲೇ ಸಮುದ್ರವನ್ನು ದಾಟಿ, ಲಂಕೆಯೊಳಗೆ ಸೀತೆಯನ್ನು ನೋಡಿ, ಆಮೇಲೆ ಅಲ್ಲಿನ ವನವನ್ನೆಲ್ಲ ಕೆತ್ತುಹಾಕಿ, ಲಂಕೆಯನ್ನೂ ಸುಟ್ಟುಬಿಟ್ಟು, ಬಳಿಕ ರಾವಣನಿಗೆ ಮೋಸ

ವನಮುತ್ಪಾಟ್ಯ ಲಙ್ಕಾಂ ಚ ದಗ್ಧ್ವಾ ರಾವಣಮಪ್ಯಲಮ್ ।
ವಞ್ಚಯಿತ್ವಾ ಕ್ಷಣಾರ್ಧೇನ ಪುನರಾಗಮ್ಯತೇ ಮಯಾ ॥೬೫॥
ಯೂಯಂ ಪಶ್ಯತ ಮೇ ವೀರ್ಯಂ ಗಚ್ಛತೋ ವಾಯುವೇಗತಃ ॥೬೬॥
ಭವಿಷ್ಯತಿ ಹಿ ಮೇ ರೂಪಂ ಪ್ಲವಮಾನಸ್ಯ ಸಾಗರಮ್ ।
ವಿಷ್ಣೋರ್ವಿಕ್ರಮಮಾಣಸ್ಯ ತದಾ ತ್ರೀನ್ ವಿಕ್ರಮಾನಿವ ॥೬೭॥
ಇತ್ಯುಕ್ತ್ವಾ ಭೂಧರಸ್ಯಾಗ್ರ್ಯಂ ಆರುರೋಹ ಮಹಾಕಪಿಃ ।
ವೃತಂ ನಾನಾವಿಧೈರ್ವೃಕ್ಷೈಃ ಮೃಗಸೇವಿತಶಾದ್ವಲಮ್ ॥೬೮॥
ಲತಾಕುಸುಮಸಂಬಾಧಂ ನಿತ್ಯಪುಷ್ಪಫಲದ್ರುಮಮ್ ।
ಸಿಂಹರ್ಕ್ಷಗೋಪುಚ್ಛಚರಿತಂ ಮತ್ತವ್ಯಾತಜ್ಞಸೇವಿತಮ್ ।
ಮಹದ್ಭಿರುಚ್ಛ್ರಿತೈಃ ಶೃಙ್ಗೈಃ ಮಹೇನ್ದ್ರಂ ಸ ಮಹಾಬಲಃ ॥೬೯॥
ವಿಚಚಾರ ಗಿರಿಶ್ರೇಷ್ಠೇ ಮಹೇನ್ದ್ರಸಮವಿಕ್ರಮಃ ॥೭೦॥
ತತಸ್ತು ವೈ ಜಾಮ್ಬವತಾ ಪ್ರಚೋದಿತಃ ಪ್ರತೀತವೇಗಃ ಪವನಾತ್ಮಜಃ ಕಪಿಃ ।
ಪ್ರಹರ್ಷಯಂಸ್ತಾಂ ಹರಿವೀರವಾಹಿನೀಂ ಚಕಾರ ರೂಪಂ ಮಹದಾತ್ಮನಸ್ತದಾ ॥೭೧॥

ಮಾಡಿ ಕ್ಷಣಾರ್ಧದೊಳಗಾಗಿ ಬಂದುಬಿಡುತ್ತೇನೆ ನಾನು ಈಗ ವಾಯುವೇಗದಿಂದ ಹೋಗುತಿರುವಾಗ, ನೀವೆಲ್ಲರೂ ನನ್ನ ವೀರ್ಯವನ್ನು ನೋಡಿರಿ ॥೬೫-೬೬॥

ನಾನು ಈ ಸಮುದ್ರವನ್ನು ದಾಟುವಾಗ, ಹಿಂದೆ ತ್ರಿವಿಕ್ರಮನಾವತಾರ ಮಾಡಿದ ಶ್ರೀ ಮಹಾವಿಷ್ಣುವಿಗಿದ್ದ ರೂಪವು ನನಗುಂಟಾಗುವುದು (ಎಂದು, ಹನುಮಂತನು ಇತರಕಪಿಗಳಿಗೆ ಹೇಳಿದನು) ॥೬೭॥

ಎಲೈ ಸಾರ್ವಭೌಮ! ಹೀಗ ಹೇಳಿಬಿಟ್ಟು, ಮಹಾಬಲನಾದ ಆ ಹನುಮಂತನು, ಮಹೇಂದ್ರ ಪರ್ವತದ ಶಿಖರವನ್ನು ಹತ್ತಿದನು. ಆ ಪರ್ವತವು, ಅನೇಕವಿಧ ವೃಕ್ಷಗಳಿಂದ ಪರಿವೃತವಾಗಿದ್ದಿತು, ಅಲ್ಲಿನ ಹಸುರುಭೂಮಿಗಳಲ್ಲಿ ಮೃಗಗಳು ವಿಶ್ರಮಿಸಿಕೊಳ್ಳುತಿದ್ದುವು, ಸಮಸ್ತ ಲತೆಗಳೂ ಪುಷ್ಪಭರಿತಗಳಾಗಿದ್ದುವು, ಸಮಸ್ತ ವೃಕ್ಷಗಳೂ ಸರ್ವದಾ ಫಲಪುಷ್ಪಭರಿತಗಳಾಗಿದ್ದುವು, ಸಿಂಹಗಳೂ ಹುಲಿಗಳೂ ಅಲ್ಲಿ ಜರಿಸುತಿದ್ದುವು, ಮತ್ತಗಜಗಳು ಅಲ್ಲಲ್ಲಿ ಓಡಾಡುತಿದ್ದುವು. ಇಂತಹ ಮಹೇಂದ್ರಪರ್ವತವು, ಅತ್ಯುನ್ನತವಾದ ಅನೇಕ ಶಿಖರಗಳಿಂದ ಶೋಭಿತವಾಗಿದ್ದಿತು. ಆ ಮಹೇಂದ್ರ ಪರ್ವತವನ್ನು ಹತ್ತಿ, ಮಹೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಹನುಮಂತನ, ಆ ಪರ್ವತ ಶಿಖರದಲ್ಲಿ ಸ್ವಲ್ಪ ನಿಂತುಗೊಂಡನು ॥೬೮-೭೦॥

ಆ ಬಳಿಕ, ಜಾಂಬವಂತನಿಂದ ಪ್ರೇರಿತನಾಗಿ ತನ್ನ ವೇಗಶಕ್ತಿಯನ್ನು ತಿಳಿದುಕೊಂಡ ಆ ಹನುಮಂತನು, ಸಮಸ್ತ ಕಪಿಸೈನ್ಯವನ್ನೂ ಹರ್ಷಪಡಿಸುತ, ತನ್ನ ದೊಡ್ಡ ಆಕಾರವನ್ನು ಸ್ವೀಕರಿಸಿದನು ॥೭೧॥

ಸ ವೇಗವಾ೯ ವೇಗಸಮಾಹಿತಾತ್ಮಾ ಹರಿಪ್ರವೀರಃ ಪರವೀರಹನ್ತಾ ।
ಮನಃ ಸಮಾಧಾಯ ಮಹಾನುಭಾವೋಜಗಾಮ ಲಙ್ಕಾಂ ಮನಸಾ ಮನಸ್ವೀ ॥೩೨॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾ
ನಂದಸರಸ್ವತೀ ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನನ್ದ
ಸರಸ್ವತೀಸ್ವಾಮಿಸಙ್ಕಲಿತೇ ಶ್ರೀತತ್ತ್ವಸಂಗ್ರಹ
ರಾಮಾಯಣೇ ಕಿಷ್ಕಿನ್ಧಾಕಾಣ್ಡೇ ಕಪಿನಾಯಕ
ಬಲ ತಾರತಮ್ಯ ಹನೂಮತ್ಸಮುದ್ರಲಂಘ
ನೋದ್ಯೋಗಕಥನಂ ನಾಮ
ಅಷ್ಟಾದಶಃ ಸರ್ಗಃ



ಮಹಾವೇಗಶಾಲಿಯೂ ಶತ್ರುಸಂಹಾರಕನೂ ಮಹಾನುಭಾವನೂ ಸ್ಥಿರಚಿತ್ತನೂ ಆದ ಆ ಹನುಮಂತನು, ತನ್ನ ವೇಗದಲ್ಲಿ ಮನಸ್ಸನ್ನು ನಿಲ್ಲಿಸಿ, ತನ್ನ ಮನಸ್ಸಿನಿಂದಲೇ ಆ ಲಂಕೆಯನ್ನು ಹೊಂದಿಬಿಟ್ಟನು ॥೩೨॥

ಇದು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಸ್ವಯಂಪ್ರಕಾಶಾನಂದಸರಸ್ವತೀ
ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದ ಸರಸ್ವತೀಸಂಕಲಿತವಾದ ಶ್ರೀ
ತತ್ವಸಂಗ್ರಹರಾಮಾಯಣದ ಕಿಷ್ಕಿಂಧಾಕಾಂಡದಲ್ಲಿ ಕಪಿನಾಯಕ
ಬಲತಾರತಮ್ಯ ಸಮುದ್ರತರಣೋದ್ಯೋಗಕಥನವೆಂಬ
ಹದಿನೆಂಟನೆಯ ಸರ್ಗವು

ಇಂತು ಶ್ರೀಮದಖಿಲಮಹೀಮಂಡಲಮಂಡನಾಯಮಾನ ಕರ್ನಾಟಕ ಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಡಿ ಸಿ ಎಸ್ ಐ ಯವರ
ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ
ವಿರಚಿತವಾದ

ತತ್ವಪ್ರಕಾಶವೆಂಬ

ಶ್ರೀ ತತ್ವಸಂಗ್ರಹ ರಾಮಾಯಣದ ಟೀಕಿನೊಳಗೆ

ಕಿಷ್ಕಿಂಧಾಕಾಂಡವು ಸಂಪೂರ್ಣವು.

ಓಮ್ ತತ್ ಸತ್



॥ ಶ್ರೀಃ ॥

ಶ್ರೀ ತತ್ವಸಂಗ್ರಹ ರಾಮಾಯಣಂ

ಸುಂದರಕಾಂಡಂ

ಶ್ರೀಮನ್ಮಹಾರಾಜ

ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್, ಜಿ ಸಿ ಎಸ್ ಐ,

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಕಾಸ್ತ್ರಿ ವಿರಚಿತ

ತತ್ವಪ್ರಕಾಶನಾಮಕ ಟೀಕಾಸಹಿತಂ

ಆನಂದ ಸಂ॥ ಕಾರ್ತಿಕಿಕ ಶು॥ ೧೨

ಮೈಸೂರು

ಜಿ. ಟಿ. ಎ. ಪ್ರೆಸ್

೧೯೧೪

(ಆಲ್‌ರೈಟ್ಸ್ ರಿಜಸ್ಟರ್ಡ್)

ಶ್ರೀ ತತ್ವಸಂಗ್ರಹ ರಾಮಾಧ್ಯಯಣಂ

ಸುಂದರಕಾಂಡ.

ವಿಷಯ ಸೂಚಿಕೆ

ಸರ್ಗ	ವಿಷಯ	ಪುಟ
೧	ಆಂಜನೇಯ ಸಮುದ್ರಲಂಘನ	೧
೨	ಲಂಕಿನೀ ಸಂಹಾರ, ಲಂಕಾಪುರಪ್ರವೇಶಾದಿಕಥನ	೯
೩	ಸೀತಾದರ್ಶನಾದಿ ನಿರೂಪಣ	೧೮
೪	ತ್ರಿಜಟಾಸ್ವಪ್ನ, ರಾವಣಪಲಾಯನಾದಿಕಥನ	೨೮
೫	ಸೀತಾಸಂಭಾಷಣ, ಅಶೋಕವನಭಂಗಾದಿಕಥನ	೩೭
೬	ಕಿಂಕರಾದಿ ರಾಕ್ಷಸಸಂಹಾರ	೪೭
೭	ಹನೂಮದ್ಗ್ರಹಣಾದಿ ಕಥನ	೫೫
೮	ಹನೂಮದ್ರಾವಣ ಸಂವಾದ	೬೩
೯	ಲಂಕಾದಹನ	೭೦
೧೦	ಹನೂಮತ್ಪ್ರತ್ಯಾಗಮನ	೮೧
೧೧	ಹನೂಮದ್ವೃತ್ತಾಂತ, ಶ್ರೀರಾಮವಿಭೂತಿಕಥನ	೮೬
೧೨	ಜಪನಿಯಮಾದಿ ಭಕ್ತ್ಯಸಾಧನ ನಿರೂಪಣ	೯೫
೧೩	ಮಂತ್ರಪುರಶ್ಚರಣ, ಕ್ರಿಯೋಪಾಸನ	೯೮
೧೪	ಭಾವನೋಪಾಸನ	೧೧೩
೧೫	ಭವರೋಗ ಸ್ವರೂಪ, ವೇದಧರೋಪಾಖ್ಯಾನ	೧೨೫
೧೬	ಭವರೋಗ ರಸಾಯನ ಕಥನ	೧೪೦
೧೭	ಕಲಿಸ್ವರೂಪ ನಿರೂಪಣ	೧೫೨

ಓಮ್

॥ ಶ್ರೀರಸ್ತು ॥

ಶ್ರೀ ತತ್ತ್ವಸಂಗ್ರಹ ರಾಮಾಯಣಂ.

ಸುಂದರಕಾಂಡಃ.

ಶ್ರೀರಾಮಚಂದ್ರಾಯ ಪರಮಾತ್ಮನೇ ನಮೋನಮಃ

ಶ್ರೀ ಶಿವ ಉವಾಚ

ತತೋ ಹನೂಮಾ್ ಶ್ರೀರಾಮಂ ಸೀತಾಲಕ್ಷ್ಮಣಸೇವಿತಮ್ ।
ನಮಸ್ಕೃತ್ಯ ಮಹೇನ್ದ್ರಾಗ್ರಾತ್ ಉತ್ಪಪಾತ ವಿಹಾಯಸಮ್ ॥೧॥
ತತೋ ಹನೂಮಾನುತ್ಪತ್ಯ ಖಮಾರ್ಗಂ ಪ್ರಾಪ್ಯ ನಿರ್ಭಯಃ ।
ಪ್ರಯಯೌ ವಾಯುವೇಗೇನ ರಾಮಮುಕ್ತಃ ಶರೋ ಯಥಾ ॥೨॥
ಉಪರಿಪ್ಟಾಚ್ಛರೀರೇಣ ಛಾಯಯಾ ಚಾವಗಾಢಯಾ ।
ಸಾಗರೇ ಮಾರುತಾವಿಷ್ಟಾ ನೌರಿವಾಸೀತ್ ತದಾ ಕಪಿಃ ॥೩॥

ಶ್ರೀರಸ್ತು

ಸುಂದರಕಾಂಡ.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು --

ಎಲೌ ಪಾರ್ವತಿ! ಅನಂತರ, ಸೀತಾಲಕ್ಷ್ಮಣಸಂವಿತನಾದ ಶ್ರೀರಾಮಚಂದ್ರನಿಗೆ ನಮಸ್ಕಾರ ಮಾಡಿ, ಆ ಹನುಮಂತನು ಮಹೇಂದ್ರಪರ್ವತದ ತಿಬರದಿಂದ ಆಕಾಶಮಾರ್ಗದಲ್ಲಿ ಹಾರಿದನು ॥೧॥

ಆ ಬಳಿಕ, ಹೀಗೆ ಹಾರಿ ನಿರ್ಭಯವಾಗಿ ಅಂತರಿಕ್ಷಮಾರ್ಗವನ್ನು ಸೇರಿ, ಶ್ರೀರಾಮನಿಂದ ಬಿಡಲ್ಪಟ್ಟ ಬಾಣದಂತೆ ಮಹಾವೇಗದಿಂದ ಹೊರಟನು ॥೨॥

ಆಗ ಇವನ ಶರೀರವು ಮೇಲುಗಡೆ ಗಗನವ್ಯಾಪಿಯಾಗಿಯೂ - ಇವನ ನಳು ಕೆಳಗಡೆ ಸಮುದ್ರದೊಳಗ ಪ್ರವೇಶಿಸಿಯೂ ಇದ್ದು- ಇವನು ಏಕಾಕಾರನಾಗಿ ಕಾಣುತಿದ್ದ ಕಾರಣ, ಇವನು ಸಮುದ್ರದಲ್ಲಿ ವಾಯುಗ್ರಸ್ತವಾಗಿರುವ ನಾವೆಯಂತೆ ತೋಗುತಿದ್ದನು ॥೩॥

ದಶಯೋಜನವಿಸ್ತೀರ್ಣಾ ತ್ರಿಂಶದ್ಯೋಜನಮಾಯತಾ ।
ಭಾಸತೇ ವಾನರಸಿಂಹಸ್ಯ ಜಲೇ ಚಾರುತರಾಭವತ್ ॥೪॥

ಪ್ರತಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃಪುನಃ ।
ಪ್ರವೃತ್ತಶ್ಚ ಪ್ರಕಾಶಶ್ಚ ಚನ್ದ್ರಮಾಇವ ಲಕ್ಷ್ಯತೇ ॥೫॥

ಊರ್ಧ್ವಮೂರ್ಧ್ವಂ ಗತಾವ್ಯಾಥ ದಕ್ಷಿಣಾಭಿಮುಖೋ ಯಯೌ ।
ಆಪ್ತುತಾಪರಣೋದ್ಯುಕ್ತೋ ಗರುತ್ಮಾನಿವ ವೇಗವಾ ॥೬॥

ಪ್ಲವಮಾನಂ ತು ತಂ ದೃಷ್ಟ್ವಾ ಪ್ಲವಗಂ ತ್ವರಿತಂ ತದಾ ।
ಪುಷ್ಪವೃಷ್ಟಿಃ ಪ್ರಸ್ಪವರ್ಷಾಣಿ ದೇವಗನ್ಧರ್ವದಾನವಾಃ ॥೭॥

ತತಾಪ ನ ಹಿ ತಂ ಸೂರ್ಯಃ ಪ್ಲವನ್ತಂ ವಾನರೇಶ್ವರಮ್ ।
ಸಿಷೇವೇ ಚ ತದಾ ವಾಯುಃ ರಾಮಕಾರ್ಯಾರ್ಥಸಿದ್ಧಯೇ ॥೮॥

ಋಷಯಸ್ತುಷ್ಟುವುಶ್ಚೈನಂ ಪ್ಲವಮಾನಂ ವಿಹಾಯಸಮ್ ॥೯॥

ತತೋ ದೇವಾಃ ಸಗನ್ಧರ್ವಾಃ ಯಕ್ಷಾಃ ಪತಗಪನ್ನಗಾಃ ।
ಬಲಬುದ್ಧಿಪರೀಕ್ಷಾರ್ಥಂ ಮಾರುತೇಸ್ತೀವ್ರಗಾಮಿನಃ ।
ಸುರಸಾಂ ಪ್ರೇಷಯಾಮಾಸುಃ ವಿಘ್ನಾಯೈವ ಹನೂಮತಃ ॥೧೦॥

ಆ ಸಮಯದಲ್ಲಿ, ಹತ್ತು ಗಾವುದದ ಅಗಲವೂ ಮುವ್ವತ್ತು ಗಾವುದದ ಉದ್ದವೂ ಉಳ್ಳ ದಾಗಿರುವ ಆ ಹನುಮಂತನ ನೆಳಲು, ಸಮುದ್ರಜಲದಲ್ಲಿ ಅತಿ ಸುಂದರವಾಗಿ ಕಾಣಿಸುತಿದ್ದಿತು॥೪॥

ಆ ಹನುಮಂತನು, ಆಕಾಶಮಾರ್ಗದಲ್ಲಿ ಸಮುದ್ರವನ್ನು ದಾಟುವಾಗ ಮಧ್ಯಮಧ್ಯದಲ್ಲಿ ಮೇಘಬ್ಯಂದದೊಳಗೆ ಮರೆಯಾಗುತಲೂ– ಹಾಗೆಯೇ ಕಟ್ಟನೆ ಹೊರಗೆ ಬರುತಲೂ ಇದ್ದ ಕಾರಣ, ಸ್ವಲ್ಪಹೊತ್ತು ಮೇಘಾವೃತನಾಗಿದ್ದು ಮತ್ತ ಮೇಘಮುಕ್ತನಾಗಿ ಪ್ರಕಾಶಿಸುವ ಚಂದ್ರನಂತೆ ಕಾಣಿಸಿಕೊಂಡನು ॥೫॥

ಆನಂತರ, ಹಾಗೆಯೇ ಮೇಲುಮೇಲಕ್ಕೆ ಹೋಗಿ, ಅಮೃತಾಹರಣದಲ್ಲಿ ಉದ್ಯುಕ್ತನಾದ ಗರುಡನಂತೆ ವೇಗಸಂಪನ್ನನಾಗಿ, ದಕ್ಷಿಣಾಭಿಮುಖವಾಗಿ ಹೊರಟನು ॥೬॥

ಹೀಗೆ ಸಮುದ್ರವನ್ನು ವೇಗದಿಂದ ದಾಟುತಿರುವ ಆ ಹನುಮಂತನನ್ನು ಕಂಡು, ದೇವ ಗಂಧರ್ವ ದಾನವರುಗಳು ಪುಷ್ಪವೃಷ್ಟಿಯೆನ್ನು ಮಾಡಿದರು ॥೭॥

ಶ್ರೀರಾಮನ ಕಾರ್ಯಸಿದ್ಧಿಗಾಗಿ ಸಮುದ್ರತರಣ ಮಾಡುತಿರುವ ಆ ಆಂಜನೇಯನನ್ನು, ಸೂರ್ಯನು ತನ್ನ ಕಿರಣಗಳಿಂದ ತಾಪಪಡಿಸದಿದ್ದನು, ವಾಯುದೇವನೂ ಕೂಡ ಅವನಿಗೆ ಸುಖ ವಾಗಿರುವಂತೆ ಬೀಸುತಿದ್ದನು ಅಂತರಿಕ್ಷದಲ್ಲಿ ಹಾರುತಿರುವ ಆ ಹನುಮಂತನನ್ನು ಸಮಸ್ತ ಮುನಿಗಳೂ ಸ್ತೋತ್ರಮಾಡುತಿದ್ದರು ॥೮–೯॥

ಆನಂತರ, ಹೀಗೆ ಬಹು ವೇಗದಿಂದ ಹೋಗುತಿರುವ ಮಾರುತಿಯ ಬಲವನ್ನೂ ಬುದ್ಧಿ ಯನ್ನೂ ಪರೀಕ್ಷಿಸಿ ತಿಳಿದುಕೊಳ್ಳಬೇಕೆಂದು, ಅವನಿಗೆ ಮಾರ್ಗದಲ್ಲಿ ವಿಘ್ನವನ್ನುಂಟುಮಾಡಬೇ ಕೆಂಬ ಅಭಿಪ್ರಾಯದಿಂದಲೇ, ದೇವ ಗಂಧರ್ವ ಯಕ್ಷ ಪತಗ ಪನ್ನಗ ಮುಂತಾದವರೆಲ್ಲರೂ ಸೇರಿ ಸುರಸೆಯೆಂಬವಳನ್ನು ಕಳುಹಿಸಿದರು ॥೧೦॥

ಪ್ರೇರಿತಾ ದೇವತಾಸಙ್ಘೈಃ ಸುರಸಾಸೀತ್ ತದಾಗ್ರತಃ ।
ಬಲಂ ಜಿಜ್ಞಾಸಮಾನಾ ವೈ ನಾಗಮಾತಾ ಹನೂಮತಃ ॥೧೦॥
ತತಃ ಪ್ರಯಾನ್ತಂ ತಂ ವೀಕ್ಷ್ಯ ಸುರಸಾ ವಾಕ್ಯಮಬ್ರವೀತ್ ।
ಪ್ರವಿಶ್ಯ ವದನಂ ಮೇದ್ಯ ಗನ್ತವ್ಯಂ ವಾನರೋತ್ತಮ ।
ವರವಿಷ ಪುರಾ ದತ್ತೋ ಮಮ ಧಾತ್ರೇತಿ ಸತ್ವರಾ ॥೧೦॥
ವಿಂಶದ್ಯೋಜನವಕ್ತ್ರಾ ಸಾ ಭ್ರುಕುಟೀಕುಟಿಲಾನನಾ ।
ತಸ್ಯೋಭಚಿತಶರೀರೇಣ ಸಾಕ್ಷಾದ್ವಿಘ್ನಇವ ಸ್ಥಿತಾ ॥೧೩॥
ದೃಷ್ಟ್ವಾ ತಾಂ ಸುರಸಾಂ ದೇವೀಂ ಹರಾನ್ಮಾರ್ಗನಿರೋಧಿನೀಮ್ ।
ತಾಂ ಜೇತುಕಾಮೋ ನಿರ್ಭೀಕೋ ಬಹುವ್ಯಾಪಾರವಾನಭೂತ್ ॥೧೪॥
ಮತ್ವಾ ವಿಜೇತುಂ ತಾಂ ದೇವೀಂ ಅಶಕ್ಯಾಂ ಮಾರುತಾತ್ಮಜಃ ।
ವಕ್ತ್ರಾದ್ದ್ವಿಗುಣದೇಹೋಭೂತ್ ತದ್ವಕ್ತ್ರಾದ್ದ್ವಿಗುಣಾಯ ಸಃ ॥೧೫॥
ಸುರಸಾ ತದ್ದ್ವಿಗುಣಿತಂ ವಕ್ತ್ರಂ ವ್ಯಾದಾಯ ನಿಷ್ಠಿತಾ ।

ಆಗ ನಾಗಮಾತೆಯಾದ ಸುರಸೆಯು, ದೇವಸಮೂಹದಿಂದ ಪ್ರೇರಿತಳಾಗಿ, ಹನುಮಂತನ ಬಲವನ್ನು ತಿಳಿದುಕೊಳ್ಳಬೇಕೆಂದು ಅವನ ಮುಂದೆ ಬಂದು ನಿಂತಳು ॥೧೧॥

ಬಳಿಕ, ತಾನು ಮುಂದ ಬಂದು ನಿಂತರೂ ಲಕ್ಷ್ಯವಿಲ್ಲದೆ ಹನುಮಂತನು ಹೊರಟುಹೋಗುತಿರುವುದನ್ನು ನೋಡಿ, ಅತಿ ವೇಗಸಂಪನ್ನಳಾದ ಆ ಸುರಸೆಯು, ಹನುಮಂತನನ್ನು ಕುರಿತು 'ಅಯ್ಯಾ! ಕಪಿಶ್ರೇಷ್ಠ! ಈಗ ನೀನು ನನ್ನ ಮುಖದೊಳಗೆ ಪ್ರವೇಶಮಾಡಿಯೇ ಮುಂದಕ್ಕೆ ಹೋಗಬೇಕಾಗಿರುವುದು ಈ ರೀತಿಯಾಗಿ ನನಗೆ ಬ್ರಹ್ಮದೇವನಿಂದ ವರವಾಗಿರುವುದು' ಎಂದು ಹೇಳಿದಳು ॥೧೨॥

ಹೀಗ ಬಾಯಲ್ಲಿ ಹೇಳುತಲೇ, ಅವಳು ಇಪ್ಪತ್ತು ಗಾವುದದಗಲ ಬಾಯನ್ನು ತೆರೆದು ಕೊಂಡು, ಮುಖದಲ್ಲಿ ವಕ್ರವಾಗಿ ಹುಬ್ಬುಗಂಟು ಹಾಕಿಕೊಂಡು, ವಿಘ್ನವೇ ಶರೀರಗ್ರಹಣಮಾಡಿ ಸಾಕ್ಷಾತ್ತಾಗಿ ಬಂದಿದೆಯೋ ಎಂಬಂತ, ಆ ಹನುಮಂತನನ್ನು ನುಂಗಲು ತಕ್ಕಂತೆ ಶರೀರವನ್ನು ಸ್ವೀಕರಿಸಿ ನಿಂತುಗೊಂಡಳು ॥೧೩॥

ಈ ರೀತಿಯಲ್ಲಿ ಹರಾತ್ತಾಗಿ ಸುರಸೆಯು ಮಾರ್ಗನಿರೋಧ ಮಾಡುತಿರುವುದನ್ನು ಕಂಡು, ಅವಳನ್ನು ಜಯಿಸಲಿಚ್ಛೆಯಿಂದ, ಹನುಮಂತನು ನಿರ್ಭಯನಾಗಿ ಬಹುವಿಧವಾದ ವ್ಯಾಪಾರಗಳನ್ನು ನಡೆಯಿಸಿದನು ॥೧೪॥

ಕೊನೆಗೆ ಅವಳನ್ನು ಗೆಲ್ಲುವುದಸಾಧ್ಯವೆಂದು ತಿಳಿದುಕೊಂಡು, ಆ ಹನುಮಂತನು, ಆ ಸುರಸೆಯನ್ನು ನುಂಗಿಬಿಡಬೇಕೆಂದು ಯೋಚಿಸಿ, ಅವಳ ಮುಖಕ್ಕೆ ಎರಡರಷ್ಟು ಅಗಲವಾಗಿ ತನ್ನ ಮುಖವನ್ನು ಮಾಡಿಕೊಂಡನು ॥೧೫॥

ಆ ಬಳಿಕ, ಸುರಸೆಯು ಅದಕ್ಕೆರಡರಷ್ಟಗಲವಾಗಿ ತನ್ನ ಮುಖವನ್ನು ಅಗಲಿಸಿಕೊಂಡು

ತತೋ ದ್ವಿಗುಣದೇಹೇನ ಹನೂಮಾನಪ್ಯಯುಧ್ಯತ ॥೧೬॥
ಯುದ್ಧಂ ಕರ್ತುಮಶಕ್ತಾ ಸಾ ಗಿಳನಂ ಕರ್ತುಮುದ್ಯತಾ ।
ಪುನರ್ದ್ವಿಗುಣವಕ್ತ್ರೇಣ ಮಹಾಪಾತಾಳಶೋಭಿನಾ ॥೧೩॥
ದೃಷ್ಟ್ವಾ ತಾಂ ಸುರಸಾಂ ದೇವೀಂ ಮಹಾಮಾಯಾವಿನೋದಿನೀಮ್ ।
ತ್ರಿಶತೋತ್ತರವಿಂಶತ್ಯಾ ಯೋಜನೈಃ ಸ್ಥೂಲವಿಗ್ರಹಾಮ್ ॥೧೪॥
ದೀರ್ಘವಾಲೇನ ಸಂವೇಷ್ಟ್ಯ ಜಿಕ್ಷ್ಣೇಪ ಶತಯೋಜನಮ್ ॥೧೫॥
ದುಸ್ಸಹೇನಾತಿವೇಗೇನ ಪ್ರಕ್ಷ್ಣೇಪೇಣ ಬಲೀಯಸಾ ।
ಮೂರ್ಛಾಮವಾಪ ಸಾ ದೇವೀ ಪುನರುತ್ಥಾಯ ವೇಗಿತಾ ।
ಪುನರ್ನಿರೋಧಯಾಮಾಸ ಮಾರ್ಗಂ ವೀರಹನೂಮತಃ ॥೧೦॥
ಮತ್ವಾ ಹನೂಮಾ್ ಸುರಸಾಂ ದುರ್ಜಯಾಂ ಕಾಮರೂಪಿಣೀಮ್ ।
ಸಂಕ್ಷಿಪ್ಯ ಚಾತ್ಮನಃ ಕಾಯಂ ಬಭೂವಾಙ್ಗುಷ್ಠಮಾತ್ರಕಃ ॥೧೧॥
ಸೋಭಿಪತ್ಯಾಶು ತದ್ವಕ್ತ್ರಂ ನಿಷ್ಪತ್ಯ ಚ ಮಹಾಬಲಃ ।
ಅನ್ತರಿಕ್ಷೇ ಸ್ಥಿತಃ ಶ್ರೀಮಾ್ ಪ್ರಹಸನ್ನಿದಮಬ್ರವೀತ್ ॥೧೨॥

ನಿಂತಳು ಹನುಮಂತನು, ಅವಳ ಮುಖಕ್ಕೆ ಕಡರಷ್ಟಗಲವಾಗಿ ತನ್ನ ಮುಖವನ್ನು ಮಾಡಿಕೊಂಡು ಪುನಃ ಯುದ್ಧಕ್ಕುಪಕ್ರಮಿಸಿದನು ॥೧೬॥

ಆಗ ಅವಳು ಹನುಮಂತನೊಡನೆ ಯುದ್ಧಮಾಡುವುದಕ್ಕೆ ಶಕ್ತಿಯಿಲ್ಲದವಳಾಗಿ, ಅವನನ್ನು ನುಂಗಿಯೇ ಬಿಡಬೇಕಂದು ಹೋಚಿಸಿ, ಮತ್ತೆ ಮಹಾಪಾತಾಳಕುಹರದಂತೆ ವಿರಾಜಿಸುವಂತೆ ತನ್ನ ಮುಖವನ್ನು ಅದಕ್ಕೆ ಕಡರಷ್ಟು ಅಗಲವಾಗಿ ವಿಸ್ತರಿಸಿಕೊಂಡಳು ॥೧೩॥

ಹೀಗ ಆ ಸುರಸೆಯು ಒಹಳವಾಗಿ ಮಾಯೆಯನ್ನು ತೋರಿಸುತ ವಿನೋದಪಡುತ ಮುನ್ನೂರಿಪ್ಪತ್ತು ಗಾವುದದಷ್ಟು ಸ್ಥೂಲವಾದ ಶರೀರವುಳ್ಳವಳಾಗಿರುವುದನ್ನು ಕಂಡು, ಹನುಮಂತನು ಅವಳನ್ನು ತನ್ನ ದೀರ್ಘವಾದ ಬಾಲದಿಂದ ಸುತ್ತಿ ನೂರು ಗಾವುದದ ದೂರ ಎಸೆದು ಬಿಟ್ಟನು ॥೧೪-೧೫॥

ಹೀಗೆ ಅತಿ ದುಸ್ಸಹವಾಗಿ ಅತಿ ಪ್ರಬಲವಾಗಿರುವ ಆ ಯೆಸೆದಾಟದಿಂದ, ಆ ಸುರಸೆಯು ಮೂರ್ಛಹೊಂದಿಬಿಟ್ಟಳು , ಆಮೇಲೆ ಮತ್ತ ಎದ್ದು ತನ್ನ ವೇಗವನ್ನು ತೋರಿಸುತ, ಪುನಃ ಆ ಮಹಾವೀರನಾದ ಹನುಮಂತನ ಮಾರ್ಗವನ್ನು ನಿರೋಧಿಸಿದಳು ॥೧೭॥

ಅನಂತರ, ಹನುಮಂತನು, ಆ ಕಾಮರೂಪಿಣಿಯಾದ ಸುರಸೆಯನ್ನು ಗೆಲ್ಲುವುದು ಅಸಾಧ್ಯವೆಂದು ತಿಳಿದು, ತನ್ನ ದೇಹವನ್ನು ಸಂಕೋಚಪಡಿಸಿಕೊಂಡು, ಒಂದು ಅಂಗುಷ್ಠದಷ್ಟು ದಪ್ಪನಾಗಿಬಿಟ್ಟನು ॥೧೧॥

ಬಳಿಕ ಮಹಾಬಲನಾದ ಹನುಮಂತನು, ತಟ್ಟನೆ ಅವಳ ಬಾಯೊಳಗೆ ಪ್ರವೇಶಿಸಿ, ಅಲ್ಲಿಂದ ಈಚೆಗೆ ಹೊರಟು, ಅಂತರಿಕ್ಷದಲ್ಲಿ ಮಹಾಕಾಂತಿಸಂಪನ್ನನಾಗಿ ನಿಂತುಗೊಂಡು, ಮಂದಹಾಸಮಾಡುತ ಹೀಗೆ ಹೇಳಿದನು ॥೧೨॥

ಪ್ರವಿಷ್ಟೋಽಸ್ಮಿ ಹಿ ತೇ ವಕ್ತ್ರಂ ದಾಕ್ಷಾಯಣಿ ನಮೋಽಸ್ತು ತೇ ।
ಗಮಿಷ್ಯೇ ಯತ್ರ ವೈದೇಹೀ ಸತ್ಯಶ್ಚಾಸ್ತು ವರಸ್ತವ ॥೨೩॥
ಇತ್ಯುಕ್ತ್ವಾ ಹನೂಮಾನ್ ವೀರಃ ಪ್ರಯಾತುಮುಪಚಕ್ರಮೇ ॥೨೪॥
ತತೋ ದೇವಾಃ ಸಗನ್ಧರ್ವಾಃ ಯಕ್ಷರಾಕ್ಷಸಪನ್ನಗಾಃ ।
ವಿಸ್ಮಯಂ ಪರಮಂ ಜಗ್ಮುಃ ನಿರ್ವಿಘ್ನಂ ತು ಭವಿಷ್ಯತಿ ॥೨೫॥
ಸಮುದ್ಯತಾ ಮಾರುತಿನಾ ಶಿರಸಾಶೀಃ ಪ್ರಯುಜ್ಯ ಚ ।
ಜಯೇತ್ಯುಕ್ತ್ವಾ ದೇವಮಾತಾ ಪ್ರಯಯಾವತಿಹರ್ಷಿತಾ ॥೨೬॥
ಹನೂಮಾನಪಿ ತೇಜಸ್ವೀ ಶ್ರಮಶ್ವಾಸವಿವರ್ಜಿತಃ ।
ಪ್ರಯಯಾವತಿವೇಗೇನ ಸುರವಿಸ್ಮಯಕಾರಕಃ ॥೨೭॥
ನಿರಾಲಮ್ಬೇನ ಮಾರ್ಗೇಣ ಗಚ್ಛನ್ತಂ ಮಾರುತಾತ್ಮಜಮ್ ।
ಮೈನಾಕಃ ಪರ್ವತಸ್ತತ್ರ ನಾನಾಶೃಙ್ಗಸಮನ್ವಿತಃ ।
ಅತಿಥ್ಯಂ ಕರ್ತುಕಾಮಸ್ಸ ಉತ್ತಸ್ಥೌ ಸಿನ್ಧುಚೋದಿತಃ ॥೨೮॥

ಎಲೌ ದಕ್ಷಪುತ್ರಿಯಾದ ಸುರಸೆಯೆ ! ನಾನು ನಿನ್ನ ಮುಖದೊಳಗೆ ಪ್ರವೇಶಮಾಡಿದೆನಷ್ಟೆ! ನಿನಗೆ ನಮಸ್ಕಾರ ಮಾಡುವೆನು ಇನ್ನು ನಾನು ಸೀತಾದೇವಿಯಿರುವ ಕಡೆಗೆ ಹೊರಡುವೆನು. ನಿನಗೆ ಬ್ರಹ್ಮನು ಕೊಟ್ಟಿದ್ದ ವರವೂ ಸತ್ಯವಾಗಲಿ ॥೨೩॥

ಹೀಗೆಂದು ಹೇಳಿ, ಮಹಾವೀರನಾದ ಆ ಹನುಮಂತನು ಮುಂದಕ್ಕೆ ಪ್ರಯಾಣಮಾಡಲು ಉಪಕ್ರಮಿಸಿದನು ಆಮೇಲೆ, ಇದನ್ನು ಕಂಡು, ದೇವ ಗಂಧರ್ವ ಯಕ್ಷ ರಾಕ್ಷಸ ಪನ್ನಗರು ಅತಿಯಾಗಿ ವಿಸ್ಮಯವನ್ನು ಹೊಂದಿದರು, ಮುಂದೆ ನಿರ್ವಿಘ್ನವಾಗುವುದೆಂದೂ ತಿಳಿದುಕೊಂಡರು ॥೨೪-೨೫॥

ಆಗ ಹನುಮಂತನಿಂದ ತಲೆಬಾಗಿ ನಮಸ್ಕರಿಸಲ್ಪಟ್ಟ ದೇವಮಾತೆಯಾದ ಸುರಸೆಯು, ಅವನಿಗೆ ಆಶೀರ್ವಾದವನ್ನು ಮಾಡಿ, ನಿನಗೆ ಜಯವಾಗಲೆಂದು ಹೇಳಿ, ಅತಿ ಹರ್ಷದಿಂದ ಹೊರಟು ಹೋದಳು ॥೨೬॥

ಆಮೇಲೆ ಮಹಾತೇಜಸ್ವಿಯಾದ ಹನುಮಂತನೂ ಕೂಡ, ಶ್ರಮಜನಿತವಾದ ಉಚ್ಛ್ವಾಸಾದಿಗಳೊಂದೂ ಇಲ್ಲದವನಾಗಿ ದೇವತೆಗಳಿಗೆಲ್ಲ ಅತಿಯಾಗಿ ವಿಸ್ಮಯವನ್ನು ಹುಟ್ಟಿಸುತ ಮಹಾವೇಗದಿಂದ ಹೊರಟುಬಿಟ್ಟನು ॥೨೭॥

ಬಳಿಕ, ಮಧ್ಯದಲ್ಲಿ ಸ್ವಲ್ಪವೂ ವಿಶ್ರಾಂತಿಸ್ಥಾನವಿಲ್ಲದ ಆಕಾಶಮಾರ್ಗದಲ್ಲಿ ಹೋಗುತಿರುವ ಆ ಹನುಮಂತನನ್ನು ಕಂಡು, ಸಮುದ್ರರಾಜನಿಂದ ಪ್ರೇರಿತನಾದ ಮೈನಾಕಪರ್ವತನು, ಹನುಮಂತನಿಗೆ ಆತಿಥ್ಯವನ್ನು ಹೂಡಬೇಕೆಂದು ಇಚ್ಛಿಸಿದವನಾಗಿ, ಅನೇಕಶೃಂಗಪರಿವಾರಿತನಾಗಿ, ಸಮುದ್ರದ ಒಳಗಡೆಯಿಂದ ಮೇಲಕ್ಕೆ ಎದ್ದನು ॥೨೮॥

ತತಃ ಪ್ರಾಹ ಹನೂಮನ್ತಂ ಮೈನಾಕೋಹಂ ಮಹಾಕಪೇ ।
ಸಮುದ್ರೇಣ ಸಮಾದಿಷ್ಟೋ ಮಯಿ ವಿಶ್ರಮ್ಯ ಗಮ್ಯತಾಮ್ ॥೮೯॥
ಆಗಚ್ಛ ಮೃತಕಲ್ಪಾನಿ ಜಗ್ಧ್ವಾ ಪಕ್ವಫಲಾನಿ ಮೇ ।
ವಿಶ್ರಮ್ಯಾತ್ರ ಕ್ಷಣಂ ಪಶ್ಚಾತ್ ಗಮಿಷ್ಯಸಿ ಯಥಾಸುಖಮ್ ॥೩೦॥
ಏವಮುಕ್ತೋಥ ತಂ ಪ್ರಾಹ ಹನೂಮಾನ್ ಮಾರುತಾತ್ಮಜಃ ॥೩೧॥
ಗಚ್ಛತೋ ರಾಮಕಾರ್ಯಾರ್ಥಂ ಭಕ್ಷಣಂ ಮೇ ಕಥಂ ಭವೇತ್ ।
ವಿಶ್ರಾಮೋ ವಾ ಕಥಂ ಮೇ ಸ್ಯಾತ್ ಗನ್ತವ್ಯಂ ತ್ವರಿತಂ ಮಯಾ ॥೩೨॥
ಇತ್ಯುಕ್ತ್ವಾ ಸ್ಪೃಷ್ಟಶಿಖರಃ ಕರಾಗ್ರೇಣ ಯಯೌ ಕಪಿಃ ।
ಕಿಞ್ಚಿದ್ದೂರಂ ಗತಸ್ಯಾಸ್ಯ ಛಾಯಾಂ ಛಾಯಾಗ್ರಹೋಗ್ರಹೀತ್ ॥೩೩॥
ಸಿಂಹಿಕಾ ನಾಮ ಸಾ ಘೋರಾ ಜಲಮಧ್ಯೇ ಸ್ಥಿತಾ ಸದಾ ।
ನಿಹನ್ತಿ ಖೇಚರಾನ್ ಸರ್ವಾನ್ ಸಾ ವೃತ್ತಿಸ್ತಸ್ಯ ಜೀವಿಕಾ ॥೩೪॥
ಆಜ್ಞಾನೇಯಸ್ಯ ತಾಂ ಛಾಯಾಂ ಶತಯೋಜನವಿಸ್ತೃತಾಂ ।
ಕನ್ಯೈಃ ಸಂಗೃಹ್ಯ ಸಾ ರುಷ್ಟಾ ಸ್ವೋದರೇ ಸಂನ್ಯಪಾತಯತ್ ॥೩೫॥

ಆ ಬಳಿಕ, ಹನುಮಂತನನ್ನು ಕುರಿತು 'ಅಯ್ಯಾ! ಮಹಾಕಪಿಯೆ! ನಾನು ಹಿಮವತ್ಪುತ್ರನಾದ ಮೈನಾಕನು ನಿನಗೆ ಅತಿಥಿಸತ್ಕಾರವನ್ನು ಮಾಡುವುದಕ್ಕಾಗಿ ಸಮುದ್ರನಿಂದ ಆಜ್ಞಾಪಿಸಲ್ಪಟ್ಟು ಬಂದಿರುವೆನು ನೀನು ಇಲ್ಲಿ ಬರುವನಾಗು, ನನ್ನಲ್ಲಿರುವ ಅಮೃತಕಲ್ಪವಾದ ಪಕ್ವ ಫಲಗಳನ್ನು ತಿಂದು, ಇಲ್ಲಿ ಒಂದು ಕ್ಷಣಕಾಲ ವಿಶ್ರಮಿಸಿಕೊಂಡು, ಆಮೇಲೆ ಸುಖವಾಗಿ ಪ್ರಯಾಣ ಮಾಡಬಹುದು ॥೨೯–೩೦॥

ಹೀಗೆಂದು ಮೈನಾಕನಿಂದ ಹೇಳಲ್ಪಟ್ಟ ಮಾರುತಪುತ್ರನಾದ ಹನುಮಂತನು, ಒಳಿಕ ಅವನನ್ನು ಕುರಿತು 'ಅಯ್ಯಾ! ಮೈನಾಕ! ಶ್ರೀರಾಮನ ಕಾರ್ಯಕ್ಕಾಗಿ ಹೋಗುತಿರುವ ನನಗೆ, ಮಧ್ಯದಲ್ಲಿ ಆಹಾರವು ಹೇಗೆ ಯುಕ್ತವಾಗುವುದು' ವಿಶ್ರಾಂತಿಯಾದರೂ ಹೇಗೆ ನ್ಯಾಯ್ಯವೆನ್ನಿಸುವುದು? ನಾನು ಈಗ ಎಲ್ಲಿಯೂ ನಿಲ್ಲದೆಯೇ ವೇಗವಾಗಿ ಹೋಗಬೇಕಾಗಿರುವುದು' ಎಂದು ಹೇಳಿ, ತನ್ನ ತುದಿಗೈಯಿಂದ ಆ ಮೈನಾಕನ ಶಿಖರವನ್ನು ಸ್ಪರ್ಶಮಾಡಿ, ಮುಂದಕ್ಕ ಹೊರಟು ಬಿಟ್ಟನು. ಆಮೇಲೆ ಸ್ವಲ್ಪದೂರ ಹೋಗುವಷ್ಟರಲ್ಲಿಯೇ, ಛಾಯಾಗ್ರಾಹವಾದ ಒಂದು ಗ್ರಹವು ಇವನ ಛಾಯೆಯನ್ನು ಹಿಡಿದುಕೊಂಡಿತು ॥೩೧–೩೩॥

ಆ ಛಾಯಾಗ್ರಾಹಿಯಾದ ಗ್ರಹಕ್ಕೆ ಸಿಂಹಿಕೆಯೆಂದು ಹೆಸರು ಮಹಾಘೋರಳಾದ ಅವಳು, ಸರ್ವದಾ ಜಲಮಧ್ಯದಲ್ಲಿಯೇ ವಾಸವಾಗಿರುತ, ಅಂತರಿಕ್ಷದಲ್ಲಿ ಸಂಚರಿಸುವ ಪ್ರಾಣಿಗಳನ್ನೆಲ್ಲ ಹಿಡಿದು ಕೊಲ್ಲುವಳು. ಅವಳಿಗೆ ಅದೇ ಜೀವನವು ॥೩೪॥

ಆಗ ಅವಳು ಶತಯೋಜನ ವಿಸ್ತಾರವಾಗಿರುವ ಆಂಜನೇಯನ ಛಾಯೆಯನ್ನು ಮೆಲ್ಲಗೆ ಹಿಡಿದುಕೊಂಡು, ಮಹಾತೋಪದಿಂದ ಅವನನ್ನು ತನ್ನ ಹೊಟ್ಟೆಯೊಳಗೆ ಹಾಕಿಕೊಂಡಳು ॥೩೫॥

ತಸ್ಯೋದರಗತೋ ಧೀಮಾನ್ ಹನೂಮಾನ್ ಮಾರುತಾತ್ಮಜಃ ।
ಚಿನ್ತಯಾಮಾಸ ತೇಜಸ್ವೀ ನಾಶಂ ತಸ್ಯಾದುರಾತ್ಮನಃ ॥೩೬॥
ಏನಾಂ ಹತ್ವಾ ಗಮಿಷ್ಯಾಮಿ ನಾನ್ಯಥಾ ಗನ್ತುಮುತ್ಸಹೇ ।
ಇತಿ ಚಣ್ಡತರೋ ವೀರಃ ಸ್ವನವೈಸ್ತದ್ಗ್ರಹೋದರಮ್ ।
ವಿದಾರ್ಯ ಹತ್ವಾ ತಾಂ ಪ್ರಾಜ್ಞಃ ಕ್ಷಣಾದೇವ ವಿನಿರ್ಗತಃ ॥೩೭॥
ಛಾಯಾಗ್ರಹಂ ನಿಹತ್ಯಾಶು ಬಭೌ ವಾಯುಸುತೋ ಬಲೀ ।
ರಾಹುಗ್ರಹಮುಖಾನ್ಮುಕ್ತಃ ಸವಿತೇವ ಖರಾಂಶುಮಾನ್ ॥೩೮॥
ಹನೂಮಾನಪಿ ತೇಜಸ್ವೀ ಪ್ರಯಯೌ ದಕ್ಷಿಣಾಮುಖಃ ।
ಸರ್ವಾನಪಿ ಮಹಾವಿಘ್ನಾನ್ ತೃಣೀಕೃತ್ಯ ಮಹಾಬಲಃ ॥೩೯॥
ವ್ಯಜ ದದರ್ಶ ನಗರೀಂ ಪರಂ ಪಾರಂ ಚ ನೀರಧೇಃ ।
ಲಙ್ಕಾಂ ತ್ರಿಕೂಟಶಿಖರೇ ಪದ್ಮಕೇಞ್ಜಲ್ಕಸನ್ನಿಭಾಮ್ ॥೪೦॥
ಮಣಿಮುನ್ದಿರಸಂಪೂರ್ಣಾಂ ಸ್ವರ್ಣಪ್ರಾಕಾರಶೋಭಿತಾಮ್ ।
ರಾಕ್ಷಸೈಘೋರ್ಘರಸಙ್ಘೈಃ ಆವೃತಾಂ ಘೋರದರ್ಶನಾಮ್ ॥೪೧॥

ಬಳಿಕ ಅವಳ ಹೊಟ್ಟೆಯೊಳಗ ಸಿಕ್ಕಿಕೊಂಡ– ಮಹಾ ಬುದ್ಧಿಸಮನ್ವಿತನೂ ಮಹಾತೇಜಸ್ಸಂಪನ್ನನೂ ಆದ– ಹನುಮಂತನು, ದುರಾತ್ಮಳಾದ ಅವಳನ್ನು ನಾಶಪಡಿಸಲು ಉಪಾಯವನ್ನು ಯೋಚಿಸಿದನು ॥೩೬॥

'ಹೇಗಾದರೂ ಮಾಡಿ ಇವಳನ್ನು ಕೊಂದೇ ನಾನು ಮುಂದಕ್ಕೆ ಹೋಗುವೆನು. ಅನ್ಯಥಾ ಹೊರಡುವುದಕ್ಕೇ ನನಗೆ ಇಷ್ಟವಿಲ್ಲ' ಎಂದು ತನ್ನ ಮನಸ್ಸಿನಲ್ಲಿ ಸ್ಥಿರಪಡಿಸಿಕೊಂಡು, ಮಹಾ ಚಂಡಪರಾಕ್ರಮನಾದ ಆ ಮಾರುತಿಯು, ತನ್ನ ಉಗುರುಗಳಿಂದ ಆ ಸಿಂಹಿಕೆಯ ಹೊಟ್ಟೆಯನ್ನು ಸೀಳಿ– ಅವಳನ್ನು ಕೊಂದು, ಒಂದು ಕ್ಷಣದೊಳಗಾಗಿ ಹೊರಕ್ಕೆ ಬಂದುಬಿಟ್ಟನು ॥೩೭॥

ಹೀಗೆ ಒಂದು ಕ್ಷಣದೊಳಗಾಗಿ ಆ ಛಾಯಾಗ್ರಹವನ್ನು ಕೊಂದುಹಾಕಿದ ಮಹಾಬಲಶಾಲಿಯಾದ ವಾಯುಪುತ್ರನು, ರಾಹುಮುಖದಿಂದ ಮುಕ್ತನಾದ ಸೂರ್ಯನಂತೆ ಅತಿಯಾಗಿ ವಿರಾಜಿಸುತಿದ್ದನು ॥೩೮॥

ಈರೀತಿಯಲ್ಲಿ ಸಮಸ್ತ ವಿಘ್ನಗಳನ್ನೂ ತೃಣೀಕರಿಸಿಕೊಂಡು, ಮಹಾಬಲನೂ ಮಹಾತೇಜಸ್ವಿಯೂ ಆದ ಹನುಮಂತನು, ಪುನಃ ದಕ್ಷಿಣಾಭಿಮುಖನಾಗಿ ಹೊರಟನು ॥೩೯॥

ಹೀಗೆ ಹೊರಟವನಾಗಿ ಸಮುದ್ರದ ಆಚೆಯ ದಡವನ್ನೂ ಅಲ್ಲಿ ಲಂಕಾಪಟ್ಟಣವನ್ನೂ ಕಂಡನು. ಆ ಲಂಕಾಪಟ್ಟಣವು, ತ್ರಿಕೂಟಪರ್ವತದ ತಿಪ್ಪರದಲ್ಲಿ ಪದ್ಮಕೇಸರದಂತೆ ಶೋಭಿಸುತಿದ್ದಿತು. ರತ್ನಮಯವಾದ ಗೃಹಗಳಿಂದ ಸಂಪೂರ್ಣವಾಗಿಯೂ, ಸುವರ್ಣಮಯವಾದ ಪ್ರಾಕಾರದಿಂದ ಅಲಂಕೃತವಾಗಿಯೂ ಇದ್ದಿತು ಅತಿ ಘೋರಾಕಾರರಾದ ರಾಕ್ಷಸರಿಂದ ಪರಿವೃತವಾಗಿ, ನೋಡುವುದಕ್ಕೆ ಅತಿ ಭಯಂಕರವಾಗಿದ್ದಿತು ॥೪೦–೪೧॥

ಅಮನ್ದಾನನ್ದಸನ್ದೋಹೋ ಹನೂಮಾ೯ ಮಾರುತಾತ್ಮಜಃ ।
ಪರಂ ಪಾರಂ ಸಮಾಸಾದ್ಯ ಲಙ್ಕಾಮುಖಿಮುಖೋ ಯಯೌ ॥೪೨॥
ಅತಿಸೂಕ್ಷ್ಮತನುಭೂ೯ತ್ವಾ ಲಙ್ಕಾದ್ವಾರಮುಪಾಗತಃ ।
ಭೀತಭೀತಇವಾತ್ಯನ್ತಂ ಜನಂ ದೃಷ್ಟ್ವಾ ಪ್ರಯಾತ್ಯಲಮ್ ।
ಲಙ್ಕಾಪ್ರವೇಶಮನ್ವೀಕ್ಷ್ಯ ದ್ವಾರೋಪಾನ್ತಉಪಾವಿಶತ್ ॥೪೩॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾ
ನಂದಸರಸ್ವತೀ ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನನ್ದ
ಸರಸ್ವತೀಸ್ವಾಮಿಸಙ್ಕಲಿತೇ ಶ್ರೀ ತತ್ತ್ವಸಂಗ್ರಹ
ರಾಮಾಯಣೇ ಸುನ್ದರಕಾಣ್ಡೇ ಹನೂಮ
ತ್ಸಮುದ್ರತರಣ ಲಙ್ಕಾಧಿಗಮಾದಿ
ಕಥನಂ ನಾಮ ಪ್ರಥಮ ಸರ್ಗಃ



ಇಂತಹ ಲಂಕಾಪಟ್ಟಣವನ್ನು ಕಂಡು, ಅತ್ಯಧಿಕವಾದ ಆನಂದದಿಂದ ಪರಿಪೂರ್ಣನಾದ ಆ ಹನುಮಂತನು, ಕ್ರಮೇಣ ಸಮುದ್ರದ ತೀರವನ್ನು ಸೇರಿ, ಅಲ್ಲಿಂದ ಲಂಕಾಪಟ್ಟಣವನ್ನು ಕುರಿತು ಹೊರಟನು ॥೪೨॥

ಆಗ ಅತಿ ಸೂಕ್ಷ್ಮವಾದ ಶರೀರವನ್ನು ಧರಿಸಿಕೊಂಡು ಲಂಕಾಪಟ್ಟಣದ ದ್ವಾರಕ್ಕೆ ಹೋಗಿ, ಅಲ್ಲಿ ಯಾರನ್ನಾದರೂ ಕಂಡರೆ ಹೆದರಿಕೊಂಡವನಂತ ಹಿಂದಹಿಂದಕ್ಕೆ ಹೋಗುತ, ಲಂಕಾಪಟ್ಟಣ ದೊಳಕ್ಕೆ ಪ್ರವೇಶಮಾಡಲು ಸಮಯವನ್ನು ನಿರೀಕ್ಷಿಸುತ, ಆ ಲಂಕೆಯ ದ್ವಾರಪ್ರದೇಶದಲ್ಲಿ ಸ್ವಲ್ಪ ಹೊತ್ತು ಕುಳಿತುಕೊಂಡನು ॥೪೩॥

ಇದು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಸ್ವಯಂಪ್ರಕಾನಂದಸರಸ್ವತೀ
ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದಸರಸ್ವತೀ ಸಂಕಲಿತವಾದ
ಶ್ರೀ ತತ್ವಸಂಗ್ರಹರಾಮಾಯಣದ ಸುಂದರಕಾಂಡದಲ್ಲಿ ಹನುಮ
ತ್ಸಮುದ್ರತರಣ ಲಙ್ಕಾಧಿಗಮಾದಿಕಥನವೆಂಬ
ಪ್ರಥಮಸರ್ಗವು.



ಅಥ ಶ್ರೀಮತ್ಸುನ್ದರಕಾಣ್ಡೇ ದ್ವಿತೀಯಃ ಸರ್ಗಃ.

ಶ್ರೀ ಶಿವಉವಾಚ

ತತಃ ಸೂಕ್ಷ್ಮತನುಂ ವಾಪಿ ದಿವ್ಯತೇಜೋಮಯಂ ಕಪಿಮ್ ।
ದ್ವಾರಪಾಲ್ಯೇ ನಿಯುಕ್ತಾ ಸಾ ಲಙ್ಕಿನೀ ನಾಮ ರಾಕ್ಷಸೀ ।
ದೃಷ್ಟ್ವೈವ ಭಯಮಾಪನ್ನಾ ಮನಸ್ಯೇವಮಚಿನ್ತಯತ್ ॥೧॥
ಅದೃಷ್ಟಪೂರ್ವೋ ಹ್ಯಸ್ಮಾಭಿಃ ಅಯಂ ವಾನರಪುಙ್ಗವಃ ।
ಏತಸ್ಯ ದರ್ಶನಾದೇವ ಮಮಾಪಿ ಕ್ಷುಭ್ಯತೇ ಮನಃ ॥೨॥
ಲಙ್ಕಾಪ್ರವೇಶೋ ಯದ್ಯಸ್ಯ ಲಙ್ಕಾಲಕ್ಷ್ಮೀರ್ವಿನಶ್ಯತಿ ॥೩॥
ನ ಮಯಾ ವಾರಿತುಂ ಶಕ್ಯಃ ಸ್ವಾಮಿಕಾರ್ಯಸ್ಯ ಗೌರವಾತ್ ।
ಸ್ವದೋಷಪರಿಹಾರಾಯ ವಾರಯಾಮಿ ತಥಾಪ್ಯಹಮ್ ॥೪॥
ಇತಿ ನಿಶ್ಚಿತ್ಯ ಮನಸಾ ತಸ್ಥೌ ಸಾಪಿ ಧೃತಾಯುಧಾ ।
ಭೀಮರೂಪಾ ಬಲವತೀ ರಾಕ್ಷಸೀ ಕಾಮರೂಪಿಣೀ ॥೫॥

ಸುಂದರಕಾಂಡದಲ್ಲಿ ಎರಡನೆಯ ಸರ್ಗವು

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು --

ಎಲೌ ಪಾರ್ವತಿ! ಪೂರ್ವೋಕ್ತರೀತಿಯಲ್ಲಿ ಹನುಮಂತನು ಲಂಕಾಪಟ್ಟಣದ ದ್ವಾರಕ್ಕೆ ಹೋಗಿ ನಿಂತಬಳಿಕ, ಅಲ್ಲಿ ದ್ವಾರರಕ್ಷಣಕರ್ಮದಲ್ಲಿ ನಿಯುಕ್ತಳಾಗಿದ್ದ ಲಂಕಿನಿಯೆಂಬ ರಾಕ್ಷಸಿಯು, ಆಗ ಹನುಮಂತನು ಅತಿಸೂಕ್ಷ್ಮದೇಹವುಳ್ಳವನಾಗಿದ್ದರೂ ಅವನು ದಿವ್ಯತೇಜಸ್ಸನ್ನುಸ್ಪಿತನಾಗಿದ್ದ ಕಾರಣ ಅವನನ್ನು ಕಂಡಮಾತ್ರದಲ್ಲಿಯೇ ಅತಿಯಾಗಿ ಭಯವನ್ನು ಹೊಂದಿ, ತನ್ನ ಮನಸ್ಸಿನೊಳಗೆ ಈರೀತಿಯಾಗಿ ಆಲೋಚಿಸಿದಳು ॥೧॥

ಈಗ ಇಲ್ಲಿ ಒಂದು ನಿಂತಿರುವ ಈ ದೊಡ್ಡ ಕಪಿಯು ನನ್ನಿಂದ ಇದುವರೆಗೂ ನೋಡಲ್ಪಟ್ಟಿಲ್ಲ ಇದನ್ನು ನೋಡಿದಮಾತ್ರದಿಂದಲೇ ನನಗೂ ಮನಸ್ಸು ಕ್ಷುಭಿತವಾಗುತ್ತಿರುವುದು ॥೨॥

ಇವನೇನಾದರೂ ಲಂಕಾಪಟ್ಟಣದೊಳಗೆ ಪ್ರವೇಶಮಾಡಿಬಿಟ್ಟಪಕ್ಷದಲ್ಲಿ, ಈ ಲಂಕಾಪುರಿಯ ಲಕ್ಷ್ಮಿಯು ಆಗಲೇ ನಾಶಹೊಂದುವಳು ಇವನನ್ನು ನಾನು ಒಳಗೆ ಪ್ರವೇಶಮಾಡದಂತೆ ತಡೆಯಲು ಶಕ್ತಳಾಗಿಲ್ಲ ಆದರೂಕೂಡ, ಸ್ವಾಮಿಕಾರ್ಯಗೌರವದಿಂದಲೂ, ನನ್ನಲ್ಲಿ ದೋಷವುಂಟಾಗದಿರುವಂತೆ ಮಾಡಿಕೊಳ್ಳುವುದಕ್ಕಾಗಿಯೂ ಕೂಡ, ಇವನನ್ನು ಈಗ ನಾನು ತಡೆಯುವೇ ಕಾಗಿರುವುದು ॥೩-೪॥

ಹೀಗೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು, ಭಯಂಕರಾಕಾರಳಾಗಿಯೂ ಬಲಿಷ್ಠಳಾಗಿಯೂ ಕಾಮರೂಪಳಾಗಿಯೂ ಇರುವ ಆ ಲಂಕಿನಿಯು, ಕೈಯಲ್ಲಿ ಆಯುಧವನ್ನು ಧರಿಸಿ ನಿಂತುಕೊಂಡಳು ॥೫॥

ಹನೂಮಾನಪಿ ತೇಜಸ್ವೀ ಸಂಭ್ರಮೇಣ ಶನೈಶ್ಶನೈಃ ।
ಲಙ್ಕಾಪ್ರವೇಶನಂ ಕರ್ತುಂ ಉದ್ಯುಕ್ತೋಭೂನ್ಮಹಾಕಪಿಃ ॥೬॥
ತತಃ ಶನೈರ್ವ್ರಜನ್ತಂ ತಂ ವಾರಯಾಮಾಸ ಲಙ್ಕಿನೀ ।
ಹಸ್ತವೇತ್ರಪ್ರಸಾರೇಣ ಕಠೋರವಚನೇನ ಚ ॥೭॥
ಕಸ್ತ್ವಂ ಕೇನ ಚ ಕಾರ್ಯೇಣ ಇಹ ಪ್ರಾಪ್ತೋ ವನಾಲಯ ।
ಕಥಯಸ್ವೇಹ ಯತ್ ತತ್ವಂ ಯಾವತ್ ಪ್ರಾಣಾಧರನ್ತಿ ತೇ ॥೮॥
ನ ಶಕ್ಯಾ ಖಲ್ವಿಯಂ ಲಙ್ಕಾ ಪ್ರವೇಷ್ಟುಂ ವಾನರ ತ್ವಯಾ ।
ರಕ್ಷಿತಾ ರಾವಣಬಲೈಃ ಅಭಿಗುಪ್ತಾ ಸಮನ್ತತಃ ॥೯॥
ಅಥ ತಾಮಬ್ರವೀದ್ವೀರೋ ಹನೂರ್ಮಾ ಪುರತಃ ಸ್ಥಿತಾಮ್ ॥೧೦॥
ಕಥಯಿಷ್ಯಾಮಿ ತತ್ ತತ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಕಾ ತ್ವಂ ವಿರೂಪನಯನಾ ಪ್ರರದ್ವಾರೇಽವತಿಷ್ಠಸೇ ।
ಕಿಮರ್ಥಂ ವಾಪಿ ಮಾಂ ರುದ್ಧ್ವಾ ನಿರ್ಭರ್ತ್ಸಯಸಿ ದಾರುಣಾ ॥೧೧॥
ಹನೂಮದ್ವಚನಂ ಶ್ರುತ್ವಾ ಲಙ್ಕಾ ಸಾ ಕಾಮರೂಪಿಣೀ ।

ಆಗ ಮಹಾ ತೇಜಸ್ವಿಯಾದ ಹನುಮಂತನೂ ಕೂಡ, ಸಂಭ್ರಮದಿಂದ ಮೆಲ್ಲಮೆಲ್ಲಗೆ ಲಂಕೆಯೊಳಕ್ಕೆ ಪ್ರವೇಶಿಸುವುದಕ್ಕೆ ಉದ್ಯುಕ್ತನಾದನು ॥೬॥

ಆ ಬಳಿಕ, ಮೆಲ್ಲಮೆಲ್ಲಗೆ ಒಳಕ್ಕೆ ಹೋಗುತ್ತಿರುವ ಆ ಹನುಮಂತನನ್ನು, ಕೈಯಲ್ಲಿರುವ ಬೆತ್ತವನ್ನು ಮುಂದಕ್ಕೆ ನೀಡುವುದರಿಂದಲೂ-ಕಠೋರೋಕ್ತಿಯಿಂದಲೂ ಕೂಡ ಆ ಲಂಕಿನಿಯು, ತಡೆದಳು ॥೭॥

ಆಗ ಅವಳು ಹೇಳಿದ ವಚನವೇನೆಂದರೆ —ಎಲೈ ವನಾಲಯನೆ! (ಕಪಿ) ನೀನು ಯಾರು? ಯಾವ ಉದ್ದೇಶದಿಂದ ಇಲ್ಲಿಗೆ ಬಂದೆ? ನಿನ್ನ ಪ್ರಾಣವಿನ್ನೂ ಉಳಿದಿರುವಾಗಲೇ ಇದನ್ನೆಲ್ಲ ಯಥಾವತ್ತಾಗಿ ಹೇಳು ॥೮॥

ಎಲೈ ವಾನರನೆ! ನಮ್ಮ ಈ ಲಂಕಾಪಟ್ಟಣವನ್ನು, ರಾವಣನ ಸೈನ್ಯಗಳು ಕಾಯ್ದುಕೊಂಡಿರುವುವು, ಇದರ ಸುತ್ತಲೂ ಜೆನ್ನಾಗಿ ಭದ್ರಪಡಿಸಿರುವರು ಹೀಗಿರುವುದುಂದ, ಇದರೊಳಕ್ಕೆ ನೀನು ಪ್ರವೇಶಿಸುವುದು ಅಸಾಧ್ಯವಲ್ಲವೆ! ॥೯॥

ಹೀಗೆಂದು ಆ ಲಂಕಿನಿಯು ಹೇಳಿದ ಬಳಿಕ, ಮಹಾವೀರನಾದ ಹನುಮಂತನು, ಮುಂದುಗಡೆ ನಿಂತಿರುವ ಅವಳನ್ನು ಕುರಿತು 'ಎಲೌ ರಾಕ್ಷಸಿ! ನೀನು ನನ್ನನ್ನು ಏನು ಕೇಳುವೆಯೋ, ಅದನ್ನೆಲ್ಲ ಅಮೇಲೆ ಹೇಳುವೆನು, ಮೊದಲು ನೀನು ನನಗೆ ಉತ್ತರ ಹೇಳು ಮಹಾವಿಕೃತ ನೇತ್ರಿಯಾಗಿ ಈ ಲಂಕಾಪುರದ್ವಾರದಲ್ಲಿ ನಿಂತಿರುವೆಯಲ್ಲ-ನೀನು ಯಾರು? ಇಷ್ಟು ದಾರುಣವಾಗಿ ನನ್ನನ್ನು ತಡೆದು ಏತಕ್ಕಾಗಿ ತರ್ಜನೆಮಾಡುವೆ?' ಎಂದು ಪ್ರಶ್ನೆ ಮಾಡಿದನು ॥೧೦-೧೧॥

ಹೀಗೆ ಹೇಳಿದ ಹನುಮಂತನ ಮಾತನ್ನು ಕೇಳಿ, ಕಾಮರೂಪಿಣಿಯಾದ ಆ ಲಂಕಾಧಿದೇವತೆಯು, ಅತಿಯಾಗಿ ಕೋಪಿಸಿಕೊಂಡು, ಹನುಮಂತನನ್ನು ಕುರಿತು 'ಎಲೈ ಕಪಿಯೆ!

ಉವಾಚ ವಚನಂ ಕ್ರುದ್ಧಾ ಪರುಷಂ ಪವನಾತ್ಮಜಮ್ ॥೧೦॥
ಅಹಂ ಹಿ ನಗರೀ ಲಙ್ಕಾ ಸ್ವಯಮೇವ ಪ್ಲವಙ್ಗಮ ।
ಸರ್ವತಃ ಪರಿರಕ್ಷಾಮಿ ಹ್ಯೇತತ್ ತೇ ಕಥಿತಂ ಮಯಾ ॥೧೩॥

ಸ ತಾಂ ಸ್ತ್ರೀರೂಪವಿಕೃತಾಂ ದೃಷ್ಟ್ವಾ ವಾನರಪುಂಗವಃ ।
ಅಬಭಾಷೇಽಥ ಮೇಧಾವೀ ಸತ್ವವಾನ್ ಪ್ಲವಗರ್ಷಭಃ ॥೧೪॥
ಕಿಂ ವ ಯಾಪಕೃತಂ ಭದ್ರೇ ವಾನರೋ ರಜ್ಞಿನಾಯ ವಃ ।
ಚೇಷ್ಟಾವಿಹಾರೈಃ ಪ್ಲವನೈಃ ಕ್ರೀಡಾಮೃಗಸವಾನವಯಮ್ ॥೧೫॥
ಸಂಭ್ರಮಂ ಜನಯಾನೋತ್ರ ಜನಾನಾಂ ಪುಣ್ಯಕರ್ಮಣಾಮ್ ।
ಪ್ರತಿವೀಧಿ ಪ್ರತಿಗೃಹಂ ರಾಜಸಾವನ್ತಸದ್ಮಸು ॥೧೬॥
ರಾವಣಸ್ಯಾಪಿ ಭವನೇ ತೇಜೋವೃದ್ಧಿರ್ಭವಿಷ್ಯತಿ ।
ಮಯಿ ಪ್ರವಿಷ್ಟೇ ಲಙ್ಕಾಯಾಂ ಕ್ಷಯಮಕ್ಷಯವೇಷ್ಯತಿ ॥೧೭॥

ನಾನು ಲಂಕಾನಗರಿಯು, ನಾನು ಈ ರೂಪವನ್ನು ಧರಿಸಿಕೊಂಡು ಸರ್ವತ್ರ ಕಾಪಾಡಿಕೊಂಡಿರುವೆನು ಇದೋ ನಾನು ನನ್ನ ವಿಷಯವನ್ನು ನಿನಗೆ ಹೇಳಿರುವನು ' ಎಂದು, ಅತಿ ಪರುಷವಾಗಿ ಉತ್ತರ ಕೊಟ್ಟಳು ॥೧೨–೧೩॥

ಬಳಿಕ, ಅತಿವಿಕೃತವಾದ ಸ್ತ್ರೀರೂಪವನ್ನು ಧರಿಸಿರುವ ಆ ಲಂಕಾನಗರಿಯನ್ನು ಚೆನ್ನಾಗಿ ನೋಡಿ, ಮಹಾಮೇಧಾವಿಯೂ ಮಹಾಸತ್ವಸಂಪನ್ನನೂ ಆದ ಹನೂಮಂತನು ಅವಳನ್ನು ಕುರಿತು ಹೀಗೆ ಹೇಳಿದನು ॥೧೪॥

ಎಲೌ ಭದ್ರೆ! ನಾನು ನಿಮಗೇನು ಅಪಕಾರ ಮಾಡಿದೆನು? ಕಪಿಯಾದ ನಾನು, ಚೇಷ್ಟೆಗಳಿಂದಲೂ ವಿಹಾರಗಳಿಂದಲೂ ಪ್ಲವನಗಳಿಂದಲೂ ನಿಮಗೆಲ್ಲ ವಿನೋದಕ್ಕೆ ಅನುಕೂಲನಾಗಿರುವೆನಲ್ಲವೆ! ಕಪಿಜಾತಿಯೇ ನಿಮಗ ಕ್ರೀಡಾನ್ಯಮೃಗಸವಾನವಾದುದಷ್ಟೆ! ॥೧೫॥

ನಾವು ಇಲ್ಲಿ ಪ್ರತಿಬೀದಿಯಲ್ಲಿಯೂ, ಪ್ರತಿಮನೆಯಲ್ಲಿಯೂ, ಸಾಮಂತರಾಜರ ಅರಮನೆಯಲ್ಲಿಯೂ, ಪುಣ್ಯಕರ್ಮಶೀಲರಾಗಿರುವ ಜನರಿಗೆ ಸಂಭ್ರಮವನ್ನುಂಟುಮಾಡುವೆವು ॥೧೬॥

ನಾನು ಪ್ರವೇಶಮಾಡಲಾಗಿ, ರಾವಣನ ಮನೆಯಲ್ಲಿಯೂ ತೇಜೋವೃದ್ಧಿಯುಂಟಾಗುವುದು, ಲಂಕಾಪಟ್ಟಣದಲ್ಲಿ ಕ್ಷಯವೂ ಅಕ್ಷಯವಾಗುವುದು (೧) ॥೧೭॥

---

(೧) ಇಲ್ಲಿ ಹದಿನಾರನೆಯ ಶ್ಲೋಕದಲ್ಲಿ 'ಸಂಭ್ರಮಂ ಜನಯಾಮಿ' ಎಂದು ಹೇಳಿರುವುದರಿಂದ— ನಾವೆಲ್ಲರೂ ಬಂದು ರಾಕ್ಷಸರಿಗೆಲ್ಲ ಕಳವಳವನ್ನುಂಟುಮಾಡುವೆವೆಂದೂ, ಹದಿನೇಳನೆಯ ಶ್ಲೋಕದಲ್ಲಿ 'ತೇಜೋವೃದ್ಧಿರ್ಭವಿಷ್ಯತಿ' ಎಂದಿರುವುದರಿಂದ—ಅಲ್ಲೆಲ್ಲ ಅಗ್ನಿಜ್ವಾಲೆಯುರಿಯುವುದೆಂದೂ, 'ಕ್ಷಯಮಕ್ಷಯವೇಷ್ಯತಿ' ಎಂದಿರುವುದರಿಂದ—ಸ್ಥಿರವಾಗಿ ನಾಶವುಂಟಾಗುವುದೆಂದೂ, ಹನುಮಂತನ ಹೃದಯಗತವಾದ ಅಭಿಪ್ರಾಯವು

ಪನೂಮತ್ಯೈವಮುಕ್ತಾ ಸಾ ತದರ್ಥಾಕಲನಾಕ್ಷಮಾ ।
ತತಃ ಕೃತ್ವಾ ಮಹಾನಾದಂ ಸಾ ವೈ ಲಙ್ಕಾ ಭಯಾವಹಮ್ ।
ತಲೇನ ವಾನರಶ್ರೇಷ್ಠಂ ತಾಡಯಾಮಾಸ ವೇಗಿತಾ ॥೧೯॥

ತತಃ ಸ ಕಪಿವರಸ್ತಲೇನ ಲಙ್ಕಯಾ ತಾಡಿತೋ ಭೃಶಮ್ ।
ನನಾದ ಸ ಮಹಾನಾದಂ ವೀರ್ಯವಾನ್ ಪವನಾತ್ಮಜಃ ॥೧೯॥

ತತಃ ಸಂವರ್ತಯಾಮಾಸ ವಾಮಹಸ್ತಸ್ಯ ಸೋಙ್ಗುಲೀಃ ।
ಮುಷ್ಟಿನಾಭಿಹನತ್ತಾಂಸ್ತಾಂ ಹನೂಮಾನ್ ಕ್ರೋಧಮೂರ್ಛಿತಃ ॥೨೦॥

ಸಾ ತು ತೇನ ಪ್ರಹಾರೇಣ ವಿಹ್ವಲಾಙ್ಗೀ ನಿಶಾಚರೀ ।
ಸಸಾತ ಸಕಸಾ ಭೂಮೌ ವಿಕೃತಾನನದರ್ಶನಾ ॥೨೧॥

ತತೋ ವೈ ಭೃಶಸಂವಿಗ್ನಾ ಹನೂಮನ್ತಮುವಾಚ ಸಾ ॥೨೨॥

ಇದಂ ತು ತಥ್ಯಂ ಶೃಣು ವೈ ಬ್ರುವನ್ತ್ಯಾಮೇ ಹರೀಶ್ವರ ।
ಸ್ವಯಮ್ಭುವಾ ಪುರಾ ದತ್ತಂ ವರದಾನಂ ಯಥಾ ಮಮ ॥೨೩॥

ಯದಾ ತ್ವಾಂ ವಾನರಃ ಕಶ್ಚಿತ್ ವಿಕ್ರಮಾದ್ವಶಮಾನಯೇತ್ ।

—

ಈಗೆಂದು ಹನುಮಂತನಿಂದ ಹೇಳಲ್ಪಟ್ಟ ಆ ಲಂಕಿನಿಯು, ಅವನ ಮಾತಿನ ಅರ್ಥವನ್ನು ತಿಳಿದುಕೊಳ್ಳಲಾರದವಳಾಗಿ, ಒಳಿಕ ಅತಿ ಭಯಂಕರವಾದ ನಾದವನ್ನು ಮಾಡಿ, ತನ್ನ ವೇಗವನ್ನೆಲ್ಲ ಬಿಟ್ಟು ಹನುಮಂತನನ್ನು ಗುದ್ದಿಬಿಟ್ಟಳು ॥೧೮॥

ಅನಂತರ, ಹೀಗೆ ಲಂಕಾಧಿದೇವತೆಯಿಂದ ಬಲವಾಗಿ ಹೊಡೆಯಲ್ಪಟ್ಟ ಮಹಾವೀರ್ಯನಾದ ಹನುಮಂತನು, ಗಟ್ಟಿಯಾಗಿ ಗರ್ಜನೆಮಾಡಿದನು ॥೧೯॥

ಆಮೇಲೆ, ಮಹಾಕ್ರೋಧೋದ್ರಿಕ್ತನಾದ ಆಂಜನೇಯನು, ತನ್ನ ಎಡಗೈಯಿಂದ ಬೆರಳುಗಳನ್ನೆಲ್ಲ ಮುದುಡಿಕೊಂಡು ಮುಷ್ಟಿಯಿಂದ ಆ ಲಂಕೆಯನ್ನು ಒಂದುಸಲ ಗುದ್ದಿದನು ॥೨೦॥

ಆ ಏಟಿನಿಂದ ವಿಹ್ವಲಾಂಗಳಾದ ಲಂಕಿನಿಯು, ಮುಖವನ್ನು ಅತಿಯಾಗಿ ವಿಕಾರಮಾಡಿಕೊಂಡು, ತಟ್ಟನೆ ಭೂಮಿಯಮೇಲೆ ಬಿದ್ದುಬಿಟ್ಟಳು ಆಮೇಲೆ ಬಹಳವಾಗಿ ಸಂಕಟಪಡುತ, ಅವಳು ಹನುಮಂತನನ್ನು ಕುರಿತು ಹೀಗೆ ಹೇಳಿದಳು ॥೨೧-೨೨॥

ಆಯ್ಯಾ ! ಶ್ರೇಷ್ಠನೇ ! ನೀನು ಹೇಳುವ ಸತ್ಯವಾದ ಈ ಮಾತನ್ನು ಲಾಲಿಸು ಪೂರ್ವದಲ್ಲಿ ಬ್ರಹ್ಮದೇವನು ನನಗೆ ವರಪ್ರದಾನಮಾಡಿದ ವಿಷಯವನ್ನು ಹೇಳುವೆನು ॥೨೩॥

ಆಗ ಬ್ರಹ್ಮದೇವನು ನನಗೆ ಹೇಳಿದ್ದುದೇನೆಂದರೆ,—ಯಾವಾಗ ಒಬ್ಬ ವಾನರನು ನಿನ್ನನ್ನು ತನ್ನ ಪರಾಕ್ರಮದಿಂದ ಗದ್ದುಬಡಿಸುವನೋ, ಆಗ ನೀನು ಸಮಸ್ತ ರಾಕ್ಷಸರಿಗೂ ಭಯವುಪಸ್ಥಿತವಾಯ್ತೆಂದು ತಿಳಿಯತಕ್ಕದ್ದು ಸೀತಾಸಮಿತ್ತವಾಗಿ ದುರಾತ್ಮನಾದ ರಾವಣನಿಗೂ ಸಮಸ್ತರಾದ

ತದಾ ತ್ವಯಾ ಹಿ ವಿಜ್ಞೇಯಂ ರಕ್ಷಸಾಂ ಭಯಮಾಗತಮ್ ॥೨೪॥
ಸೀತಾನಿಮಿತ್ತಂ ರಾಜ್ಞಸ್ತು ರಾವಣಸ್ಯ ದುರಾತ್ಮನಃ ।
ರಕ್ಷಸಾಂ ಚೈವ ಸರ್ವೇಷಾಂ ವಿನಾಶಃ ಸಮುಪಸ್ಥಿತಃ ॥೨೫॥
ಸ ಹಿ ಮೇ ಸಮಯಃ ಸೌಮ್ಯ ಪ್ರಾಪ್ತೋಽದ್ಯ ತವ ದರ್ಶನಾತ್ ।
ಸ್ವಯಂಭುವಿಹಿತಃ ಸತ್ಯೋ ನ ತಸ್ಯಾಸ್ತಿ ವ್ಯತಿಕ್ರಮಃ ॥೨೬॥
ತತ್ ಪ್ರವಿಶ್ಯ ಹರಿಶ್ರೇಷ್ಠ ಪುರೀಂ ರಾವಣಪಾಲಿತಾಮ್ ।
ವಿಧತ್ಸ್ವ ಸರ್ವಕಾರ್ಯಾಣಿ ಯಾನಿಯಾನೀಹ ವಾಞ್ಛಸಿ ॥೨೭॥
ತತಸ್ತು ತಾಂ ಪುರೀಂ ಲಙ್ಕಾಂ ರಮ್ಯಾಮಭಿಯಯೌ ಕಪಿಃ ।
ಪ್ರಾಕಾರದಾಮ್ಬುಧರಪ್ರತ್ಯೈಃ ಕೃತಃ ಭವನೈರುಪಶೋಭಿತಾಮ್ ॥೨೮॥
ಶಾತಕುಮ್ಭಮಯೈರುಚ್ಚೈಃ ಪ್ರಾಕಾರೈರ್ಬಹುಭಿರ್ಯುತಾಮ್ ।
ಕಿಙ್ಕಿಣೀಜಾಲಘೋಷಾಭಿಃ ಪತಾಕಾಭಿರಲಂಕೃತಾಮ್ ॥೨೯॥
ಜಾಮ್ಬೂನದಮಯೈರ್ದ್ವಾರೈಃ ವೈಡೂರ್ಯಕೃತವೇದಿಕೈಃ ।

ರಾಕ್ಷಸರಿಗೂ ನಾಶವು ಸನ್ನಿಹಿತವಾಯ್ತೆಂದು, ಆಗ ನೀನು ನಿಶ್ಚಯಿಸತಕ್ಕುದು ಎಂಬುದಾಗಿ ಬ್ರಹ್ಮದೇವನು ನನಗೆ ಹೇಳಿದ್ದನು ॥೨೪-೨೫॥

ಅಯ್ಯಾ! ಸೌಮ್ಯನ! ಈಗ ನಾನು ನಿನ್ನನ್ನು ನೋಡಿದೆನಾದಕಾರಣ ಬ್ರಹ್ಮದೇವನು ನನಗೆ ಹಿಂದೆ ಹೇಳಿದ್ದ ಆ ಸಮಯವು ಸನ್ನಿಹಿತವಾಗಿರುವುದೆಂದು ನನಗ ಗೂತ್ತಾಯ್ತು ಬ್ರಹ್ಮನಿಂದ ಎಸಿತವಾದ ಆ ಸಮಯವು ಸತ್ಯವಾಗುವುದೇ ಹೊರತು, ಅದಿಂದಿಗೂ ತಪ್ಪಲಾರದು॥೨೬॥

ಅದುಕಾರಣ, ಅಯ್ಯಾ ಕಪಿನಾಯಕನೇ! ಈಗ ನೀನು ರಾವಣನಿಂದ ಪರಿಪಾಲಿತವಾಗಿರುವ ಈ ಲಂಕೆಯೊಳಗೆ ಪ್ರವೇಶಿಸಿ, ಇಲ್ಲಿ ಯಾವಯಾವ ಕೆಲಸಗಳನ್ನು ಮಾಡಬೇಕೆಂದು ಇಚ್ಛಿಸುವೆಯೋ-ಅವುಗಳನ್ನೆಲ್ಲ ನಿರಾತಂಕವಾಗಿ ಮಾಡುವನಾಗು (ಎಂದು ಲಂಕಿನಿಯು ಹೇಳಿದಳು)॥

ಹೀಗ ಅವಳಿಂದ ಹೇಳಲ್ಪಟ್ಟಬಳಿಕ, ಆ ಹನುಮಂತನು, ಶರತ್ಕಾಲದ ಮೇಘಗಳಂತೆ ಎರಾಡಿಸುತ್ತಿರುವ ವಿವ್ಯಭವನಗಳಿಂದ ಶೋಭಿತವಾದ ಆ ಲಂಕಾಪಟ್ಟಣದೊಳಕ್ಕೆ ಪ್ರವೇಶ ಮಾಡಿದನು ॥೨೮॥

ಆ ಲಂಕಾಪಟ್ಟಣವು, ಸುವರ್ಣಮಯವಾಗಿರುವ ಅತ್ಯುನ್ನತವಾದ ಅನೇಕ ಪ್ರಾಕಾರ (ಕೋಟ)ಗಳಿಂದ ಪರಿವೃತವಾಗಿಯೂ, ಕಿರುಗಂಟೆಗಳನ್ನು ಕಟ್ಟಿ ಧ್ವನಿಮಾಡುತಿರುವ ಪತಾಕೆಗಳಿಂದ ಅಲಂಕೃತವಾಗಿಯೂ ಇದ್ದಿತು ॥೨೯॥

ಆ ಪಟ್ಟಣದ ಗೃಹದ್ವಾರಗಳು, ಸುವರ್ಣಮಯವಾಗಿದ್ದುವು, ಅಲ್ಲಿ ವೈಡೂರ್ಯ ರತ್ನದಿಂದ ವೇದಿಕೆ(ಜಗುಲಿ)ಗಳು ಮಾಡಲ್ಪಟ್ಟಿದ್ದುವು, ಮತ್ತು, ಆ ದ್ವಾರಗಳು ರತ್ನಗಳಿಂದಲೂ ಸ್ಫಟಿಕ ಏಲೆಗಳಿಂದಲೂ ಮುಕ್ತಾಫಲಗಳಿಂದಲೂ ಅಲಂಕೃತವಾಗಿದ್ದುವು ಅಲ್ಲಿನ ನಲವನ್ನು ರತ್ನಗಳಿಂದ ಅಲಂಕರಿಸಿದ್ದರು. ಪುಟಪಾಕಿದ ಚಿನ್ನದಿಂದ ಆನೆಗಳನ್ನು ಮಾಡಿ ಇಟ್ಟಿದ್ದರು, ಮೇಲುಭಾಗದಲ್ಲೆಲ್ಲ

ಮಣಿಸ್ಫಟಿಕಮುಕ್ತಾಭಿಃ ಮಣಿಕುಟ್ಟಿಮಭೂಷಿತೈಃ ॥೩೦॥
ತಪ್ತ ಹಾಟಕನಿರ್ಯೂಹೈಃ ರಾಜತಾಮಲಪಾಂಡುರೈಃ ।
ವೈಡೂರ್ಯಮಯಸೋಪಾನೈಃ ಸ್ಫಾಟಿಕಾಮಲಪಾಂಸುಭಿಃ ।
ಕ್ರೌಞ್ಚ ಬರ್ಹಿಣಸಂಘುಷ್ಟೈಃ ರಾಜಹಂಸನಿಷೇವಿತೈಃ ॥೩೧॥
ಅಯೋಧ್ಯಾಯಾಸ್ತಥಾಕೀರ್ಣಾಂ ಉಚ್ಛ್ರಯಸ್ತಾಸ್ಥಿರೋರ್ಜಿತಾಮ್ ।
ನಗರೀಂ ರಾಕ್ಷಸೇಂದ್ರಸ್ಯ ದದರ್ಶ ಸ ಮಹಾಕಪಿಃ ॥೩೨॥

ಅಟ್ಟಾಲಕಸ್ಥಿತೋ ವೀರಃ ಪುರಂ ಸರ್ವಂ ದದರ್ಶ ಸಃ ।
ತತಃ ಸಾಮನ್ತನಿಲಯಾ ರಾಜಸದ್ಮಾನಿ ಸರ್ವಶಃ ।
ಪ್ರಾಕೃತಾನಾಂ ಗೃಹಾ ಸರ್ವಾ ಮಧ್ಯಮಾನಾಂಸ್ತಥಾಲಯಾ ॥೩೩॥
ಗೃಹಾದ್ಗೃಹಂ ರಾಕ್ಷಸಾನಾಂ ಉದ್ಯಾನಾನಿ ಚ ವಾನರಃ ।
ವೀಕ್ಷಮಾಣೋ ಹ್ಯಸನ್ತ್ರಸ್ತಃ ಪ್ರಾಸಾದಾಂಶ್ಚ ದದರ್ಶ ಸಃ ॥೩೪॥
ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಮ್ ।
ತತೋನ್ಯತ್ ಪ್ಲವಮಾನೋ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾ ॥೩೫॥

ದಿವ್ಯವಾದ ಬೆಳ್ಳಿಯಿಂದ ಅಲಂಕರಿಸಿದ್ದರು, ವೈಡೂರ್ಯ ರತ್ನದಿಂದ ಸೋಪಾನಗಳನ್ನು ಮಾಡಿದ್ದರು ಅಂಗಳದೊಳಗಡೆ ಸ್ಫಟಿಕಮಣಿಯನ್ನು ಧೂಳುಮಾಡಿ ಎರಚಿದ್ದರು, ಆ ಬಾಗಿಲುಗಳಲ್ಲಿ, ಕ್ರೌಂಚ ಪಕ್ಷಿಗಳೂ ನವಿಲುಗಳೂ ರಾಜಹಂಸಗಳೂ ಧ್ವನಿಮಾಡುತಿದ್ದುವು ॥೩೦-೩೧॥

ಆ ಲಂಕಾಪಟ್ಟಣದೊಳಗೆ, ನೂರಾರು ಯಂತ್ರಗಳು ಇಡಲ್ಪಟ್ಟಿದ್ದುವು ಪ್ರಾಕಾರದ ಸುತ್ತಲೂ ಉನ್ನತಸ್ಥಳಗಳಲ್ಲಿ ಶತಘ್ನಿ(ಫಿರಂಗಿ)ಮುಂತಾದ ಯಂತ್ರಗಳು ಸಜ್ಜುಗೊಳಿಸಲ್ಪಟ್ಟಿದ್ದುವು ಇಂತಹ ಆ ರಾಕ್ಷಸೇಂದ್ರ ರಾಜಧಾನಿಯನ್ನು, ಹನುಮಂತನು ಕಂಡನು ॥೩೨॥

ಬಳಿಕ ಆ ಮಹಾವೀರನಾದ ಆಂಜನೇಯನು ಮನೆಗಳ ಮಹಡಿಯಮೇಲೆ ನಿಂತುಕೊಂಡು ಆ ಪಟ್ಟಣವನ್ನೆಲ್ಲ ಚೆನ್ನಾಗಿ ನೋಡಿದನು ಆಮೇಲೆ, ಸುತ್ತಲೂ ಸಾಮಂತರಾಜರ ಮನೆಗಳನ್ನೂ, ಅರಮನೆಗಳನ್ನೂ, ಸಾಧಾರಣಜನರ ಮನೆಗಳನ್ನೂ, ಅಲ್ಲಲ್ಲಿ ಹೊಸದಾಗಿ ಕಟ್ಟಲ್ಪಡುತಿರುವ ಮನೆಗಳನ್ನೂ ನಿರವಶೇಷವಾಗಿ ನೋಡಿದನು ॥೩೩॥

ಆಗ ಆ ವಾನರನು, ರಾಕ್ಷಸರ ಒಂದುಮನೆಯಿಂದ ಮತ್ತೊಂದು ಮನೆಯನ್ನೂ, ಒಂದು ಉಪವನದಿಂದ ಮತ್ತೊಂದು ಉಪವನವನ್ನೂ ನೋಡುತ, ನಿರ್ಭಯವಾಗಿ ಸಮಸ್ತ ಪ್ರಾಸಾದಗಳನ್ನೂ ನೋಡಿದನು ॥೩೪॥

ಆಮೇಲೆ, ಮಹಾವೀರ್ಯವಂತನಾದ ಹನುಮಂತನು, ಪ್ರಹಸ್ತನ ಮನೆಯಮೇಲೆ ಹಾರಿಹೋಗಿ, ಅಲ್ಲಿಂದ ಮಹಾಪಾರ್ಶ್ವನ ಮನೆಯಮೇಲೆ ಹಾರುಹೋಗಿ ಕುಳಿತುಕೊಂಡನು ॥೩೫॥

ಅಥ ಮೇಘಪ್ರತೀಕಾಶಂ ಅತಿಕಾಯನಿವೇಶನಮ್ ।
ವಿಭೀಷಣಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥೩೬॥
ವಿದ್ಯುಜ್ಜಿಹ್ವಸ್ಯ ಚ ತಥಾ ವಿದ್ಯುನ್ಮಾಲೇಸ್ತಥೈವ ಚ ।
ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥೩೭॥
ತಥಾ ಚೇಂದ್ರಜಿತೋ ವೇಶ್ಮ ಜಗಾಮ ಹರಿಯೂದಪಃ ॥೩೮॥
ಕ್ರಮಮಾಣಃ ಕ್ರಮೇಣೈವಂ ಹನೂಮಾ ಮಾರುತಾತ್ಮಜಃ ।
ತೇಷುತೇಷು ಮಹಾರ್ಹೇಷು ಭವನೇಷು ಮಹಾಯಶಾಃ ।
ತೇಷಾಮೃದ್ಧಿಮತಾಮೃದ್ಧಿಂ ದದರ್ಶ ಸ ಮಹಾಕಪಿಃ ॥೩೯॥
ತೂರ್ಯಾಭರಣನಿಷ್ಕೂಜೈಃ ಸರ್ವತಃ ಪ್ರತಿನಾದಿತಾಮ್ ;
ಭುಜಗಾಚರಿತಾಂ ಗುಪ್ತಾಂ ಶುಭಾಂ ಭೋಗವತೀಮಿವ ।
ಚಣ್ಡಮಾರುತನಿರ್ಹ್ರಾದಾಂ ಯಥೇಂದ್ರಸ್ಯಾಮರಾವತೀಮ್ ॥೪೦॥
ಕಾಞ್ಚನೇನ ಚ ಕಾಂಸ್ಯೇನ ರಾಜತೇನಾಯಸೇನ ಚ ।
ಪ್ರಾಕಾರಾನಿರ್ಮಿತಾಃ ಸಪ್ತ ದಶಯೋಜನಮುನ್ನತಾಃ ॥೪೧॥
ದುರಾರೋಹಾಂ ನಿರಾಲಮ್ಬಾಂ ದಾನವೈರಮರೈರಪಿ ।
ಪ್ರಾಸಾದೈರತ್ನವಿಕೃತೈಃ ವಿಜಿತೈರ್ಮರುದೈರಪಿ ॥೪೨॥

ಒಳಿಕ ಆ ಮಹಾಕಪಿಯು, ಮೇಘಸದೃಶವಾಗಿರುವ ಅತಿಕಾಯನ ಮನೆಯಮೇಲೂ, ಹಾಗೆಯೇ ವಿಭೀಷಣನ ಮನೆಯಮೇಲೂ ಹಾರಿಹೋದನು ॥೩೬॥

ಅನಂತರ ಆ ಕಪಿನಾಯಕನು, ವಿದ್ಯುಜ್ಜಿಹ್ವ ವಿದ್ಯುನ್ಮಾಲಿ ವಜ್ರದಂಷ್ಟ್ರ ಇಂದ್ರಜಿತು-ಇವರುಗಳ ಮನೆಯಮೇಲೆಲ್ಲ ಹೋಗಿ ಕುಳಿತನು ॥೩೭-೩೮॥

ಹೀಗ ಕ್ರಮವಾಗಿ ಮಹಾವಿಭವಯುಕ್ತವಾದ ಆಯಾ ಮನಗಳಲ್ಲಿ ಸಂಚರಿಸುತಿರುವ ಮಾರುತಪುತ್ರನಾದ ಸುಹಾಕೀರ್ತಿಯಾದ ಆ ಹನುಮಂತನು, ಮಹಾಸಮೃದ್ಧಿಯುಕ್ತರಾದ ಆ ರಾಕ್ಷಸರ ಸಂಪತ್ತನ್ನು ನೋಡಿದವನಾದನು ॥೩೯॥

ಆಗ ತೂರ್ಯಧ್ವನಿಗಳಿಂದಲೂ ಆಭರಣಧ್ವನಿಗಳಿಂದಲೂ ಸರ್ವತ್ರ ಶಬ್ದಾಯಮಾನವಾಗಿರುವ ಆ ಲಂಕಾಪಟ್ಟಣವು, ಸರ್ಪಗಳಿಂದ ಸಂರಕ್ಷಿತವಾಗಿರುವ ಭೋಗವತೀನಗರಿಯಂತಯೂ, ಮಹಾ ವಾಯುಶಬ್ದಯುಕ್ತವಾಗಿರುವ ಇಂದ್ರನ ಅಮರಾವತಿಯಂತಯೂ ಅವನಿಗೆ ತೋರಿತು ॥೪೦॥

ಆ ಲಂಕಾಪಟ್ಟಣಕ್ಕೆ, ಸುವರ್ಣದಿಂದಲೂ, ಕಂಚಿನಿಂದಲೂ, ಬೆಳ್ಳಿಯಿಂದಲೂ, ಉಕ್ಕು ಮೊದಲಾದುವುಗಳಿಂದಲೂ ಕೂಡ, ಹತ್ತುಗಾವುದದೆತ್ತರವಿರುವ ಏಳು ಕೋಟೆಗಳು ನಿರ್ಮಿಸಲ್ಪಟ್ಟಿದ್ದುವು ॥೪೧॥

ಮತ್ತು, ಆ ಲಂಕಾಪಟ್ಟಣವು, ಆಧಾರಶೂನ್ಯವಾಗಿರುವಕಾರಣ, ದಾನವರಿಂದಲೂ ದೇವತೆಗಳಿಂದಲೂ ಹತ್ತಲು ಅಸಾಧ್ಯವಾಗಿದ್ದಿತು ಮತ್ತು ರತ್ನಮಯವಾದ ಪ್ರಾಕಾರಗಳಿಂದಲೂ, ವಿಚಿತ್ರವಾದ ಗೋಪುರಗಳಿಂದಲೂ ಶೋಭಿಸುತಿದ್ದಿತು ॥೪೨॥

ಸಭಾಶಾಲಾಃ ಸುವಿಸ್ತೀರ್ಣಾಃ ನವರತ್ನವಿನಿರ್ಮಿತಾಃ ।
ಗೃಹಾಃ ಶುದ್ಧತಲಾಃ ಸರ್ವೇ ಮಣಿಕಾಞ್ಚನನಿರ್ಮಿತಾಃ ॥೪೩॥
ಮುಕ್ತಾವಿತಾನಜಾಲಾನಿ ಕೂಟಾಗಾರಾಣಿ ಸರ್ವಶಃ ।
ತಸ್ಯಾಂರಾಜಗೃಹಂ ಮಧ್ಯೇ ನವರತ್ನವಿನಿರ್ಮಿತಮ್ ॥೪೪॥
ರಾಜವಾರ್ಗೈಣ ಮಹತಾ ವೀಧಿವಿಸ್ತಾರಶೋಭಿತಾಮ್ ।
ಯೋಜನತ್ರಿಶತಾಯಾಮಾಂ ಶತಯೋಜನವಿಸ್ತೃತಾಮ್ ॥೪೫॥
ಗೃಹಗಾಢಾಮವಿಚ್ಛಿದ್ರಾಂ ನವಕೋಟಿಶಿವಾಲಯಾಮ್ ।
ಸಹಸ್ರೋಪದ್ವಾರಯುತಾಂ ಬೃಹದ್ಭಿರ್ವಶತಾಙ್ಕಿತಾಮ್ ।
ಮಹಾಕವಾಟಪಿಹಿತಾಂ ಶತಘುಷ್ಟಪಥಾವೃತಾಮ್ ॥೪೬॥
ತತೋನ್ಧಕಾರೇ ಸಂಪ್ರಾಪ್ತೇ ವಿಜೆನ್ವಂಶ್ಚ ಶನೈಶ್ಚನೈಃ ।
ನಿರ್ಭೀಕೋ ವ್ಯಚರತ್ ತಸ್ಯಾಂ ರಜಿಕ್ಞೀ ನಟಜನೋ ಯಥಾ ॥೪೭॥
ತತೋ ಲಙ್ಕಾಪುರೇ ವಾರ್ತಾ ಪ್ರಾದುರಾಸೀತ್ ಸಮನ್ತತಃ ॥೪೮॥
ಯೋವಾಕೋವಾ ನ ಜಾನೀವೋ ಲಙ್ಕಿನೀಪ್ರಾಣಹಾರಕಃ ।

ಅಲ್ಲಿ, ಸಭಾಗೃಹಗಳೆಲ್ಲವೂ ವಿಶಾಲವಾಗಿಯೂ ನವರತ್ನಖಚಿತವಾಗಿಯೂ ಇದ್ದುವು ಈ ಮನೆಗಳೆಲ್ಲವೂ ಶುದ್ಧತಲಗಳಾಗಿಯೂ ಮಣಿಸುವರ್ಣನಿರ್ಮಿತಗಳಾಗಿಯೂ ಇದ್ದುವು ಕೂಟಾಗಾರ(ನಲವಾಳಿಗ ಮುಂತಾದುದು)ಗಳು ಸುತ್ತಲೂ ಮುತ್ತಿನ ಮೇಲ್ಕಟ್ಟುಗಳಿಂದ ಶೋಭಿಸುತಿದ್ದುವು ಇಂತಹ ಆ ಲಂಕಾಪಟ್ಟಣದ ಮಧ್ಯದಲ್ಲಿ, ರಾಜನುಂದಿರವು ನವರತ್ನಗಳಿಂದ ನಿರ್ಮಿತವಾಗಿದ್ದಿತು ॥೪೩-೪೪॥

ಮತ್ತು, ಆ ಲಂಕಾಪಟ್ಟಣದೊಳಗೆ, ದೊಡ್ಡದಾದ ರಾಜಮಾರ್ಗಗಳೂ, ಮಧ್ಯದಲ್ಲಿ ಏಸ್ತಾರವಾದ ಅಡ್ಡಬೀದಿಗಳೂ ಯಥೇಚ್ಛವಾಗಿದ್ದುವು ಆ ಪಟ್ಟಣವು, ಮುನ್ನೂರುಯೋಜನ ಉದ್ದವಾಗಿಯೂ, ನೂರುಯೋಜನ ಅಗಲವಾಗಿಯೂ ಇದ್ದಿತು ॥೪೫॥

ಅಲ್ಲಿನ ಮನೆಗಳೆಲ್ಲವೂ ಸಾಲುಸಾಲಾಗಿ ದಟ್ಟವಾಗಿದ್ದುವು ಅದರೊಳಗೆ ಒಂಭತ್ತು ಕೋಟಿ ಶಿವಾಲಯಗಳಿದ್ದುವು ಆ ಪಟ್ಟಣಕ್ಕೆ ಒಂದುಸಾವಿರ ಉಪದ್ವಾರಗಳೂ ಒಂದುನೂರು ಮಹಾದ್ವಾರಗಳೂ ಇದ್ದುವು ಅವುಗಳಿಗೆಲ್ಲ ದೊಡ್ಡದೊಡ್ಡ ಬಾಗಿಲುಗಳನ್ನು ವಿರಚಿಸಿದ್ದರು. ಅಲ್ಲಿ ನೂರು ಘಂಟಾಪಥ(ಹೈರೋಡು)ಗಳಿದ್ದುವು ॥೪೬॥

ಇಂತಹ ಆ ಲಂಕಾಪಟ್ಟಣವನ್ನು ಜನ್ನಾಗಿ ನೋಡಿ, ಬಳಿಕ ಅಂಧಕಾರವಾಗಲಾಗಿ ಮೆಲ್ಲಮೆಲ್ಲಗೆ ಹುಡುಕುತ, ರಂಗಸ್ಥಳದಲ್ಲಿ ನಟನು ಆಟವಾಡುವಂತೆ, ಆ ಹನುಮಂತನು ಅಲ್ಲಿ ನಿರ್ಭಯನಾಗಿ ಸಂಚರಿಸುತಿದ್ದನು ॥೪೭॥

ಆ ಬಳಿಕ, ಆ ಲಂಕಾಪಟ್ಟಣದಲ್ಲೆಲ್ಲ ' ಯಾವನೋ ಒಬ್ಬನು ಬಂದು ನಮ್ಮ ಲಂಕಿನಿಯ ಪ್ರಾಣವನ್ನು ಅಪಹರಿಸಿಬಿಟ್ಟನಂತೆ ! ಅವನಾರೋ ನಮಗೆ ಗೊತ್ತಿಲ್ಲ ! ಅವನು ನಿರ್ಭಯನಾಗಿ

ನಿರ್ಭಯಃ ಪುರಮಾವಿಶ್ಯ ತತ್ರತತ್ರ ಪ್ರದೃಶ್ಯತೇ ।
ಕೋ ವಾ ತತ್ತ್ವಂ ನ ಜಾನೀಮಃ ಸರ್ವಸದ್ಮಸು ಸಂಚರ್ ॥೪೯॥
ಲಙ್ಕಿನೀ ಸಾ ವಿನಿಹತಾ ದ್ವಾರಂ ಪಾಲಯಿತುಂ ಕ್ಷಮಾ ।
ನಾನ್ಯಾ ತತ್ಸ್ಥಾನಮಾಪ್ನೋತಿ ನಾಗಾಯುತಬಲಾ ಹಿ ಸಾ ॥೫೦॥

ಇತಿ ಶ್ರೀಮತ್ಸುನ್ದರಕಾಣ್ಡೇ ಲಙ್ಕಿನೀಸಂಹಾರಲಙ್ಕಾಪುರ
ಪ್ರವೇಶಾದಿಕಥನಂ ನಾಮ ದ್ವಿತೀಯಃ ಸರ್ಗಃ



ಪಟ್ಟಣದೊಳಗೆ ಪ್ರವೇಶಿಸಿ ಅಲ್ಲಲ್ಲಿ ಕಾಣಿಸಿಕೊಳ್ಳುತಿರುವನು ! ಅವನು ಎಲ್ಲರ ಮನೆಯಲ್ಲಿಯೂ ಸಂಚರಿಸುತಿದ್ದರೂ, ಅನನಾರೋ ನಮಗೆ ಜೆನ್ನಾಗಿ ಗೊತ್ತಾಗುವುದಿಲ್ಲ ! ನಮ್ಮ ಊರಬಾಗಿಲನ್ನು ಕಾಯುವುದರಲ್ಲಿ ಸಮರ್ಥಳಾಗಿದ್ದ ಆ ಲಂಕಿನಿಯೂ ನಿಹತಳಾಗಿಬಿಟ್ಟಳು ! ಅವಳಿಗೆ ಹತ್ತುಸಾವಿರ ಆನೆಯ ಬಲವಿದ್ದಿತು ! ಅವಳ ಸ್ಥಳಕ್ಕೆ ಸರಿಯಾಗಿ ಮತ್ತಾರೂ ಸಿಕ್ಕುವುದಿಲ್ಲವಲ್ಲ ! ' ಎಂಬುದಾಗಿ ಜನವಾರ್ತೆ ಹಬ್ಬಬಟ್ಟಿತು ॥೪೯-೫೦॥

ಇದು ಸುಂದರಕಾಂಡದಲ್ಲಿ ಲಂಕಿನೀಸಂಹಾರ ಲಂಕಾಪ್ರವೇಶಾದಿಕಥನವೆಂಬ
ಎರಡನೆಯ ಸರ್ಗವು



ಅಥ ಶ್ರೀಮತ್ಸುಂದರಕಾಣ್ಡೇ ತೃತೀಯಃ ಸರ್ಗಃ

ತ್ರಿಜಟಿರುವಾಚ

ಏವಂ ಸಂಭಾಷಮಾಣೇಷು ಜನೇಷು ಪುರವಾಸಿಷು ।
ಕುಮ್ಭಕರ್ಣಸ್ಯ ಶಯನಗುಹಾಂ ಗತ್ವಾ ದದರ್ಶ ತಮ್ ।
ಸಿದ್ಧಾರ್ಥಂ ವಿತತಾನೋವಂ ತ್ರಿಶತಂ ಯೋಜನೋನ್ನತಮ್ ॥೧॥
ಪೌಲಸ್ತ್ಯತನಯೋ ವೀರಃ ಕುಮ್ಭಕರ್ಣೋಯಮಿಮಾದೃಶಃ ।
ನಾನ್ಯಸ್ಯೈಯಂ ಪ್ರಭಾವೋಸ್ತಿ ಮಹೋನ್ನತಶರೀರಿಣಃ ॥೨॥
ಸಪ್ತವಿಂಶತಿ ರ್ವ್ಯಾಜನಾನಿ ಮುಖವಸ್ಯ ವರಾತ್ಮನಃ ।
ಪಞ್ಚಾಶೋಜನವಿಸ್ತೀರ್ಣಪಞ್ಚನಾಸಾಬಿಲಾನ್ಯಹೋ ॥೩॥
ಪಞ್ಚಸಪ್ತತಿದೀರ್ಘಾ ಚ ಬಾಹೂ ಪರಿಘಸನ್ನಿಭೌ ॥೪॥
ಅಸ್ಯೈವ ತದ್ವಧಃ ಕಾಮೋ ನಿದ್ರಾನಶಮುಪಾಗತಃ ।
ಏಕೇನ ಮುಷ್ಟಿಘಾತೇನ ಪುನರನ್ಯೇನ ವಾ ತಥಾ ।
ಇತಿ ಸಂಚಿನ್ತ್ಯ ವೀರೋ ರಾವಣಸ್ಯ ಗೃಹಂ ಯಯೌ ॥೫॥

ಸುಂದರಕಾಂಡದಲ್ಲಿ ಮೂರನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಪೂರ್ವೋಕ್ತ ರೀತಿಯಲ್ಲಿ ನಗರವಾಸಿಗಳಾದ ಜನರು ಮಾತನಾಡಿಕೊಳ್ಳುತಿರಲಾಗಿ, ಆ ಹನುಮಂತನು, ಕುಂಭಕರ್ಣನ ಶಯನಗೃಹ ದ್ವಾರಕ್ಕೆ ಹೋಗಿ, ಅಲ್ಲಿ ಮಹಾ ನಾದಭರಿತನಾಗಿ ನಿದ್ರೆಮಾಡುತಿದ್ದ ಮೂನ್ನೂರು ಯೋಜನದಷ್ಟು ಉನ್ನತನಾದ ಕುಂಭಕರ್ಣನನ್ನು ನೋಡಿದನು ॥೧॥

ಆಗ ಹನುಮಂತನ ಮನಸ್ಸಿನಲ್ಲಿ ಹೀಗೆ ಯೋಚನೆ ಹುಟ್ಟಿತು —ಇವನು, ಪೌಲಸ್ತ್ಯಪುತ್ರನಾದ ಮಹಾವೀರನಾದ ಕುಂಭಕರ್ಣನು ಇವನೊಬ್ಬನೇ ಈ ರೀತಿಯಾಗಿರತಕ್ಕವನು ಇನ್ನೊಬ್ಬರೂ ಇಷ್ಟು ಉನ್ನತ ಶರೀರರಾಗಿಲ್ಲ, ಇನ್ನಾರಿಗೂ ಇವನ ಈ ಪ್ರಭಾವವೂ ಇಲ್ಲ ಅಹಹ! ಈ ಮಹಾನುಭಾವನ ಮುಖವೆ, ಇಪ್ಪತ್ತೈದು ಯೋಜನದಷ್ಟು ವಿಶಾಲವಾಗಿರುವುದಲ್ಲ! ಇವನಿಗೆ ಐದು ನಾಸಾಬಿಲವು, ಐದುಯೋಜನ ವಿಸ್ತಾರವುಳ್ಳದಾಗಿರುವುದು ಇವನ ಪರಿಘಸದೃಶವಾದ ಈ ಬಾಹುಗಳು, ಎಪ್ಪತ್ತೈದು ಗಾವುದ ಉದ್ದವಾಗಿರುವುವು ಇವನು ಈಗ ನಿದ್ರಾಪರವಶನಾಗಿರುವುದರಿಂದ, ಒಂದೇಒಂದು ಮುಷ್ಟಿಪ್ರಹಾರದಿಂದ ಈಗಲೇ ಇವನನ್ನು ಕೊಲ್ಲುವುದಕ್ಕೆ ಸಂಯೋಜನೆ ಸಮಯವಾಗಿರುವುದು, ಒಂದೇ ಗುದ್ದಿಗ ಇವನು ಸಾಯದಿದ್ದರೆ, ಮತ್ತೊಂದು ಗುದ್ದನ್ನು ಹಾಕಿದರೆ ಸತ್ತುಹೋಗುವನು' ಹೀಗಂದು ಯೋಚಿಸುತ, ಮಹಾವೀರನಾದ ಹನುಮಂತನು, ರಾವಣನ ಮನೆಗೆ ಹೋದನು ॥೨-೫॥

ಪದ್ಮಗರ್ಭಾಭವಾಭಾತಿ ನಾನಾರತ್ನವಿನಿರ್ಮಿತಮ್ ।
ನಾನಾಭರಣಸಂಪೂರ್ಣಂ ನಾನಾವಸ್ತುಮನೋಹರಮ್ ॥೬॥
ಸ್ವರ್ಣಮುಕ್ತಾಮಣಿಮಯಂ ದಂತಸ್ಫಟಿಕಶೋಭಿತಮ್ ।
ಜಾಜ್ವಲ್ಯಮಾನಂ ತೇಜೋಭಿಃ ಸೂರ್ಯಮಂಡಲಸನ್ನಿಭಮ್ ।
ಮನೋನಯನನಂದಿತ್ವಾತ್ ಚಂದ್ರಮಂಡಲಸನ್ನಿಭಮ್ ॥೭॥
ನಿವಾಸಯೋಗ್ಯಂ ಸರ್ವೇಷಾಂ ಸ್ವರ್ಗಾದಪಿ ಚ ದುರ್ಲಭಮ್ ॥೮॥
ಮಧ್ವಾಸವಕೃತಕ್ಲೇದಂ ಮಣಿಭಾಜನಸಙ್ಕುಲಮ್ ।
ಮನೋರಮಮಸಮ್ಬಾಧಂ ಕುಬೇರಭವನಂ ಯಥಾ ॥೯॥
ನೂಪುರಾಣಾಂ ಚ ಘೋಷೇಣ ಕಾಞ್ಚೀನಾಂ ನಿನದೇನ ಚ ।
ಮೃದಙ್ಗತಾಳನಿರ್ಘೋಷೈಃ ಘೋಷವದ್ಭಿರ್ನಿನಾದಿತಮ್ ।
ಪ್ರಾಸಾದಶತಸಮ್ಬಾಧಂ ಸ್ತ್ರೀರತ್ನಶತಸಙ್ಕುಲಮ್ ॥೧೦॥
ಸ ತಸ್ಯ ಮಧ್ಯೇ ಭವನಸ್ಯ ಸಂಸ್ಥಿತಂ ವಿಹಙ್ಗಮಾನಂ ಮಣಿವಜ್ರಚಿತ್ರಿತಮ್
ಪ್ರತಪ್ತಜಾಮ್ಬೂನದಜಾಲಶೋಭಿತಂ ದದರ್ಶ ವೀರಃ ಪವನಾತ್ಮಜಃ ಕಪಿಃ ॥೧೧॥

— — —

ನಾನಾವಿಧ ರತ್ನಗಳಿಂದ ನಿರ್ಮಿತವಾಗಿದ್ದ ಆ ರಾವಣಮಂದಿರವು, ಕಮಲಪುಷ್ಪದಂತೆ ಮನೋಹರವಾಗಿಯೂ, ನಾನಾವಿಧವಾದ ಆಭರಣಗಳಿಂದ ಪರಿಪೂರ್ಣವಾಗಿಯೂ, ನಾನಾವಿಧ ವಸ್ತುಗಳಿಂದ ರಮ್ಯವಾಗಿಯೂ ವಿರಾಜಿಸುತಿದ್ದಿತು ॥೬॥

ಸುವರ್ಣ ಮಯವಾಗಿಯೂ ಮುಕ್ತಾಫಲಮಯವಾಗಿಯೂ ಇದ್ದ ಆ ರಾವಣಗೃಹವು, ದಂತದ ಕೆಲಸಗಳಿಂದಲೂ ಸ್ಫಟಿಕ ಶಿಲೆಗಳಿಂದಲೂ ಶೋಭಿತವಾಗಿ, ಸೂರ್ಯಮಂಡಲದಂತೆ ತೇಜಸ್ಸುಗಳಿಂದ ಜಾಜ್ವಲ್ಯಮಾನವಾಗಿದ್ದಿತು, ಮನಸ್ಸಿಗೂ ನೇತ್ರಕ್ಕೂ ಹರ್ಷವುಂಟುಮಾಡುವುದರಲ್ಲಿ ಚಂದ್ರಬಿಂಬಕ್ಕ ಸಮಾನವಾಗಿದ್ದಿತು ॥೭॥

ಸಮಸ್ತಪ್ರಾಣಿಗಳಿಗೂ ಅವರವರ ಸ್ಥಿತಿಗ ತಕ್ಕಂತೆ ವಾಸಮಾಡಲು ಅನುಕೂಲವಾಗಿದ್ದಿತು ಅದು ಸ್ವರ್ಗಕ್ಕಿಂತ ದುರ್ಲಭವಾಗಿದ್ದಿತು ಮದ್ಯವೂ ಪುಷ್ಪರಸವೂ ಅಲ್ಲಿ ಚಲ್ಲ ನೆಲವೆಲ್ಲ ಒಗ್ಗಿ ಯಾಗಿದ್ದಿತು ರತ್ನಮಯವಾದ ಪಾತ್ರೆಗಳು ಅಲ್ಲಿ ತುಂಬಿದ್ದುವು ಕುಬೇರನ ಮನೆಯಂತೆ ಮನೋಹರವಾಗಿಯೂ ವಿಶಾಲವಾಗಿಯೂ ವಿರಾಜಿಸುತಿದ್ದಿತು ॥೮-೯॥

ಅಲ್ಲಿ ನೂಪುರಧ್ವನಿಗಳೂ ಕಾಂಚೀಸ್ವನಗಳೂ ಮೃದಂಗಾದಿ ವಾದ್ಯಧ್ವನಿಗಳೂ ನಿಬಿಡವಾಗಿದ್ದುವು ಅದರಲ್ಲಿ ನೂರಾರು ಪ್ರಾಸಾದಗಳೂ, ಅವುಗಳಲ್ಲೆಲ್ಲ ನೂರಾರು ಸ್ತ್ರೀರತ್ನಗಳೂ ಶೋಭಿಸುತಿದ್ದುವು ॥೧೦॥

ಇಂತಹ ಮನೆಯ ಮಧ್ಯದಲ್ಲಿ, ದಿವ್ಯವಾದ ವಜ್ರಮಣಿಗಳಿಂದ ಚಿತ್ರಿತವಾಗಿಯೂ, ಪುಟ ಹಾಕಿದ ಸುವರ್ಣದ ಜಾಲರಿಗಳಿಂದ ಅಲಂಕೃತವಾಗಿಯೂ ಇರುವ ದೊಡ್ಡ ದೇವವಿಮಾನವನ್ನು, ಮಹಾವೀರನಾದ ಆಂಜನೇಯನು ಕಂಡನು ॥೧೧॥

ವಿಶೇಷಮಾಲಂಬ್ಯ ವಿಶೇಷಸಂಸ್ಥಿತಂ ವಿಚಿತ್ರಕೂಟಂ ಬಹುಕೂಟಮಂಡಿತಮ್ ।
ಮನೋಭಿರಾಮಂ ಶರದಿನ್ದುನಿರ್ಮಲಂ ವಿಚಿತ್ರಕೂಟಂ ಶಿಖರಂ ಗಿರೇರ್ಯಥಾ ॥೧೨॥

ವಸನ್ತಪುಷ್ಪೋತ್ಕರಚಾರುದರ್ಶನಂ ವಸನ್ತಮಾಸಾದಪಿ ಕಾನ್ತದರ್ಶನಮ್ ।
ಸ ಪುಷ್ಪಕಂ ತತ್ರ ವಿಮಾನಮುತ್ತಮಂ ದದರ್ಶ ತದ್ವಾನರವೀರಸತ್ತಮಃ ॥೧೩॥

ತಸ್ಯಾಲಯವರಿಷ್ಠಸ್ಯ ಮಧ್ಯೇ ವಿಪುಲಮಾಯತಮ್ ।
ದದರ್ಶ ರಾಕ್ಷಸೇನ್ದ್ರಸ್ಯ ಭವನಂ ಮಾರುತಾತ್ಮಜಃ ॥೧೪॥

ಮಾರ್ಗಮಾಣಸ್ತು ವೈದೇಹೀಂ ಸೀತಾಮಾಯತಲೋಚನಾಮ್ ।
ಸರ್ವತಃ ಪರಿಚಕ್ರಾಮ ಹನೂಮಾನರಿಸೂದನಃ ॥೧೫॥

ತತ್ರ ದಿವ್ಯೋಪಮಂ ಮುಖ್ಯಂ ಸ್ಫಾಟಿಕಂ ರತ್ನಭೂಷಿತಮ್ ।
ಅವೇಕ್ಷ್ಯಮಾಣೋ ಹನುಮಾನ್ ದದರ್ಶ ಶಯನಾಸನಮ್ ॥೧೬॥

ದಾನ್ತಕಾಞ್ಚನಸಜೈತ್ರಾಜಿನೈಃ ವೈಡೂರ್ಯೈಶ್ಚ ವರಾಸನೈಃ ।
ಮಹಾಸಂಸ್ತರಣೋಪೇತೈಃ ಉಪಪನ್ನಂ ಮಹಾಧನೈಃ ॥೧೭॥

---

೮ ವಿಮಾನವು, ನಾನಾವಿಧ ವಿಶೇಷ ಸಂಸ್ಕಾರಗಳಿಂದ ವಿಶೇಷವಾಗಿ ಅಲಂಕೃತವಾಗಿದ್ದಿತು, ಅದರಲ್ಲಿ ವಿಚಿತ್ರತಮವಾದ ಅನೇಕ ಶಿಖರಗಳಿದ್ದುವು ಅದು, ಮಹಾಗಿರಿಶಿಖರದಂತೆ, ಮನೋಹರವಾಗಿಯೂ ಶರಚ್ಚಂದ್ರನ ಹಾಗೆ ನಿರ್ಮಲವಾಗಿಯೂ ಶೋಭಿಸುತಿದ್ದಿತು ॥೧೨॥

ಮತ್ತು, ೮ ವಿಮಾನವು, ವಸಂತಮಾಸದಲ್ಲಿ ಅರಳಿರುವ ಪುಷ್ಪಸಮೂಹದಂತೆ ನೋಡುವುದಕ್ಕೆ ಸುಂದರವಾಗಿಯೂ, ವಸಂತಮಾಸಕ್ಕಿಂತಲೂ ಮನೋಹರವಾಗಿಯೂ ಇದ್ದಿತು ಇಂತಹ ಸರ್ವೋತ್ತಮವಾದ ವಿಮಾನವನ್ನು, ೮ ಹನುಮಂತನು ಒಹು ಕುತೂಹಲದಿಂದ ನೋಡಿದನು ॥ ೩॥

ಈ ಪೂರ್ವೋಕ್ತವಾದ ವಿಮಾನದ ಮಧ್ಯದಲ್ಲಿ, ವಿಶಾಲವಾಗಿಯೂ ದೀರ್ಘವಾಗಿಯೂ ಇದ್ದ ರಾಕ್ಷಸಾಧಿಪತಿಯ ಮನೆಯೊಂದನ್ನು ೮ ಹನುಮಂತನು ನೋಡಿದನು ॥೧೪॥

ಅಲ್ಲೆಲ್ಲವೂ ೮ ವಿಶಾಲನೇತ್ರಿಯಾದ ಸೀತಾದೇವಿಯನ್ನು ಹುಡುಕುತ, ಶತ್ರು ಸಂಹಾರಕನಾದ ಹನುಮಂತನು ಸಂಚರಿಸಿದನು ॥೧೫॥

ಹೀಗೆ ಹುಡುಕುತ ಸಂಚರಿಸುತಿರುವ ಹನುಮಂತನು, ಅಲ್ಲಿ ದೇವಯೋಗ್ಯವಾಗಿ ಸ್ಫಟಿಕದಿಂದ ನಿರ್ಮಿಸಲ್ಪಟ್ಟು ರತ್ನಗಳಿಂದ ಅಲಂಕೃತವಾಗಿರುವ ಶಯನವನ್ನು ಕಂಡನು ॥೧೬॥

೮ ಶಯನ(ಮಂಚದ) ಭಾಗಗಳು, ದಂತದ ಕೆಲಸಗಳಿಂದಲೂ ಚಿನ್ನದ ಕೆತ್ತನೆಗಳಿಂದಲೂ ವಿಚಿತ್ರವಾಗಿಯೂ, ವೈಡೂರ್ಯರತ್ನಗಳಿಂದ ಶೋಭಿತವಾಗಿಯೂ ಇದ್ದುವು ಅದರ ಮೇಲುಗಡೆ ಒಲು ಬೆಲೆಯಾಗುವ ಹಾಸುಗೆಗಳು ವಿರಾಜಿಸುತಿದ್ದುವು ॥೧೭॥

ತಸ್ಮಿನ್ ಜೀಮೂತಸಙ್ಕಾಶಂ ಪ್ರದೀಪ್ತೋತ್ತಮಭೂಷಣಮ್ ।
ಪ್ರಿಯಂ ರಾಕ್ಷಸಕನ್ಯಾನಾಂ ರಾಕ್ಷಸಾನಾಂ ಸುಖಾವಹಮ್ ॥೧೯॥
ಸ ವೃಕ್ಷಮಿವ ಗುಲ್ಮಾಢ್ಯಂ ಪ್ರಸುಪ್ತಮಿವ ಮನ್ದರಮ್ ।
ಪೀತ್ವಾ ಹ್ಯುಪಗತಂ ತತ್ರ ರಾವಣಂ ಸದದರ್ಶ ಹ ॥೧೯॥
ಪಾದಮೂಲಗತಾಶ್ಚಾಪಿ ದದರ್ಶ ಸುಮಹಾತ್ಮನಃ ।
ಪತ್ನೀಃ ಸ ಪ್ರಿಯಭಾರ್ಯಸ್ಯ ತಸ್ಯ ರಕ್ಷಃಪತೇರ್ಗೃಹೇ ॥೨೦॥
ಶಶಿಪ್ರಕಾಶವದನಾಃ ವರಮಾಲ್ಯನಭೂಷಿತಾಃ ।
ಅಮ್ಲಾನಮಾಲ್ಯಾಭರಣಾಃ ದದರ್ಶ ಹರಿಯೂಥಪಃ ॥೨೧॥
ನೃತ್ತವಾದಿತ್ರಕುಶಲಾಃ ರಾಕ್ಷಸೇನ್ದ್ರಭುಜಾಙ್ಕಗಾಃ ।
ವರಾಭರಣಧಾರಿಣ್ಯೋ ನಿಷಣ್ಣಾ ದದೃಶೇ ಕಪಿಃ ॥೨೨॥
ತಾಸಾಂ ಚನ್ದ್ರೋಪಮೈರ್ವಕ್ತ್ರೈಃ ಶುಭೈರುಜ್ಜ್ವಲಕುಣ್ಡಲೈಃ ।
ವಿರರಾಜ ವಿಮಾನಂ ತತ್ ನಭಸ್ತಾರಾಗಣೈರ್ಯಥಾ ॥೨೩॥

ಇಂತಹ ದಿವ್ಯಶಯನದ ಮೇಲೆ, ರಾಕ್ಷಸಾಧಿಪತಿಯಾದ ರಾವಣನು ಮಲಗಿದ್ದುದನ್ನು ಕಂಡನು ರಾಕ್ಷಸಯುವತಿಯರಿಗೆ ಪ್ರಿಯನೂ ರಾಕ್ಷಸರಿಗ ಸುಖಾವಹನೂ ಆದ ಆ ರಾವಣನು, ದೊಡ್ಡ ಮೇಘಕ್ಕೆ ಸಮಾನನಾಗಿ, ಪ್ರಜ್ವಲಿಸುತಿರುವ ದಿವ್ಯಭೂಷಣಗಳನ್ನು ಧರಿಸಿಕೊಂಡು ಮಲಗಿದ್ದನು ಮಧುಪಾನಮಾಡಿ ಏಶಾಂತನಾಗಿದ್ದ ಅವನು, ಸುತ್ತಲೂ ಪೊದರುಳ್ಳದಾಗಿರುವ ವೃಕ್ಷದಂತೆಯೂ, ಮಂದರಪರ್ವತವೇ ಮಲಗಿದೆಯೋ ಎಂಬಂತೆಯೂ ಶೋಭಿಸುತಿದ್ದನು ಇಂತಹ ಸ್ಥಿತಿಯಲ್ಲಿರುವ ರಾವಣನನ್ನು ಆ ಹನುಮಂತನು ನೋಡಿದನು ॥೧೮-೧೯॥

ಆ ಶಯನಗೃಹದಲ್ಲಿ, ಪ್ರಿಯಭಾರ್ಯನಾದ ಆ ರಾಕ್ಷಸಾಧಿಪತಿಯ ಪಾದತಳದಲ್ಲಿ ಅವನ ಪತ್ನಿಯರು ಮಲಗಿರುವುದನ್ನೂ ನೋಡಿದನು ॥೨೦॥

ಅಲ್ಲಿ, ಚಂದ್ರಮುಖಿಯರಾಗಿಯೂ ದಿವ್ಯಭೂಷಣ ಭೂಷಿತರಾಗಿಯೂ ಅಮ್ಲಾನವಾದ ಪುಷ್ಪಮಾಲಿಕೆಗಳಿಂದ ಅಲಂಕೃತರಾಗಿಯೂ ಇರುವ ರಾವಣನ ಕಾಂತೆಯರನ್ನು ಆ ಕಪಿಶ್ರೇಷ್ಠನು ನೋಡಿದನು ॥೨೧॥

ನೃತ್ತ ವಾದ್ಯಗಳಲ್ಲಿ ಕುಶಲೆಯರಾದ ಯುವತಿಯರು ದಿವ್ಯಭೂಷಣಗಳನ್ನು ಧರಿಸಿ ರಾವಣನ ಭುಜವನ್ನೂ ತೊಡೆಯನ್ನೂ ಆಶ್ರಯಿಸಿಕೊಂಡು ನಿದ್ರೆಮಾಡುತಿರುವುದನ್ನು ಆ ಹನುಮಂತನು ಕಂಡನು ॥೨೨॥

ಆಗ ಪ್ರಜ್ವಲಿಸುತಿರುವ ಕರ್ಣಕುಂಡಲಗಳುಳ್ಳವುಗಳಾಗಿ ಚಂದ್ರಮಂಡಲದಂತೆ ಪ್ರಕಾಶಿಸುತಿರುವ ಆ ಸುಂದರಿಯರ ಮುಖಗಳಿಂದ, ಆಕಾಶ ಪ್ರದೇಶವು ನಕ್ಷತ್ರ ಬೃಂದಗಳಿಂದ ವಿರಾಜಿಸುವಂತೆ, ಆ ವಿಮಾನವು ವಿರಾಜಿಸುತಿದ್ದಿತು ॥೨೩॥

ಮದವ್ಯಾಯಾಮಖಿನ್ನಾಸ್ತಾಃ ರಾಕ್ಷಸೇಂದ್ರಸ್ಯ ಯೋಷಿತಃ ।
ತೇಷುತೇಷ್ವವಕಾಶೇಷು ಪ್ರಸುಪ್ತಾಸ್ತನುಮಧ್ಯಮಾಃ ॥೦೪॥

ಅಙ್ಗಹಾರೈಸ್ತಥೈವಾನ್ಯಾ ಕೋಮಲೈರ್ನೃತ್ತಶಾಲಿನೀ ।
ವಿನ್ಯಸ್ತಶುಭಸರ್ವಾಙ್ಗೀ ಪ್ರಸುಪ್ತಾ ವರವರ್ಣಿನೀ ॥೦೫॥

ಕಾಞ್ಚಿದ್ವೀಣಾಂ ಪರಿಷ್ವಜ್ಯ ಪ್ರಸುಪ್ತಾ ಸಂಪ್ರಕಾಶತೇ ।
ಮಹಾನದೀಪ್ರಕೀರ್ಣೇವ ನಳಿನೀ ಪ್ರೋತಮಾಶ್ರಿತಾ ॥೦೬॥

ಅನ್ಯಾ ಕಕ್ಷಗತೇನೈವ ಮಡ್ಡುಕೇನಾಸಿತೇಕ್ಷಣಾ ।
ಪ್ರಸುಪ್ತಾ ಭಾಮಿನೀ ಭಾತಿ ಬಾಲಪುತ್ರೇವ ವತ್ಸಲಾ ॥೦೭॥

ಪಟಹಂ ಚಾರುಸರ್ವಾಙ್ಗೀ ಪೀಡ್ಯ ಶೇತೇ ಶುಭಸ್ತನೀ ।
ಚಿರಸ್ಯ ರಮಣಂ ಲಬ್ಧ್ವಾ ಪರಿಷ್ವಜ್ಯೇವ ಕಾಮಿನೀ ॥೦೮॥

ಅನ್ಯಾ ಕನಕಸಙ್ಕಾಶೈಃ ಮೃದುಪೀನೈರ್ಮನೋರಮೈಃ ।
ಮೃದಙ್ಗಂ ಪರಿಪೀಡ್ಯಾಙ್ಗೈಃ ಪ್ರಸುಪ್ತಾ ಮತ್ತಲೋಚನಾ ॥೦೯॥

ಕೃಶಮಧ್ಯೆಯರಾದ ಆ ರಾಕ್ಷಸೇಂದ್ರಕಾಂತೆಯರು, ಮದಾಧಿಕ್ಯದಿಂದ ಆಯಾಸಪಟ್ಟವರಾಗಿ, ಅಲ್ಲಲ್ಲಿ ಸ್ಥಳ ಸಿಕ್ಕಿದ ಹಾಗೆಲ್ಲ ಮಲಗಿಕೊಂಡಿದ್ದರು ॥೦೪॥

ಒಬ್ಬ ಯುವತಿಯು, ಜನ್ಮಾಗಿ ನರ್ತನಮಾಡಿ, ತನ್ನ ಕೋಮಲವಾದ ಅಂಗಪರಿಕ್ಷೇಪಗಳಿಂದ ಶಾಂತಳಾಗಿ, ಸುಂದರವಾದ ಅವಯವಗಳನ್ನೆಲ್ಲ ಧಾರಾಳವಾಗಿ ಸೀಡಿಕೊಂಡು ಮಲಗಿದ್ದಳು ॥೦೫॥

ವೀಣೆಯನ್ನು ಆಲಿಂಗಿಸಿಕೊಂಡು ಮಲಗಿದ್ದ ಮತ್ತೊಬ್ಬ ಯುವತಿಯು, ಮಹಾನದೀ ವೇಗದಿಂದ ಉನ್ಮೂಲಿತವಾಗಿ ಮಧ್ಯದಲ್ಲಿ ದೈವಯೋಗದಿಂದ ಸಿಕ್ಕಿದ ತೆಪ್ಪವನ್ನು ಆಶ್ರಯಿಸಿಕೊಂಡ ಕಮಲಲತೆಯೋಪಾದಿಯಲ್ಲಿ ಪ್ರಕಾಶಿಸುತಿದ್ದಳು ॥೦೬॥

ರಾತ್ರಿಯೆಲ್ಲ ವಾದ್ಯಮಾಡಿಸುತಿದ್ದ ಮಡ್ಡುಕವೆಂಬ ಒಂದು ವಾದ್ಯವಿಶೇಷವನ್ನು ಕೊಂಕುಳಲ್ಲಿಯೇ ಇಟ್ಟುಕೊಂಡು ಮಲಗಿರುವ ಮತ್ತೊಬ್ಬ ಸುಂದರಿಯು, ಎಳೆಯ ಸೊಗುವನ್ನು ವಾತ್ಸಲ್ಯದಿಂದ ತಬ್ಬಿಕೊಂಡು ಮಲಗಿರುವಳೋ ಎಂಬಂತೆ ಶೋಭಿಸುತಿದ್ದಳು ॥೦೭॥

ಪಟಹ ವಾದ್ಯವನ್ನು ತಬ್ಬಿಕೊಂಡು ಮಲಗಿರುವ ಸರ್ವಾಂಗ ಸುಂದರಿಯಾದ ಯುವತಿ ಯೊಬ್ಬಳು, ಒಹುಕಾಲಕ್ಕೆ ರಮಣನನ್ನು ಪಡೆದು ಅವನನ್ನು ಆಲಂಗಿಸಿಕೊಂಡು ಮಲಗಿರುವ ಕಾಮಿನಿಯಂತೆ ವಿರಾಜಿಸುತಿದ್ದಳು ॥೦೮॥

ಮತ್ತಲೋಚನೆಯಾದ ಮತ್ತೊಬ್ಬ ಸುಂದರಿಯು, ಸುವರ್ಣವರ್ಣವಾಗಿಯೂ ಮೃದುವಾಗಿಯೂ ಪೀನವಾಗಿಯೂ ಇರುವ ತನ್ನ ಮನೋಹರವಾದ ಅವಯವಗಳಿಂದ ಮೃದಂಗವನ್ನು ಆಲಂಗಿಸಿಕೊಂಡು ಮಲಗಿದ್ದಳು ॥೦೯॥

ಭುಜಪಾರ್ಶ್ವಾನ್ತರಸ್ಥೇನ ಕಕ್ಷಗೇನ ಕೃಶೋದರೀ ।
ಶ್ರಮವೇಣ ಸಹಾನಿನ್ದ್ಯಾ ಸುಪ್ತಾ ಮದಕೃತಶ್ರಮಾ ॥೩೦॥

ಕಲಶೀಮಪವಿಧ್ಯಾನ್ಯಾ ಪ್ರಸುಪ್ತಾ ಭಾತಿ ಭಾಮಿನೀ ।
ವಸನ್ತೇ ಪುಷ್ಪಶಬಲಾ ಮಾಲೇವ ಪರಿಮಾರ್ಜಿತಾ ॥೩೧॥

ಪಾಣಿಭ್ಯಾಂ ಚ ಕುಚೌ ಕಾಚಿತ್ ಸುವರ್ಣಕಲಶೋಪಮೌ ।
ಉಪಗೂಹ್ಯಾಬಲಾ ಸುಪ್ತಾ ನಿದ್ರಾವಶಮುಪಾಗತಾ ॥೩೨॥

ತತೋದ್ಯಾನಿ ವಿಚಿತ್ರಾಣಿ ಪರಿಷ್ವಜ್ಯ ವರಸ್ತ್ರಿಯಃ ।
ನಿಪೀಡ್ಯ ಚ ಕುಚೈಃ ಸುಪ್ತಾಃ ಕಾಮಿನ್ಯಃ ಕಾಮುಕಾನಿವ ॥೩೩॥

ಕ್ರೀಡಿತೇನಾಪರಾಃ ಕ್ಲಾನ್ತಾಃ ಗೀತೇನ ಚ ತಥಾಪರಾಃ ।
ನೃತ್ತೇನ ಚಾಪರಾಃ ಕ್ಲಾನ್ತಾಃ ಪಾನವಿಪ್ರಹತಾಸ್ತಥಾ ॥೩೪॥

ಮುರಜೇಷು ಮೃದಙ್ಗೇಷು ಶಿಬಿಕಾಸು ಚ ಸಂಸ್ಥಿತಾಃ ।
ತಥಾಸ್ತರಣಮುಖ್ಯೇಷು ಸಂವಿಷ್ಟಾಶ್ಚ ವರಸ್ತ್ರಿಯಃ ॥೩೫॥

ಮತ್ತೊಬ್ಬ ಕೃಶೋದರಿಯಾದ ವರವರ್ಣಿನಿಯು, ಮದದಿಂದ ವಿಶೇಷ ಶ್ರಮಪಟ್ಟವಳಾಗಿ, ತನ್ನ ಭುಜಪಾರ್ಶ್ವದಲ್ಲಿ ಕೊಂಕುಳೊಳಗಿರುವ ಪಣವವಾದ್ಯದೊಡನೆ ಮಲಗಿದ್ದಳು ॥೩೦॥

ಮತ್ತೊಬ್ಬ ಯುವತಿಯು, ಕೈಲಿದ್ದ ಜಲಕಲಶವನ್ನು ಕೆಡವಿಕೊಂಡು, ಮೈಮೇಲೆಲ್ಲ ಕುಂಕುಮಜಲಕಣಗಳಿಂದ ಸಿಕ್ತಳಾಗಿ, ವಸಂತಕಾಲದಲ್ಲಿ ವಿಚಿತ್ರವರ್ಣವಾದ ಪುಷ್ಪಗಳಿಂದ ರಚಿಸಲ್ಪಟ್ಟ ಮಾಲಿಕೆಯಂತೆ ಶೋಭಿಸುತಿದ್ದಳು ॥೩೧॥

ಮತ್ತೊಬ್ಬ ಸುಂದರಿಯು, ಸುವರ್ಣಘಟ ಸದೃಶಗಳಾದ ತನ್ನ ಸ್ತನಗಳನ್ನು ಎರಡು ಕೈಗಳಿಂದಲೂ ಆಚ್ಛಾದಿಸಿಕೊಂಡು ನಿದ್ರಾವಶಳಾಗಿ ಮಲಗಿದ್ದಳು ॥೩೨॥

ಇನ್ನೂ ಹೀಗಯೇ ಅನೇಕರಾದ ಉತ್ತಮಾಂಗನೆಯರು, ಕಾಮಿನಿಯರು ಕಾಮುಕರನ್ನು ಆಲಂಗಿಸಿಕೊಳ್ಳುವಂತೆ, ನಾನಾವಿಧವಾದ ಆತೋದ್ಯ(ಬಾರಿಸುವ ವಾದ್ಯಗಳು)ಗಳನ್ನು ಆಲಿಂಗಿಸಿಕೊಂಡು ಮಲಗಿದ್ದರು ॥೩೩॥

ಅಲ್ಲಿ ಕೆಲವು ಸ್ತ್ರೀಯರು ಕ್ರೀಡೆಯಿಂದ ಬಳಲಿದ್ದರು, ಕೆಲವರು ಗಾನದಿಂದ ಬಳಲಿದ್ದರು, ಕೆಲವರು ನರ್ತನದಿಂದ ಶ್ರಾಂತರಾಗಿದ್ದರು, ಮತ್ತೆಕೆಲವರು ಪಾನಮಾಡಿ ಆಯಾಸಹೊಂದಿದ್ದರು ॥೩೪॥

ಅಲ್ಲಿ ಕೆಲವು ಸುಂದರಿಯರು ಮುರಜಗಳ ಮೇಲೂ, ಕೆಲವರು ಮೃದಂಗದ ಮೇಲೂ, ಕೆಲವರು ಯಾನವಿಶೇಷಗಳಲ್ಲಿಯೂ, ಕೆಲವರು ದಿವ್ಯವಾದ ಹಾಸುಗೆಗಳಲ್ಲಿಯೂ ಮಲಗಿದ್ದರು ॥೩೫॥

ಅನ್ಯಾ ವಕ್ಷಸಿ ಚಾನ್ಯಸ್ಯಾಃ ತಸ್ಯಾಃ ಕಾಚಿತ್ ಪುನರ್ಭುಜಮ್ ।
ಅಪರಾ ತ್ವಙ್ಕಮನ್ಯಸ್ಯಾಃ ತಸ್ಯಾಶ್ಚಾಪ್ಯಪರಾ ಭುಜಾ ॥೫೬॥
ಅನ್ಯೋನ್ಯಸ್ಯಾಙ್ಗಸಂಸ್ಪರ್ಶಾತ್ ಪ್ರೀಯಮಾಣಾಃ ಸುಮಧ್ಯಮಾಃ ।
ಏಕೀಕೃತಭುಜಾಃ ಸರ್ವಾಃ ಸುಪುಪುಸ್ತತ್ರ ಯೋಷಿತಃ ॥೫೭॥
ಸರ್ವಕಾಮೈರುಪೇತಾಂ ಚ ಪಾನಭೂಮಿಂ ಮಹಾತ್ಮನಃ ।
ದದರ್ಶ ಸ ರಹಸ್ಯಂ ತು ತಸ್ಯ ರಕ್ಷಃಪತೇರ್ಗೃಹೇ ॥೫೮॥
ಮೃಗಾಣಾಂ ಮಹಿಷಾಣಾಂ ಚ ವರಾಹಾಣಾಂ ಚ ಭಾಗಶಃ ।
ತತ್ರ ನ್ಯಸ್ತಾನಿ ಮಾಂಸಾನಿ ಪಾನಭೂಮೌ ದದರ್ಶ ಸಃ ॥೫೯॥
ದಿವ್ಯಾಃ ಪ್ರಸನ್ನಾವಿವಿಧಾಃ ಸುರಾಃ ಕೃತಸುರಾಅಪಿ ।
ಶರ್ಕರಾಸವಮಾಧ್ವೀಕಾಃ ಪುಷ್ಪಾಸವಫಲಾಸವಾಃ ॥೬೦॥
ರಾಜತೇಷು ಚ ಕುಮ್ಭೇಷು ಜಾಮ್ಬೂನದಮಯೇಷು ಚ ।
ಪಾನಶ್ರೇಷ್ಠಂ ಸುವಿನ್ಯಸ್ತಂ ಕಪಿಸ್ತತ್ರ ದದರ್ಶ ಹ ॥೬೧॥
ಏವಂ ಸರ್ವಮಶೇಷೇಣ ರಾವಣಾನ್ತಃಪುರೇ ಕಪಿಃ ।
ದದರ್ಶ ಸ ಮಹಾತೇಜಾಃ ನ ದದರ್ಶ ಚ ಜಾನಕೀಮ್ ॥೬೨॥

ಅಲ್ಲಿ ಒಬ್ಬ ಯುವತಿಯು ಒಬ್ಬಳ ಎದಯಮೇಲೆ ಮಲಗಿದ್ದಳು , ಅವಳ ಭುಜವನ್ನು ಆಶ್ರಯಿಸಿ ಮತ್ತೊಬ್ಬಳು ಮಲಗಿದ್ದಳು ಒಬ್ಬಳು ಮತ್ತೊಬ್ಬಳ ತೊಡೆಯಮೇಲೆ ಮಲಗಿದ್ದಳು, ಮತ್ತೊಬ್ಬಳು ಅವಳ ಎರಡು ತೋಳುಗಳನ್ನೂ ಆಶ್ರಯಿಸಿಕೊಂಡು ನಿದ್ರೆಮಾಡುತಿದ್ದಳು ॥೫೬॥

ಅಲ್ಲಿ ಸುಂದರಿಯರು, ತಮ್ಮ ತೋಳುಗಳನ್ನೆಲ್ಲ ಒಂದೇ ಸಾಲಾಗಿ ಜೋಡಿಸಿಕೊಂಡು, ಪರಸ್ಪರವಾಗಿ ಅವಯವಸ್ಪರ್ಶದಿಂದ ಎಲ್ಲರೂ ಆನಂದಪಡುತ ಮಲಗಿದ್ದರು ॥೫೭॥

ಇಂತಹ ಸ್ತ್ರೀಸಮೂಹವನ್ನು ನೋಡಿದುದಲ್ಲದೆ, ಆ ಹನುಮಂತನು, ಆ ರಾವಣೇಶ್ವರನ ಗೃಹದಲ್ಲಿ ಸರ್ವಕಾಮ ಸಮೃದ್ದವಾಗಿರುವ ಪಾನಭೂಮಿಯನ್ನೂ ರಹಸ್ಯವಾಗಿ ನೋಡಿದನು॥೫೮॥

ಆ ಪಾನಭೂಮಿಯೊಳಗೆ, ಮೃಗ ಮಹಿಷ ವರಾಹಗಳ ಮಾಂಸಗಳು ಯಥೇಚ್ಛವಾಗಿ ಇಡಲ್ಪಟ್ಟಿರುವುದನ್ನು ನೋಡಿದನು ॥೫೯॥

ಮತ್ತು, ಅಲ್ಲಿ ನಾನಾವಿಧವಾದ ನಿರ್ಮಲವಾಗಿರುವ ಮದ್ಯಗಳನ್ನೂ, ಅಮೃತಮಥನಸಮಯ ಸಮುದ್ಗತವಾದ ಸುರೆಯನ್ನೂ,ಮನುಷ್ಯ ಪ್ರಯತ್ನ ಕೃತವಾದ ಸುರೆಯನ್ನೂ,ಸಕ್ಕರೆಯಿಂದ ಮಾಡಿದ ಮದ್ಯವನ್ನೂ,ಪುಷ್ಪಗಳಲ್ಲಿ ತೆಗೆದ ಮದ್ಯವನ್ನೂ, ಫಲಗಳಲ್ಲಿ ತೆಗೆದ ಮದ್ಯವನ್ನೂ ನೋಡಿದನು ॥

ಇನ್ನು, ರಜತಪಾತ್ರಗಳಲ್ಲಿಯೂ ಸುವರ್ಣ ಪಾತ್ರಗಳಲ್ಲಿಯೂ ಮಾಡಿ ಇಡಲ್ಪಟ್ಟಿರುವ ಉತ್ತಮವಾದ ಪಾನವನ್ನು ಆ ಹನುಮಂತನು ಅವಲೋಕಿಸಿದನು ॥೪೧॥

ಹೀಗೆ ಮಹಾತೇಜಸ್ವಿಯಾದ ಆ ಹನುಮಂತನು, ರಾವಣನ ಅಂತಃಪುರದಲ್ಲಿ ಸಮಸ್ತವನ್ನೂ ನಿಶ್ಶೇಷವಾಗಿ ನೋಡಿದನು , ಆದರೂ ಸೀತೆಯನ್ನು ಮಾತ್ರ ಅಲ್ಲಿ ಕಾಣಲಲ್ಲ ॥೪೨॥

ರಾವಣಸ್ಯ ಸಮೀಪೇ ತು ದೃಷ್ಟ್ವಾ ರಾಕ್ಷಸಯೋಷಿತಃ ।
ತಾಸಾಂ ಗೃಹೀತ್ವಾ ವಸ್ತ್ರಾಣಿ ರಾವಣಸ್ಯ ಸ ವಾನರಃ ॥೪೩॥
ಛಿತ್ವಾ ಗೃಹೀತ್ವಾ ದಗ್ಧ್ವಾಥ ಸಮೂಹೀಕೃತ್ಯ ತತ್ಪುರಃ ।
ರಕ್ಷೋಭೀತೇಷು ಸರ್ವತ್ರ ಲಿಖಿತ್ವಾ ವಾಯುಸೂನುಃ ಪುನಃ ।
ಕುತ್ರಾಪ್ಯದೃಷ್ಟ್ವಾ ತಾಂ ಖಿನ್ನಸ್ತ್ವಶೋಕವನಿಕಾಂ ಯಯೌ ॥೪೪॥
ತದಾಽಶೋಕವನಂ ಗಚ್ಛನ್ ಇದಂ ತತ್ರಾನ್ವಪದ್ಯತ ॥೪೫॥
ಮಯಾಽಶೋಕವನೇ ರಮ್ಯೇ ನ ದೃಷ್ಟಾ ಜಾನಕೀ ಯದಿ ।
ಸರ್ವಲೋಕಸಮಾಕೀರ್ಣಂ ಬ್ರಹ್ಮಾಣ್ಡಂ ಸಚರಾಚರಮ್ ।
ಮುಷ್ಟಿಘಾತೇನ ಮೇ ಭಿನ್ನಂ ಭವಿಷ್ಯತಿ ಕಪಿತ್ವವತ್ ॥೪೬॥
ಪಥಮಂ ರಾವಣಂ ಹನ್ಯಾಂ ಕುಮ್ಭಕರ್ಣಂ ತತಃಪರಮ್ ।
ತತಇನ್ದ್ರಜಿತಂ ಶೂರಂ ಸ್ರಹಸ್ತಾದಿ ತೃಣಾಯತೇ ॥೪೭॥
ತತೋ ಲಙ್ಕಾಪುರಂ ಸರ್ವಂ ಭೀಷಯಾಮಿ ಭಯಙ್ಕರಮ್ ॥೪೮॥
ವಾಲಾಗ್ರಕೋಟಿಮಾತ್ರೇಣ ಸಂಶ್ಲಿಷ್ಯ ತ್ರಿಕೂಟನಗಮುತ್ತಮಮ್ ।
ಸರಾವಣಂ ಸಶೂರಂ ಚ ರಾಘವಾಗ್ರೇ ನಿವೇದಯೇ ।
ವಿಚಿನ್ವನ್ತು ನಗಂ ಸರ್ವೇ ವಾನರಾಘೋರವಿಕ್ರಮಾಃ ॥೪೯॥

ಅಲ್ಲಿ ರಾವಣನ ಹತ್ತಿರ ಅನೇಕರಾದ ರಾಕ್ಷಸಸ್ತ್ರೀಯರನ್ನು ನೋಡಿ, ಅವರ ವಸ್ತ್ರಗಳನ್ನು ಹರಿದು ಕಿತ್ತುಕೊಂಡು, ಅವನ್ನು ಜೂರುಜೂರು ಮಾಡಿ, ಅವರೆದುರಿಗೇ ಸುಟ್ಟುಬಿಟ್ಟು, ಆ ಬೂದಿಯಿಂದ ರಾಕ್ಷಸಿಯರ ಮೈಮೇಲೆಲ್ಲ ಕಾಕರೇಖೆಗಳನ್ನು ಬರೆದು, ಅಲ್ಲೆಲ್ಲಯೂ ಸೀತೆಯನ್ನು ಕಾಣದೆ, ಆ ಹನುಮಂತನು ಅಲ್ಲಿಂದ ಅಶೋಕವನದಕಡೆಗೆ ಹೊರಟನು ಆಗ ಅಶೋಕವನಕ್ಕೆ ಹೋಗುತ, ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು ॥೪೩-೪೫॥

ನಾನು ಈಗ ಈ ರಮ್ಯವಾದ ಅಶೋಕವನದಲ್ಲಿಯೂ ಸೀತೆಯನ್ನು ನೋಡದಿದ್ದಪಕ್ಷದಲ್ಲಿ, ಸರ್ವಲೋಕಸಹಿತವಾಗಿ ಚರಾಚರಯುಕ್ತವಾಗಿರುವ ಈ ಬ್ರಹ್ಮಾಂಡವನ್ನು, ಬೇಲದಹಣ್ಣಿನಂತೆ ಮುಷ್ಟಿಪ್ರಹಾರದಿಂದ ಒಂದೇ ಏಟಿಗೆ ಒಡೆದುಬಿಡುವೆನು ॥೪೬॥

ಮೊದಲು ನಾನು ರಾವಣನನ್ನು ಕೊಲ್ಲಬೇಕು, ಆಮೇಲೆ ಕುಂಭಕರ್ಣನನ್ನು ಕೊಲ್ಲಬೇಕು, ಅನಂತರ ಶೂರನಾದ ಇಂದ್ರಜಿತುವನ್ನು ಕೊಲ್ಲಬೇಕು ಉಳಿದ ಪ್ರಹಸ್ತ ಮುಂತಾದವರು ನನಗೆ ಒಂದು ಹುಲ್ಲಿಗ ಸಮಾನರಾಗಿರುವರು ಇವರೆಲ್ಲರೂ ಕೊಲ್ಲಲ್ಪಟ್ಟ ಬಳಿಕ, ಅತಿ ಭಯಂಕರವಾಗಿರುವ ಈ ಲಂಕಾಪಟ್ಟಣವನ್ನೆಲ್ಲ ನಾನು ಹೆದರಿಸಿಬಿಡುವನು ॥೪೭-೪೮॥

ಅಥವಾ, ಈ ರಾವಣನೂ ರಾಕ್ಷಸವೀರರೂ ಇದ್ದಹಾಗೆಯೇ, ತ್ರಿಕೂಟಪರ್ವತವನ್ನು ನನ್ನ ಬಾಲದ ತುದಿಯಿಂದ ಸುತ್ತಿಕೊಂಡು ಶ್ರೀರಾಮನ ಮುಂದೆ ಸಮರ್ಪಿಸಿಬಿಡುವೆನು ಅನಂತರ, ಮಹಾ ಚಂಡಪರಾಕ್ರಮರಾದ ಸಮಸ್ತ ವಾನರರೂ ಪುಡುಕಲಿ ॥೪೯॥

ರಾಕ್ಷಸಾ ವಾಲರೋಮಾಗ್ರೈಃ ಬದ್ಧ್ವಾ ವಾರಿಧಿವಾರಿಷು ।
ತ್ರಿಕೂಟಶಿಖರೇ ಸ್ಥಿತ್ವಾ ಮಜ್ಜಯಾಮಿ ಪುನಃಪುನಃ ॥೫೦॥
ತೇನ ತ್ರಸ್ತಾದರ್ಶಯಂತಿ ಸೀತಾಂ ಮೇ ರಾಕ್ಷಸಾಧಮಾಃ ॥೫೧॥
ಇತಿ ಸಂಚಿಂತಯನ್ನೇವ ಸೀತಾನ್ವೇಷಣತತ್ಪರಃ ।
ವಿವೇಶಾಶೋಕವನಿಕಾಂ ಧ್ಯಾಯನ್ ರಾಮಂ ಹೃದಾ ಕಪಿಃ ॥೫೨॥
ಸ ಪ್ರವಿಶ್ಯ ವಿಚಿತ್ರಾಂ ತಾಂ ವಿಹಗೈರಭಿನಾದಿತಾಮ್ ।
ರಾಜತೈಃ ಕಾಞ್ಚನೈಶ್ಚೈವ ಪಾದಪೈಃ ಸರ್ವತೋ ವೃತಾಮ್ ॥೫೩॥
ವಿವಿಧೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಮ್ ।
ವೃತಾಂ ನಾನಾವಿಧೈರ್ವೃಕ್ಷೈಃ ಪುಷ್ಪೋಪಗಫಲೋಪಗೈಃ ॥೫೪॥
ಕೋಕಿಲೈರ್ಭೃಙ್ಗರಾಜೈಶ್ಚ ಮತ್ತೈರ್ನಿತ್ಯಂ ನಿಷೇವಿತಾಮ್ ।
ಉದಿತಾದಿತ್ಯಸಂಕಾಶಾಂ ದದರ್ಶ ಕಪಿಕುಞ್ಜರಃ ॥೫೫॥
ವಿಚಿನ್ವಂ ಜಾನಕೀಂ ತತ್ರ ಪ್ರತಿವೃಕ್ಷಂ ಮರುತ್ಸುತಃ ।
ದದರ್ಶ ಶಿಂಶುಪಾವೃಕ್ಷಂ ಅತ್ಯನ್ತನಿಬಿಡಚ್ಛದಮ್ ॥೫೬॥

ಅಥವಾ, ಈ ರಾಕ್ಷಸರನ್ನೆಲ್ಲ ನನ್ನ ಬಾಲದ ತುದಿಯಿಂದ ಕಟ್ಟಿಬಿಟ್ಟು, ತ್ರಿಕೂಟಪರ್ವತದ ಶಿಖರದಲ್ಲಿ ನಿಂತುಗೊಂಡು, ಅವರನ್ನೆಲ್ಲ ಈ ಸಮುದ್ರದ ನೀರಿನೊಳಗೆ ಮತ್ತೆಮತ್ತೆ ಮುಣುಗಿಸಿ ಎತ್ತುವನು ಇದರಿಂದ ಹೆದರಿಕೊಂಡು, ಈ ರಾಕ್ಷಸಾಧಮರು ನನಗೆ ಸೀತೆಯನ್ನು ತೋರಿಸುವರು ॥೫೦-೫೧॥

ಇತ್ಯಾದಿರೀತಿಯಾಗಿ ಚಿಂತಿಸುತಲೇ, ಸೀತಾನ್ವೇಷಣನಿರತನಾದ ಆ ಹನುಮಂತನು, ಮನಸ್ಸಿನಲ್ಲಿ ಶ್ರೀರಾಮನನ್ನು ಧ್ಯಾನಮಾಡುತ ಅಶೋಕವನವನ್ನು ಪ್ರವೇಶಿಸಿದನು ॥೫೨॥

ಬಗೆ ಪಕ್ಷಿಗಳಿಂದ ಶಬ್ದಾಯಮಾನವಾಗಿಯೂ, ರಾಜತ ಸೌವರ್ಣ ವೃಕ್ಷಗಳಿಂದ ಸುತ್ತಲೂ ಆವೃತವಾಗಿಯೂ, ನಾನಾವಿಧ ಮೃಗಬ್ರುಂದಗಳಿಂದ ವಿಚಿತ್ರವಾಗಿಯೂ, ನಾನಾವಿಧ ಫಲಪುಷ್ಪ ವೃಕ್ಷಷಂಡಶೋಭಿತವಾಗಿಯೂ, ಮತ್ತವಾದ ಕೋಗಿಲಗಳಿಂದಲೂ ಬೃಂಗಗಳಿಂದಲೂ ನಿತ್ಯವೂ ಸೇವಿತವಾಗಿಯೂ, ಆಗತಾನ ಉದಯಿಸಿದ ಸೂರ್ಯನಂತೆ ವಿರಾಜಮಾನವಾಗಿಯೂ ಇರುವ ಈ ಅಶೋಕವನವನ್ನು, ಆ ಕಪಿಶ್ರೇಷ್ಠನು ಕುತೂಹಲದಿಂದ ನೋಡಿದನು ॥೫೩-೫೫॥

ಅಲ್ಲಿ ಪ್ರತಿಯೊಂದು ವೃಕ್ಷದಲ್ಲಿಯೂ ಸೀತೆಯನ್ನು ಹುಡುಕುತಿರುವ ಆ ಆಂಜನೇಯನು, ಆ ವೃಕ್ಷಮಧ್ಯದಲ್ಲಿ ಅತ್ಯಂತ ನಿಬಿಡವಾದ ಪತ್ರಗಳುಳ್ಳ ಒಂದು ಶಿಂಶುಪಾವೃಕ್ಷವನ್ನೂ ನೋಡಿದನು ॥೫೬॥

ತನ್ಮೂಲೇ ರಾಕ್ಷಸೀಮಧ್ಯೇ ಸ್ಥಿತಾಂ ಜನಕನಂದಿನೀಮ್ ।
ದದರ್ಶ ಹನುಮಾನ್ ವೀರೋ ದೇವತಾಮಿವ ಭೂತಳೇ ॥೫೩॥

ಏಕವೇಣೀಧರಾಂ ದೀನಾಂ ಮಲಿನಾಮ್ಬು ರಧಾರಿಣೀಮ್ ।
ತ್ರಾತಾರಂ ನಾಧಿಗಚ್ಛನ್ತೀಂ ಉಪವಾಸಕೃಶಾಂ ಶುಭಾಮ್ ॥೫೪॥

ಶಾಖಾನ್ತರ್ಹಿತದೇಹೋಽಥ ಮನಸೈವಮಚಿನ್ತಯತ್ ।
ಕೃತಾರ್ಥೋಽಹಂ ಕೃತಾರ್ಥೋಽಹಂ ದೃಷ್ಟ್ವಾ ಜನಕನಂದಿನೀಂ ।
ಮಯೈವ ಸಾಧಿತಂ ಕಾರ್ಯಂ ರಾಮಸ್ಯ ಪರಮಾತ್ಮನಃ ॥೫೫॥

ಇತ್ಯಾಸನ್ನಾತಿರೇಕೇಣ ದೇಹಂ ವಿಸ್ಮೃತವಾನ್ ಕಪಿಃ ॥೬೦॥

ತತೋ ವಿಪ್ರೇಕ್ಷಮಾಣಸ್ಯ ವನಂ ಪುಷ್ಪಿತಪಾದಪಮ್ ।
ಸಂಪಶ್ಯತಶ್ಚ ವೈದೇಹೀಂ ಕಿಞ್ಚಿಚ್ಛೇಷಾ ನಿಶಾಭವತ್ ॥೬೧॥

ಇತಿ ಶ್ರೀಮತ್ಸುನ್ದರಕಾಣ್ಡೇ ಸೀತಾದರ್ಶನಕಥನಂ ನಾಮ
ತೃತೀಯಃ ಸರ್ಗಃ




ಆ ಶಿಂಶುಪಾವೃಕ್ಷದ ಕೆಳಗೆ, ಭೂಮಿಗಿಳಿದು ಬಂದಿರುವ ದೇವಸ್ತ್ರೀಯೋ ಎಂಬಂತೆ ಕುಳಿತಿದ್ದ ಆ ಜನಕರಾಜಪುತ್ರಿಯನ್ನೂ ಏಲೋಕಿಸಿದನು ॥೫೭॥

ಆಗ ಆ ಸೀತೆಯು, ಬತ್ತಿಹೊಸದುಹೋಗಿರುವ ಕೇಶಬ್ಯಂದವನ್ನು ಧರಿಸಿಕೊಂಡು, ಮಲಿನವಾದ ವಸ್ತ್ರವನ್ನುಟ್ಟು, ಉಪವಾಸದಿಂದ ಕೃಶಳಾಗಿ, ಅನಾಥಳಾಗಿ ಸಂಕಟಪಡುತಿದ್ದಳು ॥೫೬॥

ಇಂತಹ ಸೀತಾದೇವಿಯ ದರ್ಶನವನ್ನು ಮಾಡಿದ ಈ ಹನುಮಂತನು, ಒಂದು ವೃಕ್ಷದ ಕೊಂಬೆಯ ತುದಿಯಲ್ಲಿ ಎಲೆಗಳೊಳಗ ಮರೆಯಾಗಿ ನಿಂತುಗೊಂಡು, ತನ್ನ ಮನಸ್ಸಿನಲ್ಲಿ ' ಆಹಹ! ನಾನು ಧನ್ಯನಾದೆನು !! ಕೃತಾರ್ಥನಾದೆನು !!! ಇಲ್ಲಿ ಈ ಸೀತಾದೇವಿಯನ್ನು ಕಂಡನಲ್ಲ ! ಆ ಪರಮಾತ್ಮನಾದ ಶ್ರೀರಾಮಚಂದ್ರನ ಕಾರ್ಯವನ್ನು ಸಾಧಿಸಿದ ಭಾಗ್ಯವು ನನಗೇ ಸಿಕ್ಕಿತಲ್ಲ ! ' ಎಂದು ಯೋಚಿಸಿದನು ಹೀಗೆ ಯೋಚಿಸುತ, ಅಸಂಪಾತಿರೇಕದಿಂದ ಆ ಕಪಿನಾಯಕನು ತನ ದೇಹವನ್ನೇ ಮರೆತುಬಿಟ್ಟನು ॥೫೯-೬೦॥

ಈರೀತಿಯಲ್ಲಿ ಹನುಮಂತನು ವೃಕ್ಷವೆಲ್ಲ ಪುಷ್ಪಿತವಾಗಿರುವ ಆ ಅಶೋಕವನವನ್ನು ನೋಡುತಲೂ ಸೀತಾದೇವಿಯ ದರ್ಶನವನ್ನು ಮಾಡುತಲೂ ಇರುವಾಗಲೇ, ಆ ರಾತ್ರಿಯು ಅಲ್ಪಾವಶಿಷ್ಟವಾಯ್ತು ॥೬೧॥

ಇದು ಸುಂದರಕಾಂಡದಲ್ಲಿ ಸೀತಾದರ್ಶನಕಥನವೆಂಬ
ಮೂರನಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಚತುರ್ದಶಃ ಸರ್ಗಃ

ತತಃ ಸೀತಾಮುಪಾಗಮ್ಯ ರಾಕ್ಷಸ್ಯೋ ವಿಕೃತಾನನಾಃ ।
ಭೀಷಯಾಮಾಸುರತ್ಯನ್ತಂ ವಚನೈರತಿದಾರುಣೈಃ ॥೧॥

ತತ್ರೈಕಾ ಜಾನಕೀಮಾಹ ಯೌವನಂ ತೇ ವೃಥಾ ಗತಮ್ ।
ರಾವಣಂ ತು ಸಮಾಸಾದ್ಯ ಸಫಲಂ ತದ್ಭವಿಷ್ಯತಿ ॥೨॥

ಅಪರಾಪಿ ಚ ಕೋಪೇನ ಕಿಂ ವಿಲಮ್ಬೇನ ಜಾನಕೀ ।
ಇದಾನೀಂ ಭೀದ್ಯತಾಮಙ್ಗೈ ವಿಭಜಾಮ ಪೃಥಕ್ಪೃಥಕ್ ॥೩॥

ಅನ್ಯಾ ತು ಖಡ್ಗಮುದ್ಯಮ್ಯ ಜಾನಕೀಂ ಹನ್ತುಮುದ್ಯತಾ ।
ಅನ್ಯಾ ಕರಾಳವದನಾ ವಿದಾರ್ಯಾಸ್ಯಮಭೀಷಯತ್ ॥೪॥

ಏವಂ ತಾಂ ಭೀಷಯನ್ತೀಸ್ತಾಃ ರಾಕ್ಷಸೀರ್ವಿಕೃತಾನನಾಃ ।
ನಿವಾರ್ಯ ತ್ರಿಜಟಾ ವೃದ್ಧಾ ರಾಕ್ಷಸೀ ವಾಕ್ಯಮಬ್ರವೀತ್ ॥೫॥

ಸುಂದರಕಾಂಡದಲ್ಲಿ ನಾಲ್ಕನೆಯ ಸರ್ಗವು

ಪುನಃ ಶ್ರೀ ಪರಮೇಶ್ವರನು ಪಾರ್ವತಿಗ ಹೇಳುವನು —

ಎಲೌ ಪಾರ್ವತಿ! ಹನುಮಂತನು ಅಶೋಕವನದ ವೃಕ್ಷಮಧ್ಯದಲ್ಲಿ ಅಂತರ್ಹಿತನಾಗಿರುವಾಗ, ಮಹಾವಿಕಾರಮುಖಿಯರಾದ ರಾಕ್ಷಸಸ್ತ್ರೀಯರು ಸೀತೆಯ ಸಮೀಪಕ್ಕೆ ಬಂದು, ಮಹಾಘೋರವಾದ ವಚನಗಳಿಂದ ಅವಳನ್ನು ವಿಶೇಷವಾಗಿ ಭಯಪಡಿಸಿದರು ॥೧॥

ಅವರಲ್ಲೊಬ್ಬಳು, ಸೀತೆಯನ್ನು ನೋಡಿ 'ಎಲೌ ಸೀತೆ! ನಿನ್ನ ಯೌವನವೆಲ್ಲ ವ್ಯರ್ಥವಾಗಿ ಕಳದುಹೋಯ್ತು ರಾವಣನನ್ನು ನೀನು ಸೇರುವಂತಾದರೆ, ಅದು ಸಫಲವಾಗುವುದು ಎಂದು ಹೇಳಿದಳು ॥೨॥

ಮತ್ತೊಬ್ಬ ರಾಕ್ಷಸಿಯಾದರೋ, ವಿಶೇಷವಾಗಿ ಕೋಪವನ್ನು ತೋರಿಸುತ' ಇನ್ನು ಏಲಂಬವೇಕೆ' ಈಗ ಈ ಸೀತೆಯ ಅಂಗಗಳನ್ನೆಲ್ಲ ಕತ್ತರಿಸಿಬಿಡಿ, ನಾವೆಲ್ಲರೂ ಬೇರೆಬೇರೆಯಾಗಿ ಹಂಚಿಕೊಳ್ಳೋಣ' ಎಂದು ಹೇಳಿದಳು ॥೩॥

ಇನ್ನೊಬ್ಬಳು, ಖಡ್ಗವನ್ನು ಮೇಲಕ್ಕತ್ತಿಕೊಂಡು ಸೀತೆಯನ್ನು ಹೊಡೆಯುವುದಕ್ಕೆ ಉದ್ಯುಕ್ತಳಾದಳು ಕರಾಳಮುಖಿಯಾದ ಮತ್ತೊಬ್ಬಳು, ದೊಡ್ಡದಾಗಿ ಬಾಯಿತೆರೆದುಕೊಂಡು ಸೀತೆಯನ್ನು ಹದರಿಸಿದಳು ॥೪॥

ಹೀಗಲ್ಲ ಸೀತೆಯನ್ನು ಭಯಪಡಿಸುತ್ತಿರುವ ವಿಕೃತಮುಖಿಯರಾದ ರಾಕ್ಷಸಿಯರನ್ನು ಕುರಿತು, ಅಲ್ಲಿ ಮಲಗಿದ್ದ ವೃದ್ಧೆಯಾದ ತ್ರಿಜಟೆಯಂಬ ರಾಕ್ಷಸಿಯು ಹೀಗೆ ಹೇಳಿದಳು ॥೫॥

ಶೃಣುಧ್ವಂ ದುಷ್ಟರಾಕ್ಷಸ್ಯೋ ಮದ್ವಾಕ್ಯಂ ವೋ ಹಿತಂ ಭವೇತ್ ।
ನ ಭೀಷಯಧ್ವಂ ಸುದತೀಂ ನಮಸ್ಕುರುತ ಜಾನಕೀಮ್ ॥೬॥
ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ ।
ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ ॥೭॥
ಸ್ವಪ್ನೋ ಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ ।
ರಾಕ್ಷಸಾನಾಮಭಾವಾಯ ಭರ್ತುರಸ್ಯಾಜಯಾಯ ಚ ॥೮॥
ಏವಮುಕ್ತಾಸ್ತ್ರಿಜಟಯಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಸರ್ವಾ ಏವಾಬ್ರುವ೯ ಭೀತಾಃ ತ್ರಿಜಟಾಂ ತಾಮಿದಂ ವಚಃ ।
ಕಥಯಸ್ವ ತ್ವಯಾ ದೃಷ್ಟಃ ಸ್ವಪ್ನೋ೭ಯಂ ಕೀದೃಶೋ ನಿಶಿ ॥೯॥
ಶ್ರುತ್ವಾ ತದ್ರಾಕ್ಷಸೀವಾಕ್ಯಂ ತ್ರಿಜಟಾ ಪ್ರತ್ಯುವಾಚ ತಾಃ ॥೧೦॥
ಗಜದನ್ತಮಯೀಂ ದಿವ್ಯಾಂ ಶಿಬಿಕಾಮನ್ತರಿಕ್ಷಗಾಮ್ ।
ಯುಕ್ತಾಂ ಹಂಸಸಹಸ್ರೇಣ ಸ್ವಯಮಾಸ್ಥಾಯ ರಾಘವಃ ।
ಶುಕ್ಲಮಾಲ್ಯಾಮ್ಬರಧರಃ ಲಕ್ಷ್ಮಣೇನ ಸಮನ್ವಿತಃ ॥೧೧॥

ಎಲೌ ದುಷ್ಟ ರಾಕ್ಷಸಿಯರಾ ! ನಾನು ಹೇಳುವುದನ್ನು ಕೇಳಿರಿ ನನ್ನ ಮಾತು ನಿಮಗೆ ಹಿತವಾಗುವುದು ಸುಮುಖಿಯಾದ ಜಾನಕಿಯನ್ನು ಹದಿಸಬೇಡಿರಿ, ಇವಳಿಗೆ ನಮಸ್ಕಾರ ಮಾಡಿರಿ ॥೬॥

ಎಲೌ ರಾಕ್ಷಸಿಯರಾ ! ಈ ಜನಕರಾಜಪುತ್ರಿಯಾದ ಸೀತೆಯು, ಕೇವಲ ನಮಸ್ಕಾರ ಮಾತ್ರದಿಂದಲೇ ನಮ್ಮಲ್ಲಿ ಪ್ರಸನ್ನಳಾಗುವಳು ಇವಳು ಈಗ ನನಗೆ ಪ್ರಾಪ್ತವಾಗಿರುವ ಭಯವನ್ನು ತಪ್ಪಿಸಿ ರಕ್ಷಿಸುವುದಕ್ಕೆ ಸಮರ್ಥಳಾಗಿರುವಳು ॥೭॥

ಈಗ ನಮ್ಮ ರಾಕ್ಷಸರಿಗೆಲ್ಲ ನಾಶಸೂಚಕವಾಗಿಯೂ ಇವನ ಶತ್ರುಗೆ ವಿಜಯಸೂಚಕವಾಗಿಯೂ ಇರುವ ಅತಿ ಘೋರವಾದ ಸ್ವಪ್ನವು ನನ್ನಿಂದ ಕಾಣಲ್ಪಟ್ಟಿತು, ಅದನ್ನು ಸ್ಮರಿಸಿಕೊಂಡರೇ ಮೈಯೆಲ್ಲ ರೋಮಾಂಚವಾಗುವುದು ॥೮॥

ಹೀಗೆಂದು ತ್ರಿಜಟೆಯಿಂದ ಹೇಳಲ್ಪಟ್ಟ ಆ ರಾಕ್ಷಸಿಯರೆಲ್ಲರೂ, ಸ್ವಭಾವತಃ ಕೋಪಶಾಲಿನಿಯರಾಗಿದ್ದರೂ, ತ್ರಿಜಟೆಯ ಮಾತನ್ನು ಕೇಳಿ ಬಹಳ ಭಯಪಟ್ಟು, ಅವಳನ್ನು ಕುರಿತು "ಎಲೌ ತ್ರಿಜಟೆ ! ಈ ರಾತ್ರಿ ನೀನು ನೋಡಿದ ಆ ಸ್ವಪ್ನವೆಂತಹುದು ? ಹೇಳು" ಎಂದು ಕೇಳಿದಳು ಬಳಿಕ ಅವರ ಮಾತನ್ನು ಕೇಳಿ, ತ್ರಿಜಟೆಯು ಅವರಿಗೆ ಹೀಗೆ ಪ್ರತ್ಯುತ್ತರಹೇಳಿದಳು ॥೯-೧೦॥

ಎಲೌ ರಾಕ್ಷಸಿಯರಾ ! ನಾನು ಕಂಡ ಸ್ವಪ್ನವನ್ನು ಕೇಳಿರಿ ಆನೆಯ ದಂತದಲ್ಲಿ ಮಾಡಲ್ಪಟ್ಟು, ಸಾವಿರ ಹಂಸಪಕ್ಷಿಗಳಿಂದ ಯುಕ್ತವಾಗಿರುವ ಒಂದು ದಿವ್ಯವಾದ ಪಾಲಕಿಯು ಅಂತರಿಕ್ಷದಲ್ಲಿ ಸಂಚರಿಸುತಿದ್ದಿತು ಇಂತಹ ಪಾಲಕಿಯಲ್ಲಿ, ಶ್ರೀರಾಮನು ಶುಭ್ರವಾದ ಮಾಲಿಕೆಗಳನ್ನೂ ವಸ್ತ್ರಗಳನ್ನೂ ಧರಿಸಿಕೊಂಡು ಲಕ್ಷ್ಮಣಯುಕ್ತನಾಗಿ ಕುಳಿತಿದ್ದನು ॥೧೧॥

ಸ್ವಪ್ನೇ ಚಾದ್ಯ ಮಯಾ ದೃಷ್ಟಾ ಸೀತಾ ಶುಕ್ಲಾಮ್ಬರಾವೃತಾ ।
ಸಾಗರೇಣ ಪರಿಕ್ಷಿಪ್ತಂ ಶ್ವೇತಂ ಪರ್ವತಮಾಸ್ಥಿತಾ ॥೧೦॥

ರಾಮೇಣ ಸಂಗತಾ ಸೀತಾ ಭಾಸ್ಕರೇಣ ಪ್ರಭಾ ಯಥಾ ॥೧೩॥

ಸಾಣ್ಡಂ ತ್ರಿಭುವನಂ ಭೀಮಂ ಸರ್ವತಃ ಸಚರಾಚರಮ್ ।

ಸರ್ವಂ ಗ್ರಸ್ತಂ ಮಯಾ ದೃಷ್ಟಂ ರಾಮೇಣಾಕ್ಲಿಷ್ಟಕರ್ಮಣಾ ॥೧೪॥

ಕ್ಷೀರೋದಧಿಜಲೇ ಮಧ್ಯೇ ಶ್ವೇತಃ ಶೈಲಃ ಸಮುಚ್ಛ್ರಿತಃ ।

ತಸ್ಯ ಮೂರ್ಧ್ನಿ ತತಃ ಶ್ವೇತಃ ಚತುರ್ದನ್ತೋ ಮಹಾಗಜಃ ॥೧೫॥

ತಸ್ಯ ಪೃಷ್ಠೇ ಸ್ಥಿತಃ ಶ್ರೀಮಾ೯ ರಾಮೋ ರಾಜೀವಲೋಚನಃ ।
ಆಸೀನಃ ಪ್ರಾಙ್ಮುಖಃ ಶ್ರೀಮಾ೯ ಆಸನೇ ಪರಮೇ ಶುಭೇ ॥೧೬॥

ಅಭಿಷಿಕ್ತಂಸ್ತು ಕಾಕುತ್ಸ್ಥಃ ಸರ್ವದೇವೈರ್ನಮಸ್ಕೃತಃ ।
ಸಬ್ರಹ್ಮರ್ಷಿಗಣೈಃ ಸಿದ್ಧೈಃ ಸರ್ವತೀರ್ಥಜಲೇನ ಚ ॥೧೭॥

ಶುಕ್ಲಮಾಲ್ಯಾಮ್ಬರಧರಾ ಶುಕ್ಲಗನ್ಧಾನುಲೇಪನಾ ।
ಸೀತಾ ತತ್ರ ಪೃಥುಶ್ರೋಣೀ ರರಾಜ ಜನಕಾತ್ಮಜಾ ॥೧೮॥

ಮತ್ತು, ಸಮುದ್ರದಿಂದ ಒಂದು ಶ್ವೇತಪರ್ವತವು ಮೇಲಕ್ಕೆದ್ದಿರುವಂತೆಯೂ, ಅದರಮೇಲೆ ಸೀತೆಯು ಶುಕ್ಲವಸ್ತ್ರಧಾರಿಣಿಯಾಗಿ ಕುಳಿತಿದ್ದಂತೆಯೂ, ಆಮೇಲೆ ಸೂರ್ಯನೊಡನೆ ಪ್ರಭೆಯು ಸೇರುವ ರೀತಿಯಲ್ಲಿ ಆ ಸೀತೆಯು ರಾಮನೊಡನೆ ಸೇರಿದಂತೆಯೂ, ನಾನು ಸ್ವಪ್ನದಲ್ಲಿ ಕಂಡೆನು ॥೧೨-೧೩॥

ಅಕ್ಲಿಷ್ಟಕರ್ಮಿಯಾದ ಶ್ರೀರಾಮನಿಂದ ಚರಾಚರಯುಕ್ತವಾಗಿ ಸಮಸ್ತ ಬ್ರಹ್ಮಾಂಡ ಸಹಿತವಾದ ತ್ರಿಭುವನವೂ ಗ್ರಾಸಮಾಡಲ್ಪಟ್ಟಂತ ನಾನು ನೋಡಿದೆನು ॥೧೪॥

ಕ್ಷೀರಸಮುದ್ರದ ಮಧ್ಯದಲ್ಲಿ ಒಂದು ಶ್ವೇತಪರ್ವತವು ಮೇಲಕ್ಕೆದ್ದಂತೆಯೂ, ಅದರ ಶಿಖರದಲ್ಲಿ ಶುಭ್ರವಾದ ನಾಲ್ಕುಕೊಂಬುಗಳ ದೊಡ್ಡದೊಂದು ಆನೆಯಿದ್ದಂತಯೂ, ಅದರಮೇಲೆ ದಿವ್ಯವಾದ ಭದ್ರಾಸನದಲ್ಲಿ ಕಮಲನಯನನಾದ ಶ್ರೀರಾಮಚಂದ್ರನು ಪೂರ್ವಾಭಿಮುಖವಾಗಿ ಕುಳಿತಿದ್ದಂತೆಯೂ, ಆಗ ಸರ್ವ ದೇವತೆಗಳೂ ಸಮಸ್ತ ಬ್ರಹ್ಮರ್ಷಿಗಳೂ ಸಕಲ ಸಿದ್ಧರೂ ಸೇರಿ ಸಮಸ್ತ ತೀರ್ಥಗಳಿಂದಲೂ ಅವನಿಗೆ ಅಭಿಷೇಕಮಾಡಿ ನಮಸ್ಕರಿಸುತಿದ್ದಂತೆಯೂ, ನಾನು ಸ್ವಪ್ನದಲ್ಲಿ ನೋಡಿದೆನು ॥೧೫-೧೬॥

ಅಲ್ಲಿ ಪೃಥುಶ್ರೋಣಿಯಾಗಿರುವ ಜನಕರಾಜಪುತ್ರಿಯಾದ ಸೀತೆಯು, ಶುಭ್ರವಾದ ಮಾಲೆಯನ್ನೂ ವಸ್ತ್ರವನ್ನೂ ಧರಿಸಿಕೊಂಡು, ಶುಭ್ರವಾದ ಗಂಧವನ್ನು ಲೇಪಿಸಿಕೊಂಡು ವಿರಾಜಿಸುತಿದ್ದಳು ॥೧೭॥

ತತೋ ದೇವಾಃ ಸಗನ್ಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಬ್ರಹ್ಮಾಣಮಗ್ರತಃ ಕೃತ್ವಾ ರಾಮಂ ತತ್ರ ವವನ್ದಿರೇ ॥೧೯॥

ಪುನರೇವ ಮಯಾ ದೃಷ್ಟೋ ರಾಮೋ ರಮಯತಾಂ ವರಃ ।
ವಿಷ್ಣುರೇವ ಸ್ವಯಂ ಭೂತ್ವಾ ತಸ್ಮಿನ್ನಾಸ್ತೇ ವರಾಸನೇ ॥೨೦॥

ಪರಂ ಬ್ರಹ್ಮ ಪರಂ ಸತ್ಯಂ ಪರಂ ಜ್ಞಾನಂ ಪರಂ ತಪಃ ।
ಪರಂ ಬೀಜಂ ಪರಂ ಕ್ಷೇತ್ರಂ ಪರಂ ಕಾರಣಕಾರಣಮ್ ॥೨೧॥

ಶಙ್ಖಚಕ್ರಧರಃ ಶ್ರೀಮಾನ್ ಪುಣ್ಡರೀಕಾಯತೇಕ್ಷಣಃ ।
ಶ್ರೀವತ್ಸವಕ್ಷಾ ನಿತ್ಯಶ್ರೀಃ ಅಜೇಯಃ ಶಾಶ್ವತೋ ಧ್ರುವಃ ॥೨೨॥

ಏವಂಭೂತೋ ಮಹಾತೇಜಾಃ ರಾಮಃ ಕಮಲಲೋಚನಃ ।
ಸರ್ವಲೋಕೇಶ್ವರಃ ಶ್ರೀಮಾನ್ ರರಾಜ ರಘುನನ್ದನಃ ॥೨೩॥

ತತೋ ಮಹೇನ್ದ್ರಃ ಪಿತರೋ ಮುನೀನ್ದ್ರಾಃ ಗನ್ಧರ್ವವಿದ್ಯಾಧರಪನ್ನಗೇನ್ದ್ರಾಃ।
ಕೃತಾಭಿಷೇಕಂ ಪರಿವಾರ್ಯ ರಾಮಂ ಪ್ರತುಷ್ಟುವುಃ ಪ್ರಾಞ್ಜಲಯಶ್ಚ ಹೃಷ್ಟಾಃ ॥

ಅನಂತರ, ದೇವತಗಳೂ ಗಂಧರ್ವರೂ ಸಿದ್ದರೂ ಮಹರ್ಷಿಗಳೂ ಕೂಡ, ಬ್ರಹ್ಮದೇವನನ್ನು ಮುಂದಿಟ್ಟುಕೊಂಡು ಒಂದು, ಅಲ್ಲ ರಾಮನನ್ನು ನಮಸ್ಕರಿಸಿದರು ॥೧೯॥

ಜಗದಾನಂದಹೇತುವಾದ ಶ್ರೀರಾಮನನ್ನು ಪುನಃ ನಾನು ಪ್ರಕಾರಾಂತರದಲ್ಲಿ ಕಂಡೆನು ಅದೇ ಆಸನದಲ್ಲಿಯೇ ಅವನು ಸಾಕ್ಷಾತ್ಸಹಾವಿಷ್ಣುವಾಗಿ ಕುಳಿತಿದ್ದನು ॥೨೦॥

ಅಲ್ಲ ಅವನು, ಪರಬ್ರಹ್ಮಸ್ವರೂಪನಾಗಿದ್ದನು , ಪರಮಸತ್ಯಸ್ವರೂಪನಾಗಿದ್ದನು , ಪಂಮ ಜ್ಞಾನಸ್ವರೂಪನಾಗಿಯೂ, ಪರಮತಪೋರೂಪನಾಗಿಯೂ, ಜಗತ್ತಿಗೆಲ್ಲ ತಾನೇ ಮುಖ್ಯಬೀಜ ಭೂತನೂ ಮುಖ್ಯಕ್ಷೇತ್ರಭೂತನೂ ಆಗಿಯೂ, ಕಾರಣಗಳಿಗೆಲ್ಲ ಪರಮಕಾರಣಭೂತನಾಗಿಯೂ, ಇದ್ದನು ॥೨೧॥

ಮತ್ತು, ಅವನು ಶಂಖಚಕ್ರಧರನಾಗಿಯೂ, ಲಕ್ಷ್ಮೀಯುಕ್ತನಾಗಿಯೂ, ಪುಂಡರೀಕನೇತ್ರ ನಾಗಿಯೂ, ಶ್ರೀವತ್ಸಾಂಕಿತವಕ್ಷಸ್ಕನಾಗಿಯೂ, ನಿತ್ಯಶ್ರೀವಿರಾಜಿತನಾಗಿಯೂ, ಅಜೇಯನಾ ಗಿಯೂ, ಶಾಶ್ವತನಾಗಿಯೂ, ಧ್ರುವನಾಗಿಯೂ ಇದ್ದನು ॥೨೨॥

ಆಗ ಕಮಲನಯನನೂ ಮಹಾತೇಜಸ್ವಿಯೂ ಸರ್ವಲೋಕೇಶ್ವರನೂ ಆದ ಶ್ರೀ ರಘುನಂದನನು, ಈರೀತಿಯಾಗಿ ವಿರಾಜಿಸಿದನು ॥೨೩॥

ಆ ಬಳಿಕ, ಮಹೇಂದ್ರನೂ ಪಿತೃದೇವತಗಳೂ ಗಂಧರ್ವ ವಿದ್ಯಾಧರ ಪನ್ನಗರೂ ಕೂಡ, ಪಟ್ಟಾಭಿಷಿಕ್ತನಾದ ಶ್ರೀರಾಮನ ಸುತ್ತಲೂ ಆವರಿಸಿಕೊಂಡು, ಹರ್ಷದಿಂದ ಬದ್ಧಾಂಜಲಿಪುಟರಾಗಿ ಸ್ತೋತ್ರಮಾಡಿದರು ॥೨೪॥

ರಾವಣೋ ದಕ್ಷಿಣಮುಖಃ ತೈಲಾಭ್ಯಕ್ತೋ ದಿಗಮ್ಬರಃ ।
ಆಗಚ್ಛ ತ್ ಪುತ್ರಪೌತ್ರೈ ಶ್ಚ ಧೃತ್ವಾ ನಲದಮಾಲಿಕಾಮ್ ॥೨೫॥
ವಿಭೀಷಣಸ್ತು ರಾಮಸ್ಯ ಸನ್ನಿಧೌ ಹೃಷ್ಟಮಾನಸಃ ।
ಸೇವಾಂ ಕರೋತಿ ರಾಮಸ್ಯ ಪಾದಯೋರ್ಭಕ್ತಿಸಂಯುತಃ ॥೨೬॥
ಸರ್ವಥಾ ರಾವಣಂ ರಾಮೋ ಹತ್ವಾ ಸಕುಲಮಞ್ಜಸಾ ।
ವಿಭೀಷಣಾಯಾಧಿಪತ್ಯಂ ದತ್ವಾ ಸೀತಾಂ ವರಾನನಾಮ್ ।
ಅಬಿಭ್ಯ ನಿಧಾಯ ಸ್ವಪುರೀಂ ಗಮಿಷ್ಯತಿ ನ ಸಂಶಯಃ ॥೨೭॥
ತ್ರಿಜಟಾಯಾವಚಃ ಶ್ರುತ್ವಾ ಭೀತಾಸ್ತಾ ರಾಕ್ಷಸಸ್ತ್ರಿಯಃ ।
ತೂಷ್ಣೀಮಾಸಂಸ್ತತ್ರತತ್ರ ನಿದ್ರಾವಶಮುಪಾಗತಾಃ ॥೨೮॥
ತತಃ ಕಿಲಕಿಲಾಶಬ್ದೋ ಬಭೂವಾನ್ತಃಪುರಾದ್ಬಹಿಃ ॥೨೯॥
ಕಿಮೇತದಿತಿ ಸಂವಿಗ್ನೋ ವೃಕ್ಷಪತ್ರೇಷು ಮಾರುತಿಃ ।
ಆಯಾನ್ತಂ ರಾವಣಂ ದುಷ್ಟಂ ಸ್ತ್ರೀಜನೈಃ ಪರಿವಾರಿತಮ್ ॥೩೦॥
ದಶಾಸ್ಯಂ ವಿಂಶತಿಭುಜಂ ನೀಲಾಞ್ಜನಚಯೋಪಮಮ್ ।
ದೃಷ್ಟ್ವಾ ವಿಸ್ಮಯಮಾಪನ್ನಃ ಪತ್ರಷಣ್ಡೇಷ್ವಲೀಯತ ॥೩೧॥

ರಾವಣನಾದರೋ, ತೈಲದಿಂದ ಅಭ್ಯಕ್ತನಾಗಿ, ದಿಗಂಬರನಾಗಿ, ಕತ್ತಿನಲ್ಲಿ ನಲದ ಮಾಲಿಕೆಯನ್ನು ಧರಿಸಿಕೊಂಡು, ತನ್ನ ಪುತ್ರಪೌತ್ರರೊಡನೆ ದಕ್ಷಿಣಾಭಿಮುಖವಾಗಿ ಹೋಗುತಿದ್ದನು ॥೨೫॥

ವಿಭೀಷಣನಾದರೋ, ರಾಮನ ಸನ್ನಿಧಿಯಲ್ಲಿ ಸಿಂತು ಹೃಷ್ಟಮನಸ್ಕನಾಗಿ ಭಕ್ತಿಯಿಂದ ಶ್ರೀರಾಮನ ಪಾದಸೇವೆಯನ್ನು ಮಾಡುತಿದ್ದನು ಇದೋ ನನಗೆ ಕಾಣಿಸಿದ ಸ್ವಪ್ನದ ವೃತ್ತಾಂತವನ್ನು ಹೇಳಿರುವೆನು ॥೨೬॥

ಸರ್ವಥಾ ಶ್ರೀರಾಮನು ಬಲುಬೇಗನೆ ರಾವಣನನ್ನು ವಂಶಸಹಿತವಾಗಿ ಕೊಂದು, ವಿಭೀಷಣನಿಗೆ ಲಂಕಾಧಿಪತ್ಯವನ್ನು ಕೊಟ್ಟು, ಉತ್ತಮಸ್ತ್ರೀಯಾದ ಸೀತಾದೇವಿಯನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು, ತನ್ನ ಪಟ್ಟಣಕ್ಕೆ ತೆರಳುವನು , ಇದರಲ್ಲಿ ಸಂಶಯವಿಲ್ಲ ॥೨೭॥

ಹೀಗೆಂದು ಹೇಳಿದ ತ್ರಿಜಟೆಯ ವಾಕ್ಯವನ್ನು ಕೇಳಿ, ಆ ರಾಕ್ಷಸಸ್ತ್ರೀಯರೆಲ್ಲರೂ ಮಹಾ ಭಯಯುಕ್ತರಾಗಿ, ಅಲ್ಲಲ್ಲಿ ನಿದ್ರಾಪರವಶರಾಗಿ ಸುಮ್ಮನಾದರು ಅಷ್ಟರಲ್ಲಿಯೇ, ಅಂತಃಪುರದ ಹೊರಗಡೆ ಕಲಕಲಶಬ್ದವಾಯ್ತು ॥೨೮-೨೯॥

ಆ ಸಮಯದಲ್ಲಿ, ಮರದೆಲೆಗಳ ಮಧ್ಯದಲ್ಲಿದ್ದ ಮಾರುತಿಯು, ಇದೇನೆಂದು ಗಾಬರಿಪಟ್ಟವನಾಗಿ ನೋಡುತ, ದಶಮುಖನಾಗಿಯೂ ವಿಂಶತಿಭುಜನಾಗಿಯೂ ನೀಲಾಂಜನನಿಚಯಸದೃಶನಾಗಿಯೂ ಇರುವ ದುಷ್ಟನಾದ ರಾವಣನು ಸ್ತ್ರೀಯರಿಂದ ಪರಿವೃತನಾಗಿ ಬರುತಿರುವುದನ್ನು ಕಂಡು, ಅತಿ ವಿಸ್ಮಯಾವಿಷ್ಟನಾಗಿ, ಪತ್ರಷಂಡಗಳಲ್ಲಿ ಅಡಗಿಕೊಂಡನು ॥೩೦-೩೧॥

ರಾವಣೋಪ್ಯಾಶು ರಾಮೇಣ ಮರಣಂ ಮೇ ಕಥಂ ಭವೇತ್ ।
ಸೀತಾರ್ಥಮಪಿ ನಾಯಾತಿ ರಾಮಃ ಕಿಂ ಕಾರಣಂ ಭವೇತ್ ॥೩೦॥
ಇತ್ಯೇವಂ ಚಿಂತ್ಯಯ ನಿತ್ಯಂ ರಾಮಮೇವ ಸದಾ ಹೃದಿ ।
ತಸ್ಮಿನ್ನೇವ ದಿನೇ ರಾತ್ರೌ ನಿದ್ರಯಾ ವಿವಶೀಕೃತಃ ॥೩೧॥
ಸ್ವಪ್ನೇ ರಾಮೇಣ ಸನ್ದಿಷ್ಟಂ ಕಞ್ಚಿದ್ವಾನರಮಾಗತಮ್ ।
ಕಾಮರೂಪಧರಂ ಸೂಕ್ಷ್ಮಂ ವೃಕ್ಷಾಗ್ರಸ್ಥಮಪಶ್ಯತ ॥೩೨॥
ಇತ್ಥಂ ದೃಷ್ಟ್ವಾದ್ಭುತಂ ಸ್ವಪ್ನಂ ಸ್ವಾತ್ಮನ್ಯೇವಮಚಿಂತಯತ್ ॥೩೩॥
ಸ್ವಪ್ನಃ ಕದಾಚಿತ್ ಸತ್ಯಃ ಸ್ಯಾತ್ ಇತಿ ಲೋಕಪ್ರಥಾ ತತಃ ।
ಜಾನಕೀಂ ವಾಕ್ಶಸ್ತ್ರೈರ್ವಿದ್ಧಾಂ ದುಃಖಿತಾಂ ನಿತರಾಮಹಮ್ ।
ಕರೋಮಿ ದೃಷ್ಟ್ವಾ ರಾಮಾಯ ನಿವೇದಯತು ವಾನರಃ ॥೩೬॥
ಇತ್ಯೇವಂ ಚಿಂತ್ಯಯ ಸೀತಾಸಮೀಪಮಗಮದ್ದ್ರುತಮ್ ॥೩೭॥
ಅಙ್ಗುಲಾಶತಮಾತ್ರಂ ತು ತಂ ವ್ರಜಂತಮನುವ್ರಜತ್ ।
ಮಹೇನ್ದ್ರಮಿವ ಪೌಲಸ್ತ್ಯಂ ದೇವಗನ್ಧರ್ವಯೋಷಿತಃ ॥೩೮॥
ದೀಪಿಕಾಃ ಕಾಞ್ಚನೀಃ ಕಾಶ್ಚಿತ್ ಜಗೃಹುಸ್ತತ್ರ ಯೋಷಿತಃ ।
ವಾಲವ್ಯಜನಹಸ್ತಾಶ್ಚ ತಾಳವೃನ್ತಾನಿ ಚಾಪರಾಃ ॥೩೯॥

ಹೀಗಿರುವಲ್ಲಿ, ರಾವಣನೂ ಕೂಡ ತನ್ನ ಮನಸ್ಸಿನೊಳಗೆ ' ರಾಮನಿಂದ ನನಗೆ ಬೇಗನೆ ಮರಣ ಹೇಗೆ ಸಂಭವಿಸೀತು ? ಸೀತಾನಿಮಿತ್ತವಾಗಿಯೂ ಕೂಡ ಶ್ರೀರಾಮನು ಇಲ್ಲಿಗೆ ಬರಲಿಲ್ಲ ವಲ್ಲ ! ಇದಕ್ಕೇನು ಕಾರಣವಿರಬಹುದು ? ' ಎಂದು ರಾಮನನ್ನೇ ಸರ್ವದಾ ಧ್ಯಾನಿಸುತ, ಆ ದಿವ ಸವೇ ನಿದ್ರೆಮಾಡುತಿದ್ದಾಗ ಸ್ವಪ್ನದಲ್ಲಿ–ರಾಮನಿಂದ ಕಳುಹಿಸಲ್ಪಟ್ಟ ಕಾಮರೂಪನಾದ ಒಬ್ಬ ವಾನರನು ಬಂದು ಮರದ ತುದಿಯಲ್ಲಿರುವುದನ್ನು ಕಂಡನು ಹೀಗೆ ಅತ್ಯದ್ಭುತವಾದ ಸ್ವಪ್ನವನ್ನು ಕಂಡು, ತನ್ನ ಮನಸ್ಸಿನಲ್ಲಿ ಈ ರೀತಿಯಾಗಿ ಯೋಚಿಸಿದನು ಸ್ವಪ್ನವು ಒಂದೊಂದು ಸಮಯದಲ್ಲಿ ಸತ್ಯವಾಗುವುದೆಂದು ಲೋಕಪ್ರಸಿದ್ಧಿಯಿರುವುದು ಅದುಕಾರಣ, ನಾನು ಈಗ ಸೀತೆಯನ್ನು ನನ್ನ ವಾಕ್ಕೆಂಬ ಶಸ್ತ್ರಗಳಿಂದ ತಾಡಿತಳನ್ನಾಗಿ ಮಾಡಿ ವಿಶೇಷವಾಗಿ ದುಃಖಪಡಿಸುವೆನು ಇದನ್ನು ನೋಡಿ, ಈಗ ನನ್ನ ಸ್ವಪ್ನದೃಷ್ಟನಾದ ವಾನರನು ರಾಮನಿಗೆ ಹೇಳಲಿ ಹೀಗೆಂದು ಯೋಚಿಸಿ ಕೊಂಡು ಆಗ ತಟ್ಟನೆ ಸೀತೆಯಿರುವಲ್ಲಿಗೆ ಬಂದನು ॥೩೨–೩೬॥

ಆಗ, ಮಹೇಂದ್ರನನ್ನು ದೇವ ಗಂಧರ್ವ ಸ್ತ್ರೀಯರು ಅನುಸರಿಸುವಂತೆ, ಅಶೋಕವನಕ್ಕೆ ಬರುತಿರುವ ರಾವಣನನ್ನು ನೂರುಮಂದಿ ಸ್ತ್ರೀಯರು ಅನುಸರಿಸಿ ಬರುತಿದ್ದರು ॥೩೮॥

ಅಲ್ಲಿ ಕೆಲವುಮಂದಿ ಸ್ತ್ರೀಯರು ಕೈಯಲ್ಲಿ ದೀವಟಿಗೆಯನ್ನು ಹಿಡಿದಿದ್ದರು, ಮತ್ತೆ ಕೆಲವರು ವಾಲವ್ಯಜನ(ಚೌರಿ)ವನ್ನು ಹಿಡಿದಿದ್ದರು, ಇನ್ನು ಕೆಲವರು ಬೀಸಣಿಕಗಳನ್ನು ಹಿಡಿ ದಿದ್ದರು ॥೩೯॥

ಕಾಚಿದ್ರತ್ನಮಯೀಂ ಪಾತ್ರೀಂ ಪೂರ್ಣಾಂ ಪಾನೇನ ಭಾಮಿನೀ ।
ದಕ್ಷಿಣಾ ದಕ್ಷಿಣೇನೈವ ತದಾ ಜಗ್ರಾಹ ಪಾಣಿನಾ ॥೪೦॥
ರಾಜಹಂಸಪ್ರತೀಕಾಶಂ ಛತ್ರಂ ಪೂರ್ಣಶಶಿಪ್ರಭಮ್ ।
ಸುವರ್ಣದಂಡಮಪರಾ ಗೃಹೀತ್ವಾ ಪೃಷ್ಠತೋ ಯಯೌ ॥೪೧॥
ಸ ಚ ಕಾಮಪರಾಧೀನಃ ಪತಿಸ್ತಾಸಾಂ ಮಹಾಬಲಃ ।
ಸೀತಾಸಿಕಟಮಾಸಾದ್ಯ ರಾವಣೋ ಲೋಕರಾವಣಃ ।
ಅನೆಲ್ಪೈರ್ಮರ್ಮಪ್ಪವಚನೈಃ ತರ್ಜಯಾಮಾಸ ಜಾನಕೀಮ್ ॥೪೩॥
ತಾಪಸೋ ರಾಘವಃ ಕಶ್ಚಿತ್ ವನವಾಸರತೋ ಸರಃ ।
ಅಕಿಞ್ಚನಃ ಸಹ ಭ್ರಾತ್ರಾ ಕಥಂ ತೇ ಮನಸಿ ಸ್ಥಿತಃ ॥೪೪॥

ಶ್ರೀಸೀತೋವಾಚ

ಪಾಪಿನಸ್ತೇ ತಥಾ ಭಾತಿ ತದರ್ಥಂ ತು ವಿಚಿನ್ತಯ ।
ತೇನೈವ ಸಚ್ಚಿದಾನನ್ದಃ ತ್ವಯೈವ ಪ್ರಕಟೀಕೃತಃ ॥೪೪॥

ಒಬ್ಬ ಸುಂದರಿಯು, ಮಧುಪರಿಪೂರ್ಣವಾಗಿರುವ ರತ್ನಪಾತ್ರೆಯನ್ನು ತನ್ನ ಬಲಗೈಯಲ್ಲಿ ಹಿಡಿದಿದ್ದಳು ॥೪೦॥

ಒಬ್ಬ ಯುವತಿಯು, ರಾಜಹಂಸಸದೃಶವಾಗಿಯೂ ಪೂರ್ಣಚಂದ್ರಬಿಂಬ ಪ್ರಭವಾಗಿಯೂ ಇರುವ ಸುವರ್ಣದಂಡಯುಕ್ತವಾದ ಛತ್ರವನ್ನು ಹಿಡಿದುಕೊಂಡು ಹಿಂದುಗಡೆ ಒರುತಿದ್ದಳು ॥೪೧

ಬಳಿಕ, ಅವರಿಗೆಲ್ಲ ಪತಿಯಾಗಿರುವ ಕಾಮುಪರತಂತ್ರನಾದ ರಾವಣನು, ಸೀತೆಯ ಸಮೀಪಕ್ಕೆ ಒಂದು ' ರಾಘವನೆಂಬವನು ಯಾವನೋ ಒಬ್ಬ ಸಾಮಾನ್ಯ ಮನುಷ್ಯನಾದ ತಾಪಸನು, ಏನೇನೂ ಗತಿಯಿಲ್ಲದೆ ತಮ್ಮನೊಡನೆ ವನವಾಸಮಾಡಿಕೊಂಡಿರುವನು ಇಂಥವನು ನಿನ್ನ ಮನಸ್ಸಿನಲ್ಲಿ ಹೇಗ ನಲಸಿರುವನು ' ' ಇತ್ಯಾದಿರೀತಿಯಾಗಿ, ಅತಿಕ್ರೂರವಾದ ಅನೇಕ ವಚನಗಳಿಂದ ಆ ಜಾನಕಿಯನ್ನು ಗದ್ದರಿಸಿದನು ॥೪೩-೪೪॥

ಈರೀತಿಯಾಗಿ ಹೇಳುತಿರುವ ರಾವಣನಿಗೆ ಸೀತಾದೇವಿಯು ಹೀಗೆ ಉತ್ತರಹೇಳಿದಳು —

ಎಲೈ ದುಷ್ಟನಾದ ರಾವಣನೆ! ನೀನು ಕೇವಲ ಪಾಪಾತ್ಮನಾದಕಾರಣ, ನಿನಗೆ ಈರೀತಿಯಾಗಿ ತೋರುವುದು ನೀನು ಈಗ ಹೇಳಿದ ' ತಾಪಸೋ ರಾಘವಃ ಕಶ್ಚಿತ್ ' ಎಂಬ ಮಾತಿನ ಅರ್ಥವನ್ನು ನೀನೇ ನಿನ್ನಾಗಿ ವಿಚಾರಮಾಡಿ ನೋಡು ಇದರಿಂದಲೇ, ಶ್ರೀರಾಮನು (೧) ಸಚ್ಚಿದಾನಂದ ಮೂರ್ತಿಯಂಬುದಾಗಿ ನೀನೇ ಪ್ರಕಟಮಾಡಿದಂತಾಗುವುದು ॥೪೪॥

---

(೧) ' ತಾಪಸೋ ರಾಘವಃ ಕಶ್ಚಿತ್ ' ಎಂಬ ಶ್ಲೋಕದಲ್ಲಿ, ತಾಪಸಃ ಕಶ್ಚಿತ್ ವನವಾಸರತಃ ಸರಃ ಅಕಿಂಚನ ಸಹಭ್ರಾತ್ರಾ- ಎಂಬ ಶಬ್ದಗಳ ಸನ್ನಿವೇಶದಿಂದ, ನರನಾರಾಯಣಾವತಾರವನ್ನು ಸ್ವೀಕರಿಸಿದ್ದ ಶ್ರೀಪರಮಾತ್ಮನೆಂಬ ಅರ್ಥವು ದ್ಯೋತಿತವಾಗುವುದು.

ಅಸಂದೇಶಾತ್ ತು ರಾಮಸ್ಯ ತಪಸಶ್ಚಾನುಪಾಲನಾತ್ ।
ನ ತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹ ತೇಜಸಾ ॥೪೫॥
ಅನೇಕದುರ್ವಚಶ್ಚೈವ ಕ್ಷೀಣೇ ಸಂಸೃಜ್ಯ ಪಾಪಧೀಃ ಪುನಃ ।
ಸ್ತ್ರೀಣಾಂ ಮಧ್ಯೇ ಸ್ಥಿತಃ ಸೀತಾಂ ಮಹಾನಿರ್ಬನ್ಧಮಾಚರತ್ ॥೪೬॥
ಸೀತಾ ತದುಕ್ತಿನಿರ್ಬನ್ಧಂ ಅಸಾದ್ಯಾತ್ಯನ್ತದುಃಖಿತಾ ।
ಮಮ ದುಃಖವಿನಾಶಾಯ ಕೋ ಭವೇದಿತ್ಯಚಿನ್ತಯತ್ ॥೪೭॥
ಏತಸ್ಮಿನ್ನೇವ ಸಮಯೇ ಹನೂಮಾ ದೃಢವಿಕ್ರಮಃ ।
ಅಶಬ್ದೋಽಥ ನಿತರಾಂ ವೀರೋ ಮನಸ್ಯೇವಮಚಿನ್ತಯತ್ ॥೪೮॥
ಮಮಾಗಮನಕೃತ್ಯಂ ತು ಸೀತಾದರ್ಶನಮೇವ ನ ।
ರಾಮದೂತೋಽಹಮತ್ಯನ್ತಂ ಚೋರೋಽಸ್ಮಿ ಯದಿ ವಿಶ್ರುತಃ ॥೪೯॥
ಇತಿ ಸಂಚಿನ್ತ್ಯ ಮನಸಾ ಹನೂಮಾ ಮಾರುತಾತ್ಮಜಃ ।

ಎಲಾ ನಿಜನಾದ ರಾವಣನೆ! ಸೀನು ನನ್ನ ಪಾತಿವ್ರತ್ಯಾಗ್ನಿಯಲ್ಲಿ ಭಸ್ಮವಾಗತಕ್ಕವನಾಗಿರುವೆ ಆದರೆ, ನನಗೆ ಶ್ರೀರಾಮನ ಅಪ್ಪಣೆಯಿಲ್ಲದಿರುವುದರಿಂದಲೂ, ಇಷ್ಟಕ್ಕಾಗಿ ತಪೋಮಹಿಮೆಯನ್ನು ವ್ಯಯಮಾಡಲು ನನಗೆ ಇಷ್ಟವಿಲ್ಲದಿರುವುದರಿಂದಲೂ, ನಾನು ಈಗಲೇ ನನ್ನ ತೇಜಸ್ಸಿನಿಂದ ನಿನ್ನನ್ನು ಭಸ್ಮಮಾಡದಿರುವೆನು, ಇಲ್ಲದಿದ್ದರೆ ಈ ಕ್ಷಣದಲ್ಲಿಯೇ ಭಸ್ಮಮಾಡಿಬಿಡ ಬಲ್ಲೆನು ॥೪೫-೪೬॥

ಹೀಗೆಂದು ಹೇಳುತಿರುವ ಶ್ರೀ ಸೀತಾದೇವಿಯ ವಚನವನ್ನು ಕೇಳಿಯೂ- ಇನ್ನೂ ನಾನಾ ವಿಧವಾಗಿ ದುಷ್ಟವಚನ ಪರಂಪರೆಯನ್ನು ಬಿಡುತಿರುವ ಪಾಪಬುದ್ಧಿಯಾದ ಆ ರಾವಣನು, ಸ್ತ್ರೀಯರ ಮಧ್ಯದಲ್ಲಿದ್ದುಗೊಂಡು, ಸೀತೆಯನ್ನು ಕುರಿತು ಬಹಳ ನಿರ್ಬಂಧವನ್ನು ಮಾಡಿದನು ॥

ಆಗ ಅವನ ಬಲಾತ್ಕಾರ ವಚನಗಳನ್ನು ಕೇಳಿ ಅತಿದುಃಖಿತಳಾದ ಸೀತಾದೇವಿಯು, ಈಗ ನನ್ನ ದುಃಖವನ್ನು ಯಾರು ಪರಿಹರಿಸುವರೆಂದು ಯೋಚಿಸುತಿದ್ದಳು ॥೪೭॥

ಹೀಗಿರುವಲ್ಲಿ, ದೃಢಪರಾಕ್ರಮನಾದ ಹನುಮಂತನು, ಸ್ವಲ್ಪವೂ ಶಂಕೆಯಿಲ್ಲದೆ, ತನ್ನ ಮನಸ್ಸಿನಲ್ಲಿ ' ನಾನು ಇಲ್ಲಿಗೆ ಬಂದಿರುವುದು, ಸೀತಾಸಂದರ್ಶನವೊಂದಕ್ಕೆ ಮಾತ್ರವೇ ಆಲ್ಲ, ನನಗೆ ಶಕ್ತಿಯಿರುವ ಮಟ್ಟಿಗೂ ಇನ್ನೂ ಸ್ವಾಮಿಕಾರ್ಯವನ್ನು ಸಾಧಿಸಬೇಕು ಹಾಗೆ ಮಾಡಿದರೇ, ನಾನು ಶ್ರೀರಾಮನ ದೂತನಾದುದು ಸಫಲವಾಗುವುದು ಅದಲ್ಲದೆ, ನಾನು ಇಲ್ಲಿಂದ ಹೊರಟು ಹೋದಮೇಲೆ ನಾನು ಇಲ್ಲಿಗೆ ಬಂದಿದ್ದ ವಿಷಯವು ಇಲ್ಲಿನವರಿಗೆ ಗೊತ್ತಾಗುವ ಪಕ್ಷದಲ್ಲಿ, ಆಗ ನಾನು ಕಳ್ಳನೆನ್ನಿಸಿಕೊಳ್ಳುವೆನು ' ಎಂದು ಯೋಚನೆಮಾಡಿದನು ॥೪೮-೪೯॥

ಹೀಗೆಂದು ತನ್ನ ಮನಸ್ಸಿನಲ್ಲಿ ಯೋಚಿಸಿ, ವಾಯುಪುತ್ರನಾದ ಮಹಾಸಮರ್ಥನಾದ ಹನುಮಂತನು, ದೊಡ್ಡ ದೇಹವನ್ನು ಧರಿಸಿಕೊಂಡು ರಾವಣನ ಮುಂದುಗಡೆ ಬಂದು ನಿಂತನು ಬಳಿಕ,

ಅವಿರಾಸೀದ್ರಾವಣಾಗ್ರೇ ಮಹಾವಿಗ್ರಹವಾ೯ ಪ್ರಭುಃ ।
ರಾಕ್ಷಸಂ ತಾಡಯಾಮಾಸ ದೃಢಮುಷ್ಟಿರ್ಮಹಾಬಲಃ ॥೫೦॥
ತಾಡಿತೋ ರಾವಣಸ್ತೀವ್ರಂ ವಜ್ರತುಲ್ಯೇನ ಮುಷ್ಟಿನಾ ।
ಶಿಥಿಲೀಕೃತಸರ್ವಾಙ್ಗೋ ಮನಸ್ಯೇವಮಚಿನ್ತಯತ್ ॥೫೧॥
ಮಹಾಬಲೋ ಮಹಾವೀರ್ಯೋ ರಿಪುರ್ಮೇ ಸಮುಪಸ್ಥಿತಃ ।
ದುರ್ಜಯೋಯಂ ಮಹಾವೀರಃ ತಾಡನಾತ್ ಜ್ಞಾಯತೇ ಮಯಾ ॥೫೨॥
ಯಸ್ಯ ದೇಹೋ ವೃದ್ಧಿಮೇತಿ ನಾಯಂ ಸಾಧಾರಣಃ ಕಪಿಃ ।
ಏನಂ ಜಿತ್ವಾ ನ ಮೇ ಖ್ಯಾತಿಃ ಪರಿಹಾಸೋ ಭವಿಷ್ಯತಿ ॥೫೩॥
ವಿಪನ್ನೋ ಯದಿ ತೇನಾಹಂ ತದಾಽಕೀರ್ತಿರ್ಮಯಾರ್ಜಿತಾ ॥೫೪॥
ನ ರಾಮಾನ್ನಿಧನಂ ಚಾಪಿ ಪ್ರಾರ್ಥಿತಂ ಮೇ ಭವಿಷ್ಯತಿ ।
ದುರನ್ತಪಾಪಕೃದ್ವಾಪಿ ಯೇನಾಹಂ ಮುಕ್ತಿಮಾಪ್ನುಯಾಮ್ ॥೫೫॥

ಮಹಾಬಲನಾದ ಆ ಮಾರುತಿಯು, ದೃಢವಾದ ಮುಷ್ಟಿಯುಳ್ಳವನಾಗಿ ರಾವಣನನ್ನು ಗುದ್ದಿದನು ॥೫೦॥

ಹೀಗೆ ವಜ್ರಸದೃಶವಾದ ಮುಷ್ಟಿಯಿಂದ ಬಲವಾಗಿ ಹೊಡೆಯಲ್ಪಟ್ಟ ರಾವಣನು, ಸರ್ವಾಂಗವೂ ಶಿಥಿಲವಾದವನಾಗಿ, ಮನಸ್ಸಿನಲ್ಲಿ ಹೀಗೆ ಆಲೋಚನೆಮಾಡಿದನು ॥೫೧॥

ನನಗೆ ಈಗ ಮಹಾಬಲನೂ ಮಹಾವೀರ್ಯನೂ ಆಗಿರುವ ಶತ್ರುವೊಬ್ಬನು ಬಂದಿರುವನು ಇವನ ಪ್ರಹಾರವನ್ನು ಸೋಡಿದ ಮಾತ್ರದಿಂದಲೇ, ಈ ಮಹಾವೀರನನ್ನು ಗೆಲ್ಲುವುದಸಾಧ್ಯವೆಂದು ನನಗೆ ಗೊತ್ತಾಯಿತು ॥೫೨॥

ಇವನ ಈ ದೇಹವು ಇಷ್ಟು ಹಚ್ಚಾಗಿ ಬೆಳೆಯುತ್ತಿರುವುದಲ್ಲ ! ಇವನು ಸಾಮಾನ್ಯವಾದ ಕಪಿಯಲ್ಲ. ಇವನೊಡನೆ ಯುದ್ದಮಾಡುವಾಗ ಒಂದುವೇಳೆ ಇವನನ್ನು ಗೆದ್ದರೆ, ಇದರಿಂದ ನನಗೊಂದು ಖ್ಯಾತಿಯಿಲ್ಲ ಇವನಿಂದ ನನಗೆ ಸೋಲಾಗುವುದಂತು ನಿಶ್ಚಿತವಾಗಿರುವಕಾರಣ, ಇದರಿಂದ ನನಗೆ ಪರಿಹಾಸವೇ ಸಂಭವಿಸುವುದು ॥೫೩॥

ಇದಲ್ಲದೆ, ಇವನಿಂದ ನಾನು ವಿಪತ್ತಿಗೆ ಗುರಿಯಾದ ಪಕ್ಷದಲ್ಲಿ, ಆಗ ನಾನಾಗಿ ಅಪಯಶಸ್ಸನ್ನು ಸಂಪಾದಿಸಿಕೊಂಡಂತಾಗುವುದು ಇದೂ ಇರಲಿ, ನಾನು ಇಷ್ಟು ಹೆಚ್ಚಾಗಿ ಪಾಪಗಳನ್ನು ಮಾಡಿದ್ದರೂ, ಶ್ರೀರಾಮನಿಂದ ಮರಣಹೊಂದಿದರೆ ಮುಕ್ತಿ ಹೊಂದುವೆನೆಂದಲ್ಲವೆ ಇದುವರೆಗೆ ಇಷ್ಟು ಪ್ರಯತ್ನಮಾಡಿದೆನು ! ಈಗಲೇ ಈ ವಾನರನಿಂದಲೇ ನಾನು ಹತನಾಗಿಬಿಟ್ಟರೆ, ನನ್ನ ಆ ಪಾರ್ಥನೆಯು ನೆರವೇರುವುದಿಲ್ಲ ॥೫೪-೫೫॥

ಸ್ತ್ರೀಮಧ್ಯೇ ನಿಧನಂ ಚಾಪಿ ಪರಿಹಾಸಾಯ ಕಾರಣಮ್ ।
ಪಲಾಯನಂ ಭೂತಮಿಷಾತ್ ವರಂ ಮೇ ಪ್ರಾಣನಾಶನಾತ್ ॥೫೬॥

ಇತಿ ಸಂಚಿನ್ತಯನ್ನೇವ ರಾವಣಃ ಶಿಥಿಲೀಕೃತಃ ।
ಹನೂಮತೋ ಮುಷ್ಟಿಘಾತಂ ಸ್ಮರನ್ನೇವ ಪಲಾಯಿತಃ ॥೫೭॥

ಇತಿ ಶ್ರೀಮತ್ಸುನ್ದರಕಾಣ್ಡೇ ತ್ರಿಜಟಾಸ್ವಪ್ನ ರಾವಣಪಲಾಯನಾದಿ ಕಥನಂ
ಚತುರ್ಥಃ ಸರ್ಗಃ

ಇದೂ ಅಲ್ಲದೆ, ಇಲ್ಲಿ ಈ ಸ್ತ್ರೀಯರ ಮಧ್ಯದಲ್ಲಿ ಒಂದು ಕಪಿಯಿಂದ ಹತನಾಗಿ ಸಾಯುವುದು ಕೇವಲ ಪರಿಹಾಸಾಸ್ಪದವಾಗುವುದು ಹೀಗೆಲ್ಲ ಇರುವುದರಿಂದ, ಇಲ್ಲಿ ಈ ಕಪಿಯ ಕೈಲಿ ಪ್ರಾಣಕಳೆದುಕೊಳ್ಳುವುದಕ್ಕಿಂತ-ಏನೋ ಒಂದು ಭೂತ ಒಂದಿತೆಂದು ನೆಪಮಾಡಿಕೊಂದು ಇಲ್ಲಿಂದ ಓಡಿಹೋಗುವುದೇ ಲೇಸು ॥೫೬॥

ಈ ರೀತಿಯಾಗಿ ಚಿಂತಿಸುತಲೇ, ಜರ್ಜರೀಕೃತನಾದ ಆ ರಾವಣನು, ಹನುಮಂತನು ತನಗೆ ಮಾಡಿದ ಮುಷ್ಟಿಪ್ರಹಾರವನ್ನು ಸ್ಮರಿಸಿಕೂಳ್ಳುತಲೇ ಅದೃಶ್ಯನಾಗಿ ಅಶೋಕವನವನ್ನು ಬಿಟ್ಟು ಓಡಿಹೋದನು ॥೫೭॥

ಇದು ಸುಂದರಕಾಂಡದಲ್ಲಿ ತ್ರಿಜಟಾಸ್ವಪ್ನ ದರ್ಶನ ರಾವಣಪಲಾಯನಾದಿ
ಕಥನವೆಂಬ ನಾಲ್ಕನೆಯ ಸರ್ಗವು

ಅಥ ಶ್ರೀಮತ್ಸುನ್ದರಕಾಣ್ಡೇ ಪಞ್ಚಮಃ ಸರ್ಗಃ

ತತಃ ಸೀತಾ ಜಾತಹರ್ಷಾ ತತ್ರ ಜೇನ್ತಾಪರಾಭವತ್ ।
ತತ್ತ್ವಂ ರಾಘವದೂತೋಯಂ ನ ಭೂತಂ ರಾವಣಾಲಯೇ ।
ವಿದ್ರಾವಿತೇ ರಾವಣೇ ತು ಭಯಾತ್ ತಸ್ಮಾದ್ಬಲಾಧಿಕಾತ್ ॥೧॥
ಸೀತಾನಿಕಟಮಾಸಾದ್ಯ ದರ್ಶನೀಯತನೋಭವತ್ ॥೨॥
ವವನ್ದೇ ಮಾರುತಿಃ ಸೀತಾಂ ರಾಮಧ್ಯಾನಪರಾಯಣಾಮ್ ।
ಜೇನ್ತಯನ್ತೀಂ ರಾವಣಸ್ಯ ಸಕುಲಸ್ಯ ವಿನಾಶನಮ್ ॥೩॥
ದೃಷ್ಟ್ವಾ ಸೀತಾ ಮಹಾಭಾಗಂ ಮಾರುತಿಂ ಸೌಮ್ಯವಿಗ್ರಹಮ್ ।
ಅನ್ತಃಕರಣಸಜ್ಜೀನ ಮೇನೇ ಸ್ವಾತ್ಮಹಿತಾರ್ಥಿನಮ್ ॥೪॥
ತತೋ ಹನೂಮಾನಾಹೇದಂ ಸೀತಾಪ್ರತ್ಯಯಕಾರಣಾತ್ ॥೫॥
ರಾಜಾ ದಶರಥೋ ನಾಮ ಸಾಕೇತನಗರೇಭವತ್ ।
ರಾಮೋ ನಾಮ ಸುತೋ ಜ್ಯೇಷ್ಠಃ ತಸ್ಯಾಸೀಲ್ಲೋಕವಿಶ್ರುತಃ ।

ಸುಂದರಕಾಂಡದಲ್ಲಿ ಐದನೆಯ ಸರ್ಗವು.

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಹೀಗೆ ಬಲಾಧಿಕನಾದ ಆಂಜನೇಯನಿಗೆ ಹೆದರಿಕೊಂಡು ರಾವಣನು ಹೊರಟುಹೋದ ಬಳಿಕ, ಹರ್ಷವುಂಟಾದವಳಾದ ಸೀತಾದೇವಿಯು ' ಈ ಕಪಿಯು ನಿಶ್ಚಯವಾಗಿಯೂ ರಾಘವನ ದೂತನೆಯೇ, ಈ ರಾವಣನ ಮನೆಯಲ್ಲಿ ಭೂತನೆಂಬುದಿಲ್ಲವೇ ಇಲ್ಲ ' ಎಂದು ವಿಚಾರಿಸುತಿದ್ದಳು ॥೧॥

ಆ ಸಮಯದಲ್ಲಿ, ಸರ್ವದಾ ರಾಮಧ್ಯಾನನಿರತಳಾಗಿಯೂ, ರಾವಣನು ತನ್ನ ವಂಶಸಹಿತವಾಗಿ ನಾಶಹೊಂದಬೇಕೆಂದು ಕೇವಲ ಚಿಂತಾಯುಕ್ತಳಾಗಿಯೂ ಇರುವ ಸೀತಾದೇವಿಯ ಹತ್ತಿರಕ್ಕೆ ಬಂದು, ಆಂಜನೇಯನು ಅವಳಿಗೆ ನಮಸ್ಕಾರಮಾಡಿ, ಅತ್ಯಂತ ದರ್ಶನೀಯದೇಹನಾಗಿ ನಿಂತುಗೊಂಡನು ॥೨-೩॥

ಬಳಿಕ, ಕೇವಲ ಸೌಮ್ಯಾಕಾರನಾಗಿರುವ ಮಹಾನುಭಾವನಾದ ಆಂಜನೇಯನನ್ನು ಕಂಡು ಸೀತಾದೇವಿಯು, ತನ್ನ ಅಂತಃಕರಣವು ಅವನ ವಿಷಯದಲ್ಲಿ ಶುದ್ಧವಾಗಿ ಪ್ರವರ್ತಿಸಿದಕಾರಣ, ಅವನು ತನಗೆ ಹಿತಚಿಂತಕನೆಂದು ತಿಳಿದುಕೊಂಡಳು ಆಮೇಲೆ, ಸೀತೆಗೆ ನಂಬುಗೆ ಹುಟ್ಟುವುದಕ್ಕೋಸ್ಕರವಾಗಿ ಹನುಮಂತನು ಈ ಮಾತನ್ನು ಹೇಳಿದನು ॥೪-೫॥

ಅಯೋಧ್ಯಾಪಟ್ಟಣದಲ್ಲಿ ದಶರಥನೆಂದು ಪ್ರಸಿದ್ಧನಾದ ರಾಜನೊಬ್ಬನಿದ್ದನು ಅವನಿಗೆ, ರಾಮನೆಂದು ಜಗದ್ವಿಖ್ಯಾತನಾದ ಜ್ಯೇಷ್ಠಪುತ್ರನಾದನು ಆ ರಾಮನು, ತನ್ನ ತಂದೆಯಿಂದ ಆಜ್ಞೆ

ಸ ಸೀತಾನುಜಸಂಯುಕ್ತಃ ಪಿತ್ರಾದಿಷ್ಟೋ ವನಂ ಗತಃ ॥೬॥
ಸ್ತಿತಾಂ ಜಹಾರ ತದ್ಭಾರ್ಯಾಂ ಪಞ್ಚವಟ್ಯಾಂ ದಶಾನನಃ ।
ತಾಂ ವಿಚಿನ್ವ ಸ ರಾಮೋಽಪಿ ಸುಗ್ರೀವಸಖತಾಂ ಗತಃ ॥೭॥
ರಾಮಾದಿಷ್ಟಃ ಕಪೀನ್ದ್ರಃ ಸಃ ಸೀತಾನ್ವೇಷಣಕಾರಣಾತ್ ।
ದಿಕ್ಷು ಸಂಪ್ರೇಷಯಾಮಾಸ ಕೋಟಿಕೋ ವಾನರೋತ್ತಮಾ ॥೮॥
ಅಹಂ ದಕ್ಷಿಣದಿಗ್ಭಾಗಂ ಪ್ರವಿಚಿನ್ವನ್ನಿಹಾಗತಃ ॥೯॥
ನಿಶಾಯಾಂ ಲಙ್ಕಿನೀಂ ಹತ್ವಾ ದೃಷ್ಟ್ವಾ ಲಙ್ಕಾಪುರೀಂ ತತಃ ।
ಕ್ರಮಾದಶೋಕವನಿಕಾಂ ಪ್ರಾಪ್ಯ ಸಂತಾಪ್ಯ ರಾವಣಮ್ ॥೧೦॥
ಯಥಾರೂಪಾಂ ಯಥಾವರ್ಣಾಂ ಯಥಾಲಕ್ಷ್ಮಣಾಂ ಚ ನಿಶ್ಚಿತಾಮ್ ।
ಅಶ್ರೌಷಂ ರಾಘವಸ್ಯಾಹಂ ಸೇಯಮಾಸಾದಿತಾ ಮಯಾ ॥೧೧॥
ವಿರರಾಮೈವಮುಕ್ತ್ವಾ ಸಃ ವಾಚಂ ವಾನರಪುಙ್ಗವಃ ।
ತಾಂ ತು ರಾಮಕಥಾಂ ಶ್ರುತ್ವಾ ವೈದೇಹೀ ವಾನರರ್ಷಭಾತ್ ।
ಉವಾಚ ವಚನಂ ಸಾನ್ತ್ವಂ ಇದಂ ಮಧುರಯಾ ಗಿರಾ ॥೧೨॥
ಯಾನಿ ರಾಮಸ್ಯ ಲಿಙ್ಗಾನಿ ಲಕ್ಷ್ಮಣಸ್ಯ ಚ ವಾನರ ॥೧೩॥

ಪ್ತನಾಗಿ, ಹೆಂಡತಿಯಾದ ಸೀತೆಯನ್ನೂ ತಮ್ಮನಾದ ಲಕ್ಷ್ಮಣನನ್ನೂ ಕರೆದುಕೊಂಡು ಅರಣ್ಯಕ್ಕೆ ಹೊರಟುಹೋದನು ॥೬॥

ಆಮೇಲೆ, ಅವನ ಹಂಡತಿಯನ್ನು ಪಂಚವಟಿಯಲ್ಲಿ ರಾವಣನು ಅಪಹರಿಸಿದನು. ಅವಳನ್ನು ಹುಡುಕಿಕೊಂಡು ಅರಣ್ಯದಲ್ಲಿ ಸಂಚರಿಸುತಿರುವಾಗ, ರಾಮನು ಸುಗ್ರೀವನಿಗೆ ಮಿತ್ರನಾದನು॥

ಒಳಿಕ ರಾಮನಿಂದ ಆಜ್ಞಪ್ತನಾಗಿ ಕಪಿರಾಜನಾದ ಆ ಸುಗ್ರೀವನು, ನಾಲ್ಕುದಿಕ್ಕುಗಳಿಗೂ ಕೋಟಿಕೋಟಿ ಸಂಖ್ಯಾಕವಾಗಿ ವಾನರರನ್ನು ಕಳುಹಿಸಿದನು ॥೮॥

ಹೀಗೆ ಕಳುಹಿಸಲ್ಪಟ್ಟಿರುವ ಕಪಿಗಳಲ್ಲೊಬ್ಬನಾದ ನಾನು, ದಕ್ಷಿಣದಿಕ್ಕಿನಲ್ಲಿ ಹುಡುಕುತ ಇಲ್ಲಿಗೆ ಬಂದೆನು ಇಲ್ಲಿ ಈ ರಾತ್ರಿ ಲಂಕಿನಿಯನ್ನು ಕೂಂದು, ಆಮೇಲೆ ಲಂಕಾಪಟ್ಟಣವನ್ನೆಲ್ಲ ಜನ್ನಾಗಿ ನೋಡಿ, ಕ್ರಮೇಣ ಈ ಅಶೋಕವನವನ್ನು ಹೊಂದಿ, ಇಲ್ಲಿ ರಾವಣನನ್ನು ಪ್ರಹರಿಸಿ, ಈಗ ಈ ಸೀತೆಯನ್ನು ನೋಡಿದೆನು ಸೀತೆಯ ರೂಪವೂ ಅವಳ ವರ್ಣವೂ ಅವಳ ಕಾಂತಿಯೂ ಹೇಗಿರುವುವಂದು ನಾನು ರಾಘವನ ಮುಖದಿಂದ ಕೇಳಿದ್ದೆನೋ, ಅದೇ ರೀತಿಯಲ್ಲಿರುವ ರೂಪ ವರ್ಣ ಕಾಂತಿಗಳುಳ್ಳ ಇವಳನ್ನು ನಾನು ಇಲ್ಲಿ ಕಂಡೆನು ॥೯–೧೧॥

ಇಷ್ಟು ಮಾತನ್ನು ಹೇಳಿ, ಆ ವಾನರೋತ್ತಮನು ಸುಮ್ಮನಾದನು ಈ ರೀತಿಯಾಗಿ ಆ ಕಪಿವುಂಗವನ ಮುಖದಿಂದ ರಾಮಚಂದ್ರನ ವೃತ್ತಾಂತವನ್ನು ಕೇಳಿ, ಸೀತಾದೇವಿಯು ಕೇವಲ ಸಮಾಧಾನಪೂರ್ವಕವಾಗಿ ಈ ಮಧುರವಾದ ಮಾತನ್ನು ಹೇಳಿದಳು ॥೧೨॥

ಎಲೈ ವಾನರನೆ ! ರಾಮನಿಗೂ ಲಕ್ಷ್ಮಣನಿಗೂ ಇರತಕ್ಕ ಚಿಹ್ನೆಗಳಾವುವು ? ಆ ರಾಮನ ಅವಯವಸನ್ನಿವೇಶ ಹೇಗಿರುವುದು ? ಅವನ ಆಕಾರ ಹೇಗಿರುವುದು ? ಇವುಗಳನ್ನೆಲ್ಲ ನೀನು

ಕೀದೃಶಂ ತಸ್ಯ ಸಂಸ್ಥಾನಂ ರೂಪಂ ವಾ ತಸ್ಯ ಕೀದೃಶಮ್ ।
ತಾನಿ ಮಹ್ಯಂ ಸಮಾಚಕ್ಷ್ವ ವಿಶ್ವಾಸೋ ಯೇನ ಮೇ ತ್ವಯಿ ॥೧೪॥

ಏವಮುಕ್ತಸ್ತು ವೈದೇಹ್ಯಾ ಹನೂಮಾ ಪವನಾತ್ಮಜಃ ।
ತತೋ ರಾಮಂ ಯಥಾತತ್ತ್ವಂ ಆಖ್ಯಾತುಮುಪಚಕ್ರಮೇ ॥೧೫॥

ರಾಮಃ ಕಮಲಪತ್ರಾಕ್ಷಃ ಸರ್ವಭೂತಮನೋಹರಃ ।
ವಿಪುಲಾಂಸೋ ಮಹಾಬಾಹುಃ ಕಮ್ಬು ಗ್ರೀವೋ ಮಹಾಹನುಃ ॥೧೬॥

ಗೂಢಜತ್ರುಃ ಸುತಾಮ್ರಾಕ್ಷೋ ರಾಮೋ ದೇವಿ ಜನೈಃ ಶ್ರುತಃ ।
ದುನ್ದುಭಿಸ್ವನನಿರ್ಘೋಷಃ ಸ್ನಿಗ್ಧವರ್ಣಃ ಪ್ರತಾಪವಾ ।
ರಾಮಃ ಸಮವಿಭಕ್ತಾಙ್ಗೋ ವರ್ಣಂ ಶ್ಯಾಮಂ ಸಮಾಶ್ರಿತಃ ॥೧೭॥

ತ್ರಿಸ್ಥಿರಸ್ತ್ರಿಪ್ರಲಮ್ಬಶ್ಚ ತ್ರಿಸಮಸ್ತ್ರಿಷು ಚೋನ್ನತಃ ।

ನನಗೆ ವಿಶದವಾಗಿ ಹೇಳು ಇದನ್ನು ಸರಿಯಾಗಿ ಹೇಳಿದಪಕ್ಷದಲ್ಲಿ, ನಿನ್ನಲ್ಲಿ ನನಗೆ ನಂಬುಗೆ ಹುಟ್ಟುವುದು ॥೧೩-೧೪॥

ಹೀಗೆಂದು ಸೀತಾದೇವಿಯಿಂದ ಹೇಳಲ್ಪಟ್ಟ ವಾಯುಪುತ್ರನಾದ ಹನುಮಂತನು, ಬಳಿಕ ಯಥಾಸ್ಥಿತವಾಗಿ ರಾಮನ ಸ್ವರೂಪವನ್ನು ಹೇಳುವುದಕ್ಕುಪಕ್ರಮಿಸಿದನು ॥೧೫॥

ಎಲೌ ದೇವಿ! ಹಾಗಾದರೆ ಅರಿಕೆಮಾಡುವೆನು, ಕೇಳು —ರಾಮನು, ತಾವರೆಯೆಲೆಯಂತೆ ಕಣ್ಣುಳ್ಳವನು, ಸರ್ವಭೂತಗಳಿಗೂ ಮನೋಹರನಾದವನು, ಅವನ ಹೆಗಲು ವಿಶಾಲವಾಗಿಯೂ, ಬಾಹುಗಳು ದೀರ್ಘವಾಗಿಯೂ ಇರುವುವು, ಅವನ ಕುತ್ತಿಗೆಯು ಶಂಖದಂತಿರುವುದು, ಹನುಪ್ರದೇಶವು (ಮುಸುಡಿ) ವಿಶಾಲವಾಗಿರುವುದು, ಅವನ ಹೆಗಲ ಮೂಳಗಳು ಮುಚ್ಚಿಕೊಂಡಿರುವುವು, ಕಣ್ಣುಗಳು ಆರಕ್ತವಾಗಿರುವುವು ಎಲೌ ದೇವಿ! ಈ ರಾಮನು ಸಮಸ್ತ ಜನರಿಂದಲೂ ಚೆನ್ನಾಗಿ ಶ್ರುತನಾಗಿರುವನು ಅವನ ಧ್ವನಿಯು ದುಂದುಭಿಘೋಷಕ್ಕೆ ಸಮಾನವಾಗಿರುವುದು, ಅವನ ಶರೀರಕಾಂತಿಯು ಸರ್ವದಾ ಮಿರುಗುತಿರುವುದು, ಅವನ ಪ್ರತಾಪವು ಅತಿಪ್ರಶಸ್ತವಾದುದು, ಅವನ ಆಕಾರವು, ಅಧಿಕವಾಗಿಯೂ ನ್ಯೂನವಾಗಿಯೂ ಇರದೆ ಪರ್ಯಾಪ್ತವಾಗಿರುವುದು, ಅವನ ಅವಯವಗಳೂ ಅದೇ ರೀತಿಯಲ್ಲಿ ಸಮವಾಗಿ ವಿಭಕ್ತವಾಗಿರುವುವು, ಅವನ ಶರೀರವರ್ಣವು ನೀಲಮೇಘದಂತೆ ಕಪ್ಪಾಗಿರುವುದು ॥೧೬-೧೭॥

ಅವನ ಎದೆ ಮಣಿಕಟ್ಟು ಮುಷ್ಟಿ ಇವು ಮೂರೂ ಸ್ಥಿರವಾಗಿದ್ದುಗೊಂಡು, ಅವನು ನೃಪತಿಯೆಂಬುದನ್ನು ಸೂಚಿಸುತಿರುವುವು, ತೋಳು ಹುಬ್ಬು ಜನನೇಂದ್ರಿಯ ಇವು ಮೂರೂ ದೀರ್ಘವಾಗಿದ್ದುಗೊಂಡು, ಅವನು ಚಿರಜೀವಿಯಂಬುದನ್ನು ಸೂಚಿಸುತಿರುವುವು, ಕೇಶಾಗ್ರ ವೃಷಣ ಮಂಡಿ ಇವು ಮೂರೂ ವಕ್ರವಿಲ್ಲದೆ ಸಮವಾಗಿದ್ದುಗೊಂಡು, ಅವನು ಭೂಪತಿಯಂಬುದನ್ನು ಸೂಚಿಸುತಿರುವುವು, ಉದರ ಹೃದಯ ನಾಭಿಯ ಸುತ್ತಲಿನ ಪ್ರದೇಶ ಇವು ಮೂರೂ ಉನ್ನತ

ತ್ರಿತಾಮ್ರಸ್ತ್ರಿಷು ಚ ಸ್ನಿಗ್ಧೋ ಗಮ್ಭೀರಸ್ತ್ರಿಷು ನಿತ್ಯಶಃ ॥೧೪॥
ತ್ರಿವಳೀವಾಂಸ್ತ್ರ್ಯವನತಃ ಚತುರ್ವ್ಯಙ್ಗಸ್ತ್ರಿಷೀರ್ಘವಾನ್ ।
ಚತುಷ್ಕಲಕ್ಷ್ಮತುಲ್ಯೋಷ್ಠಃ ಚತುಷ್ಕಿಷ್ಕುಕೃಕ್ಷತುಸ್ಸಮಃ ॥೧೫॥
ಚತುರ್ದಶಸಮದ್ವಂದ್ವಃ ಚತುರ್ದಂಷ್ಟ್ರಶ್ಚತುರ್ಗತಿಃ ।

ವಾಗಿದ್ದುಗೊಂಡು, ಅವನು ನರಪತಿಯಂಬುದನ್ನು ಸೂಚಿಸುತಿರುವುವು, ನೇತ್ರಾಂತ ಸ್ಪೃಶಾದ ತಲ ಇವು ಮೂರೂ ರಕ್ತವಾಗಿದ್ದುಗೊಂಡು ಅವನು ಸುಪಿಯಂಬುದನ್ನು ಸೂಚಿಸುತಿರುವುವು, ಪಾದರೇಖ ಕೇಶಪಾಶ ಜನನೇಂದ್ರಿಯದ ಕಟ್ಟು ಇವು ಮೂರೂ ಸ್ನಿಗ್ಧವಾಗಿದ್ದುಗೊಂಡು, ಅವನು ಮಹಾಭಾಗ್ಯವಂತನಂಬುದನ್ನು ಸೂಚಿಸುತಿರುವುವು, ಸ್ವರ ನತ್ವ ನಾಭಿ ಇವು ಮೂರೂ ಗಂಭೀರವಾಗಿದ್ದುಗೊಂಡು, ಅವನು ಮಹಾಪುರುಷನಂಬುದನ್ನು ಸೂಚಿಸುತಿರುವುವು ॥೧೪॥

ಅವನ ಉದರಪ್ರದೇಶದಲ್ಲಿಯೂ ಕಂಠಸ್ರದೇಶದಲ್ಲಿಯೂ ವಳಿತ್ರಯವಿದ್ದುಗೊಂಡು ಅವನು ಪುಣ್ಯಶಾಲಿಯಂಬುದನ್ನು ಸೂಚಿಸುತ್ತಿರುವುದು, ಸ್ತನ ಸ್ತನಾಗ್ರ ಪಾದರೇಖ ಇವು ಮೂರೂ ಅವನತವಾಗಿದ್ದುಗೊಂಡು, ಅವನು ಸುಖಭಾಜನನಂದೂ ಧನಾಢ್ಯನಂದೂ ಸೂಚಿಸುತಿರುವುವು, ಕುತ್ತಿಗ ಜನನೇಂದ್ರಿಯ ಬೆನ್ನು ಮೊಣಕಾಲು ಇವು ನಾಲ್ಕೂ ಹ್ರಸ್ವವಾಗಿದ್ದುಗೊಂಡು, ಅವನು ಮಹಾ ಪೂಜ್ಯನೆಂದು ಸೂಚಿಸುತಿರುವುವು, ಅವನ ತಲಯು, ಸಮವಾಗಿ ವರ್ತುಲವಾಗಿಯೂ ಛತ್ರಾಕಾರವಾಗಿಯೂ ವಿಶಾಲವಾಗಿಯೂ ಇದ್ದುಗೊಂಡು, ಅವನು ಚಿರಕಾಲ ದೊರೆತನವನ್ನು ಅನುಭವಿಸುವನೆಂದೂ ದಿಘ್ರ್ಘಾಯುಷ್ಕನಾಗಿ ಬಾಳುವನೆಂದೂ ಸೂಚಿಸುತಿರುವುದು, ಅವನ ಅಂಗುಷ್ಠಮೂಲದಲ್ಲಿರುವ ನಾಲ್ಕು ರೇಖೆಗಳು, ಅವನು ಚತುರ್ದಜ್ಞನೆಂಬುದನ್ನು ಸೂಚಿಸುತಿರುವುವು, ಅವನು ನಾಲ್ಕು ಕಿಷ್ಕು (ಇಪ್ಪತ್ತುನಾಲ್ಕು ಅಂಗುಲಕ್ಕೆ ಕಿಷ್ಕು ಎಂದು ಸಂಜ್ಞೆ ಒಬ್ಬ ತೊಂಭತ್ತಾರು ಅಂಗುಲದೆತ್ತರವಾಗುವುದು)ಗಳಷ್ಟು ಔನ್ನತ್ಯವುಳ್ಳವನಾಗಿರುವುದರಿಂದ, ಅವನು ದಿವ್ಯಪುರುಷನೆಂಬುದು ಸೂಚಿತವಾಗುತಿರುವುದು, ಅವನ ಎರಡು ಬಾಹುಗಳು ಎರಡು ಊರುಗಳು ಎರಡು ಜಾನುಗಳು ಎರಡು ಗಂಡಗಳು ಇವು ಒಂದೇ ಸಮವಾಗಿರುವುದರಿಂದ, ಅವನು ಮಹಾತ್ಮನೆಂದು ಬೋಧಿತವಾಗುತಿರುವುದು ॥೧೫॥

ಆ ರಾಮಚಂದ್ರನ ಎರಡು ಹುಬ್ಬುಗಳು, ಎರಡು ಮೂಗಿನಸೊಳ್ಳೆಗಳು, ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ತುಟಿಗಳು, ಎರಡು ಸ್ತನಾಗ್ರಗಳು, ಎರಡು ಮೂಗಿನಕೈಗಳು, ಎರಡು ಮಣಿಬಂಧಗಳು, ಎರಡು ಮಂಡಿಗಳು, ಎರಡು ವೃಷಣಗಳು, ಎರಡು ಕಟಿ (ಸೊಂಟ)ಗಳು, ಎರಡು ಕೈಗಳು, ಎರಡು ಕಾಲುಗಳು, ಎರಡು ತೊಡೆಯ ಮಾಂಸಗ್ರಂಥಿಗಳು, ಇವು ಪದಿನಾಲ್ಕು ಒಂದೇ ಸಮವಾಗಿರುವುದರಿಂದ, ಅವನು ರಾಜೋತ್ತಮನೆಂಬುದು ಸೂಚಿತವಾಗುತಿರುವುದು, ಅವನ ನಾಲ್ಕು ಹಲ್ಲುಗಳು ದಂಷ್ಟ್ರಾಕಾರವಾಗಿ ಸ್ವಲ್ಪ ಉಬ್ಬಿಕೊಂಡಿರುವದರಿಂದ, ಅವನಲ್ಲಿ ಅತ್ಯಂತ ಶುಭಲಕ್ಷಣಗಳುಂಟೆಂದು ಗೊತ್ತಾಗುತಿರುವುದು, ಅವನ ನಡಿಗೆಯು, ಗಜ ಸಿಂಹ ಶಾರ್ದೂಲ ವೃಷಭ ಇವುಗಳ ನಡಿಗೆಯನ್ನು ಹೋಲುತಿರುವುದು, ಅವನ ತುಟಿಯು, ಪಂಬಾಳದಂತೆ ಅರುಣವಾಗಿಯೂ ಮಾಂಸಲವಾಗಿಯೂ ಇರುವುದು, ಹಸುವು ಮಾಂಸಪೂರ್ಣವಾಗಿ

ಮಹೋತ್ಪಹನುನಾಸಶ್ಚ ಪಞ್ಚಾಸ್ಮಿಗ್ಧೋತ್ಪವಂಶವಾ ॥೦೦॥
ದಶಪದ್ಮೋ ದಶಬೃಹತ್ ತ್ರಿಭಿರ್ವ್ಯಾಪ್ತೋ ದ್ವಿಶುಕ್ಲವಾ ।
ಷಡುನ್ನತೋ ನವತನುಃ ತ್ರಿಭಿರ್ವ್ಯಾಪ್ತೋತಿ ರಾಘುವಃ ॥೦೧॥
ಭ್ರಾತಾ ಚ ತಸ್ಯ ದ್ವೈಮಾತ್ರಃ ಸೌಮಿತ್ರಿರಪರಾಜಿತಃ ।
ಅನುರಾಗೇಣ ರೂಪೇಣ ಗುಣೇಶ್ಚೈವ ತಥಾವಿಧಃ ॥೦೦॥
ಪವಮುಕ್ತ್ವಾ ನಮಸ್ಕೃತ್ಯ ಸೀತಾಂ ಲೋಕನಮಸ್ಕೃತಾಮ್ ।
ಸೀತಾಯಾಶ್ಚಾಗ್ರತೋ ವೀರಃ ತಸ್ಥೌ ಮುಕುಳಿತಾಞ್ಜಲಿಃ ॥೦೩॥
ಪ್ರಾಹ ರಾಮೋದಿತಂ ಸರ್ವಂ ವಿಶ್ವಾಸಾಯ ಮಹಾಕಪಿಃ ।
ಮುದ್ರಿಕಾಂ ಪ್ರದದೌ ತಸ್ಯೈ ರಾಮಹಸ್ತವಿಭೂಷಣಮ್ ॥೦೪॥

ರುವುದು , ನಾಸಿಕೆಯು ದೀರ್ಘವಾಗಿಯೂ ಉನ್ನತವಾಗಿಯೂ ಇರುವುದು , ಅವನ ಕೇಶ ನೇತ್ರ ದಂತ ಚರ್ಮ ಪಾದತಲಗಳು ಜಿಡ್ಡಾಗಿರುವುದರಿಂದ, ಅವನಲ್ಲಿ ಸೌಭಾಗ್ಯಾದಿಗಳು ಸೂಚಿತವಾಗು ತಿರುವವು , ಬೆನ್ನು ಮೂಳ ಶರೀರ ಹಸ್ತ ಪಾದ ಅಂಗುಳಿ ನಾಸಿಕೆ ನೇತ್ರ ಕರ್ಣ ಇವುಗಳು ಉದ್ದ ವಾಗಿದ್ದುಗೂಂಡು, ಅವನಮಹಾಭಾಗ್ಯವನ್ನು ಸೂಚಿಸುತ್ತಿರುವವು ॥೨೦॥

ಅವನ ಮುಖ ನೇತ್ರ ಜಿಹ್ವೆ(ಬಾಯಿ) ಜಿಹ್ವೆ ಓಷ್ಠ ತಾಲು ಸ್ತನ ನಖ ಕರ ಪಾದ ಇವುಗಳು ಪದ್ಮಕ್ಕೆ ಸದೃಶವಾಗಿರುವವು , ಉರಸ್ಸು ಶಿರಸ್ಸು ಲಲಾಟ ಗ್ರೀವ ಜಾಹು ಅಂಸ ನಾಭಿ ಪಾರ್ಶ್ವ ಪೃಷ್ಠ ಸ್ವರ ಇವುಗಳು ಸ್ಥೂಲವಾಗಿರುವುವು , ಅವನ ತೇಜಸ್ಸೂ ಯಶಸ್ಸೂ ಸಂಪತ್ತೂ ಲೋಕದ ಲೆಲ್ಲ ವ್ಯಾಪಿಸಿಕೊಂಡಿರುವುವು , ದಂತವೂ ನೇತ್ರವೂ ಶುಕ್ಲವರ್ಣವಾಗಿರುವುವು , ಕಕ್ಷ (ಕೊಂ ಕುಳು) ಉದರ ವಕ್ಷಸ್ಸು ಘ್ರಾಣ ಸ್ಕಂಧ ಲಲಾಟ ಇವುಗಳು ಉನ್ನತವಾಗಿರುವುವು , ಕೇಶ ಶ್ಮಶ್ರು ನಖ ಲೋಮ ತ್ವಕ್ ಅಂಗುಳಿ ಅಂಗುಳಿಪರ್ವ (ಜರಳುಗಿಣ್ಣು) ಒನಸೇದ್ರಿಯ ಬುದ್ದಿ ದೃಷ್ಟಿ ಇವು ಹತ್ತೂ ಸೂಕ್ಷ್ಮವಾಗಿರುವವು ಮತ್ತು, ಆ ರಾಘವನು, ಪೂರ್ವಾಹ್ಣ ಮಧ್ಯಾಹ್ನ ಅಪರಾಹ್ಣ ಗಳಲ್ಲಿ ಧರ್ಮ ಅರ್ಥ ಕಾಮಗಳ ವಿಚಾರವನ್ನು ಮಾಡುತ್ತಿರುವನು ॥೨೧॥

ಇವನ ತಮ್ಮನಾದ ಲಕ್ಷ್ಮಣನೂ ಇದೇ ಲಕ್ಷಣಗಳಿಂದ ಯುಕ್ತನಾಗಿರುವನು , ಇವನು, ಸುಮಿತ್ರೆಗೆ ಔರಸಪುತ್ರನಾಗಿಯೂ ಕೌಸಲ್ಯೆಗೆ ಪ್ರೇಮಪುತ್ರನಾಗಿಯೂ ಇರುವನು , ಯಾರೂ ಇವ ನನ್ನು ಜಯಿಸಲಾರರು , ಜನಾನುರಾಗದಲ್ಲಿಯೂ ರೂಪದಲ್ಲಿಯೂ ಗುಣಗಳಲ್ಲಿಯೂ ಕೂಡ, ಇವನೂ ರಾಮನಂತೆಯೇ ಇರುವನು (ಎಂಬುದಾಗಿ ಹನುಮಂತನು, ಸೀತೆಯನ್ನು ಕುರಿತು ಹೇಳಿದನು) ॥೨೨॥

ಹೀಗೆ ಹೇಳಿ, ಅನಂತರ ಸರ್ವಲೋಕನಮಸ್ಕೃತಳಾದ ಸೀತೆಗೆ ನಮಸ್ಕಾರಮಾಡಿ, ಆ ಮಹಾ ವೀರನಾದ ಹನುಮಂತನು, ಅವಳ ಮುಂದುಗಡೆ ಅಂಜಲಿಬಂಧಮಾಡಿ ನಿಂತುಗೊಂಡನು ॥೨೩॥

ಅನಂತರ, ಅವಳಿಗೆ ನಂಬುಗೆ ಹುಟ್ಟುವುದಕ್ಕೋಸ್ಕರ, ಶ್ರೀರಾಮನಿಂದ ಹೇಳಲ್ಪಟ್ಟುದ ನೆಲ್ಲ ಹೇಳಿದನು , ಮತ್ತು, ಶ್ರೀರಾಮನ ಹಸ್ತಕ್ಕೆ ಅಲಂಕಾರವಾಗಿದ್ದ ಮುದ್ರಿಕೆಯನ್ನೂ ಅವಳಿಗೆ

ಗೃಹೀತ್ವಾ ಮುದ್ರಿಕಾಂ ಸೀತಾ ವಿಶ್ವಸ್ಯಾಹಾಜ್ಞಾನಾಸುತಮ್ ॥೨೫॥
ನಿವರ್ತಸ್ವ ಪುನಃ ಶೀಘ್ರಂ ರಾಕ್ಷಸಾಮಾಯಿನಃ ಖಲಾಃ ।
ವಿಪನ್ನೇ ತ್ವಯಿ ವೀರಾತ್ರ ರಾಮಕಾರ್ಯಂ ಹತಂ ಪರಮ್ ।
ಶಿರೋಮಣಿಂ ಪ್ರಗೃಹ್ಯಾಮುಂ ಗಚ್ಛ ಶೀಘ್ರಮಿತೋನಘ ॥೨೬॥
ಬಲೈಃ ಸಮಗ್ರೈರ್ಯದಿ ಮಾಂ ರಾವಣಂ ಜಿತ್ಯ ಸಂಯುಗೇ ।
ವಿಜಯೀ ಸ್ವಾಂ ಪುರೀಂ ಯಾಯಾತ್ ತತ್ತು ಮೇ ಸ್ಯಾದ್ಯಶಸ್ಕರಮ್ ॥೨೭॥
ತದ್ಯಥಾ ತಸ್ಯ ಕೀರ್ತಿಃ ಸ್ಯಾತ್ ತಥಾ ತ್ವಮುಪಪಾದಯ ।
ಗಚ್ಛ ಶೀಘ್ರಮಿತೋ ವೀರ ಯಾವನ್ನಾನ್ಯೋವಬುಧ್ಯತೇ ।
ರಾವಣೋಪಿ ಗೃಹಂ ಗತ್ವಾ ಮಾಯಾಂ ದಾಸ್ಯತಿ ತೇ ಕಪೇ ॥೨೮॥
ಏವಮುಕ್ತಸ್ತು ವೈದೇಹ್ಯಾ ಪ್ರಹಸನ್ ವಾಕ್ಯಮಬ್ರವೀತ್ ॥೨೯॥
ನಾಹಂ ಭೀತೋಸ್ಮಿ ರಕ್ಷೋಭ್ಯೋ ನ ಭೀತಿರ್ಮಯಿ ವರ್ತತೇ ।
ತೃಣಪ್ರಾಯಾರಾಕ್ಷಸಾಮೀ ಮಯಿ ಮಾಯಾ ನ ಸಜ್ಜತೇ ॥೩೦॥

ಸಮರ್ಪಿಸಿದನು ಆಮೇಲೆ, ಸೀತೆಯು ಆ ಮುದ್ರಿಕೆಯನ್ನು ತೆಗೆದುಕೊಂಡು ಅವನಲ್ಲಿ ನಂಬುಗೆಯಿಟ್ಟು ಈರೀತಿಯಾಗಿ ಹೇಳಿದಳು ॥೨೪-೨೫॥

ಎಲೈ ಮಹಾವೀರನೆ! ನೀನು ಬೇಗನೆ ಇಲ್ಲಿಂದ ಹಿಂದಿರುಗಿ ಹೊರಡುಹೋಗು ರಾಕ್ಷಸರು ಮಹಾಮಾಯಾವಿಗಳು, ಮಹಾನೀಚರು ನೀನು ಇಲ್ಲಿ ಇವುಂದ ನಿಪತನಾಗಿಬಿಟ್ಟ ಪಕ್ಷದಲ್ಲಿ, ರಾಮನ ಕಾರ್ಯವೆಲ್ಲವೂ ಹಾಳಾಗುವುದು ಎಲೈ ಪುಣ್ಯಾತ್ಮನೆ! ಇದೋ ನನ್ನ ಈ ಚೂಡಾಮಣಿಯನ್ನು ತೆಗದುಕೊಂಡು ಇಲ್ಲಿಂದ ಬೇಗನೆ ಹೊರಡು ॥೨೬॥

ಶ್ರೀರಾಮನು ಸಂಪೂರ್ಣವಾದ ಸೈನ್ಯಗಳೂಡನೆ ಬಂದು- ಈ ರಾವಣನನ್ನು ಯುದ್ದದಲ್ಲಿ ಗೆದ್ದು- ಜಯಶಾಲಿಯಾಗಿ- ನನ್ನನ್ನು ತನ್ನ ಊರಿಗೆ ಕರೆದುಕೊಂಡು ಹೋಗುವನಾದಪಕ್ಷದಲ್ಲಿ, ಅದು ನನಗೆ ಕೀರ್ತಿಕರವಾಗುವುದು ॥೨೭॥

ಅದುಕಾರಣ, ಈಗ ಅವನಿಗೆ ಹೇಗೆ ಯಶಸ್ಸು ಬರಬೇಕೋ- ಹಾಗೆ ಸಮಸ್ತ ಕಾರ್ಯವನ್ನೂ ನೀನು ಏರ್ಪಡಿಸುವನಾಗು ಎಲೈ ಮಹಾವೀರನೆ! ಇಲ್ಲಿ ಮತ್ತಾರಾದರೂ ಏಳುವುದರೊಳಗಾಗಿ, ನೀನು ಇಲ್ಲಿಂದ ಹೊರಟುಹೋಗು ಎಲೈ ಮಹಾಕಪಿಯ! ರಾವಣನೂ ಕೂಡ ಈಗ ಮನೆಗ ಹೋಗಿ ನ್ನ ವಿಷಯದಲ್ಲಿ ಕಪಟಾರಣೆಯನ್ನು ಮಾಡುವನು ಇದರಲ್ಲೆಲ್ಲ ನೀನು ಬಹು ಜಾಗರೂಕನಾಗಿರತಕ್ಕುದು ॥೨೮॥

ಹೀಗೆಂದು ಸೀತಾದೇವಿಯಿಂದ ಹೇಳಲ್ಪಟ್ಟವನಾದ ಆ ಹನೂಮಂತನು, ಅವಳ ಮಾತುಗಳನ್ನೆಲ್ಲ ಚೆನ್ನಾಗಿ ಪರ್ಯಾಲೋಚಿಸಿ, ಸ್ವಲ್ಪ ಮಂದಹಾಸಮಾಡುತ, ಅವಳನ್ನು ಕುರಿತು ಈ ಮಾತು ಹೇಳಿದನು ॥೨೯॥

ಎಲೌ ಮಾತೆಯೆ! ನಾನು ಈ ರಾಕ್ಷಸರಿಗೆ ಹೆದರುವುದಿಲ್ಲ, ಸ್ವಭಾವವಾಗಿಯೇ ನನ್ನಲ್ಲಿ ಭಯವೆಂಬುದೇ ಇಲ್ಲ. ನನಗೆ ಈ ರಾಕ್ಷಸರೆಲ್ಲರೂ ತೃಣಪ್ರಾಯರಾಗಿರುವರು, ಇವರ ಹತ್ತಿರವೆಯೊಂದೂ ನನ್ನಲ್ಲಿ ಉಪಯೋಗಿಸುವುದಿಲ್ಲ ॥೩೦॥

ಪಲಾಯನಂ ಚೋರವನ್ಮೇ ರಾಮದೂತಸ್ಯ ನೋಚಿತಮ್ ।
ವನಭಙ್ಗಂ ಕರಿಷ್ಯಾಮಿ ಪ್ರಥಮಂ ಯುದ್ಧಕಾರಣಮ್ ॥೩೧॥
ನ ಸಾಮ ರಕ್ಷಸ್ಸು ಗುಣಾಯ ಕಲ್ಪತೇ ನ ದಾನಮರ್ಥೋಪಚಿತೇಷ್ವಯುಜ್ಯತೇ ।
ನ ಭೇದಸಾಧ್ಯಾ ಬಲದರ್ಪಿತಾ ಜನಾಃ ಪರಾಕ್ರಮೋ ದೇವಿ ಮಹೇಹ ರೋಚತೇ ॥೩೨॥
ಬಲಸಾರಂ ರಾವಣಸ್ಯ ಸುತಮಕ್ಷಯನಾಮಕಮ್ ।
ಚತುರ್ಭಾಗಂ ಹನಿಷ್ಯಾಮಿ ತತೋ ಲಙ್ಕಾಂ ದಹಾಮಿ ಚ ॥೩೩॥
ತತಃ ಶಿರೋಮಣಿಂ ಗೃಹ್ಯ ಗಮಿಷ್ಯಾಮಿ ರಘೂತ್ತಮಮ್ ।
ಸಮಾಗತೋ ರಾಮದೂತಃ ಇತಿ ಬಿಭ್ಯತುರಾಕ್ಷಸಾಃ ॥೩೪॥
ಇತ್ಯುಕ್ತ್ವಾ ಪ್ರಯಯೌ ವೀರೋ ವನಭಙ್ಗಾಯ ರಕ್ಷಸಃ ।
ಜಾಜ್ವಲ್ಯಮಾನೋ ದೇಹೇನ ರಕ್ಷಸಾಂ ಭಯಕಾರಣಾತ್ ॥೩೫॥
ತತೋ ವನಂ ಸಮಾವಿಶ್ಯ ಹನೂಮಾನ್ ಮಾರುತಾತ್ಮಜಃ ।
ಲಯಕಾಲಸಮುತ್ಪನ್ನಮಹಾವಾತಇವಾಚರತ್ ॥೩೬॥

ಶ್ರೀರಾಮನ ದೂತನಾಗಿದ್ದುಗೊಂಡು ನಾನು ಚೋರನಂತೆ ಓಡಿಹೋಗುವುದು ಉಚಿತವಲ್ಲ ಅದುಕಾರಣ, ಈಗ ಮೊದಲು ಯುದ್ಧಕ್ಕೆ ಕಾರಣವಾಗಿ ಈ ಅಶೋಕವನವನ್ನು ಮುರಿದು ಹಾಕುವೆನು ॥೩೧॥

ಅದೇಕನ್ನುವಮೋ ! ಜನ್ಮತಃ ರಾಕ್ಷಸರಾಗಿರತಕ್ಕವರಲ್ಲಿ ನಾನೋಪಾಯವು ಗುಣಕಾರಿಯಾಗಲಾರದು, ಇವರು ದ್ರವ್ಯಸಂಪೂರ್ಣರಾಗಿರುವುದುಂದ, ಇವರಲ್ಲಿ ದಾನೋಪಾಯವೂ ಯುಕ್ತವಾಗುವುದಿಲ್ಲ, ಬಲದಿಂದ ಕೂಡ್ಪರತಕ್ಕವರಂದಿಗೂ ಭೇದೋಪಾಯಕ್ಕೆ ವಶರಾಗುವುದಿಲ್ಲ ಪೀಗಿರುವುದುಂದ, ಇವರಲ್ಲಿ ಪರಾಕ್ರಮ ತೋರಿಸುವುದೇ ಯುಕ್ತನೆಂದು ನನಗ ತೋರುವುದು ॥೩೨॥

ಅದುಕಾರಣ, ಈಗ ನಾನು ರಾವಣನ ಬಲಸಾರವಲ್ಲ ಚತುರ್ಥಾಂಶವನ್ನೂ, ಅಕ್ಷಯಕುಮಾರನೆಂದು ಹಸರುಳ್ಳ ರಾವಣಪುತ್ರನನ್ನೂ ಕೊಂದುಬಿಡುವೆನು, ಆಮೇಲೆ ಲಂಕಾಪಟ್ಟಣವನ್ನೂ ಸುಟ್ಟುಬಿಡುವನು ॥೩೩॥

ಅನಂತರ, ಈ ಚೂಡಾಮಣಿಯನ್ನು ಕೈಯಲ್ಲಿ ಪಿಡಿದುಕೊಂಡು ಶ್ರೀರಾಮನ ಸನ್ನಿಧಿಗ ಹೊರಮಹೋಗುವೆನು ಆಮೇಲೆ, ರಾಮನ ದೂತನು ಬಂದನಂದು ಕೇಳಿದಮಾತ್ರದಿಂದಲೇ, ಈ ರಾಕ್ಷಸರೆಲ್ಲರೂ ಹದರಬೇಕಾಗುವುದು ॥೩೪॥

ಹೀಗೆಂದು ಸೀತಾದೇವಿಗ ವಿಜ್ಞಾಪಿಸಿ, ಮಹಾವೀರನಾದ ಹನುಮಂತನು, ರಾಕ್ಷಸರಿಗೆ ಭಯವುಂಟಾಗಲೆಂದು ಜಾಜ್ವಲ್ಯವಾದ ರೂಪವನ್ನು ಧರಿಸಿಕೊಂಡು, ಆ ರಾವಣನ ಅಶೋಕವನವನ್ನು ಮುರಿಯುವುದಕ್ಕಾಗಿ ಹೊರಟುಬಿಟ್ಟನು ॥೩೫॥

ಆ ಬಳಿಕ, ಮಾರುತಪುತ್ರನಾದ ಹನುಮಂತನು, ಅಶೋಕವನವನ್ನು ಪ್ರವೇಶಿಸಿ, ಪ್ರಳಯಕಾಲದಲ್ಲಿ ಉತ್ಪನ್ನವಾದ ಮಹಾವಾಯುವಿನಂತೆ ಅಲ್ಲಿ ಸಂಚರಿಸುತಿದ್ದನು ॥೩೬॥

ರಾವಣಸ್ಯ ಪ್ರಿಯಂ ರಮ್ಯಂ ವನಂ ನನ್ದನಸಮ್ನಿಭಮ್ ।
ಉತ್ಪಾಟ್ಯ ತದ್ವನಂ ಸರ್ವಂ ನಿವೃತ್ತಮಕರೋತ್ ಕ್ಷಣಾತ್ ॥೫೬॥
ಮಹಾಸಾರಂ ಸಾಲವೃಕ್ಷಂ ಉತ್ಪಾಟ್ಯ ಸ ಮಹಾಬಲಃ ।
ತೇನೈವ ಸ್ಸಹಸದ್ವೀರಾ ವನಪಾಲಾ ಮಹೌಜಸಃ ॥೫೭॥
ಶತಕೋಟೀರಾಕ್ಷಸಾನಾಂ ವನಪಾನಾಂ ಮಹೌಜಸಾಮ್ ।
ನಿಮೇಷಾನ್ತರಮಾತ್ರೇಣ ಹತಾಸೀದ್ವಾಯುಸೂನುನಾ ॥೫೮॥
ಅವಶಿಷ್ಟಾವನಾಧ್ಯಕ್ಷಾಃ ರಾವಣಾಯ ನಿವೇದಿತುಮ್ ।
ವಿಸೃಷ್ಟಾಸ್ತೇ ವೀರವರ್ಯೇಣ ಜ್ಞಾತ್ವಾ ವೀರವಧೇಪ್ಸಯಾ ॥೫೯॥
ತೇ ಗತ್ವಾ ರಾವಣಾಗ್ರಹಂ ಕೃತುಃಪಜ್ಞಾಂ ವಶೇಷಿತಾಃ ।
ಹನೂಮತಾ ಕೃತಂ ಸರ್ವಂ ರಾವಣಾಯ ನ್ಯವೇದಯನ್ ॥೬೦॥
ದೇವ ಕಶ್ಚಿನ್ಮಹಾಸತ್ತ್ವೋ ವಾನರಾಕೃತಿವೇಷಧೃತ್ ।
ಸೀತಯಾ ಸಹ ಸಂಭಾಷ್ಯ ಪ್ಲಕ್ಷೋಕವನಿಕಾಂ ಕ್ಷಣಾತ್ ।
ಉತ್ಪಾಟ್ಯ ಚೈತ್ಯಪ್ರಾಸಾದಂ ಬಭಞ್ಜಾಮ್ರಿತಪಿಕ್ರಮಃ ॥೬೧॥

ಆ ಅಶೋಕವನವು, ರಾವಣನಿಗೆ ಕೇವಲ ಪ್ರೀತಿಪಾತ್ರವಾದುದು, ಅತಿಮನೋಹರವಾದುದು, ನಂದನವನಕ್ಕೆ ಸಮಾನವಾಗಿದ್ದಿತು, ಅಲ್ಲಿ ಅಕಾಲದಲ್ಲಿಯೂ ಕೂಡ ಬೇಕಾದ ಫಲಪುಷ್ಪಗಳು ಯಥೇಚ್ಛವಾಗಿ ತುಂಬಿರುತಿದ್ದುವು ಇಂತಹ ಆ ವನವನ್ನೆಲ್ಲ ಕಿತ್ತುಹಾಕಿ, ಒಂದು ಕ್ಷಣದೊಳಗಾಗಿ ಅದು ಇಲ್ಲದಿದ್ದಂತೆ ಮಾಡಿಬಿಟ್ಟನು ॥೫೫॥

ಆಗುಲೆ, ಮಹಾಬಲನಾದ ಮಾರುತಿಯು, ಅಲ್ಲಿ ಮಹಾಸಾರವಾಗಿದ್ದ ಒಂದು ಸಾಲವೃಕ್ಷವನ್ನು ಕಿತ್ತುಕೊಂಡು, ಅದರಿಂದಲೇ ಅಲ್ಲಿದ್ದ ಮಹಾ ವೀರರೂ ಮಹಾ ತೇಜಸ್ವಿಗಳೂ ಆದ ಕಾವಲುಗಾರರನ್ನು ಹೊಡೆದುಹಾಕಿದನು ॥೫೭॥

ಆಗ ಒಂದು ನಿಮಿಷಾರ್ಧದೊಳಗಾಗಿ ಮಹಾ ಪರಾಕ್ರಮಿಗಳಾದ ಒಂದುನೂರುಕೋಟಿ ರಾಕ್ಷಸರು ಹನುಮಂತನಿಂದ ಕೊಲ್ಲಲ್ಪಟ್ಟರು ॥೫೮॥

ಮಹಾವೀರನಾದ ಹನುಮಂತನು, ಇನ್ನೂ ಆ ಲಂಕೆಯಲ್ಲಿರುವ ವೀರರನ್ನು ಕೊಲ್ಲಬೇಕೆಂಬ ಇಚ್ಛೆಯಿಂದ, ತಾನು ಇಲ್ಲಿ ಮಾಡಿದ ಕಾರ್ಯವನ್ನು ರಾವಣನಿಗೆ ತಿಳಿಯಿಸುವುದಕ್ಕೋಸ್ಕರ, ಕೆಲವುಮಂದಿ ವನಪಾಲಕರನ್ನು ಅವಶೇಷಮಾಡಿ ಬಿಟ್ಟುಬಿಟ್ಟನು ॥೫೯॥

ಹೀಗೆ ಅವನಿಂದ ಅವಶೇಷಿತರಾದ ಆ ನಾಲ್ಕೈದುಮಂದಿ ರಾಕ್ಷಸರು, ರಾವಣನ ಮನೆಗೆ ಹೋಗಿ, ಹನುಮಂತನಿಂದ ಮಾಡಲ್ಪಟ್ಟುದೆಲ್ಲವನ್ನೂ ಅವನಿಗೆ ಹೀಗೆ ಅರಿಕೆಮಾಡಿದರು ॥೬೧॥

ಮಹಾಪ್ರಭೋ! ವಾನರದಂತ ಆಕಾರವನ್ನೂ ವೇಷವನ್ನೂ ಧರಿಸಿರುವ ಮಹಾವಿಕ್ರಮಶಾಲಿಯಾದ ಯಾವನೋ ಒಬ್ಬ ಮಹಾ ಸತ್ವಸಂಪನ್ನನು, ಈಗ ಸೀತೆಯೊಡನೆ ಮಾತನಾಡಿಕೊಂಡು, ಒಂದು ಕ್ಷಣದೊಳಗಾಗಿ ನಮ್ಮ ಅಶೋಕವನವನ್ನು ಕಿತ್ತುಹಾಕಿ–ಅಲ್ಲಿದ್ದ ಚೈತ್ಯಪ್ರಾಸಾದ (ಒಂದು ಬಂಗಲೆ)ವನ್ನೂ ಒಡೆದುಬಿಟ್ಟನು ॥೬೨॥

ಪ್ರಾಸಾದರಕ್ಷಿಣಃ ಸ್ಸರ್ವಾ ಹತ್ವಾ ತತ್ರೈವ ಸಂಸ್ಥಿತಃ ।
ಅಯಂ ಪ್ರಾಣಹರಃ ಶತ್ರುಃ ನೋಪೇಕ್ಷ್ಯಂ ಕರ್ತುಮರ್ಹಸಿ ॥೪೩॥
ಶೀಘ್ರಮೇವ ಪ್ರತೀಕಾರಃ ಚಿಂತ್ಯತಾಂ ವೀರಸತ್ತಮ ।
ಇತ್ಯುಕ್ತ್ವಾ ರಾವಣಂ ಸರ್ವೇ ತೂಷ್ಣೀಮಾಸನ್ ನಿಶಾಚರಾಃ ॥೪೪॥

ಇತಿ ಶ್ರೀಮತ್ಸುಂದರಕಾಂಡೇ ಅಶೋಕವನಭಙ್ಗೋ ನಾಮ
ಪಞ್ಚಮಃ ಸರ್ಗಃ



ಆ ಚೈತ್ಯಪ್ರಾಸಾದದ ಕಾವಲುಗಾರರನ್ನೆಲ್ಲ ಕೊಂದುಬಿಟ್ಟು, ತಾನು ಅಲ್ಲಿಯೇ ಇರುವನು ಇವನು ನಮಗೆಲ್ಲ ಪ್ರಾಣಹರನಾದ ಶತ್ರುವಾಗಿರುವನು, ಇವನ ವಿಷಯದಲ್ಲಿ ಉಪೇಕ್ಷೆ ಮಾಡುವುದು ಯುಕ್ತವಾಗಿಲ್ಲ ॥೪೩॥

ಎಲೈ ವೀರಾಗ್ರೇಸರನೆ ! ಅದುಕಾರಣ, ಈಗ ಶೀಘ್ರವೇ ಅವನಿಗೆ ಪ್ರತೀಕಾರವನ್ನು ಯೋಚಿಸುವನಾಗು ಹೀಗೆಂದು ರಾವಣನ ಸನ್ನಿಧಿಯಲ್ಲಿ ವಿಜ್ಞಾಪಿಸಿ, ಆ ಸಮಸ್ತ ರಾಕ್ಷಸರೂ ತೂಷ್ಣೀಂಭಾವವನ್ನು ಹೊಂದಿದರು ॥೪೪॥

ಇದು ಸುಂದರಕಾಂಡದಲ್ಲಿ ಅಶೋಕವನಭಂಗಸಂಬ
ಐದನೆಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಷಷ್ಠಃ ಸರ್ಗಃ

ಶ್ರೀಶಿವಲುವಾಚ

ಇತಿ ತದ್ವಚನಂ ಶ್ರುತ್ವಾರಾವಣೋ ಲೋಕರಾವಣಃ ।
ಅಚಿನ್ತಯನ್ಮನಸ್ಯೇವಂ ಶಿರಃಕಮ್ಪನಪೂರ್ವಕಮ್ ॥೧॥
ಯತ್ಪ್ರಹಾರಹತಃ ಪೂರ್ವಂ ಅಹಂ ಪ್ರಾಣಾಪದಂ ಗತಃ ।
ಸಏಷ ಬಲವಾನ್ ವೀರಃ ತಸ್ಯ ತತ್ತ್ವಂ ನ ವಿದ್ಮಹೇ ॥ ೨॥
ಇತಿ ಸಂಚಿನ್ತ್ಯ ಮನಸಾ ಪಾರ್ಶ್ವಸ್ಥಂ ಬುದ್ಧಿಮತ್ತರಮ್ ।
ವೃದ್ಧಂ ರಕ್ಷಃಕುಲಶ್ರೇಷ್ಠಂ ಪ್ರಹಸ್ತಂ ವಾಕ್ಯಮಬ್ರವೀತ್ ॥೩॥
ಕೋಯಂ ಮೇ ನಗರಂ ಪ್ರಾಪ್ಯ ಕಿಲ್ಬಿಷಂ ವಾನರೋಚರತ್ ।
ವಿಜಯಂ ಸರ್ವತಃ ಪ್ರಾಪ್ಯ ಕಥಮಸ್ಮಾತ್ ಪರಾಭವಃ ॥೪॥

ಪ್ರಹಸ್ತಉವಾಚ

ಶೃಣು ರಾವಣ ತತ್ತ್ವೇನ ಹಿತಂ ತೇಂ ಪ್ರವದಾಮ್ಯಹಮ್ ।
ರಾತ್ರೌ ಲಙ್ಕಾಪ್ರವೇಶೇನ ನಾಯಂ ಸಾಧಾರಣಃ ಕಪಿಃ ।

ಸುಂದರಕಾಂಡದಲ್ಲಿ ಆರನೆಯ ಸರ್ಗವು

ಶ್ರೀ ಪರಮೇಶ್ವರನು ಪುನಃ ಪಾರ್ವತಿಯೊಡನೆ ಹೇಳುವನು —

ಎಲೌ ದೇವಿ ! ಹೀಗ ಆ ವನಚರರು ಬಂದು ಹೇಳಿದ ಮಾತನ್ನು ಕೇಳಿ, ಲೋಕಭಯಂಕರನಾದ ರಾವಣನು, ತಲೆಯನ್ನು ಅಳ್ಳಾಡಿಸುತ, ತನ್ನ ಮನಸ್ಸಿನಲ್ಲಿಯೇ ' ಈಗ ಸ್ವಲ್ಪಹೊತ್ತಿಗೆ ಮುಂಚೆ ನಾನು ಯಾವನ ಪ್ರಹಾರದಿಂದ ಹತನಾಗಿ ಪ್ರಾಣಸಂಕಟಕ್ಕೊಳಗಾಗಿದ್ದೆನೋ, ಅವನೇ ಈ ಮಹಾಬಲಶಾಲಿಯಾದ ವೀರನು, ಇವನ ತತ್ವವೇ ಗೊತ್ತಾಗುವುದಿಲ್ಲವಲ್ಲ ! ' ಎಂದು ಯೋಚಿಸಿದನು ॥೧-೨॥

ಈರೀತಿಯಾಗಿ ಮನಸ್ಸಿನಲ್ಲಿ ಪರ್ಯಾಲೋಚಿಸಿ, ತನ್ನ ಪಾರ್ಶ್ವದಲ್ಲಿ ಕುಳಿತಿದ್ದ ಮಹಾಬುದ್ಧಿಸಂಪನ್ನನೂ ವೃದ್ಧನೂ ಆದ ಪ್ರಹಸ್ತನೆಂಬ ರಾಕ್ಷಸಶ್ರೇಷ್ಠನನ್ನು ಕುರಿತು ಹೀಗೆ ಹೇಳಿದನು ॥೩॥

ಈ ವಾನರನು ಯಾರು ? ನನ್ನ ಪಟ್ಟಣಕ್ಕೆ ಬಂದು ವಿಶೇಷವಾಗಿ ಅನರ್ಥವನ್ನು ಮಾಡಿಬಿಟ್ಟನಲ್ಲ ! ನಾವು ಸಕಲ ಸ್ಥಳಗಳಲ್ಲಿಯೂ ಜಯವನ್ನು ಪಡೆದು ಈಗ ಈವೊಂದು ಕಪಿಯಿಂದ ತಿರಸ್ಕಾರಹೊಂದುವುದು ಹೇಗೆ ? ॥೪॥

ಇದನ್ನು ಕೇಳಿ ಪ್ರಹಸ್ತನು ಉತ್ತರ ಹೇಳುವನು —

ಅಯ್ಯಾ ! ರಾವಣ ! ನಾನು ಈಗ ಯಥಾರ್ಥವಾಗಿ ಹೇಳುವುದನ್ನು ಕೇಳು, ನಾನು ನಿನಗೆ ಹಿತವನ್ನು ಹೇಳುವೆನು ರಾತ್ರಿಯಲ್ಲಿ ನಮ್ಮ ಲಂಕಾಪಟ್ಟಣವನ್ನು ಪ್ರವೇಶಿಸಿದುದರಿಂದ,

ರಾಮದೂತಇವಾಭಾತಿ ಹನೂಮಾನಿತಿ ವಿಶ್ರುತಃ ॥೫॥
ರಾಮಃ ಸುಗ್ರೀವಸಹಿತಃ ಕಿಷ್ಕಿನ್ಧಾವನಮಾಶ್ರಿತಃ ॥೬॥
ಸ ಸ್ವಾಮಿನೋ ಹಿತಾಕಾಂಕ್ಷೀ ಸುಗ್ರೀವಃ ಸತ್ಯವಿಕ್ರಮಃ ।
ವಾನರಾ ಪ್ರೇಷಯಾಮಾಸ ಸೀತಾನ್ವೇಷಣಮಾಚರ್ ॥೭॥
ಸಿನ್ಧುಮುಲ್ಲಂಘ್ಯ ಮೇಧಾವೀ ಜಬಾಲೋ ಮಾರುತಾತ್ಮಜಃ ।
ಗೋಷ್ಪದಪ್ರಾಯಮೇತೇ ವೈ ಸಮುದ್ರಾಸ್ತಸ್ಯ ಧೀಮತಃ ।
ಸನ್ಧ್ಯಾಯಾಂ ಲಙ್ಕಿನೀಂ ಹತ್ವಾ ಪ್ರವಿಷ್ಟಃ ಪುರಾ ಕಿಲೋ ಯಥಾ ॥೯॥
ತೇನ ಯುದ್ಧಂ ನ ಕರ್ತವ್ಯಂ ಧ್ರುವೋ ನಃ ಸ್ಯಾತ್ ಪರಾಭವಃ ।
ತೂಷ್ಣೀಂ ತಿಷ್ಠಾಮ ಹೇ ಸರ್ವೇ ಪುನರ್ಗಚ್ಛತು ವಾನರಃ ॥೯॥
ಅವತಾರಃ ಶಿವಸ್ಯಾಯಂ ನಾಯಂ ಸಾಧಾರಣಃ ಕಪಿಃ ।
ಯದಿ ಯುದ್ಧಂ ಕರಿಷ್ಯಾವೋ ಲಙ್ಕಾನಾಶೋ ಭವಿಷ್ಯತಿ ॥೧೦॥
ಇತ್ಯುಕ್ತ್ವಾ ವಿಶರಾಮಾಥ ಪ್ರಹಸ್ತೋ ಬುದ್ಧಿಮತ್ತರಃ ।
ಪ್ರಹಸ್ತವಚನಂ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ॥೧೧॥

ಇವನು ಸಾಧಾರಣವಾದಕಪಿಯಲವೆಂದು ಗೊತ್ತಾಗುವುದು, ಹನೂಮಂತನಂದು ಪ್ರಸಿದ್ಧನಾದ ರಾಮದೂತನೆಂಬುದಾಗಿ ತೋರುವುದು ॥೫॥

ಈಗ ರಾಮನು ಸುಗ್ರೀವನೂಡನೆ ಕಿಷ್ಕಿಂಧಾಪಟ್ಟಣದ ಹತ್ತಿರ ಅರಣ್ಯದಲ್ಲಿರುವನು ಆ ಸತ್ಯಪರಾಕ್ರಮನಾದ ಸುಗ್ರೀವನು, ತನ್ನ ಸ್ವಾಮಿಯಾದ ರಾಮಸಿಗ ಹಿತವನ್ನು ಒಯಸಿದವನಾಗಿ, ಸೀತೆಯನ್ನು ಹುಡುಕುವುದಕ್ಕೋಸ್ಕರ ವಾನರರನ್ನು ಕಳುಹಿಸಿರುವನು ॥೬-೭॥

ಅವರಲ್ಲೊಬ್ಬನಾಗಿರುವ ಮಹಾವೇಗಸಂಪನ್ನನಾದ ಮಾರುತಿಯು, ಈಗ ಸಮುದ್ರವನ್ನು ದಾಟಿ ಬಂದಿರುವನು ಮಹಾಬುದ್ಧಿಸಮನ್ವಿತನಾದ ಅವನಿಗ, ಈ ಸಪ್ತಸಮುದ್ರಗಳೂ ಒಂದು ಗೋಷ್ಪದಪ್ರಾಯವಾಗಿರುವುವು ಅವನು ಇಲ್ಲ ಸಂಧ್ಯಾಕಾಲದಲ್ಲ ನಮ್ಮ ಲಂಕಿನಿಯನ್ನು ಕೂಂದು ಸಾಮಾನ್ಯಪುರುಷನಂತ ಪಟ್ಟಣದೂಳಗ ಪ್ರವೇಶ ಮಾಡಿರುವನು ॥೮॥

ಈಗ ಅವನೊಡನೆ ಯುದ್ಧಮಾಡುತಕ್ಕುದಲ್ಲ, ಹಾಗೆ ಮಾಡಿದಪಕ್ಷದಲ್ಲಿ, ನಮಗೆ ತಿರಸ್ಕಾರವು ಸಿದ್ಧವಾಗಿಯೇ ಇರುವುದು ಅಯ್ಯಾ! ರಾವಣ! ಈಗ ನಾವೆಲ್ಲರೂ ಸುಮ್ಮನಿದ್ದು ಬಿಡೋಣ, ಆ ವಾನರನು ಹಿಂದಿರುಗಿ ಹೊರಟುಹೋಗಲಿ ॥೯॥

ಇವನು ಸಾಕ್ಷಾತ್ ಪರಮೇಶ್ವರನ ಅವತಾರಭೂತನಾದವನು, ಇವನು ಸಾಧಾರಣ ಕಪಿಯಲ್ಲ. ಇವನೊಡನೆ ಯುದ್ದಮಾಡಿದಪಕ್ಷದಲ್ಲಿ, ಲಂಕಾಪಟ್ಟಣವು ನಾಶಹೊಂದುವುದರಲ್ಲಿ ಸಂಶಯವಿಲ್ಲ ॥೧೦॥

ಹೀಗೆ ಹೇಳಿ, ಬಳಿಕ ಮಹಾಬುದ್ಧಿಶಾಲಿಯಾದ ಪ್ರಹಸ್ತನು ಸುಮ್ಮನಾದನು ಅನಂತರ, ಈ ಪ್ರಹಸ್ತನಮಾತನ್ನು ಕೇಳಿ, ರಾವಣನು ' ಶತ್ರುವಾದವನು ಪ್ರಬಲನೇ ಆಗಿರಲಿ- ಅಥವಾ

ರಿಪುಃ ಸಮರ್ಥೋ ಹೀನೋ ವಾ ನೋಪೇಕ್ಷ್ಯೋ ರಾಜಧರ್ಮಿಣಾ ॥೧೦॥
ಇತ್ಯುಕ್ತ್ವಾ ರಾವಣಃ ಕ್ರೋಧಾತ್ ಕಿಙ್ಕರಾನ್ ನಾಮ ರಾಕ್ಷಸಾನ್ ।
ವ್ಯಾದಿದೇಶ ಮಹಾತೇಜಾಃ ನಿಗ್ರಹಾರ್ಥಂ ಹನೂಮತಃ ॥೧೩॥
ತೇಽಪಾಮಶೀತಿಸಾಹಸ್ರಂ ಕಿಙ್ಕರಾಣಾಂ ತರಸ್ವಿನಾಮ್ ।
ನಿರ್ಯಯೌ ಭವನಾತ್ ತಸ್ಮಾತ್ ಕೂಟಮುದ್ಗರಪಾಣಿನಾಮ್ ॥೧೪॥
ತೇ ಕಪಿಂ ತಂ ಸಮಾಸಾದ್ಯ ತೋರಣೇ ಸಮವಸ್ಥಿತಮ್ ।
ಪರಿವಾರ್ಯ ಹನೂಮನ್ತಂ ಸಹಸಾ ತಸ್ಥುರಗ್ರತಃ ॥೧೫॥
ಹನೂಮಾನಪಿ ತೇಜಸ್ವೀ ಶ್ರೀಮಾನ್ ಪರ್ವತಸನ್ನಿಭಃ ।
ಕ್ಷಿತಾವಾವಿಧ್ಯ ಲಾಙ್ಗೂಲಂ ನನಾದ ಚ ಮಹಾಸ್ವನಃ ॥೧೬॥
ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥೧೭॥
ದಾಸೋಽಹಂ ಕೋಸಲೇನ್ದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಹನೂಮಾನ್ಶತ್ರುಸೈನ್ಯಾನಾಂ ನಿಹನ್ತಾ ಮಾರುತಾತ್ಮಜಃ ॥೧೮॥

ದುರ್ಬಲನೇ ಆಗಿರಲಿ, ರಾಜಧರ್ಮಾನುವರ್ತಿಯಾದವನು ಅವನನ್ನು ಎಂದಿಗೂ ಉಪೇಕ್ಷಿಸ ಕೂಡದು ' ಎಂದು ಹೇಳಿದನು ॥೧೧-೧೨॥

ಹೀಗೆಂದು ಪ್ರಹಸ್ತನೊಡನೆ ಹೇಳಿ, ಮಹಾತೇಜಸ್ವಿಯಾದ ರಾವಣನು, ಹನುಮಂತನನ್ನು ನಿಗ್ರಹಿಸುವುದಕ್ಕೋಸ್ಕರ, ಕಿಂಕರರೆಂದು ಪ್ರಸಿದ್ಧರಾದ ರಾಕ್ಷಸರನ್ನು ನಿಯಮಿಸಿದನು ॥

ಆಗ ಮಹಾಬಲಸಂಪನ್ನರಾದ ಎಂಬತ್ತುಸಾವಿರಮಂದಿ ಆ ಕಿಂಕರರೆಂಬ ರಾಕ್ಷಸರು, ಕೈಯಲ್ಲಿ ಗಿರಿಶಿಖರಗಳನ್ನೂ ಮುದ್ಗರಗಳನ್ನೂ ಹಿಡಿದುಕೊಂಡು, ಆ ಅರಮನೆಯಿಂದ ಹೊರಟರು॥

ಬಳಿಕ ಆ ಕಿಂಕರರು, ಅಶೋಕವನದಲ್ಲಿ ಚೈತ್ಯಪ್ರಾಸಾದದ ಹೊರಬಾಗಿಲಿನಮೇಲೆ ಕುಳಿತುಕೊಂಡಿದ್ದ ಹನುಮಂತನನ್ನು ತಟ್ಟನೆ ಮುತ್ತಿಕೊಂಡು, ಮುಂದುಗಡೆ ನಿಂತವರಾದರು ॥೧೫॥

ಆಮೇಲೆ, ಪರ್ವತಾಕಾರನಾಗಿರುವ ಮಹಾತೇಜಸ್ವಿಯಾದ ಹನುಮಂತನೂ ಕೂಡ, ನೆಲದ ಮೇಲೆ ತನ್ನ ಬಾಲವನ್ನು ಅಪ್ಪಳಿಸಿ, ಗಟ್ಟಿಯಾಗಿ ಸಿಂಹನಾದಮಾಡಿ ಹೀಗೆ ಉದ್ಘೋಷಿಸಿದನು॥

ಮಹಾಬಲನಾದ ಶ್ರೀರಾಮನು ಜಯಶಾಲಿಯಾಗಿರುವನು, ಮಹಾಬಲನಾದ ಅವನ ತಮ್ಮ ಲಕ್ಷ್ಮಣನೂ ಜಯಶಾಲಿಯಾಗಿರುವನು, ಇಂತಹ ರಾಮನಿಂದ ಪರಿಪಾಲಿತನಾಗಿ ನಮ್ಮ ಒಡೆಯನಾದ ಸುಗ್ರೀವನು ಜಯಶಾಲಿಯಾಗಿರುವನು ॥೧೬॥

ನಾನು ಅಕ್ಲಿಷ್ಟಕಾರಿಯಾಗಿರುವ ಕೋಸಲದೇಶಾಧಿಪತಿಯಾದ ಶ್ರೀರಾಮನ ದಾಸನು ನನ್ನ ಹೆಸರು ಹನುಮಂತನೆಂದು, ನಾನು ವಾಯುದೇವನ ಪುತ್ರನು ಶತ್ರುಸೈನ್ಯಗಳನ್ನೆಲ್ಲ ನಾನು ನಾಶಪಡಿಸತಕ್ಕವನು ॥೧೭॥

ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ।
ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥೯॥
ಇತ್ಯುಕ್ತ್ವಾ ಕೋಪತಾಮ್ರಾಕ್ಷಃ ಪರಿಘಂ ತೋರಣಾಶ್ರಿತಮ್ ।
ಉದಾಮ್ಯ ನಿಜಘಾನಾಥ ದಶಗ್ರೀವಸ್ಯ ಕಿಙ್ಕರಾನ್ ॥೦॥
ಸ ಹತ್ವಾ ರಾಕ್ಷಸಾನ್ ವೀರಃ ಕಿಙ್ಕರಾನ್ ಮಾರುತಾತ್ಮಜಃ ।
ಯುದ್ಧಕಾಙ್ಕ್ಷೀ ಮಹಾವೀರಃ ತೋರಣಂ ಸಮುಪಸ್ಥಿತಃ ॥೧॥

ಸ ರಾಕ್ಷಸಾನಾಂ ನಿಹತಂ ಮಹದ್ಬಲಂ
ನಿಶಮ್ಯ ರಾಜಾ ಪರಿವೃತ್ತಲೋಚನಃ ।
ಸಮಾದಿದೇಶಾಪ್ರತಿಮಂ ಪರಾಕ್ರಮೇ
ಪ್ರಹಸ್ತಪುತ್ರಂ ಸಮರೇ ಸುದುರ್ಜಯಮ್ ॥೨॥

ಸನ್ದಿಷ್ಟೋ ರಾಕ್ಷಸೇನ್ದ್ರೇಣ ಪ್ರಹಸ್ತಸ್ಯ ಸುತೋ ಬಲೀ ।
ಜಮ್ಬುಮಾಲೀ ಮಹಾದಂಷ್ಟ್ರೋ ನಿರ್ಜಗಾಮ ಮಹಾಬಲಃ ॥೩॥
ರಥೇನ ಖರಯುಕ್ತೇನ ತಮಾಗತಮುದೀಕ್ಷ್ಯ ಸಃ ।
ಹನೂಮಾನ್ ವೇಗಸಂಪನ್ನೋ ಜಹರ್ಷ ಚ ನನಾದ ಚ ॥೪॥

ಶಿಲೆಗಳಿಂದಲೂ ವೃಕ್ಷಗಳಿಂದಲೂ ನಾನು ಸಹಸ್ರಮುಖವಾಗಿ ಪ್ರಹಾರಮಾಡಲುಪಕ್ರಮಿಸಿದರೆ, ಸಾವಿರಮಂದಿ ರಾವಣರೂ ನನಗೆದುರಾಗಿ ನಿಲ್ಲಲಾರರು ॥೯॥

ಹೀಗೆಂದು ಉದ್ಘೋಷಿಸಿ, ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಬಳಿಕ ಆ ಹೆಬ್ಬಾಗಿಲಿಗೆ ಹಾಕಿದ್ದ ಲಾಳಮುಂಡಿಗೆಯನ್ನು ತಗೆದುಕೊಂಡು, ಹನುಮಂತನು ಆ ದಶಮುಖನ ಕಿಂಕರರನ್ನೆಲ್ಲ ಕೊಂದುಬಿಟ್ಟನು ॥೦॥

ಈರೀತಿಯಾಗಿ ಕಿಂಕರನಾಮಕರಾದ ರಾಕ್ಷಸರನ್ನೆಲ್ಲ ಕೊಂದುಹಾಕಿ, ಮಹಾವೀರನಾದ ಆ ಮಾರುತಿಯು, ಪುನಃ ಯುದ್ಧಾಪೇಕ್ಷಿಯಾಗಿ ಆ ಹಬ್ಬಾಗಿಲಮೇಲೆ ಹೋಗಿ ಕುಳಿತುಕೊಂಡನು ॥೧॥

ಒಳಕ ಆ ದೊಡ್ಡ ರಾಕ್ಷಸಸೈನ್ಯವೆಲ್ಲವೂ ಹನುಮಂತನಿಂದ ಹತವಾದುದನ್ನು ಕೇಳಿ, ರಾಕ್ಷಸರಾಜನು ಕಣ್ಣುಗಳನ್ನು ತಿರುಗಿಸುತ, ಯುದ್ಧದಲ್ಲಿ ಅತಿದುರ್ಜಯನಾಗಿಯೂ ಪರಾಕ್ರಮದಲ್ಲಿ ಅಸದೃಶನಾಗಿಯೂ ಇರುವ ಪ್ರಹಸ್ತಪುತ್ರನನ್ನು ಯುದ್ಧಕ್ಕಾಗಿ ನಿಯಮಿಸಿದನು ॥೨॥

ಹೀಗೆ ರಾಕ್ಷಸೇಶ್ವರನಿಂದ ಆಜ್ಞಪ್ತನಾಗಿ, ಮಹಾಬಲಶಾಲಿಯೂ ಮಹಾಸೈನ್ಯಸಮನ್ವಿತನೂ ಆದ ಜಂಬುಮಾಲಿಯು, ಯುದ್ಧಾರ್ಥವಾಗಿ ಹೊರಟನು ॥೩॥

ಆಗ ಖರ(ಹೇಸರಕತ್ತೆ)ಯುಕ್ತವಾಗಿರುವ ರಥದಮೇಲೆ ಕುಳಿತುಕೊಂಡು ಬಂದ ಆ ಜಂಬುಮಾಲಿಯನ್ನು ಕಂಡು ಹನುಮಂತನು ಮಹಾವೇಗಸಂಪನ್ನನಾಗಿ ಹರ್ಷಪಟ್ಟನು, ಸಿಂಹನಾದವನ್ನೂ ಮಾಡಿದನು ॥೪॥

ಜಮ್ಬುಮಾಲೀ ಮಹಾಬಾಹುಃ ವಿವ್ಯಾಧ ನಿಶಿತೈಃ ಶರೈಃ ।
ಚುಕೋಪ ಬಾಣಾಭಿಹತೋ ರಾಕ್ಷಸಸ್ಯ ಮಹಾಕಪಿಃ ॥೨೫॥

ತತಃ ಪಾರ್ಶ್ವೇತಿವಿಪುಲಾಂ ದದರ್ಶ ಮಹತೀಂ ಶಿಲಾಮ್ ।
ತರಸಾ ತಾಂ ಸಮುತ್ಪಾಟ್ಯ ಜಿಕ್ಷೇಪ ಬಲವದ್ಬಲೀ ।
ತಾಂ ಶರೈರ್ದಶಭಿಃ ಕ್ರುದ್ಧಃ ತಾಡಯಾಮಾಸ ರಾಕ್ಷಸಃ ॥೨೬॥

ವಿಪನ್ನಂ ಕರ್ಮ ತದ್ದೃಷ್ಟ್ವಾ ಹನೂಮಾಂಶ್ಚಣ್ಡವಿಕ್ರಮಃ ॥೨೭॥

ತಸ್ಯೈವ ಪರಿಘಂ ಗೃಹ್ಯ ಭ್ರಾಮಯಿತ್ವಾ ಬಲಾತ್ ಕಪಿಃ ।
ಪರಿಘಂ ಪಾತಯಾಮಾಸ ಜಮ್ಬುಮಾಲೇರ್ಮಹೋರಸಿ ॥೨೮॥

ಸ ಹತಸ್ತರಸಾ ತೇನ ಜಮ್ಬುಮಾಲೀ ಮಹಾರಥಃ ।
ಪಪಾತ ನಿಹತೋ ಭೂಮೌ ಚೂರ್ಣಿತಾಙ್ಗವಿಭೂಷಣಃ ॥೨೯॥

ಜಮ್ಬುಮಾಲಿಂ ಚ ನಿಹತಂ ಕಿಙ್ಕರಾಂಶ್ಚ ಮಹಾಬಲಾನ್ ।
ಚುಕ್ರೋಧ ರಾವಣಃ ಶ್ರುತ್ವಾ ಕ್ರೋಧಸಂರಕ್ತಲೋಚನಃ ॥೩೦॥

ಸ ರೋಷಸಂವರ್ತಿತತಾಮ್ರಲೋಚನಃ ಪ್ರಹಸ್ತಪುತ್ರೇ ನಿಹತೇ ಮಹಾಬಲೇ।
ಅಮಾತ್ಯಪುತ್ರಾನತಿವೀರ್ಯವಿಕ್ರಮಾ ನವಾದಿದೇಶಾಶು ನಿಶಾಚರೇಶ್ವರಃ ॥

ಬಳಿಕ ಮಹಾಭುಜನಾದ ಜಂಬುಮಾಲಿಯು, ಹರಿತವಾದ ಬಾಣಗಳಿಂದ ಆಂಜನೇಯನನ್ನು ಹೊಡೆದನು ಹೀಗೆ ಬಾಣಗಳಿಂದ ಆಹತನಾದ ಆಂಜನೇಯನು ಅತಿಯಾಗಿ ಕೋಪಪರವಶನಾದನು ॥೨೫॥

ಅನಂತರ, ತನ್ನ ಪಾರ್ಶ್ವದಲ್ಲಿಯೇ ದೊಡ್ಡದಾದ ಬಂದು ಬಂಡೆಯನ್ನು ಕಂಡನು, ಒಡನೆಯೇ ಅದನ್ನು ಕಿತ್ತುಕೊಂಡು ಬಲವಾಗಿ ಎಸೆದನು ಆಗ ಜಂಬುಮಾಲಿಯು ಅದನ್ನು ಹತ್ತು ಬಾಣಗಳಿಂದ ಹೊಸೆದನು ॥೨೬॥

ಬಳಿಕ ತಾನು ಮಾಡಿದ ಕೆಲಸವು ವಿಫಲವಾದುದನ್ನು ಕಂಡು, ಮಹಾಘೋರಪರಾಕ್ರಮನಾದ ಹನುಮಂತನು, ಆ ಜಂಬುಮಾಲಿಯು ಕೈಲಿದ್ದ ಪರಿಘವನ್ನೇ ಕಿತ್ತುಕೊಂಡು, ಅದನ್ನು ಬಲವಾಗಿ ತಿರುಗಿಸಿ ಜಂಬುಮಾಲಿಯ ಎದೆಯಮೇಲೆ ಹೊಡೆದನು ॥೨೭-೨೮॥

ಹೀಗೆ ಪರಿಘದಿಂದ ಬಲವಾಗಿ ಹೊಡೆಯಲ್ಪಟ್ಟ ಮದಾಂಧನಾದ ಜಂಬುಮಾಲಿಯು, ಮೈಮೇಲಿದ್ದ ಆಭರಣಗಳೆಲ್ಲ ಚೂರ್ಣವಾಗುವಂತೆ ಭೂಮಿಯಲ್ಲಿ ಬಿದ್ದುಬಟ್ಟನು ॥೨೯॥

ಅನಂತರ, ಜಂಬುಮಾಲಿಯೂ ಮಹಾಬಲರಾದ ಅವನ ಕಿಂಕರರೂ ಹತರಾದುದನ್ನು ಕೇಳಿ, ರಾವಣನು ಕಣ್ಣುಗಳನ್ನು ಕೆಂಡದಂತೆ ಮಾಡಿಕೊಂಡು ಕೋಪಾವಿಷ್ಟನಾದನು ॥೩೦॥

ಹೀಗೆ ಮಹಾಬಲನಾದ ಪ್ರಹಸ್ತಪುತ್ರನು ನಿಹತನಾದ ಬಳಿಕ, ಆ ರಾಕ್ಷಸಾಧಿಪತಿಯು, ರೋಷದಿಂದ ಕೆಂಪಗಿರುವ ಕಣ್ಣುಗಳನ್ನು ತಿರುಗಿಸುತ, ಒಡನೆಯೇ ಮಹಾವೀರ್ಯಪರಾಕ್ರಮರಾದ ಮಂತ್ರಿಪುತ್ರರನ್ನು ಆಜ್ಞಾಪಿಸಿದನು ॥೩೧॥

ತತಸ್ತೇ ರಾಕ್ಷಸೇನ್ದ್ರೇಣ ಚೋದಿತಾಮನ್ತ್ರಿಣಃ ಸುತಾಃ ।
ನಿರ್ಯಯುರ್ಭವನಾತ್ ತಸ್ಮಾತ್ ಸಪ್ತ ಸಪ್ತಾರ್ಚಿರ್ವರ್ಚಸಃ ॥೩೦॥
ಮಹಾಬಲಪರೀವಾರಾಃ ಧನುಷ್ಮನ್ತೋ ಮಹಾಬಲಾಃ ।
ಕೃತಾಸ್ತ್ರಾಸ್ತ್ರವಿದಾಂ ಶ್ರೇಷ್ಠಾಃ ಪರಸ್ಪರಜಯೈಷಿಣಃ ॥೩೧॥
ಅಭಿಪೇತುರ್ಹನೂಮನ್ತಂ ತೋರಣೇ ಸಮವಸ್ಥಿತಮ್ ।
ಸೃಜನ್ತೋ ಬಾಣವೃಷ್ಟಿಂ ತೇ ರಥಗರ್ಜಿತನಿಸ್ವನಾಃ ॥೩೪॥
ಚಕಾರ ಹನುಮಾ್ ವೇಗಂ ತೇಷು ರಕ್ಷಸ್ಸು ವೀರ್ಯವಾ್ ॥೩೫॥
ತಲೇನಾಭ್ಯಹನತ್ ಕಾಂಶ್ಚಿತ್ ಕಾಂಶ್ಚಿತ್ ಪಾದೈಃ ಪರನ್ತಪಃ ।
ಮುಷ್ಟಿನಾಭ್ಯಹನತ್ ಕಾಂಶ್ಚಿತ್ ಸಖೈಃ ಕಾಂಶ್ಚಿದ್ವ್ಯದಾರಯತ್ ।
ಪ್ರಮಮಾಥೋರಸಾ ಕಾಂಶ್ಚಿತ್ ಊರುಭ್ಯಾಮಪರಾ್ ಕಪಿಃ ॥೩೬॥
ತತಸ್ತೇಷ್ವವಸನ್ನೇಷು ಭೂಮೌ ನಿಪತಿತೇಷು ಚ ।
ತತ್ ಸೈನ್ಯಮಗಮತ್ ಸರ್ವಂ ದಿಶೋ ದಶ ಭಯಾರ್ದಿತಮ್ ॥೩೭॥

ಆ ಬಳಿಕ, ರಾಕ್ಷಸೇಶ್ವರನಿಂದ ಪ್ರೇರಿತರಾದ ಅಗ್ನಿಸದೃಶರಾಗಿರುವ ಆ ಯೇಳುಮಂದಿ ಮಂತ್ರಿಪುತ್ರರೂ, ಅರಮನೆಯಿಂದ ಹೊರಟುಬಿಟ್ಟರು ॥೩೨॥

ಅವರುಗಳು, ದೊಡ್ಡದಾದ ಸೈನ್ಯದಿಂದ ಪರಿವೃತರಾಗಿದ್ದರು, ದಿವ್ಯವಾದ ಧನುಸ್ಸುಗಳನ್ನು ಪಿಡಿದಿದ್ದರು ಅವರೆಲ್ಲರೂ ಅಸ್ತ್ರವಿದ್ಯೆಯಲ್ಲಿ ಶಿಕ್ಷಿತರಾಗಿಯೂ ಅಸ್ತ್ರಜ್ಞರಲ್ಲಿ ಅಗ್ರಗಣ್ಯರಾಗಿಯೂ ಇದ್ದರು ಅವರಲ್ಲ ಪ್ರತಿಯೊಬ್ಬನೂ ತಾನುತಾನೇ ಗೆಲ್ಲಬೇಕೆಂದು ಉತ್ಸಾಹಪಡುತಿದ್ದನು ॥೩೩॥

ಇಂತಹ ಆ ಮಂತ್ರಿಪುತ್ರರು, ರಥದ ಧ್ವನಿಗ ಸಮಾನವಾಗಿ ಗರ್ಜನೆ ಮಾಡುತ, ಬಾಣವೃಷ್ಟಿಯನ್ನು ಬಿಡುತ, ಶೈತ್ಯಪ್ರಾಸಾದದ ಹೆಬ್ಬಾಗಿಲನಮೇಲ ಕುಳಿತುಕೊಂಡಿರುವ ಹನುಮಂತನಿಗೆ ಅಭಿಮುಖರಾಗಿ ನಿಂತರು ॥೩೪॥

ಒಳಿಕ ಮಹಾವೀರ್ಯಸಂಪನ್ನನಾದ ಹನುಮಂತನು, ಆ ರಾಕ್ಷಸರಮೇಲೆಲ್ಲ ತನ್ನ ಪರಾಕ್ರಮವನ್ನು ತೋರಿಸಿದನು ಶತ್ರುಸಂತಾಪಕನಾದ ಅವನು, ಕೆಲವರನ್ನು ಅಂಗೈಯಿಂದ ಹೊಡೆದನು, ಕಲವರನ್ನು ಕಾಲಿನಿಂದ ಒದೆದನು, ಕೆಲವರನ್ನು ಮುಷ್ಟಿಯಿಂದ ಗುದ್ದಿದನು, ಕೆಲವರನ್ನು ಉಗುರುಗಳಿಂದ ಸೀಳಿಹಾಕಿದನು, ಕೆಲಸರನ್ನು ತನ್ನ ಎದೆಯಿಂದ ಅಮುಕಿಬಿಟ್ಟನು, ಕೆಲವರನ್ನು ತೊಡೆಗಳ ಸಂದಿಯಲ್ಲಿ ಸಿಕ್ಕಿಸಿಕೊಂಡು ಹಿಸುಕಿಬಟ್ಟನು ॥೩೫-೩೬॥

ಒಳಿಕ ಅವರೆಲ್ಲರೂ ಶಕ್ತಿಯಿಲ್ಲದೆ ಭೂಮಿಯಮೇಲೆ ಬಿದ್ದುಬಿಡಲಾಗಿ, ಆ ಸಮಸ್ತ ಸೈನ್ಯವೂ ಭಯಪೀಡಿತವಾಗಿ ಹತ್ತುದಿಕ್ಕಿಗೂ ಓಡಿಹೋಯಿತು ॥೩೭॥

ಹತ್ವಾ ಮನ್ತ್ರಿಸುತಾಂಶ್ಚುತ್ವಾ ವಾನರೇಣ ಮಹಾತ್ಮನಾ ।
ರಾವಣಃ ಸಂವೃತಾಕಾರಃ ಚಕಾರ ಮತಿಮುತ್ತಮಾಮ್ ॥೫೪॥

ಸಂದಿದೇಶ ದಶಗ್ರೀವಃ ಪಞ್ಚ ಸೇನಾಗ್ರನಾಯಕಾನ್ ।
ಹನೂಮದ್ಗ್ರಹಣವ್ಯಗ್ರಾನ್ ವಾಯುವೇಗಸಮಾನ್ ಯುಧಿ ॥೫೫॥

ತೇ ಸ್ವಾಮಿವಚನಂ ಸರ್ವೇ ಪ್ರತಿಗೃಹ್ಯ ಮಹೌಜಸಃ ।
ಸಮುತ್ಪೇತುರ್ಮಹಾವೇಗಾಃ ಹುತಾಶಸಮತೇಜಸಃ ॥೫೦॥

ತಂ ಸಮಾಕ್ಷ್ಯೈವ ತೇ ಸರ್ವೇ ದಿಕ್ಷು ಸರ್ವಾಸ್ವವಸ್ಥಿತಾಃ ।
ತೈಸ್ತೈಃ ಪ್ರಹರಣೈರ್ಭೀಮೈಃ ಅಭಿಪೇತುಸ್ತತಸ್ತತಃ ॥೫೧॥

ಸಮುತ್ಪಾಟ್ಯ ಗಿರೇಃ ಶೃಙ್ಗಂ ಸಮೃಗವ್ಯಾಳಪಾದಪಮ್ ।
ಜಘಾನ ಹನುಮಾನ್ ವೀರೋ ರಾಕ್ಷಸಾನ್ ಕಪಿಕುಞ್ಜರಃ ॥೫೨॥

ತತಸ್ತೇಷ್ವವಸನ್ನೇಷು ಸೇನಾಪತಿಷು ಪಞ್ಚಸು ।
ಬಲಂ ತದವಶೇಷಂ ತು ನಾಶಯಾಮಾಸ ವಾನರಃ ॥೫೩॥

ಅನಂತರ ಮಹಾಮಹಿಮನಾದ ಮಾರುತಿಯಿಂದ ಮಂತ್ರಿಪುತ್ರರೆಲ್ಲರೂ ನಿಹತರಾದುದನ್ನು ಕೇಳಿ, ರಾವಣನು ತನ್ನ ಇಂಗಿತವನ್ನು ಹೊರಪಡಿಸದೆ ಮನಸ್ಸಿನಲ್ಲಿಯೇ ಒಂದುವಿಧವಾದ ಯೋಚನೆಯನ್ನು ಮಾಡಿಕೊಂಡನು ॥೫೮॥

ಆಮೇಲೆ ಆ ದಶಕಂಠನು ಹನುಮಂತನನ್ನು ಹಿಡಿದುತರುವುದರಲ್ಲಿ ಉತ್ಸುಕರಾಗಿಯೂ ಯುದ್ಧದಲ್ಲಿ ವಾಯುವೇಗಕ್ಕೆ ಸಮಾನರಾಗಿಯೂ ಇರುವ ಐದುಮಂದಿ ಸೇನಾಪತಿಗಳನ್ನು ನಿಯಮಿಸಿದನು ॥೫೯॥

ಮಹಾವೇಗಸಂಪನ್ನರೂ ಅಗ್ನಿಸದೃಶವಾದ ತೇಜಸ್ಸುಳ್ಳವರೂ ಆದ ಆ ಸೇನಾಪತಿಗಳೆಲ್ಲರೂ, ರಾಜಾಜ್ಞೆಯನ್ನು ಶಿರಸಾ ವಹಿಸಿ, ಹಾರುತ ಹೊರಟರು ॥೬೦॥

ಹೀಗೆ ಹೊರಟು ಅಶೋಕವನಕ್ಕೆ ಬಂದು, ಅಲ್ಲಿ ಹನುಮಂತನನ್ನು ಕಂಡೊಡನೆಯೇ ಸಮಸ್ತದಿಕ್ಕುಗಳಲ್ಲಿಯೂ ನಿಂತುಗೊಂಡು, ಆಯಾ ದಿವ್ಯಾಯುಧಗಳಿಂದ ಯುಕ್ತರಾಗಿ, ಅವನ ಸುತ್ತಲೂ ಯುದ್ಧಕ್ಕಾಗಿ ಮುತ್ತಿಕೊಂಡುಬಿಟ್ಟರು ॥೬೧॥

ಆಗ ಮಹಾವೀರನಾದ ಹನುಮಂತನು, ಮೃಗ ವ್ಯಾಘ್ರ ವೃಕ್ಷಸಹಿತವಾಗಿರುವ ಒಂದು ಪರ್ವತಶಿಖರವನ್ನು ಕಿತ್ತುಕೊಂಡು, ಅದರಿಂದ ಆ ರಾಕ್ಷಸರನ್ನೆಲ್ಲ ಹೊಡೆದುಹಾಕಿದನು ॥೬೨॥

ಬಳಿಕ ಆ ಐದುಮಂದಿ ಸೇನಾಪತಿಗಳೂ ಹತರಾದಮೇಲೆ, ಆ ವಾನರೋತ್ತಮನು ಉಳಿದ ರಾಕ್ಷಸಸೈನ್ಯವನ್ನೂ ಕೊಂದುಬಿಟ್ಟನು ॥೬೩॥

ಅಶ್ವೈರಶ್ವಾ ಗಜೈರ್ನಾಗಾ ಯೋಧೈರ್ಯೋಧಾ ರಥೈರಥಾ ।
ಸ ಕಪಿರ್ನಾಶಯಾಮಾಸ ಸಹಸ್ರಾಕ್ಷ ಇವಾಸುರಾ ॥೪೪॥

ಇತಿ ಶ್ರೀಮತ್ಸುಂದರಕಾಂಡೇ ಕಿಙ್ಕರಾದಿರಾಕ್ಷಸಸಂಹಾರಕಥನಂ ನಾಮ
ಪಞ್ಚಃ ಸರ್ಗಃ



ಆ ಕಪಿನಾಯಕನು, ದೇವೇಂದ್ರನು ರಾಕ್ಷಸರನ್ನು ಕೊಲ್ಲುವಂತೆ, ಅಲ್ಲಿ ಅವರ ಅಶ್ವಗಳಿಂದಲೇ ಅಶ್ವಗಳನ್ನೂ, ಗಜಗಳಿಂದಲೇ ಗಜಗಳನ್ನೂ, ಭಟರಿಂದಲೇ ಭಟರನ್ನೂ, ರಥಗಳಿಂದಲೇ ರಥಗಳನ್ನೂ ಹೂಡೆದು ನಾಶಪಡಿಸಿದನು ॥೪೪॥

ಇದು ಸುಂದರಕಾಂಡದಲ್ಲಿ ಕಿಂಕರಾದಿರಾಕ್ಷಸ ಸಂಹಾರವೆಂಬ
ಆರನೆಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಸಪ್ತಮಃ ಸರ್ಗಃ.

ಶ್ರೀ ಶಿವಉವಾಚ

ಸೇನಾಪತೀಂ ಸಞ್ಚ್ಯ ತತಃ ಪ್ರಮಾಥಿತಾಂ ಹನೂಮತಾ ಸಾನುಚರಾಂ ಸವಾಹನಾಂ ।
ಸನಿಶಾಮ್ಯ ರಾಜಾ ಸನುರೋದ್ಧತೋನ್ಮುಖಂ ಕುಮಾರಮಕ್ಷಂ ಪ್ರಸಮೈಕ್ಷತಾಗ್ರತಃ॥
ಸ ತಸ್ಯ ದೃಷ್ಟ್ಯರ್ಪಣಸಂಪ್ರಚೋದಿತಃ ಪ್ರತಾಪವಾಂ ಕಾಞ್ಚನಚಿತ್ರಕಾರ್ಮುಕಃ ।
ಸಮುತ್ಪಪಾತಾಥ ಸದಸ್ಯದೀರಿತೋ ದ್ವಿಜಾತಿಮುಖ್ಯೈರ್ಹವಿಷೇವ ಪಾವಕಃ ॥೨॥
ಸ ಪೂರಯನ್ ಖಂ ಚ ಮಹೀಂ ಚ ಸಾಚಲಾಂ ತುರಙ್ಗಮಾತಙ್ಗಮಹಾರಥಸ್ವನೈಃ ।
ಬಲೈಃ ಸಮೇತೈಃ ಸಹ ತೋರಣಸ್ಥಿತಂ ಸಮುದ್ಧತಮಾಸೀನಮುಪಾಗಮತ್ ಕಪಿಮ್ ॥೩॥
ತತಃ ಸ ಬಾಣಾಸನಶಕ್ರಕಾರ್ಮುಕಃ ಶರಪ್ರವರ್ಷೋ ಯುಧಿ ರಾಕ್ಷಸಾಮ್ಬುದಃ ।
ಶರಾನ್ ಮುಮೋಚಾಶು ಹರೀಶ್ವರಾಚಲೇ ಬಲಾಹಕೋ ವೃಷ್ಟಿಮಿವಾಚಲೋತ್ತಮೇ ॥
ತತಃ ಶರೈರ್ಭಿನ್ನಭುಜಾನ್ತರಃ ಕಪಿಃ ಕುಮಾರವರ್ಯೇಣ ಮಹಾತ್ಮನಾ ನದನ್ ।

ಸುಂದರಕಾಂಡದಲ್ಲಿ ಏಳನೆಯ ಸರ್ಗವು

ಮತ್ತೆ ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ! ಬಳಿಕ, ಹೀಗೆ ಆ ಐದುಮಂದಿ ಸೇನಾಪತಿಗಳೂ ತಮ್ಮ ಅನುಚರರೊಡನೆಯೂ ವಾಹನಗಳೂಡನೆಯೂ ಹನುಮಂತನಿಂದ ಕೊಲ್ಲಲ್ಪಟ್ಟುದನ್ನು ತಿಳಿದು, ರಾವಣನು ತನ್ನ ಮುಂದುಗಡೆ ಯುದ್ದದಲ್ಲಿ ಆಸಕ್ತನಾಗಿ ಕತ್ತೆತ್ತಿಕೊಂಡು ಕುಳಿತಿರುವ ಅಕ್ಷಕುಮಾರನ ಮೇಲೆ ದೃಷ್ಟಿಯಿಟ್ಟನು ॥೧॥

ಹೀಗೆ ಆ ರಾವಣನ ದೃಷ್ಟಿಪಾತದಿಂದ ಪ್ರೇರಿತನಾದ ಮಹಾಪ್ರತಾಪಶಾಲಿಯಾಗಿರುವ ಅಕ್ಷಕುಮಾರಕನು, ಬ್ರಾಹ್ಮಣೋತ್ತಮರಿಂದ ಹೋಮಮಾಡಲ್ಪಟ್ಟು ಅಗ್ನಿಯು ಪ್ರಜ್ವಲಿಸುವಂತೆ, ತನ್ನ ಕೈಯಲ್ಲಿ ಸುವರ್ಣಮಯವಾಗಿರುವ ವಿಚಿತ್ರವಾದ ಧನುಸ್ಸನ್ನು ಹಿಡಿದುಕೊಂಡು ಆ ಸಭೆಯಲ್ಲಿ ಎದ್ದನು ॥೨॥

ಬಳಿಕ ಅವನು ತನ್ನ ಗಜ ರಥ ತುರಗಗಳ ಧ್ವನಿಯಿಂದ ಆಕಾಶವನ್ನೂ ಭೂಮಿಯನ್ನೂ ಪರ್ವತಗಳನ್ನೂ ತುಂಬುತ, ತನ್ನ ಸೈನ್ಯವನ್ನೆಲ್ಲ ಒಟ್ಟಾಗಿ ಕೂಡಿಸಿಕೊಂಡು, ಆ ಶೈತ್ಯಪ್ರಾಸಾದ ತೋರಣದಲ್ಲಿರುವ ಮಹಾಪರಾಕ್ರಮಿಯಾದ ಹನುಮಂತನ ಎದುರಿಗೆ ಬಂದು ನಿಂತನು ॥೩॥

ಆ ಬಳಿಕ, ಧನುಸ್ಸೆಂಬ ಇಂದ್ರಚಾಪವನ್ನು ಧರಿಸಿ ಶರವೆಂಬ ಜಲವನ್ನು ವರ್ಷಿಸುವ ಅಕ್ಷಕುಮಾರಕನೆಂಬ ಮೇಘವು, ಪರ್ವತದಮೇಲೆ ಮೇಘವು ಜಲವೃಷ್ಟಿಯನ್ನು ಸುರಿಯಿಸುವಂತೆ, ಅಂಜನೇಯನೆಂಬ ಪರ್ವತದಮೇಲೆ ಬಾಣಗಳೆಂಬ ಜಲಗಳನ್ನು ಸುರಿಯಿಸಿತು ॥೪॥

ಅನಂತರ, ಮಹಾಭುಜನೂ ಕಾರ್ಯವಿಶೇಷಗಳ ತತ್ವವನ್ನು ಬಲ್ಲವನೂ ಆದ ಆ ಮಾರುತಿಯು, ಮಹಾಶಕ್ತಿಯುಕ್ತನಾದ ಅಕ್ಷಕುಮಾರಕನಿಂದ ಎದೆಯಲ್ಲಿ ಭೇದಿಸಲ್ಪಟ್ಟವನಾಗಿ, ವಿಶೇ

ಮಹಾಭುಜಃ ಕರ್ಮವಿಶೇಷತತ್ತ್ವವಿತ್ ವಿಜೆನ್ತ್ಯಯಾಮಾಸ ರಣೇ ಪರಾಕ್ರಮಮ್ ॥೫॥
ತತಃ ಕಪಿಸ್ತಂ ವಿಚರನ್ತಮಮ್ಬರೇ ಪತತ್ರಿರಾಜಾನಿಲಸಿದ್ಧಸೇವಿತೆ ।
ಸಮೇತ್ಯ ತಂ ಮಾರುತತುಲ್ಯವಿಕ್ರಮಃ ಕರೇಣ ಜಗ್ರಾಹ ಚ ಪಾದಯೋರ್ದೃಢಮ್ ॥೬

ಸ ತಂ ಸಮಾವಿಧ್ಯ ಸಹಸ್ರಶಃ ಕಪಿಃ ಮಹೋರಗಂ ಗೃಹ್ಯ ಇವಾಣ್ಡಜೇಶ್ವರಃ ।
ಮುಮೋಚ ವೇಗಾತ್ ಪಿತೃತುಲ್ಯವಿಕ್ರಮೋ ಮಹೀತಲೇ ಸಂಯತಿ ವಾನರೋತ್ತಮಃ॥

ಸ ಭಗ್ನಬಾಹೂರುಕಟೀಶಿರೋಧರಃ ಕ್ಷರನ್ನಸೃಙ್ನಿರ್ಗಧಿತಾಸ್ಥಿಲೋಚನಃ ।
ಪ್ರಭಿನ್ನಸನ್ಧಿಃ ಸ್ಫುಟಶೀರ್ಣಬನ್ಧನೋ ಹತಃ ಕ್ಷಿತೌ ವಾಯುಸುತೇನ ರಾಕ್ಷಸಃ ॥೮॥

ತತೋಕ್ಷಯಂ ನಿಹತ್ಯಾಜೌ ಪ್ರಣಾದ ಮಹಾಬಲಃ ।
ತೇನ ನಾದೇನ ಮಹತಾ ಭೂಕಮ್ಪಃ ಸಮಪದ್ಯತ ।
ಅವಶಿಷ್ಟಾವೇಪಮಾನಾಃ ರಾವಣಾಯ ನ್ಯವೇದಯನ್ ॥೯॥
ತಚ್ಛ್ರುತ್ವಾ ವಚನಂ ತೇಷಾಂ ರಾವಣಃ ಕ್ರೋಧಮೂರ್ಛಿತಃ ॥೧೦॥

ಷವಾಗಿ ಸಿಂಹನಾದಮಾಡುತ, ಆ ಅಕ್ಷಕುಮಾರಕನು ರಣರಂಗದಲ್ಲಿ ಪರಾಕ್ರಮತೋರಿಸುತಿರುವ ರೀತಿಯನ್ನು ಕುರಿತು ಬಹಳವಾಗಿ ಪರ್ಯಾಲೋಚಿಸಿದನು ॥೫॥

ಆ ಬಳಿಕ, ಗರುಡ ಅನಿಲ ಸಿದ್ಧರಿಂದ ವ್ಯಾಪ್ತವಾದ ಆಕಾಶಮಾರ್ಗದಲ್ಲಿ ಸಂಚರಿಸುತಿರುವ ಆ ಅಕ್ಷಕುಮಾರಕನ ಹತ್ತಿರಕ್ಕೆ ಬಂದು, ವಾಯುಸದೃಶವೇಗನಾದ ಆಂಜನೇಯನು, ತನ್ನ ಕೈಯಿಂದ ಅವನ ಎರಡು ಕಾಲುಗಳನ್ನೂ ಗಟ್ಟಿಯಾಗಿ ಹಿಡಿದುಕೊಂಡನು ॥೬॥

ಹೀಗ ತನ್ನ ತಂದೆಗೆ ಸದೃಶವಾದ ವೇಗವುಳ್ಳ ಆ ವಾನರಾಧಿಪತಿಯು, ಗರುಡನು ಸರ್ಪವನ್ನು ಎತ್ತಿಕೊಂಡು ಹೋಗಿ ಕೆಳಕ್ಕ ಬಿಟ್ಟುಬಿಡುವಂತೆ, ಅಕ್ಷಕುಮಾರಕನನ್ನು ಮೇಲಕ್ಕೆತ್ತಿಕೊಂಡು ಹೋಗಿ ಸಾವಿರಾರುವಿಧವಾಗಿ ಹೊಡೆದು ತಟ್ಟನೆ ನೆಲದಮೇಲೆ ಕೆಡವಿಬಿಟ್ಟನು ॥೭॥

ಆಗ ಆ ಅಕ್ಷಕುಮಾರನು, ವಾಯುಪುತ್ರನಿಂದ ಹತನಾಗಿ, ತೋಳು ತೊಡೆ ಸೊಂಟ ಕುತ್ತಿಗೆ ಇವುಗಳೆಲ್ಲ ಮುರಿದುಹೋದವನಾಗಿ, ರಕ್ತವನ್ನು ಸುರಿಯಿಸುತ, ಮೂಳಗಳೂ ಕಣ್ಣುಗಳೂ ಜೆಜ್ಜಿಹೋಗಿ, ಕೀಲುಗಳೆಲ್ಲ ಭೇದಿಸಲ್ಪಟ್ಟು, ಶರೀರಬಂಧವೆಲ್ಲ ಜರ್ಜರವಾಗಿ, ಭೂಮಿಯಲ್ಲಿ ಬಿದ್ದು ಮೃತನಾದನು ॥೮॥

ಬಳಿಕ, ಹೀಗೆ ಅಕ್ಷಯಕುಮಾರಕನನ್ನು ಯುದ್ಧದಲ್ಲಿ ಕೊಂದು, ಮಹಾಬಲಶಾಲಿಯಾದ ಮಾರುತಿಯು ಸಿಂಹನಾದ ಮಾಡಿದನು ಅತಿಪ್ರಬಲವಾದ ಆ ಸಿಂಹನಾದದಿಂದ, ಭೂಮಿಯೆಲ್ಲವೂ ನಡುಗಿತು. ಆಮೇಲೆ ಹತಶೇಷರಾದ ರಾಕ್ಷಸರು ನಡುಗುತ ಹೋಗಿ ರಾವಣನಿಗೆ ಈ ವಿಷಯವನ್ನು ತಿಳಿಯಿಸಿಬಿಟ್ಟರು ॥೯॥

ಅವರು ಹೇಳಿದ ಆ ಮಾತನ್ನು ಕೇಳಿ, ಕೋಪದಿಂದ ಕೃತ್ಯಾಕೃತ್ಯಜ್ಞಾನಹೀನನಾದ ರಾವಣನು, ತನ್ನ ಕ್ರೂರವಾದ ಕಣ್ಣುಗಳನ್ನು ಗಿರಗಿರನೆ ಸುತ್ತಿಸುತ, ಹಲ್ಲುಗಳನ್ನು ಕಟಕಟನೆ

ವಿವರ್ತ್ಯ ನಯನೇ ಕ್ರೂರೇ ದನ್ತೈ ಕಟಕಟಾಪ್ಯ ಚ ।
ಸ್ವಯಂ ಗನ್ತುಂ ಮನಶ್ಚಕ್ರೇ ರಾವಣೋ ಲೋಕರಾವಣಃ ॥೧೦॥

ಏತಸ್ಮಿನ್ನೇವ ಸಮಯೇ ಇನ್ದ್ರಜಿನ್ನಾಮ ರಾಕ್ಷಸಃ ।
ನಿವಾರ್ಯ ಪಿತರಂ ವೃದ್ಧಂ ವಚನಂ ಚೇದಮಬ್ರವೀತ್ ॥೧೦॥

ಪುತ್ರೇ ಮಯಿ ಸ್ಥಿತೇ ತಾತ ಕಥಂ ಯುದ್ಧಾಯ ಗಚ್ಛಸಿ ।
ಬದ್ಧ್ವಾನೇಷ್ಯಾಮ್ಯಹಂ ಪಾಪಂ ವಾನರಂ ಬ್ರಹ್ಮಪಾಶತಃ ॥೧೨॥

ಇತ್ಯುಕ್ತ್ವಾ ರಥಮಾರುಹ್ಯ ರಾಕ್ಷಸೈರ್ಬಹುಭಿರ್ವೃತಃ ।
ಜಗಾಮ ವಾಯುಪುತ್ರಸ್ಯ ಸಮೀಪಂ ಭೀಮವಿಕ್ರಮಃ ॥೧೪॥

ತತೋಽತಿಗರ್ಜನಂ ಕೃತ್ವಾ ಸ್ತಮ್ಭಮುದ್ಯಮ್ಯ ವೀರ್ಯವಾನ್ ।
ಉತ್ಪಪಾತ ನಭೋದೇಶಂ ಗರುತ್ಮಾನಿವ ಮಾರುತಿಃ ॥೧೫॥

ತತೋ ಭ್ರಮನ್ತಂ ನಭಸಿ ಹನೂಮನ್ತಂ ಶಿಲೀಮುಖೈಃ ।
ವಿದ್ಧ್ವಾ ತಸ್ಯ ಶಿರೋಭಾಗಂ ಪಞ್ಚಭಿಶ್ಚಾಪ್ಯಥಭಿಃ ಪುನಃ ॥೧೬॥

ಹೃದಯಂ ಪಾದಯುಗಳಂ ಷಡ್ಭಿರೇಕೇನ ವಾಲಧಿಮ್ ।
ಭೇದಯಿತ್ವಾ ತತೋ ಘೋರಂ ಸಿಂಹನಾದಮಥಾಕರೋತ್ ॥೧೭॥

ಕಡಿಯುತ, ತಾನೇ ಆ ಮಾರುತಿಯೊಡನೆ ಯುದ್ಧಮಾಡಲು ಹೊರಡುವುದಕ್ಕೆ ಮನಸ್ಸು ಮಾಡಿದನು ॥೧೦-೧೧॥

ಅಷ್ಟರಲ್ಲಿಯೇ, ಇಂದ್ರಜಿತುವೆಂದು ಪ್ರಸಿದ್ಧನಾದ ರಾಕ್ಷಸನು, ವೃದ್ಧನಾದ ತನ್ನ ತಂದೆಯನ್ನು ತಡೆದು ' ತಾತ! ನಾನು ನಿನ್ನ ಮಗನಾಗಿರುವಾಗ ನೀನು ಯುದ್ಧಕ್ಕೆ ಹೋಗುವುದೆಂದರೇನು ? ನಾನು ಆ ದುರಾತ್ಮನಾದ ವಾನರನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿ ತರುವೆನು ' ಎಂದು ಹೇಳಿದನು ॥೧೨-೧೩॥

ಹೀಗೆ ಹೇಳಿ, ರಥವನ್ನು ಹತ್ತಿಕೊಂಡು, ಅನೇಕರಾದ ರಾಕ್ಷಸರಿಂದ ಪರಿವೃತನಾಗಿ, ಮಹಾ ಭೀಮಪರಾಕ್ರಮನಾದ ಆ ಯಿಂದ್ರಜಿತುವು, ವಾಯುಪುತ್ರನಿದ್ದಕಡೆಗೆ ಬಂದನು ॥೧೪॥

ಆಮೇಲೆ, ಮಹಾವೀರ್ಯವಂತನಾದ ಮಾರುತಿಯು, ಅತಿಯಾಗಿ ಗರ್ಜನೆಮಾಡಿ, ಅಲ್ಲಿದ್ದ ಒಂದು ಕಂಬವನ್ನು ಕಿತ್ತುಕೊಂಡು, ಗರುಡನಂತೆ ಆಕಾಶಕ್ಕೆ ಹಾರಿಹೋದನು ॥೧೫॥

ಬಳಿಕ ಹೀಗೆ ಅಂತರಿಕ್ಷಪ್ರದೇಶದಲ್ಲಿ ಸಂಚರಿಸುತಿರುವ ಹನುಮಂತನನ್ನು ನೋಡಿ, ಇಂದ್ರಜಿತುವು, ಅವನ ತಲೆಯನ್ನು ಐದು ಬಾಣಗಳಿಂದಲೂ, ಹೃದಯವನ್ನು ಎಂಟು ಬಾಣಗಳಿಂದಲೂ, ಎರಡು ಕಾಲುಗಳನ್ನು ಆರು ಬಾಣಗಳಿಂದಲೂ, ಬಾಲವನ್ನು ಒಂದು ಬಾಣದಿಂದಲೂ ಹೂಡೆದು, ಆಮೇಲೆ ಘೋರವಾಗಿ ಸಿಂಹನಾದಮಾಡಿದನು ॥೧೬-೧೭॥

ತತಸ್ತ್ವಮರ್ಷೀ ಹನುಮಾ ಸ್ತಂಭಮುದ್ಯಮ್ಯ ವೀರ್ಯವಾ ।
ಜಘಾನ ಸಾರಥಿಂ ಸಾಶ್ವಂ ರಥಂ ಚಾಚೂರ್ಣಯತ್ ಕ್ಷಣಾತ್ ॥೧೯॥
ತತಃ ಪುನಾರಥಾರೂಢಃ ಪ್ರತ್ಯದೃಶ್ಯತ ರಾಕ್ಷಸಃ ।
ಹನೂಮದ್ವೇಗಸನ್ತುಷ್ಟಃ ಸ್ವವೇಗಂ ತಸ್ಯ ದರ್ಶಯನ್ ॥೨೦॥
ಅಯಸ್ತಮ್ಭಪ್ರಹಾರೇಣ ಮೂರ್ಚ್ಛಿತೋ ರಾವಣಾತ್ಮಜಃ ।
ಪುನರುತ್ಥಾಯ ತೇಜಸ್ವೀ ಧನುಷ್ಪಾಣಿರದೃಶ್ಯತ ॥೨೦॥
ಪುನಃ ಪ್ರವವೃತೇ ಯುದ್ಧಂ ಹನೂಮನ್ಮೇಘನಾದಯೋಃ ।
ನ ದೃಷ್ಟಂ ನ ಶ್ರುತಂ ಚಾಪಿ ಭವಿತಾ ಚ ನ ತದ್ವಿಧಮ್ ॥೨೧॥
ರಾಮರಾವಣಯೋರ್ಯುದ್ಧಂ ನ ಭವಿಷ್ಯತಿ ತಾದೃಶಮ್ ॥೨೨॥
ಕುಮ್ಭಕರ್ಣಂ ವಿನಾ ಸರ್ವೇ ಲಜ್ಜಾಪುರನಿವಾಸಿನಃ ।
ತದ್ಯುದ್ಧಂ ದೃಷ್ಟ್ವಮನಸಃ ಪರಿವಾರ್ಯ ಪ್ರತಸ್ಥಿರೇ ।
ಆಬಾಲವೃದ್ಧಾ ನಗರೀ ಪದ್ಮಪತ್ರಜಲೋಪಮಾ ॥೨೩॥
ಅಸಹ್ಯಂ ರಾಕ್ಷಸ್ಯಂ ವ್ಯತೀತಾಯಾಂ ಜೀವಾಮಃ ಸಹ ಬನ್ಧುಭಿಃ ।

ಅನಂತರ, ವೀರ್ಯವಂತನಾದ ಹನುಮಂತನು, ವಿಶೇಷವಾಗಿ ಕೋಪವನ್ನು ತಾಳಿ, ತನ್ನ ಕೈಲಿದ್ದ ಕಂಬದಿಂದ ಅವನ ಸಾರಥಿಯನ್ನೂ ಅಶ್ವಗಳನ್ನೂ ರಥವನ್ನೂ ಒಂದು ಕ್ಷಣದೊಳಗಾಗಿ ಚೂರ್ಣಮಾಡಿಬಿಟ್ಟನು ॥೧೮॥

ಆ ಬಳಿಕ ಇಂದ್ರಜಿತುವು ಹನುಮಂತನ ವೇಗದಿಂದ ಸಂತೋಷಪಟ್ಟವನಾಗಿ, ತನ್ನ ವೇಗವನ್ನು ಅವನಿಗೆ ತೋರಿಸುವುದಕ್ಕೋಸ್ಕರ, ಮತ್ತೊಂದು ರಥವನ್ನು ಹತ್ತಿಕೊಂಡು ಬಂದು ಪುನಃ ಕಾಣಿಸಿಕೊಂಡನು ॥೧೯॥

ಆಮೇಲೆ ಹನುಮಂತನು ತನ್ನ ಕೈಲಿದ್ದ ಕಬ್ಬುಣದ ಕಂಬದಿಂದ ಹೊಡೆಯಲಾಗಿ, ಅದರ ಏಟಿನಿಂದ ಮೂರ್ಛೆಹೊಂದಿದ ರಾವಣಪುತ್ರನಾದ ಇಂದ್ರಜಿತುವು, ಮತ್ತೆ ಎಚ್ಚರಗೊಂಡವನಾಗಿ ಕೈಯಲ್ಲಿ ಧನುಸ್ಸನ್ನು ಧರಿಸಿ ಕಾಣಿಸಿಕೊಂಡನು ॥೨೦॥

' ಬಳಿಕ ಪುನಃ ಆ ಹನುಮಂತನಿಗೂ ಮೇಘನಾದ(ಇಂದ್ರಜಿತು)ನಿಗೂ ಘೋರವಾದ ಯುದ್ಧವು ಉಪಕ್ರಮಿಸಿತು ಅಂತಹ ಯುದ್ಧವು ಹಿಂದೆ ನೋಡಲ್ಪಟ್ಟುದೂ ಅಲ್ಲ, ಕೇಳಲ್ಪಟ್ಟುದೂ ಅಲ್ಲ, ಮುಂದೆ ನಡೆಯತಕ್ಕುದೂ ಅಲ್ಲ ಮುಂದೆ ನಡೆಯತಕ್ಕುದಾಗಿರುವ ರಾಮ ರಾವಣರ ಯುದ್ಧವೂ ಕೂಡ ಅಷ್ಟುಮಟ್ಟಿಗಾಗತಕ್ಕುದಲ್ಲ ॥೨೧-೨೨॥

ಆಗ ಕುಂಭಕರ್ಣನೊಬ್ಬ ಹೊರತು ಮಿಕ್ಕ ಸಮಸ್ತರಾದ ಲಂಕಾನಿವಾಸಿಗಳೂ ಆ ಯುದ್ಧವನ್ನು ನೋಡಲು ಕುತೂಹಲಪಟ್ಟು ಹೊರಟರು ಆಬಾಲವೃದ್ಧರಾಗಿ ಸಮಸ್ತ ಲಂಕಾಪಟ್ಟಣವೂ ಆಗ ತಾವರೆಯೆಲೆಯಮೇಲಿರುವ ನೀರಿನಂತೆ ಚಂಚಲವಾಗಿದ್ದಿತು ॥೨೩॥

ಆ ಸಮಯದಲ್ಲಿ ಲಂಕಾಪಟ್ಟಣದ ಜನವೆಲ್ಲರೂ ಈ ಒಂದು ರಾತ್ರಿ ಕಳೆದರೆ ನಾವೆಲ್ಲರೂ ನಮ್ಮ ಬಂಧುಗಳೊಡನೆ ಬದುಕಿದಹಾಗಾಯ್ತು ಈ ಹನುಮಂತನ ವೇಗವನ್ನು ಸಹಿಸತಕ್ಕ

ಹನೂಮದ್ವೇಗಸಹನಂ ಇನ್ದ್ರಜಿತ್ಯೇವ ನಾನ್ಯತಃ ।
ಇನ್ದ್ರಜಿದ್ವೇಗಸಹನಂ ಹನೂಮತ್ಯೇವ ನಾನ್ಯತಃ ॥೦೪॥
ಉಭೌ ಜಿತಶ್ರಮೌ ವೀರೌ ಉಭಾವತಿಪರಾಕ್ರಮೌ ।
ಉಭೌ ರಣಸಹೌ ವೀರೌ ಉಭಾವರಿವಿಮರ್ದನೌ ॥೦೫॥
ಏವಂ ಸಮ್ಭಾಷಮಾಣೇಷು ಜನೇಷು ಪುರವಾಸಿಷು ।
ಅಸಂಭ್ರಾನ್ತಸ್ತದಾ ವೀರೋ ಹನೂಮಾನ್ ಮಾರುತಾತ್ಮಜಃ ।
ಪುನಶ್ಚಕಾರ ವಿರಥಂ ಮೇಘನಾದಂ ಮಹಾಬಲಃ ॥೦೬॥
ವಿರಥಶ್ಚಿನ್ನಧನ್ವಾಸೌ ಮಹಾವೇಗಪರಾಕ್ರಮಃ ।
ಪುನರ್ಲಙ್ಕಾಂ ಪ್ರವಿಶ್ಯಾಶು ರಥಾರೂಢೋಭ್ಯದೃಶ್ಯತ ॥೦೭॥
ಹನೂಮಾನಪಿ ತದ್ವೇಗಂ ದೃಷ್ಟ್ವಾ ಸನ್ತುಷ್ಟಮಾನಸಃ ।
ಪ್ರಶಶಂಸಾರಿಮತ್ಯನ್ತಂ ಗುಣಗ್ರಾಹೀ ಗುಣಾನ್ವಿತಃ ॥೦೮॥

ಹನೂಮತೋ ವೇದ ನ ರಾಕ್ಷಸೋನ್ತರಂ
ನ ಮಾರುತಿಸ್ತಸ್ಯ ಮಹಾತ್ಮನೋನ್ತರಮ್ ।
ಪರಸ್ಪರಂ ನಿರ್ವಿಷಹೌ ಬಭೂವತುಃ
ಸಮೇತ್ಯ ತೌ ದೇವಸಮಾನವಿಕ್ರಮೌ ॥೦೯॥

ಶಕ್ತಿಯು ಇಂದ್ರಜಿತುವೊಬ್ಬನಲ್ಲಿರುವುದೇ ಹೊರತು, ಮತ್ತಾರಲ್ಲಿಯೂ ಇಲ್ಲ, ಇಂದ್ರಜಿತುವಿನ ವೇಗವನ್ನು ಸಹಿಸತಕ್ಕ ಶಕ್ತಿಯು ಹನುಮಂತನಲ್ಲಿರುವುದೇ ಹೊರತು, ಮತ್ತೊಬ್ಬರಲ್ಲಿಲ್ಲ ಈ ಮಹಾವೀರರಿಬ್ಬರೂ, ಶ್ರಮಸಹಿಷ್ಣುಗಳು, ಇಬ್ಬರೂ ಮಿತಿಮೀರಿದ ಪರಾಕ್ರಮವುಳ್ಳವರು, ಇಬ್ಬರೂ ರಣರಂಗದಲ್ಲಿ ಸಹಿಸಬಲ್ಲವರು, ಇಬ್ಬರೂ ಶತ್ರುಗಳನ್ನು ಕೊಲ್ಲಲು ಸಮರ್ಥರು'' ಎಂದು ಮಾತನಾಡಿಕೊಳ್ಳುತಿರಲಾಗಿ, ಆಗ ವಾಯುಪುತ್ರನಾದ ಹನುಮಂತನು ಸ್ವಲ್ಪವೂ ಕಳವಳಪಡದೆ, ಮತ್ತೆ ಆ ಮೇಘನಾದನ ರಥವನ್ನು ಮುರಿದುಹಾಕಿದನು ॥೨೪–೨೬॥

ಹೀಗೆ ಮತ್ತೆ ರಥವನ್ನೂ ಧನುಸ್ಸನ್ನೂ ಕಳೆದುಕೊಂಡ ಮೇಘನಾದನು, ಪುನಃ ಲಂಕಾಪಟ್ಟಣಕ್ಕೆ ಹೋಗಿ ರಥವನ್ನು ಹತ್ತಿಕೊಂಡುಬಂದು ಕಾಣಿಸಿಕೊಂಡನು ॥೨೭॥

ಆಗ ಮಹಾಗುಣಶಾಲಿಯೂ ಗುಣಗ್ರಾಹಿಯೂ ಆಗಿರುವ ಹನೂಮಂತನು, ಅವನ ವೇಗವನ್ನು ನೋಡಿ ಸಂತುಷ್ಟಹೃದಯನಾಗಿ, ತನ್ನ ಶತ್ರುವನ್ನೂ ತಾನು ವಿಶೇಷವಾಗಿ ಶ್ಲಾಘಿಸಿದನು ॥೨೮॥

ಬಳಿಕ ದೇವತುಲ್ಯಪರಾಕ್ರಮರಾದ ಅವರಿಬ್ಬರೂ ಮತ್ತೆ ಯುದ್ಧಕ್ಕೋಸ್ಕರ ಸೇರಿದವರಾಗಿ, ಹನುಮಂತನ ಛಿದ್ರವು ಇಂದ್ರಜಿತುವಿಗೂ–ಇಂದ್ರಜಿತುವಿನ ಛಿದ್ರವು ಹನುಮಾಂತನಿಗೂ ಗೊತ್ತಾಗದೆ, ಒಬ್ಬನ ವೇಗವನ್ನು ಮತ್ತೊಬ್ಬ ಸಹಿಸಲಾರದವರಾಗಿದ್ದರು ॥೨೯॥

ತತಃ ಶರಪಸಸ್ರೇಣ ಘಾದಯಾಮಾಸ ಮಾರುತಿಮ್ ।
ವರ್ಷಾಕಾಲೇ ತು ಸಂಪ್ರಾಪ್ತೇ ಮೇಘೋದ್ರಿಮಿವ ವೃಷ್ಟಿಭಿಃ ॥೩೦॥
ಮಹಾಶಸ್ತ್ರಪ್ರವರ್ಷಂ ಚ ಸ್ತಮ್ಭೈರೇವ ನ್ಯವಾರಯತ್ ।
ಶಸ್ತ್ರಾಣಿ ತೃಣತುಲ್ಯಾನಿ ಮತ್ವಾ ಶ್ರಮನಿಪೀಡಿತಃ ॥೩೧॥
ಸ್ತಮ್ಭಘಾತಶಿಲಾಘಾತಮುಷ್ಟಿಘಾತಹತೋದ್ಯಮಃ ।
ಪ್ರಾಣಸಂಶಯಮಾಪನ್ನೋ ದ್ವನ್ದ್ವಯುದ್ಧೇ ಹನೂಮತಃ ॥೩೨॥
ಅಜಯ್ಯಂ ಮನಸಾ ಮತ್ವಾ ಹನೂಮನ್ತಂ ಮಹಾಬಲಃ ।
ಬ್ರಹ್ಮಾಸ್ತ್ರಂ ಸಮನುಸ್ಮೃತ್ಯ ಸಂದಧೇ ಸ ಶರಾಸನೇ ॥೩೩॥
ಬ್ರಹ್ಮಾಸ್ತ್ರೇ ಸಂಹಿತೇ ತೇನ ಹನೂಮಾನ್ ಮಾರುತಾತ್ಮಜಃ ।
ಸ್ಮಿತಂ ಕೃತ್ವಾ ಮಹಾಬಾಹುಃ ಚಿನ್ತಯಾಮಾಸ ಮಾನಸೇ ॥೩೪॥
ಛಿನ್ನೇ ಮಯಾ ಬ್ರಹ್ಮಶಸ್ತ್ರೇ ಲಬ್ಧ್ವಾ ದಾಹಃ ಕಥಂ ಭವೇತ್ ।
ಆಚ್ಛಿನ್ನೇ ಬ್ರಹ್ಮಶಸ್ತ್ರೇ ತು ಬನ್ಧನಂ ಮೇ ಧ್ರುವಂ ಭವೇತ್ ॥೩೫॥
ಮಹ್ಯಂ ದತ್ತವರೋ ಬಹ್ಮಾ ತೋಷಮೇಷ್ಯತಿ ನಿಶ್ಚಿತಮ್ ।
ತದಭಾವೇ ಪದ್ಮತನ್ತುಪ್ರಾಯಮೇವ ನಿಬನ್ಧನಮ್ ॥೩೬॥

ಆನಂತರ, ವರ್ಷಾಕಾಲ ಪ್ರಾಪ್ತವಾದಾಗ ಮೇಘವು ವೃಷ್ಟಿಧಾರೆಗಳಿಂದ ಪರ್ವತವನ್ನು ಆಚ್ಛಾದಿಸುವಂತೆ, ಇಂದ್ರಜಿತುವು ಅಸಂಖ್ಯಾಕವಾದ ಬಾಣವೃಷ್ಟಿಯಿಂದ ಹನುಮಂತನನ್ನು ಮುಚ್ಚಿಬಿಟ್ಟನು ॥೩೦॥

ಆಗ ಸ್ವಲ್ಪ ಶ್ರಮಕ್ಕೊಳಗಾದ ಹನುಮಂತನು, ಅವನ ಶಸ್ತ್ರಗಳನ್ನೆಲ್ಲ ತೃಣಕ್ಕೆ ಸಮಾನವಾಗಿ ಎಣಿಸಿಬಿಟ್ಟು, ಅಷ್ಟು ದೊಡ್ಡ ಬಾಣವೃಷ್ಟಿಯನ್ನೂ ತನ್ನ ಕೈಲಿದ್ದ ಕಂಬದಿಂದಲೇ ತಡೆದುಬಿಟ್ಟನು॥

ಆ ಬಳಿಕ, ಹನುಮಂತನೊಡನೆ ಯುದ್ಧ ಮಾಡುವಾಗ, ಇಂದ್ರಜಿತುವು ಹನುಮಂತನ ಸ್ತಂಭ ಪ್ರಹಾರದಿಂದಲೂ ಶಿಲಾವೃಷ್ಟಿಗಳಿಂದಲೂ ಮುಷ್ಟಿಘಾತದಿಂದಲೂ ವಿಫಲಪ್ರಯತ್ನನಾಗಿ, ಪ್ರಾಣ ಸಂಶಯದಲ್ಲಿದ್ದನು ॥೩೨॥

ಆಗ ಮಹಾಬಲನಾದ ಇಂದ್ರಜಿತುವು, ಹನುಮಂತನನ್ನು ಗೆಲ್ಲುವುದಸಾಧ್ಯನೆಂದು ತನ್ನ ಮನಸ್ಸಿನಲ್ಲಿ ತಿಳಿದುಕೊಂಡವನಾಗಿ, ಬ್ರಹ್ಮಾಸ್ತ್ರವನ್ನು ಧ್ಯಾನಮಾಡಿ ಧನುಸ್ಸಿನಲ್ಲಿ ಸೇರಿಸಿದನು ॥

ಹೀಗೆ ಇಂದ್ರಜಿತುವಿನಿಂದ ಬ್ರಹ್ಮಾಸ್ತ್ರಸಂಧಾನಮಾಡಲ್ಪಡಲಾಗಿ, ಮಹಾಭುಜನಾದ ಮಾರುತಿಯು, ಸ್ವಲ್ಪ ಮಂದಹಾಸಮಾಡಿ, ತನ್ನ ಮನಸ್ಸಿನಲ್ಲಿ ' ಈಗ ನಾನು ಈ ಬ್ರಹ್ಮಾಸ್ತ್ರವನ್ನು ಛೇದಿಸಿಬಿಟ್ಟರೆ, ಆಮೇಲೆ ಲಂಕಾದಹನ ಹೇಗಾಗಬೇಕು ? ಇದನ್ನು ಛೇದಿಸದೆ ಬಿಟ್ಟುಬಿಟ್ಟರೋ, ನಾನು ಇದರ ಬಂಧನದಲ್ಲಿದ್ದೇತೀರಬೇಕಾಗುವುದು ಮುಖ್ಯವಾಗಿ, ಪೂರ್ವದಲ್ಲಿ ನನಗೆ ವರವನ್ನು ಕೊಟ್ಟಿರುವ ಬ್ರಹ್ಮದೇವನು, ಈಗ ನಾನು ಬ್ರಹ್ಮಾಸ್ತ್ರಬಂಧವನ್ನನುಭವಿಸುವುದರಿಂದ ಸಂತುಷ್ಟನಾಗುವನು. ಈ ಯೋಚನೆಯಿಲ್ಲದಿದ್ದರೋ, ನನಗೆ ಈ ಬ್ರಹಾಸ್ತ್ರಬಂಧವು ತಾವರೆದಂಟಿನ ದಾರದಲ್ಲಿ ಕಟ್ಟಿದಂತೆಯೇ ಆಗುವುದು. ' ಎಂದು ಯೋಚಿಸಿದನು ॥೩೪-೩೬॥

ಇತಿ ಸಞ್ಚಿನ್ತ್ಯ ವೀರೋಸೌ ಅಜ್ಞೀಕೃತ್ಯಾಸ್ತ್ರಬನ್ಧನಮ್ ।
ಅಥಾಟ್ಟಹಾಸಮಕರೋತ್ ವೀರೋ ಮಾರುತನನ್ದನಃ ॥೩೭॥
ಏತಸ್ಮಿನ್ನೇವ ಸಮಯೇ ಮೇಘನಾದೋ ಮಹಾಬಲಃ ।
ಸ ಮುಮೋಚ ಬ್ರಹ್ಮಣೋಸ್ತ್ರಂ ಬನ್ಧನಾಯ ಹನೂಮತಃ ॥೩೪॥
ರಾಕ್ಷಸಪ್ರೇರಿತಂ ಶಸ್ತ್ರಂ ಬಹ್ಮಾಣ್ಡದಹನಕ್ಷಮಮ್ ।
ಸಮೀಪಂ ಮಾರುತೇರ್ಗತ್ವಾ ರುದ್ಧವೇಗಮಭೂತ್ ತದಾ ॥೩೯॥
ಲಜ್ಜಯಾವನತಂ ದೃಷ್ಟ್ವಾ ಹನುಮಾನ್ ಮಾರುತಾತ್ಮಜಃ ।
ಅಸ್ತ್ರಮಾಹ ಮಹಾವೀರ್ಯೋ ಮಹಾಬಲಪರಾಕ್ರಮಃ ॥೪೦॥
ಜನ್ಮನಾ ಶಿವಪುತ್ರೋಸ್ಮಿ ಕಾರಣಾನ್ಮಾರುತಾತ್ಮಜಃ ।
ಫಲಮೂಲಾಶನೋ ದಾನ್ತೋ ಬ್ರಹ್ಮಚರ್ಯವ್ರತೇ ಸ್ಥಿತಃ ॥೪೧॥
ದೇವಕಾರ್ಯಾರ್ಥಮುತ್ಪನ್ನೋ ರಾಮದೂತೋಸ್ಮಿ ವಿಕ್ರಮಾ ।
ದೇವತಾಹಿತಮಿಚ್ಛಾಮಿ ಕೃತ್ವಾ ಕಾರ್ಯಮನುತ್ತಮಮ್ ॥೪೨॥
ತಥಾಪಿ ಬನ್ಧನಂ ಕರ್ತುಂ ಅಸೀರೀನ್ದ್ರಜಿದರ್ಪಿತಃ ।
ರಾಕ್ಷಸಾನಾಂ ಹಿತಂ ಕರ್ತುಂ ದೇವಾನಾಮಹಿತಂ ಚರನ್ ॥೪೩॥

ಹೀಗೆಂದು ಯೋಚಿಸಿ, ಬಳಿಕ ಮಹಾವೀರನಾದ ಹನುಮಂತನು ಬ್ರಹಾಸ್ತ್ರಬಂಧವನ್ನೊಪ್ಪಿಗೊಂಡು ಅಟ್ಟಹಾಸಮಾಡಿದನು ॥೩೭॥

ಇಷ್ಟರಲ್ಲಿಯೇ, ಮಹಾಬಲನಾದ ಆ ಮೇಘನಾದನು ಹನುಮಂತನ ಬಂಧನಕ್ಕಾಗಿ ಬ್ರಹ್ಮಾಸ್ತ್ರವನ್ನು ಬಿಟ್ಟುಬಿಟ್ಟನು ॥೩೮॥

ಆಗ ಇಂದ್ರಜಿತುವಿನಿಂದ ಪಡಲ್ಪಟ್ಟ-ಬ್ರಹ್ಮಾಂಡವನ್ನೆಲ್ಲ ದಹಿಸುವುದರಲ್ಲಿ ಸಮರ್ಥವಾದ- ಆ ಬ್ರಹ್ಮಾಸ್ತ್ರವು, ಮಾರುತಿಯ ಸಮೀಪಕ್ಕೆ ಹೋಗಿ, ನಿರುದ್ದವಾದ ವೇಗವುಳ್ಳದಾಗಿ ಬಿಟ್ಟಿತು ॥೩೯॥

ಬಳಿಕ ಲಜ್ಜೆಯಿಂದ ನಮ್ರವಾಗಿಹೋಗಿರುವ ಆ ಬ್ರಹ್ಮಾಸ್ತ್ರವನ್ನು ನೋಡಿ, ಮಹಾವೀರ್ಯನೂ ಮಹಾಪರಾಕ್ರಮನೂ ಆದ ಹನುಮಂತನು ಹೀಗೆ ಹೇಳಿದನು ॥೪೦॥

ಎಲೈ ಬ್ರಹ್ಮಾಸ್ತ್ರವೇ! ನಾನು ಜನ್ಮದಲ್ಲಿ ಈಶ್ವರಪುತ್ರನು, ನಿಮಿತ್ತಮಾತ್ರದಿಂದ ವಾಯುದೇವನಿಗೆ ತನಯನು ಫಲಮೂಲಗಳನ್ನು ಆಹಾರಮಾಡಿಕೊಂಡು ಇಂದ್ರಿಯಗಳನ್ನು ನಿಗ್ರಹಿಸಿ ಬ್ರಹ್ಮಚರ್ಯವ್ರತದಲ್ಲಿ ನಿರತನಾಗಿರುವೆನು ॥೪೧॥

ನಾನು ದೇವತೆಗಳ ಕಾರ್ಯನಿಮಿತ್ತವಾಗಿ ಅವತರಿಸಿ ಶ್ರೀರಾಮನ ದೂತನಾಗಿರುವೆನು ಈಗ ಲೋಕೋತ್ತರವಾದ ಕಾರ್ಯವನ್ನು ಮಾಡಿ ದೇವತೆಗಳಿಗೆ ಹಿತವನ್ನು ಬಯಸುತಿರುವೆನು ॥೪೨॥

ಹೀಗಿದ್ದರೂ ಕೂಡ, ನೀನು ಇಂದ್ರಜಿತುವಿನಿಂದ ನನ್ನನ್ನು ಕಟ್ಟುವುದಕ್ಕೊಸ್ಕರ ಬಿಡಲ್ಪಟ್ಟುದಾಗಿ, ರಾಕ್ಷಸರಿಗೆ ಹಿತವನ್ನೂ ದೇವತೆಗಳಿಗೆ ಅಹಿತವನ್ನೂ ಮಾಡುತಿರುವೆ ॥೪೩॥

ಮುಷ್ಟಸ್ವಭಾವ ದುರ್ಬುದ್ಧೇ ನ ಜಾನಾಸಿ ಹಿತಾಹಿತಮ್ ।
ಮಮ ಶಕ್ತಿಂ ನ ಜಾನಾಸಿ ತ್ವಚ್ಛಕ್ತಿಂ ಮೇ ಪ್ರದರ್ಶಿತುಮ್ ॥೪೪॥
ಕೌಣಪಪ್ರಭುಮಾಶ್ರಿತ್ಯ ತ್ವಂ ಮಾಂ ಹಿಂಸಿತುಮುದ್ಯತಃ ।
ಪರಮೇಷ್ಠೀ ದತ್ತವರೋ ಮಮಾಸೀತ್ ಪೂರ್ವಮೇವ ಹಿ ॥೪೫॥
ಮಾನಯಾಮಿ ವರಂ ತಸ್ಯ ಲೋಕಸ್ರಷ್ಟುರ್ಮಹಾತ್ಮನಃ ।
ನೋ ಚೇತ್ ತೃಣೇನಾಪಿ ತುಲ್ಯೋ ಭವಿಷ್ಯಸಿ ನ ಮೇ ಧ್ರುವಮ್ ।
ಲೂತಾತನ್ತುಸಮಂ ಬಾಹ್ವೋಃ ಪ್ರವಿಶ ತ್ವಂ ಶರಾಧಮ ॥೪೬॥
ಇತ್ಯುದೀರಿತಮಾಕರ್ಣ್ಯ ಬ್ರಹ್ಮಾಸ್ತ್ರಂ ಸಮುಪಾವಿಶತ್ ॥೪೭॥
ತತಸ್ತೇ ರಾಕ್ಷಸಾದೃಷ್ಟ್ವಾ ನಿರ್ವಿಚೇಷ್ಟಮರಿನ್ದಮಮ್ ।
ಬಬನ್ಧುಃ ಶಣವಲ್ಕೈಶ್ಚ ದ್ರುಮಚೀರೈಶ್ಚ ಸಂಹತೈಃ ॥೪೮॥
ಸ ಬದ್ಧಸ್ತೇನ ವಲ್ಕೇನ ವಿಮುಕ್ತೋಸ್ತ್ರೇಣ ವೀರ್ಯವಾನ್ ।
ಅಸ್ತ್ರಬನ್ಧಃ ಸ ಚಾನ್ಯಂ ಹಿ ನ ಬನ್ಧಮನುವರ್ತತೇ ॥೪೯॥

ಇತಿ ಶ್ರೀಮತ್ಸುಂದರಕಾಣ್ಡೇ ಹನೂಮದ್ಗ್ರಹಣಾದಿಕಥನಂ
ನಾಮ ಸಪ್ತಮಃ ಸರ್ಗಃ

ಎಲ್ಲ ದುಷ್ಟಸ್ವಭಾವವಾದುದೆ! ದುರ್ಬುದ್ಧಿಯಾದುದೆ! ನೀನು ನಿನ್ನ ಹಿತಾಹಿತವನ್ನೂ ಯೋಚಿಸದಿರುವೆ ನಿನ್ನ ಶಕ್ತಿಯನ್ನು ನನಗೆ ತೋರಿಸುವುದಕ್ಕೆ ಹೊರಟು, ನನ್ನ ಶಕ್ತಿಯನ್ನೇ ಅರಿಯದಿರುವೆ ॥೪೪॥

ನೀನು ಈಗ ಈ ರಾಕ್ಷಸಾಧಿಪತಿಯನ್ನಾಶ್ರಯಿಸಿ ನನ್ನನ್ನು ಹಿಂಸಿಸುವುದಕ್ಕೆ ಉದ್ಯೋಗ ಪಡುತಿರುವೆಯಲ್ಲವೆ! ಆದರ, ಒಹುಕಾಲಕ್ಕೆ ಹಿಂದಯೇ ಆ ಜಗತ್ಕರ್ತೃವಾದ ಬ್ರಹ್ಮನು ನನಗೆ ವರವನ್ನು ಕೊಟ್ಟಿರುವನು ॥೪೫॥

ಈಗ ನಾನು ಆ ಜಗತ್ಕರ್ತನಾದ ಮಹಾಪ್ರಭುವಿನ ವರವನ್ನು ಮರ್ಯಾದಿಸಬೇಕಾಗಿರುವುದು ಹಾಗಿಲ್ಲದಪಕ್ಷದಲ್ಲಿ, ನೀನು ನನಗೊಂದು ತೃಣಕ್ಕೂ ಸಮವಾಗುತಿರಲಿಲ್ಲ, ಇದು ನಿಶ್ಚಯವು ಎಲೆ ಶರಾಧಮನೆ! ನೀನೊಂದು ಜಾಡಿನಪೂರೆಯ ದಾರದಂತೆ ನನ್ನ ಭುಜಗಳಲ್ಲಿ ಪ್ರವೇಶಮಾಡು ॥೪೬॥

ಹೀಗೆಂದು ಹನುಮಂತನಿಂದ ಹೇಳಲ್ಪಟ್ಟ ಮಾತನ್ನು ಕೇಳಿ, ಬ್ರಹ್ಮಾಸ್ತ್ರವು ಅವನ ಬಾಹುಗಳಲ್ಲಿ ಪ್ರವೇಶಿಸಿತು. ಬಳಿಕ ನಿಶ್ಚೇಷ್ಟನಾಗಿರುವ ಆ ಮಾರುತಿಯನ್ನು ನೋಡಿ, ರಾಕ್ಷಸರು ಸಣಬಿನ ಹುರಿಗಳಿಂದಲೂ ಮರದ ನಾರುಗಳ ಹಗ್ಗಗಳಿಂದಲೂ ಅವನನ್ನು ಕಟ್ಟಿದರು ॥೪೭-೪೮॥

ಹೀಗೆ ನಾರು ಹುರಿಗಳಿಂದ ಕಟ್ಟಲ್ಪಟ್ಟಕೂಡಲ, ಮಹಾವೀರ್ಯನಾದ ಹನುಮಂತನು ಬ್ರಹ್ಮಾಸ್ತ್ರದಿಂದ ಬಿಡಲ್ಪಟ್ಟನು ಆ ಬ್ರಹ್ಮಾಸ್ತ್ರದ ಒಂಧವು ಮತ್ತೊಂದರ ಬಂಧವನ್ನು ಅನುಸರಿಸಿಕೊಂಡಿರಲಾರದಲ್ಲವೆ! ॥೪೯॥

ಇದು ಸುಂದರಕಾಂಡದಲ್ಲಿ ಹನೂಮದ್ಗ್ರಹಣಾದಿಕಥನವೆಂಬ
ಏಳನೆಯ ಸರ್ಗವು

ಅಥ ಶ್ರೀಮತ್ಸುಂದರಕಾಣ್ಡೇ ಅಷ್ಟಮಃ ಸರ್ಗಃ

ಶ್ರೀಶಿವಉವಾಚ

ಹನೂಮನ್ತಂ ಗೃಹೀತ್ವಾಥ ಮೇಘನಾದೋ ಮಹಾಬಲಃ ।
ಪ್ರಯಯೌ ಸ್ವಪುರೀಂ ರಮ್ಯಾಂ ಪಿತೃದರ್ಶನಲಾಲಸಃ ॥೧॥

ಮೇಘನಾದಃ ಪಿತೃಗೃಹಂ ಪ್ರವಿಶ್ಯ ವಿನಿವೇದ್ಯ ತಮ್ ।
ತೂಷ್ಣೀಮಾಸ ಮಹಾವೀರಃ ಪಿತುರ್ಹಿತವಿಚಕ್ಷಣಃ ॥೨॥

ಸ ದದರ್ಶ ಮಹಾತೇಜಾಃ ರಾವಣಃ ಕಪಿಸತ್ತಮಮ್ ।
ರಕ್ಷೋಭಿರ್ವಿಕೃತಾಕಾರೈಃ ಕೃಷ್ಯಮಾಣಮಿತಸ್ತತಃ ॥೩॥

ರಾಕ್ಷಸಾಧಿಪತಿಂ ಚಾಪಿ ದದರ್ಶ ಕಪಿಸತ್ತಮಃ ।
ತೇಜೋಬಲಸಮಾಯುಕ್ತಂ ತಪನ್ತಮಿವ ಭಾಸ್ಕರಮ್ ॥೪॥

ಭ್ರಾಜಮಾನಂ ವರಾರ್ಹೇಣ ಕಾಞ್ಚನೇನ ವಿರಾಜತಾ ।
ಮುಕ್ತಾಜಾಲವೃತೇನಾಥ ಮುಕುಟೇನ ಮಹಾದ್ಯುತಿಮ್ ॥೫॥

ಸುಂದರಕಾಂಡದಲ್ಲಿ ಎಂಟನೆಯ ಸರ್ಗವು.

ಪುನಃ ಶ್ರೀ ಪರಮೇಶ್ವರನು ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ ! ಬಳಿಕ ಮಹಾಬಲನಾದ ಮೇಘನಾದನು ಹನುಮಂತನನ್ನು ಬಂಧನದಲ್ಲಿಟ್ಟುಗೊಂಡು ತಂದೆಯನ್ನು ನೋಡುವುದಕ್ಕೋಸ್ಕರ ಊರಿನೊಳಕ್ಕೆ ಹೋದನು ॥೧॥

ಅಲ್ಲಿ ತಂದೆಯ ಅರಮನೆಯನ್ನು ಪ್ರವೇಶಿಸಿ, ಆ ಹನುಮಂತನನ್ನು ತಂದೆಯ ಮುಂದೆ ಸಮರ್ಪಿಸಿ, ತಂದೆಗೆ ಹಿತವನ್ನುಂಟುಮಾಡುವುದರಲ್ಲಿ ವಿಚಕ್ಷಣನಾಗಿರುವ ಮಹಾವೀರನಾದ ಮೇಘನಾದನು ವಿಶ್ರಾಂತನಾದನು ॥೨॥

ಆಗ ಮಹಾತೇಜಸ್ವಿಯಾದ ರಾವಣನು, ವಿಕೃತರೂಪರಾದ ರಾಕ್ಷಸರಿಂದ ಇತ್ತಲೂ ಅತ್ತಲೂ ಎಳೆಯಲ್ಪಡುತಿರುವ ಆಂಜನೇಯನನ್ನು ನೋಡಿದನು ॥೩॥

ಆ ಕಪಿಶ್ರೇಷ್ಠನೂ ಕೂಡ, ತೇಜಸ್ಸಿನಿಂದಲೂ ಬಲದಿಂದಲೂ ಯುಕ್ತನಾಗಿ ಸೂರ್ಯನಂತೆ ಪ್ರಜ್ವಲಿಸುತಿರುವ ರಾಕ್ಷಸರಾಜನನ್ನು ನೋಡಿದನು ॥೪॥

ಆಗ ಮಹಾಕಾಂತಿಶಾಲಿಯಾದ ರಾವಣನು, ಸರ್ವೋತ್ತಮವಾಗಿಯೂ ಮುತ್ತುಗಳ ಜಾಲರಿಗಳಿಂದ ಆವೃತವಾಗಿಯೂ ವಿರಾಜಸುತಿರುವ ದಿವ್ಯವಾದ ಕಿರೀಟದಿಂದ ಪ್ರಕಾಶಿಸುತಿದ್ದನು॥

ಸುವಿಭೂಷಣಭೂಷಾಢ್ಯಂ ರಕ್ತಚನ್ದನರೂಷಿತಮ್ ।
ಶಿರೋಭಿರ್ದಶಭಿರ್ವೀರಂ ಭ್ರಾಜಮಾನಂ ಮಹೋರಸಮ್ ।
ನಾನಾವ್ಯಾಳಸಮಾಕೀರ್ಣೈಃ ಶಿಖರೈರಿವ ಮನ್ದರಮ್ ॥೬॥
ಮಹತಿ ಸ್ಫಾಟಿಕೇ ಚೈತ್ರೇ ರತ್ನಸಂಯೋಗಸಂಸ್ಕೃತೇ ।
ಉತ್ತಮಾಸ್ತರಣಾಸ್ತೀರ್ಣೇ ಸೂಪವಿಷ್ಟಂ ವರಾಸನೇ ॥೭॥
ಬನ್ಧನೇನ ಸಹ ನ್ಯಸ್ತಂ ತತಃ ಸೋಽಗ್ರೇತಿವಿಕ್ರಮಮ್ ।
ಪ್ರಾಕೃತೇನೈವ ರೂಪೇಣ ಭೂತಿಚ್ಛನ್ನಾನಲೋಪಮಮ್ ॥೮॥
ದೃಷ್ಟ್ವಾ ವೀರಂ ಹನೂಮನ್ತಂ ವಚನಂ ಚೇದಮಬ್ರವೀತ್ ॥೯॥
ಕಸ್ತ್ವಂ ವಾನರರೂಪೇಣ ಪ್ರವಿಷ್ಟೋ ನಗರೀಂ ಮಮ।
ಕೃತ್ವಾಪರಾಧಂ ದುರ್ಬುದ್ಧೇ ಕಥಂ ಮೇ ಪ್ರತಿಯಾಸ್ಯಸಿ ॥೧೦॥
ವಿತಸ್ತಿಮಾತ್ರಕಾಯೋಸಿ ವಾನರ ಪ್ರಾಕೃತೋಸಿ ಚ ।
ಅತಿಭೀತಇವಾಭಾಸಿ ಕಾರ್ಯಂ ತು ಕ್ರಿಯತೇ ಮಹತ್ ॥೧೧॥
ಪ್ರಾಣಭೀತಿಮನುಪ್ರಾಪ್ಯ ಭೀತಭೀತಇವ ಸ್ಥಿತಃ ।
ಮಾಯಾನಟನಮೇತತ್ ತೇ ಬನ್ಧಮೋಕ್ಷಣಹೇತವೇ ॥೧೨॥

ದಿವ್ಯವಾದ ಆಭರಣಗಳನ್ನು ಧರಿಸಿಕೊಂಡು, ರಕ್ತಚಂದನವನ್ನು ಲೇಪಿಸಿಕೊಂಡಿದ್ದನು. ನಾನಾವಿಧವಾದ ದುಷ್ಟಸರ್ಪಗಳುಳ್ಳದಾಗಿರುವ ಶಿಖರಗಳಿಂದ ಮಂದರಪರ್ವತವು ಶೋಭಿಸುವಂತೆ, ವಿಶಾಲಹೃದಯನಾದ ಆ ರಾವಣನು ಹತ್ತುತಿರಸ್ಸುಗಳಿಂದ ಶೋಭಿಸುತಿದ್ದನು ॥೬॥

ಸ್ಫಟಿಕಮಣಿಯಿಂದ ನಿರ್ಮಿತವಾಗಿಯೂ ರತ್ನಖಚಿತವಾಗಿಯೂ ಮೇಲೆ ಉತ್ತಮವಾದ ಆಸ್ತರಣಹಾಕಲ್ಪಟ್ಟುದಾಗಿಯೂ ಇರುವ ಶ್ರೇಷ್ಠಾಸನದಲ್ಲಿ ಕುಳಿತುಕೊಂಡಿದ್ದನು ॥೭॥

ಬಳಿಕ ಬಂಧನಸಹಿತವಾಗಿ ತನ್ನ ಮುಂದುಗಡೆ ತಂದು ಇಡಲ್ಪಟ್ಟಿರುವ-ಬೂದಿಮುಚ್ಚಿದ ಕೆಂಡದಂತೆ ಸಾಮಾನ್ಯವಾದ ರೂಪದಲ್ಲಿರುವ-ಮಹಾವೀರನಾದ ಹನುಮಂತನನ್ನು ನೋಡಿ, ಈ ಮಾತನ್ನು ಹೇಳಿದನು ॥೮-೯॥

ಎಲೈ ಕಪಿಯೆ! ನೀನು ಯಾರು? ನೀನು ಹೀಗೆ ಕಪಿಯ ರೂಪದಿಂದ ನನ್ನ ಪಟ್ಟಣಕ್ಕೆ ಏತಕ್ಕಾಗಿ ಪ್ರವೇಶಿಸಿದೆ? ಎಲೈ ದುರ್ಬುದ್ಧಿಯೆ! ಈಗ ನೀನು ನನಗೆ ಅಪರಾಧಮಾಡಿ ಇಲ್ಲಿಂದ ಹೇಗೆ ಹಿಂದಿರುಗಿಹೋಗುವೆ? ॥೧೦॥

ಎಲಾ ವಾನರ! ನೀನು ಒಂದು ಅಡಿಯಷ್ಟು ಶರೀರವುಳ್ಳವನಾಗಿರುವೆ, ಸಾಮಾನ್ಯಕಪಿಯಂತೆಯೇ ಕಾಣಿಸುವೆ, ಬಹಳ ಹೆದರಿದವನಂತೆ ನಟಿಸುತಿರುವೆ. ನೀನು ಮಾಡುವ ಕೆಲಸವಾದರೋ, ಅತಿಪ್ರಬಲವಾಗಿರುವುದು ॥೧೧॥

ಈಗ ನಿನಗೆ ಪ್ರಾಣಭಯವುಂಟಾಗಿರುವುದರಿಂದ, ಬಹಳ ಹೆದರಿದವನಂತಿರುವೆ. ಈ ಬಂಧನವನ್ನು ಬಿಡಿಸಿಕೊಳ್ಳುವುದಕ್ಕೋಸ್ಕರವಾಗಿ ನೀನು ಕಪಟದಿಂದ ಹೀಗೆ ನಟನೆಮಾಡುತಿರುವೆಯಲ್ಲದೆ, ಇದು ವಾಸ್ತವ್ಯವಲ್ಲ ॥೧೨॥

ಏವಂ ರಾವಣವಾಕ್ಯಂ ತತ್ ಶ್ರುತ್ವಾ ಪವನನಂದನಃ ।
ಶೌರ್ಯಧೈರ್ಯಯುತಂ ವಾಕ್ಯಂ ಪ್ರತ್ಯುವಾಚ ದಶಾನನಮ್ ॥೧೩॥
ತಸ್ಯ ರಾವಣಸ್ಯ ದೂತೋಽಸ್ಮಿ ಯಸ್ತೇ ಪ್ರಾಣಾನ್ ಹರಿಷ್ಯತಿ ।
ಸಪುತ್ರಮಿತ್ರಬಂಧೂನಾಂ ಯಸ್ತೇ ಹಂತಾಹವೇ ಪ್ರಭುಃ ॥೧೪॥
ಭೃಗುರಾಮೋ ಜಿತೋ ಯೇನ ಕಾರ್ತವೀರ್ಯಸ್ಯ ದರ್ಪಹಾ ।
ಯೇನ ತ್ವಂ ಬಹುಮಾನಾರ್ಹಃ ಕಾಲಾಗಾರೇ ನಿವೇಶಿತಃ ॥೧೫॥
ವಾಲೀ ವಿಸಹತೋ ಯೇನ ಸುಗ್ರೀವಹಿತಕಾಂಕ್ಷಯಾ ।
ಬದ್ಧನಾತ್ ಪೀಡಿತೋಽಸಿ ತ್ವಂ ಪ್ರಾಣಸಂಶಯಮಾಗತಃ ॥೧೬॥
ಸಂಧ್ಯಾವಂದನವೇಳಾಯಾಂ ರೋಮ್ಣಾ ವಾಲಾಗ್ರವರ್ತಿನಾ ।
ಲೀಲಾಹಾರಇವಾಭಾಸಿ ಸಪ್ತಸಾಗರಮಜ್ಜಿತಃ ॥೧೭॥
ಯಸ್ಯ ತ್ವಂ ನಗರಂ ಜೇತುಂ ಗತೋಽಸಿ ವಿಗತತ್ರಪಃ ।
ಯತ್ರ ತೀರ್ಥೇಷು ನಾರೀಣಾಂ ತ್ವಂ ಹಸ್ತತಲಮಧ್ಯಗಃ ॥೧೮॥

ಹೀಗೆಂದು ಹೇಳಿದ ರಾವಣನ ಮಾತನ್ನು ಕೇಳಿ, ಆ ವಾಯುಪುತ್ರನು, ದಶಮುಖನನ್ನು ಕುರಿತು, ಹೀಗೆ ಧೈರ್ಯದಿಂದಲೂ ಶೌರ್ಯದಿಂದಲೂ ಯುಕ್ತವಾಗಿರುವ ಮಾತನ್ನು ಹೇಳಿದನು॥೧೩॥

ಎಲೈ ರಾವಣನೆ ! ಇಷ್ಟು ದುಡುಕಿ ಮಾತನಾಡಬೇಡ ನಾನಾರೆಂಬುದನ್ನು ಬಲ್ಲೆಯಾ ? ಯಾವ ರಾಮಚಂದ್ರನು ನಿನ್ನ ಪ್ರಾಣಗಳನ್ನು ಅಪಹರಿಸತಕ್ಕವನೋ ಯಾವ ಪ್ರಭುವು ರಣರಂಗದಲ್ಲಿ ನಿನ್ನ ಪುತ್ರರನ್ನೂ ಮಿತ್ರರನ್ನೂ ಬಂಧುಗಳನ್ನೂ ಕೊಲ್ಲುವನೋ, ಅಂತಹ ಮಹಾತ್ಮನಿಗೆ ನಾನು ದೂತನಾಗಿರುವೆನು ॥೧೪॥

ಯಾವ ಕಾರ್ತವೀರ್ಯಾರ್ಜುನನು, ವಸ್ತುತಃ ಬಹುಮಾನಯೋಗ್ಯನಾಗಿದ್ದರೂ ನಿನ್ನನ್ನು ಕಾರಾಗೃಹದಲ್ಲಿಟ್ಟಿದ್ದನೋ, ಅಂತಹ ಕಾರ್ತವೀರ್ಯಾರ್ಜುನನ ಗರ್ವವನ್ನು ಮುರಿದವನಾದ ಪರಶುರಾಮನು ನಮ್ಮ ಶ್ರೀರಾಮಚಂದ್ರನಿಂದ ಗೆಲ್ಲಲ್ಪಟ್ಟಿರುವನು ॥೧೫॥

ಯಾವ ವಾಲಿಯಿಂದ ಪೀಡಿತನಾಗಿ ನೀನು ಪ್ರಾಣಸಂಶಯಕ್ಕೊಳಗಾಗಿದ್ದೆಯೋ, ಅಂತಹ ವಾಲಿಯು ನಮ್ಮ ಪ್ರಭುವಿನಿಂದ ಸುಗ್ರೀವನ ಹಿತಕ್ಕೋಸ್ಕರ ಕೊಲ್ಲಲ್ಪಟ್ಟಿರುವನು ॥೧೬॥

ಅಯ್ಯಾ ! ರಾಕ್ಷಸೇಶ್ವರನೆ ! ವಾಲಿಯಿಂದ ನಿನಗುಂಟಾದ ಸಂಕಟಗಳನ್ನು ಮರೆತುಬಿಟ್ಟಿಯಾ ? ಅವನು ಸಂಧ್ಯಾವಂದನಾನಿರತನಾಗುತಿರುವಾಗ ನೀನು ಅವನ ಹಿಂದುಗಡೆ ಹೋಗಿ ನಿಂತುಗೊಂಡ ಸಮಯದಲ್ಲಿ, ಅವನು ನಿನ್ನನ್ನು ತನ್ನ ಬಾಲದ ತುದಿಯಲ್ಲಿರುವ ಒಂದು ರೋಮದಿಂದ ಕಟ್ಟಿಬಿಟ್ಟು ಏಳು ಸಮುದ್ರಗಳಲ್ಲಿ ಮುಳುಗಿಸುತಿರುವಾಗ, ನೀನು ಅವನ ಬಾಲದ ತುದಿಯಲ್ಲಿರುವ ಲೀಲಾರ್ಥವಾದ ಹಾರದಂತೆ ಕಾಣಿಸುತಿದ್ದೆಯಲ್ಲವೆ ! ॥೧೭॥

ಇಷ್ಟಾದರೂ ನಾಚುಗೆಯಿಲ್ಲದೆ, ನೀನು ಆ ವಾಲಿಯ ಪಟ್ಟಣವನ್ನು ಗೆಲ್ಲುವುದಕ್ಕೆಂದು ಹೋದೆಯಲ್ಲ ! ಆಗ ಆ ಕಿಷ್ಕಿಂಧಾಪಟ್ಟಣದಲ್ಲಿರುವ ಸರೋವರಗಳೊಳಗೆ ಸ್ತ್ರೀಯರಕೈಲಿ ನೀನು ಸಿಕ್ಕಿಕೊಂಡಿದ್ದೆಯಲ್ಲವೆ ! ॥೧೮॥

ತಾಃ ಕ್ರೀಡನ್ತಿ ಚಿರಂ ಕಾಲಂ ಮಕ್ಷಿಕಾ ದಶಮಸ್ತಕಾ ।
ಕುತಃ ಪ್ರಾಪ್ತೇತಿ ನಾರೀಣಾಂ ಹಸ್ತಾದ್ಧಸ್ತಾತ್ ಪ್ರಪೀಡಿತಃ ॥೧೯॥
ಬಲೀ ಯಸ್ಯ ಪದಾಮ್ಭೋಜಭಕ್ತಿಮಾಲಂಬ್ಯ ಜೀವಸಿ ।
ಚೋರೋಸಿ ಸರ್ವಲೋಕೇಷು ದುರ್ಬಲಪ್ರತಿಹಿಂಸನಾತ್ ॥೨೦॥
ಸಮುದ್ರಮಧ್ಯೇ ಸದನಂ ತವ ವಿಕ್ರಮಸೂಚಕಮ್ ।
ರಾಮಾಸನ್ನಿಧಿಮಾಸಾದ್ಯ ಸೀತಾಹರಣಮಪ್ಯಲಮ್ ॥೨೧॥
ನ ರಾವಣಜ್ಞಾಂ ವಿನಾ ಮೂಢ ಮಯಾ ವಃ ಕ್ರಿಯತೇ ವಧಃ ।
ಮೇರುರ್ಮೇ ಚೂರ್ಣಿತೋ ಮುಷ್ಟ್ಯಾ ಹಿಮವಾಂಶ್ಚ ಭವಿಷ್ಯತಿ ॥೨೨॥
ಕಸ್ತ್ರಿಕೂಟಾಚಲಸ್ತ್ವಂ ಚ ಮಮ ಮುಷ್ಟಿಪ್ರಘಾತನೇ ।
ಸೀತಾದುರುಕ್ತಿಕಾಲೇ ಕಿಂ ಮುಷ್ಟಿಘಾತೋ ನು ವಿಸ್ಮೃತಃ ॥೨೩॥
ಕಶ್ಚ ಲಕ್ಷ್ಮಣಮುಕ್ತಾನಾಂ ರಾಮಕೋಪಾನುವರ್ತಿನಾಮ್ ।
ಶರಾಣಾಮಗ್ರತಃ ಸ್ಥಾತುಂ ಶಕ್ತೋ ದೇವಾಸುರೇಷ್ವಪಿ ॥೨೪॥

ಆಗ ಸ್ತ್ರೀಯರು ಈ ಹತ್ತುತಲೆಯ ನೊಣವೆಲ್ಲಿ ಬಂದಿತೆಂದು ಹೇಳಿಕೊಂಡು ಆಟವಾಡುತಿದ್ದರಲ್ಲ ! ಹೀಗೆ ಅವರು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ನಿನ್ನನ್ನು ಎಸೆದಾಡುತ್ತಿರುವಾಗ ನೀನು ಅನುಭವಿಸಿದ ವ್ಯಥೆಯನ್ನು ಮರೆತುಬಿಟ್ಟೆಯಾ ? ॥೧೯॥

ನಿನ್ನ ಬಲವು ನಮಗೆಲ್ಲ ಗೊತ್ತಿರುವುದು ! ಆ ಶ್ರೀರಾಮನ ಪಾದಕಮಲದಲ್ಲಿ ಭಕ್ತಿಯನ್ನ ವಲಂಬಿಸುವೆಯಾದರೆ, ಆಗ ನೀನು ಬದುಕುವೆ ಈಗಲಾದರೋ, ಅವನು ಆಶ್ರಮದಲ್ಲಿಲ್ಲದಿದ್ದಾಗ ಸೀತಾದೇವಿಯನ್ನು ಅಪಹರಿಸಿಕೊಂಡು ಬಂದು ಹಿಂಸಿಸ ವುದರಿಂದಲೂ, ಇದರಂತೆಯೇ ಇನ್ನೂ ದುರ್ಬಲರನ್ನು ಹಿಂಸಿಸುವುದರಿಂದಲೂ, ನೀನು ಕಳ್ಳನೆಂದುಲೋಕದಲ್ಲೆಲ್ಲ ಪ್ರಸಿದ್ಧನಾಗಿರುವೆ॥೨೦॥

ಭೂಮಿಯಲ್ಲೆಲ್ಲ ಬಿಟ್ಟು ಸಮುದ್ರಮಧ್ಯದಲ್ಲಿ ಮನೆಯನ್ನು ಕಟ್ಟಿಕೊಂಡಿರುವುದೇ, ನಿನ್ನ ವಿಕ್ರಮವನ್ನು ಸೂಚಿಸುವುದಲ್ಲವೆ ! ಶ್ರೀರಾಮನು ಆಶ್ರಮದಲ್ಲಿಲ್ಲದಿದ್ದಾಗ ಸೀತಾದೇವಿಯನ್ನು ಅಪಹರಿಸಿದುದು, ಇನ್ನೂ ಹೆಚ್ಚಾಗಿ ನಿನ್ನ ವಿಕ್ರಮವನ್ನು ಸೂಚಿಸುತಿರುವುದು ॥೨೧॥

ಎಲೈ ಮೂಢನಾದ ರಾವಣನೆ ! ಶ್ರೀರಾಮಚಂದ್ರನ ಆಜ್ಞೆಯಿಲ್ಲದುದರಿಂದ, ನಾನು ಈಗ ನಮ್ಮೆಲ್ಲರನ್ನೂ ಕೊಲ್ಲದೆ ಬಿಟ್ಟಿರುವೆನು ನಾನು ಮನಸ್ಸುಮಾಡಿದರೆ, ನನ್ನದೊಂದು ಮುಷ್ಟಿ ಪ್ರಹಾರದಿಂದ ಮೇರುಪರ್ವತವನ್ನು ಬೆ.ಕಾದರೂ ಅಥವಾ ಹಿಮವತ್ಪರ್ವತವನ್ನು ಬೇಕಾದರೂ ಚೂರ್ಣಮಾಡಿಬಿಡಬಲ್ಲೆನು ॥೨೨॥

ನಾನು ಮುಷ್ಟಿಯಿಂದ ಹೊಡೆಯಲು ಹೊರಟೆನಾದರೆ, ನಿನ್ನ ತ್ರಿಕೂಟಪರ್ವತವೆಷ್ಟರದು ? ನೀನು ತಾನೆ ಎಲ್ಲಿ ತಡೆಯಬಲ್ಲ ? ನೀನು ಸೀತಾದೇವಿಯ ಸನ್ನಿಧಿಯಲ್ಲಿ ದುರ್ಭಾಷೆಗಳನ್ನಾಡಿದಾಗ ನಾನು ನಿನಗೆ ಕೊಟ್ಟ ಮುಷ್ಟಿಪ್ರಹಾರವನ್ನು ಮರೆತುಬಿಟ್ಟೆಯೇನು ? ॥೨೩॥

ಶ್ರೀರಾಮನ ಹೃದಯದಲ್ಲುಂಟಾಗಿರುವ ಕ್ರೋಧವನ್ನು ಸ್ಮರಿಸಿಕೊಂಡು ಲಕ್ಷ್ಮಣನಿಂದ ಬಿಡಲ್ಪಡುವ ಬಾಣಗಳಿಗೆದುರಾಗಿ ನಿಲ್ಲಲು, ದೇವತೆಗಳಲ್ಲಾಗಲಿ ಅಸುರರಲ್ಲಾಗಲಿ ಯಾವನು ಶಕ್ತನಾಗಿರುವನು ? ॥೨೪॥

ಅಪಕುರ್ವನ್ ಹಿ ರಾಮಸ್ಯ ಸಾಕ್ಷಾದಪಿ ಪುರಂದರಃ ।
ನ ಸುಖಂ ಪ್ರಾಪ್ನುಯಾದನ್ಯಃ ಕಿಂಪುನಸ್ತ್ವದೃಶೋ ಜನಃ ॥೨೫॥

ಯಾಂ ಸೀತೇತ್ಯಭಿಜಾನಾಸಿ ಯೇಯಂ ತಿಷ್ಠತಿ ತೇ ವಶೇ ।
ಕಾಳರಾತ್ರೀತಿ ತಾಂ ವಿದ್ಧಿ ಸರ್ವಲಙ್ಕಾವಿನಾಶಿನೀಮ್ ॥೨೬॥

ತದಲಂ ಕಾಲಪಾಶೇನ ಸೀತಾವಿಗ್ರಹರೂಪಿಣಾ ।
ಸ್ವಯಂಕೃತ್ತೇನ ಕ್ಷಮಮಾತ್ಮನಿ ಚೇನ್ನ್ಯತಾಮ್ ॥೨೭॥

ಸತ್ಯಂ ರಾಕ್ಷಸರಾಜೇನ್ದ್ರ ಶೃಣುಷ್ವ ವಚನಂ ಮಮ ।
ರಾಮದೂತಸ್ಯ ದಾಸಸ್ಯ ವಾನರಸ್ಯ ವಿಶೇಷತಃ ॥೨೮॥

ಸರ್ವಾ ಲೋಕಾ ಸುಸಂಹೃತ್ಯ ಸಭೂತಾ ಸಚರಾಚರಾ ।
ಪುನರೇವ ಜಗತ್ ಸ್ರಷ್ಟುಂ ಶಕ್ತೋ ರಾಮೋ ಮಹಾಯಶಾಃ ॥೨೯॥

ದೇವಾಶ್ಚ ದೈತ್ಯಾಶ್ಚ ನಿಶಾಚರೇನ್ದ್ರಾಃ
ಗನ್ಧರ್ವವಿದ್ಯಾಧರನಾಗಯಕ್ಷಾಃ ।
ರಾಮಸ್ಯ ಲೋಕತ್ರಯನಾಯಕಸ್ಯ
ಸ್ಥಾತುಂ ನ ಶಕ್ತಾಃ ಸಮರೇಷು ಸರ್ವೇ ॥೩೦॥

ನಮ್ಮ ಶ್ರೀರಾಮನಿಗೆ ಅಪಕಾರಮಾಡತಕ್ಕವನು, ಸಾಕ್ಷಾತ್ ದೇವೇಂದ್ರನೇ ಆಗಿದ್ದರೂ ಸುಖವಾಗಿರಲಾರನು ಇನ್ನು ನಿನ್ನಂಥವನ ಪಾಡೇನು ! ॥೨೫॥

ಎಲಾ ರಾವಣನೆ ! ಈಗ ನೀನು ಯಾರನ್ನು ಸೀತೆಯೆಂದು ತಿಳಿದುಕೊಂಡಿರುವೆಯೋ, ಈಗ ಯಾವಳು ನಿನ್ನ ವಶದಲ್ಲಿರುವಳೋ, ಅವಳು ಸಮಸ್ತ ಲಂಕಾಪಟ್ಟಣವನ್ನೂ ನಾಶಪಡಿಸತಕ್ಕ ಕಾಳರಾತ್ರಿಯಂಬುದಾಗಿ ತಿಳಿಯುವನಾಗು ॥೨೬॥

ಹೀಗಿರುವುದರಿಂದ, ಈ ಸೀತೆಯೆಂಬ ಕಾಲಪಾಶವನ್ನು ನೀನಾಗಿ ಕೊರಳಿನೊಳಗೆ ಹಾಕಿಕೊಳ್ಳುವುದನ್ನು ಸಾಕುಮಾಡು, ಮುಂದೆ ಯಾವುದುಚಿತವೆಂಬುದನ್ನು ನಿನ್ನೊಳಗೆ ನೀನೇ ಪರ್ಯಾಲೋಚಿಸು ॥೨೭॥

ಎಲೈ ರಾಕ್ಷಸರಾಜನೆ ! ಶ್ರೀರಾಮನ ದೂತನಾಗಿಯೂ ವಿಶೇಷತಃ ವಾನರನಾಗಿಯೂ ಇರುವ ನಾನು ಹೇಳುವ ಸತ್ಯವಾದ ಈ ಮಾತನ್ನು ಕೇಳುವನಾಗು ॥೨೮॥

ಆ ಮಹಾಯಶಶ್ಶಾಲಿಯಾದ ಶ್ರೀರಾಮನು, ಸಮಸ್ತ ಪ್ರಾಣಿಗಳೂಡನೆಯೂ ಈ ಸಮಸ್ತಲೋಕಗಳನ್ನೂ ನಿಮಿಷಾರ್ಧದಲ್ಲಿ ಸಂಹರಿಸಬಲ್ಲನು, ಪುನಃ ಬೇಕಾದರೆ ಸೃಷ್ಟಿಸಲೂ ಬಲ್ಲನು ॥

ಸಮಸ್ತರಾದ ದೇವತೆಗಳೂ, ರಾಕ್ಷಸೋತ್ತಮರೂ, ಗಂಧರ್ವ ವಿದ್ಯಾಧರ ನಾಗ ಯಕ್ಷರೂ ಕೂಡ, ಆ ತ್ರಿಲೋಕಾಧಿಪತಿಯಾದ ಶ್ರೀರಾಮನ ಯುದ್ದದಲ್ಲಿ ನಿಲ್ಲಲಾರರು ॥೩೦॥

ಸರ್ವಭೂತೇಷು ಸರ್ವತ್ರ ಸರ್ವಲೋಕೇಷು ನಾಸ್ತಿ ಸಃ ।
ಯೋ ರಾಮಂ ಪ್ರತಿಯುದ್ಧ್ಯೇತ ವಿಷ್ಣುತುಲ್ಯಪರಾಕ್ರಮಮ್ ॥೩೧॥
ಸರ್ವಲೋಕೇಶ್ವರಸ್ಯೇಹ ಕೃತ್ವಾ ವಿಪ್ರಿಯಮೀದೃಶಮ್ ।
ರಾಮಸ್ಯ ರಾಜಸಿಂಹಸ್ಯ ದುರ್ಲಭಂ ತವ ಜೀವಿತಮ್ ॥೩೨॥

ಬ್ರಹ್ಮಾ ಸ್ವಯಂಭೂಶ್ಚತುರಾನನೋ ವಾ
ರುದ್ರಸ್ತ್ರಿಣೇತ್ರಸ್ತ್ರಿಪುರಾಂತಕೋ ವಾ ।
ಇನ್ದ್ರೋ ಮಹೇನ್ದ್ರಃ ಸುರನಾಯಕೋ ವಾ
ತ್ರಾತುಂ ನ ಶಕ್ತಾಯುಧಿ ರಾಮವಧ್ಯಮ್ ॥೩೩॥

ಹನೂಮದ್ವಚನಂ ಶ್ರುತ್ವಾ ಮರ್ಮಸ್ಥಾನಹತೋ ಭೃಶಮ್ ।
ಪ್ರಜಜ್ವಾಲಾತಿಕೋಪೇನ ವಚನಂ ಚೇದಮಬ್ರವೀತ್ ॥೩೪॥
ರಾತ್ರೌ ಮತ್ಪುರಮಾಸಾದ್ಯ ಚೋರೋಯಂ ವಧ್ಯತಾಮಿಹ ।
ವನಭಂಕ್ತಾ ಪುತ್ರಹನ್ತಾ ನಾಯಂ ಜೀವಿತುಮರ್ಹತಿ ॥೩೫॥
ಮಮ ದೃಷ್ಟಿಪಥೇ ಸ್ಥಾತುಂ ನಾರ್ಹತ್ಯನ್ಯತ್ರ ನೀಯತಾಮ್ ।
ಪಾಪಿನೋ ಹ್ಯಸ್ಯ ದುರ್ಬುದ್ಧೇಃ ವಧಏವ ಸುದಾರುಣಮ್ ॥೩೬॥

ಆ ವಿಷ್ಣುಸದೃಶಪರಾಕ್ರಮನಾದ ಶ್ರೀರಾಮನನ್ನು ಎದುರಿಸಿ ಯಾವನು ಯುದ್ಧಮಾಡ ಬಲ್ಲನೋ, ಅಂಥವನೊಬ್ಬನು–ಸಮಸ್ತ ಲೋಕಗಳಲ್ಲಿಯೂ ಸಮಸ್ತ ಭೂತಗಳಲ್ಲಿಯೂ ಸಮಸ್ತ ಸ್ಥಳಗಳಲ್ಲಿಯೂ ಸಿಕ್ಕುವುದಿಲ್ಲ ॥೩೧॥

ಆ ಸರ್ವಲೋಕೈಕಪ್ರಭುವೂ ರಾಜಸಿಂಹನೂ ಆದ ಶ್ರೀರಾಮನಿಗೆ ಈರೀತಿಯಾಗಿ ಅಪ್ರಿಯವನ್ನು ಮಾಡಿದ ಬಳಿಕ, ನಿನಗೆ ಜೀವಿತವೆಂಬುದು ದುರ್ಲಭವಾಗಿರುವುದು ॥೩೨॥

ಆ ಚತುರ್ಮುಖನಾದ ಬ್ರಹ್ಮನೇ ಆಗಲಿ, ತ್ರಿಪುರಾಸುರಸಂಹಾರಕನಾದ ರುದ್ರನೇ ಆಗಲಿ, ಸಕಲದೇವಾಧಿಪತಿಯಾದ ಮಹೇಂದ್ರನೇ ಆಗಲಿ, ಶ್ರೀರಾಮನಿಂದ ಯುದ್ಧದಲ್ಲಿ ಕೊಲ್ಲಲ್ಪಡಲು ನಿಶ್ಚಿತನಾದವನನ್ನು ರಕ್ಷಿಸಲು ಸಮರ್ಥರಾಗುವುದಿಲ್ಲ ॥೩೩॥

ಹೀಗೆಂದು ಹೇಳುತಿರುವ ಹನುಮಂತನ ಮಾತನ್ನು ಕೇಳಿ, ಬಹಳವಾಗಿ ಮರ್ಮಾಹತನಾದ ರಾವಣನು, ಅತಿಯಾಗಿ ಕೋಪದಿಂದ ಉದ್ದೀಪಿತನಾದನು , ಆಮೇಲೆ ಈ ಮಾತನ್ನೂ ಹೇಳಿದನು॥

ಎಲೈ ಭೃತ್ಯರಾ ! ರಾತ್ರಿಯಹೊತ್ತು ನಮ್ಮ ಪಟ್ಟಣದೊಳಕ್ಕೆ ಬಂದಿರುವ ಈ ಕಳ್ಳನನ್ನು ಈಗಲೇ ಕೊಂದುಹಾಕಿರಿ. ನಮ್ಮ ಅಶೋಕವನವನ್ನು ಮುರಿದು ನಮ್ಮ ಅಕ್ಷಕುಮಾರಕನನ್ನೂ ಕೊಂದುಹಾಕಿದ ಇವನು, ಸರ್ವಥಾ ಇಲ್ಲಿಂದ ಬದುಕಿಹೋಗುವುದಕ್ಕರ್ಹನಲ್ಲ ॥೩೪॥

ಕೊನೆಗೆ ಇವನು ನನ್ನ ಕಣ್ಣಿದುರಿಗಿರುವುದಕ್ಕೂ ಅರ್ಹನಲ್ಲ ಇವನನ್ನು ಇನ್ನೆಲ್ಲಿಗಾದರೂ ಕರೆದುಕೊಂಡು ಹೋಗಿರಿ. ಮಹಾದುರ್ಬುದ್ಧಿಯಾದ ಈ ದುರಾತ್ಮನಿಗೆ ವಧವೇ ಸರಿಯಾದ ಶಿಕ್ಷೆಯು ॥೩೬॥

ಇತ್ಯುಕ್ತೇ ರಾಕ್ಷಸಾಃ ಸರ್ವೇ ಪರಿವಾರ್ಯೋಪತಸ್ಥಿರೇ ।
ಆಞ್ಜನೇಯವಧಾರ್ಥಾಯ ಸಾಧನೈರ್ಭಯಕಮ್ಪಿತಾಃ ॥೩೬॥

ವಾಲವೀಜನಮಾತ್ರೇಣ ಹತಾಸ್ತೇ ವಧಕಾಂಕ್ಷಿಣಃ ।
ಪುನಃಪುನಃ ಪ್ರೇರಿತಾಶ್ಚ ಹತಾರಾಕ್ಷಸಕೋಟಯಃ ॥೩೪॥

ಅಪರೇ ಪ್ರೇರಿತಾವೀರ್ಯಾಃ ವ್ಯವಧಾನೇನ ಸಂಸ್ಥಿತಾಃ ।
ಕೋಲಾಹಲಂ ಪ್ರಕುರ್ವನ್ತಿ ವಿಧಃ ಸಾನ್ನಿಧ್ಯಸಜ್ಜಿತಾಃ ॥೩೫॥

ಇತಿ ಶ್ರೀಮತ್ಸುನ್ದರಕಾಣ್ಡೇ ಹನೂಮದ್ರಾವಣಸಂವಾದಕಥನಂ ನಾಮ
ಅಷ್ಟಮಃ ಸರ್ಗಃ



ಹೀಗೆಂದು ರಾವಣನಿಂದ ಹೇಳಲ್ಪಡಲಾಗಿ, ಸಮಸ್ತರಾಕ್ಷಸರೂ ಭಯದಿಂದ ನಡುಗುತ ಆಂಜನೇಯನನ್ನು ಕೊಲ್ಲುವುದಕ್ಕಾಗಿ ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ಅವನ ಸುತ್ತಲೂ ಬಂದು ನಿಂತರು ॥೩೬॥

ಆಗ ಹನುಮಂತನು ತನ್ನ ಬಾಲವನ್ನು ಬೀಸಿ, ತನ್ನನ್ನು ಹೂಡೆಯಲು ಬಂದು ನಿಂತಿದ್ದ ಆ ರಾಕ್ಷಸರನ್ನು ಹೂಡದುಒಟ್ಟನು ಮತ್ತೆಮತ್ತೆ ರಾವಣನು ಅನೇಕಕೋಟಿ ರಾಕ್ಷಸರನ್ನು ಕಳುಹುತಿರಲಾಗಿ, ಅವರೆಲ್ಲರನ್ನೂ ಆದೇರೀತಿಯಲ್ಲ ಹನುಮಂತನು ಹೂಡೆಯುತಬಂದನು ॥೩೪॥

ಆಮೇಲೆ ಮತ್ತ ಕೆಲವುಮಂದಿ ಮಹಾವೀರರನ್ನು ರಾವಣನು ಪ್ರೇರಿಸಲಾಗಿ, ಅವರು ಆ ಹನುಮಂತನ ಹತ್ತಿರಕ್ಕ ಬಾರದೆ ಸ್ವಲ್ಪ ದೂರವಾಗಿ ನಿಂತುಗೂಂತು, ತಾವುತಾನೇ ಒಬ್ಬರಿಗೊಬ್ಬರು ಹತ್ತಿರಕ್ಕೆ ಸೇರುತ ಕೋಲಾಹಲಮಾಡುತಿದ್ದರು ॥೩೫॥

ಇದು ಸುಂದರಕಾಂಡದಲ್ಲಿ ಹನುಮದ್ರಾವಣಸಂವಾದಕಥನವೆಂಬ
ಎಂಟನೆಯ ಸರ್ಗವು



ಅಥ ಶ್ರೀಮತ್ಸುಂದರಕಾಂಡೇ ನವಮಃ ಸರ್ಗಃ.

ಶ್ರೀಶಿವಉವಾಚ.

ತತೋ ವಿಭೀಷಣೋ ರಾಜಾ ರಾವಣಂ ವಾಕ್ಯಮಬ್ರವೀತ್ ।
ಹಿತಾಕಾಂಕ್ಷೀ ಬನ್ಧುವರ್ಗೇ ರಾವಣಾಯ ವಿಶೇಷತಃ ॥೧॥
ವೃದ್ಧೋಸಿ ವೃದ್ಧಸೇವೀ ಚ ನೀತಿಶಾಸ್ತ್ರಾಣ್ಯಧೀತವಾ ।
ವೇದೀ ಚ ವೇದವಿದ್ವಾಂಶ್ಚ ವೇದಜಾಪ್ಯಪ್ರವರ್ತಕಃ ॥೨॥
ದೂತಾನವಧ್ಯಾ ಪ್ರವದನ್ತಿ ಸನ್ತೋ ದೂತಸ್ಯ ದೃಷ್ಟಾ ಬಹವೋ ಹಿ ದಣ್ಡಾಃ ।
ವೈರೂಪ್ಯಮಙ್ಗೇಷು ಕಶಾಭಿಘಾತೋ ಮೌಂಡ್ಯಂ ತಥಾ ಲಕ್ಷಣಸನ್ನಿಪಾತಃ ॥೩॥
ನ ಚಾಪ್ಯಸ್ಯ ಕಪೇರ್ಘಾತೇ ಕಞ್ಚಿತ್ ಪಶ್ಯಾಮ್ಯಹಂ ಗುಣಮ್ ।
ತೇಷ್ವಯಂ ಪಾತ್ಯತಾಂ ದಣ್ಡೋ ಯೈರಯಂ ಪ್ರೇಷಿತಃ ಕಪಿಃ ॥೪॥

ಸುಂದರಕಾಂಡದಲ್ಲಿ ಒಂಭತ್ತನೆಯ ಸರ್ಗವು

ಪುನಃ ಶ್ರೀಪರಮೇಶ್ವರನು ಪಾರ್ವತಿಗೆ ಹೇಳುವನು —

ಎಲೌ ಪಾರ್ವತಿ ! ಹೀಗ ರಾವಣನು ಹನುಮಂತನಿಗೆ ವಧೆಯನ್ನು ಆಜ್ಞಾಪಿಸಿದನಂತರ, ತನ್ನಬಂಧುಗಳಿಗೂ ವಿಶೇಷತಃ ರಾವಣನಿಗೂ ಹಿತವನ್ನು ಬಯಸತಕ್ಕವನಾದ ವಿಭೀಷಣನು, ರಾವಣನನ್ನು ಕುರಿತು ಹೀಗೆ ಹೇಳಿದನು ॥೧॥

ಅಣ್ಣಾ ! ನೀನು ಕೇವಲ ವೃದ್ಧನಾಗಿರುವೆ, ಬಹುಜನವೃದ್ಧರನ್ನು ಸೇವಿಸಿರುವೆ, ನೀತಿಶಾಸ್ತ್ರಗಳನ್ನೆಲ್ಲ ಅಧ್ಯಯನಮಾಡಿರುವ, ವೇದವನ್ನೆಲ್ಲ ಕಲಿತಿರುವ, ವೇದಗಳ ಅರ್ಥವೂ ನಿನಗೆ ಚೆನ್ನಾಗಿ ಗೊತ್ತುಂಟು, ವೇದಒಪವನ್ನು ಆಚಾರದಲ್ಲಿಟ್ಟಿರುವ ॥೨॥

ಎಲೈ ರಾಕ್ಷಸರಾಜನ ! ಲೋಕದಲ್ಲಿ ದೂತರನ್ನು ವಧಿಸಕೂಡದೆಂದು ಸತ್ಪುರುಷರು ಹೇಳುವರು. ದೂತರಿಗೆ ಅನೇಕವಿಧವಾದ ದಂಡಗಳು ಶಾಸ್ತ್ರಗಳಲ್ಲಿ ಗೋಚರವಾಗುತಿರುವುವು ದೂತರ ಅವಯವಗಳಲ್ಲಿ ವಿಕಾರವುಂಟುಮಾಡುವುದು, ಚಾವಟಿಯಿಂದ ಹೊಡೆಯುವುದು, ಶಿರಸ್ಸನ್ನು ಬೋಳಿಸುವುದು, ದೇಹದಲ್ಲಿ ಯಾವುದಾದರೊಂದು ಗುರುತುಮಾಡುವುದು,—ಇತ್ಯಾದಿ ರೂಪವಾಗಿ ದೂತರಿಗೆ ಅನೇಕದಂಡಗಳಿರುವುವು ಅವುಗಳಲ್ಲಿ ಯಾವುದಾದರೊಂದನ್ನು ಇವನಿಗೆ ಮಾಡಬಹುದು ॥೩॥

ಇದೂ ಅಲ್ಲದೆ, ಈ ಕಪಿಯನ್ನು ಕೊಲ್ಲುವುದರಲ್ಲಿ ನಮಗೆ ಯಾವುದೊಂದು ಗುಣವೂ ಇರುವಂತೆ ನನಗೆ ಕಾಣುವುದಿಲ್ಲ ಇವನಿಗೆ ನಾವು ಮಾಡಬೇಕೆಂದಿರುವ ಶಿಕ್ಷೆಯನ್ನು, ಇವನು ಇಲ್ಲಿಗೆ ಯಾರಿಂದ ಕಳುಹಿಸಲ್ಪಟ್ಟನೋ ಅವರಲ್ಲಿ ಉಪಯೋಗಿಸುವುದು ಯುಕ್ತವಾಗಿರುವುದು॥೪॥

ಸಾಧುರ್ವಾ ಯದಿ ವಾಽಸಾಧುಃ ಪರೈರೇಷ ಸಮರ್ಪಿತಃ ।
ಬ್ರುವನ್ ಪರಾರ್ಥಂ ಪರವಾನ್ ನ ದೂತೋ ವಧಮರ್ಹತಿ ॥೫॥

ತಸ್ಯಾನುಜಸ್ಯಾಧಿಕಧರ್ಮತತ್ತ್ವಂ ವಿಭೀಷಣಸ್ಯೋತ್ತಮವಾಕ್ಯಮಿಷ್ಟಮ್ ।
ಜಗ್ರಾಹ ಬುದ್ಧ್ಯಾ ಸುರಲೋಕಶತ್ರುಃ ಮಹಾಬಲೋ ರಾಕ್ಷಸರಾಜಮುಖ್ಯಃ ॥

ರಾವಣಉವಾಚ

ಸಮ್ಯಗುಕ್ತಂ ಹಿ ಭವತಾ ದೂತವಧ್ಯಾ ವಿಗರ್ಹಿತಾ ।
ಅವಶ್ಯಂ ತು ವಧಾದನ್ಯಃ ಕ್ರಿಯತಾಮಸ್ಯ ನಿಗ್ರಹಃ ॥೬॥

ಕಪೀನಾಂ ಕಿಲ ಲಾಙ್ಗೂಲಂ ಇಷ್ಟಂ ಭವತಿ ಭೂಷಣಮ್ ।
ತದಸ್ಯ ದೀಪ್ಯತಾಂ ಶೀಘ್ರಂ ತೇನ ದಗ್ಧೇನ ಗಚ್ಛತು ॥೪॥

ಆಜ್ಞಾಪಯದ್ರಾಕ್ಷಸೇನ್ದ್ರಃ ಪುರಂ ಸರ್ವಂ ಚ ಸತ್ವರಮ್ ।
ಲಾಙ್ಗೂಲೇನ ಪ್ರದೀಪ್ತೇನ ರಕ್ಷೋಭಿಃ ಪರಿಣೀಯತಾಮಯಮ್ ॥೯॥

ಕಪಿವಾಲಂ ಸಮಾದಾಯ ವಸ್ತ್ರೇಣಾವೇಷ್ಟಯತ್ ಖಲಃ ।
ಸಂವೇಷ್ಟ್ಯಮಾನೇ ಲಾಙ್ಗೂಲೇ ವ್ಯವರ್ಧತ ಮಹಾಕಪಿಃ ॥೧೦॥

ಇವನು ಸಾಧುವೇ ಆಗಿರಲಿ, ಅಥವಾ ಅಸಾಧುವೇ ಆಗಲಿ, ಇವನು ಇತರರಿಂದ ಪ್ರೇರಿತನಾಗಿ ಇಲ್ಲಿಗೆ ಬಂದಿರುವನು ಹೀಗೆ ಪರರಿಂದ ಪ್ರೇರಿತನಾಗಿ ಅವರ ವಿಷಯವನ್ನು ಹೇಳತಕ್ಕವನಾಗಿರುವ ಈ ದೂತನು ವಧೆಗೆ ಅರ್ಹನಲ್ಲ ॥೫॥

ಈರೀತಿಯಾಗಿ ಧರ್ಮತತ್ವವಿಶಿಷ್ಟವಾಗಿರುವಂತ ತನ್ನ ತಮ್ಮನಿಂದ ಹೇಳಲ್ಪಟ್ಟ ಮಾತನ್ನು, ದೇವಲೋಕಕ್ಕೆ ಶತ್ರುವೂ ಮಹಾಬಲನೂ ಆದ ರಾಕ್ಷಸೇಶ್ವರನು, ತನ್ನ ಮನಸ್ಸಿಗೆ ಇಷ್ಟವಾಗಿ ಒಪ್ಪಿಕೊಂಡನು ॥೬॥

ಅನಂತರ ಈರೀತಿಯಾಗಿ ಹೇಳಿದನು —

ವತ್ಸ ! ವಿಭೀಷಣ ! ನೀನು ಹೇಳಿದ ಮಾತು ಬಹು ಚೆನ್ನಾಗಿರುವುದು ದೂತವಧವು ನಿಂದಿತವೇ ಆಹುದು ಇವನಿಗೆ ಅವಶ್ಯವಾಗಿ ವಧೆಯನ್ನು ಬಿಟ್ಟು ಮತ್ತಾವುದಾದರೊಂದು ಶಿಕ್ಷೆಯು ಮಾಡಲ್ಪಡಲಿ ॥೭॥

ನೀನು ಹೇಳಿದ ಅಂಗವೈರೂಪ್ಯವನ್ನೇ ಇವನಿಗೆ ಮಾಡೋಣ ಕಪಿಗಳಿಗೆ ಸ್ವಭಾವತಃ ಬಾಲವು ಅತಿಪ್ರಿಯವಾಗಿಯೂ ಅಲಂಕಾರವಾಗಿಯೂ ಇರುವುದಲ್ಲವೆ ! ಈಗ ಈ ಕಪಿಗೆ ಅಂತಹ ಬಾಲವನ್ನು ಸುಟ್ಟುಬಿಡೋಣ ಬಳಿಕ ಬಾಲವನ್ನು ಸುಟ್ಟುಕೊಂಡು ಇಲ್ಲಿಂದ ಇವನು ಹೋಗಲಿ ॥೮॥

ಹೀಗೆಂದು ವಿಭೀಷಣನಿಗೆ ಹೇಳಿ, ಅನಂತರ ಆ ರಾಕ್ಷಸೇಶ್ವರನು ' ಈ ಕಪಿಗೆ ಬಾಲವನ್ನು ಹೊತ್ತಿಸಿ ನಮ್ಮ ರಾಕ್ಷಸರು ಇದನ್ನು ಬೇಗನೆ ಊರಲ್ಲೆಲ್ಲ ಮೆರವಣಿಗ ಮಾಡಿಸುವರಾಗಲಿ' ಎಂದು ಆಜ್ಞಾಪಿಸಿದನು ॥೯॥

ಈರೀತಿಯಾಗಿ ಆಜ್ಞಾಪಿಸಿ, ಒಳಿಕ ಆ ನೀಚನಾದ ರಾವಣನು ಹನುಮಂತನ ಬಾಲವನ್ನು ಹಿಡಿದುಕೊಂಡು ಬಟ್ಟೆಯಿಂದ ಸುತ್ತಿಸಿದನು ಹೀಗೆ ತನ್ನ ಬಾಲಕ್ಕೆ ಬಟ್ಟೆಯನ್ನು ಸುತ್ತಿಸುವುದಕ್ಕುಪಕ್ರಮಿಸಲಾಗಿ, ಹನುಮಂತನು ಬೆಳೆಯುವುದಕ್ಕುಪಕ್ರಮಿಸಿದನು ॥೧೦॥

ಮಹಾವೀರಸ್ಯ ವಾಲಸ್ಯ ಸೌಧ್ಯಂ ತದ್ದಶಯೋಜನಮ್ ।
ವಸ್ತ್ರಮಾತ್ರಂ ತ್ವೇಕದೇಶೇ ವೇಷ್ಟಿತಂ ಸ್ಮೃತಸಂಪ್ಲುತಮ್ ॥೧೧॥
ಪುನಸ್ತದ್ವಿವೃಧೇ ವಾಲಂ ಪುನಶ್ಚಕ್ರುಶ್ಚ ವೇಷ್ಟನಮ್ ।
ತದೋನ್ನತಂ ತತೋ ವಾಲಂ ಆಞ್ಜನೇಯಸ್ಯ ಧೀಮತಃ ॥೧೦॥
ಶತಯೋಜನಪರ್ಯನ್ತಂ ವಾಲಮಾಸೀನ್ಮಹಾತ್ಮನಃ ।
ಯಾವದ್ವಸ್ತ್ರಂ ಪುರೀಮಧ್ಯೇ ತಾವನ್ನಾಲಂ ಸುವೇಷ್ಟಿತುಮ್ ॥೧೩॥
ಯಾವದ್ಯಾವದ್ವಸ್ತ್ರಜಾಲಂ ತಾವತ್ತಾವದ್ವ್ಯವರ್ಧತ ।
ಲಾಙ್ಗೂಲಂ ವಾಯುಪುತ್ರಸ್ಯ ತದದ್ಭುತಮಿವಾಭವತ್ ॥೧೪॥
ವಿಕ್ರೀಕವಾಸಸಃ ಸರ್ವೇ ಜ್ಞಾತಿಸಾಮನ್ತಮನ್ತ್ರಿಣಃ ।
ತೇಷಾಮಪ್ಯೇಕಮೇಕಂ ಚ ವಸ್ತ್ರಂ ಸರ್ವಂ ನಿವೇದಿತಮ್ ।
ರಾವಣೋಪ್ಯೇಕವಸ್ತ್ರೇಣ ಹಸನ್ ವೀಥೀಷು ನಿರ್ಗತಃ ॥೧೫॥
ಘೃತಂ ತೈಲಂ ಸ್ನೇಹಮಾತ್ರಂ ಸರ್ವಂ ತತ್ರ ನಿಯೋಜಿತಮ್ ॥೧೬॥
ಆಯತಂ ಯೋಜನಶತಂ ತತ್ ಸೂಲಂ ದಶಯೋಜನಮ್ ।
ದುರಾರೋಹಂ ದುರ್ವಿಷಹಂ ವಾಲಮಾಸೀನ್ಮಹಾತ್ಮನಃ ॥೧೭॥

ಆ ಮಹಾವೀರನ ಬಾಲವು ಹತ್ತುಗಾವುದದಷ್ಟು ದಪ್ಪವಾಗಿಬಿಟ್ಟಿತು ಅದರ ಯಾವುದೋ ಒಂದು ಭಾಗದಲ್ಲಿ ತುಪ್ಪದಲ್ಲಿ ಅದ್ದಿದ ಬಟ್ಟೆಯನ್ನು ಸ್ವಲ್ಪಸುತ್ತಿದ ಹಾಗಾಯ್ತು ॥೧೧॥

ಆಗ ಮತ್ತೆ ಆ ಬಾಲವು ಬೆಳೆಯಿತು, ಮತ್ತೆ ಅದಕ್ಕ ಬಟ್ಟೆಯನ್ನು ಸುತ್ತಿದರು. ಆಮೇಲೆ ಆ ಆಂಜನೇಯನ ಬಾಲವು ಉದ್ದವಾಗಲು ಪ್ರಕ್ರಮಿಸಿತು ॥೧೨॥

ಆ ಮಹಾನುಭಾವನ ಬಾಲವು ನೂರುಗಾವುದದುದ್ದವಾಗಿ ಬೆಳೆಯಿತು ಆ ಲಂಕಾಪಟ್ಟಣ ದೊಳಗೆ ಎಷ್ಟು ಬಟ್ಟೆಯಿದ್ದಿತೋ, ಅದಷ್ಟೂ ಅವನ ಬಾಲವನ್ನು ಸುತ್ತುವುದಕ್ಕೆ ಸಾಕಾಗದೆ ಹೋಯ್ತು ॥೧೩॥

ಆಗ ಎಷ್ಟೆಷ್ಟು ಬಟ್ಟೆಗಳನ್ನು ತಂದು ರಾಶಿಹಾಕಿದರೂ, ಅಷ್ಟಷ್ಟೂ ಆ ವಾಯುಪುತ್ರನ ಬಾಲವು ಬೆಳೆಯುತಹೋಯ್ತು ಅದು ಅಲ್ಲಿರತಕ್ಕವರಿಗೆಲ್ಲ ಆಶ್ಚರ್ಯವಾಗಿ ಕಾಣಿಸಿತು ॥೧೪॥

ಆ ಲಂಕಾಪಟ್ಟಣದಲ್ಲಿದ್ದ ಸಮಸ್ತರಾದ ಜ್ಞಾತಿಗಳೂ ಸಾಮಂತರಾಜರೂ ಮಂತ್ರಿಗಳೂ ಒಂದೊಂದೇ ಬಟ್ಟೆಯನ್ನುಟ್ಟುಕೊಂಡಿದ್ದರು ಅವರ ಇನ್ನೊಂದೊಂದು ಬಟ್ಟೆಯನ್ನೆಲ್ಲ ಹನುಮಂತನ ಬಾಲಕ್ಕೆ ಸುತ್ತುವುದಕ್ಕೋಸ್ಕರ ಕೊಟ್ಟುಬಿಟ್ಟರು ಕೊನೆಗ ರಾವಣನೂ ಕೂಡ ಒಂದೇ ಬಟ್ಟೆಯನ್ನುಟ್ಟುಕೊಂಡು ಬೀದಿಗ ಬಂದನು ಲಂಕಾಪಟ್ಟಣದಲ್ಲಿದ್ದ ತುಪ್ಪ, ಎಣ್ಣೆ, ಕೊನೆಗೆ ಜಿಡ್ಡಿರುವ ಪದಾರ್ಥವಾವುದಾದರೂ ಸರಿಯ, ಎಲ್ಲವನ್ನೂ ತಂದುತಂದು ಹನುಮಂತನ ಬಾಲದಮೇಲೆ ಸುರಿಯುತ್ತಿದ್ದರು ॥೧೫-೧೬॥

ಹೀಗೆ ನೂರು ಗಾವುದದುದ್ದವೂ ಹತ್ತುಗಾವುದ ದಪ್ಪವೂ ಉಳ್ಳದಾದ ಆ ಮಹಾನುಭಾವನ ಬಾಲವು, ಯಾರಿಂದಲೂ ಹತ್ತಲ್ಪಡುವುದಕ್ಕಾಗಲಿ ಸಹಿಸಲ್ಪಡುವುದಕ್ಕಾಗಲಿ ಅಸಾಧ್ಯವಾಗುವಂತೆ ಬೆಳೆದುಬಿಟ್ಟಿತು ॥೧೭॥

ನಿಶ್ರೇಣೀಕಾಸಹಸ್ರೈಶ್ಚ ರಾಕ್ಷಸಾಃ ಕಾಮರೂಪಿಣಃ ।
ಆರುಹ್ಯ ವೇಷ್ಟಯಾಮಾಸುಃ ವಾಲಧಿಂ ವಾಮುಜನ್ಮನಃ ॥೧೯॥
ತದಾ ರಜ್ಜುಸಹಸ್ರೇಣ ಪಟವಾಸೂತ್ರೈಶ್ಚ ಭೂರಿಶಃ ॥೧೯॥
ಅತಿದೀಪ್ತಂ ಸ್ಫುಲತಮುಂ ದೃಷ್ಟ್ವಾ ವಾಲಂ ಹನೂಮತಃ ।
ವಿಸ್ಮಿತಾರಾಕ್ಷಸಾಃ ಸರ್ವೇ ರಾವಣೋಽಪ್ಯತಿವಿಸ್ಮಿತಃ ॥೨೦॥
ಕರ್ತವ್ಯಂ ಚ ಪ್ರಚಕ್ರುಸ್ತೇ ವಾಲಾಗ್ರೇ ವಹ್ನಿಯೋಜನಮ್ ॥೨೧॥
ದೀಪ್ಯಮಾನೇ ತತಸ್ತಸ್ಯ ಲಾಙ್ಗೂಲಾಗ್ರೇ ಹನೂಮತಃ ।
ರಾಕ್ಷಸ್ಯಸ್ತಾವಿರೂಪಾಕ್ಷ್ಯಃ ಶಂಸುರ್ದೇವ್ಯಾಸ್ತದಪ್ರಿಯಮ್ ॥೨೨॥
ಶ್ರುತ್ವಾ ತದ್ವಚನಂ ಕ್ರೂರಂ ಆತ್ಮಾಪಹರಣೋಪಮಮ್ ।
ವೈದೇಹೀ ಶೋಕಸನ್ತಪ್ತಾ ಹುತಾಶನಮುಪಾಗಮತ್ ॥೨೩॥
ಯದ್ಯಸ್ತಿ ಪತಿಶುಶ್ರೂಷಾ ಯದ್ಯಸ್ತಿ ಚರಿತಂ ತಪಃ ।
ಯದಿ ಚಾಸ್ತ್ಯೇಕಪತ್ನೀತ್ವಂ ಶೀತೋ ಭವ ಹನೂಮತಃ ॥೨೪॥
ಏವಂ ಸೀತಾಪ್ರಾರ್ಥಿತೋಽಗ್ನಿಃ ಕಪಿವಾಲಾಗ್ರಸಂಸ್ಥಿತಃ ।

ಆಗ ಕಾಮರೂಪಿಗಳಾದ ರಾಕ್ಷಸರು ಸಾವಿರಾರು ಏಣಿಗಳನ್ನು ಹಾಕಿಕೊಂಡು ಹತ್ತಿ, ಸಾವಿರಾರು ಹಗ್ಗಗಳಿಂದಲೂ ಕೊನೆಗೆ ಮನೆಗಳಲ್ಲಿದ್ದ ಮಂಚದ ಪಟ್ಟೆಗಳಿಂದಲೂ ಕೂಡ ಆ ಹನುಮಂತನ ಬಾಲವನ್ನು ಸುತ್ತಿದರು ॥೧೮-೧೯॥

ಆದರೂ ಇನ್ನೂ ಬಲು ಉದ್ದವಾಗಿಯೂ ದಪ್ಪವಾಗಿಯೂ ಕಾಣಿಸಿಕೊಳ್ಳುತಿದ್ದ ಹನುಮಂತನ ಬಾಲವನ್ನು ನೋಡಿ, ರಾಕ್ಷಸರೆಲ್ಲರೂ ಆಶ್ಚರ್ಯಪಟ್ಟರು , ರಾವಣನೂ ಅತಿಯಾಗಿ ಆಶ್ಚರ್ಯಪಟ್ಟನು ಆಮೇಲೆ ಅವರು ಅದನ್ನು ಪೂರ್ಣವಾಗಿ ಬಟ್ಟೆಯಿಂದ ಮುಚ್ಚುವುದಸಾಧ್ಯವೆಂದು ತಿಳಿದುಕೊಂಡು, ತಾವು ಮಾಡಬೇಕಾಗಿದ್ದಂತೆ ಅವನ ಬಾಲದ ತುದಿಗೆ ಬೆಂಕಿಯನ್ನು ಹೊತ್ತಿಸಿಬಿಟ್ಟರು ॥೨೦-೨೧॥

ಅನಂತರ ಆ ಹನುಮಂತನ ವಾಲಾಗ್ರಭಾಗವು ಉರಿಯುವುದಕ್ಕಾರಂಭಿಸಲಾಗಿ, ಏಕೃತನೇತ್ರಿಯರಾದ ರಾಕ್ಷಸಿಯರು ಸೀತೆಗೆ ಆ ಅಪ್ರಿಯವಾದ ವೃತ್ತಾಂತವನ್ನು ತಿಳಿಯಿಸಿದರು ॥೨೨॥

ಆಗ ತನ್ನ ಪ್ರಾಣನಾಶಕ್ಕೆ ಸಮನಾಗಿರುವ ಆ ಮಾತನ್ನು ಕೇಳಿ, ಸೀತಾದೇವಿಯು, ಶೋಕದಿಂದ ತಪ್ತಳಾಗಿ ' ನಾನು ಜೆನ್ಮಾಗಿ ಪತಿಸೇವೆಯನ್ನು ಮಾಡಿದ್ದಪಕ್ಷದಲ್ಲಿ, ನಾನು ತಪಸ್ಸನ್ನು ಆಚರಿಸಿದ್ದಪಕ್ಷದಲ್ಲಿ, ನಾನು ಮಹಾಪತಿವ್ರತೆಯೇ ಆಗಿದ್ದ ಪಕ್ಷದಲ್ಲಿ, ನೀನು ಹನುಮಂತನಿಗ ತಣ್ಣಗಿರಬೇಕು. ' ಎಂದು, ಅಗ್ನಿಯನ್ನು ಪ್ರಾರ್ಥಿಸಿದಳು ॥೨೩-೨೪॥

ಹೀಗೆ ಸೀತೆಯಿಂದ ಪ್ರಾರ್ಥಿಸಲ್ಪಟ್ಟವನಾಗಿ, ಹನುಮಂತನ ಬಾಲದ ತುದಿಯಲ್ಲಿದ್ದ ಅಗ್ನಿಯು ಪ್ರಳಯಾಗ್ನಿಗೆ ಸಮವಾಗಿದ್ದರೂ ಆಗ ಮಂಜಿನ ಗಡ್ಡೆಯಂತೆ ತಣ್ಣಗಾಗಿಬಿಟ್ಟನು ಈ ರೀತಿ

ಪ್ರಳಯಾಗ್ನಿಸಮೋಽಪ್ಯಸೀತ್ ಪ್ರಾಲೇಯಧವಸವತ್ ತದಾ ॥೨೫॥
ದಹ್ಯಮಾನೇ ಚ ಲಾಙ್ಗೂಲೇ ಚಿನ್ತಯಾಮಾಸ ಮಾರುತಿಃ ॥೨೬॥
ಪ್ರದೀಪ್ತೋಗ್ನಿರಯಂ ಕಸ್ಮಾತ್ ನ ಮಾಂ ದಹತಿ ಸರ್ವತಃ ।
ಸೀತಾಯಾಶ್ಚಾನೃಶಂಸ್ಯೇನ ತೇಜಸಾ ರಾಘವಸ್ಯ ಚ ।
ಪಿತುಶ್ಚ ಮಮ ಸಖ್ಯೇನ ನ ಮಾಂ ದಹತಿ ಪಾವಕಃ ॥೨೭॥
ಯೋ ಽಯಂ ಮಮ ಲಾಙ್ಗೂಲೇ ದೀಪ್ಯತೇ ಹವ್ಯವಾಹನಃ ।
ಅಸ್ಯ ಸನ್ತರ್ಪಣಂ ನ್ಯಾಯ್ಯಂ ಕರ್ತುಮೇಭಿರ್ಗೃಹೋತ್ತಮೈಃ ॥೨೮॥
ಇತ್ಥಮಾಲೋಕ್ಯ ಸ ಕಪಿಃ ಅಭೂತ್ ಪರ್ವತಸನ್ನಿಭಃ ।
ಪುನಶ್ಚ ಹ್ರಸ್ವತಾಂ ಪ್ರಾಪ್ಯ ಬನ್ಧನಾನ್ಯವಶಾತಯತ್ ॥೨೯॥
ವಿಮುಕ್ತಶ್ಚಾಭವಚ್ಛೈಲೋ ಪುನಃ ಪರ್ವತಸನ್ನಿಭಃ ।
ವೀಕ್ಷ್ಯಮಾಣಶ್ಚ ದದೃಶೇ ಪರಿಘಂ ತೋರಣಾಶ್ರಿತಮ್ ॥೩೦॥
ಸ ತಂ ಗೃಹ್ಯ ಮಹಾಬಾಹುಃ ಕಾಲಾಯಸಪರಿಷ್ಕೃತಮ್ ।
ರಕ್ಷಿಣಸ್ತಾ ಪುನಃ ಸರ್ವಾ ಸೂದಯಾಮಾಸ ಮಾರುತಿಃ ॥೩೧॥

ಯಾಗಿ ತನ್ನ ಬಾಲವು ಸುಡಲ್ಪಡುತ್ತಿದ್ದರೂ ಬೆಂಕಿಯು ತಣ್ಣಗೇ ಇರುವುದನ್ನು ನೋಡಿ, ಆ ಮಾರುತಿಯು ತನ್ನ ಮನಸ್ಸಿನಲ್ಲಿ ಹೀಗೆ ಪರ್ಯಾಲೋಚಿಸಿದನು ॥೨೫–೨೬॥

ಸುತ್ತಲೂ ಪ್ರಜ್ವಲಿಸುತ್ತಿದ್ದರೂ ಈ ಅಗ್ನಿಯು ನನ್ನನ್ನೇಕೆ ಸುಡದಿರುವುದು ? ಸೀತಾದೇವಿಯ ಸೌಶೀಲ್ಯದಿಂದಲೂ, ಶ್ರೀರಾಮನ ತೇಜಸ್ಸಿನಿಂದಲೂ ನನ್ನ ತಂದೆಯಲ್ಲಿ ಸ್ನೇಹದಿಂದಲೂ, ಈ ಅಗ್ನಿಯು ನನ್ನನ್ನು ಸುಡದಿರುವನು ॥೨೭॥

ಈಗ ನನ್ನ ಬಾಲದಲ್ಲಿ ಯಾವ ಈ ಪಜ್ಜಿಯು ಪ್ರಜ್ವಲಿಸುತಿರುವನೋ, ಇವನಿಗೆ ಈ ಲಂಕಾ ಪಟ್ಟಣದಲ್ಲಿರುವ ಮನೆಗಳನ್ನು ಆಹುತಿಕೊಟ್ಟು ತೃಪ್ತಿಯುಂಟುಮಾಡಬೇಕಾದುದುಚಿತವು ॥೨೮॥

ಹೀಗೆಂದು ಆಲೋಚಿಸಿ, ಆ ಕಪಿಶ್ರೇಷ್ಠನು ಪರ್ವತಸದೃಶನಾಗಿ ಬೆಳೆದನು ಬಳಿಕ ಮತ್ತೆ ಹ್ರಸ್ವಾಕಾರವನ್ನು ಹೊಂದಿ, ತನಗೆ ರಾಕ್ಷಸರು ಹಾಕಿದ್ದ ಕಟ್ಟುಗಳನ್ನೆಲ್ಲ ಕತ್ತರಿಸಿಬಿಟ್ಟನು ॥೨೯॥

ಆ ಕಟ್ಟುಗಳನ್ನೆಲ್ಲ ಬಿಡಿಸಿಕೊಂಡು, ಮತ್ತೆ ಪರ್ವತಾಕಾರನಾಗಿ ವೃದ್ಧಿಹೊಂದಿದನು ಬಳಿಕ ಅತ್ತಿತ್ತಸೋಡುತ, ಅಲ್ಲಿ ಒಂದು ಹೆಬ್ಬಾಗಿಲಿಗೆ ಹಾಕಿದ್ದ ಲಾಳಮುಂಡಿಗೆಯನ್ನು ಕಂಡನು ॥೩೦॥

ಬಳಿಕ ಮಹಾಬಾಹುವಾದ ಮಾರುತಿಯು, ಆ ಕಬ್ಬಿಣದ ಲಾಳಮುಂಡಿಗೆಯನ್ನು ಕಿತ್ತುಕೊಂಡು, ತನ್ನ ಹಿಂದೆ ಬರುತಿದ್ದ ಆ ಕಾವಲುಗಾರರನ್ನೆಲ್ಲ ಮತ್ತೆ ಆದರಿಂದ ಹೊಡೆದುಬಟ್ಟನು ॥೩೧॥

ವೀಕ್ಷ್ಯಮಾಣಸ್ತತೋ ಲಙ್ಕಾಂ ಕಪಿಃ ಕೃತಮನೋರಥಃ ।
ವರ್ಧಮಾನಸಮುತ್ಸಾಹಃ ಕಾರ್ಯಶೇಷಮಚಿನ್ತಯತ್ ॥೫೦॥

ಕಿನು ಖಲ್ವವಶಿಷ್ಟಂ ಮೇ ಕರ್ತವ್ಯಮಿಹ ಸಾಂಪ್ರತಮ್ ।
ಯದೇಷಾಂ ರಕ್ಷಸಾಂ ಭೂಯಃ ಸನ್ತಾಪಜನಕಂ ಭವೇತ್ ॥೫೧॥

ವನಂ ತಾವತ್ ಪ್ರಮಥಿತಂ ಪ್ರಕೃಷ್ಟಾರಾಕ್ಷಸಾಹತಾಃ ।
ಬಲೈಕದೇಶಃ ಕ್ಷಪಿತಃ ಶೇಷಂ ದುರ್ಗವಿನಾಶನಮ್ ॥೫೨॥

ತತಃ ಪ್ರದೀಪ್ತಲಾಙ್ಗೂಲಃ ಸವಿದ್ಯುದಿವ ತೋಯದಃ ।
ಭವನಾಗ್ರೇಷು ಲಙ್ಕಾಯಾಂ ವಿಚಚಾರ ಮಹಾಕಪಿಃ ॥೫೩॥

ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನೇ ।
ಅಗ್ನಿಂ ತತ್ರೈವ ನಿಕ್ಷಿಪ್ಯ ಶ್ವಸನೇನ ಸಮೋ ಬಲೀ ।
ತತೋಽನ್ಯತ್ ಪುಪ್ಲುವೇ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾನ್ ॥೫೪॥

ಮುಮೋಚ ಹನುಮಾನಗ್ನಿಂ ಕಾಲಾನಲಶಿಖೋಪಮಮ್ ।
ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥೫೬॥

ಅನಂತರ, ಸುತ್ತಲೂ ಲಂಕಾಪಟ್ಟಣವನ್ನು ನೋಡಿ ಇಷ್ಟಾರ್ಥ ಪೂರ್ತಿಪಡೆದವನಾದ ಹನುಮಂತನು, ಮನಸ್ಸಿನಲ್ಲಿ ಉತ್ಸಾಹ ಹೆಚ್ಚಿದವನಾಗಿ, ಮುಂದೆ ಮಾಡಬೇಕಾದ ಕಾರ್ಯಶೇಷವನ್ನು ಹೀಗೆ ಯೋಚಿಸಿದನು ॥೫೦॥

ಈಗ ನಾನು ಇಲ್ಲಿ ಮಾಡಬೇಕಾದುದಾಗಿ ಉಳಿದಿರುವುದು ಯಾವುದು ? ಅದನ್ನು ನಾನು ಮಾಡಿಮುಗಿಯಿಸಿದರೆ ಈ ರಾಕ್ಷಸರಿಗೆಲ್ಲ ಇನ್ನೂ ಹೆಚ್ಚಾಗಿ ಸಂತಾಪವುಂಟಾಗಬೇಕು ॥೫೧॥

ರಾವಣನಿಗ ಅತಿಪ್ರಿಯವಾಗಿದ್ದ ಅಶೋಕವನವನ್ನೆಲ್ಲ ಮುರಿದುಹಾಯಿತು, ಸೈನ್ಯ ಮುಖ್ಯರಾಗಿದ್ದ ಅನೇಕಮಂದಿ ರಾಕ್ಷಸರನ್ನು ಕೊಂದುದೂ ಆಯ್ತು, ರಾವಣನ ಸೈನ್ಯದಲ್ಲಿ ಒಂದು ಭಾಗವನ್ನು ಕ್ಷಯಹೊಂದಿಸಿಯೂ ಆಯ್ತು ಇನ್ನು ಇವನ ದುರ್ಗವನ್ನು ಹಾಳುಮಾಡುವುದೊಂದು ಉಳಿದಿರುವುದು ॥೫೨॥

ಹೀಗೆಂದು ಯೋಚಿಸಿ, ಪ್ರಜ್ವಲಿಸುತಿರುವ ಬಾಲವುಳ್ಳ ಆ ಹನುಮಂತನು, ಮಿಂಚಿನೊಡ ಗೂಡಿರುವ ಮೇಘದಂತೆ, ಲಂಕಾಪಟ್ಟಣದ ಮನೆಗಳ ಮೇಲೆಲ್ಲ ಸಂಚರಿಸಲುಪಕ್ರಮಿಸಿದನು॥

ಮಹಾವೇಗಶಾಲಿಯಾದ ಆ ಹನುಮಂತನು, ಪ್ರಥಮದಲ್ಲಿ ಪ್ರಹಸ್ತನ ಮನೆಯಮೇಲೆ ಇಳಿದು, ಅಲ್ಲಿ ಬೆಂಕಿಯನ್ನು ಹಾಕಿ, ಬಳಿಕ ವಾಯುವೇಗದಿಂದ ಹೊರಟು, ಮತ್ತೊಂದಾದ ಮಹಾಪಾರ್ಶ್ವನ ಮನೆಯಮೇಲಕ್ಕ ಹಾರಿಹೋದನು, ಅಲ್ಲಿ ಪ್ರಳಯಾಗ್ನಿ ತುಲ್ಯವಾದ ಜ್ವಾಲೆಯನ್ನು ಹಬ್ಬಿಸಿದನು ಬಳಿಕ ಅದೇರೀತಿಯಲ್ಲಿ ವಜ್ರದಂಷ್ಟ್ರನ ಮನೆಗೆ ಹಾರಿದನು ॥೫೫-೫೭॥

ಶುಕಸ್ಯ ಚ ಮಹಾತೇಜಾಃ ಸಾರಣಸ್ಯ ಚ ಧೀಮತಃ ।
ತತಾಽಕೇಂದ್ರಜಿತೋ ವೇಶ್ಮ ದದಾಹ ಹರಿಯೂಥಪಃ ॥೫೪॥
ಜಮ್ಬುಮಾಲೇಃ ಸುಮಾಲೇಶ್ಚ ತಥಾ ಕುಮ್ಭನಿಕುಮ್ಭಯೋಃ ।
ರಶ್ಮಿಕೇತೋಶ್ಚ ಭವನಂ ಸೂರ್ಯಕೇತೋಸ್ತಥೈವ ಚ ॥೫೫॥
ವರ್ಜಯಿತ್ವಾ ಮಹಾತೇಜಾಃ ವಿಭೀಷಣಗೃಹಂ ತದಾ ।
ಕ್ರಮಮಾಣಃ ಕ್ರಮೇಣೈವ ದದಾಹ ಹರಿಯೂಥಪಃ ॥೫೦॥
ತೇಷುತೇಷು ಮಹಾರ್ಹೇಷು ಭವನೇಷು ಮಹಾಯಶಾಃ ।
ಗೃಹೇಷ್ವೃದ್ಧಿಮತಾಂ ವೃದ್ಧಿಂ ದದಾಹ ಸ ಮಹಾಕಪಿಃ ॥೫೧॥
ಸರ್ವೇಷಾಂ ಸಮತಿಕ್ರಮ್ಯ ರಾಕ್ಷಸೇನ್ದ್ರಸ್ಯ ವೀರ್ಯವಾ ।
ಅಸಸಾದಾಥ ಲಕ್ಷ್ಮೀವಾ ರಾವಣಸ್ಯ ನಿವೇಶನಮ್ ॥೫೨॥
ತತಸ್ತಸ್ಮಿನ್ ಗೃಹೇ ಮುಖ್ಯೇ ನಾನಾರತ್ನವಿಭೂಷಿತೇ ।
ಪ್ರದೀಪ್ತಮಗ್ನಿಮುತ್ಸೃಜ್ಯ ಲಾಙ್ಗೂಲಾಗ್ರೇ ಪ್ರತಿಷ್ಠಿತಮ್ ।
ನನಾದ ಹನುಮಾನ್ ವೀರೋ ಯುಗಾನ್ತಜಲದೋ ಯಥಾ ॥೫೩॥
ದಹ್ಯಮಾನೇ ಪುರೇ ತ್ವೇವಂ ತತ್ರಾಸೀದ್ವಹ್ನಿರುಲ್ಬಣಃ ॥೫೪॥
ಶಿಶೂನಾಂ ಚ ಪಶೂನಾಂ ಚ ವೃದ್ಧಾನಾಂ ರುದತಾಂ ಭೃಶಮ್ ।

ಆಮೇಲೆ ಆ ಕಪಿನಾಯಕನು ಶುಕ ಸಾರಣ ಇಂದ್ರಜಿತು ಜಂಬುಮಾಲಿ ಸುಮಾಲಿ ಕುಂಭ ನಿಕುಂಭ ರಶ್ಮಿಕೇತು ಸೂರ್ಯಶತ್ರು ಇವರುಗಳ ಮನೆಯನ್ನೆಲ್ಲ ದಹಿಸಿಬಿಟ್ಟನು ॥೫೨-೫೫॥

ಆಗ ಮಹಾತೇಜಸ್ವಿಯಾದ ಹನುಮಂತನು, ವಿಭೀಷಣನ ಮನೆಯೊಂದನ್ನು ಮಾತ್ರ ಬಿಟ್ಟು ಮಿಕ್ಕು, ಕ್ರಮವಾಗಿ ಸುಂದರವಾದ ಪಟ್ಟಣವನ್ನೆಲ್ಲ ದಹಿಸಿಬಿಟ್ಟನು ॥೫೦॥

ಮಹಾಕೀರ್ತಿವಂತನಾದ ಆಂಜನೇಯನು, ಅತ್ಯನಘ್ರ್ಯವಾದ ಆ ರಾಕ್ಷಸಗೃಹಗಳೆಲ್ಲೆಲ್ಲ ಅಪಾರ ಸಮಸ್ತಸಂಪತ್ತುಗಳನ್ನೂ ಸುಟ್ಟುಹಾಕಿದನು ॥೫೧॥

ಹೀಗೆ ಕ್ರಮವಾಗಿ ಸಮಸ್ತರಾಕ್ಷಸರ ಮನೆಗಳನ್ನೂ ಅತಿಕ್ರಮಿಸಿದವನಾಗಿ, ಮಹಾವೀರ್ಯನಾದ ಹನುಮಂತನು, ಬಳಿಕ ರಾಕ್ಷಸರಾಜನಾದ ರಾವಣನ ಮನೆಯಮೇಲೆ ಹೋಗಿ ಕುಳಿತನು॥

ಅನಂತರ, ನಾನಾರತ್ನಗಳಿಂದ ವಿಭೂಷಿತವಾಗಿರುವ ಆ ಮುಖ್ಯಭವನದಲ್ಲಿ ತನ್ನ ವಾಲಾಗ್ರದೊಳಗಿರುವ ಅಗ್ನಿಯನ್ನು ಹೊತ್ತಿಸಿ, ಮಹಾವೀರನಾದ ಹನುಮಂತನು, ಪ್ರಳಯಕಾಲದ ಮೇಘದಂತೆ ಗರ್ಜನೆಮಾಡಿದನು ಹೀಗೆ ಪಟ್ಟಣವೆಲ್ಲ ದಹಿಸಲ್ಪಡಲಾಗಿ, ಅಲ್ಲಿ ಅಗ್ನಿಯು ಅತ್ಯುಲ್ಬಣವಾಗಿ ಪ್ರಜ್ವಲಿಸಿಬಿಟ್ಟಿತು ॥೫೩-೫೪॥

ಆಗ ಆ ಲಂಕಾಪಟ್ಟಣದಲ್ಲಿರುವ ಶಿಶುಗಳೂ ಪಶುಗಳೂ ವೃದ್ಧರೂ ಕೂಡ- ಮನೆಸುಟ್ಟು ಹೋಗುತಿರುವುದರಿಂದ ಸಹಿಸಲಾರದೆ-ವಿಶೇಷವಾಗಿ ರೋದನಮಾಡುತಲೂ ರಾವಣನನ್ನು ಶಪಿಸು

ಅಸಹ್ಯಗೃಹದಾಹೇನ ರಾವಣಂ ಶಪತಾಮಪಿ ।
ಹನೂಮತೇಽತಿವೀರಾಯ ನಮಸ್ಕಾರಂ ಪ್ರಕುರ್ವತಾಮ್ ॥೪೫॥
ತದಾ ಸಮಭವದ್ವಹ್ನಿಃ ರಾವಣಾಲಯಮಾಶ್ರಿತಃ ।
ವಿಶ್ರಮಾಯ ಗೃಹಾಯಾತಬಡಬಾನಲಸನ್ನಿಭಃ ॥೪೬॥
ಚನ್ದ್ರಮಣ್ಡಲಪರ್ಯನ್ತಂ ವಹ್ನಿಜ್ವಾಲಾಃ ಪ್ರಪೇದಿರೇ ।
ಯಾಭಿಃ ಪ್ರದೃಶ್ಯತೇದ್ಯಾಪಿ ಕಳಙ್ಕೀವ ನಿಶಾಕರಃ ॥೪೭॥
ಅದ್ಯಾಪಿ ದೃಶ್ಯತೇ ವ್ಯೋಮ ತಾಪಿತಂ ನೀಲತಾಂ ಗತಮ್ ।
ಪಲಾಯಮಾನಾಶ್ಚ ದಿಶೋ ವಿದಿಶಾಶ್ಚಮುಪಾಗತಾಃ ॥೪೮॥
ಭಾರ್ಯಾಮಾಕರ್ಷಯತ್ ಕಶ್ಚಿತ್ ಧನಲೋಭೇನ ಗಚ್ಛತೀಮ್ ।
ಪತಿಮಾಕರ್ಷಯತ್ ಕಾಚಿತ್ ಧನಲೋಭೇನ ಯಾಯಿನಮ್ ॥೪೯॥
ಕಾಚಿತ್ ಪತಿವ್ರತಾ ಸಾಧ್ವೀ ಭರ್ತಾರಂ ಗೃಹ್ಯ ನಿರ್ಗತಾ ।
ಕಶ್ಚಿಚ್ಛಿಷ್ಟಾರ್ಪಿತಂ ಕೃತ್ವಾ ಕುಟುಮ್ಬೀ ನಿರ್ಗತೋಽಬಲಃ ॥೫೦॥
ಅನ್ಯೋನ್ಯಧನಹಾರಿತ್ವಂ ತತ್ರತತ್ರ ಪ್ರವರ್ತಿತಮ್ ।
ಧನಿಕೋ ರಿಕ್ತತಾಂ ಪ್ರಾಪ್ತೋ ದರಿದ್ರೋ ಧನಿತಾಂ ಗತಃ ॥೫೧॥

ಸುತಲೂ ಮಹಾವೀರನಾದ ಹನುಮಂತನಿಗೆ ನಮಸ್ಕಾರಮಾಡುತಲೂ ಇರಲಾಗಿ, ರಾವಣನ ಮನೆಯಲ್ಲಿ ಉರಿಯುತಿರುವ ಬೆಂಕಿಯು, ಸ್ವಲ್ಪವಿಶ್ರಾಂತಿ ತೆಗೆದುಕೊಳ್ಳೋಣವೆಂದು ಬಡಬಾಗ್ನಿಯೇ ಸಮುದ್ರವನ್ನು ಬಿಟ್ಟ ಮನೆಗೆ ಬಂದಿದಯೋ ಎಂಬಂತೆ ಪ್ರಜ್ವಲಿಸುತಿದ್ದಿತು ॥೪೫-೪೬॥

ಆಗ ಅದರ ಜ್ವಾಲೆಗಳು ಚಂದ್ರಮಂಡಲದವರೆಗೂ ವ್ಯಾಪಿಸಿದುವು, ಅವುಗಳಿಂದ ಸಂತಾಪಿತವಾದಕಾರಣವೇ, ಈಗಲೂ ಚಂದ್ರಮಂಡಲದಲ್ಲ ಕಳಂಕವಿರುವಂತೆ ಕಾಣುತಿರುವುದು ಆಗ ಆ ಜ್ವಾಲೆಯಿಂದ ತಾಪಿತವಾದ ಆಕಾಶವು ಈಗಲೂ ಕಪ್ಪುಬಣ್ಣವಾಗಿ ಕಾಣಿಸುತಿರುವುದು ಆಗ ಜ್ವಾಲೆಯ ತಾಪವನ್ನು ಸಹಿಸಲಾರದೆ ಓಡಿಹೋದಕಾರಣವೇ, ದಿಕ್ಕುಗಳಲ್ಲಿ ವಿದಿಕ್ಕುಗಳೆಂಬ ವ್ಯವಹಾರವೊಂದು ಉಂಟಾಯ್ತು ॥೪೭-೪೮॥

ಆಗ ಮನೆಯಲ್ಲಿ ಧನವೆಲ್ಲ ಸುಟ್ಟುಹೋಗುವುದೆಂದು ಲೋಭದಿಂದ ಮನೆಯೊಳಕ್ಕೆ ಹೋಗಲೆಳಸುತಿರುವ ತನ್ನ ಹೆಂಡತಿಯನ್ನು ಒಬ್ಬನು ಹಿಡಿದೆಳದುಕೊಂಡನು , ಹಾಗಯೇ ಮತ್ತೊಂದು ಕಡೆಯಲ್ಲಿ ತನ್ನ ಪತಿಯನ್ನು ಪತ್ನಿಯು ಎಳದುಕೊಂಡಳು ॥೪೯॥

ಮಹಾಪತಿವ್ರತೆಯಾದ ಒಬ್ಬ ರಾಕ್ಷಸಸ್ತ್ರೀಯು, ತನ್ನ ಪತಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಅವನೊಡನೆ ತಾನೂ ಹೊರಟುಹೋದಳು ಒಬ್ಬ ಬಲಹೀನನಾದ ಕುಟುಂಬಿಯು, ತನ್ನ ಸರ್ವಸ್ವವನ್ನೂ ಪರಮೇಶ್ವರಾರ್ಪಣಮಾಡಿ ಹೊರಟುಹೋದನು ॥೫೦॥

ಅಲ್ಲಿ ಒರಸ್ಪರವಾಗಿ ಧನವನ್ನು ಅಪಹರಿಸುವುದಕ್ಕೆ ಉಪಕ್ರಮನಾಗಿಬಿಟ್ಟಿತು ಧನಿಕನು ದರಿದ್ರನಾಗಿಬಿಟ್ಟನು , ದರಿದ್ರನು ಧನಿಕನಾಗಿಯೂ ಬಿಟ್ಟನು ಬೀದಿಯಲ್ಲಿ ಹೋಗುತಿರು

ಅನ್ಯೋನ್ಯಧನಸಮ್ಮರ್ದೋ ವೀಥ್ಯಾಮಾಸೀತ್ ಪ್ರಗಚ್ಛತಾಮ್ ॥೫೦॥
ಕಶ್ಚಿತ್ ಸ್ವಾಭಿಮತಾಂ ನಾರೀಂ ಅಭಿಮುಖ್ಯೇನ ಗಚ್ಛತೀಮ್ ।
ಮಾರ್ಗಾಭಾವಾಪಸರಣವ್ಯಾಜೇನಾಲಿಙ್ಗ್ಯ ಗಚ್ಛತಿ ॥೫೧॥
ಕಶ್ಚಿತ್ ಸ್ತನೌ ಪ್ರಪೀಡ್ಯಾಶು ಮಾರ್ಗಂ ದೇಹೀತಿ ಗಚ್ಛತಿ ।
ದುಃಖೋಪಶಾನ್ತಿವ್ಯಾಜೇನ ಕಶ್ಚಿದಾಲಿಙ್ಗ್ಯ ಗಚ್ಛತಿ ॥೫೪॥
ವಿಧವಾಂ ಕಶ್ಚಿದಾಲಿಙ್ಗತ್ ಪೂರ್ಣಯೌವನಸಂಸ್ಥಿತಾಮ್ ।
ಪುರುಷಂ ಸಾ ಸಮಾಲಿಙ್ಗತ್ ತದ್ವ್ಯಾಜೇನೈವ ಕಾಂಕ್ಷಿತಮ್ ॥೫೫॥
ಆದಾನವ್ಯಾಜತಃ ಕಶ್ಚಿತ್ ಯುವತೀಸ್ತನ್ಯಪಾಯಿನಃ ।
ಶಿಶೋರ್ಗೃಹೀತ್ವಾ ತತ್ಪೀನಕುಚೌ ಗಚ್ಛತಿ ಸತ್ವರಮ್ ॥೫೬॥
ನ ತತ್ರ ರಕ್ಷಣಂ ಸ್ತ್ರೀಣಾಂ ಆಪತ್ಕಾಲೇ ಸಮಾಗತೇ ।
ಪ್ರಾಗ್ಬನ್ದೀಗೃಹರುದ್ಧಾ ಯಾಃ ದೇವನಾರ್ಯೋನಿವಾರಿತಾಃ ।
ಖಂ ಗತಾಃ ಪತಿಸಂಯುಕ್ತಾಃ ನಮಶ್ಚಕ್ರುರ್ಹನೂಮತೇ ॥೫೭॥

ವಾಗಲೇ, ಒಬ್ಬರ ಧನವನ್ನು ಮತ್ತೊಬ್ಬರು ಅಪಹರಿಸಲೇಕಂದು ಬಹಳ ಸಮ್ಮರ್ದವುಂಟಾಗಿ ಬಿಟ್ಟಿತು ॥೫೦-೫೨॥

ಹೀಗೆ ಜನಸಮ್ಮರ್ದ ಹೆಚ್ಚಾಗಲಾಗಿ, ಒಬ್ಬನು ತನಗೆ ಅಭಿಮತಳಾಗಿದ್ದ ಯುವತಿಯು ಎದುರಾಗಿ ಬರುತಿರುವಾಗ ದಾರಿಯಿಲ್ಲದ ಅವಳನ್ನು ಓರೆಮಾಡುವನಂತೆ ವ್ಯಾಜ ಹಾಕಿ ಕೊಂಡು ಅವಳನ್ನು ಆಲಿಂಗಿಸಿಕೊಂಡು ಮುಂದಕ್ಕ ಹೋದನು ॥೫೩॥

ಒಬ್ಬನು ಒಬ್ಬ ಯುವತಿಯನ್ನು ಬೇಗನೆ ದಾರಿಬಿಡೆಂದು ಹೇಳುತ ಅವಳ ಸ್ತನಗಳನ್ನು ಆಲಿಂಗಿಸಿಕೊಂಡು ಹೋದನು ಒಬ್ಬನು ಒಬ್ಬ ಸುಂದರಿಯ ದುಃಖೋಪಶಾಂತಿಮಾಡುವ ವ್ಯಾಜ ದಿಂದ ಅವಳನ್ನು ಆಲಿಂಗಿಸಿಕೊಂಡು ಹೋದನು ॥೫೪॥

ಒಬ್ಬನು ಪೂರ್ಣಯೌವನದಶೆಯಲ್ಲಿರುವ ವಿಧವೆಯೊಬ್ಬಳನ್ನು ಆಲಿಂಗಿಸಿಕೊಂಡನು, ಅವಳೂ ಕೂಡ ಅದೇ ವ್ಯಾಜದಿಂದ ತನಗಭೀಷ್ಟನಾಗಿದ್ದ ಅವನನ್ನು ಆಲಿಂಗಿಸಿಕೊಂಡಳು॥೫೫॥

ಒಬ್ಬನು ಒಬ್ಬ ಯುವತಿಯ ಸ್ತನ್ಯಪಾನ ಮಾಡುತ್ತಿರುವ ಶಿಶುವನ್ನು ಕರೆದುಕೊಳ್ಳುವ ನೆಪದಿಂದ ಅವಳ ಸ್ತನಗಳನ್ನು ಆಲಿಂಗಿಸಿಕೊಂಡು ಬೇಗಬೇಗನೆ ಹೊರಟುಹೋದನು ॥೫೬॥

ಮುಖ್ಯವಾಗಿ ದೊಡ್ಡ ಆಪತ್ತು ಸಂಭವಿಸಿಬಟ್ಟಿರುವಕಾರಣ ಸ್ತ್ರೀಯರನ್ನು ಸಂರಕ್ಷಿಸುವ ಯೋಚನೆಯೇ ಇರಲಿಲ್ಲ ಹಿಂದೆ ರಾವಣನು ಯಾವ ದೇವಸ್ತ್ರೀಯರನ್ನು ಕಾರಾಗೃಹದಲ್ಲಿ ನಿರ್ಬಂಧಿಸಿಟ್ಟಿದ್ದನೋ, ಅವರು ಈಗ ಸ್ವಲ್ಪವೂ ತಡೆಯಿಲ್ಲದೆ ಅಂತರಿಕ್ಷಕ್ಕೆ ಹೊರಟುಹೋಗಿ, ಅಲ್ಲಿ ತಂತಮ್ಮ ಪತಿಗಳೊಡನೆ ಯುಕ್ತರಾಗಿ, ಹನುಮಂತನಿಗೆ ನಮಸ್ಕಾರಮಾಡುತಿದ್ದರು ॥೫೭॥

ಅಬಾಲವೃದ್ಧಂ ಸರ್ವೋಪಿ ಪುರಾದ್ಬಹಿರುಪಸ್ಥಿತಾಃ ।
ರಾವಣೋಪಿ ಬಹಿರ್ದೇಶೇ ದಂಡಮಾಲಂಬ್ಯ ಸಂಸ್ಥಿತಃ ॥೫೪॥
ಪಶ್ಯಂತಿ ಸ್ಮ ಹನೂಮಂತಂ ಕೇಚಿದಞ್ಜಲಿಕರ್ಮಣಾ ।
ಮಹೋಪಕಾರಿಣಂ ವೀರಂ ನಮಸ್ಕುರ್ವಂತಿ ಚಾಪರೇ ॥೫೫॥
ಪ್ರಾಸಾದಸಹಿತಾದಗ್ಧಾಃ ಅಟ್ಟಾಲಕಗೃಹಾಅಪಿ ।
ಕ್ವಚಿದ್ರತ್ನಮಯಾಃ ಕೇಚಿತ್ ಕೇಚಿತ್ ಕನಕನಿರ್ಮಿತಾಃ ।
ರತ್ನಸ್ತಂಭೈರಾಜತೈಶ್ಚ ಕನಕೈಃ ಸ್ಫಾಟಿಕೈಃ ಕ್ವಚಿತ್ ॥೬೦॥
ಕ್ಷಣೇನ ದಗ್ಧಾ ನಗರೀ ತ್ರಿಪುರಾಣಿ ಯಥಾ ಪುರಾ ॥೬೧॥
ದಗ್ಧ್ವಾ ಪುರೀಂ ರಾವಣಸ್ಯ ಹನೂಮಾನ್ ಮಾರುತಾತ್ಮಜಃ ।
ಬಹಿಷ್ಕೃತಸ್ಯ ಸರ್ವಸ್ಯ ಬಹಿಷ್ಕಾರಪ್ರಸೂಚನಮ್ ।
ತಸ್ಯಮುದ್ರಾಙ್ಕಿತಂ ರಾಜ್ಞಾ ಕರ್ತವ್ಯಮಿತಿ ಮೇ ಶ್ರುತಮ್ ॥೬೨॥
ಇತಿ ಸಞ್ಚಿಂತ್ಯ ಮನಸಾ ನಾಲವಿಲ್ಲಮಥಾಕರತ್ ।
ಅಬಾಲವೃದ್ಧಂ ಸರ್ವೇಷಾಂ ತೇನ ಜಿಹ್ಮಂ ಪ್ರವರ್ತಿತಮ್ ॥೬೩॥

ಆಗ ಅಬಾಲವೃದ್ಧರಾಗಿ ಸಮಸ್ತರೂ ಊರಿನ ಹೊರಗೆ ಹೋಗಿ ನಿಂತುಗೊಂಡರು ರಾವಣನೂ ಕೂಡ ಊರ ಹೊರಗಡೆ ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡು ನಿಂತಿದ್ದನು ॥

ಕೆಲವರು ಕೈಮುಗಿದುಕೊಂಡು ಹನುಮಂತನನ್ನು ನೋಡುತಿದ್ದರು, ಮತ್ತ ಕೆಲವರು ಅವನಿಂದ ತಮಗ ಮಹೋಪಕಾರವಾಯ್ತೆಂದು ತಿಳಿದುಕೊಂಡು ಅವನಿಗ ನಮಸ್ಕಾರ ಮಾಡುತಿದ್ದರು ॥೫೯॥

ಹೀಗ ಆ ಹನುಮಂತನಿಂದ ಲಂಕಾಪಟ್ಟಣವಲ್ಲನ ಪ್ರಾಸಾದಗಳೂ ಸಣ್ಣಸಣ್ಣ ಅಟ್ಟಾಲಕ (ಅಟ್ಟ = ಚಿಕ್ಕಮಹಡಿ)ಗಳೂ ಸುಟು ಹೋದುವು ಅವುಗಳಲ್ಲಿ ಕೆಲವು ರತ್ನಮಯವಾಗಿದ್ದುವು, ಕೆಲವು ಸುವರ್ಣಮಯವಾಗಿದ್ದುವು ಅಲ್ಲಿ ಕೆಲವುಕಡೆ ರತ್ನಮಯವಾದ ಸ್ತಂಭಗಳೂ, ಕೆಲವು ಕಡೆ ರಜತಮಯವಾದ ಸ್ತಂಭಗಳೂ, ಕೆಲವುಕಡೆ ಸುವರ್ಣಮಯವಾದ ಸ್ತಂಭಗಳೂ, ಕೆಲವು ಕಡೆ ಸ್ಫಟಿಕಮಯವಾದ ಸಂಭಗಳೂ ಇದ್ದುವು ಇಂತಹ ಆ ಲಂಕಾಪಟ್ಟಣವು, ಪೂರ್ವದಲ್ಲಿ ತ್ರಿಪುರಗಳು ಭಸ್ಮವಾದಂತೆ, ಒಂದು ಕ್ಷಣದೊಳಗ ಭಸ್ಮವಾಗಿಹೋಯ್ತು ॥೬೦-೬೧॥

ಹೀಗ ಆ ರಾವಣನ ಪಟ್ಟಣವನ್ನು ಸುಟ್ಟುಬಟ್ಟು, ಮಾರುತಪುತ್ರನಾದ ಹನುಮಂತನು, ತನ್ನ ಮನಸ್ಸಿನೊಳಗ ' ಲೋಕವೆಲ್ಲ ಊರುಬಿಟ್ಟು ಹೊರಡಿಸಿದವುಗ ಅವರನ್ನು ಹೊರಡಿಸಿದೆವೆಂದು ಸೂಚಿಸುವುದಕ್ಕೋಸ್ಕರ ದೊರಯು ಅವುಗೆ ಒಂದು ಮುದ್ರೆಯಿಂದ ಬರೆಹಾಕಬೇಕೆಂದು ನಾನು ಕೇಳಿದ್ದೆನು, ಈಗ ಇಲ್ಲಿ ಹಾಗಮಾಡುವನು ' ಎಂಬುದಾಗಿ ಯೋಚಿಸಿಕೊಂಡು, ತನ್ನ ಬಾಲದಲ್ಲಿದ್ದ ಬೆಂಕಿಯನ್ನು ಎಲ್ಲರಮೇಲೂ ಎರಚಿಬಿಟ್ಟನು. ಅದರಿಂದ, ಅಲ್ಲಿದ್ದ ಅಬಾಲವೃದ್ಧರಾಗಿ ಸಮಸ್ತರಿಗೂ ಮೈಮೇಲೆ ಗುರುತಾಗಿಬಿಟ್ಟಿತು ॥೬೨-೬೩॥

ವಾಲಪ್ರಕ್ಷಾಳನಾರ್ಥಾಯ ಸಮುದ್ರಂ ಗನ್ತುಮುತ್ಸುಕಃ ।
ರಾವಣಸ್ಯ ಮುಖೇ ವಹ್ನಿಂ ವಾಲಜಂ ಪ್ರಕ್ಷಿಪ್ಯ ಯಯೌ ॥೬೪॥
ಲಙ್ಕಾಂ ಸಮಸ್ತಾಂ ಸನ್ದೀಪ್ಯ ಲಾಙ್ಗೂಲಾಗ್ನಿಂ ಮಹಾಕಪಿಃ ।
ನಿರ್ವಾಪಯಾಮಾಸ ತದಾ ಸಮುದ್ರೇ ಹರಿಸತ್ತಮಃ ॥೬೫॥
ತದ್ವಾಲಸ್ಥಾಗ್ನಿನೋದನ್ವಾನ್ ವ ತಿಚಕ್ರಾಮ ಯೋಜನಮ್ ।
ತನ್ಮಷೀಧೂಮತಸ್ತಸ್ಮಿನ್ ನೈಲ್ಯಮದ್ಯಾಪಿ ದೃಶ್ಯತೇ ॥೬೬॥
ವಾಲವಹ್ನಿಂ ಸುನಿರ್ವಾಪ್ಯ ಸಮುದ್ರೇ ಮಾರುತಾತ್ಮಜಃ ।
ಸೀತಾಸನ್ನಿಧಿಮಾಸಾದ್ಯ ವನ್ದಿತ್ವಾ ಚರಣೌ ಯಯೌ ।
ಬದ್ಧಾಞ್ಜಲಿಪುಟಸ್ತಸ್ಥೌ ಭಕ್ತಿನಮ್ರೋ ಮಹಾಕಪಿಃ ॥೬೭॥

ಇತಿ ಶ್ರೀಮತ್ಸುನ್ದರಕಾಣ್ಡೇ ಲಙ್ಕಾದಹನಂ ನಾಮ
ನವಮಃ ಸರ್ಗಃ



ಆಮೇಲೆ ತನ್ನ ಬಾಲವನ್ನು ತೊಳದುಕೊಳ್ಳುವುದಕ್ಕಾಗಿ ಸಮುದ್ರಕ್ಕೆ ಹೋಗಬೇಕೆಂದು ಹೊರಟು, ಆ ಹನುಮಂತನು ತನ್ನ ಬಾಲದಲ್ಲಿದ್ದ ಬೆಂಕಿಯನ್ನು ರಾವಣನ ಮುಖದಮೇಲ ಹಾಕಿ ಹೊರಟುಹೋದನು ॥೬೪॥

ಹೀಗೆ ಆ ವಾನರೋತ್ತಮನು ಆಗ ಲಂಕೆಯನ್ನೆಲ್ಲ ಉರಿಸಿಬಿಟ್ಟು, ಬಳಿಕ ತನ್ನ ಬಾಲದಲ್ಲಿದ್ದ ಅಗ್ನಿಯನ್ನು ಸಮುದ್ರದಲ್ಲಿ ಆರಿಸಿಬಿಟ್ಟನು ॥೬೫॥

ಅವನ ಬಾಲದಲ್ಲಿದ್ದ ಅಗ್ನಿಯಿಂದ ತಾಪಿತವಾಗಿ, ಸಮುದ್ರವು ಒಂದು ಗಾವ್ದದೂರ ಒತ್ತಿಹೋಯಿತು ಆಗ ಉಂಟಾದ ಮಸಿಯಿಂದಲೂ ಹೊಗೆಯಿಂದಲೂ ಸಮುದ್ರದಲ್ಲಿ ಈಗಲೂ ಕಪ್ಪುಬಣ್ಣ ಕಾಣಿಸುತಿರುವುದು ॥೬೬॥

ಬಳಿಕ ಮಾರುತಪುತ್ರನಾದ ಆಂಜನೇಯನು, ತನ್ನ ಬಾಲದಲ್ಲಿದ್ದ ಬೆಂಕಿಯನ್ನು ಸಮುದ್ರದಲ್ಲಿ ಜೆನ್ನಾಗಿ ಆರಿಸಿಬಿಟ್ಟು, ಮತ್ತೆ ಸೀತೆಯ ಸಾನ್ನಿಧ್ಯವನ್ನುಸೇರಿ ಅವಳ ಪಾದಯುಗಳಕ್ಕೆ ನಮಸ್ಕಾರಮಾಡಿ, ಭಕ್ತಿಯಿಂದ ನಮ್ರನಾಗಿ ಕೈಮುಗಿದುಕೊಂಡು ನಿಂತಿದ್ದನು ॥೬೭॥

ಇದು ಸುಂದರಕಾಂಡದಲ್ಲಿ ಲಂಕಾದಹನವೆಂಬ
ಒಂಬತ್ತನೆಯ ಸರ್ಗವು.



ಅಥ ಶ್ರೀಮತ್ಸುನ್ದರಕಾಣ್ಡೇ ದಶಮಃ ಸರ್ಗಃ.

ಶ್ರೀಶಿವಉವಾಚ.

ಸೀತಾ ದೃಷ್ಟ್ವಾ ಹನೂಮನ್ತಂ ಆಶೀರ್ವಚನಪೂರ್ವಕಮ್ ।
ಶಿರೋಮಣಿಂ ಪ್ರದಾಯಾಶು ಸುಖಂ ಗಚ್ಛೇತ್ಯಭಾಷತ ॥೧॥
ಲಙ್ಕಾಶ್ರೀಹರಣಂ ವೀರ ತ್ವಯಾಸೀತಾ ಪ್ರಬಲಾತ್ಮನಾ ।
ರಾಮದೂತಸ್ಮೃತಿರ್ಹ್ಯೇಷಾಂ ಅಸೀದ್ಧೃದಯಶಲ್ಯಕಮ್ ॥೨॥
ಇತ್ಯುಕ್ತಃ ಸೀತಯಾ ವೀರಃ ಪ್ರಣಮ್ಯ ಚ ಪುನಃಪುನಃ ।
ತದಾಜ್ಞಾಂ ಶಿರಸಾ ಧೃತ್ವಾ ಸಮುದ್ರಮತರತ್ ಕಪಿಃ ॥೩॥
ತಂ ದೃಷ್ಟ್ವಾ ಪುನರಾಯಾನ್ತಂ ಹನೂಮನ್ತಂ ಮಹಾಕಪಿಮ್ ।
ಕೃತಕಾರ್ಯಂ ಮಹೋತ್ಸಾಹಂ ವಾನರಾಮುದವಾಯಯುಃ ॥೪॥

ಸುಂದರಕಾಂಡದಲ್ಲಿ ಹತ್ತನೆಯ ಸರ್ಗವು

ಶ್ರೀಪರಮೇಶ್ವರನು ಪಾರ್ವತಿಗೆ ಹೇಳಲುಪಕ್ರಮಿಸಿದನು —

ಎಲೌ ಪಾರ್ವತಿ ! ಹೀಗೆ ಹನುಮಂತನು ಲಂಕಾಪಟ್ಟಣವನ್ನೆಲ್ಲ ದಹಿಸಿಬಟ್ಟು ತನ್ನ ಸನ್ನಿಧಿಯಲ್ಲಿ ಬಂದು ನಿಂತುಕೊಳ್ಳಲಾಗಿ, ಆಗ ಸೀತಾದೇವಿಯು ಅವನನ್ನು ನೋಡಿ, ಆಶೀರ್ವಾದಪೂರ್ವಕ ಸ್ವರವಾಗಿ ಅವನ ಕೈಗೆ ತನ್ನ ತಲೆಯಲ್ಲಿದ್ದ ಚೂಡಾಮಣಿಯನ್ನು ತೆಗೆದುಕೊಟ್ಟು, ಸುಖವಾಗಿ ಹೋಗೆಂದು ಕಳುಹಿಸಿದಳು ॥೧॥

ಬಳಿಕ ' ಎಲೈ ವೀರನೇ ! ಅತಿ ಬಲಾಢ್ಯನಾದ ನಿನು ಈ ಲಂಕಾಪಟ್ಟಣದ ಸಂಪತ್ತನ್ನೆಲ್ಲ ನಾಶಗೊಳಿಸಿದೆ. ಇಲ್ಲಿ ರಾಮದೂತನ ಸ್ಮರಣೆಯು ಇವರಿಗೆಲ್ಲ ಹೃದಯಶಲ್ಯವಾಗಿರುವುದು ' ಎಂದು ಹೇಳಿ ಸೀತೆಯಿಂದ ಹರಸಿ ಕಳುಹಲ್ಪಟ್ಟ ಹನುಮಂತನು, ಪುನಃಪುನಃ ಅವಳಿಗೆ ನಮಸ್ಕಾರ ಮಾಡಿ, ಅವಳ ಅಪ್ಪಣೆಯನ್ನು ತಲೆಯಮೇಲಿಟ್ಟುಕೊಂಡು, ಆಮೇಲೆ ಸಮುದ್ರನನ್ನು ದಾಟಿ ಈಚೆಯದಡಕ್ಕೆ ಬಂದನು ॥೨-೩॥

ಹೀಗೆ ಕೃತಕಾರ್ಯನಾಗಿ ಪರಮೋತ್ಸಾಹದಿಂದ ಹಿಂದಿರುಗಿ ಬರುತ್ತಿರುವ ಹನುಮಂತನನ್ನು ನೋಡಿ, ಇತರರಾದ ವಾನರರೆಲ್ಲರೂ ಅತಿಯಾಗಿ ಸಂತೋಷಭರಿತರಾದರು ॥೪॥

ಸೀತಾದರ್ಶನವೃತ್ತಾನ್ತಂ ಆನುಪೂರ್ವ್ಯೇಣ ಮಾರುತೇಃ ।
ರಕ್ಷೋಯುದ್ಧಾದಿಕಂ ತತ್ರ ಶ್ರುತ್ವಾ ವಿಸ್ಮಯಮಾಗತಾಃ ॥೫॥
ತತೋ ಹನುಮತಾ ಸಾಕಂ ಸೀತಾದರ್ಶನತೋಷಿತಾಃ ।
ಸುಗ್ರೀವವನಮಾಜಗ್ಮುಃ ಕೃತಕಾರ್ಯಾವಶೇಷಮುಖಾಃ ॥೬॥
ರಸಾಲಚೂತಪನಸದ್ರಾಕ್ಷಾದೀನಾಂ ಫಲಾನ್ಯಪಿ ।
ಖರ್ಜೂರಕದಳೀನಾಂ ಚ ಜಗ್ಧ್ವಾತಿರಸವನ್ತಿ ಚ ॥೭॥
ಪೀತ್ವಾ ಮಧೂನಿ ಸಂಪೂರ್ಣಾಂ ಅಧ್ವಶ್ರಮನಿಷೂದಿತಾಃ ।
ವನಪಾಲಾನ್ ನಿಹತ್ಯೈವ ಪ್ರತಿಬನ್ಧಂ ನಿವರ್ತ್ಯ ಚ ॥೮॥
ಹಸ್ತಗ್ರಾಹ್ಯಫಲಾನ್ಯಾಶು ಭಕ್ಷಯಿತ್ವಾಥ ವಾನರಾಃ ।
ಯಾಚಕೇಭ್ಯೋಪಿ ಮಧುರಂ ವಿಪ್ರೇಭ್ಯಃ ಪ್ರದದುಃ ಫಲಮ್ ॥೯॥
ಫಲಂ ಮಧು ಚ ಸಂಪೂರ್ಣಂ ಭುಕ್ತ್ವಾ ವಾನರಸೈನಿಕಾಃ ।
ತುಷ್ಟಾಃ ಪುಷ್ಟಾಸ್ತತೋ ಭೂತ್ವಾ ವಿಜಹ್ರುರ್ವನಮಧ್ಯಗಾಃ ॥೧೦॥

ಆಮೇಲೆ ಮೊದಲಿಂದ ಕ್ರಮವಾಗಿ ಸೀತಾದರ್ಶನವೃತ್ತಾಂತವನ್ನೂ ರಾಕ್ಷಸಯುದ್ಧ ಮೊದಲಾದುದನ್ನೂ ಅವನ ಮುಖದಿಂದ ಕೇಳಿ, ಅವರೆಲ್ಲರೂ ಬಹಳವಾಗಿ ಆಶ್ಚರ್ಯಪಟ್ಟರು ॥೫॥

ಅನಂತರ, ಕೃತಕಾರ್ಯರಾದ ಆ ವಾನರರೆಲ್ಲರೂ, ಸೀತೆಯ ದರ್ಶನವಾದುದರಿಂದ ಸಂತೋಷಯುಕ್ತರಾಗಿ, ಹನುಮಂತನೊಡನೆ ಅಲ್ಲಿಂದ ಹೊರಟು, ದಾರಿಯಲ್ಲಿ ಸಿಕ್ಕಿದ ಸುಗ್ರೀವನ ಮಧುವನಕ್ಕೆ ಬಂದರು ॥೬॥

ಮಾರ್ಗಾಯಾಸದಿಂದ ಅತಿಯಾಗಿ ಬಳಲಿಹೋಗಿದ್ದ ಆ ವಾನರರು, ಅಲ್ಲಿ ಅತಿ ರಸಭರಿತವಾರುವ ಮಾವು ಹಲಸು ದ್ರಾಕ್ಷಿ ಮುಂತಾದ ಫಲಗಳನ್ನೂ, ಖರ್ಜೂರ ಬಾಳೆ ಮುಂತಾದ ಹಣ್ಣುಗಳನ್ನೂ ಯಥೇಚ್ಛವಾಗಿ ತಿಂದು, ಸಂಪೂರ್ಣವಾಗಿ ಮಧುವನ್ನು ಕುಡಿದು, ತಮ್ಮನ್ನು ತಡೆಯುವುದಕ್ಕೆ ಬಂದ ತೋಟದ ಕಾವಲುಗಾರರನ್ನೆಲ್ಲ ಹೊಡೆದು, ಸ್ವಲ್ಪವೂ ತಡೆಯೇ ಇಲ್ಲದೆ, ಕೈಯೆತ್ತಿದರೆ ಸಿಕ್ಕುತಿದ್ದ ಹಣ್ಣುಗಳನ್ನೆಲ್ಲ ಬೇಗಬೇಗನೆ ತಿಂದು, ಯಾಚಕರಾಗಿ ಬಂದಂತಹ ಬ್ರಾಹ್ಮಣರಿಗೂ ಬೇಕಾದಷ್ಟು ಮಧುರವಾದ ಫಲಗಳನ್ನೂ ಕೊಟ್ಟುಬಿಟ್ಟರು ॥೭-೯॥

ಹೀಗೆ ಆ ವಾನರಸೈನಿಕರು ಫಲವನ್ನೂ ಮಧುವನ್ನೂ ಸಂಪೂರ್ಣವಾಗಿ ಉಪಭೋಗಿಸಿ, ಒಳಿಕ ಆನಂದಾತಿಶಯವನ್ನೂ ಕಾಯಪುಷ್ಟಿಯನ್ನೂ ಪಡೆದವರಾಗಿ, ಆ ಮಧುವನದ ಮಧ್ಯದಲ್ಲಿ ಆಟವಾಡುತ್ತಿದ್ದರು ॥೧೦॥

ಸುಗ್ರೀವಸ್ಥಾಪಿತಾಸ್ತತ್ರ ವನಪಾಲಾಮಹೌಜಸಃ ।
ಶಶಂಸುಃ ಸ್ವಾಮಿನೇ ತೇಷಾಂ ವನಂ ವಾನರಭಕ್ಷಿತಮ್ ॥೧೧॥
ತಚ್ಛ್ರುತ್ವಾ ವಚನಂ ತೇಷಾಂ ಸುಗ್ರೀವೋ ವಾಹಿನೀಪತಿಃ ।
ನಿಶ್ಚಿತ್ಯ ದರ್ಶನಂ ದೇವ್ಯಾಃ ಪರಮಾನನ್ದಸಂಪ್ಲುತಃ ॥೧೨॥
ರಾಮಂ ಸಂಸ್ಮೃತ್ಯ ಸುಗ್ರೀವಃ ಉವಾಚ ವನಗೋಚರಾನ್ ।
ಭುಜ್ಯತಾಂ ಮೇ ವನಂ ವೀರೈಃ ಸಫಲೋ ಮೇ ಮನೋರಥಃ ॥೧೩॥
ಇತ್ಯುಕ್ತಾಃ ಕಪಿರಾಜೇನ ವನಪಾಲಾನಿವರ್ತಿತಾಃ ॥೧೪॥
ತತಃ ಕಪಿವರಾಃ ಸರ್ವೇ ಯಥೋಪ್ಟಂ ವನಭೋಜಿನಃ ।
ವನೇ ವಿಹೃತ್ಯ ಸುಚಿರಂ ಸಲ್ಲಾಪಾಲಾಪಪೂರ್ವಕಮ್ ।
ಹನೂಮತ್ಪ್ರಮುಖಾಃ ಶೀಘ್ರಂ ನಿರ್ಯಯೂರಾಮಸನ್ನಿಧಮ್ ॥೧೫॥
ಗುಹಾದ್ವಾರಂ ಸಮಾಸಾದ್ಯ ಶ್ರೀರಾಮಂ ದದೃಶುಃ ಸುಖಮ್ ।
ಸಾಷ್ಟಾಙ್ಗಂ ಪ್ರಣಿಪತ್ಯಾಥ ರಾಮಂ ರಾಜೀವಲೋಚನಮ್ ।
ಹನೂಮಾನ್ ರಾಘವಂ ಪ್ರಾಹ ದೃಷ್ಟಾ ಸೀತೇತಿ ತತ್ತ್ವತಃ ॥೧೬॥

ಅಲ್ಲಿ ಸುಗ್ರೀವನಿಂದ ಇಡಲ್ಪಟ್ಟಿದ್ದ ಮಹಾತೇಜಸ್ವಿಗಳಾದ ವನಪಾಲಕರು, ಈ ಹನುಮಂತ ಮೊದಲಾದವರು ಮಧುವನವನ್ನೆಲ್ಲ ಭಕ್ಷಿಸಿಬಿಟ್ಟರೆಂದು, ತಮ್ಮ ಒಡೆಯನಾದ ಸುಗ್ರೀವನಿಗೆ ಹೋಗಿ ತಿಳಿಯಿಸಿದರು ॥೧೧॥

ಆಗ ಅವರು ಹೇಳಿದುದನ್ನು ಕೇಳಿ, ಕಪಿನಾಯಕನಾದ ಸುಗ್ರೀವನು, ಸೀತೆಯನ್ನು ನೋಡಿ ಕೊಂಡು ಬಂದಿರುವರೆಂದು ನಿಶ್ಚಯಮಾಡಿಕೊಂಡು, ಅತಿಶಯವಾಗಿ ಆನಂದಸಮುದ್ರದಲ್ಲಿ ತೇಲಾಡುತಿದ್ದನು ॥೧೨॥

ಒಳಿಕ ಅವನು ತನ್ನ ಮನಸ್ಸಿನಲ್ಲಿಯೇ ಶ್ರೀರಾಮನನ್ನು ಸ್ಮರಿಸುತ, ಆ ವನಪಾಲಕರನ ಕುರಿತು ' ನನ್ನ ಮಧುವನವನ್ನೆಲ್ಲ ಆ ಮಹಾವೀರರು ಭಕ್ಷಿಸಿಬಿಡಲಿ, ನೀವು ಅವರನು ಯಬೇಡಿರಿ ಈಗ ನನ್ನ ಮನೋರಥಪೂರ್ತಿಯಾಗಿರುವುದು ' ಎಂದು ಹೇಳಿ, ಅವರನ್ನೆಲ್ಲ ಸಿಬಿಟ್ಟನು ॥೧೩–೧೪॥

ಆಮೇಲೆ, ಆ ಹನುಮಂತ ಮೊದಲಾದ ಕಪಿಶ್ರೇಷ್ಠರುಗಳು, ಆ ಮಧುವನ-
ಚ್ಛವಾಗಿ ಉಸಭೋಗಿಸಿಬಿಟ್ಟು, ಸರಸ ಸಲ್ಲಾಪಗಳಿಂದ ಆ ವನದಲ್ಲಿ ಬಹಳಹೊ
ಡಿಕೊಂಡಿದ್ದು, ಅನಂತರ ಬೇಗಬೇಗನೆ ಶ್ರೀರಾಮನ ಸನ್ನಿಧಿಗೆ ಹೊರಟರು ॥

ಅಲ್ಲಿಂದ ಋಶ್ಯಮೂಕಪರ್ವತದ ಮಹಾದ್ವಾರಕ್ಕೆ ಬಂದು,
ದರ್ಶನವನ್ನು ಮಾಡಿದರು. ಆಮೇಲೆ ಅವನಿಗೆ ಸಾಷ್ಟಾಂಗ ನಮ
ನಾದ ಶ್ರೀರಾಮನನ್ನು ಕುರಿತು, 'ಸೀತಾದೇವಿಯನ್ನು ನೋಡಿಕೊ
ತನು ವಿಜ್ಞಾಪಿಸಿದನು ॥೧೬॥

ಸಮುದ್ರಸ್ಯ ಪರೇ ಪಾರೇ ಲಙ್ಕೇತಿ ನಗರೀ ಶುಭಾ ।
ತಸ್ಯಾಂ ತು ರಾವಣಾಗಾರೇ ಸ್ತ್ರೀವನೇ ರಾಕ್ಷಸೀವೃತಾ ॥೧೭॥
ಪತಿವ್ರತಾ ಮಹಾಭಾಗಾ ತವಾಗಮನಕಾಂಕ್ಷಿಣೀ ।
ಏಕವೇಣೀ ಮಯಾ ದೃಷ್ಟಾ ಶನೈರಾಶ್ವಾಸಿತಾ ಶುಭಾ ॥೧೮॥
ರಾವಣಂ ಸಕುಲಂ ಹತ್ವಾ ನೇಷ್ಯತಿ ತ್ವಾಂ ಸ್ವಕಂ ಪುರಮ್ ।
ಅಭಿಜ್ಞಾಂ ದೇಹಿ ಮೇ ದೇವಿ ಯಥಾ ತ್ವಾಂ ವಿಶ್ವಸೇದ್ವಿಭುಃ ॥೧೯॥
ಇತ್ಯುಕ್ತಾ ಸಾ ಶಿರೋರತ್ನಂ ಚೂಡಾಪಾಶೇ ಸ್ಥಿತಂ ಪ್ರಿಯಮ್ ।
ದತ್ವಾ ಕಾಕೇನ ಯದ್ವೃತ್ತಂ ಜೇತ್ರಕೂಟಾಶ್ರಮೇ ಪುರಾ ।
ತದಪ್ಯಾಹಾಶ್ರುಪೂರ್ಣಾಕ್ಷೀ ಕುಶಲಂ ಬ್ರೂಹಿ ಲಕ್ಷ್ಮಣಮ್ ॥೨೦॥
ಇಹ ಪ್ರಸ್ಥಾಪಿತೋ ರಾಮ ತ್ವತ್ಸಮೀಪಮುಪಾಗಮುಮ್ ।
ಇತಃಪರಂ ಕರಿಷ್ಯಾಮಿ ಕೃತ್ಯಶೇಷಂ ತ್ವದಾಜ್ಞಯಾ ॥೨೧॥

ಅವನು ವಿಜ್ಞಾಪಿಸಿದ ಪ್ರಕಾರವೇನೆಂದರೆ,—ಸ್ವಾಮಿ ! ದಕ್ಷಿಣಸಮುದ್ರದ ಆಚೆಯ ದಡದಲ್ಲಿ ಲಂಕೆಯೆಂಬ ಒಂದು ದಿವ್ಯವಾದ ನಗರವಿರುವುದು, ಆ ನಗರದಲ್ಲಿ ರಾವಣನ ಅರಮನೆಯಿರುವುದು ಅಲ್ಲಿ ಸ್ತ್ರೀಯರ ಉದ್ಯಾನದೊಳಗೆ ರಾಕ್ಷಸಿಯರಿಂದ ಪರಿವೃತಳಾಗಿ-ನಿನ್ನ ಆಗಮನವನ್ನೇ ಬಯಸುತ-ಏಕವೇಣಿಯನ್ನು ಧರಿಸಿಕೊಂಡು ಕುಳಿತಿದ್ದ-ಮಹಾಪತಿವ್ರತೆಯಾದ ಸೀತಾದೇವಿಯನ್ನು ನಾನು ಕಂಡನು, ಒಳಿಕ ಮೆಲ್ಲಗ ಅವಳನ್ನು ಸಮಾಧಾನಪಡಿಸಿದೆನು ॥೧೭-೧೮॥

ಆಗ ನಾನು ಅವಳನ್ನು ಕುರಿತು 'ತಾಯಿ ! ಶ್ರೀರಾಮನು ರಾವಣನನ್ನು ಬಂಧುಬಳಗ ಸಹಿತ ಕೊಂದು, ನಿನ್ನನ್ನು ತನ್ನ ಸಮ್ಮುಖಕ್ಕೆ ಕರೆದುಕೊಂಡು ಹೋಗುವನು ಶ್ರೀರಾಮನಿಗೆ ನಿನ್ನಲ್ಲಿರುವ ವಿಶ್ವಾಸವುಟ್ಟುವಂತೆ ಯಾವುದಾದರೊಂದು ಅಭಿಜ್ಞಾನವನ್ನು ಕೊಡು' ಎಂದು ಪ್ರಾರ್ಥಿಸಿದೆನು. ಆಗ ನನ್ನಿಂದ ಪ್ರಾರ್ಥಿಸಲ್ಪಟ್ಟ ಆ ಸೀತಾದೇವಿಯು, ತನ್ನ ತಲೆಯಲ್ಲಿದ್ದ ಅತಿ ಪ್ರಿಯವುದಕ್ಕೆ ಬಂದ ಶಿರೋಮಣಿಯನ್ನು ನನ್ನ ಕೈಗೆ ಕೊಟ್ಟು, ಹಿಂದೆ ಚಿತ್ರಕೂಟಪರ್ವತದ ಆಶ್ರಮಪ್ರದೇಶದಲ್ಲಿ ತ್ತಿದರೆ ಸಿಕ್ಕುತಿದ್ದ ಹ ನಡೆದ ಯಾವ ವೃತ್ತಾಂತವುಂಟೋ ಅದನ್ನು ಕಣ್ಣೀರು ಸುರಿಯಿಸುತ ಹೇಳಿ, ಕುಶಲಪ್ರಶ್ನೆಮಾಡಿದಳೆಂದು ತಿಳಿಸಬೇಕೆಂದೂ ಆಜ್ಞಾಪಿಸಿ, ಬಳಿಕ ನನ್ನನ್ನು ರಿಗೂ ಬೇಕಾದಷ್ಟು ಮಧುರವಾಣಿ .— ! ರಾಮಭದ್ರ ! ಇದೋ ನಾನು ತಮ್ಮ ಅನುಗ್ರಹಬಲ

ಹೀಗೆ ಆ ವಾನರಸೈನಿಕರು ಫಲವನ್ನೂ ಮಧುವನ್ನೂ ಸೇರಿರುವೆನು ಇನ್ನು ಮುಂದೆ ಯಾವ ಒಳಿಕ ಆನಂದಾತಿಶಯವನ್ನೂ ಕಾಯಪುಷ್ಟಿಯನ್ನೂ ಪಡೆದವರಾಗಿ, ಆ ಟಸ್ಥ (ಎಂದು ಅಂಜ ಆಟವಾಡುತ್ತಿದ್ದರು ॥೧೦॥

ತೌ ಜಾತಾಶ್ವಾಸೌ ರಾಜಪುತ್ರೌ ವಿದಿತ್ವಾ
ತಚ್ಚಾಭಿಜ್ಞಾನಂ ರಾಘವಾಯ ಪ್ರದಾಯ ।
ದೇವ್ಯಾ ಚಾಖ್ಯಾತಂ ಸರ್ವಮೇವಾನುಪೂರ್ವ್ಯಾತ್
ವಾಚಾ ಸಂಪೂರ್ಣಂ ವಾಯುಪುತ್ರಃ ಶಶಂಸ ॥೩೦॥

ಇತಿ ಶ್ರೀಮತ್ಸುನ್ದರಕಾಣ್ಡೇ ಹನೂಮತ್ಪುನರಾಗಮನಾದಿಕಥನಂ ನಾಮ
ದಶಮಃ ಸರ್ಗಃ



ಈರೀತಿಯಲ್ಲಿ ವಿಜ್ಞಾಪಿಸಿ, ತನ್ನ ಮಾತಿನಿಂದ ಆ ರಾಮ ಲಕ್ಷ್ಮಣರಿಬ್ಬರಿಗೂ ಸಮಾಧಾನ ವುಂಟಾಯಿತೆಂದು ತಿಳಿದುಕೊಂಡು, ಆ ಅಭಿಜ್ಞಾನವನ್ನು ಶ್ರೀ ರಾಮನಿಗೆ ಸಮರ್ಪಿಸಿ, ಆ ವಾಯು ಪುತ್ರನು, ಶ್ರೀ ಸೀತಾದೇವಿಯಿಂದ ಹೇಳಲ್ಪಟ್ಟುದೆಲ್ಲವನ್ನೂ ಕ್ರಮೇಣ ಸಂಪೂರ್ಣವಾಗಿ ವಿಜ್ಞಾ ಪಿಸಿಬಿಟ್ಟನು ॥೨೨॥

ಇದು ಸುಂದರಕಾಂಡದಲ್ಲಿ ಹನುಮಂತನ ಪುನರಾಗಮನಾದಿ ವೃತ್ತಾಂತವೆಂಬ
ಹತ್ತನೆಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಏಕಾದಶಃ ಸರ್ಗಃ

ಶ್ರೀಶಿವಉವಾಚ

ಇತಿ ಮಾರುತಿವಾಕ್ಯೇನ ಪ್ರೀತೋ ರಘುಪತಿರ್ಭೃಶಮ್ ।
ಸರ್ವಸ್ವಭೂತಂ ಗೃಹ್ಣೀಷ್ವ ಪರಿಷ್ವಜ್ಯಂ ಮಯಾ ಕೃತಮ್ ।
ಇತ್ಯುಕ್ತ್ವಾ ಪ್ರೀತಿಹೃಷ್ಟಾಙ್ಗೋ ರಾಘವಃ ಪರಿಷಸ್ವಜೇ ॥೧॥
ಹನೂಮನ್ತಂ ಮಹಾತ್ಮಾನಂ ಕೃತಕಾರ್ಯಮುಪಸ್ಥಿತಮ್ ।
ಪರಿಷ್ವಜ್ಯಾಥ ಸಂಹೃಷ್ಟೋ ರಾಮೋ ಮಾರುತಿಮಬ್ರವೀತ್ ॥೨॥
ವರಂ ದದಾಮಿ ಪಿಙ್ಗಾಕ್ಷ ಮಮ ಕಾರ್ಯಕರೋ ಯತಃ ॥೩॥
ಯತ್ರಯತ್ರ ರಘುನಾಥಕೀರ್ತನಂ ತತ್ರತತ್ರ ಕೃತಮಸ್ತಕಾಞ್ಜಲಿಃ ।
ಬಾಷ್ಪವಾರಿಪರಿಪೂರ್ಣಲೋಚನೋ ಮಾರುತೇ ಭವ ಮದೀಯಜೀವನಃ ॥
ಮೋಚಾವನೇ ತಪಸ್ತಪ್ತ್ವಾ ಸುಚಿರಂ ಬ್ರಹ್ಮಜೀವನಃ ।
ಪಶ್ಚಾಚ್ಚತುರ್ಮುಖೋ ಭೂತ್ವಾ ಸೃಷ್ಟ್ವಾ ಲೋಕಾ ಯಥಾವಿಧಿ ॥೫॥
ಬ್ರಹ್ಮಲೋಕಗತಾ ಭೋಗಾ ಭುಕ್ತ್ವಾ ಬ್ರಹ್ಮಾಯುಷೋತ್ಯಯೇ ।
ಸ್ವಲೋಕವಾಸಿಭಿಃ ಸಾಕಂ ಮತ್ಸ್ವರೂಪಮುಪೈಷ್ಯಸಿ ॥೬॥

ಸುಂದರಕಾಂಡದಲ್ಲಿ ಹನ್ನೊಂದನೆಯ ಸರ್ಗವು

ಶ್ರೀಪರಮೇಶ್ವರನು ಪಾರ್ವತಿಯೊಡನೆ ಹೇಳುವನು —

ಎಲೌ ಪಾರ್ವತಿ! ಈರೀತಿಯಾಗಿ ಹೇಳಿದ ಆಂಜನೇಯನ ಮಾತನ್ನು ಕೇಳಿ, ಶ್ರೀರಾಮನು ಆನಂದಾತಿಶಯದಿಂದ ರೋಮಾಂಚನ ವುಂಟಾದವನಾಗಿ, ಆ ಆಂಜನೇಯನಲ್ಲಿ ವಿಶೇಷವಾಗಿ ಪ್ರೀತಿ ಟ್ಟು ' ಆಯ್ಯಾ! ಹನುಮಂತನೇ! ನೀನು ನನಗುಂಟುಮಾಡಿರುವ ಸಂತೋಷಕ್ಕೆ ಪ್ರತಿಯಾಗಿ ನಿನಗೆ ಏನನ್ನು ಕೊಡಬಲ್ಲೆನು! ಇದೋ ನನ್ನ ಸರ್ವಸ್ವಭೂತವಾಗಿರುವ ಆಲಿಂಗನವನ್ನು ಟ್ಟರುವೆನು ' ಎಂದು ಹೇಳಿ, ಅವನನ್ನು ಗಾಢವಾಗಿ ಆಲಿಂಗಿಸಿಕೊಂಡನು ಹೀಗೆ ಂಡು, ಬಳಿಕ ಹರ್ಷಾತಿರೇಕದಿಂದ ಇನ್ನೂ ಆ ಮಾರುತಿಯನ್ನು ಕುರಿತು ಹೇಳಿದನು||

'ಪಿವರ್ಯನೇ! ನೀನು ನನಗೆ ವಿಶೇಷವಾಗಿ ಪ್ರೀತಿಯುಂಟುಮಾಡಿರುವೆಯಾದಕಾರಣ,
'ನನ್ನು ಕೊಡುವೆನು ಎಲೈ ಮಾರುತಿಯೆ! ಎಲ್ಲಲ್ಲಿ ರಾಮಕಥಾಕೀರ್ತನವಾ
ನೀನು ತಲೆಯಮೇಲೆ ಅಂಜಲಿಬಂಧಮಾಡಿಕೊಂಡು, ಆನಂದಬಾಷ್ಪವನ್ನು
ಯಿಸುತ್ತ, ನನ್ನ ನಾಮವನ್ನು ಜಪಮಾಡುತಿರು ||೩-೪||
'ಚಾವನದಲ್ಲಿ ಬಹುಕಾಲ ಬ್ರಹ್ಮನಿಷ್ಠನಾಗಿ ತಪಸ್ಸು ಮಾಡಿಕೊಂಡಿದ್ದು,
'ವಿಸಿ, ಬ್ರಹ್ಮನ ಆಯುಸ್ಸು ಮುಗಿದಮೇಲೆ, ನಿನ್ನ ಲೋಕದಲ್ಲಿರು
ಪಡೆಯುವೆ ||೫-೬||

ಇತಿ ದತ್ತ್ವಾ ವರಂ ತಸ್ಮೈ ಜ್ಞಾತ್ವಾ ತದ್ಭಕ್ತಿಮುತ್ತಮಾಮ್ ।
ರಾಮಸ್ತದ್ಧೃದಯಂ ಚೈವ ಭೂಯೋ ವಾಯುಜಮಬ್ರವೀತ್ ॥೬॥
ಜಾನಾಮಿ ಹನುಮ೯ ಸರ್ವಂ ತ್ವದ್ಭಕ್ತಿಂ ಚ ಪರಾಂ ಮಯಿ ।
ಜಾತೋಸಿ ಮಮ ಸೇವಾರ್ಥಂ ಸಾಕ್ಷಾದ್ರುದ್ರೋ ನ ಸಂಶಯಃ ॥೪॥
ತ್ವಂ ಪ್ರಾಗಪ್ಯುಪದೇಶಾನ್ಮೇ ಮನ್ಮನ್ತ್ರಂ ಸರ್ವದಾ ನೃಣಾಮ್ ।
ಕಾಶ್ಯಾಮುಪದಿಶಂಶ್ಚೋತ್ತೇ ರುದ್ರಸ್ತಿಷ್ಠಸಿ ಮುಕ್ತಿದಃ ॥೯॥
ತಸ್ಮಾತ್ ತವೋಪದೇಕ್ಷ್ಯಾಮಿ ಮನ್ಮನ್ತ್ರಂ ಮೋಕ್ಷಸಾಧನಮ್ ।
ಮದುಪಾಸ್ತಿಂ ವಿನಾ ಮೋಕ್ಷೋ ನಾಸ್ತಿ ಕಲ್ಪಶತೈರಪಿ ॥೧೦॥
ಇತ್ಯುಕ್ತ್ವೋಪದಿದೇಶಾಥ ಮನ್ತ್ರರಾಜಂ ಷಡಕ್ಷರಮ್ ।
ಹನೂಮತೇತಿಭಕ್ತಾಯ ರಾಘವಃ ಕೃಪಯಾ ತದಾ ॥೧೧॥
ತತಸ್ತನ್ಮನ್ತ್ರನಿಯಮಾ೯ ಸ್ವತತ್ತ್ವಂ ಚಾಪ್ಯಶೇಷತಃ ।
ಸ್ವಭಕ್ತಿಸಾಧನಾನೀಶೋ ಹ್ಯಾಚಚಕ್ಷೇ ಹನೂಮತೇ ॥೧೨॥
ಏತನ್ಮನ್ತ್ರವರಾದ್ಬ್ರಹ್ಮಾ ಸೃಷ್ಟಿಕರ್ತಾ ಹ್ಯಭೂತ್ ಪುರಾ ।
ಏತನ್ಮನ್ತ್ರೋಪದೇಶಾತ್ ಸ್ಯಾತ್ ರುದ್ರಃ ಕಾಶ್ಯಾಂ ವಿಮುಕ್ತಿದಃ ॥೧೩॥

ಹೀಗೆಂದು ವರಪ್ರದಾನಮಾಡಿ, ಅವನಿಗೆ ತನ್ನಲ್ಲಿರುವ ಅತ್ಯುತ್ತಮವಾದ ಭಕ್ತಿಯನ್ನೂ ಅವನ ಅಭಿಪ್ರಾಯವನ್ನೂ ತಿಳಿದುಕೂಂಡವನಾಗಿ, ಶ್ರೀರಾಮನು ಪುನಃ ಹನುಮಂತನನ್ನು ಕುರಿತು ಹೀಗೆ ಹೇಳಿದನು ॥೬॥

ಎಲೈ ಹನುಮಂತನೆ! ನಿನ್ನ ಹೃದಯದಲ್ಲಿನ ಸಕಲವಾದ ಅಭಿಪ್ರಾಯವನ್ನೂ, ನಿನಗೆ ನನ್ನಲ್ಲಿರುವ ಅತಿಶಯವಾದ ಭಕ್ತಿಯನ್ನೂ ನಾನು ಬಲ್ಲನು ಸಾಕ್ಷಾತ್ ರುದ್ರನೇ ಈರೀತಿಯಾಗಿ ನನ್ನ ಸೇವೆಗೋಸ್ಕರ ಇಲ್ಲಿ ಜನಿಸಿರುವೆ ಇದರಲ್ಲಿ ಸಂಶಯವಿಲ್ಲ ॥೪॥

ನೀನು ಹಿಂದೆಯೂ ನನ್ನ ಉಪದೇಶದಿಂದ ನನ್ನ ಮಂತ್ರವನ್ನು ಕಾಶಿಯಲ್ಲಿ ವಿಶ್ವೇಶ್ವರ ರೂಪವಾಗಿ ಸರ್ವದಾ ಜನರಿಗುಪದೇಶಿಸುತ ಮೋಕ್ಷಪ್ರದನಾಗಿರುವೆ ॥೯॥

ಅದುಕಾರಣ, ಮೋಕ್ಷಸಾಧನವಾದ ನನ್ನ ಮಂತ್ರವನ್ನು ನಿನಗುಪದೇಶಿಸುವೆನು ಉಪಾಸನೆಯಿಲ್ಲದಿದ್ದರೆ, ನೂರಾರು ಕಲ್ಪಗಳಾದರೂ ನೋಕ್ಷ ಲಭಿಸುವುದಿಲ್ಲ ॥೧೦॥

ಹೀಗೆಂದು ಹೇಳಿ, ಬಳಿಕ ಅತಿಭಕ್ತನಾದ ಅವನಿಗೆ ಮಂತ್ರರಾಜವಾದ ಷಡಕ್ಷರವನ್ನು ಕೃಪೆಯಿಂದ ಉಪದೇಶಿಸಿದನು ॥೧೧॥

ಆಮೇಲೆ ಆ ಮಂತ್ರಜಪನಿಯಮವನ್ನೂ, ತನ್ನ ಸ್ವರೂಪವನ್ನೂ, ತನಗಳನ್ನೂ ಕೂಡ, ಆ ರಾಮಚಂದ್ರನು ಹನುಮಂತನಿಗುಪದೇಶಿಸಿ ಹೀಗೆ ಹೇಳಿ

ಅಯ್ಯಾ! ಆಂಜನೇಯನೆ! ಈ ಸರ್ವೋತ್ತಮವಾದ ಮಂತ್ರದ ದಲ್ಲಿ ಬ್ರಹ್ಮನು ಸೃಷ್ಟಿಕರ್ತೃವಾದನು, ಈ ಮತ್ತೋಪದೇಶದ ಮಹಿಮೆಯಲ್ಲಿ ಜನರಿಗೆ ಮೋಕ್ಷಪ್ರದನಾಗಿರುವನು ॥೧೩॥

ವಸಿಷ್ಠ ಕೌಶಿಕಾಗಸ್ತ್ಯ ನಾರದಾದ್ಯಾಮಹರ್ಷಯಃ ।
ಮನ್ಮನ್ತ್ರಪಠನಾದೇವ ಜೀವನ್ಮುಕ್ತಾಶ್ಚರನ್ತಿ ಹಿ ॥೧೪॥

ಮನ್ಮನ್ತ್ರಂ ಕಾಮದಂ ಯೇ ತು ತ್ಯಕ್ತ್ವಾನ್ಯಂ ಸಮುಪಾಸತೇ ।
ತೇ ತು ಕಲ್ಪತರುಂ ತ್ಯಕ್ತ್ವಾ ಶುಷ್ಕಾರಣ್ಯಂ ಗತಾಧ್ರುವಮ್ ॥೧೫॥

ಮದ್ಭಕ್ತಿಸತ್ಕಾಮದುಘಿ ಸ್ಥಿತಾಯಾಂ ಹನುಮರ್ ನರಃ ।
ತಾಂ ಹಿತ್ವಾ ಕಾಮದಾಂ ಮೋಹಾತ್ ಕೋ ದುಹ್ಯಾತ್ ಸೂಕರೀಂ ಭುವಿ॥

ಮದ್ಭಕ್ತಿಂ ಸಂಪರಿತ್ಯಜ್ಯ ಯೋನ್ಯತ್ ಸಾಧನಮಿಚ್ಛತಿ ।
ತ್ಯಕ್ತ್ವಾ ಗಙ್ಗಾಂ ಸಮಾಪಸ್ಥಾಂ ಮರೀಚ್ಯಮ್ಬುಃ ಸ ಧಾವತಿ ॥೧೭॥

ಮದ್ಭಕ್ತ್ಯಾ ಮುನಯೋ ದೇವಾಃ ಗನ್ಧರ್ವಾಶ್ಚಾಸುರಾಃ ಸುರಾಃ ।
ಸ್ತ್ರಿಯೋ ವೇಶ್ಯಾಶ್ಚ ಯೇ ಪಾಪಾಃ ತೇಪಿ ಮೇ ಪ್ರಯಯುಃ ಪದಮ್ ॥

ನೀಚಕೃತ್ಯಾಜ್ಞಾತಿಹೀನಾಃ ಯೇ ಚಾನ್ಯೇ ಧರ್ಮದೂಷಕಾಃ ।
ಮದ್ಭಕ್ತಿಂ ಸಮುಪಾಶ್ರಿತ್ಯ ತೇಪಿ ಮುಕ್ತಾನ ಸಂಶಯಃ ॥೧೯॥

ವಸಿಷ್ಠ ವಿಶ್ವಾಮಿತ್ರ ಅಗಸ್ತ್ಯ ನಾರದ ಮುಂತಾದ ಮಹರ್ಷಿಗಳೂ ಕೂಡ, ನನ್ನ ಮಂತ್ರದ ಉಪಾಸನದಿಂದಲೇ ಈ ಲೋಕದಲ್ಲಿ ಜೀವನ್ಮುಕ್ತರಾಗಿ ಸಂಚರಿಸುತಿರುವರು ॥೧೪॥

ಸಮಸ್ತವಾದ ಇಷ್ಟಾರ್ಥಗಳನ್ನೂ ಕೊಡತಕ್ಕುದಾಗಿರುವ ನನ್ನ ಮಂತ್ರವನ್ನು ಬಿಟ್ಟು ಬಿಟ್ಟು ಇತರ ಮಂತ್ರವನ್ನು ಯಾರು ಉಪಾಸನೆಮಾಡುವರೋ, ಅವರು ಕಲ್ಪವೃಕ್ಷವನ್ನು ಬಿಟ್ಟುಬಿಟ್ಟು ಶುಷ್ಕವಾದ ಅರಣ್ಯಕ್ಕೆ ಹೋಗತಕ್ಕವರು, ಇದು ನಿಶ್ಚಯವು ॥೧೫॥

ಎಲೈ ಹನುಮಂತನೇ ! ನನ್ನ ಭಕ್ತಿಯೆಂಬ ದಿವ್ಯವಾದ ಕಾಮಧೇನುವಿರುತಿರಲಾಗಿ, ಸಕಲವಿಧಕಾಮಗಳನ್ನೂ ಕೊಡತಕ್ಕುದಾಗಿರುವ ಅದನ್ನು ಬಿಟ್ಟುಬಿಟ್ಟು ಲೋಕದಲ್ಲಿ ಯಾವನು [illegible] ಅಜ್ಞಾನದಿಂದ ಹೆಣ್ಣುಹಂದಿಯನ್ನು ಹಾಲುಕರೆಯುವನು ? ॥೧೬॥

ಯಾವನು ನನ್ನ ಭಕ್ತಿಯನ್ನು ಬಿಟ್ಟುಬಿಟ್ಟು ಸಾಧನಾಂತರವನ್ನಪೇಕ್ಷಿಸುವನೋ, ಅವನು [illegible]ದಲ್ಲಿರುವ ಗಂಗಾನದಿಯನ್ನು ಬಿಟ್ಟುಬಿಟ್ಟು ಮೃಗತೃಷ್ಣಿಕಾಜಲವನ್ನು ಹುಡುಕಿಕೊಂಡು [illegible] ॥೧೭॥

ಯಾವ ದೇವತೆಗಳೂ, ಗಂಧರ್ವರೂ, ಅಸುರರೂ, ಸುರರೂ, ವೇಶ್ಯಾಂಗನೆ ಮೊದಲಿಸ್ಮರಿರುವರೋ ಅವರೂ ಕೂಡ, ನನ್ನ ಭಕ್ತಿಯಿಂದ ನನ್ನ ಪದವನ್ನು

[illegible]ಜಾತಿಗೆಟ್ಟವರು, ಇನ್ನೂ ಧರ್ಮದೂಷಕರಾದವರು ಯಾರುಂಟೋ-[illegible]ವರು, ಆಶ್ರಯಿಸಿ ಮುಕ್ತರಾಗುವರು ; ಇದರಲ್ಲಿ ಸಂಶಯವಿಲ್ಲ ॥

ಬಹವಃ ಸನ್ತಿ ಮದ್ಭಕ್ತಾಃ ಕಪೇ ವಕ್ಷ್ಯಾಮಿ ತಾಂಶ್ಚಣು ।
ಭರದ್ವಾಜೋ ವಸಿಷ್ಠಶ್ಚ ವಿಶ್ವಾಮಿತ್ರಶ್ಚ ಗೌತಮಃ ॥೦೦॥
ಚತುರ್ಮುಖಃ ಶಙ್ಕರಶ್ಚ ವ್ಯಾಸೋ ನಾರದಏವ ಚ ।
ವಾಲ್ಮೀಕಿಶ್ಚ ಸುತೀಕ್ಷ್ಣಶ್ಚ ವಿಶಾಲೋ ಗುಹಏವ ಚ ॥೦೧॥
ಜಾಂಬವಾಂಸ್ತ್ವಂ ಚ ಸುಗ್ರೀವೋ ಜಟಾಯುರ್ಮೇನುಜಾಸ್ತ್ರಯಃ ।
ಬಲಿರ್ವಿಭೀಷಣಃ ಪಾರ್ಥಃ ಶಬರೀ ಜಾನಕೀ ತಥಾ ॥೦೨॥
ಸರ್ವೇ ಕೋಸಲದೇಶಸ್ಥಾಃ ಗಾವೋ ಗೋಪ್ಯಶ್ಚ ವಾನರಾಃ ।
ಬಹವೋ ಮಾನವಾಃ ಸನ್ತಿ ಮದ್ಭಕ್ತಾಭೀಷ್ಮಕಾದಯಃ ॥೦೩॥
ಯಥಾ ಧೇನುಂ ವಿನಾ ಹವ್ಯಂ ನ ದಿವಾ ಸೂರ್ಯಮನ್ತರಾ ।
ಮದ್ಭಕ್ತಿಮನ್ತರಾ ತದ್ವತ್ ಜ್ಞಾನಂ ನಾಸ್ತಿ ಮಹಾಕಪೇ ॥೦೪॥
ಯದಾ ತು ಪೃಥಿವೀಮೇತಾಂ ಕಟವೆದ್ವೇಷ್ಟಯೇನ್ನರಃ ।
ತದಾ ವಿನೈವ ಮದ್ಭಕ್ತಿಂ ಬನ್ಧಾನ್ಮುಕ್ತೋ ಭವಿಷ್ಯತಿ ॥೦೫॥
ಪಾಮರಾಮಾಂ ನ ಜಾನನ್ತಿ ಸರ್ವಜ್ಞಂ ಜಗದೀಶ್ವರಮ್ ।
ತಾಮಸಂ ಭಾವಮಾಪನ್ನಾಃ ಮನ್ಮಾಯಾಮೋಹಿತಾಭೃಶಮ್ ॥೦೬॥

ಎಲೈ ಹನುಮಂತನ! ಇನ್ನೂ ನನ್ನ ಭಕ್ತರಾದವರನೇಕರಿರುವರು ಅವರನ್ನು ಹೇಳುವೆನು ಕೇಳು ಭರದ್ವಾಜ ವಸಿಷ್ಠ ವಿಶ್ವಾಮಿತ್ರ ಗೌತಮ ಬ್ರಹ್ಮ ಶಂಕರ ವ್ಯಾಸ ನಾರದ ವಾಲ್ಮೀಕಿ ಸುತೀಕ್ಷ್ಣ ವಿಶಾಲ ಗುಹ ಜಾಂಬವಂತ ನೀನು (ಹನುಮಂತ) ಸುಗ್ರೀವ ಜಟಾಯು ನನ್ನ ತಮ್ಮಂದಿರು ಮೂರುಮಂದಿ (ಲಕ್ಷ್ಮಣ ಭರತ ಶತ್ರುಘ್ನರು) ಬಲಿ ವಿಭೀಷಣ ಅರ್ಜುನ ಶಬರಿ ಸೀತೆ ಇವರುಗಳೂ, ಇನ್ನೂ ನಮ್ಮ ಕೋಸಲದೇಶದಲ್ಲಿರುವ ಸಮಸ್ತ ಜನರೂ, ಸಮಸ್ತ ಗೋವುಗಳೂ, ಸಮಸ್ತ ಗೋಪಾಲಕರೂ, ಸಮಸ್ತ ವಾನರರೂ ಕೂಡ ನನ್ನ ಭಕ್ತರು ಇದಲ್ಲದೆ ಭೀಷ್ಮಕ ಮೊದಲಾದ ಅನೇಕ ಮನುಷ್ಯರು ನನ್ನ ಭಕ್ತರಾಗಿರುವರು ॥೨೦–೨೩॥

ಎಲೈ ವಾನರೋತ್ತಮನೆ! ಗೋವಿಲ್ಲದಿದ್ದರೆ ಹವಿಸ್ಸು ಹೇಗೆ ನಿಷ್ಪನ್ನವಾಗುವು ಸೂರ್ಯನಿಲ್ಲದಿದ್ದರೆ ಹಗಲು ಹೇಗೆ ಸಂಭವಿಸುವುದಿಲ್ಲವೋ, ಹಾಗೆ ನನ್ನ ಭಕ್ತಿ ಜ್ಞಾನವು ಲಭಿಸುವುದಿಲ್ಲ ॥೨೪॥

ಯಾವಾಗ ಮನುಷ್ಯನು ಈ ಭೂಮಿಯನ್ನು ಚಾಪೆಯಂತೆ ಸುತ್ತಿ
ವನೋ, ಆಗ ನನ್ನ ಭಕ್ತಿಯಿಲ್ಲದೆಯೇ ಸಂಸಾರಬಂಧದಿಂದ ಮುಕ್ತನಾಗ

ಯಾರು ನನ್ನ ಮಾಯೆಯಿಂದ ಮೋಹಿತರಾಗಿ ಕೇವಲ
ವರೋ, ಅವರು ನನ್ನನ್ನು ಸರ್ವಜ್ಞನೆಂದೂ ಜಗದೀಶ್ವರನಂದೂ ತಿ

ದುರತ್ಯಯೇಯಂ ಮನ್ಮಾಯಾ ಯಾಗಯೋಗಾದಿಸಾಧನೈಃ ।
ಮದೇಕಶರಣೋ ಭೂತ್ವಾ ಸಂತರಿಷ್ಯತಿ ತಾಂ ಸುಖಮ್ ॥೨೬॥
ಪತ್ರಪುಷ್ಪಫಲಸ್ವಚ್ಛ ಜಲಾದ್ಯರ್ಪಣಮಾತ್ರತಃ ।
ಸರ್ವದಾತರಿ ಮಯ್ಯೇಷ ಹಿತ್ವಾನ್ಯಂ ನ ಭಜೇತ್ ಸುಧೀಃ ॥೨೭॥
ಆಯಾಸಸಾಧ್ಯಕರ್ಮೈಕನಿಷ್ಠಾನಾಂ ತು ಕುಮಾರ್ಗಿಣಾಮ್ ।
ನ ಮದ್ಭಕ್ತಿಃ ಪ್ರಿಯಾ ಯದ್ವತ್ ಜೀವಾತುರ್ಮರ್ತುಮಿಚ್ಛತಾಮ್ ॥೨೮॥
ತಸ್ಮಾತ್ ತ್ವಂ ತ್ಯಜ ಧರ್ಮಂ ಚ ತ್ಯಕ್ತ್ವಾ ಸತ್ಯಂ ಶ್ರುತಿಸ್ಮೃತೀ ।
ಪ್ರವೃತ್ತಿಂ ಚ ನಿವೃತ್ತಿಂ ಚ ಮದೇಕಶರಣೋ ಭವ ॥೨೯॥
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಭಜ ಮಾರುತೇ ।
ಸರ್ವಪಾಪೇಭ್ಯೋಮೋಕ್ಷ್ಯ ತ್ವಾಂ ಉದ್ಧರಿಷ್ಯಾಮಿ ಸಂಸೃತೇಃ ॥೩೦॥
ಹನೂಮನ್ ಮಯಿ ಪಶ್ಯೇದಂ ಸರ್ವಸ್ಮಿನ್ನಪಿ ಮಾಂ ಕಪೇ ।
ಸರ್ವೋಽಹಂ ಸರ್ವಕರ್ತಾಽಹಂ ಸರ್ವಕಾರಣಕಾರಣಮ್ ॥೩೧॥

ಈ ನನ್ನ ಮಾಯೆಯು, ಯಜ್ಞ ಯೋಗ ಮುಂತಾದ ಸಾಧನಗಳಿಂದ ದುರ್ಜಯವಾದುದು ಯಾವನು ಅನನ್ಯಶರಣನಾಗಿ ನನ್ನನ್ನೇ ಮರೆಹೊಗುವನೋ, ಅವನು ಇದನ್ನು ಸುಖವಾಗಿ ಗೆಲ್ಲುವನು ॥೨೬॥

ವತ್ಸ ! ಪತ್ರ, ಪುಷ್ಪ, ಫಲ, ಕೊನೆಗೆ ಸ್ವಲ್ಪ ನಿರ್ಮಲವಾದ ಜಲ,—ಇದಾವುದನ್ನು ಭಕ್ತಿಯಿಂದ ಸಮರ್ಪಿಸಿದರೂ–ಅಷ್ಟುಮಾತ್ರದಿಂದಲೇ ತೃಪ್ತನಾಗಿ–ಸಕಲವಾದ ಇಷ್ಟಾರ್ಥಗಳನ್ನೂ ಕೊಡತಕ್ಕವನಾಗಿರುವ ನಾನು ಸಿದ್ಧನಾಗಿರುವಾಗ, ವಿವೇಕಶಾಲಿಯಾದವನು ನನ್ನನ್ನು ಬಿಟ್ಟು ಮತ್ತಾರನ್ನೂ ಭಜಿಸಲಾರನು ॥೨೭॥

ಕೇವಲ ಶ್ರಮಸಾಧ್ಯವಾದ ಕರ್ಮವೊಂದರಲ್ಲಿಯೇ ನಿಷ್ಠಿತರಾಗಿರುವ ದುರ್ಮಾರ್ಗಗಾಮಿಗಳಿಗಾದರೋ , ಮುಮೂರ್ಷಾವಸ್ಥೆಯಲ್ಲಿರತಕ್ಕವರಿಗೆ ಯಾವ ಔಷಧವೂ ಬೇಕಾಗದಿರುವಂತೆ, ಭಕ್ತಿಯು ಪ್ರಿಯವಾಗಿ ಕಾಣುವುದಿಲ್ಲ ॥೨೮॥

ಆದುದರಿಂದ, ನೀನು ಧರ್ಮಾಧರ್ಮಗಳೆರಡನ್ನೂ ಬಿಡು , ಶ್ರುತಿಸ್ಮೃತಿಗಳನ್ನೂ ಪ್ರವೃತ್ತಿನಿವೃತ್ತಿಗಳನ್ನೂ ಬಿಟ್ಟು ನನ್ನನ್ನೇ ಮರೆಹೊಕ್ಕವನಾಗಿರು ॥೨೯॥

ಮಾರುತಿಯೆ ! ನೀನು ಸಕಲಧರ್ಮಗಳನ್ನೂ ಬಿಟ್ಟುಬಿಟ್ಟು, ನನ್ನನ್ನೊಬ್ಬನನ್ನೇ ಭಜಿಸು ನಿನ್ನನ್ನು ಸಕಲಪಾಪಗಳಿಂದಲೂ ಬಿಡುಗಡೆಮಾಡಿ, ಸಂಸಾರದದೆಸೆಯಿಂದ ॥೩೦॥

ಹನುಮಂತನೆ ! ನನ್ನಲ್ಲಿ ಈ ಸಮಸ್ತ ಜಗತ್ತೂ ಇರುವುದೆಂದೂ, ಈ ಇರುವೆನೆಂದೂ ನೋಡುವನಾಗು. ನಾನೇ ಸರ್ವ ಸ್ವರೂಪನು, ನಾನೇ ಸರ್ವಕಾರಣಕ್ಕೂ ಕಾರಣಭೂತನಾದವನೂ ನಾನೇಯೆ ॥೩೧॥

ಕಾಲತ್ರಯೇಪಿ ಯದ್ಯಸ್ಮಾತ್ ನ ತನ್ಮತ್ತೋತಿರಿಚ್ಯತೇ ।
ತಸ್ಮಾತ್ ತ್ವಂ ಸರ್ವಭಾವೇನ ಭಜ ಮಾಂ ಭಕ್ತಿಯೋಗತಃ ॥೩೩॥

ಹನುಮಾನುವಾಚ.

ತ್ವಂ ಕೇಷುಕೇಷು ಶ್ರೀರಾಮ ಕಥಂ ವಾ ವರ್ತಸೇ ಹರೇ ।
ತ್ವದ್ಭಕ್ತೈರ್ವಾ ಕಥಂ ಚಿನ್ತ್ಯಃ ತದ್ಬ್ರೂಹಿ ಜಗತಾಂ ಪತೇ ॥೩೪॥

ಶ್ರೀರಾಮಉವಾಚ

ಯಥಾ ಭೂಪರಮಾಣೂನಾಂ ವೃಷ್ಟೇರ್ವಾ ಪೃಷತಾಂ ಕಪೇ ।
ಗಣನಾ ನಾಸ್ತಿ ತದ್ವನ್ಮೇ ಸಂಖ್ಯಾತೀತಾವಿಭೂತಯಃ ॥೩೫॥
ತಥಾಪಿ ಭಾವನಾಸಿದ್ಧ್ಯರ್ಥಂ ಕಾಶ್ಚಿದ್ವಕ್ಷ್ಯೇತ್ರ ತಾಃ ಶೃಣು ।
ಯಾಃ ಶ್ರುತ್ವಾ ಶ್ರದ್ಧಯಾ ಮರ್ತ್ಯೋ ಭಾವನಾಫಲಮೇವ್ಯತಿ ॥೩೬॥
ಅತ್ಮಾಹಂ ಸರ್ವಭೂತಾನಾಂ ಅಸ್ಯ ಸೃಷ್ಟಿರ್ಲಯಃ ಸ್ಥಿತಿಃ ।
ಪ್ರೀತಿಃ ಸುಖಂ ಚ ದುಃಖಂ ಚ ತಪಃ ಕೀರ್ತಿರ್ಭಯಾಭಯೇ ।
ಸದಾ ಭವನ್ತಿ ಕೀಶೇಶ ಮಯಾನ್ತರ್ಯಾಮಿಣೇರಿತಾಃ ॥೩೭॥

ಭೂತ ಭವಿಷ್ಯತ್ ವರ್ತಮಾನರೂಪವಾದ ಕಾಲತ್ರಯದಲ್ಲಿಯೂ, ಯಾವ ವಸ್ತು ಕಾರ್ಯ ರೂಪವಾಗಿ ಗೋಚರವಾಗುವುದೋ, ಯಾವುದು ಕಾರಣರೂಪವಾಗಿ ಗೋಚರವಾಗುವುದೋ, ಅದೆಲ್ಲವೂ ನನಗಿಂತ ವ್ಯತಿರಿಕ್ತವಾದುದಲ್ಲ ಅದುಕಾರಣ, ನೀನು ನನ್ನಲ್ಲಿ ಭಕ್ತಿಯಿಟ್ಟು ಸರ್ವ ಭಾವದಿಂದಲೂ ನನ್ನನ್ನು ಭಜಿಸುವನಾಗು (ಎಂದು ಶ್ರೀರಾಮನು ಅಪ್ಪಣೆಕೊಟ್ಟನು) ॥೩೩॥

ಈಗ ಹನುಮಂತನು ಪ್ರಾರ್ಥಿಸುವನು —

ಸ್ವಾಮಿ! ಶ್ರೀರಾಮಚಂದ್ರ! ನೀನು ಯಾವಯಾವ ವಸ್ತುವಿನಲ್ಲಿ ಹೇಗೆಹೇಗ ಇರುತ್ತೀಯ? ಎಲೈ ಶ್ರೀಹರಿಯ! ನಿನ್ನ ಭಕ್ತರು ನಿನ್ನನ್ನು ಹೇಗ ಧ್ಯಾನಿಸಬೇಕು? ಹೇ ಜಗನ್ನಾಯಕ! ಇದನ್ನು ನನಗೆ ಅಪ್ಪಣೆಕೊಡಿಸಬೇಕು ॥೩೪॥

ಶ್ರೀರಾಮಚಂದ್ರನು ಅಪ್ಪಣೆಕೊಡುವನು —

ಎಲೈ ಕಪಿನಾಯಕನೇ! ಭೂಮಿಯಲ್ಲಿರುವ ಪರಮಾಣುಗಳನ್ನು ಹೇಗೆ ಗಣಿಸುವುದಕ್ಕಾಗಲಾರದೋ, ಮಳೆಸುರಿಯುವಾಗ ಅದರ ಹನಿಗಳನ್ನು ಹೇಗೆ ಎಣಿಸುವುದಕ್ಕಾಗಲಾರದೋ ಹಾಗೆ ನನ್ನ ವಿಭೂತಿಗಳನ್ನು ಗಣಿಸುವುದಸಾಧ್ಯವಾಗಿರುವುದು ॥೩೫॥

ಆದರೂ ಕೂಡ, ಭಾವನೆ ಸಿದ್ದಿಸುವುದಕ್ಕಾಗಿ ಇಲ್ಲಿ ಕೆಲವನ್ನು ಹೇಳುವೆ ಕೇಳುವನಾಗು ಇದನ್ನು ಶ್ರದ್ಧೆಯಿಂದ ಕೇಳಿದರೆ, ಮನುಜನು ಭಾವನೆಯ ಫವನು ॥೩೬॥

ಎಲೈ ಕಪಿಶ್ರೇಷ್ಠನೆ! ನಾನು ಸರ್ವಭೂತಗಳಿಗೂ ಆತ್ಮನು, ಸೃ
ಲಯ ಪ್ರೀತಿ ಸುಖ ದುಃಖ ತಪಸ್ಸು ಕೀರ್ತಿ ಭಯ ಅಭಯ–ಇವುಗಳೆ
ಯಾದ ನನ್ನ ಪ್ರೇರಣೆಯಿಂದಲೇ ಸಂಭವಿಸುವುವು ॥೩೭॥

ವ್ಯಾಪಕಾನಾಮಹಂ ವಿಷ್ಣುಃ ಭವಃ ಸಂಹಾರಕಾರಿಣಾಮ್ ।
ಸ್ರಷ್ಟೃಣಾಮಸ್ಮ್ಯಹಂ ವೇಧಾಃ ಪೋಷಕಾಣಾಮಹಂ ಪ್ರಸೂಃ ॥೩೪॥
ವಿದ್ಯಾವತಾಮಹಂ ವಿದ್ಯಾ ಯೋಗಿನಾಂ ಯೋಗರೂಪಧೃತ್ ।
ಚಞ್ಚಲಾನಾಂ ಮನಶ್ಚಾಸ್ಮಿ ಜಯಾನಾಂ ಚ ಮನೋಜಯಃ ॥೩೫॥
ಶತ್ರೂಣಾಮಸ್ಮ್ಯಹಂ ಕಾಮೋ ಜ್ಞಾನಾನಾಮಾತ್ಮವೇದನಮ್ ।
ನೈಪುಣ್ಯಾನಾಂ ವಿವೇಕೋಸ್ಮಿ ಹ್ಯಾತ್ಮಾನಾತ್ಮಪರಾತ್ಮನಾಮ್ ॥೩೦॥
ಆವೃತೀನಾಮಹಂ ಮೋಹೋ ಮದ್ಭಕ್ತಾನಾಂ ಚ ಶಙ್ಕರಃ ।
ಲಕ್ಷ್ಮಣೋ ಭರತಶ್ಚಾಹಂ ವಸಿಷ್ಠೋ ಜಪತಾಮಹಮ್ ॥೩೧॥
ಕೂರ್ಮೋಹಂ ಭೂರವಾಹಾನಾಂ ಮಹಾಶೇಷೋಪಿ ಮಾರುತೇ ।
ಪ್ರಕಾಶಾನಾಮಹಂ ಜ್ಞಾನಂ ಬನ್ಧೂನಾಮಸ್ಮ್ಯಹಂ ಗುರುಃ ॥೩೨॥
ಶಕ್ತಿಃ ಶಕ್ತಿಮತಾಂ ಚಾಹಂ ವಿನಯೋಸ್ಮಿ ಸತಾಮಹಮ್ ।
ಅಹಂ ಪಿತಾಸ್ಯ ಜಗತೋ ಮಾತಾ ಧಾತಾ ಪಿತಾಮಹಃ ॥೩೩॥
ವಿದ್ಯಾನಾಮಸ್ಮ್ಯಹಂ ವಿದ್ಯಾ ಭಕ್ತಿರ್ಮದ್ಭಕ್ತಿಕಾರಿಣಾಮ್ ।
ಮಹತಾಂ ಚ ಮಹಾನಸ್ಮಿ ತ್ರಿಗುಣಾಃ ಪ್ರಕೃತೇರಹಮ್ ॥೩೪॥

ವ್ಯಾಪಕವಾದ ಪದಾರ್ಥಗಳಲ್ಲಿ ನಾನು ವಿಷ್ಣುವು, ಸಂಹಾರಕಾರಿಗಳ ಮಧ್ಯದಲ್ಲಿ ನಾನು ರುದ್ರನು, ಸೃಷ್ಟಿಕರ್ತರ ಮಧ್ಯದಲ್ಲಿ ನಾನು ಚತುರ್ಮುಖನು, ಪೋಷಕರಲ್ಲೆಲ್ಲ ನಾನು ಮಾತೃ ಸ್ವರೂಪನು ॥೩೨॥

ವಿದ್ಯಾವಂತರಲ್ಲಿ ನಾನು ವಿದ್ಯಾರೂಪನಾಗಿರುವೆನು, ಯೋಗಿಗಳೊಳಗ ನಾನು ಯೋಗ ರೂಪದಲ್ಲಿರುವನು, ಚಂಚಲವಾದ ಪದಾರ್ಥಗಳ ಮಧ್ಯದಲ್ಲಿ ನಾನು ಮನಸ್ಸಾಗಿರುವನು, ಜಯ ಗಳ ಮಧ್ಯದಲ್ಲಿ ನಾನು ಮನೋಜಯವಾಗಿರುವೆನು ॥೩೪॥

ಶತ್ರುಗಳಲ್ಲೆಲ್ಲ ನಾನು ಕಾಮವು, ಜ್ಞಾನಗಳಲ್ಲಿ ನಾನು ಆತ್ಮಜ್ಞಾನವು, ನೈಪುಣ್ಯ ಗಳಲ್ಲಿ ನಾನು ಆತ್ಮ ಅನಾತ್ಮ ಪರಮಾತ್ಮರ ವಿವೇಕವು ॥೩೦॥

ಆವರಣಗಳಲ್ಲೆಲ್ಲ ನಾನು ಮೋಹಾವರಣವು, ನನ್ನ ಭಕ್ತರ ಮಧ್ಯದಲ್ಲಿ ನಾನು ಶಂಕರನು, ಸಾಧಕರ ಮಧ್ಯದಲ್ಲಿ ನಾನು ಲಕ್ಷ್ಮಣನೂ ಭರತನೂ ವಸಿಷ್ಠನೂ ಆಗಿರುವೆನು ॥ ಜಪವಾಹಿಗಳಲ್ಲಿ ನಾನು ಕೂರ್ಮನೂ ಆದಿಶೇಷನೂ ಆಗಿರುವನು, ಪ್ರಕಾಶಗಳ ಮಧ್ಯ ಜ್ಞಾನವಾಗಿಯೂ, ಬಂಧುಗಳ ಮಧ್ಯದಲ್ಲಿ ನಾನು ಗುರುವಾಗಿಯೂ ಇರುವೆನು ॥ ತಿರುವ ಶಕ್ತಿಯೂ ನಾನೇ, ಸತ್ಪುರುಷರಲ್ಲಿರುವ ವಿನಯವೂ ನಾನೇ, ಈ ಜಗತ್ತಿಗೆಯೂ ಪಿತಾಮಹನೂ ಸೃಷ್ಟಿಕರ್ತನೂ ನಾನೆಯೇ ॥೩೩॥

ನಾನು ಮಹಾವಿದ್ಯೆಯು, ಭಕ್ತಿಮಾಡುವವರಲ್ಲೆಲ್ಲ ನಾನು ಭಕ್ತಿ ಗೆಲ್ಲ ನಾನು ಮಹತ್ತರನು, ಪ್ರಕೃತಿಯಲ್ಲಿರುವ ಗುಣತ್ರಯವೂ

ಕ್ಷೇತ್ರಜ್ಞಾನಾಮಹಂ ಜೀವಃ ಸಂನ್ಯಾಸಃ ಸರ್ವಕರ್ಮಣಾಮ್ ।
ರಾಮೋಽಹಂ ಬನ್ಧಹನ್ತೄಣಾಂ ನೃಣಾಂ ದಾಶರಥಿಃ ಕಪೇ ॥೪೫॥
ದುರ್ವಿಜ್ಞೇಯಗತೀನಾಂ ತು ಕಾಲೋಽಹಂ ಸರ್ವಸಙ್ಗ್ರಹಃ ।
ಸುಖಾನಾಮಸ್ಮಿ ವೈರಾಗ್ಯಂ ತತ್ತ್ವಂ ವೇದಾನ್ತಿನಾಮಹಮ್ ॥೪೬॥
ತ್ರಿವಿಕ್ರಮಃ ಪಾದವತಾಂ ವಾಮನೋಽಸ್ಮಿ ಶಿವಾತ್ಮಜ ।
ಕವೀನಾಮಸ್ಮಿ ವಾಲ್ಮೀಕಿಃ ತ್ವಂ ಭಕ್ತಾನಾಮಹಂ ಕಪೇ ॥೪೭॥
ಆಶ್ರಯಾಣಾಮಹಂ ಮೇರುಃ ತರೂಣಾಂ ಕಲ್ಪಪಾದಪಃ ।
ನಿವೃತ್ತಿಕರ್ಮಾಹಮಸ್ಮಿ ಯನ್ಮದರ್ಪಣಕಾರಿತಮ್ ॥೪೮॥
ಯತ್ರಯತ್ರ ಬಲಂ ಧೈರ್ಯಂ ತಪಸ್ತೇಜೋ ದಯಾ ರತಿಃ ।
ನೀತಿಃ ಪ್ರಜ್ಞಾ ಶ್ರುತಿಃ ಶೌಚಂ ಸನ್ತೋಷಸ್ತುಷ್ಟಿರಾರ್ಜವಮ್ ।
ಇತ್ಯಾದಿಗುಣಯುಕ್ತಂ ಯತ್ ತತ್ತದ್ವಿದ್ಧಿ ಮಮಾಂಶಜಮ್ ॥೪೯॥
ಏವಂ ಮದ್ಭಾವನಾಸಿದ್ಧ್ಯೈ ಕಪೇ ಪ್ರೋಕ್ತಾ ವಿಭೂತಯಃ ।
ಇತಃ ಪರಂ ಪ್ರವಕ್ಷ್ಯಾಮಿ ಭಕ್ತಿಸಾಧನಮುತ್ತಮಮ್ ॥೫೦॥

ಇತಿ ಶ್ರೀಮತ್ಸುನ್ದರಕಾಣ್ಡೇ ಶ್ರೀರಾಮವಿಭೂತಿಕಥನಂ ನಾಮ
ಏಕಾದಶಃ ಸರ್ಗಃ

ಎಲೈ ವಾನರೋತ್ತಮನೆ ! ಕ್ಷೇತ್ರಜ್ಞರಲ್ಲೆಲ್ಲ ನಾನು ಜೀವನು, ಸರ್ವ ಕರ್ಮಗಳಿಗೂ ನಾನು ಸಂನ್ಯಾಸರೂಪನು, ಬಂಧನಿವಾರಕರಲ್ಲೆಲ್ಲ ನಾನು ಶ್ರೀರಾಮನು, ಮನುಷ್ಯರಲ್ಲೆಲ್ಲ ನಾನು ದಶರಥಪುತ್ರನು ॥೪೫॥

ಅಜ್ಞೇಯ(ತಿಳಿಯಲಸಾಧ್ಯ)ವಾದ ಗತಿಯುಳ್ಳವುಗಳಲ್ಲಿ ನಾನು ಕಾಲವು, ಸುಖಗಳೊಳಗೆ ನಾನು ವೈರಾಗ್ಯವು, ವೇದಾಂತಿಗಳೆಲ್ಲ ನಾನೇ ತತ್ವಸ್ವರೂಪನು ॥೪೬॥

ಎಲೈ ಶಿವಪುತ್ರನಾದ ಹನುಮಂತನ ! ಪಾದಯುಕ್ತ(ಕಾಲುಳ್ಳವರು)ರಲ್ಲೆಲ್ಲ ನಾನು ತ್ರಿವಿಕ್ರಮಾವತಾರಮಾಡಿದ ವಾಮನಮೂರ್ತಿಯು, ಕವಿಗಳೊಳಗ ನಾನು ವಾಲ್ಮೀಕಿಯು, ನಾನು ಭಕ್ತರಲ್ಲೆಲ್ಲ ನೀನಾಗಿರುವನು ॥೪೭॥

ಆಶ್ರಯಗಳೆಲ್ಲೆಲ್ಲ ನಾನು ಮಹಾಮೇರುವು, ವೃಕ್ಷಗಳೊಳಗೆ ನಾನು ಕಲ್ಪವೃಕ್ಷವು ಭಗವದರ್ಪಣಬುದ್ಧಿಯಿಂದ ಮಾಡಲ್ಪಡುವ ನಿವೃತ್ತಿಕರ್ಮವೂ ನಾನಯೇ ॥೪೮॥

ಯಾವಯಾವ ಕಡೆಯಲ್ಲಿ ಬಲ ಧೈರ್ಯ ತಪಸ್ಸು ತೇಜಸ್ಸು ದಯ ಆಹ್ಲಾದ ನೀ
ಶ್ರುತಿ ಶೌಚ ಸಂತೋಷ ಆರ್ಜವ-ಇತ್ಯಾದಿ ಗುಣಯುಕ್ತವಾದ ಯಾವಯಾವ ವಸ್ತುವ
ಅದೆಲ್ಲವೂ ನನ್ನ ಅಂಶದಿಂದ ಹುಟ್ಟಿದುದೆಂದು ತಿಳಿಯುವನಾಗು ॥೪೯॥

ಎಲೈ ಕಪಿನಾಯಕನೆ ! ಹೀಗೆ ನನ್ನ ಭಾವನೆ ಸಿದ್ಧಿಸುವುದಕ್ಕಾಗಿ ನನ
ಹೇಳಿರುವೆನು, ಇನ್ನು ಮುಂದೆ ಉತ್ತಮವಾದ ಭಕ್ತಿಸಾಧನವನ್ನು ನಿನಗೆ

ಇದು ಸುಂದರಕಾಂಡದಲ್ಲಿ ಶ್ರೀರಾಮ ವಿಭೂತಿಕಥನವೆ
ಹನ್ನೊಂದನಯ ಸರ್ಗವು

ಅಥ ಶ್ರೀಮತ್ಸುನ್ದರಕಾಣ್ಡೇ ದ್ವಾದಶಃ ಸರ್ಗಃ.

ಶ್ರೀರಾಮಚನ್ದ್ರ ಉವಾಚ

ಆದೌ ಮನ್ತ್ರವರಂ ಲಬ್ಧ್ವಾ ಗುರೋಃ ಶಾಸ್ತ್ರೋಕ್ತಮಾರ್ಗತಃ ।
ತದಾದಿ ನಿಯಮೇನೈವ ಜಪಂ ಕುರ್ಯಾದತನ್ದ್ರಿತಃ ॥೧॥

ಶಾಸ್ತ್ರೋಕ್ತಾಸನಭೂಮಾಲಾದಿಬ್ಮದ್ರಾಚಾರಸಂಯುತಃ ।
ನಿಯತಾತ್ಮೇನ್ದ್ರಿಯಪ್ರಾಣೋ ನ್ಯಾಸಕೃಚ್ಛುದ್ಧಭೂತಕಃ ॥೨॥

ಸ್ವೇಶಂ ಸರ್ವಾತ್ಮಕಂ ಪಶ್ಯೇ ದನ್ಯದೇವಾವಿನಿನ್ದಕಃ ।
ಸ್ನಾನಪೂಜಾಸ್ತುತಿಧ್ಯಾನಹೋಮತರ್ಪಣತತ್ಪರಃ ॥೩॥

ಸರ್ವಾರ್ಪಕಃ ಕಾಮಹೀನೋ ನಿರ್ವೇದೋನಲಸೋತ್ವರಃ ।
ಸೂರ್ಯದೀಪಾಗ್ನೀನ್ದುಗುರುಗೋವಿಪ್ರಸ್ವೇಶ್ವರಾನ್ತಿಕಃ ॥೪॥

ಸುಂದರಕಾಂಡದಲ್ಲಿ ಹನ್ನೆರಡನೆಯ ಸರ್ಗವು

ಶ್ರೀರಾಮನು ಆಂಜನೇಯನಿಗೆ ಉಪದೇಶಮಾಡಿದ ಭಕ್ತಿಸಾಧನ ಕ್ರಮವೇನೆಂದರೆ —

ಎಲೈ ಹನುಮಂತನೆ! ನನ್ನ ಮಂತ್ರಪುರಶ್ಚರಣೆಯ ಕ್ರಮವನ್ನು ಕೇಳುವನಾಗು ನನ್ನ ಮಂತ್ರವನ್ನು ಜಪಿಸಬೇಕನ್ನುವವನು, ಪ್ರಥಮದಲ್ಲಿ ಶಾಸ್ತ್ರೋಕ್ತ ರೀತಿಯಾಗಿ ಗುರುಮುಖದಿಂದ ಮಂತ್ರವನ್ನು ಉಪದೇಶತೆಗದುಕೊಂಡು, ಆ ಕಾಲ ಮೊದಲುಗೊಂಡು ಜಾಗರೂಕನಾಗಿ ನಿಯಮದಿಂದ ಜಪಮಾಡಬೇಕು ॥೧॥

ಜಪಮಾಡುವಾಗ, ಶಾಸ್ತ್ರೋಕ್ತರೀತಿಯಲ್ಲಿ ಭೂಪ್ರಾರ್ದನೆ ಮಾಲಾಮಂತ್ರ ದಿಗ್ಬಂಧನ ಮುದ್ರೆ ಮುಂತಾದ ಆಚಾರಗಳಿಂದ ಯುಕ್ತನಾಗಿಯೂ, ಒದ್ದ ಇಂದ್ರಿಯ ಪ್ರಾಣಗಳನ್ನು ನಿಯಮದಲ್ಲಿಟ್ಟುಕೊಂಡಿರತಕ್ಕವನಾಗಿಯೂ, ಶುದ್ಧವಾದ ಪಂಚಭೂತವುಳ್ಳವನಾಗಿಯೂ ನ್ಯಾಸಮಾಡುವನಾಗಬೇಕು ॥೨॥

ಇಷ್ಟದೇವತೆಯನ್ನು ಸರ್ವಾತ್ಮಕನನ್ನಾಗಿ ನೋಡುತಲೂ, ದೇವತಾಂತರವನ್ನು ನಿಂದಿಸದೆ ಪೂಜೆ ಧ್ಯಾನ ಹೋಮ ತರ್ಪಣಗಳಲ್ಲಿ ತತ್ಪರನಾಗಿಯೂ ಇರಬೇಕು ॥೩॥

ತನ್ನನ್ನೂ ಈಶ್ವರಾರ್ಪಣಮಾಡಿ ನಿಷ್ಕಾಮನಾಗಿರಬೇಕು, ಸ್ವಲ್ಪವೂ ನಿರ್ವೇದ ಆಲಸ್ಯವನ್ನು ತೋರಿಸಬಾರದು, ಕೇವಲ ತ್ವರೆಯುಳ್ಳವನಾಗಿಯೂ ಸೂರ್ಯ ಅಗ್ನಿ ಚಂದ್ರ ಗುರು ಗೋವು ಬ್ರಾಹ್ಮಣ ಸ್ವೇಷ್ಟದೇವತೆ-ಇವುಗಳಲ್ಲಿ ಹತ್ತಿರದ್ದು ಜಪಮಾಡಬೇಕು ॥೪॥

ಶ್ರದ್ಧಾವಾ॑ ಗುರುದೇವಾದೌ ಮನ್ತ್ರಾರ್ಥಂ ಚೇನ್ತಯ॑ ಜಪೇಮ್ ।
ಕುರ್ಯಾದನ್ಯಥಾನರ್ಥೋ॑ ಮನ್ತ್ರೋ॑ ಹೀನಶ್ಚತಿ ಶ್ರುತೇಃ ॥೫॥
ಉಷ್ಣೀಷೀ ಕಞ್ಚುಕೀ ನಗ್ನೋ॑ ಮುಕ್ತಕೇಶೋ॑ ಗಳಾವೃತಃ ।
ಶಿರಸಾ ಪ್ರಾವೃತೋ॑ ಜಲ್ಪ॑ ಚೇನ್ತಾಪ್ತಃ ಕ್ರುದ್ಧಉತ್ಥಿತಃ ॥೬॥
ಕ್ಷುಧಿತೋ॑ನಾಸನೋ॑ ಗಚ್ಛ॑ ಕಟಾಸನಸಮನ್ವಿತಃ ।
ಪ್ರಸಾರಿತಾಙ್ಘ್ರಿ॑ರ್ನ॑ ಜಪೇತ್ ಕ್ಷುತಾದೌ ತಂ ತ್ಯಜೇದ್ಬುಧಃ ॥೭॥
ಋಷಿಚ್ಛನ್ದೋ॑ದೀಬೀಜಶಕ್ತಿ॑ ಕೀಲಕಾನಾಮಭಾವತಃ ।
ವಂಶನಾಶವ್ಯಾಧಿವೀರ್ಯ॑ಶಕ್ತಿ॑ರೂಪವಿನಾಶನಮ್ ॥೮॥
ನ್ಯಾಸಹೀನಜಪೋ॑ ಮೂಕಕೋ॑ನರ್ಥಃ ಕೂರ್ಮಾಸನಂ ವಿನಾ ।
ಅರ್ಥಹೀನಃ ಸ ನಿರ್ದೀವಸ್ತ್ವಧ್ಯಾನಾತ್ ಸರ್ವದುಃಖದಃ ॥೯॥
ಗುರುಮನ್ತ್ರೇಶಸನ್ತ್ಯಾಗಾತ್ ನರಕೋ॑ ವಂಶನಾಶನಮ್ ।
ಇತ್ಯಾದಿಮನ್ತ್ರನಿಯಮೈಃ ಸರ್ವೈ॑ಃ ಸಾಕಂ ಜಪೇನ್ಮನುಮ್ ॥೧೦॥

ಗುರು ದೇವ ಮುಂತಾದುವುಗಳಲ್ಲಿ ಶ್ರದ್ಧೆಯುಳ್ಳವನಾಗಿರಬೇಕು , ಜಪಮಾಡುವಾಗ ಮಂತ್ರದ ಅರ್ಥವನ್ನು ಪರ್ಯಾಲೋಚಿಸುತಿರಬೇಕು ಹಾಗಿಲ್ಲದ ಪಕ್ಷದಲ್ಲಿ, ಮಂತ್ರವು ಸ್ವರದಿಂದ ಲಾಗಲಿ ವರ್ಣದಿಂದಲಾಗಲಿ ಹೀನವಾದರೆ ಅನರ್ಥವುಂಟಾಗುವುದೆಂದು ಶ್ರುತಿವಚನವಿರುವುದರಿಂದ ಇವನಿಗೆ ಅನರ್ಥಪ್ರಾಪ್ತಿಯಾಗುವುದು ॥೫॥

ಪ್ರಾಜ್ಞನಾದವನು, ತಲೆಗೆ ವಸ್ತ್ರವನ್ನು ಸುತ್ತಿಕೊಂಡೂ, ಕಂಚುಕವನ್ನು ಧರಿಸಿಕೊಂಡೂ, ವಸ್ತ್ರವಿಲ್ಲದೆಯೂ, ಜುಟ್ಟುಗಂಟುಬಿಚ್ಚಿಕೊಂಡೂ, ಕುತ್ತಿಗೆಗೆ ಬಟ್ಟೆಯನ್ನು ಸುತ್ತಿಕೊಂಡೂ, ತಲೆಗೆ ಮುಸುಕುಹಾಕಿಕೊಂಡೂ, ಮತ್ತೊಬ್ಬರಸಂಗಡ ಹರಟೆಯಾಡುತಲೂ, ಚಿಂತಾಯುಕ್ತನಾಗಿಯೂ, ಕೋಪಾವಿಷ್ಟನಾಗಿಯೂ, ಆಸನಬಿಟ್ಟು ನಿಂತುಗೊಂಡೂ, ಹಸಿದಿರುವಾಗಲೂ, ಆಸನವಿಲ್ಲದೆಯೂ, ತಿರುಗಾಡುತಲೂ, ಚಾಪೆಯಮೇಲೆ ಕುಳಿತುಗೊಂಡೂ, ಕಾಲುನೀಡಿಕೊಂಡೂ ಜಪಮಾಡಬಾರದು ಜಪಮಧ್ಯದಲ್ಲಿ ಆಕಸ್ಮಿಕವಾಗಿ ಕ್ಷುತ (ಸೀನು) ಮುಂತಾದುವುಗಳು ಸಂಭವಿಸಿದರೆ, ಆಗ ತಟ್ಟನೆ ಜಪವನ್ನು ನಿಲ್ಲಿಸಿ ಕ್ಷುತಾದಿಗಳನ್ನು ತೀರಿಸಿಕೊಂಡು, ಮತ್ತೆ ಮುಂದಕ್ಕೆ ಜಪಮಾಡಬೇಕು ॥೬-೭

ಋಷಿ ಛಂದಸ್ಸು ಬೀಜ ಶಕ್ತಿ ಕೀಲಕ-ಇವುಗಳಿಲ್ಲದಿದ್ದರೆ, ಅಸುಕ್ರಮವಾಗಿ ವಂಶವೂ ವ್ಯಾಧಿಯೂ ವೀರ್ಯನಾಶವೂ ಶಕ್ತಿನಾಶವೂ ರೂಪನಾಶವೂ ಉಂಟಾಗುವುವು ॥೮॥

ನ್ಯಾಸವಿಲ್ಲದೆ ಜಪಮಾಡತಕ್ಕವನು ಮೂಗನಾಗುವನು , ಕೂರ್ಮಾಸನವಿಲ್ಲದಿದ್ದರೆ ಅರ್ಥವುಂಟಾಗುವುದು , ಅರ್ಥಹೀನವಾದ ಮಂತ್ರವು ನಿರ್ದೀವವೆನ್ನಿಸುವುದು , ಧ್ಯಾನವಿಲ್ಲದೆ ಜಪವು ಸರ್ವವಿಧವಾದ ದುಃಖಗಳನ್ನೂ ಕೊಡುವುದು ॥೯॥

ಗುರುವನ್ನೂ ಮಂತ್ರದೇವತೆಯನ್ನೂ ಬಿಟ್ಟು ಜಪಮಾಡಿದರೆ, ನರಕವೂ ವಂಶನಾಶವೂ ಸಂಭವಿಸುವುವು. ಆದುಕಾರಣ, ಪೂರ್ವೋಕ್ತವಾದ ಮಂತ್ರ ನಿಯಮಗಳೆಲ್ಲವೂ ಸಹಿತವಾಗಿ ಮಂತ್ರವನ್ನು ಜಪಿಸಬೇಕು ॥೧೦॥

ಲಾಞ್ಛನಂ ಚೋರ್ಧ್ವಪುಂಡ್ರಂ ಚ ಮದರ್ಚಾಪೂಜನಂ ತಥಾ ।
ಮದ್ಭಕ್ತಪೂಜನಂ ಚಾಪಿ ಗುರೌ ಭಕ್ತಿಸ್ತಥೈವ ಚ ॥೧೧॥
ದೇವಾಲಯಕೃತಿಶ್ಚೈವ ಮದ್ಭಕ್ತಾನ್ನಸ್ಯ ಭಕ್ಷಣಮ್ ।
ತುಳಸೀಭಕ್ಷಣಂ ಚೈವ ಸಾಲಗ್ರಾಮೋದಕಾಶನಮ್ ॥೧೨॥
ರಾಮಾಯಣಾದಿಶ್ರವಣಂ ತಸ್ಯ ಪೂಜನಮೇವ ಚ ।
ಅಭಕ್ಷ್ಯಾಣಾಂ ಪರಿತ್ಯಾಗೋ ವೈಷ್ಣವಾನಾಂ ಚ ಸೇವನಮ್ ॥೧೩॥
ನ ಶೂದ್ರಾಭಗವದ್ಭಕ್ತಾಃ ವಿಪ್ರಾಭಾಗವತಾಃ ಸ್ಮೃತಾಃ ।
ಸರ್ವವರ್ಣೇಷು ತೇ ಶೂದ್ರಾಃ ಯೇ ಹ್ಯಭಕ್ತಾಜನಾರ್ದನೇ ॥೧೪॥
ಅಭಕ್ಷ್ಯಾಣಿ ವದಾಮ್ಯದ್ಯ ಪಿಣ್ಯಾಕಂ ಲಶುನಂ ತಥಾ ।
ಅಲಾಬುದ್ವಿತಯಂ ಶಿಗ್ರುದ್ವಿತಯಂ ಕತಕಂ ತಥಾ ॥೧೫॥
ಕೂಶ್ಮಾಣ್ಡದ್ವಿತಯಂ ಚೈವ ವಾರ್ತಾಕಂ ಮೂಲಕಂ ತಥಾ ।
ಕನ್ದಂ ಚ ರಕ್ತಕನ್ದಂ ಚ ಬೃಹತೀಜಾತಿಮಾತ್ರಕಮ್ ॥೧೬॥
ಆಶ್ವಯುಜ್ಯಾಂ ಪಟೋಳೀ ಚ ನಿಷ್ಪಾವಃ ಕಾರ್ತಿಕೇ ತಥಾ ।
ಅಷ್ಟಮ್ಯಾಂ ನಾರಿಕೇಳಂ ಚ ಧಾತ್ರೀ ಸ್ಯಾದ್ಭಾನುವಾಸರೇ ॥೧೭॥

ಇನ್ನೂ ಈ ಮಂತ್ರ ಜಪಮಾಡತಕ್ಕವನು ಅನುಸರಿಸಬೇಕಾದ ನಿಯಮಗಳಾವುವೆಂದರೆ,–ನನ್ನ ಲಾಂಛನವನ್ನು ಧರಿಸುವುದು, ಊರ್ಧ್ವಪುಂಡ್ರಧಾರಣೆ, ನನ್ನ ವಿಗ್ರಹವನ್ನು ಪೂಜಿಸುವುದು, ನನ್ನ ಭಕ್ತರನ್ನು ಪೂಜಿಸುವುದು, ಗುರುವಿನಲ್ಲಿ ಭಕ್ತಿಯಿಡುವುದು, ನನಗೋಸ್ಕರವಾಗಿ ದೇವಸ್ಥಾನವನ್ನು ಕಟ್ಟಿಸುವುದು, ನನ್ನ ಭಕ್ತರ ಅನ್ನವನ್ನು ಭುಜಿಸುವುದು, ತುಲಸಿಯನ್ನು ಭಕ್ಷಿಸುವುದು, ಸಾಲಗ್ರಾಮತೀರ್ಥವನ್ನು ಪ್ರಾಶನಮಾಡುವುದು, ರಾಮಾಯಣ ಮುಂತಾದ ಸದ್ಗ್ರಂಥಗಳನ್ನು ಶ್ರವಣಮಾಡುವುದು, ಈ ಪುಸ್ತಕಗಳನ್ನು ಪೂಜಿಸುವುದು, ಅಭಕ್ಷ್ಯಗಳನ್ನು ವರ್ಜಿಸುವುದು, ವಿಷ್ಣುಭಕ್ತರನ್ನು ಸೇವಿಸುವುದು,–ಇವುಗಳೆಲ್ಲವೂ ನನ್ನ ಮಂತ್ರಜಪ ಮಾಡತಕ್ಕವನಿಂದ ಅನುಸರಿಸಲ್ಪಡಬೇಕಾದ ನಿಯಮಗಳು ॥೧೧–೧೩॥

ನನ್ನ ಭಕ್ತರು ಯಾವ ಜಾತಿಯವರಾಗಿದ್ದರೂ ಅವರನ್ನು ನಿರಾಕರಿಸಕೂಡದು. ಭಗವಂ
ಳ್ಳಿ ಭಕ್ತಿಯುಳ್ಳವರೆಂದಿಗೂ ಶೂದ್ರರಲ್ಲ , ಅವರು ಬ್ರಾಹ್ಮಣೋತ್ತಮರೆಂದು ಹೇಳಲ್ಪಡುವರು
ಗ ವರ್ಣದವರಾಗಲಿ–ಯಾರು ಭಗವಂತನಲ್ಲಿ ಭಕ್ತಿಯಿಡುವುದಿಲ್ಲವೋ–ಅವರೇ ಶೂದ್ರರೆಂದು
ಡಬೇಕು ॥೧೪॥

ಅಭಕ್ಷ್ಯಗಳಾವುವೆಂಬುದನ್ನು ಹೇಳುವೆನು —ಹಿಂಡಿ, ಬೆಳ್ಳುಳ್ಳಿ, ಎರಡುಬಗೆಯ ಎರಡುಬಗೆಯ ನುಗ್ಗೆಕಾಯಿ, ಚಿಲ್ಲದಬೀಜ, ಎರಡುಬಗೆಯ ಕುಂಬಳ, ಬದನೇಗಿ, ಬಿಳಿನೀರುಳ್ಳಿ, ಕೆಂಪುನೀರುಳ್ಳಿ, ಗುಳ್ಳದಜಾತಿ,–ಇವುಗಳನ್ನು ಸಾಮಾನ್ಯ ಅಭಕ್ಷ್ಯವೆಂದು ಹೇಳುವರು ॥೧೫–೧೬॥

ದಲ್ಲಿ ಪಡವಲಕಾಯಿಯೂ, ಕಾರ್ತಿಕಮಾಸದಲ್ಲಿ ಅವರೆಯೂ, ಅಷ್ಟಮಿ ಭಾನುವಾರದದಿವಸ ನೆಲ್ಲಿಕಾಯಿಯೂ ವರ್ಜ್ಯವೆಂದು ಹೇಳುವರು ॥

ಏಕಾದಶ್ಯಾಮಹೋರಾತ್ರಂ ನೈವ ಭೋಜನಮಾಚರೇತ್ ।
ವಿಶೇಷಾನ್ಮಮ ಮನ್ತ್ರಾಣಾಂ ಪ್ರವರ್ತಕನಿವರ್ತಕಃ ॥೧೯॥
ಇತ್ಯಾದಿವೈಷ್ಣವೈರ್ಧರ್ಮೈಃ ಯುಕ್ತಸ್ಸನ್ ಭಜ ಮಾಂ ಕಪೇ ।
ವಾಹನಾನಾಂ ಚ ಭಕ್ತಾನಾಂ ತ್ವಂ ಮೇ ಪ್ರಿಯತಮೋ ಹ್ಯಸಿ ॥೧೯॥

ಶ್ರೀಶಿವಉವಾಚ

ಏವಂ ತತ್ತ್ವೋಪದೇಶೇನ ಕೃತ್ವಾನುಗ್ರಹಮಾದರಾತ್ ।
ರಾಘವೋ ವಾಯುತನಯೇ ಪರಮಾನನ್ದಮಾಪ ಸಃ ॥೨೦॥

ಯತ್ಪಾದಪದ್ಮಯುಗಳಂ ತುಳಸೀದಳಾದ್ಯೈಃ
ಸಂಪೂಜ್ಯ ವಿಷ್ಣುಪದವೀಮತುಲಾಂ ಪ್ರಯಾನ್ತಿ ।
ತೇನೈವ ಕಿಂ ಪುನರಸೌ ಪರಿರಬ್ಧಗಾತ್ರೋ
ರಾಮೇಣ ವಾಯುತನಯಃ ಕೃತಪುಣ್ಯಪುಞ್ಜಃ ॥೨೧॥

ಇತಿ ಶ್ರೀಮತ್ಸುನರಕಾಣ್ಡೇ ಮನ್ತ್ರನಿಯಮ ಭಕ್ತಿಸಾಧನಾದಿ
ಕಥನಂ ನಾಮ ದ್ವಾದಶಃ ಸರ್ಗಃ



ನನ್ನ ಮಂತ್ರವನ್ನು ವಿಶೇಷವಾಗಿ ಜಪಮಾಡುತ-ಅವರಿಂದ ಸಂಸಾರನಿವೃತ್ತಿಪಡೆಯಬೇಕೆನ್ನುವವನು, ಏಕಾದಶೀದಿವಸ ಎರಡುವೇಳೆಯೂ ಭೋಜನವನ್ನು ಮಾಡಲೇಕೂಡದು ॥೧೮॥

ಎಲ್ಲೆ ಕಪಿವರನಾದ ಆಂಜನೇಯನೆ! ನೀನೂ ಇತ್ಯಾದಿರೀತಿಯಾಗಿರುವ ವೈಷ್ಣವಧರ್ಮಗಳೊಡನೆ ಯುಕ್ತನಾಗಿ ನನ್ನನ್ನು ಭಜಿಸುವನಾಗು ನನ್ನ ವಾಹನಗಳಲ್ಲಿಯೂ ಭಕ್ತರಲ್ಲಿಯೂ ನೀನು ನನಗೆ ಅತಿಪ್ರಿಯನಾಗಿರುವೆ (ಎಂದು ಶ್ರೀರಾಮನು ಹನುಮಂತನಿಗೆ ಹೇಳಿದನು) ॥೧೯॥

ಶ್ರೀಪರಮೇಶ್ವರನು ಪಾರ್ವತಿಗ ಹೇಳುವನು —

ಎಲೌ ಪಾರ್ವತಿ! ಹೀಗ ಶ್ರೀರಾಮನು ತತ್ತ್ವೋಪದೇಶ ದ್ವಾರಾ ಆದರ ಪುರಸ್ಸರವಾಗಿ ಆ ವಾಯುಪುತ್ರನಲ್ಲಿ ಅನುಗ್ರಹಮಾಡಿ, ಪರಮಾನಂದ ಭರಿತನಾದನು ॥೨೦॥

ಯಾವ ಶ್ರೀರಾಮಚಂದ್ರನ ಪಾದಕಮಲಯುಗ್ಮವನ್ನು ತುಲಸೀದಳ ಮುಂತಾದುವುಳಿಂದ ಪೂಜಿಸಿ ಅಸದೃಶವಾದ ವಿಷ್ಣುಪದವಿಯನ್ನು ಪಡೆಯುವರೋ, ಅಂತಹ ಶ್ರೀರಾಮಚನಿಂದಲೇ ಸಾಕ್ಷಾತ್ತಾಗಿ ಆಲಿಂಗಿಸಲ್ಪಟ್ಟವನಾಗಿರುವ ಮಹಾಪುಣ್ಯಶಾಲಿಯಾದ ಹನುವಿಷಯದಲ್ಲಿ ಹೇಳುವುದೇನಿದ? ॥೨೧॥

ಇದು ಸುಂದರಕಾಂಡದಲ್ಲಿ ಮಂತ್ರನಿಯಮ ಭಕ್ತಿಸಾಧನಾದಿ ಕಥನವ
ಹನ್ನೆರಡನೆಯ ಸರ್ಗವು.



ಅಥ ಶ್ರೀಮತ್ಸುನ್ದರಕಾಣ್ಡೇ ತ್ರಯೋದಶಃ ಸರ್ಗಃ.

ಪಾರ್ವತ್ಯುವಾಚ

ಭಗವನ್ ಮನ್ತ್ರರಾಜಸ್ಯ ಕಿಂ ಮುಖ್ಯಂ ಸಿದ್ಧಿಸಾಧನಮ್ ।
ತತ್ ಸರ್ವಂ ಮಮ ದೇವೇಶ ದಯಯಾಽಽಚಕ್ಷ್ವ ಸಙ್ಗ್ರಹಾತ್ ॥೧॥

ಶ್ರೀಶಿವಉವಾಚ.

ದೇವೇಶಿ ಮನ್ತ್ರಸಿದ್ಧ್ಯರ್ಥಂ ಪುರಶ್ಚರ್ಯ್ಯೈವ ಸಾಧನಮ್ ।
ವಿನಾ ಯಯಾ ನ ಸಿದ್ಧಿಃ ಸ್ಯಾತ್ ಮನ್ತ್ರೋ ವರ್ಷಶತೈರಪಿ ॥೨॥

ಭಕ್ತ್ಯಾಶ್ರದ್ಧೋಪದಾನಾದಿಜನಿರೋಪಾಸ್ತಿಪ್ರಸಾದಿತಾತ್ ।
ಗುರೋರ್ಮನ್ತ್ರವರಂ ಲಬ್ಧ್ವಾ ಸರ್ವಾಭೀಷ್ಟಪ್ರದಂ ಬುಧಃ ।
ಪೂರ್ವವಚ್ಚ ಜಪೇನ್ನಿತ್ಯಂ ಪೂಜಯೇಚ್ಚ ಪ್ರಯತ್ನತಃ ॥೩॥

ಷಟ್ಸಹಸ್ರಂ ಸಹಸ್ರಂ ವಾ ಶತಮಷ್ಟೋತ್ತರಂ ಶುಚಿಃ ।
ತ್ರಿಶತಂ ತ್ರಿಸಹಸ್ರಂ ವಾ ಜಪಂ ಕುರ್ಯಾದ್ದಿನೇದಿನೇ ॥೪॥

ಸುಂದರಕಾಂಡದಲ್ಲಿ ಹದಿಮೂರನೆಯ ಸರ್ಗವು.

ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಾರ್ಥಿಸುವಳು —

ಸ್ವಾಮಿ ! ತಾವು ಅಪ್ಪಣೆಕೊಡಿಸಿದ ಶ್ರೀರಾಮಮಂತ್ರಕ್ಕೆ ಮುಖ್ಯವಾದ ಸಿದ್ಧಿಸಾಧನ ವಾವುದು ? ದೇವದೇವೇಶ ! ಅದೆಲ್ಲವನ್ನೂ ಸಂಗ್ರಹಿಸಿ ನನಗೆ ಅಪ್ಪಣೆಕೊಡಿಸಬೇಕು ॥೧॥

ಶ್ರೀ ಪರಮೇಶ್ವರನು ಉತ್ತರಹೇಳುವನು —

ಎಲೌ ಪಾರ್ವತಿ ! ಈ ಮಂತ್ರ ಸಿದ್ಧಿಸುವುದಕ್ಕೆ ಪುರಶ್ಚರಣೆಯೇ ಮುಖ್ಯಸಾಧನವು, ಇದಿ ಲ್ಲದಿದ್ದಪಕ್ಷದಲ್ಲಿ, ನೂರಾರು ವರ್ಷಗಳು ಕಳೆದರೂ ಮಂತ್ರವು ಸಿದ್ಧಿಸುವುದಿಲ್ಲ ॥೨॥

ಅದುಕಾರಣ, ಆ ಪುರಶ್ಚರಣೆಯ ಕ್ರಮವನ್ನು ಕೇಳುವಳಾಗು —ಪ್ರಥಮತಃ ಭಕ್ತಿಯಿಂ ಶ್ರದ್ಧೆಯಿಂದಲೂ ಅವನಿಗೆ ಬೇಕಾದುದನ್ನು ಒಪ್ಪಿಸುವುದರಿಂದಲೂ ಗುರುವನ್ನು ಬಹು ಸಿಸಬೇಕು ಆಮೇಲೆ ಅವನಿಗೆ ಅನುಗ್ರಹ ಹುಟ್ಟಿದ ಬಳಿಕ ಅವನಿಂದ ಸರ್ವಾಭೀಷ್ಟ ಪ್ರದವಾದ ಮಂತ್ರವನ್ನು ಉಪದೇಶತೆಗೆದುಕೊಂಡು, ಅದರಲ್ಲಿ ಭಕ್ತಿಶ್ರದ್ಧೆಗಳನ್ನಿಟ್ಟು ಜಪಮಾಡ ಬೇಕು. ಅವನನ್ನೂ ಪ್ರಯತ್ನಪೂರ್ವಕವಾಗಿ ಪೂಜಿಸಬೇಕು ॥೩॥

ಆರುಸಾವಿರ ಜಪವನ್ನಾಗಲಿ, ಒಂದು ಸಾವಿರವಾಗಲಿ, ನೂರೆಂಟಾಗಲಿ, ಮೂರುಸಾವಿರ ಜಪವನ್ನಾಗಲಿ ಪರಿಶುದ್ಧನಾಗಿ ಮಾಡಬೇಕು ॥೪॥

ಪುರಶ್ಚರಣಕೃತ್ಯಾದೌ ಪೂರ್ವಂ ಸೇವಾ ವಿಧೀಯತೇ ॥೫॥
ಪುರಶ್ಚರ್ಯಾದಶಾಂಶೇನ ಜಪಹೋಮಾದಿಕಾಃ ಕ್ರಿಯಾಃ ।
ಪುರಶ್ಚರಣವತ್ ಕೃತ್ವಾ ರಾಮಾರ್ಪಣಧಿಯಾ ತ್ಯಜೇತ್ ।
ತತಃ ಕುರ್ವೀತ ಸಙ್ಕಲ್ಪಂ ಪುರಶ್ಚರಣಆದರಾತ್ ॥೬॥
ಚಿರಂ ನಿರನ್ತರೇಣೈವ ನಿಯತಾತ್ಮಾ ಧೃತವ್ರತಃ ॥೭॥
ಶೈಲಾಗ್ರೇ ಜಲಮಧ್ಯೇ ವಾ ತೀರೇ ವಾ ಲವಣಾಮ್ಬುಧೇಃ ।
ನದೀತಟೇಶ್ವತ್ಥಮೂಲೇ ರಮ್ಯೇ ಬಿಲ್ವವನಾನ್ತರೇ ॥೮॥
ಪ್ರತ್ಯಙ್ಮುಖಶಿವಸ್ಥಾನೇ ವೃಷಭಾದಿವಿವರ್ಜಿತೇ ।
ಸಾಲಗ್ರಾಮಸಮೀಪೇ ವಾ ತುಳಸೀಕಾನನೇ ತಥಾ ।
ಗವಾಂ ಗೋಷ್ಠೇಷು ತೀರ್ಥೇಷು ಪುಣ್ಯಕ್ಷೇತ್ರೇಷು ಶಸ್ಯತೇ ॥೯॥
ಚರುಮೂಲಂ ಫಲಂ ಕ್ಷೀರಂ ದಧಿಭಿಕ್ಷಾನ್ನಸಕ್ತವಃ ।
ಶಾಕಂ ವಾಷ್ಟವಿಧಂ ಚಾನ್ನಂ ಸಾಧಕಸ್ಯೋಚ್ಯತೇ ಬುಧೈಃ ॥೧೦॥
ಲವಣಂ ತಿನ್ತ್ರಿಣೀಕಂ ಚ ಕ್ಷಾರಂ ಕ್ಷುದ್ರಂ ರಸಾನ್ತರಮ್ ।
ಮಾಷಮುದ್ಗಮಸೂರಾದ್ಯಾ ಕೋದ್ರವಾಂಶ್ಚಣಕಾನಪಿ ॥೧೧॥

ಪುರಶ್ಚರಣಕರ್ಮವನ್ನು ಪ್ರಾರಂಭಿಸುವ ಕಾಲದಲ್ಲಿ ಶ್ರೀರಾಮನ ಸೇವೆಯನ್ನು ಮಾಡಬೇಕು, ತಾನು ಮಾಡುವ ಮಂತ್ರಪುರಶ್ಚರಣೆಯಲ್ಲಿ ಹತ್ತನೆಯೊಂದು ಭಾಗ ಜಪ ಹೋಮಾದಿಗಳನ್ನು ಮಾಡಿ, ಶ್ರೀರಾಮಾರ್ಪಣಬುದ್ಧಿಯಿಂದ ಸಮರ್ಪಿಸಬೇಕು ॥೫-೬॥

ಬಳಿಕ ಆದರದಿಂದ ಪುರಶ್ಚರಣಕ್ಕೆ ಸಂಕಲ್ಪಮಾಡಬೇಕು, ಅನೇಕಕಾಲ ಅವಿಚ್ಛಿನ್ನವಾಗಿ ಮನಸ್ಸನ್ನು ನಿಯಮದಲ್ಲಿಟ್ಟುಗೊಂಡು ವ್ರತವನ್ನು ಕೈಗೊಳ್ಳಬೇಕು ॥೭॥

ಶೈಲಶಿಖರದಲ್ಲಾಗಲಿ, ಜಲಮಧ್ಯದಲ್ಲಾಗಲಿ, ಸಮುದ್ರತೀರದಲ್ಲಾಗಲಿ, ನದೀತೀರದಲ್ಲಾಗಲಿ, ಅಶ್ವತ್ಥವೃಕ್ಷಮೂಲದಲ್ಲಾಗಲಿ, ಬಿಲ್ವವನಮಧ್ಯದಲ್ಲಾಗಲಿ, ವೃಷಭಾದಿಗಳೊಂದೂ ಇಲ್ಲದೆ ಪಶ್ಚಿಮಾಭಿಮುಖವಾಗಿರುವ (ಜೀರ್ಣ) ಶಿವಾಲಯದಲ್ಲಾಗಲಿ, ಸಾಲಗ್ರಾಮಶಿಲಾಸಮೀಪದಲ್ಲಾಗಲಿ, ತುಳಸೀವನದಲ್ಲಾಗಲಿ, ಗೋಶಾಲೆಯಲ್ಲಾಗಲಿ, ತೀರ್ಥಗಳಲ್ಲಾಗಲಿ, ಪುಣ್ಯಕ್ಷೇತ್ರಗಳಲ್ಲಾಗಲಿ, ಈ ಮಂತ್ರಪುರಶ್ಚರಣೆಯು ಪ್ರಶಸ್ತವೆನ್ನಿಸುವುದು ॥೮-೯॥

ಚರು, ಮೂಲ, ಫಲ, ಕ್ಷೀರ, ದಧಿ(ಮೊಸರು), ಭಿಕ್ಷಾನ್ನ, ಸಕ್ತು(ಹಿಟ್ಟು) ಯೆಂಟುಬಗೆಯ ಆಹಾರಗಳಲ್ಲಿ ಯಾವುದನ್ನಾದರೂ ಮಂತ್ರಸಾಧಕನು ಸ್ವೀಕರಿಸಬೇಕೆಂದು ಪಂಡಿತರು ಅಭಿಪ್ರಾಯಪಡುವರು ॥೧೦॥

ಉಪ್ಪು, ಹುಳಿ, ಕಾರ, ಜೀನುತುಪ್ಪ, ಒಗರು ಮುಂತಾದ ಇತರ ಸಾರಂಗಿಬೇಳೆ, ಹಾರಕ, ಕಡಲೆ- ಇವುಗಳನ್ನು ಆಹಾರವಾಗಿ ಉಪಯೋ

ಅಸದ್ಭಾಷಣಮನ್ಯೋನ್ಯಂ ವರ್ಜಯೇದನ್ಯಪೂಜನಮ್ ।
ವಿನಾಶ್ರಮೋಚಿತಂ ನಿತ್ಯಂ ಅಥ ನೈಮಿತ್ತಿಕಂ ಚ ಯತ್ ॥೧೦॥
ಸ್ತ್ರೀಶೂದ್ರಪತಿತವ್ರಾತ್ಯನಾಸ್ತಿಕೋಚ್ಛಿಷ್ಟಭಾಷಣಮ್ ।
ಅಸತ್ಯಭಾಷಣಂ ಜೈಹ್ಮ್ಯಭಾಷಣಂ ಪರಿವರ್ಜಯೇತ್ ॥೧೩॥
ಸದ್ಭಿಶ್ಚಾಪಿ ನ ಭಾಷೇತ ಜಪಹೋಮಾರ್ಚನಾದಿಷು ।
ವಾಙ್ಮನಃಕರ್ಮಭಿರ್ನಿತ್ಯಂ ನಿಸ್ಪೃಹೋ ವನಿತಾದಿಷು ॥೧೪॥
ವರ್ಜಯೇದ್ಗೀತವಾದ್ಯಾದಿಶ್ರವಣಂ ನೃತ್ತದರ್ಶನಮ್ ।
ತಾಮ್ಬೂಲಂ ಗನ್ಧಲೇಪಂ ಚ ಪುಷ್ಪಧಾರಣಮೇವ ಚ ॥೧೫॥
ಮೈಥುನಂ ತತ್ಕಥಾಲಾಪಂ ತದ್ಗೋಷ್ಠೀಂ ಪರಿವರ್ಜಯೇತ್ ।
ಕೌಟಿಲ್ಯಂ ಕ್ಷೌರಮಭ್ಯಙ್ಗಂ ಅನಿವೇದಿತಭೋಜನಮ್ ॥೧೬॥
ಅಸಙ್ಕಲ್ಪಿತಕೃತ್ಯಂ ಚ ವರ್ಜಯೇನ್ಮರ್ದನಾದಿಕಮ್ ।
ತ್ಯಜೇದುಷ್ಣೋದಕಸ್ನಾನಂ ಸುಗನ್ಧಾಮಲಕಾದಿಕಮ್ ॥೧೭॥
ಭೂಶಯ್ಯಾ ಬ್ರಹ್ಮಚರ್ಯಂ ಚ ಮೌನಚರ್ಯಾನಸೂಯತಾ ।

ಗೊಬ್ಬರು ಮಾಡುವ ದುಷ್ಟಾಲಾಪಗಳನ್ನೂ, ದೇವತಾಂತರಪೂಜೆಯನ್ನೂ ವರ್ಜಿಸಬೇಕು. ಆದರೆ, ತನ್ನ ವರ್ಣಾಶ್ರಮೋಚಿತವಾಗಿ ನಿತ್ಯವಾಗಿಯೂ ನೈಮಿತ್ತಿಕವಾಗಿಯೂ ಪ್ರಾಪ್ತವಾದ ದೇವತಾಂತರಪೂಜೆಯನ್ನೂ ಬಿಡಬೇಕೆಂದು ತಿಳಿಯಬಾರದು ಸ್ತ್ರೀ ಶೂದ್ರ ಪತಿತ ವ್ರಾತ್ಯ ಚಂಡಾಲ ಉಚ್ಛಿಷ್ಟಸೇವಿಗಳೊಡನೆ ಭಾಷಣೆಯನ್ನೂ, ಅನೃತಭಾಷಣವನ್ನೂ, ವಕ್ರಭಾಷಣೆಯನ್ನೂ ಸರ್ವದಾ ಪರಿತ್ಯಜಿಸಬೇಕು ॥೧೧-೧೩॥

ಜಪ ಹೋಮ ಪೂಜ ಮುಂತಾದ ಸಮಯಗಳಲ್ಲಿ ಉತ್ತಮರೊಡನೆಯೂ ಮಾತನಾಡದೆ ಮೌನಾವಲಂಬಿಯಾಗಿರಬೇಕು ವನಿತಾದಿ ಭೋಗಗಳನ್ನು ಯಾವಾಗಲೂ ತ್ರಿಕರಣದಲ್ಲಿಯೂ ಅಪೇಕ್ಷಿಸಬಾರದು ॥೧೪॥

ಗೀತ ವಾದ್ಯ ಮುಂತಾದುವುಗಳ ಶ್ರವಣವನ್ನೂ ನೃತ್ಯದರ್ಶನವನ್ನೂ ತಾಂಬೂಲ ಗಂಧ ಲೇಪ ಪುಷ್ಪಧಾರಣಗಳನ್ನೂ ವರ್ಜಿಸಬೇಕು ॥೧೫॥

ಸ್ತ್ರೀಸಹವಾಸವನ್ನೂ ಇದನ್ನು ಕುರಿತು ಸಂಭಾಷಣೆಯನ್ನೂ, ಅಂತಹ ಗೋಷ್ಠಿಯನ್ನೂ ಕೌಟಿಲ್ಯವನ್ನೂ ಕ್ಷೌರವನ್ನೂ ಅಭ್ಯಂಗವನ್ನೂ ನಿವೇದನೆಮಾಡದ ಭೋಜನವನ್ನೂ ಪರಿತ್ಯಜಿಸಬೇಕು ॥೧೬॥

ಅನಸ್ಸಿನಲ್ಲಿ ನಿಶ್ಚಯವಿಲ್ಲದ ಕೃತ್ಯಗಳನ್ನೂ, ಅಂಗಮರ್ದನ ಮುಂತಾದುವುಗಳನ್ನೂ, ಉಷ್ಣೋದಕ ಸ್ನಾನವನ್ನೂ, ಸುಗಂಧಯುಕ್ತವಾದ ಆಮಲಕ(ನೆಲ್ಲಿಕಾಯಿ)ವನ್ನೂ ಬಿಟ್ಟು ॥

ಭೂಶಯನ, ಬ್ರಹ್ಮಚರ್ಯ, ಮೌನಾಶ್ರಯಣ, ಅಸೂಯೆರಾಹಿತ್ಯ, ನಿತ್ಯವೂ ತ್ರಿಷವನ ತ್ಯಾಗ, ನಿತ್ಯವಾಗಿ ಪೂಜೆ, ನಿತ್ಯವಾದ ದಾನ, ದೇವತೆಗಳ ಸ್ತೋತ್ರ,

ನಿತ್ಯಂ ತ್ರಿಷವಣಸ್ನಾನಂ ಕ್ಷುದ್ರಕರ್ಮವಿವರ್ಜನಮ್ ॥೧೯॥
ನಿತ್ಯಪೂಜಾ ನಿತ್ಯದಾನಂ ದೇವತಾಸ್ತುತಿಪೂಜನಮ್ ।
ನೈಮಿತ್ತಿಕಾರ್ಚನಂ ಚೈವ ವಿಶ್ವಾಸೋ ಗುರುದೇವಯೋಃ ।
ಜಪನಿಷ್ಠಾ ದ್ವಾದಶೈತೇ ಧರ್ಮಾಃ ಸ್ಯುರ್ಮನ್ತ್ರಸಿದ್ಧಿದಾಃ ॥೧೯॥
ಶಿರೋಽಙ್ಗಂ ಪಞ್ಚಗವ್ಯೇನ ಕೇವಲಾಮಲಕೇನ ವಾ ।
ಶ್ರುತಿಸ್ಮೃತಿಪುರಾಣೋಕ್ತೈಃ ಮನ್ತ್ರೈಃ ಸ್ನಾಯಾದನನ್ತರಮ್ ॥೨೦॥
ಕರ್ತಾ ತ್ರಿಷವಣಸ್ನಾನಂ ಅನ್ಯಥಾ ದ್ವಿಃ ಸಕೃತ್ ತಥಾ ॥೨೧॥
ನಿತ್ಯಂ ಸೂರ್ಯಮುಪಸ್ಥಾಯ ತಸ್ಯ ವಾಭಿಮುಖೋ ಜಪೇತ್ ।
ದೇವತಾಪ್ರತಿಮಾದೌ ವಾ ವಹ್ನೌ ವಾಭ್ಯರ್ಚ್ಯ ತನ್ಮುಖಃ ॥೨೨॥
ಸ್ನಾನಪೂಜಾಜಪಧ್ಯಾನಹೋಮತರ್ಪಣತತ್ಪರಃ ।
ನಿಷ್ಕಾಮೋ ದೇವತಾಯಾಂ ಚ ಸರ್ವಕರ್ಮನಿವೇದಕಃ ।
ಏವಮಾದೀಂಶ್ಚ ನಿಯಮಾನ್ ಪುರಶ್ಚರಣಕೃಚ್ಚರೇತ್ ॥೨೩॥
ಯದಿ ಗ್ರಾಮೇ ಜಪೇನ್ಮನ್ತ್ರಂ ಕೂರ್ಮಯನ್ತ್ರಂ ನಿರೀಕ್ಷ್ಯ ಚ ।
ಸಿದ್ಧ್ಯರ್ಧಂ ತಸ್ಮುಖೇ ತಿಷ್ಠೇ ಕೂರ್ಮಸ್ಯಾಕೃತಿರುಚ್ಯತೇ ॥೨೪॥

ಪೂಜೆ, ನೈಮಿತ್ತಿಕವಾದ ಅರ್ಚನೆ, ಗುರುದೇವತೆಗಳಲ್ಲಿ ಶ್ರದ್ಧೆ, ಜಪದಲ್ಲಿ ನಿಷ್ಠೆ,—ಈ ಹನ್ನೆರಡು ಧರ್ಮಗಳೂ ಮಂತ್ರಸಿದ್ಧಿಯನ್ನುಂಟುಮಾಡತಕ್ಕುವುಗಳು ॥೧೮-೧೯॥

ಮಂತ್ರಪುರಶ್ಚರಣೆಮಾಡತಕ್ಕವನು, ತಲೆಗೆ ಪಂಚಗವ್ಯದಿಂದ ಅಭ್ಯಂಗಮಾಡಿಕೊಳ್ಳಬೇಕು, ಅಥವಾ ಬರಿಯದಾದ ನೆಲ್ಲಿಯಕಾಯಿಯಂದರಿಂದಲಾದರೂ ಅಭ್ಯಂಗಮಾಡಿಕೊಳ್ಳಬೇಕು ಬಳಿಕ, ಶ್ರುತಿ ಸ್ಮೃತಿ ಪುರಾಣಗಳಲ್ಲಿ ಉಕ್ತವಾಗಿರುವ ಮಂತ್ರಗಳಿಂದ ಸ್ನಾನಮಾಡಬೇಕು ಶಕ್ತಿಯಿದ್ದರೆ ತ್ರಿಸವಣಸ್ನಾನಮಾಡಬೇಕು , ಇಲ್ಲದಿದ್ದರೆ ಪ್ರಾತರ್ಮಾಧ್ಯಾಹ್ನಿಕಸ್ನಾನಗಳೆರಡನ್ನಾದರೂ ಅದಕ್ಕೂ ಶಕ್ತಿಯಿಲ್ಲವಾದರೆ ಪ್ರಾತಸ್ಸ್ನಾನವೊಂದನ್ನಾದರೂ ಮಾಡಬೇಕು॥೨೦-೨೧॥

ನಿತ್ಯವೂ ಸೂರ್ಯನನ್ನು ಉಪಸ್ಥಾನಮಾಡಿ ಅವನಿಗಿದುರಾಗಿಯಾದರೂ ಜಪಮಾಡಬಹುದು, ಅಥವಾ, ದೇವತಾಪ್ರತಿಗ್ರಹಗಳಲ್ಲಿಯಾದರೂ ಅಗ್ನಿಯಲ್ಲಾದರೂ ದೇವರನ್ನು ಆವಾಹಿಸಿ-ಅದಕ್ಕೆ ಅಭಿಮುಖವಾಗಿ ಜಪಮಾಡಬಹುದು ॥೨೨॥

ಸ್ನಾನ ಪೂಜ ಜಪ ಧ್ಯಾನ ಹೋಮ ತರ್ಪಣಗಳಲ್ಲಿ ನಿರತರಾಗಿರಬೇಕು ಐಹಿಕಾಮುಗಳೊಂದರಲ್ಲೂ ಅಭಿಸಂಧಿಯಿಡದೆ, ಸರ್ವಕರ್ಮಫಲವನ್ನೂ ಈಶ್ವರಾರ್ಪಣಮಾಡಬೇಕು ವಶ್ಚರಣಮಾಡತಕ್ಕವರು, ಇವೇಮೊದಲಾದ ನಿಯಮಗಳನ್ನು ಆಚರಿಸಬೇಕು ॥೨೩॥

ಗ್ರಾಮದೊಳಗಿದ್ದುಗೊಂಡು ಜಪಮಾಡುವಪಕ್ಷದಲ್ಲಿ, ಜಪಸಿದ್ಧಿಗಾಗಿ ಕೂಮಾಡಿ ಅದನ್ನು ನೋಡುತನಿರತುಗೊಂಡು ಜಪಮಾಡಬೇಕು ಈಗ ಆ ಕೂಪವನ್ನು ಹೇಳುವೆನು ॥೨೪॥

ಷಟ್ಕೋಣಂ ವಿಲಿಖೇದಾದೌ ಮುಖೇ ಹ್ರೀಂಕಾರಮೇವ ಚ ।
ಪೃಷ್ಠೇ ಮನ್ಮಥಬೀಜಂ ಚ ಚತುಷ್ಕೋಣೇಷು ತಾರಕಮ್ ॥೨೫॥
ಅಷ್ಟಪತ್ರೇಷ್ವಷ್ಟ ವರ್ಗಾ ಕೇಸರೇ ಸ್ವರಯುಗ್ಮಕಮ್ ।
ಮಧ್ಯೇ ಹುಂಫಟ್ಕ್ರಿಯಾಸಾಧ್ಯಂ ಜಪೇತ್ ಕೋಟಿಗುಣಂ ಭವೇತ್ ॥೨೬॥
ಲಿಖೇದ್ದಳಾನ್ತರೇ ಮನ್ತ್ರಂ ವರ್ಗಾ ಕಾದೀ ಸಮಾಲಿಖೇತ್ ।
ಹಳಕ್ಷಾ ದೇಶದೇಶೇ ತು ಲಿಖೇತ್ ಕೂರ್ಮಾಖ್ಯಚಕ್ರಕಮ್ ॥೨೭॥
ಅಶೇಷಜಗದಾಧಾರಂ ಅನನ್ತಂ ಕೂರ್ಮರೂಪಿಣಮ್ ।
ಆಸನಸ್ಯ ಪ್ರಸಿದ್ಧ್ಯರ್ಥಂ ಆತ್ಮಾನಂ ತಂ ಭಜೇದ್ಧರಿಮ್ ॥೨೮॥
ಮೋಕ್ಷಾರ್ಥಂ ಪ್ರಾಙ್ಮುಖಃ ಕುರ್ಯಾತ್ ದಕ್ಷಿಣೇ ತ್ವಾಭಿಚಾರಿಕೇ ।
ಶ್ರೀಕಾಮಃ ಪಶ್ಚಿಮಮುಖಃ ಉತ್ತರೇ ಶಾನ್ತಿಕಂ ಭವೇತ್ ॥೨೯॥
ಈಶಾನ್ಯೇ ಶತ್ರುನಾಶಃ ಸ್ಯಾತ್ ಆಗ್ನೇಯೇ ಶತ್ರುದಾಯಕಃ ।
ನೈರೃತ್ಯೇ ಶತ್ರುಭೀತಿಃ ಸ್ಯಾತ್ ವಾಯವ್ಯೇ ತು ಪಲಾಯನಮ್ ॥೩೦॥

ಪ್ರಥಮತಃ ಷಟ್ಕೋಣಚಕ್ರವನ್ನು ಬರೆಯುವುದು, ಅದರ ಮುಖದಲ್ಲಿ ಹ್ರೀಂಕಾರವನ್ನು ಬರೆಯಬೇಕು ಹಿಂಭಾಗದಲ್ಲಿ ಮನ್ಮಥಬೀಜವನ್ನು(ಕ್ಲೀಂ)ಬರೆಯುವುದು ನಾಲ್ಕು ಕೋಣಗಳಲ್ಲೂ ಓಂಕಾರವನ್ನು ಬರೆಯುವುದು ಆಮೇಲೆ ಅದರ ಸುತ್ತಲೂ ವರ್ತುಲರೇಖೆಯನ್ನು ಹಾಕಿ ಅದರ ಮುಂದೆ ಅಷ್ಟದಳಗಳನ್ನು ಬರೆದು ಆ ದಳಗಳಲ್ಲಿ ಅವರ್ಗ ಕವರ್ಗ ಮೊದಲಾದ ಎಂಟುವರ್ಗಗಳನ್ನೂ ಬರೆಯುವುದು ಆ ಅಷ್ಟಪತ್ರಗಳ ಕೇಸರಗಳಲ್ಲಿ ಎರಡೆರಡು ಸ್ವರಗಳನ್ನೂ ದಳಮಧ್ಯದಲ್ಲಿ ಕೂರ್ಮಮಂತ್ರವನ್ನೂ ಪುನಃ ಅವರ್ಗ ಕವರ್ಗ ಮುಂತಾದ ಎಂಟುವರ್ಗಗಳನ್ನೂ ಬರೆಯುವುದು. ಭೂಪುರದ ಎಂಟು ಕೋಣಗಳಲ್ಲಿ ಪ್ರತಿಯೊಂದರಲ್ಲಿಯೂ 'ಹಂ ಳಂ ಕ್ಷಂ' ಎಂಬ ವರ್ಣತ್ರಯವನ್ನೂ ಬರೆಯುವುದು, ಇದೇ ಕೂರ್ಮಚಕ್ರವೆಂದು ಹೇಳಲ್ಪಡುವುದು ಮಧ್ಯದಲ್ಲಿ ಹುಂ ಫಟ್ ಸಾಧ್ಯ(ಇಷ್ಟಾರ್ಥ)ಗಳನ್ನು ಒಲಿಸು ಜಪಮಾಡಬೇಕು ಹೀಗೆ ಮಾಡುವ ಜಪವು ಕೋಟಿ ಗುಣವಾಗುವುದು ॥೨೫-೨೭॥

ಸಮಸ್ತ ಜಗತ್ತುಗಳಿಗೂ ಆಧಾರನಾಗಿಯೂ ಅನಂತನಾಗಿಯೂ ಇರುವ ಆ ಪರಮಾತ್ಮನಾದ ಶ್ರೀಹರಿಯನ್ನು ಆಸನಸಿದ್ಧಿಗೋಸ್ಕರ ಕೂರ್ಮರೂಪನನ್ನಾಗಿ ಭಜಿಸಬೇಕು ॥೨೮॥

ಮೋಕ್ಷಾರ್ಥಿಯಾಗಿ ಜಪಮಾಡತಕ್ಕವನು ಕೂರ್ಮನ ಮುಖವು ಪೂರ್ವದಿಕ್ಕಿಗೆ ಬರುವಂತೆ ತಾನೂ ಪೂರ್ವಾಭಿಮುಖವಾಗಿ ಜಪಮಾಡಬೇಕು. ಆಭಿಚಾರಿಕಪ್ರಯೋಗದಲ್ಲಿ ದಕ್ಷಿಣಾಕಿ ತಾನೂ ದಕ್ಷಿಣಾಭಿಮುಖವಾಗಿ ಜಪಮಾಡಬೇಕು ಶ್ರೀಕಾಮನು ಪಶ್ಚಿಮಮುಶಾಂತಿಕರ್ಮದಲ್ಲಿ ಉತ್ತರಮುಖವಾಗಿಯೂ ಹಾಕಿ ಜಪಮಾಡಬೇಕು ॥೨೯॥

ಮುಖವಾಗಿದ್ದರೆ ಶತ್ರುನಾಶವಾಗುವುದು ಆಗ್ನೇಯಮುಖವಾಗಿದ್ದರೆ ಶತ್ರುಗ
ನೈರೃತ್ಯಮುಖವಾಗಿದ್ದರೆ ಶತ್ರುಭಯವುಂಟಾಗುವುದು ವಾಯವ್ಯಮುಖವಾ
ಗುವುದು ॥೩೦॥

ಕೂರ್ಮಚಕ್ರಮವಿಜ್ಞಾಯ ಯಃ ಕುರ್ಯಾಜ್ಜಪಯನ್ತ್ರಕಮ್ ।
ತಸ್ಯ ಜಪ್ಯಫಲಂ ನಾಸ್ತಿ ಸರ್ವಾನರ್ಥಾಯ ಕಲ್ಪತೇ ॥೩೧॥
ಆಸನಂ ಕಲ್ಪಯೇದ್ವಿದ್ವಾ೯ ಚೇಲಾಜಿನಕುಶೋತ್ತರಮ್ ।
ಸ್ವಸ್ತಿಕಾದಿಕ್ರಮೇಣಾಥ ವಿಶೇತ್ ತತ್ರ ನಿರಾಕುಲಃ ॥೩೨॥
ವಸ್ತ್ರಾಸನಂ ರೋಗಹರಂ ವೇತ್ರಜೇ ವಿಪುಲಾಃ ಶ್ರಿಯಃ ।
ಸರ್ವಸಿದ್ಧ್ಯೈ ವ್ಯಾಘ್ರಚರ್ಮ ಜ್ಞಾನಸಿದ್ಧ್ಯೈ ಮೃಗಾಜಿನಮ್ ।
ಕೌಶೇಯಂ ಪೌಷ್ಟಿಕೇ ಕಾರ್ಯಂ ಕಮ್ಬಳಂ ದುಃಖಮೋಚನಮ್ ॥೩೩॥
ಆಭಿಚಾರೇ ಕೃಷ್ಣವರ್ಣಂ ರಕ್ತಂ ವಶ್ಯಾದಿಕರ್ಮಣಿ ।
ಶಾನ್ತಿಕೇ ಧವಳಂ ಪ್ರೋಕ್ತಂ ಚಿತ್ರಕಂ ಸರ್ವಕರ್ಮಸು ॥೩೪॥
ನಾಽದೀಕ್ಷಿತೋ ವಿಶೇತ್ ಕೃಷ್ಣಸಾರಚರ್ಮಾಸನೇ ಗೃಹೀ ।
ವಿಶೇದ್ಯತಿರ್ವನಸ್ಥಶ್ಚ ಸ್ನಾತಕೋ ಬ್ರಹ್ಮಚರ್ಯವಾ೯ ॥೩೫॥

ಯಾವನು ಕೂರ್ಮಚಕ್ರಸ್ವರೂಪವನ್ನು ತಿಳಿದುಕೊಳ್ಳದೆ ಜಪಯಂತ್ರವನ್ನು ಮಾಡುವನೋ, ಅವನು ಮಾಡುವ ಜಪವು ನಿಷ್ಫಲವಾಗುವುದು, ಮತ್ತು, ಅದು ಅವನಿಗೆ ಸಕಲವಿಧವಾದ ಅನರ್ಥಕ್ಕೂ ಹೇತುವಾಗುವುದು ॥೩೧॥

ಪ್ರಾಜ್ಞನಾದವನು, ಆಸನದ ಮೇಲುಗಡೆಗೆ ವಸ್ತ್ರವನ್ನಾಗಲಿ ಕೃಷ್ಣಾಜಿನವನ್ನಾಗಲಿ ದರ್ಭೆಯನ್ನಾಗಲಿ ಹಾಕಿಕೊಳ್ಳಬೇಕು ಅದರಲ್ಲಿ ಸ್ವಸ್ತಿಕಮುಂತಾದ ಚಕ್ರಗಳೂ ಕ್ರಮವಾಗಿರಬೇಕು ಬಳಿಕ ಅಂತಹ ಆಸನದಲ್ಲಿ ಸುಖವಾಗಿ ಕುಳಿತುಕೊಳ್ಳಬೇಕು ॥೩೨॥

ವಸ್ತ್ರಾಸನವು ರೋಗಹರವು, ಬೆತ್ತದಿಂದ ಮಾಡಿದ ಆಸನದಲ್ಲಿ ವಿಪುಲವಾದ ಸಂಪತ್ತು ದೊರೆಯುವುದು, ವ್ಯಾಘ್ರಚರ್ಮದ ಆಸನವು ಸಕಲಸಿದ್ಧಿಗಳನ್ನೂ ಕೊಡುವುದು , ಕೃಷ್ಣಾಜಿನವು ಜ್ಞಾನಸಿದ್ಧಿಪ್ರದವಾಗುವುದು , ಪೌಷ್ಟಿಕಕರ್ಮದಲ್ಲಿ ಕೌಶೇಯವನ್ನು (ರೇಶಿಮೆ) ಆಸನಮಾಡಿಕೊಳ್ಳಬೇಕು , ಕಂಬಳಾಸನವು ದುಃಖಮೋಚಕವು॥೩೩॥

ಆಭಿಚಾರಿಕಕರ್ಮದಲ್ಲಿ ಕೃಷ್ಣವರ್ಣವಾದ ಆಸನವನ್ನು ಉಗಯೋಗಿಸಬೇಕು , ವಶ್ಯಮುಂತಾದ ಕರ್ಮದಲ್ಲಿ ರಕ್ತವರ್ಣವಾದುದನ್ನೂ, ಶಾಂತಿಕರ್ಮದಲ್ಲಿ ಶುಭ್ರವರ್ಣವಾದುದನೂ ಉಪಯೋಗಿಸಬೇಕು ಚಿತ್ರವರ್ಣದ ಆಸನವಾದರೆ ಸಕಲಕರ್ಮದಲ್ಲೂ ಉಪಯೋಗಿಸಬಹುದು॥೩೪॥

ಗೃಹಸ್ಥನಾದವನು ದೀಕ್ಷೆಯನ್ನು ಸ್ವೀಕರಿಸದೆ ಕೃಷ್ಣಾಜಿನದಲ್ಲಿ ಕುಳಿತುಕೊಯತಿಯೂ ವಾನಪ್ರಸ್ಥನೂ ಸ್ನಾತಕವ್ರತದಲ್ಲಿದ್ದವನೂ ಬ್ರಹ್ಮಚಾರಿಯುಾಕೂಡದ್ದರೂ ಕುಳಿತು ಕೊಳ್ಳಬಹುದು॥೩೫॥

ವಂಶಾಸನೇ ಚ ದಾರಿದ್ರ್ಯಂ ದೌರ್ಭಾಗ್ಯಂ ದಾರುಜಾಸನೇ ।
ಧರಿತ್ರ್ಯಾಂ ದುಃಖಸಂಭೂತಿಃ ಪಾಷಾಣೇ ರೋಗಸಂಭವಃ ॥೩೬॥
ತೃಣಾಸನೇ ಯಶೋಹಾನಿಃ ಪಲ್ಲವೇ ಚಿತ್ತವಿಭ್ರಮಃ ।
ಇಷ್ಟಕಾಯಾಮಥಾಧಿಃ ಸ್ಯಾತ್ ಏತತ್ ಸಾಧಾರಣಂ ವಿದುಃ ॥೩೭॥
ರುದ್ರಾಕ್ಷಶಙ್ಖಪದ್ಮಾಕ್ಷಪುತ್ರಜೀವಿಕಮೌಕ್ತಿಕೈಃ ।
ಸ್ಫಟಿಕೈರ್ಮಣಿರತ್ನೈಶ್ಚ ಸೌವರ್ಣೈರ್ವಿದ್ರುಮೈಸ್ತಥಾ ।
ಕುಶೈರೇತೈಶ್ಚ ದಶಭಿಃ ಗೃಹಸ್ಥಸ್ಯಾಕ್ಷಮಾಲಿಕಾಃ ॥೩೮॥
ಅಙ್ಗುಳ್ಯಾ ಜಪಸಙ್ಖ್ಯಾಯಾಂ ಏಕಮೇಕಮುದಾಹೃತಮ್ ।
ರೇಖಯಾಷ್ಟಗುಣಂ ಪ್ರೋಕ್ತಂ ಪುತ್ರಜೀವೈರ್ದಶಾಧಿಕಮ್ ॥೩೯॥
ಶತಂ ಸ್ಯಾಚ್ಛಙ್ಖಮಣಿಭಿಃ ಪ್ರವಾಳೈಸ್ತು ಸಹಸ್ರಕಮ್ ।
ಸ್ಫಟಿಕೈರ್ದಶಸಾಹಸ್ರಂ ಮೌಕ್ತಿಕೈರ್ಲಕ್ಷಮುಚ್ಯತೇ ॥೪೦॥
ಪದ್ಮಾಕ್ಷೈರ್ದಶಲಕ್ಷಂತು ಸೌವರ್ಣೈಃ ಕೋಟಿರುಚ್ಯತೇ ।
ಕುಶಗ್ರನ್ಥ್ಯಾ ಚ ರುದ್ರಾಕ್ಷೈಃ ಅನನ್ತಗುಣಿತಂ ಭವೇತ್ ॥೪೧॥

ಬಿದುರಿನ ಆಸನದಲ್ಲಿ ದರಿದ್ರ್ಯವುಂಟಾಗುವುದು, ಮರದ ಆಸನದಲ್ಲಿ ದೌರ್ಭಾಗ್ಯವುಂಟಾಗುವುದು, ನೆಲದಮೇಲೆ ಕುಳಿತುಕೊಂಡರೆ ದುಃಖವೂ, ಕಲ್ಲಿನಮೇಲೆ ಕುಳಿತುಕೊಂಡರೆ ರೋಗವೂ ಸಂಭವಿಸುವುವು॥೩೬॥

ಹುಲ್ಲಿನಮೇಲೆ ಯಶೋಹಾನಿಯೂ, ಚಿಗುರಿನಮೇಲೆ ಚಿತ್ತಭ್ರಾಂತಿಯೂ, ಇಟ್ಟಿಗೆಯಮೇಲೆ ಮನೋವ್ಯಥೆಯೂ ಉಂಟಾಗುವುವು ಇವು ಸರ್ವರಿಗೂ ಸಾಧಾರಣವೆಂದು ಪ್ರಾಜ್ಞರುಹೇಳುವರು॥

ರುದ್ರಾಕ್ಷ ಶಂಖ ಪದ್ಮಾಕ್ಷ ಪುತ್ರಜೀವಮಣಿ ಮೌಕ್ತಿಕ ಸ್ಫಟಿಕ ಮಾಣಿಕ್ಯ ಸುವರ್ಣ ಗುಟಿಕೆ(ಗುಂಡು)ಪ್ರವಾಳ ಕುಶ-ಈ ಹತ್ತುದ್ರವ್ಯಗಳಲ್ಲಿ ಯಾವುದರಿಂದಲಾದರೂ ಗೃಹಸ್ಥನು ಜಪಸರವನ್ನು ಮಾಡಿಕೊಳ್ಳಬಹುದು ॥೩೮॥

ಬೆರಳತುದಿಯಿಂದ ಲೆಕ್ಕಮಾಡಿ ಜಪಮಾಡಿದರೆ ಒಂದು ಗುಣವೆಂದೂ, ಅಂಗುಳಿಪರ್ವ ರೇಖೆಗಳಿಂದ ಲೆಕ್ಕಮಾಡಿದರೆ ಎಂಟುಗುಣವೆಂದೂ, ಪುತ್ರಜೀವಮಣಿಗಳಿಂದ ಲೆಕ್ಕಮಾಡಿದರೆ ಹತ್ತುಗುಣವೆಂದೂ, ಶಂಖಮಣಿಗಳಿಂದ ಮಾಡಿದರೆ ನೂರುಗುಣವೆಂದೂ, ಹವಳದಲ್ಲಿ ಸಾವಿರಗುಣವೆಂದೂ, ಸ್ಫಟಿಕದಲ್ಲಿ ಹತ್ತುಸಾವಿರವೆಂದೂ, ಮುತ್ತುಗಳಲ್ಲಿ ಲಕ್ಷವೆಂದೂ, ಪದ್ಮಾಕ್ಷದಲ್ಲಿ ಹತ್ತುಲಕ್ಷವೆಂದೂ, ಸುವರ್ಣಮಣಿಗಳಲ್ಲಿ ಲೆಕ್ಕಮಾಡಿ ಜಪಮಾಡಿದರೆ ಕೋಟಿಗುಣವೆಂದೂ ಹೇಳುವರು ಕುಶಗ್ರಂಥಿಗಳಿಂದಲೂ ರುದ್ರಾಕ್ಷಿಗಳಿಂದಲೂ ಮಾಡಿದ ಜಪವು ಅನಂತಗುಣವಾಗುವುದು. ತುಲಸೀಮಣಿಗಳಿಂದ ಲೆಕ್ಕಮಾಡುತ ಮಾಡುವ ಜಪವು ಅಕ್ಷಯವಾಗು

ತುಳಸೀಮಣಿನಾ ಯತ್ರ ಗಣಿತಂ ಹ್ಯಕ್ಷಯಂ ಭವೇತ್ ॥೪೦॥
ಶಙ್ಖಾಕ್ಷಮಣಯಃ ಶ್ರೀದಾಃ ಸ್ಫಾಟಿಕಾಮುಕ್ತಿದಾಃ ಪರಮ್ ।
ಪದ್ಮಾಕ್ಷಾಃ ಪುಷ್ಟಿಲಕ್ಷ್ಮ್ಯಾದಾಃ ರುದ್ರಾಕ್ಷಾಭುಕ್ತಿಮುಕ್ತಿದಾಃ ॥೪೧॥
ಅಷ್ಟೋತ್ತರಶತೈರ್ಮಾಲಾ ಪಞ್ಚಾ ಶಚ್ಚತುರುತ್ತರೈಃ ।
ಸಪ್ತವಿಂಶತಿಭಿಃ ಕಾರ್ಯಾ ಸರ್ವಸಾಧಾರಣೇ ಜಪೇ ॥೪೨॥
ಮೋಕ್ಷಾರ್ಥೀ ಪಞ್ಚವಿಂಶತ್ಯಾ ಧನಾರ್ಥೀ ತ್ರಿಂಶತಾ ಜಪೇತ್ ।
ಸರ್ವಾ ಕಾಮಾನವಾಪ್ನೋತಿ ಶತೇನಾಷ್ಟೋತ್ತರೇಣ ಚ ॥೪೩॥
ಚತುಷ್ಷಷ್ಟ್ಯಾ ಕೃತಾ ವಾಪಿ ಸಾ ಭವೇತ್ ಸರ್ವಮೋಹಿನೀ ॥೪೪॥
ಕ್ಷುದ್ರೇಷು ಸಂಪ್ರಯೋಕ್ತವ್ಯಾ ಪಞ್ಚಾ ಶಚ್ಚತುರುತ್ತರಾ ।
ಉಚ್ಚಾಟನೇ ಚ ಪಞ್ಚಾಶತ್ ಚತ್ವಾರಿಂಶಚ್ಚ ಮಾರಣೇ ॥೪೫॥
ಆಕರ್ಷಣೇ ಚ ಷಟ್ತ್ರಿಂಶತ್ ವಶ್ಯೇ ದ್ವಾತ್ರಿಂಶದುಚ್ಯತೇ ।
ಪುತ್ರಾರ್ಥೀ ಚೈಕವಿಂಶತ್ಯಾ ಮಾಲಯಾ ಜಪಮಾಚರೇತ್ ॥೪೮॥
ಅಷ್ಟಾದಶ್ಯಾ ಚ ವಿದ್ಯಾರ್ಥೀ ಕ್ಷೇತ್ರಾರ್ಥೀ ಷೋಡಶೇನ ಚ ।
ಪಞ್ಚದಶ್ಯಾಭಿಚಾರಾರ್ಥೀ ಶತ್ರೂಣಾಂ ಸ್ತಮ್ಭನಾಯ ಚ ॥೪೯॥

ಶಂಖದಲ್ಲಿ ಮಾಡಿದ ಜಪಮಣಿಗಳು ಲಕ್ಷ್ಮೀಪ್ರದಗಳು, ಸ್ಫಟಿಕಮಣಿಗಳು ಕೇವಲ ಮೋಕ್ಷಪ್ರದಗಳು, ಪದ್ಮಾಕ್ಷಗಳು ಪುಷ್ಟಿಯನ್ನೂ ಲಕ್ಷ್ಮಿಯನ್ನೂ ಕೊಡುವುವು, ರುದ್ರಾಕ್ಷಿಗಳು ಭುಕ್ತಿಯನ್ನೂ ಮುಕ್ತಿಯನ್ನೂ ಕೊಡತಕ್ಕುವುಗಳು ॥೪೩॥

ಸರ್ವಫಲ ಸಾಧಾರಣವಾದ ಜಪದಲ್ಲಿ, ನೂರೆಂಟು ಮಣಿಗಳಿಂದಾಗಲಿ–ಐವತ್ತೆಂಟರಿಂದಾಗಲಿ–ಇಪ್ಪತ್ತೇಳರಿಂದಾಗಲಿ ಜಪಸರವನ್ನು ಮಾಡತಕ್ಕುದು ॥೪೪॥

ಮೋಕ್ಷಾರ್ಥಿಯಾದವನು ಇಪ್ಪತ್ತೈದು ಮಣಿಗಳಿಂದಲೂ, ಧನಾರ್ಥಿಯಾದವನು ಮುವ್ವತ್ತರಿಂದಲೂ ಜಪಸರವನ್ನು ಮಾಡಬೇಕು ನೂರೆಂಟು ಮಣಿಗಳಿಂದ ಜಪಸರವನ್ನು ಮಾಡಿದ ಪಕ್ಷದಲ್ಲಿ, ಜಪಮಾಡತಕ್ಕವನು ಸಕಲವಾದ ಇಷ್ಟಾರ್ಥಗಳನ್ನೂ ಪಡೆಯುವನು ॥೪೫॥

ಅರುವತ್ತನಾಲ್ಕು ಮಣಿಗಳಿಂದ ಮಾಡಿದ ಜಪಮಾಲಿಕೆಯು ಮೋಹನಕರ್ಮದಲ್ಲಿ ಉಪಯುಕ್ತವಾಗುವುದು, ಕ್ಷುದ್ರಫಲಗಳಲ್ಲಿ ಐವತ್ತುನಾಲ್ಕು ಮಣಿಗಳನ್ನು ಉಪಯೋಗಿಸಬೇಕು, ಉಚ್ಚಾಟನಕರ್ಮದಲ್ಲಿ ಐವತ್ತುಮಣಿಗಳನ್ನೂ, ಮಾರಣಕರ್ಮದಲ್ಲಿ ನಾಲ್ವತ್ತನ್ನೂ, ಆಕರ್ಷಣಕರ್ಮದಲ್ಲಿ ಮುವ್ವತ್ತಾರನ್ನೂ, ವಶ್ಯಕರ್ಮದಲ್ಲಿ ಮುವ್ವತ್ತೆರಡನ್ನೂ ಉಪಯೋಗಿಸಬೇಕು ಸಂತಾನಾರ್ಥಿಯಾದವನು ಇಪ್ಪತ್ತೊಂದು ಮಣಿಗಳುಳ್ಳ ಜಪಸರದಲ್ಲಿ ಜಪಮಾಡತಕ್ಕುದು, ವಿದ್ಯಾಕಾಮನಾದವನು ಹದಿನೆಂಟರಿಂದಲೂ, ಕ್ಷೇತ್ರಾರ್ಥಿಯಾದವನು (ಭೂಮಿಯನ್ನು ಅಪೇಕ್ಷಿಸತಕ್ಕವನು) ಹದಿನಾರು ಮಣಿಗಳಿಂದಲೂ, ಶತ್ರುಗಳ ಸ್ತಂಭನಕ್ಕಾಗಿ ಆಭಿಚಾರಿಕಮಾಡತಕ್ಕವನು ಹದಿನೈದುಮಣಿಗಳಿಂದಲೂ ಜಪಮಾಡತಕ್ಕುದು ॥೪೬-೪೯॥

ಅನುಲೋಮವಿಲೋಮಾರ್ಣೈಃ ಮಾತೃಕಾಯಾಃ ಸಬಿನ್ದುಭಿಃ ।
ಸಮೇರುಕೈಃ ಸಾಷ್ಟವರ್ಗೈಃ ಮಾಲಾ ಸ್ಯಾದ್ಯೋಗಿನಾಂ ಶುಭಾ ॥೫೦॥

ಗೋಪುಚ್ಛಸದೃಶಾ ಕಾರ್ಯಾ ಹ್ಯೇಕಾಗ್ರೈವ ಸಮೇರುಕಾ ।
ಮುಖಂ ಮುಖೇನ ಸಂಯೋಜ್ಯ ಪುಚ್ಛಂ ಪುಚ್ಛೇನ ಯೋಜಯೇತ್ ।
ಪ್ರೋತವ್ಯಾ ಸಿತರಕ್ತಾದ್ಯೈಃ ಸೂತ್ರೈಸ್ತತ್ಕರ್ಮಸಿದ್ಧಯೇ ॥೫೧॥

ಜಪೇಮಾಲಾಂ ವಿಧಾಯೇತ್ಥಂ ತತಃ ಸಂಸ್ಕಾರಮಾಚರೇತ್ ।
ಕ್ಷಾಳಯೇತ್ ಪಞ್ಚಗವ್ಯೈಸ್ತಾಂ ಸದ್ಯೋಜಾತೇನ ಸಜ್ಜಲೈಃ ॥೫೨॥

ಚನ್ದನಾಗರುಗನ್ಧಾದ್ಯೈಃ ವಾಮದೇವೇನ ಘರ್ಷಯೇತ್ ।
ಧೂಪಯೇತ್ ತಾಮಘೋರೇಣ ಲಿಮ್ಪೇತ್ ತತ್ಪುರುಷೇಣ ತು ॥೫೩॥

ಮನ್ತ್ರಯೇತ್ ಪಞ್ಚಮೇನೈವ ತಥಾ ಮನ್ತ್ರೇಣ ಮನ್ತ್ರವಿತ್ ॥೫೪॥

ಅಕಾರಾದಿ ಳಕಾರಾಂತವಾದ ಮಾತೃಕಾವರ್ಣಗಳಿಗೆ ಬಿಂದುವನ್ನು ಸೇರಿಸಿ 'ಅಂ-ಆಂ' ಇತ್ಯಾದಿ ರೀತಿಯಾಗಿ ಸಂಖ್ಯೆಮಾಡಿಕೊಂಡು ಜಪಮಾಡುವುದು. ಹೀಗೆ ಮಾಡಿದರೆ, ಅಕಾರಾದಿ ಳಕಾರಾಂತವಾಗಿ ಐವತ್ತಕ್ಷರಗಳಾಗುವುವು ಅವುಗಳನ್ನು ಮತ್ತೆ ವಿಲೋಮ(ತಲೆಕೆಳಗು)ವಾಗಿ ಸಂಖ್ಯೆಮಾಡಿದರೆ ಪುನಃ ಐವತ್ತಾಗುವುವು ಇವೆರಡನ್ನೂ ಸೇರಿಸಿದರೆ ಒಟ್ಟು ನೂರಾಗುವುದು. ಆಮೇಲೆ, ಅ ಕ ಚ ಟ ತ ಪ ಯ ಶ ಗಳೆಂಬ ಅಷ್ಟವರ್ಗಗಳಿಗೆ ಅನುಸ್ವಾರವನ್ನು ಸೇರಿಸಿ ಅಂ ಕಂ ಇತ್ಯಾದಿ ರೀತಿಯಾಗಿ ಸಂಖ್ಯೆಮಾಡಿದರೆ ನೂರೆಂಟಾಗುವುದು ಕ್ಷಂ ಎಂಬುದು ಮೇರುವು, ಇದಕ್ಕೆ ಸಂಖ್ಯೆಯಿಲ್ಲ ಇದೇ ಯೋಗಿಗಳಿಗೆ ಸರ್ವೋತ್ತಮವಾದ ಜಪಮಾಲಿಕೆಯು ॥೫೦॥

ಪದ್ಮಾಕ್ಷಾದಿಗಳಿಂದ ಜಪಮಾಲಿಕೆಯನ್ನು ಮಾಡಿಕೊಳ್ಳತಕ್ಕವರು, ಆ ಮಾಲಿಕೆಯು ಗೋಪುಚ್ಛಾಕಾರವಾಗಿರುವಂತೆಯೂ, ತುದಿಯ ಎರಡುದಾರಗಳೂ ಒಂದೇ ಮಣಿಯಲ್ಲಿ ಸೇರಿ ಒಂದೇ ಅಗ್ರವಾಗುವಂತೆಯೂ ಮಾಡಿ, ತುದಿಯ ಮಣಿಯನ್ನು ಮೇರುಸ್ಥಾನವನ್ನಾಗಿ ಏರ್ಪಡಿಸಬೇಕು, ಮತ್ತು, ಆ ಮಣಿಗಳ ಮುಖಭಾಗವು ಮುಖಕ್ಕೂ ಪೃಷ್ಠಭಾಗವು ಪೃಷ್ಠಕ್ಕೂ ಸೇರುವಂತೆ ಪವಣಿಸಬೇಕು ಮಣಿಗಳನ್ನು, ಬಿಳುಪು ಕೆಂಪು ಮುಂತಾದ ದಾರಗಳಲ್ಲಿ ಪವಣಿಸಬೇಕು. ಹೀಗೆ ಮಾಡಿದರೆ ಕರ್ಮಸಿದ್ಧಿಯಾಗುವುದು ॥೫೧॥

ಈರೀತಿಯಾಗಿ ಜಪಮಾಲಿಕೆಯನ್ನು ಮಾಡಿ, ಬಳಿಕ ಅದಕ್ಕೆ ಸಂಸ್ಕಾರವನ್ನು ಮಾಡಬೇಕು ಅದು ಹೇಗೆಂದರೆ,—ಸದ್ಯೋಜಾತ ಮಂತ್ರದಿಂದ ಅದಕ್ಕೆ ಪಂಚಗವ್ಯಗಳಿಂದಲೂ ಶುದ್ಧೋದಕದಿಂದಲೂ ಸ್ನಾನಮಾಡಿಸಬೇಕು, ವಾಮದೇವ ಮಂತ್ರವನ್ನು ಪರಿಸುತ ಅದನ್ನು ಚಂದನ ಅಗುರು ಮುಂತಾದುವುಗಳೊಡನೆ ಸೇರಿಸಿಕೊಂಡು ಘರ್ಷಣೆ(ತಿಕ್ಕುವುದು)ಮಾಡಬೇಕು, ಅಘೋರ ಮಂತ್ರದಿಂದ ಅದಕ್ಕೆ ಧೂಪ ಹಾಕಬೇಕು, ತತ್ಪುರುಷ ಮಂತ್ರದಿಂದ ಅದಕ್ಕೆ ಲೇಪನಮಾಡಬೇಕು, ಐದನೆಯದಾದ ಈಶಾನ ಮಂತ್ರದಿಂದ ಆ ಜಪಸರವನ್ನು ಅಭಿಮಂತ್ರಿಸಬೇಕು ॥೫೨-೫೪॥

ಯೇನ ಪ್ರತಿಷ್ಠಿತಾ ಮಾಲಾ ತಮೇವ ತು ಮನುಂ ಜಪೇತ್ ।
ಅನ್ಯಮನ್ತ್ರಜಪಂ ವಿದ್ವಾನ್ ನ ಕುರ್ಯಾತ್ ಕರ್ಹಿಚಿನ್ನರಃ ।
ನ ಸ್ಪೃಶೇದ್ವಾಮಹಸ್ತೇನ ಕರಭ್ರಷ್ಟಾಂ ನ ಕಾರಯೇತ್ ॥೫೫॥
ಅಙ್ಗುಷ್ಠಂ ಮೋಕ್ಷದಂ ವಿದ್ಯಾತ್ ತರ್ಜನೀಂ ಶತ್ರುನಾಶಿನೀಮ್ ।
ಮಧ್ಯಮಾ ಧನಸಿದ್ಧ್ಯರ್ಥಾ ಸ್ಯಾತ್ ಶಾನ್ತಿಕರ್ಮಣ್ಯನಾಮಿಕಾ ।
ಕನಿಷ್ಠಾಕರ್ಷಣೇ ಜ್ಞೇಯಾ ಜಪಕರ್ಮಣಿ ಸಿದ್ಧಿದಾ ॥೫೬॥
ಮಾನಸಃ ಸಿದ್ಧಿಕಾಮೈಸ್ತು ಪುಷ್ಟಿಕಾಮೈರುಪಾಂಶುಕಃ ।
ವಾಚಕೋ ಮಾರಣೇ ಜ್ಞೇಯೋ ಜಪಯಜ್ಞಸ್ತ್ರಿಧೋದಿತಃ ॥೫೭॥
ನ ದೋಷೋ ಮಾನಸೇ ಜಪ್ಯೇ ಸರ್ವದೇಶೇಷು ಸರ್ವದಾ ।
ಜಪನಿಷ್ಠೋ ದ್ವಿಜಶ್ರೇಷ್ಠಃ ಸರ್ವಯಜ್ಞಫಲಂ ಭಜೇತ್ ॥೫೮॥
ಜಪೇ ತು ನಿಯತೋ ನಿತ್ಯಂ ತ್ರಿಕಾಲಂ ಪುರುಷೋತ್ತಮಮ್ ।
ಅರ್ಚಯೇತ್ ಪುರುಷೋಽವ್ಯಗ್ರೋ ಯಾವತ್ ಸ್ಯಾಲ್ಲಕ್ಷಮಾದಿತಃ ॥೫೯॥

ಯಾವ ಮಂತ್ರದಿಂದ ಜಪಸರವನ್ನು ಪ್ರತಿಷ್ಠೆಮಾಡುತ್ತಾನೆಯೋ, ಆ ಮಂತ್ರವನ್ನೇ ಅದರಲ್ಲಿ ಜಪಿಸಬೇಕು, ಪ್ರಾಜ್ಞನಾದ ಪುರುಷನು ಇತರವಾದ ಮಂತ್ರವನ್ನು ಅದರಲ್ಲೆಂದಿಗೂ ಜಪಿಸಬಾರದು ಜಪಸರವನ್ನು ಎಡಗೈಯಿಂದ ಮುಟ್ಟಬಾರದು, ಅದು ಕೈಯಿಂದ ಜಾರಿ ಬೀಳದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ॥೫೫॥

ಜಪಮಾಡುವಾಗ ಅಂಗುಷ್ಠವು ಮೋಕ್ಷಪ್ರದವಾಗುವುದು, ತರ್ಜನಿಯು ಶತ್ರುನಾಶಕವು, ಮಧ್ಯಮಾಂಗುಳಿಯು ಧನಪ್ರದವು, ಅನಾಮಿಕೆಯು ಶಾಂತಿಕರ್ಮದಲ್ಲಿ ಉಪಯುಕ್ತವಾದುದು, ಆಕರ್ಷಣದಲ್ಲಿ ಕನಿಷ್ಠಿಕೆಯು ಉಪಯುಕ್ತವೆಂದು ತಿಳಿಯಬೇಕು ಈರೀತಿಯಾಗಿ ಜಪಕಾಲದಲ್ಲಿ ಅಂಗುಳಿಗಳ ಸಿದ್ಧಿಯುಂಟಾಗುವುದು ॥೫೬॥

ಸಿದ್ಧಿಕಾಮರಾದವರು ಮಾನಸವಾಗಿ ಜಪಮಾಡಬೇಕು, ಪುಷ್ಟಿಕಾಮರಾದವರು ಉಪಾಂಶುವಾಗಿ (ಬಾಯಲ್ಲಿ ಉಚ್ಚರಿಸುತ) ಜಪಮಾಡತಕ್ಕುದು, ಮಾರಣಕರ್ಮದಲ್ಲಿ ಬಾಯಲ್ಲಿ ಗಟ್ಟಿಯಾಗಿ ಹೇಳಿಕೊಂಡು ಮಂತ್ರವನ್ನು ಜಪಿಸತಕ್ಕುದು ಹೀಗ ಜಪಯಜ್ಞವು ಮೂರುಬಗೆಯಾಗಿರುವುದು ॥೫೭॥

ಈ ಮೂರುವಿಧವಾದ ಜಪದಲ್ಲಿ, ಮಾನಸಜಪವು ಸರ್ವದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ ನಿರ್ದೋಷವಾದುದೆಂದು ತಿಳಿಯಬೇಕು. ಈ ಜಪದಲ್ಲಿ ತತ್ಪರನಾದ ಬ್ರಾಹ್ಮಣೋತ್ತಮನು, ಸಮಸ್ತ ಯಜ್ಞಗಳನ್ನೂ ಮಾಡಿದ ಫಲವನ್ನು ಹೊಂದುವನು ॥೫೮॥

ಹೀಗೆ ಜಪನಿಷ್ಠನಾದ ಪುರುಷನು, ತ್ರಿಕಾಲದಲ್ಲಿಯೂ ಅವ್ಯಗ್ರನಾಗಿ ಶ್ರೀ ಪುರುಷೋತ್ತಮನನ್ನು ಪೂಜಿಸಬೇಕು, ಈರೀತಿಯಾಗಿ ಮೊದಲಿಂದ ಒಂದುಲಕ್ಷವಾಗುವವರೆಗೂ ಜಪಮಾಡುತಕ್ಕುದು ॥೫೯॥

ತರ್ಪಯೇಚ್ಚ ವಿಶೇಷೇಣ ದಶಾಂಶಂ ಶುದ್ಧವಾರಿಣಾ ।
ಪುಷ್ಪಾಕ್ಷತಾದಿಯುಕ್ತೇನ ಜಲೇ ಸಂಪೂಜ್ಯ ಪೂರ್ವವತ್ ॥೬೦॥

ಕೃತ್ವಾ ಷಡಙ್ಗಂ ಧೃತ್ವಾಥ ಮೂಲಮನ್ತ್ರೇಣ ಮನ್ತ್ರವಿತ್ ।
ಶ್ರೀರಾಮಪಾದುಕಾಂ ತರ್ಪಯಾಮೀತ್ಯುಚ್ಚಾರ್ಯ ತರ್ಪಯೇತ್ ॥೬೧॥

ಸಮಾಪ್ಯ ತರ್ಪಣಂ ಸ್ವಸ್ಥಃ ಗೃಹ್ಯತಃ ಸ್ಥಾಪಿತೇನಲೇ ।
ರಾಮಂ ಧ್ಯಾತ್ವಾ ಸಮಭ್ಯರ್ಚ್ಯ ತಜ್ಜಿಹ್ವಾಯಾಂ ಹುನೇದ್ಧವಿಃ ॥೬೨॥

ತತೋ ಬಿಲ್ವದಳೈಃ ಪುಷ್ಪೈಃ ಪತ್ರೈರಪಿ ಹುತಾಶನೇ ।
ಪೂರ್ವೋಕ್ತೇನ ಪ್ರಕಾರೇಣ ರಾಮಮಾವಾಹ್ಯ ಪೂಜಯೇತ್ ॥೬೩॥

ಮಧುರತ್ರಯಸಂಯುಕ್ತೈಃ ಪದ್ಮೈರ್ವಾ ಪಾಯಸೇನ ವಾ ।
ತಿಲೈರ್ವಾನ್ಯತರೈರೇಷಾಂ ಜುಹುಯಾನ್ಮೂಲಮನ್ತ್ರತಃ ॥೬೪॥

ಹುನೇತ್ ಪ್ರಧಾನಹೋಮಾನ್ತೇ ತ್ವಗ್ನ್ಯಾವರಣದೇವತಾಃ ।
ಹೋಮಶೇಷಂ ಸಮಾಪ್ಯಾಥ ಪಾರ್ಷದೇಭ್ಯೋ ಬಲಿಂ ಹರೇತ್ ॥೬೫॥

ಆ ಬಳಿಕ, ಜಲದಲ್ಲಿ ಶ್ರೀರಾಮಚಂದ್ರನನ್ನು ಪೂಜಿಸಿ, ಗಂಧ ಪುಷ್ಪ ಅಕ್ಷತೆ ಮೊದಲಾದುವುಗಳಿಂದ ಮಿಶ್ರಿತವಾದ ಶುದ್ಧಜಲದಿಂದ, ಜಪದಲ್ಲಿ ಹತ್ತನೆಯೊಂದು ಭಾಗದಷ್ಟು ತರ್ಪಣಮಾಡ ತಕ್ಕುದು ॥೬೦॥

ತರ್ಪಣಮಾಡುವಾಗ, ಮೊದಲು ಷಡಂಗನ್ಯಾಸಮಾಡಿ, ಬಳಿಕ ಮೂಲಮಂತ್ರದಿಂದ ಧಾರಣೆಮಾಡಿ, ಆಮೇಲೆ 'ಶ್ರೀರಾಮಪಾದುಕಾಂ ತರ್ಪಯಾಮಿ' ಎಂದು ಹೇಳಿಕೊಂಡು ತರ್ಪಣಮಾಡತಕ್ಕುದು ॥೬೧॥

ಹೀಗೆ ತರ್ಪಣವನ್ನು ಮುಗಿಯಿಸಿಕೊಂಡು, ಸ್ವಸ್ಥಮಾನಸನಾಗಿ, ಸ್ವಗೃಹ್ಯಸೂತ್ರೋಕ್ತ ವಿಧಿಯಿಂದ ಅಗ್ನಿಯನ್ನು ಸ್ಥಾಪನೆಮಾಡಿ, ಅದರಲ್ಲಿ ಶ್ರೀರಾಮನನ್ನು ಧ್ಯಾನಿಸಿ, ಆ ಅಗ್ನಿಯ ಜಿಹ್ವೆಯಲ್ಲಿ ಹವಿಸ್ಸನ್ನು ಹೋಮಮಾಡಬೇಕು ॥೬೨॥

ಆ ಬಳಿಕ, ಪೂರ್ವೋಕ್ತಪ್ರಕಾರವಾಗಿ ಅಗ್ನಿಯಲ್ಲಿ ಶ್ರೀರಾಮನನ್ನು ಆವಾಹನೆಮಾಡಿ, ಬಿಲ್ವ ದಳಗಳಿಂದಕೂ ಪುಷ್ಪಗಳಿಂದಲೂ ಪೂಜಿಸತಕ್ಕುದು ॥೬೩॥

ಕ್ಷೀರ ಮಧು ಶರ್ಕರೆಗಳಿಂದ ಮಿಶ್ರಿತವಾದ ಪದ್ಮಗಳಿಂದಾಗಲಿ, ಪಾಯಸದಿಂದಾಗಲಿ, ತಿಲಗಳಿಂದಾಗಲಿ, ಇವುಗಳಲ್ಲಿ ಯಾವುದರಿಂದಲಾದರೂ-ಶ್ರೀರಾಮಮೂಲಮಂತ್ರದಿಂದ ಹೋಮ ಮಾಡತಕ್ಕುದು ॥೬೪॥

ಹೀಗೆ ಪ್ರಧಾನಹೋಮವಾದಮೇಲೆ, ಆವರಣದೇವತೆಗಳಿಗೆ ಹೋಮವನ್ನೂ ಅಗ್ನಿಸ್ವಿಷ್ಟ ಕೃದ್ಧೋಮವನ್ನೂ ಮಾಡತಕ್ಕುದು, ಆಮೇಲೆ ಹೋಮಶೇಷವನ್ನು ಮುಗಿಯಿಸಿ, ಪಾರಿಷದ್ಯರಿಗೆಲ್ಲ ಬಲಿಯನ್ನು ಹಾಕಬೇಕು ॥೬೫॥

ಹುತ್ವಾ ವಾ ತರ್ಪಯಿತ್ವಾ ವಾ ಸಂಪೂಜ್ಯ ಪ್ರತಿಮಾದಿಷ್ಕೇ ।
ನಿರ್ಯಾಣಮುದ್ರಯಾ ಸ್ವಾನ್ತೇ ರಾಮಂ ಸಂಸ್ಥಾಪಯೇತ್ ಸುಧೀಃ ॥೬೬॥

ಪೂಜಾ ತ್ರೈಕಾಲಿಕೀ ನಿತ್ಯಂ ಜಪಸ್ತರ್ಪಣಮೇವ ಚ ।
ಹೋಮೋ ಬ್ರಾಹ್ಮಣಭುಕ್ತಿಶ್ಚ ಪುರಶ್ಚರಣಮುಚ್ಯತೇ ॥೬೭॥

ನಿಷ್ಕಾಮಾನಾಮನೇನೈವ ಸಾಕ್ಷಾತ್ಕಾರೋ ಭವೇದಿಹ ।
ಅಥ ಸಿದ್ಧಿಃ ಸಕಾಮಾನಾಂ ಸರ್ವಂ ತನ್ನಿಷ್ಫಲಂ ಭವೇತ್ ॥೬೮॥

ಪಞ್ಚಾಙ್ಗಮೇತತ್ ಕುರ್ವೀತ ಯಃ ಪುರಶ್ಚರಣಂ ಬುಧಃ ।
ಸ ವೈ ವಿಜಯತೇ ಲೋಕೇ ವಿದ್ಯೈಶ್ವರ್ಯಸುತಾದಿಭಿಃ ॥೬೯॥

ಆದಾವನ್ತೇ ಚ ಮಧ್ಯೇ ಚ ಬ್ರಾಹ್ಮಣಾಂ ಭೋಜಯೇದ್ಬಹೂನ್ ।
ದಿನೇದಿನೇ ಯಥಾಶಕ್ತಿ ವ್ಯಙ್ಗಸಾಙ್ಗತ್ವಸಿದ್ಧಯೇ ॥೭೦॥

ಸಂಸಾರೇ ದುಃಖಬಹುಲೇ ಯಇಚ್ಛೇತ್ ಸುಖಮಾತ್ಮನಃ ।
ಪಞ್ಚಾಙ್ಗೋಪಾಸನೇನೈವ ಮನ್ತ್ರಜಾಪೀ ಸುಖಂ ವ್ರಜೇತ್ ॥೭೧॥

ಹೋಮಮಾಡಿದಾಗಲೂ, ತರ್ಪಣಮಾಡಿದಾಗಲೂ, ಪ್ರತಿಮೆಗಳಲ್ಲಿ ಪೂಜೆಮಾಡಿದಾಗಲೂ, ನಿರ್ಯಾಣಮುದ್ರೆಯನ್ನು ತೋರಿಸಿ ಶ್ರೀರಾಮನನ್ನು ತನ್ನ ಹೃದಯದಲ್ಲಿ ಸ್ಥಾಪನೆಮಾಡಿಕೊಳ್ಳಬೇಕು ॥೬೬॥

ತ್ರಿಕಾಲಪೂಜೆ, ಜಪ, ತರ್ಪಣ, ಹೋಮ, ಬ್ರಾಹ್ಮಣಭೋಜನ, ಇವಿಷ್ಟೂ ಸೇರಿ ಪುರಶ್ಚರಣವೆಂದು ಹೇಳಲ್ಪಡುವುದು ॥೬೭॥

ನಿಷ್ಕಾಮರಾಗಿ ಜಪಮಾಡತಕ್ಕವರಿಗೆ ಇದರಿಂದಲೇ ಆತ್ಮಸಾಕ್ಷಾತ್ಕಾರವಾಗುವುದು, ಕಾಮನೆಯಿಂದ ಜಪಮಾಡಿದರೋ, ಅವರಿಗೆ ಇಷ್ಟಾರ್ಥಸಿದ್ಧಿಯಾಗುವುದು, ಆದರೆ, ಆ ಪುರಶ್ಚರಣೆಯೆಲ್ಲವೂ ವ್ಯರ್ಥವಾಗುವುದು ॥೬೮॥

ಯಾವ ಪ್ರಾಜ್ಞನು-ಪೂಜಾಜಪಾದಿ ಪಂಚಾಂಗಯುಕ್ತವಾದ ಪುರಶ್ಚರಣೆಯನ್ನು ಮಾಡುವನೋ, ಅವನು ಈ ಲೋಕದಲ್ಲೆಲ್ಲ ವಿದ್ಯೆ ಐಶ್ವರ್ಯ ಸಂತಾನ ಮುಂತಾದುವುಗಳಿಂದ ಸರ್ವೋತ್ಕೃಷ್ಟನೆನಿಸುವನು ॥೬೯॥

ಪ್ರತಿದಿನವೂ ಮಾಡುವ ಪುರಶ್ಚರಣಮಧ್ಯದಲ್ಲಿ ಯಾವುದಾದರೊಂದು ಅಂಗವು ಅಜ್ಞಾತವಾಗಿ ಸ್ವಲ್ಪ ನ್ಯೂನವಾದರೆ-ಅದು ಪೂರ್ಣವಾಗುವುದಕ್ಕಾಗಿ ಆದಿಯಲ್ಲೂ ಮಧ್ಯದಲ್ಲೂ ಅಂತದಲ್ಲೂ, ಯಥಾಶಕ್ತಿಯಾಗಿ ಬ್ರಾಹ್ಮಣಭೋಜನವನ್ನು ಮಾಡಿಸಬೇಕು ॥೭೦॥

ಕೇವಲ ದುಃಖಬಹುಳವಾದ ಈ ಸಂಸಾರದಲ್ಲಿ ಯಾವನು ತನಗೆ ಸುಖವನ್ನು ಬಯಸುವನೋ, ಅವನು ಈ ಪಂಚಾಂಗಯುಕ್ತವಾದ ಪುರಶ್ಚರಣೆಯಿಂದಲೇ ಸುಖವನ್ನು ಹೊಂದುವನು ॥

ಯದಿ ಹೋಮೇ ನ ಶಕ್ತಿಃ ಸ್ಯಾತ್ ಪೂಜಾಯಾಂ ತರ್ಪಣೇ ತಥಾ ।
ತಾವತ್ಸಂಖ್ಯಜಪಾದ್ವಿಪ್ರಭೋಜನಾದ್ವಾ ಸಮಗ್ರತಾ ॥೨೦॥

ಯದ್ಯದಙ್ಗಂ ವಿಹೀಯೇತ ತತ್ಸಙ್ಖ್ಯಾದ್ವಿಗುಣೋ ಜಪಃ ।
ಕರ್ತವ್ಯಃ ಸಾಙ್ಗಸಿದ್ಧ್ಯರ್ಥಂ ತದಶಕ್ತೇನ ಭಕ್ತಿತಃ ॥೨೧॥

ಏವಂ ಕೃತೇ ಮನ್ತ್ರಸಿದ್ಧಿಃ ಭವಿಷ್ಯತಿ ನ ಸಂಶಯಃ ।
ಸಿದ್ಧೇಽಸ್ಮಿನ್ ಮನ್ತ್ರರಾಜೇತ್ರ ಪ್ರಯೋಗಾಃ ಸನ್ತಿ ಭೂರಿಶಃ ॥೨೪॥

ಕಿಂ ತು ಪ್ರಯೋಗಕರ್ತೃಣಾಂ ಪರಲೋಕೋ ನ ವಿದ್ಯತೇ ।
ಪ್ರಯೋಗಸಿದ್ಧಿರೇವೈಷಾಂ ಫಲಮನ್ಯನ್ನ ವಿದ್ಯತೇ ॥೨೫॥

ನಿಷ್ಕಾಮಾನಾಂ ಚ ಭಕ್ತಾನಾಂ ಜಪಹೋಮಾದಿಕರ್ಮಸು ।
ಮುಕ್ತಿರೇವ ಫಲಂ ತೇಷಾಂ ಇಹ ಕಿಂಚಿನ್ನ ವಿದ್ಯತೇ ॥೨೬॥

ವಿದ್ವಾ೯ ಬ್ರಹ್ಮಾಸ್ತ್ರಮಾದಾಯ ಮಶಕಾದೌ ನ ಮೋಚಯೇತ್ ।
ನಾಯಂ ಮುಕ್ತಿಪ್ರದೋ ಮನ್ತ್ರೋ ಮಾರಣಾದ್ಯೇ ನಿಯುಜ್ಯತಾಮ್ ॥೨೭॥

ಹೀಗೆ ವಿಹಿತವಾದ ಹೋಮವನ್ನೂ ಪೂಜೆಯನ್ನೂ ತರ್ಪಣವನ್ನೂ ಮಾಡುವುದಕ್ಕೆ ಶಕ್ತಿಯಿಲ್ಲದಪಕ್ಷದಲ್ಲಿ, ಮುಂದೆ ಹೇಳುವಷ್ಟು ಸಂಖ್ಯೆಯಾಗುವಂತೆ ಜಪವನ್ನಾಗಲಿ–ಬ್ರಾಹ್ಮಣಭೋಜನವನ್ನಾಗಲಿ ಮಾಡಿದರೆ–ಪುರಶ್ಚರಣೆಯು ಸಾಂಗವಾಗುವುದು ॥೨೦॥

ಯಾವಯಾವ ಅಂಗವು ಹೀನವಾಗುವುದೋ, ಅದದು ಪರಿಪೂರ್ಣವಾಗುವುದಕ್ಕಾಗಿ, ಅಂಗಗಳನ್ನು ಕ್ರಮವಾಗಿ ಪೂರ್ತಿಮಾಡಲು ಶಕ್ತಿಯಿಲ್ಲದವನು, ಭಕ್ತಿಯಿಂದ ಆ ಅಂಗಸಂಖ್ಯೆಗೆರಡರಷ್ಟು ಜಪವನ್ನು ಮಾಡತಕ್ಕದು ॥೨೧॥

ಹೀಗೆ ಮಾಡಿದರೆ ಮಂತ್ರವು ಸಿದ್ಧಿಸುವುದು , ಇದರಲ್ಲಿ ಸಂಶಯವಿಲ್ಲ ಈ ಮಂತ್ರರಾಜವು ಸಿದ್ಧಿಸಲಾಗಿ, ಇದರಲ್ಲಿಯೇ ವಶ್ಯ ಆಕರ್ಷಣ ಮುಂತಾದ ಪ್ರಯೋಗಗಳು ಅನೇಕವಾಗಿ ಉಂಟಾಗುವುವು ಆದರೆ, ಈ ಪ್ರಯೋಗಗಳನ್ನು ಮಾಡತಕ್ಕವರಿಗೆ ಪರಲೋಕವು ತಪ್ಪಿಹೋಗುವುದು ಇವರಿಗೆ ಈ ಪ್ರಯೋಗಸಿದ್ಧಿಯೊಂದೇ ಹೊರತು ಮತ್ತಾವ ಫಲವೂ ಇಲ್ಲ ॥೨೪–೨೫॥

ನಿಷ್ಕಾಮರಾಗಿ ಪುರಶ್ಚರಣೆಮಾಡತಕ್ಕ ಭಕ್ತರಿಗೆ, ಜಪ ಹೋಮ ಮುಂತಾದ ಕರ್ಮಗಳಿಂದ ಮುಕ್ತಿಯೇ ಸಿದ್ಧಿಸುವುದು , ಅವರಿಗ ಈ ಲೋಕದಲ್ಲಿ ಯಾವುದೊಂದು ಫಲವೂ ಇಲ್ಲ ॥೨೬॥

ಲೋಕದಲ್ಲಿ ಪ್ರಾಜ್ಞನಾದವನು ಬ್ರಹ್ಮಾಸ್ತ್ರವನ್ನು ಸಂಪಾದಿಸಿಕೊಂಡು ಸೊಳ್ಳೆ ಮುಂತಾದುವುಗಳ ಮೇಲೆ ಬಿಡಲಾರನಲ್ಲವೆ ! ಇದರಂತೆಯೇ, ಮುಕ್ತಿಯನ್ನು ಕೊಡತಕ್ಕುದಾಗಿರುವ ಈ ಶ್ರೀ ರಾಮಮಂತ್ರವನ್ನು ಮಾರಣಾದಿಪ್ರಯೋಗಗಳಲ್ಲಿ ವಿನಿಯೋಗಿಸಬಾರದು ॥೨೭॥

ಪಞ್ಚಾಙ್ಗೋಪಾಸನಂ ಭಕ್ತ್ಯಾ ಪುರಶ್ಚರಣಮುಚ್ಯತೇ ।
ಏತದ್ಧಿ ವಿದುಷಾಂ ಶ್ರೇಷ್ಠಂ ಸಂಸಾರಚ್ಛಿದಕಾರಣಮ್ ॥೬೪॥
ನಾನೇನ ಸದೃಶೋ ಧರ್ಮೋ ನಾನೇನ ಸದೃಶಂ ತಪಃ ।
ನಾನೇನ ಸದೃಶಂ ತೀರ್ಥಂ ಸರ್ವಪಾಪವಿನಾಶನಮ್ ॥೬೫॥
ನಾನೇನ ಸದೃಶಂ ದಾನಂ ನಾನೇನ ಸದೃಶಂ ವ್ರತಮ್ ।
ನಾನೇನ ಸದೃಶಂ ಕಿಂಚಿತ್ ಇಷ್ಟಾರ್ಥಸ್ಯ ಗಿರೀನ್ದ್ರಜೇ ॥೬೬॥
ಏತತ್ ತೇ ಕಥಿತಂ ಸರ್ವಂ ಪುರಶ್ಚರ್ಯಾದಿಕಂ ಮನೋಃ ।
ತೇನೈವ ಭುಕ್ತಿಂ ಮುಕ್ತಿಂ ಚ ವಿನ್ದತೇ ನಾತ್ರ ಸಂಶಯಃ ॥೬೭॥
ಕೃತಮೇವಂ ಕ್ರಿಯಾರೂಪೋಪಾಸನಂ ಜೇನ್ಮುಮುಕ್ಷುಣಾ ।
ತದ್ಧಿ ಜ್ಞಾನಂ ಪ್ರತಿ ಭವೇತ್ ಬಹಿರಙ್ಗಾಖ್ಯಸಾಧನಮ್ ॥೬೮॥
ತದೇವ ಶ್ರವಣಾದೀನಾಂ ಅನ್ತರಙ್ಗಾಖ್ಯಸಾಧನಮ್ ।
ಏವಂಸಾಧನಯುಕ್ತಸ್ಯ ತತ್ತ್ವಜ್ಞಾನಂ ಪ್ರಸಿಧ್ಯತಿ ॥೬೯॥
ಜ್ಞಾನೇ ಸತಿ ನ ಕರ್ಮಾಣಿ ನ ಕ್ರಿಯೋಪಾಸನಂ ಶುಭೇ ।
ಕರ್ತವ್ಯಂ ಕಿಂ ತು ತತ್ತ್ವಜ್ಞೈಃ ಭಾವೋಪಾಸನಮನ್ವಹಮ್ ॥೭೪॥

ಭಕ್ತಿಯಿಂದ ಪೂರ್ವೋಕ್ತವಾದ ಪಂಚಾಂಗಗಳ ಉಪಾಸನೆಯೇ ಪುರಶ್ಚರಣವೆಂದು ಹೇಳಲ್ಪಡುವುದು ಜ್ಞಾನಿಗಳಿಗೆ ಸಂಸಾರಚ್ಛೇದಕ್ಕೆ ಇದೇ ಸರ್ವೋತ್ತಮವಾದ ಸಾಧನವಾಗುವುದು ॥

ಇದಕ್ಕೆ ಸದೃಶವಾದ ಧರ್ಮವಿಲ್ಲ, ಇದಕ್ಕ ಸದೃಶವಾದ ತಪಸ್ಸಿಲ್ಲ, ಇದಕ್ಕೆ ಸದೃಶವಾಗಿ ಸರ್ವಪಾಪ ನಿವಾರಕವಾದ ತೀರ್ಥವೂ ಇಲ್ಲ ॥೬೪॥

ಇದಕ್ಕೆ ಸರಿಯಾದ ದಾನವೂ ಇಲ್ಲ, ಇದಕ್ಕೆ ಸಮವಾದ ವ್ರತವೂ ಇಲ್ಲ, ಎಲೌ ಪಾರ್ವತಿ! ಮುಖ್ಯವಾಗಿ ಇಷ್ಟಾರ್ಥಸಿದ್ಧಿಗೆ ಇದಕ್ಕೆ ಸದೃಶವಾದ ಸಾಧನವಾವುದೂ ಇಲ್ಲವೇ ಇಲ್ಲ ॥೬೦॥

ಇದೋ ಈರೀತಿಯಾಗಿ ಶ್ರೀರಾಮಮಂತ್ರದ ಪುರಶ್ಚರಣ ಕ್ರಮ ಮುಂತಾದುದೆಲ್ಲವನ್ನೂ ನಿನಗೆ ಹೇಳಿರುವೆನು. ಇದರಿಂದಲೇ ಪುರುಷನು ಭುಕ್ತಿಮುಕ್ತಿಗಳೆರಡನ್ನೂ ಹೊಂದುವನು, ಇದರಲ್ಲಿ ಸಂಶಯವಿಲ್ಲ ॥೬೧॥

ಮುಮುಕ್ಷುವಾದವನು ಈರೀತಿಯಾಗಿ ಕ್ರಿಯೋಪಾಸನೆಯನ್ನು ಮಾಡಿದರೆ, ಜ್ಞಾನಕ್ಕೆ ಅದೇ ಬಹಿರಂಗವೆಂಬ ಸಾಧನವಾಗುವುದು, ಆಮೇಲೆ ಅದೇ–ಕ್ರಮೇಣ ಶ್ರವಣ ಮನನ ನಿದಿಧ್ಯಾಸನಗಳಿಗೆ ಅಂತರಂಗಸಾಧನವಾಗಿಯೂ ಆಗುವುದು. ಹೀಗೆ ಸಾಧನಯುಕ್ತನಾದವನಿಗೆ ತತ್ವಜ್ಞಾನವು ತಾನಾಗಿಯೇ ಸಿದ್ಧಿಸುವುದು ॥೬೨–೬೩॥

ಎಲೌ ದೇವಿ! ಜ್ಞಾನವು ಸಿದ್ಧಿಸಿದ ಬಳಿಕ, ಕರ್ಮಗಳನ್ನೂ ಮಾಡಬೇಕಾಗಿಲ್ಲ, ಕ್ರಿಯೋಪಾಸನೆಯನ್ನೂ ಮಾಡಬೇಕಾಗಿಲ್ಲ. ಮತ್ತೇನೆಂದರೆ, ತತ್ವಜ್ಞರಾದವರು ನಿರಂತರವೂ ಭಾವನೋಪಾಸನೆಯನ್ನು ಮಾಡುತಿರಬೇಕು ॥೬೪॥

ಕೃತಂ ಭಾವೋಪಾಸನಂ ತತ್ ದೇಹಮೋಹಾದಿವಿಘ್ನತಃ ।
ಬೋಧಂ ರಕ್ಷತಿ ಸದ್ವೃಕ್ಷಂ ಕಣ್ಟಕಾವರಣಾದಿವತ್ ॥೧೫॥
ತಸ್ಮಾದ್ಭಾಮಿನಿ ರಾಮಸ್ಯ ಭಾವೋಪಾಸನಮನ್ವಹಮ್ ।
ಕಾರ್ಯಂ ಜ್ಞಾನಿಭಿರಪ್ಯಾರ್ಯೈ ತೇನ ಮುಚ್ಯೇತ ಬನ್ಧನಾತ್ ॥೧೬॥

ಇತಿ ಶ್ರೀಮತ್ಸುನ್ದರಕಾಣ್ಡೇ ರಾಮಮನ್ತ್ರಪುರಶ್ಚರಣರೂಪ
ಕ್ರಿಯೋಪಾಸನಕಥನಂ ನಾಮ ತ್ರಯೋದಶಃ ಸರ್ಗಃ.



ಹೀಗೆ ಮಾಡಲ್ಪಡುವ ಭಾವನೋಪಾಸನೆಯು, ಉತ್ತಮವಾದ ರಸಾಲವೃಕ್ಷವನ್ನು ಮುಳ್ಳಿನಬೇಲಿಯು ರಕ್ಷಿಸುವಂತೆ, ದೇಹಮೋಹಾದಿ ವಿಘ್ನಗಳನ್ನು ತಪ್ಪಿಸಿ–ಜ್ಞಾನವನ್ನು ರಕ್ಷಿಸುವುದು ॥೧೫॥

ಹೀಗಿರುವಕಾರಣ, ಎಲೌ ಪ್ರಿಯ ! ಜ್ಞಾನಿಗಳೂಕೂಡ ನಿರಂತರವಾಗಿ ಭಾವೋಪಾಸನೆಯನ್ನು ಮಾಡುತಿರಬೇಕು ಈ ಭಾವೋಪಾಸನಾಮಹಿಮೆಯಿಂದ, ಆತ್ಮನು ಸಂಸಾರಬಂಧನದ ದೆಸೆಯಿಂದ ಮುಕ್ತನಾಗುವನು ॥೧೬॥

ಇದು ಸುಂದರಕಾಂಡದಲ್ಲಿ ರಾಮಮಂತ್ರ ಪುರಶ್ಚರಣರೂಪ ಕ್ರಿಯೋಪಾಸನ
ನಿರೂಪಣವೆಂಬ ಹದಿಮೂರನೆಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಚತುರ್ದಶಃ ಸರ್ಗಃ

ಶ್ರೀಪಾರ್ವತ್ಯುವಾಚ

ತ್ವತ್ತಃ ಶ್ರುತಾ ಮಹಾದೇವ ಕ್ರಿಯೋಪಾಸ್ತಿರ್ಹರೇಃ ಸ್ಫುಟಮ್ ।
ಅಧುನಾ ಭಾವನೋಪಾಸ್ತಿಂ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥
ಸಂಸಾರಶುಷ್ಕವಿಪಿನೇ ತಾಪತ್ರಯುದವಾಗ್ನಿನಾ ।
ತಪ್ತೋ ಜೀವೋವಿಭುಃ ಕೋ ವಾ ನೇಚ್ಛೇದ್ರಾಮಕಥಾಸುಧಾಮ್ ॥೨॥

ಶ್ರೀಶಿವಉವಾಚ

ನಾತಿಸಕ್ತೋ ನ ಚಾಸಕ್ತೋ ಯದಾ ಸ್ಯಾತ್ ಸಂಸೃತೌ ನರಃ ।
ತದಾ ಪ್ರೋಕ್ತಾ ಕ್ರಿಯೋಪಾಸ್ತಿಃ ನಿಸ್ಪೃಹಸ್ಯೈವ ಭಾವನಾ ॥೩॥
ಜ್ಞಾನಸ್ಯ ಭಾವನೋಪಾಸ್ತೇಃ ನ ಭೇದೋಲ್ಪೋಪಿ ಕಿಂ ತು ತತ್ ।
ಪೂರ್ಣರೂಪೇಣ ರಾಮಸ್ಯ ಭಾವನಾಮಾತ್ರಮಜ್ಞನೇ ॥೪॥

ಸುಂದರಕಾಂಡದಲ್ಲಿ ಹದಿನಾಲ್ಕನೆಯ ಸರ್ಗವು

ಶ್ರೀ ಪಾರ್ವತಿಯು ಪರಮೇಶ್ವರನನ್ನು ಪ್ರಾರ್ಥಿಸುವಳು —

ಎಲೈ ಮಹಾದೇವನೆ! ನಾನು ತಮ್ಮ ಮುಖದಿಂದ ಶ್ರೀಹರಿಯ ಕ್ರಿಯೋಪಾಸನಾವಿಧಿಯನ್ನು ಕೇಳಿ ತಿಳಿದುಕೊಂಡೆನು, ಈಗ ಭಾವನೋಪಾಸನೆಯ ವಿಧಿಯನ್ನು ಯಥಾವತ್ತಾಗಿ ಕೇಳಬೇಕೆಂದು ಇಚ್ಛಿಸುತಿರುವೆನು ॥೧॥

ಈ ಸಂಸಾರವೆಂಬ ಶುಷ್ಕವಾದ ಅರಣ್ಯದಲ್ಲಿ ತಾಪತ್ರಯವೆಂಬ ಕಾಡುಗಿಚ್ಚಿನಿಂದ ಸಂತಪ್ತನಾದ ಯಾವನುತಾನೆ, ತಾನು ಬದುಕುವುದಕ್ಕಾಗಿ ಶ್ರೀರಾಮನ ಕಥೆಯೆಂಬ ಅಮೃತವನ್ನು ಅಪೇಕ್ಷಿಸದಿರುವನು? ॥೨॥

ಶ್ರೀ ಪರಮೇಶ್ವರನು ಉತ್ತರಹೇಳುವನು —

ಎಲೌ ಪ್ರಿಯ! ಯಾವ ಪುರುಷನು ಸಂಸಾರದಲ್ಲಿ ಅತ್ಯಂತವಾಗಿ ಸಕ್ತನಲ್ಲದಯೂ ಸಂಪೂರ್ಣವಾಗಿ ಅದನ್ನು ಬಿಡದೆಯೂ ಇರುವನೋ, ಅವನಿಗೇ ಕ್ರಿಯೋಪಾಸನೆಯು ವಿಹಿತವಾಗಿರುವುದು, ಭಾವನೋಪಾಸನೆಯಾದರೋ, ಸುತರಾಂ ಸಂಸಾರಾಸಕ್ತಿಶೂನ್ಯನಾದವನಿಗ ಮಾತ್ರವೇ ವಿಹಿತವಾದುದು ॥೩॥

ಜ್ಞಾನವೆಂಬುದಕ್ಕೂ ಭಾವನೋಪಾಸನೆಯಂಬುದಕ್ಕೂ ಸ್ವಲ್ಪವೂ ಭೇದವೇ ಇಲ್ಲ, ಆದರೆ, ಎಲೌ ಪಾರ್ವತಿ! ಪರಿಪೂರ್ಣರೂಪದಿಂದ ಶ್ರೀರಾಮನನ್ನು ಧ್ಯಾನಿಸುವುದೇ ಭಾವನೋಪಾಸನೆಯನ್ನಿಸುವುದು ॥೪॥

ನ ಭಾವ್ಯೋಪಾಸನಂ ಭದ್ರೇ ಶ್ರವಣಾದಿತ್ರಯಂ ವಿನಾ ।
ನವನೀತಮಿವ ಕ್ಷೀರತಾಪದಧ್ಯಾದಿಕಂ ವಿನಾ ॥೫॥
ವದನ್ತಿ ಸರ್ವೇ ವೇದಾನ್ತಾಃ ಸ್ವಾತ್ಮಾನಮಿಹ ನಿಶ್ಚಯಃ ।
ತತ್ ಕುರ್ಯಾಚ್ಛ್ರವಣಂ ತೇನ ಸ್ವಾತ್ಮಸಂಭಾವನಾಕ್ಷಯಃ ॥೬॥
ಶ್ರವಣಾನ್ನಿಶ್ಚಿತಂ ವಸ್ತು ಚಿನ್ತನಂ ಯುಕ್ತಿಭಿಃ ಸದಾ ।
ಮನನಂ ತೇನ ದೇಹಾತ್ಮಧೀಜಗತ್ಸತ್ಯತಾಕ್ಷಯಃ ॥೭॥
ರಾಮೋಽಹಮಿತಿ ಧೀವೃತ್ತಿಧಾರಾ ಧ್ಯಾನಮಿತೀರ್ಯತೇ ।
ವೃತ್ತ್ಯನ್ತರಾನನ್ತರಿತಂ ತೇನ ಸ್ಯಾದ್ವಾಸನಾಕ್ಷಯಃ ॥೮॥
ಏವಂ ಸಂಸಿದ್ಧಬೋಧಸ್ಯ ರಾಮಭಕ್ತಸ್ಯ ಭಾಮಿನಿ ।
ಭಾವರೂಪೋಪಾಸನಂ ಯತ್ ಪ್ರೋಕ್ತಂ ವಕ್ಷ್ಯೇ ನಿಬೋಧ ತತ್ ॥೯॥
ಹಿತ್ವಾ ದೇಹಾತ್ಮತಾಭಾವಂ ಚಿದಾತ್ಮತ್ವಾಭಿಮಾನತಃ ।
ದ್ವಿಜತ್ವಮಾದೌ ಪ್ರಾಪ್ತವ್ಯಂ ಗುರುವಾಕ್ಯೈರ್ಮುಮುಕ್ಷುಣಾ ॥೧೦॥

ಎಲೌ ಭದ್ರೆ! ಹಾಲುಕಾಯಿಸುವುದು ಮೊಸರುಕಡೆಯುವುದು ಮುಂತಾದುದನ್ನೆಲ್ಲ ಬಿಟ್ಟರೆ ಬೆಣ್ಣೆ ಹೇಗೆ ಸಿಕ್ಕುವುದಿಲ್ಲವೋ, ಹಾಗೆ ಶ್ರವಣ ಮನನ ನಿದಿಧ್ಯಾಸನಗಳನ್ನು ಬಿಟ್ಟರೆ ಭಾವನೋಪಾಸನೆ ಲಭ್ಯವಾಗುವುದಿಲ್ಲ ॥೫॥

ಸಮಸ್ತ ವೇದಾಂತವಚನಗಳೂ ಆತ್ಮಸ್ವರೂಪವನ್ನೇ ಬೋಧಿಸುತ್ತಿರುವುವು, ಇದು ನಿಶ್ಚಯವು, ಅದುಕಾರಣ, ಪ್ರಥಮತಃ ವೇದಾಂತವಾಕ್ಯಶ್ರವಣಮಾಡಬೇಕು ಇದರಿಂದ, ಆತ್ಮನು ಇಲ್ಲವೆಂಬ ಭಾವನೆ ಕ್ಷಯಿಸುವುದು ॥೬॥

ಹೀಗೆ ಶ್ರವಣದಿಂದ ನಿಶ್ಚಿತವಾದ ಅರ್ಥವನ್ನು ಸರ್ವದಾ ಯುಕ್ತಿ (ಕಾರ್ಯಕಾರಣಭಾವ ವಿವೇಚನ)ಗಳಿಂದ ಚಿಂತಿಸುತ್ತಿರುವುದೇ ಮನನವೆನ್ನಿಸುವುದು, ಇದರಿಂದ, ದೇಹವೇ ಆತ್ಮವೆಂಬ ಭಾವನೆಯೂ–ಜಗತ್ತು ಸತ್ಯವೆಂಬ ಭಾವನೆಯೂ ಕ್ಷಯಿಸುವುವು ॥೭॥

'ರಾಮೋಹಂ' (ನಾನು ರಾಮನು) ಎಂಬುದಾಗಿ ಧಾರಾಕಾರವಾಗಿ ಬುದ್ಧಿವೃತ್ತಿಯುಂಟಾಗಿ–ಇದಕ್ಕೆ ಮಧ್ಯದಲ್ಲಿ ಇತರವಿಧವಾದ ವೃತ್ತಿಗಳು ಉದಯಿಸದೆ–'ರಾಮೋಹಂ' ಎಂಬ ವೃತ್ತಿಯೇ ಸ್ಥಿರವಾಗಿದ್ದರೆ, ಇದು ಧ್ಯಾನವೆಂದು ಹೇಳಲ್ಪಡುವುದು, ಇದರಿಂದ ವಾಸನೆಯು ಕ್ಷಯಿಸುವುದು ॥೮॥

ಎಲೌ ಪಾರ್ವತಿ! ಹೀಗೆ ಪ್ರಬೋಧಸ್ಥಿತಿಯುಂಟಾದವನಾಗಿ ರಾಮಭಕ್ತನು ಮಾಡತಕ್ಕ ಭಾವನಾರೂಪವಾದ ಉಪಾಸನೆಯಾವುದುಂಟೋ, ಅದನ್ನು ಈಗ ಹೇಳುವೆನು ॥೯॥

ಮೋಕ್ಷಕಾಮನಾದವನು, ಪ್ರಥಮತಃ ಸದ್ಗುರುವನ್ನು ಆಶ್ರಯಿಸ್ಸಿ, ಅವನ ಉಪದೇಶದಿಂದ ದೇಹಾತ್ಮಭಾವನೆಯನ್ನು ಬಡಬೇಕು ಬಳಿಕ, ಚಿತ್ತಿನಲ್ಲಿ ಆತ್ಮತ್ವಭಾವನೆಯೆಂಬ ಬ್ರಾಹ್ಮಣ್ಯವನ್ನು ಪಡೆಯಬೇಕು ಆಮೇಲೆ ತನ್ನ ಭಾಗ್ಯವಶಾತ್ಸವಂಬ ಉದಯಾಚಲದಲ್ಲಿ ಗುರುವಿನ ಅನು

ಉದಿತೇ ಸ್ವಸ್ಯ ಭಾಗ್ಯಾದ್ರೌ ಗುರ್ವನುಗ್ರಹಭಾಸ್ಕರೇ ।
ನಷ್ಟೇ ಮೋಹಾನ್ಧತಮಸೇ ಭವಸ್ವಪ್ನಾದ್ವಿಬೋಧಿತಃ ॥೧೧॥
ವ್ಯುತ್ಥಾಯೈಷಣಶಯ್ಯಾತೋ ಮನಸೇನ್ದ್ರಿಯನಿಗ್ರಹಮ್ ।
ಶೌಚಂ ಧ್ಯಾತ್ವಾ ಸತ್ಯವಾಕ್ತ್ವಂ ದನ್ತಧಾವನವಚ್ಚರೇತ್ ॥೧೨॥
ಧ್ಯಾಯೇದ್ರಾಮಂ ಮೂರ್ಧ್ನಿ ಗಬ್ಧಾಂ ತತ್ಪಾದೋದಕಜಾಮಿಡಾಮ್ ।
ಪಿಙ್ಗಳಾಂ ಯಮುನಾಂ ಧ್ಯಾಯೇತ್ ಸುಷುಮ್ನಾಂ ತು ಸರಸ್ವತೀಮ್ ॥
ಘ್ರಾಣಸ್ಯ ಚ ಭ್ರುವೋರ್ಮಧ್ಯೇ ಖೇಚರೀಮುದ್ರಯಾತ್ಮವಿತ್ ।
ಧ್ಯಾತ್ವಾ ತೀರ್ಥಂ ಪ್ರಯಾಗಾಖ್ಯಂ ತತ್ರ ಸ್ನಾಯಾದ್ದಿನೇದಿನೇ ॥೧೪॥
ಜ್ಞಾನಹ್ರದೇ ಧ್ಯಾನಜಲೇ ಕೃತ್ವಾ ಸ್ನಾನಂ ಮನೋಲಯಮ್ ।
ಕ್ಷಾಳಯೇಲ್ಲೋಭರಾಗೇರ್ಷ್ಯಾಸೂಯಾದಿಮಲಮಞ್ಜಸಾ ॥೧೫॥
ಧೃತ್ವೋಪಶಮಸದ್ವಸ್ತ್ರಂ ವೈರಾಗ್ಯನಿಯಮಾನ್ವಿತಃ ।
ರಾಮನಾಮಾಖ್ಯಾಚಮನಂ ಮಧ್ಯೇಮಧ್ಯೇ ಸಮಾಚರೇತ್ ॥೧೬॥
ಕೃತ್ವಾಜಪಾಖ್ಯಗಾಯತ್ರ್ಯಾ ಪ್ರಾಣಾಯಾಮಾರ್ಕ ರವೌ ಮಯಿ ।
ಯಆತ್ಮಾ ಸ ತ್ವೇಕವಿತ್ಯುಪಸ್ಥಾನಂ ಸಮಾಚರೇತ್ ॥೧೭॥

ಗ್ರಹವೆಂಬ ಸೂರ್ಯನು ಉದಯಿಸಲಾಗಿ, ಮೋಹವೆಂಬ ಅಂಧತಮಸ್ಸು ನಷ್ಟವಾಗುವುದು , ಆಗ ಸಂಸಾರವೆಂಬ ನಿದ್ರೆಯದಸೆಯಿಂದ ಎಚ್ಚರ್ತವನಾಗಿ, ಈಷಣತ್ರಯವೆಂಬ ಹಾಸುಗೆಯನ್ನು ಬಿಟ್ಟು ಎದ್ದು, ತನ್ನ ಮನಸ್ಸಿನಲ್ಲಿಯೇ ಇಂದ್ರಿಯನಿಗ್ರಹವನ್ನು ಶೌಚವೆಂದು ಧ್ಯಾನಮಾಡಿ, ಸತ್ಯ ವಚನವನ್ನು ದಂತಧಾವನವೆಂದು ಭಾವಿಸಬೇಕು ॥೧೦–೧೨॥

ಬಳಿಕ ತನ್ನ ಶಿರೋಭಾಗದಲ್ಲಿ ಶ್ರೀರಾಮನನ್ನು ಧ್ಯಾನಿಸಬೇಕು ಅಲ್ಲಿರುವ ಇಡಾನಾಡಿ ಯನ್ನು ಗಂಗೆಯನ್ನಾಗಿಯೂ, ಪಿಂಗಳಾನಾಡಿಯನ್ನು ಯಮುನಾನದಿಯನ್ನಾಗಿಯೂ, ಸುಷು ಮ್ನಾನಾಡಿಯನ್ನು ಸರಸ್ವತೀನದಿಯನ್ನಾಗಿಯೂ ಭಾವಿಸಬೇಕು ॥೧೩॥

ಆತ್ಮಜ್ಞನಾದವನು ಮೂಗಿನ ಮೇಲುಗಡೆ ಭ್ರೂಮಧ್ಯದಲ್ಲಿ 'ಖೇಚರೀ' ಯಂಬ ಮುದ್ರೆ ಯಿಂದ ಪ್ರಯಾಗತೀರ್ಥವನ್ನು ಧ್ಯಾನಿಸಿ, ಅಲ್ಲಿ ಪ್ರತಿದಿನವೂ ಸ್ನಾನಮಾಡಬೇಕು ॥೧೪॥

ಜ್ಞಾನವೆಂಬ ಮಡುವಿನೊಳಗೆ ಧ್ಯಾನವೆಂಬ ಜಲದಲ್ಲಿ ಮನೋಲಯವೆಂಬ ಸ್ನಾನವನ್ನು ಮಾಡಿ, ಲೋಭ ರಾಗ ಈರ್ಷ್ಯೆ ಅಸೂಯೆ ಮುಂತಾದುವುಗಳಂಬ ಮಲವನ್ನು ಬೇಗನೆ ತೊಳ ಯಬೇಕು ॥೧೫॥

ಉಪಶಾಂತಿಯೆಂಬ ವಸ್ತ್ರವನ್ನು ಧರಿಸಿ, ವೈರಾಗ್ಯವೆಂಬ ನಿಯಮದೊಡನೆ ಯುಕ್ತನಾಗಿ, ಮಧ್ಯಮಧ್ಯದಲ್ಲಿ ರಾಮನಾಮಸ್ಮರಣೆಯೆಂಬ ಆಚಮನವನ್ನು ಆಚರಿಸುತಿರಬೇಕು ॥೧೬॥

ಅಜಪಯೋಗವೆಂಬ ಗಾಯತ್ರಿಯಿಂದ ಪ್ರಾಣಾಯಾಮವನ್ನು ಮಾಡಿ, ತಾನೆಂಬ ಆದಿತ್ಯ ನಿಗೆ ಅಭಿಮುಖವಾಗಿ, ಆತ್ಮಪದಾರ್ಥವೆಂಬುದು ಒಂದೇ ಒಂದಿರುವುದೆಂಬ ಭಾವನೆಯನ್ನು ಉಪ ಸ್ಥಾನವನ್ನಾಗಿ ಆಚರಿಸಬೇಕು ॥೧೭॥

ಪ್ರಾರಬ್ಧಕರ್ಮವಶತಃ ಸ್ವಕೃತಂ ಯಚ್ಛುಭಾಶುಭಮ್ ।
ಆಸುಮುಕ್ತಿ ಕ್ರಿಯೇ ನಿತ್ಯಕರ್ಮತ್ವೇನ ತದೀಕ್ಷ್ಯತಾಮ್ ॥೧೯॥

ಅಹಮೇಕೋ ನ ಮತ್ತೋನ್ಯಃ ಇತ್ಯೇಕಾನ್ತಮಥಾಶ್ರಿತಃ ।
ಬ್ರಹ್ಮಾಣ್ಡಂ ಮಣ್ಟಪಂ ಧ್ಯಾತ್ವಾ ವಿತಾನಂ ತಾರಕಾಗಣಮ್ ॥೧೯॥

ಪಾರ್ಶ್ವಾದರ್ಶಾ ಪುಷ್ಪವನ್ತೌ ಧ್ಯಾತ್ವಾಥ ಹರಿಮವ್ಯಯಮ್ ।
ಅಣೋರಣುಂ ಚ ಮಹತೋ ಮಹಾನ್ತಂ ತತ್ರ ಭಾವಯೇತ್ ॥೨೦॥

ಸರ್ವಪ್ರಾಣಿಹೃದಬ್ಜಾಖ್ಯಪೀಠೇಪ್ಯಾವಾಹ್ಯ ಮಾಧವಮ್ ।
ಪ್ರಾರಬ್ಧವಶತೋ ದೇಹಾವಸ್ಥಾಮುದ್ರಾಃ ಪ್ರದರ್ಶಯೇತ್ ॥೨೧॥

ಬ್ರಹ್ಮಣೋ ನಿರ್ಮಲತ್ವಂ ಯತ್ ಪಾದ್ಯಾರ್ಘ್ಯಸ್ನಾನರೂಪಕಮ್ ।
ಭಾವಯೇನ್ನಿತ್ಯಶುದ್ಧತ್ವಂ ಶುದ್ಧಾಚಮನಮಾಚರೇತ್ ॥೨೨॥

ಭೂರೂಪತ್ವಂ ತಸ್ಯ ಗನ್ಧಪುಷ್ಪತ್ವೇನ ವಿಭಾವಯೇತ್ ।
ವಸ್ತ್ರಾತ್ಮನಾ ದಿಗಾತ್ಮತ್ವಂ ಧ್ಯಾಯೇದ್ದೇವಸ್ಯ ತತ್ತ್ವವಿತ್ ॥೨೩॥

ಏಲೌ ಪಾರ್ವತಿ ! ಎದ್ದುದು ಮೊದಲ್ಗೊಂಡು ಮಲಗುವವರೆಗೂ ಪ್ರಾರಬ್ಧಕರ್ಮವಶದಿಂದ ಯಾವ ಶುಭಾಶುಭಕರ್ಮಗಳು ಮಾಡಲ್ಪಡುವುವೋ, ಅವನ್ನು ನಿತ್ಯಕರ್ಮವೆಂದು ಭಾವಿಸಬೇಕು॥

ಆ ಒಳಿಕ, 'ನಾನೊಬ್ಬನೇ ಇರತಕ್ಕವನು, ನನ್ನನ್ನು ಬಿಟ್ಟು ಬೇರೆ ಯಾವುದೂ ಇಲ್ಲ' ಎಂಬ ಏಕಾಂತಪ್ರದೇಶವನ್ನಾಶ್ರಯಿಸಿದವನಾಗಿ, ಬ್ರಹ್ಮಾಂಡವನ್ನು ಮಂಟಪವನ್ನಾಗಿಯೂ–ನಕ್ಷತ್ರಮಂಡಲವನ್ನು ಮೇಲುಕಚ್ಚನ್ನಾಗಿಯೂ ಸೂರ್ಯಚಂದ್ರರನ್ನು ಪಾರ್ಶ್ವದಲ್ಲಿರುವ ನಿಲುಗನ್ನಡಿಯನ್ನಾಗಿಯೂ ಧ್ಯಾನಿಸಿ, ಅಣುವಿಗಿಂತ ಅಣುವಾಗಿಯೂ ಮಹತ್ತಿಗಿಂತ ಮಹತ್ತಾಗಿಯೂ ಇರುವ ಶ್ರೀಹರಿಯನ್ನು ಧ್ಯಾನಿಸಬೇಕು ॥೧೯–೨೦॥

ಸಮಸ್ತವಾದ ಸ್ತ್ರಾಣಿಗಳ ಹೃದಯಕಮಲವೆಂಬ ಪೀಠದಲ್ಲಿ ಶ್ರೀಮಾಧವನನ್ನು ಆವಾಹನ ಮಾತಿ, ತನ್ನ ಪ್ರಾರಬ್ಧಕರ್ಮವಶದಿಂದ ದೇಹಕ್ಕೆ ಉಂಟಾಗಿರುವ ಅವಸ್ಥೆಗಳೆಂಬ ಮುದ್ರೆಗಳನ್ನು ಪ್ರದರ್ಶನಮಾಡಬೇಕು ॥೨೧॥

ಬ್ರಹ್ಮವಸ್ತುವು ನಿರ್ಮಲವಾಗಿರುವುದಾವುದುಂಟೋ–ಅದನ್ನು ಪಾದ್ಯ ಅರ್ಘ್ಯ ಸ್ನಾನಗಳೆಂಬುದಾಗಿ ಭಾವನೆಮಾಡಬೇಕು, ಬ್ರಹ್ಮನು ನಿತ್ಯಶುದ್ಧನಾಗಿರುವನೆಂಬುದಾವುದುಂಟೋ– ಅದನ್ನು ಶುದ್ಧಾಚಮನವನ್ನಾಗಿ ಆಚರಿಸಬೇಕು ॥೨೨॥

ಸರ್ವಾತ್ಮಕನಾಗಿರುವ ಪರಬ್ರಹ್ಮನು ಭೂಮಿರೂಪನಾಗಿರುವುದಾವುದುಂಟೋ– ಅದನ್ನು ಗಂಧ ಪುಷ್ಪಾದಿಗಳೆಂದು ಭಾವಿಸಬೇಕು, ಆ ಪರಾತ್ಪರನು ದಿಕ್ಕುಗಳ ರೂಪದಲ್ಲಿರುವಿಕೆಯನ್ನು ವಸ್ತ್ರವನ್ನಾಗಿ ಭಾವಿಸಬೇಕು ॥೨೩॥

ಶ್ರೀವತ್ಸಂ ಪ್ರಕೃತಿಂ ಧ್ಯಾಯೇತ್ ಪುರುಷಂ ಕೌಸ್ತುಭಂ ತಥಾ।
ಉದಾತ್ತಾದಿಸ್ವರಾತ್ಮತ್ವಂ ಧ್ಯಾಯೇದ್ಧ್ಯಾನಾತ್ಮನಾ ಹರೇಃ ॥೨೪॥
ಮನಶ್ಚಕ್ರಂ ಭಾವಯಿತ್ವಾ ಽಹಂಕಾರಂ ಶಙ್ಖವತ್ ತತಃ ।
ಸ್ವಾನನ್ದಂ ಕಮಲಂ ಬುದ್ಧಿಂ ಧ್ಯಾಯೇತ್ ಕೌಮೋದಕೀಂ ಹರೇಃ ॥೨೫॥
ಚಿಚ್ಛಕ್ತಿಂ ಜಾನಕೀಂ ಧ್ಯಾಯೇತ್ ರಾಘವಸ್ಯಾನಪಾಯಿನೀಮ್ ।
ಅಶೇಷಶಬ್ದವಾಚ್ಯತ್ವಂ ಪೂಜಾತ್ವೇನಾಸ್ಯ ಭಾವಯೇತ್ ॥೨೬॥
ವಾತಾತ್ಮತ್ವಮಲೇಪತ್ವಂ ಧೂಪತ್ವೇನಾಸ್ಯ ಭಾವಯೇತ್ ।
ದೀಪತ್ವೇನ ಸ್ವಪ್ರಭತ್ವಂ ವಹ್ನ್ಯಾದ್ಯಾತ್ಮತ್ವಮಪ್ಯಲಮ್ ॥೨೭॥
ಜರರಾಗ್ನಿಸ್ವರೂಪಾಯ ಜಲಾಶೇಷರಸಾತ್ಮತಾಮ್ ।
ನೈವೇದ್ಯಂ ರಾಘವಾಯಾಸ್ಯೈ ಧ್ಯಾಯೇದ್ರಾಮಾಯ ಕಲ್ಪವಿತ್ ॥೨೮॥
ಅಶೇಷಮಙ್ಗಳಾತ್ಮತ್ವಂ ತಾಮೂಲತ್ವೇನ ಚಿನ್ತಯೇತ್ ।
ಸ್ವಸ್ಯ ಜ್ಞಾನೇನ್ದ್ರಿಯಾಣ್ಯಾರ್ಯೇ ನೀರಾಜನತಯಾ ವಿಭೋಃ ॥೨೯॥

ಪ್ರಕೃತಿಯನ್ನು ಶ್ರೀವತ್ಸಚಿಹ್ನವನ್ನಾಗಿಯೂ, ಪುರುಷನನ್ನು ಕೌಸ್ತುಭಮಣಿಯನ್ನಾಗಿಯೂ, ಅವನು ಉದಾತ್ತಾದಿಸ್ವರರೂಪದಲ್ಲಿರುವಿಕೆಯನ್ನು ಧ್ಯಾನವನ್ನಾಗಿಯೂ ಭಾವಿಸಬೇಕು ॥

ಬಳಿಕ, ಮನಸ್ಸನ್ನು ಚಕ್ರವನ್ನಾಗಿಯೂ, ಅಹಂಕಾರವನ್ನು ಶಂಖವನ್ನಾಗಿಯೂ, ಆನಂದವನ್ನು ಕಮಲವನ್ನಾಗಿಯೂ, ಬುದ್ಧಿಯನ್ನು ಕೌಮೋದಕಿಯನ್ನಾಗಿಯೂ ಧ್ಯಾನಿಸಬೇಕು ॥೨೫॥

ಚಿಚ್ಛಕ್ತಿಯನ್ನು ಸರ್ವದಾ ಶ್ರೀರಾಮನಿಗೆ ಪಾರ್ಶ್ವವರ್ತಿನಿಯಾದ ಶ್ರೀಜಾನಕಿಯನ್ನಾಗಿಯೂ, ಆ ಪರಮಾತ್ಮನು ಸಕಲಶಬ್ದವಾಚ್ಯನಾಗಿರುವಿಕೆಯನ್ನು ಅವನ ಪೂಜೆಯನ್ನಾಗಿಯೂ ಭಾವಿಸಬೇಕು ॥೨೬॥

ಅವನು ವಾಯುರೂಪನಾಗಿಯೂ ನಿರ್ಲೇಪನಾಗಿಯೂ ಇರುವಿಕೆಯನ್ನು ಧೂಪವನ್ನಾಗಿಯೂ, ಸ್ವಪ್ರಕಾಶನಾಗಿಯೂ ಅಗ್ನಿಸೂರ್ಯಾದಿರೂಪನಾಗಿಯೂ ಇರುವಿಕೆಯನ್ನು ದೀಪವನ್ನಾಗಿಯೂ ಸಮರ್ಪಿಸಬೇಕು ॥೨೭॥

ಅವನು ಜಲರೂಪನಾಗಿಯೂ ಸಮಸ್ತ ರಸರೂಪನಾಗಿಯೂ ಇರುವಿಕೆಯೆಂಬುದಾವುದುಂಟೋ– ಅದನ್ನು, ಜರರಾಗ್ನಿಸ್ವರೂಪನಾದ ಶ್ರೀರಾಮನಿಗೆ ನೈವೇದ್ಯವನ್ನಾಗಿ ಸಮರ್ಪಿಸಬೇಕು ॥೨೮॥

ಏಲೌ ಪಾರ್ವತಿ ! ಅವನು ಸಮಸ್ತ ಮಂಗಳಸ್ವರೂಪನಾಗಿರುವನೆಂಬುದನ್ನು ತಾಂಬೂಲವನ್ನಾಗಿಯೂ, ತನ್ನ ಜ್ಞಾನೇಂದ್ರಿಯಗಳನ್ನು ಅವನಿಗೆ ನೀರಾಜನವನ್ನಾಗಿಯೂ ಸಮರ್ಪಿಸಬೇಕು ॥೨೯॥

ರಾಮಮಂತ್ರಜಪಂ ಮನ್ತ್ರಪುಷ್ಪತ್ವೇನಾಸ್ಯ ಸುನ್ದರಿ ।
ಭಾವಯೇದ್ದೇಹಸಞ್ಚಾರಂ ಪ್ರದಕ್ಷಿಣತಯಾ ಹರೇಃ ॥೩೦॥
ಶಯನಾದೀನ್ ನಮಸ್ಕಾರಾನ್ ಸದಾ ರಾಮಸ್ಯ ಸಂಸ್ಮರೇತ್ ।
ಧ್ಯಾಯೇತ್ ಸ್ತೋತ್ರತಯಾ ವಿಷ್ಣೋಃ ಮನೋವಾಚಾಮಗಮ್ಯತಾಮ್ ॥
ಅವಾಪ್ತಶೇಷಕಾಮತ್ವಂ ನಾನಾರಾಜೋಪಚಾರವತ್ ।
ಸಂಭಾವ್ಯ ರಾಮಚನ್ದ್ರಸ್ಯ ಕಥಾಂ ಕೀರ್ತಿಧ್ವಜಂ ಸ್ಮರೇತ್ ॥೩೨॥
ಜಡದೇಹಾತ್ಮಭಾವೋತ್ಥ ಜಾತಿನಾಮಾಶ್ರಮಾದಿಷು ।
ಪುತ್ರಾದೌ ಚಾಭಿಮಾನಾಖ್ಯಾನ್ ಅಪರಾಧಾನ್ ಕ್ಷಮಾಪಯೇತ್ ॥೩೩॥
ತ್ವಾಮಜ್ಞಾತ್ವಾ ಜಡಾತ್ಮಾನಂ ದಾರುಲೋಹಶಿಲಾದಿಷು ।
ರಾಮ ತ್ವದ್ಭಾವನಾರೂಪಾನ್ ಅಪರಾಧಾನ್ ಕ್ಷಮಸ್ವ ಮೇ ॥೩೪॥
ಅಜ್ಞಾತ್ವಾತ್ಮಸ್ಥಮಾತ್ಮಾನಂ ರಾಮ ತ್ವಾಂ ಸರ್ವದಾ ಬಹಿಃ ।
ಭ್ರಾನ್ತ್ಯಾ ಗವೇಷಣಾರೂಪಾನ್ ಅಪರಾಧಾನ್ ಕ್ಷಮಸ್ವ ಮೇ ॥೩೫॥

ಎಲೌ ಪ್ರಿಯೆ ! ಶ್ರೀರಾಮಮಂತ್ರಜಪವನ್ನು ಶ್ರೀಹರಿಗೆ ಮಂತ್ರಪುಷ್ಪವನ್ನಾಗಿಯೂ, ತನ್ನ ದೇಹಸಂಚಾರವನ್ನು ಅವನಿಗೆ ಪ್ರದಕ್ಷಿಣವನ್ನಾಗಿಯೂ ಭಾವಿಸಬೇಕು ॥೩೦॥

ತಾನು ಸರ್ವದಾ ಮಾಡುವ ಶಯನಾದಿ ಕರ್ಮಗಳನ್ನು ಶ್ರೀರಾಮನಿಗ ನಮಸ್ಕಾರವನ್ನಾಗಿಯೂ, ಶ್ರೀಮಹಾವಿಷ್ಣುವು ಮನಸ್ಸಿಗೂ ವಾಕ್ಕಿಗೂ ಅಗಮ್ಯನಾಗಿರುವುದಾವುದುಂಟೋ ಅದನ್ನು ಅವನ ಸ್ತೋತ್ರವನ್ನಾಗಿಯೂ ಭಾವಿಸಬೇಕು ॥೩೧॥

ಶ್ರೀಹರಿಯು ಅವಾಪ್ತಸಮಸ್ತ ಕಾಮನಾಗಿರುವನೆಂಬುದನ್ನು ನಾನಾವಿಧವಾದ ರಾಜೋಪಚಾರಗಳನ್ನಾಗಿಯೂ, ಶ್ರೀರಾಮಚಂದ್ರನ ಕಥೆಯನ್ನು ಅವನಿಗ ಕೀರ್ತಿಧ್ವಜವನ್ನಾಗಿಯೂ ಭಾವಿಸಬೇಕು ॥೩೨॥

ಜಡವಾದ ದೇಹದಲ್ಲಿ ಆತ್ಮಭಾವನೆಯಿಂದ ಉಂಟಾಗಿದ್ದ ಜಾತಿ ನಾಮ ಆಶ್ರಮ ಮುಂತಾದುವುಗಳಲ್ಲಿಯೂ ಪುತ್ರಕಳತ್ರಾದಿಗಳಲ್ಲಿಯೂ ಇಟ್ಟುಕೂಂಡಿರುವ ಅಭಿಮಾನಗಳೆಂಬ ಅಪರಾಧಗಳನ್ನು ಕ್ಷಮಿಸುವಂತೆ ಪ್ರಾರ್ಥನೆಮಾಡಬೇಕು ॥೩೩॥

ಮತ್ತು, ಅಪರಾಧಕ್ಷಮಾಪಣಸಮಯದಲ್ಲಿ ಹೀಗ ಹೇಳಬೇಕು —ಸ್ವಾಮಿ ! ರಾಮ ಭದ್ರ ! ನಿನ್ನ ಚಿತ್ಸ್ವರೂಪನೆಂಬುದನ್ನರಿಯದೆ–ದಾರು(ಮರ) ಲೋಹ ಶಿಲೆ ಮೊದಲಾದುವುಗಳಲ್ಲಿ ನಿನ್ನನ್ನು ನಾನು ಭಾವಿಸುತ್ತಿದ್ದೆನಲ್ಲವೆ ! ನನ್ನ ಈ ಅಪರಾಧಗಳನ್ನು ನೀನು ಕ್ಷಮಿಸುವನಾಗು ॥

ಸ್ವಾಮಿ ! ನೀನು ನನ್ನಲ್ಲಿಯೇ ಆತ್ಮರೂಪನಾಗಿರುವೆಯೆಂಬುದನ್ನರಿಯದೆ ಭ್ರಾಂತಿಯಿಂದ ನಿರಂತರವೂ ನಾನು ನಿನ್ನನ್ನು ಹೊರಗೆ ಹುಡುಕುತ್ತಿದ್ದೆನಲ್ಲ ! ನನ್ನ ಈ ಅಪರಾಧಗಳನ್ನು ಕ್ಷಮಿಸುವನಾಗು. (ಇತ್ಯಾದಿರೀತಿಯಾಗಿ ಬೇಡಬೇಕು) ॥೩೪॥

ಸರ್ವತ್ರೈವಂವಿಧಾ ಭಾವಾ ವಿಪರೀತಾಭಿಧಾ ಪ್ರಿಯೇ ।
ಅಪರಾಧತಯಾ ಧ್ಯಾಯೇತ್ ಉತ್ಸವಾನಥ ಭಾವಯೇತ್ ॥೩೬॥
ಸ್ವದೇಹಂ ರಥವದ್ಧ್ಯಾಯೇತ್ ಇನ್ದ್ರಿಯಾಣಿ ತು ವಾಜಿನಃ ।
ಬುದ್ಧಿಂ ಸೂತಂ ಮನೋ ರಜ್ಜುಂ ಸ್ವಾತ್ಮಾನಂ ರಥಿನಂ ತಥಾ ॥೩೭॥
ಪ್ರಣವಂ ಕಾರ್ಮುಕಂ ಧ್ಯಾತ್ವಾ ಬಹ್ಮಾಕಾರಧಿಯುಂ ಶರಮ್ ।
ವಿಷಯಾರಣ್ಯಗಂ ಶಶ್ವತ್ ಸತ್ಯಜ್ಞಾನಸುಖಾಕೃತಿಮ್ ॥೩೮॥
ಗುರೂಕ್ತಿಜಾಲಸಂವೀತಂ ರಾಮಂ ಮೃಗತಯೇಪ್ಸಿತಮ್ ।
ಸ್ವಗುರುಂ ಮೃಗಯುತ್ವೇನ ದರ್ಶಯನ್ತಮಮುಂ ಸ್ಮರೇತ್ ।
ತತೋ ಗುರೂಕ್ತಿತೋಽಖಣ್ಡಾಕಾರವೃತ್ತಿಸುವೇಧಿತಮ್ ॥೩೯॥
ಬ್ರಹ್ಮಾಸ್ಮೀತ್ಯೈಕ್ಯಧೀರ್ಯಾ ತಾಂ ಮೃಗಯುತ್ವೇನ ಚಿನ್ತಯೇತ್ ॥೪೦॥
ಏವಂ ಚೇದ್ಬ್ರಹ್ಮಣಃ ಸ್ವಸ್ಯ ಪಾರೋಕ್ಷ್ಯಾಬ್ರಹ್ಮತಾಕ್ಷಯೇ ।
ನಿತ್ಯಾಪರೋಕ್ಷಂ ಬ್ರಹ್ಮೈವ ನಿಜಾತ್ಮಾ ಪರಿಶಿಷ್ಯತೇ ॥೪೧॥

ಎಲೌ ! ಪಾರ್ವತಿ ! ಇದಿಷ್ಟೇ ಅಲ್ಲ, ಇನ್ನೂ ಈರೀತಿಯಾಗಿ ಸಕಲಪದಾರ್ಥಗಳಲ್ಲಿಯೂ ತಾನು ಮಾಡುವ ವಿಪರೀತಭಾವನೆಗಳನ್ನೆಲ್ಲ ಅಪರಾಧವನ್ನಾಗಿ ಭಾವಿಸಿ, ಅವುಗಳನ್ನೆಲ್ಲ ಕ್ಷಮಿಸಬೇಕೆಂದು ಬೇಡಬೇಕು. ಬಳಿಕ, ಈರೀತಿಯಾಗಿ ಶ್ರೀರಾಮನಿಗೆ ಉತ್ಸವಗಳನ್ನು ಭಾವನೆಮಾಡಬೇಕು ॥೩೬॥

ಹೇಗೆಂದರೆ,–ತನ್ನ ದೇಹವನ್ನು ರಥದಂತೆಯೂ, ಇಂದ್ರಿಯಗಳನ್ನು ಅಶ್ವಗಳಂತೆಯೂ, ಬುದ್ಧಿಯನ್ನು ಸಾರಥಿಯನ್ನಾಗಿಯೂ, ಮನಸ್ಸನ್ನು ಕಡಿವಾಣವನ್ನಾಗಿಯೂ ಭಾವಿಸಿ, ಅಂತರಾತ್ಮನು ಈ ರಥದಲ್ಲಿ ಕುಳಿತುಕೊಂಡಿರುವಂತೆ ಭಾವಿಸಬೇಕು ॥೩೭॥

ಬಳಿಕ, ಪ್ರಣವವನ್ನು ಧನುಸ್ಸನ್ನಾಗಿಯೂ, ಬ್ರಹ್ಮಾಕಾರವಾದ ಬುದ್ಧಿವೃತ್ತಿಯನ್ನು ಬಾಣವನ್ನಾಗಿಯೂ ಭಾವಿಸಿ, ಸತ್ಯಜ್ಞಾನಾನಂದರೂಪನಾದ ಶ್ರೀರಾಮನು ಪದೇಪದೇ ವಿಷಯಗಳೆಂಬ ಅರಣ್ಯದಲ್ಲಿ ಪ್ರವೇಶಿಸುತ್ತಿರುವಂತೆ ಭಾವಿಸಬೇಕು ॥೩೮॥

ಇಂತಹ ಶ್ರೀರಾಮನೇ ಮೃಗವೆಂಬುದಾಗಿಯೂ, ಇದನ್ನು ತಾನು ಹಿಡಿಯಬೇಕೆಂದು ಪ್ರಯತ್ನಪಟ್ಟಿರುವುದಾಗಿಯೂ, ಗುರುವಾಕ್ಯವೆಂಬ ಬಲೆಯಿಂದ ಈ ಮೃಗವು ಬಂಧಿಸಲ್ಪಟ್ಟಿರುವುದಾಗಿಯೂ, ತನ್ನ ಗುರುವು ವ್ಯಾಧರೂಪನಾಗಿ ಈ ಮೃಗವನ್ನು ತೋರಿಸುತ್ತಿರುವುದಾಗಿಯೂ ಭಾವಿಸಬೇಕು. ಆ ಬಳಿಕ, ಗುರೂಪದೇಶದಿಂದ ಉಂಟಾದ ಅಖಂಡಾಕಾರವೃತ್ತಿಯಿಂದ ಆ ಮೃಗವು ವಿದ್ಧವಾಯಿತೆಂಬುದಾಗಿ ಭಾವಿಸಬೇಕು. 'ಅಹಂ ಬ್ರಹ್ಮಾಸ್ಮಿ' ಎಂಬ ಏಕಾಕಾರವಾದ ಚಿತ್ತವೃತ್ತಿಯಾವುದುಂಟೋ–ಅದನ್ನೇ ಮೃಗಯೆ(ಬೇಟೆ)ಯೆಂದು ಧ್ಯಾನಿಸಬೇಕು ॥೩೯–೪೦॥

ಹೀಗೆ ಮಾಡಿದರೆ, ಬ್ರಹ್ಮನಿಗೂ ತನಗೂ ಇದ್ದ ವ್ಯವಧಾನವು ಕ್ಷಯಿಸಿಹೋಗಿ, ಬ್ರಹ್ಮವಸ್ತುವಲ್ಲವೆಂಬ ಭಾವನೆಯು ನಷ್ಟವಾಗುವುದು, ಬಳಿಕ, ನಿತ್ಯಾಪರೋಕ್ಷವಾದ ಪರಬ್ರಹ್ಮವಸ್ತುವೊಂದೇ ಅವಶಿಷ್ಟವಾಗಿ ಸ್ಫುರಿಸುವುದು ॥೪೧॥

ತತೋ ರಾಮೋಹಮಸ್ಮೀತಿ ತತ್ತ್ವತಃ ಪ್ರವದನ್ತಿ ಯೇ ।
ನ ತೇ ಸಂಸಾರಿಣೋ ನೂನಂ ರಾಮಏವ ನ ಸಂಶಯಃ ॥೪೨॥
ಕರ್ಮಮಾತ್ರಂ ಕಷ್ಟಸಾಧ್ಯಂ ದೇಹದ್ರವ್ಯಾದ್ಯಪೇಕ್ಷಯಾ ।
ಪ್ರತ್ಯವಾಯಾಕುಲಂ ತದ್ವತ್ ಅಲ್ಪನಶ್ವರವತ್ಫಲಮ್ ॥೪೩॥
ಭಾವನಾಭಜನಾದ್ಧೀರ್ಮಾ ರಾಮಭಕ್ತಿಂ ಚ ನಿಶ್ಚಲಾಮ್ ।
ತದ್ವಿಭುತ್ವಪರಿಜ್ಞಾನಂ ಪ್ರಾಪ್ಯ ನಿರ್ವೃತಿಮಾಪ್ನುಯಾತ್ ॥೪೪॥
ಕರ್ತುಮೇವಮಶುದ್ಧಾತ್ಮಾ ಽನೀಶಶ್ಚೇತ್ ಸರ್ವದೇಹಿಷು ।
ಧ್ಯಾತ್ವೇಶಂ ಪ್ರೇರಕಂ ಸರ್ವಾ ನಿರ್ಲಜ್ಜಃ ಪ್ರಣಮೇತ್ ಸದಾ ॥೪೫॥
ಏವಂ ನಮಸ್ಯನ್ನಾನೀಚಾತ್ ಸರ್ವಾನಪ್ಯಾತ್ಮಭಾವನಾಮ್ ।
ಸರ್ವತ್ರ ಪೂರ್ಣಾಂ ಲಭತೇ ತೂರ್ಣಂ ಹೀನಾಭಿಮಾನವಾ ॥೪೬॥

ಇಂತಹ ಸ್ಥಿತಿಯುಂಟಾದನಂತರ–ಯಾರು ' ರಾಮೋಹಮಸ್ಮಿ ' ಎಂದು ತತ್ವವನ್ನು ಸಂತತವಾಗಿ ಹೇಳುತ್ತಿರುವರೋ, ಅವರು ಖಂಡಿತವಾಗಿಯೂ ಸಂಸಾರಿಗಳಲ್ಲ, ಅವರು ಶ್ರೀರಾಮನೇ ಸರಿ. ಇದರಲ್ಲಿ ಸಂಶಯವಿಲ್ಲ ॥೪೨॥

ಪ್ರಪಂಚದಲ್ಲಿ ಕರ್ಮಸಾಮಾನ್ಯವೇ ಕೇವಲ ಶ್ರಮಸಾಧ್ಯವಾದುದು ಏತಕ್ಕೆಂದರೆ,—ಯಾವ ಕರ್ಮವನ್ನು ಸಾಧಿಸಬೇಕಾದರೂ, ವಿಶೇಷವಾಗಿ ದೇಹಶಕ್ತಿಯೂ ದ್ರವ್ಯಾದಿಸಂಪತ್ತಿಯೂ ಬೇಕಾಗುವುದು ಮತ್ತು, ಈ ಕರ್ಮಗಳಲ್ಲಿ ಮಧ್ಯೇಮಧ್ಯೇ ಅನೇಕ ಪ್ರತ್ಯವಾಯಗಳು ಸಂಭವಿಸುವುವು. ಇಷ್ಟಾದರೂ, ಈ ಕರ್ಮಗಳಿಂದ ಉಂಟಾಗತಕ್ಕ ಫಲವು ಅತ್ಯಲ್ಪವಾದುದು, ಅದೂ ಕೇವಲ ನಶ್ವರವಾಗಿರುವುದು ॥೪೩॥

ಹೀಗಿರುವಕಾರಣ, ಪ್ರಾಜ್ಞನಾದವನು, ಕ್ರಿಯೋಪಾಸನೆಗಿಂತ ಭಾವನೋಪಾಸನೆಯೇ ಉತ್ತಮಸಾಧನವೆಂದು ತಿಳಿದವನಾಗಿ, ಆ ಭಾವನೋಪಾಸನೆಯಿಂದ ಶ್ರೀರಾಮನಲ್ಲಿ ನಿಶ್ಚಲವಾದ ಭಕ್ತಿಯನ್ನೂ–ಅವನ ಸರ್ವವ್ಯಾಪಿತ್ವಜ್ಞಾನವನ್ನೂ ಪಡೆದು, ಬಳಿಕ ಆನಂದಭಾಗಿಯಾಗಬೇಕು ॥೪೪॥

ಹೀಗೆ ಮಾಡಲು ಯಾವನಾದರೊಬ್ಬನು ಚಿತ್ತಶುದ್ಧಿ ಸಾಲದೆ ಅಸಮರ್ಥನಾಗಿದ್ದ ಪಕ್ಷದಲ್ಲಿ, ಅವನು ಸರ್ವಪ್ರಾಣಿಗಳಲ್ಲಿಯೂ ಪರಮೇಶ್ವರನು ಪ್ರೇರಕನಾಗಿರುವುದನ್ನು ಧ್ಯಾನಿಸುತ, ಸರ್ವಪ್ರಾಣಿಗಳಿಗೂ ಸರ್ವದಾ ಲಜ್ಜೆಯನ್ನು ತ್ಯಜಿಸಿ ನಮಸ್ಕಾರಮಾಡುತ್ತಿರಬೇಕು ॥೪೫॥

ಹೀಗೆ ನೀಚಜಾತಿಯ ವರೆಗೂ ಎಲ್ಲರನ್ನೂ ನಮಸ್ಕರಿಸುತಬಂದರೆ, ಆಗ ಅವನಿಗೆ ಅಭಿಮಾನನಷ್ಟವಾಗುವುದು , ಬಳಿಕ, ಸರ್ವವಸ್ತುಗಳಲ್ಲಿಯೂ ಆತ್ಮಭಾವನೆಯು ಪೂರ್ಣವಾಗಿ ಪ್ರಾಪ್ತವಾಗುವುದು ॥೪೬॥

ಸದೈವಂ ಭಾವನಾಭ್ಯಾಸಾತ್ ರಾಘವೇಣಾಮಿತೌಜಸಃ ।
ಅನಾಯಾಸೇನ ಮನುಜೋ ಮುಚ್ಯತೇ ನಾತ್ರ ಸಂಶಯಃ ॥೪೭॥
ಕರ್ಮಿಣಾಂ ಕರ್ಮಣಾಂ ನಾಶೋ ನಾನ್ಯೈಃ ಸ್ಯಾಜ್ಜ್ಞಾನಮನ್ತರಾ ।
ರಾಮಾನುಗ್ರಹತಸ್ತಚ್ಚ ನ ತದಾ ಧ್ಯಾನಂ ವಿನಾಪಿ ಸಃ ॥೪೮॥
ತಸ್ಮಾದ್ಧ್ಯಾಯೇತ್ ಸದಾ ರಾಮಂ ತ್ಯಕ್ತ್ವಾ ವಿಷಯವಾಸನಾಮ್ ।
ನೃಜನ್ಮನಃ ಫಲಂ ತದ್ಧಿ ಹ್ಯನ್ಯಥಾ ತಿರ್ಯಗೇವ ಸಃ ॥೪೯॥
ಸ್ಥಾವರೇಭ್ಯಶ್ಚರಾಃ ಶ್ರೇಷ್ಠಾಃ ತೇಷು ಶ್ರೇಷ್ಠಾನರಾಃ ಸ್ಮೃತಾಃ ।
ತೇಷು ವಿಪ್ರಾಸ್ತೇಷು ಬುಧಾಃ ಶ್ರೇಷ್ಠಾಃ ಶಬ್ದಬ್ರಹ್ಮವಿದೋ ವರೇ ॥೫೦॥
ಏವಂ ನೃದೇಹಂ ಸುಲಭಂ ಭದ್ರಮನ್ತೇ ತು ದುರ್ಲಭಮ್ ।
ಪ್ರಾಪ್ಯಾಪಿ ನ ಯತೇನ್ಮುಕ್ತ್ಯೈ ಸ್ವಾತ್ಮಹಾ ಸ ನಿಗದ್ಯತೇ ॥೫೧॥

ಈರೀತಿಯಾಗಿ ಅಪರಿಮಿತಮಹಿಮನಾದ ಶ್ರೀರಾಮನ ಭಾವನೋಪಾಸನೆಯನ್ನು ಸರ್ವದಾ ಅಭ್ಯಾಸಮಾಡುವುದರಿಂದ, ಮನುಷ್ಯನು ಅನಾಯಾಸವಾಗಿ ಮುಕ್ತನಾಗುವನು, ಇದರಲ್ಲಿ ಸಂಶಯವಿಲ್ಲ ॥೪೭॥

ಪ್ರಪಂಚದಲ್ಲಿ ಕರ್ಮಮಾರ್ಗನಿರತರಾದವರಿಗೆ ಜ್ಞಾನವೊಂದು ಹೊರತು ಮತ್ತಾವುದರಿಂದಲೂ ಕರ್ಮನಾಶವಾಗುವುದಿಲ್ಲ, ಆ ಜ್ಞಾನವಾದರೆ, ರಾಮಾನುಗ್ರಹದಿಂದ ಲಭ್ಯವಾಗುವುದು, ಈ ರಾಮಾನುಗ್ರಹವು, ಅವನ ಧ್ಯಾನವಿಲ್ಲದಿದ್ದರೆ ಲಭ್ಯವಲ್ಲ ॥೪೮॥

ಅದುಕಾರಣ, ಪುರುಷನು ವಿಷಯವಾಸನೆಯನ್ನು ಪರಿತ್ಯಜಿಸಿ ಸರ್ವದಾ ಶ್ರೀರಾಮನನ್ನು ಧ್ಯಾನಿಸಬೇಕು ಈ ರಾಮಧ್ಯಾನವೇ ಮನುಷ್ಯಜನ್ಮಕ್ಕೆ ಫಲವು, ಇದಿಲ್ಲದಿದ್ದರೆ, ಅಂತಹ ಮನುಷ್ಯನು ತಿರ್ಯಗ್ಜಂತುವೆಂದೇ ಭಾವಿಸಲ್ಪಡುವನು ॥೪೯॥

ಎಲೌ ಪಾರ್ವತಿ ! ಸ್ಥಾವರ ವಸ್ತುಗಳಿಗಿಂತ ಜಂಗಮಗಳು ಪ್ರಶಸ್ತಗಳು, ಈ ಜಂಗಮಗಳೊಳಗೆ ಮನುಷ್ಯರು ಶ್ರೇಷ್ಠರೆನ್ನಲ್ಪಡುವರು, ಮನುಷ್ಯರೊಳಗೂ ಬ್ರಾಹ್ಮಣಜನ್ಮವೆತ್ತಿದವರು ಶ್ರೇಷ್ಠರು, ಈ ಬ್ರಾಹ್ಮಣರೊಳಗೂ ತಿಳಿವಳಿಕೆಯುಳ್ಳವರು ಸರ್ವೋತ್ತಮರೆಂದು ತಿಳಿಯಬೇಕು ॥೫೦॥

ಹೀಗೆ ಮನುಷ್ಯಜನ್ಮವು ಹೀಗಾದರೂ ಸುಲಭವಾಗುವುದು, ಆದರೆ, ಕೊನೆಯಲ್ಲಿ ತಿಳಿವಳಿಕೆಯನ್ನು ಪಡೆಯುವುದು ಮಾತ್ರ ಕಷ್ಟಸಾಧ್ಯವಾಗುವುದು. ಇಷ್ಟು ಕಷ್ಟಸಾಧ್ಯವಾದ ಏವೇಕವನ್ನು ಪಡೆದಿದ್ದರೂ ಯಾವನು ಮುಕ್ತಿಗೋಸ್ಕರ ಪ್ರಯತ್ನಪಡುವುದಿಲ್ಲವೋ, ಅವನು ಆತ್ಮಘ್ನನೆಂದು ಹೇಳಲ್ಪಡುವನು ॥೫೧॥

ವೃಥಾಯುಃಕ್ಷಪಣಂ ತಸ್ಯ ವೃಥಾ ತಸ್ಯ ಬಹು ಶ್ರುತಮ್ ।
ಸಮುಯೇಪಿ ನರೋ ಮೋಹಾತ್ ವಿಷಯಾನುಗತೋ ಹಿ ಯಃ ॥೫೨॥

ಸಂಸಾರಃ ಸರ್ವಜಂತೂನಾಂ ಅನಾದಿಭ್ರಾಂತಿತೋ ಭವೇತ್ ।
ತತ್ಸೇವಿನೋ ವೃಥಾ ನಾರಂ ಜನ್ಮ ಸ್ತ್ರೀವನ್ನಪುಂಸಕೇ ॥೫೩॥

ಆಹಾರನಿದ್ರಾಭಯಮೈಥುನಾನಿ ಸಾಮಾನ್ಯಮೇತತ್ ಪಶುಭಿರ್ನರಾಣಾಮ್ ।
ಜ್ಞಾನಂ ನರಾಣಾಮಧಿಕೋ ವಿಶೇಷೋ ಜ್ಞಾನೇನ ಹೀನಃ ಪಶುಭಿಸ್ಸಮಾನಃ ॥೫೪॥

ಸರ್ವಶಾಸ್ತ್ರಾಣಿ ಸಂತೋಪಿ ಸಂಸಾರಾಸಾರತಾಮಲಮ್ ।
ಬೋಧಯಂತಿ ತಥಾಪ್ಯೇನಂ ಅನುಧಾವಂತಿ ಮೋಹಿನಃ ॥೫೫॥

ಆಧಿವ್ಯಾಧಿದರಿದ್ರಾಶಾಶೋಕದುಃಖಭಯಾದಿಕಮ್ ।
ವೀಕ್ಷ್ಯಾಪಿ ಭೂಯೋ ಭ್ರಾಂತಃ ಸ್ಯಾತ್ ಅಹೋ ಮೋಹಸ್ಯ ವೈಭವಮ್॥

ಯಾವ ಮನುಷ್ಯನು ಸರಿಯಾದ ಸಮಯ ಸಿಕ್ಕಿದರೂ ಮೋಹಾವಿಷ್ಟನಾಗಿ ವಿಷಯಗಳನ್ನು ಅನುಸರಿಸಿಕೊಂಡು ಹೋಗುವನೋ, ಅವನು ತನ್ನ ಆಯುಸ್ಸನ್ನೆಲ್ಲ ವ್ಯರ್ಥವಾಗಿ ಕಳೆಯುವನು , ಅವನು ಪಡೆದ ನಾನಾವಿಧವಾದ ಶಾಸ್ತ್ರಪರಿಚಯವೂ ವ್ಯರ್ಥವಾಗುವುದು ॥೫೨॥

ಪ್ರಸಂಚದಲ್ಲಿ ಸಮಸ್ತಜಂತುಗಳಿಗೂ ಅನಾದಿಯಾದ ಅವಿದ್ಯಾವಾಸನೆಯಿಂದ ಸಂಸಾರ ಬಂಧವುಂಟಾಗುವುದು. ಇಂತಹ ಸಂಸಾರವನ್ನು ಸೇವಿಸತಕ್ಕವನ ಜನ್ಮವು, ನಪುಂಸಕನಿಗೆ ದೊರೆತ ಸುಂದರಿಯಂತೆ, ಸುತರಾಂ ನಿಷ್ಫಲವಾಗುವುದು ॥೫೩॥

ಆಹಾರ ನಿದ್ರೆ ಭಯ ವಿಷಯಸುಖ-ಇವಿಷ್ಟೂ, ಮನುಷ್ಯರಿಗೆ ಪಶುಗಳಿಗಿರುವಂತೆ ಏಕರೀತಿಯಾಗಿರುವುವು ಜ್ಞಾನವೊಂದು ಮಾತ್ರ ಮನುಷ್ಯರಿಗೆ ವಿಶೇಷವೆನ್ನಿಸಿಕೊಳ್ಳುವುದು, ಈ ಜ್ಞಾನವಿಲ್ಲದಿದ್ದರೋ, ಮನುಷ್ಯರಿಗೂ ಪಶುಗಳಿಗೂ ಭೇದವೇ ಇಲ್ಲವಾಗುವುದು ॥೫೪॥

ಸಮಸ್ತ ಶಾಸ್ತ್ರಗಳೂ, ಸಮಸ್ತ ಸಾಧುಗಳೂ, ಸಂಸಾರವು ಅಸಾರವೆಂಬುದನ್ನು ವಿಶೇಷವಾಗಿ ಬೋಧಿಸುತ್ತಿರುವರು ಆದರೂ ಕೂಡ, ಮೋಹಾವಿಷ್ಟರಾದವರು ಈ ಸಂಸಾರವನ್ನು ಅನುಸರಿಸುತ್ತಿರುವರಲ್ಲ ! ॥೫೫॥

ಅಹಹ ! ಆಧಿ ವ್ಯಾಧಿ ದಾರಿದ್ರ್ಯ ಆಶೆ ಶೋಕ ದುಃಖ ಭಯ-ಇತ್ಯಾದಿಗಳನ್ನು ಪ್ರತಿಕ್ಷಣವೂ ನೋಡುತ್ತಿದ್ದರೂ ಕೂಡ, ಪುರುಷನು ಮತ್ತೆಯೂ ಈ ಸಂಸಾರದಲ್ಲಿ ಭ್ರಾಂತನಾಗುವನಲ್ಲ! ಮೋಹದ ಮಹಿಮೆಯು ಎಷ್ಟೆರಬಹುದು ! ॥೫೬॥

ಜ್ಞಾತಾನಶೇಷಾ೯ ಹಿತ್ವೈವ ಮೃತಾ೯ ಸ್ವೀಯಾ೯ ಪರಾನಪಿ ।
ವೀಕ್ಷ್ಯಾ೯ಽಹಂ ಚ ತದ್ವತ್ ಸ್ಯಾಂ ಇತಿ ವೇದಾತ್ರ ಕೋಪಿ ನ ॥೫೩॥
ಸಂಸಾರವೃದ್ಧಯೇ ಯತ್ನಾ೯ ಕುರ್ವನ್ನಪಿ ಸದಾ ಬಹು ।
ತಾಮಲಬ್ಧ್ವೈವ ತನ್ನಾಶಂ ದೃಷ್ಟ್ವಾಪಿ ಯತತೇ ಪುನಃ ॥೫೪॥
ಕೋ ವಾ ವಾಞ್ಛತಿ ದಾರಿದ್ರ್ಯಂ ಶ್ರಿಯಂ ಕೋ ವಾ ನ ವಾಞ್ಛತಿ ।
ಯತ್ನಾದಯತ್ನತೋ ವಾಪಿ ಭವಿತವ್ಯಂ ಭವೇದ್ಧ್ರುವಮ್ ॥೫೫॥
ಯದ್ಭಾವಿ ತದ್ಭವತ್ಯೇವ ಯದಭಾವಿ ನ ತದ್ಭವೇತ್ ।
ಇತಿ ನಿಶ್ಚಿತ್ಯ ಯೇ ಸನ್ತಿ ತೇಷಾಂ ಸೌಖ್ಯಂ ನ ಚಾನ್ಯಥಾ ॥೬೦॥
ಯಶ್ಚಾಜ್ಞೋ ಯಶ್ಚ ಸರ್ವಜ್ಞಃ ತಯೋರೇವ ಸುಖಂ ಭವೇತ್ ।
ಅಜ್ಞಸ್ತು ಸರ್ವವಿನ್ಮನ್ಯೋ ಯಸ್ಸ ದುಃಖೈಕಭಾಜನಮ್ ॥೬೧॥

ಪ್ರಪಂಚದಲ್ಲಿ ತಮ್ಮವರೂ ಇತರರೂ ಕೂಡ ಎಷ್ಟೋ ಜನರು ಈ ಸಂಸಾರದಲ್ಲಿ ಹುಟ್ಟಿ ಸಮಸ್ತವನ್ನೂ ಬಿಟ್ಟುಬಿಟ್ಟು ಮೃತರಾಗಿರುವುದನ್ನು ಪ್ರತಿಕ್ಷಣವೂ ನೋಡುತ್ತಿದ್ದರೂ, ನಾನೂ ಇವರಂತೆಯೇ ಆಗುವೆನೆಂದು–ಈ ಪ್ರಪಂಚದಲ್ಲಿ ಯಾವನೊಬ್ಬನೂ ಯೋಚಿಸದಿರುವನಲ್ಲ! ॥೫೨॥

ಈ ಸಂಸಾರದಲ್ಲಿ ನಾನಾವಿಧವಾದ ಅಭಿವೃದ್ಧಿಯನ್ನು ಪಡೆಯಬೇಕೆಂದು ಸರ್ವದಾ ಬಹುವಿಧವಾಗಿ ಪ್ರಯತ್ನಗಳನ್ನು ಮಾಡುತ–ತನ್ನ ಉದ್ದೇಶಾನುಗುಣವಾದ ಅಭಿವೃದ್ಧಿಯಾವುದನ್ನೂ ಪಡೆಯದೆಯೇ–ತನ್ನ ಪ್ರಯತ್ನವೆಲ್ಲ ವ್ಯರ್ಥವಾಗುವುದನ್ನು ನೋಡುತಿದ್ದರೂ, ಪುನಃಪುನಃ ಅದಕ್ಕಾಗಿಯೇ ಮನುಜನು ಪ್ರಯತ್ನಪಡುತ್ತಿರುವನಲ್ಲ! ॥೫೭॥

ಲೋಕದಲ್ಲಿ ದಾರಿದ್ರ್ಯವನ್ನು ಯಾವನು ತಾನೆ ಅಪೇಕ್ಷಿಸುವನು? ಯಾರುತಾನೆ ಸಂಪತ್ತನ್ನು ಅಪೇಕ್ಷಿಸುವುದಿಲ್ಲ? ಹೀಗೆ ದಾರಿದ್ರ್ಯವನ್ನು ದ್ವೇಷಿಸುವುದೂ, ಸಂಪತ್ತನ್ನು ಇಚ್ಛಿಸುವುದೂ ಕೂಡ, ಸರ್ವಲೋಕಸಾಧಾರಣವಾಗಿರುವುವು ಆದರೆ, ಈ ವಿಷಯದಲ್ಲಿ ಪುರುಷರು ಪ್ರಯತ್ನಪಟ್ಟರೂ–ಅಥವಾ ಅವರು ಪ್ರಯತ್ನಪಡದಿದ್ದರೂ ಕೂಡ, ಆಗಬೇಕಾದುದು ಆಗಿಯೇ ಹೋಗುವುದು, ಇದು ನಿಶ್ಚಯವು ॥೫೯॥

ಆದುದರಿಂದ, 'ಯಾವುದು ಆಗತಕ್ಕುದೋ–ಅದು ಆಗಿಯೇ ಹೋಗುವುದು, ಯಾವುದು ಆಗುತಕ್ಕುದಲ್ಲವೋ–ಅದು ಆಗುವುದೇ ಇಲ್ಲ.' ಎಂದು ನಿಶ್ಚಯಮಾಡಿಕೊಂಡು ಯಾರು ಸ್ವಸ್ಥರಾಗಿರುವರೋ, ಅವರಿಗೇ ಸೌಖ್ಯವು, ಅನ್ಯಥಾ ಸೌಖ್ಯಲಾಭವಾಗುವುದಿಲ್ಲ ॥೬೦॥

ಈ ಲೋಕದಲ್ಲಿ, ಯಾವನು ಸುತರಾಂ ಅಜ್ಞನೋ–ಯಾವನು ಸಂಪೂರ್ಣವಾಗಿ ಪ್ರಾಜ್ಞನೋ–ಇವರಿಬ್ಬರಿಗೆ ಮಾತ್ರವೇ ಸುಖವ್ಯಾಪ್ತಿಯಾಗುವುದು. ಯಾವನು ಸ್ವಯಂ ಅಜ್ಞನಾಗಿ ತಾನು ಸರ್ವಜ್ಞನೆಂದು ತಿಳಿದುಕೊಂಡಿರುವನೋ, ಅವನು ಕೇವಲ ದುಃಖಭಾಜನನಾಗುವನು ॥

ಭವಮೋಹರುಗನ್ಧಾಕ್ಷಃ ಸದಾಽಸತ್ಯಪ್ರಲಾಪವಾ್ ।
ಅಶಾಪಿಶಾಚ್ಯಾ ಗ್ರಸ್ತಸ್ಸ್ಯ ಭ್ರಮತಿ ಶ್ವಾನವದ್ಗೃಹಾ್ ॥೬೦॥
ಭವರೋಗಾದ್ವಿಮುಕ್ತಸ್ಯ ತತ್ತ್ವಜ್ಞಾನೌಷಧಾಶನಾತ್ ।
ಸ್ವಸ್ಥಚೆತ್ತಸ್ಯ ಸರ್ವತ್ರ ಸುಖಂ ಸ್ಯಾದ್ರಾಮಭಾವನಾ ॥೬೩॥

ಇತಿ ಶ್ರೀಮತ್ಸುನ್ದರಕಾಣ್ಡೇ ಭಾವನಾಸ್ವರೂಪನಿರೂಪಣಂ ನಾಮ
ಚತುರ್ದಶಃ ಸರ್ಗಃ

ಇಂಥವನು, ಸಂಸಾರಮೋಹವೆಂಬ ರೋಗದಿಂದ ಕುರುಡಾದ–ವಿವೇಕವೆಂಬ ನೇತ್ರವುಳ್ಳವನಾಗಿ, ಸರ್ವದಾ ಅಸತ್ಯವನ್ನು ಸತ್ಯವೆಂದು ಬೊಗುಳುತ, ಆಶೆಯಂಬ ಪಿಶಾಚಿಯಿಂದ ಆಕ್ರಮಿಸಲ್ಪಟ್ಟು, ನಾಯಿಯಂತೆ ಮನೆಮನೆಗೂ ಅಲೆಯುತ್ತಿರುವನು ॥೬೨॥

ತತ್ವಜ್ಞಾನವೆಂಬ ಔಷಧವನ್ನು ಸೇವಿಸಿ–ಸಂಸಾರವೆಂಬ ರೋಗದಿಂದ ಮುಕ್ತನಾಗಿ–ಸರ್ವತ್ರ ಸ್ವಸ್ಥಹೃದಯನಾದವನಿಗೆ, ಶ್ರೀರಾಮನ ಭಾವನೆಯು ಸುಖವಾಗಿ ಸಿದ್ಧಿಸುವುದು ॥೬೩॥

ಇದು ಸುಂದರಕಾಂಡದಲ್ಲಿ ಭಾವನಾಸ್ವರೂಪನಿರೂಪಣವೆಂಬ
ಹದಿನಾಲ್ಕನೆಯ ಸರ್ಗವು

ಅಥ ಶ್ರೀಮತ್ಸುನ್ದರಕಾಣ್ಡೇ ಪಞ್ಚದಶಃ ಸರ್ಗಃ

ಶ್ರೀಪಾರ್ವತ್ಯುವಾಚ

ದೀನಾನುಕಮ್ಪಿನ್ ಲೋಕೇಶ ಭವಸ್ಯ ವ್ಯಾಧಿತಾ ಕಥಮ್ ।
ಭವಾಮಯಃ ಕದಾ ಜಾತಃ ಕದಾ ವಾ ವೃದ್ಧಿಮಾಗತಃ ॥೧॥
ತನ್ನಿವೃತ್ತಿಂ ಚಿಕಿತ್ಸಾಂ ಚ ಚಿಕಿತ್ಸಾಸಾಧನಾನಿ ಚ ।
ವದ ಮೇ ದಯಯಾ ತ್ವತ್ತೋ ವಕ್ತಾ ನಾನ್ಯೋಽಸ್ತಿ ತತ್ತ್ವವಿತ್ ॥೨॥

ಶ್ರೀಶಿವಉವಾಚ

ಅನಾದಿರ್ಭವರೋಗೋಯಂ ಕೃತಾದೌ ಪಾದಶೋ ಯಥಾ ।
ಧರ್ಮಃ ಕ್ಷೀಣಃ ಕ್ರಮಾತ್ ತದ್ವತ್ ವೃದ್ಧೋ ರೂಢೋಽಭವತ್ ಕಲೌ ॥
ಅತ್ರೈವೋದಾಹರನ್ತ್ಯಾರ್ಯಾಃ ಕಥಾಂ ಕಾಂಚಿತ್ಪುರಾತನೀಂ ।
ದತ್ತಾತ್ರೇಯೇನ ಕಸ್ಮೈಚಿತ್ ವಿಪ್ರಾಯ ಕಥಿತಾಂ ಪುರಾ ॥೪॥

ಸುಂದರಕಾಂಡದಲ್ಲಿ ಹದಿನೈದನೆಯ ಸರ್ಗವು.

ಪುನಃ ಶ್ರೀಪಾರ್ವತಿಯು ಪರಮೇಶ್ವರನನ್ನು ಪ್ರಾರ್ಥಿಸುವಳು —

ದೀನದಯಾಳುವಾದ ದೇವದೇವೇಶ್ವರನೆ! ಸಂಸಾರವೆಂಬುದೊಂದು ರೋಗವೆಂದು ಈಗ ತಾವು ಅಪ್ಪಣೆಕೊಡಿಸಿದಿರಲ್ಲವ! ಸಂಸಾರವು ರೋಗವಾಗಿರುವುದು ಹೇಗೆ? ಈ ಸಂಸಾರವೆಂಬ ರೋಗವು ಯಾವಾಗ ಹುಟ್ಟಿತು? ಇದು ಯಾವಾಗ ವೃದ್ಧಿಹೊಂದಿತು? ॥೧॥

ಈ ಸಂಸಾರರೋಗವು ನಿವೃತ್ತಿಹೊಂದುವ ರೀತಿಯನ್ನೂ, ಇದರ ಚಿಕಿತ್ಸೆಯನ್ನೂ, ಈ ಚಿಕಿತ್ಸೆಗ ಸಾಧನಗಳನ್ನೂ ಕೂಡ, ಈಗ ಕೃಪೆಯಿಟ್ಟು ನನಗ ಹೇಳಿಕೊಡಬೇಕು ತಮ್ಮನ್ನು ಬಿಟ್ಟರೆ ಇನ್ನು ಸರಿಯಾಗಿ ತತ್ವವನ್ನು ತಿಳಿದು ಉಪದೇಶಿಸತಕ್ಕವರಾರೂ ಇಲ್ಲ ॥೨॥

ಶ್ರೀ ಪರಮೇಶ್ವರನು ಉತ್ತರಹೇಳುವನು —

ಎಲೌ ಪಾರ್ವತಿ! ಈ ಸಂಸಾರವೆಂಬ ರೋಗವು ಅನಾದಿಯಾದುದು, ಇದು ಹುಟ್ಟಿದ ಕಾಲವೇ ಗೊತ್ತಿಲ್ಲ ಕೃತ ತ್ರೇತಾ ದ್ವಾಪರಯುಗಗಳಲ್ಲಿ ಧರ್ಮವು ಒಂದೊಂದು ಪಾದವಾಗಿ ಕ್ಷಯಿಸಿದಹಾಗೆಲ್ಲ ಈ ಭವರೋಗವು ವೃದ್ಧಿಹೊಂದುತ ಬಂದಿತು, ಆಮೇಲೆ ಕಲಿಯುಗದಲ್ಲಿ ಚೆನ್ನಾಗಿ ರೂಢಮೂಲವಾಯ್ತು ॥೩॥

ಎಲೌ ಪ್ರಿಯೆ! ಇದೇ ವಿಷಯವನ್ನು ಕುರಿತು, ಪೂರ್ವದಲ್ಲಿ ದತ್ತಾತ್ರೇಯನಿಂದ ಯಾವನೋ ಒಬ್ಬ ಬ್ರಾಹ್ಮಣನಿಗೆ ಹೇಳಲ್ಪಟ್ಟ ಈ ಕಥೆಯನ್ನು, ಪ್ರಾಜ್ಞರು ಉದಾಹರಣೆಯಾಗಿ ಹೇಳುವರು ॥೪॥

ತಸ್ಯಾಸ್ತು ಶ್ಲೋಪಗಭ್ರಾಯಾಃ ಶ್ರವಣಾಚ್ಛ್ಲೋಪವಿತ್ ಸುಧೀಃ ।
ಭವರೋಗವಿನಿರ್ಮುಕ್ತೋ ಮುಕ್ತ್ಯಾಯರೋಗ್ಯಸುಖಂ ವ್ರಜೇತ್ ॥೫॥
ಅಸ್ತಿ ಕಶ್ಚಿದ್ವಿದೇಹೇಷು ವಿಪ್ರೋ ವೇದಧರಾಭಿಧಃ ।
ಜನ್ಮಾದಿ ಸ ಪರಾನ್ನಾದೀ ಜಾತಕರ್ಮಾದಿವರ್ಜಿತಃ ॥೬॥
ಧರ್ಮಾರ್ಥಿನೋಪನೀತೋಭೂತ್ ಕೇನಚಿತ್ ಸ ಕಥಂಚನ ।
ತದಾದಿ ಲುಪ್ತಧರ್ಮತ್ವಾತ್ ಬ್ರಹ್ಮಬನ್ಧುರಭೂದ್ದ್ವಿಜಃ ॥೭॥
ಜೀವನಾರ್ಥಂ ಪ್ರತಿಷ್ಠಾರ್ಥಂ ವಿನೈವ ನಿಯಮಾಂಸ್ತತಃ ।
ದ್ವಿಜೋ ಬಹುಮುಖಾದ್ವೇದಾ ಸ್ವಲ್ಪಕೋಧೀತವಾ ಫಲಾತ್ ॥೮॥
ಸಏವಂ ಶ್ರೋತ್ರಿಯಂಮನ್ಯಃ ಕನ್ಯಾದಾನಾದಿರೂಪತಃ ।
ಸಂಪಾದ್ಯ ಸರ್ವತಃ ಕಾಮಿ ವಿವಾಹಾರ್ಥಂ ಧನಂ ಬಹು ॥೯॥
ತತೋ ವೈ ವೃಷಳೀಕಲ್ಪಾಂ ಜಾತಿಮಾತ್ರೋದ್ಭವಾಂ ವಧೂಮ್ ।
ಉದ್ವಾಹ್ಯ ಸ ಗೃಹಸ್ಥೋಭೂತ್ ಸ್ವಸಮಾನೈಃ ಪ್ರಶಂಸಿತಃ ॥೧೦॥

ಈ ಕಥೆಯಲ್ಲಿ ಉದ್ದಕ್ಕೂ ಅರ್ಥಾಂತರ (ರೂಪಕ) ವಿರುವುದು , ಇದನ್ನು ಕೇಳಿ ಇದರ ಅರ್ಥವನ್ನು ತಿಳಿದುಕೊಂಡ ಪ್ರಾಜ್ಞನು, ಸಂಸಾರವೆಂಬ ರೋಗದಿಂದ ಮುಕ್ತನಾಗಿ, ಮೋಕ್ಷವೆಂಬ ಆರೋಗ್ಯ ಸುಖವನ್ನು ಪಡೆಯುವನು ॥೫॥

ವಿದೇಹದೇಶದಲ್ಲಿ ವೇದಧರನೆಂಬ ಬ್ರಾಹ್ಮಣನೊಬ್ಬನಿದ್ದನು ಅವನು, ಹುಟ್ಟಿದ ಮೊದಲುಗೊಂಡು ಪರಾನ್ನವನ್ನು ತಿಂದು ಜೀವಿಸುತ್ತಿದ್ದನು , ಜಾತಕರ್ಮಮೊದಲಾದ ಸಂಸ್ಕಾರಗಳೂ ಕೂಡ ಅವನಿಗೆ ಆಗಲಿಲ್ಲ ॥೬॥

ಹೀಗಿರುವಾಗ, ಯಾವನೋ ಒಬ್ಬನು ಧರ್ಮಾರ್ಥವಾಗಿ ಅವನಿಗೆ ಹೇಗಯೋ ಉಪನಯನ ಮಾಡಿಬಿಟ್ಟನು ಆ ಕಾಲ ಮೊದಲುಗೊಂಡು, ಬ್ರಾಹ್ಮಣೋಚಿತವಾದ ಧರ್ಮವೊಂದೂ ಇಲ್ಲದೆ ಅವನು ದುರ್ಬ್ರಾಹ್ಮಣನಾಗಿದ್ದನು ॥೭॥

ಬಳಿಕ ಅವನು ಯಾವ ನಿಯಮವೂ ಇಲ್ಲದೆಯೇ, ಜೀವನವನ್ನೂ ಪ್ರತಿಷ್ಠೆಯನ್ನೂ ಸಂಪಾದಿಸುವುದಕ್ಕಾಗಿ, ಅನೇಕರಲ್ಲಿ ಹೋಗಿ, ತನ್ನ ದೋಷವನ್ನು ಮರೆಮಾಜಿಕೊಂಡು, ಸ್ವಲ್ಪಸ್ವಲ್ಪವಾಗಿ ವೇದವನ್ನು ಕಲಿತುಗೊಂಡನು ॥೮॥

ಹೀಗೆ ಶ್ರೋತ್ರಿಯಂಮನ್ಯನಾದ ಅವನು, ಸಂಸಾರಸುಖಪಡಬೇಕೆಂಬ ಇಚ್ಛೆಯುಳ್ಳವನಾಗಿ, ಅಲ್ಲಲ್ಲಿ ಕನ್ಯಾದಾನಪ್ರತಿಗ್ರಹಮುಂತಾದ ರೂಪದಿಂದ–ವಿವಾಹಾರ್ಥವಾಗಿ ಬಹುಧನವನ್ನು ಸಂಪಾದಿಸಿ, ಆಮೇಲೆ ಜಾತಿಮಾತ್ರದಿಂದ ಬ್ರಾಹ್ಮಣಜಾತಿಯವಳಾಗಿಯೂ ಗುಣದಲ್ಲಿ ಶೂದ್ರಜಾತಿಯವಳಾಗಿಯೂ ಇರುವ ಒಬ್ಬ ಕನ್ಯಕೆಯನ್ನು ಮದುವೆಮಾಡಿಕೊಂಡು, ಗೃಹಸ್ಥಾಶ್ರಮವನ್ನು ಪಡೆದನು ಆಗ ಅವನ ಸಮಾನರಾದವರೆಲ್ಲರೂ ಅವನನ್ನು ವಿಶೇಷವಾಗಿ ಪ್ರಶಂಸಿಸುತ್ತಿದ್ದರು॥೯–೧೦॥

ತದಾರಭ್ಯ ಸ ಕರ್ಮಾಣಿ ಶ್ರುತಿಸ್ಮೃತ್ಯುದಿತಾನ್ಯಲಮ್ ।
ಪರಿತ್ಯಜ್ಯಾಭವದ್ವಿಪ್ರಃ ಶಿಶ್ನೋದರರತಸ್ಸದಾ ॥೧೧॥

ಕುತ್ರಾಪಿ ಚೌರ್ಯಾದ್ಗನ್ಧಸ್ರಗ್ವಸ್ತ್ರತಾಮ್ಬೂಲಭೂಷಣಮ್ ।
ಸಂಪಾದ್ಯ ಭೂಷಯಿತ್ವಾಭೂತ್ ರಹಸ್ಯವ್ಯಭಿಚಾರವಾ ॥೧೦॥

ಏವಂ ಕತಿಪಯೇ ಕಾಲೇ ವ್ಯತೀತೇ ವಯಸಿ ದ್ವಿಜಃ ।
ಕುಟುಮ್ಬಪೋಷಣಾಸಕ್ತೋ ನೀಚವೃತ್ತಿಪರೋಭವತ್ ॥೧೩॥

ಕೃಷಿತೋ ಭಾರತೋ ದೈನ್ಯಾತ್ ಚೌರ್ಯಾಚ್ಚೌರ್ಯಾಚ್ಚ ವಞ್ಚನಾತ್ ।
ವಾಣಿಜ್ಯಾತ್ ಕೈತವಾದ್ದಮ್ಭಾತ್ ತಥಾ ಕಾದರ್ಯವೃತ್ತಿತಃ ॥೧೪॥

ಪ್ರತಿಗ್ರಾಮಂ ಪ್ರತಿಗೃಹಂ ಪ್ರತಿಲೋಕಂ ಚ ಯಾಚನಾತ್ ।
ಸೇವಾತೋಽನ್ಯಾಯತೋ ದ್ರವ್ಯಂ ಸಂಪಾದ್ಯಾಭೂನ್ಮಹಾಗೃಹೀ ॥೧೫॥

ಯಸ್ಯಕಸ್ಯಾಪಿ ವಾನ್ನಾನಿ ಧನಂ ವಾ ಯಸ್ಯಕಸ್ಯಚಿತ್ ।
ಯಥಾಕಥಂಚಿತ್ ಸಂಪಾದ್ಯ ಪುಪೋಷ ಸ್ವಜನಂ ದ್ವಿಜಃ ॥೧೬॥

ಅದು ಮೊದಲುಗೊಂಡು, ಆ ಬ್ರಾಹ್ಮಣನು, ಶ್ರುತಿಸ್ಮೃತಿಚೋದಿತಗಳಾದ ಸ್ವವರ್ಣಾಶ್ರಮ ಧರ್ಮಗಳನ್ನೆಲ್ಲ ಸಂಪೂರ್ಣವಾಗಿ ಬಿಟ್ಟುಬಿಟ್ಟು, ಸರ್ವದಾ ಶಿಶ್ನೋದರಪರಾಯಣನಾಗಿದ್ದನು ॥

ಎಲ್ಲಿಯಾದರೂ ಕಳ್ಳತನಮಾಡಿ ಗಂಧ ಪುಷ್ಪ ವಸ್ತ್ರ ತಾಂಬೂಲ ಭೂಷಣಾದಿಗಳನ್ನು ಸಂಪಾದಿಸಿಕೊಂಡು–ರಹಸ್ಯವಾಗಿ ವ್ಯಭಿಚಾರಮಾಡುತಿದ್ದನು ॥೧೨॥

ಹೀಗೆ ಕೆಲವುಕಾಲ ಕಳೆದಬಳಿಕ, ಆ ಬ್ರಾಹ್ಮಣನು, ತನ್ನ ಕುಟುಂಬವನ್ನು ಪೋಷಿಸುವುದರಲ್ಲಿ ಆಸಕ್ತನಾಗಿ, ನಾನಾವಿಧವಾದ ನೀಚವೃತ್ತಿಗಳನ್ನು ಆಶ್ರಯಿಸಿದನು ॥೧೩॥

ಕೃಷಿಯನ್ನು ಮಾಡುವುದು, ಭಾರ ಹೊರುವುದು, ದೈನ್ಯವನ್ನು ತೋರಿಸುವುದು, ಚೌರ್ಯ ಮಾಡುವುದು, ಶೌರ್ಯವನ್ನು ತೋರಿಸುವುದು, ವಂಚನೆ ಮಾಡುವುದು, ವಾಣಿಜ್ಯಮಾಡುವುದು, ಕಪಟಮಾಡುವುದು, ದಂಭ ತೋರಿಸುವುದು, ಜೀವಿಣತನಮಾಡುವುದು, ಪ್ರತಿಗ್ರಾಮದಲ್ಲಿಯೂ ಪ್ರತಿಮನೆಯಲ್ಲಿಯೂ ಪ್ರತಿಮನುಷ್ಯನನ್ನೂ ಯಾಚಿಸುವುದು, ಸೇವೆಮಾಡುವುದು,–ಇತ್ಯಾದಿ ರೂಪವಾಗಿ ಅನ್ಯಾಯಮಾರ್ಗದಿಂದ ಹೆಚ್ಚಾಗಿ ಹಣವನ್ನು ಸಂಪಾದಿಸಿ, ದೊಡ್ಡ ಮನೆಯನ್ನು ಕಟ್ಟಿಕೊಂಡಿದ್ದನು ॥೧೪–೧೫॥

ಆ ಬ್ರಾಹ್ಮಣನು, ಯಾರದಾದರೂ ಸಿಕ್ಕಿದ ಅನ್ನವನ್ನೂ ಸಿಕ್ಕಿದ ಹಣವನ್ನೂ ಹೇಗಾದರೂ ಸಂಪಾದಿಸಿ–ತನ್ನ ಮನೆಯವರನ್ನು ಪೋಷಿಸುತಿದ್ದನು ॥೧೬॥

ದುರಾಶಾಪಾಶಸನ್ನದ್ಧಃ ಕಾಮಕ್ರೋಧಾಕುಲಾಶಯಃ ॥೧೩॥
ಸಮರ್ಥೋ ಭೋಗವಾ ಯೋಗೀ ಸುಖೀ ಸರ್ವಾರ್ಥಸಿದ್ಧಿವಾ ।
ಬನ್ಧುವಾ ನೀತಿವಾ ವಾಗ್ಮೀ ಶ್ರೀವಾಞ್ಛತ್ರುನಿಬರ್ಹಣಃ ।
ನಾಶಿತೋಯಂ ಮಯಾ ಶತ್ರುಃ ನಾಶಯೇನ್ಯಾನರೀನಪಿ ॥೧೪॥
ಕುಲೀನಸ್ಸರ್ವಸಂಪನ್ನೋ ಮಯಾಪೀದಂ ಸುಸಾಧಿತಮ್ ।
ಮನೋರಥಮಿಂ ಪ್ರಾಪ್ಸ್ಯೇ ಕರಿಷ್ಯೇ ಕಾರಯೇಽಖಿಲಮ್ ॥೧೫॥
ಏವಂ ಸ ಬಹುಧಾ ಚಿನ್ತಾವ್ಯಾಕುಲಾತ್ಮಾ ದ್ವಿಜಃ ಸದಾ ।
ಕುಟುಮ್ಬಪೋಷಣಾಸಕ್ತಚಿತ್ತಸ್ಸನ್ನಾಸ ವೋಽಹಿತಃ ॥೧೦॥
ಏವಂ ಬಹು ಗತೇ ಕಾಲೇ ಜರಾವ್ಯಾಧ್ಯಾದಿಭಿರ್ದ್ವಿಜಃ ।
ಜೀರ್ಣೋಽಪಿ ಧಿಕ್ಕೃತೋಽಪ್ಯನ್ಯೈಃ ನಾಶಾಂ ಮುಞ್ಚತಿ ದೀನಧೀಃ ॥೧೧॥
ತತೋ ಯದೃಚ್ಛಯಾ ವಿಪ್ರೋ ಕದಾಚಿದ್ದ್ರವ್ಯಲೋಭತಃ ।
ನೈಮಿಷಂ ಪ್ರಾಪ್ಯ ತತ್ರತ್ಯಮುನಿಸಙ್ಘಾನ್ತಿಕಂ ಯಯೌ ॥೧೨॥

ಆಗ ಅವನು ದುರಾಶೆಯೆಂಬ ಪಾಶಗಳಿಂದ ಬದ್ಧನಾಗಿ, ಕಾಮ ಕ್ರೋಧಗಳಿಂದ ವ್ಯಾಕುಲವಾದ ಆಶಯವುಳ್ಳವನಾಗಿ, ತನ್ನ ಮನಸ್ಸಿನಲ್ಲಿ ಈರೀತಿಯಾಗಿ ಯೋಚಿಸುತಿದ್ದನು —ಸಮರ್ಥನಾಗಿಯೂ ನೀತಿವಂತನಾಗಿಯೂ ಉಪಾಯಕುಶಲನಾಗಿಯೂ ಸುಖಶಾಲಿಯಾಗಿಯೂ ಸರ್ವಾರ್ಥಸಿದ್ಧಿಯುಕ್ತನಾಗಿಯೂ ಬಂಧುಯುಕ್ತನಾಗಿಯೂ ನೀತಿಶಾಲಿಯಾಗಿಯೂ ಶ್ರೀಮಂತನಾಗಿಯೂ ಶತ್ರುಸಂಹಾರಕನಾಗಿಯೂ ಇದ್ದ ಆ ಶತ್ರುವು, ಈಗ ನನ್ನಿಂದ ನಾಶಪಡಿಸಲ್ಪಟ್ಟನು, ಉಳಿದಿರುವ ಇತರ ಶತ್ರುಗಳನ್ನೂ ನಾಶಪಡಿಸುವೆನು. ನಾನು ಈಗ ಸದ್ವಂಶಪ್ರಸೂತನೂ ಸರ್ವಸಂಪತ್ಸಮೃದ್ಧನೂ ಆಗಿರುವೆನು ಇದುವರೆಗೆ ನಾನು ಇಷ್ಟು ಕಾರ್ಯಗಳನ್ನು ಸಾಧಿಸಿರುವೆನು, ಮುಂದೆ ಇಂತಿಂತಹ ಮನೋರಥವನ್ನು ಪಡೆಯಬೇಕಾಗಿರುವುದು ನಾನು ಸಮಸ್ತವನ್ನೂ ಮಾಡುತಲೂ ಇತರರಿಂದ ಮಾಡಿಸುತಲೂ ಇರುವೆನು ॥೧೩-೧೫॥

ಇತ್ಯಾದಿರೀತಿಯಾಗಿ ನಾನಾವಿಧವಾದ ಚಿಂತೆಗಳಿಂದ ವ್ಯಾಕುಲನಾದ ಆ ಬ್ರಾಹ್ಮಣನು, ಸರ್ವದಾ ಕುಟಂಬಪೋಷಣೆಯಲ್ಲಿ ಆಸಕ್ತವಾದ ಹೃದಯವುಳ್ಳವನಾಗಿರುತಿದ್ದನು ॥೨೦॥

ಹೀಗೆ ಬಹುಕಾಲ ಕಳೆಯಲಾಗಿ, ಆ ಬ್ರಾಹ್ಮಣನು, ಜರೆ ವ್ಯಾಧಿ ಮೊದಲಾದುವುಗಳಿಂದ ಜೀರ್ಣನಾಗಿದ್ದರೂ, ದೊಡ್ಡವರು ತನ್ನನ್ನು ಎಷ್ಟು ಧಿಕ್ಕರಿಸುತಿದ್ದರೂ, ಮಹಾದೀನಹೃದಯನಾಗಿ ತನ್ನ ಆಶೆಯನ್ನು ಮಾತ್ರ ಬಿಡಲಾರದವನಾಗಿದ್ದನು ॥೨೧॥

ಆಮೇಲೆ ಆ ಬ್ರಾಹ್ಮಣನು ಒಂದು ಸಮಯದಲ್ಲಿ ದ್ರವ್ಯಲೋಭದಿಂದ ಆಕಸ್ಮಿಕವಾಗಿ ನೈಮಿಷಾರಣ್ಯಕ್ಕೆ ಹೋಗಿ, ಅಲ್ಲಿದ್ದ ಮಹರ್ಷಿಗಳ ಸಮೀಪವನ್ನು ಸೇರಿದನು ॥೨೨॥

ಋಷಯಸ್ತಂ ದ್ವಿಜಂ ದೃಷ್ಟ್ವಾ ಹಸನ್ತಃ ಶ್ಲೋಕಮಬ್ರುವನ್ ।
ವೃದ್ಧೋಽಪಿ ಭವರೋಗೇಣ ಭ್ರಾನ್ತಶ್ಚರತಿ ಸರ್ವತಃ ॥೨೩॥
ಧಿಕ್ಕುರ್ವನ್ತಿ ತಥೈವಾನ್ಯೇ ಲಾಲಯನ್ತ್ಯಪರೇ ತಥಾ ।
ಏವಂ ವಿಪ್ರಕೃತಾವಜ್ಞಾಂ ಜ್ಞಾತ್ವಾಗಾತ್ ಸ್ವಗೃಹಂ ದ್ರುತಾ ॥೨೪॥
ಅವಧೂತಸ್ತತಃ ಕಶ್ಚಿತ್ ಭವರೋಗಚಿಕಿತ್ಸಕಃ ಕೃತೀ ।
ಅಸಜ್ಜಾಸಿಧರೋ ಧೀಮಾನ್ ಯೋಗೋಪರತಿಪಾದುಕಃ ॥೨೫॥
ಭವರೋಗಚಿಕಿತ್ಸೋಪಯುಕ್ತಸಾಧನಗರ್ಭಿತಾಮಮ್ ।
ಜ್ಞಾನೋಪಾಸನಶಾಸ್ತ್ರಾಖ್ಯಭಸ್ತ್ರಾಂ ಕಕ್ಷೀ ವಹನ್ ವಶೀ ॥೨೬॥
ದಿಗಮ್ಬರಾಖ್ಯಾ ತಶ್ಶುಭ್ರಕೀರ್ತಿಭೂತ್ಯುಜ್ಜ್ವಲಾತ್ಮವಾನ್ ।
ನಿಜಾಜ್ಞಾವೇತ್ರಪಾಣಿಸ್ಸನ್ ಜಟಾಮಕುಟಮಣ್ಡಿತಃ ॥೨೭॥
ನಿಜಾನನ್ದಾಸ್ವದವಾಪ ಕಞ್ಚಿನ್ನಿಲೀತಲೋಚನಃ ।
ಯುವಾಪಿ ವಾ ಸುನ್ದರಾಙ್ಗಃ ಸ್ಮಿತಜ್ಯೋತ್ಸ್ನಾಲಸನ್ಮುಖಃ ॥೨೮॥

ಆಗ ಅಲ್ಲಿದ್ದ ಋಷಿಗಳು, ಆ ಬ್ರಾಹ್ಮಣನನ್ನು ನೋಡಿ ನಗುತ ' ಅಹೋ ! ಇವನು ಇಷ್ಟು ಮುದುಕನಾಗಿದ್ದರೂ ಸಂಸಾರ ರೋಗದಿಂದ ಭ್ರಾಂತನಾಗಿ ಎಲ್ಲೆಲ್ಲಯೂ ಅಲೆಯುತ್ತಿರುವನಲ್ಲಾ ! ' ಎಂದು ಮಾತನಾಡಿಕೊಂಡರು ॥೨೩॥

ಅಲ್ಲಿ ಹಾಗೆಯೇ ಕೆಲವರು ಧಿಕ್ಕಾರಮಾಡುತಿದ್ದರು, ಮತ್ತೆ ಕೆಲವರು ಕರುಣೆಯಿಂದ ಅವನನ್ನು ಲಾಲಿಸುತಿದ್ದರು ಹೀಗೆ ಆ ಮಹರ್ಷಿಗಳಿಂದ ತನಗುಂಟಾದ ತಿರಸ್ಕಾರವನ್ನು ಕಂಡು, ಆ ಬ್ರಾಹ್ಮಣನು ಲಜ್ಜೆಯಿಂದ ತನ್ನ ಮನಗ ಬಂದುಬಿಟ್ಟನು ॥೨೪॥

ಆ ಬಳಿಕ, ಸಂಸಾರರೋಗಕ್ಕೆ ಚಿಕಿತ್ಸೆಯನ್ನು ಮಾಡುವುದರಲ್ಲಿ ಕುಶಲನಾದ ಒಬ್ಬ ಅವಧೂತನು, ಈ ಬ್ರಾಹ್ಮಣನ ಮನಗೆ ಬಂದನು ಆ ಅವಧೂತನು, ಅಸಂಗ(ಆಸಕ್ತಿಯಿಲ್ಲದಿರುವಿಕೆ)ವೆಂಬ ಕತ್ತಿಯನ್ನು ಕೈಯಲ್ಲ ಹಿಡಿದುಕೊಂಡು, ಯೋಗದಿಂದ ಉಂಟಾದ ಉಪಶಾಂತಿಯಂಬ ಪಾದುಕೆಗಳನ್ನು ಧರಿಸಿದ್ದನು ॥೨೫॥

ಚಿತೇಂದ್ರಿಯನಾದ ಆ ಅವಧೂತನು, ಸಂಸಾರವೆಂಬ ರೋಗದ ಚಿಕಿತ್ಸೆಗ ಬೇಕಾದ ಉಪಕರಣಗಳಿಂದ ತುಂಬಿರುವ ಜ್ಞಾನೋಪಾಸನಶಾಸ್ತ್ರವೆಂಬ ಚೀಲ(ಕರಾಟ)ವನ್ನು ಕೊಂಕುಳಲ್ಲಿ ಧರಿಸಿದ್ದನು ॥೨೬॥

ದಿಕ್ಕುಗಳಂಬ ವಸ್ತ್ರವನ್ನುಟ್ಟಿದ್ದನು , ಶುಭ್ರವಾದ ಕೀರ್ತಿಯೆಂಬ ಭಸ್ಮದಿಂದ ಅವನ ಶರೀರವು ಉಜ್ಜ್ವಲವಾಗಿದ್ದಿತು, ತನ್ನ ಆಜ್ಞೆಯಂಬ ವೇತ್ರ(ಬೆತ್ತ)ವನ್ನು ಕೈಯಲ್ಲ ಹಿಡಿದಿದ್ದನು, ಜಟೆಯೆಂಬ ಮಕುಟದಿಂದ ಅಲಂಕೃತನಾಗಿದ್ದನು ॥೨೭॥

ಆತ್ಮಾನಂದಸುಖವನ್ನು ಆಸ್ವಾದಿಸುತ, ಅರ್ಧಸಮಿಲಿತನೇತ್ರನಾಗಿದ್ದನು, ಅವನು ಯೌವನಸ್ಥನಾಗಿಯೂ ಸುಂದರಶರೀರನಾಗಿಯೂ ಮಂದಹಾಸವೆಂಬ ಚಂದ್ರಿಕೆಯಿಂದ ವಿಲಸಿತವಾದ ಮುಖವುಳ್ಳವನಾಗಿಯೂ ಇದ್ದನು ॥೨೮॥

ಭವಾಮಯಾವಿನೋ ಯೇಯೇ ತಚ್ಚಿಕಿತ್ಸಾರ್ಥಿನೋ ರಯಾತ್ ।
ಆಯಾನ್ತಿ ಮೇನ್ತಿಕಂ ತೇ ಚೇತ್ ಕುರ್ವೇ ಸತ್ಯಂ ಗತಜ್ವರಾ ॥೮೯॥
ಇತ್ಯಾರಟ್ಯ ಸ ಸರ್ವತ್ರ ನಿರುಪಾಧಿಕೃಪಾಕರಃ ।
ಜಗಾಮ ತದ್ದ್ವಿಜಾಗಾರಂ ದತ್ತಾತ್ರೇಯೋ ಯದೃಚ್ಛಯಾ ॥೯೦॥
ತಂ ದೃಷ್ಟ್ವಾ ವೇದವಾಹಾಖ್ಯಃ ತತ್ತ್ಯಜೋಹತಕಿಲ್ಬಿಷಃ ।
ಪ್ರಣಮ್ಯ ಪ್ರಶ್ರಿತೋ ದೇವಿ ಕೃತ್ವಾ ಪೂಜಾಮಥಾಬ್ರವೀತ್ ॥೯೧॥
ಸಾಧವಸ್ಸಮಚಿತ್ತಾಯೇ ಪರದುಃಖಾಸಹಿಷ್ಣವಃ ।
ದಯಾಂ ಕುರ್ವನ್ತಿ ದೀನೇಷು ದಯಾಸಾರಾಹಿ ಯೋಗಿನಃ ॥೯೨॥
ಭಗವನ್ ಭವರೋಗೇಣ ಭವಾನ್ ಮುಕ್ತಸ್ತತಸ್ಸುಖೀ ।
ಆರ್ತೋಽಸ್ಮಿ ಭವರೋಗೇಣ ಮಮಾರ್ತಿಂ ನಾಶಯೇಶ್ವರ ॥೯೩॥
ಆಚಕ್ಷ್ವ ಮೇ ಮಹಾಯೋಗಿನ್ ತತ್ತ್ವಂ ಭವರುಜಸ್ತಥಾ ।
ನಾಶೋಪಾಯೌಷಧಂ ಚಾಶು ಮಮಾದಿಶ ಕೃಪಾನಿಧೇ ॥೯೪॥

' ಈ ಲೋಕದಲ್ಲಿ ಯಾರುಯಾರು ಭವರೋಗದಿಂದ ಪೀಡಿತರಾಗಿ ಅದಕ್ಕೆ ಚಿಕಿತ್ಸೆಯನ್ನು ಬಯಸುವರೋ, ಅವರೆಲ್ಲರೂ ಬೇಗನೆ ನನ್ನ ಸಮೀಪಕ್ಕೆ ಬಂದಪಕ್ಷದಲ್ಲಿ ನಾನು ಸತ್ಯವಾಗಿಯೂ ಅವರ ಜ್ವರವನ್ನು ಹೋಗಲಾಡಿಸುವೆನು ' ಎಂದು ಎಲ್ಲ ಕಡೆಯಲ್ಲಿಯೂ ಸಾರುತ, ನಿರುಪಾಧಿ ಕೃಪಾನಿಧಿಯಾದ ಆ ಅವಧೂತನಾದ ದತ್ತಾತ್ರೇಯಮುನಿಯು, ಆ ಬ್ರಾಹ್ಮಣನ ಮನೆಗೆ ಬಂದನು ॥೮೯-೯೦॥

ಹೀಗೆ ಆಕಸ್ಮಿಕವಾಗಿ ತನ್ನ ಮನಗೆ ಬಂದ ದತ್ತಾತ್ರೇಯಮುನಿಯನ್ನು ಕಂಡು, ಅವನ ತೇಜಸ್ಸಿನಿಂದಲೇ ನಷ್ಟವಾದ ಪಾಪವುಳ್ಳವನಾಗಿ, ವಿನಯದಿಂದ ಅವನಿಗೆ ನಮಸ್ಕಾರಮಾಡಿ, ಯಥಾವಿಧಿಯಾಗಿ ಪೂಜಿಸಿ, ಬಳಿಕ ಅವನನ್ನು ಕುರಿತು ಹೀಗೆ ವಿಜ್ಞಾಪಿಸಿಕೊಂಡನು ॥೯೧॥

ಸರ್ವತ್ರ ಸಮಚಿತ್ತರಾದ ಯಾವ ಸಾಧುಗಳಿರುವರೋ, ಅವರು ಪರರ ದುಃಖವನ್ನು ಸಹಿಸಲಾರದವರಾಗಿ, ದೀನರಲ್ಲಿ ದಯೆಯನ್ನು ತೋರಿಸುವರು ಪ್ರಪಂಚದಲ್ಲಿ ಯೋಗಿಗಳು ದಯೆಯೇ ಸಾರವಾಗಿ ಉಳ್ಳವರಲ್ಲವ ! ॥೯೨॥

ಎಲೈ ಮಹಾನುಭಾವನ ! ನೀನು ಸಂಸಾರವೆಂಬ ರೋಗದಿಂದ ಮುಕ್ತನಾಗಿರುವೆ, ಆದು ದರಿಂದಲೇ ಸುಖವಾಗಿರುವೆ ನಾನು ಈಗ ಸಂಸಾರರೋಗದಿಂದ ಆರ್ತನಾಗಿರುವೆನು, ಎಲೈ ಸರ್ವಸಮರ್ಥನಾದವನೆ ! ನನ್ನ ರೋಗವನ್ನು ಈಗ ನೀನು ನಾಶಪಡಿಸಬೇಕು ॥೯೩॥

ಎಲೈ ಮಹಾಯೋಗಿಯ ! ಈಗ ನೀನು ನನಗೆ ಸಂಸಾರರೋಗದ ತತ್ವವನ್ನು ಹೇಳುವನಾಗು, ಎಲೈ ಕೃಪಾಸಾಗರನೆ ! ಈ ಸಂಸಾರರೋಗದ ನಾಶಕ್ಕೆ ತಕ್ಕುದಾದ ಔಷಧವನ್ನೂ ಅಪ್ಪಣೆಕೊಡಿಸುವನಾಗು ॥೯೪॥

ಇತ್ಯುಕ್ತ್ವಾ ಸ ರುದನ್ ದೀನಃ ಪಶ್ಚಾತ್ತಾಪೇನ ಶುದ್ಧಧೀಃ ।
ನನಾಮ ದಂಡವದ್ವಿಪ್ರೋ ಮಹಾಯೋಗಿಪದಾಬ್ಜಯೋಃ ॥೫೫॥

ದತ್ತಾತ್ರೇಯೋಽಪಿ ತಂ ದೃಷ್ಟ್ವಾ ಸ್ವಸಾನ್ನಿಧ್ಯಾದ್ಧತೈನಸಮ್ ।
ಕೃಪಯಾ ವಕ್ತುಮಾರೇಭೇ ಸನ್ತೋ ಹಿ ಮೃದುಮಾನಸಾಃ ॥೫೬॥

ಧಾತೂನ್ ಪರೀಕ್ಷ್ಯ ತೇ ಸಮ್ಯಕ್ ಭವಾಮಯನಿದಾನಕಮ್ ।
ವಕ್ಷ್ಯೇಽಹಮಿತಿ ತದ್ಧಾತೂನ್ ಪರೀಕ್ಷ್ಯೈದಮುಚ್ಚಕೈ ॥೫೭॥

ಕರ್ಮಯುಕ್ತಾ ಜ್ಞಾನನಾಡೀ ತೀವ್ರಾ ಶ್ರದ್ಧಾಭಿಧಾ ಸ್ಥಿರಾ ।
ಸೂಕ್ಷ್ಮಾ ವಿವೇಕನಾಡಿಸ್ತು ಯತ್ರಕುತ್ರಾಪಿ ನೇಕ್ಷ್ಯತೇ ॥೫೮॥

ಸೂಕ್ಷ್ಮಾಪಿ ಯದಿ ಸಾ ನಷ್ಟಾ ನಾನಾಯೋನಿಗತಿರ್ಭವೇತ್ ।
ತದಾಽಚಿಕಿತ್ಸಾಸಾಧ್ಯೋಽಯಂ ಭವರೋಗೋ ಭವೇದ್ಧ್ರುವಮ್ ॥೫೯॥

ಒಲೌ ಪಾರ್ವತಿ! ಹೀಗೆಂದು ಹೇಳಿ, ಪಶ್ಚಾತ್ತಾಪದಿಂದ ಶುದ್ಧಹೃದಯನಾದ ಆ ಬ್ರಾಹ್ಮಣನು, ಬಹುದೀನನಾಗಿ ಅಳುತ, ಆ ಮಹಾತ್ಮನಾದ ಯೋಗೀಶ್ವರನ ಪಾದಗಳಿಗ ದೀರ್ಘದಂಡ ನಮಸ್ಕಾರಮಾಡಿದನು ॥೫೫॥

ಬಳಿಕ ಆ ದತ್ತಾತ್ರೇಯನೂ ಕೂಡ ತನ್ನ ಸಾನ್ನಿಧ್ಯದಿಂದ ನಷ್ಟಕಲ್ಮಷನಾದ ಆ ಬ್ರಾಹ್ಮಣನನ್ನು ನೋಡಿ, ವನಲ್ಲಿ ಕೃಪೆಯಿಂದ ಹೀಗೆ ಉಪದೇಶಿಸಲು ಸಕ್ರಮಿಸಿದನು ಸಜ್ಜನರು ಸ್ವಭಾವತಃ ಮೃದುಹೃದಯರಾದವರು ॥೫೬॥

ಒಲೌ ಪಾರ್ವತಿ! ಪ್ರಥಮತಃ ಆ ದತ್ತಾತ್ರೇಯ ಯೋಗಿಯು ಆ ಬ್ರಾಹ್ಮಣನನ್ನು ಕುರಿತು 'ಅಯ್ಯಾ! ಬ್ರಾಹ್ಮಣ! ಚಿಕಿತ್ಸೆಗ ಉಪಕ್ರಮಿಸುವುದಕ್ಕ ತೊಸಲು ಧಾತುಗಳನ್ನು ಪರೀಕ್ಷಿಸಿ ರೋಗನಿದಾನವನ್ನು ಗೂತ್ತುಮಾಡಿಕೊಳ್ಳಬೇಕಲ್ಲ ನೆ! ಆದುದರಿಂದ ಈಗ ನಾನು ಮೊದಲು ನಿನ್ನ ನಾಡಿಗಳನ್ನು ಪರೀಕ್ಷಿಸಿ ಬಳಿಕ ಈ ಸಂಸಾರ ರೋಗಕ್ಕೆ ನಿದಾನವನ್ನು ನಿನಗ ಹೇಳುವೆನು' ಎಂದು ಹೇಳಿ, ಅನಂತರ ಅವನ ಧಾತುಗಳನ್ನು ಪರೀಕ್ಷಿಸಿ, ಆಮೇಲ ಅವನನ್ನು ಕುರಿತು ಈ ರೀತಿಯಾಗಿ ಹೇಳಲುಪಕ್ರಮಿಸಿದನು ॥೫೭॥

ಅಯ್ಯಾ! ಬ್ರಾಹ್ಮಣ! ಗ ನಿನಗೆ ಜ್ಞಾನನಾಡಿಯು ಕಲಸಮಾಡುತಿರುವುದು, ಶ್ರದ್ಧೆ ಯೆಂಬ ತೀವ್ರವಾದ ನಾಡಿಯು ಸ್ಥಿರವಾಗಿರುವುದು ಸೂಕ್ಷ್ಮವಾದ ವಿವೇಕನಾಡಿಯಾದರೋ, ಎಲ್ಲೆಲ್ಲಿಯೂ ಕಾಣುವುದೇ ಇಲ್ಲ ॥೫೮॥

ಅತಿಸೂಕ್ಷ್ಮವಾಗಿರುವ ಆ ವಿವೇಕನಾಡಿಯೂ ನಷ್ಟವಾಗಿಬಿಟ್ಟಪಕ್ಷದಲ್ಲಿ, ಬಳಿಕ ನಾನಾ ವಿಧವಾದ ಜನ್ಮಗಳಲ್ಲ ಗತಿಯುಂಟಾಗುವುದು, ಆಗ ಈ ಸಂಸಾರರೋಗವು ಯಾವ ಚಿಕಿತ್ಸೆಗೂ ಸಾಧ್ಯವಾಗುವುದಿಲ್ಲ, ಇದು ನಿಶ್ಚಯವು ॥೫೯॥

ದೇಹಮೂಲೋ ಹಿ ಸಂಸಾರಃ ಪ್ರಾಕ್ಕರ್ಮಾರ್ಜನಯಾ ಸ ಚ ।
ಸಾ ಚಾವಿವೇಕಮನ್ದಾಗ್ನಿಸಂಭೂತಾ ದ್ವಿಜಸತ್ತಮ ॥೪೦॥
ಸ ಚಾಭಿಮಾನಾತಿಭುಕ್ತ್ಯಾ ಸಾ ಚಾಜ್ಞಾನಬುಭುಕ್ಷಯಾ ।
ಅವಿಚಾರೊಪೇಕ್ಷಿತೋಭೂತ್ ವಿವೃದ್ಧೋ ವ್ಯಾಧಿವಚ್ಛನೈಃ ॥೪೧॥
ಅವಿಚಾರಾಗತೋ ಹ್ಯೇಷಃ ರೋಗೋ ನಿರ್ಮೂಲಕೋಪ್ಯಲಮ್ ।
ಬಾಧತೇ ಸತತಂ ಭ್ರಾನ್ತಂ ಬಾಲಂ ಕಲ್ಪಿತಯಕ್ಷವತ್ ॥೪೨॥
ಅನಾದಿತ್ವಾದಸ್ಯ ಮೂಲಚರ್ಚಾ ಮಾಸ್ತು ತಥಾಪ್ಯಯಮ್ ।
ಜ್ಞಾನಾನ್ನಶ್ಯತಿ ಚಾಸ್ಯಾವಿರ್ಭಾವಮಾತ್ರಂ ವದೇ ಶೃಣು ॥೪೩॥
ಆದೌ ಕಾಮಜ್ವರೋ ಜಾತಃ ಸ್ವಲ್ಪಸ್ತಮಸಹ ಭವಾ ।
ವಿಲಾಸಿನೀದುಷ್ಟನದ್ಯಾಂ ಮಗ್ನಸ್ತತ್ತಾಪಶಾನ್ತಯೇ ॥೪೪॥
ಮಾಯಾದ್ರಿಜಾ ವಧೂಸಿನ್ಧುಃ ಪ್ರವಹನ್ತೀ ಮನೋಭುವಿ ।
ವಿದಾರಯನ್ತೀ ಧೈರ್ಯಾದ್ರೀ ನರಕಾರ್ಣವಮಾವಿಶೇತ್ ॥೪೫॥

ಎಲೈ ಬ್ರಾಹ್ಮಣನೆ! ಲೋಕದಲ್ಲಿ ಈ ಸಂಸಾರವೆಂಬುದು ದೇಹಮೂಲಕವಾಗಿರುವುದಲ್ಲವೆ! ಆ ದೇಹವು ಪ್ರಾಕ್ತನ ಕರ್ಮಗಳಿಂದ ಉಂಟಾಗುವುದು, ಈ ಪ್ರಾಕ್ತನೆ ಕರ್ಮವೆಂಬುದು, ಅವಿವೇಕವೆಂಬ ಮಂದಾಗ್ನಿಯಿಂದ ಜನಿಸುವುದು ॥೪೦॥

ಈ ಅವಿವೇಕವೆಂಬ ಅಗ್ನಿಮಾಂದ್ಯವು, ಅಭಿಮಾನವೆಂಬ ಅತಿಭೋಜನದಿಂದ ಉಂಟಾಗುವುದು, ಈ ಅಭಿಮಾನವೆಂಬ ಅತಿಭೋಜನವು, ಅಜ್ಞಾನವೆಂಬ ಕ್ಷುತ್ತಿನಿಂದ ಮಾಡಲ್ಪಡುವುದು ಆಮೇಲೆ ಅವಿಚಾರದಿಂದ ಉಪೇಕ್ಷಿಸಲ್ಪಟ್ಟು, ಈ ಸಂಸಾರರೋಗವು ನಿಲ್ಲಗೆ ಅಭಿವೃದ್ಧಿಪಡೆಯುವುದು ॥೪೧॥

ಹೀಗೆ ಅವಿಚಾರದಿಂದ ಬಂದಿರುವ ಈ ಸಂಸಾರರೋಗವು, ವಸ್ತುತಃ ನಿರ್ಮೂಲವಾಗಿದ್ದರೂ, ಮನಸ್ಸಿನಲ್ಲಿ ಕಲ್ಪಿತವಾದ ಬೇತಾಳವು ಬಾಲಕನನ್ನು ಬಾಧಪಡಿಸುವಂತೆ, ಭ್ರಾಂತನಾದವನನ್ನು ವಿಶೇಷವಾಗಿ ಬಾಧಪಡಿಸುವುದು ॥೪೨॥

ಈ ಸಂಸಾರ ರೋಗವು ಅನಾದಿಯಾಗಿರುವಕಾರಣ, ಇದಕ್ಕೆ ಮೂಲವೇನೆಂಬ ವಿಚಾರವು ಈಗ ಬೇಡ ಆದರೂ, ಇದು ಜ್ಞಾನದಿಂದ ನಷ್ಟವಾಗುವುದೆಂಬುದು ನಿಶ್ಚಿತವು ಆದುದರಿಂದ ಇದು ಹುಟ್ಟುವ ರೀತಿಯನ್ನು ಮಾತ್ರ ನಿನಗೆ ಈಗ ಹೇಳುವನು, ಅದನ್ನು ಕೇಳುವನಾನು ॥೪೩॥

ಮೊದಲು ನಿನಗೆ ಸ್ವಲ್ಪ ಕಾಮವೆಂಬ ಜ್ವರವು ಹುಟ್ಟಿತು, ಬಳಿಕ ನೀನು ಅದನ್ನು ಸಹಿಸಲಾರದೆ, ಅದರ ತಾಪವನ್ನು ಶಾಂತಿಪಡಿಸುವುದಕ್ಕಾಗಿ, ಕಾಮಿನಿಯೆಂಬ ಕಟ್ಟ ನದಿಯಲ್ಲಿ ಮುಳುಗಿ ಬಿಟ್ಟೆ ॥೪೪॥

ಈ ವಿಲಾಸಿನಿಯೆಂಬ ದುಷ್ಟನದಿಯು, ಮಾಯೆಯೆಂಬ ಪರ್ವತದಲ್ಲಿ ಹುಟ್ಟುವುದು, ಮನಸ್ಸೆಂಬ ನೆಲದಲ್ಲಿ ಹರಿಯುವುದು, ಆಮೇಲೆ ಧೈರ್ಯವೆಂಬ ಪರ್ವತಗಳನ್ನು ಸೀಳಿಕೊಂಡು, ನರಕವೆಂಬ ಸಮುದ್ರವನ್ನು ಪ್ರವೇಶಿಸುವುದು ॥೪೫॥

ರೂಪಯೌವನಪಾನೀಯಾ ತ್ರಿವಳೀಭ್ರೂತರಙ್ಗಿಣೀ ।
ನಾಭ್ಯಾವರ್ತಾ ತೀವ್ರವೇಗಾ ಸದಾ ಕುಟಿಲಗಾಮಿನೀ ॥೪೬॥
ಶಿಙ್ಘಾಣದೂಷಿಕಾಲಾಲಾಫೇನಬುದ್ಬುದರೂಷಿತಾ ।
ಮಲಮಾಂಸವಸಾಪಿತ್ತಶ್ಲೇಷ್ಮಾಸೃಕ್ಪೂಯಪಙ್ಕಿಲಾ ॥೪೭॥
ಪೀನೋರುಮೀನಾಬ್ಜಕೂರ್ಮಾ ಬಾಹುವಾರುಣಪಾಶಿನೀ ।
ಕಕ್ಷೋಪಗುಹ್ಯನೂಪಾಢ್ಯಾ ಚಕ್ರವಾಕಯುಗಸ್ತನೀ ॥೪೮॥
ನಿತಮ್ಬಪುಳಿನವ್ಯಾತಾ ನಖದನ್ತಾಳಶುಕ್ತಿಕಾ ।
ಚಕ್ಷುರ್ಭೃಙ್ಗಾಪೀತಲಸನ್ಮುಖಾಬ್ಜಕೇಶಶೈವಲಾ ॥೪೯॥
ರೋಮರಾಜಿಮಹಾಕೃಷ್ಣಸರ್ಪಸಙ್ಕ್ರನ್ತಮಧ್ಯಮಾ ।
ದುರುಕ್ತಿಕರ್ಕಟೀಯುಕ್ತಾ ಬಕಕಾಮುಕಸೇವಿತಾ ॥೫೦॥
ಕಟಾಕ್ಷಕಣ್ಟಕಾಕ್ರಾನ್ತಾ ನಾಡ್ಯಾಸ್ತ್ರವರವೇತಸಾ ।

ಈ ವಿಲಾಸಿನಿಯೆಂಬ ನದಿಗ, ರೂಪವೂ ಯೌವನವೂ ಜಲವಾಗಿರುವುವು, ತ್ರಿವಳಿಗಳೂ ಭ್ರೂವಿಕ್ಷೇಪಗಳೂ ತರಂಗಗಳು, ನಾಭಿಯಂಬುದೇ ಆವರ್ತ(ಸುಳಿ)ವು ಇದು ಅತಿವೇಗದಿಂದ ಸರ್ವದಾ ಕುಟಿಲವಾಗಿ ಹೋಗುತಿರುವುದು ॥೪೬॥

ಶಿಂಘಾಣ(ಸಿಂಬಳ) ದೂಷಿಕೆ(ಜಿವುರು) ಲಾಲೆ(ಜೊಲ್ಲು)ಗಳೆಂಬ ನೊರೆಗಳಿಂದಲೂ ಬುದ್ಬುದ (ಗುಳ್ಳೆ)ಗಳಿಂದಲೂ ಇದು ವ್ಯಾಪ್ತವಾಗಿರುವುದು, ಮಲ ಮಾಂಸ ಕೊಬ್ಬು ಶ್ಲೇಷ್ಮ ರಕ್ತ ಮುಂತಾದುವುಗಳೆಂಬ ಕಸುನಿಂದ ತುಂಬಿರುವುದು ॥೪೭॥

ಸ್ಥೂಲವಾದ ಊರುಗಳೆಂಬ ಮೀನಗಳಿಂದಲೂ, ಪಾದಗಳೆಂಬ ಕೂರ್ಮಗಳಿಂದಲೂ, ಬಾಹು ಗಳೆಂಬ ವರುಣಪಾಶ(ನೀರಿನಲ್ಲ ಹುಟ್ಟುವ ಒಂದು ವಿಧವಾದ ಬಳ್ಳಿ)ಗಳಿಂದಲೂ, ಕಕ್ಷ ಗುಹ್ಯ ಮುಂತಾದುವುಗಳೆಂಬ ಜೋಗುಭೂಮಿಯಿಂದಲೂ, ಸ್ತನಯುಗ್ಮವೆಂಬ ಚಕ್ರವಾಕಗಳಿಂದಲೂ ಯುಕ್ತವಾಗಿರುವುದು ॥೪೮॥

ನಿತಂಬಗಳೆಂಬ ಮಳಲುಗುಡ್ಡೆಗಳಿಂದಲೂ, ನಖ ದಂತಗಳೆಂಬ ಮುತ್ತಿನ ಚಿಪ್ಪುಗಳಿಂದಲೂ ಕೂಡಿಕೊಂಡಿರುವುದು ನೇತ್ರಗಳೆಂಬ ಭೃಮರಗಳು, ಇದರಲ್ಲಿರುವ ಮುಖವೆಂಬ ಕೆಮಲಗಳನ್ನು ಪಾನಮಾಡುತಿರುವುವು ಕೇಶಗಳೆಂಬ ಶೈವಾಲ(ಪಾವುಜೆ)ಗಳು ಇದರಲ್ಲಿ ವ್ಯಾಪ್ತವಾಗಿರುವುವು॥

ರೋಮರಾಜಿಯಂಬ ದೊಡ್ಡ ಕೃಷ್ಣಸರ್ಪವು, ಈ ವಿಲಾಸಿನಿಯಂಬ ನದಿಯ ಸೊಂಟವೆಂಬ ಮಧ್ಯಭಾಗವನ್ನು ಆಕ್ರಮಿಸಿಕೊಂಡಿರುವುದು, ದುರ್ಭಾಷೆಗಳೆಂಬ ಕರ್ಕಟೆ(ನಳ್ಳಿ)ಗಳು ಇದರಲ್ಲಿ ಯಥೇಚ್ಛವಾಗಿರುವುವು, ಕಾಮುಕರೆಂಬ ಬಕಗಳಿಂದ ಇದು ಸೇವಿತವಾಗಿರುವುದು ॥೫೦॥

ಕಟಾಕ್ಷಗಳೆಂಬ ಕಂಟಕಗಳಿಂದ ಇದು ಆಕ್ರಮಿಸಲ್ಪಟ್ಟಿರುವುದು ನಾಡಿಗಳೂ ನರಗಳೂ ಇದರಲ್ಲಿ ಜೊಂಡುಹುಲ್ಲಾಗಿರುವುವು. ತೀಕ್ಷ್ಣವಾದ ನೇತ್ರವೆಂಬ ಶರ್ಕರೆ(ನುರುಜುಗಲ್ಲು)ಗಳಿಂದ

ತೀಕ್ಷ್ಣಾಕ್ಷಿಶರ್ಕರಾ ಘೋರಾ ತೀಕ್ಷ್ಣಾಪಲಸಮಾಶಯಾ ॥೫೧॥
ಸರ್ವತ್ರ ದುರ್ಮಲಾಲೇಪಾ ದುರ್ಗನ್ಧಪರಿಪೂರಿತಾ ।
ಕರ್ಣನಾಸಾದ್ಯತಿಶ್ವಭ್ರಾ ಕುಟಿಲಾಳಕವಾಗುರಾ ॥೫೨॥
ಭಾವಗ್ರಾಹಾ ದುರ್ವಿಗಾಹ್ಯಾ ದ್ರಷ್ಟುಮಾಪಾತತಃ ಪ್ರಿಯಾ ।
ಅವತರ್ತುಂ ಸುಖಂ ಶಕ್ಯಾ ಹ್ಯುತ್ತರ್ತುಂ ತು ನ ಶಕ್ಯತೇ ॥೫೩॥
ತಸ್ಮಾನ್ನೈಕ್ಷೇನ್ನ ಸ್ಪೃಶೇತ್ ತಾಂ ನ ಧ್ಯಾಯೇಚ್ಚ ವಿವೇಕವಾನ್ ।
ತದ್ಧ್ಯಾನಾದಪಿ ಮೂರ್ಖಾನ್ತಾಃ ದುರವಸ್ಥಾಭವನ್ತಿ ಹಿ ॥೫೪॥
ಮೋಹಾನ್ಧಕಾರಚನ್ನಾಯಾಂ ಅಸ್ಯಾಂ ಮಜ್ಜತಿ ಯೋ ಭ್ರಮಾತ್ ।
ತೃಣಚ್ಛನ್ನಾನ್ನೋದಪಾನೇ ಗಜವನ್ನಶ್ಯತಿ ಧ್ರುವಮ್ ॥೫೫॥
ದೃಷ್ಟ್ವೈತತ್ಸೇವಯಾ ನಷ್ಟಾನ್ ಮೂರ್ಛಿತಾನಪಿ ದುಃಖಿತಾನ್ ।
ವಿದ್ವಾನಪ್ಯಾಶ್ರಯತ್ಯೇನಾಂ ದುರ್ಜ್ಞಾಜ್ಞಾ ಹರೇಃ ಖಲು ॥೫೬॥

ಈ ಮಹಾಘೋರವಾದ ವಿಲಾಸಿನೀ ನದಿಯು ತುಂಬಿರುವುದು, ಇದರ ಆಶಯವೆಲ್ಲವೂ ಕೀನಲ ಪಾಷಾಣಮಯವಾಗಿರುವುದು ॥೫೧॥

ಈ ವಿಲಾಸಿನಿಯೆಂಬ ನದಿಯಲ್ಲಿ ಎಲ್ಲೆಲ್ಲಿಯೂ ಕೆಟ್ಟ ಮಲಗಳೂ ಕೆಟ್ಟ ಗಂಧವೂ ತುಂಬಿರುವುವು ಕರ್ಣ ನಾಸಿಕೆ ಮುಂತಾದುವುಗಳೇ ಇದರಲ್ಲಿ ಗುಂಡಿಗಳಾಗಿರುವುವು ಕುಟಿಲವಾದ ಅಲಕ (ಮುಂಗುರುಳು)ಗಳು, ಇದರಲ್ಲಿ ಬೀಸಲ್ಪಟ್ಟ ಬಲೆಯಾಗಿರುವುವು ॥೫೨॥

ಭಾವಗಳೆಂಬ ಮೊಸಳೆಗಳಿಂದ ಇದು ವ್ಯಾಪ್ತವಾಗಿರುವುದು ಇದರ ಆಳವನ್ನು ತಿಳಿಯುವುದು ಯಾರಿಗೂ ಸಾಧ್ಯವಲ್ಲ ಆಪಾತತಃ ನೋಡುವುದಕ್ಕೆ ಚೆಂದವಾಗಿ ಕಾಣಿಸುವುದು ಇದರಲ್ಲಿ ಇಳಿಯುವುದು ಬಹು ಸುಖವಾಗಿರುವುದು, ಅಲ್ಲಿಂದ ಏಳುವುದಕ್ಕಾದರೋ, ಸುತರಾಂ ಸಾಧ್ಯವಲ್ಲ ॥೫೩॥

ಅದು ಕಾರಣ, ವಿವೇಕಿಯಾದವನು, ಈ ವಿಲಾಸಿನಿಯಂಬ ನದಿಯನ್ನು ನೋಡಬಾರದು, ಇದನ್ನು ಮುಟ್ಟಬಾರದು, ಕೊನೆಗೆ ಇದನ್ನು ಧ್ಯಾನಿಸಲೂ ಬಾರದು ಇದರ ಧ್ಯಾನದಿಂದಲೂ ಕೂಡ, ಮೂರ್ಖೆಯವರೆಗೂ ದುರವಸ್ಥೆಗಳು ಸಂಭವಿಸುವುವು ॥೫೪॥

ಮೋಹವೆಂಬ ಅಂಧಕಾರದಿಂದ ಆವೃತವಾಗಿರುವ ಈ ವಿಲಾಸಿನೀನದಿಯಲ್ಲಿ ಯಾವನು ಭ್ರಮೆಯಿಂದ ಮಗ್ನನಾಗುವನೋ, ಅವನು-ಹುಲ್ಲುಗಳಿಂದ ಮುಚ್ಚಲ್ಪಟ್ಟಿರುವ ಪಾಳುಭಾವಿಯೊಳಗೆ ಬಿದ್ದ ಆನೆಯಂತೆ-ನಿಶ್ಚಯವಾಗಿ ನಾಶಹೊಂದುವನು ॥೫೫॥

ಈ ವಿಲಾಸಿನಿಯ ಸೇವನೆಯಿಂದ ನಷ್ಟರಾಗಿಯೂ ಮೂರ್ಛಿತರಾಗಿಯೂ ದುಃಖಿತರಾಗಿಯೂ ಇರುವವರನ್ನು ಗೊತ್ತಿಲ್ಲದಷ್ಟು ನೋಡುತಿದ್ದರೂ, ಪ್ರಾಜ್ಞನೂ ಕೂಡ ಈ ವಿಲಾಸಿನೀ ನದಿಯನ್ನು ಆಶ್ರಯಿಸುವನಲ್ಲ! ಆ ಶ್ರೀಹರಿಯ ಆಜ್ಞೆಯು ಎಂಥವರಿಗೂ ಮೀರಲಸಾಧ್ಯವಾದುದು ॥೫೬॥

ದೃಢವೈರಾಗ್ಯನಾವೈನಾಂ ದೋಷದೃಕ್ಕರ್ಣಧಾರತಃ ।
ರಾಮಾನುಗ್ರಹತಸ್ಸನ್ತಃ ತೀರ್ತ್ವಾ ತಾಮಧ್ವಪಾರಗಾಃ ॥೫೬॥
ಏವಂವಿಧವಧೂನದ್ಯಾಂ ಸ್ನಾನಾಭ್ಯಾಸಾತ್ ತವಾಮಯಃ ।
ವರ್ಧಿತೋದ್ಯ ಪ್ರಲಾಪಾಖ್ಯಸನ್ನಿಪಾತಾಯ ಕಲ್ಪತೇ ॥೫೭॥
ತತ್ಸನ್ನಿಪಾತಜಾಂ ದೋಷಾಂ ಚಿಕಿತ್ಸಾರ್ಹಾಂ ಗುಣಾನಪಿ ।
ವಕ್ಷ್ಯೇಽಹಂ ತ್ವಂ ಸುನಿಶ್ಚಿತ್ಯ ಯಥೇಚ್ಛಸಿ ತಥಾ ಕುರು ॥೫೮॥
ಪ್ರಥಮಂ ಹೃದಯೇ ಗ್ರನ್ಥಿಃ ಜಾತಾ ಚಿದಚಿದಾತ್ಮಕಾ ।
ತತಸ್ತದ್ಗ್ರನ್ಥಿತೋ ಜಾತಾಃ ಕಾಮಾದಿಕ್ರಿಮಯಃ ಕ್ರಮಾತ್ ॥೬೦॥
ತದ್ವೇದನಾವಶೇನೈವ ದುರ್ಗುಣಾಃ ಕ್ರಮಶೋಭವನ್ ।
ತಪವ ಸರ್ವಜೀವಾನಾಂ ಭವರೋಗೈಕಕಾರಣಮ್ ॥೬೧॥
ಭ್ರಾನ್ತ್ಯಾ ಮಮಾಹಮಿತ್ಯಾದಿಪ್ರಲಾಪಾಃ ಸ್ಯುರನೇಕಧಾ ।
ಧರ್ಮಪ್ರವಚನಚ್ಛದ್ಮಿಃ ಪಾಪಾನುಕ್ತಿಮಲಗ್ರಹಃ ।

ಆದರೆ, ಶ್ರೀರಾಮನ ಅನುಗ್ರಹಕ್ಕೆ ಪಾತ್ರರಾದ ಸತ್ಪುರುಷರು, ವಿಷಯಗಳಲ್ಲಿ ದೋಷ ದರ್ಶನವೆಂಬ ನಾವಿಕನ ಸಾಹಾಯ್ಯದಿಂದ–ವೈರಾಗ್ಯವೆಂಬ ದೃಢವಾದ ನಾವೆಯನ್ನು ಆಶ್ರಯಿಸಿ, ಆದರಿಂದ ಈ ವಿಲಾಸಿನಿಯೆಂಬ ನದಿಯನ್ನು ದಾಟಿ ಆಚೆಯದಡವನ್ನು ಸೇರುವರು ॥೫೬॥

ಅಯ್ಯಾ! ಬ್ರಾಹ್ಮಣ! ಈರೀತಿಯಾಗಿರುವ ವಿಲಾಸಿನಿಯೆಂಬ ನದಿಯೊಳಗೆ ನೀನು ಮತ್ತೆಮತ್ತೆ ಸ್ನಾನಮಾಡಿದೆಯಾದಕಾರಣ, ನಿನಗೆ ಸಂಸಾರವೆಂಬ ರೋಗವು ಪ್ರಬಲಿಸಿಬಿಟ್ಟಿತು, ಈಗ ಅದು ಪ್ರಲಾಪವೆಂಬ ಸನ್ನಿಪಾತವನ್ನು ಹುಟ್ಟಿಸಿರುವುದು ॥೫೭॥

ಈ ಸನ್ನಿಪಾತದಲ್ಲಿರುವ ದೋಷಗಳನ್ನೂ, ಇದರಲ್ಲಿ ಚಿಕಿತ್ಸೆಗೆ ಯೋಗ್ಯವಾಗಿರುವ ಗುಣ ಗಳನ್ನೂ ಕೂಡ, ಈಗ ನಾನು ನಿನಗೆ ನಿಶ್ಚಯಿಸಿ ಹೇಳಿಕೊಡುವೆನು, ಬಳಿಕ ನಿನಗೆ ಹೇಗೆ ತೋರುತ್ತದೆಯೋ ಹಾಗೆ ಮಾಡಬಹುದು ॥೫೮॥

ಮೊದಲು ನಿನಗೆ ಹೃದಯದಲ್ಲಿ ಚಿದಚಿದಾತ್ಮಕವಾದ ಒಂದು ಗ್ರಂಥಿಯು ಕಾಣಿಸಿಕೊಂ ಡಿತು. ಆಮೇಲೆ ಆ ಗ್ರಂಥಿಯಿಂದ ಕ್ರಮವಾಗಿ ಕಾಮಕ್ರೋಧಾದಿಗಳೆಂಬ ಕ್ರಿಮಿಗಳು ಹುಟ್ಟಿ ದುವು ॥೬೦॥

ಆಮೇಲೆ ಅದರ ಯಾತನೆಯಿಂದಲೇ ಕ್ರಮವಾಗಿ ನಾನಾವಿಧವಾದ ದುರ್ಗುಣಗಳುಂಟಾ ದುವು ಈ ದುರ್ಗುಣಗಳೇ, ಸಮಸ್ತ ಪ್ರಾಣಿಗಳಿಗೂ ಸಂಸಾರವೆಂಬ ರೋಗಕ್ಕೆ ಮುಖ್ಯಕಾರಣ ವಾಗುವುವು ॥೬೧॥

ಆ ಬಳಿಕ, ಭ್ರಾನ್ತಿಯಿಂದ 'ನನ್ನದು–ನಾನು' ಇತ್ಯಾದಿರೂಪವಾಗಿ ಅನೇಕವಿಧ ಪ್ರಲಾಪ ಗಳುಂಟಾದುವು, ಆನಂತರ, ತಾನುಮಾಡಿದ ಧರ್ಮವನ್ನು ಪ್ರಕಟಿಸಿಕೊಳ್ಳೋಣವೆಂಬ ವಮನವೂ,

ಮಹತ್ಸೇವಾಭಾವಬುದ್ಧಿಪೂರ್ವ್ಯಂ ಸ್ಯಾದ್ಭವರೋಗಜಮ್ ॥೬೦॥
ಸದಾ ಯಾಚ್ಞಾಮಹಾಯಾಸಚಿನ್ತಾಕೋಪತಾಪವಾ ।
ವಿವೇಕಭಕ್ತ್ಯಭಾವಾಭ್ಯಃ ಕ್ಷುತ್ತೃಷ್ಣಾಭಾವಉತ್ಥಿತಃ ॥೬೧॥
ಸ್ವರೂಪಾಲೋಚನಾಪ್ರೀತಿರೂಪಾನ್ನದ್ವೇಷಧೀಸ್ತತಃ ।
ಶ್ರವಣಾಭಾವಸಜ್ಞಾರಾಭಾವಸ್ತಸ್ಮಾತ್ ಸಮುತ್ಥಿತಃ ॥೬೪॥
ಪುತ್ರಮಿತ್ರಕಳತ್ರಾದಿಸ್ನೇಹಶೋಭೋದಯೋಽಭೂತ್ ।
ಅವಸ್ಥಾತ್ರಯದುಸ್ಸ್ವಪ್ನವಿಷಯಸ್ಖಲಿತೇನ್ದ್ರಿಯಃ ॥೬೫॥
ಪ್ರವೃತ್ತಿಯಾತನಾ ಶಶ್ವದ್ದೈನ್ಯಗಾತ್ರವಿವರ್ಣತಾ ।
ಸಜ್ಞಾನೌಷಧವಿದ್ವೇಷೋ ವಿಷಯಾಪಥ್ಯಕೇ ರುಜಃ ॥೬೬॥
ಅತಿತೃಷ್ಣಾ ವಿದಾಹೋಽಪಿ ದುಷ್ಪೂರೋಜಾಣ್ಡಕೋಟಿಭಿಃ ।
ತದ್ವತ್ ಕರ್ತೃತ್ವಭೋಕ್ತೃತ್ವಹಿಕ್ಕಾಪ್ಯಾಸೀತ್ ಸದಾ ದ್ವಿಜ ॥೬೭॥

ವಾಪಗಳನ್ನು ಹೇಳಿಕೊಳ್ಳದಿರೋಣವೆಂಬ ಮಲಬಂಧವೂ, ಮಹಾತ್ಮರನ್ನು ಸೇವಿಸದಿರುವಿಕೆಯೆಂಬ ಬುದ್ಧಿಮೊಂದ್ಯವೂ ಕೂಡ, ಈ ಭವರೋಗದಿಂದ ಕ್ರಮವಾಗಿ ಕಾಣಿಸಿಕೊಂಡುವು ॥೬೨॥

ಅನಂತರ, ವಿವೇಕವೂ ಭಗವದ್ಭಕ್ತಿಯೂ ಇಲ್ಲದಿರುವಿಕೆಯೆಂಬ ಕ್ಷುತ್ ತೃಷ್ಣೆಗಳ ಅಭಾವವುದಯಿಸಿತು ಇದರ ಜತೆಗೆ, ಸರ್ವದಾ ಯಾಚನೆಯೆಂಬ ಮುಹತ್ತಾದ ಆಯಾಸವೂ, ಚಿಂತೆಯೆಂಬ ಕೋಪತಾಪಗಳೂ ಸೇರಿದುವು ॥೬೩॥

ಆಮೇಲೆ, ಸ್ವಸ್ವರೂಪಪರ್ಯಾಲೋಚನೆಯಲ್ಲಿ ಆಪ್ರೀತಿಯೆಂಬ ಅನ್ನದ್ವೇಷವುದಯಿಸಿತು, ಅನಂತರ, ವೇದಾಂತವಾಕ್ಯಶ್ರವಣವಿಲ್ಲದಿರುವಿಕೆಯೆಂಬ ಸಂಚಾರಾಭಾವವು(ತಿರುಗಾಡಲಾರದಿರುವಿಕೆ) ಉತ್ಪನ್ನವಾಯಿತು ॥೬೪॥

ಬಳಿಕ, ಪುತ್ರ ಮಿತ್ರ ಕಳತ್ರ ಮುಂತಾದವರಲ್ಲಿ ಸ್ನೇಹವೆಂಬ ಶೋಭೆಯೂ ಕಾಣಿಸಿಕೊಂಡಿತು. ಆಮೇಲೆ, ಜಾಗ್ರತ್ ಸ್ವಪ್ನ ಸುಷುಪ್ತಿ ರೂಪವಾದ ಅವಸ್ಥಾತ್ರಯವೆಂಬ ದುಸ್ಸ್ವಪ್ನವುಂಟಾಗಿ; ವಿಷಯಾಭಿನಿವೇತವೆಂಬ ವೀರ್ಯನಾಶವಾಯಿತು ॥೬೫॥

ಪ್ರವೃತ್ತಿಮಾರ್ಗದಲ್ಲಿ ಆಸಕ್ತಿಯೆಂಬ ಯಾತನೆಯೂ, ದೈನ್ಯವೆಂಬ ಶರೀರವಿವರ್ಣತೆ (ಬಣ್ಣಕೆಡುವಿಕೆ)ಯೂ, ಉತ್ತಮವಾದ ಜ್ಞಾನವೆಂಬ ದಿವ್ಯೌಷಧದಲ್ಲಿ ದ್ವೇಷವೂ, ವಿಷಯಭೋಗವೆಂಬ ಅಪಥ್ಯದಲ್ಲಿ ಅಭಿರುಚಿಯೂ ಪದೇಪದೇ ಉಂಟಾದುವು ॥೬೬॥

ಅತ್ಯಾಶೆಯೆಂಬ ವಿಶೇಷವಾದ ದಾಹವೂ ಕಾಣಿಸಿಕೊಂಡಿತು, ಅನೇಕಕೋಟಿ ಬ್ರಹ್ಮಾಂಡಗಳನ್ನು ತಂದುಕೊಟ್ಟರೂ ಈ ದಾಹವಡಗುವಂತಿರಲಿಲ್ಲ. ಹಾಗೆಯೇ, ಅಯ್ಯಾ! ಬ್ರಾಹ್ಮಣ! ಕರ್ತೃತ್ವ ಭೋಕ್ತೃತ್ವಗಳೆಂಬ ಬಿಕ್ಕಳಿಕೆಯೂ ನಿನಗೆ ಕಾಣಿಸಿಕೊಂಡಿತು ॥೬೭॥

ಶೋಕೋರ್ಧ್ವಶ್ವಾಸಸಂಭೂತಿಃ ಮೋಹಮೂರ್ಛಾ ಪ್ರತಿಕ್ಷಣಮ್ ।
ಮನೋರಥೋಪರೋಗಾಣಾಂ ನ ಸಙ್ಖ್ಯಾ ವಿದ್ಯತೇನಘ ॥೬೪॥

ಧನಲೋಭಪಿಶಾಚೇನ ಗ್ರಸ್ತಃ ಕ್ರೂರೇಣ ಪಾಪಿನಾ ।
ಪರಸ್ತ್ರೀಕಾಮಿನೀಭೂತಗ್ರಸ್ತಜೆತ್ತೋಪಿ ಲಕ್ಷ್ಯಸೇ ॥೬೫॥

ಏತೇ ಚಾನ್ಯೇ ಚ ಬಹವಗುಣಾಃ ಬಹವಸ್ಸನ್ತಿ ಸಾಂಪ್ರತಮ್ ।
ಏವಂವಿಧೈರವಗುಣೈಃ ಜೀವಸಿ ತ್ವಂ ಯದೃಚ್ಛಯಾ ॥೬೦॥

ಕಶ್ಚಿಚ್ಛುದ್ಧಗುಣಸ್ಸೂಕ್ಷ್ಮೋ ವಿದ್ಯತೇ ತೇನ ಜೀವಸಿ ।
ತಂ ದೃಷ್ಟ್ವೌಷಧಂ ದಾತುಂ ಇಚ್ಛಾ ಮೇ ಜಾಯತೇ ತವ ॥೬೧॥

ಯದ್ಯೌಷಧಜಿಘೃಕ್ಷಾ ತೇ ಸಾಧನಾನ್ಯಸ್ಯ ಸಾಧಯ ।
ನ ಸಾಧನೈರ್ವಿನಾ ಕಿಂಚಿತ್ ಭೈಷಜಂ ಸಿಧ್ಯತಿ ಕ್ವಚಿತ್ ॥೬೨॥

ನಾನೋಪಾಯೈರ್ಯದಾ ಶ್ರದ್ಧಾ ಪುಷ್ಟಿಃ ಪಿತ್ತಕಫಾದಿವತ್ ।

ಆಮೇಲೆ, ಶೋಕವೆಂಬ ಮೇಲುಸಿರು ಬರುವುದಕ್ಕುಪಕ್ರಮಿಸಿತು, ಪ್ರತಿ ನಿಮಿಷವೂ ಮೋಹವೆಂಬ ಮೂರ್ಛೆಯುಂಟಾಯಿತು ಅನಂತರ, ಮನೋರಥಗಳೆಂಬ ಉಪರೋಗಗಳು ಲೆಕ್ಕವಿಲ್ಲದಂತೆ ಕಾಣಿಸಿಕೊಂಡುವು ॥೬೪॥

ಮಹಾಕ್ರೂರವಾದ ಧನಲೋಭವೆಂಬ ಪಾಪ ಪಿಶಾಚಿಯೂ ನಿನ್ನನ್ನು ಹಿಡಿದುಕೊಂಡಿತು ಇದರ ಜತೆಗೆ, ಪರಸ್ತ್ರೀಯೆಂಬ ಹೆಣ್ಣುಪಿಶಾಚವೂ ನಿನ್ನ ಮನಸ್ಸನ್ನು ಮೆಟ್ಟಿಕೊಂಡಿರುವುದು ॥೬೫॥

ಆರ್ಯಾ! ಬ್ರಾಹ್ಮಣ! ಈಗ ನಿನ್ನಲ್ಲಿ ಈ ದುರ್ಗುಣಗಳೂ ಇನ್ನೂ ಅನೇಕವಾದ ದುರ್ಗುಣಗಳೂ ಇರುವುವು ಇಂತಹ ದುರ್ಗುಣಗಳಿದ್ದಾಗ್ಗೂ ನೀನು ಜೀವಿಸಿರುವುದು ಆಕಸ್ಮಿಕವೆಂದು ತೋರುವುದು ॥೬೦॥

ಆದರೆ, ಅತಿಸೂಕ್ಷ್ಮವಾದ ಒಂದು ಸುಗುಣವಿರುವುದು, ಅದರಿಂದಲೇ ನೀನು ಇನ್ನೂ ಬದುಕಿರುವೆ. ಇದನ್ನು ನೋಡಿಯೇ, ನಿನಗೆ ಔಷಧವನ್ನು ಕೊಡಬೇಕೆಂದು ನನಗೆ ಇಚ್ಛೆಯುಂಟಾಗಿರುವುದು ॥೬೧॥

ನಾನು ಕೊಡುವ ಔಷಧವನ್ನು ತೆಗೆದುಕೊಳ್ಳಬೇಕೆಂದು ನಿನಗೆ ಇಚ್ಛೆಯಿದ್ದಪಕ್ಷದಲ್ಲಿ, ಇದಕ್ಕೆ ತಕ್ಕ ಸಾಧನಗಳನ್ನು ಸಂಪಾದಿಸಿಕೊ. ಸಾಧನಗಳಿಲ್ಲದಿದ್ದರೆ, ಎಲ್ಲಿಯೂ ಯಾವ ಔಷಧವೂ ಸಿದ್ಧಿಸುವುದಿಲ್ಲವಲ್ಲವೆ! ॥೬೨॥

ನಾನಾವಿಧವಾದ ಉಪಾಯಗಳಿಂದ ಶ್ರದ್ಧೆಯಂಬ ಕಾಯಪುಷ್ಟಿಯುಂಟಾಗಿ–ಕರ್ಮ ವಿವೇಕಗಳೆಂಬ ಸೂಕ್ಷ್ಮವಾದ ಪಿತ್ತ ಕಫ ನಾಡಿಗಳು ಸ್ವಲ್ಪ ಉಲ್ಬಣವಾಗಿ ಜಲಿಸುವುದಕ್ಕುಪಕ್ರ

ನಾಡೀ ಕರ್ಮವಿವೇಕಾಖ್ಯೇ ಸೂಕ್ಷ್ಮೇ ಸ್ಯಾತಾಂ ತದಾ ಸುಖಮ್ ॥೭೩॥

ವೇದಧರಉವಾಚ

ವದ ತತ್ಸಾಧನಂ ಬ್ರಹ್ಮರ್ಷೆ ಅಸಾಧ್ಯಮಪಿ ಸಾಧಯೇ ।
ಯಥಾಕಥಞ್ಚಿನ್ಮಾಂ ದೀನಂ ಮೋಚಯಸ್ವ ಭವಾಮಯಾತ್ ॥೭೪॥

ಶ್ರೀಗುರುರುವಾಚ

ಚಿಕಿತ್ಸಾದೌ ತು ವೇದಾನ್ತಶಾಸ್ತ್ರಭಸ್ತ್ರಾವಿಮೋಚನೇ ।
ಕಿಞ್ಚಿತ್ ಪ್ರದೇಯಂ ಶಿಷ್ಯೇಣ ಗುರುವೇ ತದ್ದದಸ್ವ ಮೇ ॥೭೫॥
ಜ್ಞಾನಾಮೃತೇನ ತೃಪ್ತಸ್ಯ ನ ಮೇ ಕಾಙ್ಕ್ಷಾಸ್ತಿ ಕುತ್ರಚಿತ್ ।
ತಥಾಪ್ಯನುಗ್ರಹಾರ್ಥಂ ತೇ ಕಾಙ್ಕ್ಷಿತಂ ಜ್ಞಾನಸಿದ್ಧಯೇ ॥೭೬॥

ಶಿಷ್ಯಉವಾಚ

ದೇಹಪ್ರಾಣೇನ್ದ್ರಿಯಾದನ್ಯತ್ ನ ಮೇ ಸ್ವಾಧೀನಮಣ್ವಪಿ ।
ತಾನಿ ಯುಷ್ಮದಧೀನಾನಿ ಕೃತ್ವಾ ಬೋಧಯ ಮಾಂ ಗುರೋ ॥೭೭॥

ಏಸಿದಪಕ್ಷದಲ್ಲಿ, ಆಗ ನಿನಗ ಸೌಖ್ಯವುಂಟಾಗುವುದು (ಎಂದು ದತ್ತಾತ್ರೇಯಮುನಿಯು ಹೇಳಿದನು) ॥೭೩॥

ಇದನ್ನು ಕೇಳಿ ವೇದಧರನು ಹೇಳುವನು —

ಎಲೈ ಬ್ರಹ್ಮರ್ಷಿವರ್ಯನೆ! ಈಗ ತಾವು ಹೇಳಿದ ಆ ಸಾಧನವನ್ನು ನನಗೆ ಉಪದೇಶಿಸ ಬೇಕು ಅದು ಎಂತಹ ಅಸಾಧ್ಯವಾಗಿದ್ದರೂ ನಾನು ಸಾಧಿಸುವೆನು ಅತಿ ದೀನನಾಗಿರುವ ನನ್ನನ್ನು ಹೇಗಾದರೂ ಮಾಡಿ ಈ ಸಂಸಾರರೋಗದದೆಸೆಯಿಂದ ನೀನು ಬಿಡಿಸಬೇಕು ॥೭೪॥

ಇದಕ್ಕೆ ಶ್ರೀ ಗುರುವು ಉತ್ತರ ಹೇಳುವನು —

ಅಯ್ಯಾ! ಬ್ರಾಹ್ಮಣ! ಚಿಕಿತ್ಸೆಗೆ ಉಪಕ್ರಮ ಮಾಡುವಾಗ ವೇದಾಂತಶಾಸ್ತ್ರವೆಂಬ ಭಸ್ಮಿಕೆ(ಕರಾಬ)ಯನ್ನು ಬಚ್ಚಬೇಕಾದರೆ, ಶಿಷ್ಯನು ಗುರುವಿಗೆ ಏನಾದರೂ ಸ್ವಲ್ಪ ಕೊಡಬೇಕ ಲ್ಲವೆ! ನೀನು ಈಗ ನನಗೆ ಅದನ್ನು ಕೊಡುವನಾಗು ॥೭೫॥

ವಸ್ತುತಃ ಜ್ಞಾನವೆಂಬ ಅಮೃತದಿಂದ ತೃಪ್ತನಾಗಿರುವ ನನಗೆ ಯಾವುದರಲ್ಲಿಯೂ ಆಶೆ ಯಿಲ್ಲ, ಆದರೂ, ನಿನಗೆ ಜ್ಞಾನ ಹುಟ್ಟುವುದಕ್ಕೋಸ್ಕರ ನಿನ್ನ ಅನುಗ್ರಹಾರ್ಥವಾಗಿ ನಾನು ಸ್ವಲ್ಪ ಆಶಪಡಬೇಕಾಗಿರುವುದು ॥೭೬॥

ಇದನ್ನು ಕೇಳಿ ಶಿಷ್ಯನು ವಿಜ್ಞಾಪಿಸುವನು —

ಎಲೈ ಗುರುವರ್ಯನೆ! ದೇಹ ಪ್ರಾಣ ಇಂದ್ರಿಯಗಳು ಹೊರತಾಗಿ ಮತ್ತಾವುದೊಂದೂ ಅತ್ಯಲ್ಪವೂ ನನ್ನ ಸ್ವಾಧೀನವಲ್ಲ ಇವುಗಳನ್ನು ಈಗ ತಾವು ತಮ್ಮ ಅಧೀನವನ್ನಾಗಿ ಮಾಡಿ ಕೊಂಡು ನನಗೆ ಉಪದೇಶಮಾಡಬೇಕು ॥೭೭॥

ತರ್ಹಿ ಮದ್ವಚನೇ ಶದ್ಧಾಂ ದೃಢಾಂ ಕುರು ಸಮಾಹಿತಃ ।
ಇತ್ಯುಕ್ತ್ವಾ ತಾಂ ಸಮಾದಾಯ ಭೇಷಜಂ ವಕ್ತುಮಾರಭತ್ ॥೩೯॥

ಇತಿ ಶ್ರೀಮತ್ಸುನ್ದರಕಾಣ್ಡೇ ಭವರೋಗಸ್ವರೂಪನಿರೂಪಣಂ ನಾಮ
ಪಞ್ಚದಶಃ ಸರ್ಗಃ



ಹೀಗೆ ತನ್ನ ಸರ್ವಸ್ವವನ್ನೂ ಸಮರ್ಪಸುತಿರುವ ಆ ಬ್ರಾಹ್ಮಣನನ್ನು ನೋಡಿ, ದತ್ತಾತ್ರೇಯ ಮುನಿಯು ' ಹಾಗಾದರೆ ನನ್ನ ಮಾತಿನಲ್ಲಿ ದೃಢವಾಗಿ ನಂಬುಗೆಯನ್ನಿಡು ' ಎಂದು ಹೇಳಿ, ಅವನನ್ನು ಸಮಾಧಾನಪಡಿಸಿ ಸಂಸಾರರೋಗಕ್ಕೆ ಔಷಧವನ್ನು ಹೇಳಲುಪಕ್ರಮಿಸಿದನು ॥೩೯॥

ಇದು ಸುಂದರಕಾಂಡದಲ್ಲಿ ಭವರೋಗಸ್ವರೂಪನಿರೂಪಣವೆಂಬ
ಹದಿನೈದನೆಯ ಸರ್ಗವು



ಅಥ ಶ್ರೀಮತ್ಸುಂದರಕಾಂಡೇ ಪಂಚದಶಃ ಸರ್ಗಃ.

ಶ್ರೀಮದವಧೂತಉವಾಚ

ತ್ವಮಾದೌ ರಾಮನಾಮಾಖ್ಯಕಷಾಯಂ ಪಿಬ ತೇನ ತೇ ।
ಪಸೋಮಲವಿರೇಕಃ ಸ್ಯಾತ್ ತೇನ ಶುದ್ಧಂ ಭವೇನ್ಮನಃ ॥೧॥
ತತೋ ದಾನಾದಿ ಕರ್ತವ್ಯಂ ತಚ್ಛಾನ್ತಿರಿತಿ ಶಾಸ್ತ್ರತಃ ।
ನಾನ್ಯಥಾ ಕೇವಲಂ ಜ್ಞಾನಂ ಭವರೋಗಂ ಪ್ರಶಾಮಯೇತ್ ॥೨॥
ಸರ್ವಸ್ವದಾನಂ ಕುರು ಕೃತ್ಯಮಾದೌ
ಕಾಮಾದಿಹೋಮಂ ಚ ತತಸ್ತಪೋಗ್ನೌ ।
ಶ್ರೀರಾಮಮಭ್ಯರ್ಚಯ ಸರ್ವಥಾ ಮನುಂ
ಶ್ರೀತಾರಕಂ ಚಾಥ ಜಪಸ್ವ ಸರ್ವದಾ ॥೩॥
ತತಶ್ಚತುಸ್ಸಾಧನಮೂಲಿಕಾಭಿಃ
ಪಿಬೋಪಸತ್ಯಾಶ್ಯ ಚ ಕೃತಂ ಕಷಾಯಮ್ ।
ತತಃ ಸ್ವಕರ್ಣೌ ಶ್ರವಣಾಖ್ಯಚೂರ್ಣಂ
ಆಚಾರ್ಯವೃಕ್ಷೋತ್ಥಿತಮುತ್ಕ್ಷಿಪಾಶು ॥೪॥

ಸುಂದರಕಾಂಡದಲ್ಲಿ ಹದಿನಾರನೆಯ ಸರ್ಗವು

ಅವಧೂತನು ಬ್ರಾಹ್ಮಣನಿಗೆ ಹೇಳುವನು —

ಅಯ್ಯಾ! ಬ್ರಾಹ್ಮಣ! ಇದುವರೆಗೆ ಸಂಸಾರರೋಗದ ಸ್ವರೂಪವನ್ನು ಪೇಳಿಯಾಯ್ತಲ್ಲವೆ! ಈಗ ಇದಕ್ಕೆ ಔಷಧವನ್ನು ನಿನಗೆ ಹೇಳುವೆನು ನೀನು ಮೊದಲು ಶ್ರೀರಾಮನಾಮವೆಂಬ ಕಷಾಯವನ್ನು ಕುಡಿಯುವನಾಗು ಇದರಿಂದ ನಿನಗೆ ಪಾಪವೆಂಬ ಮಲವು ವಿರೇಚನೆಯಾಗುವುದು, ಆ ಮೇಲೆ ಮನಶ್ಶುದ್ಧಿಯುಂಟಾಗುವುದು ॥೧॥

ಆಮೇಲೆ ದಾನ ಮುಂತಾದುದನ್ನು ಮಾಡಬೇಕು, ಇದೇ ಶಾಂತಿಯಂದು ಶಾಸ್ತ್ರವಿಧಿಯಿರುವುದು ಇದಿಲ್ಲದಿದ್ದರೆ ಕೇವಲ ಜ್ಞಾನವುದಯಿಸಲಾರದು ಈ ರೀತಿಯಲ್ಲಿ ಭವರೋಗವನ್ನು ಶಾಂತಿಗೊಳಿಸಬೇಕು ॥೨॥

ಆದುಕಾರಣ, ನೀನು ಪ್ರಥಮತಃ ಸರ್ವಸ್ವವನ್ನೂ ದಾನಮಾಡುವುದೆಂಬ ಕರ್ಮವನ್ನು ಮಾಡು, ಆಮೇಲೆ ತಪಸ್ಸೆಂಬ ಅಗ್ನಿಯಲ್ಲಿ ಕಾಮಾದಿಗಳನ್ನು ಹೋಮಮಾಡು, ಬಳಿಕ ಶ್ರೀರಾಮನನ್ನು ಸರ್ವವಿಧವಾಗಿಯೂ ಅರ್ಚಿಸು, ಅನಂತರ ಶ್ರೀರಾಮತಾರಕ ಮಂತ್ರವನ್ನು ನಿರಂತರವೂ ಜಪಿಸುತಿರು ॥೩॥

ಆಬಳಿಕ, ಸಾಧನಚತುಷ್ಟಯವೆಂಬ ಮೂಲಿಕೆಗಳಿಂದಲೂ ಗುರುಸೇವೆಯೆಂಬ ಔಷಧದಿಂದಲೂ ಮಾಡಲ್ಪಟ್ಟಿರುವ ಕಷಾಯವನ್ನು ಪಾನಮಾಡು ಆಮೇಲೆ, ಆಚಾರ್ಯನೆಂಬ ವೃಕ್ಷದಿಂದ ಉತ್ಪನ್ನವಾದ ವೇದಾಂತವಾಕ್ಯ ಶ್ರವಣವೆಂಬ ಚೂರ್ಣವನ್ನು ನಿನ್ನ ಕಿವಿಯಲ್ಲಿ ಹಾಕಿಕೊ ॥೪॥

ಏತೈಸ್ಸದಾಭ್ಯಸ್ತಸಮಸ್ತಸಾಧನೈಃ
ಅಸ್ತಂ ಗಮಿಷ್ಯನ್ತಿ ಪುರೋಕ್ತದೋಷಾಃ ।
ಆಶಾಪಿಶಾಚ್ಯಾಸ್ತು ನಿವೃತ್ತಯೇ ಸದಾ
ಸುತೃಪ್ತಿಯನ್ತ್ರಂ ಹೃದಯೇ ವಹಸ್ವ ॥೫॥

ಭೂಯೋಭೂಯಃ ಸ್ತ್ರೀಸ್ವರೂಪವಿಚಾರಕವಚಾವೃತಃ ।
ಕಾಮಿನೀಗ್ರಹತೋ ಮುಕ್ತೋ ಭವಿಷ್ಯಸಿ ನ ಚಾನ್ಯಥಾ ॥೬॥

ಅಮಾನಿತ್ವಾದಿಸದ್ಧರ್ಮಮೂಲಿಕಾಚನ್ದನಾತ್ ತವ ।
ವಾಸಿತಂ ಚೇದ್ದೃಢಂ ಸ್ವಾನ್ತಂ ನಷ್ಟಾಃ ಸ್ಯುರ್ಹೃದಿ ಕಾಮನಾಃ ॥೭॥

ಏವಂ ಪೂರ್ವೋಕ್ತದೋಷಾಣಾಂ ಸರ್ವೇಷಾಂ ಮೂಲತಃ ಕ್ಷಯೇ ।
ತತ್ತದ್ಯುಕ್ತಿಪ್ರತೀಕಾರೈಃ ಸ್ವಸ್ಥಂ ತೇ ಹೃದಯಂ ತದಾ ॥೮॥

ವಿವೇಕಾಞ್ಜನಲೇಪೇನ ವಸ್ತುತತ್ತ್ವವಿಚಾರತಃ ।
ಕಾಮಜ್ವರೋ ನಿವೃತ್ತಃ ಸ್ಯಾತ್ ಸ್ವಕಾರ್ಯೈಸ್ಸಹ ಭೂಸುರ ॥೯॥

ಏವಂ ಸರ್ವೇಷು ದೋಷೇಷು ದೇಹತ್ರಯಗತೇಷ್ವಲಮ್ ।
ನಷ್ಟೇಷು ಶ್ರವಣಾದೀನಿ ಸಾಧನಾನಿ ಪ್ರಸಾಧಯೇತ್ ॥೧೦॥

ಈ ಸಮಸ್ತ ಸಾಧನಗಳನ್ನೂ ಸರ್ವದಾ ಅಭ್ಯಸಿಸಿದರೆ, ಪೂರ್ವೋಕ್ತದೋಷಗಳೆಲ್ಲವೂ ಅಸ್ತವಾಗುವುವು ಆಮೇಲೆ, ಆಶೆಯಂಬ ಪಿಶಾಚಿಯು ತೊಲಗುವುದಕ್ಕಾಗಿ ತೃಪ್ತಿಯೆಂಬ ಯಂತ್ರವನ್ನು ಹೃದಯದಲ್ಲಿ ಧರಿಸಿಕೊಳ್ಳುವನಾಗು ॥೫॥

ಮತ್ತೆ ಮತ್ತೆ ಸ್ತ್ರೀರೂಪವನ್ನು ವಿಚಾರಮಾಡುವಿಕೆಯಂಬ ಕವಚದಿಂದ ನೀನು ಆವೃತನಾದರೆ, ಆಗ ಕಾಮಿನಿಯಂಬ ಗ್ರಹದಿಂದ ನೀನು ಮುಕ್ತನಾಗುವೆ, ಅನ್ಯಥಾ ಈ ಗ್ರಹವು ನಿನ್ನನ್ನು ಬಿಡಲಾರದು ॥೬॥

ಅಮಾನಿತ್ವ(ಗರ್ವವಿಲ್ಲದಿರುವಿಕೆ)ವೊದಲಾದ ಉತ್ತಮಧರ್ಮಗಳಂಬ ಮೂಲಿಕೆಗಳ ಗಂಧದಿಂದ ನಿನ್ನ ಹೃದಯವು ಲೇಪಿತವಾದ ಪಕ್ಷದಲ್ಲಿ, ಆಗ ನಿನ್ನ ಹೃದಯದಲ್ಲಿರುವ ಕಾಮನಗಳೆಲ್ಲವೂ ನಷ್ಟವಾಗುವುವು ॥೭॥

ಹೀಗೆ ಪೂರ್ವೋಕ್ತವಾದ ದೋಷಗಳೆಲ್ಲವೂ ಸಮೂಲ ನಾಶಹೊಂದಲಾಗಿ, ಆಮೇಲೆ ಆಯಾ ಉಪಾಯಪ್ರತೀಕಾರಗಳಿಂದ ನಿನ್ನ ಮನಸ್ಸು ಸ್ವಸ್ಥವಾಗುವುದು ॥೮॥

ಅಯ್ಯಾ! ಬ್ರಾಹ್ಮಣ! ಎವೇಕವೆಂಬ ಅಂಜನವನ್ನು ಹಾಕಿಕೊಂಡು ವಸ್ತುತತ್ವವನ್ನು ವಿಚಾರಮಾಡುತಹೋದರೆ, ಆಗ ಕಾಮಜ್ವರವು-ತನ್ನಿಂದ ಹುಟ್ಟಿದ ಇತರವಾದ ಉಪರೋಗಗಳೊಡನೆ ನಷ್ಟವಾಗುವುದು ॥೯॥

ಹೀಗೆ ದೇಹತ್ರಯಗತವಾದ ಸಮಸ್ತ ದೋಷಗಳೂ ಸಂಪೂರ್ಣವಾಗಿ ನಷ್ಟವಾದ ಬಳಿಕ, ಶ್ರವಣ ಮನನ ನಿದಿಧ್ಯಾಸನಗಳೆಂಬ ಸಾಧನಗಳನ್ನು ಸಾಧಿಸಿಕೊಳ್ಳಬೇಕು ॥೧೦॥

ತೇನಾಸಂಭಾವನಾರೂಪಾ ವಿಪರೀತಾಭಿಧಾ ಚ ಯಾ ।
ತದಾ ಭ್ರಾನ್ತಿರ್ದ್ವಿಪ್ರಕಾರಾ ನಶ್ಯೇತ್ ಸಮ್ಯಗ್ವಿವೇಕತಃ ॥೧೧॥

ಯಾವತ್ ಸಾಧನಸಂಪತ್ತಿಃ ಸ್ಯಾದ್ಯಾವತ್ ಸಂವಿದೌಷಧಮ್ ।
ಭವರೋಗಕ್ಷಯೋ ಯಾವತ್ ತಾವತ್ ಪಥ್ಯಾನಿ ಸನ್ತ್ಯಲಮ್ ॥೧೨॥

ಸ್ತ್ರೀಣಾಂ ಸ್ತ್ರೀಸಙ್ಗಿನಾಂ ಗೋಷ್ಠೀಂ ಮೈಥುನಂ ತತ್ಕಥಾರತಿಮ್ ।
ಅತ್ಯಾಹಾರಂ ಚಾತಿನಿದ್ರಾಂ ಆಲಸ್ಯಂ ಚ ಕಲಿಂ ತ್ಯಜೇತ್ ॥೧೩॥

ಪ್ರಮಾದಂ ಲೋಕವಾರ್ತಾಂ ಚ ತ್ಯಜೇದ್ಗನ್ಧಸ್ರಗಾದಿಕಮ್ ।
ಕರ್ಮಜಾಡ್ಯಂ ಶುಷ್ಕತರ್ಕಂ ಸ್ನೇಹಂ ಸ್ವಜನಬನ್ಧುಷು ॥೧೪॥

ಭೋಗೇಚ್ಛಾಂ ವ್ಯವಹಾರಂ ಚ ಪ್ರಾಯಶ್ಚಿತ್ತಂ ಚಿಕಿತ್ಸಕಮ್ ।
ನಿಗ್ರಹಾನುಗ್ರಹೌ ನಿನ್ದಾಂ ತ್ಯಜೇತ್ ಸ್ತೋತ್ರಂ ಚ ಸರ್ವತಃ ॥೧೫॥

ನಾಸ್ತಿಕತ್ವಮಸತ್ಯಂ ಚ ಲೋಭಂ ವ್ಯರ್ಥಪರಿಗ್ರಹಮ್ ।
ಹಿಂಸಾದೈನ್ಯಭಯಕ್ರೋಧದಮ್ಭಸಙ್ಕಲ್ಪಸಂಶಯಾನ್ ॥೧೬॥

ಇದರಿಂದ ಸರಿಯಾದ ವಿವೇಕವುಂಟಾಗಿ, ಅನಂತರ ಅಸಂಭಾವನೆ ವಿಪರೀತಭಾವನಗಳೆಂಬ ಎರಡುವಿಧವಾದ ಭ್ರಾಂತಿಯೂ ನಷ್ಟವಾಗುವುದು ॥೧೧॥

ಎಲ್ಲಿಯವರೆಗೆ ಈ ಸಾಧನವು ಸಿದ್ಧವಾಗುವುದೋ, ಎಲ್ಲಿಯವರೆಗ ಜ್ಞಾನವೆಂಬ ಔಷಧವು ಕರಗತವಾಗುವುದೋ, ಯಾವಾಗ ಈ ಸಂಸಾರವೆಂಬ ರೋಗವು ಕ್ಷಯಿಸುವುದೋ, ಅಲ್ಲಿಯವರೆಗೂ ವಿಶೇಷವಾಗಿ ಪಥ್ಯವನ್ನು ಸೇವಿಸಬೇಕಾಗಿರುವುದು ॥೧೨॥

ಪಥ್ಯವನ್ನು ಸೇವಿಸುವಾಗ ಅಪಥ್ಯವನ್ನು ಮಾದಲು ಬಿಡಬೇಕಲ್ಲವೆ? ಆ ಅಪಥ್ಯಗಳಾವವು ವೆಂದರೆ,–ಸ್ತ್ರೀಯರ ಸಹವಾಸವನ್ನೂ, ಸ್ತ್ರೀಸಂಗದಲ್ಲಿರತಕ್ಕವರ ಸಹವಾಸವನ್ನೂ, ಸ್ತ್ರೀಸಂಭೋಗವನ್ನೂ, ಅವರ ಕಥೆಯಲ್ಲಿ ಆಸಕ್ತಿಯನ್ನೂ, ಅತಿಯಾದ ಆಹಾರವನ್ನೂ, ಅತಿಯಾದ ನಿದ್ರೆಯನ್ನೂ, ಆಲಸ್ಯವನ್ನೂ, ಇತರರೊಡನೆ ಕಾಲಹರಣವನ್ನೂ ಪರಿತ್ಯಜಿಸಬೇಕು ॥೧೩॥

ಅಜಾಗರೂಕತೆಯನ್ನೂ, ಲೋಕವಾರ್ತೆಯನ್ನೂ, ಗಂಧಪುಷ್ಪಾದಿಗಳನ್ನೂ, ಕರ್ಮಜಾಡ್ಯವನ್ನೂ, ಶುಷ್ಕವಾದ ತರ್ಕವನ್ನೂ, ಸ್ವಜನಗಳಲ್ಲಿಯೂ ಬಂಧುಗಳಲ್ಲಿಯೂ ಸ್ನೇಹವನ್ನೂ ಬಿಡಬೇಕು ॥೧೪॥

ಭೋಗದಲ್ಲಿ ಇಚ್ಛೆಯನ್ನೂ, ಪ್ರಪಂಚವ್ಯವಹಾರವನ್ನೂ, ಪ್ರಾಯಶ್ಚಿತ್ತವನ್ನೂ, ಚಿಕಿತ್ಸೆಯನ್ನೂ, ನಿಗ್ರಹಾನುಗ್ರಹಗಳನ್ನೂ, ಸರ್ವತ್ರ ನಿಂದಾಸ್ತುತಿಗಳನ್ನೂ ತ್ಯಜಿಸಬೇಕು ॥೧೫॥

ನಾಸ್ತಿಕ್ಯಬುದ್ಧಿಯನ್ನೂ, ಅಸತ್ಯವನ್ನೂ, ಲೋಭವನ್ನೂ, ವ್ಯರ್ಥವಾಗಿ ಪರಿಗ್ರಹವನ್ನೂ, ಹಿಂಸೆ ದೈನ್ಯ ಭಯ ಕೋಪ ದಂಭ ಸಂಕಲ್ಪ ಸಂಶಯಗಳನ್ನೂ ಬಿಟ್ಟುಬಿಡಬೇಕು ॥೧೬॥

ಜೀವನೋಪಾಯಯತ್ನಾಂಶ್ಚ ತ್ಯಜೇದ್ದ್ರೋಹಂ ಚ ಸರ್ವತಃ ।
ವಞ್ಚನಾಂ ಕೂಟಸಾಕ್ಷ್ಯತ್ವಂ ಮಾನಿತಾಂ ಚಾನ್ಯವಿಘ್ನತಾಮ್ ॥೧೬॥
ಅಶುಚಿತ್ವಮನಾಚಾರಂ ಚಾಪಲ್ಯಂ ಶಿಶ್ನಜಿಹ್ವಯೋಃ ।
ತುಚ್ಛಕೃತ್ಯೇಷ್ವನಾದ್ದಾಕ್ಷ್ಯಂ ತ್ಯಾಜ್ಯಂ ಜ್ಞಾನೌಷಧಾರ್ಥಿನಾ ॥೧೪॥
ನ ನಿನ್ದೇಜ್ಜೀವನಂ ಸ್ವಸ್ಯ ನ ಮೃತ್ಯುಮಪಿ ಸಂಸ್ತುವೇತ್ ।
ಕಾಲಾಕಾಙ್ಕ್ಷೀ ಭವೇನ್ನಿತ್ಯಂ ಉದಾಸೀನತಯಾ ಚರೇತ್ ॥೧೫॥
ತ್ಯಾಜ್ಯಾಶ್ಚಾಮಾತ್ಯಬುದ್ಧಿಃ ಅಸೂಯಾ ಚ ಮನೋರಥಾಃ ।
ವಾಣಿಜ್ಯಂ ದುಷ್ಟಸಙ್ಗಂ ಚ ತತ್ಸೇವಾಂ ಚ ಪರಿತ್ಯಜೇತ್ ॥೨೦॥
ತ್ಯಜೇದ್ದುರನ್ನಮೇಕಾನ್ನಂ ಚೈನ್ತಾಂ ವೈರಂ ಮದವ್ರಜಮ್ ।
ಬಹುನೋಕ್ತೇನ ಕಿಂ ವಿಪ್ರ ಯದ್ಯದ್ದುಷ್ಟಂ ತು ತತ್ ತ್ಯಜೇತ್ ॥೨೧॥
ಪಿತೃಮಾತೃಗುರುಪ್ರಾಜ್ಞದೇವಾದೀಂ ಸರ್ವದಾ ಯಜೇತ್ ।
ಸರ್ವಭೂತೇಷು ಚಾದ್ವೇಷ್ಟಾ ಸಮದುಃಖಸುಖೀ ವಶೀ ॥೨೨॥

ಜೀವನೋಪಾಯಕ್ಕಾಗಿ ಪ್ರಯತ್ನಗಳನ್ನೂ, ಯಾರ ವಿಷಯದಲ್ಲಿಯಾದರೂ ದ್ರೋಹವನ್ನೂ, ವಂಚನೆಯನ್ನೂ, ಕೂಟಸಾಕ್ಷ್ಯವನ್ನೂ, ಅಭಿಮಾನವನ್ನೂ, ಇತರರಿಗೆ ವಿಘ್ನಾಚರಣೆಯನ್ನೂ ತ್ಯಜಿಸಬೇಕು ॥೧೩॥

ಅಶುಚಿತ್ವವನ್ನೂ, ಅನಾಚಾರವನ್ನೂ, ಇಂದ್ರಿಯಚಾಪಲ್ಯವನ್ನೂ, ನಿಂದಿತಕರ್ಮಗಳಲ್ಲಿ ಲಜ್ಜಾರಾಹಿತ್ಯವನ್ನೂ ಕೂಡ, ಜ್ಞಾನೌಷಧಾಪೇಕ್ಷಿಯಾದವನು ಬಿಟ್ಟುಬಿಡಬೇಕು ॥೧೪॥

ತಾನು ಬದುಕಿರುವಿಕೆಯನ್ನು ನಿಂದಿಸಲೂಬಾರದು, ಮರಣವನ್ನು ಶ್ಲಾಘಿಸಲೂಬಾರದು, ಸರ್ವದಾ ಕಾಲನಿರೀಕ್ಷಣೆಮಾಡಿಕೊಂಡಿರುತ, ಸರ್ವತ್ರ ಉದಾಸೀನಬುದ್ಧಿಯಿಂದ ವರ್ತಿಸಬೇಕು ॥

ವರ್ಣಾಶ್ರಮಾದಿಗಳಲ್ಲ ಆತ್ಮಬುದ್ಧಿಯೂ, ಅಸೂಯೆಯೂ, ನಾನಾವಿಧ ಮನೋರಥಗಳೂ ಬಿಡಲ್ಪಡಬೇಕು ವಾಣಿಜ್ಯವನ್ನೂ, ದುಷ್ಟ ಸಹವಾಸವನ್ನೂ, ದುಷ್ಟರ ಸೇವೆಯನ್ನೂ ತ್ಯಜಿಸಬೇಕು ॥೨೦॥

ದುಷ್ಟವಾದ ಅನ್ನವನ್ನೂ, ನಿತ್ಯವೂ ಒಬ್ಬನ ಮನೆಯಲ್ಲಿಯೇ ಊಟಮಾಡುವಿಕೆಯನ್ನೂ, ಚಿಂತೆಯನ್ನೂ, ವೈರವನ್ನೂ, ಅಷ್ಟ ಮದವರ್ಗವನ್ನೂ ಬಿಡಬೇಕು. ಅಯ್ಯಾ! ಬ್ರಾಹ್ಮಣ! ಬಹಳ ಹೇಳುವುದರಿಂದ ಫಲವೇನು? ಮುಖ್ಯವಾಗಿ ಯಾವಯಾವುದು ದುಷ್ಟವೋ ಅದನ್ನೆಲ್ಲ ಪರಿತ್ಯಜಿಸಬೇಕು ॥೨೧॥

ತಾಯಿ ತಂದೆ ಗುರು ಜ್ಞಾನಿ ದೇವರು ಮುಂತಾದವರನ್ನು ನಿತ್ಯವೂ ಪೂಜಿಸಬೇಕು. ಯಾವ ಪ್ರಾಣಿಯಲ್ಲಿಯೂ ದ್ವೇಷಮಾಡಬಾರದು, ಸುಖದುಃಖಗಳಲ್ಲಿ ಸಮಚಿತ್ತನಾಗಿ ಜಿತೇಂದ್ರಿಯನಾಗಿರಬೇಕು ॥೨೨॥

ವಿಜನೇ ತಿಷ್ಠ ಮಾ ಭೈಷೀಃ ಧ್ಯಾಯ್ಯ ರಾಮಮನನ್ಯಧೀಃ ।
ಯುಕ್ತನಿದ್ರಾಹಾರಚಾರೋ ನಿರಾಶೀರ್ನಿರ್ಮಮೋ ಭವೇಃ ॥೨೩॥
ಕುರ್ಯಾಧರ್ಮಂ ದಯಾಂ ಮೈತ್ರೀಂ ಹಿತಂ ಸತ್ಯಂ ವದೇರ್ದ್ವಿಜ ।
ಶಾಸ್ತ್ರಾಭ್ಯಾಸಂ ಕೃತಜ್ಞತ್ವಂ ಮಾ ವಿಸ್ಮರ ಕದಾಚನ ॥೨೪॥
ಸನ್ತುಷ್ಟಸ್ಸತತಂ ವಿಪ್ರ ಸರ್ವತ್ರ ಬ್ರಹ್ಮದರ್ಶನಃ ।
ಉಪೇಕ್ಷಕೋಽಸಂಚಯಿಕೋ ನಿನ್ದಾಸ್ತುತಿಸಮೋ ಮುನಿಃ ॥೨೫॥
ದೋಷದೃಷ್ಟಿಂ ಗೋಚರೇಷು ಕ್ಷೇತ್ರಕ್ಷೇತ್ರಜ್ಞಯೋರ್ಭಿದಾಮ್।
ಚಿನ್ತಯೇಸ್ಸತತಂ ಯೋಗೀ ದೃಢನಿಶ್ಚಯವಾ ಭವೇಃ ॥೨೬॥
ಶ್ರವಣಂ ಮನನಂ ಧ್ಯಾನಂ ಕುರ್ಯಾಗ್ಗುರುಮುಖಾತ್ ಸದಾ ।
ಯಂಯಂ ಸನ್ತಃ ಸ್ತುವನ್ತ್ಯಾರ್ಯಾಃ ತಂತಂ ಧರ್ಮಂ ಚ ಪಾಲಯೇಃ ॥
ಏವಮೇತದ್ದೋಷಹಾನೇ ಜ್ಞಾನಾನ್ನಶ್ಯೇದ್ಭವಾಮಯಃ ।
ನಾನ್ಯಥಾ ಶಾಸ್ತ್ರಪಾಣ್ಡಿತ್ಯಮೇವ ತಚ್ಛ್ರವಣಾದಿನಾ ॥೨೮॥

ಅಯ್ಯಾ! ಬ್ರಾಹ್ಮಣ! ನೀನೂ ಕೂಡ ಪೂರ್ವೋಕ್ತವಾದ ರೀತಿಯಲ್ಲಿರುತ, ಅನನ್ಯಚಿತ್ತನಾಗಿ ಶ್ರೀರಾಮನನ್ನು ಧ್ಯಾನಿಸುತ, ಏಕಾಂತವಾಸಿಯಾಗಿರು, ಸಂಸಾರರೋಗಕ್ಕೆ ಹೆದರಬೇಡ ಯಥಾಯೋಗ್ಯವಾಗಿ ನಿದ್ರೆಯನ್ನೂ ಆಹಾರವನ್ನೂ ಆಚರಿಸುತ, ಯಾವುದನ್ನೂ ಅಪೇಕ್ಷಿಸದೆ, ಯಾವುದರಲ್ಲಿಯೂ ಮಮತೆಯಿಲ್ಲದವನಾಗಿರಬೇಕು ॥೨೩॥

ಧರ್ಮವನ್ನೂ ಪ್ರಾಣಿಗಳಲ್ಲಿ ದಯೆಯನ್ನೂ ಮೈತ್ರಿಯನ್ನೂ ಮಾಡುವನಾಗು ಅಯ್ಯಾ! ಬ್ರಾಹ್ಮಣ! ಹಿತವಾಗಿಯೂ ಸತ್ಯವಾಗಿಯೂ ಇರುವಂತ ಮಾತನಾಡುವನಾಗು ಶಾಸ್ತ್ರಾಭ್ಯಾಸವನ್ನೂ ಕೃತಜ್ಞತೆಯನ್ನೂ ಎಂದಿಗೂ ಮರೆಯದಿರು ॥೨೪॥

ಅಯ್ಯಾ! ವಿಪ್ರನೆ! ನೀನು ಸರ್ವದಾ ಸಂತುಷ್ಟನಾಗಿ ಸರ್ವಪದಾರ್ಥಗಳನ್ನೂ ಪರಬ್ರಹ್ಮಾಕಾರವಾಗಿ ನೋಡುತ, ಪ್ರಪಂಚವ್ಯವಹಾರದಲ್ಲಿ ಉಪೇಕ್ಷಯಿಂದಿರುತ, ಯಾವುದನ್ನೂ ಸಂಗ್ರಹಿಸದೆ, ಇತರರು ಮಾಡುವ ನಿಂದೆಯನ್ನೂ ಸ್ತುತಿಯನ್ನೂ ಏಕವಿಧವಾಗಿ ಎಣಿಸುತ, ಸರ್ವದಾ ಮನನಶೀಲನಾಗಿರು ॥೨೫॥

ಪ್ರಪಂಚದಲ್ಲಿ ಗೋಚರವಾಗುವ ಪದಾರ್ಥಗಳೊಳಗೆಲ್ಲ ದೋಷವನ್ನು ವಿಮರ್ಶಿಸುತಿರು, ದೇಹವೇ ಆತ್ಮನೆಂದು ತಿಳಿಯದೆ, ದೇಹವೂ ಆತ್ಮನೂ ಬೇರೆಬೇರೆಯೆಂದು ಭಾವಿಸು, ಸರ್ವದಾ ಚಿತ್ತವೃತ್ತಿಯನ್ನು ನಿರೋಧಪಡಿಸಿಕೊಂಡು, ದೃಢವಾದ ನಿಶ್ಚಯವುಳ್ಳವನಾಗಿರು ॥೨೬॥

ಸರ್ವದಾ ಗುರುಮುಖದಿಂದ ಶ್ರವಣ ಮನನ ನಿದಿಧ್ಯಾಸಗಳನ್ನು ಮಾಡುತಿರು ಮಹಾತ್ಮರಾದ ಸಾಧುಗಳು ಯಾವಯಾವ ಧರ್ಮವನ್ನು ಪ್ರಶಂಸಿಸುವರೋ–ಅದನ್ನು ಪರಿಪಾಲಿಸಿಕೊಂಡಿರು॥೨೭॥

ಹೀಗೆ ಮಾಡಿದರೆ, ಈ ದೋಷಪರಿಹಾರವಾಗಿ ತತ್ವಜ್ಞಾನ ಪುಹಿಮೆಯಿಂದ ಭವರೋಗವು ನಷ್ಟವಾಗುವುದು, ಅನ್ಯಥಾ ಆಗುವುದಿಲ್ಲ ಹೀಗೆ ಮಾಡದೆ ಸುಮ್ಮನೆ ಶಾಸ್ತ್ರಗಳನ್ನು ಕೇಳುತಿದ್ದರೆ, ಅದರಿಂದ ಶಾಸ್ತ್ರದಲ್ಲಿ ಪಾಂಡಿತ್ಯವೊಂದು ಮಾತ್ರವೇ ಪ್ರಾಪ್ತವಾಗುವುದು ॥೨೮॥

ತಸ್ಮಾನ್ನಯೋದೀತಾನಬ್ಜ ನಿಯಮಾನಪ್ರಮಾದತಃ ।
ಜುಷ್ಟ ಜ್ಞಾನೌಷಧಾತ್ ಸಮ್ಯಕ್ ಮುಚ್ಯಸೇ ಭವರೋಗತಃ ॥೮॥

ಶ್ರೀಶಿವಉವಾಚ

ಏವಮುಕ್ತಸ್ಯ ಗುರುಣಾ ಸಂಪಾದ್ಯಾಶೇಷಸಾಧನಮ್ ।
ಕ್ರಮೇಣ ವಿನಯಾಪನ್ನಃ ಪ್ರಣಮ್ಯ ಪ್ರಾಹ ತಂ ಗುರುಮ್ ॥೩೦॥
ಭಗವಜ್ಜ್ಞಾನನಾಂ ಶ್ರೇಷ್ಠ ಕರುಣಾವರುಣಾಲಯ ।
ಸಂಸಾರಸನ್ನಿಪಾತೋತ್ಥದೋಷನಷ್ಟಾಸ್ತವೇಕ್ಷಣಾತ್ ॥೩೧॥
ವಿನಾ ಭೇದಭ್ರಮಂ ತಸ್ಯ ಮೂಲಾಜ್ಜ್ಞಾನಂ ಚ ಸರ್ವತಃ ।
ಉಪರೋಗಾವಿನಷ್ಟಾವೇ ತದಪ್ಯಾಶು ವಿನಾಶಯ ॥೩೨॥
ಭವಾಮಯಪರಿಶ್ರಾನ್ತಂ ತಪ್ತಂ ತಾಪತ್ರಯಾಗ್ನಿನಾ ।
ಜ್ಞಾನಜೀವಾತುದಾನೇನ ಪ್ರಪನ್ನಂ ಪಾಹಿ ಮಾಂ ಗುರೋ ॥೩೩॥

ಶ್ರೀಗುರುರುವಾಚ

ಶಾಸ್ತ್ರದುಗ್ಧಾಬ್ಧಿಮನ್ಥೋತ್ಥಂ ಗುರುಶ್ರೀವಿಷ್ಣುನಾರ್ಪಿತಮ್ ।

ಅದುಕಾರಣ, ಅಯ್ಯಾ! ಬ್ರಾಹ್ಮಣ! ಈಗ ನನ್ನಿಂದ ಹೇಳಲ್ಪಟ್ಟಿರುವ ನಿಯಮಗಳನ್ನೆಲ್ಲ ನೀನು ಜಾಗರೂಕತೆಯಿಂದ ಸೇವಿಸುತಿದ್ದರೆ, ಅದರಿಂದ ಜ್ಞಾನೌಷಧಲಾಭವಾಗಿ, ಬಳಿಕ ನೀನು ಸಂಸಾರವೆಂಬ ರೋಗದ ದೆಸೆಯಿಂದ ಮುಕ್ತನಾಗುವೆ (ಎಂದು ದತ್ತಾತ್ರೇಯಮುನಿಯು ಬ್ರಾಹ್ಮಣನಿಗೆ ಉಪದೇಶಿಸಿದನು) ॥೨೯॥

ಶ್ರೀ ಪರಮೇಶ್ವರನು ಪಾರ್ವತಿಯನ್ನು ಕುರಿತು ಹೇಳುವನು —

ಎಲೌ ಪಾರ್ವತಿ! ಈರೀತಿಯಾಗಿ ಗುರುವಿನಿಂದ ಉಪದೇಶಿಸಲ್ಪಟ್ಟ ಆ ಬ್ರಾಹ್ಮಣನು, ಕ್ರಮವಾಗಿ ಸಕಲವಾದ ಸಾಧನವನ್ನೂ ಸಂಪಾದಿಸಿಕೊಂಡು, ವಿನಯದಿಂದ ನಮ್ರನಾಗಿ ನಮಸ್ಕಾರಮಾಡಿ, ಗುರುವನ್ನು ಕುರಿತು ಮತ್ತೆ ಹೀಗೆ ವಿಜ್ಞಾಪಿಸಿದನು ॥೩೦॥

ಎಲೈ ಮಹಾನುಭಾವನೆ! ಜ್ಞಾನಿಗಳಲ್ಲೆಲ್ಲ ಶ್ರೇಷ್ಠನಾದವನೆ! ಕೃಪಾಸಾಗರನೆ! ನನಗ ಸಂಸಾರವೆಂಬ ಸನ್ನಿಪಾತಜ್ವರದಿಂದ ಉಂಟಾಗಿದ್ದ ದೋಷಗಳೆಲ್ಲವೂ ನಷ್ಟವಾದುವು ॥೩೧॥

ನನಗೆ ಈಗ ಭೇದಭ್ರಾಂತಿಯನ್ನೂ–ಇದಕ್ಕೆ ಮೂಲವಾದ ಅಜ್ಞಾನವನ್ನೂ ಬಿಟ್ಟು ಇತರವಾದ ಉಪರೋಗಗಳೆಲ್ಲವೂ ನಷ್ಟವಾದುವು ಅದನ್ನೂ ನೀನು ಬೇಗನೆ ನಿವಾರಣಮಾಡು ॥೩೨॥

ಎಲೈ ಗುರುವೆ! ಸಂಸಾರವೆಂಬ ರೋಗದಿಂದ ಶ್ರಾಂತನಾಗಿಯೂ ತಾಪತ್ರಯವೆಂಬ ಅಗ್ನಿಯಿಂದ ತಪ್ತನಾಗಿಯೂ ಇರುವ ನನ್ನನ್ನು, ಜ್ಞಾನವೆಂಬ ಸಂಜೀವನವನ್ನು ಕೊಟ್ಟು ರಕ್ಷಿಸು ॥೩೩॥

ಇದನ್ನು ಕೇಳಿ ಶ್ರೀಗುರುವು ಹೇಳುವನು —

ಅಯ್ಯಾ! ಬ್ರಾಹ್ಮಣ! ಶಾಸ್ತ್ರವೆಂಬ ಕ್ಷೀರಸಮುದ್ರವನ್ನು ಕಡೆದು ಸಂಪಾದಿಸಲ್ಪಟ್ಟು ಶ್ರೀಗುರುವೆಂಬ ಮಹಾವಿಷ್ಣುವಿನಿಂದ ಕೊಡಲ್ಪಟ್ಟಿರುವ–ಭವವೆಂಬ ರೋಗಕ್ಕೆ ರಸಾಯನವಾದ

ಸವ್ಯಸ್ಯಪಕರಂ ದಾಸ್ಯೇ ಭವರೋಗರಸಾಯನಮ್ ॥೩೪॥

ಶ್ರೀಶಿವಉವಾಚ

ಇತ್ಯುಕ್ತ್ವಾ ಗಾಢತಚ್ಛ್ರದ್ಧಭಕ್ತಿಮೂಲ್ಯಮವಜ್ಞಿನಮ್ ।
ಸ್ವೀಕೃತ್ಯ ಸ ಗುರುರ್ಜ್ಞಾನೌಷಧಂ ದಾತುಂ ಮನೋ ದಧೇ ॥೩೫॥
ಮಹಾವಾಕ್ಯಕರಂಡಸ್ಥಂ ಭವರೋಗರಸಾಯನಮ್ ।
ಅಪೇಷಯದ್ಧೀದೃಷದಿ ಮನನೋಪಲತಃ ಪ್ರಿಯೇ ॥೩೬॥
ಸಂಶೋಧ್ಯ ತದಸಾರಾಂಶಂ ಲಕ್ಷಣಾವೃತ್ತಿವಸ್ತ್ರತಃ ।
ತತೋವಾಶೇಷಯತ್ ಸ್ವಚ್ಛಂ ದಿವ್ಯಮೇಕರಸಂ ಗುರುಃ ॥೩೭॥

ಜ್ಞಾನವನ್ನು ನಿನಗೆ ಈಗ ನಾನು ಕೊಡುವೆನು ಇದನ್ನು ತೆಗದುಕೊಂಡೊಡನಯೇ ಭವರೋಗ್ಯ ಸೌಖ್ಯವುಂಟಾಗುವುದು ॥೩೪॥

ಪರಮೇಶ್ವರನು ಪಾರ್ವತಿಗ ಹೇಳುವನು —

ಎಲೌ ಪಾರ್ವತಿ! ಹೀಗೆಂದು ಹೇಳಿ, ನಿಷ್ಕಪಟವಾದ ಆ ಬ್ರಾಹ್ಮಣನ ಶ್ರದ್ಧಾಭಕ್ತಿಗಳಂಬ ಮೂಲ್ಯವನ್ನು ಸ್ವೀಕರಿಸಿ, ಆ ಗುರುವು ಅವನಿಗ ಜ್ಞಾನವೆಂಬ ಔಷಧವನ್ನು ಕೊಡಲು ಮನಸ್ಸು ಮಾಡಿದನು ॥೩೫॥

ಎಲೌ ಪ್ರಿಯೆ! ಬಳಿಕ ಅವನು ಮಹಾವಾಕ್ಯವಂಬ ಕರಾಟದೊಳಗಿರುವ ಭವರೋಗ ರಸಾಯನವನ್ನು ತೆಗೆದು, ಬುದ್ಧಿಯೆಂಬ ಕಲ್ಲಿನಮೇಲೆ ಮನನವೆಂಬ ಗುಂಡುಕಲ್ಲಿನಿಂದ ಅರೆದನು ॥

ಅದರಲ್ಲಿದ್ದ ಅಸಾರವಾದ ಅಂಶ(ಕಸ)ವನ್ನೆಲ್ಲ ಲಕ್ಷಣಾವೃತ್ತಿಯಂಬ ವಸ್ತ್ರದಿಂದ ಶೋಧಿಸಿ, ಅನಮೇಲೆ ಸ್ವಚ್ಛವಾಗಿರುವ ದಿವ್ಯವಾದ ಜ್ಞಾನರಸವನ್ನು ಶೇಷವನ್ನಾಗಿ ಮಾಡಿದನು * ॥೩೭॥

---

* ಯಾವ ವಾಕ್ಯಕ್ಕೆ ಅರ್ಥವನ್ನು ಹೇಳಬೇಕಾದರೂ, ಶಕ್ತಿ ಲಕ್ಷಣಾ ವ್ಯಂಜನಾವೃತ್ತಿಗಳೆಂದು ಮೂರುವೃತ್ತಿಗಳಿರುವುವು ವೃತ್ತಿಯೆಂದರೆ ಶಬ್ದದಲ್ಲಿರುವ ಒಂದು ವಿಧವಾದ ವ್ಯಾಪಾರವು ಇವುಗಳಲ್ಲಿ ವ್ಯಂಜನಾವೃತ್ತಿಯನ್ನು ಅಲಂಕಾರ ಶಾಸ್ತ್ರಜ್ಞರು ಮಾತ್ರ ಇಟ್ಟುಕೊಂಡಿರುವರು, ಇತರ ಶಾಸ್ತ್ರಗಳಲ್ಲಿ ಈ ವ್ಯಂಜನಾವೃತ್ತಿಯನ್ನೊಪ್ಪುವುದಿಲ್ಲ ಅಂತು, ಪ್ರಕೃತವಾದ ವೇದಾಂತಶಾಸ್ತ್ರದಲ್ಲಿ ಶಕ್ತಿ ಲಕ್ಷಣೆಗಳೆಂಬ ಎರಡುವೃತ್ತಿಗಳು ಮಾತ್ರವೇ ಸ್ವೀಕೃತವಾಗಿರುವುವು, ಯಾವ ಕಡೆಯಲ್ಲಿ ಶಕ್ತಿವೃತ್ತಿಯಿಂದುಂಟಾದ ಅರ್ಥವು ಅನುಪಪನ್ನವಾಗುವುದೋ, ಅಲ್ಲಿ ಲಕ್ಷಣಾವೃತ್ತಿಯನ್ನು ಆಶ್ರಯಿಸಬೇಕಾಗುವುದು. ಇದಕ್ಕೊಂದುದಾಹರಣೆಯನ್ನು ತೋರಿಸುವುದಾವಶ್ಯಕವು 'ಊರಲ್ಲ ಬಂದಿತು' ಎಂದು ಹೇಳುವೆವಷ್ಟೆ! ಇಲ್ಲಿ ಊರೆಂದರೆ ಮನ ಬೀದಿ ಮುಂತಾದ ಸನ್ನಿವೇಶನಂದು ಅರ್ಥವು. ಈ ಅರ್ಥವು ಶಕ್ತಿವೃತ್ತಿಯಿಂದ ಬೋಧಿಸಲಾಗುವುದು ಈ ಅರ್ಥವನ್ನಿಟ್ಟುಕೊಂಡರೆ, ಮನೆ ಬೀದಿ ಮುಂತಾದುವುಗಳು ನಡೆದುಬಂದುವೆಂಬುದು ಅನುಪಪನ್ನವಾಗುವುದು ಅದುಕಾರಣ. ಇಲ್ಲಿ ಈ ಅರ್ಥವನ್ನು ಬಿಟ್ಟು ಬೇರೆಯಾದ ಅರ್ಥವನ್ನು ಹೇಳಬೇಕಾಗುವುದು ಊರಿನಲ್ಲಿರುವ ಜನರೆಲ್ಲರೂ ಒಂದರೆಂದು ಅರ್ಥವನ್ನು ಹೇಳುವವು. ಈ ಅರ್ಥವನ್ನು ಬೋಧಿಸುವ ವೃತ್ತಿಗೆ

ವಿಷ್ಣುಭಕ್ತ್ಯನುಪಾನೇನ ಯೋಜಯಿತ್ವಾ ತದೌಷಧಮ್ |
ತ್ವಮೇವ ಬ್ರಹ್ಮ ತದ್ಬ್ರಹ್ಮ ತ್ವಂ ಸಂಸಾರೀ ನ ಕರ್ಹಿಚಿತ್ ॥೪೪॥

ಈ ರೀತಿಯಾಗಿ ಅವಶಿಷ್ಟವಾದ ದಿವ್ಯಜ್ಞಾನಾಮೃತರಸವನ್ನು ವಿಷ್ಣುಭಕ್ತಿಯೆಂಬ ಅನುಪಾನದೂಡನೆ ಸೇರಿಸಿ–ಆ ಗುರುವಿನಿಂದ 'ಅಯ್ಯಾ! ಬ್ರಾಹ್ಮಣ! ನೀನು ಆ ಪರಬ್ರಹ್ಮವೆಯೇ;

ಲಕ್ಷಣಾವೃತ್ತಿಯೆಂದು ಹಸರು ಹೀಗೆಯೇ 'ತತ್ ತ್ವಮಸಿ' ಎಂಬ ಮಹಾವಾಕ್ಯದಲ್ಲಿಯೂ ಶಕ್ತ್ಯಾವೃತ್ತಿಯಿಂದ ಬೋಧಿತವಾಗುವ ಅರ್ಥವು ಅನುಪಪನ್ನವಾಗುವಕಾರಣ ಲಕ್ಷಣಾವೃತ್ತಿಯನ್ನಾಶ್ರಯಿಸಬೇಕಾಗುವುದು ಇದಕ್ಕಾಗಿ ಈಗ ಇನ್ನೂ ಒಂದು ಉದಾಹರಣೆಯನ್ನು ತೋರಿಸಬೇಕಾಗಿರುವುದು ನಾವು ಹಿಂದೆ ಯಾವುದೋ ಒಂದುದಿವಸ ಯಾವುದೋ ಒಂದುಕಡೆಯಲ್ಲಿ ನೋಡಿದ್ದ ಒಬ್ಬ ಮನುಷ್ಯನನ್ನು ಈಗ ನೋಡಿ, ಅವನೇ ಈ ರಾಮನೆಂದು ಹೇಳುವೆವಲ್ಲವೆ! ಹಿಂದೆ ನೋಡಿದ ದೇಶ ಕಾಲ ಯುಕ್ತನಾಗಿರುವ ರಾಮನೂ, ಈಗ ನೋಡುವ ದೇಶ ಕಾಲ ಯುಕ್ತನಾಗಿರುವ ರಾಮನೂ ಒಬ್ಬನೇಯೆಂದಲ್ಲವೆ ಅರ್ಥವಾಗುವುದು! ಈ ವಾಕ್ಯದಲ್ಲಿ ವಿಶೇಷಣಾಂಶವೆಂದೂ ವಿಶೇಷ್ಯಾಂಶವೆಂದೂ ಎರಡುಭಾಗವಿರುವುದು ಹಿಂದೆ ನೋಡಿದ ದೇಶ ಕಾಲ ಯುಕ್ತನಂಬುದೂ ಈಗ ನೋಡುವ ದೇಶ ಕಾಲ ಯುಕ್ತನಂಬುದೂ ವಿಶೇಷಣಾಂಶಗಳು, ರಾಮನೆಂಬುದು ವಿಶೇಷ್ಯಾಂಶವು ಹಿಂದಣ ದೇಶ ಕಾಲಗಳೂ ಈಗಣ ದೇಶ ಕಾಲಗಳೂ ಬೇರೆಬೇರೆಯಾಗಿರುವ ಕಾರಣ, ಆಗಣ ದೇಶ ಕಾಲಗಳು ಈಗ ನಾವು ನೋಡುತಿರುವ ರಾಮನಲ್ಲಿರುವುದಿಲ್ಲವಾದುದರಿಂದ, ಆ ರಾಮನೂ ಈ ರಾಮನೂ ಬೇರೆಬೇರೆಯಾಗಿರಬೇಕಾಗುವುದು ಹೀಗೆ ಶಕ್ಯಾರ್ಥಕ್ಕೆ ಅನುಪಪತ್ತಿಯುಂಟಾಗುವುದರಿಂದ, ಇಲ್ಲಿ ಲಕ್ಷಣಾವೃತ್ತಿಯನ್ನಾಶ್ರಯಿಸಬೇಕಾಗುವುದು ಹೀಗೆ ಲಕ್ಷಣಾವೃತ್ತಿಯನ್ನಾಶ್ರಯಿಸಿದಾಗ, ದೇಶ ಕಾಲ ಯುಕ್ತನಂಬ ವಿಶೇಷಣಾಂಶವನ್ನು ಬಿಟ್ಟು ಬಿಟ್ಟು ಅರ್ಥಹೇಳಬೇಕಾಗುವುದು ಆಗ ರಾಮನಂಬ ಅರ್ಥವೊಂದು ಮಾತ್ರವೇ ಉಳಿಯುವ ಕಾರಣ ಅನುಪಪತ್ತಿ ಪರಿಹಾರವಾಗಿ, ವಾಕ್ಯಾರ್ಥಜ್ಞಾನವುಂಟಾಗುವುದು. ಹೀಗೆ ವಿಶೇಷಣಾಂಶ ಪರಿತ್ಯಾಗಮಾಡುವುದಕ್ಕೆ ಭಾಗತ್ಯಾಗ ಲಕ್ಷಣೆಯೆಂದು ಶಾಸ್ತ್ರ ಸಂಕೇತವು. 'ತತ್ ತ್ವಮಸಿ' ಎಂಬ ಮಹಾವಾಕ್ಯಕ್ಕೆ ಅರ್ಥವನ್ನು ತಿಳಿದುಕೊಳ್ಳಬೇಕಾದರೂ, ಈ ಭಾಗತ್ಯಾಗ ಲಕ್ಷಣೆಯನ್ನಾಶ್ರಯಿಸಬೇಕಾಗುವುದು ಹೇಗೆಂದರೆ,—ಇಲ್ಲಿ 'ತತ್ ತ್ವಂ ಅಸಿ' ಎಂದು ಮೂರುಪದಗಳಿರುವುವು ತಮೋಗುಣಪ್ರಧಾನವಾದ ಮಾಯೋಪಾಧಿಯಿಂದ ಜಗತ್ತಿಗೆ ಉಪಾದಾನಕಾರಣವಾಗಿಯೂ–ಶುದ್ಧ ಸತ್ವಪ್ರಧಾನವಾದ ಮಾಯೋಪಾಧಿಯಿಂದ ಜಗತ್ತಿಗೆ ನಿಮಿತ್ತಕಾರಣವಾಗಿಯೂ ಇರುವ ಬ್ರಹ್ಮವಸ್ತುವು 'ತತ್' ಎಂಬ ಪದದಿಂದ ಬೋಧಿತವಾಗುವುದು ಮಲಿನಸತ್ವ ಪ್ರಧಾನವಾಗಿ ಕಾಮ ಕರ್ಮಾದಿ ದೂಷಿತವಾಗಿರುವ ಅವಿದ್ಯೋಪಾಧಿಯನ್ನು ಸ್ವೀಕರಿಸಿದ ಆ ಬ್ರಹ್ಮವು 'ತ್ವಂ' ಎಂಬ ಶಬ್ದದಿಂದ ಹೇಳಲ್ಪಡುವುದು ಹೀಗೆ ತಮೋಗುಣಪ್ರಧಾನ ಮಾಯೋಪಾಧಿಯುಕ್ತವಾಗಿಯೂ ಶುದ್ಧ ಸತ್ವಪ್ರಧಾನಮಾಯೋಪಾಧಿಯುಕ್ತವಾಗಿಯೂ ಇರುವ ಬ್ರಹ್ಮವಸ್ತುವೇ, ಮಲಿನಸತ್ವಪ್ರಧಾನಾವಿದ್ಯೋಪಾಧಿಯುಕ್ತವಾಗಿರುವ ಬ್ರಹ್ಮವಸ್ತುವಾಗಿರುವುದೆಂದು

ಇತಿ ಜ್ಞಾನೌಷಧೇ ದತ್ತೇ ಶಿಷ್ಯೋಽಪ್ಯಾಸ್ವಾದ್ಯ ತತ್ ತದಾ ।
ಬ್ರಹ್ಮೈವಾಹಂ ನ ಸಂಸಾರೀತ್ಯೇವಂ ನಿಶ್ಚಿತವಾ೯ ಭ್ರಿಯೇ ॥೩೯॥
ಏವಂ ಭೇದಭ್ರಮಾಪಾಯೇ ತನ್ಮೂಲಾಜ್ಞಾನಮಪ್ಯತಃ ।
ಸ್ವಕಾರ್ಯೈರ್ಯುಸ್ಸಹ ನಷ್ಟಂ ಸ್ಯಾತ್ ಸದ್ಯಸ್ತಸ್ಯಾಮಯೋ ಗತಃ ॥೪೦॥
ನಿಶ್ಚಿತ್ಯೈವಂ ಸಕೃತ್ ತತ್ತ್ವಂ ತದಾದ್ಧ್ಯಾಯ ಚಿರಂ ಗುರೋಃ ।
ಸಿದ್ಧತ್ವಾಭ್ಯಸ್ಯೇದೌಷಧಂ ತತ್ ರೋಗನಾಶಾವಧಿ ಕ್ರಮಾತ್ ॥೪೧॥
ಔಷಧಾದೇವಮಭ್ಯಸ್ತಾತ್ ಶನೈಶ್ಶಾಮ್ಯೇದ್ಭವಾಮಯಃ ।
ನ ತ್ವರಾವಾ೯ ನ ನಿರ್ವಿಣ್ಣೋ ಭವೇತ್ ಕರ್ಮಕ್ಷಯಾವಧಿ ॥೪೨॥

ಸಂಸಾರಿಯೆಂದಿಗೂ ಅಲ್ಲ' ಎಂಬುದಾಗಿ ಜ್ಞಾನವೆಂಬ ಔಷಧವು ಕೊಡಲ್ಪಡಲಾಗಿ, ಆಗ ಶಿಷ್ಯನೂ ಕೂಡ ಅದನ್ನು ಆಸ್ವಾದಿಸಿ, ನಾನು ಸಾಕ್ಷಾತ್ ಪರಬ್ರಹ್ಮವೇಯಂದೂ–ಸಂಸಾರಿಯಲ್ಲವೆಂದೂ ನಿಶ್ಚಯಿಸಿಕೊಂಡನು ॥೩೮–೩೯॥

ಹೀಗೆ ಅವನಿಗೆ ಭೇದಭ್ರಮವು ಕಳೆದುಹೋಗಲಾಗಿ, ಅದಕ್ಕೆ ಮೂಲವಾದ ಅಜ್ಞಾನವೂ ಅದರಿಂದ ಉಂಟಾಗಿದ್ದ ಇತರ ದೋಷಗಳೂ ಕೂಡ ನಷ್ಟವಾದುವು, ಆ ಪೊಡನೆಯೇ ಅವನ ಸಂಸಾರರೋಗವು ನಿವೃತ್ತವಾಯಿತು ॥೪೦॥

ಈರೀತಿಯಾಗಿ ಪುರುಷನು ಒಂದುಸಲ ತತ್ವವನ್ನು ನಿಶ್ಚಯಿಸಿಕೊಂಡವನಾಗಿ, ಅದು ದೃಢವಾಗುವುದಕ್ಕೋಸ್ಕರ ಚಿರಕಾಲ ಗುರುಸನ್ನಿಧಿಯಲ್ಲಿದ್ದುಗೊಂಡು, ಸಂಸಾರರೋಗವು ನಿಶ್ಶೇಷವಾಗಿ ನಾಶಹೊಂದುವವರೆಗೂ ಆ ಜ್ಞಾನೌಷಧವನ್ನು ಕ್ರಮವಾಗಿ ನಿತ್ಯವೂ ಪಾನಮಾಡುತಿರಬೇಕು ॥೪೧॥

ಹೀಗೆ ಈ ಔಷಧವನ್ನು ಅಭ್ಯಾಸಮಾಡಿದರೆ, ಕ್ರಮವಾಗಿ ಸಂಸಾರರೋಗವು ಶಾಂತವಾಗುವುದು ತನ್ನ ಕರ್ಮಕ್ಷಯವಾಗುವವರೆಗೂ, ತ್ವರೆಪಡದೆಯೂ–ನಿರ್ವೇದಪಡದೆಯೂ ಕ್ರಮವಾಗಿ ಔಷಧವನ್ನು ಸೇವಿಸಬೇಕು ॥೪೨॥

ಹೇಳಿದಂತಾಯ್ತು ತಮೋಗುಣ ಶುದ್ಧಸತ್ವಗುಣ ಪ್ರಧಾನವಾದುದಕ್ಕೂ ಮಲಿನಸತ್ವಪ್ರಧಾನವಾದುದಕ್ಕೂ ಐಕ್ಯಹೇಳಿದರೆ ಅನುಸಪತ್ತಿಯುಂಟಾಗುವಕಾರಣ, ಇಲ್ಲಿ ಪೂರ್ವೋಕ್ತರೀತಿಯಾಗಿ ಭಾಗತ್ಯಾಗ ಲಕ್ಷಣೆಯನ್ನಾಶ್ರಯಿಸಿ ತಮೋಗುಣ ಶುದ್ಧಸತ್ವಗುಣಪ್ರಧಾನವೆಂಬ ವಿಶೇಷಣಾಂಶವನ್ನೂ ಮಲಿನಸತ್ವಪ್ರಧಾನವೆಂಬ ವಿಶೇಷಣಾಂಶವನ್ನೂ ಬಿಟ್ಟುಬಿಟ್ಟರೆ, ಆಮೇಲೆ 'ಬ್ರಹ್ಮವಸ್ತು' ಎಂಬ ವಿಶೇಷ್ಯಾಂಶ ಮಾತ್ರವೇ ಅವಶಿಷ್ಟವಾಗಿ, ಅಖಂಡವಾಕ್ಯಾರ್ಥ ಜ್ಞಾನವು ಉಪಪನ್ನವಾಗುವುದು ಹೀಗೆ ಮಹಾವಾಕ್ಯದ ಅರ್ಧವನ್ನು ಸೋಪಪತ್ತಿಕವಾಗಿ ದತ್ತಾತ್ರೇಯಮುನಿಯು ಆ ಬ್ರಾಹ್ಮಣನಿಗೆ ಉಪದೇಶಿಸಿದನೆಂದು ಭಾವವು

ಏವಂ ನಷ್ಟಾವಯೋಪ್ಯಾರ್ಯೇ ಪರಮಾನನ್ದವಾನಪಿ ।
ರಾಮಚನ್ದ್ರಂ ಗುರುಂ ನಿತ್ಯಂ ಸೇವಯೇತ್ ತತ್ಕೃತಿಂ ಸ್ಮರ್ಕ್ ॥೪೩॥
ಪಞ್ಚ ಪಾತಕಯುಕ್ತೋ ವಾ ಯುಕ್ತೋ ವಾಪ್ಯುಪಪಾತಕೈಃ ।
ಪ್ರಾಯಶ್ಚಿತ್ತಾರ್ಹತಾಮೇತಿ ನ ಕೃತಘ್ನಃ ಕದಾಚನ ॥೪೪॥
ಏವಂ ಭವಾದ್ವಿಮುಕ್ತಸ್ಯ ನ ಸಂಖ್ಯಾ ಗುಣದೋಷಯೋಃ ।
ಕಿಂ ತು ಸ್ವೇಚ್ಛಾ ಏತರುಜೋ ನ ಪಥ್ಯೇ ನಿಯಮೋ ಯಥಾ ॥೪೫॥
ತಾವದೇವ ಹಿ ಶಾಸ್ತ್ರಾಣಾಂ ಸಂರಮ್ಭೋ ನಿಯಮಾಕ್ ಪ್ರತಿ ।
ಯಾವನ್ನ ನಷ್ಟೋ ಮೋಹೋಸ್ಯ ನಷ್ಟೇ ಮೋಹೇ ನ ಕಿಞ್ಚನ ॥೪೬॥
ನ ತೀರ್ಥೈರ್ನ ವ್ರತೈರ್ಯಾಗೈಃ ನ ಜಪೈರ್ವಾ ನ ಕರ್ಮಭಿಃ ।
ಭವಾಮಯೋ ವಿನಶ್ಯೇತ ವಿನಾ ಜ್ಞಾನೌಷಧಂ ಪ್ರಿಯೇ ॥೪೭॥
ಏವಂ ಭವಾಮಯೇ ನಷ್ಟೇ ಸ್ವಾತ್ಮಾರಾಮಸ್ತದಾ ದ್ವಿಜಃ ।
ಸಂಪ್ರಾಪ್ಯ ನೈಜವಾನನ್ದಂ ಜೀವನ್ಮುಕ್ತೋಭವತ್ ಸ್ವಯಮ್ ॥೪೮॥

ಎಲೌ ಪಾರ್ವತಿ! ಹೀಗೆ ಸಂಸಾರರೋಗ ನಿವೃತ್ತಿಯಾದಮೇಲೂ ಕೂಡ, ಪರಮಾನಂದ ಲಾಭವಾಗಿದ್ದರೂ, ಶ್ರೀರಾಮಚಂದ್ರರೂಪನಾದ ಗುರುವನ್ನು–ಅವನ ಉಪಕಾರಗಳನ್ನು ಸ್ಮರಿಸುತ ಸೇವಿಸುತಿರಬೇಕು ॥೪೩॥

ಏಕೆಂದರೆ,––ಲೋಕದಲ್ಲಿ, ಪಂಚಮಹಾಪಾತಕಯುಕ್ತನಾಗಿದ್ದರೂ, ಉಪಪಾತಕಗಳಿಂದ ಯುಕ್ತನಾಗಿದ್ದರೂ, ಪುರುಷನು ಪ್ರಾಯಶ್ಚಿತ್ತದಿಂದ ಶುದ್ಧನಾಗುವನು, ಕೃತಘ್ನನೆಂದಿಗೂ ಪ್ರಾಯಶ್ಚಿತ್ತದಿಂದ ಶುದ್ಧನಾಗುವುದಿಲ್ಲ ॥೪೪॥

ಹೀಗೆ ಸಂಸಾರದಿಂದ ಮುಕ್ತನಾದವನಿಗೆ, ರೋಗನಿವೃತ್ತಿಯಾದವನಿಗೆ ಪಥ್ಯನಿಯಮವಿಲ್ಲದಿರುವಂತೆ, ಆಮೇಲೆ ಪುಣ್ಯಪಾಪಗಳ ವಿಚಾರವಿಲ್ಲ, ಅವನು ಸ್ವೇಚ್ಛಾಚಾರಿಯಾಗಿರಬಹುದು ॥

ಪುರುಷನಿಗೆ ಮೋಹವು ನಷ್ಟವಾಗುವವರೆಗ ಮಾತ್ರವೇ, ಶಾಸ್ತ್ರಗಳೆಲ್ಲವೂ ಮಹಾ ಸಂರಂಭದಿಂದ ನಿಯಮಗಳನ್ನು ಉಪದೇಶಿಸುತಿರುವುವು, ಮೋಹವು ನಷ್ಟವಾದ ಬಳಿಕ ಯಾವ ಉಪದೇಶವೂ ಬೇಕಾಗಿರುವುದಿಲ್ಲ ॥೪೬॥

ಎಲೌ ಪ್ರಿಯ! ಈ ಸಂಸಾರರೋಗವು ನಿವೃತ್ತವಾಗಬೇಕಾದರೆ, ಜ್ಞಾನವೆಂಬ ಔಷಧವೇ ಅತ್ಯಾವಶ್ಯಕವಾಗಿರುವುದು ಅದನ್ನೂ ಬಿಟ್ಟರೆ, ತೀರ್ಥಸೇವನೆಯಿಂದಲೂ ಈ ಸಂಸಾರರೋಗವು ತೊಲಗುವುದಿಲ್ಲ, ವ್ರತಗಳಿಂದಲೂ ತೊಲಗುವುದಿಲ್ಲ, ಯಾಗಗಳಿಂದಲೂ ಇದು ತೊಲಗುವುದಿಲ್ಲ, ಜಪಗಳಿಂದಲೂ ತೊಲಗುವುದಿಲ್ಲ, ಇತರ ಕರ್ಮಗಳಿಂದಲೂ ಇದು ತೊಲಗುವುದಿಲ್ಲ ॥

ಎಲೌ ಪಾರ್ವತಿ! ಪೂರ್ವೋಕ್ತರೀತಿಯಾಗಿ ಸಂಸಾರವೆಂಬ ರೋಗವು ನಷ್ಟವಾದ ಬಳಿಕ, ಆಗ ಆ ಬ್ರಾಹ್ಮಣನು ಸ್ವಾತ್ಮಾರಾಮನಾಗಿದ್ದುಗೊಂಡು, ಸ್ವಸ್ವರೂಪಾನಂದವನ್ನು ಪಡೆದವನಾಗಿ ಜೀವನ್ಮುಕ್ತಸ್ಥಿತಿಯನ್ನು ಹೊಂದಿದನು ॥೪೮॥

ಭವಾಮಯಾವಿನಂ ವಿಪ್ರಂ ಏವಂ ಕೃತ್ವಾ ನಿರಾಮಯಮ್ ।
ಅವಧೂತೋ ಜಗಾಮಾಶು ಯಥಾಗತಮನಿನ್ದಿತೇ ॥೪೯॥
ಏವಮೇವ ಶುಭಾಪಾಙ್ಗೀ ಯಃ ಕಶ್ಚಿನ್ಮನುಜೋ ಭುವಿ ।
ಉಕ್ತಸಾಧನಸಂಪನ್ನೋ ಜೀವನ್ಮುಕ್ತಪದಂ ವ್ರಜೇತ್ ॥೫೦॥
ಜೀವನ್ಮುಕ್ತೋ ಯತ್ರಕುತ್ರ ತಿಷ್ಠೇ ಭುಞ್ಜೇ ವ್ರಜೇ ಸ್ವಪೇ ।
ಇನ್ದ್ರಜಾಲಂ ಜಗತ್ ಪಶ್ಯೇ ದಿತಮೋಹೋಟತಿ ಕ್ಷಿತೌ ॥೫೧॥
ಮಾನಾವಮಾನಯೋಸ್ತುಲ್ಯಃ ಸ್ತುತಿನಿನ್ದಾಸಮೋ ವಶೀ ।
ಮಿತ್ರಾರಿಪಕ್ಷಯೋಸ್ತುಲ್ಯಃ ಸಮದುಃಖಸುಖಃ ಕ್ಷಮೀ ॥೫೨॥
ಅನಿಕೇತಃ ಸ್ಥಿರಮತಿಃ ಬಾಲೋನ್ಮತ್ತಪಿಶಾಚವತ್ ।
ಅವಧೂತೋ ಗುಣಾತೀತೋ ಜೀವನ್ಮುಕ್ತೋ ಭವೇತ್ ಸದಾ ॥೫೩॥
ಯಃ ಪ್ರಪನ್ನಃ ಸದಾ ರಾಮಂ ಸಕೃದ್ವಾ ನಿಮಾನಲೋಚನೇ ।
ಜ್ಞಾನಂ ತಸ್ಯೈವ ವೈರಾಗ್ಯಂ ಜೀವನ್ಮುಕ್ತಿಶ್ಚ ಸಂಭವೇತ್ ॥೫೪॥

ಬಳಿಕ ಅವಧೂತನು ಈರೀತಿಯಾಗಿ ಸಂಸಾರರೋಗ ಪೀಡಿತನಾಗಿದ್ದ ಬ್ರಾಹ್ಮಣನನ್ನು ನೀರೋಗನನ್ನಾಗಿ ಮಾಡಿ, ತಾನು ಒಂದ ದಾರಿಯನ್ನು ಹಿಡಿದು ಹೊರಮುಹೋದನು ॥೪೯॥

ಎಲೌ ಪ್ರಿಯೆ ! ಈರೀತಿಯಾಗಿಯೇ, ಈ ಲೋಕದಲ್ಲಿ ಯಾವ ಮನುಷ್ಯನಾದರೂ ಸರಿಯು-ಶಾಸ್ತ್ರೋಕ್ತವಾದ ಸಾಧನಗಳಿಂದ ಸಂಪನ್ನನಾಗಿರುವ ಪಕ್ಷದಲ್ಲಿ, ಅವನು ಜೀವನ್ಮುಕ್ತ ಪದವಿಯನ್ನು ಹೊಂದುವನು ॥೫೦॥

ಹೀಗೆ ಜೀವನ್ಮುಕ್ತನಾದವನು, ಎಲ್ಲಿಯಾದರೂ ನಿಕ್ಕಿದಕೆಡ ನಿಂತುಕೊಳ್ಳುತಲೂ ಭೋಜನ ಮಾಡುತಲೂ ಸಂಚಾರಮಾಡುತಲೂ ನಿದ್ರೆಮಾಡುತಲೂ ಜಗತ್ತನ್ನೆಲ್ಲ ಇಂದ್ರಜಾಲಮಯವನ್ನಾಗಿ ಕಾಣುತ ಮೋಹಶೂನ್ಯನಾಗಿ ಭೂಮಿಯಲ್ಲಿ ಸುತ್ತುತಿರುವನು ॥೫೧॥

ಆ ಜೀವನ್ಮುಕ್ತನು, ತನಗೆ ಮಾನವುಂಟಾದಾಗಲೂ ಅವಮಾನವುಂಟಾದಾಗಲೂ ಪಕ್ಷಪಾತಿಯಾಗಿರುವನು , ತನ್ನನ್ನು ಒಬ್ಬರು ಸ್ತುತಿಸಿದರೂ ಅಥವಾ ನಿಂದಿಸಿದರೂ ಅವನಿಗೆ ಯಾವ ಮನೋವಿಕಾರವೂ ಉಂಟಾಗುವುದಿಲ್ಲ , ಅವನಿಗೆ ಶತ್ರುಗಳೂ ಮಿತ್ರರೂ ಒಂದೇ ವಿಧವಾಗಿ ಕಾಣಿಸುವರು , ಸುಖದುಃಖಗಳೆರಡೂ ಅವನಿಗೆ ಸಮಾನವಾಗಿರುವುವು , ಅವನು ಇಂದ್ರಿಯಗಳನ್ನು ನಿಗ್ರಹಿಸಿದವನಾಗಿ ಸಮಸ್ತವನ್ನೂ ಕ್ಷಮಿಸಿಕೊಂಡಿರುವನು ॥೫೨॥

ಅವನಿ ಯಾವುದೊಂದು ನಲೆಯೂ ಗೊತ್ತಾಗಿರುವುದಿಲ್ಲ , ಅವನ ಬುದ್ದಿಯು ಅತಿಸ್ಥಿರವಾಗಿರುವುದು ಅವನು ಬಾಲಕನಂತೆಯೂ ಉನ್ಮತ್ತನಂತೆಯೂ ಪಿಶಾಚದಂತೆಯೂ ಅವಧೂತನಾಗಿ ನಿರ್ಗುಣನಾಗಿ ಸಂಚರಿಸಿಕೊಂಡಿರುವನು ॥೫೩॥

ಎಲೌ ಪಾರ್ವತಿ ! ಯಾವನು ಸರ್ವದಾ ಶ್ರೀರಾಮನನ್ನು ಶರಣಾಗತನಾಗಿರುವನೋ, ಕೊನೆಗೆ ಒಂದುಸಲವಾದರೂ ಭಕ್ತಿಯಿಂದ ಶರಣಾಗತನಾಗುವನೋ, ಅವನಿಗೆ ಜ್ಞಾನವೂ ವೈರಾಗ್ಯವೂ ಜೀವನ್ಮುಕ್ತಿಯೂ ಸಂಭವಿಸುವುವು ॥೫೪॥

ಮನುಷ್ಯಾಣಾಮನನ್ತೇ ತು ಕಲೌ ಪಾಪೈಕಭಾಜಿನಾಮ್ ।
ಯಃಕಶ್ಚಿದ್ರಾಮಭಕ್ತಃ ಸ್ಯಾತ್ ಸಪ್ಯಘೋ ಬಹುಜನ್ಮಸು ॥೫೫॥
ಘೋರೇ ಕಲಿಯುಗೇ ಪ್ರಾಪ್ತೇ ಚತುರಶ್ಚ ತುರಾನನಃ ।
ವ್ಯಜಿನ್ತಯತ್ ಸಾಧನಂ ಕಿಂ ಮುಖ್ಯಂ ತದಘನಾಶನೇ ॥೫೬॥
ವಿಜಿನೈತ್ರೈವಂ ವಿಧಿಸ್ಸರ್ವಧರ್ಮಾಂಶ್ಚ್ರೀರಾಮನಾಮ ಚ ।
ತೋಲಯಿತ್ವಾಧಿಕಂ ಮೇನೇ ರಾಮನಾಮಾಘನಾಶನೇ ॥೫೭॥
ತಸ್ಮಾದ್ಯೂನಾ ರಾಮನಾಮ ತದ್ಭಕ್ತಿಂ ಚ ಕಲೌ ಯುಗೇ ।
ತದ್ಭೋಪಶಮನಂ ಕಿಞ್ಚಿತ್ ಸಾಧನಂ ನಾಸ್ತಿ ಸುನ್ದರಿ ॥೫೮॥
ಕಲೌ ನ ಧರ್ಮೋ ಜ್ಞಾನಂ ವಾ ನ ಸತ್ಯಂ ನ ವ್ರತಂ ತಥಾ ।
ಕಿಂ ತು ಸಙ್ಕೀರ್ತ್ಯ ರಾಮೇತಿ ಮುಚ್ಯತೇ ಭವಬನ್ಧನಾತ್ ॥೫೯॥

ಇತಿ ಶ್ರೀಮತ್ಸುನ್ದರಕಾಣ್ಡೇ ಭವರೋಗರಸಾಯನಕಥನಂ ನಾಮ
ಷೋಡಶಃ ಸರ್ಗಃ



ಅಪಾರವಾದ ಕಲಿಯುಗದಲ್ಲಯಾದರೋ, ಮನುಷ್ಯರು ಕೇವಲ ಪಾಪಕರ್ಮವನ್ನೇ ಮಾಡುವರು ಇಂಥ ಮನುಷ್ಯರ ಮಧ್ಯದಲ್ಲಿ ಯಾವನೊಬ್ಬನು ಶ್ರೀರಾಮನಿಗೆ ಭಕ್ತನಾಗುವನೋ, ಅವನು ಅನೇಕ ಜನ್ಮಗಳಲ್ಲಿ ಮಾಡಿದ ಪಾಪಗಳನ್ನೆಲ್ಲ ನಾಶಪಡಿಸಿಕೊಳ್ಳುವನು ॥೫೫॥


ಮಹಾಘೋರವಾದ ಕಲಿಯುಗವು ಪ್ರಾಪ್ತವಾಗಲಾಗಿ, ಸಕಲ ಜೀವೋದ್ಧರಣ ಕುಶಲನಾದ ಚತುರ್ಮುಖನು 'ಈ ಸಮಸ್ತ ಪ್ರಾಣಿಗಳಿಗೂ ಪಾಪ ನಾಶವಾಗಬೇಕಾದರೆ ಮುಖ್ಯಸಾಧನವಾವುದು?' ಎಂದು ತನ್ನ ಮನಸ್ಸಿನಲ್ಲಿ ಯೋಚಿಸಿದನು ॥೫೬॥

ಈರೀತಿಯಾಗಿ ಯೋಚಿಸಿ, ಆ ಚತುರ್ಮುಖನು ಸಮಸ್ತ ಧರ್ಮಗಳನ್ನೂ ಶ್ರೀರಾಮನಾಮವನ್ನೂ ತೂಕಮಾಡಿ ನೋಡಿ, ಪಾಪನಾಶನದ ವಿಷಯದಲ್ಲಿ ಸಮಸ್ತ ಧರ್ಮಗಳಿಗಿಂತಲೂ ಶ್ರೀರಾಮನಾಮವೇ ಅಧಿಕವಾದುದೆಂದು ನಿಶ್ಚಯಿಸಿಬಿಟ್ಟನು ॥೫೭॥

ಆದುಕಾರಣ, ಎಲೌ ಪಾರ್ವತಿ! ಕಲಿಯುಗದಲ್ಲಿ ಶ್ರೀರಾಮನಾಮವನ್ನೂ ಅವನಲ್ಲಿ ಭಕ್ತಿಯನ್ನೂ ಬಿಟ್ಟರೆ ಪಾಪಶಮನವಾದ ಮತ್ತಾವ ಸಾಧನವೂ ಇಲ್ಲವೇ ಇಲ್ಲ ॥೫೮॥

ಕೇವಲ ಪಾಪಬಹುಳವಾದ ಕಲಿಯುಗದಲ್ಲಿ, ಧರ್ಮವೂ ನಡೆಯುವುದಿಲ್ಲ, ಜ್ಞಾನವೂ ಸಿದ್ಧಿಸುವುದಿಲ್ಲ, ಸತ್ಯವೂ ಇಲ್ಲ, ವ್ರತವೂ ಇಲ್ಲ ಮತ್ತಾವುದಿರುವುದೆಂದರೆ,—ರಾಮರಾಮ ಎಂದು ನಾಮಸ್ಮರಣಮಾಡಿದರೆ, ಸಂಸಾರಬಂಧನದಿಂದ ಮುಕ್ತನಾಗುವನು ॥೫೯॥

ಇದು ಸುಂದರಕಾಂಡದಲ್ಲಿ ಭವರೋಗರಸಾಯನ ಕಥನವೆಂಬ
ಹದಿನಾರನೆಯ ಸರ್ಗವು



ಅಥ ಶ್ರೀಮತ್ಸುನ್ದರಕಾಣ್ಡೇ ಸಪ್ತದಶಃ ಸರ್ಗಃ.

ಶ್ರೀಪಾರ್ವತ್ಯುವಾಚ

ಪುರಾನ್ತಕ ನಮಸ್ತೇಸ್ತು ನಮೋನ್ತಕನಿಷೂದನ ।
ಕಲೇಃ ಸ್ವರೂಪಮಾಚಕ್ಷ್ವ ಕೃತಾದೀನಾಂ ಚ ಸಙ್ಗ್ರಹಾತ್ ॥೧॥

ಶ್ರೀಪರಮೇಶ್ವರಉವಾಚ

ಕೃತೇ ಧರ್ಮೇ ಚತುಷ್ಪಾದೇ ಸತ್ಯದಾನತಪೋದಯಾಃ ।
ಮಿಳಿತ್ವೈಕೈಕಪಾದಃ ಸ್ಯಾತ್ ಏವಂ ಷೋಡಶಧಾ ವೃಷಃ ॥೨॥
ತಸ್ಮಾದ್ಧರ್ಮಸ್ಸದಾ ಪೂರ್ಣೋ ಜನಾಃ ಶಾನ್ತಾಸ್ತಿತಿಕ್ಷವಃ ।
ವಿಷ್ಣುಭಕ್ತಾ ವೀತರಾಗಾಃ ತತ್ತ್ವನಿಷ್ಠಾಃ ಸದಾ ಪ್ರಿಯೇ ॥೩॥
ತ್ರೇತಾಯಾಂ ಧರ್ಮಪಾದಾನಾಂ ಚತುರ್ಣಾಂ ಚತುರಂಶಕಾಃ ।
ಹಿಂಸಾನೃತಾತೋಷಲಾಭೈಃ ಪಾಪಾಂಶೈರ್ನಾಶಿತಾಃ ಕ್ರಮಾತ್ ॥೪॥
ತದಾ ಸರ್ವೇ ತಪಃಕರ್ಮಯಜ್ಞದಾನಾದಿಶಾಲಿನಃ ।
ನಾತಿಹಿಂಸಾಪರಾವಿಷ್ಣೌ ನಾತಿಭಕ್ತಾನ ರಾಗಿಣಃ ॥೫॥

ಸುಂದರಕಾಂಡದಲ್ಲಿ ಹದಿನೇಳನೆಯ ಸರ್ಗವು

ಪುನಃ ಶ್ರೀ ಪಾರ್ವತಿಯು ಪರಮೇಶ್ವರನನ್ನು ಕುರಿತು ಪ್ರಾರ್ಥಿಸುವಳು —

ಹೇ ತ್ರಿಪುರಸಂಹಾರಕ! ನಿನಗೆ ನಮಸ್ಕಾರವು ಹೇ ಯಮಶಿಕ್ಷಕ! ನಿನಗೆ ನಮಸ್ಕಾರವು ಈಗ ನನಗೆ ಕಲಿಯುಗದ ಸ್ವರೂಪವನ್ನೂ ಕೃತಾದಿಯುಗಗಳ ಸ್ವರೂಪವನ್ನೂ ಸಂಗ್ರಹಿಸಿ ಅಪ್ಪಣೆಕೊಡಿಸಬೇಕು ॥೧॥

ಶ್ರೀ ಪರಮೇಶ್ವರನು ಅಪ್ಪಣೆಕೊಡಿಸುವನು —

ಎಲೌ ಪ್ರಿಯೆ! ಕೃತಯುಗದಲ್ಲಿ ಧರ್ಮದ ನಾಲ್ಕು ಪಾದಗಳೂ ಪೂರ್ಣವಾಗಿರುವುವು ಅದರಲ್ಲಿ, ಸತ್ಯ ದಾನ ತಪಸ್ಸು ದಯ–ಇವುಗಳು ಸೇರಿ ಒಂದೊಂದು ಪಾದವಾಗಿರುವುದು ಹೀಗೆ ಕೃತಯುಗದಲ್ಲಿ ಪುಣ್ಯವು ಷೋಡಶಾಂಶ ಪರಿಪೂರ್ಣವಾಗಿರುವುದು ॥೨॥

ಆದುದರಿಂದ, ಆಗ ಧರ್ಮವು ಸರ್ವದಾ ಪೂರ್ಣವಾಗಿರುವುದು ಜನರೆಲ್ಲರೂ ಸರ್ವದಾ ಶಾಂತರಾಗಿಯೂ ಸಹಿಷ್ಣುಗಳಾಗಿಯೂ ವಿಷ್ಣುಭಕ್ತರಾಗಿಯೂ ರಾಗಶೂನ್ಯರಾಗಿಯೂ ತತ್ವನಿಷ್ಠರಾಗಿಯೂ ಇರುವರು ॥೩॥

ಆಮೇಲೆ ತ್ರೇತಾಯುಗದಲ್ಲಿ ಧರ್ಮದ ನಾಲ್ಕು ಪಾದಗಳೂ ಹಿಂಸೆ ಅನೃತ ಅಸಂತೋಷ ಲಾಭ ಇವುಗಳೆಂಬ ಅಧರ್ಮದ ಅಂಶಗಳಿಂದ ಪೂರ್ಣವಾಗಿ ಕ್ರಮೇಣ ಕಡಮೆಯಾಗುವುವು ॥೪॥

ಆಗ ಸಮಸ್ತರೂ ತಪಸ್ಸು ಯಜ್ಞ ಕರ್ಮ ದಾನ ಮುಂತಾದುವುಗಳಲ್ಲಿ ಆಸಕ್ತರಾಗುವರು ವಿಶೇಷ ಹಿಂಸಾಪರರಲ್ಲದೆಯೂ, ವಿಷ್ಣುವಿನಲ್ಲಿ ವಿಶೇಷ ಭಕ್ತಿಯಿಲ್ಲದೆಯೂ, ವಿಷಯಗಳಲ್ಲಿ ವಿಶೇಷ ರಾಗವಿಲ್ಲದೆಯೂ ಇರುವರು ॥೫॥

ದ್ವಾಪರೇ ಧರ್ಮಪಾದೇಷು ಸಜ್ಜಿೀರ್ಣೇಷ್ವರ್ಧತಃ ಶುಭೇ ।
ಕ್ರಮಾದಧರ್ಮಾರ್ಧಭಾಗೈಃ ಹಿಂಸಾಶೌಚಾನೃತಾದಿಕೈಃ ॥೬॥

ತದಾ ಶಾಸ್ತ್ರತಾಸ್ಸರ್ವೇ ಕೀರ್ತಿಕಾಮಾಃ ಪ್ರಿಯಂವದಾಃ ।
ಶೂರಾಃ ಕೃತಜ್ಞಾ ದಕ್ಷಾಶ್ಚ ಕಿಞ್ಚಿದ್ಭಕ್ತಾಶ್ಚ ಕೇಶವೇ ॥೭॥

ಕಲೌ ತ್ರಿಭಿರಧರ್ಮಾಂಶೈಃ ಚತುರ್ಥಧರ್ಮಾಂಘ್ರಯಃ ಪ್ರಿಯೇ ।
ವಿನಾಶಿತಾಸ್ತತೋ ಧರ್ಮಃ ಪಾದಮಾತ್ರೋವಶೇಷಿತಃ ॥೮॥

ತಸ್ಮಾತ್ ಕಲೌ ದಯಾಸತ್ಯಶೌಚದಾನಾನಿ ಸುನ್ದರಿ ।
ಪ್ರತ್ಯೇಕಂ ಪಾದಮಾತ್ರಾಣಿ ಸಂಕ್ಷಯನ್ತ್ಯನ್ತೇಪಿ ತಾನ್ಯಲಮ್ ॥೯॥

ಶುದ್ಧಸತ್ವಂ ಕೃತಂ ಜ್ಞೇಯಂ ತ್ರೇತಾ ಸತ್ವರಜೋಯುತಾ ।
ತಮೋಯುತರಜೋಯುಕ್ತೋ ದ್ವಾಪರಸ್ತಾಮಸಃ ಕಲಿಃ ॥೧೦॥

ವಿಪ್ರಃ ಕೃತಯುಗಾಧೀಶಃ ತ್ರೇತಾಧೀಶೋ ನೃಪಸ್ತಥಾ ।
ವೈಶ್ಯಃ ಸ್ಯಾದ್ದ್ವಾಪರಾಧೀಶಃ ಕಲೌ ರಾಜಾ ಪದೋದ್ಭವಃ ॥೧೧॥

ಆಮೇಲೆ ದ್ವಾಪರಯುಗದಲ್ಲಿ ಧರ್ಮದ ನಾಲ್ಕುಪಾದಗಳೂ ಹಿಂಸ ಅಶುಚಿತ್ವ ಅಸತ್ಯ ಮುಂತಾದ ಅಧರ್ಮದ ಅರ್ಧಭಾಗಗಳಿಂದ ಪೂರ್ಣವಾಗಲಾಗಿ, ಆಗ ಸಮಸ್ತರೂ ಶಾಸ್ತ್ರಮಾರ್ಗ ಪರ್ಯಾಲೋಚನೆಯಲ್ಲಿ ನಿರತರಾಗಿಯೂ, ಕೀರ್ತಿಯನ್ನು ಅಪೇಕ್ಷಿಸತಕ್ಕವರಾಗಿಯೂ, ಪ್ರಿಯವಾದಿಗಳಾಗಿಯೂ, ಶೂರರೂ ಕೃತಜ್ಞರೂ ದಕ್ಷರೂ ಆಗಿಯೂ, ಏಷ್ಟುವಿನಲ್ಲಿ ಸ್ವಲ್ಪ ಭಕ್ತಿಯುಳ್ಳವರಾಗಿಯೂ ಇರುವರು ॥೬-೭॥

ಎಲೌ ಪಾರ್ವತಿ! ಬಳಿಕ ಕಲಿಯುಗದಲ್ಲಿ ಧರ್ಮದ ನಾಲ್ಕು ಪಾದಗಳೂ ಮೂರುಪಾಲು ಅಧರ್ಮಾಂಶಗಳಿಂದ ಪೂರಿತಗಳಾಗಿ ಹೀನಸ್ಥಿತಿಗ ಬರುವುವು, ಆಮೇಲೆ ಧರ್ಮವು ಒಂದುಪಾದ ಮಾತ್ರ ಅವಶಿಷ್ಟವಾಗಿರುವುದು ॥೮॥

ಅದುಕಾರಣ, ಎಲೌ ಭಾಮಿನಿ! ಕಲಿಯುಗದಲ್ಲಿ ದಯ ಸತ್ಯ ಶೌಚ ದಾನ ಇವುಗಳು ಪ್ರತಿಯೊಂದೂ ಒಂದೊಂದು ಪಾದಮಾತ್ರ ಉಳಿದಿರುವುವು, ಕಲಿಯುಗದ ಕೊನೆಯಲ್ಲಿ ಆ ಪಾದ ಮಾತ್ರ ಧರ್ಮಗಳೂ ಸಂಪೂರ್ಣವಾಗಿ ನಷ್ಟವಾಗುವುವು ॥೯॥

ಅಂತು, ಕೃತಯುಗವು ಶುದ್ಧ ಸತ್ವಮಯವೆಂದೂ, ತ್ರೇತಾಯುಗವು ಸತ್ವರಜೋಗುಣಗಳ ರಡರಿಂದಲೂ ಮಿಶ್ರವೆಂದೂ, ದ್ವಾಪರಯುಗವು ತಮೋಗುಣ ಮಿಶ್ರವಾದ ರಜೋಗುಣದಿಂದ ಯುಕ್ತವಾಗಿರುವುದೆಂದೂ, ಕಲಿಯುಗವು ಶುದ್ಧ ತಮೋಮಯವೆಂದೂ ತಿಳಿಯಬೇಕು ॥೧೦॥

ಕೃತಯುಗಕ್ಕೆ ಬ್ರಾಹ್ಮಣನು ಅಧಿಪತಿಯು, ತ್ರೇತಾಯುಗಕ್ಕೆ ಕ್ಷತ್ರಿಯನು ಸ್ವಾಮಿಯು, ದ್ವಾಪರಯುಗಕ್ಕೆ ವೈಶ್ಯನು ಒಡೆಯನು, ಕಲಿಯುಗಕ್ಕೆ ಶೂದ್ರನು ರಾಜನು ॥೧೧॥

ಕಲೇರ್ದೋಷೈಕರೂಪಸ್ಯ ದೋಷಾಣಾಂ ಕಾರ್ತ್ಸ್ನ್ಯೇನ ಭಾಷಿತುಮ್ ।
ಕಃ ಶಕ್ತೋಽಥ ಸಮಾಹೃತ್ಯ ಕಾಂಶ್ಚಿದೇವ ವದಾಮಿ ತೇ ॥೧೦॥
ಏಕೈಕಾ ದ್ವಿಜಜಾತೀನಾಂ ಸ್ಯಾತ್ ಕಲಾವಾಭಾಸತಃ ಪ್ರಿಯೇ ।
ತದನ್ಯೇ ಸಙ್ಕರಾವರ್ಣಾಃ ಆಶ್ರಮಾಅಪಿ ತಾದೃಶಾಃ ॥೧೧॥
ವೇಷಮಾತ್ರೇಣಾಶ್ರಮಿಣೋ ನ ತತ್ತದ್ಧರ್ಮವೈಭವಾತ್ ।
ವೃತ್ತ್ಯರ್ಥಂ ವೇದಶಾಸ್ತ್ರಾಣಾಂ ವಕ್ತೃತ್ವಾಧ್ಯಯನೇ ಕಲೌ ॥೧೨॥
ಕಲೌ ನ ಧರ್ಮಕೃನ್ಮರ್ತ್ಯೋ ಕೃತೇ ತಸ್ಮಿಂತ್ಸ ದಮ್ಭತಃ ।
ಯುಂಕಜ್ಞೋ ದ್ಯಾಚಕಾವಿಪ್ರಾಃ ಕಣಮಾತ್ರೇಽಪಿ ಲೋಭತಃ ॥೧೩॥
ಜಿಹ್ವೋಪಸ್ಥರತಾವಿಪ್ರಾಃ ಮ್ಲೇಚ್ಛಶೂದ್ರಾದಯೋ ನೃಪಾಃ ।
ಧನೈಕಗ್ರಾಹಿಣಃ ಶೂದ್ರಾಃ ವಿಪ್ರವದ್ಧರ್ಮಬೋಧಕಾಃ ॥೧೪॥
ಅಬ್ರಹ್ಮಚಾರಿಣಃ ಶೌಚ ಗುರುಸ್ವಾಧ್ಯಾಯವರ್ಜಿತಾಃ ।
ಭೋಗಪ್ರಿಯಾಃ ಸ್ನಾನಸಂಧ್ಯಾಜಪಹೋಮವಿವರ್ಜಿತಾಃ ॥೧೫॥

ಹೀಗೆ ಕೇವಲ ದೋಷಸ್ವರೂಪವಾಗಿರುವ ಕಲಿಯುಗದ ದೋಷಗಳನ್ನೆಲ್ಲ ನಿಶ್ಶೇಷವಾಗಿ ಹೇಳಲು ಯಾರಿಗೆ ಸಾಮರ್ಥ್ಯವಿರುವುದು ? ಅದುಕಾರಣ, ಸಂಕ್ಷಿಪ್ತವಾಗಿ ಕೆಲವು ದೋಷಗಳನ್ನು ಮಾತ್ರವೇ ಈಗ ನಿನಗೆ ಹೇಳುವೆನು ॥೧೦॥

ಎಲೌ ಪಾರ್ವತಿಯೆ ! ಕಲಿಯುಗದಲ್ಲಿ ಎಲ್ಲೆಲ್ಲಿಯೋ ಒಂದೊಂದು ಬ್ರಾಹ್ಮಣ ಜಾತಿಯು ಉಳಿದಿರುವುದು, ಅದೂ ಕೂಡ ಆಭಾಸರೂಪವಾಗಿರುವುದಲ್ಲದೆ, ಶುದ್ಧವಾಗಿರುವುದಿಲ್ಲ ಇತರ ವರ್ಣಗಳೆಲ್ಲವೂ ಸಂಕರವಾಗಿ ಹೋಗುವುವು ಆಶ್ರಮಗಳೂ ಹಾಗೆಯೇ ಸಂಕರವಾಗಿರುವುವು ॥

ಆಗ ಸಮಸ್ತರೂ ಕೇವಲ ವೇಷಮಾತ್ರದಿಂದ ಆಯಾ ಆಶ್ರಮಗಳನ್ನು ತೋರ್ಪಡಿಸುತಿರುವರಲ್ಲದೆ, ಆಯಾ ಆಶ್ರಮೋಚಿತವಾದ ಧರ್ಮಗಳನ್ನು ಯಾರೂ ನಡೆಯಿಸುವುದಿಲ್ಲ ವೇದಶಾಸ್ತ್ರಗಳ ಅಧ್ಯಯನವೂ ಅಧ್ಯಾಪನವೂ ಕಲಿಯುಗದಲ್ಲಿ ಕೇವಲ ಜೀವನಾರ್ಥವಾಗಿ ಏರ್ಪಡುವುವು ॥

ಕಲಿಯುಗದಲ್ಲಿ ಯಾವನೊಬ್ಬ ಮನುಷ್ಯನೂ ಧರ್ಮವನ್ನು ಆಚರಿಸುವುದೇ ಇಲ್ಲ, ಒಂದುವೇಳೆ ಸ್ವಲ್ಪವಾಗಿ ಆಚರಿಸಿದರೂ, ಅದು ಕೇವಲ ದಂಭಾರ್ಥವಾಗಿ ಆಚರಿಸಲ್ಪಡುವುದು ಬ್ರಾಹ್ಮಣರು ಕೇವಲ ಲೋಭಾವಿಷ್ಟರಾಗಿ ಒಂದು ಕಣವನ್ನೂ ಕೂಡ ಯಾರಲ್ಲಿ ಬೇಕಾದರೂ ಹೋಗಿ ಯಾಚಿಸುವರು ॥೧೫॥

ಆಗ ಬ್ರಾಹ್ಮಣರು ಜಿಹ್ವಾದಿ ಚಾಪಲ್ಯವನ್ನು ತೀರಿಸಿಕೊಳ್ಳುವುದರಲ್ಲಿ ನಿರತರಾಗುವರು, ಮ್ಲೇಚ್ಛ ಶೂದ್ರ ಮೊದಲಾದವರು ದೊರೆತನಮಾಡುವರು, ಶೂದ್ರರು ಧನಗ್ರಹಣಮಾತ್ರ ತತ್ಪರರಾಗಿ ಬ್ರಾಹ್ಮಣರಂತೆ ಜನರಿಗೆ ಧರ್ಮವನ್ನು ಬೋಧಿಸುವರು ॥೧೬॥

ಬ್ರಹ್ಮಚಾರಿಗಳು, ತಮ್ಮ ನಿಯಮಗಳನ್ನು ಪರಿತ್ಯಜಿಸಿ, ಶೌಚ ಗುರುಶುಶ್ರೂಷೆ ವೇದಾಧ್ಯಯನಗಳನ್ನು ಬಿಟ್ಟುಬಿಟ್ಟು, ಸರ್ವದಾ ಭೋಗಲಂಪಟರಾಗಿ, ಸ್ನಾನ ಸಂಧ್ಯಾವಂದನೆ ಜಪ ಹೋಮ ಮುಂತಾದುವುಗಳಿಂದ ಹೀನರಾಗಿರುವರು ॥೧೭॥

ಸರ್ವಾನ್ನಿನೋ ಗೃಹಸ್ಥಾಃ ಸ್ಯುಃ ಯಸ್ಮಾತ್ತಸ್ಮಾದ್ಧಸಗ್ರಹಾಃ ।
ಯಾಚಕಾದಾಮ್ಭಿಕಾಃ ಪಾಪಾಃ ನಾಸ್ತಿಕಾಶ್ಚಾಯುಷಾವಿನಃ ॥೧೪॥
ಕದರ್ಯಾಃ ಕೃಪಣಾಃ ಕ್ಷುದ್ರಾಃ ಕಿಮ್ಪಚಾನಾವಧೂಜಿತಾಃ ।
ಲುಪ್ತಶ್ರೌತಸ್ಮಾರ್ತಧರ್ಮಾಃ ಮೈಥುನಾಸಕ್ತಚೇತಸಃ ॥೧೫॥
ಕಲೌ ಪ್ರಾಯೇಣ ಭವಿಷ್ಯನ್ತಿ ಯತಯಃ ಪೂರ್ವಪಾಪತಃ ।
ವಾಚಾ ತತ್ತ್ವಂ ವದಿಷ್ಯನ್ತಿ ಮೋಹಾನ್ಧಾಜ್ಞಾನಿನೋನಿನಃ ॥೧೦॥
ವ್ಯರ್ಥಾಲಾಪಾಶ್ಚಣ್ಡಕೋಪಾಃ ಪಿಶುನಾಃ ಕಲಹಾರ್ಥಿನಃ ।
ಕುಟುಮ್ಬಿನಃ ಕಾಯಮಾನಾಃ ಭಿಕ್ಷ್ವಾಮಾತ್ರೋಜ್ಜೀವಿನಃ ॥೧೦॥
ಕಲೌ ಸರ್ವೇ ದುರಾಚಾರಾಃ ನಿರ್ದಯಾಶ್ಯಪ್ಕವಿಗ್ರಹಾಃ ।
ದುರ್ಭಗಾದುರ್ನಯಾಲುಬ್ಧಾಃ ನೀಚವರ್ಣಾದಿಸೇವಕಾಃ ॥೧೦॥

ಗೃಹಸ್ಥರು, ಸಿಕ್ಕಿದ ಕಡೆಯಲ್ಲೆಲ್ಲ ಊಟಮಾಡುವರು, ಯಾರೊಬ್ಬಸಿಂದಲಾದರೂ ಧನವನ್ನು ಸಂಪಾದಿಸುವರು, ಸರ್ವದಾ ಯಾಚಕರಾಗಿಯೂ ದಾಂಭಿಕರಾಗಿಯೂ ಪಾಪಾತ್ಮರಾಗಿಯೂ ನಾಸ್ತಿಕರಾಗಿಯೂ ರೋಗಪೀಡಿತರಾಗಿಯೂ ಜೀವಿಸುತಿರುವರು ॥೧೪॥

ಮತ್ತು, ಕೇವಲ ನೀಚರಾಗಿಯೂ, ಜಿಪುಣರಾಗಿಯೂ, ಅಲ್ಪರಾಗಿಯೂ, ಸ್ವೋದರ ಪೂರಣಾರ್ಥವಾಗಿ ಅಲ್ಪವಾದ ಆಹಾರವನ್ನು ಸಿದ್ಧಗೊಳಿಸಿಕೊಳ್ಳತಕ್ಕವರಾಗಿಯೂ, ಸ್ತ್ರೀ ಜಿತರಾಗಿಯೂ, ಶ್ರೌತ ಸ್ಮಾರ್ತ ಧರ್ಮಗಳನ್ನೆಲ್ಲ ಲೋಪಪಡಿಸತಕ್ಕವರಾಗಿಯೂ, ಸರ್ವದಾ ಕಾಮೋಪಭೋಗ ನಿರತರಾಗಿಯೂ ಇರುವರು ॥೧೫॥

ಕಲಿಯುಗದಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸತಕ್ಕವರು ಪ್ರಾಯಶಃ ಪೂರ್ವಜನ್ಮದ ಪಾಪಪರಿಪಾಕದಿಂದ ಆ ಆಶ್ರಮವನ್ನು ಸ್ವೀಕರಿಸುವರು ಅವರು ಬಾಯಲ್ಲಿ ತತ್ವವನ್ನೇ ಹೇಳುವರು, ಮನಸ್ಸಿನಲ್ಲಿ ಮಾತ್ರ ಮೋಹಾಂಧರಾಗಿರುವರು ಆದರೂ, ತಾವು ಮಹಾಜ್ಞಾನಿಗಳೆಂದು ತಿಳಿದುಕೊಂಡಿರುವರು ॥೨೦॥

ಮತ್ತು, ಆಗ ಸನ್ಯಾಸಿಗಳು ವ್ಯರ್ಥವಾಗಿ ಸಲ್ಲಾಪಮಾಡುವರು, ಅತ್ಯುಗ್ರವಾದ ಕೋಪವನ್ನು ವಹಿಸುವರು, ಸರ್ವದಾ ಒಬ್ಬರಮೇಲೆ ಚಾಡಿಯಾಡುವುದರಲ್ಲಿ ಉತ್ಸುಕರಾಗಿರುವರು, ಯಾವುದಾದರೊಂದು ಕಲಹವನ್ನು ಅಪೇಕ್ಷಿಸುತಲೇ ಇರುವರು, ಕುಟುಂಬವನ್ನೆಲ್ಲ ಇಟ್ಟುಗೊಂಡೇ ಇರುವರು, ದೇಹದಲ್ಲಿ ವಿಶೇಷವಾಗಿ ಅಭಿಮಾನವುಳ್ಳವರಾಗಿರುವರು. ಇವ್ವಾದರೂ, ಹೊರಗೆ ಮಾತ್ರ ಜೀವನಕ್ಕಾಗಿ ಭಿಕ್ಷೆಯನ್ನು ಮಾಡುತಿರುವರು ॥೨೧॥

ಸಾಮಾನ್ಯವಾಗಿ ಕಲಿಯುಗದಲ್ಲಿ ಸಮಸ್ತರೂ ದುರಾಚಾರಪರರಾಗಿಯೂ ದಯಾಹೀನರಾಗಿಯೂ, ಶುಷ್ಕಕಲಹಾಸಕ್ತರಾಗಿಯೂ, ಅಮಂಗಳಭೂತರಾಗಿಯೂ, ದುರ್ಭಾಗ್ಯಗಾಮಿಗಳಾಗಿಯೂ, ಮಹಾಲೋಭಸಮನ್ವಿತರಾಗಿಯೂ, ನೀಚವರ್ಣ ಸೇವಕರಾಗಿಯೂ, ಹೊಟ್ಟೆಬಾಕರಾ

ಮಹಾಶನಾದರಿದ್ರಾಶ್ಚ ದುರ್ಭಗಾಶ್ಚ ಬಹುಪ್ರಜಾಃ ।
ಮನೋರಥಾಕುಲಾಶ್ಯಶ್ವತ್ ಪರಶ್ರೇಯೋಸಹಿಷ್ಣವಃ ॥೨೩॥

ಲುಪ್ತಕ್ರಿಯಾಲುಪ್ತಧರ್ಮಾಃ ಪರಸ್ತ್ರೀಧನಲೋಲುಪಾಃ ।
ಮಾತಾಪಿತೃಗುರುದ್ರೋಹಾಃ ಶೂದ್ರಪ್ರಾಯಾದ್ವಿಜಾತಯಃ ॥೨೪॥

ಶ್ಲೋಕಮಾತ್ರೇಣ ಯಃಕಶ್ಚಿತ್ ಧರ್ಮವಕ್ತಾ ವೃಷಧ್ವಜೇ ।
ಸಜಿಷ್ಣೀತಾಚಾರಿಣಸ್ಸರ್ವೇ ದಾತಾರಃ ಸ್ವೋಪಕಾರಿಣಾಮ್ ॥೨೫॥

ಆಶಾವಶಂ ಗತಾಃ ಸ್ವೇಚ್ಛಾಚಾರಿಣಃ ಶ್ರೇಷ್ಠಮಾನಿನಃ ।
ಅಶ್ವಪ್ರಿಯಾಸ್ತ್ಯಕ್ತಗಾವೋ ಧರ್ಮವಿಕ್ರಯಜೀವಿನಃ ॥೨೬॥

ಯಥಾಕಥಞ್ಚಿದ್ಧನವಾನೇವ ಪೂಜ್ಯೋ ಗುಣೀ ಬುಧಃ ।
ಕುಲೀನೋ ಧರ್ಮವಕ್ತಾ ಚ ದಾನಪಾತ್ರಂ ಚ ಸ ಸ್ಮೃತಃ ॥೨೭॥

ಗಿಯೂ, ದರಿದ್ರರಾಗಿಯೂ, ಹಚ್ಚಾಗಿ ಸಂತಾನವುಳ್ಳವರಾಗಿಯೂ, ಪದೇಪದೇ ನಾನಾವಿಧವಾದ ಮನೋರಥಗಳಿಂದ ವ್ಯಾಕುಲರಾಗಿಯೂ, ಇತರರ ಶ್ರೇಯಸ್ಸನ್ನು ಸಹಿಸಲಾರದವರಾಗಿಯೂ ಇರುವರು ॥೨೨-೨೩॥

ಬ್ರಾಹ್ಮಣರೆಲ್ಲರೂ ಸಾಮಾನ್ಯವಾಗಿ ತಮ್ಮ ಕರ್ಮಗಳನ್ನೂ ಧರ್ಮಗಳನ್ನೂ ಬಿಟ್ಟು ನಡೆಯುವರು, ಪರಸ್ತ್ರೀಯರಲ್ಲಿಯೂ ಪರಧನದಲ್ಲಿಯೂ ಆಸಕ್ತರಾಗುವರು, ತಾಯಿ ತಂದೆ ಗುರು ಮುಂತಾದವರಿಗೂ ದ್ರೋಹಮಾಡುವರು, ಆಚಾರದಲ್ಲಿ ಕೇವಲ ಶೂದ್ರಪ್ರಾಯರಾಗಿಬಿಡುವರು॥

ಯಾವುದಾದರೊಂದು ಶ್ಲೋಕಕ್ಕೆ ಹೇಗೆಹೇಗೋ ಅರ್ಥವನ್ನು ತಿಳಿದುಕೊಂಡ ಮಾತ್ರದಿಂದಲೇ, ಯಾವನಾದರೂ ಸಂಯೆ ಧರ್ಮವನ್ನು ಪ್ರವಚನಮಾಡುವುದಕ್ಕೆ ಹೊರಡುವನು, ತಾನೇ ಧರ್ಮನಿಷ್ಠನೆಂದು ಜನರೆಲ್ಲೆಲ್ಲ ಪ್ರಸಿದ್ಧಿಬರುವಂತೆ ಪ್ರಯತ್ನಮಾಡುವನು ಸಾಮಾನ್ಯವಾಗಿ ಸರ್ವರೂ ಸಂಕೇತಮಾತ್ರ ಸಿದ್ಧವಾದ ಆಚಾರಗಳನ್ನು ಆಚರಿಸುವರು, ಯಾರು ತಮಗೆ ಉಪಕಾರಮಾಡುವರೋ-ಅವರುಗೇ ದಾನಕೊಡುವರು ॥೨೫॥

ಆಶೆಗೆ ಪರವಶರಾಗುವರು, ಸ್ವೇಚ್ಛೆಯಾಗಿ ಆಚರಿಸುವರು, ತಾವುತಾವೇ ಶ್ರೇಷ್ಠರೆಂದು ತಿಳಿದುಕೊಳ್ಳುವರು, ಕುದುರೆಯನ್ನು ಸಾಕುವುದರಲ್ಲಿ ಪ್ರೀತಿಯಿಟ್ಟು, ಗೋವನ್ನು ಸರ್ವರೂ ಪರಿತ್ಯಜಿಸುವರು ಧರ್ಮವಿಕ್ರಯವನ್ನು ಮಾಡಿ ಜೀವಿಸುವರು ॥೨೬॥

ಹೇಗಾದರೂ ಮಾಡಿ ಎಷ್ಟು ಅಧರ್ಮದಿಂದಲಾದರೂ ಯಾವನು ಹಣವಂತನಾಗಿಬಿಡುವನೋ, ಅವನೇ ಸರ್ವರಿಗೂ ಪೂಜ್ಯನಾಗುವನು, ಅವನೇ ಸದ್ಗುಣಸಂಪನ್ನನೆನ್ನಿಸಿಕೊಳ್ಳುವನು, ಅವನೇ ಸಕಲಶಾಸ್ತ್ರ ವೇತ್ತೃವೆನ್ನಿಸಿಕೊಳ್ಳುವನು, ಅವನೇ ಸತ್ಕುಲ ಪ್ರಸೂತನು, ಧರ್ಮಪ್ರವಚನ ಮಾಡತಕ್ಕವನೂ ಅವನೇ, ಯಾರು ಯಾವ ದಾನವನ್ನು ಕೊಡಬೇಕಾದರೂ ಅವನೇ ಸರಿಯಾದ ಪಾತ್ರನಾಗಿಬಿಡುವನು ॥೨೭॥

ನಾರ್ಚಯನ್ತಿ ಹರಿಂ ಕಾಮ್ಯೈಃ ನೀಚದೇವಾರ್ಚನೇ ರತಾಃ ।
ಸ್ವಪುಣ್ಯವಾದಿನಸ್ಸರ್ವೇ ಸ್ವಪಾಪಂ ತು ನ ಕೇಚನ ॥೮೪॥
ಲಬ್ಧವಿದ್ಯೋ ಗುರುಂ ದ್ವೇಷ್ಟಿ ಲಬ್ಧಭಾರ್ಯಶ್ಚ ಮಾತರಮ್ ।
ಲಬ್ಧಪುತ್ರಾ ಪತಿಂ ದ್ವೇಷ್ಟಿ ಲಬ್ಧಾರೋಗ್ಯಶ್ಚಿಕಿತ್ಸಕಮ್ ॥೮೫॥
ಶುಲ್ಕದಾತೈವ ಸತ್ಪಾತ್ರಂ ಕನ್ಯಾದಾನಸ್ಯ ಸರ್ವತಃ ।
ನ ಕುಲಂ ನ ಶ್ರುತಂ ರೂಪಂ ನಾಚಾರೋ ನ ವಯಃ ಕಲೌ ॥೫೦॥
ಯೇನಕೇನೈವ ಯೋಗೇನ ದ್ವಿಜಾತಿರ್ದೀಕ್ಷಿತಃ ಕಲೌ ।
ಸರ್ವಮೇವ ಕಲೌ ಶಾಸ್ತ್ರಂ ಯಸ್ಯ ಯದ್ವಚನಂ ಶಿವೇ ॥೫೧॥
ಪ್ರಾಯಶ್ಚಿತ್ತಂ ಕಲೌ ನಾಸ್ತಿ ಕುತ್ರಾಪಿ ವಿಧಿಚೋದಿತಮ್ ।
ಧರ್ಮೋ ಯಥಾಭಿರುಚಿತೈಃ ಅನುಷ್ಠಾನೈರನುಷ್ಠಿತಃ ॥೫೨॥
ವಿವಾಹೋ ನ ಕಲೌ ಧರ್ಮ್ಯೋ ನ ಶಿಷ್ಯಗುರುಸಂಸ್ಥಿತಿಃ ।
ನ ದಾಮ್ಪತ್ಯಕ್ರಮೋ ನೈವ ವಹ್ನಿದೇವಾತ್ಮಕಃ ಕ್ರಮಃ ॥೫೩॥

ತಮ್ಮತಮ್ಮ ಇಷ್ಟಾರ್ಥಗಳನ್ನು ಹೊಂದಲಪೇಕ್ಷಿಸತಕ್ಕವರು, ಕ್ಷುದ್ರದೇವತೆಗಳ ಪೂಜೆಯಲ್ಲಿ ನಿರತರಾಗುವರೇ ಹೊರತು, ಶ್ರೀಹರಿಯನ್ನು ಪೂಜಿಸುವುದಿಲ್ಲ ಎಲ್ಲರೂ ತಾವುತಾವುಮಾಡಿದ ಪುಣ್ಯವನ್ನು ಹೇಳಿಕೊಳ್ಳುವರೇ ಹೊರತು ತಮ್ಮ ಪಾಪವನ್ನು ಯಾರೂಹೇಳಿಕೊಳ್ಳುವುದಿಲ್ಲ॥

ಆಗ ವಿದ್ಯೆ ಬಂದಮೇಲೆ ಶಿಷ್ಯನು ಗುರುವನ್ನು ದ್ವೇಷಿಸುವನು, ಹೆಂಡತಿ ಬಂದಮೇಲೆ ಮಗನು ತಾಯಿಯನ್ನು ದ್ವೇಷಿಸುವನು, ಮಕ್ಕಳಾದಮೇಲೆ ಹೆಂಡತಿಯು ಗಂಡನನ್ನು ದ್ವೇಷಿಸುವಳು, ಆರೋಗ್ಯವಾದಮೇಲೆ ರೋಗಿಯು ವೈದ್ಯನನ್ನು ದ್ವೇಷಿಸುವನು ॥೪೯॥

ಕಲಿಯುಗದಲ್ಲಿ ಯಾವನು ಶುಲ್ಕವನ್ನು ಕೊಡುವನೋ ಅವನೇ ಕನ್ಯಾದಾನಕ್ಕೆ ಸರಿಯಾದ ಪಾತ್ರನು ಆಗ ಕುಲವೂ ಮುಖ್ಯವಲ್ಲ, ಶಾಸ್ತ್ರಜ್ಞಾನವೂ ಮುಖ್ಯವಲ್ಲ, ರೂಪವೂ ಮುಖ್ಯವಲ್ಲ, ಆಚಾರವೂ ಮುಖ್ಯವಲ್ಲ, ವಯಸ್ಸೂ ಮುಖ್ಯವಲ್ಲ ॥೫೦॥

ಎಲೌ ಪಾರ್ವತಿ! ಕಲಿಯುಗದಲ್ಲಿ ಬ್ರಾಹ್ಮಣನು ಯಾವುದಾದರೂ ಒಂದು ವ್ಯಾಜಮಾಡಿಕೊಂಡು ದೀಕ್ಷೆಯನ್ನು ಬೆಳೆಯಿಸಿಕೊಳ್ಳುವನು ಯಾವನ ಬಾಯಲ್ಲಿ ಯಾವ ಮಾತು ಹೊರಡುವುದೋ, ಅದೆಲ್ಲವೂ ಅವನಿಗ್ಹ ಶಾಸ್ತ್ರವೇ ಆಗುವುದು ॥೫೧॥

ಕಲಿಯುಗದಲ್ಲಿ ಯಾವ ಸಂದರ್ಭದಲ್ಲಿಯೂ ವಿಧ್ಯುಕ್ತವಾದ ಪ್ರಾಯಶ್ಚಿತ್ತವನ್ನು ಆಚರಿಸುವುದೇಇಲ್ಲ ಅವರವರಿಗೆ ತೋರಿದ ಆಚಾರಗಳನ್ನಿಟ್ಟುಗೊಂಡು ಧರ್ಮಾಚರಣೆಮಾಡಲ್ಪಡುವುದು ॥

ಕಲಿಯುಗದಲ್ಲಿ ಧರ್ಮಮಾರ್ಗಾನುಸಾರವಾಗಿ ವಿವಾಹ ನಡೆಯುವುದಿಲ್ಲ, ಗುರು ಶಿಷ್ಯ ಸಂಪ್ರದಾಯವೂ ನಡೆಯುವುದಿಲ್ಲ, ದಾಂಪತ್ಯಕ್ರಮವೂ ಇರುವುದಿಲ್ಲ; ಅಗ್ನಿ ದೇವತೆ ಮುಂತಾದ ಕ್ರಮವಂತು ಇಲ್ಲವೇ ಇಲ್ಲ ॥೫೩॥

ಸರ್ವೇ ಬ್ರಹ್ಮ ವದಿಷ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ ।
ನಾನುತಿಷ್ಠಂತಿ ಸತತಂ ಶಿಶ್ನೋದರಪರಾಯಣಾಃ ॥೩೪॥
ಕಲೌ ಸ್ತ್ರಿಯೋ ಭವಿಷ್ಯಂತ್ಯಧವಾಃ ಕೇಶೈರಲಙ್ಕೃತಾಃ ।
ಪರಿತ್ಯಜಂತಿ ಭರ್ತಾರಂ ವಿತ್ತಹೀನಂ ತಥಾ ಸ್ತ್ರಿಯಃ ॥೩೫॥
ಹ್ರಸ್ವಕಾಯಾವಮೋಹರೂಪಾಃ ಭೂಯರ್ಷಪತ್ಯಾಗತಹ್ರಿಯಃ ।
ಶಶ್ವತ್ ಕಟುಕಭಾಷಿಣ್ಯಃ ಚೌರ್ಯಮಾಯೋರುಸಾಹಸಾಃ ॥೩೬॥
ಸ್ತ್ರಿಯಃ ಕಲೌ ಭವಿಷ್ಯಂತಿ ಸ್ವೈರಿಣ್ಯೋ ಲಲಿತಸ್ಪೃಹಾಃ ।
ಅನ್ಯಾಯಾವಾಪ್ತವಿತ್ತೇಷು ಪುರುಷೇಷು ಸ್ಪೃಹಾಳವಃ ॥೩೭॥
ಕಲೌ ಸ್ವಗುರುಭರ್ತೃ ಣಾಂ ಆಜ್ಞಾಂ ಭೇತ್ಸ್ಯಂತ್ಯನಾದೃತಾಃ ।
ಅಸದ್ವೃತ್ತಾಭವಿಷ್ಯಂತಿ ಪುರುಷೇಷು ಕುಲಾಙ್ಗನಾಃ ॥೩೮॥
ಶ್ವಕ್ರೂಶ್ವಶುರಭೂಯಿಷ್ಠಾಃ ಗುರವಶ್ಚ ಕಲೌ ಯುಗೇ ।
ಸ್ಯಾಲಾದ್ಯಾಸ್ಸುಹೃದಸ್ಸರ್ವೇ ನ ಮಾತಾ ನ ಪಿತಾಗ್ರಜಃ ॥೩೯॥

ಕಲಿಯುಗವು ಬಂದುಬಿಟ್ಟರೆ ಸರ್ವರೂ ಬಾಯಲ್ಲಿ ಬ್ರಹ್ಮಸ್ವರೂಪವನ್ನು ಹೇಳತಕ್ಕವರೇ ಆಗುವರು , ಆದರೆ, ಸರ್ವದಾ ಕೇವಲ ಶಿಶ್ನೋದರಪರಾಯಣರಾಗಿ, ಧರ್ಮಾಚರಣೆಯನ್ನು ಮಾತ ಯಾರೂ ಮಾಡುವುದಿಲ್ಲ ॥೩೪॥

ಕಲಿಯುಗದಲ್ಲಿ, ವಿಧವೆಯರಾದ ಸ್ತ್ರೀಯರು ಕೇಶಗಳನ್ನಿಟ್ಟುಕೊಂಡು ಅಲಂಕಾರ ಮಾಡಿ ಕೊಳ್ಳುವರು , ಪತಿಯುಕ್ತರಾದ ಸ್ತ್ರೀಯರೂ ಕೂಡ, ಧನಹೀನನಾದ ಪತಿಯನ್ನು ಬಿಟ್ಟುಬಿಡು ವರು ॥೩೫॥

ಮತ್ತು, ಸ್ತ್ರೀಯರು ಕೇವಲ ಹ್ರಸ್ವಶರೀರರಾಗಿಯೂ, ಮೋಹಕವಾದ ರೂಪವುಳ್ಳವರಾ ಗಿಯೂ, ಹೆಚ್ಚಾಗಿ ಮಕ್ಕಳುಳ್ಳವರಾಗಿಯೂ, ನಿರ್ಲಜ್ಜರಾಗಿಯೂ, ಪದೇಪದೇ ಕರ್ಕಶಭಾಷಿಣಿ ಯರಾಗಿಯೂ, ಕಳ್ಳತನದಲ್ಲಿಯೂ ಕಪಟದಲ್ಲಿಯೂ ಹಚ್ಚಾಗಿ ಸಾಹಸವನ್ನು ಅವಲಂಬಿಸತಕ್ಕವ ರಾಗಿಯೂ ಇರುವರು ॥೩೬॥

ಕಲಿಯುಗದಲ್ಲಿನ ಸ್ತ್ರೀಯರು, ಕೇವಲ ಸ್ವೈರಿಣಿಯರಾಗಿಯೂ, ಸುಂದರನೆಂದು ಕಂಡವರ ನ್ನೆಲ್ಲ ಅಪೇಕ್ಷಿಸತಕ್ಕವರಾಗಿಯೂ, ಅನ್ಯಾಯಮಾರ್ಗದಿಂದ ಹಣಸಂಪಾದಿಸಿರುವ ಪುರುಷರಲ್ಲಿ ಆಶೆಯುಳ್ಳವರಾಗಿಯೂ ಇರುವರು ॥೩೭॥

ಆಗ ಕುಲಸ್ತ್ರೀ ಯರೂ ಕೂಡ, ತಮ್ಮ ಗುರುಹಿರಿಯರ ಆಜ್ಞೆಯನ್ನೂ ಪತಿಯ ಆಜ್ಞೆಯನ್ನೂ ಅನಾದರದಿಂದ ತಿರಸ್ಕರಿಸುವರು , ಪುರುಷರ ವಿಷಯದಲ್ಲಿ ದುರ್ವ್ಯಾಪಾರವುಳ್ಳವರಾಗುವರು ॥

ಕಲಿಯುಗದಲ್ಲಿ ಪುರುಷರಿಗೆ ಅತ್ತೆಮಾವಂದಿರೇ ಗುರುಗಳಾಗುವರು ; ಭಾವ ಮೈದುನ ಮುಂತಾದವರೆಲ್ಲರೂ ಸ್ನೇಹಿತರಾಗುವರು. ಆಗ ಅವರಿಗೆ ತಾಯಿಯೂ ಬೇಕಾಗುವುದಿಲ್ಲ , ತಂದೆಯೂ ಬೇಕಾಗುವುದಿಲ್ಲ , ಅಣ್ಣತಮ್ಮಂದಿರೂ ಬೇಕಾಗುವುದಿಲ್ಲ ॥೩೯॥

ಕಸ್ಯ ಮಾತಾ ಪಿತಾ ಕಸ್ಯ ಯದಾ ಕರ್ಮಾತ್ಮಕಃ ಪುರ್ಮಾ ।
ಇತಿ ಚೋದಾಹರಿಷ್ಯನ್ತಿ ಶ್ವಶುರಾನುಗತಾನರಾಃ ॥೪೦॥

ಭವಿತ್ರೀ ಯೋಷಿತಾಂ ಸೂತಿಃ ನವಾಷ್ಟದಶವಾರ್ಷಿಕೀ ।
ತಥಾ ಜರಾ ಚ ಭವಿತಾ ಸರ್ವೇ ಸ್ವಲ್ಪಾಯುಷಃ ಕಲೌ ॥೪೧॥

ದುರ್ಭಿಕ್ಷಮೇವ ಸತತಂ ಕನ್ದಮೂಲಫಲಾಶಿನಃ ।
ಯತಸ್ತತೋ ವಿನಶ್ಯನ್ತಿ ಪ್ರಜಾಃ ಕ್ಷುದ್ಭಯಪೀಡಿತಾಃ ॥೪೨॥

ಗೃಹಸ್ಥಾಸ್ತು ನ ದಾಸ್ಯನ್ತಿ ವನಸ್ಥಾಗ್ರಾಮವಾಸಿನಃ ।
ಭಿಕ್ಷವಶ್ಚಾತ್ಮಪುತ್ರಾದಿಸ್ನೇಹಸಂಬನ್ಧಯನ್ತ್ರಿತಾಃ ॥೪೩॥

ಶೂದ್ರಪ್ರಾಯಾಸ್ತಥಾ ವರ್ಣಾಃ ಶಾಣಪ್ರಾಯಂ ತಥಾಂಶುಕಮ್ ।
ಅಣುಪ್ರಾಯಾಣಿ ಧಾನ್ಯಾನಿ ಗನ್ಧಮಾತ್ರಂ ತು ಲೇಪನಮ್ ॥೪೪॥

ಏವಂ ದೋಷೈಕನಿಲಯೇ ಮಹಾನೇಕೋ ಗುಣಃ ಕಲೌ ।
ಕೀರ್ತನಾದೇವ ಕೃಷ್ಣಸ್ಯ ನರೋ ಮುಚ್ಯೇತ ಬನ್ಧನಾತ್ ॥೪೫॥

ಯತ್ ಕೃತೇ ದಶಭಿರ್ವರ್ಷೈಃ ತ್ರೇತಾಯಾಂ ಹಾಯನೇನ ತತ್ ।
ದ್ವಾಪರೇ ತಚ್ಚ ಮಾಸೇನ ಹ್ಯಹೋರಾತ್ರೇಣ ತತ್ ಕಲೌ ॥೪೬॥

ಆಗ ಪುರುಷರು ತಮ್ಮ ಅತ್ತೆಮಾವಂದಿರ ಛಾಯಾನುವರ್ತಿಗಳಾಗಿದ್ದುಗೊಂಡು 'ಪುರುಷನು ಸ್ವಕರ್ಮಾಯತ್ತನಾಗಿರುವಾಗ ತಾಯಿ ಯಾರವಳು? ತಂದೆ ಯಾರವನು?' ಎಂದು ಹೇಳುತಿರುವರು ॥೪೦॥

ಕಲಿಯುಗದಲ್ಲಿ ಸ್ತ್ರೀಯರು ಪ್ರಸವಿಸಿದ ಸಂತಾನವು ಎಂಟು ಒಂಭತ್ತು ಹತ್ತು ವರ್ಷಗಳು ಮಾತ್ರ ಬದುಕಿರುವುದು, ಹಾಗೆಯೇ ಮುಪ್ಪು ಬೇಗ ಬಂದುಬಿಡುವುದು ಸಮಸ್ತರೂ ಅಲ್ಪಾಯುಷ್ಕರಾಗಿರುವರು ॥೪೧॥

ಆಗ ನಿರಂತರವಾಗಿ ದುರ್ಭಿಕ್ಷವೇ ಹರಡಿಕೊಳ್ಳುವುದು, ಪ್ರಜೆಗಳೆಲ್ಲರೂ ಕ್ಷುತ್ತಿನಿಂದ ಪೀಡಿತರಾಗಿ ಕಂದ ಮೂಲ ಫಲಗಳನ್ನು ತಿಂದವರಾಗಿ ನಷ್ಟವಾಗುವರು ॥೪೨॥

ಗೃಹಸ್ಥರಂತು, ಯಾರಿಗೂ ಏನನ್ನೂ ಕೊಡುವುದೇ ಇಲ್ಲ; ಅರಣ್ಯದಲ್ಲಿ ವಾಸಮಾಡಬೇಕಾದವರೆಲ್ಲರೂ (ವಾನಪ್ರಸ್ಥರು) ಊರೊಳ ವಾಸಮಾಡುವರು; ಸನ್ಯಾಸಿಗಳಂತು, ತಮ್ಮ ಮಕ್ಕಳು ಮರಿ ಮುಂತಾದವರಲ್ಲಿ ಸ್ನೇಹಬಂಧದಿಂದ ಬದ್ಧರಾಗಿರುವರು ॥೪೩॥

ಸಮಸ್ತ ವರ್ಣಗಳೂ ಶೂದ್ರಪ್ರಾಯರಾಗುವರು; ಸಮಸ್ತರ ಬಟ್ಟೆಯೂ ಸೆಣಬು ಮುಂತಾದುವುಗಳಿಂದ ಮಾಡಲ್ಪಡುವುವು, ಸಮಸ್ತ ಧಾನ್ಯಗಳೂ ಅಣುರೂಪವಾಗಿ ಸೂಕ್ಷ್ಮವಾಗುವುವು, ಸಿಕ್ಕಿದ ಪದಾರ್ಥವೆಲ್ಲವೂ ಗಂಧವೆಂದು ವಿಲೇಪನವಾಗಿ ಪರಿಣಮಿಸುವುದು ॥೪೪॥

ಇಷ್ಟುಮಟ್ಟಿಗೆ ದೋಷಗಳಿಗೆಲ್ಲ ಮುಖ್ಯಾಶ್ರಯವಾಗಿದ್ದರೂ, ಈ ಕಲಿಯುಗದಲ್ಲಿ ದೊಡ್ಡದೊಂದು ಗುಣವಿರುವುದು ಅದೇನೆಂದರೆ,—ಶ್ರೀ ವಿಷ್ಣುವಿನ ನಾಮಸಂಕೀರ್ತನಮಾತ್ರದಿಂದಲೇ ಈ ಕಲಿಯುಗದಲ್ಲಿ ಮನುಷ್ಯನು ಸಂಸಾರಬಂಧನದಿಂದ ಮುಕ್ತನಾಗುವನು ॥೪೫॥

ಕೃತಯುಗದಲ್ಲಿ ಹತ್ತುವರ್ಷಗಳಿಂದ ಯಾವ ಫಲವು ಲಭ್ಯವಾಗುವುದೋ, ಆ ಫಲವು ತ್ರೇತಾಯುಗದಲ್ಲಿ ಒಂದೇ ವರ್ಷದಲ್ಲಿ ಸಿಕ್ಕುವುದು; ದ್ವಾಪರಯುಗದಲ್ಲಿ ಅದು ಒಂದು ತಿಂಗಳೊಳಗಾಗಿ ಸಿಕ್ಕುವುದು, ಕಲಿಯುಗದಲ್ಲಿಯಾದರೋ, ಅಂತಹ ಫಲವು ಒಂದುದಿವಸದಲ್ಲಿಯೇ ಪ್ರಾಪ್ತವಾಗುವುದು ॥೪೬॥

ಯಃ ಪ್ರಾಪ್ಯಾಪಿ ಕಲೌ ಜನ್ಮ ಶ್ರೀರಾಮಂ ನ ಸ್ಮರೇನ್ನರಃ ।
ನ ಯತೇತಾತ್ಮಮುಕ್ತ್ಯೈ ಚ ಸ ಕದಾಪಿ ನ ಮುಚ್ಯತೇ ॥೪೩॥
ಏವಂ ಕಲಿಸ್ವರೂಪಂ ತೇ ಶ್ರೀರಾಮೋಪಾಸನಂ ಚ ಯತ್ ।
ಪ್ರೋಕ್ತಂ ತ್ವತ್ಪ್ರಶ್ನತೋ ದೇವಿ ಕಿಂ ಭೂಯಃ ಶ್ರೋತುಮಿಚ್ಛಸಿ ॥೪೪॥

ಶ್ರೀಪಾರ್ವತ್ಯುವಾಚ

ದೇವದೇವ ಮಯಾ ತ್ವತ್ತಃ ಶ್ರೋತವ್ಯಂ ಸಕಲಂ ಶ್ರುತಮ್ ।
ಶ್ರುತ್ವಾಥ ರಾಮಃ ಸ್ತ್ರೀವಾರ್ತಾಂ ಅಕರೋತ್ ಕಿಂ ವದಸ್ವ ತತ್ ॥೪೫॥

ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಸ್ವಯಂಪ್ರಕಾಶಾನಂದ
ಸರಸ್ವತೀ ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದ ಸರಸ್ವತೀ
ಸ್ವಾಮಿಸಙ್ಕಲಿತೇ ಶ್ರೀತತ್ತ್ವಸಂಗ್ರಹ ರಾಮಾಯಣೇ
ಸುಂದರಕಾಣ್ಡೇ ಕಲಿಸ್ವರೂಪಕಥನಂ ನಾಮ
ಸಪ್ತದಶಃ ಸರ್ಗಃ

ಸುಂದರಕಾಣ್ಡಃ ಸಮಾಪ್ತಃ

ಓಮ್ ತತ್ ಸತ್

ಇಂತಹ ಸುಲಭೋಪಾಯಭೂತವಾದ ಕಲಯುಗದಲ್ಲಿ ಜನ್ಮವನ್ನು ಪಡೆದೂ–ಯಾವ ಮನುಷ್ಯನು ಶ್ರೀರಾಮನನ್ನು ಸ್ಮರಿಸುವುದಿಲ್ಲವೋ,—ಆತ್ಮಮೋಕ್ಷಕ್ಕಾಗಿ ಪ್ರಯತ್ನಪಡುವುದಿಲ್ಲವೋ, ಅವನು ಎಂದೆಂದಿಗೂ ಮುಕ್ತನಾಗುವುದೇ ಇಲ್ಲ ॥೪೩॥

ಎಲೌ ಪಾರ್ವತಿ! ಇದೋ ಈರೀತಿಯಾಗಿ ನಿನ್ನ ಪ್ರಶ್ನೆಯನ್ನನುಸರಿಸಿ ಕಲಿಯ ಸ್ವರೂಪವನ್ನೂ ಶ್ರೀರಾಮನ ಉಪಾಸನಾಕ್ರಮವನ್ನೂ ನಿನಗೆಹೇಳಿರುವನು, ಮತ್ತೇನುಕೇಳಬೇಕೆಂದುಇಚ್ಛಿಸುವೆ?॥

ಶ್ರೀ ಪಾರ್ವತಿಯು ಪ್ರಾರ್ಥಿಸುವಳು —

ಸ್ವಾಮಿ! ದೇವದೇವ! ನಾನು ತಮ್ಮ ಮುಖದಿಂದ ಕೇಳಬೇಕಾದುದನ್ನೆಲ್ಲ ಕೇಳಿದೆನು ಶ್ರೀರಾಮನು ಹನುಮಂತನ ದ್ವಾರಾ ತನ್ನ ಪತ್ನಿಯಾದ ಸೀತಾದೇವಿಯ ವೃತ್ತಾಂತವನ್ನು ಕೇಳಿ ಆಮೇಲೆ ಏನುಮಾಡಿದನು? ಅದನ್ನು ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸುವನು ॥೪೪॥

ಇದು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಸ್ವಯಂಪ್ರಕಾಶಾನಂದಸರಸ್ವತೀ
ಪೂಜ್ಯಪಾದಶಿಷ್ಯ ಶ್ರೀರಾಮಬ್ರಹ್ಮಾನಂದ ಸರಸ್ವತೀ ಸಂಕಲಿತವಾದ ಶ್ರೀ
ತತ್ವಸಂಗ್ರಹರಾಮಾಯಣದ ಸುಂದರಕಾಂಡದಲ್ಲಿ ಕಲಿಸ್ವರೂಪ
ಕಥನವೆಂಬ ಹದಿನೇಳನೆಯ ಸರ್ಗವು

ಇಂತು ಶ್ರೀಮದಖಿಲಮಹೀಮಂಡಲಮಂಡನಾಯಮಾನ ಕರ್ಣಾಟಕ ಜನಪದಾಧೀಶ್ವರ
ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಜೆ ಸಿ ಎಸ್ ಐ ಯವರ
ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ
ವಿರಚಿತವಾದ
ತತ್ವಪ್ರಕಾಶವೆಂಬ
ಶ್ರೀ ತತ್ವಸಂಗ್ರಹ ರಾಮಾಯಣದ ಟೀಕಿನೊಳಗೆ .

ಸುಂದರಕಾಂಡವು ಸಂಪೂರ್ಣವು.

ಓಮ್ ತತ್ ಸತ್